ಡಾ. ಕೇಶವಶರ್ಮ ಕೆ

ಪಶ್ಚಿಮ ಮತ್ತು ಗಾಂಧಿ



ಪಶ್ಚಿಮ ಮತ್ತು ಗಾಂಧಿ

ಡಾ. ಕೇಶವಶರ್ಮ.ಕೆ

ಗಾಂಧಿಯಾನ ಪಬ್ಲಿಷಿಂಗ್ ಹೌಸ್
ಕಸ್ತೂರ್‌ಬಾ ಭವನ, ಗಾಂಧಿ ಭವನ ಆವರಣ
ಕುಮಾರ್‌ಪಾರ್ಕ್ ಪೂರ್ವ, ಬೆಂಗಳೂರು – 560 001

Paschima Mathu Gandhi

Written by
Dr. Keeshavasharma K.
Professor
Kannada Bharathi
Kuvempu University
Shakaragatta-577 451
M : 9448730611
E-mail : dr.k.keeshavasharma.k.@gmailcom.

Published by
Gandhiyaana Publishing House
Kasturba Bhavan, Gandhi Bhavan Campus
Kumara Park East
Bangalore - 560 001

© **Reserved**

First Impression : 2013
Price : **Rs. 250/-**
Pages : X + 442 = 452
1/8th Demmy
80 GSM Maplitho

ಕರ್ನಾಟಕ ಗಾಂಧಿ ಸ್ಮಾರಕ ನಿಧಿ
ಗಾಂಧಿಯಾನ ಬಳಗ
ಡಾ.ಹೊ. ಶ್ರೀನಿವಾಸಯ್ಯ
ಶ್ರೀ ಅಗ್ರಹಾರ ಕೃಷ್ಣಮೂರ್ತಿ
ಶ್ರೀ ಕೆ.ಜಿ.ವೆಂಕಟೇಶ್
ಡಾ. ಮೀರಾಸಾಬಿಹಳ್ಳಿ ಶಿವಣ್ಣ
ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ್
ಡಾ. ಬೈರಮಂಗಲ ರಾಮೇಗೌಡ

Printed by
Shakthi Printers & Publishers
Bangalore - 560 058
Ph.: 080-28372643

ಮುನ್ನುಡಿ

ಗಾಂಧಿಯ ಬಗೆಗೆ ಅನೇಕ ಅಧ್ಯಯನಗಳಾಗಿವೆ.ಅವೆಲ್ಲವನ್ನೂ ನಾನು ಓದಲಾಗಲಿಲ್ಲ. ಓದಿ ಮುಗಿಯುವ ವಿಷಯವೂ ಅಲ್ಲ. ಇದನ್ನು ನಾನು ಇಲ್ಲಿ ವಿನೀತನಾಗಿ ಒಪ್ಪಿಕೊಳ್ಳುತ್ತೇನೆ. ಈ ಕೃತಿಯು ಗಾಂಧಿಯ ವಿಚಾರ ಧಾರೆಗಳನ್ನು ಮತ್ತೆ ಬೇರೆ ರೀತಿಯಲ್ಲಿ ನೋಡಲು ಸಾಧ್ಯ. ಯಾಕೆಂದರೆ ನಾವೀಗ ಹೊಸ್ತಿಲಲ್ಲಿ ಇದ್ದೇವೆ. ನಮಗೀಗ ಮುಂದೆ ಹೋಗಲು ದಾರಿದೀಪಗಳು ಬೇಕು. ಗಾಂಧಿಯಿಂದ ಕಲಿಯಲು ಬೇಕಾದಷ್ಟು ಇದೆ. ಗಾಂಧಿ ಪಶ್ಚಿಮಕ್ಕೆ ಕೊಟ್ಟ ಪ್ರತಿಕ್ರಿಯೆ ಕುತೂಹಲವೆನಿಸುತ್ತದೆ. ಮತ್ತು ಜಾಗತೀಕರಣದ ಸಂದರ್ಭದಲ್ಲಿ ನಾವು ಮತ್ತೆ ಗಾಂಧಿಯ ಮೂಲಕ ಏನನ್ನು ಚರ್ಚಿಸಬಹುದು ಎಂಬುದನ್ನು ಮಾತ್ರ ಇಲ್ಲಿ ಗುರಿಯಾಗಿರಿಸಿಕೊಂಡು ಬರೆದ ಲೇಖನಗಳಿವು. ನಾನು ಈ ಹಿಂದೆ ವಸಾಹತುಶಾಹಿ ಅನುಭವದ ಕುರಿತು ಒಂದು ಪುಸ್ತಕ ಬರೆದಿದ್ದೆ. ಅದನ್ನೇ ಇಲ್ಲಿ ಅನ್ವಯಿಕಗೊಳಿಸಿದೆ. ಆದರೂ ಗಾಂಧಿಯ ಬಗೆಗೆ ಕುತೂಹಲ ಮಾತ್ರ ಹಾಗೇ ಉಳಿದಿದೆ ಮತ್ತೆ ಇದನ್ನು ಮತ್ತೆ ವಿಸ್ತರಿಸಬಹುದಿತ್ತು. ನನಗೆ ಸಾಧ್ಯವಾಗಲಾರದು. ಆದುದರಿಂದ ಇಷ್ಟಕ್ಕೆ ನಾನು ನಿಲ್ಲಿಸುತ್ತಿದ್ದೇನೆ. ಗಾಂಧಿಯನ್ನು ಮತ್ತೆ ಮತ್ತೆ ನೆನಪಿಸಿಕೊಂಡು ಮುಂದುವರಿಯುತ್ತಿರುವ ಅನೇಕರು ನಮ್ಮ ನಡುವೆ ಇದ್ದಾರೆ. ಇದು ಪ್ರಕಟವಾಗಿ ಓದುಗರ ಕೈಗೆ ದೊರೆತ ಮೇಲೆ ಬೇರೆ ರೀತಿಯಲ್ಲಿಯೂ

ಇದನ್ನು ಅವರು ಬೆಳೆಸಬಹುದು. ಅನೇಕ ಹಿರಿಯರು ಇದಕ್ಕೆ ಸಲಹೆ ಸೂಚನೆಗಳನ್ನು ನೀಡಿದ್ದಾರೆ. ಸಹಾಯ ಮಾಡಿದ ರಾಜಶೇಖರ, ಡಾ.ಪಿ.ವಿ.ಭಂಡಾರಿ, ಬೆರಳಚ್ಚು ಮಾಡಿದ ಅರ್ಪುದಮೇರಿ, ಸುಮ, ಕರಡು ತಿದ್ದಿದ ಕಾವ್ಯಶ್ರೀ ಪಿ.ಆರ್ ಪ್ರಕಟಿಸುತ್ತಿರುವ ಗಾಂಧಿಯಾನ ಪಬ್ಲಿಷಿಂಗ್ ಹೌಸ್‌ನ ಸಿವಿಜಿ ಚಂದ್ರು ಅವರಿಗೆ ಅಂದವಾಗಿ ಮುದ್ರಿಸಿದ ಶಕ್ತಿ ಪ್ರಿಂಟರ್ಸ್ ಅಂಡ್ ಪಬ್ಲಿಷರ್ಸ್ ಅವರಿಗೆ ಸಬಿತ, ನಹುಷ, ನಿಯತಿಯರಿಗೆ ಹಾಗೂ ಓದುಗರಿಗೆ ನಾನು ಕೃತಜ್ಞನಾಗಿದ್ದೇನೆ. ವಂದನೆಗಳು.

– ಕೇಶವ ಶರ್ಮ.ಕೆ.

ಪಶ್ಚಿಮ ಮತ್ತು ಗಾಂಧಿ

1. ದೇಶಿ – ವಿದೇಶಿ ಎಂಬ ಸಮಸ್ಯೆಗಳು ಹಾಗೂ ರಾಟೆ ಮತ್ತು ಮ್ಯಾಂಚೆಸ್ಟರ್ / 1

2 ಕರ ನಿರಾಕರಣೆ ಚಳುವಳಿ ಪ್ಯಾಸಿವ್ ರೆಸಿಸ್ಟೆನ್ಸ್ (ಸಾಂಸ್ಕೃತಿಕ ಆತ್ಮಬಲ / 15

3 ಪೂರ್ವ ಮತ್ತು ಪಶ್ಚಿಮ / 22

4. ಬೇರೆಯವರು ಸಂಪಾದಿಸಿ ಕೊಟ್ಟದ್ದು ಸ್ವರಾಜ್ಯವಲ್ಲ / 30

5. ಗಾಂಧಿ ಕೃಷಿ–ವರ್ತಮಾನದ ಅಗತ್ಯ ನಿಸರ್ಗ ಮತ್ತು ಮನುಷ್ಯರ ನಡುವಣ ಸಹಜ ಸಂಬಂಧ / 74

6. ಬುದ್ಧಿ ಮತ್ತು ವಿವೇಕದ ನಡುವಣ ಪ್ರಶ್ನೆ / 103

7 ಜ್ಞಾನ, ವಿದ್ಯೆ ಮತ್ತು ಅಧಿಕಾರ ವರ್ಸಸ್ ಸತ್ಯ, ಮತ್ತು ಶುದ್ಧಿ 132

8. ಯುರೋಪ್ ಮಾದರಿಯ ಶಿಕ್ಷಣಕ್ಕೆ ಗಾಂಧಿ ಪ್ರತಿಕ್ರಿಯೆ:
ಜೀವನವೇ ಶಿಕ್ಷಣ / 158

9. ಕರನಿರಾಕರಣೆ ಪರ್ಯಾಯರೂಪವಾದ ನೈತಿಕಶಾಸ್ತ್ರ / 224

10. ಬ್ರಿಟಿಷ್ ಪ್ರಭುತ್ವದ ಪ್ರಭಾವಗಳು ಮತ್ತು ಅವುಗಳ
ಪರಿಣಾಮಗಳು ಮತ್ತು ಇದಕ್ಕೆ ಸಂಬಂಧಿಸಿದ ಪ್ರತಿಕ್ರಿಯೆಗಳು. / 384

11. ಜಾಗತೀಕರಣಕ್ಕೆ ಪರ್ಯಾಯ ಸಾಧ್ಯತೆಗಳು ಯಾವುದು? / 398

೧. ದೇಶಿ – ವಿದೇಶಿ ಎಂಬ ಸಮಸ್ಯೆಗಳು ಹಾಗೂ ರಾಟೆ ಮತ್ತು ಮ್ಯಾಂಚೆಸ್ಟರ್

"ವಿದೇಶಿಯರ ವಸ್ತ್ರವನ್ನು ಧರಿಸಿದ ಮಾತ್ರಕ್ಕೆ ನಾವು ವಿದೇಶಿಯರಲಾಗಲಾರೆವು–ಆದರೆ ರಾಟೆ ಮತ್ತು ಖಾದಿಯು ಅರೆ ಹೊಟ್ಟೆ ಉಣ್ಣುವ ಕೋಟ್ಯಂತರ ಜನರನ್ನು ಬದುಕಿಸಬಲ್ಲದು"

–ಗಾಂಧಿ.

ಅನುಕರಣೆಯನ್ನು ಅರಿಸ್ಟಾಟಲ್ 'ಮಿಮೆಸಿಸ್ 'ಎಂದು ಕರೆಯುತ್ತಾನೆ.

ತಂದೆಯನ್ನು ಮಕ್ಕಳು ಅನುಕರಿಸುತ್ತಾರೆ.ತಾಯಿಯನ್ನೂ ಕೂಡಾ. ಮಕ್ಕಳು ಅನುಕರಿಸುವುದು ತಾವೂ ಅವರಂತೆ ಆಗಬೇಕು ಎನ್ನುವ ಕಾರಣದಿಂದಲೂ ಹೌದು. ಸ್ತ್ರೀವಾದದ ಒಂದು ಚರ್ಚೆ.

ಬಟ್ಟೆಮಾತ್ರ ಖಾದಿಯಾಗಿದ್ದು ಚಿಂತನೆಯು ಪರದೇಶಿಯಾದವರನ್ನು ಸ್ವದೇಶಿ ಧರ್ಮಪಾಲಕರೆಂದು ಹೇಳಲಾಗುವುದಿಲ್ಲ.

–ಗಾಂಧಿ

ಬ್ರಿಟೀಶ್ ಅಧಿಪತ್ಯ ಎಲ್ಲೆಲ್ಲಿದೆಯೋ ಅಲ್ಲೆಲ್ಲಾ ಬ್ರಿಟೀಶ್ ದೇಶದ ನಾಗರಿಕ ಸಂಹಿತೆ; ಸಂವಿಧಾನ; ಕಾನೂನುಗಳ್ನು ಅನುಕರಣೆ ಮಾಡಲಾಗುತ್ತದೆ. ಅಂತಿಮವಾಗಿ ವಸಾಹತು ದೇಶಗಳಲ್ಲಿ ಸ್ವಾತಂತ್ರ್ಯದ ಹಂಬಲಿಕೆ ಮೂಡಿದ್ದು ಕೂಡಾ ಬ್ರಿಟೀಶ್ ಪ್ರಭುತ್ವದ ಅನುಕರಣೆಯ ದೆಸೆಯಿಂದ ಎಂದು ಸರ್. ಎಡ್ವರ್ಡ ಕಸ್ಟ್ ೧೮೫೯ ರಲ್ಲಿ ಹೇಳಿದ. ಅದು ನಿಜ.

ಭಾರತಕ್ಕೆ ಬಂದ ಮಿಶನರಿಯವರು ಶಾಲೆಗಳನ್ನು ಪ್ರಾರಂಭಿಸುವಾಗ ಭಾರತದವರನ್ನು ನೋಡಿ ಒಂದು ತಾತ್ವಿಕ ನಿರ್ಧಾರಕ್ಕೆ ಬಂದಿದ್ದರು: 'ಇಲ್ಲಿ ಮನುಷ್ಯರಿದ್ದಾರೆ. ಆದರೆ ಮನುಷ್ಯರಾಗಿ ಅವರು ಸ್ವಯಂ ಸಂಪೂರ್ಣರಾಗಿಲ್ಲ.' ಇದೇ ಗ್ರಹಿಕೆಯಿಂದ ಅವರು ಭಾರತದಲ್ಲಿ "ಅನುಕರಣೆ"ಯ ತತ್ವವನ್ನು ಪರೋಕ್ಷವಾಗಿ ರೂಪಿಸಿದರು. ಇದಕ್ಕೆ ಸಹಾಯ ಮಾಡಿರುವುದು ಅವರ ಅಧಿಕಾರ ಮತ್ತು ಜ್ಞಾನದ ಪರಿಕರಗಳು.

ವಸಾಹತು ಸಂದರ್ಭದ ಆರ್ಥಿಕ ನೀತಿಯು ಯಜಮಾನಿಕೆ, ಅನನ್ಯತೆ, ಅನ್ಯಸಂಸ್ಕೃತಿಯ ಹೇರುವಿಕೆ, ಚಾರಿತ್ರಿಕ ಬದಲಾವಣೆ ಮೊದಲಾದವುಗಳನ್ನು ಹೇರಿತು. ಇದು ವಸಾಹತು ದೇಶಗಳಲ್ಲಿ ಯುರೋಪಿಯನ್ನರ ಅನುಕರಣೆಗೆ ಕಾರಣವಾಯಿತು. ಉದಾ: ಕೋಟು; ಟೈ; ಶೂ; ಇವುಗಳನ್ನು ಧರಿಸಿಕೊಂಡವರು ನಾಗರಿಕರೆನಿಸಿಕೊಂಡರು. ಪಂಚೆ–ಶಾಲು ಹೊದ್ದವರು; ಸೀರೆಯುಟ್ಟುಕೊಂಡವರು. ಬರಿಗಾಲಲ್ಲಿ ಓಡಾಡುವವರು ಅನಾಗರಿಕರೆನಿಸಿಕೊಂಡರು. ವಾಸ್ತವವಾಗಿ ಇದು ಒಂದು ಬಗೆಯ ಚಾರಿತ್ರಿಕ ವ್ಯಂಗ್ಯ.

ವಸಾಹತುಕಾಲದಲ್ಲಿ ಜರುಗಿದ ಅನುಕರಣೆಗೆ ಎರಡು ಮುಖವಿದೆ:

೧. ಬಾಹ್ಯದ ಅನುಕರಣೆ– ವೇಷಭೂಷಣ ಇತ್ಯಾದಿಗಳಲ್ಲಿ ಯುರೋಪಿನ ಜನರನ್ನು ಅನುಸರಿಸಿದ್ದು ಇದನ್ನು ನಾಗರಿಕ ಎಂದು ಬಿಂಬಿಸಲಾಯಿತು.ಇದನ್ನು ನಾವು ಭೌತಿಕ ಅನುಕರಣೆಯೆಂದು ಕರೆಯಬಹುದು. ಗಾಂಧಿಯು ನಿರಾಕರಿಸಿದ್ದು ಬಾಹ್ಯದ ಮತ್ತು ಅಂತಃಕರಣದ ಅನುಕರಣೆಯನ್ನು. ಅವರು ಹೇಳಿದ್ದು–ನೂಲು ಕೂಡಾ ಹಿಂದೂಸ್ಥಾನದ ಜನರಿಗೆ ಕೆಲಸ ಮತ್ತು ನೆಮ್ಮದಿಯನ್ನು ಕೊಡಬಲ್ಲುದು.

"ನೂಲುವುದನ್ನು ನಾನು ಖಂಡಿತವಾಗಿಯೂ ಆಚರಣೆ ಧಾರ್ಮಿಕ ಪಂಥಗಳ ಆಚರಣೆಗಿಂತಲೂ ಉತ್ತಮವಾದುದೆಂದು ಪರಿಗಣಿಸಿದ್ದೇನೆ"–ಗಾಂಧಿ

೨. ಆಂತರಿಕ ಅನುಕರಣೆ: ಇದು ಹೊರಜಗತ್ತಿನಲ್ಲಿ ಇರುವವರಿಗೆ ತಿಳಿಯದೆ ಹೋದ ಆದರೆ ಬುದ್ಧಿಜೀವಿಗಳ ಒಳಗೆ ನಡೆದ ಪ್ರಕ್ರಿಯೆ.

"ಪಾಶ್ಚಾತ್ಯ ವಿಜ್ಞಾನ ಸಾಧಿಸಿರುವ ಭೌತಿಕ ಪ್ರಗತಿಯಿಂದ ನಮ್ಮ ಕಣ್ಣು ಕೋರೈಸಿ ಹೋಗಿದೆ. ಆ ಪ್ರಗತಿಯಿಂದ ನಾನು ಮೋಹಗೊಂಡಿಲ್ಲ" –ಗಾಂಧಿ

ಆದರೆ ಮೇಲೆ ಹೇಳಿದ ಎರಡೂ ಸಂಗತಿಗಳಲ್ಲಿಯೂ ಒಂದು ಅಂಶವನ್ನು ನಾವು ಗಮನಿಸಬೇಕು: ಅನುಕರಣೆಯೆನ್ನುವುದು ಮನೋದೈಹಿಕ ವ್ಯಾಪಾರಗಳಲ್ಲಿ ಒಂದು. ವಸಾಹತುಕಾಲದ ಅನುಕರಣೆಯಲ್ಲಿ ಪುನರುಜ್ಜೀವನದ ಅಂಶವೂ ಒಂದಾಗಿತ್ತು. ಇದರಿಂದ ಅನುಕರಣೆಯೆನ್ನುವುದು ವಸಾಹತುಕಾಲದಲ್ಲಿ ಹೊಸ ಮಾದರಿಯ

ಸಂಕಥನವಾಗಿ ರೂಪುಗೊಂಡಿತು. ಯುರೋಪಿನ ಅನುಕರಣೆಯಿಂದಲೇ ಭಾರತದಲ್ಲಿ 'ಪುನರುಜ್ಜೀವನ ಚಳುವಳಿ'ಯು ಹಾಗೂ ರೂಪುಗೊಂಡಿತು. ಆಧುನಿಕತೆಯ ತತ್ವವೂ ವೈಚಾರಿಕ ಕ್ರಾಂತಿಯು ಪ್ರಾರಂಭವಾಗಿರುವುದು ಕೂಡಾ ಅನುಕರಣೆಯ ದೆಸೆಯಿಂದ. ಭಾರತೀಯ ಪುನರುಜ್ಜೀವನವು ಒಂದು ಕಡೆಯಿಂದ ನಾಗರಿಕ ಸಂಸ್ಕೃತಿಗಳನ್ನು; ಆಧುನಿಕತೆಯನ್ನು ಅನುಸರಿಸಿ ಸಾಮಾಜಿಕ ಉದ್ಧಾರದ ಪರಿಭಾಷೆಗಳನ್ನು ಚಾಲ್ತಿಗೆ ತಂದವು. ಭಾರತೀಯ ಸಂಸ್ಕೃತಿಯಲ್ಲಿರುವ ಜಾತಿ; ಪೂಜೆ; ದೇವತಾರ್ಚನೆ; ಮಾರಿದೇವತೆಯ ಪೂಜೆಯಿಂದ ಪ್ರಾರಂಭಿಸಿ ಸತಿ ನಿಷೇಧದವರೆಗೂ ಬೇರೆ ಬೇರೆ ಚರ್ಚೆಗಳು ಪ್ರಾರಂಭವಾಗಿರುವುದು ಪಾಶ್ಚಾತ್ಯ ಅನುಕರಣೆಯ ದೆಸೆಯಿಂದ. ಮೂಢನಂಬಿಕೆ; ಜಾತೀಯತೆಯ ತಾರತಮ್ಯಗಳನ್ನು ವಿರೋಧಿಸಿ ವಿಚಾರವಂತರಾಗಬೇಕು ಎಂದು ಹೇಳಿದರೆ, ನಾಸ್ತಿಕರಾಗಿ ಎಂದರ್ಥವಲ್ಲ. ಮತ್ತು ನಾಸ್ತಿಕವಾದಿಗಳೆಲ್ಲ ವಿಚಾರವಂತರಲ್ಲ ಎಂದು ಈ ಸಂದರ್ಭದಲ್ಲಿಯೇ ಹೇಳಲಾಯಿತು. ಪುನರುಜ್ಜೀವನ ಚಳುವಳಿಯು ವಾಸ್ತವವಾಗಿ ದೇವರ ನಿರಾಕರಣೆಯೇ ನಿಜವಾದಪ್ರಗತಿಯೆಂದು ಭಾವಿಸಿತ್ತು.ಈ ದೃಷ್ಟಿಯಿಂದಲೇ ಗಾಂಧಿಯವರ "ಪ್ಯಾಸಿವ್ ರೆಸಿಸ್ಟನ್ಸ" ಎಂಬ ಪರಿಕಲ್ಪನೆಯು ಬಹಳ ಮುಖ್ಯವಾದುದು.

ಇಲ್ಲಿಯೇ ಪಾಶ್ಚಾತ್ಯ ಅನುಕರಣೆಗೆ ಸಂಬಂಧಿಸಿ ನಡೆದ ಚರ್ಚೆಯನ್ನು ಕುರಿತು ವಿವರಿಸಬೇಕು– ಅನುಕರಣೆ ಎನ್ನುವ ಪದವೇ ಅಂತರವೆಂಬುದನ್ನು ಸೂಚಿಸುತ್ತವೆ. ಒಬ್ಬ ವ್ಯಕ್ತಿ ಇನ್ನೊಬ್ಬನನ್ನು ಅನುಕರಿಸುವುದು "ಬೇರೆ" ಅಥವಾ ಭಿನ್ನ ಚಹರೆಯ ಕಾರಣಕ್ಕಾಗಿ.ರಚನೋತ್ತರವಾದದಲ್ಲಿ "ಅನ್ಯ" ಎನ್ನುವುದು ಭಿನ್ನತೆಯನ್ನು ಸಾಧಿಸುತ್ತದೆ. ಸಂಸ್ಕೃತಿಯ ಅನ್ಯತೆಯು ಸ್ವ ಚಹರೆಗೆ ಕಾರಣವಾಗುತ್ತದೆ.ಸಂಸ್ಕೃತಿಯಲ್ಲಿ ಅನ್ಯ ಮತ್ತು ಸ್ವ ಎರಡೂ ಬಹಳ ಮುಖ್ಯವಾಗಿದೆ.

ಯಾವುದೇ ದೇಶವನ್ನು ಅನುಕರಣೆಯಿಂದ ಕಟ್ಟಲು ಸಾಧ್ಯವಿಲ್ಲವೆಂದು ಗಾಂಧಿ ಹೇಳುತ್ತಾರೆ.

ಎರಡನೆಯದಾಗಿ, ಸಾಮಾಜಿಕ ಸುಧಾರಣೆ ಭಾರತೀಯ ಸಮಾಜದಲ್ಲಿ ಕಾಣಿಸಿಕೊಂಡದ್ದು ಕೂಡಾ ಬ್ರಿಟೀಶ್ ಪ್ರಭುತ್ವದ ಜ್ಞಾನಮಾದರಿಗಳ ಪರಿಕರಗಳಿಂದ. ಆದರೆ ಸಾಮಾಜಿಕ ಸುಧಾರಣೆಯೆನ್ನುವುದು ಅತ್ಯಂತ ಸಂಕೀರ್ಣವಾಗಿತ್ತು. ಸುಧಾರಕರು ಅನೇಕ ಜ್ವಲಂತ ಸಮಸ್ಯೆಗಳನ್ನು ಎದುರು ಹಾಕಿಕೊಳ್ಳಬೇಕಾಯಿತು. ತಾಂತ್ರಿಕವಾಗಿಯೂ ಇದಕ್ಕಾಗಿ ಬೇರೆ ಬೇರೆ ಪ್ರತಿ ವ್ಯೂಹಗಳನ್ನು ಬುದ್ಧಿಜೀವಿಗಳು ರಚಿಸಿಕೊಳ್ಳ ಬೇಕಾಯಿತು.ಗಾಂಧಿಯವರ ಮಾತಿನಲ್ಲಿ ಇದು ಸ್ಪಷ್ಟವಾಗಿ ವ್ಯಕ್ತವಾಗುತ್ತದೆ.

"ಭಾರತದ ಮೇಲೆ ಹೊರಿಸಲಾಗುತ್ತಿರುವ ಆಧುನಿಕ ಅಂದರೆ ಪಾಶ್ಚಿಮಾತ್ಯ ಸಂಸ್ಕೃತಿಯಿಂದ ಸಂಭವಿಸಲಿರುವ ವಿನಾಶದಿಂದ ಭಾರತೀಯ ಅಂದರೆ ಪ್ರಾಚೀನ ಸಂಸ್ಕೃತಿಯನ್ನು ಉಳಿಸುವ ಪ್ರಯತ್ನದಲ್ಲಿ ನನ್ನ ಶಕ್ತಿಯನ್ನು ವಿನಿಯೋಗಿಸುವುದೇ ನನ್ನ ಉದ್ದೇಶ" – ಗಾಂಧಿ

ಮೂರನೆಯದಾಗಿ ಪಶ್ಚಿಮದ ಅನುಕರಣೆಯೆಂದರೆ ಸಾಮಾಜಿಕವಾಗಿ ಒಂದು ನಿಯಮಬದ್ಧತೆಯನ್ನು ರೂಪಿಸುವುದು. ಮತ್ತು 'ಸಾಮಾಜಿಕ ಶಿಸ್ತು' ಎಂಬ ಹೊಸ ಗಡಿರೇಖೆಯನ್ನು ಎಳೆಯುವುದು. ಈ ಸೀಮಾರೇಖೆಯಿಂದ ಒಳಗೆ ನಿಂತವರು ನಾಗರಿಕರೆಂದೂ: ಹೊರಗಡೆಗೆ ನಿಂತವರು ನಾಗರಿಕರಲ್ಲವೆಂದೂ ಕರೆಯಲಾಯಿತು

ಯುರೋಪಿನ ಕಾರ್ಯಗಳ ಒಟ್ಟಾರೆ ಪರಿಣಾಮ ಭಾರತಕ್ಕೆ ಒಳಿತಾಗಿಲ್ಲ. ಭಾರತಕ್ಕೆ ಬಂದ ಯುರೋಪಿನ ಸಾಮಾನ್ಯ ಜನ ಪೂರ್ವ ಜಗತ್ತಿನ ದುರ್ಗುಣಗಳಿಗೆ ಬಲಿಯಾದರೇ ವಿನಃ ತಮ್ಮ ಸದ್ಗುಣಗಳನ್ನು ಇಲ್ಲಿ ಬೇರೂರಿಸಲಿಲ್ಲ. ತದ್ವಿರುದ್ಧವೂ ಸಾಧ್ಯವಿರಲಿಲ್ಲ. – ಗಾಂಧಿ

ನಾಲ್ಕನೆಯದಾಗಿ ಯುರೋಪಿನ ಪ್ರಭುತ್ವವನ್ನು ಒಪ್ಪಿಕೊಂಡವರಲ್ಲಿ ಹಾಗೂ ಅವರ ಹಾದಿಯಲ್ಲಿಯೇ ದಾರಿಕಂಡುಕೊಂಡವರಲ್ಲಿಯೂ ಯಾವುದನ್ನು ಅನುಸರಿಸಬೇಕು ಯಾವುದನ್ನು ಅನುಸರಿಸಬಾರದು ಎಂಬುದರ ಬಗ್ಗೆ ಗೊಂದಲಗಳಿದ್ದವು. ಅವರಲ್ಲಿಯೂ ತುಂಬಾ ಅಸ್ಪಷ್ಟತೆಯಿತ್ತು: ಬೌದ್ಧಿಕ ಅನುಕರಣೆಯೇ? ನಾಗರಿಕ ಅನುಕರಣೆಯೇ? ಇವು ಮೂಲ ಪ್ರಶ್ನೆ. ಅನುಕರಣೆಯೆಂದರೆ ಯಾವುದು? ಅನುಸರಿಸುವಾಗ ನಮಗೂ ಸಮಾಜಕ್ಕೂ ಯಾವ ರೀತಿಯ ಸಂಬಂಧವಿರಿಸಿಕೊಳ್ಳಬೇಕು ಎನ್ನುವುದು ಅವರ ಮೂಲಭೂತ ಸಮಸ್ಯೆಯಾಗಿತ್ತು.

"ಈ ನಾಗರಿಕತೆಯ ತೆಕ್ಕೆಯಲ್ಲಿರುವ ನಾವು ಅಬಳಸಿ ಕೊಳ್ಳಬಹುದು.ಜ್ಞಾನ ಪೂರ್ಣವಾಗಿ ಹಾಗೂ ಅರಿತುಕೊಂಡು ಇವನ್ನು ಬಳಸಿಕೊಂಡರೆ ನಾವು ಅವುಗಳ ಗೀಳಿಗೆ ಒಳಗಾಗುವುದಿಲ್ಲ."

– ಗಾಂಧಿ

ಐದನೆಯದಾಗಿ ವಸಾಹತು ಆಡಳಿತದಲ್ಲಿ ಯಜಮಾನಿಕೆಯು ಭಾರತೀಯತೆಯನ್ನು ಜನರನ್ನು; ಸಂಸ್ಕೃತಿಯನ್ನು; ನೋಡಿದ ಕ್ರಮಗಳು ಬೇರೆ. ಆ ಆಡಳಿತಕ್ಕೆ ಇದ್ದುದು ಪಶ್ಚಿಮದ ಕನ್ನಡಕ ಮಾತ್ರ. ವಸಾಹತು ಅಧಿಕಾರವನ್ನು ಅನುಸರಿಸುವುದು ತುಂಬಾ ಕ್ಲಿಷ್ಟಕರವಾದ ಹಾದಿಯೆಂಬುದು ಮೂಲತಃ ಭಾರತೀಯ ಬುದ್ಧಿಜೀವಿಗಳಿಗೆ ಅರಿವಿತ್ತು. ಈ ದೃಷ್ಟಿಯಿಂದ ಭಾರತದಲ್ಲಿ ಅನುಕರಣೆಯು ಅತ್ಯಂತ ಸಂಕೀರ್ಣವಾದ ರೂಪವನ್ನು ಹೊಂದಿತ್ತು. ಈ ಕುರಿತು ಗಾಂಧಿಯವರ ಚಿಂತನೆಯು ಸ್ಪಷ್ಟ:

ರಾಜಕೀಯ ಸ್ವಾತಂತ್ರ್ಯವೆಂದರೆ ಬ್ರಿಟನಿನ ಕಾಮನ್ಸ್ ಸಭೆ
ಅಥವಾ ರಷ್ಯಾದ ಸೋವಿಯತ್ ಆಳ್ವಿಕೆ
ಅಥವಾ ಇಟಲಿಯ ಫ್ಯಾಸಿಸ್ಟ್ ಪ್ರಭುತ್ವ ಇಲ್ಲವೇ
ಜರ್ಮನಿಯ ನಾಜಿ ರಾಜ್ಯದ ಅನುಕರಣೆ ಅಲ್ಲ **–ಗಾಂಧಿ**

ಇದರ ಜೊತೆಗೆ ಬಂದ ಪ್ರಮುಖ ಪ್ರಶ್ನೆಯೆಂದರೆ ಜ್ಞಾನ ಮತ್ತು ಅಧಿಕಾರದ ನಡುವಣ ಸಂಬಂಧ. ಬ್ರಿಟೀಶ್ ಮಾದರಿಯ ಕಲಿಕೆಯ ಕ್ರಮದಲ್ಲಿ ಶಾಲಾ ತರಗತಿಗಳಲ್ಲಿ ಕಲಿಸುವ ಪಠ್ಯಪುಸ್ತಕಗಳೇ ಜ್ಞಾನದ ಮೊದಲ ಮೆಟ್ಟಿಲು ಎಂಬಂತೆ ಬಿಂಬಿತವಾಯಿತು. ಹಾಗೆಯೇ ರಾಜಕೀಯ ಅಧಿಕಾರವೆಂದರೆ ಅದು ವ್ಯಕ್ತಿಯೊಬ್ಬನು ನೀಡುವ ತೀರ್ಪು ಅಲ್ಲ. ಅಧಿಕಾರಕ್ಕೂ ಒಂದು ರೀತಿಯ ಶಿಸ್ತು ಬದ್ಧತೆಯಿದೆಯೆಂದು ಬ್ರಿಟೀಶ್ ಅಧಿಕಾರವು ಪ್ರತಿಪಾದಿಸಿತು. ಇದರ ಪರಿಣಾಮ ಎರಡು ಬಗೆಯದು: ಒಂದು ಅಧಿಕಾರಕ್ಕೆ ನಿರ್ದಿಷ್ಟ ನಿಯಮಾವಳಿಗಳಿಂದ ರೂಪುಗೊಂಡ ಸಂಹಿತೆಗಳಿವೆ. ಇವು ವಿಷಯ ನಿಷ್ಠವಲ್ಲ. ಕಾನೂನುಗಳ ನಡುವೆ ವೈಯಕ್ತಿಕ ಭಾವನಾತ್ಮಕ ಸಂಬಂಧಗಳ ಪ್ರಶ್ನೆಯೂ ಮುಖ್ಯವಲ್ಲ. ಎರಡನೆಯದು ಜ್ಞಾನದ ವ್ಯಾಪ್ತಿ. ವಿಜ್ಞಾನ ಎಂದು ಸರಕಾರ ಹೇಳಿತು. ತಂತ್ರಜ್ಞಾನ; ಅಭಿವೃದ್ಧಿ; ನಾಗರಿಕತೆ; ವ್ಯಕ್ತಿಯ ಗುಣ ನಡತೆಗಳನ್ನು ತಿದ್ದುವುದು ಈ ಮಾದರಿಯ ಜ್ಞಾನ ಮಾದರಿಗಳಿಗೆ ಮುಖ್ಯವಾಯಿತು. ಯುರೋಪಿನ ಜ್ಞಾನ ಮಾದರಿಯ ಚಿಂತನೆಯ ಕ್ರಮ ಹಳೆಯ ಪಾರಂಪರಿಕ ಜ್ಞಾನ ಮಾದರಿಗಳಿಂದ ಬೇರೆಯಾಗಿತ್ತು. ಹಳೆಯ ಪಾರಂಪರಿಕ ಜ್ಞಾನಮಾದರಿಗೆ (ಅದು ಅಕ್ಷರಕ್ಕೆ ಮಾತ್ರ ಸಂಬಂಧಿಸಿದ್ದಲ್ಲ.) ಅದರದೇ ಬೇರುಗಳಿವೆ. ಆದರೆ ಯುರೋಪಿನ ಜ್ಞಾನ ಮಾದರಿಯ ಶ್ರೇಷ್ಠತೆಯ ಅಹಂಕಾರ ಸ್ಥಳೀಯ ಜ್ಞಾನ ಪರಂಪರೆಗಳನ್ನು ಬುಡ ಮೇಲು ಮಾಡಿತು. ಗಾಂಧಿ ಪ್ರಶ್ನಿಸಿದ್ದು ಅದನ್ನು ಭಾರತದಲ್ಲಿ ನಾಗರಿಕತೆಯ ಪ್ರಶ್ನೆಯು ಕೂಡಾ ಹುಟ್ಟಿದ್ದು ಅನುಕರಣೆಯ ಒಂದು ಭಾಗವಾಗಿ. ಸ್ವಾತಂತ್ರ್ಯದ ಹೊಸ ಪರಿಭಾಷೆಗೂ; ನಾಗರಿಕತೆಗೂ; ಹೊಸ ಮಾದರಿಯ ಜ್ಞಾನಮಾದರಿಗೂ ಅಂತರ್ಗತ ಸಂಬಂಧವಿದೆ. ವಸಾಹತು ಪೂರ್ವದಲ್ಲಿ ಭಾರತೀಯ ಜನರು 'ಸ್ವಾತಂತ್ರ್ಯ' ಎನ್ನುವುದನ್ನು ಬಳಸಿದ್ದಾರೆಯೇ ಎನ್ನುವುದೇ ಕುತೂಹಲಕಾರಿಯಾದ ಪ್ರಶ್ನೆ. ನಮ್ಮಲ್ಲಿ ಚಾಲ್ತಿಯಲ್ಲಿದ್ದ ಪಂಚಾಯಿತಿ ಕಟ್ಟೆ; ನ್ಯಾಯತೀರ್ಮಾನ; ದಂಡಕಟ್ಟುವುದು; ತೀರಾ ಸಹಜವೆಂಬಂತೆ ನಡೆದುಕೊಂಡು ಬಂದಿತ್ತು. ಸ್ವಾತಂತ್ರ್ಯವೆಂಬ ಮಹಾನ್ ನಿರೂಪಣೆಯು ಅನೇಕರಿಗೆ ತಿಳಿದಿರಲಿಲ್ಲ.ವಿಶೇಷವೆಂದರೆ ಈ ಮಾದರಿಯ ಚಳುವಳಿಯೊಂದು ಅಂಕೋಲೆಯಲ್ಲಿ ಜರುಗಿತು.ಮಡಿಲು ಕೊಡೆ ಮತ್ತು ಬಿಸಿಲು ಕೊಡೆಗೆ ಸಂಬಂಧಪಟ್ಟಿರುವುದು.

ಅಂಕೋಲೆಯಲ್ಲಿ ೧೯೨೧ರ ಪೂರ್ವದಲ್ಲಿ ರಾಜಕೀಯ
ವಿಚಾರದಲ್ಲಿ ಸಾಮೂಹಿಕವಾಗಿ ಜಾಗೃತಿಯಾದದ್ದು ಇಲ್ಲ.
ಪಟ್ಟಣದಲ್ಲಿ, ಹಳ್ಳಿಯಲ್ಲಿ ಅಲ್ಲೊಬ್ಬ ಇಲ್ಲೊಬ್ಬ ವರ್ತಮಾನ ಪತ್ರವನ್ನು
ಓದುತ್ತಿದ್ದರು. ಹಳ್ಳಿಗರಲ್ಲಿ ನಾಡವರು ಮಾತ್ರ ಓದು ಬರಹವುಳ್ಳವರಾಗಿದ್ದರು.
ಆದರೆ ಅವರು ರಾಮಾಯಣ,ಮಹಾಭಾರತ,ಭಾಗವತ,ಯಕ್ಷಗಾನ
ಭಕ್ತವಿಜಯವನ್ನು ಮಾತ್ರ ಓದುತ್ತಿದ್ದರು.
ರಾಜಕೀಯ ಸಂಗತಿಗಳನ್ನು ತಿಳಿದು ಕೊಳ್ಳುತ್ತಿದ್ದರು.
ಮಹಾತ್ಮ ಗಾಂಧಿಯವರ ಬಗ್ಗೆ ಕುತೂಹಲದಿಂದ ತಿಳಿದುಕೊಳ್ಳುತ್ತಿದ್ದರು.

ಗಾಂಧಿಯವರ ಕುರಿತು ಹೆಚ್ಚು ಆಸಕ್ತಿಯನ್ನು ತಳೆದವರು ವಂದಿಗೆ ಹಮ್ಮಣ್ಣ ನಾಯಕರು.

"ತಮ್ಮ ನಡೆ ನುಡಿಯಿಂದ ಚೌಕದಳ್ಳಿ ಗಾಂಧಿಯೆಂದೇ ಅವರು
ಪ್ರಸಿದ್ಧರಾಗಿದ್ದರು.ಅವರ ಸ್ವದೇಶ ಪ್ರೇಮವು ಎಷ್ಟು
ಉಗ್ರವೆಂದರೆ ಅವರು ನೂಲಿನ ಉಡಿದಾರವನ್ನು ಧರಿಸುತ್ತಿರಲಿಲ್ಲ.ಹಾಗೂ
ನಾರು ಪಟ್ಟೆಯ ಉಡಿದಾರವನ್ನೇ ಧರಿಸುತ್ತಿದ್ದರು.'
ಬಿಸಿಲು ಕೊಡೆಯನ್ನು ಹಿಡಿಯದೆ
ಶುದ್ಧ ದೇಶೀಯ "ಮಡಿಲು ಕೊಡೆ"ಯನ್ನೇ ಸೂಡಿದರು"

(ಶಾಂತಾರಾಮ ನಾಯಕ, ಹಿಚಕಡ ೨೦೦೯ ಸ್ವಾತಂತ್ರ್ಯ ಹೋರಾಟದ ಹೊರಳು ನೋಟ ಪುಟ..೨೫)

ಇಲ್ಲಿ ಗಮನಿಸಬೇಕಾದ ಅಂಶವೆಂದರೆ – ಗಾಂಧಿಯ ಹೆಸರು ಬೇರೆ ಬೇರೆ ಪ್ರದೇಶಗಳಲ್ಲಿ ಅನುರಣನಗೊಂಡದ್ದು. ಹಮ್ಮಣ್ಣ ನಾಯಕರು ಚೌಕದಳ್ಳಿಯ ಗಾಂಧಿಯೆಂಬ ಹೆಸರು ಪಡೆದುಕೊಂಡಿರುವ ಹಾಗೆಯೇ ಗಾಂಧಿಯ ಹೆಸರು ಬೇರೆ ಬೇರೆ ಜನರಿಗೆ ಅನ್ವರ್ಥನಾಮವಾಗಿರುವುದು ಕುತೂಹಲದಾಯಕ.

ವಸಾಹತು ಕಾಲದಲ್ಲಿ 'ಅಧಿಕಾರ'ದ ನಿರ್ದಿಷ್ಟ ನಿರ್ವಚನ ರೂಪುಗೊಂಡಿತು ಎಂದು ಈ ಮೊದಲು ಪ್ರಸ್ತಾವಿಸಲಾಗಿದೆ. ಅಧಿಕಾರವೆನ್ನುವುದು ರೂಪುಗೊಳ್ಳುವುದೇ "ದಾಸ್ಯ"ದ ತಳಹದಿಯ ಮೇಲೆ. ಆದರೆ ವಸಾಹತುಕಾಲದಲ್ಲಿ "ದಾಸ್ಯ" ಎನ್ನುವುದಕ್ಕೂ ಬೇರೆ ರೂಪ ಬಂತು. ದಾಸ್ಯವೆಂದರೆ "ಪರದಾಸ್ಯ"ವೆಂಬ ಅರ್ಥ ಬಂತು. "ದಸ್ಯು" ಎಂಬ ಪದದಿಂದ ದಾಸ್ಯವೆನ್ನುವುದು ಹುಟ್ಟಿಕೊಂಡಿದೆ. ವಾಸ್ತವವಾಗಿ ಅದರ ನಿರ್ವಚನ ಬೇರೆ.ಒಬ್ಬರು ಇನ್ನೊಬ್ಬರ ಮೇಲೆ ಆಢಳಿತ ನಡೆಸಲು ಬೇಕಾಗಿರುವ ಪರಿಕರವಿದು. ದಾಸ ಎಂಬುದನ್ನು ನಿರ್ವಚಿಸದಿದ್ದರೆ ಆಡಳಿತವು ಸಾಧ್ಯವಾಗುವುದಿಲ್ಲ. ಅದಕ್ಕಾಗಿಯೇ ದಾಸವೆಂಬ ಪದವು ಸೃಷ್ಟಿಯಾಯಿತು. ವಿಲೋಮ ಸಂಬಂಧದಿಂದ ಹುಟ್ಟಿದ ಮಕ್ಕಳು ದಸ್ಯುಗಳಾಗುತ್ತಾರೆಎಂದು ಕರೆದರು. ವಸಾಹತು ಕಾಲದಲ್ಲಿ ಆಳುಗಳ ವ್ಯಾಖ್ಯಾನವೇ ಬೇರೆಯಾಗಿತ್ತು. ಇಂಗ್ಲೀಷರೇ ಮ್ಲೇಚ್ಛರಾಗಿದ್ದರು.

ವಸಾಹತುಕಾಲದಲ್ಲಿ ಪ್ರಾರಂಭಗೊಂಡ ಅಧಿಕಾರದ ನೂತನ ವ್ಯಾಖ್ಯೆಗಳು ಜನರಿಗೆ ಸುಲಭವಾಗಿ ತಿಳಿಯುವಂತಿರಲಿಲ್ಲ. ಉದಾ: ಕೋರ್ಟು; ಮುನ್ಸೀಫರು; ತಹಶೀಲ್ದಾರರು; ಪಿನಲ್‌ಕೋಡ್‌ಗಳು; ರುಜು; ಅಥವಾ ಆಧಾರಕ್ಕೆ ಎಡಗೈ ಹೆಬ್ಬೆಟ್ಟಿನರುಜು. ಇದರಲ್ಲಿ ಅನೇಕವನ್ನು ಬ್ರಿಟೀಶ್ ವೈಸರಾಯ್‌ಗಳು ಭಾರತಕ್ಕೆ ಅನ್ವಯವಾಗಲಿ ಎಂದು ಮೊಗಲರ ಆಳ್ವಿಕೆಯ ಪರಿಭಾಷೆಯನ್ನು ಬಳಸಿದರು. ಆದರೆ ಅದರೊಳಗಿನ ಪರಿಕರಗಳು ಮಾತ್ರ ಬೇರೆಯಾಗಿದ್ದವು. ಉದಾ: ದಿವಾನರು ಇತ್ಯಾದಿ. ಗಾಂಧಿಯವರು ವಿರೋಧಿಸಿದ್ದು ಇದನ್ನು.

> **"ನಿಸರ್ಗದ ಕಾನೂನೇ ಬೇರೆ ಹಾಗೂ**
> **ಕಾನೂನು ನಮ್ಮನ್ನು ನಿಯಂತ್ರಿಸುತ್ತದೆ"**

ಇಂಗ್ಲೆಂಡಿನಲ್ಲಿ ಬ್ರಿಟೀಶರನ್ನು 'ಸರ್' ಎಂದು ಕರೆಯಬೇಕಾಗಿ ಬಂದ ಪ್ರಸಂಗವನ್ನು ಗಾಂಧಿ ಉಲ್ಲೇಖಿಸಿದ್ದಾರೆ.

> **ಸೌದೆಂಪ್ಟನ್‌ದಿಂದ ನಾನು ಡಾಕ್ಟರ್ ಜೀವನ ಮೇಹತಾ ಅವರಿಗೆ ತಂತಿ ಕಳಿಸಿದೆನು. ಅವರು ಬಂದರು. ಅವರು ಪ್ರೀತಿಯಿಂದ ನನಗೆ ಬಹಳ ನಗೆ ಚಟಾಕಿಯಾಡಿದರು. ಅವರು ನಗುನಗುತ್ತಲೇ ವಿಲಾಯತಿಯ ಬಗ್ಗೆ ಅನೇಕ ಸಂಗತಿಗಳನ್ನು ನನಗೆ ತಿಳಿಸಿದರು. "ವಿಲಾಯತಿಯಲ್ಲಿ ಬೇರೆಯವರ ಒಡವೆಗಳನ್ನು ಮುಟ್ಟದಿರು. ಪರಿಚಯವಾದ ನಂತರ ಹಿಂದುಸ್ತಾನದಲ್ಲಿ ಸಹಜವಾಗಿ ಕೇಳಬಹುದಾದಂಥ ಮಾತುಗಳನ್ನು ಇಲ್ಲಿ ಕೇಳಬಾರದು. ದೊಡ್ಡ ದೊಡ್ಡ ಮಾತುಗಳನ್ನಾಡಬಾರದು. ಹಿಂದುಸ್ತಾನದಲ್ಲಿ ಇಂಗ್ಲೀಷರ ಹತ್ತಿರ ಮಾತನಾಡುವಾಗ ಉಪಯೋಗಿಸುವ 'ಸರ್' ಶಬ್ದವು ಇಲ್ಲಿ ಅನಾವಶ್ಯಕವಾದುದು. ಇಲ್ಲಿ ಸೇವಕನು ಮಾತ್ರ ಒಡೆಯನನ್ನು ಇಲ್ಲವೆ ಹಿರಿಯ ಅಧಿಕಾರಿಯನ್ನು ಉದ್ದೇಶಿಸಿ 'ಸರ್' ಎನ್ನುವುದುಂಟು." (ನನ್ನ ಬಾಲ್ಯದ ನೆನಪುಗಳು ಪುಟ. 1960–2011 ಪುಟ. 46)**

ಗಾಂಧಿ ಹೇಳಿರುವ ನಿಸರ್ಗದ ಕಾನೂನಿನ ಪರಿಕಲ್ಪನೆ ವಿಶಿಷ್ಟವಾಗಿದೆ.

ಕ್ರಿಶ್ಚಿಯನ್ ಮಿಶನರಿಗಳು ಪ್ರಾರಂಭಿಸಿದ ಇಂಗ್ಲೀಷ್ ಭಾಷಾ ಶಿಕ್ಷಣವು ಇಬ್ಬಗೆಯ ಪರಿಣಾಮಬೀರಿತು: ಒಂದು ಪಶ್ಚಿಮದ ಸಾಂಸ್ಕೃತಿಕ ವಿಸ್ತರಣೆ. ಯುರೋಪಿಯನ್ನರಿಗೂ ಭಾರತೀಯ ಪರಂಪರೆಯ ಅರಿವು ಒಂದು ಕಡೆಗೆ ಇದ್ದರೆ ಇನ್ನೊಂದು ಕಡೆಯಿಂದ ಇದೇ ಅರಿವು ರಾಜಕೀಯ ಪುನರ್ ರೂಪೀಕರಣವನ್ನು ಮಾಡಿತು. ಒಂದೇ ಅಧಿಕಾರ: ಒಂದೇ ಮನಸ್ಸು ಹೊಸ ರಾಷ್ಟ್ರೀಯತಾವಾದಿ ಪರಂಪರೆಯನ್ನು ಹುಟ್ಟು ಹಾಕಿತು.

ಹೊಸ ರೀತಿಯ ರಾಜಕೀಯ ಗುಣ–ನಡತೆಗಳು ಕಾಣಿಸಿಕೊಂಡವು. ಎರಡನೆಯದಾಗಿ ಬ್ರಿಟೀಶ್ ಮಾದರಿಯ ಕಲಿಕೆಯೂ ಮುಖ್ಯವಾಯಿತು.

ಇದರ ಜೊತೆಗೆ ನಡೆದ ಮತ್ತೊಂದು ಪ್ರಕ್ರಿಯೆಯೆಂದರೆ ಧಾರ್ಮಿಕ ಪುನರುಜ್ಜೀವನ. ವಿವೇಕಾನಂದ; ರಾಮಕೃಷ್ಣ ಪರಮಹಂಸರಿಂದ ಪ್ರಾರಂಭಿಸಿ ಧಾರ್ಮಿಕ ಪರಿಭಾಷೆಗಳನ್ನೇ ರಾಜಕೀಯ ಪರಿಭಾಷೆಯಾಗಿ ಪರಿವರ್ತಿಸಿದ ಗಾಂಧಿಯವರೆಗೂ ಇದರ ವಿಸ್ತಾರವಾದ ನಡೆಯಿದೆ. ಬಹುತೇಕ ಇವರೆಲ್ಲರೂ 'ಸನಾತನ' 'ಉಪನಿಷತ್ತು' 'ಭಗವದ್ಗೀತೆ' 'ಅದ್ವೈತ' ಸಿದ್ಧಾಂತದವರೆಗೂ ಇವರೆಲ್ಲರೂ ಮಾತಾಡಿದ್ದಾರೆ. ವಸಾಹತುಕಾಲದ ಧಾರ್ಮಿಕ ಪುನರುಜ್ಜೀನದ ಒಂದು ತುದಿ ರಾಜಾರಾಂಮೋಹನ್‌ರಾಯ್ ಇದರ ಇನ್ನೊಂದು ತುದಿ ಗಾಂಧಿ. ಯಂತ್ರ ನಾಗರಿಕತೆಯನ್ನೇ ಗಾಂಧಿಶತ್ರು ಎಂದು ಪರಿಭಾವಿಸಿದ್ದರು.

> ಇಂಗ್ಲೀಷ್ ಇತಿಹಾಸಕಾರರೇ ತೋರಿಸಿದ್ದಾರೆ – ಲಂಕಾಷೈರಿನ ಬಟ್ಟೆಯನ್ನು ಹಿಂದೂಸ್ಥಾನದ ತಲೆಯ ಮೇಲೆ ಬಲವಂತವಾಗಿ ಹೊರಿಸಿ ಇಲ್ಲಿದ್ದ ಜಗತ್ಪ್ರಸಿದ್ಧ ವಸ್ತುಗಳನ್ನು ಮನವಾರೆ; ಕೈಯಾರೆ ಹಾಳು ಮಾಡಿದರು. ಅದರಿಂದ ಹಿಂದೂಸ್ಥಾನ ಲಂಕಾಷೈರ್, ಜಪಾನ್, ಫ್ರಾನ್ಸ್, ಅಮೆರಿಕಾ ಎಲ್ಲವನ್ನೂ ಮೊರೆಹೋಗಬೇಕು. ಇದರಿಂದ ಹಿಂದೂಸ್ಥಾನದ ಗತಿಯೇನಾಯಿತೋ ನೋಡಿ. ಪ್ರತಿವರ್ಷವೂ ಬಟ್ಟೆಗಾಗಿ ೬೦ ಕೋಟಿ ರೂಪಾಯಿಗಳನ್ನು ಪರದೇಶಗಳಿಗೆ ತೆರುತ್ತಿದ್ದೇವೆ. ನಮ್ಮ ಬಟ್ಟೆಗೆ ಸಾಕಾಗುವಷ್ಟು ಹತ್ತಿಯನ್ನು ನಾವು ಬೆಳೆಯುತ್ತೇವೆ. ಇಲ್ಲಿಂದ ಹತ್ತಿಯನ್ನು ಹೊರಕ್ಕೆ ಕಳಿಸಿ, ಅಲ್ಲಿ ಬಟ್ಟೆ ನೇಯಿಸಿ ತರಿಸಿಕೊಳ್ಳುವುದು ಮೂರ್ಖತನವಲ್ಲದೆ ಮತ್ತೇನು? ಹಿಂದೂಸ್ಥಾನವನ್ನು ಇಷ್ಟು ನಿಸ್ಸಹಾಯು ಸ್ಥಿತಿಗೆ ನೂಕಿದ್ದು ಸರಿಯೆ?
>
> ೧೫೦ ವರ್ಷದ ಹಿಂದೆ ನಮ್ಮ ಬಟ್ಟೆಯನ್ನೆಲ್ಲ ನಾವೇ ಮಾಡಿಕೊಳ್ಳುತ್ತಿದ್ದೆವು. ತಮ್ಮ ಗುಡಿಲುಗಳಲ್ಲಿ ಕುಳಿತೇ ನಮ್ಮ ಹೆಂಗಸರು ಸೊಗಸಾದ ನೂಲು ನೂತು ತಮ್ಮ ಗಂಡಂದಿರ ಸಂಪಾದನೆಗೆ ಜೊತೆಗೂಡಿಸುತ್ತಿದ್ದರು. ಹಳ್ಳಿಯ ನೇಕಾರರು ಆ ನೂಲನ್ನು ನೇಯುತ್ತಿದ್ದರು. ನಮ್ಮ ದೇಶದಂಥ ವಿಶಾಲವಾದ ಕೃಷಿ ಪ್ರಧಾನವಾದ ದೇಶದಲ್ಲಿ ಅದು ಅತ್ಯಾಜ್ಯವಾದ, ಅತ್ಯಗತ್ಯ ಆರ್ಥಿಕ ವಿಧಾನ. ನಮ್ಮ ಬಿಡುವನ್ನು ಸ್ವಾಭಾವಿಕವಾದ ರೀತಿಯಲ್ಲಿ ಉಪಯೋಗಿಸಲು ಅದು ಉತ್ತಮ ವ್ಯವಸ್ಥೆ. ಇವೊತ್ತು ನಮ್ಮ ಹೆಂಗಸರಿಗೆ ಆ ಕೈಚಳಕ ಹೋಗಿದೆ. ಕೋಟ್ಯಂತರ ಜನರ ಮೇಲೆ ನಿರುದ್ಯೋಗ ಬಂದುಬಿದ್ದು ದೇಶ ಬಡವಾಗಿದೆ. ನೇಕಾರರು

ಅನೇಕರು ಭಂಗಿಗಳಾಗಿದ್ದಾರೆ. ಕೆಲವರು ಬಾಡಿಗೆ ಸಿಪಾಯಿಗಳಾಗಿದ್ದಾರೆ. ಆ ಕುಶಲ ವಸ್ತ್ರಕಾರರ ಕುಲವೇ ಅರ್ಧಕ್ಕರ್ಧ ನಷ್ಟವಾಗಿದೆ. ಉಳಿದರ್ಧ ನಯವಾದ ಕೈನೂಲು ಇಲ್ಲದ್ದಕ್ಕೆ ಪರದೇಶೀ ನೂಲನ್ನು ತರಿಸುತ್ತಿದ್ದಾರೆ.

ಹಿಂದೂಸ್ಥಾನಕ್ಕೆ ಪರದೇಶೀವಸ್ತ್ರ ಬಹಿಷ್ಕಾರ ಎಂದರೆ ಏನೋ ನಿಮಗೆ ಈಗ ಅರ್ಥವಾಗಿರಬೇಕು. ವಿರೋಧಕ್ಕಾಗಿ ಅದನ್ನು ಹೂಡಿಲ್ಲ. ಖಿಲಾಫತ್ – ಪಂಜಾಬುಗಳ ಅನ್ಯಾಯವನ್ನು ಸರಕಾರ ಪರಿಹರಿಸಿದರೂ ಈ ಬಹಿಷ್ಕಾರ ಚಳುವಳಿ ಸಾಗುತ್ತದೆ. ಹಿಂದೂಸ್ಥಾನಕ್ಕೆ ಈಗಲೇ ಸ್ವರಾಜ್ಯ ಕೊಡುತ್ತೇವೆ ಎಂದರೂ ಅಷ್ಟೆ. ಸ್ವರಾಜ್ಯ ಎಂದರೆ ನಮ್ಮ ರಾಷ್ಟ್ರದ ಆರ್ಥಿಕ ಅಸ್ತಿತ್ವಕ್ಕೆ ಅತ್ಯಗತ್ಯವಾದ ಭಾರತೀಯ ಉದ್ಯೋಗಗಳನ್ನು ಕಾಪಾಡಿಕೊಳ್ಳುವ ಶಕ್ತಿ; ಅದಕ್ಕೆ ವಿರುದ್ಧವಾದ ವಸ್ತುಗಳ ಪ್ರವೇಶಕ್ಕೆ ಅಡ್ಡಿ ಮಾಡುವ ಶಕ್ತಿ – ಇಷ್ಟಾದರೂ ಆಗಬೇಕು. ವ್ಯವಸಾಯ, ನೂಲುಗಾರಿಕೆ ಎರಡೂ ರಾಷ್ಟ್ರದ ಎರಡು ಶ್ವಾಸಕೋಶ. ಅವಕ್ಕೆ ಕ್ಷಯ ಬಾರದಂತೆ, ಏನೇ ಆಗಲಿ, ಕಾಪಾಡಬೇಕು. ಯಾವುದಕ್ಕಾಗಿಯೂ ತಡೆದು ನಿಲ್ಲುವಂತಿಲ್ಲ ಈ ಕೆಲಸ. ಇಡೀ ರಾಷ್ಟ್ರವೇ ತನ್ನ ಬೇಸಾಯಕ್ಕೆ ಜೊತೆಯಾಗಿ ಒಂದು ಉದ್ಯೋಗ (ಹಣ ಕೊಡುವಂಥದು) ಇಲ್ಲದೆ ಸೊರಗಿ ಹೋಗಿರುವಾಗ ಪರದೇಶದ ಗಿರಣಿಗಾರರು ಸ್ವದೇಶದ ಆಮದು ವ್ಯಾಪಾರಿಗಳ ಹಿತವನ್ನು ಯೋಚಿಸಲಾದೀತೆ? ಪರದೇಶದ ಎಲ್ಲಾ ವಸ್ತುಗಳ ಬಹಿಷ್ಕಾರವಲ್ಲ ಇದು. ತಪ್ಪು ತಿಳಿದುಕೊಳ್ಳಬೇಡಿ. ಅಂತರರಾಷ್ಟ್ರೀಯ ವ್ಯಾಪಾರಕ್ಕೆ ಬೇಲಿ ಹಾಕಬೇಕೆಂದೇನೂ ಹಿಂದೂಸ್ಥಾನದ ಉದ್ದೇಶವಲ್ಲ. ಹೊರಗಡೆ ಚೆನ್ನಾಗಿ ಮಾಡುವ ಬೇರೆ ಪದಾರ್ಥಗಳನ್ನು, ಬಟ್ಟೆಯೊಂದನ್ನು ಬಿಟ್ಟು, ಉಭಯಾನುಕೂಲವಾದ ರೀತಿಯಲ್ಲಿ ಹಿಂದೂಸ್ಥಾನ ಕೃತಜ್ಞತಾ ಪೂರ್ವಕವಾಗಿ ಸ್ವೀಕರಿಸಿತು. ಯಾವುದನ್ನೂ ಬಲವಂತವಾಗಿ ಅದರ ಮೇಲೆ ಹೇರಲಾಗದು. ಭವಿಷ್ಯದ ಮಾತನ್ನು ಈಗೇಕೆ ಇಣಿಕಿ ನೋಡಲಿ? ಬೇಗನೇ ಹಿಂದೂಸ್ಥಾನ ಇಂಗ್ಲೆಂಡಿನೊಂದಿಗೆ ಸರಿಸಮನಾಗಿ ಸಹಕರಿಸೀತು ಎಂದು ಆಶಿಸುತ್ತೇನೆ. ಆಗ ವ್ಯಾಪಾರದ ಅಂಶಗಳನ್ನು ಪರಿಶೀಲಿಸಬಹುದು. ಸದ್ಯ, ಪರದೇಶೀವಸ್ತ್ರಬಹಿಷ್ಕಾರದಲ್ಲಿ ನಿಮ್ಮ ನೆರವು ಬೇಡುತ್ತೇನೆ.

(ಪತ್ರಗುಚ್ಛ ೧ ಪುಟ. ೩೫)

ಅದಕ್ಕಾಗಿ ಅವರು ಪಶ್ಚಿಮದ ಅನುಕರಣೆಯ ಬಗ್ಗೆ ಬಹಳ ಅಸಮಾಧಾನವನ್ನು ಹೊಂದಿದ್ದರು. ಮತ್ತು ಬ್ರಿಟೀಶ್ ಅಧಿಪತ್ಯದ ವಿರುದ್ಧ ಹೋರಾಡುವಾಗ ಧಾರ್ಮಿಕ

ಪರಿಭಾಷೆಗಳನ್ನೇ ಬಳಸಿಕೊಂಡರು. ಸತ್ಯಾಗ್ರಹ; ಅಹಿಂಸೆ; ಸನಾತನತೆ; ಧರ್ಮ; ಭಗವದ್ಗೀತೆಯೆಂಬ ಗೋಮಾತೆ-ಇವೆಲ್ಲವೂ ಗಾಂಧಿಗೆ ಮುಖ್ಯವಾಗಿತ್ತು.

"ಹಿಂದೂಧರ್ಮಕ್ಕೆ ಯಾವುದೇ ರೀತಿಯ ಅಧಿಕೃತ ಸಿದ್ಧಾಂತವಿಲ್ಲದಿರುವುದು ಅದರ ಭಾಗ್ಯ ಮತ್ತು ದೌರ್ಭಾಗ್ಯ.ಆದ್ದರಿಂದ ಯಾವುದೇ ತಪ್ಪು ಗ್ರಹಿಕೆಯಿಂದ ನನ್ನನ್ನು ರಕ್ಷಿಸಿಕೊಳ್ಳಲಿಕ್ಕಾಗಿ ಸತ್ಯ ಮತ್ತು ಅಹಿಂಸೆಯು ನನ್ನ ಸಿದ್ಧಾಂತವೆಂದು ಹೇಳಿದ್ದೇನೆ.

ಹಿಂದೂ ಸಿದ್ಧಾಂತದ ಲಕ್ಷಣವನ್ನು ನಿರೂಪಿಸಿ ಎಂದು ಕೇಳಿದಲ್ಲಿ ನಾನು ಸುಮ್ಮನೆ ಹೇಳಬಹುದು:

ಅಹಿಂಸೆಯ ಸಾಧನದ ಮೂಲಕ ಸತ್ಯದ ಅನುಸರಣೆ"(ಗಾಂಧಿ-ಹಿಂದೂ ಧರ್ಮವೆಂದರೇನು?)

ರಾಜಾರಾಂಮೋಹನ್‌ರಾಯ್ ಅವರ ಗುರಿ-ಧಾರ್ಮಿಕ ಮೂಢನಂಬಿಕೆಗಳ ವಿರೋಧ. ಸತಿನಿಷೇಧ ಕಾಯಿದೆಯ ಬಗ್ಗೆ ಮೋಹನ್‌ರಾಯ್ ಉತ್ಸುಕರಾಗಿದ್ದರು. ಆದರೆ ನಾವಿಲ್ಲಿ ಗಮನಿಸಬೇಕಾಗಿರುವುದು ಅದಲ್ಲ: ಧಾರ್ಮಿಕ ಪುನರುಜ್ಜೀವನವೆಂಬ ಪ್ರಶ್ನೆಯು ಹೇಗೆ ಮತ್ತೆ ಚರ್ಚೆಗೆ ಬಂತು ಎಂದು ಮಾತ್ರ.

೧. ಧರ್ಮವೆಂದರೆ – "ಧಾರಯತಿ ಇತಿ! ಧರ್ಮ:" ಧಾರಣೆಗೆ ಯೋಗ್ಯವಾದುದು ಧರ್ಮ.

೨. ವೈಯುಕ್ತಿಕ ಧರ್ಮ: ವ್ಯಕ್ತಿಗೆ ಸಂಬಂಧಿಸಿದ್ದು.

೩. ಸ್ತ್ರೀಧರ್ಮ (ಮತ) – ಸ್ತ್ರೀಮತ.

೪. ಕುಲಧರ್ಮ (ಮತ) –

೫. ಪತಿಧರ್ಮ. (ಮತ) –

೬. ಪ್ರಭುಧರ್ಮ. –

೭. ಜಾತಿಧರ್ಮ. –

೮. ನಾಟ್ಯ ಧರ್ಮ. (ಭರತ) – ನಾಟ್ಯಶಾಸ್ತ್ರ.

ಹೀಗೆ ಧರ್ಮಗಳಿಗೆ ಬೇರೆ ಬೇರೆ ವ್ಯಾಖ್ಯೆಗಳಿವೆ.ನಮ್ಮಲ್ಲಿನ ಧರ್ಮದ ಕಲ್ಪನೆಯು ಯುರೋಪಿಯನ್ ವ್ಯಾಖ್ಯೆಗಿಂತ ಭಿನ್ನವಾಗಿದೆ.ಗಾಂಧಿ ಇದನ್ನು ಪ್ರತಿಪಾದಿಸಿದ್ದರು.

ರಿಲಿಜಿನ್ನಿನ ವ್ಯಾಖ್ಯೆಯನ್ನು ಬಾಲಗಂಗಾಧರ್ ವಿವರವಾಗಿ ಚರ್ಚಿಸಿದ್ದಾರೆ:

ಆದರೆ ಸಮಸ್ಯೆಯೇನಾಯಿತು ಎಂದರೆ ಯುರೋಪಿಯನ್ನರು ಹೇಗೆ ಧರ್ಮವನ್ನು

ವ್ಯಾಖ್ಯಾನಿಸ ಹೊರಟರೋ ಅದೇ ರೀತಿ ಭಾರತೀಯ ಕೆಲ ಬುದ್ಧಿಜೀವಿಗಳು ಅದನ್ನೇ ಅನುಸರಿಸಿದರು. ಇದರಿಂದ ಧಾರ್ಮಿಕ ಪುನರುಜ್ಜೀವನವೆಂದರೆ ಅದು ಇಡಿಯ ಭಾರತಕ್ಕೆ ಅನ್ವಯವಾಗುವ ಮಾದರಿಯದು ಎಂದು ತಿಳಿದುಕೊಂಡರು. ಇದು ವಾಸ್ತವವಾಗಿ ಇಂಗ್ಲೀಷರ ಅನುಕರಣೆಯೇ ಆಗಿತ್ತು. ಅಂದರೆ ಇದನ್ನು ಅನ್ವಯಿಸುವಾಗ ಯುರೋಪಿಯನ್ನರು ಬಳಸಿದ ಪರಿಭಾಷೆ (Idiam)ಯನ್ನೇ ಭಾರತೀಯ ಬುದ್ಧಿಜೀವಿಗಳು ಅನುಸರಿಸಿದರು. ಆದರೆ ಈ ಅನುಕರಣೆಯಲ್ಲಿಯೂ ಬಹಳ ಅಸ್ಪಷ್ಟತೆಯಿತ್ತು. ಉದಾಹರಣೆಗೆ ಸತಿನಿಷೇಧ ಕಾಯಿದೆ ಸಹಗಮನವೆಂಬ ಪದ್ಧತಿಯು ಎಲ್ಲೆಡೆಯಲ್ಲಿಯೂ ಜಾರಿಯಲ್ಲಿತ್ತಾ? ಅದು ಧಾರ್ಮಿಕ ಪ್ರಶ್ನೆಯಾಗಿತ್ತೇ? ಭಾರತದ ಬುಡಕಟ್ಟು ಜನರ ಧರ್ಮ ಯಾವುದು? ಗಾಂಧಿ ದೃಷ್ಟಿಯ 'ಗೋಮಾತೆ'ಯು ಯಾವುದು? ಆದುದರಿಂದ ಧರ್ಮದ ವ್ಯಾಖ್ಯೆ ಸರಳ–ಸುಲಭ–ಏಕಕೇಂದ್ರಿತ ಚಿಂತನೆಯ ಫಲವಲ್ಲ. (ನೋಡಿ: ಸ್ವರಾಜ್ಯದ ಹೆಜ್ಜೆ ಹಾದಿಗಳು)

ಇಲ್ಲಿ ಮೆಕಾಲೆಯನ್ನು ನೆನಪಿಸಿಕೊಳ್ಳಬೇಕು. ಮೆಕಾಲೆಯ ಮಿನಿಟ್‌ನಮೇಲೆ (೧೮೩೫) ಚಾರ್ಲ್ಸ್‌ಗ್ರಾಂಟ್‌ನ ಆಡಳಿತಕ್ರಮ ತುಂಬಾ ಪ್ರಭಾವ ಬೀರಿತ್ತು. ಗ್ರಾಂಟ್ ಶಿಕ್ಷಣದಲ್ಲಿ ಬೇರೆ ಬೇರೆ ರೀತಿಯ ಕೆಲಸ ಮಾಡಿದ್ದ. ಇವನ ಕಾಲದಲ್ಲಿಯೇ ಅನುವಾದದ ಕೆಲಸವೂ ಭರದಿಂದ ಸಾಗಿತ್ತು. ೧೮೮೯ ಸುಮಾರಿಗೆ ನಡೆದ ಮತ್ತೊಂದು ಸಂಗತಿಯನ್ನು ಇಲ್ಲಿ ಉಲ್ಲೇಖಿಸಬೇಕು: ಈ ಕಾಲದಲ್ಲಿ ಬೇರೆ ಬೇರೆ ಕ್ಷೇತ್ರಗಳಿಗೆ ಸಂಬಂಧಿಸಿದಂತೆ ಬೇರೆ ಬೇರೆ ಅನುವಾದಕರನ್ನು ಸರಕಾರದ ಚಾಕ್ರಿಗೆ ನೇಮಿಸಿಕೊಳ್ಳಲಾಯಿತು. ಇದರಿಂದ ವಸಾಹತು ಅನುಕರಣೆಗೆ ಮತ್ತಷ್ಟು ಬಲ ಬಂತು. ಇಲ್ಲಿಯೂ ಹೆಚ್ಚಿನ ಒತ್ತು ಬಿದ್ದಿರುವುದು ಇಂಗ್ಲೀಷಿಗೆ ಎಂಬುದು ಗಮನಾರ್ಹ. ಇದರಿಂದ ಬರಹಗಳ ಪ್ರಾತಿನಿಧಿಕ ರೂಪವೇ ಬದಲಾಯಿತು. ಭಾರತೀಯ ಚರಿತ್ರೆಯ ವ್ಯಾಖ್ಯೆಗಳು ಕೂಡಾ.

ವಾಸ್ತವವಾಗಿ ವಸಾಹತುಕಾಲದ ಸಂದರ್ಭದಲ್ಲಿ ಅನುಕರಣೆಗೆ ಒಂದು ನಿರ್ದಿಷ್ಟ ಚಹರೆಯೆನ್ನುವುದು ಇಲ್ಲ. ಅನೇಕ ರೀತಿಯ ಮಾದರಿಗಳು ಇದ್ದವು. ದೈನಂದಿನ ವ್ಯವಹಾರದಿಂದ ರಾಜಕೀಯದವರೆಗೆ ಆದರೆ ಯುರೋಪಿಯನ್ನರನ್ನು ಭಾರತೀಯರು ಅನುಕರಿಸಲು ಯತ್ನಿಸಿದಾಗ ಯುರೋಪಿಯನ್ ಆಡಳಿತಕ್ಕೆ ಅನುಕೂಲವಾಯಿತು. ಹಾಗೆಂದು ಭಾರತೀಯರು ಯುರೋಪಿಯನ್ನರನ್ನು ಸಂಪೂರ್ಣ ಅನುಕರಿಸುವುದು ಸಾಧ್ಯವಿರಲಿಲ್ಲ. ಭಾರತೀಯ ಸುಶಿಕ್ಷಿತ ಮಧ್ಯಮವರ್ಗದವರು ಇಂಗ್ಲಿಶರಂತೆ ಇದ್ದರು. ಆದರೆ ಅವರಾಗಿರಲಿಲ್ಲ. ಭಾರತೀಯರು ಅನುಕರಣೆ ಮಾಡಿದರೂ ಬಿಳಿಯರಾಗುವುದಂತೂ ಸಾಧ್ಯವಿರಲಿಲ್ಲ. ಆದರೆ ಅನುಕರಿಸಲು ಹೊರಟ ಸುಶಿಕ್ಷಿತ

ಮಧ್ಯಮ ವರ್ಗಕ್ಕೂ ಸಾಂಪ್ರದಾಯಿಕ ಸಮಾಜ ಮತ್ತು ಸಂಸ್ಕೃತಿಗೂ ಯಾವುದೇ ರೀತಿಯ ತಾಳಮೇಳಗಳಿರಲಿಲ್ಲ.

"ಪೌರಾತ್ಯ ನಾಗರಿಕತೆ ಅಂದರೆ ಭಾರತೀಯ ನಾಗರಿಕತೆಗೂ ಪಾಶ್ಚಿಮಾತ್ಯ ನಾಗರಿಕತೆಗೂ ಒಂದು ವ್ಯತ್ಯಾಸವಿದೆ. ಈ ವ್ಯತ್ಯಾಸ ಎಲ್ಲಿದೆ ಎಂಬುದನ್ನು ಸಾಮಾನ್ಯವಾಗಿ ಬಹಳ ಜನ ಗ್ರಹಿಸಿಲ್ಲ. ನಮ್ಮ ಭೌಗೋಳಿಕ ಅಂಶಗಳು, ನಮ್ಮ ಇತಿಹಾಸ ಮತ್ತು ಜೀವನ ಕ್ರಮಗಳು ಭಿನ್ನವಾಗಿವೆ. ನಮ್ಮ ರಾಷ್ಟ್ರ ಅದೆಷ್ಟೇ ದೊಡ್ಡದಿದ್ದರೂ ಈ ಭೂಮಂಡಲದಲ್ಲಿ ಒಂದು ಅಣುವಿನಷ್ಟದ್ದು ಚೀನಾದೇಶವನ್ನು ಬಿಟ್ಟರೆ ಅತ್ಯಂತ ಜನನಿಬಿಡವಾದ ರಾಷ್ಟ್ರವಾಗಿದೆ. ಭೂಮಿಯ ಮೇಲೆ ಜನಸಂಖ್ಯೆಯ ಒತ್ತಡ ಹೆಚ್ಚಾಗಿರುವ ರಾಷ್ಟ್ರದ ಆರ್ಥಿಕ ಸ್ಥಿತಿ ಮತ್ತು ನಾಗರಿಕತೆಗಳು ಜನಸಂಖ್ಯೆಯ ಒತ್ತಡ ಕಡಿಮೆ ಇರುವ ರಾಷ್ಟ್ರಕ್ಕಿಂತಲೂ ಭಿನ್ನವಾಗಿರಲೇಬೇಕು. ಜನಸಾಂದ್ರತೆ ಕಡಿಮೆ ಇರುವ ಅಮೆರಿಕದಲ್ಲಿ ಯಂತ್ರಗಳ ಅವಶ್ಯಕತೆಯಿರಬಹುದು. ಭಾರತದಲ್ಲಿ ಅವುಗಳ ಅವಶ್ಯಕತೆಯೇ ಇಲ್ಲದಿರಬಹುದು. ಕೆಲಸ ಮಾಡುವ ಕೈಗಳು ಸಾವಿರಾರು ಸಂಖ್ಯೆಯಲ್ಲಿ ಕೆಲಸವಿಲ್ಲದೆ ಸೋಮಾರಿಗಳಾಗಿರುವಾಗ ಶ್ರಮವುಳಿಸುವ ಸಾಧನಗಳನ್ನು ಆಲೋಚಿಸುವುದು ಅರ್ಥವಿಲ್ಲದ್ದು. ಕೈ ಬಳಸಿ ಊಟ ಮಾಡುವುದಕ್ಕೆ ಬದಲಾಗಿ ಯಂತ್ರವೊಂದನ್ನು ಕಂಡು ಹಿಡಿದದ್ದಾದರೆ ಆಗ ಊಟವೆಂಬುದು ಪ್ರಿಯವಾಗುವುದಿಲ್ಲ. ಅದು ಹಿಂಸೆಯಾಗುತ್ತದೆ. ನಮ್ಮ ಇಂದಿನ ದಾರಿದ್ರ್ಯಕ್ಕೆ ಕಾರಣವೆಂದರೆ, ನಮ್ಮ ಕೈಗಾರಿಕೆಗಳು ನಾಶಗೊಂಡು ಜನರು ನಿರುದ್ಯೋಗಿಗಳಾದದ್ದು. ಕೆಲವು ವರ್ಷಗಳ ಹಿಂದೆ ನಮ್ಮಲ್ಲಿ ಶೇಕಡ ೭೦ರಷ್ಟು ಜನ ವ್ಯವಸಾಯವನ್ನವಲಂಬಿಸಿದ್ದರು. ಆದರೆ ಈಗ ನೋಡಿದರೆ ಅದು ಶೇಕಡ ೯೦ರಷ್ಟಾಗಿದೆ. ಅಂದರೆ ಶೇಕಡ ೯೦ ಜನರೂ ವ್ಯವಸಾಯ ಮಾಡುತ್ತಿದ್ದಾರೆಂದಲ್ಲ. ಮೊದಲು ಶೇಕಡ ೭೦ ಜನ ಭೂಮಿಯನ್ನವಲಂಬಿಸಿದ್ದರೆ, ಈಗ ಶೇಕಡ ೯೦ ರಷ್ಟು ಜನ ಭೂಮಿಯನ್ನೇ ಅವಲಂಬಿಸಬೇಕಾಗಿದೆ. ಹಿಂದೆ ಇದ್ದ ಕೈಗಾರಿಕೆ ಮತ್ತು ಕುಶಲ ಕಲೆಗಳು ಶೇಕಡ ೨೦ ಜನರಿಗೆ ಆಹಾರ ನೀಡಿದ್ದವು. ಆದರೆ ಈಗ ಆ ವೃತ್ತಿಗಳಿಲ್ಲದ್ದರಿಂದ ಆ ಜನ ಭೂಮಿಯನ್ನೇ ಅವಲಂಬಿಸಿದ್ದಾರೆ. ಭೂಮಿ ಇಲ್ಲದ ಈ ಜನ ತಮ್ಮ ಹೊಟ್ಟೆ ಪಾಡಿಗಾಗಿ ತಮ್ಮ ಇಚ್ಛೆಗೆ ವಿರುದ್ಧವಾಗಿ ಅನ್ಯಮಾರ್ಗಗಳನ್ನು ಹಿಡಿಯಬೇಕಾಗಿದೆ. (ಮಹಾತ್ಮ ಪುಟ. ೩೫)

ವಸಾಹತುಕಾಲದ ಸಂಕಥನಗಳು ಅನೇಕ ಸಮಸ್ಯೆಯನ್ನು ಎದುರಿಸಬೇಕಾಯಿತು. ಜ್ಞಾನಮಾದರಿಗಳು ಸಂಕರಗೊಂಡವು. ಹಾಗೆಯೇ ನಾಗರಿಕತೆಯೂ ಕೂಡಾ ಸಂಕರಗೊಂಡವು. ಜನಾಂಗಿಕ, ಸಾಂಸ್ಕೃತಿಕ ರಾಷ್ಟ್ರೀಯ ಪ್ರಾತಿನಿಧಿಕರೂಪಗಳೂ ಅಧಿಕಾರದ ನಿಯಂತ್ರಣಕ್ಕೆ ಒಳಪಟ್ಟಿದ್ದರಿಂದ ವಸಾಹತು ಸಂಕಥನಗಳು ಅನುಕರಣೆಯನ್ನು ಬಾಹ್ಯ ನಾಗರಿಕ ಸಂಹಿತೆಯಂತೆ ನಡೆಯಲು ಯತ್ನಿಸಿದವು. ೧೮೧೭ ರಲ್ಲಿ ಬಂಗಾಳದ ಮಿಶನರಿಯ ಮೂಲಕ ಬಂದ ಒಂದು ಮಾತು ಇಲ್ಲಿ ಮುಖ್ಯ: "ಹೌದು ಭಾರತೀಯರಲ್ಲಿ ಹೆಚ್ಚಿನವರು ಯಾಕೆ ಬೈಬಲ್ಲನ್ನು ಓದುತ್ತಾರೆ?" ಆದರೆ ಈ ಪ್ರಶ್ನೆ ಎಲ್ಲದ್ದಕ್ಕೂ ಅನ್ವಯವಾಗುವುದಿಲ್ಲವೆಂಬುದು ಬೇರೆ ಮಾತು.

ಗಾಂಧಿಯವರು ಈ ಕುರಿತು ಒಂದು ತಮಾಷೆಯ ವಿಷಯವನ್ನು ಹೇಳುತ್ತಾರೆ_ಅದು ವೆಲಿಂಗ್ಟನ್ ಕನ್ವೆನಷನ್ಗೆ ಹೋಗುವಾಗ ಬೆಕರ್ ಗಾಂಧಿಯನ್ನು ಕ್ರಿಸ್ತನನ್ನಾಗಿ ಮಾಡಲು ಹೊರಟ ಪ್ರಸಂಗವದು_

ಬೇಕರ್–"ಅದೇನು ಓದುತ್ತಿದ್ದಿಯಾ?"

ಗಾಂಧಿ–"ಭಗವದ್ಗೀತೆ"

(ಬೈಬಲ್ ಓದುವುದಿಲ್ಲವಲ್ಲ ಎಂಥ ಮೂರ್ಖನಿರಬೇಕು ಎಂದು ಅವರಿಗೆ ಅನಿಸಿರಬೇಕು.ಆದರೆ ಏನು ಮಾಡುತ್ತಾರೆ?ನನ್ನನ್ನು ಬಲಾತ್ಕಾರ ಮಾಡಬೇಕಾಗಿರಲಿಲ್ಲ.) (ಗೀತಾಮಾತೆ – ಪುಟ.೨೨೨)

ಅನುಕರಣೆಯ ಮೂಲ ಸಿದ್ಧಾಂತವನ್ನು ಅರಿಸ್ಟಾಟಲ್ ಮಂಡಿಸುವಾಗ ಹೇಳಿದ ಮಾತು: "ನಾವು ಹೊರಗಿನ ಜಗತ್ತನ್ನು ಅನುಕರಣೆಯನ್ನು ನಾವು ಮಾಡುತ್ತೇವೆ." ಅದನ್ನೇ ವಸಾಹತುಶಾಹಿ ಅನುಭವಕ್ಕೂ ಅನ್ವಯಿಸಬಹುದು. 'ಅದನ್ನು – ಇದು ಅನುಕರಣೆ ಮಾಡುತ್ತದೆಯೆಂದರೆ ಅದಕ್ಕಿಂತ 'ಬೇರೆ'ಯಾಗಿರುವುದು ಎಂತಲೇ ಹೊರತು ಬೇರೆ ಏನೂ ಅಲ್ಲ.

ಹಾಗೆಯೇ ಭಾರತೀಯ ವಸಾಹತುಶಾಹಿ ವಿದ್ಯಮಾನವನ್ನು ಗಮನಿಸಿಕೊಂಡು ಹೇಳುವುದಿದ್ದರೆ ವಸಾಹತು ಅನುಕರಣೆಯು ಭಾರತೀಯ ಪ್ರಾದೇಶಿಕ ಸಂಸ್ಕೃತಿಯ ಜೊತೆಗೆ ಅಂತರವಿರಿಸಿಕೊಳ್ಳುವುದೆಂದು ಮಾತ್ರ. ಇದರ ಜೊತೆಗೆ ಅನುಕರಣೆಯು ಪ್ರತಿಯಾದ ಮತ್ತೊಂದು ಬಿಂಬವಲ್ಲ. ವಸಾಹತುಕಾಲದ ರಾಷ್ಟ್ರೀಯ ಆಂದೋಲನಕಾರರು ರೂಪಿಸಿದ 'ರಾಷ್ಟ್ರೀಯ ಹೋರಾಟ'ವನ್ನು ಕೂಡಾ ಈ ಹಿನ್ನೆಲೆಯಿಂದಲೇ ಗಮನಿಸಬಹುದು.

"ನಮ್ಮ ಕಾಲದ ಭಾರತೀಯ ಸಂಸ್ಕೃತಿ ರೂಪುಗೊಳ್ಳುತ್ತಿದೆ. ಈವತ್ತು ಪರಸ್ಪರ ಘರ್ಷಣೆಯಲ್ಲಿವೆ ಎಂದು ತೋರುವ ಎಲ್ಲಾ

ಸಂಸ್ಕೃತಿಗಳ ಒಂದು ಮಿಶ್ರಣವನ್ನು ತಯಾರಿಸಲು ನಾವು
ಅನೇಕರು ಶ್ರಮಿಸುತ್ತಿದ್ದೇವೆ.
ಪ್ರತ್ಯೇಕವಾಗಿರಿಸಲು ಯತ್ನಿಸುವ ಯಾವ ಸಂಸ್ಕೃತಿಯೂ
ಉಳಿಯಲಾರದು.ಇವೊತ್ತು ಭಾರತದಲ್ಲಿ ಶುದ್ಧ ಆರ್ಯ ಸಂಸ್ಕೃತಿ
ಎಂಬುದೇನೂ ಇಲ್ಲ.
ಆರ್ಯರು ಭಾರತದಲ್ಲೆ ಇದ್ದವರೇ ಅಥವಾಹೊರಗಿನಿಂದ ಬಂದವರೇ
ಎನ್ನುವುದರಲ್ಲಿ ನನಗೆ ಕುತೂಹಲವಿಲ್ಲ.
ನನಗೆ ಆಸಕ್ತಿಯಿರುವ ಅಂಶವಿಷ್ಟೆ–
ನಮ್ಮ ಪೂರ್ವಜರು ಪರಸ್ಪರವಾಗಿ ಅತ್ಯಂತ ಮುಕ್ತ ಮನಸ್ಸಿನಿಂದ ಬೆರೆತರು ಮತ್ತು

ಇವೊತ್ತಿನ ಪೀಳಿಗೆಯ ನಾವು ಆ ಮಿಶ್ರಣ ಫಲ.
ನಮ್ಮನ್ನು ಧರಿಸಿರುವ
ಪುಟ್ಟಗೋಳಕ್ಕೆ ಏನಾದರೂ ಒಳ್ಳೆಯದನ್ನು ಮಾಡುತ್ತಿದ್ದೇವೆಯೇ ಅಥವಾ
ಅವಕ್ಕೆ ನಾವುಹೊರೆಯೆ
ಭವಿಷ್ಯ ಮಾತ್ರ ತೋರಿಸಬೇಕು". – ಗಾಂಧಿ (ಹರಿಜನ–೯–೫–೨೬)

* * *

೨. ಕರ ನಿರಾಕರಣೆ ಚಳುವಳಿ ಪ್ಯಾಸಿವ್ ರೆಸಿಸ್ಟೆನ್ಸ್ (ಸಾಂಸ್ಕೃತಿಕ ಆತ್ಮಬಲ)

ಪ್ಯಾಸಿವ್ ರೆಸಿಸ್ಟೆನ್ಸ್ ಎಂಬ ಆಂಗ್ಲ ಪದಪುಂಜವು
ನಾನು ವಿವರಿಸ ಬಯಸುವ ಶಕ್ತಿಯನ್ನು ಸೂಚಿಸುವುದಿಲ್ಲ.
ಸರಿಯಾದ ಪದ "ಸತ್ಯಾಗ್ರಹ".
ಸತ್ಯಾಗ್ರಹ ಶಸ್ತ್ರ ಬಲಕ್ಕೆ ವಿರುದ್ಧವಾದ ಆತ್ಮಶಕ್ತಿ.
ಇದು ಮೂಲಭೂತವಾಗಿ ಒಂದು ನೈತಿಕ ಶಕ್ತಿಯಾದ್ದರಿಂದ
ಜೀವನದಲ್ಲಿ ನೈತಿಕತೆಯತ್ತ ಒಲವಿರುವವರು ಮಾತ್ರ
ಇದನ್ನು ವಿವೇಕವುಳ್ಳವವರು ಮಾತ್ರ ಬಳಸಬಲ್ಲರು.–ಗಾಂಧಿ

ನಿರಾಕರಣೆಯು ನಿಷೇಧಾತ್ಮಕ ಧೋರಣೆಯಿಂದ ಹುಟ್ಟಿಕೊಳ್ಳುತ್ತದೆ. ಇದು ಧನಾತ್ಮಕ ಪ್ರಜ್ಞೆಯಿಂದ ಜನ್ಯವಾದುದಲ್ಲ. ನಿರಾಕರಣೆಯು ಯಾವ ರೀತಿಯಲ್ಲಿಯೂ ನಡೆಯಬಹುದು. ಆದರೆ ನಿರಾಕರಣೆಯ ಮನೋಭಾವವು ಜನ್ಮ ತಳೆಯುವುದು ಪ್ರಜ್ಞೆಯ ಮೂಲದಿಂದಲೇ ನಿರಾಕರಣೆಯ ಸರಳತತ್ವವು 'ಬೇಡ'ವೆಂಬುದರ ಮೇಲೆ ನಿಂತಿದೆ. ಈ ಅರ್ಥದಲ್ಲಿ ಇದು ನಿಷೇಧಾತ್ಮಕ ಸ್ವರೂಪದ್ದು. ಎರಡನೆಯದಾಗಿ ಸ್ವಯಂ ಅಸ್ತಿತ್ವ ಉಳಿಸಿಕೊಳ್ಳಲು ನಿರಾಕರಣೆಯ ಅಗತ್ಯವಿರುತ್ತದೆ.

"ಕತ್ತಿಯನ್ನು ಬಿಸುಟ ಮೇಲೆ ನಾನು ನನ್ನ ವಿರೋಧಿಗಳಿಗೆ
ನೀಡಬಹುದಾದುದು ಪ್ರೇಮ ಪಾತ್ರೆಯೊಂದೇ ಬೇರೇನೂ ಅಲ್ಲ.

ಆ ಪಾತ್ರೆಯನ್ನು ನೀಡಿ ಅವರನ್ನೂ ನನ್ನ ಸಮೀಪಕ್ಕೆ ಕರೆದುಕೊಳ್ಳುವ ಬಯಕೆ ನನ್ನದು." –ಗಾಂಧಿ

ನಿರಾಕರಣೆಯಲ್ಲಿ ವರ್ಗ ಜಾತಿಗಳ ಸಮಸ್ಯೆಯು ಕೂಡಾ ಮುಖ್ಯವಾಗಿದೆ. ನಿರಾಕರಣೆ ಮತ್ತೊಂದು ಪ್ರಮುಖ ಅಂಶವೆಂದರೆ ಸ್ವ ಅನನ್ಯತೆಯನ್ನು ಕಾಪಾಡಿಕೊಳ್ಳುವುದು. ಹಾಗೆಯೇ ನಿರಾಕರಣೆಯು ಮೇಲರಿಮೆಯನ್ನು ತಿರಸ್ಕರಿಸುತ್ತದೆ. ನಿರಾಕರಣೆಯ ಮತ್ತೊಂದು ಮುಖ–ಅದು ಇಟ್ಟುಕೊಳ್ಳುವ ಸಾಮಾಜಿಕ ಕಾಳಜಿ. ಇಲ್ಲಿ ಎರಡು ಅಂಶಗಳ ಕುರಿತು ಗಮನಹರಿಸಬೇಕು. ಭಕ್ತಿಯಲ್ಲಿ ಒಪ್ಪಿಕೊಳ್ಳುವಿಕೆಯಿರುತ್ತದೆ. ಭಕ್ತಿಯ ತಾತ್ವಿಕತೆಯು ಇರುವುದೇ ದಾಸ್ಯತ್ವವನ್ನು ಒಪ್ಪಿಕೊಳ್ಳುವುದರಲ್ಲಿ. ಆದುದರಿಂದ ಇದರಲ್ಲಿ ಜಮಿನುದಾರಿ ಪದ್ಧತಿಯ ಮೌಲ್ಯಗಳಿರುತ್ತವೆ. ಆರಾಧಿಸುವುದು; ಶರಣಾಗುವುದು ಭಕ್ತಿಯ ಗುಣ ಆದರೆ ನಿರಾಕರಣೆಯು ಹಾಗಲ್ಲ. ಅದು ತಿರಸ್ಕಾರದ ಮೇಲೆ ನಂಬಿಕೆಯಿರಿಸಿಕೊಂಡಿದೆ. ಒಪ್ಪಿಕೊಳ್ಳುವುದು ನಿರಾಕರಣೆ ಗುಣವಲ್ಲ. ಭಕ್ತಿಯು ತಾನು ಯಾವುದನ್ನು ಆರಾಧಿಸುತ್ತದೋ ಅದನ್ನು ಶ್ರೇಷ್ಠವೆಂದು ಪರಿಭಾವಿಸುತ್ತದೆ. ಭಕ್ತಿಯು ತಾನು ಯಾವುದನ್ನು ನಂಬಿಕೊಂಡಿರುತ್ತದೆಯೋ ಅದನ್ನು ಬದ್ಧತೆಯಿಂದ ಒಪ್ಪಿಕೊಳ್ಳುತ್ತದೆ.

ಅಧಿಕಾರದಲ್ಲಿರುವವರನ್ನು ಬಂಡವಾಳಶಾಹಿಗಳು ನಿರಾಕರಿಸುವುದಿಲ್ಲ. ಆದರೆ ಕೆಳಜಾತಿಯ ಮತ್ತು ಕೆಳವರ್ಗದ ಸಂಸ್ಕೃತಿಯು ನಿರಾಕರಣೆಯನ್ನು ಒಂದು ಆಯುಧವೆಂದೇ ಪರಿಗಣಿಸುತ್ತದೆ. ಕರ ನಿರಾಕರಣೆಯ ಚಳುವಳಿಯನ್ನು ಇಲ್ಲಿ ನೆನಪಿಸಿಕೊಳ್ಳಬಹುದು.

೧೯೩೧ರಲ್ಲಿ ಗಾಂಧೀಜಿ ಕರನಿರಾಕರಣ ಚಳುವಳಿ ಆರಂಭಿಸಿದಾಗ ಸತ್ಯಾಗ್ರಹಿಗಳಿಗಾಗಿ ೧೨ ನಿಯಮಗಳನ್ನು ವಿಧಿಸಲಾಯಿತು. ಅವು ಹೀಗಿವೆ:

೧) **ಅಹಿಂಸೆಯ ಮಹತ್ವವನ್ನು ಪೂರ್ಣವಾಗಿ ಮನಗಾಣದ ಹಳ್ಳಿ, ಪಟ್ಟಣ, ಜಿಲ್ಲೆ, ಪ್ರದೇಶಗಳಲ್ಲಿ ಅಸಹಕಾರ ಚಳುವಳಿಯನ್ನು ಆರಂಭಿಸಬಾರದು.**

೨) **ನಮ್ಮ ಚಿಂತನೆ ಮತ್ತು ಕೃತಿಗಳಲ್ಲಿ ಅಹಿಂಸೆ ಧ್ವನಿತವಾಗಬೇಕು. ಸತ್ಯಾಗ್ರಹವು ಎದುರಾಳಿಯ ಹೃದಯ ಪರಿವರ್ತನೆಯ ಗುರಿ ಹೊಂದಿರಬೇಕೇ ಹೊರತು ಅವರಿಗೆ ಶಿಕ್ಷೆ ವಿಧಿಸುವ ಅಥವಾ ಹಿಂಸೆ ಉಂಟು ಮಾಡುವ ಉದ್ದೇಶದಿಂದ ಪ್ರೇರಿತವಾಗಬಾರದು.**

೩) **ಸಾಮಾಜಿಕ ಬಹಿಷ್ಕಾರವನ್ನು ಕಟ್ಟುನಿಟ್ಟಾಗಿ ನಿಷೇಧಿಸಬೇಕು.**

೪) **ಸತ್ಯಾಗ್ರಹಿಗಳು ವೇತನ ಪಡೆಯಲಾಗದು. ಅವರಿಗೆ ಊಟ, ವಸತಿ**

ಮುಂತಾದ ಕನಿಷ್ಠ ಆವಶ್ಯಕತೆಗಳನ್ನು ಮಾತ್ರ ಒದಗಿಸಬಹುದು. ಬಂಧಿತರಾದ ಅಥವಾ ನಿಧನರಾದ ಸತ್ಯಾಗ್ರಹಿಗಳ ಕುಟುಂಬಗಳಿಗೆ ಮಾತ್ರ ಸಾಧ್ಯವಾದಷ್ಟು ನೆರವು ನೀಡಬಹುದು.

೫) ಬ್ರಿಟನ್ನಿನ ಮತ್ತು ಇತರ ವಿದೇಶಗಳ ಸರಕುಗಳನ್ನು ಬಹಿಷ್ಕರಿಸುವ ಕಾರ್ಯಕ್ರಮಗಳನ್ನು ಬಲಗೊಳಿಸಬೇಕು.

೬) ಎಲ್ಲ ಸತ್ಯಾಗ್ರಹಿಗಳೂ ಖಾದಿಯನ್ನೇ ತೊಡಬೇಕು, ಭಾರತೀಯ ಗಿರಣಿಗಳ ಬಟ್ಟೆ ತೊಡುವುದನ್ನೂ ಬಿಡಬೇಕು.

೭) ವಿದೇಶಿ ಬಟ್ಟೆ ಅಂಗಡಿಗಳು, ಹೆಂಡದಂಗಡಿಗಳು ಇವುಗಳ ಮುಂದೆ ಹರತಾಳವನ್ನು ವಿಶೇಷವಾಗಿ ಮಹಿಳೆಯರು ನಡೆಸಬೇಕು.

೮) ಉಪ್ಪಿನ ಕಾನೂನು ಉಲ್ಲಂಘನೆಯನ್ನು ಮತ್ತೆ ಆರಂಭಿಸಬೇಕು

೯) ಲಾಠಿ ಏಟು, ಗುಂಡೇಟುಗಳಿಗೆ ಅಂಜದವರು ಹಾಗೂ ಅಂತಹ ಸಂದರ್ಭಗಳಲ್ಲಿ ತಮ್ಮ ಸ್ಥಾನಗಳಿಂದ ಅಲುಗಾಡದೇ ನಿಲ್ಲಬಲ್ಲವರು ಮಾತ್ರ ಸತ್ಯಾಗ್ರಹದ ಮೆರವಣಿಗೆಗಳಲ್ಲಿ ಪಾಲ್ಗೊಳ್ಳಬಹುದು.

೧೦) ಬ್ರಿಟಿಷರ ಸರಕುಗಳ, ಬ್ರಿಟಿಷ್ ಸಂಸ್ಥೆಗಳ ಬಹಿಷ್ಕಾರಗಳು ಸಂಪೂರ್ಣವಾಗಿ ಅಹಿಂಸಾತ್ಮಕ ನಿಯಮಗಳಿಗೆ ಬದ್ಧವಾಗಿರಬೇಕು.

೧೧) ಭಾರತದ ಹಿತಕ್ಕೆ ಧಕ್ಕೆ ಆಗುವ ಕಾನೂನುಗಳನ್ನೂ ಶಾಸನಗಳನ್ನೂ ಸಾಧ್ಯವಾದಾಗಲೆಲ್ಲ ಶಾಂತಿಯುತವಾಗಿ ಧಿಕ್ಕರಿಸಬೇಕು.

೧೨) ಅಕ್ರಮವಾದ ವಿಶೇಷಾಜ್ಞೆಗಳ ಮೂಲಕ ನೀಡಿದ ಆದೇಶಗಳ ಬಗೆಗೆ ಅವಿಧೇಯತೆ ಪ್ರದರ್ಶಿಸಬೇಕು.

ಅಂದರೆ, ಕರನಿರಾಕರಣೆ ಚಳುವಳಿಗೆ ಅತ್ಯುನ್ನತ ತ್ಯಾಗದ ಆವಶ್ಯಕತೆ ಇದೆ; ಆದ್ದರಿಂದ ಚಳುವಳಿ

ಆರಂಭಿಸಲು ಅತಿ ಹೆಚ್ಚಿನ ಧೈರ್ಯವಿರಬೇಕಾಗುತ್ತದೆ. ಅಹಿಂಸೆಯ ಮಹಾತತ್ವಗಳನ್ನು ಅರಗಿಸಿಕೊಳ್ಳದ ಯಾವುದೇ ಹಳ್ಳಿ ಅಥವಾ ಭಾಗಗಳಲ್ಲಿ ಚಳುವಳಿ ಆರಂಭಿಸಲೇಬಾರದು. ಆದ್ದರಿಂದ ಕಾಯಾ – ವಾಚಾ – ಮನಸಾ ಅಹಿಂಸೆಯ ಪಾಲನೆ ಅತ್ಯಗತ್ಯ, ಹಿಂಸಾತ್ಮಕ ಪ್ರತಿಭಟನೆ ಎಲ್ಲಿಯೂ ಯಾವ ಕಾರಣಕ್ಕೂ ನಡೆಯಲೇ ಕೂಡದು. ಚಳುವಳಿಯ ಧಮನಕ್ಕೆ ಯತ್ನಿಸುವ ಸರಕಾರಿ ಅಧಿಕಾರಿಗಳಾಗಿರಲಿ, ಅದಕ್ಕೆ ಸಹಕರಿಸುವ ಸಾಧಾರಣ ಜನತೆ ಆಗಿರಲಿ ಅವರ ವಿರುದ್ಧ ಸಾಮಾಜಿಕ ಬಹಿಷ್ಕಾರ ಘೋಷಿಸಬಾರದು. ಹಾಗೆ ಮಾಡಿದರೆ ಎದುರಾಳಿಯನ್ನು ಹಿಂಸೆಗೆ ಗುರಿಮಾಡಿದಂತೆ ಆಗುತ್ತದೆ ಎಂಬುದನ್ನು ಸದಾ ನೆನಪಿನಲ್ಲಿಡತಕ್ಕದ್ದು.

ಮೇಲಿನ ಗಾಂಧೀಜಿ ಅವರ ವಿಚಾರಗಳಿಂದ ಅವರು ಸ್ವಾತಂತ್ರ್ಯ ಚಳುವಳಿಗೆ ಬಳಸಿದ ಸತ್ಯಾಗ್ರಹ ಅಸ್ತ್ರದಲ್ಲಿ ಅಹಿಂಸೆಗೆ

ಕೊಟ್ಟಿದ್ದ ಮಹತ್ವದ ಸ್ಥಾನ ಎಂತಹುದು ಎಂಬುದು ಅರಿವಾಗುತ್ತದೆ.
(ಗಾಂಧೀಜಿ ಮತ್ತು ಅಹಿಂಸೆ–ಪುಟ. ೮)

ನಿರಾಕರಣೆಯು ಋಣಾತ್ಮಕ ಅರ್ಥವನ್ನೂ ಒಳಗೊಂಡಿದೆ. ಹಾಗೆಯೇ ಅದು ಅನೇಕ ರೀತಿಯ ವೈರುದ್ಧ್ಯಗಳನ್ನು ಕೂಡಾ ಹೊಂದಿರುತ್ತದೆ.

ದಮನಿತ ವರ್ಗಗಳು ಅರಿವನ್ನು ಪಡೆದುಕೊಂಡಾಗ ನಿರಾಕರಣೆಯ ಪ್ರಶ್ನೆಯು ಉದ್ಭವಿಸುತ್ತದೆ. ಇದನ್ನು "ಋಣಾತ್ಮಕ ವರ್ಗ ಪ್ರಜ್ಞೆ"ಯೆಂದೂ ಕರೆಯಬಹುದು.

ಸತ್ಯಾಗ್ರಹವನ್ನು ಅದರ ತುಟ್ಟತುದಿಗೆ ಒಯ್ದಾಗ, ಅದು ಹಣಕಾಸಿನ ಇಲ್ಲವೇ ಇತರ ವಸ್ತು ಸಹಾಯದಿಂದ ಮುಕ್ತವಾಗಿರುತ್ತದೆ. ಮತ್ತು ದೇಹಬಲ ಅಥವಾ ಹಿಂಸೆಯಿಂದಂತೂ, ಅದರ ವಾಸನೆಯಿಂದಲೂ ದೂರವಾದುದು. ವಾಸ್ತವವಾಗಿ ಹಿಂಸೆ ಈ ಮಹಾನ್ ಆಧ್ಯಾತ್ಮಿಕ ಶಕ್ತಿಯ ನಿರಾಕರಣೆ. ಹಿಂಸೆಯನ್ನು ಸಂಪೂರ್ಣವಾಗಿ ತ್ಯಜಿಸಿದವರೇ ಈ ಶಕ್ತಿಯನ್ನು ಬೆಳೆಸಿಕೊಳ್ಳಬಲ್ಲವರು ಅಥವಾ ಬಳಸಬಲ್ಲವರು. ಇದು ವ್ಯಕ್ತಿಗಳು, ಸಮುದಾಯಗಳು ಎಲ್ಲರೂ ಬಳಸುವಂಥದು. ಇದನ್ನು ಗೃಹಕೃತ್ಯದಲ್ಲಿನಂತೆಯೆ ರಾಜಕೀಯದಲ್ಲೂ ಬಳಸಬಹುದು. ಇದನ್ನು ವಿಶ್ವವ್ಯಾಪಿಯಾಗಿ ಬಳಸುವ ಸಾಧ್ಯತೆಯೆ ಇದರ ಶಾಶ್ವತತೆಯನ್ನೂ, ಅಜೇಯತೆಯನ್ನೂ ತೋರಿಸುತ್ತದೆ. ಇದನ್ನು ಗಂಡಸು, ಹೆಂಗಸು, ಮಕ್ಕಳು ಎಲ್ಲರೂ ಬಳಸಬಹುದು. ಹಿಂಸೆಗೆ ಪ್ರತಿಯಾಗಿ ಹಿಂಸೆ ಮಾಡಲು ಸಾಧ್ಯವಿಲ್ಲದ ದುರ್ಬಲರು ಮಾತ್ರ ಬಳಸುವಂಥ ಶಕ್ತಿ ಇದು ಎನ್ನುವುದು ಪೂರಾ ಅಸತ್ಯ. ಈ ಮೌಢ್ಯ ಹುಟ್ಟಿರುವುದು 'ಸಾತ್ವಿಕ ಪ್ರತಿರೋಧ' ಎಂಬ ಇಂಗ್ಲಿಷ್ ಶಬ್ದದ ಅಪೂರ್ಣತೆಯಿಂದಾಗಿ. ತಾವು ದುರ್ಬಲರು ಎಂದು ಭಾವಿಸುವವರು ಈ ಶಕ್ತಿಯನ್ನು ಪ್ರಯೋಗಿಸುವುದು ಅಸಾಧ್ಯ. ಮನುಷ್ಯನಲ್ಲಿ ಪಾಶವೀ ಪ್ರಕೃತಿಗಿಂತ ಶ್ರೇಷ್ಠವಾದುದು ಏನೊ ಇದೆ, ಹಾಗೂ ಪಶುಬಲ ಅದಕ್ಕೆ ಎಂದೆಂದೂ ತಲೆಬಾಗುತ್ತದೆ ಎಂದು ಯಾರು ಅರಿತುಕೊಳ್ಳುವರೊ, ಅವರು ಮಾತ್ರ ಪರಿಣಾಮಕಾರಿ ಸತ್ಯಾಗ್ರಹಿ ಆಗಬಲ್ಲರು. ಕತ್ತಲೆಗೆ ಬೆಳಕು ಹೇಗೋ ಹಾಗೆ, ಎಲ್ಲ ಕ್ರೌರ್ಯಕ್ಕೆ, ಎಲ್ಲ ಅನ್ಯಾಯಕ್ಕೆ ಈ ಶಕ್ತಿ. ರಾಜಕೀಯದಲ್ಲಿ, ಜನತೆ ತಿಳಿದೊ ತಿಳಿಯದೆಯೊ, ತಮ್ಮನ್ನು ಆಳಿಸಿಕೊಳ್ಳಲು ಒಪ್ಪುವವರೆಗೆ ಮಾತ್ರ ಅವರನ್ನು ಸರ್ಕಾರ ಆಳಬಲ್ಲದು ಎಂಬ ಶಾಶ್ವತ ಸೂತ್ರವೇ ಈ ಶಕ್ತಿಗೆ ಆಧಾರ. ಟ್ರಾನ್ಸ್‌ವಾಲ್‌ನ ೧೯೦೭ರ ಏಷಿಯಾಟಿಕ್ ಕಾನೂನಿಗೆ ಒಳಪಡಲು ನಾವು ಇಚ್ಛಿಸಲಿಲ್ಲ. ಅದು ಈ ಮಹಾನ್

ಶಕ್ತಿಯ ಎದುರು ನಿಲ್ಲದೆ ಹೋಗಬೇಕಾಯಿತು. ನಮಗೆ ಎರಡು ದಾರಿ ತೆರೆದಿದ್ದವು. ಕಾನೂನಿಗೆ ತಲೆಬಾಗಲು ನಮಗೆ ಹೇಳಿದಾಗ ಹಿಂಸೆಯನ್ನು ಬಳಸುವುದು ಇಲ್ಲವೇ ಕಾನೂನಿನಲ್ಲಿ ಗೊತ್ತು ಮಾಡಿದ್ದ ಶಿಕ್ಷೆಗಳನ್ನು ಅನುಭವಿಸುವುದು, ಹಾಗೂ ತನ್ಮೂಲಕ, ಆಳುವವರ ಅಥವಾ ಶಾಸನ ನಿರ್ಮಾಪಕರ ಸಹಾನುಭೂತಿಯ ತಂತಿ ಮೀಟಲು ಮನವಿ ಮಾಡುವುದಕ್ಕೆ ಬೇಕಾದ ಕಾಲದವರೆಗೂ, ನಮ್ಮಲ್ಲಿನ ಆತ್ಮಶಕ್ತಿಯನ್ನು ಹೊರತೆಗೆದು ಪ್ರದರ್ಶಿಸುವುದು. ಯಾವುದನ್ನು ಸಾಧಿಸಲು ಹೊರಟೆವೊ ಅದನ್ನು ಪಡೆಯಲು ದೀರ್ಘಕಾಲ ತೆಗೆದುಕೊಂಡಿದ್ದೇವೆ. ಅದಕ್ಕೆ ಕಾರಣ, ನಮ್ಮ ಸತ್ಯಾಗ್ರಹ ಅತ್ಯಂತ ಪರಿಪೂರ್ಣ ರೀತಿಯದಾಗಿರಲಿಲ್ಲ. ಎಲ್ಲ ಸತ್ಯಾಗ್ರಹಿಗಳೂ ಈ ಶಕ್ತಿಯ ಬೆಲೆಯನ್ನು ಅರಿಯರು. ದೃಢ ಚಿತ್ತದಿಂದ ಯಾವಾಗಲೂ ಹಿಂಸೆಯಿಂದ ದೂರ ಇರುವ ಜನವೂ ನಮ್ಮಲ್ಲಿಲ್ಲ. ಈ ಶಕ್ತಿಯ ಬಳಕೆಗೆ ಬಡತನವನ್ನು ಸ್ವೀಕರಿಸಬೇಕಾಗುತ್ತದೆ. ಅಂದರೆ ನಮ್ಮ ಅನ್ನ ಬಟ್ಟೆಯ ಚಿಂತೆಯ ಬಗ್ಗೆ ಲಕ್ಷ್ಯವಹಿಸಬಾರದು. (ಸತ್ಯ ವಾಣಿ ಪುಟ. ೧೩೧)

ವಸಾಹತುಕಾಲದಲ್ಲಿ ಜರುಗಿದ ಕರನಿರಾಕರಣೆಯು ಸಾಮಾನ್ಯವಾದ ಅರ್ಥವಂತಿಕೆಯನ್ನು ಒಳಗೊಂಡಿರಲಿಲ್ಲ. ನಿರಾಕರಣೆಯು ಸಾಮಾಜಿಕ; ಆರ್ಥಿಕ; ಸಾಂಸ್ಕೃತಿಕ ಅರ್ಥವಂತಿಕೆಯನ್ನು ಹೊಂದಿದೆ.

ಗಾಂಧಿಯ ಪ್ರಕಾರ ಅದು ಸಾತ್ವಿಕ ಪ್ರತಿರೋಧವೇ ಶಕ್ತಿಯೇ ಮುಖ್ಯ.
ಸಾತ್ವಿಕ ಪ್ರತಿಭಟನೆ ಎಂಬ ಶಬ್ದವನ್ನು ಸಾಂಪ್ರದಾಯಿಕ
ಆಂಗ್ಲ ರೀತಿಯಲ್ಲಿ ಉಪಯೋಗಿಸಿದೆ.ಅದು ತಮ್ಮ ಮತಾಧಿಕಾರವನ್ನು ಹೆಚ್ಚಿಸಬೇಕೆಂಬ ಸ್ತ್ರೀಯರ ಸಾಮೂಹಿಕ ಚಳುವಳಿಯನ್ನೂ "ನಾನ್ ಕನಫರ್ಮಿಸ್ಟ್" ಎಂಬ ಪ್ರಾಟೆಸ್ಟಂಟ್ ಕ್ರೈಸ್ತರ ಪ್ರತಿಭಟನೆಯನ್ನೂ ಸೂಚಿಸುತ್ತದೆ.ಸಾತ್ವಿಕ ಪ್ರತಿಭಟನೆಯು ದುರ್ಬಲತೆಯಿಂದ ಹುಟ್ಟಿ ದುರ್ಬಲರ ಆಯುಧವೆಂದೇ ಪರಿಗಣಿತವಾಗಿದೆ.ದುರ್ಬಲರಿಗೆ ಆಯುಧವು ದೊರಕಿದಿರುವುದರಿಂದಅದು ಹಿಂಸೆಯನ್ನು ವರ್ಜಿಸುತ್ತದೆ.ಅವಕಾಶ ಬಂದಾಗ ಅದನ್ನು ಉಪಯೋಗಿಸಲು ಹಿಂದೆ ತೆಗೆಯುವುದಿಲ್ಲ. ಸಶಸ್ತ್ರ ಪ್ರತಿಭಟನೆಗೂ ಇದಕ್ಕೂ ವ್ಯತ್ಯಾಸವಿದೆ. ಇದರ ಪ್ರಯೋಗ ಒಮ್ಮೆ ಕ್ರೈಸ್ತ ಹುತಾತ್ಮರಿಗೆ ಪರಿಮಿತವಾಗಿತ್ತು. – ಗಾಂಧಿ

ಅದು ಕೇವಲ ಪ್ರಭುತ್ವ ವಿರೋಧಿ ಚಟುವಟಿಕೆಯೆಂದು ನಾವು ಭಾವಿಸಬೇಕಾಗಿಲ್ಲ. ಅದರಲ್ಲಿ ಸಣ್ಣ ಹಿಡುವಳಿದಾರರ ಸಮಸ್ಯೆಯೂ ಸೇರಿಕೊಂಡಿವೆ. ಈ ದೃಷ್ಟಿಯಿಂದ ಕರನಿರಾಕರಣೆ ಚಳುವಳಿಯು ಪ್ರತಿಭಟನೆಯ ಒಂದು ರೂಪ ಆದರೆ ಅದು ಶಸ್ತ್ರವಿಹೀನವಾದುದು. ಭಾರತೀಯ ಕರನಿರಾಕರಣೆ ಚಳುವಳಿಯು ಎರಡು ತತ್ವಗಳನ್ನು ಒಳಗೊಂಡಿದೆ:

೧. ಬ್ರಿಟೀಶ್ ಅಧಿಕಾರದ ತಾರತಮ್ಯ ನೀತಿಯ ವಿರೋಧ.

೨. ಶತ್ರು ಗುರುತಿಸುವುದು ಮತ್ತು ಮಿತ್ರರನ್ನು ವ್ಯಾಖ್ಯಾನಿಸುವುದು.

ರಾಷ್ಟ್ರೀಯ ಆಂದೋಲನದಲ್ಲಿ ನಿರಕರಣೆಯು ಒಂದು ರಾಜಕೀಯ ದೃಷ್ಟಿಕೋನ ಮತ್ತು ಬಿಡುಗಡೆಯ ಪ್ರತಿವ್ಯೂಹ ಕೂಡಾ ಹೌದು. ನಿರಾಕರಣೆಯಲ್ಲಿ ತಮ್ಮ ತನದ ಒಳ್ಳೆಯ ಅಂಶಗಳು ಪರಕೀಯ ಪ್ರಭುತ್ವದ ನಿರಾಕರಣೆಗೆ ಕಾರಣವಾಗುತ್ತದೆಯೆಂದು ಭಾವಿಸಲಾಯಿತು.ಆಗಿನ ಕರ್ನಾಟಕದಲ್ಲಿಯೂ ಕರನಿರಾಕರಣೆ ಚಳುವಳಿ ನಡೆಯಿತು.

> "೧೯೩೦ರ ಪರದೇಶಿ ವಸ್ತ್ರದಹನ,ಹೆಂಡದಂಗಡಿಗಳ ಪಿಕೆಟಿಂಗ್, ಅರಣ್ಯ ಸತ್ಯಾಗ್ರಹ. ಕರನಿರಾಕಣೆ ಚಳುವಳಿಗಳಲ್ಲಿ ಕರ್ನಾಟಕವು ಪ್ರಮುಖ ಪಾತ್ರವನ್ನು ವಹಿಸಿತು. ಉತ್ತರ ಕನ್ನಡ ಜಿಲ್ಲೆಯ ಸಿರಸಿ, ಸಿದ್ದಾಪುರದಲ್ಲಿ ಚಿರಸ್ಮರಣೀಯವಾದ ರೀತಿಯಲ್ಲಿ ಈ ಕಾರ್ಯಕ್ರಮವು ಯಶಸ್ವಿಯಾಯಿತು.ಕೆ.ಟಿ.ಭಾಷ್ಯಂ ಮತ್ತು ಟಿ.ಸುಬ್ರಹ್ಮಣ್ಯಂ ಇದರ ನೇತೃತ್ವವನ್ನು ವಹಿಸಿದ್ದರು. ಇವರುಗಳು ತಮ್ಮದೇ ಆದ ಒಂದೊಂದು ಕೇಂದ್ರದಿಂದ ಕಾರ್ಯಚರಣೆಯನ್ನು ನಡೆಸಲು ನಿರ್ಧರಿಸಲಾಯಿತು."
>
> (ಎಚ್.ದೊರೆಸ್ವಾಮಿ ಹೋರಾಟದ ದಿಟ್ಟ ಹೆಜ್ಜೆಗಳು ಪು. ೬)

ಅಧಿಕಾರದ ಸಂಬಂಧಗಳು ವಾಸ್ತವವಾಗಿ ಬೇರೆ ಬೇರೆ ರೀತಿಯಲ್ಲಿವೆ. ಗಂಡ–ಹೆಂಡತಿ; ಗುರು–ಶಿಷ್ಯ; ದೇವರು–ಮನುಷ್ಯ; ರಾಜ–ಪ್ರಜೆ; ಜಮಿನುದಾರ–ಸೇವಕ ಹೀಗೆ.

ಗ್ರಾಮ್ಷಿ ಒಂದು ಸಂದರ್ಭದಲ್ಲಿ ಹೇಳಿರುವ ಮಾತು ಉಲ್ಲೇಖನೀಯ: ಮನುಷ್ಯರ ವೇಷಭೂಷಣವೇ ಪರಸ್ಪರ ಭಿನ್ನತೆಗೆ ಕಾರಣವಾಗುತ್ತದೆ. .ಮುಂಡಾಸು; ಕಿರೀಟ; ಕಾರ್ಮಿಕರಿಗೆಲ್ಲ ಸ್ಥಳೀಯ ಜಮಿನುದಾರರು ದಂಡದ ಪರಿಭಾಷೆಯನ್ನು ಬಳಸಿಕೊಂಡರು. ಕೈಗಾರೀಕರಣದ ಪೂರ್ವದಲ್ಲಿ ಸ್ಥಳೀಯ ಏಕಾಂತವಾದಿಗಳಿಗೆ ಅಧಿಕಾರಗಳಿದ್ದವು. ಆದರೆ ಕೈಗಾರೀಕರಣದ ಅನಂತರ ಬಂಡವಾಳಶಾಹಿಗಳಿಗೆ ಅಧಿಕಾರಗಳು ಬಂದವು. ಆದುದರಿಂದ ನಿರಾಕರಣೆಗೆ ಬೇರೆ ಬೇರೆ ಮುಖಗಳಿವೆ.ಗಾಂಧಿಯವರು ಇದನ್ನು ಬಹಿಷ್ಕಾರವೆಂದು ಕರೆದರು.

> 'ಕರನಿರಾಕರಣ ಚಳುವಳಿ' ಸ್ವಾತಂತ್ರ್ಯ ಸಂಗ್ರಾಮದ ಚರಿತ್ರೆಯಲ್ಲಿ ವಿಶಿಷ್ಟ ಸ್ಥಾನ ಪಡೆದಿದೆ. ಅದರಲ್ಲಿಯೂ ಉತ್ತರ ಕನ್ನಡ ಜಿಲ್ಲೆಯ ಅಂಕೋಲಾ ತಾಲೂಕಿನಲ್ಲಿ ಮಾತ್ರ ಕರಬಂಧಿಗೆ ಕಾರಣರೂ ಮುಖ್ಯ ಪ್ರಾಣರೂ ನಾಡವರೇ ಆಗಿರುವರು. "ಉಪ್ಪಿನ ಸತ್ಯಾಗ್ರಹದಲ್ಲಿ ಅಸಾಧಾರಣ ಯಶಸ್ಸು ಪಡೆದ ಅಂಕೋಲೆ ತಾಲೂಕಿನಲ್ಲಿ ಆದ ಜನಜಾಗೃತಿ, ಅಲ್ಲಿಯ ಶೂರ ನಾಡವರ ಒಕ್ಕಟ್ಟು, ಇವುಗಳಿಂದ ಕರ ನಿರಾಕರಣೆಯ ಸತ್ಯಾಗ್ರಹ ಕೈಕೊಳ್ಳಲು ಅಂಕೋಲೆಯ ಜನರೇ ಸಮರ್ಥರೆಂಬ ಸಾಮಾನ್ಯ ಭಾವನೆ ಹುಟ್ಟಿತು.

ಸ್ವಂತ ಜಮೀನು ಇರುವವರು ಮಾತ್ರ ಈ ಚಳುವಳಿಯಲ್ಲಿ ಭಾಗವಹಿಸಬಹುದಿತ್ತು. ಆ ಕಾಲದಲ್ಲಿ ಹಳ್ಳಿಗಳಲ್ಲಿ ನಾಡವರಿಗೆ ಮಾತ್ರ ಸ್ವಂತ ಜಮೀನಿತ್ತು. ನಾಡವರ ಹಳ್ಳಿಗಳನ್ನು ಸುತ್ತುವರಿದ ಹಾಲಕ್ಕಿ ಗೌಡರಿಗೆ, ಉಳುವರೆ ರಾಮದಾಸ ಗೌಡರ ಕುಟುಂಬವನ್ನು ಹೊರತುಪಡಿಸಿ, ಹೆಚ್ಚಿನವರಿಗೆ ಸ್ವಂತ ಜಮೀನು ಇರಲಿಲ್ಲ.

ಕರನಿರಾಕರಣೆಯ ಆಂದೋಲನದ ಸಂಘಟನೆಗೆ ಸಮಯ ತೀರ ಕಡಿಮೆಯಿತ್ತು. ಜನವರಿ 15ಕ್ಕೆ ಅಂಕೋಲೆ ತಾಲೂಕಿನಲ್ಲಿ ಮೊದಲನೆ ಹಪ್ತೆ ತೀರ್ವೆ ವಸೂಲಿ ಆರಂಭವಾಗುವುದಿತ್ತು. "ಸಂಘಟನೆಗೆ ಸಮಯಯನುಕೂಲವಿರಲಿಲ್ಲವೆಂವುದೇನೋ ನಿಜ. ಆದರೆ ಅಂಕೋಲೆಯ ನಾಡವರ ಮುಖಂಡರು ಅಲ್ಪ ಅವಧಿಯಲ್ಲಿಯೇ ಕರ ನಿರಾಕರಣೆಯ ಆಂದೋಲನ ಹೂಡಲು ಸಿದ್ಧರಾದರು. ಅದಕ್ಕಾಗಿ ಸಂಘಟನೆ ಮಾಡಿಕೊಳ್ಳಲು ಅವರು ಆಣೆ ಮಾಡಿದರು."

"ಯಾರು ಮಾಡಲಿ ಬಿಡಲಿ; ನಾನು ಮಾತ್ರ ಆ ಮಹಾತ್ಮರನ್ನು ಸ್ಮರಿಸಿ ಕರನಿರಾಕರಣೆ ಮಾಡಿಯೇ ತೀರುವೆನು"! ಎಂದು ಮಹಾತ್ಮರ ಬಗ್ಗೆ ಉಕ್ಕಿ ಬರುವ ಭಕ್ತಿಯಿಂದ ಧೀರ ಪ್ರತಿಜ್ಞೆಯನ್ನು ಮೊದಲು ಗೈದ ಕೀರ್ತಿ ಅಂಕೋಲಾ ತಾಲೂಕಿನ ಸೂರ್ವೆಯ ಬೊಮ್ಮಯ್ಯ ಪೊಕ್ಕ ನಾಯಕರಿಗೆ ಸಲ್ಲುತ್ತದೆ.

ಅಂಕೋಲಾ ತಾಲೂಕಿನಲ್ಲಿ ಕರನಿರಾಕರಣೆ ಚಳುವಳಿಯ ಮೊದಲ ಸಭೆ ಸೂರ್ವೆಯ ಕಲಶ ದೇವಸ್ಥಾನದಲ್ಲಿ ಕೂಡಿತ್ತು. ನಾಡವರ ಹಳ್ಳಿಗಳಿಂದ ಬಾಸಗೋಡ ರಾಮ ನಾಯಕ, ಬೋಳೆ ಬೊಮ್ಮಯ್ಯ ನಾಯಕ, ದೇವಣ್ಣ ನಾಯಕ, ಕಣಗಿಲ ಹಮ್ಮಣ್ಣ, ಬೊಮ್ಮಣ್ಣ ನಾಯಕ, ಶೆಟಗೇರಿ ಜೋಗಿ ನಾಯಕ ಮೊದಲಾದ ನಾಡವರ ಮುಖಂಡರು ಆಗಮಿಸಿದ್ದರು. ದಿವಾಕರ ಮತ್ತು ಕರಮರಕರರು ಕರಬಂಧಿ ಚಳುವಳಿ ಕುರಿತು ತಿಳಿಸಿ ಹೇಳಿದರು. ಚರ್ಚೆ ನಡೆಯಿತು. ದಿವಾಕರರು ಬಾಡೋಲಿಯ ಕಥೆಯನ್ನು ವಿವರಿಸಿ ಹೇಳಿದರು. ಕರಬಂಧಿಯಂತಹ ಉಗ್ರತರವಾದ ಕಾಯಿದೆಭಂಗ ಮಾಡಬೇಕಾದರೆ ಜನತೆಯು ಚೆನ್ನಾಗಿ ಸಿದ್ಧತೆ ಮಾಡಿಕೊಳ್ಳಬೇಕಾಗುವುದೆಂದೂ ಮಹಾತ್ಮಾಜಿಯವರ ಅಹಿಂಸಾ ತತ್ವವನ್ನು ಪೂರ್ಣವಾಗಿ ಪಾಲಿಸಬೇಕಾಗುವುದೆಂದೂ ತಿಳಿಸಿದರು. ಕೂಡಿದ ಜನರಿಂದ ಅನೇಕ ವಿಚಾರಗಳು ವ್ಯಕ್ತವಾದವು. "ಬಾಸಗೋಡ ರಾಮನಾಯಕರು ಅಳಿವುದು ಕಾಯ, ಉಳಿವುದು ಕೀರ್ತಿ" ಎಂದು ಆವೇಶದಿಂದ ಭಾಷಣ ಮಾಡಿ ಕರ ನಿರಾಕರಣೆಯ ನಿರ್ಣಯ ಸ್ವೀಕರಿಸುವುದು ನಮ್ಮ ಧರ್ಮ" ಎಂದು ಹೇಳಿದರು.

(ಶಾಂತಾರಾಮ ನಾಯಕ, ಹಿಚಕಡ ೨೦೦೯ ಸ್ವಾತಂತ್ರ್ಯ ಹೋರಾಟದ ಹೊರಳು ನೋಟ ಪುಟ.೩೧)

* * *

೩. ಪೂರ್ವ ಮತ್ತು ಪಶ್ಚಿಮ

"ಅಮೇರಿಕದ ವಣಿಜ ವರ್ಗಕ್ಕೆ ನನ್ನ ಸಂದೇಶವಿದು:
ಚರಕ ಸಂದೇಶವನ್ನು ಅರ್ಥ ಮಾಡಿಕೊಳ್ಳಿ.
ಬಹುಶಃ ವಿಶ್ವಶಾಂತಿಗೆ ಪರಿಹಾರ ಮಾರ್ಗ ದೊರಕುತ್ತದೆ.
ಅನೇಕ ಅಮೇರಿಕನ್ನರ ಉತ್ಕಟ ಇಚ್ಛೆ ವಿಶ್ವಶಾಂತಿ ಎಂದು ಬಲ್ಲೆ" –ಗಾಂಧಿ

ವಸಾಹತು ಆಡಳಿತ ಕ್ರಮದಿಂದ ಆಳುವ ವರ್ಗ ಮತ್ತು ಆಳಿಸಿಕೊಳ್ಳುವ ವರ್ಗಗಳ ನಡುವೆ ವಿವಿಧ ರೀತಿಯ ಸಂವಾದಗಳು ರೂಪುಗೊಂಡವು. ಇದನ್ನು ಸಾಂಕೇತಿಕ ಸಂವಾದವೆಂದು ಕರೆಯಬಹುದು. ಕಪ್ಪು ಜನರು–ಬಿಳಿಯರು; ಆಳುವವರು–ಆಳಿಸಿಕೊಳ್ಳುವವರು; ಪಶ್ಚಿಮದವರು–ಭಾರತೀಯರು ಈ ರೀತಿಯ ಧ್ರುವೀಕರಣದ ನೆಲೆಗಳು ನಿಧಾನವಾಗಿ ಮರೆಯಾಗ ತೊಡಗಿದವು. ಒಂದು ಬಗೆಯಲ್ಲಿ ಈ ಪರಿವರ್ತನೆ ತಕ್ಷಣವೇ ಪ್ರಾರಂಭವಾದ ಪ್ರಕ್ರಿಯೆಯಲ್ಲ. ಮತ್ತು ತಕ್ಷಣವೇ ಮರೆಯಾದ ಪ್ರಕ್ರಿಯೆಯೂ ಅಲ್ಲ. ಭಾರತೀಯರು ಮತ್ತು ಯುರೋಪಿಯನ್ನರ ನಡುವೆ ಆಂತರಿಕವಾಗಿ ಹಾಗೂ ಬಹಿರಂಗವಾಗಿ ನಡೆದ ಸಂವಾದಗಳು ಏಕರೂಪಿಯೂ ಆಗಿರಲಿಲ್ಲ. ಇದರ ಪರಿಣಾಮವಾಗಿ ಆಂತರಿಕ ಮತ್ತು ಬಹಿರಂಗದ ಸಂಕರತನವು ಪ್ರಾರಂಭವಾಯಿತು. ಭಾರತೀಯರು ತಮ್ಮ ಸಾಂಸ್ಕೃತಿಕ ಅನನ್ಯತೆಯನ್ನು ಉಳಿಸಿಕೊಳ್ಳಲು ಮಾಡಿದ ಯತ್ನದ ಫಲವೇ ಸಂಕರತನ. ವಸಾಹತುಕಾಲದಲ್ಲಿ ಆಳುವ ವರ್ಗಗಳ ತಾತ್ವಿಕ ನಿಲುವುಗಳು

ಬೇರೆಯಿತು. ಆಳಿಸಿಕೊಂಡ ವರ್ಗಗಳ ತಾತ್ವಿಕ ನಂಬಿಕೆಗಳು ಬೇರೆಯಿದ್ದವು. ಒಂದು ದೃಷ್ಟಿಯಿಂದ ಇವೆರಡೂ ಪ್ರತ್ಯೇಕ ಹಾಗೂ ಭಿನ್ನ ನಿಲುವುಗಳೇ ಆಗಿದ್ದವು. ಒಂದಕ್ಕೊಂದು ಹೋಲಿಕೆಯೇ ಅಸಾಧ್ಯವಾಗಿತ್ತು. ಬ್ರಿಟೀಶ್‌ರದು ಯಜಮಾನಿಕೆಯ ದೃಷ್ಟಿಕೋನ ಅಂದರೆ ಯಾವಾಗ ಯಜಮಾನಿಕೆಯ ದೃಷ್ಟಿಕೋನವಿರುತ್ತದೆಯೋ ಅಲ್ಲಿ ಮೇಲರಿಮೆಯಿರುತ್ತದೆ. ಅದಕ್ಕೆ ತದ್ವಿರುದ್ಧವಾದ ದಿಕ್ಕು ಆಳಿಸಿಕೊಳ್ಳುವ ವರ್ಗದ್ದು: ಅದು ಕೀಳರಿಮೆ. ಮೇಲರಿಮೆ (Superiority complex)ಯು ಸದಾ ತನ್ನ ಅನನ್ಯತೆಯನ್ನು ಶ್ರೇಷ್ಠತೆಯ ಮೂಲಕ ಸಾಧಿಸಲು ಯತ್ನಿಸುತ್ತದೆ. ಕೀಳರಿಮೆಯು ಸದಾ ಸಂಕೋಚ ಸ್ವಯಂ ಹಳ ಹಳಿಕೆಯಿಂದ ಬಳಲುತ್ತದೆ. ಈ ಎರಡು ಧ್ರುವಗಳ ಅಂದರೆ ಯುರೋಪ್ ಕೇಂದ್ರಿತ ಬೌದ್ಧಿಕ ಅಹಂಕಾರ ಮತ್ತು ಭಾರತೀಯತೆಯ (ಪೌರಾತ್ಯ) ಕೀಳರಿಮೆಯ ನಡುವಣ ಸೇತುವೆಯೇ 'ಸಂಕರತೆ'. ಆದರೆ ಭಾರತದಲ್ಲಿ ಉಂಟಾದ ಸಂಕರತೆಯನ್ನು ವಸಾಹತು ಪ್ರಭುತ್ವ ಕಣ್ಣಿಗೆ ಕಾಣಿಸುವಂತೆ ಭಾರತೀಯರ ಮೇಲೆ ಹೇರಿಲ್ಲ. ಆದರೆ ಪರೋಕ್ಷವಾಗಿ ಈ ಕೆಲಸ ನಡೆಯಿತು. ಇದರ ಪರಿಣಾಮವೇ ಸಂಕರ ಮಾದರಿಗಳು. ವಸಾಹತು ಆಡಳಿತಕ್ಕೆ ಒಳಗಾದ ಸಂದರ್ಭದಲ್ಲಿ ಸಾಂಸ್ಕೃತಿಕ ಅನನ್ಯತೆಯ ಪ್ರಶ್ನೆಯು ಮುಖ್ಯವಾಯಿತು. ಗಾಂಧಿಗೆ ಇದರ ಅರಿವು ಇತ್ತು.

> ಭಾರತದ ಮೇಲೆ ಹೊರಿಸಲಾಗುತ್ತಿರುವ ಆಧುನಿಕ ಅಂದರೆ ಪಾಶ್ಚಿಮಾತ್ಯ ಸಂಸ್ಕೃತಿಯಿಂದ ಸಂಭವಿಸಲಿರುವ ವಿನಾಶದಿಂದ ಭಾರತೀಯ ಅಂದರೆ ಪ್ರಾಚೀನ ಸಂಸ್ಕೃತಿಯನ್ನು ಉಳಿಸುವ ಪ್ರಯತ್ನದಲ್ಲಿ ನನ್ನ ಶಕ್ತಿಯನ್ನೆಲ್ಲ ವಿನಿಯೋಗಿಸುವುದೇ ನನ್ನ ಉದ್ದೇಶ. ಸಂಪೂರ್ಣ ಅಹಿಂಸೆಯ ಆಚರಣೆಯೇ ಪ್ರಾಚೀನ ಸಂಸ್ಕೃತಿಯ ಸಾರಕ್ಕೆ ಆಧಾರ. ಪ್ರತಿಯೊಂದು ಜೀವಿಯೂ ಸೇರಿದಂತೆ ಎಲ್ಲರ ಒಳಿತು ಅದರ ಆದರ್ಶ ಸೂತ್ರ. ಪಾಶ್ಚಿಮಾತ್ಯ ಸಂಸ್ಕೃತಿಯಾದರೊ ಸ್ಪಷ್ಟವಾಗಿ ಹಿಂಸೆಯ ಮೇಲೆ ನಿಂತಿದೆ. ಅದು ಎಲ್ಲ ಜೀವರಾಶಿಯನ್ನು ಗೌರವಿಸುವುದಿಲ್ಲ ಮತ್ತು ತನ್ನ ಮುನ್ನಡೆಯಲ್ಲಿ, ಮನುಷ್ಯ ಜೀವನವನ್ನು ಸಾರಾಸಗಟಾಗಿ ನಾಶ ಮಾಡಲೂ ಹಿಂಜರಿದಿಲ್ಲ. ಅದರ ಆದರ್ಶ ಸೂತ್ರ: ಬಲವೇ ಸರಿ. ಮತ್ತು ಮೂಲತಃ ಅದು ವ್ಯಕ್ತಿ ಪ್ರಧಾನವಾದುದು. ಇದರ ಅರ್ಥ ಪಶ್ಚಿಮದಿಂದ ಭಾರತ ಕಲಿಯಬೇಕಾದುದೇನೂ ಇಲ್ಲ ಎಂದಲ್ಲ, ಏಕೆಂದರೆ ಬಲವೇ ಸರಿ ಎಂಬ ಸಿದ್ಧಾಂತವನ್ನು ಪಶ್ಚಿಮ ಒಪ್ಪಿಕೊಂಡಿದ್ದರೂ ಮಾನವೀಯ ಸ್ಪರ್ಶ ಅಲ್ಲಿಂದ ಪೂರಾ

ಮಾಯವಾಗಿಲ್ಲ. ಸುಳ್ಳು ಆದರ್ಶವನ್ನೇ ಸತ್ಯವೆಂದು ಭಾವಿಸಿ ಅದನ್ನೇ ಅವಿರತವಾಗಿ ಬೆನ್ನಟ್ಟಿರುವುದೇ ಆ ಆದರ್ಶ ಸುಳ್ಳು ಎಂಬ ಬಗ್ಗೆ ಪಶ್ಚಿಮದ ಅಸಂಖ್ಯಾತ ಜನರ ಕಣ್ಣು ತೆರೆದಿದೆ.

ಭಾರತ ಪ್ರಶ್ನಿಸದೆ ಪರಂಪರೆಯಲ್ಲೆ ತೃಪ್ತಿಗೊಂಡಿರುವುದಕ್ಕೆ ಬದಲಾಗಿ ಪಶ್ಚಿಮದ ಆ ಸತ್ಯಶೋಧನೆಯ ಭಾವವನ್ನು ಅನುಕರಿಸಬೇಕು ಎಂದು ಬಯಸುತ್ತೇನೆ. ಆದರೆ ಭಾರತ ತನ್ನನ್ನು ತಾನು ಅರಿತುಕೊಂಡು, ತನ್ನ ಸಂಸ್ಕೃತಿಗೆ ವಿಶ್ವದಲ್ಲಿ ಬಹುಮುಖ್ಯ ಸ್ಥಾನವಿದೆ, ಏನೇ ಬೆಲೆ ತೆತ್ತಾದರೂ ಅದನ್ನು ರಕ್ಷಿಸಬೇಕು ಎಂದು ಕಂಡುಕೊಳ್ಳುವ ಮುನ್ನ ಯಾವುದರ ಅನುಕರಣೆಯೂ ಅಪಾಯವೇ. ಬ್ರಿಟಿಷರು ಭಾರತಕ್ಕೆ ಪಾಶ್ಚಿಮಾತ್ಯ ಸಂಸ್ಕೃತಿಯನ್ನು ಆಮದು ಮಾಡಿರುವುದರ ಅರ್ಥ, ಗ್ರೇಟ್ ಬ್ರಿಟನ್‌ಗೆ ಲಾಭವಾಗಲಿ ಎಂದು. ಭಾರತದ ಸಂಪನ್ಮೂಲಗಳನ್ನು ಶೋಷಿಸುವುದೇ ಆಗಿದೆ. ಅದು ಲಕ್ಷಾಂತರ ಜನರನ್ನು ಹಸಿವಿಗೆ ತಳ್ಳಿದೆ. ಇಡೀ ರಾಷ್ಟ್ರದ ಸತ್ವವನ್ನೇ ಹೀರಿ ಹಾಕಿದೆ.

ಮಹಾತ್ಮಗಾಂಧಿ ಕೃತಿ ಸಂಚಯ, ಸಂ. ೨೩, ಪುಟ. ೨೪೩-೪೪, ೧೪-೩-೧೯೨೪ (ಆಯ್ದ ಪತ್ರಗಳು – ಪುಟ. ೨೭೩)

ವಸಾಹತು ಆಡಳಿತದಲ್ಲಿ ಅನೇಕ ರೀತಿಯ ಸಾಮಾಜಿಕ ಪರಿವರ್ತನೆಗಳಾದವು. 'ಸಾಂಸ್ಕೃತಿಕ ಬದಲಾವಣೆಯೇ ವಾಸ್ತವವಾಗಿ ಸಂಕರತನಕ್ಕೆ ಕಾರಣವಾಗಿದೆ. ಎಂದು ಫ್ಯಾನನ್ ಹೇಳುತ್ತಾನೆ. ಇಷ್ಟೇ ಅಲ್ಲ ವಸಾಹತು ಕಾಲದಲ್ಲಿ ಅನುವಾದದ ಪ್ರತಿಕ್ರಿಯೆಯು ನಿರಾಕರಣೆಯು ಸಂಕರತನಕ್ಕೆ ಅವಕಾಶ ಕಲ್ಪಿಸಿತು. ಗಾಂಧಿ ಈ ಕುರಿತು ಸ್ಪಷ್ಟವಾಗಿ ಹೇಳಿದ್ದಾರೆ

"ರಾಷ್ಟ್ರದ ಹೆಸರಿನಲ್ಲಿ ಕೆಲಸ ಮಾಡುವವರು ಸ್ವಾತಂತ್ರ್ಯದ ತೃಷೆಯ
ಹಿಂದಿರುವ ಉದ್ದೇಶವನ್ನು ತಿಳಿದುಕೊಂಡು,
ಅದಕ್ಕೆ ಸಂಬಂಧಿಸಿದ ಎಲ್ಲರ ಮುಂದೆ ಇಡಬೇಕು"

ರಾಷ್ಟ್ರೀಯತೆಯ ಆಂದೋಲನವು ಕೂಡಾ ಸಾಂಸ್ಕೃತಿಕ ಸಂಕರತೆಯನ್ನು ಸೂಚಿಸುತ್ತದೆ. ವಾಸ್ತವವಾಗಿ ಭಾರತದಲ್ಲಿ ರಾಷ್ಟ್ರೀಯತೆ ಎನ್ನುವುದರ ಮತ್ತು ರಾಷ್ಟ್ರೀಯತೆಯ ಸಮಗ್ರತೆಯ ಅರಿವು ಇರಲಿಲ್ಲ. ಸಂಕರತನದ ಜ್ಞಾನದಿಂದಾಗಿ ರಾಷ್ಟ್ರೀಯತೆಯ ಆಂದೋಲನವು ಪ್ರಾರಂಭವಾಯಿತು. ಹಾಗೆಯೇ ರಾಷ್ಟ್ರೀಯತೆಯ ಆಂದೋಲನದಲ್ಲಿ ಭ್ರಮನಿರಸನ ಹೊಂದಿದವರು ಬೇರೆ ಬೇರೆ ರೀತಿಯ ಸಂಘಟನೆಗಳನ್ನು ಕಟ್ಟಲು ಯತ್ನಿಸಿದರು. ಇದರ ಹಿನ್ನೆಲೆಯಲ್ಲಿ ಗಮನಿಸಬೇಕಾದ

ಮತ್ತೊಂದು ಅಂಶವೆಂದರೆ ಪಶ್ಚಿಮದ ಚಿಂತನಾ ಕ್ರಮ ಮತ್ತು ಭಾರತೀಯ ಚಿಂತನೆಯ ಕ್ರಮಗಳನ್ನು ಸ್ಥಳೀಯ ಬುದ್ಧಿಜೀವಿಗಳು ಕಸಿ ಮಾಡಲು ಯತ್ನಿಸಿರುವುದು. ಇದರ ಕುರಿತು ಗಾಂಧಿ ಹೀಗೆ ಹೇಳಿದ್ದಾರೆ.

> "ನಿಮ್ಮ ಘೋಷಣೆಯಲ್ಲಿರುವ 'ಡೊಮಿನಿಯನ್ ಸ್ಟೇಟಸ್' ಪದದ ಅದರ ಸರ್ವಸಮ್ಮತ ಅರ್ಥದಲ್ಲಿ ಬಳಕೆಯಾಗಿದ್ದಲ್ಲಿ ಸ್ವಾತಂತ್ರ್ಯ ನಿರ್ಣಯದಿಂದ ಭಯಪಡಬೇಕಾದ್ದಿಲ್ಲ. ಏಕೆಂದರೆ ಡೊಮಿನಿಯನ್ ಸ್ಟೇಟಸ್ ಎಂದರೆ ವಸ್ತುತಃ ಸ್ವಾತಂತ್ರ್ಯ ಎಂದು ಜವಾಬ್ದಾರಿ ಸ್ಥಾನಗಳಲ್ಲಿರುವ ಬ್ರಿಟಿಷ್ ರಾಜತಾಂತ್ರಿಕರು ಸಹ ಒಪ್ಪಿದ್ದಾರೇಕೆ? ಎಂದು ಆದರೂ ಅಂಥ ಡೊಮಿನಿಯನ್ ಸ್ಟೇಟಸ್ಸನ್ನು ಸಮೀಪ ಭವಿಷ್ಯದಲ್ಲಾದರೂ ಭಾರತಕ್ಕೆ ಕೊಡುವ ಅಭಿಪ್ರಾಯವಿಲ್ಲ ಎಂದು ನನ್ನ ಹೆದರಿಕೆ.
>
> "ಈಗ ಇದು ನಡೆದುಹೋದ ಕಥೆ. ಈ ಘೋಷಣೆಯ ತರುವಾಯ ಸಹ ಬ್ರಿಟಿಷರ ಕಾರ್ಯನೀತಿಯ ಧಾಟಿ ಯಾವುದು ಎಂಬುದನ್ನು ಸ್ಪಷ್ಟವಾಗಿ ತೋರಿಸುವ ಹಲವು ಘಟನೆಗಳು ನಡೆದಿವೆ.
>
> "ಇದು ಹಗಲಿನಷ್ಟು ಸ್ಪಷ್ಟ. ಜವಾಬ್ದಾರಿ ಸ್ಥಾನದಲ್ಲಿರುವ ಬ್ರಿಟಿಷ್ ರಾಜಕಾರಣಿಗಳು ಭಾರತದಲ್ಲಿ ಬ್ರಿಟಿಷ್ ರಾಜಕಾರಣಿಗಳು ಭಾರತದಲ್ಲಿ ಬ್ರಿಟಿಷ್ ವ್ಯಾಪಾರಸಂಬಂಧಗಳಿಗೆ ಧಕ್ಕೆಯಾಗುವಂತಹ ಅಥವಾ ಭಾರತದೊಡನೆ ಬ್ರಿಟಿಷರ ವ್ಯವಹಾರಗಳನ್ನು ನಿಷ್ಪಾಕ್ಷಿಕವಾಗಿ ಪರಿಶೀಲನೆಗೆ ಒಳಪಡಿಸುವಂತಹ ರಾಜನೀತಿಯನ್ನು ರೂಪಿಸಲು ಇಷ್ಟಪಡುವುದಿಲ್ಲ. ಭಾರತದ ಸುಲಿಗೆಯನ್ನು ಕೊನೆಗೊಳಿಸುವಂತಹ ಏನಾದರೂ ಕಾರ್ಯ ರೂಪಿತವಾಗದಿದ್ದರೆ ಭಾರತದ ರಕ್ತ ಇನ್ನಷ್ಟು ಜೋರಾಗಿ ಸುರಿದು ಹೋಗುತ್ತದೆ. ೧/೬ ಪ್ರಮಾಣವನ್ನು ಹಣಕಾಸಿನ ಸಚಿವ ನಿರ್ಧಾರಿತ ಸಂಗತಿಯೆಂದು ಭಾವಿಸಿದ್ದಾನೆ. ಲೇಖನಿಯ ಒಂದೇ ಗೆರೆಯಿಂದ ಭಾರತದಿಂದ ಹಲವು ಕೋಟಿ ಹಣ ಹರಿದುಹೋಗುತ್ತದೆ. ಇದನ್ನು, ಇಂಥ ಇನ್ನು ಕೆಲವನ್ನು ವ್ಯವಸ್ಥೆಗೊಳಿಸಲು ಸಾಧುವಾದ ರೀತಿಯಲ್ಲಿ ನೇರವಾದ ಕ್ರಮವನ್ನು ಕೈಗೊಳ್ಳುತ್ತಿರುವಾಗ ನೀವು ಸಹ ಸುವ್ಯವಸ್ಥೆಯ ಹೆಸರಿನಲ್ಲಿ ಇಂಥ ಯತ್ನಗಳನ್ನು ಬಗ್ಗು ಬಡಿಯಲು ಶ್ರೀಮಂತ ಭೂಮಾಲಿಕರ ಸಹಾಯ ಕೋರದೆ ವಿಧಿಯಿಲ್ಲ. ಇದರಿಂದ ಭಾರತ ನುಚ್ಚು ನೂರು ಆಗುತ್ತದೆ. (ಮಹಾತ್ಮ-೨೨)

ಪಶ್ಚಿಮದ ಆಧುನಿಕತೆ ಮಾಹಿತಿ ತಂತ್ರಜ್ಞಾನ ಭಾಷೆ, ದಿರಿಸುಗಳು ಭಾರತದ ಮೇಲೆ ಪ್ರಭಾವ ಬೀರಿದವು. ಇದರಿಂದಲೂ ಸಂಕರತನವು ಸೃಷ್ಟಿಯಾಯಿತು.

ಬೌದ್ಧಿಕವಾಗಿ ಯಾರು ಈ ರೀತಿಯ ಸಂಕರತನಕ್ಕೆ ಗುರಿಯಾದರೋ ಅವರ ಬೇರು ಅಲುಗಾಡತೊಡಗಿತು. ಈ ರೀತಿಯ ಬುದ್ಧಿಜೀವಿಗಳು ಸಾಂಸ್ಕೃತಿಕ ಭಿನ್ನತೆಯನ್ನು ಸಾಧಿಸಿಕೊಂಡರು. ಯುರೋಪಿಯನ್ ಅಧಿಕಾರಕ್ಕೆ ಅಧಿಕಾರಗಳಿಗೆ ಭಾರತೀಯ ಬುದ್ಧಿಜೀವಿಗಳು ವಾಹಕಗಳಂತೆ ಕೆಲಸ ಮಾಡಿದರು. ಅವರು ಭಾರತೀಯ ಸಂಸ್ಕೃತಿ ಮತ್ತು ಪಶ್ಚಿಮದ ಸಂಸ್ಕೃತಿ, ಇವೆರೆಡರ ಸಂಮಿಶ್ರ ರೂಪವನ್ನು ಹೊಂದಿದ್ದರು. ಒಂದರ್ಥದಲ್ಲಿ ಅವರದು ತ್ರಿಶಂಕುಸ್ಥಿತಿ. ಸಾಂಸ್ಕೃತಿಕವಾಗಿ ಅವರು ಸ್ಥಳೀಯ ಕ್ರಮ ಮತ್ತು ಪಾಶ್ಚಾತ್ಯಕ್ರಮಗಳ ಸಮ ಎರಕ ಹೊಂದಿದ್ದರಿಂದ ಅವರ ಮಾತುಗಳು ಸ್ಥಳೀಯ ಪರಂಪರೆ ಮತ್ತು ವಿದೇಶಿ ಪರಂಪರೆಗಳಿಂತ ಹೊರತಾದ 'ವಿಶಿಷ್ಟತೆ'ಯು ರೂಪುಗೊಳ್ಳಲು ಕಾರಣವಾಯಿತು. ಇದರಿಂದ ಆಳುವ ವರ್ಗ; ಆಳಿಸಿಕೊಳ್ಳುವ ವರ್ಗಗಳ ನಡುವೆ ನಿರ್ವಾತವೇರ್ಪಟ್ಟಿತು. ಇದನ್ನು ನಾವು "ಮೂರನೆಯ ಖಾಲಿ ಜಾಗ" (Third space) ಎಂದೂ ಕರೆಯಬಹುದು. ಆದರೆ ಮೂರನೆಯ ಜಾಗದಲ್ಲಿ ನಿಂತ ಬುದ್ಧಿಜೀವಿಗಳು ಅತ್ತ ಇಂಗ್ಲೀಷಿನವರು ಆಗಿರಲಿಲ್ಲ. ಪೂರ್ತಿಯಾಗಿ ಭಾರತೀಯ ಸಾಮಾನ್ಯ ಮನುಷ್ಯರೂ ಆಗಿರಲಿಲ್ಲ. ಸಾಂಸ್ಕೃತಿಕ ಅಧಿಕಾರವು ಅದರ ಸಾಂಸ್ಥಿಕ ಚಹರೆಗಳು ಭಾರತದಲ್ಲಿ ಬಲವಾಗಿ ಬೇರೂರಲು ಈ ಮಧ್ಯೆ ನಿಂತ ಬುದ್ಧಿಜೀವಿಗಳೇ ಕಾರಣರಾಗಿದ್ದಾರೆ. ಸಾಂಸ್ಕೃತಿಕವಾಗಿ ಸಂಕರತನವು ಬಹು ಸಂಸ್ಕೃತಿಯ ಪ್ರಶ್ನೆಗಳನ್ನು ಕೈಗೆತ್ತಿಕೊಂಡಿತು. ಅಂತರ್‌ರಾಷ್ಟ್ರೀಯಸಂಸ್ಕೃತಿ; ರಾಷ್ಟ್ರೀಯಸಂಸ್ಕೃತಿ; ದೇಶೀಸಂಸ್ಕೃತಿ; ಪ್ರಾದೇಶಿಕಸಂಸ್ಕೃತಿ–ಇವುಗಳ ವ್ಯಾಖ್ಯಾನಗಳಲ್ಲಿಯೂ ಕಲಬೆರಕೆಯು ಕಾಣಿಸಿಕೊಂಡಿತು. ಸಂಕರತನವು ಸಂಸ್ಕೃತಿಯ ಪ್ರಶ್ನೆಯನ್ನು 'ಬಹುತ್ವ'ದ ಮೂಲಕ ಇರಿಸಿಕೊಂಡಿದ್ದರಿಂದ ಸಂಸ್ಕೃತಿಯ ಅರ್ಥವ್ಯಾಪ್ತಿಯೂ ಕೂಡಾ ವಿಸ್ತರಿಸಿತು. ಇದೇ ಕಾರಣದಿಂದ ರಾಷ್ಟ್ರೀಯ, ಅಂತರರಾಷ್ಟ್ರೀಯ ಚಾರಿತ್ರಿಕ ಚರ್ಚೆಗಳು ಕೂಡಾ ಬೇರೆಯಾಗತೊಡಗಿದವು. ಸಂಸ್ಕೃತಿಗೆ ವಿಪರೀತವಾದ ಒತ್ತು ಬಿದ್ದುದು ಕೂಡಾ ಸಂಕರದ ಕಾರಣದಿಂದ.

ಸಂಕರವೆಂದು ಯಾವುದನ್ನು ಕರೆಯುತ್ತೇವೆಯೋ ಅದಕ್ಕೆ ರಾಜಕೀಯ ಮತ್ತು ಸಾಂಸ್ಕೃತಿಕರೇಖೆ ಅನ್ನುವುದು ಇಲ್ಲ. ಅದೇ ರೀತಿಯಲ್ಲಿ ಅದಕ್ಕೆ ಶಾಸ್ತ್ರೀಯವೆಂದು ಕರೆಯಬಹುದಾದ ಗುಣವೂ ಇಲ್ಲ. ಸಂಕರತನವು ಪಾರದರ್ಶಕವಲ್ಲ. ಇದರಲ್ಲಿ ಮೌಲ್ಯಗಳ ಪ್ರಶ್ನೆಯು ಬರುವುದಿಲ್ಲ. ಮತ್ತು ಸಂಕರವೆಂದರೆ ಅರೆ ಬರೆಯಾದುದೂ ಅಲ್ಲ. ವಸಾಹತುಶಾಹಿ ಕಾಲಘಟ್ಟದಲ್ಲಿ ನಡೆದ ಅವಿನಯ; ಪ್ರತಿಭಟನೆ; ನಿರಾಕರಣೆ ಅಂಗೀಕಾರ ಎಲ್ಲವೂ ಸಾಂಸ್ಕೃತಿಕ ಜ್ಞಾನರೂಪಗಳ ಪರಿಣಾಮ ಆದರೆ ಸಾಂಸ್ಕೃತಿಕ ಜ್ಞಾನರೂಪವು ಕೇವಲ ಒಂದೇ ರೂಪದಲ್ಲಿತ್ತು ಎಂದು ಹೇಳಲು ಬರೆವುದಿಲ್ಲ. ಸಂಕರತೆಯು

ಧ್ರುವೀಕರಣಗಳನ್ನು ಬೆಸೆಯುತ್ತದೆಯೆಂದು ಫ್ಯಾನನ್ ಹೇಳುತ್ತಾನೆ. ಸಂಕರತೆಯು ಸರಳ ದ್ವಂದ್ವವನ್ನು ಹೊಂದಿಲ್ಲ. ಅದರಾಚೆಗೆ ಅದು ನಡೆಯುತ್ತದೆ. ಸಂಕರತೆಯಲ್ಲಿ ನನ್ನ ರಾಷ್ಟ್ರ; ನನ್ನ ಪ್ರದೇಶವೆಂಬ ಪ್ರಶ್ನೆಯೂ ಮುಖ್ಯವಲ್ಲ. ಸಂಕರತನದಲ್ಲಿ ಮನುಷ್ಯರು ತಾನು; ತನ್ನ ಬದುಕು; ತನ್ನ ಅಸ್ತಿತ್ವ ಇದರ ಬಗೆಗೆ ಮಾತ್ರ ಯೋಚಿಸುತ್ತದೆ. ವೀಣಾದಾಸ್ ಹೇಳುವಂತೆ ಈ ಮಾದರಿಯ ಚಾರಿತ್ರಿಕ ಸನ್ನಿವೇಶದಲ್ಲಿ ಜಾತಿ ಅಥವಾ ಬುಡಕಟ್ಟು ಸಂಸ್ಕೃತಿಗಳು ಗಣನೆಗೆ ಬರುವುದಿಲ್ಲ. ಆದುದರಿಂದ ಕೆಳ ಜಾತಿಯ ಮತ್ತು ಕೆಳವರ್ಗದ ಜನರು ಸಂಕರಕ್ಕೆ ಗುರಿಯಾಗುವ ಸಂಭವವಿರಲಿಲ್ಲ. ನಡತೆಯಲ್ಲಿನ ನಯನಾಜೂಕು; ಸಭ್ಯತೆ; ಸ್ಥಾನಮಾನ ಒಂದು ಎಂಬ ನಾಗರಿಕತೆಯು ರೂಪುಗೊಂಡಿತು. ಯಾರು ಈ ರೀತಿಯ ಪ್ರಭಾವಕ್ಕೆ ಗುರಿಯಾದರೋ ಅವರನ್ನು ಪ್ರಗತಿಪರರು ಎಂದು ಗುರುತಿಸಲಾಯಿತು. ಸಂಕರತನವು ಸಾಂಸ್ಕೃತಿಕ ವ್ಯತ್ಯಾಸಗಳನ್ನು ಮರೆಮಾಚಿತು.

ಸಂಕರತೆಯನ್ನೆವುದು ರಾಜಕೀಯ ತಂತ್ರಗಾರಿಗೆಯಲ್ಲಿ ಅದಕ್ಕೂ ಚಾರಿತ್ರಿಕ ಬೆಳವಣಿಗೆಗೂ ಯಾವುದೇ ಸಂಬಂಧವಿಲ್ಲ. ಸಂಕರತೆಯಿಂದ ದ್ವಿಮುಖತೆಯು ನಾಶವಾಯಿತು. ಸಂಕರ ಬುದ್ಧಿಜೀವಿಗಳನ್ನು 'ಶಿಸ್ತು ಬದ್ಧಗುಂಪು' 'ಶಿಸ್ತು ಬದ್ಧ ಸ್ಥಳೀಯರು' ಎಂದು ಗುರುತಿಸಲಾಯಿತು.

ಬ್ರಿಟೀಶ್ ಪ್ರಭುತ್ವ ಮತ್ತು ಭಾರತೀಯ ಅರಸೊತ್ತಿಗೆಗಳ ನಡುವೆ ಯುದ್ಧದಿಂದ ಅನೇಕವು ನಾಶಗೊಂಡವು. ಆದರೆ ಸಿಪಾಯಿಗಳ ವರ್ಗವೇ ವಾಸ್ತವವಾಗಿ ಸಂಕರತೆಗೆ ಗುರಿಯಾದವು. ಒಳಗೆ-ಹೊರಗೆ ತಾನು-ಅನ್ಯವೆಂಬ ಬೇಧಗಳಿಲ್ಲ. ೧೮೧೬ರಲ್ಲಿ ಬೈಬಲ್ ಹಿಂದಿಗೆ ಅನುವಾದಗೊಂಡಿತು. ಈ ಸಂದರ್ಭ ಖಾಸಗಿಯಾದ ಓದು; ಓದಿನಲ್ಲಿ ಏಕತೆ; ಮೌನ ಓದಿನ ಅಗತ್ಯವನ್ನು ಪ್ರತಿಪಾದಿಸಲಾಯಿತು. ಮತ್ತು ವಾಸ್ತವವಾಗಿ ಬೈಬಲ್ ಭಾರತೀಯ ಭಾಷೆಗಳಿಗೆ ಅನುವಾದಗೊಂಡ ಹಿನ್ನೆಲೆಯೂ ಕೂಡಾ ಬೇರೆ. ಬೈಬಲ್ ಅನುವಾದದಿಂದ ಬ್ರಾಹ್ಮಣರ ಜ್ಞಾನದ ಅಧಿಕೃತೆ ವಾರಸುದಾರಿಕೆಯನ್ನು ನಿರಾಕರಿಸಲು ಸಾಧ್ಯವೆಂದು ಪರಿಭಾವಿಸಲಾಯಿತು. ಉದಾಹರಣೆ ದೇವರ ಆರಾಧನೆಗೆ ಬ್ರಾಹ್ಮಣರು ಮಧ್ಯವರ್ತಿಗಳಾಗಿದ್ದರು. ಈ ಪದ್ಧತಿಗೆ ಒಂದು ಪರಂಪರೆಯಿತ್ತು. ಧಾರ್ಮಿಕವಾಗಿಯೂ ಸಂಪ್ರದಾಯಗಳಿದ್ದವು. ಜನಿವಾರತೊಟ್ಟ ಮೇಲೆ ಬ್ರಾಹ್ಮಣರು ದ್ವಿಜರೆಂದೆನಿಸಿಕೊಂಡರು. ಆದರೆ ದೇವರನ್ನು ಯಾರು ಬೇಕಾದರೂ ಒಲಿಸಿಕೊಳ್ಳಬಹುದು. ಎಂದು ಬೈಬಲ್ ಹೇಳಿತು. ಏಸುಸ್ವಾಮಿಯು ಕರುಣಾಳು ಪಾಪಿಗಳನ್ನು ಉದ್ಧರಿಸಲು ಅವನು ಭೂಮಿಯ ಮೇಲೆ ಅವತರಿಸಿದ ಮತ್ತು ಏಸುಸ್ವಾಮಿಯು ಬಯಸುವುದು ಶುದ್ಧ ಹೃದಯವನ್ನು ಮಾತ್ರ ಹಾಗೆಯೇ ಯಾರು

ಪಾಪ ಮಾಡಿದ್ದಾರೋ ಅವರು ಏಸುವಿನಲ್ಲಿ ನಿವೇದನೆ ಮಾಡಿದರೆ ಅವರ ಪಾಪವು ಬಗೆಹರಿಯುತ್ತದೆ. ನಿವೇದನೆಯೇ ಪ್ರಾಯಶ್ಚಿತ್ತವೆಂದು ವ್ಯವಸ್ಥಿತ ಪ್ರಚಾರ ಮಾಡಲಾಯಿತು. ಮತಾಂತರದ ಪ್ರಕ್ರಿಯೆಗಳು ನಡೆದವು. ಮತಾಂತರದಲ್ಲಿ ದುಡ್ಡಿನ ಆಮಿಷವನ್ನು ಒಡ್ಡಲಾಯಿತು. ಇಂಗ್ಲೀಷ್ ಕಲಿಯುವುದೆಂದರೆ ಅದು ಹೊಸ ಭಾಷೆಯ ನಿಯಮವನ್ನು ಕಲಿತಂತೆ. ಅದು ಹೊಸ ಜ್ಞಾನದ ಮಾದರಿ ಅದನ್ನು ಕಲಿಯುವುದು ಮತ್ತು ಆ ಭಾಷೆಯಲ್ಲಿ ಮಾತಾಡುವುದು ಗೌರವಯುತವಾದುದು ಎಂದು ನಂಬಲಾಯಿತು. ಅಥವಾ ಆ ರೀತಿ ನಂಬುವಂತೆ ಮಾಡಲಾಯಿತು. ಇಂಗ್ಲೀಷ್ ಭಾಷೆಯು ದೇವಭಾಷೆ; ಅದನ್ನು ಕಲಿಯುವುದು ಘನತೆಯ ಪ್ರಶ್ನೆಯೆಂದು ಅನೇಕರು ತಿಳಿದರು. ಇದನ್ನು ರೆವರೆಂಡ್ ಡೊನಾಲ್ಡ್ ದಾಖಲಿಸಿದ್ದಾನೆ. (M.R. July 1816. P. 193, November. 1816. P. 444-5, March. 1816. P. 106-07) ಸಂಕರವು ಈ ಮೂಲಕ ಹೊಸ ರೀತಿಯ ಸಂವಾದವನ್ನು ರೂಪಿಸಿತು. ದೇವರನ್ನು ಇಂಗ್ಲೀಷಿನ ಮೂಲಕ ಒಲಿಸುವ ಕ್ರಮ ಚಾಲ್ತಿಗೆ ಬಂತು. ಭಾರತದಲ್ಲಿ ದೇವರನ್ನು ಒಲಿಸಲು ಸಂಸ್ಕೃತಭಾಷೆಯು ಮಾಧ್ಯಮವಾಗಿತ್ತು. ಮತ್ತು ಸಂಸ್ಕೃತವು ಬ್ರಾಹ್ಮಣರ ವಶದಲ್ಲಿ ಇತ್ತು. ಇಂಗ್ಲೀಷ್ ಅದನ್ನೇ ಒಡೆಯಿತು. ಈ ಮೂಲಕ ಹೊಸದೊಂದು ದಾರಿಯು ಧರ್ಮದ ಒಳಗೆ ಪ್ರವೇಶವನ್ನು ಪಡೆಯಿತು. ವಸಾಹತುಶಾಹಿ ಆಡಳಿತದಲ್ಲಿ ಸಂಕರ ಅನ್ನುವುದು ಒಂದು ಸಂಕೇತ ಮಾತ್ರ, ವಸಾಹತು ಅಧಿಕಾರವು ತನ್ನ ಯಜಮಾನಿಕೆಯನ್ನು ಉಳಿಸಿಕೊಳ್ಳಲು ಸಂಕರತೆಯನ್ನು ಬಳಸಿಕೊಂಡಿತು. ಹಾಗೆ ನೋಡುವುದಿದ್ದರೆ ವಸಾಹತು ಅಧಿಕಾರವು ನಿಂತಿರುವುದೇ ಯಜಮಾನಿಕೆ ಮತ್ತು ತಾರತಮ್ಯ ಭೇದಗಳ ನಡುವೆ. ಇದೊಂದು ಸಂಮಿಶ್ರ ರೂಪಕ ಮಾತ್ರ. ಅದು ಸಂಕರವನ್ನು ಕಾನೂನಿನ ಮೂಲಕ ತರಲಿಲ್ಲ. ಅದಕ್ಕೆ ಆಜ್ಞೆಗಳಿರಲಿಲ್ಲ. ಆದರೆ ವಸಾಹತು ಆಡಳಿತವು ಸ್ಥಳೀಯ ಸಂಪ್ರದಾಯಗಳ ಬದಲು ಸಂಕರವನ್ನು ರೂಪಿಸಲು ಮೌನದ ಪರಿಭಾಷೆಯನ್ನು ಚಾಲ್ತಿಗೆ ತಂದಿತು. ಇಂಗ್ಲೀಷ್ ರಾಷ್ಟ್ರೀಯತಾವಾದಿ ಅಧಿಕಾರವು ಸಂಕರದ ಮೂಲಕ ಅನೇಕವನ್ನು ಬದಲಾಯಿಸಲು ಯತ್ನಿಸಿತು. ಇದರಿಂದ ಪ್ರಾರಂಭವಾದ ಸಂಕಥನಗಳು ದ್ವಂದ್ವಾತ್ಮಕ ಪ್ರಭಾವಗಳನ್ನು ಬೀರಿದವು. ಇದರಿಂದ ಮೌಲ್ಯಗಳು ಬದಲಾದವು. ಸ್ಥಳೀಯ ಜ್ಞಾನಪರಂಪರೆಗಳು ಕೂಡಾ ಪರಿವರ್ತನೆಗೊಂಡವು. ಅಷ್ಟೇ ಅಲ್ಲ. ಪಶ್ಚಿಮ ನಾಗರಿಕ ಸಂಸ್ಕೃತಿಯು ಭಾರತಕ್ಕೆ ಪ್ರವೇಶಿಸಿತು.

ಭಾರತದಲ್ಲಿ ಸಂಕರ ಸಂಸ್ಕೃತಿಯು ರೂಪುಗೊಳ್ಳಲು ತೊಡಗಿದಾಗ ಯುರೋಪಿನ ಪುನರುಜ್ಜೀವನ ಕಾಲದ ಚಿಂತನೆಗಳು ಕೆಲಸ ಮಾಡಿದ್ದವು. ಪುನರುಜ್ಜೀವನಕಾಲದ ಅನಂತರ ಪ್ರಾರಂಭವಾದ ತಾಂತ್ರಿಕತೆ ತಾತ್ವಿಕತೆಯೆರಡೂ ಭಾರತದ ಮೇಲೆ ಪ್ರಭಾವ

ಬೀರಿದ್ದವು. ಸಂಪನ್ಮೂಲ; ಅಧಿಕಾರ; ಕಾರ್ಮಿಕತೆ; ಮುಂತಾದವು ಹೊಸ ನಿರ್ವಚನಕ್ಕೆ ಗುರಿಯಾದವು. ಇವುಗಳು ಕೂಡಾ ಭಾರತದಲ್ಲಿ ಸಂಕರ ವರ್ಗದ ಸೃಷ್ಟಿಗೆ ಕಾರಣವಾದವು. ಸಂಕರದಲ್ಲಿ ಒಳಗಿನವರು ಮತ್ತು ಹೊರಗಿನವರು ಎಂಬ ಭೇದಗಳಿಲ್ಲ. ಹತ್ತೊಂಬತ್ತನೆಯ ಶತಮಾನದಲ್ಲಿ ಪ್ರಾರಂಭವಾದ ಮುದ್ರಣ ಸಂಸ್ಕೃತಿಯು ಬೌದ್ಧಿಕ ಸಂಕರಕ್ಕೆ ಕಾರಣವಾಯಿತು. ಇದೇ ಸಂದರ್ಭದಲ್ಲಿ ಬೈಬಲ್ ಕನ್ನಡಕ್ಕೆ ಅನುವಾದವಾಯಿತು. ಬೈಬಲ್ ಕನ್ನಡಕ್ಕೆ ಅನುವಾದವಾಗಲು ಇದ್ದ ಕಾರಣವು ಸ್ಪಷ್ಟವಾಗಿದೆ: ಸ್ಥಳೀಯ ಭಾಷೆಯು ತಿಳಿದಿರುವವರು ಅದನ್ನು ಓದಿ ಪರಿವರ್ತನೆಗೆ ಗುರಿಯಾಗಲಿ ಎಂಬುದು ಒಂದು ಎರಡನೆಯ ಉದ್ದೇಶ; ಅಧಿಕಾರ ಮತ್ತು ಜ್ಞಾನ ಎರಡೂ ದೇವರ ಎದುರಿನಲ್ಲಿ ಸಮಾನ. ಸಂಕರ ಜ್ಞಾನವೇ ಆಧುನಿಕ ರಾಷ್ಟ್ರೀಯತಾವಾದಿ ಚಿಂತನೆಗೆ ಕಾರಣವಾಯಿತು. ಆದರೆ, ಸಂಕರ ಸಾಂಸ್ಕೃತಿಕ ರೂಪದೊಳಗೆ ಪ್ರವೇಶಿಸಿದಾಗ ಅಸಮತೆಯು ಉಂಟಾಗುತ್ತದೆ. ಪಶ್ಚಿಮದ ಜ್ಞಾನಪರಂಪರೆಯನ್ನು ಒಪ್ಪಿಕೊಂಡವರು ಒಂದು ಕಡೆಗಿದ್ದರೆ– ಪೂರ್ವ ಮೀಮಾಂಸಕರು ಮತ್ತೊಂದು ಕಡೆ ರೂಪುಗೊಂಡರು. ಸಂಕರವು ನೊಸ್ತಾಲ್ಜಿಯಾದಿಂದ ಬಳಲುವುದಿಲ್ಲ. ಅದು ಕನಸೂ ಅಲ್ಲ. ಅದು ಸಾಂಸ್ಕೃತಿಕ ಅನುಕರಣೆ. ಪ್ರಾಯ್ಡ್ ಸಂಕರವನ್ನು ಗುರುತಿಸುವುದು ಹೀಗೆ:

"ಎರಡು ಜ್ಞಾನಗಳ ಸಹಯೋಗ ಹಾಗೂ ಸಂಕಥನ". ಇದು ಮನೋ ವ್ಯಾಪಾರಕ್ಕೆ ಸಂಬಂಧಿಸಿದ್ದು. ಜ್ಞಾನಕ್ಕೂ ಸಂಕರದ ಸಂಬಂಧವಿದೆ. ಸಂಕರವು ಒಂದು ಮತ್ತೊಂದರ ಮೇಲೆ ಬೀರಿರುವ ಪ್ರಭಾವವನ್ನು ಸೂಚಿಸುತ್ತದೆ. ಹಾಗೂ ಭಾರತದಲ್ಲಿ ಸಂಕರತನವು ಹೊಸ ನಿರೂಪಣೆಗೆ ಕಾರಣವಾದವು.

* * *

"ಯುರೋಪಿಯನ್ ಬಂಡವಾಳಗಾರಿಕೆಗೂ (ಕ್ಯಾಪಿಟಲಿಸಂ ನಾನೇನು ವ್ಯತ್ಯಾಸ ಮಾಡುವುದಿಲ್ಲ. ಸತ್ಯಾಗ್ರಹದಿಂದ... ಬಂಡವಾಳವಾದ ಸಾಮ್ರಾಜ್ಯವಾದ ಮತ್ತು ವಸಾಹತುವಾದಗಳು ಕರಗಿ ಹೋಗುತ್ತವೆ"

– (ಗಾಂಧಿ)

೪. ಬೇರೆಯವರು ಸಂಪಾದಿಸಿ ಕೊಟ್ಟದ್ದು ಸ್ವರಾಜ್ಯವಲ್ಲ

ಯಾರು ಅರ್ಥಮಾಡಿಕೊಳ್ಳುವರೋ
ಅವರಿಗೆ ಸ್ವರಾಜ್ಯ. ನೀವು ನಾನು ಈವೊತ್ತು
ಅದನ್ನು ಅನುಭವಿಸಬಹುದು
ಇತರರೆಲ್ಲಾ ಹಾಗೆ ಮಾಡಲು ಕಲಿಯಬೇಕು.
ಬೇರೆಯವರು ಸಂಪಾದಿಸಿಕೊಟ್ಟದ್ದು ಸ್ವರಾಜ್ಯವಲ್ಲ.
ಅದು ವಿದೇಶಿ ಆಡಳಿತ. ಭಾರತೀಯರು ಆಳಲಿ,
ಅದು ಪರರಾಜ್ಯ– ಗಾಂಧಿ

ಬೇರೆಯವರು ನಮ್ಮನ್ನು ಆಳುವುದನ್ನು ನಾವು ಪರರ ರಾಜ್ಯವೆಂದು ಕರೆಯುತ್ತೇವೆ.ಆಳುವುದು ಯಜಮಾನಿಕೆಗೆ ಸಂಬಂಧ ಪಟ್ಟಿದೆ.ಪದಕೋಶದಲ್ಲಿ 'ಯಜಮಾನಿಕೆ' ಎಂದರೆ ಒಡೆತನ, ಸ್ವಾಮ್ಯ ಎಂಬ ಅರ್ಥ ನೀಡಲಾಗಿದೆ. ಇದಕ್ಕೆ ಸಂವಾದಿಯಾಗಿ ಅಧಿಕಾರ, ಪ್ರಭುತ್ವ, ನಿಯಂತ್ರಣ, ಪ್ರಾಬಲ್ಯ ಇತ್ಯಾದಿ ಪದಗಳನ್ನು ಕೂಡಾ ಬಳಸಲಾಗುತ್ತಿದೆ. ಯಜಮಾನಿಕೆ ಎಂಬುದಕ್ಕೆ ನಿರ್ದಿಷ್ಟ ಅರ್ಥ ಮಾತ್ರವಲ್ಲದೆ ಸಂದರ್ಭೋಚಿತವಾಗಿ ಅದು ವಿಭಿನ್ನ ಅರ್ಥಗಳನ್ನು ಪಡೆದುಕೊಳ್ಳುತ್ತದೆ. ಆಳುವ–ಆಳಿಸಿಕೊಳ್ಳುವ, ನಿರ್ದೇಶಿಸುವ–ನಿಯಂತ್ರಿಸುವ, ಕಾಯುವ ಮತ್ತು ಕರುಣಿಸುವ ಪ್ರಕ್ರಿಯೆಲ್ಲಿ ಯಜಮಾನಿಕೆ ಅಭಿವ್ಯಕ್ತವಾಗುತ್ತಿರುತ್ತದೆ. ಈ ಪ್ರಾಬಲ್ಯ ಅಥವಾ ಶಕ್ತಿ ಎಂಬುದು

ಕೇವಲ ದೈಹಿಕ ಬಲ ಅಥವಾ ರಾಜ್ಯಾಧಿಕಾರ ಅಷ್ಟೇ ಅಲ್ಲ, ಹಾಗೂ ಆ ಮೂಲಕವಷ್ಟೇ 'ಯಜಮಾನಿಕೆ' ಮಾಡಲಾಗುವುದಿಲ್ಲ. ಅಲ್ಲದೆ ಬೌದ್ಧಿಕತೆ, ಜ್ಞಾನಸಂಪತ್ತು, ಜೀವನಮೌಲ್ಯ ಇತ್ಯಾದಿಗಳ ಮೂಲಕವೂ ಯಜಮಾನಿಕೆ ಸಾಧ್ಯ. ಇಂತಹ ಯಜಮಾನಿಕೆ ಜನಸಮುದಾಯವನ್ನು ಅಥವಾ ದೇಶವನ್ನು ನಿಯಂತ್ರಿಸುವುದು ಸಾಧ್ಯವಿದೆ. ವಿಕಾಸವಾದದ ಪ್ರಕಾರ ಪ್ರತಿಯೊಂದು ಜೀವಿಯೂ ಉಳಿವಿಗಾಗಿ ಹೋರಾಟ ಮಾಡುತ್ತದೆ. ಅದರಲ್ಲಿ ಸಬಲವಾದವುಗಳು ಉಳಿಯುತ್ತವೆ ದುರ್ಬಲವಾದವುಗಳು ಸಾಯುತ್ತವೆ. ಹಾಗೆಯೇ ಮಾನವ ಸಮುದಾಯದಲ್ಲೂ ಸಬಲರಾದವರು ದುರ್ಬಲರನ್ನು ತಮ್ಮ ಅಧೀನದಲ್ಲಿ ಇರಿಸಿಕೊಳ್ಳುವಲ್ಲಿ ನಿರಂತರ ಪ್ರಯತ್ನದಲ್ಲಿರುತ್ತಾರೆ. ದುರ್ಬಲರ ದೌರ್ಬಲ್ಯ ಅಥವಾ ಅಸಹಾಯಕತೆಯನ್ನು ಉಪಯೋಗಿಸಿಕೊಂಡು ಅವರ ಮೇಲೆ ತನ್ನ ಪ್ರಾಬಲ್ಯವನ್ನು ಹೇರುವ, ತನ್ನ ಆಜ್ಞೆ ಅಥವಾ ತಾತ್ವಿಕತೆಯನ್ನು ಪಾಲಿಸುವಂತೆ ಮಾಡುವ ಪ್ರಕ್ರಿಯೆಯೇ ಯಜಮಾನಿಕೆ. ವಸಾಹತುಶಾಹಿ ಅನುಭವದ ಸಂದರ್ಭದಲ್ಲಿ ಯಜಮಾನಿಕೆಯ ಅರ್ಥ ಮತ್ತು ಅದರ ಸ್ವರೂಪಗಳು ಬೇರೆಯಾದವು 'ಆಳುವವರು' ಮತ್ತು 'ಆಳಿಸಿಕೊಳ್ಳುವವರು' ಎನ್ನುವುದರ ವ್ಯಾಖ್ಯೆಗಳು ಬದಲಾದವು. ಬ್ರಿಟೀಶರ ಕಾಲದ ಆಡಳಿತ ಪದ್ಧತಿಯು ಹಳೆಯ ಮಾದರಿಯ ಅಧಿಕಾರವನ್ನು ಕಿತ್ತೆಸೆಯಿತು. ಇದರ ಪರಿಣಾಮವಾಗಿ ಹೊಸ ರೀತಿಯ ಅಧಿಕಾರ ಮಾದರಿಗಳು ಹುಟ್ಟಿಕೊಂಡವು. ಇದು ಭಾರತೀಯ ಬೌದ್ಧಿಕ ಏಕಾಂತವಾದಿಗಳ ಮೇಲೆ ಪ್ರಭಾವವನ್ನು ಬೀರಿತು.

> **ನಾನು ಹೆಚ್ಚು ಹೆಚ್ಚು ಅನುಭವ ಪಡೆದಂತೆಲ್ಲಾ**
> **ನನಗೆ ಹೆಚ್ಚು ಅರಿವಾಗುತ್ತಿದೆ.ಯಂತ್ರಾಗಾರಿಗೆ ನಮ್ಮನ್ನು**
> **ಶಾಶ್ವತ ದಾಸ್ಯದಲ್ಲಿ ಇರಿಸುತ್ತದೆ.**
> **ಅದರ ಬಗ್ಗೆ ನಾನು ಹಿಂದ್ ಸ್ವರಾಜ್ಯದಲ್ಲಿ ಏನು ಹೇಳಿದೆನೋ**
> **ಅದು ಅಕ್ಷರಶಃ ಸತ್ಯ.**
> **ಸತ್ಯಾಗ್ರಹದ ವಿಷಯದಲ್ಲಿಯೂ ಹೊಸ ಸತ್ಯಗಳನ್ನು**
> **ಕಂಡು ಹಿಡಿಯತ್ತಿದ್ದೇನೆ.**
> **ನಿರ್ಬಲರಿಗಾಗಲೀ ಬಲಿಷ್ಠರಿಗಾಗಲಿ**
> **ಅದು ಪರಿಶುದ್ಧ ಅಸ್ತ್ರ–ಗಾಂಧಿ**

ಬ್ರಿಟೀಶ್ ಕಾಲದಲ್ಲಿ ಸಂಪತ್ತು ಮತ್ತು ಅಧಿಕಾರವು ಕೇಂದ್ರಿಕರಣಗೊಂಡವು. ಇದುವೇ ಆಳುವವರು ಮತ್ತು ಆಳಿಸಿಕೊಳ್ಳುವವರ ನಡುವೆ ಹೊಸ ವ್ಯಾಖೆಗಳಿಗೆ ಕಾರಣವಾಯಿತು. ವಸಾಹತುಕಾಲದಲ್ಲಿಯೇ ಸಂಪತ್ತು ಮತ್ತು ಅಧಿಕಾರದ ಸ್ವರೂಪಗಳು ಬದಲಾದವು. ಸಂಪತ್ತು ಮತ್ತು ಅಧಿಕಾರದ ಕೇಂದ್ರಿಕರಣವು ಯಜಮಾನಿಕೆಯ ಒಂದು ಮುಖ.

ತಾವು ಶ್ರೇಷ್ಠ ಮತ್ತು ಸಮರ್ಥರು ಅನ್ನುವ ಹೆಚ್ಚುಗಾರಿಕೆಯ ಮಂತ್ರವು ಉಳಿದವರನ್ನು ಕನಿಷ್ಠವೆಂದು ಪರಿಗಣಿಸುತ್ತದೆ. ತಮ್ಮನ್ನು ತಾವೆ ನಿರ್ವಹಿಕೊಳ್ಳಲಾಗದ ಅಸಹಾಯಕತೆಯನ್ನು ಎದುರಿಗಿಟ್ಟು ತನ್ನ ಯಾಜಮಾನ್ಯವನ್ನು ಪ್ರತಿಷ್ಠಾಪಿಸುವ ಪ್ರಯತ್ನ ಮಾಡಲಾಗುತ್ತದೆ. ಅನಾದಿ ಕಾಲದಿಂದಲೂ ಒಂದು ಇನ್ನೊಂದನ್ನು ತನ್ನ ಅಧೀನದಲ್ಲಿರಿಸಿಕೊಳ್ಳುವ, ನಿಯಂತ್ರಿಸುವ, ಆಳುವ, ಯಜಮಾನಿಕೆ ಮಾಡುವ ಸಂದರ್ಭಗಳನ್ನು ಕಾಣುತ್ತೇವೆ. ಆದರೆ ಆ ಎಲ್ಲದಕ್ಕೂ ಒಂದು ಮಿತಿಯಿರುತ್ತಿತ್ತು, ನಿರ್ದಿಷ್ಟ ರೂಪವಿರುತ್ತಿತ್ತು. ಆದರೆ ವಸಾಹತುಶಾಹಿ ಸಂದರ್ಭದಲ್ಲಿ ಯಜಮಾನಿಕೆಯ ಅರ್ಥವೇ ಬದಲಾಯಿತು. ಕೇವಲ ಅಧಿಕಾರದ ಮೂಲಕ ಆಳುವ-ನಿಯಂತ್ರಿಸುವ ನೆಲೆಗಳು ಬದಲಾದವು. ಪೋಲಿಸ್ ವ್ಯವಸ್ಥೆ, ಕಾನೂನು ಇತ್ಯಾದಿಗಳ ಮೂಲಕ ಪ್ರಭುತ್ವವನ್ನು ಕಾಪಾಡಿಕೊಳ್ಳುವುದು ಸಾಧ್ಯವಿಲ್ಲದೇ ಹೋದಾಗ ಭಾಷೆ, ಸಂಸ್ಕೃತಿ, ಜ್ಞಾನಪರಂಪರೆ, ಧರ್ಮ, ನಂಬಿಕೆ ಇತ್ಯಾದಿಗಳನ್ನು ನಿಯಂತ್ರಣದಲ್ಲಿಡಲು ವಸಾಹತುಶಾಹಿ ಆಡಳಿತ ಮುಂದಾಯಿತು. ಅಧಿಕಾರ ಪಡೆಯುವುದಷ್ಟೇ ಮುಖ್ಯವಾಗದೆ ಪಡೆದ ಅಧಿಕಾರವನ್ನು ಕಾಪಾಡಿಕೊಳ್ಳುವುದು ಮುಖ್ಯವೆಂದು ತಿಳಿದ ವಸಾಹತುಶಾಹಿ ವ್ಯವಸ್ಥೆ ಅಧಿಕಾರಕ್ಕಾಗಿ ಸಾಂಸ್ಕೃತಿಕ ಜಗತ್ತನ್ನು ಅಸ್ತ್ರವಾಗಿ ಬಳಸಿತು. ಆ ಮೂಲಕ ತನ್ನ ಪ್ರಭುತ್ವವನ್ನು ವಿಸ್ತಾರವೂ ಶಾಶ್ವತವೂ ಮಾಡಿಕೊಳ್ಳುವಲ್ಲಿ ಯಶಸ್ವಿಯಾಯಿತು.

> **ಭಾರತಕ್ಕೆ ಸ್ವಯಮಾಡಳಿತ ಸಾಧಿಸುವುದು ನನ್ನ ಗುರಿ.**
> **ಗುರಿ ಸಾಧಿಸಲು ಮಾರ್ಗ ಅಹಿಂಸೆ ಮತ್ತು ಸತ್ಯ.**
> **ಆದ್ದರಿಂದ ಭಾರತದ ಸ್ವಯಮಾಡಳಿತದಿಂದ ಜಗತ್ತಿಗೆ**
> **ಯಾವ ಆಪತ್ತು ಆಗುವುದಿಲ್ಲ.**
> **ಮಾತ್ರವಲ್ಲ, ಭಾರತ ಈ ದಾರಿಯಲ್ಲಿಯೇ**
> **ಮತ್ತು ಇದರಲ್ಲಿ ಮಾತ್ರವೇ ತನ್ನ ಗುರಿ ಸಾಧಿಸಿದಲ್ಲಿ**
> **ಅದು ಮನುಕುಲಕ್ಕೆ ಅತ್ಯಂತ ಲಾಭದಾಯಕವಾದೀತು.**
> **ಚರಕ ಆಂತರಿಕ ಸುಧಾರಣೆಯ ಬಹಿರಂಗ ಸಂಕೇತ.**
> **ಅದನ್ನು ವ್ಯಾಪಕವಾಗಿ ಮತ್ತೆ ರೂಢಿಗೆ ತಂದರೆ**
> **ಭಾರತದ ಆರ್ಥಿಕ ವಿಮೋಚನೆ ಖಂಡಿತಾ.**
>
> **ಕೋಟ್ಯಂತರ ಭಾರತೀಯರನ್ನು ಹೆಚ್ಚುತ್ತಿರುವ ದಾರಿದ್ರ್ಯದಿಂದ ಬಿಡಿಸುತ್ತದೆ.–ಗಾಂಧಿ**

ಗಾಂಧಿ ಯಜಮಾನಿಕೆಯನ್ನು ಬೇರೆ ಬೇರೆ ರೀತಿಯಲ್ಲಿ ಅರ್ಥ ಮಾಡಿಕೊಂಡಿದ್ದಾರೆ. ಯಜಮಾನಿಕೆಯಲ್ಲಿ ಅನೇಕ ರೂಪಗಳನ್ನು ಸಾಮಾನ್ಯವಾಗಿ ಗುರುತಿಸಬಹುದು. ಆ ಎಲ್ಲವುಗಳ ಹಿಂದಿನ ಉದ್ದೇಶ ಆಳುವುದು ಮತ್ತು ಅಧೀನವಾಗಿರಿಸಿಕೊಂಡಿರುವುದೇ ಆಗಿದೆ. ವಸಾಹತುಕಾಲದಲ್ಲಿಯೇ ಬಂದ ರಾಷ್ಟ್ರೀಯತೆಯ ಪ್ರಶ್ನೆಯು ಹೊಸದೊಂದು

ದೃಷ್ಟಿಕೋನವನ್ನು ರೂಪಿಸಿತು. ಇದರ ಪರಿಣಾಮವಾಗಿ ಸಾಂಸ್ಕೃತಿಕ ಸಂಮಿಶ್ರಣವೂ ಪ್ರಾರಂಭಗೊಂಡಿತು,

ವಸಾಹತುಶಾಹಿ ರಾಷ್ಟ್ರಗಳಲ್ಲಿ ಪ್ರಭುತ್ವದ ವ್ಯಾಖ್ಯಾನದಿಂದಲೇ ರಾಷ್ಟ್ರೀಯತೆಯ ವ್ಯಾಖ್ಯಾನವು ಪ್ರಾರಂಭವಾಗಿದೆ. ಈ ಅರ್ಥದಲ್ಲಿ ವಸಾಹತುಶಾಹಿ ಅನುಭವವು ರಾಷ್ಟ್ರೀಯತೆ ಮತ್ತು ಪ್ರಭುತ್ವವನ್ನು ನಿರ್ದಿಷ್ಟವಾದ ಅರ್ಥದಲ್ಲಿ ಕಾಣಲು ಪ್ರಯತ್ನಿಸಿದೆ. ಪ್ರಭುತ್ವವೆಂದರೆ ವಸಾಹತುಶಾಹಿ ಸಂಸ್ಕೃತಿಯೆಂತಲೂ, ರಾಷ್ಟ್ರೀಯತೆಯನ್ನು ದೇಶೀಯತೆಯ ಅನನ್ಯತೆಯೆಂತಲೂ ಪರಿಭಾವಿಸಿಕೊಂಡ ಈ ಅರ್ಥ ಪ್ರಕ್ರಿಯೆಗಳು ನಿರ್ದಿಷ್ಟ ಮಾದರಿಯ ಹುಡುಕಾಟದ ಕೊಡುಗೆಯಾಗಿದೆ. ಪ್ರಭುತ್ವದ ಪ್ರಶ್ನೆಯು ಬೇರೆ ಬೇರೆ ಸಂದರ್ಭಗಳಲ್ಲಿ ಬೇರೆ ಬೇರೆ ಅರ್ಥಗಳನ್ನು ಕೊಡುತ್ತಿರುತ್ತದೆ. ರಾಜಸತ್ತೆಯ ಪ್ರಭುತ್ವದಲ್ಲಿ ರಾಜನೇ ಅಂತಿಮಸ್ವರೂಪನಾಗಿದ್ದು ಅವನನ್ನೇ ಪ್ರತ್ಯಕ್ಷ ದೇವರೆಂದು ಪರಿಭಾವಿಸಲಾಗುತ್ತದೆ. ಈ ರೀತಿಯ ಪರಿಕಲ್ಪನೆಗಳಲ್ಲಿ ರಾಜ್ಯದ ಒಡೆಯನಾದ ರಾಜನು ರಾಜ್ಯದ ನಿಯಮವನ್ನು ತನಗೆ ಬೇಕಾದಂತೆ ರೂಪಿಸುತ್ತಾನೆ. ಆದರೆ ಪ್ರಭುತ್ವದ ಕಲ್ಪನೆಯನ್ನು ಪ್ರಜಾಪ್ರಭುತ್ವದ ಮಾದರಿಯೊಳಗೆ ತಂದರೆ ಸಾಮಾನ್ಯ ಪ್ರಜೆಯು ಪ್ರಭುವಾಗಬಲ್ಲ, ಈ ಅರ್ಥದಲ್ಲಿ ಪ್ರಭುತ್ವವು ಪ್ರಜೆಗಳ ಪ್ರತಿನಿಧಿಯ ಹಸ್ತದಲ್ಲಿರುತ್ತದೆ. ಪ್ರಭುತ್ವವನ್ನು ಇನ್ನೊಂದು ರೀತಿಯಿಂದಲೂ ವ್ಯಾಖ್ಯಾನಿಸಲು ಸಾಧ್ಯ. ಅದರ ಪ್ರಕಾರ ವಂಶಾಡಳಿತಪ್ರಭು ಸಂಹಿತೆಯದ್ದು. ಒಂದು ವಂಶಕ್ಕೆ ಮೀಸಲಾಗಿದ್ದು ಅಧಿಕಾರವು ಒಬ್ಬನ ಕೈಯಲ್ಲಿರುತ್ತದೆ. ಗಾಂಧಿ ಒಂದು ಹಂತದಲ್ಲಿ ದ್ವಿ ಮಾದರಿಯ ಸರಕಾರವನ್ನು ಅತ್ಯಂತ ತೀವ್ರವಾಗಿ ವಿರೋಧಿಸಿದ್ದರು. ಇದರ ಪರಿಣಾಮವು ಕರ್ನಾಟಕದ ಮೇಲೂ ಆಯಿತು.

ಚಳುವಳಿಗಳ ಮಾಲೆ

ಬೆಂಗಳೂರು ದಂಡಿನಲ್ಲಿ ನಡೆದ ಖಿಲಾಫತ್ ಚಳುವಳಿ, ಪೋಲೀಸರಿಗೂ ಕೂಲಿ ಕಾರ್ಮಿಕರಿಗೂ ಆದ ಘರ್ಷಣೆಗಳು, ರಾಷ್ಟ್ರನಾಯಕರ ಮೇಲಿನ ಪ್ರತಿಬಂಧಕಾಜ್ಞೆಗಳು, ಗಣಪತಿ ಗಲಾಟೆ, ತಿಲಕರ ಪುಣ್ಯದಿನದ ಹರತಾಳ, ದೇಶೀಯ ಶಾಲೆಗಳ ಸ್ಥಾಪನೆ, ತಗಡೂರು ರಾಮಚಂದ್ರರಾಯರ ಪತ್ರಿಕಾ ಶಾಸನಭಂಗ ಚಳುವಳಿ ಮೊದಲಾದವು ಮೈಸೂರಿನ ರಾಜಕೀಯ ಬೆಳವಣಿಗೆಯ ಕೆಲವು ಹೆಗ್ಗುರುತುಗಳು. ಇದರಿಂದ ದೇಶದಾದ್ಯಂತ ಜನಜಾಗೃತಿಯುಂಟಾಯಿತು. ಶಿಕಾರಿಪುರ ತಾಲ್ಲೂಕಿನಲ್ಲಿ ಮರಿಸ್ವಾಮಿ ಹಿರೇಮಠ ಅವರ ನೇತೃತ್ವದಲ್ಲಿ ಕಂದಾಯ ವಿರೋಧ

ಚಳುವಳಿ ನಡೆಯಿತು. ೦೩-೦೧-೩೨ ರಂದು ಶ್ರೀ ಎಚ್. ಕೆ. ವೀರಣ್ಣಗೌಡರ ನೇತೃತ್ವದಲ್ಲಿ, ಇರ್ವಿನ್ ನಾಲಾ ರೈತರ ಮೇಲೆ ಹೇರಲಾದ ಅನ್ಯಾಯವೂ ಅಗಾಧವೂ ಆದ ಕಂದಾಯದ ಪುನರ್ವಿಮರ್ಶೆಗಾಗಿ ನಾಲ್ಕು ಸಾವಿರ ಮಂದಿ ರೈತರು ೬೦-೭೦ ಮೈಲಿ ಕಾಲ್ನಡಿಗೆಯಲ್ಲಿ ಬೆಂಗಳೂರು ಅಠಾರಾ ಕಛೇರಿಗೆ ಬಂದು ಪ್ರತಿಭಟನೆ ಸೂಚಿಸಿದರು. ರೈತರ ಶಿಸ್ತು, ಸಂಯಮದಿಂದ ಕೂಡಿದ, ಈ ಪ್ರಥಮ ಸಂಘಟಿತ ಪ್ರದರ್ಶನ ಮೈಸೂರಿನ ರಾಜಕೀಯ ಇತಿಹಾಸದಲ್ಲಿ ಚಿರಸ್ಮರಣೀಯವಾದುದು. ಜುಲೈ ೧೯೩೨ರಲ್ಲಿ ತಾಳಕೆರೆ ಸುಬ್ರಹ್ಮಣ್ಯರವರನ್ನು ಬಾಗಲಕೋಟೆಯಲ್ಲಿ ಬಂಧಿಸಿ ೬ ತಿಂಗಳ ಕಠಿಣ ಶಿಕ್ಷೆ ವಿಧಿಸಲಾಯಿತು. ರಾಜಕೀಯ ಪ್ರಜ್ಞೆ ಹೀಗೆ ಬೆಳೆದುಬಂದು ಎಚ್ಚೆತ್ತ ಜನತೆ ಮೈಸೂರಿನಲ್ಲಿ ಸಾಂಕುಶ ಪ್ರಭುತ್ವವನ್ನು ಅಪೇಕ್ಷಿಸಿ, ತಮ್ಮ ಆಶೋತ್ತರಗಳನ್ನು ಈ ಚಳುವಳಿಗಳ ಮೂಲಕ ವ್ಯಕ್ತಪಡಿಸಲಾರಂಭಿಸಿದರು.

(ಹೋರಾಟದ ದಿಟ್ಟ ಹೆಜ್ಜೆಗಳು

ಎಚ್.ಎಸ್.ದೊರೆಸ್ವಾಮಿ ಪುಟ. ೧೨)

ಫೆಮಿನಿಸ್ಟರ ಪ್ರಕಾರ ದೈನಂದಿನ ಕುಟುಂಬರೂಪಿ ರಾಜಕಾರಣದಲ್ಲಿಯೂ ಪ್ರಭುತ್ವದ ನಿರ್ವಚನವು ನಡೆಯಲು ಸಾಧ್ಯ. ಕುಟುಂಬದ ಚೌಕಟ್ಟಿನೊಳಗೆ ಯಾರು ಕುಟುಂಬವನ್ನು ಆಳುತ್ತಾರೆ ಎನ್ನುವ ಪರಿಕಲ್ಪನೆಯು ಪ್ರಭುತ್ವದ ವ್ಯಾಖ್ಯಾನದ ಅಂತಿಮ ನಿಲುವಾಗಿರುತ್ತದೆ. ಈ ಅರ್ಥದಲ್ಲಿ ಪ್ರಭುತ್ವವು ನಿರ್ದಿಷ್ಟ ರೂಪಿಯಾಗಿರದೇ ಅದು ಸಾಂದರ್ಭಿಕವಾಗಿರುತ್ತದೆ. ಭಾರತೀಯ ರಾಷ್ಟ್ರೀಯ ಚಳುವಳಿಕಾರರಲ್ಲಿ ಪ್ರಭುತ್ವದ ವ್ಯಾಖ್ಯಾನವು ನಾಗರಿಕ ಹಕ್ಕುಗಳ ಒತ್ತಾಯದ ವ್ಯಾಖ್ಯಾನವಾಗಿದೆ. ಭಾರತೀಯ ಸ್ವಾತಂತ್ರ್ಯಹೋರಾಟಗಾರರಲ್ಲಿ ಇದ್ದ ಮುಖ್ಯ ಸವಾಲೆಂದರೆ ಇಂಗ್ಲೀಷ್‌ನಪ್ರಭು ಸಂಸ್ಕೃತಿಯನ್ನು ವಿರೋಧಿಸುವುದೇ ಆಗಿತ್ತು.ಅಂಕೋಲೆಯ ಸುತ್ತಮುತ್ತು ಪ್ರದೇಶಗಳಲ್ಲಿ ನಡೆದ ಸ್ವಾತಂತ್ರ ಚಳುವಳಿಯಲ್ಲಿ ಸಾಮಾನ್ಯ ಹೆಂಗಸರು ಭಾಗವಹಿಸಿದ್ದರು.

ಉತ್ತರ ಕನ್ನಡ ಜಿಲ್ಲೆಯ ಅಂಕೋಲಾ ತಾಲೂಕು ಕರ್ನಾಟಕದ ಎರಡನೇ ಬಾರ್ಡೋಲಿಯೆಂದು ಹೆಸರು ಪಡೆದು ಸ್ವಾತಂತ್ರ್ಯ ಸಂಗ್ರಾಮದ ಚರಿತ್ರೆಯ ಸುವರ್ಣ ಪುಟಗಳಲ್ಲಿ ಅಚ್ಚಳಿಯದ ಹೆಸರಾಗಿದೆ. ಅಂಕೋಲೆಯಂತೆ ಸಿರ್ಸಿ, ಸಿದ್ಧಾಪುರ ತಾಲೂಕುಗಳು ಕೂಡ ಪ್ರಸಿದ್ಧಿ ಪಡೆದಿವೆ. ಈ ತಾಲೂಕುಗಳಲ್ಲಿ ಕೇವಲ ಗಂಡಸರು ಮಾತ್ರವಲ್ಲ. ಗಂಡಸರಷ್ಟೇ ಪ್ರಧಾನವಾಗಿ ಸ್ತ್ರೀಯರು ಕೂಡ ಸಾಮೂಹಿಕವಾಗಿ, ಸಕ್ರಿಯವಾಗಿ ಚಳುವಳಿಯಲ್ಲಿ

ಪಾಲ್ಗೊಂಡು ಉಜ್ವಲ ದೇಶಪ್ರೇಮವನ್ನು ಮೆರೆದು ಗೌರವಕ್ಕೆ ಪಾತ್ರರಾಗಿದ್ದಾರೆ.

ಉತ್ತರ ಕನ್ನಡ ಜಿಲ್ಲೆಯ ಅಂಕೋಲಾ ತಾಲೂಕಿನ ಇಡೀ ಸಮಾಜವೇ, ಹೆಂಗಸರು – ಗಂಡಸರಾದಿಯಾಗಿ, ಸ್ವಾತಂತ್ರ್ಯ ಸಂಗ್ರಾಮದಲ್ಲಿ ಭಾಗವಹಿಸಿ ಹೋರಾಡಿದುದು ಚರಿತ್ರೆಯಲ್ಲಿ ಒಂದು ವಿಶೇಷ ಸಂಗತಿಯಾಗಿದೆ. ಚಾರಿತ್ರಿಕವಾಗಿ ನಾಡವರು ಒಂದು ವೀರ ಜನಾಂಗ. ನಾಡವರ ಸಮಾಜದ ಸ್ತ್ರೀಯರು ಅನಕ್ಷರಸ್ಥರಾದರೂ ಅತ್ಯುಗ್ರದೇಶಾಭಿಮಾನದಿಂದ ಪ್ರೇರಿತರಾಗಿ ರಾಷ್ಟ್ರದ ಬಿಡುಗಡೆಯ ಹೋರಾಟದ ಬಹು ಬಗೆಯ ಚಟುವಟಿಕೆಗಳಲ್ಲಿ ಪ್ರತ್ಯಕ್ಷವಾಗಿ ಮತ್ತು ಭೂಗತರಾಗಿ ಎಳೆಯರಿಂದ ಹಿಡಿದು ಮುದುಕಿಯರವರೆಗೆ ಪ್ರತಿಯೊಬ್ಬರು ಪಾಲ್ಗೊಂಡಿರುವುದು ಹೆಮ್ಮೆಯ ಸಂಗತಿಯಾಗಿದೆ.

ಹೆಂಗಸರ ಸಹಕಾರವಿಲ್ಲದಿದ್ದರೆ ಅಂಕೋಲಾ ತಾಲೂಕಿನ ಚಳುವಳಿಯು ಯಶಸ್ವಿಯಾಗುವುದು ಅಸಾಧ್ಯವೇನೋ ಎಂಬ ರೀತಿಯಲ್ಲಿ ನಾಡವರ ಪ್ರತಿ ಹಳ್ಳಿಯ, ಪ್ರತಿ ಕುಟುಂಬದ, ಪ್ರತಿಯೊಬ್ಬ ಹೆಂಗಸು ಚಳುವಳಿಯಲ್ಲಿ ಭಾಗವಹಿಸಿದ್ದಳು. ಈ ಹಳ್ಳಿಯ ವನಿತೆಯರಿಗೆ ಸ್ಫೂರ್ತಿಯ ಸೆಲೆಯಾಗಿ ಅಂಕೋಲಾ ನಗರದ ಶ್ರೀಮತಿ ಯಶೋಧಾ ಶಾಮರಾವ ಶೆಣೈ, ಶ್ರೀಮತಿ ಸೀತಾಬಾಯಿ ಸರಾಫ ಮತ್ತು ಶ್ರೀಮತಿ ಆನಚಿದಬಾಯಿ ಹನುಮಕಟ್ಟಕರರು ಚಳುವಳಿಯಲ್ಲಿ ಮುಂಚೂಣಿಯಲ್ಲಿ ನಿಂತು ತೋರಿದ ಸಾಹಸಗಳನ್ನು ಮರೆಯಲಾಗದು. ಚಳವಳಿ ಬಿರುಸುಗೊಂಡು, ಗಂಡಸರು ಗುಪ್ತರಾಗಿ ಉಳಿದು ಕೆಲಸ ಮಾಡುವ ಪ್ರಸಂಗ ಬಂದ ಮೇಲಂತೂ, ಮಿಲಟರಿಯವರು ಮನೆ ಮನೆಗೆ ಹೋಗಿ ಹೆಂಗಸರನ್ನು ಮಕ್ಕಳನ್ನು ಬೆದರಿಸಿ, ನಿಂದಿಸಿ ಹೇಯವಾದ ಮಾತುಗಳನ್ನಾಡಿ, ಲೂಟಿ ಮಾಡಿ, ಬಡಿದು, ಮನಬಂದಂತೆ ಸ್ವೇಚ್ಛಾಚಾರಿಗಳಾಗಿ ನಡೆಸಿದ ದಬ್ಬಾಳಿಕೆಗಳನ್ನು ಅನುಭವಿಸದೇ ಇದ್ದ ನಾಡವರ ಹೆಂಗಸು ಆ ಕಾಲದಲ್ಲಿ ಒಬ್ಬಳೂ ಇದ್ದಿಲ್ಲವೆನ್ನಬಹುದು.

(ಶಾಂತಾರಾಮ ನಾಯಕ, ಹಿಚಕಡ ೨೦೦೯ ಸ್ವಾತಂತ್ರ್ಯ ಹೋರಾಟದ ಹೊರಳು ನೋಟ ಪುಟ.೧೦೦)

ಈ ಎಲ್ಲಾ ಸಂಗತಿಗಳಲ್ಲಿಯೂ ಕಂಡುಬರುವ ಒಂದು ಪ್ರಾತಿನಿಧಿಕ ಅಂಶವೆಂದರೆ ಪ್ರಭುತ್ವ, ಅಧಿಕಾರ ಎರಡೂ ಸಂವಾದಿಯಾದದ್ದು. ಈ ಕಾರಣದಿಂದ ಪ್ರಭುತ್ವವನ್ನು ಆಳುವವನ ಮತ್ತು ಆಳಿಸಿಕೊಳ್ಳುವವನ ನಡುವಣ ಸಂಬಂಧದ ವ್ಯಾಖ್ಯಾನವೆಂದು

ಕರೆಯಲು ಸಾಧ್ಯ. ವಸಾಹತುಶಾಹಿ ಸಂಸ್ಕೃತಿಯೊಳಗೆ ಒಡಮೂಡಿ ಬಂದ ಮತ್ತೊಂದು ಕಲ್ಪನೆ ರಾಷ್ಟ್ರೀಯತೆ. ಬ್ರಿಟೀಷ್ ಪ್ರಭುತ್ವದ ವಿರುದ್ಧ ನಡೆಸಲಾಗಿರುವ ಚಳುವಳಿಯ ಉಪಉತ್ಪನ್ನವಿದು. ರಾಷ್ಟ್ರೀಯತೆಯ ಕಲ್ಪನೆಯು ಸಾಂಸ್ಕೃತಿಕ ಅಂಶಗಳನ್ನೂ ಒಳಗೊಂಡಿದೆ ಎನ್ನುವುದು ಗಮನಾರ್ಹ. ಪಾರ್ಥೋಚಟರ್ಜಿಯವರು ಎರಡು ರೀತಿಯ ರಾಷ್ಟ್ರೀಯತೆಯ ವಾದಗಳನ್ನು ಗುರುತಿಸುತ್ತಾರೆ. ಮೊದಲನೆಯದು ಪಶ್ಚಿಮ ಯುರೋಪಿನಲ್ಲಿಯ ಮಾದರಿ. ಈ ಮಾದರಿಯೊಳಗೆ ಮನುಷ್ಯ, ಮನುಷ್ಯನ ಸಂಬಂಧ, ನೈತಿಕತೆ, ಸಮಾಜ ಎನ್ನುವ ಆಲೋಚನಾ ಕ್ರಮವಿದೆ. ವಸಾಹತು ಆಡಳಿತ ಅಧಿಕಾರವನ್ನು ಕೇಂದ್ರೀಕರಿಸಿಕೊಂಡಿರುವಂತೆಯೇ ಸ್ಥಳೀಯ ಬೌದ್ಧಿಕಏಕಾಂತವಾದಿಗಳ ನಡುವೆ ಸ್ಪರ್ಧೆ ಮತ್ತು ಸಹಕಾರ ಎರಡನ್ನು ರೂಪುಗೊಳ್ಳುವಂತೆ ಮಾಡಿತು ಎಂಬುದು ಗಮನಾರ್ಹ. ರಾಷ್ಟ್ರೀಯತೆಯು ಒಂದು ಆದರ್ಶ ಮತ್ತು ಆ ಆದರ್ಶಕ್ಕೆ ತಕ್ಕಂತೆ ಸಾಂಸ್ಕೃತಿಕ ಚಟುವಟಿಕೆಗಳು ಕಾಣಿಸಿಕೊಂಡವು. ದೇಶೀಯ ಪರಂಪರೆಯ ಒಳ್ಳೆಯತನದ ಹುಡುಕಾಟ ಮತ್ತು ಪಶ್ಚಿಮದ ಒಳ್ಳೆಯತನದ ಹುಡುಕಾಟ ಎರಡೂ ಕಾಣಿಸಿಕೊಂಡವು. ಹಾಗೆ ನೋಡುವುದಿದ್ದರೆ ರಾಷ್ಟ್ರೀಯತೆಯೆನ್ನುವುದು ಒಂದು ಭಾವನಾತ್ಮಕ ಅಭಿವ್ಯಕ್ತಿ ಹಾಗೆಯೇ ರಾಷ್ಟ್ರೀಯತೆಯ ಪರಿಕಲ್ಪನೆಯಲ್ಲಿ ಅನೇಕ ವೈರುದ್ಧ್ಯಗಳೂ ಇದ್ದವು. ಮತ್ತು ಅತ್ಯಂತ ಸಂಕೀರ್ಣ ಸ್ವರೂಪದ್ದು ಸ್ವಾತಂತ್ರ್ಯಸಂಗ್ರಾಮದ ವೇಳೆ ರೂಪುಗೊಂಡ ಅನೇಕ ಚಳುವಳಿಗಳು ಸಾಂಸ್ಕೃತಿಕ ರೂಪಾಂತರಗಳೊಂದಿಗೆ ಕಾಣಿಸಿಕೊಂಡವು. ಉದಾಹರಣೆಗೆ– ಅಂಕೋಲದ ಉಪ್ಪಿನಸತ್ಯಾಗ್ರಹ, ಶಿರಸಿ–ಸಿದ್ಧಾಪುರಗಳಲ್ಲಿ ನಡೆದ ಕರಬಂದಿ ಹೋರಾಟ ಇವಕ್ಕೆಲ್ಲಾ ಸಾಮಾಜಿಕ–ರಾಜಕೀಯ ಮತ್ತು ಸಾಂಸ್ಕೃತಿಕ ರೂಪಗಳಿವೆ. ಈ ದೃಷ್ಟಿಯಿಂದ ಸ್ವಾತಂತ್ರ್ಯ ಹೋರಾಟವು ಸಾಂಸ್ಕೃತಿಕ ರೂಪಾಂತರಗಳ ಹೋರಾಟವೂ ಹೌದು.

ಪಶ್ಚಿಮದ ಯುರೋಪಿನಲ್ಲಿ ರಾಷ್ಟ್ರೀಯತೆಯು ಅಲ್ಲಿಯ ಸಾಮಾಜಿಕ ಮತ್ತು ಬೌದ್ಧಿಕ ಸ್ತರಗಳನ್ನು ಒಳಗೊಂಡಿದೆ. ಇನ್ನೊಂದು ಮಾದರಿ ಪೂರ್ವಯೂರೋಪಿನದು. ಈ ಪೂರ್ವ ಯುರೋಪಿನ ರಾಷ್ಟ್ರೀಯತೆಯ ಪರಿಕಲ್ಪನೆಯಲ್ಲಿ ಸಾಂಸ್ಕೃತಿಕ ಅನನ್ಯತೆಯು ಪ್ರಧಾನವಾದುದು. ಈ ಸಾಂಸ್ಕೃತಿಕ ಅನನ್ಯತೆಯ ಜೊತೆಗೆ ರಾಷ್ಟ್ರೀಯ ಅಭಿವೃದ್ಧಿಯ ಸಂಗತಿಗಳು ಸೇರಿಕೊಂಡಿವೆ. ಹೀಗಾಗಿ ರಾಷ್ಟ್ರೀಯ ಸಂಸ್ಕೃತಿಯ ವ್ಯಾಖ್ಯಾನವು ಪರಿವರ್ತನೆಯ ಅಂಶಗಳನ್ನು ಒಳಗೊಂಡಿರುದೆ. ರಾಷ್ಟ್ರೀಯತೆ ಮಾದರಿಯನ್ನು ಸ್ಪಷ್ಟ ಅರ್ಥದಲ್ಲಿ ವಿವರಿಸಬೇಕಾದರೆ ರಾಷ್ಟ್ರದ ಕಲ್ಪನೆಯೇ ಒಂದು ರೀತಿಯಿಂದ ಭ್ರಮಾತ್ಮಕವಾದುದು.

ನನ್ನ ಅಭಿಪ್ರಾಯದಲ್ಲಿ ರಾಷ್ಟ್ರ ಧ್ವಜ ವಂದನೆಗೆ ಯಾವ
ಆಕ್ಷೇಪಣೆಯೂ ಇಲ್ಲ.ಅದರಲ್ಲಿ ಯಾವ ತಪ್ಪೂ ಇಲ್ಲ.
ರಾಷ್ಟ್ರೀಯ ಜೀವನಕ್ಕೆ ರಾಷ್ಟ್ರೀಯ ಭಾವನೆಯು ಅಗತ್ಯ
ಅಂಥ ಭಾವನೆ ಬೆಳೆಯಲು ಧ್ವಜ ಒಂದು ಸಹಾಯಕ ವಸ್ತು- ಗಾಂಧಿ

ಆದರೆ ಹೆಗಲ್‌ನ ಪ್ರಕಾರ, 'ರಾಷ್ಟ್ರೀಯತೆಯ ಕಲ್ಪನೆ'ಯು ಒಂದು ಸಾಂಸ್ಕೃತಿಕ ಪರಿಕಲ್ಪನೆಯನ್ನು ಹೊಂದಿಕೊಂಡಿರುತ್ತದೆ. ಸಾಂಸ್ಕೃತಿಕ ಬೆಳವಣಿಗೆಯ ವಾಹಕವನ್ನು ಮಾತ್ರ ರಾಷ್ಟ್ರೀಯ ಪರಿಕಲ್ಪನೆಯ ಜೊತೆಗೆ ಹೆಗಲ್ ಚರ್ಚಿಸುತ್ತಾನೆ. ಅವನು ರಾಷ್ಟ್ರೀಯಪರಿಕಲ್ಪನೆಯನ್ನು ವಿವರಿಸುವಾಗ ಅದರ ಚಾರಿತ್ರಿಕ ಪಾತ್ರವನ್ನು ವಿವರಿಸಿಕೊಳ್ಳುತ್ತಾನೆ. ಅನಾಗರಿಕ ಜನರಿಗೆ ಚರಿತ್ರೆಯಿಲ್ಲ. ಅವರು ರಾಜ್ಯವನ್ನು ಕಟ್ಟಲಾರರು ಎಂದು ಆತ ತಿಳಿದುಕೊಂಡಿದ್ದ. ಆದರೆ ಗಾಂಧಿಯವರು ರಾಷ್ಟ್ರೀಯತೆಯನ್ನು ವಿವರಿಸಿದ ಕ್ರಮಗಳು ಬೇರೆ.ಅದು ಸಾಮಾನ್ಯರ ವ್ಯಾಖ್ಯಾನವನ್ನು ಅವಲಂಬಿಸಿತ್ತು.Nation ಮತ್ತು State ಪರಿಕಲ್ಪನೆಗಳನ್ನು ಹೆಗಲ್ ಭಿನ್ನವಾಗಿ ಕಾಣುತ್ತಾನೆ. ನೇಷನ್ ಕಲ್ಪನೆಯಲ್ಲಿ ಬಂಧುತ್ವ ಮತ್ತು ಭಾಷೆ ಮುಖ್ಯ ಪರಿಭಾಷೆಯಾಗಿದ್ದರೆ ಸ್ಟೇಟ್‌ನ ಕಲ್ಪನೆಯಲ್ಲಿ ನೈತಿಕ ಆದರ್ಶಗಳೇ ಪ್ರಧಾನವಾಗಿರುತ್ತದೆ.

ಭಾರತೀಯ ವಸಾಹತುಶಾಹಿ ಅನುಭವದ ಹಿನ್ನೆಲೆಯಲ್ಲಿ ಪ್ರಭುತ್ವದ ಪರಿಕಲ್ಪನೆಯ ವ್ಯಾಖ್ಯಾನವನ್ನು ಚರ್ಚಿಸಬಹುದು. ವಸಾಹತುಶಾಹಿ ಅನುಭವದ ಜೊತೆಗೆ ಈ ರಾಜಕೀಯ ಪರಿಭಾಷೆಯನ್ನು ಎತ್ತಿಕೊಳ್ಳುವಾಗ ಆಳುವ, ಆಳಿಸಿಕೊಳ್ಳುವವರ ನಡುವಣ ಸಂವಾದಗಳಾಗುತ್ತದೆ. ಅದನ್ನು ಭೌತಿಕಗೊಳಿಸಿ ನೋಡಿದರೆ ಪಶ್ಚಿಮದ ಶಕ್ತಿಯನ್ನೂ; ದುರ್ಬಲ ಏಷ್ಯಾದ ಮಾದರಿಯೆಂದು ಪರಿಗಣಿಸಬಹುದು. ಪ್ರಭುತ್ವದ ಪರಿಭಾಷೆಯನ್ನು ಮೇಲು ಸಂಸ್ಕೃತಿ ಮತ್ತು ಕೆಳಸಂಸ್ಕೃತಿ ಎಂದೂ ಪರಿಗಣಿಸಬಹುದು. ಈ ಪರಿಭಾಷೆಗಳ ಅರ್ಥ ವಿನ್ಯಾಸವು ವಸಾಹತುಶಾಹಿ ಅನುಭವಲೋಕ ರೂಪಿಸಿದ ಅರ್ಥ ವಿನ್ಯಾಸವೇ ಆಗಿದೆ.

ಸ್ವರಾಜ್ಯದ ನನ್ನ ಕಲ್ಪನೆಯ ವಿಷಯದಲ್ಲಿ ಯಾವ ತಪ್ಪು ತಿಳುವಳಿಕೆಯೂ ಇಲ್ಲದಿರಲಿ. ಅದು ಪರಕೀಯರ ಎಲ್ಲ ಅಧಿಕಾರದಿಂದಲೂ ಪೂರ್ತಿ ಸ್ವತಂತ್ರರಾಗಿರುವುದು; ಆದುದರಿಂದ ಅದು ಒಂದು ಕಡೆ ರಾಜಕೀಯ ಸ್ವಾತಂತ್ರ್ಯ, ಮತ್ತೊಂದು ಕಡೆ ಆರ್ಥಿಕ ಸ್ವಾತಂತ್ರ್ಯ. ಅಲ್ಲದೆ ಮತ್ತೆ ಎರಡು ಗುರಿಗಳುಂಟು. ಅದರಲ್ಲೊಂದು ಗುರಿ ನೈತಿಕ ಮತ್ತು ಸಾಮಾಜಿಕ. ಮತ್ತೊಂದು ಧರ್ಮ-ಅಂದರೆ ಉದಾತ್ತ ಅರ್ಥದಲ್ಲಿ ಮತ. ಅದರಲ್ಲಿ ಹಿಂದೂ ಧರ್ಮ, ಇಸ್ಲಾಂ ಮತ್ತು ಕ್ರೈಸ್ತ ಧರ್ಮ ಮುಂತಾದುವು ಅಡಕವಾಗಿವೆ. ಸತ್ಯವೂ ಅಡಕವಾಗಿದೆ. ಸಮಯೋಚಿತವಾದ ಪ್ರಾಮಾಣಿಕತನವಲ್ಲ.

– ಸಜೀವವಾದ ಸತ್ಯ–ಯಾವುದು ಎಲ್ಲದರಲ್ಲಿಯೂ ಪ್ರಾಪ್ತವಾಗಿದೆಯೊ, ಎಲ್ಲವೂ ನಾಶವಾದರೂ, ಬದಲಾಯಿಸಿದರೂ, ಅವಿನಾಶಿಯೂ ಅವಿಕಾರಿಯೂ ಆಗಿರುವ ಸತ್ಯ, ನೈತಿಕ ಮತ್ತು ಸಾಮಾಜಿಕ ಅಭ್ಯುದಯ ಆಗಿದೆಯೇ ಎಂಬುದನ್ನು ನಮಗೆ ಪರಿಚಿತವಾದ ಅಹಿಂಸಾತತ್ತ್ವದ ಒರೆಗಲ್ಲಿಗೆ ಹಚ್ಚಿ ನೋಡಬೇಕು. ಇದನ್ನು ನಾವು ಸ್ವರಾಜ್ಯದ ಚೌಕವೆನ್ನೋಣ. ಇದರಲ್ಲಿ ಯಾವೊಂದು ಕೋಣೆ ಸರಿಯಿಲ್ಲದಿದ್ದರೂ ಚೌಕದ ಆಕಾರ ಕೆಟ್ಟು ಹೋಗುವುದು. ಕಾಂಗ್ರೆಸ್ಸಿನ ಭಾಷೆಯಲ್ಲಿ ಹೇಳುವುದಾದರೆ ಸತ್ಯ ಮತ್ತು ಅಹಿಂಸೆಗಳಿಲ್ಲದೆ, ಅಂದರೆ ದೇವರಲ್ಲಿ ನಿಜವಾದ ನಂಬಿಕೆಯಿಲ್ಲದೆ – ಇದರ ಪರಿಣಾಮವಾಗಿ ನೈತಿಕ ಮತ್ತು ಸಾಮಾಜಿಕ ಉತ್ಥಾನವಾಗದೆ – ಈ ರಾಜಕೀಯ ಮತ್ತು ಆರ್ಥಿಕ ಸ್ವಾತಂತ್ರ್ಯವನ್ನು ನಾವು ಪಡೆಯಲಾರೆವು.

ರಾಜಕೀಯ ಸ್ವಾತಂತ್ರ್ಯವೆಂದರೆ ಬ್ರಿಟಿಷರ ಹೌಸ್ ಆಫ್ ಕಾಮನ್ಸ್, ಅಥವಾ ರಷ್ಯದ ಸೋವಿಯಟ್ ಆಡಳಿತ, ಅಥವಾ ಇಟಲಿಯ ಫ್ಯಾಸಿಸ್ಟ್ ಆಡಳಿತ, ಅಥವಾ ಜರ್ಮನಿಯ ನಾಟ್ಸಿಯ ಆಡಳಿತ – ಇವುಗಳಲ್ಲಿ ಯಾವುದರ ಅನುಕರಣವೆಂದೂ ನನ್ನ ಅರ್ಥವಲ್ಲ. ಆಯಾ ಜನಾಂಗಗಳ ಸಹಜವಾದ ಗುಣಕ್ಕನುಸಾರವಾಗಿ ಅವರ ಆಡಳಿತ ಪದ್ಧತಿಗಳು ರೂಪುಗೊಂಡಿವೆ. ಅಂತೆಯೇ ನಮ್ಮ ಗುಣ ವಿಶೇಷಗಳಿಗೆ ಅನುಸಾರವಾಗಿ ನಮ್ಮ ಪದ್ಧತಿ ಇರಬೇಕು. ಅದು ಎಂತಹುದಾಗಿರಬೇಕೆಂದು ಹೇಳುವುದು ನನ್ನ ಶಕ್ತಿಗೆ ಮೀರಿದ ಕೆಲಸ. ನಾನು ಅದನ್ನು ರಾಮರಾಜ್ಯವೆಂದು ಕರೆದಿದ್ದೇನೆ. ಅಂದರೆ ಕೇವಲ ನೈತಿಕ ಅಧಿಕಾರದ ಆಧಾರದ ಮೇಲೆ ನಿಂತಿರುವ ಜನರ ಸಾರ್ವಭೌಮತ್ವ. ನಾಗಪುರದಲ್ಲಿಯೂ ಬೊಂಬಾಯಿಯಲ್ಲಿಯೂ ರೂಪುಗೊಂಡ ಕಾಂಗ್ರೆಸ್ಸಿನ ಸಂವಿಧಾನ – ಇದಕ್ಕೆ ಬಹಳ ಮಟ್ಟಿಗೆ ನಾನೇ ಜವಾಬುದಾರನಾಗಿದ್ದೆ. – ಈ ಬಗೆಯ ಸ್ವರಾಜ್ಯವನ್ನು ಸಾಧಿಸುವುದಕ್ಕೆ ಒಂದು ಪ್ರಯತ್ನ.

ಭಾಷಣಗಳು – ಹೇಳಿಕೆಗಳು ೨ –ಪುಟ. ೭೫)

ರಾಷ್ಟ್ರೀಯ ಪರಿಭಾಷೆಗಳ ಕಲ್ಪನೆ ಈ ರೀತಿಯ ನಿಲುವುಗಳನ್ನು ಎತ್ತಿಹಿಡಿಯುತ್ತದೆ. ಈಗ ನಾವು ಮಾತಾನಾಡುತ್ತಿರುವ ಪ್ರಭುತ್ವ ಮತ್ತು ರಾಷ್ಟ್ರೀಯ ಎಂಬ ಕಲ್ಪನೆಯು ಭಿನ್ನ ತಳಹದಿಯ ತಾತ್ವಿಕ ಪರಿಕಲ್ಪನೆಗಳಾಗಿವೆ ಆದರೆ ನಾವಿದನ್ನು ಏಕತ್ರಗೊಳಿಸಿ ನೋಡುತ್ತಿದ್ದೇವೆ. ಈಗಾಗಲೇ ಸೂಚಿಸಲಾಗಿರುವಂತೆ ಪ್ರಭುತ್ವ ಎನ್ನುವುದು ಎಲ್ಲಾ ಸಾಮಾಜಿಕ ಅವಸ್ಥಾಂತರಗಳೊಂದಿಗೆ ರೂಪುಗೊಳ್ಳುವ ಒಂದು ಪ್ರಕ್ರಿಯೆಯಾಗಿದೆ.

ಉದಾಹರಣೆಗೆ ಭಾರತೀಯ ಫ್ಯೂಡಲ್ ಸೊಸೈಟಿಯಲ್ಲಿ ಪ್ರಭುತ್ವ ಮತ್ತು ಅಧೀನತೆಯ ಪ್ರಶ್ನೆಯು ಫ್ಯೂಡಲ್ ಸೊಸೈಟಿಯ ಲಕ್ಷಣಗಳಿಗೆ ನೇರವಾಗಿ ಸಂಬಂಧಿಸಿದೆ. ಊರಿನ ಜಮೀನುದಾರನು ಅಲ್ಲಿ ಎಲ್ಲವನ್ನು ಆಳಬಲ್ಲ. ಈರೀತಿಯ ಸಮಾಜದಲ್ಲಿ ಆಳಿಸಿಕೊಂಡವನು ಪ್ರಭುತ್ವವನ್ನು ಒಪ್ಪಿಕೊಳ್ಳುತ್ತಾನೆ. ಈ ಕಾರಣದಿಂದಲೇ ಗಾಂಧಿ ಸವಿನಯ ಶಾಸನೋಲ್ಲಂಘನೆಯ ಕಲ್ಪನೆಯನ್ನು ಮಂಡಿಸಿದರು.

> ಸಾಮೂಹಿಕ ಸವಿನಯ ಶಾಸನೋಲ್ಲಂಘನೆಯ ನಿಲುವೇ ಬೇರೆ. ಅದನ್ನು ಶಾಂತ ವಾತಾರಣದಲ್ಲಿ ಮಾತ್ರ ಉಪಯೋಗಿಸಬಹುದು. ಆ ಶಾಂತಿ ಶಕ್ತಿಯ ಶಾಂತಿಯಾಗಿರಬೇಕೇ ಹೊರತು ಅಶಕ್ತಿಯದಲ್ಲ; ಜ್ಞಾನಪೂರಿತವಾಗಿರಬೇಕೇ ಹೊರತು ಅಜ್ಞಾನದ್ದಲ್ಲ. ವೈಯಕ್ತಿಕ ಸವಿನಯ ಶಾಸನೋಲ್ಲಂಘನೆ ಪ್ರಾತಿನಿಧಿಕವಾಗಬಹುದು, ಎಷ್ಟೋ ಸಲ ಆಗುತ್ತದೆ. ವ್ಯಕ್ತಿಗಳು ತಾವು ಆಚರಿಸುವ ಉಲ್ಲಂಘನೆಯ ಪರಿಣಾಮವಾಗಿ ಸ್ವ-ಲಾಭ ಪಡೆಯಬೇಕೆಂದು ಅಪೇಕ್ಷಿಸುವರೆಂಬ ಅರ್ಥದಲ್ಲಿ ಸಾಮೂಹಿಕ ಸವಿನಯ ಶಾಸನೋಲ್ಲಂಘನೆಯು ಅನೇಕ ವೇಳೆ ಸ್ವಾರ್ಥದಿಂದ ಕೂಡಿರುತ್ತದೆ. ದಕ್ಷಿಣ ಆಫ್ರಿಕದಲ್ಲಿ ಕಾಲೆನ್‌ಬಾಕ್ ಮತ್ತು ಪೋಲಕ್ ಇವರುಗಳು ಪ್ರಾತಿನಿಧಿಕ ಸವಿನಯ ಶಾಸನೋಲ್ಲಂಘನೆಯನ್ನು ಮಾಡಿದರು. ಅವರು ಲಾಭ ಪಡೆಯಬೇಕಾದುದೇನೂ ಇರಲಿಲ್ಲ. ಅದೇ ಸಹಸ್ರಾರು ಜನ ಆಚರಿಸಿದಾಗ ಅವರಿಗೆ ಒಂದು ಸ್ವಲಾಭದಾಸೆ ಇತ್ತು. ಅದು ಕರಾರಿನಿಂದ ಬಿಡುಗಡೆ ಹೊಂದಿದ್ದ ಪುರುಷರು, ಸ್ತ್ರೀಯರು, ದೊಡ್ಡವರಾದ ಮಕ್ಕಳು ಇವರ ಮೇಲೆ ವಿಧಿತವಾಗಿದ್ದ ವಾರ್ಷಿಕ ತಲೆಗಂದಾಯ ವಜಾ ಆಗುವುದು ಎಂದು. ಸಾಮೂಹಿಕ ಸವಿನಯ ಶಾಸನೋಲ್ಲಂಘನೆಯಲ್ಲಿ ಪ್ರತಿಭಟನೆಕಾರರು ತತ್ವದ ಆಚರಣಾ ವಿಧಾನವನ್ನು ಅರಿತಿದ್ದರೆ ಸಾಕು. (ಸತ್ಯವಾಣಿ ಪುಟ. ೧೫೦)

ವಸಾಹತುಶಾಹಿ ಸಂದರ್ಭದಲ್ಲಿ ಪ್ರಭುತ್ವವನ್ನು ವಿರೋಧಿಸುವುದಕ್ಕೆ ಆಯ್ಕೆ ಮಾಡಿಕೊಂಡಿರುವ ಆಯುಧವೇ ರಾಷ್ಟ್ರೀಯತೆ. ಹೀಗಾಗಿ ರಾಷ್ಟ್ರೀಯತೆಯನ್ನು ಒಂದು ಪರಿಕಲ್ಪನೆಯಾಗಿ ಇಟ್ಟುಕೊಳ್ಳಬೇಕಾಗುತ್ತದೆ. ಇಲ್ಲಿ ಭಿನ್ನತೆಯಿದೆ.

ವಸಾಹತುಶಾಹಿ ಅನುಭವ ಲೋಕ ನಿರ್ಮಿಸಿದ ವಿನ್ಯಾಸವು ರಾಷ್ಟ್ರೀಯತೆಯನ್ನು ಒಂದು ಆರಾಧನೆಯ ರೂಪವಾಗಿ ಕಂಡಿತು. ಗುಲಾಮಿ ಸ್ಥಿತಿಯಿಂದ ವಿಮುಕ್ತಿಗೊಳ್ಳುವುದಕ್ಕೆ ಬೇಕಾದ ಒಂದು ಪರಿಭಾಷೆಯದು. ಆದರೆ ಇದು ತೀರಾ

ವೈಜ್ಞಾನಿಕವಾಗಿದೆ ಎಂದು ಹೇಳುವಂತಿಲ್ಲ. ಹಾಗೆ ನೋಡುವುದಿದ್ದರೆ ರಾಷ್ಟ್ರೀಯತೆಯಕಲ್ಪನೆಯು ಹೆಚ್ಚು ಭ್ರಮಾತ್ಮಕವಾದುದು. ಅದಕ್ಕೆ ಉತ್ಸಾಹದ ಪರಿಭಾಷೆ ಬೇಕಾಗುತ್ತದೆ.

> "ಭಾರತ ನಿಜಸ್ವಾತಂತ್ರ್ಯವನ್ನು ಹೊಂದಬೇಕಾದರೆ, ಅದರ ಮೂಲಕ ಜಗತ್ತೂ ಅದನ್ನು ಹೊಂದಬೇಕಾದರೆ, ಜನರು ಹಳ್ಳಿಗಳಲ್ಲಿ ವಾಸಿಸಬೇಕೆಂದೂ ಪಟ್ಟಣಗಳಲ್ಲಲ್ಲವೆಂದೂ, ಗುಡಿಸಿಲುಗಳಲ್ಲೆಂದೂ ಅರಮನೆಗಳಲ್ಲಲ್ಲವೆಂದೂ ಎಂಬ ಈ ಅಂಶವನ್ನು ಇಂದಲ್ಲ ನಾಳೆ ನಾವು ಅರಿಯಲೇಬೇಕಾಗುತ್ತದೆಂದು ನನಗೆ ಸ್ಪಷ್ಟವಾಗಿದೆ. ಕೋಟ್ಯಂತರ ಜನ ಪಟ್ಟಣಗಳಲ್ಲಿಯೂ ಅರಮನೆಗಳಲ್ಲಿಯೂ ಶಾಂತಿಯಿಂದ ಜೀವನ ನಡೆಸಲು ಎಂದಿಗೂ ಸಾಧ್ಯವಾಗಲಾರದು. ಆಗ ಅವರು ಹಿಂಸೆ ಮತ್ತು ಅಸತ್ಯಗಳ ಪಥ ಹಿಡಿಯಲೇಬೇಕಾಗುವುದು.
>
> ಸತ್ಯ ಮತ್ತು ಅಹಿಂಸೆಗಳಿಲ್ಲದೆ ಮಾನವತೆಗೆ ವಿನಾಶವೇ ಹೊರತು ಬೇರೆ ಏನೂ ಇಲ್ಲವೆಂದು ನನ್ನ ಅಭಿಮತ. ಗ್ರಾಮಜೀವನದ ಸರಳತೆಯಲ್ಲಿ ಮಾತ್ರ ನಾವು ಸತ್ಯ-ಅಹಿಂಸೆಗಳನ್ನು ಸಾಧಿಸಬಲ್ಲೆವು. ಈ ಸರಳತೆ ಚರಖಾ ಮತ್ತು ಅದು ಪ್ರತಿನಿಧಿಸುವ ತತ್ತ್ವದಲ್ಲಿ ಪ್ರಧಾನವಾಗಿ ಪ್ರತ್ಯಕ್ಷವಾಗುತ್ತದೆ. ಇಂದಿನ ಜಗತ್ತು ತಪ್ಪು ಮಾರ್ಗ ಹಿಡಿದಿದ್ದರೆ ಅದಕ್ಕಾಗಿ ನಾನು ಅಂಜಬೇಕಾಗಿಲ್ಲ. ಭಾರತವೂ ಇಂದಿನ ಜಗತ್ತಿನ ಪಥವನ್ನೇ ಹಿಡಿಯಬಹುದು; ಜ್ವಾಲೆಯ ಸುತ್ತ ಉಗ್ರವಾಗಿ ನರ್ತಿಸಿ ಅಂತ್ಯದಲ್ಲಿ ಮರಣವನ್ನಪ್ಪುವ ಪತಂಗದಂತೆ ಆದರೂ ಆಗಬಹುದು. ಆದರೆ, ನನ್ನಲ್ಲಿ ಜೀವದ ಉಸಿರು ಇರುವವರೆಗೂ ಭಾರತವನ್ನೂ ಸಮಗ್ರ ಲೋಕವನ್ನೂ ಅಂಥ ವಿನಾಶದಿಂದ ರಕ್ಷಿಸಲೆತ್ನಿಸುವುದು ನನ್ನ ಕರ್ತವ್ಯಕರ್ಮ. -ಗಾಂಧಿ (ಪತ್ರಗುಚ್ಛ ೨ ಪುಟ. ೮೧)

ಏಕಾಂತವಾದಿ ಚರಿತ್ರೆಕಾರರ ಪ್ರಕಾರ ಭಾರತೀಯ ಏಕಾಂತವಾದಿಗಳ ಸಾಧನೆಗೆ ರಾಷ್ಟ್ರೀಯತೆಯು ಸಂಬಂಧಪಟ್ಟಿತ್ತು. ಇದರಿಂದಾಗಿ ಬ್ರಿಟೀಷ್ ವಸಾಹತು ಆಡಳಿತಗಾರರಿಗೆ ಅದರ ಧನಾತ್ಮಕ ಅಂಶವು ಸೇರುತ್ತಿತ್ತು. ಪ್ರಭುತ್ವದ ಪರಿಭಾಷೆಯನ್ನು ಈ ಚರಿತ್ರೆಕಾರರು ಒಂದಲ್ಲ ಒಂದರ್ಥದಲ್ಲಿ ಗ್ರಹಿಸಿದಂತಿದೆ. ನವವಸಾಹತುವಾದಿ ಚರಿತ್ರೆಕಾರರು ಮತ್ತು ಈ ಏಕಾಂತವಾದಿ ಚರಿತ್ರೆಕಾರರು ರಾಷ್ಟ್ರೀಯ ಚಳುವಳಿಯನ್ನು ಒಂದು ರೀತಿಯಿಂದ ಸ್ವಭಾವದ ಚರ್ಚೆಯಾಗಿ ಮಾತ್ರ ರೂಪಿಸಿಕೊಂಡರು. ಅಂದರೆ ಇಡಿಯ ರಾಷ್ಟ್ರೀಯ ಚಳುವಳಿಯನ್ನೇ ಒಂದು ಮುಖ್ಯ ಕೇಂದ್ರವಾಗಿಟ್ಟುಕೊಂಡ

ಮತ್ತು ಅದರ ಮೂಲಕವಾಗಿ ಚರಿತ್ರೆಯ ಪರಿಕ್ರಮಗಳನ್ನು ಅರ್ಥಮಾಡಿಕೊಂಡ ಅಧ್ಯಯನದ ಗ್ರಹಿಕೆಯಿದು. ಈ ರೀತಿಯ ಚರಿತ್ರೆಯ ಕ್ರಮದಲ್ಲಿ ಪ್ರಭುತ್ವದ ಜೊತೆಗಿನ ಸಹಯೋಗ ಮತ್ತು ಸ್ಪರ್ಧೆ ಮುಖ್ಯಪರಿಭಾಷೆಯಾಗುತ್ತದೆ. ಏಕಾಂತವಾದಿ ಚರಿತ್ರೆಕಾರರು ಭಾರತೀಯ ರಾಷ್ಟ್ರೀಯ ಚಳುವಳಿಯನ್ನು ಒಂದು ಆದರ್ಶವಾದಿ ಚಳುವಳಿ ಎಂದು ಭಾವಿಸಿದ್ದಾರೆ.ಸ್ವಾತಂತ್ರ ಹೋರಾಟದ ಬ್ರಿಟೀಷ್ ಆಡಳಿತ ವಿರುದ್ಧನಡೆಸಿದ ಈ ರಾಷ್ಟ್ರೀಯ ಚಳುವಳಿಯು ಅತ್ಯುತ್ತಮ ಅಭಿವ್ಯಕ್ತಿ ಕ್ರಮವೆಂದು ಅವರು ಪ್ರತಿಪಾದಿಸುತ್ತಾರೆ. ಇದರ ಪರಿಣಾಮವೆ ಕೆಲ ವಿಶೇಷ ಚಳುವಳಿ.

೧೯೪೨ರ ಚಲೇಜಾವ್ ಚಳುವಳಿಯ ವೀರಯೋಧರಲ್ಲಿ ಅವಶ್ಯವಾಗಿ ನೆನಪಿಸಿಕೊಳ್ಳಬೇಕಾದವರು ಹಿಚಕಡದ ಗಾಂವಕಾರ ಬೀರಣ್ಣ ನಾಯಕರು. ಈ ಬೀರಣ್ಣ ನಾಯಕರ ಹೋರಾಟಕ್ಕೆ ಸ್ಫೂರ್ತಿಯಾದವಳು ಅವರ ಪತ್ನಿ ಲಕ್ಷ್ಮಕ್ಕ. ಚಳವಳಿಯ ಸಂದರ್ಭದಲ್ಲಿ ಅವಳ ಸಮಯ ಸೂಚಕತೆ, ಪ್ರಸಂಗಾವಧಾನ, ಸಲಹೆ ಕೊಡುವ ಕುಶಲತೆ ಹಾಗೂ ಮನೆ ವಾರ್ತೆಯ ಕುಶಲತೆಯನ್ನು ಪ್ರತ್ಯಕ್ಷ ಕಂಡು ಅನುಭವಿಸಿದ ಶ್ರೀ ದಯಾನಂದ ಪ್ರಭು ಅವರು ಬಹು ಧನ್ಯತೆಯಿಂದ ನೆನಸಿಕೊಳ್ಳುತ್ತಾರೆ.

ಪೋಲೀಸರು ಹಿಚಕಡ ಊರನ್ನು ಮುತ್ತಿಗೆ ಹಾಕಿದಾಗ ಲಕ್ಷ್ಮಕ್ಕ ಬಹು ಚುರುಕಾಗಿ ಹಿಂದಿನ ಬಾಗಿಲಿನಿಂದ ತೋಟಕ್ಕೆ, ತೋಟದಿಂದ ಗದ್ದೆ ಕಡೆಗೆ ಗದ್ದೆಯಿಂದ ಗುಡ್ಡದ ಕಡೆಗೆ ಸುದ್ದಿ ಮುಟ್ಟಿಸಿ ಚಳುವಳಿಗಾರರನ್ನು ಪೋಲೀಸರಿಂದ ಪಾರು ಮಾಡಿದ ಸಂದರ್ಭವನ್ನು ಕೂಡ ಶ್ರೀ ದಯಾನಂದ ಪ್ರಭು ಇಂದಿಗೂ ಬಹು ಹೆಮ್ಮೆಯಿಂದ ಹೇಳುತ್ತಾರೆ:

"ಮನೆಯ ಯಜಮಾನರು ಚಳುವಳಿಯಲ್ಲಿ ನಿರತರಾಗಿದ್ದಾಗ ಹೆಂಗಸರು ಮನೆಯ ಮೂಲೆ ಹಿಡಿದು ಕುಳಿತಿರುತ್ತಿದ್ದರೆ ಚಳುವಳಿ ಸುಸೂತ್ರವಾಗಿ ಸಾಗುತ್ತಿದ್ದಿಲ್ಲ. ಶ್ರೀ ದಯಾನಂದ ಪ್ರಭುರವರಿಗೆ ಲಕ್ಷ್ಮಕ್ಕ ಗಾರ್ಕಿಯ "ಮದರ್" ಕಾದಂಬರಿಯಲ್ಲಿ ಮುಖ್ಯ ಪಾತ್ರವಾದ "ಮದರ್" ಪಾತ್ರವನ್ನು ಹೋಲುತ್ತಾಳೆ. ಲಕ್ಷ್ಮಕ್ಕನ ಚಳವಳಿ ಕಾರ್ಯದ ಚಟುವಟಿಕೆಯನ್ನು ನೆನಪಿಸಿಕೊಳ್ಳುತ್ತಾ ಈ ರೀತಿ ಹೇಳುತ್ತಾರೆ. "ಲಕ್ಷ್ಮಕ್ಕ ಕೂಡ ಮನೆಯಲ್ಲಿ ಒಳ ಹೊರಗೆ ನಡೆದುಕೊಂಡು ಬೀರಣ್ಣ ನಾಯಕರ ಮುಂದಾಳುತನಕ್ಕೆ ಶೋಭೆ ತಂದಳು. ತನಗೆ ಮಕ್ಕಳಿಲ್ಲದಿದ್ದರೂ

ಗಂಡನಿಗೆ ತಾನೇ ಮದುವೆ ಮಾಡಿಸಿ, ಮಕ್ಕಳನ್ನು ಪಡೆದು ತನ್ನ ಮಕ್ಕಳನ್ನಾಗಿ ಮಾಡಿಕೊಂಡಳು ನಾವೆಲ್ಲರೂ ಸ್ವತಃ ಬೀರಣ್ಣ ನಾಯಕರನ್ನೊಳಗೊಂಡು ಅವಳ ಆಶ್ರಯದಲ್ಲಿ ವಾತ್ಸಲ್ಯದಲ್ಲಿ ನೆರವು ಪಡೆದ ಕಾರ್ಯಕರ್ತರೆಂಬಂತೆ ಅಥವಾ ಮಕ್ಕಳಂತೆ ನಡೆಯಿಸಿಕೊಂಡು ಹೋಗಿದ್ದ ನೆನಪು ಇನ್ನೂ ಹಸಿರಾಗಿದೆ. "ಚಳುವಳಿಗೆ ಸ್ಫೂರ್ತಿಯಾಗಿ, ಬೀರಣ್ಣ ನಾಯಕರಿಗೆ ಭಾಗ್ಯಲಕ್ಷ್ಮಿಯಾಗಿ, ಕಥೆಯಾಗಿ ಹೋದ ಲಕ್ಷ್ಮಕ್ಕನ ವ್ಯಕ್ತಿತ್ವಕ್ಕೆ ಶ್ರೀ ದಯಾನಂದ ಪ್ರಭು ಅವರ ಮಾತು ಮುತ್ತುಪೋಣಿಸಿದಂತೆ. ಇಂಥ ಮಾತೆಯರನ್ನು ಮರೆಯುವುದಾದರೂ ಹೇಗೆ? ಅನೇಕ ಸ್ತ್ರೀಯರು ಈ ಬಗೆಯಾಗಿ ಚಳುವಳಿಯ ಭೂಗತ ಕಾರ್ಯಕರ್ತರಾಗಿ ನೆರವಾಗಿ ಚಳುವಳಿಯ ಅಪೂರ್ವ ಯಶಸ್ಸಿಗೆ ಕಾರಣರಾದರು.

ರಂಗನಾಥ ದಿವಾಕರರು ತಮ್ಮ "ಕರನಿರಾಕರಣೆಯ ವೀರಕಥೆ"ಯಲ್ಲಿ ನಾಡವರ ಸ್ತ್ರೀಯರ ಕುರಿತು ಹೇಳಿದ ಮಾತುಗಳು ಉಲ್ಲೇಖನೀಯವಾಗಿದೆ. "ನೆರೆಮನೆಯ ಕಟ್ಟೆಯನ್ನು ಕೂಡ ಎಂದಿಗೂ ಏರಿರದ ಸುಗುಣ ಸಂಪನ್ನೆಯರಾದ ಮುಗ್ಧ ಕುಲವಧುಗಳು ಪೇಟೆಯಲ್ಲಿ ನಿಂತು ಪೋಲೀಸರ ಲಾಠಿಯ ಏಟಿಗೆ ತಲೆಯೊಡ್ಡಿದುದು ಪ್ರಾಣಾಂತಿಕ ನೋವಾದರೂ, ಕೈಯಲ್ಲಿ ಹಿಡಿದ ರಾಷ್ಟ್ರಧ್ವಜವನ್ನು ಬಿಡದೆ ಮೂರ್ಛೆಹೋಗುವ ವೀರಶ್ರೀಯನ್ನು ತೋರಿದುದು ಕನಸಿನ ರಾಜ್ಯದಲ್ಲಿ ಅಲ್ಲ. ಮುದ್ದು ಮಕ್ಕಳನ್ನು ಅರೆಗಳಿಗೆ ಬಿಟ್ಟಿರಲಾರದ ಮಾತೆಯರು, ತಮ್ಮ ಮೋಹವನ್ನು ಬದಿಗಿರಿಸಿ ಉಪ್ಪಿನ ಸತ್ಯಾಗ್ರಹ, ಜಂಗಲ ಸತ್ಯಾಗ್ರಹ, ಕರಾಳ ಕಾನೂನು ಕಟ್ಟಳೆಗಳ ಉಲ್ಲಂಘನೆ ಮುಂತಾದವುಗಳನ್ನು ಮಾಡಿ ನಗುನಗುತ್ತ ಜೇಲಿಗೆ ಹೋದುದು, ಪೋಲೀಸರ ಕಿರುಕುಳವನ್ನು ಸಹಿಸಿಕೊಂಡಿರುವುದು ಪ್ರತ್ಯಕ್ಷ ನಡೆದ ಸಂಗತಿ. ಕರನಿರಾಕರಣೆ ಮಾಡಿದವರ ಆಸ್ತಿಯನ್ನು ಕೊಂಡವರ ಹೃದಯ ಪರಿವರ್ತನೆಗಾಗಿ ಭಗಿನಿಯರು ಅವರ ಮನೆಯ ಮುಂದೆ ಉಪವಾಸ ಧರಣೆಗೆ ಕುಳಿತರು. ಪೋಲೀಸರ ಬೈಗುಳ ಸುರಿಮಳೆ, ಲಾಠಿಯ ಏಟುಗಳನ್ನು ತಿನ್ನುತ್ತಾ, ಒಂದಲ್ಲ, ಎರಡಲ್ಲ, ಕೆಲ ಪ್ರಸಂಗಗಳಲ್ಲಿ ಹತ್ತಿಪ್ಪತ್ತು ದಿನಗಳವರೆಗೆ ಅನ್ನ ಬಿಟ್ಟು ಸತ್ಯಾಗ್ರಹ ಮಾಡಿದರು. ತಮ್ಮ ಪ್ರಾಣ ಪಕ್ಷಿಯು ಹಾರಿಹೋಗುವ ಕಾಲ ಸನ್ನಿಹಿತವಾದರೂ ಹಿಡಿದ ಸತ್ಯಾಗ್ರಹ ಬಿಡದೆ ಕಲ್ಲಿನಂಥ ಹೃದಯಗಳನ್ನು ಸಹ ಕರಗಿಸಿದರು. ಕನ್ನಡದ ಈ ವೀರಮಾತೆಯರು ಪ್ರತ್ಯಕ್ಷ ಇಂಥ ಅದ್ಭುತ ತ್ಯಾಗ ಬಲಿದಾನ ಮಾಡಿ ತೋರಿಸಿದ್ದು ಚಿರಸ್ಮರಣೀಯವಾಗಿಲ್ಲವೇ?"

(ಶಾಂತಾರಾಮ ನಾಯಕ, ಹಿಚಕಡ ೨೦೦೯
ಸ್ವಾತಂತ್ರ್ಯ ಹೋರಾಟದ ಹೊರಳು ನೋಟ ಪುಟ. ೧೦೭)

ಆಗ ನಡೆದ ರಾಷ್ಟ್ರೀಯ ಚಳುವಳಿಯನ್ನು ಒಂದು ಚೌಕಟ್ಟಾಗಿ ಇಟ್ಟುಕೊಂಡ ವಿದ್ವಾಂಸರು ಅದು ಒಳಗೊಂಡಿದ್ದ ಜನಪ್ರಿಯ ಶೈಲಿಯ ರಾಜಕಾರಣವನ್ನು ತೀವ್ರವಾಗಿ ಚರ್ಚಿಸುವುದಿಲ್ಲ. ಉದಾಹರಣೆಗೆ 'ಚಲೆಜಾವೊ' ಚಳುವಳಿಯು ಚರಿತ್ರೆಯಲ್ಲಿ ಜನಪ್ರಿಯವಾಯಿತು. ಆದರೆ ಇದನ್ನು ಹೊರತುಪಡಿಸಿದ ಅನೇಕ ಚಳುವಳಿಗಳು ಭಾರತದಲ್ಲಿ ನಡೆದವು. ಅದರ ಬಗೆಗೆ ಏಕಾಂತವಾದಿ ಚರಿತ್ರೆಕಾರರು ಹೆಚ್ಚು ಚರ್ಚಿಸಲು ತೊಡಗುವುದಿಲ್ಲ. ಹೀಗಾಗಿ ಏಕಾಂತವಾದಿ ಚರಿತ್ರೆಯ ಪರಿಕ್ರಮದಲ್ಲಿ ಕೆಲವು ಗ್ರಹಿಕೆಯ ಮಿತಿಗಳಿವೆ. ಇದರೊಂದಿಗೆ ಗಮನಿಸಬೇಕಾದ ಅಂಶವೆಂದರೆ ನಿರ್ವಸಾಹತುರಾಜಕಾರಣವು ರಾಷ್ಟ್ರೀಯತೆಯ ಪ್ರಶ್ನೆಗೆ ಕಾರಣವಾಯಿತು. ಬ್ರಿಟೀಷ್ ರಾಜಸತೆಯು ನಿರ್ಮಿಸಿದ ಭಾವನಾತ್ಮಕ ಒತ್ತಡವು ರಾಷ್ಟ್ರೀಯ ಪರಿಕಲ್ಪನೆಗೆ ಪೂರಕವಾಯಿತು. ಈ ರಾಷ್ಟ್ರೀಯ ಚಳುವಳಿಯು ತನ್ನ ಹಿಂದಿನ ಆಗು–ಹೋಗುಗಳ ಬಗೆಗೆ: ತನ್ನ ರಾಷ್ಟ್ರದ ಪರಿಕಲ್ಪನೆಯ ಮಾರ್ಕ್ಸವಾದಿಗಳ ಪ್ರಕಾರ ದೇಶವೆಂಬ ಗ್ರಹಿಕೆಯ ಕನಸಿಗೂ ಖಾಸಗಿ ಆಸ್ತಿಯ ಪರಿಕಲ್ಪನೆಗೂ ದ್ವಂದ್ವಾತ್ಮಕಾದ ಸಂಬಂಧವಿದೆ. ಮಾರ್ಕ್ಸ್ State ಎಂಬುದನ್ನು ವಿವರಿಸುವಾಗ ಅದಕ್ಕೆ ಆರ್ಥಿಕ ಕಾರಣಗಳನ್ನು ಕೊಟ್ಟರೆ ಹೆಗಲ್ ಅದಕ್ಕೆ 'ನಾಗರಿಕ ಸಮಾಜದ ಸತ್ಯ' (Truth of civil society) ಎನ್ನುವ ಕಲ್ಪನೆ ಕೊಡುತ್ತಾನೆ. ಹೀಗಾಗಿ ಒಂದು ನಿರ್ದಿಷ್ಟ ದೇಶದ ಪರಿಕಲ್ಪನೆಯು ರಾಜಕೀಯ, ನೈತಿಕ ಮತ್ತು ನ್ಯಾಯಾಂಗ ಬದ್ಧವಾದ ಸ್ವಾತಂತ್ರ್ಯದ ಅಪೇಕ್ಷೆಯನ್ನು ಇಷ್ಟ ಪಡುತ್ತದೆ.

> 'ಅನಾಗರಿಕ ಜನಾಂಗಗಳು' ಎಂಬ ಪದದ ವ್ಯಾಖ್ಯೆಯು ಸಂಬಂಧಿಸಿದ ಭಾರತೀಯರಿಗೆ ಮತ್ತು ಅದಕ್ಕಿಂತ ಹೆಚ್ಚಾಗಿ ಅವರ ಸಂತತಿಯವರಿಗೆ ಎಸಗಿರುವ ಅವಮಾನವೇ ಆಗಿದೆ. ನಾಗರಿಕನೆಂದು ಹಕ್ಕು ಸಾಧಿಸುವವನು ಚುರುಕು ಬುದ್ಧಿಯ ಶ್ರಮಿಕನಾಗಿರಬೇಕೆಂಬುದು ನಾಗರಿಕತೆಯ ಒಂದು ನಿಶ್ಚಿತ ಪ್ರಮಾಣವೇ ಆಗಿದೆ. ಈತನು ಶ್ರಮದ ಘನತೆಯನ್ನು ಅರ್ಥಮಾಡಿಕೊಳ್ಳಬೇಕು ಮತ್ತು ಅವನ ಕಾರ್ಯವು ಅವನ ಸಮುದಾಯದ ಹಿತಸಕ್ತಿಗಳನ್ನು ಮುನ್ನಡೆಸುವಂತೆ ಇರಬೇಕು. ಈ ಪ್ರಮಾಣವನ್ನು ಅತ್ಯಂತ ಕೆಳದರ್ಜೆಯ ಕರಾರು ಬದ್ಧ ಭಾರತೀಯನಿಗೆ ಅನ್ವಯಿಸಿ ನೋಡಿ, ಅವನು ಅದನ್ನು ಪಡೆದಿದ್ದಾನೆ. ಹಾಗಿರುವಾಗ ಅವನನ್ನು ಅನಾಗರಿಕ ಜನಾಂಗಕ್ಕೆ ಸೇರಿದವನೆಂದು ಏಕೆ ಕರೆಯಬೇಕು? ಹಾಗಿದ್ದರೂ ಕರಾರಿನ ಪ್ರಕಾರ ವಸಾಹತಿನಲ್ಲಿ ಸೇವೆ ಸಲ್ಲಿಸುತ್ತಿದ್ದಾನೆ ಎಂಬ ಕಾರಣದಿಂದ ಭಾರತೀಯ

> ಕಾರ್ಮಿಕನನ್ನು ಅನಾಗರಿಕನೆಂದು ಕರೆಯುವುದು ಉಚಿತವೆನ್ನುವುದಾದರೆ ಅವನ ಸಂತತಿಯವರ ಮೇಲೆ ಬಹಿಷ್ಕಾರವನ್ನು ಏಕೆ ಹೇರಬೇಕು? ಗವರ್ನರರು ಮತ್ತು ಹಿಂದಿನ ಆಡಳಿತಾಧಿಕಾರಿಗಳು ಯಾವ ಮೇಲು ದರ್ಜೆಯ ಭಾರತೀಯ ಶಾಲೆಯ ಮಕ್ಕಳನ್ನು ಮಿತಿ ಮೀರಿ ಹೊಗಳಿದ್ದರೋ ಮತ್ತು ಯಾರ ಬಗ್ಗೆ ತಮ್ಮ ವಾಕ್ಚತುರತೆಯ ಪದಗಳನ್ನು ಬಳಸಿ ಮಾತಾಡಿದ್ದರೋ, ಅದು ಕರಾರಿನಡಿಯಲ್ಲಿ ಸೇವೆ ಸಲ್ಲಿಸುತ್ತಿರುವ ಅನೇಕ ಭಾರತೀಯರ ಮಕ್ಕಳನ್ನು ಒಳಗೊಂಡಿದೆ. ಈ ಮಕ್ಕಳು ಯಾವುದೇ ಸಮುದಾಯಕ್ಕಾದರೂ ಕೀರ್ತಿ ತರುವಂತಹವರು. ಅವರು ಚತುರಮತಿಗಳಾಗಿದ್ದಾರೆ ಮತ್ತು ಉದಾತ್ತ ಗುರಿಯುಳ್ಳ ಶಿಕ್ಷಣವನ್ನು ಪಡೆಯುತ್ತಿದ್ದಾರೆ. ಅವರಿಗೆ 'ಅನಾಗರಿಕ ಜನಾಂಗಕ್ಕೆ ಸೇರಿದವರು' ಎಂದು ಗುರುತು ಚೀಟಿ ಹಚ್ಚುವುದು ಉಚಿತವೇ? ಅಂತಹ ಭಾರತೀಯರು ಮತ್ತು ಇತರರ ನಡುವೆ ಇರುವ ಭಿನ್ನತೆಯು ಕೇವಲ ದೈವಯೋಗವೆನ್ನುವಂತಿದೆ. ಏಕೆಂದರೆ ಕರಾರಿನಡಿಯಲ್ಲಿ ಸೇವೆ ಸಲ್ಲಿಸುತ್ತಿರುವ ಅನೇಕ ಭಾರತೀಯರು ತಮ್ಮ ಪ್ರಯಾಣದ ಶುಲ್ಕವನ್ನು ತೆತ್ತು ಸ್ವತಂತ್ರ ಪುರುಷರಂತೆ ವಸಾಹತನ್ನು ಪ್ರವೇಶಿಸಿದ ಭಾರತೀಯರಷ್ಟೇ ಉತ್ತಮವಾಗಿದ್ದಾರೆ ಎಂದು ಈ ಮಸೂದೆಯನ್ನು ರೂಪಿಸಿರುವವರಿಗೆ ನಾವು ಭರವಸೆಯನ್ನು ನೀಡುತ್ತೇವೆ. ಖಂಡಿತವಾಗಿಯೂ ಏನೇ ಆದರೂ ಕರಾರಿನಡಿಯಲ್ಲಿ ಸೇವೆ ಸಲ್ಲಿಸುವ ಭಾರತೀಯನು ಸ್ವತಂತ್ರ ಭಾರತೀಯನಿಗಿಂತಲೂ ಉತ್ತಮವಾದ ಉಪಚಾರಕ್ಕೆ ಅರ್ಹನಾಗಿದ್ದಾನೆ. ಏಕೆಂದರೆ ಕರಾರಿನಡಿಯಲ್ಲಿ ಸೇವೆ ಸಲ್ಲಿಸುವ ಭಾರತೀಯನನ್ನು ವಸಾಹತಿಗೆ ಬರಲು ಆಹ್ವಾನಿಸಲಾಗಿತ್ತು ಮತ್ತು ಅವನ ಮನ ಒಲಿಸಲಾಗಿತ್ತು. ಅವನು ಇದರ ಅಭ್ಯುದಯಕ್ಕೆ ಮಾಡಿರುವ ಕೊಡುಗೆ ಏನೂ ಕಡಿಮೆಯದಲ್ಲ. (ಮಹಾತ್ಮ ಕೃತಿ ಸಂಚಯ ಸಂಪುಟ ೪ ಪುಟ. ೫೧೧೫)

ಗಾಂಧಿ ಇಲ್ಲಿ ನಾಗರಿಕ ಮತ್ತು ಅನಾಗರಿಕ ಎಂಬ ಪದಗಳ ಹಿಂದಿರುವ ಯಜಮಾನಿಕೆಯ ದೃಷ್ಟಿಕೋನವನ್ನು ಕಟುವಾಗಿ ಟೀಕಿಸಿದ್ದಾರೆ. ಅನಾಗರಿಕವೆಂಬ ಗುರುತು ಚೀಟಿ ಹಚ್ಚುವುದು ಉಚಿತವಲ್ಲ ಎಂಬುದು ಅವರ ನಿಲುವಾಗಿದೆ.

'ರಾಷ್ಟ್ರ'ವೆಂದು ಮಾತನಾಡಲು ಶುರು ನೂಡಿದರೆ ಆಯಾ ರಾಷ್ಟ್ರದ ಒಬ್ಬ ವ್ಯಕ್ತಿ ಏನಾಗಿರುತ್ತಾನೆ? ಅವನೊಬ್ಬ ಸಾಮಾನ್ಯ ಪ್ರಜೆ. ಕುಟುಂಬದ ಸದಸ್ಯನಾಗಿರುವುದಕ್ಕೂ ರಾಜ್ಯದ ಪ್ರಜೆಯಾಗಿರುವುದಕ್ಕೂ ವ್ಯತ್ಯಾಸವಿದೆ. ಕುಟುಂಬದಲ್ಲಿ ನೈತಿಕ ಪ್ರಶ್ನೆಗಳಿರುತ್ತವೆ.

ಆದರೆ ರಾಜ್ಯದ ಪ್ರಜೆಯೆನ್ನುವ ಪರಿಕಲ್ಪನೆಯಲ್ಲಿ 'ಅಂತಿಮ ಸತ್ಯ' 'ವಿಶ್ವಪರಿಕಲ್ಪನೆ' ಮೊದಲಾದವುಗಳು ಮುಖ್ಯವಾಗಿರುತ್ತವೆ. ಕುಟುಂಬದ ಸದಸ್ಯರಲ್ಲಿ ಪರಸ್ಪರ ಭಾವನಾತ್ಮಕ ಒಲವು ಮುಖ್ಯವಾದರೆ, ರಾಜಕಾರಣ ಮತ್ತು ಸಂವಿಧಾನದ ಪರಿಭಾಷೆಗಳು ಮುಖ್ಯವಾಗಿರುವ ರಾಜ್ಯದ ವ್ಯವಸ್ಥೆಯು ಅದಕ್ಕಿಂತ ಭಿನ್ನವಾಗುತ್ತದೆ.

> **ನಮ್ಮ ದೇಶಕ್ಕಾಗಿ ನಾನು ತ್ಯಾಗ ಮಾಡಲಾರದುದು. ಈ ಜಗತ್ತಿನಲ್ಲಿ ಏನೂ ಇಲ್ಲ – ಎರಡರ ಹೊರತು. ಅವು ಸತ್ಯ ಮತ್ತು ಅಹಿಂಸೆ. ಇಡೀ ಜಗತ್ತನ್ನೇ ನನ್ನ ಮುಂದಿಟ್ಟರೂ ಈ ಎರಡನ್ನು ನಾನು ಬಿಡಲಾರೆ. ಏಕೆಂದರೆ ನನ್ನ ಪಾಲಿಗೆ ಸತ್ಯವೇ ದೇವರು. ಸತ್ಯಸಾಧನೆಗೆ ಅಹಿಂಸೆಯಲ್ಲದೆ ಅನ್ಯಪಥ ಇಲ್ಲ. ಸತ್ಯ ಅಥವಾ ಭಗವಂತನನ್ನು ಬಲಿಗೊಟ್ಟು ಭಾರತಕ್ಕೆ ಸೇವೆ ಸಲ್ಲಿಸುವ ಆಲೋಚನೆಯನ್ನು ನಾನು ಮಾಡಲಾರೆ. ನಾನು ಬಲ್ಲೆ. ಸತ್ಯವನ್ನು ಕೈ ಬಿಡಬಲ್ಲವನು ತನ್ನ ದೇಶವನ್ನೂ ಕೈ ಬಿಡಬಲ್ಲ. ಆಪ್ತೇಷ್ಟರನ್ನೂ ಕೈ ಬಿಡಬಲ್ಲ. ನನ್ನಾತ್ಮ ಮತ್ತು ನನ್ನ ಕರ್ತ ಇಬ್ಬರೂ ಮೆಚ್ಚುವಂತೆ ನಾನು ಹೋದೆಡೆಯೆಲ್ಲ ನನ್ನ ಕರ್ಮಕ್ಷೇತ್ರದ ಗಾಯತ್ರಿಗಳಾದ ಈ ನನ್ನ ಧರ್ಮಸೂತ್ರಗಳನ್ನು ಸಾರುತ್ತ ಹೋಗುತ್ತೇನೆ.**
>
> **(ಗೀತಾಮಾತೆ – ಮುನ್ನುಡಿ ಪುಟ. ೧೫)**

ರಾಷ್ಟ್ರೀಯತೆಯ ವ್ಯಾಖ್ಯಾನವು ಭಾರತೀಯ ಪರಿಸರದಲ್ಲಿ ಒಂದು ರೀತಿಯಿಂದ ಆಧುನಿಕ ವಿಚಾರಧಾರೆಯ ಪ್ರೇರಣೆಯಿಂದ ರೂಪ ತಳೆದಿದೆ. ಇದು ಪರಿಪೂರ್ಣವಾಗಿ ಭಾರತೀಯ ಸಾಂಪ್ರದಾಯಿಕ ಆಲೋಚನಾ ಕ್ರಮದಿಂದ ಬಂದಿರುವ ಪ್ರತಿಕ್ರಿಯೆಯಲ್ಲ. ವಸಾಹತುಶಾಹಿ ಅನುಭವದಲ್ಲಿ ಪರಿಕಲ್ಪಿತವಾಗಿರುವ ರಾಷ್ಟ್ರೀಯತೆಯ ವ್ಯಾಖ್ಯಾನಗಳು ಒಂದು ನಿರ್ದಿಷ್ಟ ವೈಚಾರಿಕ ಪ್ರಣಾಳಿಕೆಯನ್ನು ಒಪ್ಪಿಕೊಂಡಿರುವಂಥದ್ದು. ಇದರಿಂದಾಗಿ ವಸಾಹತುಶಾಹಿ ಅನುಭವದಲ್ಲಿ ಬಂದಿರುವ ವಿಚಾರವಾದಿ ಗ್ರಹಿಕೆಗಳು ನಿರ್ದಿಷ್ಟ ಪರಿಭಾಷೆಗಳನ್ನು ಸಂಯೋಜಿಸುವಪ್ರಯತ್ನವನ್ನು ಮಾಡಿತು. ಸಮಾನತೆ ಮತ್ತು ಸ್ವಾತಂತ್ರ್ಯ ಎನ್ನುವುದು ರಾಷ್ಟ್ರೀಯತೆಯ ಆಂದೋಲನದಲ್ಲಿ .ವಸಾಹತುಶಾಹಿ ಅನುಭವದಲ್ಲಿ ಹೊಸ ಉತ್ಪಾದನಾ ಸಂಬಂಧಗಳು ರೂಪುಗೊಂಡಿತು. ಒಂದು ಅಧ್ಯಯನದ ಪ್ರಕಾರ ವಸಾಹತುಶಾಹಿ ಅನುಭವದಲ್ಲಿ ಪ್ರಾರಂಭವಾದ ಕೈಗಾರಿಕೋದ್ಯಮಗಳು ಭಾರತೀಯ ಬೂರ್ಜ್ವಾವರ್ಗಗಳ ನಿರ್ಮಾಣಕ್ಕೆ ಕಾರಣವಾಯಿತು. ಈ ಹೊಸ ಉತ್ಪಾದನಾ ಸಂಬಂಧಗಳ ಪರಿಣಾಮವಾಗಿ ಪ್ರಕೃತಿಯ ಆರಾಧನೆ, ಸಂಪ್ರದಾಯ, ಮೊದಲಾದವುಗಳ ಬಗೆಗಿನ ಕಲ್ಪನೆಗಳು ಬದಲಾದವು. ಆಗಿನ ಸಂದರ್ಭದಲ್ಲಿ ಗಾಂಧಿಯವರ ಪ್ರತಿಕ್ರಿಯೆಯು ಗಮನಾರ್ಹವಾಗಿದೆ.

ಕೈಗಾರಿಕೀಕರಣ ಮಾನವಕುಲಕ್ಕೇ ಅಭಿಶಾಪವೆಂದು ನನ್ನ ಅಂಜಿಕೆ. ಒಂದು ರಾಷ್ಟ್ರದಿಂದ ಇನ್ನೊಂದರ ಶೋಷಣ ಎಲ್ಲ ಕಾಲಕ್ಕೂ ನಡೆಯುವುದು ಸಾಧ್ಯವಿಲ್ಲ. ಕೈಗಾರಿಕೀಕರಣ ಶೋಷಣೆಯು ನಿಮ್ಮ ಸಾಮರ್ಥ್ಯವನ್ನೇ ಅವಲಂಬಿಸುತ್ತದೆ; ವಿದೇಶೀ ಮಾರುಕಟ್ಟೆ ನಿಮಗೆ ತೆರವಾಗಿರಬೇಕು, ಪ್ರತಿಸ್ಪರ್ಧಿಗಳಿರಬಾರದು. ಈ ಅಂಶಗಳು ದಿನೇ ದಿನೇ ಕಡಿಮೆಯಾಗುತ್ತಿರುವ ಕಾರಣ ಇಂಗ್ಲೆಂಡಿನಲ್ಲಿ ನಿರುದ್ಯೋಗ ದಿನದಿನಕ್ಕೆ ಹೆಚ್ಚುತ್ತಿದೆ. ಭಾರತದ ಬಹಿಷ್ಕಾರವಾದರೋ ಸಣ್ಣ ಚಿಗಟದ ಕಡಿತ. ಇಂಗೆಂಡಿನ ಪರಿಸ್ಥಿತಿಯೇ ಹೀಗಾದರೆ ಭಾರತದಂಥ ವಿಶಾಲ ರಾಷ್ಟ್ರ ಕೈಗಾರಿಕೀಕರಣದಿಂದ ಲಾಭ ಪಡೆಯದು. ಭಾರತ ಇತರ ರಾಷ್ಟ್ರಗಳನ್ನು ಶೋಷಿಸತೊಡಗಿದರೆ – ಕೈಗಾರಿಕೀಕರಣವಾದರೆ ಹಾಗೆ ಮಾಡಲೇಬೇಕು – ಇತರ ರಾಷ್ಟ್ರಗಳಿಗೆ ಅಭಿಶಾಪವಾದೀತು, ಇಡೀ ಜಗತ್ತಿಗೇ ಕುತ್ತಾದೀತು. ಇತರ ರಾಷ್ಟ್ರಗಳನ್ನು ಶೋಷಿಸುವ ಸಲುವಾಗಿ ಭಾರತದ ಕೈಗಾರಿಕೀಕರಣವನ್ನು ನಾನೇಕೆ ಯೋಚಿಸಲಿ? ಈ ಸನ್ನಿವೇಶದ ದುರಂತ ಲಕ್ಷಣವನ್ನು ಕಾಣಿರಾ? ಇಂಗ್ಲೆಂಡ್ ತನ್ನ ೩೦ ಲಕ್ಷಮಂದಿ ನಿರುದ್ಯೋಗಿಗಳಿಗೇ ಉದ್ಯೋಗ ಕೊಡಲು ಅಸಾಧ್ಯವಾಗಿದೆ, ಅವರ ಅತ್ಯುನ್ನತ ಬುದ್ಧಿವಂತರೇ ಇದಕ್ಕೆ ಪರಿಹಾರ ಸೂಚಿಸಲು ಸೋತಿದ್ದಾರೆ. ಆದರೆ ಭಾರತ ತನ್ನ ೩೦ ಕೋಟಿ ಜನರಿಗೆ ಕೆಲಸ ಕೊಡಲು ಸಾಧ್ಯ. ಕೈಗಾರಿಕೀಕರಣದ ಭವಿಷ್ಯ ಕರಾಳವಾಗಿದೆ. ಇಂಗ್ಲೆಂಡಿಗೆ ಅಮೆರಿಕ, ಜಪಾನ್, ಫ್ರಾನ್ಸ್, ಜರ್ಮನಿಗಳು ಯಶಸ್ವೀ ಪ್ರತಿಸ್ಪರ್ಧಿಗಳಾಗುತ್ತಿದ್ದಾರೆ. ಭಾರತದಲ್ಲಿನ ಹಿಡಿಯಷ್ಟು ಗಿರಣಿಗಳೂ ಅವರಿಗೆ ಪ್ರತಿಸ್ಪರ್ಧಿಯೇ. ಭಾರತದಲ್ಲಿ ಜಾಗೃತಿ ಉಂಟಾಗಿರುವಂತೆಯೇ ಇನ್ನೂ ಹೆಚ್ಚು ನೈಸರ್ಗಿಕ, ಖನಿಜದ ಹಾಗೂ ಮಾನವಬಲದ ಸಂಪನ್ಮೂಲಗಳಿರುವ ದಕ್ಷಿಣ ಆಫ್ರಿಕದಲ್ಲೂ ಜಾಗೃತಿ ಉಂಟಾದೀತು. ಬಲಶಾಲಿ ಇಂಗ್ಲಿಷರು ಆಫ್ರಿಕದ ಬಲಶಾಲಿ ಜನಾಂಗಗಳೆದುರು ಕುಬ್ಜರಾಗಿ ಕಾಣುತ್ತಾರೆ. ಆಫ್ರಿಕನರು ಉದಾತ್ತ ಕಾಡುಜನ ಎಂದಿರಿ ನೀವು. ನಿಜಕ್ಕೂ ಉದಾತ್ತರು, ಆದರೆ ಕಾಡುಜನರಲ್ಲ. ಕೆಲವೇ ವರ್ಷಗಳಲ್ಲಿ ಆಫ್ರಿಕ, ತಮ್ಮ ಸರಕುಗಳನ್ನು ಇಳಿಸುವ ಗಿರಾಕಿ ಸ್ಥಾನವಾಗದಿರುವುದನ್ನು ಪಾಶ್ಚಾತ್ಯ ರಾಷ್ಟ್ರಗಳು ಕಾಣಬೇಕಾದೀತು. ಪಶ್ಚಿಮ ರಾಷ್ಟ್ರಗಳಿಗೇ ಕೈಗಾರಿಕೀಕರಣದ ಭವಿಷ್ಯ ಕರಾಳವಾಗಿರುವಾಗ ಭಾರತಕ್ಕೆ ಅದು ಇನ್ನೂ ಕರಾಳತರವಾಗದೇ?

ಯಂಗ್ ಇಂಡಿಯಾ ೧೨–೧೧–೩೧. ಪು– ೩೫೫. (ಕೈಗಾರೀಕರಣದ ಕೆಡುಕು ಪುಟ. ೨೭೧)

ಈ ಏಜನ್ಸಿಗಳನ್ನು ವಸಾಹತುಶಾಹಿ ಆಡಳಿತ ವ್ಯವಸ್ಥಿತವಾಗಿ ರೂಪಿಸಿ ನಡೆಸಿಕೊಂಡಿತು. ಆ ಮೂಲಕವಾಗಿ ತಮ್ಮ ಯಜಮಾನಿಕೆಯನ್ನು ಶಾಶ್ವತಗೊಳಿಸಿಕೊಳ್ಳಲು ಮುಂದಾಯಿತು. ಅವರು ತಮ್ಮೊಂದಿಗೆ ತಂದ ಪೋಲಿಸ್ ವ್ಯವಸ್ಥೆ, ಕಾನೂನು, ಸಂವಿಧಾನ ಇತ್ಯಾದಿಗಳು ಕೂಡ ಭಾರತೀಯರನ್ನು ಅಧೀನದಲ್ಲಿಯೇ ಇರಿಸಿಕೊಂಡು ಹೋಗಲು ಸಹಾಯಕವಾದವು. ವಸಾಹತುಶಾಹಿ ಕಾಲಘಟ್ಟದಲ್ಲಿ ಬೇರೆ ಬೇರೆ ರೀತಿಯ ಅಭ್ಯಾಸ ಕ್ರಮಗಳು ಹುಟ್ಟಿಕೊಂಡವು. ಇದೇ ಸಂದರ್ಭದಲ್ಲಿ ಆಳುವ ವರ್ಗವು ಹುಟ್ಟುಹಾಕಿದ ಜ್ಞಾನ ಪರಂಪರೆಯೊಂದಿಗೆ ಜನರು ಅನುಸಂಧಾನ ನಡೆಸಬೇಕಾಗಿ ಬಂತು. ಹಾಗೆಂದು ಆಗಿನ ಪ್ರಭುತ್ವ ಹೇರಿದ ಅಥವಾ ವ್ಯಾಖ್ಯಾನಿಸಿದ ರೀತಿಯಲ್ಲಿ ಕೆಳ ಸಂಸ್ಕೃತಿಯು ಹಾಗೆಯೇ ಕೆಳವರ್ಗದ ಸಂಸ್ಕೃತಿಯು ರಾಜಕೀಯ ಯಜಮಾನಿಕೆಗಿಂತ ಭಿನ್ನವಾಗಿರುತ್ತದೆ. ಕೆಳವರ್ಗದ ಮೌನವು ಕುತೂಹಲಕಾರಿಯಾಗಿದೆ. ಅನೇಕ ಸಾಮಾನ್ಯ ಜನರಿಗೆ ರಾಷ್ಟ್ರೀಯ ಹೋರಾಟವೆಂದರೆ ಏನೋ ಅಂತಲೇ ತಿಳಿದಿರಲಿಲ್ಲ. ಆದುದರಿಂದಲೇ 'ಸಬ್ ಆಲ್ಟ್ರಾನ್' ಅಧ್ಯಯನ ಕ್ರಮ ಚರಿತ್ರೆಯನ್ನು ಬೇರೆ ರೀತಿಯಲ್ಲಿ ನೋಡುತ್ತದೆ. ರಾಷ್ಟ್ರೀಯತೆಯ ಕಾಲದಲ್ಲಿ ಪ್ರಾರಂಭವಾದ ರಾಷ್ಟ್ರೀಯ ಏಕಾಂತವಾದಿಗಳ ಚಿಂತನೆಯು ಅದಕ್ಕೆ ಮುಖ್ಯವಲ್ಲ. ಹಾಗೆ ನೋಡುವುದಿದ್ದರೆ ಕೆಳವರ್ಗದ ಸಂಸ್ಕೃತಿಯ ಕುರಿತಾದ ಸರಿಯಾದ ವಿವರಣೆಗಳು ಬ್ರಿಟೀಶರ ದಾಖಲೆಗಳಲ್ಲಿ ಲಭ್ಯವಿಲ್ಲ. ಎಲ್ಲಾ ಬಗೆಯ ಪ್ರಭುತ್ವಕ್ಕೂ ಆದ ಸ್ವಹಿತಾಸಕ್ತಿಗಳಿರುತ್ತವೆ. ಆಳಿದ ದೇಶದ ಪ್ರಕ್ರಿಯೆಗಳು ಆಳಿಸಿಕೊಂಡ ದೇಶದ ಮೇಲೆ ಅನೇಕ ಪರಿಣಾಮಗಳನ್ನು ಬೀರುತ್ತಿರುತ್ತವೆ. ಈ ಪರಿಣಾಮಗಳು ಆಳಿಸಿಕೊಳ್ಳುವ ದೇಶದ ದೀನತೆಯನ್ನು ಪೋಷಿಸುತ್ತಲೇ ಇರುತ್ತವೆ. ವಸಾಹತುಶಾಹಿ ಆಡಳಿತ ಒಂದೆಡೆ ತನ್ನ ಕಾನೂನು, ಪೋಲಿಸ್ ವ್ಯವಸ್ಥೆ, ಶಿಕ್ಷಣ, ಅಧಿಕಾರದ ಮೂಲಕ ತನ್ನ ಯಜಮಾನಿಕೆಯನ್ನು ವಿಸ್ತರಿಸಿಕೊಳ್ಳುತ್ತಲೇ ಹೋಗುತ್ತದೆ. ಹಾಗೆಯೇ ಇನ್ನೊಂದೆಡೆ ತನ್ನ ವಸಾಹತು ರಾಷ್ಟ್ರಗಳ ಜನಸಮುದಾಯದಲ್ಲಿ ಅಭದ್ರತೆ ಮತ್ತು ಕೀಳರಿಮೆಯನ್ನು ತುಂಬಿ ತನ್ನ ಅಧಿಕಾರವನ್ನು ಶಾಶ್ವತಮಾಡಿಕೊಳ್ಳಲು ಮುಂದಾಗುತ್ತದೆ. ಅಭಿವೃದ್ಧಿ ಮತ್ತು ಸುಧಾರಣೆಯ ಹೆಸರಲ್ಲಿ ದೇಸೀ ನಂಬಿಕೆ, ಸಂಸ್ಕೃತಿ, ಭಾಷೆ, ಆಚರಣೆ, ಸಂಪ್ರದಾಯ, ಕಾನೂನು, ಇತ್ಯಾದಿಗಳೆಲ್ಲವನ್ನೂ ಅವಜ್ಞೆ ಮಾಡುತ್ತಾ ಬರುತ್ತದೆ. ಅಧಿಕಾರಕ್ಕಾಗಿ ತನ್ನ ಏಕಸಂಸ್ಕೃತಿಯನ್ನು ಹೇರುತ್ತದೆ. ಈ ಬಗೆಯ ಯಜಮಾನಿಕೆಯಲ್ಲಿ ಆಜ್ಞೆಗಳನ್ನು ಮಾತ್ರ ಮಾಡಿ ಅದನ್ನು ಪಾಲಿಸಲು ಅಧಿಕಾರಿವರ್ಗವನ್ನು ಬಳಸಲಾಗುತ್ತದೆ. ತನ್ನ ಏಕ ಸಾರ್ವಭೌಮತ್ವವನ್ನು ಪ್ರತಿಭಟಿಸಿದರೆ, ವಿರೋಧಿಸಿದರೆ, ಒಪ್ಪದಿದ್ದರೆ ಅಂಥ ದನಿಗಳನ್ನು ಎದುರಿಸಿ ಮಟ್ಟ ಹಾಕಲು ಪೋಲಿಸ್,

ಜೈಲು, ನೇಣು, ದಂಡ ಇತ್ಯಾದಿಗಳನ್ನು ಪ್ರಭುತ್ವ ಬಳಸುತ್ತದೆ. ಈ ಬಗೆಯ ಪ್ರಭುತ್ವವೇ ಇಂದಿಗೂ ಮುಂದುವರಿಯುತ್ತಿರುವುದು. ಇದರ ಅನೇಕ ರೂಪಗಳನ್ನು ಇತಿಹಾಸ ಆವಾಗಿನಿಂದಲೂ ದಾಖಲಿಸಿದೆ.

ಸೈದ್ ಪ್ರಕಾರ "ಇತಿಹಾಸದ ನೈಜ ದಾಖಲೆಗಳೆಲ್ಲವೂ ಒಂದಲ್ಲ ಒಂದು ರೀತಿಯ ಅಧಿಕಾರ ಮತ್ತು ಸವಲತ್ತುಗಳನ್ನು ಹಿಡಿತದಲ್ಲಿರಿಸಿಕೊಳ್ಳುವ ಸಾಂಸ್ಕೃತಿಕ ಹುನ್ನಾರದ ಫಲಗಳೇ ಆಗಿವೆ." ಬಲ ಪ್ರಯೋಗದ ಮೂಲಕ ಆಳ್ವಿಕೆ ನಡೆಸಿದಂತೆ ಜ್ಞಾನದ ಹೊಸ ಸಂರಚನೆಗಳ ಮೂಲಕವೂ ಯಜಮಾನಿಕೆಯನ್ನು ನಡೆಸುವುದು ಸಾಧ್ಯ. " ಅಧಿಕಾರದ ಚಲಾವಣೆಯೇ ಸ್ವಯಂ ಹೊಸ ಜ್ಞಾನ ವಿಚಾರಗಳು ಹುಟ್ಟಿಕೊಳ್ಳಲು ಅಥವಾ ರೂಪುಗೊಳ್ಳಲು ಕಾರಣವಾಗಬಹುದು ಮತ್ತು ಇದು ಹೊಸ ಮಾಹಿತಿ ಕೋಶಗಳನ್ನು ರೂಪಿಸಿಕೊಳ್ಳಬಲ್ಲದು ಎಂದು ಫುಕೋ ಹೇಳುತ್ತಾನೆ." ಹೀಗೆ ರೂಪಿಸಿದ ಹೊಸ ಮಾಹಿತಿ ಕೋಶಗಳು ಮತ್ತು ಜ್ಞಾನ ಸಂಕಥನಗಳು ಇಂದಿಗೂ ರಾಜ್ಯಾಧಿಕಾರವನ್ನು ಪ್ರಭುತ್ವವನ್ನು ಸದಾ ಪೋಷಿಸುತ್ತಲೇ ಬಂದಿವೆ. (ಮೂಲ: ಶೆಲ್ಲಿವಾಲಿಯ, ಎಡ್ವರ್ಡ್ ಸೈದ್, ಅನು: ರಾಮಲಿಂಗಪ್ಪ. ಓ. ಬೇಗೂರು, ಪುಟ-೨೨, ೨೦೦೩) (ಅದೇ - ಪುಟ-೨೧, ೨೦೦೩) 'ಸಂಗೊಳ್ಳಿರಾಯಣ್ಣ' 'ಪಿರಿಯಾ ಪಟ್ಟಣದ ಲಾವಣಿ'; ತರೀಕೆರೆ ನಾಯಕರ ಕುರಿತು ಲಾವಣಿಗಳು ಚರಿತ್ರೆಯನ್ನು ಬೇರೆ ರೀತಿಯಲ್ಲಿ ನಿರೂಪಿಸಿದೆ.

> ೧೯೩೦ರ ಕರಬಂಧಿ ಚಳುವಳಿಗೆ ಸೂರ್ವೆ ಗ್ರಾಮವು ನಾಂದಿ ಹಾಡಿತು. ಸಣ್ಣಜ್ಜಿಮನೆ, ಬೊಮ್ಮಯ್ಯ ಪೊಕ್ಕ ನಾಯಕರು ಕರಬಂಧಿ ಚಳುವಳಿಯ ಸ್ಫೂರ್ತಿ ಹಾಗೂ ಪ್ರೇರಕಶಕ್ತಿಯಾಗಿದ್ದರು. ಇದು ಐತಿಹಾಸಿಕ ಸತ್ಯ. ಈ ಭಾಗದಲ್ಲಿ ಸ್ವಾತಂತ್ರ್ಯ ಕ್ರಾಂತಿ ಕಹಳೆಗೆ ಉಸಿರು ತುಂಬಿದ ಶ್ರೀ ರಂಗನಾಥ ದಿವಾಕರ, ದ.ಪ.ಕರಮರಕರ, ಕೆ.ಜಿ.ಜೋಶಿ, ಕಾರ್ನಾಡ ಸದಾಶಿವರಾಯರು, ಗುಲ್ವಾಡಿ ಶಂಕರರಾಯರು ಮುಂತಾದವರಿಗೆ ಆಶ್ರಮ ನೀಡಿದ್ದು ಈ ಸಣ್ಣಜ್ಜಿ ಮನೆ.
>
> "ಯಾರು ಮಾಡಲಿ ಬಿಡಲಿ ನಾನು ಮಾತ್ರ ಆ ಮಹಾತ್ಮನನ್ನು (ಗಾಂಧೀಜಿ) ನೆನೆದು ಕರನಿರಾಕರಣೆಯನ್ನು ಮಾಡಿಯೇ ತೀರುವೆನು." ಎಂದು ಧೀರ ಪ್ರತಿಜ್ಞೆ ಮಾಡಿ ಇಡೀ ಸಭೆ ಚಳುವಳಿಯಲ್ಲಿ ತೊಡಗಿಕೊಳ್ಳುವಂತೆ ಉತ್ಸಾಹ ತುಂಬಿ, ಕರನಿರಾಕರಣೆ ಮಾಡಿ, ಹೊಲಮನೆಗಳನ್ನು ಸರಕಾರದಿಂದ ಮುಟ್ಟುಗೋಲು ಹಾಕಿಸಿಕೊಂಡು, ಸ್ವಾತಂತ್ರ್ಯಕ್ಕಾಗಿ ಧೈರ್ಯದಿಂದ ಧಾರುಣ ನಿರ್ಗತಿಕ ಬದುಕನ್ನು ಎದುರಿಸಿದ ದಿ. ಬೊಮ್ಮಯ್ಯ

ಪೊಕ್ಕ ನಾಯಕರು ಸೂರ್ವೆಯು ದೊಡ್ಡ ಕುಟುಂಬದ ಯಜಮಾನರು. (ಕರಬಂಧಿ ಪ್ರತಿಜ್ಞೆ ಮಾಡಿದ ಘಟನೆಯ ವಿವರಗಳಿಗೆ ಪುಟ ೩೦ ನೋಡಬಹುದು.)

ಇವರ ಮನೆಗೆ "ಸಣ್ಣಜ್ಜಿ ಮನೆ" ಎಂದು ಕರೆಯುವುದು ರೂಢಿ. ಬೊಮ್ಮಯ್ಯ ನಾಯಕರು ತುಂಬಾ ಗೌರವಸ್ಥರೂ ಶಿಸ್ತಿನ ವ್ಯಕ್ತಿಗಳೂ ಆಗಿದ್ದರು. ಬೊಮ್ಮಯ್ಯ ನಾಯಕರು ಅಸಹಕಾರ ಚಳುವಳಿ, ಸ್ವದೇಶಿ ಚಳುವಳಿ, ಉಪ್ಪಿನ ಸತ್ಯಾಗ್ರಹ, ಕರಬಂಧಿ ಮೊದಲಾದ ಚಳುವಳಿಗಳ ಎಲ್ಲ ಹಂತಗಳಲ್ಲಿ ಸಕ್ರಿಯವಾಗಿ ಪಾಲ್ಗೊಂಡು ಸಾಹಸವನ್ನು ಮೆರೆದಿರುವರು. ಇವರು ತುಂಬಾ ಧಾಡಸಿ ಹಾಗೂ ಧೈರ್ಯಶಾಲಿ ವ್ಯಕ್ತಿಯಾಗಿದ್ದರು. ಪೋಲೀಸರನ್ನು ಹೆದರಿಸುವ ತಾಕತ್ತು ಅವರದಾಗಿತ್ತು. ಅವರ ೫೫ನೇ ವರ್ಷದಲ್ಲಿ ಕರಬಂಧಿಗಾಗಿ ೯ ತಿಂಗಳ ಶಿಕ್ಷೆ ಅನುಭವಿಸಿದರು. ಅವರ ಹಿರಿಯ ಮಗ ದಿ.ಬೀರಣ್ಣ ನಾಯಕರು ೨೩ನೇ ವರ್ಷದಲ್ಲಿ ಮತ್ತು ಎರಡನೆಯ ಮಗ ದಿ.ವೆಂಕಣ್ಣ ನಾಯಕರು ೨೦ನೇ ವರ್ಷದಲ್ಲಿ ಜೈಲುಶಿಕ್ಷೆ ಅನುಭವಿಸಿದರು. ಉಳಿದ ಇಬ್ಬರು ಮಕ್ಕಳು ತೀರ ಚಿಕ್ಕವರಾದುದರಿಂದ ಚಳುವಳಿಯಲ್ಲಿ ಪಾಲ್ಗೊಳ್ಳುವಂತೆ ಹುರಿದುಂಬಿಸಿದಳು. ಅವರಿಗೆ ಮೂವರು ಹೆಣ್ಣು ಮಕ್ಕಳು. ಅವರ ಅಳಿಯಂದಿರೂ ಸಹ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಸೇರಿ ಜೈಲು ಶಿಕ್ಷೆ ಅನುಭವಿಸಿದವರೇ ಆಗಿದ್ದರು. ಹೀಗೆ ಬೊಮ್ಮಯ್ಯ ನಾಯಕರ ಇಡೀ ಕುಟುಂಬವೇ ಸ್ವಾತಂತ್ರ್ಯ ಚಳುವಳಿಯಲ್ಲಿ ಪಾಲ್ಗೊಂಡಿರುವುದು ವಿಶೇಷ ಘಟನೆಯಾಗಿದೆ.

ಬೊಮ್ಮಯ್ಯ ನಾಯಕರ ಪತ್ನಿ ಶ್ರೀಮತಿ 'ಇಂಕು' ಊರವರಿಗೆ ಹಾಗೂ ಬಂಧುಬಳಗದವರಿಗೆಲ್ಲ "ಇಂಕಜ್ಜಿ" ಎಂದೇ ಪ್ರಸಿದ್ಧಳಾಗಿದ್ದಳು. ಅತಿಥಿ ಸತ್ಕಾರಕ್ಕೆ 'ಇಂಕಜ್ಜಿ' ಎತ್ತಿದ ಕೈ. ಅವರದು ನೀಡುವ ಕೈ ಹೊರತು ಕೊಳ್ಳುವುದಲ್ಲ. ಬಡವರ ಬಗ್ಗೆ ಅಪಾರ ಪ್ರೀತಿ, ಕರುಣೆ, ಉಪ್ಪಿನ ಸತ್ಯಾಗ್ರಹದ ಕಾಲಕ್ಕೆ ಹನುಮಂತರಾವ್ ಕೌಜಲಗಿಯವರ ಭಾಷಣ ಕೇಳಲು ಇಂಕಜ್ಜಿ ಒಂದು ತಿಂಗಳ ಮೊಲೆಗೂಸನ್ನು ಎತ್ತಿಕೊಂಡು ಭಾಷಣ ಕೇಳಲು ಅಂಕೋಲೆಗೆ ಹೋಗಿದ್ದಳು. ಅಶಿಕ್ಷಿತರಾದ ಮಹಿಳೆಯರಿಗೂ ಸ್ವಾತಂತ್ರ್ಯವೆಂದರೆ ಉಸಿರಾಗಿತ್ತು. ಯಾವ ತ್ಯಾಗಕ್ಕೂ ಸಿದ್ಧರಾಗಿದ್ದರು.

(ಶಾಂತಾರಾಮ ನಾಯಕ, ಹಿಚಕಡ ೨೦೦೯ ಸ್ವಾತಂತ್ರ್ಯ ಹೋರಾಟದ ಹೊರಳು ನೋಟ ಪುಟ.೧೫೫)

ಇಂದಿನ ಜಾಗತಿಕ ಸನ್ನಿವೇಶದಲ್ಲಿ ತುಂಬಾ ವ್ಯಾಪ್ತಿಯುಳ್ಳ ಮತ್ತು ತುಂಬಾ ಅಪಾಯಕಾರಿಯಾದ ಯಜಮಾನಿಕೆಯ ಅಸ್ಪಷ್ಟ ಮುಖವೇ ಈ 'ಸಾಂಸ್ಕೃತಿಕ ಯಜಮಾನಿಕೆ'. ಭಾಷೆ, ಸಂಸ್ಕೃತಿ, ಸಂಪ್ರದಾಯ, ದೇಶೀಯತೆ, ಬೌದ್ಧಿಕತೆ, ಮೌಲ್ಯ, ಶಿಕ್ಷಣ, ಇತ್ಯಾದಿಗಳನ್ನು ಕೇಂದ್ರವಾಗಿರಿಸಿಕೊಂಡು ಈ ಸಾಂಸ್ಕೃತಿಕ ಯಜಮಾನಿಕೆ ನಡೆಯುತ್ತದೆ. ಅಧಿಕಾರಶಾಹಿ ಅಥವಾ ಜ್ಞಾನಶಾಹಿಗಳ ಮೂಲಕ ಸ್ವಹಿತಾಸಕ್ತಿಯ ಹೊಸ ಬಗೆಯ ಸಂಕಥನಗಳನ್ನು ರೂಪಿಸಿಕೊಂಡು ವಸ್ತುವಿಚಾರಗಳನ್ನು, ಜನಸಮುದಾಯವನ್ನು ನಿಯಂತ್ರಿಸುವುದೇ ಇದರ ಗುರಿ. ಆಳುವ ಮತ್ತು ಆಳಿಸಿಕೊಳ್ಳುವ ಸಂಕಥನ ಬಲಗೊಳ್ಳುವುದೇ ಈ ಬಗೆಯ ಸಾಂಸ್ಕೃತಿಕ ಯಜಮಾನಿಕೆಯಲ್ಲಿ ಈ ಸಾಂಸ್ಕೃತಿಕ ಯಜಮಾನಿಕೆಯ ಚರ್ಚೆಗಳು ಇತ್ತೀಚೆಗೆ ಹೆಚ್ಚಾಗುತ್ತಿವೆ. ಈ ದೃಷ್ಟಿಯಿಂದ ಗಾಂಧಿಯವರ ಪ್ರಭಾವವು ಗಮನಾರ್ಹ.

> ಮಂಡಲದ ವರದಿ: ಬಳ್ಳಾರಿಯಲ್ಲಿ ನೇಮಿಸಿದ ಸವಿನಯ ಕಾನೂನುಭಂಗ ಮಂಡಲದ ಸಭಾಸದರು ವಿಜಾಪುರ, ಮಂಗಳೂರು, ಕಾರವಾರ ಮುಂತಾದ ಜಿಲ್ಲೆಗಳಲ್ಲಿ ಸುತ್ತಾಡಿ, ಸುಮಾರು ೫೮ ಸ್ಥಳಗಳಲ್ಲಿ ವ್ಯಾಖ್ಯಾನ, ಸಂಭಾಷಣೆಗಳನ್ನು ನಡೆಸಿ, ಧಾರವಾಡದಲ್ಲಿ ೧೬-೩-೧೯೩೦ ರಂದು ಸೇರಿದ ಕರ್ನಾಟಕ ಪ್ರಾಂತಿಕ ಕಾಂಗ್ರೆಸ್ ಕಮಿಟಿಯ ಕೌನ್ಸಿಲ್ಲಿಗೆ ತಮ್ಮ ಅನುಭವಗಳನ್ನು ವರದಿಯ ರೂಪವಾಗಿ ನಿವೇದಿಸಿದರು. ಅದರ ಸಾರಾಂಶವು ಹೀಗಿದೆ: – ಕರ್ನಾಟಕದಲ್ಲಿ ಈ ಚಳುವಳಿಗೆ ಸುಸಂಘಟಿತ ವಿರೋಧವಿಲ್ಲ. ಪಂಗಡಗಳ ಪೀಕಲಾಟವಿಲ್ಲ. ಸುಶಿಕ್ಷಿತರು ಮಾತ್ರ ತುಸು ಉದಾಸೀನತೆಯನ್ನು ತೋರಿಸುತ್ತಿರುವರು. ಆದರೆ ಪ್ರತ್ಯಕ್ಷಕಾರ್ಯದ ಪ್ರವಾಹವನ್ನು ನೋಡಿ ಅದರ ಓಘಕ್ಕೆ ಅವರೂ ಬೀಳಬಹುದೆಂದು ಕಾಣುತ್ತದೆ. ಜನಸಾಮಾನ್ಯರಲ್ಲಿ ಜಾಜ್ವಲ್ಯವಾದ ಅಭಿಮಾನವೂ ಉತ್ಸಾಹವೂ ಇದ್ದೇ ಇದೆ. ಸಾರ್ವತ್ರಿಕ ಸತ್ಯಾಗ್ರಹವನ್ನು ಪ್ರಚಂಡ ಪ್ರಮಾಣದಲ್ಲಿ ಕೈಕೊಳ್ಳುವುದಕ್ಕೆ ಕಾರವಾರ ಜಿಲ್ಲೆಯನ್ನು ಸರ್ವವಿಧದಿಂದಲೂ ಅನುಕೂಲ ಸ್ಥಳವೂ ಬೇರೊಂದಿಲ್ಲ. ಏಕೆಂದರೆ ಅಲ್ಲಿ ಮುಖ್ಯವಾಗಿ ಸಮುದ್ರ ದಂಡೆಯಿರುವುದರಿಂದ ಉಪ್ಪಿನ ಸತ್ಯಾಗ್ರಹವನ್ನು ಪ್ರಾರಂಭಿಸಲಿಕ್ಕೆ ಬರುವಂತಿದೆ. ಅಲ್ಲಿಯ ಪ್ರಜೆಗಳು ಮೂಲತಃ ಶಾಂತ ಸ್ವಭಾವದವರು. ತಿಳಿಸಿದ್ದನ್ನು ಅಥವಾ ಕಂಡದ್ದನ್ನು ಕೂಡಲೇ ತಿಳಿಯುವ ಒಳ್ಳೇ ಗ್ರಹಣ ಶಕ್ತಿಯುಳ್ಳವರು. ಅದಲ್ಲದೆ ಮಹಾತ್ಮಗಾಂಧಿಯವರಲ್ಲಿ ಅಚಲವಾದ ಶ್ರದ್ಧಾಭಕ್ತಿಯುಳ್ಳವರು.

ಆದುದರಿಂದ ಉಪ್ಪಿನ ಸತ್ಯಾಗ್ರಹವನ್ನು ಅಲ್ಲಿಯೇ ಪ್ರಾರಂಭಿಸುವುದು ವಿಹಿತವಾದೀತು. ಈ ಕಾರ್ಯಕ್ಕಾಗಿ ಒಂದು ಸತ್ಯಾಗ್ರಹ ಮಂಡಲವನ್ನು ನೇಮಿಸಿ ಅದಕ್ಕೆ ಈ ಬಗ್ಗೆ ಸರ್ವಾಧಿಕಾರ ಕೊಡಬೇಕು.

(ಜಿ.ಎ.ಬಿರಾದಾರ ಪುಟ. ೫೦)

ಬ್ರಿಟಿಷರು ಭಾರತೀಯರನ್ನು ಮೂರು ಶತಮಾನಗಳ ಕಾಲ ಆಳುವಲ್ಲಿ ಅಥವಾ ಪಾಶ್ಚಿಮಾತ್ಯ ರಾಷ್ಟ್ರಗಳು ಪೌರ್ವಾತ್ಯರನ್ನು ತಮ್ಮ ಅಂಕೆಯಲ್ಲಿ ಬಹು ದೀರ್ಘಕಾಲ ಇರಿಸಿಕೊಳ್ಳಲು ಸಾಧ್ಯವಾಗಿರುವುದು ಈ ಬಗೆಯ ಸಾಂಸ್ಕೃತಿಕ ಯಜಮಾನಿಕೆಯ ಮೂಲಕ ಬ್ರಿಟೀಶ್ ದೇಸಿ ಅನನ್ಯತೆಯನ್ನು ಧಿಕ್ಕರಿಸುವ ಅಥವಾ ಅವಜ್ಞೆ ಮಾಡುವ ಈ ಪ್ರಭುತ್ವವು ಬಹುರೂಪಿ ಸಂಸ್ಕೃತಿಯ ಜೀವನ ಕ್ರಮವನ್ನು ಅನಾಗರಿಕವೆಂದು ಭಾವಿಸುತ್ತದೆ. ಅದನ್ನು ನಾಗರಿಕಗೊಳಿಸುವುದು ತಮ್ಮ ಜವಾಬ್ದಾರಿ ಎಂದು ಸ್ವಯಂ ತೀರ್ಮಾನಿಸುತ್ತದೆ. ತಮ್ಮ ಭಾಷೆ, ಸಂಸ್ಕೃತಿ ಮೌಲ್ಯಗಳೇ ಶ್ರೇಷ್ಠವೆಂದು ಸಾರಿತು. ಅದನ್ನು ಒಪ್ಪುವಂತೆ ತನ್ನ ಜ್ಞಾನದ ವಿವಿಧ ಸಂರಚನೆಗಳ ಮೂಲಕ ಒತ್ತಾಯಪಡಿಸುತ್ತದೆ. ಆ ಮೂಲಕ ತಮಗೆ ವಿಧೇಯರಾಗಿಯೇ ಉಳಿಯುವಂತೆ ಅಧೀನರ ನ್ಯಕೆಯನ್ನು ಸಿದ್ಧಪಡಿಸುತ್ತದೆ. ಈ ನಂಬಿಕೆಯಿಂದಲೇ ವಸಾಹತುಶಾಹಿ ರಾಷ್ಟ್ರಗಳು ತಮ್ಮ ಕಾರ್ಯಗಳನ್ನು ವಿಸ್ತರಿಸಿಕೊಂಡವು. ಇಂದಿಗೂ ಪಾಶ್ಚಿಮಾತ್ಯ ರಾಷ್ಟ್ರದ ಇಂಗ್ಲೀಷ್ ಭಾಷೆ, ಅವರು ರೂಪಿಸಿದ ಶಿಕ್ಷಣ ಪದ್ಧತಿ, ಅವರು ಬರೆದ ಇತಿಹಾಸ, ರೂಪಿಸಿದ ಜ್ಞಾನಮಾರ್ಗಗಳೇ ಮುಖ್ಯವೆನಿಸಿದ್ದವು. ಇದರಿಂದ ಜಗತ್ತಿನ ಬಹುಪಾಲು ರಾಷ್ಟ್ರಗಳನ್ನು ಕೀಳರಿಮೆಯಲ್ಲಿ ಮುಳುಗಿವೆ. ಪಶ್ಚಿಮಕ್ಕೆ ವಿಧೇಯರಾಗಿರುವಂತೆ ಮಾಡಿವೆ.

ಸವಿನಯ ಶಾಸನೋಲ್ಲಂಘನೆಯು ಅಸಹಕಾರದ ಅನಿವಾರ್ಯ ಅಂಶವೆಂಬುದು ಸ್ವಲ್ಪ ವಿವೇಚನೆಯಿಂದಲೇ ಗೋಚರಿಸುತ್ತದೆ. ಒಂದು ಆಡಳಿತದ ಆಜ್ಞೆಗಳನ್ನೂ ಕಟ್ಟಳೆಗಳನ್ನೂ ಪಾಲಿಸುವುದರಿಂದ ಅದಕ್ಕೆ ಅತ್ಯಂತ ಪ್ರಭಾವಯುತ ನೆರವಿತ್ತಂತೆ. ದುರಾಡಳಿತಕ್ಕೆ ಎಂದಿಗೂ ಅಂಥ ನಿಷ್ಠೆ ಸಲ್ಲದು. ಅದಕ್ಕೆ ನಿಷ್ಠೆ ಸಲ್ಲಿಸುವುದೆಂದರೆ ಕೆಡಕಿನಲ್ಲಿ ಭಾಗವಹಿಸಿದಂತೆ. ಆದುದರಿಂದ ಒಬ್ಬ ಸಭ್ಯ ವ್ಯಕ್ತಿ ಒಂದು ಕೆಟ್ಟ ಪದ್ಧತಿ ಅಥವಾ ಆಡಳಿತವನ್ನು ತನ್ನ ಆತ್ಮಶಕ್ತಿಯಿಂದ ಪ್ರತಿಭಟಿಸುತ್ತಾನೆ. ಒಂದು ದುಷ್ಟ ರಾಜ್ಯದ ಶಾಸನಗಳನ್ನು ಉಲ್ಲಂಘಿಸುವುದು ಕರ್ತವ್ಯವೆನಿಸುತ್ತದೆ. ಹಿಂಸಾಯುತ ಉಲ್ಲಂಘನೆಯು ಕೆಲವು ವ್ಯಕ್ತಿಗಳನ್ನು ತೆಗೆದು ಹಾಕಿ ಬೇರೆಯವರನ್ನು ತಂದು ಕೂಡಿಸುತ್ತದೆ. ಇದರಿಂದ ಕೆಡುಕಿನ ಮೂಲ ಹೋಗುವುದಿಲ್ಲ; ಕೆಲವು ಸಂದರ್ಭಗಳಲ್ಲಿ ಅದು ತೀವ್ರವೂ ಆದೀತು.

> ಅಹಿಂಸಾತ್ಮಕ ಎಂದರೆ ಸವಿನಯ ಶಾಸನೋಲ್ಲಂಘನೆಯೊಂದೇ ಅತ್ಯಂತ ಯಶಸ್ವಿಯಾಗಬಲ್ಲ ಪರಿಹಾರ. ಯಾರು ಕೆಟ್ಟದರೊಡನೆ ಸಹಭಾಗಿಯಾಗಲು ಅಪೇಕ್ಷಿಸುವುದಿಲ್ಲವೋ ಅವರಿಗೆ ಅದು ನಿರ್ಬಂಧ ಕರ್ತವ್ಯವಾಗುತ್ತದೆ.–ಗಾಂಧಿ (ಸತ್ಯಾಗ್ರಹ ಪುಟ. ೩೨)

ನೇರವಾಗಿ ದಾಳಿಮಾಡಿ ಅಥವಾ ಪೋಲಿಸ್, ಕಾನೂನು ಇತ್ಯಾದಿಗಳ ಮೂಲಕ ಒಂದು ದೇಶದ ಜನಸಮುದಾಯವನ್ನು ಆಳುವುದಕ್ಕಿಂತಲೂ ಅವರ ಸಂಸ್ಕೃತಿ , ಜೀವನ ಕ್ರಮ, ನಂಬಿಕೆ ಇತ್ಯಾದಿಗಳನ್ನು ಆಕ್ರಮಿಸಿ ನಡೆಸುವ ಅಧಿಕಾರ ಅಥವಾ ಪಡೆವ ಯಜಮಾನಿಕೆ ಪರಿಣಾಮಕಾರಿ ಮತ್ತು ದೀರ್ಘಾಯುಷಿ ಎಂದು ಈ ಯಜಮಾನಿಕೆ ನಂಬುತ್ತದೆ. ಸಾಂಸ್ಕೃತಿಕ ಇದಕ್ಕೆ ಸಂಬಂಧಿಸಿದಂತೆ ಫುಕೋ ತನ್ನ ವಾದವನ್ನು ಮಂಡಿಸುವಾಗ ಅಧಿಕಾರ ಮತ್ತು ಜ್ಞಾನದ ನಡುವಿನ ಸಂಬಂಧವನ್ನು ಕುರಿತು ಚರ್ಚಿಸುತ್ತಾನೆ. ಆಡಳಿತಶಾಹಿಯ ಎಲ್ಲಾ ಸಂಸ್ಥೆಗಳ ಮೂಲ ಕಲ್ಪನೆಯೇ ಈ ಅಧಿಕಾರ ಮತ್ತು ಜ್ಞಾನದ ನಿಯಂತ್ರಕ ಶಕ್ತಿಗಳ ಚಿತ್ರಣವಾಗಿದೆ. ಸದಾ ಅಡಿಯಾಳಾಗಿಸಿಕೊಳ್ಳುವ ಅಥವಾ ವಶೀಕರಿಸಿಕೊಳ್ಳುವ ಹುನ್ನಾರದಲ್ಲಿರುವ ಈ ಅಧಿಕಾರಶಾಹಿ ಮತ್ತು ಜ್ಞಾನಶಾಹಿಗಳ ಬಗ್ಗೆ ಫುಕೋ ಚರ್ಚಿಸುತ್ತಾನೆ.

"ಫುಕೋನ ಅಧಿಕಾರ ಮತ್ತು ಜ್ಞಾನದ ತತ್ವವು ನೀಶೆಯ ತತ್ವಜ್ಞಾನದ ಪ್ರಭಾವದಿಂದ ಬೆಳೆದು ಬಂದ ಕಲ್ಪನೆಯಾಗಿದೆ. ಅಧಿಕಾರವನ್ನು ತಮ್ಮ ತಾಳಕ್ಕೆ ತಕ್ಕಂತೆ ಆಡಿಸುವ ಕೆಲವು ಏಜನ್ಸಿಗಳು ಜ್ಞಾನವನ್ನು ತಮ್ಮ ಅನುಕೂಲಕ್ಕೆ ತಕ್ಕಂತೆ ಬಳಸಿಕೊಳ್ಳುತ್ತವೆ ಮತ್ತು ಈ ಏಜನ್ಸಿಗಳೇ ತಮ್ಮ ಕೈಗೊಂಬೆಯಾದ ಸ್ಥಾಪಿತ ಭಾಷಿಕ ಸಂರಚನೆಗಳ ಮೂಲಕ ಸಮಾಜದ ಮೇಲೆ ಹೇರಿಕೆಗಳನ್ನು ಒಡ್ಡುತ್ತವೆ ಎಂದು ಈ ತತ್ವವು ಬಹಳ ಸ್ಪಷ್ಟವಾಗಿ ವಿವರಿಸುತ್ತದೆ. ಇವರ ಪ್ರಕಾರ ಈ ಶಕ್ತಿಯುತ ಅಲ್ಪಸಂಖ್ಯಾತ ಗುಂಪೇ ಸತ್ಯ ಯಾವುದು ಎಂಬುದನ್ನು ನಿರ್ಧರಿಸುತ್ತದೆ. ಸಂಕಥನಗಳ ಮೂಲಕ ಕೆಲಸ ಮಾಡುತ್ತ ಇದು ತನ್ನ ಗುರಿಗಳಿಗೆ ಅನುಕೂಲವಾಗುವಂತೆ ವಸ್ತು ವಿಚಾರಗಳನ್ನು ವ್ಯವಸ್ಥಿತವಾಗಿ ನಿಯಂತ್ರಿಸುತ್ತದೆ ಮತ್ತು ಆಳುತ್ತದೆ" ಎಂದು ಶೆಲ್ಲಿವಾಲಿಯ ಸೈದ್ ಸಿದ್ಧಾಂತವನ್ನು ಚರ್ಚಿಸುವಾಗ ಹೇಳುತ್ತಾರೆ. ಅವರೆ ಮುಂದುವರಿದು "ಅಧಿಕಾರ ಶಕ್ತಿಯು ಏಕಕಾಲಕ್ಕೆ ಕಟ್ಟುತ್ತದೆ ಮತ್ತು ಪ್ರಾಬಲ್ಯವನ್ನು ಹೊಂದಿರುತ್ತದೆ. ಯಾಕೆಂದರೆ ಅದಕ್ಕೆ ಜ್ಞಾನದ ಬೆಂಬಲ ಇರುತ್ತದೆ. ಹೀಗಾಗಿ ಜ್ಞಾನವು ಅಧಿಕಾರವನ್ನು ಶಕ್ತಗೊಳಿಸುತ್ತದೆ. ಅಂದರೆ ಈ ಅಧಿಕಾರವು ಜ್ಞಾನವಿಲ್ಲದೆ ಯಾವತ್ತೂ ಕೆಲಸ ಮಾಡಲಾರದು. ಈ ರೀತಿಯ ಅಧಿಕಾರ ಮತ್ತು ಜ್ಞಾನಗಳ ಕೂಟಕ್ರಿಯೆಯು ಜನನಂಬಿಕೆಗಳನ್ನೇ ಹುಟ್ಟಿಸಿ

ರೂಪಿಸುವಂಥಾ ಸಂಕಥನಗಳನ್ನು ನಿರ್ಮಾಣ ಮಾಡುತ್ತದೆ ಮತ್ತು ಈ ಎಲ್ಲವೂ ನೈಸರ್ಗಿಕ ಹಾಗೂ ಸಹಜ ಎಂದು ನಂಬುವಂತೆ ಮಾಡುತ್ತದೆ. ಈ ಪರಿಕಲ್ಪನೆಯನ್ನು ಸಂಸ್ಥೆಗಳಿಗೆ ಮತ್ತು ಜ್ಞಾನ ವಸ್ತುಗಳಿಗೆ ಅನ್ವಯಿಸಿದರೆ ಅವು ಹೇಗೆ ಒಂದಾಗಿ ಅಧಿಕಾರದ ಹುನ್ನಾರಗಳ ಮುಖಾಂತರ ಲೋಕವರ್ತನೆಯನ್ನೇ ನಿಯಂತ್ರಿಸುವ ನೆಲೆಯಲ್ಲಿ ಕೆಲಸ ಮಾಡಬಹುದು ಎಂಬುದನ್ನು ನಾವು ಕಾಣಬಹುದು." ಈ ಎಲ್ಲಾ ಕ್ರಿಯೆಗಳ ಹಿಂದಿನ ಉದ್ದೇಶ ಯಥಾಸ್ಥಿತಿಯನ್ನು ಕಾನೂನುಬದ್ಧಗೊಳಿಸುವ ಅಥವಾ ತನ್ನ ಯಜಮಾನಿಕೆಯನ್ನು ಶಾಶ್ವತವಾಗಿರಿಸಿಕೊಳ್ಳಲು ಹೊಸ ಹುನ್ನಾರಗಳನ್ನು ರೂಪಿಸುವುದೇ ಆಗಿದೆ. ಈ ಹುನ್ನಾರಗಳಲ್ಲಿ ತಮ್ಮ ಸಂಕಥನಗಳ ಮೂಲಕ ಜನರನ್ನು ಆಳ್ವಿಕೆಗೆ ಒಪ್ಪಿಸುವ ಇಲ್ಲವೆ ನಿಯಂತ್ರಣಕ್ಕೆ ಒಳಪಡಿಸುವ ಒಳಸಂಚು ಪ್ರಧಾನವಾಗಿರುತ್ತದೆ. ನಾವು ಯಾವುದನ್ನು ಭಾಷೆಯಲ್ಲಿ ವ್ಯಕ್ತಪಡಿಸುತ್ತೇವೆಯೋ ಅವುಗಳ ಮೂಲ ಧಾತುವಾದ ಅನುಭವ ಕೂಡ ನಿಯಂತ್ರಣಕ್ಕೆ ಒಳಪಟ್ಟಿರುತ್ತದೆ. ಅಥವಾ ನಾವಿಂದು ಯಾವುದನ್ನು ಜ್ಞಾನವೆಂದು ಕರೆಯುತ್ತೇವೆಯೊ ಅದೂ ಕೂಡ ಅಧಿಕಾರವನ್ನು ಹಿಂಬಾಲಿಸಿ ಹೋಗುತ್ತದೆ ಎಂಬುದನ್ನು ಫುಕೋ ಹೇಳುತ್ತಾನೆ. ಇದೇ ವಾದವನ್ನು ಮುಂದುವರಿಸುತ್ತಾ ಫುಕೋ ಬಹುಮುಖ್ಯವಾದ ಒಂದಂಶವನ್ನು ಪ್ರತಿಪಾದಿಸುತ್ತಾನೆ. ನಮ್ಮ ಆಲೋಚನೆಗೆ ಬಂದಿದ್ದನ್ನು ಭಾಷೆಯಲ್ಲಿ ನಾವು ಅಭಿವ್ಯಕ್ತಿಸುತ್ತೇವೆ. ಆದರೆ ನಮ್ಮ ಆಲೋಚನಾ ಕ್ರಮವನ್ನೇ ಹಿಡಿತದಲ್ಲಿ ಇರಿಸಿಕೊಂಡು ಅಧಿಕಾರ ಸ್ಥಾಪಿಸುವ ಕೇಂದ್ರಗಳು ಬೇರೆ ಬೇರೆ ಇರುತ್ತವೆ. ಹಾಗಾಗಿ ಯಾವುದನ್ನು ಬರೆಯಲಾಗಿದೆಯೊ, ಯಾವುದನ್ನು ಚಿತ್ರಿಸಲಾಗಿದೆಯೋ ಅದಷ್ಟೇ ಸತ್ಯವಲ್ಲ. ನಮ್ಮ ಮನೋಸ್ಥಿತಿಯ ಮೇಲೆ, ನಾವು ಅಭಿವ್ಯಕ್ತಿಸುವ ಭಾಷೆಯ ಮೇಲೆ, ನಮ್ಮ ಚಿಂತನೆಯ ಮೇಲೆ ಹಿಡಿತ ಸಾಧಿಸುವ ಅನೇಕ ಸಂಗತಿಗಳು ಅದೃಶ್ಯವಾಗಿ ಇರುತ್ತವೆ ಎಂಬುದನ್ನು ಎಚ್ಚರಿಕೆಯಿಂದ ಗಮನಿಸಬೇಕಾಗಿದೆ ಎಂಬುದು ಫುಕೋನ ಅಭಿಪ್ರಾಯವಾಗಿದೆ. (ನೋಡಿ: ರಾಮಲಿಂಗಪ್ಪ ಟಿ ಬೇಗೂರು) ಸತ್ಯಾಗ್ರಹದ ಮೂಲ ಚಿಂತನೆಯು ಇದುವೇ ಆಗಿದೆ.

> ಭಾರತದ ಸ್ವಾತಂತ್ರ್ಯ ಸಾಧನೆಯೇ ನನ್ನ ಜೀವಿತೋದ್ದೇಶ. ಅದಕ್ಕಾಗಿ ನಾನು ಸಾಯಲು ಕೂಡಾ ಸಿದ್ಧ. ಏಕೆಂದರೆ ಭಾರತದ ಸ್ವಾತಂತ್ರ್ಯ ಸತ್ಯದ ಒಂದು ಅಂಶ. ಬಂಧಮುಕ್ತವಾದಾಗಲೆ ಭರತಖಂಡದ ಸತ್ಯಸ್ವರೂಪನಾದ ಭಗವಂತನನ್ನು ಪೂಜಿಸಬಲ್ಲದು. ಭಾರತದ ಬಿಡುಗಡೆಗಾಗಿ ನಾನು ದುಡಿಯುತ್ತಿದ್ದೇನೆ; ಏಕೆಂದರೆ ಭಾರತದಲ್ಲಿ ಬದುಕಿ ಅದರ ಸಂಸ್ಕೃತಿಯನ್ನು ಪಡಿದಿರುವುದರಿಂದ ಅದರ ಸೇವೆಗೆ ನಾನು ಅತ್ಯಂತ

ಅರ್ಹ ಎಂಬುದನ್ನು, ನನ್ನ ಸೇವೆಯ ಮೊದಲ ಹಕ್ಕು ಭಾರತದ್ದು ಎಂಬುದನ್ನು ನನ್ನ ಸ್ವದೇಶಿ ನನಗೆ ಕಲಿಸಿದೆ. ನನ್ನ ದೇಶಭಕ್ತಿ ಭಾರತಕ್ಕೆ ಮಾತ್ರ ಮೀಸಲಾದುದಲ್ಲ. ಬೇರೆ ಯಾವ ರಾಷ್ಟ್ರದ ಹಿತಕ್ಕೂ ಧಕ್ಕೆಯೊದಗಬಾರದು ಎಂಬುದಷ್ಟೇ ಅಲ್ಲ; ಸಕಲ ರಾಷ್ಟ್ರಗಳಿಗೂ, ಆ ಪದದ ಸಂಪೂರ್ಣಾರ್ಥದಲ್ಲಿ, ಸರ್ವಲಾಭ ಒದಗಬೇಕು ಎಂಬುದೇ ನನ್ನ ಮಾತಿನ ಆಶಯ. ನಾನು ಸಂಕಲ್ಪಿಸಿರುವ ಭಾರತದ ಸ್ವಾತಂತ್ರ್ಯ ಎಂದೆಂದೂ ಲೋಕಹಿತಕಂಟಕವಾಗಲಾರದು.

(ಆತ್ಮಕಥೆ)

(ಸತ್ಯ-ಅಹಿಂಸೆ 1958 ಮೋ. ಕ. ಗಾಂಧಿ ಪುಟ. X)

ಫುಕೋ 'ಸಂಕಥನ'ಗಳ ಬಗ್ಗೆ ಮಾತಾಡುತ್ತಾನೆ. "ಯಾವುದೇ ದೇಶದ ಇತಿಹಾಸವನ್ನು ತೆಗೆದುಕೊಂಡರೂ ಅಲ್ಲಿ ಒಂದೊಂದು ನಿರ್ದಿಷ್ಟ ಕಾಲಾವಧಿಗೆ ಸಲ್ಲುವ ನಿರ್ದಿಷ್ಟ ಸಂಕಥನಗಳು ಮತ್ತು ನಿರ್ದಿಷ್ಟ ನೀತಿ ನಿಯಮಗಳು ಅಥವಾ ರೂಢಿಗಳು ಇದ್ದೇ ಇರುತ್ತವೆ. ಇಂಥಾ ಸಂಕಥನ ಮತ್ತು ರೂಢಿಗಳೇ ಆಯಾ ಸಮಾಜದ ನಡಾವಳಿಗಳನ್ನು ನಿಯಂತ್ರಿಸುತ್ತಿರುತ್ತವೆ. ಈ ರೂಢಿ ನಡಾವಳಿಗಳನ್ನು ಚಲಾಯಿಸಲು ಇರುವ ಏಜನ್ಸಿಗಳಂತೆ ಆಯಾ ಕಾಲದ ಕೆಲ ಜ್ಞಾನಶಿಸ್ತುಗಳು ಮತ್ತು ಸಂಸ್ಥೆಗಳು ವರ್ತಿಸುತ್ತಿರುತ್ತವೆ. ಈ ಶಿಸ್ತುಗಳು ಮತ್ತು ಸಂಸ್ಥೆಗಳು ಆಯಾಕಾಲದ ಸಂಕಥನ ಸ್ವರೂಪವನ್ನು ಯಾವಾಗಲೂ ನಿಯಂತ್ರಿಸುವ ಮತ್ತು ರೂಪಿಸುವ ಕೆಲಸವನ್ನು ಮಾಡುತ್ತಿರುತ್ತವೆ. ಈ ಸಂಕಥನಗಳಾದರೆ ಸದಾ ಸಮಾಜದ ಮೇಲೆ ಪ್ರಬಲ ನಿಯಂತ್ರಣ ಸಾಧಿಸಲು ಅಧಿಕಾರಕ್ಕೆ ಸಹಕಾರಿಯಾಗುವಂತಹ ಶಕ್ತ ಆಲೋಚನೆಗಳನ್ನು ಹುಟ್ಟು ಹಾಕುತ್ತಿರುತ್ತವೆ. ಈ ಸಂಕಥನಗಳು ಹೆಚ್ಚು ಕಡಿಮೆ ಸಮಾಜವೊಂದು ದೊಡ್ಡವರ ಗೌಡಿಕೆಗಳ ಪ್ರಕಾರವೇ ಬದುಕುಳಿಯಲು ಸಾಧ್ಯವೆಂಬಂಥ ಪರಿಸ್ಥಿತಿ ನಿರ್ಮಿಸುವ 'ಗೋಲ ಬಂಧಿಖಾನೆ' ರೀತಿಯೇ ಇರುತ್ತದೆ." ಈ ಸಂಕಥನಗಳು ಪರಸ್ಪರ ಸಹಮತವುಳ್ಳ ಮತ್ತು ಸಮಾಜವನ್ನು ಇಡಿಯಾಗಿ ನಿಯಂತ್ರಿಸಬಲ್ಲ ಶಕ್ತಿಯುಳ್ಳ ಕೆಲವು ಹೇಳಿಕೆಗಳ ನಿರ್ದಿಷ್ಟ ಒಕ್ಕೂಟವೆಂದು ಫುಕೋ ಹೇಳುತ್ತಾನೆ. (ಪೂರ್ವೋಕ್ತ)

ಈ ಎಲ್ಲಾ ಚರ್ಚೆಗಳ ಮೂಲಕ ಫುಕೋನ ಅಭಿಪ್ರಾಯವೆಂದರೆ ಅಧಿಕಾರ ಮತ್ತು ಜ್ಞಾನ ಪರಸ್ಪರವಾದವುಗಳು. ಅವು ಒಂದನ್ನೊಂದು ಪ್ರೋತ್ಸಾಹಿಸುತ್ತವೆ ಮತ್ತು ಹಿಂಬಾಲಿಸುತ್ತವೆ. ಈ ಜ್ಞಾನ ಮತ್ತು ಅಧಿಕಾರ ಪಡೆದ ಅಲ್ಪಸಂಖ್ಯಾತ ಗುಂಪು ಲೋಕದೃಷ್ಟಿಯನ್ನೆ ಬದಲಿಸಬಲ್ಲಂತಹ ಸಂಕಥನಗಳನ್ನು ರೂಪಿಸುತ್ತದೆ. ಈ ಸಂಕಥನಗಳು ಆಳುವ ಮತ್ತು ಆಳಿಸಿಕೊಳ್ಳುವ ಮನೋಸ್ಥಿತಿಯನ್ನು ಸೃಷ್ಟಿಸಿ ಅದನ್ನೇ ನಂಬುವಂತೆ

ಮಾಡುತ್ತವೆ. ಹೀಗಿರುವುದರಿಂದಲೇ ಅಧಿಕಾರ ಹಾಗೂ ನಿಯಂತ್ರಣ ಸಾಧ್ಯ ಮತ್ತು ಅದು ನಿರಂತರವಾಗುವುದೂ ಕೂಡ ಸಾಧ್ಯ.

ವಾಸ್ತವವಾಗಿ 'ಯಾಜಮಾನ್ಯ' ಅಥವಾ 'ಹೆಜೆಮನಿ' ಎಂಬ ಮಹತ್ವಪೂರ್ಣ ಪರಿಕಲ್ಪನೆ ಕೊಟ್ಟವನು ಇಟಲಿ ದೇಶದ 'ಆಂಟೋನಿಯೋ ಗ್ರಾಮ್ಷಿ'. ಇಟಾಲಿಯನ್ ಭಾಷೆಯಲ್ಲಿ ಜೆಜೆಮೊನಿಯ (Gegemonia) ಎಂಬುದು ಇಂಗ್ಲಿಷ್‌ನಲ್ಲಿ 'ಹೆಜೆಮನಿ' (Hegemony) ಎಂದಾಗಿದೆ. ಗ್ರಾಮ್ಷಿಯ ಪ್ರಕಾರ ಯಜಮಾನಿಕೆಯು ಎರಡು ರೀತಿಯಲ್ಲಿ ಪ್ರಕಟವಾಗುತ್ತದೆ.

೧. ನೇರ ಬಲ ಪ್ರಯೋಗದ ಮೂಲಕ ಆಳುವುದು

೨. ಜನಸಮ್ಮತಿಯನ್ನು ಹುಟ್ಟು ಹಾಕುವುದರ ಮೂಲಕ ಆಳುವುದು

ಎರಡನೆಯ ಬಗೆ ಹೆಚ್ಚು ಪರಿಣಾಮಕಾರಿ ಮತ್ತು ಪ್ರಭಾವಶಾಲಿಯಾದುದು. ಆಡಳಿತ ವರ್ಗವು ತನ್ನ ಅಧಿಕಾರದ ಶಾಶ್ವತತೆಗಾಗಿ ಸಂಚುಗಳನ್ನು ರೂಪಿಸುತ್ತಾ ಅಧೀನರಾದವರೇ ಸ್ವಯಂ ತಮ್ಮನ್ನಾಳಲು ಒಪ್ಪಿಗೆ ನೀಡುವಂತೆ ಅವರ ಆಲೋಚನಾ ಕ್ರಮವನ್ನು ನಿಯಂತ್ರಿಸುವುದನ್ನು ಈ ಹೆಜೆಮನಿ ಪರಿಕಲ್ಪನೆಯು ಹೇಳುತ್ತದೆ. "ಈ ಸಂದರ್ಭದಲ್ಲಿ ಸಮಾಜದ ಕೆಲವು ಪ್ರಬಲ ಸಮುದಾಯಗಳ / ವರ್ಗಗಳ ಸಾಂಸ್ಕೃತಿಕ-ವೈಚಾರಿಕ ರಚನೆಗಳಿಗೆ (Cultural-Ideological-Structures) ಅವು ಇತರ ರಚನೆಗಳಿಗಿಂತ ಶ್ರೇಷ್ಠವೆಂದು ಇಡೀ ಸಮಾಜದ ಅವ್ಯಕ್ತ ಮಾನ್ಯತೆ ಇರುತ್ತದೆ. ಈ ಕಾರಣದಿಂದಾಗಿ ಯಾವುದೇ ಬಗೆಯ ಶಕ್ತಿಯ ಅಥವಾ ಅಧಿಕಾರದ ಉಪಯೋಗವಿಲ್ಲದೆಯೂ ಒಂದು ವರ್ಗ-ಸಮುದಾಯ-ರಾಷ್ಟ್ರ ಇನ್ನೊಂದು ವರ್ಗವನ್ನು-ಸಮುದಾಯವನ್ನು-ರಾಷ್ಟ್ರವನ್ನು ವೈಚಾರಿಕ ಹಾಗೂ ಸಾಂಸ್ಕೃತಿಕ ನೆಲೆಗಳಲ್ಲಿ ನಿಯಂತ್ರಿಸಬಹುದು." (ಸಿ. ಎನ್. ರಾಮಚಂದ್ರನ್, ಎಡ್ವರ್ಡ್ ಸೈದ್, ಪುಟ-೧೬, ೨೦೦೩)

ಸಾಮ್ರಾಜ್ಯವಾದಿ ಆಳ್ವಿಕೆಯ ಈ ಬಗೆಯ ಯಾಜಮಾನ್ಯವು ಪಶ್ಚಿಮಕೇಂದ್ರಿತ ಕಲ್ಪನೆಗಳನ್ನು ಸಹಜವಾಗಿಯೆ ನಮಗಿಂತ ಶ್ರೇಷ್ಠದ್ದು ಎಂದು ಇತರೆ ಸ್ಥಳೀಯರು ನಂಬುವಂತೆ ಮಾಡುತ್ತದೆ. ವಸಾಹತುಗೊಂಡ ರಾಷ್ಟ್ರದ ಜನಸಮೂಹ ಒಟ್ಟಾರೆಯಾಗಿ ಒಪ್ಪಿಕೊಳ್ಳುವಂತಹ ಶೋಷಕ ಪುರಾಣಗಳನ್ನು ಬಿತ್ತುತ್ತದೆ. ಬಹುಸಂಖ್ಯಾತ ಜನಸಮುದಾಯವನ್ನು ಮರುಳು ಮಾಡುವ ಮೂಲಕ ಅವರ ಸಹಕಾರದೊಂದಿಗೇ ಅವರನ್ನು ಆಳುತ್ತಾ ಸದಾ ಅಧಿಕಾರ ಚಲಾಯಿಸುತ್ತಿರಲು ಅವರಿಂದಲೇ ಒಪ್ಪಿಗೆಯನ್ನು ಪಡೆಯುವ ಕೆಲವೇ ಜನಗಳ ಗುಂಪಿನ ಹುನ್ನಾರವೇ ಈ ಸಾಂಸ್ಕೃತಿಕ ಯಜಮಾನಿಕೆ.

ಗಾಂಧಿ ಭಾರತದ ಸಂಸ್ಕೃತಿಯನ್ನು ಗ್ರಹಿಸಿದ ಕ್ರಮವು ಇಲ್ಲಿ ಉಲ್ಲೇಖನೀಯವಾಗಿದೆ.

> ನಮ್ಮ ಕಾಲದ ಭಾರತೀಯ ಸಂಸ್ಕೃತಿಯು ರಚನೆಯುಲ್ಲಿದೆ. ಇಂದು ಭಾರತದಲ್ಲಿ ಪರಸ್ಪರ ಘರ್ಷಣೆಯಲ್ಲಿರುವಂತೆ ಕಂಡುಬರುವ ಎಲ್ಲ ಸಂಸ್ಕೃತಿಗಳನ್ನೂ ಸಂಮಿಳಿತವಾಗುವಂತೆ ನಮ್ಮಲ್ಲಿ ಅನೇಕರು ಪ್ರಯತ್ನಿಸುತ್ತಿದ್ದೇವೆ. ತಾನೇ ಪ್ರತ್ಯೇಕವಾಗಿರಬೇಕೆಂದು ಯತ್ನಿಸುವ ಯಾವ ಸಂಸ್ಕೃತಿಯೂ ಜೀವಿಸಲಾರದು. ಶುದ್ಧ ಆರ್ಯ ಸಂಸ್ಕೃತಿ ಎಂಬುದು ಇಂದಿನ ಭಾರತದಲ್ಲಿಲ್ಲ. ಆರ್ಯರು ಭಾರತಕ್ಕೆ ಸ್ಥಳಜನ್ಯರೋ ಅಥವಾ ಅನಪೇಕ್ಷಿತರಾಗಿ ಮೇಲೆ ಬಿದ್ದು ಬಂದವರೋ ಎಂಬುದರಲ್ಲಿ ನನಗೆ ಆಸಕ್ತಿಯಿಲ್ಲ. ನಮ್ಮ ದೂರದ ಪ್ರಾಚೀನರು ಅತ್ಯಂತ ಸ್ವತಂತ್ರರಾಗಿ ಪರಸ್ಪರ ಸಮ್ಮಿಳಿತರಾದರೆಂಬುದೂ, ನಮ್ಮ ಇಂದಿನ ತಲೆಮಾರು ಆ ಸಮ್ಮಿಳನದ ಪರಿಣಾಮವೆಂಬುದೂ ನನಗೆ ಆಸಕ್ತಿಯ ವಿಷಯ. ನಾವು ಜನ್ಮತಾಳಿರುವ ದೇಶಕ್ಕೂ, ಅದನ್ನು ಧರಿಸಿರುವ ಪುಟ್ಟ ಧರೆಗೂ ನಾವೇನಾದರೂ ಒಳ್ಳೆಯದನ್ನು ಮಾಡುತ್ತಿದ್ದೇವೆಯೋ ಅಥವಾ ಹೊರೆಯಾಗಿದೇವೋ ಎಂಬುದನ್ನು ಭವಿಷ್ಯವೇ ಹೇಳಬೇಕು.
>
> (ಹರಿಜನ: 9–5–36) (ಸಮಾಜ ಧರ್ಮ 1959 ಪುಟ. 42)

“ಗ್ರಾಮ್ಷಿಯ ಪ್ರಕಾರ ಯಜಮಾನ್ಯವು ಕೆಲವೇಳೆ ತುಂಬಾ ಸೂಕ್ಷ್ಮವಾದ ಪ್ರಭಾವಗಳ ಬಳಕೆಯಿಂದ ಮತ್ತು ಕೆಲವೇಳೆ ಅಪ್ರಜ್ಞಾಪೂರ್ವಕ ನೆಲೆಯ ಪ್ರೇರಣೆಯಿಂದ ಜನಾಭಿಪ್ರಾಯವನ್ನೇ ರೂಪಿಸುತ್ತಿರುತ್ತದೆ. ಇದನ್ನು ಸಾಧಿಸಲು ಕೆಲವೇಳೆ ಭಾಷೆಯನ್ನು ಇದು ಹತಾರವನ್ನಾಗಿ ಬಳಸಿಕೊಳ್ಳುತ್ತದೆ. ಈ ಭಾಷಿಕ ಹತಾರದ ಮೂಲಕವೇ ಬರೆಯಲ್ಪಡುವ ಸಾಹಿತ್ಯ ಮತ್ತು ಇತಿಹಾಸಗಳು ಸಾಮಾಜಿಕ ವ್ಯವಸ್ಥೆಗಳ ಮತ್ತು ಸಂಸ್ಥೆಗಳ ನಿರ್ಮಾಣದಲ್ಲಿ ಬಹುಮುಖ್ಯ ಪಾತ್ರ ವಹಿಸುತ್ತವೆ. ಈ ವ್ಯವಸ್ಥೆ ಮತ್ತು ಸಂಸ್ಥೆಗಳೇ ಬಲಾಢ್ಯವರ್ಗದ ಹಿತಾಸಕ್ತಿಗಳನ್ನು ಕಾಪಾಡುವ ಐಡಿಯಾಲಜಿಯನ್ನು ಪೋಷಿಸುವ ಮತ್ತು ಪ್ರತಿಷ್ಠಾಪಿಸುವ ಕೆಲಸವನ್ನು ಮಾಡುತ್ತಿರುತ್ತದೆ. ಇದಕ್ಕೆ ಉದಾಹರಣೆ ಎಂಬಂತೆ ಬ್ರಿಟೀಷ್ ಇತಿಹಾಸ ಮತ್ತು ಸಾಹಿತ್ಯಗಳನ್ನು ನೋಡಬಹುದು. ಇಂಗ್ಲಿಷ್‌ತನದ ವಾಹಕವಾದ ಇಂಗ್ಲಿಷ್ ಭಾಷೆ ಕೂಡ ಇದಕ್ಕೆ ಒಂದು ಉದಾಹರಣೆ.” ಎನ್ನುವ ಶೆಲ್ಲಿವಾಲಿಯಾರ ಅಭಿಪ್ರಾಯವು ಸಾಂಸ್ಕೃತಿಕ ಯಜಮಾನಿಕೆಯ ಹಿಂದಿನ ತಾತ್ವಿಕತೆಯನ್ನು ವಿಷದಪಡಿಸುತ್ತದೆ. (ಪೂರ್ವೋಕ್ತ)

ಗ್ರಾಮ್ಷಿಯ ಪ್ರಕಾರ ಆಳುವ ವರ್ಗದ ಶಕ್ತಿಯಿರುವುದು ಅವರ ವರ್ಗಪ್ರಾಬಲ್ಯದಲ್ಲಿ. ಈ ವರ್ಗ ಪ್ರಾಬಲ್ಯಕ್ಕೆ ಪ್ರಭುತ್ವವೇ ಶ್ರೀರಕ್ಷೆ. ಪ್ರಭುತ್ವದ ಮೇಲೆ ಆಳುವ ವರ್ಗ ಹಿಡಿತ ಸಾಧಿಸುವುದು ಕೇವಲ ಬಲಪ್ರಯೋಗದಿಂದಷ್ಟೇ ಅಲ್ಲ. ಉತ್ಪಾದನೆಯ ಮೇಲಿನ ಒಡೆತನ ಮತ್ತು ಪ್ರಭುತ್ವದ ಹತೋಟಿಯನ್ನು ರಕ್ಷಿಸಿಕೊಳ್ಳಲು ಮತ್ತು ಬಲಪ್ರಯೋಗವಿಲ್ಲದೆ ಜನರನ್ನು ನಿಯಂತ್ರಿಸಲು ನಾಗರಿಕ ಸಮಾಜದಲ್ಲಿ ಜನಜನಿತವಾದ ಕೆಲ ನಂಬಿಕೆ, ಮೌಲ್ಯಗಳು ಭೂಮಿಕೆಯನ್ನು ಒದಗಿಸುತ್ತವೆ. ಇವುಗಳನ್ನು ಆಳುವ ವರ್ಗ ಜತನವಾಗಿ ಪೋಷಿಸುತ್ತದೆ. (ಮೂಲ: ಶೆಲ್ಲಿವಾಲಿಯ, ಎಡ್ವರ್ಡ್‌ಸೈದ್, ಅನು: ರಾಮಲಿಂಗಪ್ಪ. ಟಿ. ಬೇಗೂರು, ಪುಟ-೨೨, ೨೦೦೩) ಆಳರಸರು; ಜಮೀನುದಾರರು ಧಾರ್ಮಿಕ ಸಂಸ್ಥೆಗಳಿಗೆ ಯಥೇಚ್ಚವಾದ ಪೋಷಣೆ ನೀಡಿದರು. ಆ ಮೂಲಕ ಸಾಮಾನ್ಯರ ಮತ್ತು ಧಾರ್ಮಿಕ ಸಂಸ್ಥೆಗಳ ವಿಶ್ವಾಸಗಳಿಸಿಕೊಂಡರು. ಸಾಮಾಜಿಕ ಶ್ರೇಣೀಕರಣ ನಿಯಾಮಕವಾದದ್ದು, ಹೆಂಗಸರು ದೈಹಿಕವಾಗಿ ಮತ್ತು ಮಾನಸಿಕವಾಗಿ ದುರ್ಬಲರು, ಅವರು ದುಡಿಯಲು ಸಮರ್ಥರಲ್ಲ, ಅವರು ಕೇವಲ ಗಂಡಸಿನ ಸಾಧನೆಯ ಕಾರ್ಯಕ್ಕೆ ಸಾಥಿಯಾಗಬೇಕು ಅಷ್ಟೇ ಜನರೆಲ್ಲಾ ರೀತಿಯ ನಂಬಿಕೆಗಳು ಜಾರಿಯಲ್ಲಿರುವುದನ್ನು ಆಳುವ ವರ್ಗ ಅಳಿಸಲು ಯತ್ನಿಸುವುದಿಲ್ಲ. ಅಧಿಕಾರ ಚಲಾವಣೆಗೆ ಅನುಕೂಲವಾಗಿರುವ ಲಿಂಗಭೇದ, ಅಸಮಾನತೆ, ತಾರತಮ್ಯದ ಸಂಗತಿಗಳನ್ನು ಯಾವತ್ತೂ ಆಳುವ ವರ್ಗ ವಿರೋಧಿಸುವುದಿಲ್ಲ. ಇವುಗಳನ್ನು ಮಾಡಿಕೊಳ್ಳುವುದರ ಮೂಲಕ ಹೊಸ ಬಗೆಯ ತಾರತಮ್ಯಗಳಿಗೆ ಸಮರ್ಥನೆ ನೀಡಲು ಮುಂದಾಗುತ್ತದೆ. ಇದು ಆಳುವ ವರ್ಗದ ಅಧಿಕಾರವನ್ನು ಭದ್ರಗೊಳಿಸುತ್ತಲೇ ಹೋಗುತ್ತದೆ.

ಒಂದೆಡೆ ತೋಳ್ಬಲದ ಮೂಲಕ ಆಳುವ ವರ್ಗ ಪ್ರಾಬಲ್ಯ ಪಡೆದರೆ ಇನ್ನೊಂದೆಡೆ ಸಮ್ಮತಿಯನ್ನು ರೂಪಿಸುವುದರ ಮೂಲಕ ಯಜಮಾನಿಕೆಯನ್ನು ಸ್ಥಾಪಿಸುತ್ತದೆ. ಮೌನಸಮ್ಮತಿಯನ್ನು ಪ್ರಸಂಗ ಬಂದಾಗ ತೋಳ್ಬಲದ ಪ್ರದರ್ಶನಕ್ಕೆ ಸಮರ್ಥನೆಯಾಗಿ ಬಳಸಿಕೊಳ್ಳಬಹುದು; ತೋಳ್ಬಲವೇ ಆಳುವ ವರ್ಗದ ನಾಯಕತ್ವಕ್ಕೆ ಜನಸಮ್ಮತಿಯನ್ನು ದೊರಕಿಸಿಕೊಡುವ ಸಾಧನವೂ ಆಗಬಹುದು. ಯಾವುದೇ ವರ್ಗದ ಶಕ್ತಿ ಸಮಾಜದಲ್ಲಿ ಅದು ಕಾಣಿಸಿಕೊಂಡಿರುವ ಯಜಮಾನಿಕೆಯನ್ನು ಅವಲಂಬಿಸಿರುತ್ತದೆ. ಪ್ರಭುತ್ವವನ್ನು ವಶಪಡಿಸಿಕೊಂಡು, ಉತ್ಪಾದನಾ ವ್ಯವಸ್ಥೆಯನ್ನು ಬದಲಿಸುವ ಮೂಲಕ ಆಳುವ ವರ್ಗದ ತೋಳ್ಬಲವನ್ನು ಏನೋ ಸ್ಪಂದಿಸಬಹುದು; ಅಷ್ಟು ಮಾತ್ರಕ್ಕೆ ಆ ವರ್ಗದ ಯಜಮಾನಿಕೆ ಸಂಪೂರ್ಣವಾಗಿ ನಾಶವಾಗುವುದಿಲ್ಲ. ಆಳುವ ವರ್ಗಕ್ಕೆ ದಕ್ಕುವ

ಜನಸಮ್ಮತಿಯ ಹಿಂದೆ ಹಲವು ನಮೂನೆಯ ಮೌಲ್ಯಗಳು, ಬಲಾಬಾಧಿತವಾಗಿರುವಂತೆ ತೋರುವ ಸಂಸ್ಥೆಗಳು ಕೆಲಸ ಮಾಡುತ್ತಿರುತ್ತವೆ." ಇವುಗಳೇ ಯಜಮಾನಿಕೆಯನ್ನು ಒಪ್ಪುವಂತೆ ಮಾಡುತ್ತಿರುತ್ತವೆ ಎಂಬುದನ್ನು ಅರ್ಥಮಾಡಿಕೊಳ್ಳಬೇಕು ಎಂದು ಗ್ರಾಮ್ಷಿ ಹೇಳುತ್ತಾನೆ.

ಗ್ರಾಮ್ಷಿಯು ಕಾಮನ್‌ಸೆನ್ಸ್ ಅಥವಾ ಸಾಮಾನ್ಯ ಗ್ರಹಿಕೆಯ ಬಗ್ಗೆ ಮಾತಾಡುತ್ತಾನೆ. ಒಂದು ಕಾಲದಲ್ಲಿ ನಿರ್ದಿಷ್ಟ ಉದ್ದೇಶ ಇಟ್ಟುಕೊಂಡು ಕಟ್ಟಿರುವ ಪರಿಕಲ್ಪನೆ ಮುಂದೆ ಸಹಜ ಸಾಮಾಜಿಕ ನಂಬಿಕೆಯಾಗಿ ಜನಪ್ರಿಯವಾಗಿ ಬೇರು ಬಿಡುವುದನ್ನೇ ಗ್ರಾಮ್ಷಿ 'ಸಾಮಾನ್ಯ ಗ್ರಹಿಕೆ' (ಕಾಮನ್‌ಸೆನ್ಸ) ಎನ್ನುತ್ತಾನೆ. (ಕೆ. ಫಣಿರಾಜ್, ಅಂಟೋನಿಯಾ ಗ್ರಾಮ್ಷಿ, ಪುಟ. ೪೫, ೨೦೦೩) ಇವುಗಳಿಗೆ ಸಾಕ್ಷಿ, ಪುರಾವೆಗಳ ಅಗತ್ಯವಿರುವುದಿಲ್ಲ. "ಕನ್ನಡಿಗರು ತಮ್ಮ ಭಾಷೆ–ಸಂಸ್ಕೃತಿಗಳ ಬಗ್ಗೆ ಅಭಿಮಾನವಿಲ್ಲದ ಜನ. ಅದೇ ಅನ್ಯ ಭಾಷಿಕರು ದುರಭಿಮಾನಿಗಳು; ಹೆಂಗಸರ ಬುದ್ಧಿ ಮೊಳಕಾಲ ಕೆಳಗೆ; ಬ್ರಾಹ್ಮಣರು ಬೌದ್ಧಿಕ ಕೆಲಸಕ್ಕೆ, ಶೂದ್ರರು ದೈಹಿಕ ಕೆಲಸಕ್ಕೆ ಲಾಯಖು; ಮುಸ್ಲಿಮರು ಡಜನ್ ಗಟ್ಟಲೆ ಮಕ್ಕಳನ್ನು ಹಡೆಯುತ್ತಾರೆ; ಕೆಳಜಾತಿಯ ಜನರಿಗೆ ಮೀಸಲಾತಿ ಕೊಟ್ಟಿರುವುದರಿಂದ ಸರ್ಕಾರಿ ಸಂಸ್ಥೆಗಳಲ್ಲಿ ಶಿಸ್ತು, ದಕ್ಷತೆ ಕಡಿಮೆಯಾಗಿದೆ ಇತ್ಯಾದಿ." ಈ ಬಗೆಯ ನಂಬಿಕೆಗಳು ಅಥವಾ ತೀರ್ಮಾನಗಳು ಜನರಲ್ಲಿ ಸಹಜವಾಗಿ ಒಳ ಬಂದಿರುತ್ತವೆ. ಪ್ರತಿಯೊಂದು ಸಮಾಜದಲ್ಲಿಯೂ ಇಂತಹ ಕಾಮನ್‌ಸೆನ್ಸ್ ಇರುತ್ತವೆ ಮತ್ತು ಅವೆಲ್ಲವೂ ಒಂದೇ ಬಗೆಯಾಗಿರುವುದಿಲ್ಲ. ಗ್ರಾಮ್ಷಿ ಇಂತಹ ಸಾಮಾನ್ಯ ಗ್ರಹಿಕೆಗಳಲ್ಲಿ ಆಳುವ ವರ್ಗದ ಹಿತಕಾಯುವಂತಹುಗಳ ಬಗ್ಗೆ ಗಮನ ಹರಿಸುತ್ತಾನೆ. "ಒಂದು ಸಾರಿ ಅಧಿಕಾರಸ್ಥರ ವಿಚಾರಗಳು ಸಾಮಾನ್ಯ ಗ್ರಹಿಕೆಗಳಾಗಿ ಪರಿವರ್ತನೆಯಾದರೆ ಆ ವಿಚಾರಗಳ ಚಲಾವಣೆ ಸುಲಲಿತವಾಗಿ ಬಿಡುತ್ತದೆ. ಈ ವಿಚಾರಗಳಿಂದ ಪ್ರೇರಿತವಾದ ಮೌಲ್ಯಗಳಿಗೆ ಜನಮನ್ನಣೆ ನಿರಾಯಾಸವಾಗಿ ದಕ್ಕಿಬಿಡುತ್ತದೆ; ಈ ಮೌಲ್ಯಗಳನ್ನು ಆಳುವ ಮಂದಿ ಬೇರೆ ಯಾವ ಸಮರ್ಥನೆಯನ್ನೂ ನೀಡದೆ ಚಲಾಯಿಸಬಹುದು! ಇಂತಹ ಸಾಮಾನ್ಯ ಗ್ರಹಿಕೆಗಳು ಆಳುವ ಮಂದಿ ತಮ್ಮ ಯಜಮಾನಿಕೆಯನ್ನು ಜಮಾ ಮಾಡಿ, ಬಡ್ಡಿ ಸಹಿತ ಲಾಭಗಳಿಸುವ ರಾಷ್ಟ್ರೀಯ ಬ್ಯಾಂಕುಗಳು ಎಂದು ಗ್ರಾಮ್ಷಿ ಹೇಳುತ್ತಾನೆ." ಇಂತಹ ಗ್ರಹಿಕೆಗಳು ಅಸಮಾನತೆ ಮತ್ತು ಶೋಷಣೆ ತುಂಬಾ ಸಹಜ ಮತ್ತು ಬದಲಿಸಲು ಆಗದವು ಎಂಬುದನ್ನು ಒಪ್ಪಿಕೊಳ್ಳುವಂತೆ ಮಾಡುವುದರ ಮೂಲಕ ತಮ್ಮ ನಂಬಿಕೆಗಳನ್ನು ಅನುಕರಿಸಿ ಸ್ವೀಕರಿಸುವಾಗಲೇ ಸಾಮಾನ್ಯ ಜನಸಮುದಾಯದ ಮನಸ್ಸಿನಲ್ಲಿ ದ್ವಂದ್ವಾತ್ಮಕ ಐಡಿಯಾಗಳ ಗೊಂದಲವನ್ನು ಬಿತ್ತುವ ಮೂಲಕ ಯಾಜಮಾನ್ಯವು ಬಹಳ ಚೆನ್ನಾಗಿ

ಬೇಳೆ ಬೇಯಿಸಿಕೊಳ್ಳುತ್ತದೆ ಎಂಬುದು ಗಮನಿಸಬೇಕಾದುದು.(ಕೆ. ಫಣಿರಾಜ್ ಆಂಟೋನಿಯಾ ಗ್ರಾಮ್ಷಿ, ೨೦೦೩ ಪುಟ-೪೮,-೪೯, ೨೦೦೩) ವರ್ಗ, ಜಾತಿ, ಮತ, ಲಿಂಗ, ದೇಶ, ವಿಚಾರ, ಸಂಸ್ಕೃತಿ, ಭಾಷೆ ಹೀಗೆ ಇಂಥಾ ಅನೇಕ ಭಿನ್ನಭಿನ್ನ ನೆಲೆಗಳಲ್ಲಿ ಯಾವುದು ಶೋಷಣೆಗೆ ಗುರಿಯಾಗಿರುತ್ತದೊ ಅಥವಾ ಅಲಕ್ಷ್ಯಕ್ಕೆ ಈಡಾಗಿರುತ್ತದೊ ಅದೆಲ್ಲವನ್ನು ಕುರಿತು ನಡೆಸಿದ ಅಧ್ಯಯನಗಳೇ 'ಸಬಾಲ್ಟ್ರನ್ ಸ್ಟಡೀಸ್' ಅಥವಾ 'ಪರ್ಯಾಯವಾದಿ ಅಧ್ಯಯನ ಕ್ರಮಗಳು' ಎಂದು ಗುರುತಿಸಲಾಗುತ್ತದೆ. ಜ್ಞಾನ ಹಾಗು ಅಧಿಕಾರದ ನೆಲೆಯಿಂದ ಯಾಜಮಾನ್ಯ ಸ್ಥಾಪಿಸಿದ ಪ್ರಬಲ ವರ್ಗ ಅಥವಾ ಗುಂಪು ರಚಿಸಿರುವ ಮಹಾ ಕಥನಗಳನ್ನು ಕೆಡವಿ ಹಾಕುವ ಉದ್ದೇಶದಿಂದ ಯಾವಾಗಲೂ ಸ್ವಯಂ ಪ್ರತಿನಿಧೀಕರಣ ಕ್ರಿಯೆಯಲ್ಲಿ ಈ ಅಧ್ಯಯನ ಕ್ರಮಗಳು ತೊಡಗಿರುತ್ತವೆ. ಗ್ರಾಮ್ಷಿ ಇದನ್ನೇ 'ಪ್ರತಿ ಯಜಮಾನಿಕೆ' ಎಂದು ಕರೆಯುತ್ತಾನೆ. ಸೈದ್ ಕೂಡಾ ಗ್ರಾಮ್ಷಿಯನ್ನೇ ಅನುಸರಿಸಿ ತನ್ನ ಓರಿಯಂಟಲಿಸಂನ್ನು ಕಟ್ಟುತ್ತಾನೆ. ಸರಳವಾದ ಮತ್ತು ಏಕಮುಖೀ ನೆಲೆಯಿಂದ ನಿರ್ಮಾಣಗೊಳ್ಳುವ ಚರಿತ್ರೆಯನ್ನು ವಿರೋಧಿಸುತ್ತಲೇ ಅದನ್ನು ಮುರಿದು ಕಟ್ಟುವ ಕ್ರಿಯೆಯಲ್ಲಿ ತೊಡಗಬೇಕೆಂದು ಈ ಅಧ್ಯಯನ ಕ್ರಮಗಳು ಹೇಳುತ್ತವೆ. ಇದುವರೆಗೆ ಯಾವುದು ಅಲಕ್ಷ್ಯಕ್ಕೆ ಅಥವಾ ನಿರ್ಲಕ್ಷ್ಯಕ್ಕೆ ಗುರಿಯಾಗಿತ್ತೋ ಅದನ್ನು ಮುಖ್ಯವಾಹಿನಿಯಲ್ಲಿ ತಂದು ಅಲ್ಲಿನ ಅನನ್ಯತೆ ಮತ್ತು ಜ್ಞಾನ ಪರಂಪರೆಗಳನ್ನು ಆಳುವ ವರ್ಗದ ಸಂಕಥನಗಳೊಂದಿಗೆ ಮುಖಾಮುಖಿಯಾಸಬೇಕೆಂಬುದು ಈ ಅಧ್ಯಯನ ಕ್ರಮಗಳ ತಾತ್ವಿಕ ನಿಲುವು. "ಭಾರತದಲ್ಲಿ ಕೆಳಸ್ತರದ ವರ್ಗಗಳ ಇತಿಹಾಸವನ್ನು ಭಾರತದ ರಾಷ್ಟ್ರೀಯ ಯಜಮಾನ ಪರಿಕಲ್ಪನೆಗಳಿಗೆ ವಿರುದ್ಧವಾಗಿ ರಂಜಿತ್‌ಗುಹಾ, ಪಾರ್ಥಚಟರ್ಜಿ, ಜ್ಞಾನೇಂದ್ರಪಾಂಡೆ ಮುಂತಾದವರ ಸಂಪಾದಕತ್ವದಲ್ಲಿ ಬರುತ್ತಿರುವ ಸಬಾಲ್ಟ್ರನ್ ಸ್ಟಡೀಸ್ ಸಂಪುಟಗಳಲ್ಲಿ ಗ್ರಾಮ್ಷಿ ದೃಷ್ಟಿಕೋನದಿಂದ ದಾಖಲಿಸಲಾಗಿದೆ." ಗಾಂಧಿಯ ಚಿಂತನೆಗಳು ಒಂದು ಹಂತದಲ್ಲಿ ಕೆಳಸ್ತರವನ್ನು ಸೂಚಿಸುತ್ತವೆ.

ಆಳುವವರ ಮತ್ತು ಆಳಿಸಿಕೊಳ್ಳುವವರ ನಡುವೆ ಪರಸ್ಪರ ಸಂವಾದವಿರುತ್ತದೆ. ಈ ಸಂವಾದವೆನ್ನುವುದು ತುಂಬಾ ಸಂಕೀರ್ಣವಾಗಿರುತ್ತದೆ. ಇಲ್ಲಿಂದಲೇ ಯಜಮಾನಿಕೆ ರೂಪುಗೊಳ್ಳುತ್ತದೆ. ಯಜಮಾನಿಕೆ ರೂಪುಗೊಳ್ಳುವುದೇ ಆಳಿಸಿಕೊಳ್ಳುವ ವರ್ಗವನ್ನು ಹಿಡಿತದಲ್ಲಿ ಇರಿಸಿಕೊಳ್ಳುವ ಮೂಲಕ. (ಕೆ. ಫಣಿರಾಜ್. ಆಂಟೋನಿಯೋ ಗ್ರಾಮ್ಷಿ, ಪುಟ-೫೫, ೨೦೦೩) ಇದನ್ನು ಅರ್ಥಮಾಡಿಕೊಳ್ಳಬೇಕು ಮತ್ತು ಇದರಿಂದ

ಬಿಡಿಸಿಕೊಂಡು ಪ್ರತಿ ಯಜಮಾನಿಕೆಯನ್ನು ಕಟ್ಟಬೇಕಾದುದು ಅಗತ್ಯ. ರಾಷ್ಟ್ರೀಯ ಆಂದೋಲನದ ಕುರಿತು ಚರ್ಚಿಸುವಾಗ ರಣಜಿತ್ ಗುಹಾ ಅವರು ಹೇಳುವ ಮಾತು ಗಮನಿಸಬೇಕಾದುದು. "ರಾಷ್ಟ್ರೀಯತೆ ಎನ್ನುವುದು ಭಾರತೀಯ ಏಕಾಂತವಾದಿಗಳಿಗೆ ಕಲಿಕೆಯ ಒಂದು ಭಾಗವಾಗಿತ್ತು. ಹೀಗಾಗಿ ವಸಾಹತು ಕಾಲದ ಆಡಳಿತ, ಅದರ ಅಧಿಕಾರ ಮತ್ತು ದೇಶೀಯ ಬೌದ್ಧಿಕ ಏಕಾಂತವಾದಿಗಳ ನಡುವೆ ಸ್ಪರ್ದೆ ಮತ್ತು ಸಹಕಾರ ಎರಡೂ ಕಾಣಿಸಿಕೊಂಡಿತು. ಇದು ಹೊಸ ರೀತಿಯ ಸಂವಾದಕ್ಕೆ ಕಾರಣವಾಯಿತು." ಅವರೇ ಹೇಳುವಂತೆ ವಸಾಹತು ಅನುಭವದ ಪರಿಣಾಮಗಳು ಸರಳರೇಖಾತ್ಮಕವಲ್ಲ ಮತ್ತು ಶುದ್ಧ ತಾರ್ಕಿಕವೂ ಅಲ್ಲ. ಈ ಅನುಭವವು ಪರ್ಯಾಯವಾದ ಅನೇಕ ಸಂಗತಿಗಳ ಅನಾವರಣವು ಕೂಡ ಆಗಿದೆ. ಹೀಗಾಗಿ ವಸಾಹತು ಅನುಭವದ ನಿರೂಪಣೆಗಳು ಸ್ಥಳೀಯ ಸಮಾಜದ, ಪ್ರಾದೇಶಿಕತೆಯ, ಕೆಳಸ್ತರದ ಸಂಸ್ಕೃತಿ, ಭಾಷೆಯ ಅನೇಕ ನಿರೂಪಣೆಗಳು ಸೇರಬೇಕಾಗುತ್ತದೆ. ಗಾಂಧಿಕಟ್ಟಿದ್ದು ಪರಾಯವನ್ನು

ಆಳುವವ ಮತ್ತು ಆಳಿಸಿಕೊಳ್ಳುವವ ಇವರಿಬ್ಬರ ನಡುವಿನ ಪರಸ್ಪರ ಸಂಕೀರ್ಣ ಸಂವಾದದಿಂದಲೇ ಯಜಮಾನಿಕೆ ರೂಪುಗೊಳ್ಳುತ್ತಾನೆ. ಆಳುವವ ಬಲತ್ಕಾರದ (Coercion) ಮೂಲಕ ದಂಡದ ಪರಿಭಾಷೆಯಲ್ಲಿ ಅಥವಾ ದೈಹಿಕ ಹಿಂಸೆಯ (Persuasion) ಮೂಲಕ ಒಪ್ಪುವಂತೆ ಮಾಡುವುದರಿಂದ ಅಧಿಕಾರ ಗಳಿಸಿಕೊಳ್ಳುತ್ತಾನೆ. ಹಾಗೆಯೇ ಆಳುವವನೂ ಕೂಡ ಸಹಕಾರದ (Collabration) ಮೂಲಕ ಅಥವಾ ಸ್ವಯಂ ಅಂಗೀಕಾರದ (Resistance) ಮೂಲಕ ಅಧಿಕಾರಕ್ಕೆ ಅಥವಾ ಆಳ್ವಿಕೆಗೆ ಕಾರಣನಾಗುತ್ತಾನೆ. ಗಾಂಧಿಯ ಯಜಮಾನಿಕೆಯನ್ನು ಉದ್ದೇಶಿಸಿ ಹೇಳುವುದು ಭಿನ್ನ ಮಾದರಿ ಆದರ್ಶ ಸ್ವಾತಂತ್ರ್ಯದ ಕುರಿತು ಹೇಳುವಾಗ ಗಾಂಧಿಯವರು ಪ್ರತಿಪಾದಿಸಿರುವ ನಿಲುವು ಇಲ್ಲಿ ಉಲ್ಲೇಖನೀಯ:

> ನನಗೆ ರಾಜಕೀಯ ಸ್ವಾತಂತ್ರ್ಯವೇ ಸರ್ವಸ್ವವಲ್ಲ. ಜನರು ಜೀವನದ ಎಲ್ಲ ಕ್ಷೇತ್ರಗಳಲ್ಲಿಯೂ ಅಭಿವೃದ್ಧಿ ಹೊಂದಲಿಕ್ಕೆ ಅದೊಂದು ಸಾಧನ ಮಾತ್ರ. ರಾಜಕೀಯಾಧಿಕಾರವೆಂದರೆ ಜನರು ತಮ್ಮ ಪ್ರತಿನಿಧಿಗಳ ಮೂಲಕವಾಗಿ ತಮ್ಮ ರಾಷ್ಟ್ರೀಯ ಜೀವನವನ್ನು ನಿಯಂತ್ರಿಸಿಕೊಳ್ಳುವುದು. ರಾಷ್ಟ್ರ ಜೀವನವು ತನ್ನನ್ನು ತಾನೇ ನಿಯಂತ್ರಿಸಿಕೊಳ್ಳುವಷ್ಟು ಪರಿಪೂರ್ಣತೆ ಪಡೆದರೆ, ಪ್ರತಿನಿಧಿತ್ವದ ಅವಶ್ಯವೇ ಇರುವುದಿಲ್ಲ. ಅದೊಂದು ಬಗೆಯ ಜ್ಞಾನಿಗಳ ಅರಾಜಕತೆಯಾಗುವುದು. ಅಂತಹ ರಾಜ್ಯದಲ್ಲಿ ಪ್ರತಿಯೊಬ್ಬನೂ ತನಗೆ ತಾನೇ ಆಳಿಸಿಕೊಳ್ಳುವವನಾಗುತ್ತಾನೆ. ಆತನು ತನ್ನ

> **ನೆರೆಹೊರೆಯವರಿಗೆ ತುಸುವಾದರೂ ತೊಂದರೆಯಾಗದಂತೆ ತನ್ನನ್ನು ತಾನೇ ನಿಯಂತ್ರಿಸಿಕೊಳ್ಳುವನು. ಇಂತಹ ಆದರ್ಶ ರಾಜ್ಯದಲ್ಲಿ ರಾಜಕೀಯಾಧಿಕಾರವೇ ಇರುವುದಿಲ್ಲ. ಯಾಕೆಂದರೆ, ಅದಕ್ಕೆ ಯಾವ ಸರಕಾರವೂ ಇರುವುದಿಲ್ಲ. ಆದರೆ ಈ ಆದರ್ಶವನ್ನು ಜೀವನದಲ್ಲಿ ಪೂರ್ಣವಾಗಿ ಮುಟ್ಟುವುದು ಅಶಕ್ಯ. ಆದ್ದರಿಂದಲೇ ಥೋರೋ ಅವರು ಹೀಗೆ ಸೂತ್ರಿಸಿದ್ದಾರೆ- ಯಾವ ಸರಕಾರದ ಅಳಿಕೆಯು ತೀರ ಕಡಿಮೆಯಾಗಿರುತ್ತದೋ ಅದೇ ಅತ್ಯುತ್ತಮ ಸರಕಾರ. (ಯುಂಗ್ ಇಂಡಿಯಾ 1931) (ಸ್ವಾತಂತ್ರ್ಯ ಮೋ.ಕ. ಗಾಂಧಿ 1960–2008 ಪುಟ. 38)**

ವಸಾಹತುಕಾಲದ ಅನೇಕ ಚಾರಿತ್ರಿಕ ನಿರೂಪಣೆ ಅನುಕರಣೆಯ ಮಾದರಿಯವು. ಚರಿತ್ರೆಯನ್ನು ಬರೆಯುವಾಗ ನಾವು ಪಶ್ಚಿಮವನ್ನು ಅನುಕರಣೆ ಮಾಡಿದೆವು. (ಹೋಮಿಬಾಬಾ) ಪಶ್ಚಿಮದ ಚಿಂತಕರು ಭಾರತವನ್ನು ನೋಡುವಾಗ ಒಂದು 'ರಾಜಕೀಯ ಜನಾಂಗ'ವೆಂಬಂತೆ ಪರಿಗಣಿಸಿದರು. ಯುರೋಪಿನ ಪುನರುಜ್ಜೀವನ ಕಾಲಘಟ್ಟದಲ್ಲಿ ರೂಪುಗೊಂಡ ವಿಶ್ವಾತ್ಮಕತೆಗೆ ಯಾವ ಅರ್ಥವೂ ಉಳಿಸಿಲ್ಲ ಅದನ್ನು ಪರಿಶೀಲಿಸುವ ಅಗತ್ಯವಿದೆ. ಈ ಕಾರಣಕ್ಕೆ ಯುರೋಪ್ ಆಧಾರಿತ ಚಿಂತನೆಯ ಕ್ರಮಗಳನ್ನು ಭಂಜನಗೊಳಿಸುವ ಅಗತ್ಯವಿದೆ. ಆದರೆ ಪ್ರಗತಿಪರತೆ, ಪ್ರಜೆ, ನಾಗರಿಕತೆ ತಿರಸ್ಕರಿಸಬೇಕಾಗಿಲ್ಲ. ಹಾಗೆಯೇ ಅಚಾರಿತ್ರಿಕ, ಧಾರ್ಮಿಕ, ಆಧುನಿಕತೆಯ ವಿರೋಧಿಸುವುದರ ಅಗತ್ಯವಿಲ್ಲ ಹಾಗೆಂದು ಎಲ್ಲವನ್ನು ಬಂಡವಾಳದ ನಿರೂಪಣೆಯಿಂದಲೇ ಪ್ರಾರಂಭಿಸಬೇಕಾಗಿಲ್ಲ. ವಸಾಹತುವಾದಿ ಯಜಮಾನಿಕೆಯಲ್ಲಿರುವ ಪ್ರಮುಖ ಪ್ರಶ್ನೆಯೆಂದರೆ ಮನುಷ್ಯ–ಮನುಷ್ಯರ ನಡುವಣ ರಾಜಕಾರಣದ ಪ್ರಶ್ನೆ. ಅದನ್ನು ಮರೆಯಬಾರದು. ಈ ಬಗೆಯ ಯಜಮಾನಿಕೆಯ ಸಂಕೀರ್ಣತೆಯನ್ನು ಅರ್ಥಮಾಡಿಕೊಳ್ಳಬೇಕಾಗುತ್ತದೆ. ಯಾರು ಆಳಿಸಿಕೊಳ್ಳುತ್ತಾರೋ ಅವರ ಮನೋಧೋರಣೆಗೆ ಕಾರಣವಾದ ಸಂಕಥನಗಳನ್ನು ಮುರಿಯಬೇಕು. ಅಧಿಕಾರಶಾಹಿ ಅಥವಾ ಜ್ಞಾನಶಾಹಿಯನ್ನು ಸ್ವಯಂ ಅಂಗೀಕರಿಸುವ , ಇಲ್ಲವೇ ಅಧಿಕಾರಕ್ಕೆ ಸಹಕರಿಸುವ ಮಾನಸಿಕ ಸ್ಥಿತಿಯಿಂದ ಹೊರಬರಬೇಕು. ಇದು ಆಗಬೇಕಾದರೆ ಈಗಾಗಲೇ ಇದು ಸರಿ, ಇದು ನೈತಿಕ, ಇದು ನಾಗರಿಕ, ಇದು ಶ್ರೇಷ್ಠ, ಇದು ಸಂಸ್ಕೃತಿ, ಇದು ಶಕ್ತ ಎಂದು ಸಿದ್ಧವಾಗಿರುವ ಮಿತ್‌ಗಳನ್ನು ಒಡೆಯಬೇಕಾಗಿದೆ. ಯಾವ ಬಗೆಯ ಜ್ಞಾನ ಪರಂಪರೆಗಳನ್ನು ಯಾವ ಬಗೆಯ ಸಂಸ್ಕೃತಿ ಮೌಲ್ಯಗಳನ್ನು, ಯಾವ ಬಗೆಯ ಭಾಷೆ, ನಂಬಿಕೆಗಳನ್ನು ಕೆಳಸ್ತರದಲ್ಲಿಟ್ಟು ಅವುಗಳ ಮೇಲೆ ಏಕರೂಪತೆಯನ್ನು ಹೇರಲಾಗಿದೆಯೋ ಅದರಿಂದ ಬಿಡಿಸಿಕೊಂಡು

ಬೇರೆ ರೂಪಗಳನ್ನು ಮತ್ತು ತಾತ್ವಿಕತೆಯನ್ನು ಕಟ್ಟುವುದು ಗಾಂಧಿಯ ನಿಲುವಾಗಿತ್ತು. ಪರ್ಯಾಯಗಳನ್ನು ಕಟ್ಟುವುದೇ ಅಲಕ್ಷಿತ ನೆಲೆಯ ಅಧ್ಯಯನ ಕ್ರಮಗಳು ಗುರುತಿಸುವ ಪರ್ಯಾಯ ಯಜಮಾನಿಕೆಯ ನಿರೂಪಣೆಗಳಾಗಿವೆ. ಈ ದಿಸೆಯಲ್ಲಿ ಶೆಲ್ಲಿವಾಲಿಯ ಹೇಳುವ ಈ ಮಾತನ್ನು ಗಮನಿಸಬೇಕು. ಚಿನುವಾ ಅಚಿಬೆ ಮತ್ತು ಗೂಗಿವಾಥಿಯಾಂಗೋರಷ ಬರಹಗಳ ಬಗ್ಗೆ ಬರೆಯುತ್ತಾ "ಇದು ಆಫ್ರಿಕಾದ್ದೇ ಆದ ನಿರ್ಲಕ್ಷಿತ ಸಂಸ್ಕೃತಿಯೊಂದರ ಮೇಲಿನ ಯಾಜಮಾನ್ಯದ ದಾಳಿಗೆ ಎದುರಾಗಿ ರಾಜಕೀಯ ಕಾಳಜಿಗಳಿಂದ ಹುಟ್ಟಿಕೊಂಡಿರುವ ಕಪ್ಪು ಸೌಂದರ್ಯ ಮೀಮಾಂಸೆಯಾಗಿದೆ. ಅಂತೆಯೇ ಇದು ನಿರ್ಲಕ್ಷಿತ ಸಂಸ್ಕೃತಿಯೊಂದರ ಮೇಲಿನ ಯಾಜಮಾನ್ಯದ ದಾಳಿಗೆ ಪರ್ಯಾಯವಾಗಿ ವೈಶಿಷ್ಟ್ಯಪೂರ್ಣ ಸ್ಥಳೀಯ ಸಂಸ್ಥೆಗಳು, ಸೃಷ್ಟಿಪುರಾಣ ಮತ್ತು ಮೌಖಿಕ ಪರಂಪರೆಗಳನ್ನು ಎದುರು ನಿಲ್ಲಿಸುವ ಮೀಮಾಂಸೆಯಾಗಿದೆ." ಇಲ್ಲಿಯೇ ಗಾಂಧಿಯವರ ನಿಲುವನ್ನು ಗ್ರಹಿಸಬೇಕು:

> **"ನನ್ನ ಹೋರಾಟ ಕೇವಲ ರಾಜಕೀಯವಾದುದಲ್ಲ, ಅದೊಂದು ಧರ್ಮಯುದ್ಧ. ಆದುದರಿಂದ ಅದು ಪೂರ್ಣ ಪರಿಶುದ್ಧವಾದುದು, ಅದರಲ್ಲಿ ಸಾವು ಬದುಕು ಎರಡಕ್ಕೂ ವ್ಯತ್ಯಾಸವಿಲ್ಲ." ಎಂದು ಗಾಂಧಿ ಹೇಳುತ್ತಾರೆ. ಅಂದರೆ ಅವರಿಗೆ ಕೇವಲ ರಾಜಕೀಯ ಅಧಿಕಾರಕ್ಕಾಗಿ ಹೋರಾಟವಲ್ಲ. ಅವರು ನಿರೀಕ್ಷಿಸುವ 'ಒಡೆತನ' ಎಂಬುದು ಸತ್ಯ ಮತ್ತು ಅಹಿಂಸೆಯ ಮೂಲಕವಾಗಿ ನಡೆಯುವ ಹೋರಾಟ. (ಮಹಾತ್ಮ ಸಂಪುಟ ೧, ಗಾಂಧಿಭವನ, ಮಾನಸಗಂಗೊತ್ರಿ, ೧೯೭೪)**

ಭಾರತದ ಸಾಂಸ್ಕೃತಿಕ ಪುನರುತ್ಥಾನದ 'ಸಪ್ತಪದ'ಗಳೆಂದರೆ ೧. ಗಾಂಧಿ ಪ್ರಣೀತ ಸ್ವರಾಜ್ಯ ಕಲ್ಪನೆ. ೨. ದಯಾನಂದ ಸರಸ್ವತಿಯವರು ಎತ್ತಿ ಹಿಡಿದ ವೇದ. ೩. ರಮಣ ಮಹರ್ಷಿಗಳು ಖಚಿತಗೊಳಿಸಿದ ಅಹಂ ನೆಲೆಯ ಸೂತ್ರ. ೪. ರವೀಂದ್ರನಾಥ ಟಾಗೋರರ ಕಲಾಸಿದ್ಧಿ. ಶಿಕ್ಷಣ ಪ್ರಯೋಗಗಳು ೫. ರಾಮಕೃಷ್ಣ ವಿವೇಕಾನಂದರು ದರಿದ್ರ ನಾರಾಯಣನಿಗೆ ತೋರಿಸಿದ ಜೀವನ ನರನಾರಯಣದರ್ಶನ ೬. ಕೃಷ್ಣಜೀಯವರು ತೋರಿಸಿದ ಜೀವನ ಸಾಫಲ್ಯದ ಮಾರ್ಗ ಮತ್ತು ೭. ಮಾನವನಲ್ಲಿ ಅವತರಿಸಿದ ದೈವಿಕತೆ. ಈ ಸಪ್ತಪದಗಳು ಬೇಂದ್ರೆಯವರು ಸ್ವೀಕರಿಸಿದ ಸಾಂಸ್ಕೃತಿಕ ಮೌಲ್ಯಗಳೆ ಎಂದರೆ ಸ್ವಾತಂತ್ರ್ಯ ಜ್ಞಾನ, ಕಲೆ, ಶಿಕ್ಷಣ, ಸಂವೃದ್ಧಿ ಜೀವನ ಸಾಪಲ್ಯ, ದೈವಿಕತೆಗಳ ಸಂಕೇತಗಳೂ ಪರಸ್ಪರ ಪೋಷಕ ಗುಣಗಳನ್ನು ಕಂಡುಕೊಂಡರು. ವಸಾಹತಿನ ಅನುಭವ ಬೇಂದ್ರೆಯವರ ಕಾವ್ಯದಲ್ಲಿ ನೇರವಾಗಿ ಅಭಿವ್ಯಕ್ತವಾಗುವುದಿಲ್ಲ.

ನಿಜವಾಗಿಯೂ ಭಾರತೀಯ ಪುನರುತ್ಥಾನದ ಪ್ರಕ್ರಿಯೆಯಲ್ಲಿ ಅವರು ಗುರುತಿಸುವ ಅಂಶಗಳು ವಸಾಹತಿನ ಅನುಭವಕ್ಕೆ ಪ್ರತಿಕ್ರಿಯೆಯಾಗಿರುವ ಅಂಶಗಳೇ ಎನ್ನುವುದನ್ನು ಗಮನಿಸುವುದು ಅವಶ್ಯವಿದೆ. (ಜಿ.ಎಸ್.ಅಮೂರ, ೧೯೯೧, ಪುಟ:೧೬೫) ಬೇಂದ್ರೆಯವರು ಪ್ರವೇಶಿಸಿರುವ ರೀತಿ ಸ್ವಸಾಂಸ್ಕೃತಿಕ ಮೌಲ್ಯಗಳ ಹುಡುಕಾಟದಲ್ಲಿ ಪ್ರಧಾನವಾಗಿದ್ದರೂ ಅದರ ಮುಖಾಂತರ ರಾಷ್ಟ್ರೀಯತೆಯ ಕಲ್ಪನೆಗಳನ್ನು ಭಿನ್ನ ಪ್ರಸ್ಥಾನಗಳಲ್ಲಿ ಮಾಡುತ್ತಾರೆ ಎನ್ನುವುದು ಗಮನಾರ್ಹ. ಸಂಪ್ರದಾಯದಲ್ಲಿ ಒಳ್ಳೆಯದನ್ನು ಸ್ವೀಕರಿಸಬೇಕು ಎಂದು ತಿಳಿಯುವ ಬಹುತೇಕ ನವೋದಯ ಬರಹಗಾರರ ಚಿಂತನಾಕ್ರಮದ ಮೂಲಮಾದರಿಯು ಹೊಸ ಉತ್ಪಾದನಾ ಸಂಬಂಧಗಳ ಪರಿಣಾಮವಾಗಿದೆ. ಮಾಸ್ತಿಯವರು ಮತ್ತೆ ಪರಂಪರೆಗೆ ಮರಳುತ್ತಾರೆ ಎನ್ನುವುದು ಕನ್ನಡ ವಿಮರ್ಶೆಯಲ್ಲಿ ಬಹಳ ಹಳೆಯ ವಾದ! ಈ ವಾಗ್ವಾದದ ಮೂಲ ವೈಚಾರಿಕ ಚೌಕಟ್ಟುಗಳು ಭಿನ್ನ ಭಿನ್ನವಾಗಿರಬಹುದು. ಮಾಸ್ತಿಯವರು ಒಬ್ಬ ಬ್ರಾಹ್ಮಣರಾಗಿ ಕೆಲವರಿಗೆ ಕಂಡರೆ ಇನ್ನು ಕೆಲವರಿಗೆ ಹಿಂದೂ ಸಂಸ್ಕೃತಿಯ ಒಳಗಡೆ ಇರುವ ಉದಾರವಾದಿಯಾಗಿ ಕಾಣಿಸುತ್ತಾರೆ. ಬರಿಯ ವಸಾಹತುಶಾಹಿ ಅನುಭವವನ್ನು ಒಂದು ವೈಚಾರಿಕ ಚೌಕಟ್ಟಿಗೆ ಇಟ್ಟುಕೊಂಡರೆ ಈ ಚರ್ಚೆಯು ಬೇರೊಂದು ರೂಪವನ್ನು ಪಡೆಯಲೂಬಹುದು. ಯಾಕೆಂದರೆ ಹೊಸ ಉತ್ಪಾದನಾ ಸಂಬಂಧಗಳ ಪರಿವರ್ತನೆಗಳ ಸಂದರ್ಭದಲ್ಲಿ ಕನ್ನಡದ ಬಹುತೇಕ ನವೋದಯದ ಲೇಖಕರು ಕೈಗಾರಿಕಾ ನೀತಿಯನ್ನು ಒಪ್ಪಿಕೊಂಡವರಲ್ಲ. ಇಲ್ಲಿಯೂ ಸ್ವೀಕೃತಿ ಮತ್ತು ನಿರಾಕರಣೆಯ ಎರಡೂ ಪ್ರಕ್ರಿಯೆಗಳು ಜರುಗಿವೆ. ವಸಾಹತುಶಾಹಿ ಸಂದರ್ಭದಲ್ಲಿ ಸ್ಥಳೀಯ ಆರ್ಥಿಕ ನೀತಿಗೆ ಒಂದು ನಿರ್ದಿಷ್ಟ ತರ್ಕವೆನ್ನುವುದು ಇದೆ. ಬ್ರಿಟೀಷರ ಜೊತೆಗೆ ಬಂದ ಒಂದು ಹೊಸ ಉತ್ಪಾದನಾ ಸಂಬಂಧಗಳನ್ನು ಹೊರತುಪಡಿಸಿದರೆ ಹಳೆಯ ದೇಶೀಯ ಮಾದರಿಯ ಉತ್ಪಾದನಾಕ್ರಮವು ಬಹಳ ಭಿನ್ನವಾಯಿತು. ಹತ್ತಿಬಟ್ಟೆಯ ತಯಾರಿಕೆ ತಾಂತ್ರಿಕ ಕುಶಲತೆ ಮೊದಲಾದವುಗಳು ಇಲ್ಲಿಯ ಜಮೀನ್ದಾರಿ ಪದ್ಧತಿಯ ಸಂದರ್ಭಗಳಿಗೆ ಹೆಚ್ಚು ಪೂರಕವಾಗಿತ್ತು.

ವಸಾಹತುಶಾಹಿ ಸಂದರ್ಭದಲ್ಲಿ ಕೈಗಾರಿಕೆಗಳ ಪ್ರವೇಶ ಮತ್ತು ಅವುಗಳ ಪರಿಣಾಮಗಳು ಸರಳವಾಗಿರಲಿಲ್ಲ. ಲಾರ್ಡ್‌ಕ್ಲೈವನ ಕಾಲದಲ್ಲಿ ಮೊದಲಬಾರಿಗೆ ಕೈಗಾರಿಕೆಗಳ ಬಗೆಗೆ ಒಂದು ಪರಿವೀಕ್ಷಣೆಯನ್ನು ನಡೆಸಲಾಯಿತು. ಬ್ರಿಟೀಷ್ ಅಧಿಕಾರಿಯಿಂದ ಮುನ್ನಡೆದ ಮೊದಲ ಪರಿವೀಕ್ಷಣೆಯು ಆನಂತರ ಮುಂದುವರಿಯಿತು.

ಇದೇ ಮಾದರಿಯ ಸರ್ವೆ ಕರ್ನಾಟಕದಲ್ಲಿ ನಡೆದಿತ್ತು. ಈ ಎಲ್ಲಾ ಮಾತುಗಳನ್ನು ಹೇಳಲು ಕಾರಣಗಳಿಷ್ಟೇ: ವಸಾಹತುಶಾಹಿ ಅನುಭವದ ಸಂದರ್ಭದಲ್ಲಿ ಉತ್ಪಾದನೆಯ ಸಂಬಂಧವು ಬದಲಾದುದಷ್ಟೇ ಅಲ್ಲ, ಅದರ ಮುಖಾಂತರ ಇಡಿಯ ಆಲೋಚನಾ ಕ್ರಮದ ಬದಲಾವಣೆಗೆ ಅದು ಕಾರಣವಾಯಿತು. ಈ ಉತ್ಪಾದನೆಯ ಕ್ರಮವನ್ನು ಪ್ರಭುತ್ವದ ಸಂಸ್ಕೃತಿಯು ತನಗೆ ಬೇಕಾದಂತೆ ಬಳಸಿಕೊಂಡರೂ ಆಳಿಸಿಕೊಳ್ಳುವ ಸಂಸ್ಕೃತಿಗೂ ಸರಳ ದ್ವಂದ್ವವು ಕಾಣಿಸಿಕೊಂಡಾಗ ಪ್ರಭುತ್ವವು ನಿರ್ಮಿಸಿದ ಕೇಡು ಎಂದು ಪರಿಭಾವಿಸಿಕೊಂಡರು. ಉತ್ಪಾದನಾಕ್ರಮದ ಪರಿವರ್ತನೆಯೇ ಕೇಡಿನ ಮೂಲಗ್ರಹಿಕೆಯ ಮಾತೃಕೆ ಅಲ್ಲ. ಕೆಲವು ಸಂದರ್ಭಗಳಲ್ಲಿ ರಾಷ್ಟ್ರೀಯವಾದಿಗಳು ಉತ್ಪಾದನಾ ಕ್ರಮದ ಪರಿವರ್ತನೆ, ವರ್ತಕಶಾಹಿ ನಿಲುವು ಪಾಶ್ಚಾತ್ಯೀಕರಣ ಎಲ್ಲವನ್ನೂ ಒಂದೇ ರೀತಿಯಲ್ಲಿ ಇರಿಸಿ ಗ್ರಹಿಸಿದ್ದರು.

ಈ ಹೊಸ ಪರಿಗ್ರಹಿಕೆಗಳಿಂದಾಗಿ ಕೆಲವು ಹೊಸ ರಾಜಕೀಯ ಪರಿಭಾಷೆಗಳು ಚಾಲ್ತಿಗೆ ಬಂದವು. ಬ್ರಿಟೀಷ್ ಕಂಪನಿಗಳ ಅಧಿಕೃತ ಪರಿಭಾಷೆಯೇ ಒಂದರ್ಥದಲ್ಲಿ ಭಾರತೀಯ ರಾಜಕೀಯ ಪರಿಭಾಷೆಯಾಗಿ ರೂಪುಗೊಂಡಿತು. ಬ್ರಿಟೀಷ್ ಕಂಪನಿಗಳು ಚಾಲ್ತಿಗೆ ತಂದ ಆಜ್ಞೆ ಅಥವಾ ನಿರೂಪವು ರಾಜಕೀಯ ಮುಖ್ಯ ಪರಿಭಾಷೆಯಾಗಿ ರೂಪುಗೊಂಡಿತು. ಅದು ಅಧಿಕಾರದ ಪರಿಭಾಷೆಯಾಗಿತ್ತು. ಈ ರೀತಿಯ ಪರಿಭಾಷೆಗೆ ಭಿನ್ನವಾದುದು ಗಾಂಧಿಯ ನಿಲುವು.

> **ಸ್ವತಂತ್ರ ಸರ್ಕಾರದಲ್ಲಿ, ನಿಜವಾದ ಅಧಿಕಾರ ಇರುವುದು ಜನತೆಯ ಕೈಯಲ್ಲಿ. –ಜನತೆ ತಮ್ಮ ಅಧಿಕಾರ(ಶಕ್ತಿ)ವನ್ನು ಅರಿತುಕೊಂಡು, ಅದನ್ನು ಶಿಸ್ತಿನ ರೀತಿಯಲ್ಲಿ ಸಾಮಾನ್ಯ ಹಿತಕ್ಕಾಗಿ ಬಳಸಿದರೆ, ಅತ್ಯಂತ ಪ್ರಬಲ ಸರ್ಕಾರವೂ ಪೂರಾ ನಿಸ್ಸತ್ವವಾದೀತು. ರಾಷ್ಟ್ರದ ಸರ್ಕಾರದಲ್ಲಿ, ಹಿಡಿಯಷ್ಟು ಮಂದಿ ಮಾತ್ರ ಜವಾಬ್ದಾರಿಯ ಹಾಗೂ ಅಧಿಕಾರದ ಸ್ಥಾನಗಳಲ್ಲಿರಲು ಸಾಧ್ಯ ಎಂಬುದನ್ನು ನೆನಪಿನಲ್ಲಿಡಬೇಕು. ಸರ್ಕಾರದ ಆಡಳಿತ ಸೂತ್ರಗಳನ್ನು ಹಿಡಿದ ಗುಂಪಿನ ಹೊರಗಿರುವ ಜನರ ಕೈಯಲ್ಲಿ ನಿಜವಾದ ಅಧಿಕಾರ, ಸಂಪತ್ತು ಇರುವುದು ಎನ್ನುವುದನ್ನು ವಿಶ್ವದಾದ್ಯಂತ ಅನುಭವ ತೋರಿಸುತ್ತದೆ. (ಯಂಗ್ ಇಂಡಿಯಾ ೨೪–೪–೩೦. ಪುಟ. ೧೩೭) (ಸತ್ಯವಾಣಿ ಪುಟ. ೩೨೭ – ೩೨೮)**

ರಾಷ್ಟ್ರೀಯತೆಯ ಹೋರಾಟವು ವಸಾಹತುಶಾಹಿ ಸಂದರ್ಭದಲ್ಲಿ ಒಂದು ಅಳಿವು ಉಳಿವಿನ ಪ್ರಶ್ನೆಯೂ ಆಗಿರುತ್ತದೆ. ಈ ದೃಷ್ಟಿಯಿಂದ ಕಾರ್ಮಿಕರಿಗೆ ದೇಶವಿಲ್ಲವೆಂದು ನಂಬಿದ ಲೆನಿನ್ ಕೂಡ ಒಂದು ಹಂತದಲ್ಲಿ ವಸಾಹತುಶಾಹಿ ಮತ್ತು ಅರೆವಸಾಹತುಶಾಹಿ

ದೇಶಗಳಲ್ಲಿ ಪ್ರಜಾಪ್ರಭುತ್ವ ಮಾದರಿಯ ರಾಷ್ಟ್ರೀಯ ಹೋರಾಟಗಳು ಪ್ರಾರಂಭವಾದರೂ ಅಲ್ಲಿ ಸಮಾಜವಾದಿಗಳು ಅದನ್ನು ಬೆಂಬಲಿಸಬೇಕೆಂದು ಪ್ರತಿಪಾದಿಸಿದ್ದು ಗಮನಾರ್ಹ. ಒಂದು ಹಂತದಲ್ಲಿ ಮಾರ್ಕ್ಸ್‌ವಾದಿಗಳು ರಾಷ್ಟ್ರೀಯತೆಯ ಕಲ್ಪನೆಯನ್ನು ಬೂರ್ಜ್ವಾ ಪ್ರತಿಕ್ರಿಯೆಯೆಂದು ಕರೆದರು. ಆನಂತರ ರಾಷ್ಟ್ರೀಯತೆಯ ಹೋರಾಟವನ್ನು ಕಾರ್ಮಿಕರ ಪರವಾದ ಶಕ್ತಿಸಂಚಯದ ನೆಲೆಯಿಂದ ಬೆಂಬಲಿಸಿದರು. ರಾಷ್ಟ್ರೀಯತೆಯು ಒಂದು ಭಾವನಾತ್ಮಕವಾದ ನಿಲುವಾಗಿದ್ದರೂ ಆನಂತರ ಅದನ್ನು ಕಾರ್ಮಿಕರ ಹೋರಾಟವಾಗಿಯೂ ಕೈಗೆತ್ತಿಕೊಳ್ಳಬಹುದು ಎಂದು ಲೆನಿನ್ ಭಾವಿಸಿದ್ದು ಸಕಾರಣವಾಗಿದೆ. ರಾಷ್ಟ್ರೀಯವಾದಿ ಅಂದರೆ ಈ ದೃಷ್ಟಿಯಿಂದ ಡಿ.ವಿ.ಜಿ.ಯವರ ನಿಲುವು ಸಂಸ್ಕೃತಿಯ ಜೊತೆಗೆ ಅನುಸಂಧಾನ ನಡೆಸುವ ಮಾದರಿಯದ್ದು; ಮಾತ್ರವೇ ಅಲ್ಲ ಹಿಂದಿರುಗಿ ನೊಡುವಂಥದ್ದು. ಪುರೋಹಿತಶಾಹಿ ಸಂಸ್ಕೃತಿಯು ಈ ಸಂದರ್ಭದಲ್ಲಿ ಸಾಂಪ್ರದಾಯಿಕ ಮೌಲ್ಯಗಳ ಕಡೆಗೆ ತಿರುಗಿತು. ಆದರೆ ಗಾಂಧಿ ಹೇಳುವ ಸನಾತನತೆಯ ಮೌಲ್ಯ ಇದಕ್ಕಿಂತ ಭಿನ್ನ.

ಬ್ರಿಟೀಷ್ ರಾಜಸತ್ತೆಯ ನಿಯಮದ ಪರಿಭಾಷೆಯನ್ನು ರಾಜಕೀಯ ಪರಿಭಾಷೆಯಾಗಿ ಬಳಸಿಕೊಂಡಿದ್ದ ಹಾಗೆಯೇ ಭಾರತೀಯ ಸಾಮಾಜಿಕ ಅಭಿವೃದ್ಧಿ ಪರಿಭಾಷೆಯನ್ನು ಅದು ಬಳಸಿಕೊಂಡಿತು. ಈ ಅಭಿವೃದ್ಧಿ ಅನ್ನುವುದು ಒಂದು ರೀತಿಯಿಂದ ಭಾರತೀಯ ಸಾಮಾಜಿಕ ಧೋರಣೆಯನ್ನು ಬದಲಾಯಿಸುವ ಅಂಶಗಳನ್ನು ಒಳಗೊಂಡಿಲಿಲ್ಲ. ಬ್ರಿಟೀಷ್ ರಾಜಸತ್ತೆಗೆ ಪೂರಕವಾಗಿ ಬಂದ ಈ ಪರಿಭಾಷೆಯು ಭಾರತೀಯ ಪರಿಸರದಲ್ಲಿ ಕೆಲವು ಬದಲಾವಣೆಗಳನ್ನು ತಂದಿತು. ಅಭಿವೃದ್ಧಿಯು ಆಳುವ ವರ್ಗಕ್ಕೆ ಹಿತಕಾರಿಯಾದ ನಿಲುವಾಗಿದ್ದರೂ ಆಳಿಸಿಕೊಂಡ ಜನ ಈ ಅಭಿವೃದ್ಧಿಯಿಂದ ಕೆಲವು ಅನುಕೂಲಗಳನ್ನು ಪಡೆದುಕೊಂಡಿತು. ಆದರೆ ಇದಕ್ಕೆ ಭಿನ್ನಭಿನ್ನ ಪ್ರತಿಕ್ರಿಯೆಗಳು ಕೂಡಾ ಬಂದವು. ಅಭಿವೃದ್ಧಿ ಎನ್ನುವುದು ಒಂದು ತಾಂತ್ರಿಕ ಪರಿಭಾಷೆಯಾದಾಗ ಅಲ್ಲಿ ಯಂತ್ರದ ಮಾದರಿಗಳು ಮುಖ್ಯವಾಗುತ್ತವೆ. ಯಂತ್ರದ ಪರಿಭಾಷೆಯನ್ನು ಹೊರತುಪಡಿಸಿದರೆ ಅಭಿವೃದ್ಧಿ ಎಲ್ಲಾ ನೆಲೆಗಳನ್ನು ಪಡೆದುಕೊಳ್ಳುತ್ತದೆ. ಗಾಂಧಿಯವರ ಮಾತು ಗಮನಾರ್ಹ.

> **ಮಾಡಬೇಕಾದ ಕೆಲಸಕ್ಕೆ ಸಾಕಷ್ಟು ದುಡಿಯುವ ಕೈಗಳು ಇಲ್ಲದಿರುವಾಗ, ಯಾಂತ್ರೀಕರಣ ಒಳ್ಳೆಯದೇ. ಭಾರತದಲ್ಲಿನಂತೆ, ಕೆಲಸಕ್ಕಿಂತ ದುಡಿಯುವ ಕೈಗಳೇ ಜಾಸ್ತಿಯಾದಾಗ, ಯಂತ್ರ ಒಂದು ಪಿಡುಗು.**
>
> **ಗಿರಣಿ ಬಟ್ಟೆ ಹಳ್ಳಿಯ ದುಡಿಮೆಯನ್ನು ಓಡಿಸುವುದಾದರೆ, ಅಕ್ಕಿ ಗಿರಣಿ, ಹಿಟ್ಟಿನ ಗಿರಣಿಗಳು ಬಡ ಹೆಣ್ಣು**

ಕೂಲಿಗಳನ್ನು ಓಡಿಸುವುದಷ್ಟೆ ಅಲ್ಲ, ತಮ್ಮ ವ್ಯವಹಾರದಲ್ಲಿ ಇಡೀ ಜನತೆಯ ಆರೋಗ್ಯವನ್ನೇ ಘಾಸಿಗೊಳಿಸುತ್ತವೆ. ಮಾಂಸ ತಿನ್ನಲು ಆಕ್ಷೇಪಿಸಿದ ಹಾಗೂ ಅದನ್ನು ಕೊಳ್ಳಲು ಶಕ್ತರಾದ ಜನ ಇರುವಲ್ಲಿ, ಬಿಳಿ ಹಿಟ್ಟು, ಪಾಲಿಷ್ ಮಾಡಿದ ಅಕ್ಕಿಯಿಂದ ಹಾನಿ ಆಗದಿರಬಹುದು. ಆದರೆ ಭಾರತದಲ್ಲಿ ಲಕ್ಷಾಂತರ ಜನಕ್ಕೆ ತಿನ್ನಲು ಆಕ್ಷೇಪಣೆಯಿಲ್ಲದಿದ್ದರೂ, ಅದು ಸಿಗದಿರುವಾಗ, ಸತ್ವಪೂರ್ಣ ಗೋಧಿ ಹಾಗೂ ಪಾಲಿಷ್ ಮಾಡದ ಅಕ್ಕಿಗಳಲ್ಲಿ ಇರುವ ಪುಷ್ಟಿಯುತವೂ ಪ್ರಾಣದಾಯಕವೂ ಆದ ಅಂಶಗಳನ್ನು ಜನಕ್ಕೆ ಸಿಗದಂತೆ ಮಾಡುವುದು ಪಾಪಕರ. ಬಿಳೀ ಹಿಟ್ಟು, ಪಾಲಿಷ್ ಅಕ್ಕಿಗಳ ಬಳಕೆಯಿಂದ ಉಂಟಾಗುವ ಅಪಾಯ ಕುರಿತು ವೈದ್ಯಕೀಯ ವ್ಯಕ್ತಿಗಳೂ ಇತರರೂ ಒಟ್ಟುಗೂಡಿ ಜನಕ್ಕೆ ತಿಳಿಸುವ ಕಾಲ ಬಂದಿದೆ.

ಹಳ್ಳಿಗಳಿಗೆ ಉದ್ಯೋಗವನ್ನು ಕೊಂಡೊಯ್ಯಬೇಕಾದ್ದು ಯಂತ್ರದ ಮೂಲಕ ಅಲ್ಲ. ಅವರು ಇದುವರೆಗೂ ಮಾಡುತ್ತಿದ್ದ ಕಸಬುಗಳನ್ನು ಪುನರುಜ್ಜೀವಿಸುವುದರ ಮೂಲಕ.

ಅಂತೆಯೆ, ಈಗ ಇರುವ ಉದ್ಯೋಗಗಳನ್ನು ಪ್ರೋತ್ಸಾಹಿಸುವುದು, ಸತ್ತು ಹೋಗುತ್ತಿರುವ ಅಥವಾ ಹೋಗಿರುವ ಗ್ರಾಮೋದ್ಯೋಗಗಳನ್ನು ಎಲ್ಲೆಲ್ಲಿ ಸಾಧ್ಯವೊ ಎಲ್ಲೆಲ್ಲಿ ಅಪೇಕ್ಷಿತವೊ ಅಲ್ಲೆಲ್ಲ ಗ್ರಾಮೀಣ ವಿಧಾನದಲ್ಲೆ, ಪುನಶ್ಚೇತನಗೊಳಿಸುವುದು. ಅಂದರೆ ತಲೆತಲಾಂತರಗಳಿಂದ ಮಾಡುತ್ತಿದ್ದ ಹಾಗೆ ಹಳ್ಳಿಯ ಜನ ತಮ್ಮ ಮನೆಗಳಲ್ಲೆ ಕೈ ಕೆಲಸ ಮಾಡುವುದು, ಇದಕ್ಕೆ ಪ್ರೋತ್ಸಾಹ ನೀಡುವುದೇ ನನ್ನ ಅಭಿಪ್ರಾಯದಂತೆ ಅಖಿಲ ಹಂಜಿ ಮಾಡುವುದು ಹಾಗೂ ನೂಲು ನೇಯುವುದರಲ್ಲಿ ಮಾಡಿರುವಂತೆಯೆ, ಈ ಸರಳ ವಿಧಾನಗಳನ್ನು ಸಾಕಷ್ಟೂ ಮಟ್ಟಿಗೆ ಉತ್ತಮಗೊಳಿಸಬಹುದು.

ಹರಿಜನ, ೧೬–೧೧–೩೪. ಪು–೩೧೬ (ಸತ್ಯವಾಣಿ ಪುಟ. ೨೮೫)

ಜಾತಿಯ ಸಮಸ್ಯೆ ಬಂದಾಗ ರಾಷ್ಟ್ರೀಯತೆಯ ಬಹಳ ಉದಾರವಾಗಿ ನಡೆದುಕೊಂಡಿತು. ಅದರೆ ಮತೀಯ ಸಮಸ್ಯೆ ಬಂದಾಗ ಇಷ್ಟೊಂದು ಉದಾರವಾಗಿ ನಡೆದುಕೊಂಡಿಲ್ಲ. ಗಾಂಧೀ ಮಾದರಿಯ ಹೋರಾಟದ ಆದರ್ಶ ಇದಕ್ಕೆ ಒಂದು ಮೂಲ ನೆಲೆಯಾಗಿದ್ದರೆ: ಇನ್ನೊಂದು ಕ್ರಿಶ್ಚಿಯನ್ ಮಿಷನರಿಗಳ ಬಗೆಗಿನ ಅನುಮಾನವು ಈ ರೀತಿಯ ನಿಲುವಿಗೆ ಕಾರಣವಾಗಿರಬಹುದು. ಈ ರೀತಿ ಯೋಚನಾಕ್ರಮ ಬಂದಿರುವುದಕ್ಕೆ ಮತ್ತೊಂದು ಕಾರಣವೆಂದರೆ ಇಂಗ್ಲೀಷ್ ಪ್ರಭುತ್ವ ರೂಪಿಸಿದ ಶಿಕ್ಷಣ ಮಾದರಿ, ಈ ಶಿಕ್ಷಣ ಮಾದರಿ ಮೂಲಭೂತವಾಗಿ ಭಾರತೀಯ ಜನರನ್ನು ಬ್ರಿಟೀಷ್

ಕಂಪನಿಗಳಿಗೆ ಗುಮಾಸ್ತರನ್ನಾಗಿ ನೇಮಿಸುವ ಆಸಕ್ತಿಯನ್ನು ಹೊಂದಿತ್ತು. ಭಾರತೀಯರನ್ನು ರಾಜಕೀಯ ಹಿಡಿತದಲ್ಲಿ ಇರಿಸಿಕೊಳ್ಳುವುದರ ಬಗೆಗೆ ಆಗಿನ ಶಿಕ್ಷಣ ಪದ್ಧತಿಯು ರೂಪುಗೊಂಡಿತು. ಆದರೆ ಅದರ ಜೊತೆಗೆ ಬಂದ ನೈತಿಕ ಮೌಲ್ಯದ ಪ್ರಶ್ನೆಯು ಭಾರತೀಯ ಬುದ್ಧಿಜೀವಿಗಳನ್ನು ಹಿಡಿತದಲ್ಲಿಟ್ಟುಕೊಳ್ಳಲು ಅನುಕೂಲವನ್ನು ಕಲ್ಪಿಸಿಕೊಟ್ಟಿತು. ನಿರ್ದಿಷ್ಟ ಮಾದರಿಯ ಕಲಿಕೆಯ ಮಾದರಿಯು ಒಂದು ರೀತಿಯಿಂದ ವಸಾಹತುಶಾಹಿ ಸಂಸ್ಕೃತಿ ಮತ್ತು ಅದರ ತಾರ್ಕಿಕ ಬೆಳವಣಿಗೆಯ ಕಾರಣಗಳನ್ನು ಹೊಂದಿಕೊಂಡಿದೆ. ಬ್ರಿಟೀಷ್ ವಸಾಹತುಶಾಹಿ ಅನುಭವದಲ್ಲಿ ರೂಪಗೊಂಡ ಶಿಕ್ಷಣಕ್ರಮವನ್ನು ಪ್ರಭುತ್ವದ ವಿಸ್ತರಣೆಯ ಕಾರ್ಯಾಚರಣೆಯಾಗಿ ಗ್ರಹಿಸಿಕೊಳ್ಳಬಹುದು. ಸ್ಪಷ್ಟ ಅರ್ಥದಲ್ಲಿ ದೇಶೀಯ ಶಿಕ್ಷಣ ಕ್ರಮವು ಹಿಂದೆ ಸರಿದು ಅದರ ಬದಲಿಗೆ ವಸಾಹತುಶಾಹಿ ಸಂಸ್ಕೃತಿ ಹೇಳಿಕೊಟ್ಟ ಶಿಕ್ಷಣವು ಜಾರಿಗೆ ಬಂದಿತು. ಈ ಶಿಕ್ಷಣ ಕ್ರಮದಲ್ಲಿ ಹಳೆಯ ಮತ ಕೇಂದ್ರದ ಶಿಕ್ಷಣಕ್ರಮವು ಗೈರು ಹಾಜರಾಗಿರುವುದು ಒಂದಂಶವಾದರೆ ಇನ್ನೊಂದು ರೀತಿಯಿಂದ ಶಿಕ್ಷಣವೆಂದರೆ 'ಪಠ್ಯ ಕೇಂದ್ರಿತ ಶಿಕ್ಷಣ'ವೆಂಬ ಪರಿಕಲ್ಪನೆ ಬಂದಿತು. ಈ ಶಿಕ್ಷಣವೆಂದರೆ ಅದು ಕೇವಲ ಕೌಶಲದ ಪ್ರಶ್ನೆಯಾಗಿರದೇ ಅಕ್ಷರಸ್ಥ ಪರಂಪರೆಯ ಕಡೆಗೆ ತೆರಳುವ ಪ್ರಶ್ನೆಯೂ ಆಯಿತು. ಈ ರೀತಿಯ ಶಿಕ್ಷಣಕ್ಕೆ ಒಂದು ನಿರ್ದಿಷ್ಟ ಚೌಕಟ್ಟಿದೆ. ಬ್ರಿಟೀಷ್ ಕಂಪನಿಗೆ ಆಗಬೇಕಾದುದು ಕೂಡಾ ಅದುವೇ, ವಾಸ್ತವವಾಗಿ ಭಾರತೀಯ ವಿದ್ಯಾವಂತ ವರ್ಗವನ್ನು ಬ್ರಿಟೀಷರು ಸ್ವಲ್ಪ ಮಟ್ಟಿಗೆ ಒಪ್ಪಿಕೊಂಡರು. ಬ್ರಿಟೀಷ್ ಆಡಳಿತ ಕ್ರಮವನ್ನು ವಿಸ್ತರಿಸುವುದಕ್ಕೆ ಇದೊಂದು ಕಾರಣವಾಯಿತು. ಆದರೆ ಇದರ ಪರಿಣಾಮ ಬ್ರಿಟೀಷರು ಸೃಷ್ಟಿಸಿದ ಗುಮಾಸ್ತರ ಜೊತೆಗೆ ಒಂದು ರೀತಿಯ ಸಾಂಸ್ಕೃತಿಕ ಸನ್ನಿವೇಶದ ಪ್ರತಿ ನಿರ್ಮಾಣ. ಇದನ್ನೇ ಬೇರೊಂದು ಮಾತಿನಲ್ಲಿ ವಿವರಿಸುವುದಾದರೆ ಪಶ್ಚಿಮ ಕೇಂದ್ರಿತ ಶಿಕ್ಷಣ ಮಾದರಿಯಿಂದಾಗಿ ಭಾರತದಲ್ಲಿ ಮೂರು ಮುಖ್ಯ ಪರಿವರ್ತನೆಗಳಾದವು. ಮೊದಲನೆಯದು ಈ ಶಿಕ್ಷಣ ಕ್ರಮದಿಂದಾಗಿ ಸಾಂಸ್ಕೃತಿಕ ಬದಲಾವಣೆಯ ಪರಿಭಾಷೆಯು ರೂಪುಗೊಂಡಿತು ಎರಡನೆಯದಾಗಿ ಹೊಸ ಶಿಕ್ಷಣ ಕ್ರಮದಿಂದಾಗಿ ಪಶ್ಚಿಮದ ಉದಾರವಾದಿ ನಿಲುವೊಂದು ಭಾರತಕ್ಕೆ ಪ್ರವೇಶಿಸಿತು. ಮೂರನೆಯದಾಗಿ 'ನ್ಯಾಯ'ದ ಪರಿಕಲ್ಪನೆಯು ನವವಿದ್ಯಾವಂತ ವರ್ಗದಲ್ಲಿ ಮೂಡಿಬಂತು. ಮದ್ರಾಸ್ ಮತ್ತು ಸಂಸ್ಕೃತ ಕಾಲೇಜುಗಳಲ್ಲಿ ತ್ರಿಭಾಷಾ ಸೂತ್ರವಿರಲಿಲ್ಲ. ಆದರೆ ಉಳಿದ ಕಡೆಗೆ ಈ ಸೂತ್ರವು ಜಾರಿಗೆ ಬಂತು. ಬೆಂಟಿಕ್‌ನ ಉದಾರವಾದಿ ನಿಲುವು ಅಂತಿಮವಾಗಿ ಪ್ರಭುತ್ವದ

ಪರವಾಗಿಯೇ ಇತ್ತು. ಗ್ರಂಥಸ್ಥ ಸಂಸ್ಕೃತಿಯ ಮತ್ತು ವೈಜ್ಞಾನಿಕ ಪರಿಕಲ್ಪಯ ಮೂಲ ಜೀವಾಳವು ಪ್ರಭುತ್ವದ ಪರವಾಗಿದ್ದರೂ ಇದರಿಂದಾಗಿ ಭಾರತೀಯ ಸಾಂಪ್ರದಾಯಿಕ ಸಮಾಜಕ್ಕೆ ವಿದಾಯ ಹೇಳಬೇಕಾಗಿ ಬಂತು. ಆದರೆ ನಮಗೆಲ್ಲಾ ಮನ ಮುಟ್ಟಬಹುದಾದ ವಾಕ್ಯವನ್ನು ಹೇಳುತ್ತಾರೆ.

> **ಹೆಣ್ಣು-ಗಂಡು ಮಕ್ಕಳ ಪೂರ್ಣ ನಾಶಕ್ಕೆ ಅಣುಬಾಂಬು ಹೂಡುವುದನ್ನು ವಿಜ್ಞಾನದ ಪೈಶಾಚಿಕ ಉಪಯೋಗ ಎಂದು ನಾನು ಭಾವಿಸುತ್ತೇನೆ.**
>
> **(ಸತ್ಯವಾಣಿ ೨೦೦೧ ಪುಟ. ೧೮೫)**

ಕೈಗಾರೀಕರಣದ ಉತ್ಪನ್ನಗಳು ಅಸಮತೆಗೆ ಕಾರಣವಾಗುತ್ತದೆಂದು ಗಾಂಧಿ ನಂಬಿದ್ದರು. ದೇಶೀಯ ಉತ್ಪಾದನಾ ಕ್ರಮದ ಮೇಲೆ ಇದೊಂದು ದೊಡ್ಡ ಹೊಡೆತವಾಗುತ್ತದೆಂದೂ ಭಾವಿಸಿದ್ದರು. ಆಧುನಿಕತೆಯಂತೂ ಭಾರತಕ್ಕೆ ಪ್ರವೇಶಿಸಿತು. ಪಾಶ್ಚಾತ್ಯೀಕರಣ ಮತ್ತು ಆಧುನಿಕರಣ ಒಂದಲ್ಲವಾದರೂ ಪಶ್ಚಿಮದ ಹಾದಿಯ ಮೂಲಕ ಆಧುನಿಕತೆಯು ಪ್ರವೇಶಿಸಿತು. ಹಾಗೆಂದು ಆಧುನಿಕತೆಯ ವಿರೋಧವು ಅನೇಕ ಕಾರಣಗಳಿಂದ ಚರ್ಚಾರ್ಹವಾದುದು ಕೂಡಾ ಆಗಿದೆ. (ನೋಡಿ: Gyan Prakash. – Science between two lines

ಸಾಮಾಜಿಕ, ಆರ್ಥಿಕ, ತಾಂತ್ರಿಕ ಸಂಚಲನೆಯ ಪರಿಣಾಮವಾಗಿ ಸಾರ್ವಜನಿಕ (Public) ಅನ್ನುವ ಪರಿಕಲ್ಪನೆಯು ಒಡಮೂಡಿ ಬಂತು. ಈ ಸಂದರ್ಭದಲ್ಲಿ ಪಶ್ಚಿಮದ ಮಾದರಿ ಶ್ರೇಷ್ಠವಾದುದು ಎನ್ನುವ ಪರಿಭಾಷೆಯು ಬಂದುದ್ದು ಆಧುನಿಕತೆಯ ಜೊತೆ. ದೇಶೀಂಯ ಪರಿಕಲ್ಪನೆಯುನ್ನು ವಿವರಿಸುವಾಗ ಗಾಂಧಿ ಸಾರ್ವಜನಿಕ ಹಿತಾಸಕ್ತಿಯೆನ್ನುವುದನ್ನು ಚಾಲ್ತಿಗೆ ತಂದರೆ, ಆಧುನಿಕತೆಯ ಪರವಾಗಿದ್ದ ನೆಹರೂ ದೃಷ್ಟಿಕೋನ ಇದಕ್ಕಿಂತ ಭಿನ್ನವಾದುದು. ಸಾರ್ವಜನಿಕ ಹಿತಾಸಕ್ತಿಯೇ ನೆಹರೂ ಪರಿಭಾಷೆಯಾಗಿತ್ತೆಂಬುದು ಇಲ್ಲಿ ಉಲ್ಲೇಖಾರ್ಹ. ಈ ದೃಷ್ಟಿಯಿಂದ ಗಾಂಧಿಯ ಮಾರ್ಗ ಒಂದಾದರೆ ನೆಹರೂ ಮಾರ್ಗ ಮತ್ತೊಂದು. ಕರ್ನಾಟಕದಲ್ಲಿ ನೆಹರೂ ಪ್ರಭಾವಕ್ಕಿಂತ ಗಾಂಧಿ ಪ್ರಭಾವವೇ ಹೆಚ್ಚು ಅವರಿಬ್ಬರದು ಭಿನ್ನ ರಾಜಕೀಯ ಶೈಲಿಯಾದರೂ ಕನ್ನಡ ಜನರ ಆಯ್ಕೆ ಗಾಂಧಿಯ ಪರವಾಗಿತ್ತು ಹಾಗೆ ನೋಡುವುದಿದ್ದರೆ ಇದು ಗಾಂಧಿ, ನೆಹರೂ ಪ್ರಶ್ನೆಯಾಗಿರಲಿಲ್ಲ! ರಾಷ್ಟ್ರೀಯತೆಯ ಆಂದೋಲನದಲ್ಲಿ ಮಹತ್ವದ ಪಾತ್ರವಹಿಸಿದ "ಕಾಂಗ್ರೆಸ್‌ನಲ್ಲಿ ಕೆಲವರು ಮದ್ಯಪಾನ ನಿಷೇಧ, ಗೋರಕ್ಷಣೆಯ ಬಗೆಗೂ, ಕೆಲವರು ಉಕ್ಕಿನ ಕಾರ್ಖಾನೆಯ ಬಗ್ಗೆ ಮಾತಾನಾಡಿದರು. ಇದು ದೊಡ್ಡ ಸಮಸ್ಯೆಯೆಂದು ಕಾಂಗ್ರೆಸ್‌ನವರಿಗೆ ಅನ್ನಿಸಲಿಲ್ಲ." ಗಾಂಧಿಯವರ ಗೋಮಾತೆಯ ಪರಿಕಲ್ಪನೆಯು ಗಮನಾರ್ಹ.

ಈ ಸಾಂಸ್ಕೃತಿಕ ಪುನರ್ ನಿರ್ಮಾಣ ಪ್ರಶ್ನೆಯು ಅಂತಿಮ ರೂಪನ್ನು ಪಡೆದುಕೊಂಡಿರುವುದು ಸಾಂಸ್ಕೃತಿಕ ಏಕತೆಯ ಪ್ರಶ್ನೆಯಲ್ಲಿ. ರಾಷ್ಟ್ರೀಯತೆಯ ಪ್ರಶ್ನೆಯು ಕೃಷಿಮೂಲದ ಸಮಾಜದಿಂದ ನವರಾಷ್ಟ್ರೀಯ ಸಂಸ್ಕೃತಿಯ ಕಡೆಗೆ ಯೋಚಿಸಿದಂತೆ ಮಾಡಿತು. ಒಂದೆಡೆಯಿಂದ ಕೈಗಾರಿಕೀಕರಣದ ವಿರುದ್ಧ ನಿಂತ ನಿಲುವು. ಮತ್ತೊಂದೆಡೆಯಿಂದ ರಾಷ್ಟ್ರೀಯ ಏಕತೆಯ ಪ್ರಶ್ನೆಯು ಕನ್ನಡದ ನವೋದಯ ಕವಿಗಳ ಕಾವ್ಯದಲ್ಲಿ ಪ್ರತಿಫಲಿಸಿದೆ. ಅನೇಕರು ರಾಷ್ಟ್ರೀಯ ಏಕತೆಯ ಬಗೆಗೆ ಹೆಚ್ಚು ಮಾಡಿದ್ದರ ಮುಖ್ಯಕಾರಣವಿದು, ರಾಷ್ಟ್ರೀಯತೆಯ ಪರಿಕಲ್ಪನೆಯ ನಿಜವಾದ ಸ್ವರೂಪವಿರುವುದು ಸ್ವದೇಶ ಚಳುವಳಿಯಲ್ಲಿ. ಈ ಚಳುವಳಿಯ ಮೂಲಕ ಅಂಕುರವಿರುವುದು ರಾಷ್ಟ್ರೀಯತೆಯನ್ನು ಯೋಚಿಸಿದ ಏಕಾಂತವಾದಿಗಳಲ್ಲಿ. ಸ್ವದೇಶಿ ಚಳುವಳಿಯಲ್ಲಿ ಧರ್ಮದ ಪರಿಭಾಷೆಯು ಮುಖ್ಯವಾಯಿತು. ಗಾಂಧಿಯ ಧರ್ಮರಾಜ್ಯದ ಪರಿಕಲ್ಪನೆಯಲ್ಲಿ ಆದರ್ಶ ಜಮೀನುದಾರನು ಕೂಡಾ ತನ್ನ ತ್ಯಾಗದಿಂದ ಅರ್ಥಪೂರ್ಣನಾಗಬಲ್ಲ, ಈ ನಿಲುವು ವರ್ಗ ಸಮರವನ್ನು ವಿರೋಧಿಸುವ ನಿಲುವಾಗಿದ್ದರೂ ಗಾಂಧಿಯ ಈ ವಾದ ಆ ಸಂದರ್ಭದಲ್ಲಿ ಹೆಚ್ಚು ಪ್ರಚಾರಕ್ಕೆ ಬಂತು.

> ಈಗ ಸದ್ಯ ರೈತನ ಮೇಲೆ ಬಿದ್ದಿರುವ ಭಾರವನ್ನು ಮಾದರಿ ಜಮೀನುದಾರನು ಕೂಡಲೇ ಮಾಡುವನು. ಅವನು ರೈತರ ಕೂಡ ನಿಕಟವಾದ ಸಂಬಂಧವನ್ನು ಬೆಳೆಯಿಸುವನು. ಅವರ ಬೇಡಿಕೆಗಳನ್ನು ತಿಳಿದುಕೊಳ್ಳುವನು ಮತ್ತು ಅವರ ಪ್ರಾಣವನ್ನು ಹಿಂಡುತ್ತಿರುವ ನಿರಾಶೆಯನ್ನು ಕಳೆದು ಅವರಲ್ಲಿ ಕಾನೂನುಗಳ ಭವಿಷ್ಯವನ್ನು ಆಶೆಯನ್ನು ತುಂಬುವನು. ಕಾಯಿದೆ ಕಾನೂನುಗಳ ಬಗ್ಗೆ, ಆರೋಗ್ಯ ನಿಯಮಗಳ ಬಗ್ಗೆ ರೈತರಲ್ಲಿ ನೆಲೆಸಿರುವ ಅಜ್ಞಾನವನ್ನು ಕಂಡು ಅವನು ಸಂತೋಷಪಡಲಾರನು. ರೈತರಿಗೆ ಜೀವನಾವಶ್ಯವಾಗಿರುವ ಪದಾರ್ಥಗಳನ್ನು ಒದಗಿಸಿಕೊಡಲು ತಾನು ಬಡತನವನ್ನು ಅಪ್ಪುವನು. ತನ್ನ ಅಧೀನದಲ್ಲಿರುವ ರೈತರ ಆರ್ಥಿಕ ಪರಿಸ್ಥಿತಿಯನ್ನು ಅವನು ಅಭ್ಯಾಸ ಮಾಡುವನು ಮತ್ತು ಶಾಲೆಗಳನ್ನು ಸ್ಥಾಪಿಸಿ ತನ್ನ ಮಕ್ಕಳ ಕೂಡ ರೈತರ ಮಕ್ಕಳನ್ನು ಕುಳ್ಳಿರಿಸಿ ಅವರನ್ನು ಸುಶಿಕ್ಷಿತರನ್ನಾಗಿ ಮಾಡುವನು. ಹಳ್ಳಿಯಲ್ಲಿರುವ ಕೆರೆ ಬಾವಿಗಳನ್ನು ಬಳಸಿ ಸ್ವಚ್ಛ ಮಾಡಿಸುವನು. ತಾನು ಸ್ವತಃ ಬೀದಿಗಳನ್ನು ಉಡುಗಿ. ಶೌಚಕೂಪಗಳನ್ನು ಹಳ್ಳಿಯುಲ್ಲಿರುವ ಕೆರೆ ಬಾವಿಗಳನ್ನು ಉಡುಗಿಸಿಕೊಳ್ಳವಂತೆ ಶಾಪಂಗಿಪಗಳನ್ನು ಬಳಿಯುವಂತೆ ಶಿಕ್ಷಣ ಕೊಡುವನು. ತನ್ನ ಉದ್ಯಾನಗಳನ್ನು ಅನಿರ್ಬಂಧವಾಗಿ ರೈತರ ಉಪಯೋಗಕ್ಕಾಗಿ ತೆರೆದಿಡುವನು. ತನ್ನ ಸ್ವಂತದ ಸುಖ

ವಿಲಾಸಗಳಿಗಾಗಿ ಅನಾವಶ್ಯಕವಾಗಿಟ್ಟುಕೊಂಡ ಕಟ್ಟಡಗಳನ್ನು ಶಾಲೆಗಾಗಿಯೋ, ಔಷಧಾಲಯಕ್ಕಾಗಿಯೋ ಇನ್ನಿತರ ಸಾರ್ವಜನಿಕ ಹಿತಕ್ಕಾಗಿಯೋ ಉಪಯೋಗಿಸುವನು. ಬದಲಾವಣೆಯನ್ನು ಅರ್ಥ ಮಾಡಿಕೊಂಡು ತಮ್ಮ ಒಡೆತನದಲ್ಲಿದ್ದುದೆಲ್ಲದರ ಮೇಲೆ ತಮಗೆ ದೈವದತ್ತ ಅಧಿಕಾರವಿದೆ ಎಂಬ ವಿಚಾರವನ್ನು ಬದಲು ಮಾಡಿದರೆ ಇಂದು ಹಳ್ಳಿಗಳೆಂದು ಕರೆಯಿಸಿಕೊಳ್ಳಲ್ಪಡುತ್ತಿರುವ ಏಳು ಲಕ್ಷ ಸೆಗಣಿಯ ಗುಂಡಿಗಳಾಗಿರುವ ಸ್ಥಾನಗಳು ತೀರ ತುಸು ಕಾಲಾವಧಿಯಲ್ಲಿಯೇ ಶಾಂತಿ, ಆರೋಗ್ಯ ಹಾಗೂ ಸೌಖ್ಯಗಳ ಸ್ಥಾನಗಳಾಗಿ ಪರಿವರ್ತನೆ ಹೊಂದಬಲ್ಲವು.

(ಸರ್ವೋದಯ ಮೋ.ಕ.ಗಾಂಧಿ 1960 ಪುಟ.75-76)

ಧಾರ್ಮಿಕ ಪ್ರತಿಭಟನೆಯ ಅಂಶವಾಗಿ ರೂಪುಗೊಂಡಿರುವ ಧರಣಿ ಸತ್ಯಾಗ್ರಹದಲ್ಲಿ ರಾಷ್ಟ್ರೀಯ ಚಳುವಳಿಯ ಪರಿಗೃಹೀತ ಕಲ್ಪನೆಗಳಿವೆ. ಇದು ಗಾಂಧಿ ಮಾದರಿಯ ಹೋರಾಟಕ್ರಮವನ್ನು ಸೂಚಿಸುತ್ತಿರುವಂತೆಯೇ ಗಾಂಧಿ ಚಳುವಳಿಯ ಮಾದರಿಯನ್ನು ಹೆಚ್ಚು ಜನಪ್ರಿಯಗೊಳಿಸಿತು. ಗಾಂಧಿ ಹೇಳಿಕೊಟ್ಟ ಸತ್ಯಾಗ್ರಹದ ಪರಿಕಲ್ಪನೆ: ಧರಣಿ ಸತ್ಯಾಗ್ರಹದ ಸ್ವರೂಪವು ಕನ್ನಡ ಬರಹಗಾರರ ಮೇಲೆ ಪ್ರಭಾವ ಬೀರಿದೆ. ಲಾವಣಿಕಾರರು ಈ ಸಂಗತಿಗಳನ್ನು ವಿವರಿಸಿದ್ದಾರೆ. (ನೋಡಿ ಸತ್ಯಾಗ್ರಹ: ಅಸಹಕಾರ ಲಾವಣಿ ಇತ್ಯಾದಿ) ಗಮನಿಸಬೇಕಾದ ಅಂಶವೆಂದರೆ ಗಾಂಧಿಯವರ ನಿಲುವು ತುಂಬಾ ಜನಪ್ರಿಯವಾಗಿತ್ತು.

ಈ ರೀತಿಯ ಪ್ರತಿಭಟನೆಯು ರಾಷ್ಟ್ರೀಯತೆಯನ್ನು ಒಂದು ಭಾವನಾತ್ಮಕ ವಲಯ ಕಂಡಿರಿಸುವುದಾಗಿತ್ತು. ರಾಷ್ಟ್ರೀಯತೆಯೆನ್ನುವುದು ಒಂದು ರೀತಿಯಿಂದ ಪ್ರಭುತ್ವದ ಮಾದರಿಗಾಗಿ ಅಳವಡಿಸಿಕೊಂಡ ಪರ್ಯಾಯ ಮಾರ್ಗ. ಈ ರೀತಿಯ ಪರ್ಯಾಯ ಮಾರ್ಗವನ್ನು ಸ್ವಾತಂತ್ರ್ಯ ಮತ್ತು ಪ್ರಜಾಪ್ರಭುತ್ವವೆನ್ನುವ ಎರಡು ರೂಪಗಳಲ್ಲಿ ಹುಡುಕಲಾಯಿತು. ಚರಿತ್ರೆಕಾರರು ಹೇಳುವಂತೆ ರಾಷ್ಟ್ರೀಯತೆಯಲ್ಲಿ ಸ್ವಾತಂತ್ರ್ಯದ ಅಂಶವು ಸೇರಿಕೊಂಡಿದೆ. ರಾಷ್ಟ್ರೀಯತೆಯ ಅಂತಿಮ ಯಶಸ್ಸು ಇರುವುದು ಸಮಾಜದಲ್ಲಿಯೇ ಆಗಿದೆ.

ಭಾರತೀಯ ರಾಷ್ಟ್ರೀಯತೆಯ ಆಂದೋಲನವು ಪಶ್ಚಿಮದ ವೈಚಾರಿಕ ಜಗತ್ತಿನ ಕೆಲವು ಭಾಗಗಳನ್ನು ಆಯ್ಕೆ ಮಾಡಿಕೊಂಡು ಅದಕ್ಕೆ ಭಾರತೀಯ ತಳಹದಿಯನ್ನು ರೂಪಿಸುವ ಪ್ರಯತ್ನ ಮಾಡಿತು. ವಾಸ್ತವವಾಗಿ ರಾಷ್ಟ್ರೀಯತೆಯ ಗೃಹೀತ ಕಲ್ಪನೆಯಲ್ಲಿ ಮೊದಲನೆಯದು. ಮನುಷ್ಯನ ಆಲೋಚನಾ ಕ್ರಮದಿಂದ ರೂಪುಗೊಳ್ಳುವ ಸ್ವಾತಂತ್ರ್ಯದ ರಾಷ್ಟ್ರ ಮತ್ತು ರಾಜಧಾನಿಯ ಅಂಶಗಳು ಇರುತ್ತವೆ. ರಾಷ್ಟ್ರೀಯತೆ ಆಲೋಚನೆಯ ಕುರಿತು ಚರ್ಚಿಸುವಾಗ ಗ್ರಾಮಾಶಿ ಮೂರು ಮಾದರಿಗಳನ್ನು ಗುರುತಿಸುತ್ತಾನೆ. ಅಪೇಕ್ಷೆ

(Indepenent human will) ಎರಡನೆಯದು ಹಳೆಯ ಸರಕಾರದ ಮಾದರಿಯನ್ನು ಒಳಗೊಂಡಿರುವ ಅಪೇಕ್ಷೆ, ಮೂರನೆಯದು ಕೃಷಿಕೇಂದ್ರಿತ ಆಲೋಚನಾಕ್ರಮದಿಂದ ರೂಪುಗೊಳ್ಳುವ ಮಾದರಿ (Partho Chatterjee) ಈ ರೀತಿಯ ಸಂಗತಿಗಳನ್ನು ನಾವು ಮನಸ್ಸಿನಲ್ಲಿಟ್ಟುಕೊಂಡರೆ ರಾಷ್ಟ್ರೀಯತೆಯ ಆದರ್ಶವು ಭಾರತದಲ್ಲಿ ಹಳೆಯ ಸರಕಾರ ಮಾದರಿಗಳನ್ನು ತಿರಸ್ಕರಿಸಿತು. ಪ್ರಜಾಪ್ರಭುತ್ವದ ಆಸೆಯು ಪ್ರಬಲವಾಯಿತು. ಅದರೊಂದಿಗೆ ಪಶ್ಚಿಮದಿಂದ ಬಂದ ಆಲೋಚನಾ ಕ್ರಮವು ಸ್ವಾತಂತ್ರ್ಯ ಕಲ್ಪನೆಯನ್ನು ವ್ಯಕ್ತಪಡಿಸಿತು. ಹಾಗೆಯೇ ಕೃಷಿಕೇಂದ್ರದ ಮಾದರಿಗಳು ಈ ಹೊತ್ತಿನಲ್ಲಿಯೇ ಬದಲಾದವು. ರಾಷ್ಟ್ರೀಯ ಚಳುವಳಿಯು ಗಾಂಧಿಮಾದರಿಯ ಹೋರಾಟ ಕ್ರಮದಲ್ಲಿ ಸಾಮಾನ್ಯರಿಗೆ ಹತ್ತಿರವಾಗುವ ಪರಿಸ್ಥಿತಿಯಲ್ಲಿ ರೂಪುಗೊಂಡರೆ, ಕ್ರಾಂತಿಕಾರಿಗಳಿಗೆ ರಾಷ್ಟ್ರೀಯ ಸ್ವಾತಂತ್ರ್ಯದ ಅಪೇಕ್ಷೆಗಳು ತಕ್ಷಣದ ಹಟಕ್ಕೆ ಸಿಕ್ಕ ಮಾದರಿಯಾಯಿತು. ಇವರು ಧರ್ಮ, ರಾಷ್ಟ್ರೀಯತೆ, ಸ್ವಾತಂತ್ರ್ಯ ಮೂರನ್ನು ಬೆಸೆದು ನೋಡಿರುವುದು ಗಮನಾರ್ಹ.

ರಾಷ್ಟ್ರೀಯ ಚಳುವಳಿಯ ಸಂದರ್ಭದಲ್ಲಿ ಬಂದ ಎರಡು ಪರಿಕಲ್ಪನೆಗಳು ಇಲ್ಲಿ ಮುಖ್ಯ. ಮೊದಲನೆಯದು ಆಳುವ ರಾಣಿಗೆ ಪರವಾಗಿರುವ ನಿಲುವು, ಇದು ಪ್ರಭುವಿನ ಸೇವೆಯನ್ನು ಮಾಡಬೇಕು ಎನ್ನುವ ಅಪೇಕ್ಷೆಯನ್ನು ಹೊಂದಿರುತ್ತದೆ. ಎರಡನೆಯದು ತಾಯಿಯ ಸೇವೆ, ಈ ಎರಡೂ ಪರಿಕಲ್ಪನೆಯು ಭಾರತೀಯ ಪರಂಪರೆಯಿಂದ ಬಂದಿರುವ ಅಂಶ. ಒಂದರ್ಥದಲ್ಲಿ ಭಕ್ತಿ, ವಿನಯ ಮೊದಲಾದವುಗಳು ಭಾರತೀಯ ಭಕ್ತಿ ಸಂಸ್ಕೃತಿಯಿಂದ ಬಂದ ಪರಿಭಾಷೆಗಳಾಗಿವೆ. ಗಾಂಧಿಯ ನಿಲುವು ಎರಡನೆಯ ಪರಿಕಲ್ಪನೆಯನ್ನು ಹೊಂದಿದೆ.

ಇನ್ನೊಂದು ರೀತಿಯ ಮಾದರಿಯಿರುವುದು ಅಲೌಕಿಕ ಶಕ್ತಿಯ ಕಲ್ಪನೆಯಲ್ಲಿ. ಇದು ಭೂಮಿ ತಾಯಿಯ ಪರಿಕಲ್ಪನೆಯಿಂದ ಪ್ರಾರಂಭವಾಗುತ್ತದೆ. ಸಂಸ್ಕೃತಿಯ ಆರಾಧನೆಯ ಕ್ರಮದಿಂದ ಈ ಸಂಗತಿಗಳು ಶುರುವಾಗುತ್ತವೆ. ಭಾರತಮಾತೆಯನ್ನು ಒಂದು ಶಕ್ತಿಯುನ್ನಾಗಿ, ದೇವತೆಯಾಗಿ ಕಂಡಿರುವ ಆಂದೋಲನಕಾರರು ರಾಷ್ಟ್ರೀಯತೆಯನ್ನು ಸಂಸ್ಕೃತ ಪರ(ಹಿಂದೂ) ಹಿನ್ನೆಲೆಯಲ್ಲಿಯೂ ಕಂಡುಕೊಂಡರು ಎನ್ನುವುದು ಗಮನಾರ್ಹ.

ಇಡಿಯ ರಾಷ್ಟ್ರೀಯ ಆಂದೋಲನವು ಎತ್ತಿಹಿಡಿದ ಸಮಾನತೆ, ಸ್ವಾತಂತ್ರ್ಯ ಮೊದಲಾದ ಪದಗಳು ಆಕರ್ಷಕವಾದ ಪದಗಳು. ಈ ಪದಗಳು ಹದಿನೆಂಟನೆಯ ಶತಮಾನದ ಆಳುವ ವರ್ಗ ಸೃಷ್ಟಿಸಿದ ಪದಗಳು ಕೂಡಾ ಹೌದು. ವಾಸ್ತವವಾಗಿ ಇವೆಲ್ಲಾ ಕಲ್ಪಿತ ಸಂಬಂಧಗಳನ್ನು ಸೃಷ್ಟಿಸುತ್ತದೆ. ಮಾರ್ಕ್ಸ್‌ವಾದಿಗಳ ಪ್ರಕಾರ ಆ ಪದಗಳು ಬಹುದೊಡ್ಡ ಜಾಗತಿಕ ಆದರ್ಶ ಅಷ್ಟೆ.

ಇದರೊಂದಿಗೆ 'ಪಿರಿಯಾಪಟ್ಟಣ ಕಾಳಗ' ಸರ್ಜಾರಂಗಪ್ಪನಾಯಕ ಲಾವಣಿ ಮೊದಲಾದವುಗಳಲ್ಲಿಯೂ ಬ್ರಿಟೀಶರ ವಿರುದ್ಧ ಹೋರಾಟದ ಕಥಾನಕಗಳಿವೆ. ಹಾಗೆಯೇ

'ಶಿವಪುರ ಸತ್ಯಾಗ್ರಹ' 'ಈಸೂರು ಹೋರಾಟ' ಇತ್ಯಾದಿ ಮಾದರಿಗಳೂ ಕರ್ನಾಟಕದಲ್ಲಿ ಜರುಗಿವೆ. ಒಟ್ಟಾಗಿ ಇವೆಲ್ಲಾ ಸ್ವಾತಂತ್ರ್ಯದ ಪರಿಕಲ್ಪನೆಗಳನ್ನು ಎತ್ತಿಹಿಡಿದಿವೆ. ಈ ರೀತಿಯ ಹೋರಾಟಗಳು ಪಠ್ಯಪುಸ್ತಕಗಳ ದಾಖಲೆಗಳಲ್ಲಿ ಯಾರು ಈ ರೀತಿಯ ಹೋರಾಟಗಳಲ್ಲಿ ಭಾಗವಹಿಸಿದರು. ಅವರ ಹೆಸರೇನು ಇತ್ಯಾದಿ ಅನೇಕ ಸಂಗತಿಗಳು ನಮ್ಮ ಗಮನಕ್ಕೆ ಬಾರದಿರುವ ವಿಷಯಗಳಾಗಿವೆ. ಈ ದೃಷ್ಟಿಯಿಂದ ಇನ್ನೂ ಅನೇಕ ಸಂಗತಿಗಳನ್ನು ಗಮನಕ್ಕೆ ತಂದುಕೊಳ್ಳಬೇಕು.

ಹತ್ತೊಂಬತ್ತನೆಯ ಶತಮಾನದ ಪೂರ್ವಾರ್ಧದಲ್ಲಿ ಜರುಗಿದ ಹೊಸ ರೀತಿಯ ಕಾನೂನು ನಾಗರಿಕತೆ ಅಧಿಕಾರದ ವ್ಯಾಖ್ಯೆಗಳು ಅದರ ಒಡಲಿನಿಂದಲೇ ರಾಷ್ಟ್ರೀಯತೆ ಈ ಯಾವ ಸಂಗತಿಗಳು ಭಾರತದ ಅನೇಕರಿಗೆ ಮುಖ್ಯ ಸಮಸ್ಯೆಯಾಗಲಿಲ್ಲ. ಯಾವ ದೊರೆ ಬಂದರೇನು ಹೋದರೇನು ರಾಗಿ ಬೀಸುವುದು ತಪ್ಪುವುದಿಲ್ಲ. ವಸಾಹತುಕಾಲದಲ್ಲಿ ಬಂದ ಹೊಸ ನಾಗರಿಕ ವ್ಯಾಖ್ಯೆ ಯುರೋಪಿಯನ್ ಉದ್ದೇಶಕ್ಕೆ ತಕ್ಕಂತೆ ಇತ್ತು. ೧೮೬೦ ರಲ್ಲಿ ಲಾರ್ಡ್ ಮೆಕಾಲೆ ರೂಪಿಸಿದ 'ಇಂಡಿಯನ್ ಪಿನಲ್ ಕೋಡ್' ಇದಕ್ಕೆ ಒಂದು ಉದಾಹರಣೆ ಮಾತ್ರ. ಚರಿತ್ರೆ; ಮಾನವಶಾಸ್ತ್ರ, ಮುಂತಾದವುಗಳನ್ನು ಯುರೋಪಿಯನ್ ಕಣ್ಣಿಂದಲೇ ನೋಡಬೇಕಾಗಿಲ್ಲ. ಇಂಡಿಯನ್ ಪಿನಲ್ ಕೋಡ್ ರಚಿಸುವಾಗ ಅದರ ಹಿಂದಿದ್ದ ಉದ್ದೇಶ ಸ್ಪಷ್ಟ. ವಸಾಹತುಪೂರ್ವದ ನ್ಯಾಯ ಕಾನೂನು ಮುಂತಾದವುಗಳು ಬರ್ಬರವಾದುದು ಅನಾಗರಿಕವೆಂದು ಅದು ಸೂಚಿಸಬೇಕಾಗಿತ್ತು. ಹೊಸ ನಾಗರಿಕ ವ್ಯಾಖ್ಯೆಯಲ್ಲಿ ಜನರು ಕೇವಲ ನಾಗರಿಕರು ಅಥವಾ ಪ್ರಜೆಗಳು. ಅದರಾಚೆಗೆ ಬೇರೊಂದು ಮಾದರಿಗಳು ವಸಾಹತು ಆಡಳಿತಗಾರರಿಗೆ ಯುರೋಪಿಯನ್ ಮಾನವಶಾಸ್ತ್ರಜ್ಞರು ನಾಗರಿಕರು ಮತ್ತು ಅನಾಗರಿಕರು ಎಂದು ಎರಡು ವರ್ಗೀಕರಣ ಮಾಡಿ ಅದರ ಭಾರತದ ಅನೇಕ ಜಾತಿಗಳನ್ನು "ಜನಾಂಗ" (community) ಎಂಬ ವ್ಯಾಖ್ಯೆಗೆ ಗುರಿಪಡಿಸಿದರು. ಈಗಲೂ ನಮ್ಮ ಜಾನಪದ ಅಧ್ಯಯನಗಳು ಇದೇ ಧಾಟಿಯಲ್ಲಿ ಮುಂದುವರಿಸಿದೆ. ಅಂದರೆ; ಅಧ್ಯಯನಕಾರರಿಗೆ 'ಜಾತಿ' ಅಧ್ಯಯನಕ್ಕೆ ಇರುವ ಒಂದು ವಸ್ತು ಮಾತ್ರ. ವಸಾಹತು ರೂಪಿಸಿದ ನಮ್ಮ ಪ್ರಜ್ಞೆಯನ್ನು ನಾವು ಬದಲಾಯಿಸಲು ಹೊರಡುವಾಗಲೂ ಇದೇ ವ್ಯಾಖ್ಯಾನವನ್ನು ಆಧರಿಸಿಕೊಂಡಿರುತ್ತೇವೆ. ನಾವು ನಮ್ಮ ಅನುಭವಗಳನ್ನು ನಮ್ಮ ಕಥನಗಳನ್ನು ನಮ್ಮದೇ ರೀತಿಯಲ್ಲಿ ಕಟ್ಟಲು ಸಾಧ್ಯ. ಮತ್ತು ನಮ್ಮ ಸಮಾಜದಲ್ಲಿರುವ ವಿಧಿನಿಷೇಧಗಳು ಅವುಗಳ ಸಾಂಸ್ಕೃತಿಕ ಅರ್ಥವಂತಿಕೆ, ಖಾಸಗಿ ನಿಯಮಾವಳಿಗೆ ಇರುವ ಪ್ರಾಶಸ್ತ್ಯವನ್ನು ಗುರುತಿಸಲು ನಮ್ಮ ಜ್ಞಾನಪರಂಪರೆಯನ್ನೇ ಆಧರಿಸಬೇಕಾಗುತ್ತದೆ. ಅಲ್ಲಿಯ "ಪ್ರಗತಿಪರ ಚಿಂತನೆಗಳು"

ಇಲ್ಲಿಗೆ ಯಥಾ ಪ್ರಕಾರ ಅನ್ವಯಿಸಲು ಬರುತ್ತದೆಯೆ? ಅಥವಾ ದೇವರಿಲ್ಲವೆಂದು ಹೇಳಿದಲ್ಲಿಗೆ ಪ್ರಗತಿಪರರಾಗುತ್ತೇವೆಯೆ?

ಮೂಲತಃ ಗಾಂಧಿ ನಮ್ಮೆದುರು ಇಡುವ ಪ್ರಶ್ನೆಗೆ ಇನ್ನೂ ಉತ್ತರ ಸಿಕ್ಕಿಲ್ಲ ಅಥವಾ ನಾವು ಉತ್ತರ ಕೊಡುವ ಪ್ರಯತ್ನವನ್ನೂ ಮಾಡಿಲ್ಲ.

> ನನ್ನ ಮಟ್ಟಿಗೆ ರಾಜಕೀಯ ಅಧಿಕಾರವು ನಾವು ಮುಟ್ಟಬೇಕಾಗಿರುವ ಒಂದು ಗುರಿಯಾಗಿಲ್ಲ. ಆದರೆ ಜನತೆಯು ತನ್ನ ಜೀವನವನ್ನು ಪ್ರತಿಯೊಂದು ವಿಭಾಗದಲ್ಲಿಯೂ ಸುಧಾರಿಸಿಕೊಳ್ಳುವುದಕ್ಕೆ ಸಮರ್ಥವಾಗಲು ಅದು ಒಂದು ಸಾಧನ ಮಾತ್ರ. ರಾಷ್ಟ್ರೀಯ ಪ್ರತಿನಿಧಿಗಳ ಮುಖಾಂತರ ರಾಷ್ಟ್ರದ ಜೀವನವನ್ನು ನಿಯಂತ್ರಿಸುವ ಮುಖಾಂತರ ರಾಷ್ಟ್ರದ ಜೀವನವನ್ನು ನಿಯಂತ್ರಿಸುತ್ತದೆ. ರಾಷ್ಟ್ರದ ಜೀವನವು ತನ್ನನ್ನು ತಾನೇ ನಿಯಂತ್ರಿಸಿಕೊಳ್ಳುವಷ್ಟು ಪರಿಪೂರ್ಣತೆಗೆ ಬಂದರೆ ಪ್ರಾತಿನಿಧ್ಯವು ಅನವಶ್ಯಕವಾಗುತ್ತದೆ. ಆಗ ತಿಳುವಳಿಕೆಯುಳ್ಳ ಅರಾಜಕತೆ (enlightened anarchy) ಸ್ಥಾಪಿಸಲ್ಪಡುತ್ತದೆ. ಅಂಥ ರಾಜ್ಯವ್ಯವಸ್ಥೆಯಲ್ಲಿ ಪ್ರತಿಯೊಬ್ಬನೂ ತನ್ನನ್ನು ತಾನೇ ಆಳುತ್ತಾನೆ. ಮತ್ತು ಪ್ರತಿಯೊಬ್ಬನೂ ತನ್ನ ನೆರೆಹೊರೆಯವನಿಗೆ ತಾನು ಕಂಟಕನಾಗದಂತೆ ತನ್ನನ್ನು ಆಳುತ್ತಾನೆ. ಆದುದರಿಂದ ಆದರ್ಶವಾದ ರಾಜ್ಯದಲ್ಲಿ ರಾಜಕೀಯ ಅಧಿಕಾರವೇ ಇರುವುದಿಲ್ಲ. ಯಾಕೆಂದರೆ ಅಲ್ಲಿ ರಾಜ್ಯವೇ ಇರುವುದಿಲ್ಲ. ಆದರೆ ಜೀವನದಲ್ಲಿ ಆದರ್ಶವನ್ನು ಎಂದೂ ಸಂಪೂರ್ಣವಾಗಿ ಮುಟ್ಟಲಿಕ್ಕೆ ಆಗುವುದಿಲ್ಲ. ಅದಕ್ಕಾಗಿ ಯಾವ ಸರಕಾರವು ತೀರ ಕಡಿಮೆ ಆಳುತ್ತದೆಯೋ ಆ ಸರಕಾರವೇ ಶ್ರೇಷ್ಠತಮ ಸರಕಾರವೆಂದು ಥೋರೋ (Thoreau) ಹೇಳಿದ ಸುಪ್ರಸಿದ್ಧವಾದ ಮಾತನ್ನು ನಾವು ಇಲ್ಲಿ ನೆನೆಯಬೇಕು. (ಯ. ಇ, 1930)
>
> (ಸರ್ವೋದಯ ಮೋ.ಕ.ಗಾಂಧಿ 1960 ಪುಟ.91–92)

* * *

೫. ಗಾಂಧಿ ಕೃಷಿ–ವರ್ತಮಾನದ ಅಗತ್ಯ ನಿಸರ್ಗ ಮತ್ತು ಮನುಷ್ಯರ ನಡುವಣ ಸಹಜ ಸಂಬಂಧ

ಭೂಮಿತಾಯಿ ಹೇಗೆ ವಿನೀತಳೋ
ಹಾಗೆ ವಿನೀತರಾಗುವುದನ್ನು ನಾವು ಕಲಿಯಬೇಕು.
ಭೂ ಪ್ರಣಾಮದಿಂದ ನಾವು ಕಲಿಯುತ್ತೇವೆ
ಅಥವಾ ಕಲಿಯಬೇಕು.
ತನ್ನನ್ನು ಕಾಲಿನಿಂದ ತುಳಿಯುವ ಜೀವಿಗಳನ್ನು ಅವಳು ಕಾಪಾಡುತ್ತಾಳೆ
ಆದ್ದರಿಂದ ಆಕೆ ವಿಷ್ಣುವಿಗೆ ಪತ್ನಿಯಾಗಿರುವುದು ಉಚಿತ.
ನಾವು ಭೂಮಿಯ ಭೌತರು.
ಭೂಮಿ ಇಲ್ಲವಾದರೆ ನಾವು ಇಲ್ಲ.

....

ಭೂಮಿಗೆ ನಮಸ್ಕರಿಸಿದ ಕೂಡಲೇ
ದೇವರಿಗೆ ಸಲ್ಲಿಸಬೇಕಾದ ಋಣವನ್ನು ಸಲ್ಲಿಸಿದ ಹಾಗೆ
ಆಗುತ್ತದೆ.–

....

ಆ ತಾಯಿಯ ಯೋಗ್ಯ ಶಿಶು ನಾನಾದರೆ
ತಕ್ಷಣವೇ ನನ್ನನ್ನು ಧೂಳಿಗೆ ಸಮ ಮಾಡಿಕೊಳ್ಳುವೆ.
ತನ್ಮೂಲಕ ಮನುಷ್ಯರಲ್ಲಿ ಕನಿಷ್ಠರಾದವರೊಡನೆ

ಮಾತ್ರವಲ್ಲದೆ ಸೃಷ್ಟಿಯ ಕನಿಷ್ಠ ವರ್ಗಗಳೊಡನೆ
ಬಾಂಧವ್ಯವನ್ನು ಸ್ಥಾಪಿಸಿ ನಲಿಯುವೆ-ಗಾಂಧಿ

ಯಾರ್‍ಯಾರೋ ಬೆಳೆಸಿದ್ದನ್ನು ನಾವು ತಿಂದರೆ ಕಳ್ಳತನ. ಗಾಂಧಿಯ ಈ ಮಾತು ನನಗೆ ಸ್ಫೂರ್ತಿ, ಪರಾವಲಂಬಿಯಾಗಿ ಬದುಕಲಾರೆ.

ದಿ. ಚೇರ್ಕಾಡಿ ರಾಮಚಂದ್ರ ರಾಯರು

ಅಧಿಕಾರದ ವ್ಯಾಪ್ತಿಯು ಬೇರೆ ಬೇರೆ ಮಾದರಿಗಳಲ್ಲಿ ಇರುತ್ತವೆ. ಅಧಿಕಾರ ಸಾಮಾಜಿಕ ಪ್ರಕ್ರಿಯೆಯಲ್ಲಿ ಮಹತ್ವದ ಪಾತ್ರವನ್ನು ವಹಿಸುತ್ತದೆ. ಅಷ್ಟೇ ಅಲ್ಲ ಒಂದು ಸಂಸ್ಥೆಯಿದ್ದರೆ ಅದು ಆಳುತ್ತದೆ ಮತ್ತು ಗುಂಪಿನ ಪರವಾಗಿ ಅಧಿಕೃತ ವಕ್ತಾರರಂತೆ ವಹಿಸುತ್ತದೆ. ಅಧಿಕಾರ ಎನ್ನುವುದು ಸಾಮಾಜಿಕ ವ್ಯವಸ್ಥೆಯಲ್ಲಿ ಮುಖ್ಯ ಪಾತ್ರ ವಹಿಸುವಂತೆಯೇ ಅದರ ಜೊತೆಯಲ್ಲಿ ಅದು ತನ್ನದೇ ನಿಯಮ ಹೊಂದಿರುತ್ತದೆ. ಅಧಿಕಾರವನ್ನು ಯಾರು ಹಿಡಿಯುತ್ತಾರೋ ಅವರ ಚಟುವಟಿಕೆಯು ಒಂದು ವ್ಯವಸ್ಥೆಯನ್ನು ಸಿದ್ಧಪಡಿಸಿಕೊಳ್ಳಲು ಉಳಿದವರನ್ನು 'ಅಧೀನ' ಎಂಬಂತೆ ನೋಡಿಕೊಳ್ಳುತ್ತಾರೆ. ಭೂಮಿ ಮನುಷ್ಯನಿಗೆ ಅಧೀನವೆನ್ನುವ ಪರಿಕಲ್ಪನೆಯು ವಸಾಹತು ಕಾಲದಲ್ಲಿ ಪ್ರಾರಂಭವಾಯಿತು. ಭೂಮಿ ಮತ್ತು ಕಂದಾಯಕ್ಕೆ ಹೊಸ ವ್ಯಾಖ್ಯೆಗಳು ಪ್ರಾರಂಭವಾದವು. ಭೂಮಿಯ ಉತ್ಪಾದನೆ, ಅದರ ಬೆಳೆ ಮತ್ತು ಸಂಪತ್ತು ಅದರ ಮಾರುಕಟ್ಟೆ ಮೌಲ್ಯಗಳ ಕುರಿತು ಹೊಸ ರೀತಿಯ ಚರ್ಚೆಗಳು ಪ್ರಾರಂಭವಾದವು. ಮಾರುಕಟ್ಟೆ, ಅದರ ಧಾರಣೆಗಳಿಗೆ ಹೊಸ ವ್ಯಾಖ್ಯೆ ಬಂದುದಕ್ಕೂ ಆಗಿನ ಯುರೋಪಿನ ಮಾರುಕಟ್ಟೆಯ ವಿಸ್ತರಣೆಗೂ ಸಂಬಂಧವಿದೆ. ಗಾಂಧಿ ಕಟುವಾಗಿ ಟೀಕಿಸಿದ್ದು ಇದನ್ನು.

ಪಾಶ್ಚಿಮಾತ್ಯ ನಾಗರಿಕತೆ ಎಂದರೆ ಆಧುನಿಕ ಕಾಲದಲ್ಲಿ
ಪಶ್ಚಿಮದ ಜನರು ಅಪ್ಪಿಕೊಂಡಿರುವ ಆದರ್ಶಗಳು ಮತ್ತು ಆ
ಆದರ್ಶಗಳ ಸಾಧನೆಗಾಗಿ ಅವರು ನಡೆಸುತ್ತಿರುವ
ಅಸಮ ಸಾಹಸಗಳು ಎಂದು ನನ್ನ ಅರ್ಥ.
ಪಾಶವೀ ಶಕ್ತಿಯೇ ಸರ್ವೋನ್ನತವೆಂದು ಭಾವಿಸುವುದು,
ಹಣವನ್ನು ದೇವರೆಂದು ಪೂಜಿಸುವುದು,
ಪ್ರಾಪಂಚಿಕ ಸೌಖ್ಯದ ಗಳಿಕೆಗಾಗಿಯೇ
ಹೆಚ್ಚಿನ ವೇಳೆಯನ್ನೆಲ್ಲಾ ಖರ್ಚು ಮಾಡುವುದು,
ಎಲ್ಲಾ ಬಗೆಯ ಪ್ರಾಪಂಚಿಕ ಲಾಲಸೆಗಳ
ಹುಡುಕಾಟಕ್ಕಾಗಿ ಅಮೋಘ ಸಾಹಸಗಳನ್ನು ಕೈಗೊಳ್ಳುವುದು,
ಯಂತ್ರ ಶಕ್ತಿಯನ್ನು ದ್ವಿಗುಣ ಮತ್ತು ಬಹುಗುಣ
ವರ್ಧಿಸುವ ತುದಿಯಿಲ್ಲದ ಪ್ರಯತ್ನದಲ್ಲಿ ಮಾನಸಿಕ ಶಕ್ತಿಯನ್ನು

ವ್ಯಯಿಸಿಕೊಳ್ಳುವುದು,ವಿನಾಶಕಾರಿ ಸಾಧನಗಳ ಶೋಧಕ್ಕಾಗಿ
ಕೋಟ್ಯಂತರ ಹಣವನ್ನು ವೆಚ್ಚಮಾಡುವುದು,
ಅನ್ಯ ಜನಾಂಗಗಳನ್ನೆಲ್ಲಾ ನೈತಿಕ ಶತತ್ವದಿಂದ ಕೀಳೆಂದು
ಪರಿಗಣಿಸುವುದು–ಇಂಥಾ ಈ ನಾಗರಿಕತೆಯು,
ನನ್ನ ದೃಷ್ಟಿಯಲ್ಲಿ ಯುರೋಪಿನ ಸಂಪೂರ್ಣ ನಿರಾಕರಣೆಗೆ
ಯೋಗ್ಯವಾದುದು.-ಗಾಂಧಿ
(ಸ್ವರಾಜ್ಯದ ಹೆಜ್ಜೆ ಹಾದಿಗಳು–ಪುಟ. 27)

ಅಧಿಕಾರ ಹೊಂದಿದವರಿಗೆ ಕೆಲವು ವಿಶಿಷ್ಟ ಅಂಶಗಳ ಹಕ್ಕುಗಳು ಕೂಡಾ ಇರುತ್ತವೆ. ಅದಕ್ಕೆ ಸಂಬಂಧಿಸಿದಂತೆ ನಿಯಮಗಳು ರೂಪಿಸಲ್ಪಡುತ್ತವೆ. ಆಳುವ ವರ್ಗದ ಲಕ್ಷಣಗಳು ಆಯಾಯ ಸಮಾಜ ಮತ್ತು ಸಂಸ್ಕೃತಿಗೆ ಅನುಸಾರವಾಗಿ ಬೇರೆಯಾಗಬಹುದು. ಎಷ್ಟೋ ಸಂದರ್ಭಗಳಲ್ಲಿ ಅಧಿಕಾರ ಪಡೆದುಕೊಳ್ಳುವ ರೀತಿ ರಿವಾಜುಗಳು ಬೇರೆಯಾಗುತ್ತವೆ. ಅದೇ ರೀತಿಯಲ್ಲಿ ಜನಾಂಗದಿಂದ ಜನಾಂಗಕ್ಕೆ ಬೇರೆಯಾಗುತ್ತವೆ. ಆಳುವ ವರ್ಗ ಆಯಾಯ ಸಂದರ್ಭ ಮತ್ತು ಪ್ರದೇಶಗಳಲ್ಲಿ ತಮಗೆ ಬೇಕಾದ ರೀತಿಯುಲ್ಲಿ ನಿಯುಮ ರೂಪಿಸುತ್ತಾರೆ ಮತ್ತು ಅದಕ್ಕೆ ಬೇಕಾದ ಸ್ಥಾನ ನಿರ್ಣಯಗಳಾಗುತ್ತವೆ. ಉದಾ : ಬೇರೆ ಬೇರೆ ಜಾತಿಯಲ್ಲಿರುವ ಗುರಿಕಾರರು : ಪುರೋಹಿತರು ಇತ್ಯಾದಿ ಮತ್ತು ಹೊಸ ಸಂದರ್ಭದಲ್ಲಿ ಕೋರ್ಟು, ಕಾನೂನು ರೂಪಿಸಲ್ಪಟ್ಟವು. ಹಳೆಯ ಸಾಮಾಜಿಕ ರಚನೆಯ ಮೌಖಿಕ ಕಾನೂನುಗಳಿಗೂ ವಸಾಹತು ಕಾಲಘಟ್ಟದಲ್ಲಿ ರೂಪುಗೊಂಡ ಕಾನೂನುಗಳಿಗೂ ವ್ಯತ್ಯಾಸವಿದೆ. ವಸಾಹತು ಪೂರ್ವದ ಕಾಲಘಟ್ಟದಲ್ಲಿ ಕಾನೂನು ಮತ್ತು ಶಿಕ್ಷೆ ಎರಡಕ್ಕೂ ಊರೊಳಗೆಯೇ ನ್ಯಾಯ ದೊರಕುತ್ತಿತ್ತು. ಈ ದೃಷ್ಟಿಯಿಂದಲೇ ಭಾರತಕ್ಕೆ ಬಂದ ಅನೇಕ ಬ್ರಿಟೀಶ್ ಗವರ್ನರ್ ಜನರಲ್‌ಗಳು– ಭಾರತದ ಜನರು ಅನಾಗರಿಕರು, ಅವರಿಗೆ ಕಾನೂನುಗಳು ಗೊತ್ತಿಲ್ಲ. ಅವರಿಗೆ ಜಮೀನಿನ ಅಳತೆಯ ಪ್ರಮಾಣ ಗೊತ್ತಿಲ್ಲ. ಅದಕ್ಕಾಗಿ ಅವರಿಗೆ ಬೇಕಾಗಿರುವುದು ನ್ಯಾಯದ ತಿಳುವಳಿಕೆ ಮತ್ತು ಅಕ್ಷರಾಭ್ಯಾಸ ಎಂದು ಭಾವಿಸಿಕೊಂಡಿದ್ದರು. ಉದಾ: ಲಾರ್ಡ್ ಬೆಂಟಿಂಕ್, ಲಾರ್ಡ್ ವೆಲ್ಲೆಸ್ಲಿ, ಇವರ ನೀತಿಗಳು. ಇಲ್ಲಿ ಬಳಕೆಯಾಗಿರುವ "ಲಾರ್ಡ್" ಎಂಬ ಪದವನ್ನು ಗಮನಿಸಿ – ಲಾರ್ಡ್ ವೆಲ್ಲೆಸ್ಲಿ. ಇದೇ ಲಾರ್ಡ್ ಎಂಬ ಪದವನ್ನು ಮತ್ತೊಂದು ಅರ್ಥದಲ್ಲಿಯೂ ಬಳಸುತ್ತೇವೆ. ಲಾರ್ಡ್ ಕೃಷ್ಣ. ಲಾರ್ಡ್ ಎಂದರೆ ಆಳುವವನು ಎಂಬರ್ಥ. ಬರುತ್ತದೆ. ಲಾರ್ಡ ವೆಲ್ಲೆಸ್ಲಿಗೂ, ಲಾರ್ಡ್ ಕೃಷ್ಣನಿಗೂ ಯಾವ ರೀತಿಯ ವ್ಯತ್ಯಾಸವೂ ಇಲ್ಲ. ಭಾರತಕ್ಕೆ ಕೋರ್ಟುಗಳೂ, ಕಾನೂನುಗಳು, ನ್ಯಾಯ ಸಂಹಿತೆಗಳು ಬಂದಾಗ ಬಹುದೊಡ್ಡ ಬದಲಾವಣೆಯನ್ನು ನಾವು ಕಾಣುತ್ತೇವೆ

– ಪೋಲೀಸರ ಬಗ್ಗೆ ಮತ್ತು ಕೋರ್ಟ್‌ಗಳ ಕುರಿತು ಜನಸಾಮಾನ್ಯರಿಗೆ ಭಯ ಹುಟ್ಟಿದ್ದೇ ಆಡಳಿತ ನೀತಿಯ ಪರಿಸ್ಥಿತಿಯಿಂದ. ಇಂಗ್ಲೀಷಿನಲ್ಲಿ ಬಳಸುವ ಲ್ಯಾಂಡ್‌ಲಾರ್ಡ್ ಪದವು ಈ ದೃಷ್ಟಿಯಿಂದ ಗಮನಾರ್ಹ. ಲ್ಯಾಂಡ್‌ಲಾರ್ಡ್ ಎಂದರೆ ಭೂಮಿಯನ್ನು ಆಳುವವನು. ಭೂಮಿಯನ್ನು ಆಳುವವನು ಎನ್ನುವ ಪರಿಕಲ್ಪನೆಯು ಬೇರೆ, ಭೂಮಿಯ ಸೇವಕನಾಗಿರುವುದು ಬೇರೆ. ನಮ್ಮಲ್ಲಿ ಭೂಮಿಯನ್ನು ಆಳುವವರು ಮತ್ತು ಭೂಮಿಯ ಸೇವಕರು ಎಂಬ ಎರಡೂ ಪರಿಕಲ್ಪನೆಗಳಿವೆಯೆನ್ನುವ ಪರಿಕಲ್ಪನೆಗಳು ಇದ್ದವು. ಏಳುವಾಗ ಭೂಮಿಗೆ ನಮಸ್ಕರಿಸುವ ಪದ್ಧತಿಯಿತ್ತು. ಪಾದಸ್ಪರ್ಶವನ್ನು ಮಾಡುತ್ತಿದ್ದೇನೆ ನನ್ನನ್ನು ಕ್ಷಮಿಸು ಎಂದು ಹೇಳುವ ಕ್ರಮವಿತ್ತು. ಬೆಳಗಾಗ ನಾನು ಎದ್ದು ಎಳ್ಳು ಜೀರಿಗೆ ಬೆಳೆಯುವ ನಿನ್ನನ್ನು ಒಂದು ಕ್ಷಣ ನೆನೆಯುತ್ತೇನೆ ಎಂದು ಹೇಳುವ ಕ್ರಮವಿತ್ತು. ಬ್ರಿಟೀಶರಿಗೆ ಭೂಮಿಯು ಆಳ್ವಿಕೆಗೆ ಸಂಬಂಧ ಪಟ್ಟಿರುವುದು. ಸ್ವಾವಲಂಬಿ ಕೃಷಿಕ ಚೇರ್ಕಾಡಿಯವರು ಒಂದು ಸಂದರ್ಶನದಲ್ಲಿ ಹೀಗೆ ಹೇಳಿದರು–

"ನೋಡು ಮಗು ಈ ದೇಶಕ್ಕೆ ಬರಗಾಲವಿಲ್ಲ,
ಬರಗಾಲವಿರುವುದು ನಮ್ಮ ಮನಸ್ಸಿಗೆ.
ನನ್ನ ಹಾಗೆ ನೀನೂ ಬೋಳುಗುಡ್ಡೆಯಲ್ಲಿ ಕುಳಿತರೇನು?
ಭೂಮಿ ತಾಯಿಯು ಬರಡಲ್ಲ.
ನನ್ನ ಹಾಗೆ ನೀನೂ ಅಲ್ಲಿ ಹಸಿರಿನ ಬೀಜವನ್ನು ಬಿತ್ತು
ಕಷ್ಟ ಪಡು,ದುಡಿ,
ಪ್ರಕೃತಿ ಮಾತೆ ತಕ್ಕೈಸಿಕೊಂಡುಬೆಳೆಸುತ್ತಾಳೆ.
(ನರೇಂದ್ರ ರೈ ದೇರ್ಲ–ಚೇರ್ಕಾಡಿ ಹೊಸ ಜೀವನ ದಾರಿ–55)

ಪೋಲೀಸರು, ಕೋರ್ಟುಗಳು, ಎ.ಸಿ.ಗಳು, ಡಿ.ಸಿ.ಗಳು ಪ್ರಭುತ್ವದ ಪರವಾಗಿ ಕೆಲಸ ಮಾಡಿದವು. ನ್ಯಾಯಾಲಯಗಳಿಗೆ ಏಜೆಂಟರಂತೆ ವರ್ತಿಸಿದ್ದು, ಎ.ಸಿ., ಡಿ.ಸಿ. ಮತ್ತು ಪೋಲೀಸ್ ವರ್ಗ. ಪೋಲೀಸರ ಕ್ರೌರ್ಯವೆಂದರೆ ಅದು ರಾಕ್ಷಸೀಭೂತವಾದದ್ದು. "ಹಳ್ಳ ಬಂತು ಹಳ್ಳ" (ಶ್ರೀನಿವಾಸ ವೈದ್ಯ), ಗ್ರಾಮಾಯಣ (ರಾವ್‌ಬಹದ್ದೂರ್), ಸತ್ಯಾಗ್ರಹ (ರಂ.ರಾ. ದಿವಾಕರ), "ಸ್ವಾತಂತ್ರ್ಯ ಚಳುವಳಿಯ ಕರ ಪತ್ರಗಳು" (ವಿ.ಎಸ್. ಹೆಗಡೆ) ನವರತ್ನ ರಾಮರಾಯರ ಕೆಲವು ನೆನಪುಗಳು ಇವೆಲ್ಲವೂ ಆಗಿನ ಬ್ರಿಟೀಶ್ ಪ್ರಭುತ್ವದ ಕ್ರೌರ್ಯವನ್ನು ವಿವರಿಸುತ್ತವೆ. ಇಷ್ಟು ಮಾತುಗಳನ್ನು ಯಾಕೆ ಹೇಳಿದೆನೆಂದರೆ ಪ್ರಭುತ್ವವನ್ನು ಆಧುನಿಕ ಯುಗದ ಅರ್ಥದಲ್ಲಿ ವಿವರಿಸುವುದು ಒಂದು ಕ್ರಮ. ಹೀಗಾಗಿ ಭೂಮಿಯ ಅಧಿಕಾರವನ್ನು ವಿವರಿಸುವಾಗ ಬರೀ ಆಧುನಿಕ ಅರ್ಥದ 'Nation', 'State', 'Power'ಗಳ ವ್ಯಾಖ್ಯಾನದ ಹಿನ್ನೆಲೆಯಲ್ಲಿ ವಿವರಿಸಲು

ಬರುವುದಿಲ್ಲ.ರೈತರು ಆಗ ಮಾತಾಡಿದ್ದು ಬ್ರಿಟೀಶರ ಅಧಿಕಾರದ ಕುರಿತು ಮಾತ್ರವೇ ಅಲ್ಲ.ಬದಲು ತಮ್ಮ ಬೆಳೆ ಮತ್ತು ಜೀವನೋಪಾಯದ ಕುರಿತು ತೆರಿಗೆಯ ಬರ್ಬರತೆಯ ಕುರಿತು ಎಂಬುದಿಲ್ಲಿ ಗಮನಾರ್ಹ. ಗಾಂಧಿಗೆ ಇದರ ಅರಿವಿತ್ತು.

ಚಾರಿತ್ರಿಕವಾಗಿ – ರಾಷ್ಟ್ರೀಯತೆ ಮತ್ತು ಪ್ರಭುತ್ವ ಮೊತ್ತ ಮೊದಲನೆಯದಾಗಿ ಭೌತಿಕ ವ್ಯವಸ್ಥೆಯನ್ನು ಹೊಂದಿರುತ್ತದೆ. ಸಾಮಾನ್ಯ ಪ್ರದೇಶ, ಆರ್ಥಿಕತೆ, ಭಾಷೆ, ಸಂಸ್ಕೃತಿಯ ಅಂಶಗಳನ್ನು ಹೊಂದಿರುತ್ತವೆ. ಸಂಸ್ಕೃತಿಯ ಮೇಲೆ ಅಧಿಕಾರ ಸವಾರಿ ಮಾಡುತ್ತದೆ. ಒಂದು ಜನಾಂಗವೇ, ಇಡಿಯ ರಾಷ್ಟ್ರೀಯತೆಯ ಭಾಗವಾಗಬಹುದು. ರಾಷ್ಟ್ರೀಯತೆ, ಭೂಮಿ. ರಾಜಕಾರಣ, ಸುಂಕ, ಶಿಕ್ಷಣ, ಸನಾತನೆಯೆಲ್ಲವನ್ನೂ ಗಾಂಧಿಗೆ ಮುಖ್ಯವಾಗಿತ್ತು. ಅವುಗಳನ್ನು ಬೇರೆ ಮಾಡಲಿಲ್ಲ. ಗಾಂಧಿ ಖೇಡಾ ಸತ್ಯಾಗ್ರಹಕ್ಕೆ ಕಾಲಿಟ್ಟದ್ದು ಖೇಡಾ ಜಿಲ್ಲೆಯಲ್ಲಿ ಬರಗಾಲವಿದ್ದಾಗವೆನ್ನುವುದನ್ನು ಇಲ್ಲಿ ಗಮನಿಸಬೇಕು.31–7–37ರ ಹರಿಜನ ಪತ್ರಿಕೆಯಲ್ಲಿ ಗಾಂಧಿ ಬರೆದುದನ್ನು ಮೊದಲು ಉಲ್ಲೇಖಿಸಬೇಕು.

> **ವ್ಯವಸಾಯದ ಕಾಲೇಜು, ಆ ಹೆಸರಿಗೆ ಯೋಗ್ಯವಾಗಬೇಕಾದರೆ**
> **ಸ್ವಾವಲಂಬಿಯಾಗಬೇಕು ಕೆಲವು ವ್ಯವಸಾಯ ಪದವೀದರರ**
> **ದುಃಖಮಯ ಅನುಭವ ನನಗಿದೆ. ಅವರ ಜ್ಞಾನ ಬರೀ ಸಿಪ್ಪೆಕ್ರಿಯಾತ್ಮಕ**
> **ಅನುಭವವೇ ಇಲ್ಲ. ಈ ದೇಶಕ್ಕೆ ಅನುಗುಣವಾದ ಸ್ವಸಂಪೂರ್ಣ ವ್ಯವಸಾಯ**
> **ಕ್ಷೇತ್ರದಲ್ಲಿ ಕಲಿತಿದ್ದರೆ ಪದವೀಧರರಾದ ಮೇಲೆ ಇವರಿಗೆ ಸಂಬಳ ಕೊಡುವವರ**
> **ವೆಚ್ಚದಲ್ಲಿ ಇವರು ಅನುಭವಗಳಿಸಬೇಕಾದ ಪ್ರಮೇಯವಿರುತ್ತಿರಲಿಲ್ಲ.– ಗಾಂಧಿ**

ಖೇಡಾ ಜಿಲ್ಲೆಯಲ್ಲಿ ಅವರು ಸತ್ಯಾಗ್ರಹಕ್ಕೆ ಇಳಿದಾಗಲೂ ಅವರ ಮಾತು ಇದಕ್ಕೆ ಪೂರಕವಾಗಿತ್ತು_ಅವರ ಪ್ರಕಾರ ಅದು ರೈತರಿಗೆ ಹೊಸ ಅನುಭವವಾಗಿತ್ತು.

> **ಖೇಡಾ ಸತ್ಯಾಗ್ರಹದಿಂದ ಗುಜರಾತಿನ**
> **ರೈತರಲ್ಲಿ ಜಾಗೃತಿಯುಂಟಾಯಿತು.**
> **ಅವರಿಗೆ ನಿಜವಾದ ರಾಜಕೀಯ ಶಿಕ್ಷಣ ದೊರೆಯಿತು.**
> **ರೈತನಿಗೆ ಎಂದಿಗೂ ಮರೆಯಲಾರದಂತೆ ತನ್ನ ಶಕ್ತಿಯ ಅರಿವು**
> **ಉಂಟಾಯಿತು. ಖೇಡಾ ಚಳುವಳಿಯ ಮೂಲಕ ಗುಜರಾತಿನಲ್ಲಿ**
> **ಸತ್ಯಾಗ್ರಹ ದೃಢವಾಗಿ ಬೇರೂರಿತು. ಗಾಂಧಿ(ಸತ್ಯಾಗ್ರಹ–ಪುಟ 136)**

ಗಾಂಧಿ ರೈತರನ್ನು ಕೇವಲ ರೈತರಂತೆಯೂ ನೋಡಲಿಲ್ಲ.ಅವರ ದೃಷ್ಟಿಯಲ್ಲಿ ರೈತರು ಸಾಮಾನ್ಯ ವ್ಯಕ್ತಿಗಳು ಆಗಿರಲಿಲ್ಲ ಎನ್ನುವುದೇ ಗಮನಾರ್ಹ.

ಇಂಗ್ಲೀಶರು ಕಾನೂನು, ಅದರ ಅಧಿಕಾರ, ಪ್ರಭುತ್ವವನ್ನು ತಮಗೆ ಬೇಕಾದಂತೆ ನಿರ್ವಚಿಸಿದರು. ಮತ್ತೊಂದೆಡೆಯಿಂದ ವ್ಯಕ್ತಿಯು ಕೂಡಾ ಪ್ರಭುತ್ವ ಮತ್ತು ನಿಯಮ

ಸಂಹಿತೆಯ ಒಳಗೆ ನಿರ್ದಿಷ್ಟವಾಗಿ ವರ್ತಿಸಬೇಕು ಎಂದು ಹೇಳಿದರು. ಅದು ರಾಜ್ಯಾಂಗ ವ್ಯವಸ್ಥೆಗೆ ಅತ್ಯಂತ ಅಗತ್ಯವೆಂದು ಪ್ರತಿಪಾದಿಸಿದರು. ಬ್ರಿಟೀಶ್ ಕಾಲದ ರಾಜಕೀಯ ವ್ಯವಸ್ಥೆಯು ಉಳಿಯಬೇಕಾದರೆ ಪ್ರಜೆಗಳು ತಮಗೆ ಬೇಕಾದ ರೀತಿಯಲ್ಲಿ ವರ್ತಿಸುವುದು ಸರಿಯಲ್ಲ ಎಂದು ಪ್ರತಿಪಾದಿಸಿದರು. ಪ್ರಜೆಗಳು, ರೈತರು,ಕೂಲಿಯವರು ಸಾಮಾನ್ಯ ಜನರು ಮತ್ತು ರಾಜನೀತಿಗೆ ಅನುಸಾರವಾಗಿ ಬದುಕುವವರು. ಉದಾರವಾದಿಗಳ ಪ್ರಕಾರ ಯಾವುದೇ ಒಬ್ಬ ವ್ಯಕ್ತಿ ತನಗೆ ಬೇಕಾದ ರೀತಿಯಲ್ಲಿ ಬದುಕುವಂತಿಲ್ಲ. ವಸಾಹತು ಪೂರ್ವದಲ್ಲಿ ಇದನ್ನು ರಾಜದ್ರೋಹ ಎಂದು ಕರೆಯಲಾಗುತ್ತಿತ್ತು. ಅಧಿಕಾರದ ಪರಮೋಚ್ಛ ಅಧಿಕಾರವನ್ನು ಗಾಂಧಿ ಮುರಿಯಲು ಯತ್ನಿಸಿದ್ದರಿಂದ ಅವರು ತಮಗೆ ಬೇಕಾದ ಪರಿಕಲ್ಪನೆಗಳನ್ನು ಹುಟ್ಟುಹಾಕಿದರು. ಸತ್ಯಾಗ್ರಹಿಗಳು, ರೈತರು, ಕೂಲಿಯವರು; ಲೌಕಿಕದ ಅಧಿಕಾರ ಉಳ್ಳವರಾಗಿರಲಿಲ್ಲ. ಅವರಿಗೆ ಭೌತಿಕ ಅಧಿಕಾರ ಇರಲಿಲ್ಲ.

ಇದಕ್ಕೆ ಸಂವಾದಿಯಾಗಿ ಹದಿನೇಳನೆಯ ಶತಮಾನದ ರಾಜಕೀಯ ತತ್ವಜ್ಞಾನಿ ಜೇಮ್ಸ್ ಹ್ಯಾರಿಂಗ್‌ಟನ್ ಹೇಳಿದ ಪ್ರಮುಖ ಅಂಶಗಳನ್ನು ಇಲ್ಲಿ ಗಮನಿಸಬಹುದು. ಉದಾರವಾದಿ ಮಾನವತಾವಾದವು ಅಧಿಕಾರದ ಎರಡು ಸ್ವರೂಪವನ್ನು ವಿವರಿಸುತ್ತದೆ ಅಥವಾ ವ್ಯತ್ಯಾಸಗೊಳಿಸುತ್ತದೆ.

1) ನಾಗರಿಕ ಮಾನವತಾವಾದವು (Civic humanism) ವಾಸ್ತವದ ಅಧಿಕಾರ (defacto power)ನ್ನು ಒಂದು ರೀತಿಯಲ್ಲಿ ವಿವರಿಸುತ್ತದೆ

2) ಆದರೆ ಕಾನೂನು ಆಧಾರಿತ (dejure) ಪ್ರಭುತ್ವದ ಸ್ವರೂಪ ಬೇರೆ. ಇಲ್ಲಿ ಅಧಿಕಾರದ ಸ್ವರೂಪ ಬೇರೆಯಾಗುತ್ತದೆ. ಅಧಿಕಾರದ ಹೊಣೆ (Authoritys) ಭಿನ್ನವಾದ ನಿಲುವನ್ನು ತಳೆಯುತ್ತದೆ. ಅಧಿಕಾರದ ಹೊಣೆಗಾರಿಕೆಯು ಸಾಕ್ಷ್ಯ, ವಸ್ತುನಿಷ್ಠತೆ ಮುಂತಾದ ಅಂಶಗಳನ್ನು ಒಳಗೊಂಡಿದೆ.

3) ಕಾನೂನು ಆಧಾರಿತ (Dejure) ಅಧಿಕಾರದಲ್ಲಿ ಪ್ರಭುತ್ವವು ಹಕ್ಕುದಾರಿಕೆಯನ್ನು ಹೊಂದಿದೆ. ಮತ್ತು ಅದು ತನ್ನ ಅಧಿಕಾರವನ್ನು ಅದರದೇ ಅನ್ನಬಹುದಾದ ನ್ಯಾಯವನ್ನು ರೂಪಿಸಿಕೊಳ್ಳುತ್ತದೆ.

ಆದರೆ ಈ ಎರಡೂ ಪ್ರಭು ಸಂಹಿತೆಯಲ್ಲಿ ಅಧಿಕಾರದ ಹೊಣೆಗಾರಿಕೆಯನ್ನು ಬೇರೆ ಬೇರೆ ರೀತಿಯಲ್ಲಿ ವಿವರಿಸುತ್ತವೆ. ಗಾಂಧಿ ಹೇಳಿದ್ದು ನಾನು ಪ್ರಜೆಗಳ ಸೇವಕನೇ ಹೊರತು ಪ್ರಭುಗಳ ಸೇವಕನಲ್ಲ.ಗಾಂಧಿಯ ರಾಜಕೀಯ ನಿಲುವು ಕೇವಲ ಶಸ್ತ್ರಾಸ್ತ್ರ ಆಧಾರಿತವಲ್ಲ.

ನನ್ನ ದೃಷ್ಟಿಯಲ್ಲಿ ರಾಜಕೀಯ ಅಧಿಕಾರವೇ ಗುರಿಯಲ್ಲ.
ಅದು ಜನ ಬಾಳಿನ ಪ್ರತಿಯೊಂದು ಅಂಗದಲ್ಲೂ
ತಮ್ಮ ಸ್ಥಿತಿಯನ್ನು ಉತ್ತಮಗೊಳಿಸಲು ಸಹಾಯಕವಾಗುವ ವಿಧಾನ
ರಾಜಕೀಯ ಅಧಿಕಾರವೆಂದರೆ ರಾಷ್ಟ್ರ ಪ್ರತಿನಿಧಿಗಳ
ಮೂಲಕ ರಾಷ್ಟ್ರ ಪ್ರತಿನಿಧಿಗಳ ಮೂಲಕ ರಾಷ್ಟ್ರ ಜೀವನವನ್ನೇ
ನಿಯಮನಗೊಳಿಸುವುದು– ಗಾಂಧಿ (ಯಂಗ್ ಇಂಡಿಯಾ 1931)

ವಾಸ್ತವವಾದಿ ಅಧಿಕಾರ (defacto) ಸಿದ್ಧಾಂತದ ಪ್ರಕಾರ ತನ್ನ ಅಧಿಕಾರ ಏಕಕೇಂದ್ರಿತವಾದುದು. ಎಲ್ಲದಕ್ಕೂ ಅಧಿಕಾರವು ಉತ್ತರ ಹೇಳಬೇಕಾಗಿಲ್ಲ ಎಂದು ಪ್ರತಿಪಾದಿಸುತ್ತದೆ.

ಆದರೆ ಅಧಿಕಾರದ ಹೊಣೆಗಾರಿಕೆಯನ್ನು ಇವು ತಪ್ಪಿಸಿಕೊಳ್ಳುವಂತಿಲ್ಲ. ಅಧಿಕಾರದ ಹೊಣೆಗಾರಿಕೆಯೇ ಇಲ್ಲಿ ಪ್ರಮುಖ ಅಂಶವಾಗಿದೆ. ಹೀಗಿದ್ದೂ ಯಾವುದೇ ಸಮಾಜದ ರಾಜಕೀಯ, ಸಾಂಸ್ಕೃತಿಕ ವಿವರಗಳು ಅಧಿಕಾರಕ್ಕೆ ಬರುವಾಗ ತನ್ನದೇ ನಿರ್ವಚನಗಳನ್ನು ಹೊಂದಿರುತ್ತವೆ..

ಗಾಂಧಿಯವರಲ್ಲಿ ವ್ಯಕ್ತವಾದ ಅಧಿಕಾರದ ನಿರೂಪಣೆಯನ್ನು ಹೀಗೆ ಗುರುತಿಸಬಹುದು:

ಅ) ಆಧುನಿಕ ಅರ್ಥದ ಅಧಿಕಾರವು ಗಾಂಧಿಗೆ ಮುಖ್ಯವಲ್ಲ.–

ಆ) ರಾಜಕೀಯ ಸ್ವಾತಂತ್ರಕ್ಕೆ ಬೇರೆ ಬೇರೆ ಹಾದಿಗಳಿವೆ.

ಇ) ಪ್ರಜೆಯ ಮತ್ತು ದೇವರ ದಾಸನಾಗುವುದರ ಬಗ್ಗೆ ಯಾವ ಮುಜುಗರವಿಲ್ಲ.

ಈ) ವ್ಯಕ್ತಿ ಜೀವನ ಮತ್ತು ರಾಜಕೀಯ ಜೀವನ ಎರಡೂ ಅಭಿನ್ನ.

ಉ) ರಾಜಕಾರಣವೂ ಸಹಿಷ್ಣುತೆಯ ಒಂದು ಭಾಗ.

ಊ) ದೇಹವಿದ್ದಲ್ಲಿ ಕರ್ಮವೂ ಇದೆ.ದೇಹವು ಪ್ರಭುವಿನ ಮಂದಿರ.

ಎ.) ಸ್ವದೇಶಿ ಈ ಯುಗದ ಮಹಾವ್ರತ.

ಏ) ಸ್ವದೇಶಿಯು ಆತ್ಮದ ಧರ್ಮ

ಗಾಂಧಿಯವರ ಚಿಂತನೆಯಲ್ಲಿ "ಶ್ರೀಕೃಷ್ಣ" ಅಧಿಕೃತ ಪ್ರಭು. ಇಲ್ಲಿ ಪ್ರಭುತ್ವಕ್ಕೆ ಸಾಮಾಜಿಕ, ರಾಜಕೀಯ, ಧಾರ್ಮಿಕ, ಅರ್ಥವಂತಿಕೆಗಳಿವೆ. ಯಾರೇ ಆಗಲಿ, ವಿನಾಕಾರಣ ದಾಸನಾಗುವುದಿಲ್ಲ. ಹಾಗೆಯೇ ಪ್ರಭುವು ಕೂಡಾ, ಅಧಿಕೃತ ಅಧಿಕಾರವುಳ್ಳವರು ಆಳುವ ಶಕ್ತಿಯನ್ನು ಹೊಂದಿರುತ್ತಾರೆ. ದೇವರ ಮತ್ತು ಭೂಮಿಯ ಋಣದಲ್ಲಿ

ಮನುಷ್ಯರು ಇರುತ್ತಾರೆ. ಇಲ್ಲಿ ದ್ವೈತ (ಎರಡು) ಎನ್ನುವುದು ಮುಖ್ಯ.

"ನೆರೆಹೊರೆಯ ಸೇವೆಯಲ್ಲಿ ನಾವು ನಿರತರಾಗಬೇಕಾದುದೇ ಸ್ವದೇಶಿ ಧರ್ಮ".

– (ಗಾಂಧಿ)

ಗಾಂಧಿಯವರ ದೃಷ್ಟಿಯಲ್ಲಿ ದೇವರು ಬೇರೆ, ಭಕ್ತರು ಬೇರೆ, ದಾಸರು ದೇವರನ್ನು ಆಶ್ರಯಿಸಿಕೊಂಡವರು. ಇಲ್ಲಿ ಗಮನಿಸಬೇಕಾದ ಅಂಶವೆಂದರೆ "ದ್ವೈತ"ದ ಪರಿಕಲ್ಪನೆ. ಇಲ್ಲಿ ಅಧಿಕಾರವೆಂದರೆ (ಪ್ರಭುತ್ವ) ಅಗೋಚರವಾದುದು. ಗಾಂಧಿ ಹೇಳಿದ್ದು ಹೀಗೆ:

"ಮರಕ್ಕೆ ಲಕ್ಷ ಎಲೆ ಇರುವಂತೆಯೇ
ದೇವರು ಒಬ್ಬನೇ ಆದರೂ,
ಎಷ್ಟು ಜನ ಗಂಡಸರೂ ಹೆಂಗಸರೂ ಇದ್ದರೋ
ಅಷ್ಟು ಮತಗಳಿದ್ದವು.
ಅವೆಲ್ಲದರ ಬೇರೂ ಒಂದೇ ದೇವರಲ್ಲಿತ್ತು"–ಗಾಂಧಿ–ಹರಿಜನ 16–3–47

ಅದಕ್ಕೆ ನಿರ್ದಿಷ್ಟ ಆಕಾರವಿಲ್ಲ. ಗಾಂಧಿಗೆ ಈ ದೃಷ್ಟಿಯಿಂದ ಸಾಮಾಜಿಕ, ಧಾರ್ಮಿಕ ಅಸ್ತಿತ್ವಗಳಿವೆ. ಇಂಗ್ಲಿಷಿನವರಿಗೆ ಅಧಿಕಾರವು ರೂಪುಗೊಳ್ಳುವುದಕ್ಕೆ ಸಾಮಾಜಿಕ, ಚಾರಿತ್ರಿಕ ಕಾರಣಗಳಿವೆ ಮತ್ತು ಇವು ವಿಷಯ ನಿಷ್ಠವಾದವುಗಳು ಎಂಬುದರ ಅರಿವು ಗಾಂಧಿಗೆ ಇದೆ. ಎರಡನೆಯದಾಗಿ ಪ್ರಭುತ್ವವು ತನಗೆ ಬೇಕಾದ ಜ್ಞಾನರೂಪಗಳನ್ನು ಹುಟ್ಟುಹಾಕುತ್ತವೆ. ಹೀಗಾಗಿ ಪ್ರಭುತ್ವವು ಅಧಿಕಾರವನ್ನು ತನಗೆ ಬೇಕಾದ ವೈಚಾರಿಕ ಆಕೃತಿಯನ್ನು ಪಡೆದುಕೊಳ್ಳುತ್ತವೆ ಎಂಬುದೂ ಗಾಂಧಿಗೆ ಗೊತ್ತು. ಈ ಕಾರಣದಿಂದಲೇ ಗಾಂಧಿ ನೈತಿಕ ಶಿಕ್ಷಣದ ಕುರಿತು ಹೇಳಿದ್ದು ಎಂಬುದನ್ನು ಮರೆಯಬಾರದು. ಭಾರತದಲ್ಲಿ "ಭಕ್ತಿ" ಚಳುವಳಿಗಳು ಹುಟ್ಟಿಕೊಂಡಿದ್ದೇ ಭೌತಿಕ ಅಧಿಕಾರವನ್ನು ವಿರೋಧಿಸುವುದಕ್ಕಾಗಿ. ದಾಸರ ಕೀರ್ತನೆಗಳ ಹಿನ್ನೆಲೆಯಿಂದ ವಿವರಿಸಬೇಕೆಂದರೆ – ಲೌಕಿಕದ ಪ್ರಭುತ್ವವನ್ನು ಮೀರಿ. ಪಾರಲೌಕಿಕದ ಅಧಿಕಾರವನ್ನು ರೂಪಿಸುವುದು ಭಕ್ತಿ ಚಳುವಳಿಗೆ ಮುಖ್ಯವಾಯಿತು. ಗಾಂಧಿಯವರ ತಾತ್ವಿಕತೆಯು ಇದರಿಂದ ರೂಪುಗೊಂಡಿದೆ.

"ನಿಜವಾದ ಧರ್ಮಕ್ಕೂ ನಿಜವಾದ ನೈತಿಕತೆಗೂ
ಬೇರ್ಪಡಿಸಲಾಗದ ಬೆಸುಗೆ ಇದೆ.
ಮಣ್ಣಿನಲ್ಲಿ ಬಿತ್ತಿದ ಬೀಜಕ್ಕೆ ನೀರು ಹೇಗೋ ಧರ್ಮ ನೈತಿಕತೆಗೆ ಹಾಗೆ" ಗಾಂಧಿ

ಭಕ್ತಿ ಸಾಹಿತ್ಯ ಪರೋಕ್ಷವಾಗಿ ಹೇಳಿದ್ದೇನೆಂದರೆ ನಮಗೆ ಲೌಕಿಕದ ಪ್ರಭುಗಳಿಲ್ಲ. ನಾವು ದೇವರ ಸೇವಕರೇ ಹೊರತು ಲೌಕಿಕದ ದೊರೆಗಳ ದಾಸರಲ್ಲ. ಹೀಗಾಗಿ ತಮಗೂ, ದೇವರಿಗೂ ಇರುವ ಸಂಬಂಧ ಬೇರೆ ಬಗೆಯದ್ದು ಭಕ್ತಿ ಚಳುವಳಿಯವರು

ನಿರೂಪಿಸಿದರು. ದೇಶ ಸೇವಕರು ಎಂಬುದಕ್ಕೆ ಹೊಸ ಅರ್ಥ ವ್ಯಾಪ್ತಿಯು ರಾಷ್ಟ್ರೀಯ ಚಳುವಳಿಕಾರರಲ್ಲಿ ಬಂದುದು ಗಮನಾರ್ಹ. ದೇಶದ ಪರಮೋಚ್ಚ ಅಧಿಕಾರವನ್ನು ಸಾರುವುದು ರಾಷ್ಟ್ರ ಭಕ್ತಿಯ ಚಳುವಳಿಯವರಿಗೆ ಮುಖ್ಯವಾಗಿತ್ತು. ಅಂದರೆ ಇಲ್ಲಿ ಅಧಿಕಾರವನ್ನು ಸಾಮಾಜಿಕ, ರಾಜಕೀಯ, ಆರ್ಥಿಕ ವಿಷಯಗಳ ಮೂಲಕ ವಿವರಿಸಲಾಯಿತು. ಇಲ್ಲಿ ಮೂರು ಅಂಶಗಳನ್ನು ಗಮನಿಸಬೇಕು :

ಅಧಿಕಾರ (ಪ್ರಭುತ್ವ)ವು ರೂಪುಗೊಳ್ಳುವುದು ಸಾಮಾಜಿಕ ರೂಪಕ್ಕೆ ಅನುಸಾರವಾಗಿ, ಇಲ್ಲಿ "ವಿಷಯ ನಿಷ್ಠತೆ" ಎನ್ನು ವುದು ಮುಖ್ಯ.ರಾಷ್ಟ್ರೀಯ ಚಳುವಳಿಯ ಸಂದರ್ಭದಲ್ಲಿ ದೇಶಸೇವೆಯ ಅಧಿಕಾರವೇ ಮುಖ್ಯವಾಯಿತು. ಎರಡನೆಯದಾಗಿ ಜ್ಞಾನರೂಪಗಳು ತನ್ನಿಂದ ತಾನೇ ಅಧಿಕಾರದ ರೂಪದೊಂದಿಗೆ ಹೊಂದಾಣಿಕೆ ಮಾಡಿಕೊಳ್ಳುತ್ತವೆ.ಸನಾತನ ಜ್ಞಾನ ಶಕ್ತಿಯೇ ಗಾಂಧಿಯವರಿಗೆ ವರದಾನವಾಯಿತು. ಮೂರನೆಯದಾಗಿ ಪ್ರಭುತ್ವದ ಅಧಿಕಾರವು ವಿಶ್ವಾತ್ಮಕವಾದುದು. ಅದು ಆ ರೂಪವನ್ನು ಪಡೆಯುವುದಕ್ಕೆ ಸಾಮಾಜಿಕ ಸಂಬಂಧಗಳ ವ್ಯತ್ಯಯವೇ ಮುಖ್ಯ ಕಾರಣ. ಯಾವಾಗ ಸಾಮಾಜಿಕ ಸಂಬಂಧಗಳಲ್ಲಿ ವಿವಿಧತೆಯು ಹುಟ್ಟಿಕೊಳ್ಳುತ್ತದೆಯೋ ಆಗ ಜ್ಞಾನ ಮತ್ತು ಅಧಿಕಾರಗಳು ಬೇರೆ ಬೇರೆ ರೂಪವನ್ನು ಧರಿಸಬೇಕಾಗುತ್ತದೆ. ಈ ಅರ್ಥದಲ್ಲಿ ಜ್ಞಾನಕ್ಕೂ ಅಧಿಕಾರಕ್ಕೂ ಸಂಬಂಧವಿದೆ. ಪ್ರಭುತ್ವವು ಈ ಕಾರಣಕ್ಕಾಗಿಯೇ ಆಧ್ಯಾತ್ಮಿಕತೆಯ ಕಡೆಗೆ ತಿರುಗುತ್ತದೆ. ಪ್ರಭುತ್ವಕ್ಕೆ ಈ ಪರಿಕಲ್ಪನೆಯು ಮುಖ್ಯವಾಯಿತು. ಇದೇ ಕಾರಣದಿಂದ ಭಕ್ತಿ ಸಾಹಿತ್ಯವು ಹೊಸ ರೀತಿಯ ನಿರೂಪಣೆಯನ್ನು ಹೊಂದಬೇಕಾಯಿತು. ಅದು ಪ್ರಕಟಿಸುವ ನಿರೂಪಣೆಯ ಕ್ರಮ ಉಳಿದ ನಿರೂಪಣೆಗಿಂತ ಬೇರೆಯಾಯಿತು. ಗಾಂಧಿ ಆಶ್ರಮದ ಪ್ರಾರ್ಥನೆಯ ಕುರಿತು ಹೇಳಿರುವುದು ಗಮನಾರ್ಹ–

> ಪ್ರಾತಃಕಾಲದ ಪ್ರಾರ್ಥನೆಯಲ್ಲಿ "ಆಶ್ರಮ ಭಜನಾವಳಿ"ಯಲ್ಲಿ ಅಚ್ಚಾಗಿರುವ ಶ್ಲೋಕಗಳನ್ನು ಮೊದಲು ಪಠಿಸುತ್ತೇವೆ. ಅನಂತರ ಒಂದು ಭಜನೆ, ರಾಮನಾಮದ ಜಪ, ಮತ್ತು ಗೀತಾಪಠನ ನಡೆಯುತ್ತವೆ. ಸಾಯಂಕಾಲದ ಪ್ರಾರ್ಥನೆಯಲ್ಲಿ ಭಗವದ್ಗೀತೆಯ ಎರಡನೆಯ ಅಧ್ಯಾಯದ 19 ಶ್ಲೋಕಗಳ ಪಠನ, ಒಂದು ಭಜನೆ ಮತ್ತು ರಾಮನಾಮದ ಜಪ ಆಗುತ್ತವೆ. ತರುವಾಯ ಯಾವುದಾದರೂ ಒಂದು ಪವಿತ್ರಗ್ರಂಥದಿಂದ ಸ್ವಲ್ಪ ಭಾಗವನ್ನು ಓದುತ್ತೇವೆ. (ಆಶ್ರಮನಿಯಮಾವಳಿ, ಇತ್ಯಾದಿ)

(ಧರ್ಮ ಮತ್ತು ನೀತಿ 1958 ಮೋ. ಕ. ಗಾಂಧಿ ಪುಟ. 95)

ಬ್ರಿಟೀಶರ ದಾಸ್ಯತ್ವವು ಇಲ್ಲಿ ನಾಚಿಕೆಯ ವಿಷಯ.ಆದರೆ ದೇಶದ ದಾಸನಾಗುವುದು ದೊಡ್ಡಸ್ತಿಕೆ ಕೂಡಾ ಹೌದು. ಭಾರತೀಯ ತತ್ವಜ್ಞಾನದಲ್ಲಿ ಒಂದು ವಿಷಯ ಮತ್ತೆ ಮತ್ತೆ ಮರುಕಳಿಸಿದೆ. ಇದು ಮೊದಲು ಪ್ರಾರಂಭವಾದುದು, ಉಪನಿಷತ್ತುಗಳಲ್ಲಿ. ಅನಂತರ ಈ ತತ್ವಜ್ಞಾನವು ಬೇರೆ ಬೇರೆ ರೀತಿಯಲ್ಲಿ ವರ್ಣಿತಗೊಂಡಿತು.

ಭಗವಂತನನ್ನು ಸೇರಲು ಮನುಷ್ಯನಿಗೆ ಇರುವ ಮಾರ್ಗಗಳು ನಾಲ್ಕು

1. ಕರ್ಮ – ನಿಷ್ಕಾಮ ಕರ್ಮದಿಂದ – ಕರ್ಮಯೋಗ.ಗಾಂಧಿಗೆ ಇದರ ಪ್ರಭಾವ ತುಂಬಾ ಇದೆ.

> **ದೇವರ ಹೆಸರಿನಲ್ಲಿ ಮಾಡಿದ, ದೇವರಿಗಾಗಿ ಮುಡುಪಾದ, ಯಾವ ಕರ್ಮವೂಕಿರಿದಲ್ಲ. ಹಾಗೆ ಮಾಡಿದ**
> **ಸಮಸ್ತ ಕರ್ಮಕ್ಕೂ ಸಮಾನ ಬೆಲೆ ದೊರಕುತ್ತದೆ. ದೇವರ ಸೇವೆಯೆಂದು ಕೆಲಸ ಮಾಡುವ ಜಲಗಾರನಿಗೂ ದೇವರ ಹೆಸರಿನಲ್ಲಿ ತನ್ನ ಶಕ್ತಿ ಸಾಮರ್ಥ್ಯಗಳನ್ನು ಪರರಿಗಾಗಿ ಅವನ್ನು ನೋಡಿಕೊಳ್ಳುವವ ತಾನೆಂದು ತಿಳಿದು ಉಪಯೋಗಿಸುವ ರಾಜನಿಗೂ ಸಮಾನ ಖ್ಯಾತಿ. (ಯಂಗ್ ಇಂಡಿಯಾ, 15–11–25)**
> **(ಧರ್ಮ ಮತ್ತು ನೀತಿ ಮೋ. ಕ. ಗಾಂದೀ 1958 ಪುಟ–143)**

2. ಭಕ್ತಿ – ಆಚರಣೆಯ ಮೂಲಕ – ಭಕ್ತಿಯೋಗ
3. ಜ್ಞಾನ – ತಿಳುವಳಿಕೆಯ ರೀತಿಯಿಂದ ಜ್ಞಾನ ಯೋಗ
4. ಧ್ಯಾನ – ಸ್ವಂತ ಏಕಾಂತ ಧ್ಯಾನದಿಂದ.

ಹಾಗೆಯೇ ರಾಜಕೀಯ ಮಾರ್ಗಗಳನ್ನು ವಸಾಹತು ಕಾಲಘಟ್ಟದ ಅನಂತರ ಬೇರೆ ಬೇರೆ ರೀತಿಯಲ್ಲಿ ನಿರ್ವಚಿಸಲಾಯಿತು. ರಾಮಕೃಷ್ಣ ಪರಮಹಂಸ, ಸ್ವಾಮಿ ವಿವೇಕಾನಂದ, ಮಹಾತ್ಮ ಗಾಂಧಿ, ಅರಬಿಂದೋ ಮೊದಲಾದವರು ಭಕ್ತಿಗೆ ಮರು ವ್ಯಾಖ್ಯಾನ ನೀಡಿದರು. ಗಾಂಧಿ ದೇವರಿಗೆ ದಾಸನಾಗುವುದು, ಅಥವಾ ಶರಣಾಗುವುದು ಎಂಬುದನ್ನು ಬೇರೆ ಬೇರೆ ಅರ್ಥಗಳಲ್ಲಿ ವಿವರಿಸಿದರು. ಅನ್ಯಥಾ ಶರಣಂ ನಾಸ್ತಿ, ಮಾಮೇಕ ಶರಣಂ ವ್ರಜ – ಇದು ಗೀತೆಯ ಮಾತು. ನನಗೆ ಯಾರು ಶರಣಾಗುವರೋ ಅವರನ್ನು ನಾನು ರಕ್ಷಿಸುತ್ತೇನೆ. ಗೀತೆಯ ಕೃಷ್ಣ ಅರ್ಜುನನಿಗೆ ಹೇಳುತ್ತಾನೆ. ಗಾಂಧಿಯ ದಾರಿಯೂ ಇದುವೇ : ಭಗವಂತನಿಗೆ ಶರಣಾಗುವುದು . ಇಲ್ಲಿ ಶರಣಾಗುವುದು ಲೋಕ ಜೀವನಕ್ಕೆ ಸಂಬಂಧಿಸಿದ್ದಲ್ಲ ಎಂಬುದನ್ನು ನಾವು ಗಮನಿಸಬೇಕು. ಮನುಷ್ಯ ಯಾವ ಯಾವ ಸಂದರ್ಭದಲ್ಲಿ ಶರಣಾಗುತ್ತಾನೆ ಎಂದು ತಿಳಿಯುವುದು ಕೂಡಾ ಅಷ್ಟೇ ಮುಖ್ಯ.

1 ಎದುರಾಳಿಯೊಂದಿಗೆ ಹೋರಾಟ ಮಾಡಿ ಸೋತಾಗ – ಇಲ್ಲಿ ಸೋತವನು ನಿಶಸ್ತ್ರಧಾರಿಯಾಗಿರಬೇಕು. ಮತ್ತು ಇಲ್ಲಿ ಸಂಘರ್ಷವೇ ಮುಖ್ಯ. ಸಂಘರ್ಷ ನಡೆಯದೆ ಶರಣಾಗುವುದು ಸಾಧ್ಯವಿಲ್ಲ.

> ರಾಜರು ಸದಾ ಶಸ್ತ್ರಗಳನ್ನು ಪ್ರಯೋಗಿಸಿ ತೀರುತ್ತಾರೆ. ಬಲ ಪ್ರಯೋಗ ಅವರ ಹುಟ್ಟುಗುಣ. ಅವರು ಪ್ರಭುತ್ವ ನಡೆಸಬೇಕಲ್ಲ. ಆದರೆ ಪ್ರಜೆಗೆ ಗುಂಡುಮದ್ದು ಬೇಡ. ಈ ಪ್ರಜೆಯದೆ ಲೋಕದಲ್ಲಿ ಬಹು ಸಂಖ್ಯೆ ಶಸ್ತ್ರಬಲವೋ ಆತ್ಮಬಲವೋ ಯಾವುದಾದರೂ ಒಂದು ಅವರಿಗೆ ಬೇಕು. ಶಸ್ತ್ರಬಸವನ್ನು ಕಲಿತರೆ ರಾಜ–ಪ್ರಜೆ ಇಬ್ಬರೂ ಹುಚ್ಚರ ಹಾಗೆ ಆಗುತ್ತಾರೆ. ಪ್ರಜೆ ಆತ್ಮಬಲವನ್ನು ಕಲಿತರೆ, ಸತ್ಯಾಗ್ರಹವನ್ನು ಕಲಿತರೆ ರಾಜರ ಪ್ರಭುತ್ವ ಅವರ ಕತ್ತಿಯ ಅಲಗನ್ನು ದಾಟಲಾರದು. ಧೀರಪುರುಷರು, ನಿಜವಾದ ಮನುಷ್ಯರು ಅನ್ಯಾಯದ ಅಪ್ಪಣೆಗಳನ್ನು ಸಡ್ಡೆಮಾಡರು. ರೈತರನ್ನು ಎಂದೂ ಯಾರೂ ಕತ್ತಿಯಿಂದ ಅಧೀನ ಪಡಿಸಿಕೊಂಡಿಲ್ಲ. ಮುಂದೆಯೂ ಅಷ್ಟೆ. ಅವರಿಗೆ ಕತ್ತಿ ಹಿಡಿದು ಗೊತ್ತಿಲ್ಲ. ಕತ್ತಿ ಹಿಡಿದವರನ್ನ ಕಂಡು ಭಯವೂ ಇಲ್ಲ. ಸಾವಿನ ತೊಡೆಯ ಮೇಲೆ ಸದಾ ಮಲಗಿರಬಲ್ಲ ರಾಷ್ಟ್ರವೇ ಮಹಾ ರಾಷ್ಟ್ರ. ಯಾರಿಗೆ ಮರಣ ಭಯವಿಲ್ಲವೋ ಅವರಿಗೆ ಯಾವ ಭಯವೂ ಇಲ್ಲ. ಶಸ್ತ್ರಬಲದ ಮೋಹಕ್ಕೆ ಸಿಲುಕಿದವರಿಗೆ ಈ ಚಿತ್ರ ಉತ್ಪ್ರೇಕ್ಷಿತವೇನಲ್ಲ. ಹಿಂದೂಸ್ಥಾನದ ಪ್ರಜೆ ಜೀವನದ ಸರ್ವಾಂಗಗಳಲ್ಲಿಯೂ ಸತ್ಯಾಗ್ರಹವನ್ನು ಪ್ರಯೋಗಿಸಿದ್ದಾರೆ. ಇದು ನಿಜ. ಆಳುವವರು ದುಷ್ಟರಾದರೆ ಪ್ರಜೆ ಅವರೊಡನೆ ಸಹಕಾರ ಮಾಡದೆ ಇದ್ದು ಬಿಡುತ್ತದೆ. ಇದೇ ಸತ್ಯಾಗ್ರಹ. (ಹಿಂದ್ ಸ್ವರಾಜ್ಯ– ಪುಟ. 75)

2 ಊಳಿಗದವನು ಯಜಮಾನಿಗೆ ಶರಣಾಗುವುದು (ಇದರ ಇನ್ನೊಂದು ರೂಪವೆಂದರೆ – ಪತಿಯೇ ಪರದೈವ), ಊಳಿಗದವನ ಆರ್ಥಿಕ ಪರಿಸ್ಥಿತಿ ಮತ್ತು ಕೀಳರಿಮೆಯೇ ಶರಣಾಗತಿಗೆ ಕಾರಣವಾಗಿದೆ. ಗಾಂಧಿ ಪರಸೇವೆಯ ಕುರಿತು ಹೇಳಿರುವುದು ಗಮನಾರ್ಹ.

> ಸ್ವಂತ ಇಚ್ಛೆಯಿಂದ ಪರಸೇವೆ ಎಸಗುವುದಕ್ಕೆ ಎಷ್ಟನ್ನು ಮಾಡಲು ಶಕ್ಯವೋ ಅಷ್ಟನ್ನೂ ಮಾಡಬೇಕಾಗುತ್ತದೆ; ಅದು ಮೊದಲು, ಸ್ವಂತಸೇವೆಯ ವಿಚಾರ ಆಮೇಲೆ. ದಿಟ್ಟವಾಗಿ ಪರಿಶುದ್ಧ ಸೇವಾಜೀವಿ ಯಾವ ಬಗೆಯ ಮಾನಸಿಕ ಸಂಕೋಚವನ್ನು ಇಟ್ಟುಕೊಳ್ಳದೆ ಮಾನಸೇವೆಯಲ್ಲಿ ಬದ್ಧ ಮನನಾಗುತ್ತಾನೆ. (ಮಂಗಳ ಪ್ರಭಾವ) (ಧರ್ಮ ಮತ್ತು ನೀತಿ ಮೋ. ಕ. ಗಾಂದೀ 1958 ಪುಟ. 63)

3 ಭಕ್ತನು ದೇವರಿಗೆ ಶರಣಾಗುವುದು. ಇಲ್ಲಿ ಭಕ್ತಿಯ ಭಾವವೇ

ಮುಖ್ಯವಾಗಿದೆ.

> ವ್ರತಗಳಲ್ಲಿ ನಮ್ರತೆಗೆ ಸ್ಥಾನ ಕೊಡದಿದ್ದರೂ ವ್ರತಗಳಿಗಿಂತಲೂ ಹೆಚ್ಚು ಅವಶ್ಯಕವಾದ ಗುಣ ಇದು. ಅವುಗಳಷಾ ದರೂ ಖಂಡಿತ ಅವಶ್ಯಕ. ಆದರೆ ಯಾರಿಗೂ ನಮ್ರತೆ ಅಭ್ಯಾಸದಿಂದ ಲಭಿಸಿದಂತಿಲ್ಲ. ಸತ್ಯದ ಅಭ್ಯಾಸ ಸಾಧ್ಯ. ದಯೆಯ ಅಭ್ಯಾಸವೂ ಸಾಧ್ಯ. ಆದರೆ ನಮ್ರತೆಯ ಅಭ್ಯಾಸ ಎಂದರೆ ದಂಡದ ಅಭ್ಯಾಸ ಮಾಡಿದ ಹಾಗೇ ಎನ್ನಬಹುದು. ನಮ್ರತೆಯೆಂದರೆ ದೊಡ್ಡವರು ಪರಸ್ಪರ ತೋರಿಸುವ ಮಾನ–ಮರ್ಯಾದೆ ಅಲ್ಲ. ಒಬ್ಬ ಹೊರಗೆ ಸಾಷ್ಟಾಂಗ ನಮಸ್ಕಾರವನ್ನೇ ಮಾಡಬಹುದು. ಇನ್ನೊಬ್ಬನಿಗೆ ಆದರೆ ಅವನ ಮನಸ್ಸಿನಲ್ಲಿ ಆ ಇನ್ನೊಬ್ಬನ ಬಗ್ಗೆ ಬರೀ ತಿರಸ್ಕಾರವೇ ತುಂಬಿದ್ದರೆ, ಅದು ನಮ್ರತೆಯಲ್ಲ–ಧೂರ್ತತನ. ಒಬ್ಬ ರಾಮನಾಮ ಜಪಮಾಡುತ್ತಾನೆ. ತುಲಸೀಮಾಲೆ ತಿರುಗಿಸುತ್ತಾನೆ. ಮುನಿಯ ಹಾಗೆ ಸಮಾಜದಲ್ಲಿ ಓಡಾಡುತ್ತಾನೆ–ಒಳಗಡೆ ಅವನಲ್ಲಿ ಸ್ವಾರ್ಥ ತುಂಬಿದ್ದರೆ ಅದು ನಮ್ರತೆಯಲ್ಲ, ಪಾಷಂಡತನ, (ಗೀತಾ ಮಾತೆ ಪುಟ. 301)

4 ಮಕ್ಕಳು ಗುರುಹಿರಿಯರಿಗೆ ಶರಣಾಗುವುದು. ಇಲ್ಲಿ ಹಿರಿತನ ಮತ್ತು ಕಿರಿತನ ಎನ್ನುವುದು ಮುಖ್ಯ.

> ವಿದ್ಯಾರ್ಥಿಗಳು ಎಲ್ಲಕ್ಕೂ ಮಿಗಿಲಾಗಿ, ನಮ್ರರಾಗಿರಬೇಕು, ಸರಿಯಾಗಿರಬೇಕು. ಅತಿ ಶ್ರೇಷ್ಠರಾದವರು ಶ್ರೇಷ್ಠರೇ ಆಗಿರಬೇಕಾದರೆ, ತಾವೇ ಅತ್ಯಂತ ಕನಿಷ್ಠರಾಗಬೇಕು. ಹಿಂದೂ ಧರ್ಮಶ್ರದ್ಧೆಯ ಬಗ್ಗೆ ನನಗೆ ತಿಳಿದಿರುವ ಮಟ್ಟಿಗೆ ಹೇಳಬಹುದಾದರೆ, ವಿದ್ಯಾರ್ಥಿಯ ಜೀವನ ಆತನ ಅಧ್ಯಯನ ಮುಗಿಯುವವರೆಗೂ ಸನ್ಯಾಸಿಯ ಜೀವನದಂತೆಯೆ ಇರಬೇಕು. ಅವನು ಅತಿ ಕಠಿಣ ಶಿಸ್ತಿನಲ್ಲಿರಬೇಕು. ಅವನು ಮದುವೆಯಾಗಬಾರದು, ದುರ್ವ್ಯಸನದಲ್ಲಿ ತೊಡಗಬಾರದು. ಕುಡಿತ ಇತ್ಯಾದಿಗಳಿಗೆ ಹೋಗಬಾರದು. ಅವನ ನಡವಳಿಕೆ ಆದರ್ಶಪ್ರಾಯ ಆತ್ಮಸಂಯಮದ ಮಾದರಿಯಾಬೇಕು. ಹರಿಜನ, 7–9–47. ಪು–314. (ಸತ್ಯವಾಣಿ 2001 ಪುಟ. 382)

ಅಂದರೆ ಈ 'ಶರಣಾಗುವುದು' ಎನ್ನುವ ಕರ್ಮವು ಸಂದರ್ಭಕ್ಕೆ ಅನುಸಾರವಾಗಿ ಬೇರೆ ಬೇರೆ ರೀತಿಯ ಅರ್ಥವನ್ನು ಪಡೆದುಕೊಳ್ಳುತ್ತದೆ. ಒಬ್ಬನ ಬದಲಿಗೆ ಮತ್ತೊಬ್ಬ ಕಾರ್ಯನಿರ್ವಹಿಸುವಾಗ "ಅಧಿಕಾರ" (detacto) ಅನ್ನುವುದು ಬೇರೆ ಅರ್ಥ ಕೊಡುತ್ತದೆ. ಕಾಯಿದೆ ಪ್ರಕಾರ ಒಬ್ಬ ಅಧಿಕಾರಕ್ಕೆ ಬರುವುದೆಂದರೆ ಅದರ ಸ್ವರೂಪವು ಬೇರೆಯಾಗುತ್ತದೆ. ಅಧಿಕಾರವನ್ನು ವಿವರಿಸಬೇಕಾದ ಸಂದರ್ಭದಲ್ಲಿ ಪುಕೋ ಅಧಿಕಾರದ ಕುರಿತು ಪುನರ್ ವ್ಯಾಖ್ಯೆ ಮಾಡಿದ್ದಾನೆ. ಅವನ ಪ್ರಕಾರ ಯಜಮಾನಿಕೆ (ಪ್ರಭುತ್ವ) ಎನ್ನುವುದು ಸಾಮಾಜಿಕ ರೂಪಗಳಲ್ಲಿ ಒಂದು. ಅದು ವಸ್ತುನಿಷ್ಟವಲ್ಲ ; ವಿಷಯನಿಷ್ಟ.

ಒಂದು ಹಂತದಲ್ಲಿ ಪ್ರಭುತ್ವವು ಜ್ಞಾನದ ರೂಪವನ್ನು ಪಡೆದುಕೊಂಡು ಅದರ ಮೂಲಕ ಅಧಿಕಾರವನ್ನು ಚಲಾಯಿಸುತ್ತವೆ. ಹೀಗಾಗಿ ಅಧಿಕಾರವು ಸಾಮಾಜಿಕ ಸಂದರ್ಭದಲ್ಲಿ ವಿಶ್ವಾಸಾತ್ಮಕವಾದ ಅರ್ಥವನ್ನು ಪಡೆಯುತ್ತದೆ. ಇದನ್ನು ಅನ್ವಯಿಸಿಕೊಂಡು ಹೇಳುವುದಾದರೆ ಗಾಂಧಿ ಭಕ್ತಿಯನ್ನು ಹೊಸ ರೀತಿಯ ವ್ಯಾಖ್ಯೆಗೆ ಗುರಿಪಡಿಸುತ್ತಾರೆ. ಭಕ್ತಿಗೆ ಸಂಬಂಧಿಸಿದ ಸೂತ್ರಗಳನ್ನು ಅವರು ಮಂಡಿಸುತ್ತಾರೆ.

1 ದೇವರ ಸ್ತೋತ್ರ – ಗಾಂಧಿ ಆಶ್ರಮದಲ್ಲಿನ ಪ್ರಾರ್ಥನೆ

2 ದೈವತ್ವದ ಸಾಮಾಜೀಕರಣ –

3 ಸಾಂಪ್ರದಾಯಿಕ ಆಚರಣೆಗೆ ವಿರುದ್ಧ ಮತ್ತು ದೇವರ ಸೇವೆಯನ್ನು ಬೇರೆ ರೀತಿಯಲ್ಲಿ ನಿರೂಪಿಸಿರುವುದು.

4 ನಂಬಿಕೆಗೆ ಅನುಸಾರವಾಗಿ ಅಥವಾ ಭಕ್ತಿಯ ರೂಪಕ್ಕೆ ಅನುಗುಣ ಕೃಷ್ಣನ ಬಿಂಬವು ವ್ಯಕ್ತವಾಗುತ್ತದೆ ಎಂದು ಗಾಂಧಿ ಹೇಳುತ್ತಾರೆ ಇದಕ್ಕೆ ಒಂದು ಉದಾಹರಣೆ

> **ದೀಕ್ಷೆ ಹಿಡಿಯುವುದು ಶುದ್ಧಾಂಗವಾಗಿ ಒಂದು ಧಾರ್ಮಿಕ ಕ್ರಿಯೆ; ಉದ್ವೇಗ ಬಂದು ತಟ್ಟಿದಾಗ ಅದನ್ನು ಅಂಗೀಕರಿಸಬಾರದು. ಪರಿಶುದ್ಧವೂ ಸಮಾಧಾನವೂ ಆದ ಮನಸ್ಸಿನಿಂದ ದೇವರನ್ನು ಸಾಕ್ಷಿಯಾಗಿಟ್ಟುಕೊಂಡು ಅದನ್ನು ಕೈಗೊಳ್ಳಬೇಕು. ಸಾಮಾನ್ಯ ವಿರಕ್ತಿಯಿಂದ ಸಾಧ್ಯವಾಗದಿರುವ ಕೆಲಸಗಳು ಅಪೂರ್ವ ತ್ಯಾಗವನ್ನು ಅಪೇಕ್ಷಿಸುವ ಶಪಥಗಳ ಸಹಾಯದಿಂದ ಎಸಗಬಹುದು. ಆದ್ದರಿಂದ ದೀಕ್ಷೆಗಳು ನಮ್ಮನ್ನು ಎತ್ತರಗೊಳಿಸಬಲ್ಲವೆಂದು ನಂಬಲಾಗಿದೆ.**
> **(ಧರ್ಮ ಮತ್ತು ನೀತಿ 1958 ಮೋ. ಕ. ಗಾಂಧೀ ಪುಟ. 133)**

ಭಾರತದಲ್ಲಿ ಹುಟ್ಟಿಕೊಂಡ ಅನೇಕ ಧರ್ಮಗಳ ಮುಖ್ಯ ಲಕ್ಷಣವೆಂದರೆ ಮನುಷ್ಯರನ್ನು ಮೇಲಕ್ಕೆತ್ತುವುದು. ದೈನಂದಿನ ವ್ಯಸನಗಳಿಂದ ಮನುಷ್ಯರನ್ನು ಮುಕ್ತಗೊಳಿಸುವುದು, ಎಲ್ಲಾ ಧರ್ಮಗಳ ಎಲ್ಲಾ ಆಚರಣೆಗಳು ಮನುಷ್ಯರ ಚಂಚಲತೆಯನ್ನು ನಿರಾಕರಿಸಿ, ಮನಸ್ಸನ್ನು ತಲ್ಲೀನಗೊಳಿಸಲು ಮುಖ್ಯ ಮಾರ್ಗಗಳನ್ನು ಕಂಡುಕೊಂಡವು. ಧ್ಯಾನವು ಮನಸ್ಸನ್ನು ಕೇಂದ್ರೀಕೃತಗೊಳಿಸಲು ಸಹಾಯಕಾರಿಯಾಯಿತು. ಅಹಿಂಸೆ, ಸತ್ಯ, ವ್ರತಾಚರಣೆಗಳನ್ನು ನಂಬಿದ್ದ ಜೈನರು, ಕರಸ್ಥಲ ಲಿಂಗವನ್ನೇ ನಂಬಿದ ವಚನಕಾರರು ತಮ್ಮ ಮತ, ಧರ್ಮಕ್ಕೆ ಅನುಸಾರವಾಗಿ ನಡೆದುಕೊಂಡರೆ ಅದ್ವೈತ ಧರ್ಮ ತನ್ನ ಏಕಾಂತವಾದಿ ಸಿದ್ಧಾಂತ ನಂಬಿಕೊಂಡಿತ್ತು. ಈ ಮಾದರಿಯ ಬಿಗಿಯಾದ ಧಾರ್ಮಿಕ ಧೋರಣೆಗಳು ಚಿರಸ್ಥಿತಿಯನ್ನು

ನಂಬಿಕೊಂಡಿತ್ತು. ಆಗ ಜನಸಾಮಾನ್ಯರು ಮತ್ತು ಧಾರ್ಮಿಕ ಪುರೋಹಿತರ ನಡುವೆ ಉಂಟಾದ್ದು ಖಾಲಿಯಾದ ಜಾಗ (Space) ಮಾತ್ರ. ಮತ ಧರ್ಮಗಳು ರಾಚನಿಕವಾಗಿ ಒಂದು ಸ್ಥಿರ ಸ್ಥಿತಿಯನ್ನು ತಲುಪಿದಾಗ ಚಾರಿತ್ರಿಕವಾಗಿ ಹೊಸ ನಡಾವಳಿಗಳು ಅಗತ್ಯವಿರುತ್ತವೆ. ಸಾರ್ವಜನಿಕರಿಗಾಗಿ ಮತ್ತು ಜನಸಾಮಾನ್ಯರಿಗಾಗಿ ಖಾಲಿಯಾದ ಜಾಗವನ್ನು ತುಂಬಿಕೊಳ್ಳಲು ಮತ್ತು ದೇವರನ್ನು ದೇವಸ್ಥಾನದ ಒಳಗಿಂದ ಹೊರತಂದು ಸ್ಥಾಪಿಸುವುದರ ಮೂಲಕ ಹೊಸ ತತ್ವ ಪ್ರಚಾರ ಅಗತ್ಯವಾಯಿತು. ಗಾಂಧಿ ರಾಜಕೀಯ ಮತ್ತು ಭಕ್ತಿಯನ್ನು ಹೊಂದಾಣಿಸಿದ್ದು ಈ ದೃಷ್ಟಿಯಿಂದ ಗಮನಾರ್ಹವಾಗಿದೆ.

ಗಾಂಧಿಯವರ ನಿಲುವು ಹುಟ್ಟಿಕೊಂಡದ್ದೇ ಈ ರೀತಿಯ ಚಾರಿತ್ರಿಕ ಸಂದರ್ಭದಿಂದ. ಗಾಂಧಿ ಸಾಹಿತ್ಯದ ಮುಖ್ಯ ಆಶಯವೇನೆಂದರೆ ಈಶ ಸೇವೆಯನ್ನು ಹೆಚ್ಚು ಪ್ರಚುರಪಡಿಸುವುದು ಮತ್ತು ಆಗ ಇದ್ದ ಧಾರ್ಮಿಕ ನೀತಿಯನ್ನು ಬದಲಾಯಿಸಿ ಹೊಸ ಭಕ್ತಿ ಸಮೂಹವನ್ನು ಕಟ್ಟುವುದು (ಭಕ್ತಿ ಎನ್ನುವುದು ಭಜ್ ಎಂಬ ಧಾತುವಿನಿಂದ ಬಂದಿದೆ. ಭಜ್ ಎಂದರೆ ಸಂಕೀರ್ತಿಸು ಎಂದು ಅರ್ಥ). ಆ ಚಾರಿತ್ರಿಕ ಸಂದರ್ಭವನ್ನು ಗಮನಿಸಿದರೆ ಭಜನೆಯು ಕೂಡಾ ಹೊಸ ತತ್ವಶಾಸ್ತ್ರವೇ ಆಗಿತ್ತು. ಗಾಂಧಿಚಳುವಳಿ ಎಂದು ಕರೆಯುತ್ತೇವೆಯೋ ಅದರಲ್ಲಿ ವ್ಯಕ್ತಿ ಮತ್ತು ರಾಜಕಾರಣವು ಬೆಸೆದುಕೊಂಡಿವೆ. ಯಾವುದೇ ಚಳುವಳಿಯು ಒಬ್ಬ ವ್ಯಕ್ತಿಯಿಂದ ಆಗುವುದಿಲ್ಲ. ಅದಕ್ಕೆ ಜನಸಮೂಹ ಬೇಕು. ಗಾಂಧಿ ಸತ್ಯಾಗ್ರಹ ಕುರಿತು ಹೇಳುವಾಗ ಅದು ವ್ಯಕ್ತಿ ಹಾಗೂ ಸಮಾಜಕ್ಕೆ ಅನ್ವಯವಾಗುತ್ತದೆ ಎಂದು ಹೇಳಿದರು. ಗಾಂಧಿ ನಿಲುವು ಕೇವಲ ಪಂಡಿತ ಪರಂಪರೆಗೆ ಸೇರುವುದು ಸಾಧ್ಯವಿರಲಿಲ್ಲ. ದೇಶಭಕ್ತ ಸಮೂಹವನ್ನು ಹೊಸ ರೀತಿಯಲ್ಲಿ ನಿರ್ವಚಿಸಿದ್ದು ಬೇರೆ ರೀತಿಯಲ್ಲಿ. ಅದರಂತೆ ಗಾಂಧಿ ಪ್ರಭುತ್ವ-ರಾಜ್ಯಾಧಿಕಾರವನ್ನು ನಿರ್ವಚಿಸುವುದು ಕೂಡಾ ಬೇರೆ ರೀತಿಯಲ್ಲಿ.

ಗಾಂಧಿ ಬಳಸುವ ರೂಪಕಗಳು ದೈನಂದಿನ ಅನುಭವಕ್ಕೆ ಸಂಬಂಧಿಸಿದ್ದು. ಈ ಮೊದಲೆ ಹೇಳಿರುವಂತೆ ಅವುಗಳು ಪ್ರತಿಪಾದಿಸುವ ಸಾಮಾಜಿಕ ಮೌಲ್ಯಗಳು ಬೇರೆ. ಅದು ರೂಪಿಸಿರುವ ನಿರೂಪಣೆಯು ಕೂಡಾ ಬೇರೆ. ಈ ತತ್ವದಲ್ಲಿ ಎಲ್ಲಾ ಜನರು ಒಂದೆ. ಅವರ ನಿಲುವುಗಳಲ್ಲಿ ರಾಜನೂ ಒಂದೇ, ಸಾಮಾನ್ಯನೂ ಒಂದೆ. ಅದಕ್ಕಿಂತ ಹೆಚ್ಚಾಗಿ ನಮ್ಮ ನಿಮ್ಮಂತೆ ವ್ಯವಹರಿಸುತ್ತಾರೆ. ಇದರಿಂದ ಲೌಕಿಕದ ಬ್ರಿಟೀಶ ಪ್ರಭುತ್ವವೆಂಬ ಜಾಗವು ಗಾಂಧಿಯವರ ಮಾತಿನ ಸಂದರ್ಭದಲ್ಲಿ ಜಾಗ ಬದಲಾಯಿಸುತ್ತದೆ. ಇಲ್ಲಿ ಆಳು ಕೂಡಾ ಅವನದೇ ಅನ್ನಬಹುದಾದ ಒಂದು ಸ್ವರೂಪವನ್ನು ಇಟ್ಟುಕೊಂಡಿದ್ದಾನೆ. ಗಾಂಧಿ ದೃಷ್ಟಿಯಲ್ಲಿ ದೇಶ ಸೇವಕನಿಗೆ ಇರುವ ಅನನ್ಯತೆಯು ಲೌಕಿಕದ ಯಜಮಾನರನ್ನು ಮೀರಿಸಿದ್ದು.

ಒಂದು ಮಾತಿದೆ : ಅಧಿಕಾರವೆನ್ನುವುದು ಅತ್ಯಂತ ಸಂಕೀರ್ಣವಾದುದು. ಅದು ಸಾಮಾಜಿಕ ರಚನೆಯನ್ನು ನಿಯಂತ್ರಿಸುತ್ತದೆ. ಮತ್ತು ತನ್ನನ್ನು ತಾನೇ ವ್ಯಾಖ್ಯಾನಿಸುತ್ತದೆ. ಆದರೆ ಗಾಂಧಿಯವರ ನಿಲುವು ಆಗ ಪ್ರಚಲಿತವಿದ್ದ ಅಧಿಕಾರವನ್ನು ಮತ್ತು ಜಾತಿಗುಣವನ್ನು ನಿರಾಕರಿಸುತ್ತದೆ. ಅಷ್ಟೇ ಅಲ್ಲ. ಆ ಸಂದರ್ಭದಲ್ಲಿ ಇದ್ದ ಸಾಂಸ್ಕೃತಿಕ ರೂಪಗಳನ್ನು ಗಾಂಧಿ ಒಡೆಯುತ್ತಾರೆ. ವಾಸ್ತವವಾಗಿ ಗಾಂಧಿ ಸಂಪ್ರದಾಯವು ಲೌಕಿಕದ ಪ್ರಭುತ್ವವನ್ನು ತಿರಸ್ಕರಿಸುತ್ತದೆ. ಹೀಗಾಗಿ ಲೌಕಿಕ ಜೀವನ ಕ್ರಮ, ಅದರ ಹಿಂದಿರುವ ಕಂದಾಚಾರವನ್ನು ಗಾಂಧಿ ಕಟುವಾಗಿ ಟೀಕಿಸುತ್ತಾರೆ. ಇಲ್ಲಿ ನಾವು ಗಮನಹರಿಸಬೇಕಾದುದು ಏನೆಂದರೆ ಅವರು ಅದ್ವೈತವಾದ, ಅನೇಕಾಂತವಾದವನ್ನು ಬೆಂಬಲಿಸಿದ್ದರು.

> ನಾನೊಬ್ಬ ಅದ್ವೈತಿ, ಆದರೂ ದ್ವೈತವನ್ನು ಬೆಂಬಲಿಸಬಲ್ಲೆ. ಜಗತ್ತು ಪ್ರತಿಕ್ಷಣದಲ್ಲೂ ಬದಲಾಗುತ್ತಿದೆ. ಅಂತೆಯೆ ಅದು ಮಿಥ್ಯ. ಅದಕ್ಕೆ ಶಾಶ್ವತ ಅಸ್ತಿತ್ವ ಇಲ್ಲ. ಆದರೆ ಅದು ಸದಾ ಬದಲಾಗುತ್ತಿದ್ದರೂ, ಅದರಲ್ಲಿ ಬದಲಾಗದೆ ಉಳಿದುಕೊಳ್ಳುವುದೂ ಏನೊ ಇದೆ. ಆದ್ದರಿಂದ ಅದು ಅಷ್ಟುಮಟ್ಟಿಗೆ ಸತ್ಯವೇ. ಹಾಗಾಗಿ ಅದನ್ನು ಸತ್ಯ ಹಾಗೂ ಮಿಥ್ಯ ಎಂದು ಕರೆಯಲು ನನ್ನದೇನೂ ಆಕ್ಷೇಪಣೆ ಇಲ್ಲ. ನನ್ನನ್ನು ಅನೇಕಾಂತವಾದಿ ಅಥವಾ ಸ್ಯಾದ್ವಾದಿ ಎಂದು ಕರೆದರೂ ಚಿಂತೆಯಿಲ್ಲ. ಆದರೆ ನನ್ನ ಸ್ಯಾದ್ವಾದ ಪಂಡಿತರ ಸ್ಯಾದ್ವಾದವಲ್ಲ. ಅದು ನನಗೇ ವಿಶಿಷ್ಟವಾದುದು. ಪಂಡಿತರೊಂದಿಗೆ ನಾನು ವಾದಕ್ಕೆ ಕೂರಲಾರೆ. ನನ್ನ ದೃಷ್ಟಿಯಲ್ಲಿ ನಾನು ಯಾವಾಗಲೂ ಸರಿ, ನನ್ನ ಪ್ರಾಮಾಣಿಕ ಟೀಕಾಕಾರರ ದೃಷ್ಟಿಯಲ್ಲಿ ನಾನು ಎಷ್ಟೋ ಸಲ ತಪ್ಪು – ಇದು ನನ್ನ ಅನುಭವ. ನಮ್ಮ ನಮ್ಮ ದೃಷ್ಟಿಕೋನದಿಂದ ನಾನೂ ಅವರೂ ಸರಿ ಎಂದು ಬಲ್ಲೆ. ಈ ಅರಿವಿನಿಂದಾಗಿ, ನನ್ನ ವಿರೋಧಿಗಳಿಗೆ ಅಥವಾ ಟೀಕಾಕಾರರಿಗೆ ದುರುದ್ದೇಶ ಕಲ್ಪಿಸುವುದರಿಂದ ನಾನು ಪಾರಾಗಿದ್ದೇನೆ. ಆನೆಯನ್ನು ಮುಟ್ಟಿದ ಏಳು ಜನ ಕುರುಡರು ಏಳು ಬೇರೆ ಬೇರೆ ರೀತಿಯ ವರ್ಣನೆ ಕೊಟ್ಟರಲ್ಲ. ಅವರವರ ದೃಷ್ಟಿಯಿಂದ ಆ ಏಳೂ ಸರಿಯೆ ಮತ್ತು ಆನೆಯನ್ನು ನೋಡಿದ್ದವನ ದೃಷ್ಟಿಯಲ್ಲಿ ಅವರೆಲ್ಲ ತಪ್ಪು. ಸತ್ಯದ ಅನೇಕತೆಯ ಈ ಸಿದ್ಧಾಂತ ನನಗೆ ತುಂಬ ಮೆಚ್ಚುಗೆ. ಮುಸಲ್ಮಾನನನ್ನು ಅವನ ನಿಲುವಿನಿಂದ ಹಾಗೂ ಕ್ರೈಸ್ತನನ್ನು ಅವನ ನಿಲುವಿನಿಂದ ವಿಮರ್ಶಿಸುವುದನ್ನು, ಇದೇ ಸಿದ್ಧಾಂತ ನನಗೆ ಕಲಿಸಿದೆ. ಹಿಂದೆ ನಾನು ನನ್ನ ವಿರೋಧಿಗಳ ಅಜ್ಞಾನವನ್ನು

> ಹೀಗಳೆಯುತ್ತಿದ್ದೆ. ಇವತ್ತು ನಾನು ಅವರನ್ನು ಪ್ರೀತಿಸಬಲ್ಲೆ. ಏಕೆಂದರೆ ಇತರರು ನನ್ನನ್ನು ಹೇಗೆ ನೋಡುವರೊ ಹಾಗೆ ಮತ್ತು ನಾನು ಇತರರನ್ನು ಹೇಗೆ ನೋಡುವನೊ ಹಾಗೆ ನೋಡಬಲ್ಲ ಕಣ್ಣು ನನಗೆ ವರವಾಗಿ ದೊರೆತಿದೆ. ಇಡೀ ಜಗತ್ತನ್ನೇ ನನ್ನ ಪ್ರೇಮದ ತೆಕ್ಕೆಯಲ್ಲಿ ಅಪ್ಪಿಕೊಳ್ಳಬಯಸುತ್ತೇನೆ. ನನ್ನ ಅನೇಕಾಂತವಾದ ಸತ್ಯ ಅಹಿಂಸೆಗಳ ಜೋಡಿ ಸಿದ್ಧಾಂತದ ಫಲ. (ಸತ್ಯವಾಣಿ 2001 ಪುಟ. 76)

1. ಗಾಂಧೀ ಪಂಥವು ಹೊಸ ಸಾಂಸ್ಕೃತಿಕ ನಿರೂಪಣೆ ಮತ್ತು ಹೊಸ ರೀತಿಯ ಸಾಮಾಜಿಕ ಸಂಕಥನಗಳನ್ನು ರೂಪಿಸಿದವು. ಹಾಗೆ ನೋಡುವುದಿದ್ದರೆ ಗಾಂಧಿಗೆ ಭಕ್ತಿಯೆನ್ನುವುದೇ ಒಂದು ಮಾರ್ಗ. ಈ ಮಾರ್ಗದಲ್ಲಿ ಕೆಲವು ಪ್ರಮುಖ ಸಂಗತಿಗಳಿವೆ :

2. ದೇವರನ್ನು ಒಲಿಸಿಕೊಳ್ಳುವುದು

> ಈ ಘಳಿಗೆಯಲ್ಲಿ ಆವಶ್ಯಕವಾಗಿರುವುದು ಏಕಧರ್ಮವಲ್ಲ. ವಿವಿಧ ಧರ್ಮಗಳ ಭಕ್ತರಲ್ಲಿ ಪರಸ್ಪರ ಗೌರವ ಮತ್ತು ಸಹನೆ. ನಾವು ಸೇರಬೇಕಾಗಿರುವುದು ಒಂದೇ ಶಿವಸಹಜ ಘಟ್ಟವನ್ನಲ್ಲ. ಅನೇಕತ್ವದಲ್ಲಿ ಏಕತ್ವವನ್ನ. ಪರಂಪರಾಗತವಾದ ಆನುವಂಶಿಕ ಪ್ರಭಾವ, ಹವಾಮಾನ, ಇತರ ಸನ್ನಿವೇಶಗಳು, ಮುಂತಾದುವನ್ನು ಬೇರುಸಹಿತ ಕೀಳಲೆತ್ನಿಸುವುದು ಖಂಡಿತ ವಿಫಲವಾಗುವುದಲ್ಲದೆ, ಧರ್ಮದ್ರೋಹವೂ ಆದೀತು. ಸಕಲ ಧರ್ಮಗಳ ಆತ್ಮವೂ ಒಂದೇ; ಆದರೆ ಅದು ಬಹಳ ಆಕಾರಗಳಲ್ಲಿ ಆಚ್ಛಾದಿತವಾಗಿದೆ. ಅವು ಕಾಲವೆಂಬುದು ಮುಗಿಯುವವರೆಗೂ ನಿಂತಾವು. ಜ್ಞಾನಿಗಳು ಹೊರಗಣ ಹೆಕ್ಕಳಿಕೆಯನ್ನು ಗಮನಿಸದೆ, ಬಗೆಬಗೆಯ ಹೆಕ್ಕಳಿಕೆಗಳ ಕೆಳಗೆ ಬದುಕಿರುವ ಏಕಾತ್ಮವನ್ನು ಸಂದರ್ಶಿಸುವರು.–(ಧರ್ಮ ಮತ್ತು ನೀತಿ ಮೋ.ಕ. ಗಾಂದೀ 1958 ಪುಟ 19)

3. ರಾಮನಾಮವನ್ನು ಒಂದು ಪರಿಕರವಾಗಿ ಬಳಸಿಕೊಳ್ಳುವುದು ಗಾಂಧಿಗೆ ಮುಖ್ಯವಾಗಿತ್ತು. ಇದನ್ನು ಗಾಂಧಿ ಎಲ್ಲದಕ್ಕೂ ಬಳಸಿದ್ದರು.

> ಪಾಶವಿಕ ಕಾಮೋದ್ರೇಕವನ್ನು ಗೆಲ್ಲಲು ಇವೆಲ್ಲಕ್ಕಿಂತಲೂ ಅತ್ಯಂತ ಶ್ರೇಷ್ಠ ಸಾಧನ ರಾಮನಾಮ ಅಥವಾ ಅಂಥದೇ ಯಾವುದಾದರೂ ಮಂತ್ರ, ಅವುಗಳಲ್ಲಿ 'ಓಂ ನಮೋ ಭಗವತೇ ವಾಸುದೇವಾಯ!' ಈ ದ್ವಾದಶಾಕ್ಷರೀ ಮಂತ್ರವೂ ಒಂದು. ರಾಮನಾಮವು ನನ್ನ ಬಾಲ್ಯದಿಂದಲೂ ನನ್ನ ಅಭ್ಯಾಸಕ್ಕೆ ಬಂದು ನನ್ನ ಜೀವನದ

ಹೋರಾಟದಲ್ಲಿ ನೆರವಾತರುವ್ಯದರಿಂದ, ಅದನ್ನೇ ನಾನು ಆಶ್ರಯಿಸಿದೇನೆ. ಯಾವ ಮಂತ್ರವೇ ಆಗಲಿ, ಅದರಲ್ಲಿ ತನ್ಮತೆಯನ್ನು ಹೊಂದಬೇಕು, ವ್ಯಕ್ತಿ. ಮಂತ್ರ ಜಪವಾಡುವಾಗ ಇತರ ಂಯೋಚನೆಗಳೂ ಬಂದಾವೆಂದು ಚಿಂತಿಸಬೇಕಾಗಿಲ್ಲ. ಶ್ರದ್ಧಾಪೂರ್ವಕವಾಗಿ ಜಪದಲ್ಲಿ ಮಗ್ನನಾದರೆ ಖಂಡಿತ ಯಶ ದೊರೆವುದೆಂದು ನನ್ನ ನಂಬಿಕೆ. ಹೀಗೆ ಆಚರಿಸಿದ ಮಂತ್ರವು ಬಾಳಿನ ಊರುಗೋಲಾಗಿ ಎಲ್ಲ ಸಂಕಷ್ಟಗಳನ್ನೂ ಪಾರುಮಾಡುತ್ತದೆ. ಬ್ರಹ್ಮಚರ್ಯ ಸಾಧನಾ ಮಾರ್ಗವನ್ನು ತಿಳಿಸುತ್ತಾ ಒಬ್ಬ ಬ್ರಹ್ಮಚಾರಿಗೆ ಹೀಗೆ ಬರೆದರು ಗಾಂಧೀಜೀ: "ಪ್ರಾರ್ಥನೆ ಕೊನೆಯದಾದರೂ ಕನಿಷ್ಠವೆನ್ನಿಸುವುದಿಲ್ಲ. ಭಾವಭರಿತ ಹೃದಯದಿಂದಲೂ ದಿವ್ಯ ಕೃಪೆಯನ್ನು ಬಯಸುತ್ತಲೂ ತಪ್ಪದೆ ರಾಮನಾಮವನ್ನು ಪಠಿಸು." (ಯಂಗ್ ಇಂಡಿಯಾ. 20-12-28) (ಧರ್ಮ ಮತ್ತು ನೀತಿ ಪುಟ. 243)

ಇದರಿಂದಾಗಿ ಸಾಂಸ್ಕೃತಿಕ ಸ್ವರೂಪಗಳನ್ನು ಬದಲಾಯಿಸುವಲ್ಲಿ ಗಾಂಧಿ ಯಶಸ್ಸನ್ನು ಕಂಡರು. ಗಾಂಧಿ ನಿಲುವನ್ನು ಬರಿಯ ಸಾಂಸ್ಕೃತಿಕ ಉತ್ಪಾದನೆಯೆಂದು ನಾವು ತಿಳಿಯಬಾರದು. ಪ್ರಭುತ್ವದ ಪರಮೋಚ್ಛ ಅಧಿಕಾರವನ್ನು ಅದು ಪ್ರಶ್ನಿಸುತ್ತದೆ. ಶುದ್ಧ ಕರ್ಮಠರಾದ ಭಕ್ತರು ಜ್ಞಾನಮಾರ್ಗ ಮಾತ್ರವೇ ದೇವರನ್ನು ಸೇರಲು ಇರುವ ಹಾದಿಯೆಂದು ತಿಳಿದರೆ, ಗಾಂಧಿ ಅದನ್ನು ತಿರಸ್ಕರಿಸುತ್ತಾರೆ. ಸಾಮಾನ್ಯ ಜನರಿಗೆ ದೇವರನ್ನು ಹೇಗೆ ಒಲಿಸಬಹುದು ಅಥವಾ ಕಾಣಬಹುದು ಎಂಬುದು ಮಾತ್ರ ಗಾಂಧಿಗೆ ಮುಖ್ಯವಾಗುತ್ತದೆ. ಈ ಕಾರಣದಿಂದಲೇ ಯಾವಾಗ ಗಾಂಧಿ ಊರಿಡೀ ಸಂಚಾರ ಮಾಡಲು ಪ್ರಾರಂಭಿಸಿದರೋ ಅಂದಿನಿಂದ ಹೊಸ ಮಾರ್ಗವು ಸೃಷ್ಟಿಯಾಯಿತು.

ಗಾಂಧಿಯವರ ನಿಲುವು ಬೇರೆ ಬಗೆಯದು: ರಾಜನನ್ನೂ ಮೀರಿಸುವ ಒಬ್ಬ ರಾಮನೆಂಬ ಪ್ರಭುವಿದ್ದಾನೆ. ಅವನನ್ನು ತಿಳಿದುಕೊಳ್ಳಿ. ಅವನನ್ನು ತಲುಪಲು ಎಲ್ಲರಿಗೂ ಸಾಧ್ಯ. ಆ ದೇವರ ಎದುರಿನಲ್ಲಿ ಡಾಂಭಿಕತೆ, ಕುಲ, ಯಾವುದೂ ಮುಖ್ಯವಲ್ಲ. ರಾಜಕೀಯ ಪ್ರಭುತ್ವಕ್ಕೆ ಒಂದು ಎಲ್ಲೆಯಿರುತ್ತದೆ. ಗಡಿರೇಖೆಯಿರುತ್ತದೆ. ಅದಕ್ಕೆ ನಿರ್ದಿಷ್ಟ ಸ್ಥಳವಿದೆ. ಆದರೆ ದೇವರಿಗೆ ಯಾವುದೇ ರಾಜಕೀಯ ಸೀಮಾರೇಖೆಯಿಲ್ಲ. ಅವನದು ಸೀಮಾತೀತವಾದ ವ್ಯಕ್ತಿತ್ವ ಆದುದರಿಂದ ಭಕ್ತರು ದೇವರು ಇರುವಲ್ಲಿಗೆ ಹೋಗಬೇಕಾದ್ದಿಲ್ಲ. ಭಕ್ತರಿರುವಲ್ಲಿಗೆ ದೇವರು ಬರುತ್ತಾನೆ. ಅದೂ ಪ್ರಾರ್ಥನೆಗಳ ಮೂಲಕ.

ಒಬ್ಬಾತನ ರಾಷ್ಟ್ರದ ಸ್ವಾತಂತ್ರ್ಯ ಹಾಗೂ ಗೌರವಗಳ ರಕ್ಷಣೆಯಲ್ಲಿ ಪರ್ಯವಸಾನವಾಗುವಂತೆ ಬದುಕಿನ ನಾನಾ ರಂಗಗಳಲ್ಲಿಯೂ ತನ್ನನ್ನೇ

ಬಲಿಕೊಡುವ ಶ್ರೇಷ್ಠವೂ ಧೈರ್ಯಮಯವೂ ಆದ ಕಲಿಯನ್ನು ಕಲಿಯುವುದರ ಮೊದಲನೆಯ ಹಾಗೂ ಕೊನೆಯ ಪಾಠವೇ ಪ್ರಾರ್ಥನೆ. ನಿಸ್ಸಂದೇಹವಾಗಿಯೂ, ಪ್ರಾರ್ಥನೆಗೆ ಜೀವಂತ ದೈವಶ್ರದ್ಧೆ ಅಗತ್ಯ. (ಹರಿಜನ, 14–4–46. ಪು–80.ಬ) (ಸತ್ಯವಾಣಿ 2001 ಪುಟ. 84)

ಇದು ಗಾಂಧಿಯವರ ಮುಖ್ಯ ತಾತ್ವಿಕತೆ. ಹೀಗಾಗಿ ಗಾಂಧಿಯವರ ಪ್ರಕಾರ ಭಕ್ತಿಗೆ ಸಾಮಾಜಿಕವೆನ್ನಬಹುದಾದ ಗುಣವಿದೆ. ಅದನ್ನು ವಿಭಿನ್ನ ರೀತಿಯ "ಸಾಂಸ್ಕೃತಿಕ ಸಮಾಜಶಾಸ್ತ್ರ" ಎಂದು ಕರೆಯಬಹುದು.ಯಾಕೆಂದರೆ ಅದು ಆತ್ಮವನ್ನು ಶುದ್ಧಗೊಳಿಸುತ್ತದೆ.

ಗಾಂಧಿ ಸಂಕೀರ್ತನೆಯ ಕುರಿತು ಹೀಗೆ ಹೇಳಿದ್ದಾರೆ.

ಅತ್ಯುಚ್ಚ ಕರ್ಮಯೋಗಿಗಳೂ ಭಕ್ತಿಗೀತೆಗಳನ್ನೂ ಉಪಾಸನೆಯನ್ನೂ ಎಂದಿಗೂ ತ್ಯಜಿಸಿದರು. ಆದರ್ಶವಾದದ ದೃಷ್ಟಿಯಿಂದ, ಪ್ರಾಮಾಣಿಕತೆಯಿಂದ ಎಸಗಿದ ಇತರರ ಸೇವೆಯೇ ಆರಾಧನೆಯೆಂದೂ ಅಂಥ ಶ್ರದ್ಧಾಳುಗಳು ಸಂಕೀರ್ತನೆ ಇತ್ಯಾದಿಗಳಲ್ಲಿ ಕಾಲವನ್ನೇನೂ ಕಳೆಯಲಗತ್ಯವಿಲ್ಲವೆಂದೂ ಹೇಳಬಹುದು. ವಾಸ್ತವಿಕವಾಗಿಯಾದರೋ ಭಜನೆ ಮುಂತಾದವು ಸತ್ಯಸೇವೆಗೆ ಒಂದು ನೆರವು ; ಅವು ನಿಷ್ಠನ ಹೃದಯದಲ್ಲಿ ದೇವರ ನೆನಪನ್ನು ಹೊಚ್ಚಹೊಸದಾಗಿ ಇಡುತ್ತವೆ. (ಧರ್ಮ ಮತ್ತು ನೀತಿ ಪುಟ 93)

ಆಧುನಿಕ ಚರಿತ್ರೆಯೆಂದರೆ, ಕೈಗಾರೀಕರಣಗೊಂಡು, ವೈಜ್ಞಾನಿಕವಾಗಿ ಮುಂದುವರಿದ ; ಬಂಡವಾಳವಾದ ಹುಟ್ಟಿಕೊಂಡ ಮತ್ತು ಅಭಿವೃದ್ಧಿಯ ಕಡೆಗೆ ಕಣ್ಣು ಹಾಯಿಸಿದ ಮತ್ತು ಸ್ವಯಂ ಲಾಭಕರ ಯುಗವನ್ನು ಕಂಡದ್ದೆಲ್ಲವೂ "ಆಧುನಿಕ". ಈ ಆಧುನಿಕ ಕಾಲದಲ್ಲಿ ನಿಂತುಕೊಂಡ ಚರಿತ್ರೆಕಾರ ಬ್ರಿಟನ್ನಿನ ಅಥವಾ ಒಟ್ಟಾಗಿ ಪಶ್ಚಿಮ ಸಮಾಜದಲ್ಲಿರುವ ಕಾಲ (Time) ಮತ್ತು "ಅವಕಾಶ" (Space) ಪರಿಕಲ್ಪನೆಯಿಂದಾಗಿ ಪುನರುಜ್ಜೀವನದ ಹಿಂದಿನ ಕಾಲವನ್ನು ಮಧ್ಯಯುಗೀನ ಎಂದು ಕರೆದು, ಅದಕ್ಕಿಂತಲೂ ಹಿಂದಿನ ಕಾಲವನ್ನು ಪ್ರಾಚೀನವೆಂದು ಕರೆದರು. ಯಾವುದನ್ನು ಚರಿತ್ರೆಕಾರರು ಹೀಗೆ ಗುರುತಿಸುವ ಪ್ರಯತ್ನದಿಂದಾಗಿ "ಚರಿತ್ರೆ" (ಕಾಲ) ಒಂದು ಉದ್ದನೆಯ ಸರಳ ರೇಖಾಕೃತಿ (Linear Structure) ಪರಿಕಲ್ಪನೆಯು ಹುಟ್ಟಿಕೊಂಡಿತು;

ಪ್ರಾಚೀನ – ತುಂಬಾ ಹಳೆಯದು. ಫ್ಯೂಡಲ್ ಗುಣ ಹೊಂದಿರುವುದು.

ಮಧ್ಯಕಾಲೀನ– ಪರಿವರ್ತನೆಯ ಕಾಲದ ಯುಗ ಈ ಕಾಲದಲ್ಲಿ ಹಣದ

ಚಲಾವಣೆ ರೂಪುಗೊಂಡಿತು. ಪ್ರಭುತ್ವ ಹಾಗೂ ಚರ್ಚ್‌ಗಳು ಸಮಾಜದ ಬೀರಿದ ಪ್ರಭಾವ ಕಡಿಮೆಯಾಗತೊಡಗಿತು. ಚರ್ಚಿನ ಹಾದಿ : ಪ್ರಭುತ್ವದ ಹಾದಿ ಬೇರೆಯಾಗತೊಡಗಿತು. ಹಾಗೂ ಅವುಗಳ ನಡುವೆ ಒಳ ಒಪ್ಪಂದ ನಡೆಯಿತು.

ಆಧುನಿಕ – ಹಿಂದಿನ ಚರಿತ್ರೆಯನ್ನು ಗುರುತಿಸಿದರೆ ಈ ಯುಗ ಆಧುನಿಕವಾದದ್ದು, ಇಲ್ಲಿ ವ್ಯಕ್ತಿವಾದ ಬೆಳೆಯಿತು ವಿಜ್ಞಾನ. ತಂತ್ರಜ್ಞಾನದ ಮುಂದುವರಿಯಿತು, ವಿನಿಮಯ ಮೌಲ್ಯಗಳು ಬದಲಾದವು.

ಈ ದೃಷ್ಟಿಯಿಂದಲೇ ನಾವು ಕೂಡಾ ಪ್ರಾಚೀನ, ಮಧ್ಯಕಾಲೀನ ಹಾಗೂ ಆಧುನಿಕ ಯುಗವೆಂದು ಕರೆಯುತ್ತೇವೆ. ಇದಕ್ಕೆ ಪರ್ಯಾಯವಾಗಿ ಗಾಂಧಿ ಸನಾತನವೆಂದು ಕರೆದರು.ಗಾಂಧಿ ಈ ರೀತಿಯ ಸನಾತನೆಯನ್ನು ಕುರಿತು ಹೇಳುವಾಗ ಅದಕ್ಕೆ ಚಾರಿತ್ರಿಕತೆಯ ಸರಳ ರೇಖೆಯಿರಲಿಲ್ಲ. ಅದು ಅವರಿಗೆ ಮಾನವತೆಯ ಪ್ರಶ್ನೆಯೂ ಹೌದು.

ಅಂದಿನ ಸಾಂಪ್ರದಾಯಿಕ ಮಾನವತೆಯ ವ್ಯಾಖ್ಯಾನಗಳು ಜಾತಿ ಧರ್ಮಕ್ಕೆ ಸೇರಿದವುಗಳು. ಕೆಳ ಜಾತಿಯವರು, ಸ್ತ್ರೀಯರು – ಮುಂತಾದವರನ್ನು ತಮ್ಮ ಅವಶ್ಯಕತೆಗೆ ಅನುಸಾರವಾಗಿ ವ್ಯಾಖ್ಯಾನಿಸಿದರು. ಈ ರೀತಿಯಲ್ಲಿ ಸಾಮಾನ್ಯವಿದ್ದ ಗಡಿ ರೇಖೆಗಳನ್ನು ಗಾಂಧಿ ದಾಟಿದರು.

> **ಇಸ್ಲಾಮಿನ ಅಲ್ಲಾ, ಕ್ರೈಸ್ತ ದೇವರು, ಹಿಂದೂಗಳ ಈಶ್ವರ ಎಲ್ಲ ಒಂದೇ. ಹಿಂದೂಧರ್ಮದಲ್ಲಿ ದೇವರಿಗೆ ಅನಂತ ನಾಮಗಳಿರುವಂತೆ ಇಸ್ಲಾಮಿನಲ್ಲಿಯೂ ಅನಂತನಾಮಗಳಿವೆ. ಈ ನಾಮಗಳು ವ್ಯಕ್ತಿ ಸೂಚಕಗಳಲ್ಲ, ಗುಣಸೂಚಕಗಳು; ದೇವರು ಗುಣರಹಿತನೂ, ಅವರ್ಣನೀಯನೂ, ಆಗಾಧನೂ ಆಗಿರುವುದನ್ನು ತಿಳಿದೂ ಅಲ್ಪ ಮಾನವ ತನ್ನ ಅರಿವಿಗನು ಗುಣವಾಗಿ ಆ ಮಹಾ ಮಹಿಮನನ್ನು ವರ್ಣಿಸಲೆತ್ನಿಸುತ್ತಾನೆ. (ಧರ್ಮ ಮತ್ತು ನೀತಿ ಪುಟ 250).**

ಗಾಂಧಿ ಹೇಳುವ ಭಜನೆಯ ಉದ್ದೇಶವಿಷ್ಟೆ :

1 ಸಮಾಜಕ್ಕೆ ನೈತಿಕತೆಯನ್ನು ತುಂಬುವುದು.

2 ಮನಸ್ಸಿನ ಶುದ್ಧಿ.

3 ಈಗಾಗಲೇ ಸಿದ್ಧವಾದ ಆಚರಣೆಗಳ ನಿರಾಕರಣೆ. ಗಾಂಧಿ ದೇವಸ್ಥಾನಕ್ಕಿಂತ ರಾಮನಾಮವನ್ನು ಹೆಚ್ಚು ಅವಲಂಬಿಸಿದ್ದರು.

ಆದರೆ ರಾಮ ನಾಮ ಹುಟ್ಟಿದ್ದು ಮತ್ತು ಜನರ ಕಿವಿಗೆ ನಾಟಿದ್ದು ಹೊಸ ರೀತಿಯ ಪ್ರಜ್ಞೆಯ ಹುಟ್ಟನ್ನು ಸೂಚಿಸುತ್ತದೆ. ರಾಮ ಮತ್ತು ಜೀವನ, ರಾಮ ಮತ್ತು ನಿಸರ್ಗ ಚಿಕಿತ್ಸೆ ಮುಂತಾದವುಗಳನ್ನು ಗಾಂಧಿ ಹೇಳಿರುವುದು ಇಲ್ಲಿ ಗಮನಾರ್ಹವಾಗಿದೆ.

ಇದಕ್ಕೆ ಸಂಬಂಧಿಸಿದಂತೆ ಇನ್ನೊಂದು ಉದಾಹರಣೆಯನ್ನು ಕೊಡಬೇಕು. ಪ್ರಭುತ್ವವು ತನ್ನ ಅಧಿಕಾರವನ್ನು ಉಳಿಸಿಕೊಳ್ಳಲು ಸೇನೆ ಮಂತ್ರಿಗಳು, ಸೇನಾಧಿಪತಿ ಮೊದಲಾದ ಮಧ್ಯವರ್ತಿಗಳನ್ನು ಬಳಸಿಕೊಳ್ಳುತ್ತದೆ. ಪ್ರಜೆಗಳಿಗೆ ಮತ್ತು ಬ್ರಿಟೀಶ್ ಪ್ರಭುತ್ವಕ್ಕೆ ನೇರ ಸಂಬಂಧವಿರುವುದಿಲ್ಲ. ಅಧಿಕಾರಕ್ಕೆ ಜನಸಾಮಾನ್ಯರು ಹೆದರುತ್ತಾರೆ. ಅಧಿಕಾರವೆಂದರೆ ಅದಕ್ಕೆ ಸ್ವತಂತ್ರ ಅಸ್ತಿತ್ವವಿರುತ್ತದೆ. ವೈಸರಾಯ್ ನಾಡಿನಲ್ಲಿ ಸರ್ವೋಚ್ಚ ಅಧಿಕಾರಿ, ಬ್ರಿಟೀಶ್ ಅಧಿಕಾರವು ಕೆಲವು ವಿಧಿ ನಿಷೇಧಗಳನ್ನು ಹೇರುತ್ತದೆ. ಯಾವುದು ಸರಿ, ಯಾವುದು ತಪ್ಪು ಎಂಬುದನ್ನು ; ನ್ಯಾಯ-ಅನ್ಯಾಯಗಳನ್ನು : ಎಂಬುದನ್ನು ನಿರ್ಧರಿಸುವುದು ಪ್ರಭುತ್ವದ ಪ್ರತಿನಿಧಿಯಾದ ಕೋರ್ಟ್.ಅಧಿಕಾರವೆಂದರೆ ಅದು ಕಾನೂನು.ಅದುವೇ ಕೇಂದ್ರ ಬಿಂದು. ಧರ್ಮ, ಅಧರ್ಮ, ನ್ಯಾಯ-ಅನ್ಯಾಯ, ಸರಿ-ತಪ್ಪುಗಳ ನಡುವೆ ತೀರ್ಮಾನ ಕೊಡುವವನು ನ್ಯಾಯಾಧೀಶ. ಅದು ನಾಗರಿಕ ಅಥವಾ ಕ್ರಿಮಿನಲ್ ಆಗಿರಬಹುದು - ನ್ಯಾಯ ತೀರ್ಮಾನದ ಅಸ್ತಿಭಾರವನ್ನು ಅದುವೇ ಹೊರುತ್ತದೆ. ನ್ಯಾಯ-ತೀರ್ಮಾನಕ್ಕೆ ಯಾವುದೇ ಪೂರ್ಣವಾಗಿ ನಿರ್ಣೀತಗೊಂಡ ಲಿಖಿತವಾದ ನಿಯಮ ಸಂಹಿತೆ ಇಲ್ಲ. ಆದರೂ ಇದು ಸಂವಾದಿಯಾದುದು. ಗಾಂಧಿ ಈ ರೀತಿಯ ಪ್ರಭುತ್ವ ಹೇರಿದ ಮೌಲ್ಯಗಳನ್ನು ಪ್ರಶ್ನಿಸಿದರು. ಅಧಿಕಾರವನ್ನು ನಿರಚನೆಗೊಳಿಸಿದರು. ನಿಯಮವೆನ್ನುವುದನ್ನು ಗಾಂಧಿ ಗ್ರಹಿಸುವ ಕ್ರಮವೇ ಬೇರೆ.

> **ನಾವು ದೇವರೆಂದು ಕರೆಯುವ ಚೈತನ್ಯಯುತ ಶಕ್ತಿಯನ್ನು ನಮ್ಮಲ್ಲಿಯೇ ಕಾಣುವ ನಿಯಮಗಳನ್ನು ಅನುಸರಿಸಿದರೆ ಅದು ಪ್ರತ್ಯಕ್ಷವಾದೀತು ಆದರೆ ದೇವರನ್ನು ಕಾಣಲು ಅವನ ನಿಯಮಗಳನ್ನು ಬಹಳ ಕಡುತರ ಪ್ರಯಾಸದಿಂದ ಅನುಸರಿಸಬೇಕೆಂಬುದು ಸ್ವಯಂವೇದ್ಯ. ಒಂದೇ ಮಾತಿನಲ್ಲಿ ಆ ನಿಯಮವನ್ನು ಬ್ರಹ್ಮಚರ್ಯವೆನ್ನಬಹುದು.**
>
> **(ಧರ್ಮ ಮತ್ತು ನೀತಿ ಮೋ.ಕ.ಗಾಂದೀ 1958 ಪುಟ. 256)**

ಭಕ್ತಿಯೇ ಗಾಂಧಿಗೆ ಒಂದು ಶಕ್ತಿ. ಅದಕ್ಕೆ ಪ್ರಭುತ್ವಕ್ಕಿರುಂತೆ ಒಂದು ಕೇಂದ್ರವಿಲ್ಲ. ವಿಧಿ ನಿಷೇಧಗಳಿಲ್ಲ. ನ್ಯಾಯ-ಅನ್ಯಾಯದ ಪ್ರಶ್ನೆಯಿಲ್ಲ. ಧರ್ಮವೇ ಕೀರ್ತನೆಗಳಲ್ಲಿ ಸ್ಥಾಪಿತವಾದ ಅಧಿಕಾರ. ರಾಮ,ಕೃಷ್ಣರೇ ದೊರೆಗಳು. ಇದರಿಂದಾಗಿ ಗಾಂಧಿಯ ಈ ನಿಲುವುಗಳು ತತ್ವಜ್ಞಾನ, ನೈತಿಕತೆ ಮತ್ತು ದಾಸತ್ವದ ಪ್ರಶ್ನೆಗಳನ್ನು ಹೊಸ ಆಯಾಮದ ಮೂಲಕ ಪರಿಶೀಲಿಸುತ್ತವೆ. ಹುಟ್ಟು ಅನ್ನುವುದು ಇಲ್ಲಿಯೇ ಮುಕ್ತಾಯವಾಗುವುದಿಲ್ಲ. ಸಾವು ಎನ್ನುವುದು ಕಾಯದಿಂದ ಬಿಡುಗಡೆ. ಸಾವು ಮೋಕ್ಷಕ್ಕೆ ದಾರಿ.

ಹಾಗೆಂದು ಗಾಂಧಿ ಏಕತಾವಾದಿ ಚಿಂತನೆಯ ಕ್ರಮವನ್ನು ರೂಪಿಸುವುದಿಲ್ಲ. ಕೇವಲ ಭಗವದ್ಗೀತೆ ಮತ್ತು ಉಪನಿಷತ್ತು ಮುಂತಾದವುಗಳಿಂದ ಪ್ರೇರಣೆ ಪಡೆದುಕೊಂಡ

ಹಾಗೆ ಕಾಣಿಸುವುದಿಲ್ಲ. ಅವರ ಭಜನೆಯಲ್ಲಿ ಬರುವ ರಾಮನಿಗೆ ಬೇರೆ ಚಹರೆಯಿದೆ. ಏಕತೆಯ ಬದಲು ಬಹುತ್ವವೆಂದು ಇದು ಪ್ರತಿಪಾದಿಸುತ್ತದೆ. ದೇವರಿಗೂ ಭಕ್ತರಿಗೂ ಭಿನ್ನತೆಯಿದೆ. ಅಂತರವಿದೆ. ಭಕ್ತ ದೇವರನ್ನು ಒಲಿಸಬೇಕು. ಒಲಿಸಬೇಕೆಂದರೆ – ಅಲ್ಲಿ ಸ್ತುತಿಸಬೇಕು. ಭಜನೆ ಒಂದು ಮಾರ್ಗ ಅಷ್ಟೆ. ಗಾಂಧಿ ದೃಷ್ಟಿಯಲ್ಲಿ ದೇವರು ದೊಡ್ಡವನು. ಮನುಷ್ಯರು ಚಿಕ್ಕವರು. ಅಂತಿಮವಾಗಿ ದೇವರನ್ನು ಹೊಂದುವುದು ಗಾಂಧಿಯ ಮುಖ್ಯ ಗುರಿ. ಇದರಲ್ಲಿ ರಾಮ ನಾಮವೊಂದೇ ಸಾಕು. ಹಾಗೆಯೇ ಭಗವದ್ಗೀತೆಯಲ್ಲಿ ಅರ್ಜುನನಿಗೆ ಬೋಧಿಸುವ ಗಾಂಧಿಯಲ್ಲಿ ಬದಲಾಗಿದ್ದಾನೆ. ಗೀತೆ ತಾಯಿ;ಕೃಷ್ಣ ಯಜಮಾನ ; ಸಂಬಂಧಿ – ಹೀಗೆ ಬೇರೆ ಚಹರೆಗಳಲ್ಲಿ ಕೃಷ್ಣ ರೂಪುಗೊಂಡಿದ್ದಾನೆ.

ಇಲ್ಲಿ ವಿಜ್ಞಾನವಾದವೂ ಮುಖ್ಯವಲ್ಲ. ದೇವರ ಬಗೆಗಿನ ಭಾವನಾತ್ಮಕ ನಿಲುವು ಮುಖ್ಯ. ಭಗವಾನ್ ಈಶ ಜಗತ್ತನ್ನು ಸೃಷ್ಟಿಸಿದ ಭಕ್ತರನ್ನು ಸಲಹಿದ.

> ಸರ್ವವ್ಯಾಪಿಯಾಗಿರುವ ವರ್ಣನೆಗೆ ಮೀರಿದ ಒಂದು ರಹಸ್ಯ ಶಕ್ತಿ ಇದೆ. ಅದನ್ನು ನಾನು ನೋಡದಿದ್ದರೂ ನನಗೆ ಅದರ ಅನುಭವ ಆಗುತ್ತದೆ. ತನ್ನನ್ನು ಅನುಭವಕ್ಕೆ ಒಳಗಾಗಿಸಿಕೊಳ್ಳುವುದು ಈ ಅದೃಶ್ಯಶಕ್ತಿಯೇ. ಆದರೆ ಅದು ಎಲ್ಲಾ ಪ್ರಮಾಣವನ್ನೂ ಮೀರುತ್ತದೆ, ಏಕೆಂದರೆ ನನ್ನ ಇಂದ್ರಿಯಗಳ ಮೂಲಕ ನಾನು ಸಂವೇದಿಸುವ ಎಲ್ಲಕ್ಕಿಂತಲೂ ಅದು ಅಷ್ಟೊಂದು ವಿಸದೃಶವಾಗಿದೆ. ಅದು ಇಂದ್ರಿಯಗಳಿಗೆ ಅತೀತವಾಗಿದೆ. ಆದರೆ ಒಂದು ಮಟ್ಟದವರೆಗೆ ದೇವರ ಅಸ್ತಿತ್ವವನ್ನು ತರ್ಕದ ಮೂಲಕ ನಿರಾಕರಿಸಲು ಸಾಧ್ಯವಿಲ್ಲ. ಸಾಮಾನ್ಯ ವ್ಯವಹಾರಗಳಲ್ಲಿ ಕೂಡ ಯಾವನು ಆಳುತ್ತಾನೆ ಅಥವಾ ಏಕೆ ಮತ್ತು ಹೇಗೆ ಅವನು ಆಳುತ್ತಾನೆ ಎಂಬುದನ್ನು ಜನ ಅರಿತಿರುವುದಿಲ್ಲ ಎಂಬುದು ನನಗೆ ಗೊತ್ತು. ಆದರೂ ನಿಶ್ಚಿತವಾಗಿಯೂ ಆಳುವ ಒಂದು ಶಕ್ತಿ ಇದೆ ಎನ್ನುವುದನ್ನು ಅವರು ಅರಿತಿರುತ್ತಾರೆ. ಕಳೆದ ವರ್ಷ ಮೈಸೂರಿನ ನನ್ನ ಪ್ರವಾಸದಲ್ಲಿ ನಾನು ಅನೇಕ ಬಡ ಹಳ್ಳಿಗರನ್ನು ಸಂಧಿಸಿದೆ. ವಿಚಾರಿಸಿದಾಗ ಮೈಸೂರನ್ನು ಯಾರು ಆಳುತ್ತಿದ್ದರೆಂಬುದು ಅವರಿಗೆ ತಿಳಿದಿರಲಿಲ್ಲ ಎನ್ನುವುದು ನನಗೆ ಗೊತ್ತಾಯಿತು. ಯಾವುದೋ ದೇವರು ಅದನ್ನು ಅಳುತ್ತಿದ್ದನೆಂದು ಅವರು ಸುಮ್ಮನೆ ಹೇಳಿದರು. ತಮ್ಮ ರಾಜನ ವಿಷಯವಾಗಿ ಈ ಬಡಜನರ ಜ್ಞಾನ ಇಷ್ಟು ಸೀಮಿತವಾಗಿರುವಾಗ ಅವರ ರಾಜನಿಗೆ ಅವರು ಇರುವುದಕ್ಕಿಂತ ಗಣಿಸಲಾಗದಷ್ಟು ಪಟ್ಟು ದೇವರಿಗಿಂತ ಕೆಳಗಿರುವ ನಾನು ರಾಜಾಧಿರಾಜನಾದ ಭಗವಂತನ

> ಸಾನಿಧ್ಯವನ್ನು ಅರಿಯದಿದ್ದಲ್ಲಿ ಆಶ್ಚರ್ಯಪಡಬೇಕಾಗಿಲ್ಲ. ಆದರೂ ಆ ಬಡ ಹಳ್ಳಿಗರು ಮೈಸೂರಿನ ವಿಷಯದಲ್ಲಿ ಭಾವಿಸಿದ್ದಂತೆ ನಾನು ಜಗತ್ತಿನಲ್ಲಿ ಒಂದು ಕ್ರಮವ್ಯವಸ್ಥೆ ಇದೆ, ಮತ್ತು ಇರುವ ಅಥವಾ ಜೀವಿಸುವ ಪ್ರತಿಯೊಂದು ವಸ್ತುವನ್ನು ಮತ್ತು ಪ್ರತಿಯೊಂದು ಜೀವಿಯನ್ನು ನಿಯಂತ್ರಿಸುವ ಅವ್ಯತ್ಯಸನೀಯವಾದ ಒಂದು ನಿಯಮ ಇದೆ ಎಂದು ಭಾವಿಸುತ್ತೇನೆ. ಅದು ಒಂದು ಕುರುಡು ನಿಯಮವಲ್ಲ. ಏಕೆಂದರೆ ಯಾವುದೇ ಕುರುಡು ನಿಯಮ ಜೀವಂತ ವ್ಯಕ್ತಿಗಳ ವರ್ತನೆಯನ್ನು ನಿಯಂತ್ರಿಸಲಾರದು. (ಮಹಾತ್ಮಾ ಗಾಂಧೀ **1995 ಹಿಂದೂ ಧರ್ಮ ಎಂದರೇನು? ಪುಟ. 63)**

ಈ ಮೂಲಕ ಕೃಷ್ಣನ ಅವತಾರವನ್ನು ಗಾಂಧಿ ಒಪ್ಪುತ್ತಾರೆ.ಅವನು ಸರ್ವೋತ್ತಮ. ಈ ಭೂಮಿಯ ಉತ್ಪತ್ತಿಗೆ ಅವನೇ ಕಾರಣವಾದನು. ಗೀತೆಯ ನಿಲುವನ್ನು ಗಾಂಧಿ ಸೂಚಿಸುತ್ತಾರೆ. ವಿಷ್ಣುವೇ ಎಲ್ಲಾ ಕಾರ್ಯ ಕಾರಣಗಳಿಗೆ ಸಂಬಂಧಿಸಿದವನಾದುದರಿಂದ ಅವನ ಭಜನೆಯು ಸುಖ ತರುವುದು. ವಿಷ್ಣುವನ್ನು ಭಜಿಸುವುದೆಂದರೆ ಸ್ವ-ಸಂಪನ್ಮೂಲವನ್ನು ತ್ಯಜಿಸುವುದು ಮತ್ತು ಸಂಸಾರದ ಋಣದಿಂದ ವಿಮುಕ್ತನಾಗುವುದು. ಅಧಿಕಾರವು ಈ ರೀತಿಯ ವಿಮುಕ್ತತೆಯನ್ನು ಬಯಸುವುದಿಲ್ಲ. ಅದರ ಬದಲು ಸಂಪನ್ಮೂಲದ ಶೇಖರಣೆ ಬಯಸುತ್ತದೆ. ಭಜನೆಯೆಂದರೆ ಅದು ಮಾನಸಿಕವಾದ ಒಂದು ಬಿಡುಗಡೆ. ಅದು ಮಾನಸಿಕವಾದ ಖಿನ್ನತೆ ; ಮನೋಕ್ಲೇಶವನ್ನು ದೂರ ಮಾಡುತ್ತದೆ. ಭಾರತದಲ್ಲಿ ಭಕ್ತಿ ಮಾರ್ಗ ಅಷ್ಟೊಂದು ಪ್ರಚಾರಕ್ಕೆ ಬಂದಿರುವುದಕ್ಕೆ ಇದು ಒಂದು ಕಾರಣ. ಈಗ ನಾವು 'ಪ್ರಗತಿಪರತೆ'ಯ ಹೆಸರಿನಲ್ಲಿ ಅದನ್ನು ಖಂಡಿಸುತ್ತೇವೆ ಅಷ್ಟೆ. ರಾಮ ನಾಮ ಸ್ಮರಣೆಯು ಒಂದೆಡೆ ಕುಳಿತು ಆಚರಿಸುವ ವಿಧಾನವಲ್ಲ. ಒಂದು ಹಂತದಲ್ಲಿ ಗಾಂಧಿ ಮನುಷ್ಯನನ್ನು ಕೂಡಾ ದೇವರ ಅವತಾರವೆಂದು ಕರೆದರು.

> ಮಾನವ ಕುಲಕ್ಕೆ ಅತ್ಯತಿಶಯವಾದ ಯಾವುದೋ ಸೇವೆ ಸಲ್ಲಿಸಿದವನನ್ನು ಹಿಂದೂಧರ್ಮದಲ್ಲಿ ಅವತಾರ ಎಂದು ಕರೆಯಲಾಗಿದೆ. ವಾಸ್ತವದಲ್ಲಿ ದೇಹಧರಿಸಿದ ಜೀವವೆಲ್ಲವೂ ದೇವರ ಒಂದು ಅವತಾರವೇ. ಆದರೆ ಪ್ರತಿಯೊಂದು ಜೀವಿಯನ್ನು ಅವತಾರವೆಂದು ಕರೆಯುವ ರೂಢಿಯಿಲ್ಲ. ತನ್ನ ಸ್ವಂತ ತಲೆಮಾರಿನಲ್ಲಿ ತನ್ನ ಆಚಾರವ್ಯವಹಾರದಲ್ಲಿ ಅತ್ಯಂತ ಧಾರ್ಮಿಕನಾಗಿರುವ ವ್ಯಕ್ತಿಗೆ ಮುಂದಿನ ತಲೆಮಾರಿನವರು ಈ ಗೌರವ ಸಲ್ಲಿಸುತ್ತಾರೆ. ಈ ಕ್ರಮದಲ್ಲಿ ನನಗೆ ಯಾವುದೇ ತಪ್ಪು ಕಾಣಿಸುವುದಿಲ್ಲ. ದೇವರ ಮಹತ್ವದಿಂದ ಇದು ಏನನ್ನೂ ಕಳೆಯುವುದಿಲ್ಲ ಮತ್ತು ಸತ್ಯಕ್ಕೆ ಯಾವುದೇ ಹಾನಿ

> ಸಂಭವಿಸಿರುವುದಿಲ್ಲ. "ಆದಂ ದೇವರಲ್ಲ ಆದರೆ ಅವನು ದೇವತ್ವದ ಒಂದು ಕಿಡಿ" ಎಂಬರ್ಥದ ಒಂದು ಉರ್ದು ಗಾದೆಯಿದೆ. ಆದ್ದರಿಂದ ಅತ್ಯಂತ ಧಾರ್ಮಿಕವಾಗಿ ನಡೆದುಕೊಂಡಿರುವವನು ತನ್ನಲ್ಲಿ ಅತ್ಯಂತ ದೈವಿಕ ಕಿಡಿಯನ್ನು ಹೊಂದಿರುತ್ತಾನೆ. ಈ ಭಾವನಾಸರಣಿಗೆ ಅನುಗುಣವಾಗಿ ಕೃಷ್ಣನು ಹಿಂದೂಧರ್ಮದಲ್ಲಿ ಅತ್ಯಂತ ಪೂರ್ಣಾವತಾರದ ಸ್ಥಾನವನ್ನು ಪಡೆದಿದ್ದಾನೆ.
> ಅವತಾರದಲ್ಲಿನ ಈ ನಂಬಿಕೆ ವ್ಯಕ್ತಿಯೊಬ್ಬನ ಉನ್ನತ ಆಧ್ಯಾತ್ಮಿಕ ಆಕಾಂಕ್ಷೆಗೆ ಸಾಕ್ಷ್ಯವಾಗಿದೆ. ದೇವರಿಗೆ ಸದೃಶನಾಗಿ ಆಗುವವರೆಗೆ ಮಾನವನಿಗೆ ಆತ್ಮಶಾಂತಿ ಇರುವುದಿಲ್ಲ. ಈ ಸ್ಥಿತಿಯನ್ನು ತಲುಪಲು ಮಾಡುವ ಪ್ರಯತ್ನವು ಅತ್ಯಚ್ಚ ಹಾಗೂ ಹೊಂದಿರಲು ಯೋಗ್ಯವಾದ ಏಕೈಕ ಮಹದಾಕಾಂಕ್ಷೆ ಆಗಿರುತ್ತದೆ. ಈ ಆತ್ಮಸಾಕ್ಷಾತ್ಕಾರ ಎಲ್ಲಾ ಧರ್ಮಗ್ರಂಥಗಳದ್ದಾಗಿರುವಂತೆಯೇ ಗೀತೆಯ ವಸ್ತು ಕೂಡ. (ಮಹಾತ್ಮಾ ಗಾಂಧೀ 1995 ಹಿಂದೂ ಧರ್ಮ ಎಂದರೇನು? ಪುಟ. 85)

ಭಜನೆಯ ಕಾರ್ಯದಲ್ಲಿ ಎಲ್ಲಾ ಜಾತಿಯವರು ಸೇರಬಹುದು. ಅದು ಜಾತಿಯ ಚೌಕಟ್ಟನ್ನು ಮೀರಿದೆ. ಭಜನೆಯನ್ನು ಹಾಡಲು ದೇವಸ್ಥಾನವೇ ಇರಬೇಕೆಂದೇನೂ ಇಲ್ಲ. ಎಲ್ಲಾ ಜನರು ಈ ಮೂಲಕ ದೇವರನ್ನು ಸ್ತುತಿಸಬಹುದು. ಈ ಮೂಲಕ ಅವರು ದೇವರ ಸೇವಕರಾಗಬಹುದು. ಈ ರೀತಿಯ ಧೋರಣೆಯಲ್ಲಿ ದೇವರು ಮತ್ತು ಮನುಷ್ಯರ ನಡುವೆ ಮಧ್ಯವರ್ತಿಗಳಾದ ಪುರೋಹಿತರು ಬೇಕಾಗಿಲ್ಲ. ಗಾಂಧಿಯವರ ರಾಮನಾಮ ಜಪದಲ್ಲಿ ಹೆಚ್ಚಾಗಿ ಕಾಣಿಸುವುದು ಸಖ್ಯ ಭಾವ. ಕೃಷ್ಣ ಅರ್ಜುನರು ಇದ್ದ ಹಾಗೆ. ಆದರೆ ಯಾವುದೇ ಅಧಿಕಾರವಿರಲಿ – ಅದು ಉಳಿದವರ ಮೇಲೆ ಅಧಿಕಾರ ಚಲಾಯಿಸುತ್ತದೆ. ಅಲ್ಲಿ ಸಖ್ಯಭಾವವು ಉಳಿಯಲು ಸಾಧ್ಯವಿಲ್ಲ.

ಗಾಂಧಿಯವರ ಮಾತಿನಲ್ಲಿ ಎದ್ದು ಕಾಣುವ ಮತ್ತೊಂದು ಅಂಶವೆಂದರೆ ಅವರು ದೇವರೊಡನೆ ನೇರವಾಗಿ ಮಾತಾಡುವುದು. ತಾರ್ಕಿಕವಾದ ಜ್ಞಾನ ಇಲ್ಲಿ ಮುಖ್ಯವಲ್ಲ. ಗಾಂಧಿ ಹೇಳಿದ್ದು ಸಮ್ಯಕ್ ಜ್ಞಾನವನ್ನು ಮಾತ್ರ. ಗಾಂಧಿ ಸಂಸ್ಕೃತದ ಮಂತ್ರಗಳನ್ನು ಹೆಚ್ಚು ಬಳಸುವುದಿಲ್ಲ. ಸಾಯುವ ಗಳಿಗೆಯಲ್ಲಿ ಗಾಂಧಿ ಹೇಳಿದ್ದು "ಹೇ ರಾಮ್" ಗಾಂಧಿಯ ಪ್ರಕಾರ ಪ್ರಾರ್ಥನೆಯು ದೇವರು ಮನುಷ್ಯರ ನಡುವಣ ಸಂಬಂಧವನ್ನು ಬೆಳೆಸುವ ಸಂಬಂಧ.

ಪರಮಾತ್ಮನನ್ನು ಪ್ರಾರ್ಥಿಸುವುದೆಂದರೆ ದೇವ ಮತ್ತು ಮಾನವನಲ್ಲಿ ಪವಿತ್ರ ಮಧುರ ಸಂಬಂಧವನ್ನು ನಿರ್ಮಿಸುವ ಮಾರ್ಗವೇ ಹೊರತು ಬೇರೊಂದಲ್ಲ. ಇದರ ಪ್ರಭಾವದಿಂದ ಪಾಪವಿಚಾರಗಳ ಕ್ರೂರ ಪಾಶದಿಂದ ಮಾನವನು ಮುಕ್ತನಾಗುವನು. ಆದರೆ ನಾವು ಗೈಯುವ ಪ್ರಾರ್ಥನೆಯು ಹೃದಯದ ಅಂತರಾಳದಿಂದ ಉಕ್ಕಬೇಕು. ತುಟಿಯಿಂದ ಪಠಿಸುವ ಜಪವಾಗಕೂಡದು. (ಪ್ರಾರ್ಥನೆ ಪುಟ. 13)

ಹಾಗೆ ನೋಡುವುದಿದ್ದರೆ ಮಂತ್ರ ಅನ್ನುವುದು ಈ ದೇಶದಲ್ಲಿ ಕೆಲವರ ಸ್ವತ್ತು ಆಯಿತು. ಮಂತ್ರಗಳಿರುವುದೇ ಸಂಸ್ಕೃತದಲ್ಲಿ. ಸಂಸ್ಕೃತದ ಪರಿವೇಷದಲ್ಲಿರುವ ಮಂತ್ರಗಳು ಸರಳವಾಗಿರಲಿಲ್ಲ. ಜನಸಾಮಾನ್ಯರಿಗೆ ಅರ್ಥವೂ ಆಗುತ್ತಿರಲಿಲ್ಲ. ಹೀಗಾಗಿ ದೇವರು ಮತ್ತು ಭಕ್ತರ ಮಧ್ಯೆ ಪೂಜಾರಿಗಳು ತಮ್ಮ ಮಂತ್ರ ಪವಿತ್ರವೆಂದೂ, ಅದಕ್ಕೆ ಮ್ಯಾಜಿಕಲ್ ಎನ್ನಬಹುದಾದ ಗುಣವಿದೆಯೆಂದೂ ಪ್ರತಿಪಾದಿಸಿದರು. ಮಂತ್ರವನ್ನು ಎಲ್ಲರೂ ಉಚ್ಛರಿಸಬಾರದು. ಅದನ್ನು ಉಚ್ಛರಿಸಿದರೆ ಮಂತ್ರದ ಶಕ್ತಿಯು ಹೊರಟು ಹೋಗುತ್ತವೆ ಎಂದು ಪ್ರತಿಪಾದಿಸಿದರು. ಗಾಂಧಿ ಜಪ ಮತ್ತು ಪ್ರಾರ್ಥನೆಯನ್ನು ಬೇರೆ ಮಾಡಿರುವುದು ಗಮನಾರ್ಹ.

ಸಂಧ್ಯಾವಂದನೆ, ಪೂಜೆ, ಮೊದಲಾದವುಗಳಲ್ಲಿ ಅನೇಕರು ಬಹುವೇಳೆಯನ್ನು ವೆಚ್ಚ ಮಾಡುವುರು. ಇವರಲ್ಲಿ ನೂರಕ್ಕೆ ತೊಂಬತ್ತೈದರಷ್ಟು ಜನರಿಗೆ ತಾವು ಹೇಳುವ ಮಂತ್ರದ ಅರ್ಥವೇ ಗೊತ್ತಿರುವುದಿಲ್ಲ. ಆದುದರಿಂದ ಪ್ರಾರ್ಥನೆಯನ್ನು ಮಾತೃಭಾಷೆಯಲ್ಲಿ ನೆರವೇರಿಸುವುದೇ ಯಕ್ತವಲ್ಲವೇ? (ಪ್ರಾರ್ಥನೆ ಪುಟ. 16)

ವೇದದ ಪ್ರಕಾರ, ಇಂತಹ ಮಂತ್ರಗಳಿಂದ ದೇವರನ್ನು ಒಲಿಸಿಕೊಳ್ಳಬಹುದು. ಯಾರು ಮಂತ್ರಗಳನ್ನು ಕಲಿತು ಉಚ್ಚರಿಸುತ್ತಾರೋ ಅವರಿಗೆ ರಾಜನಿಗಿಂತಲೂ ಹೆಚ್ಚು ಶಕ್ತಿಯಿದೆಯೆಂದು ಪ್ರಚುರಪಡಿಸಲಾಯಿತು. ಗಾಂಧಿಯವರ ಪ್ರಮುಖ ಸಾಧನೆಯೆಂದರೆ ಈ ರೀತಿಯ ನುಡಿಗಟ್ಟುಗಳನ್ನು ಮುರಿದು ಹಾಕಿದ್ದು, ರಾಜರು, ಪುರೋಹಿತರು ಇವರೆಲ್ಲರಿಗಿಂತ ರಾಮ ದೊಡ್ಡವನು. ಅವನಿಗೆ ಪರಮೋಚ್ಛ ಶಕ್ತಿಯಿದೆ. ಅದಕ್ಕಾಗಿಯೇ ಅವನ ದಯೆಯು ಬೇಕಾಗಿದೆ.ರಾಮನೇ ಒಡೆಯ.

ರಾಮಧ್ಯಾನದಲ್ಲಿ ಹಿಂದುಗಳಲ್ಲದವರು ಹೇಗೆ ಭಾಗವಹಿಸಲು ಶಕ್ಯವೆಂಬುದಕ್ಕೆ ಗಾಂಧೀಜಿ ಇತ್ತ ಉತ್ತರವಿದು:
"ರಾಮಧ್ಯಾನ ಅಥವಾ ರಾಮನಾಮಸ್ಮರಣೆ ಕೇವಲ ಹಿಂದೂಗಳಿಗೆ ಅನ್ವಯಿಸುವುದೆಂದೂ, ಆದ್ದರಿಂದ ಮುಸಲ್ಮಾರಿಗೆ ಬೇರೆ ಹಿಂದೂ, ಫಾರಿಸೀ, ಕ್ರೈಸ್ತರಿಗೇ ಬೇರೆ ಬೇರೆ ಹೆಸರುಗಳು, ನಮಗೆ ಯಾವುದು

> ಚಿರಪರಿಚಿತವೋ ಅದರಿಂದ ಸ್ಮರಿಸುತ್ತೇವೆ."
> ನನ್ನ ರಾಮ–ನಮ್ಮ ಪ್ರಾರ್ಥನೆಯ ರಾಮ, ಚಾರಿತ್ರಿಕ ವ್ಯಕ್ತಿ ಅಯೋಧ್ಯಾಪತಿ, ದಶರಥ ಮಹಾರಾಜನ ಮಗ ರಾಮನಲ್ಲ. ಅವನು ಸನಾತನ: ಅಜ: ಅದ್ವಿತೀಯ. ಅವನನ್ನೇ ನಾ ಧ್ಯಾನಿಸುವುದು. ಅವನ ನೆರವನ್ನೇ ನಾ ಬೇಡುವುದು; ಹಾಗೆಯೆ ನೀವೂ.
> ಅವನು ಎಲ್ಲರಿಗೂ ಸೇರಿದವನು. ಆದುದರಿಂದ ಮುಸಲ್ಮಾನನೇ ಆಗಲಿ, ಯಾರೇ ಆಗಲೀ, ಅವನ ನಾಮಸ್ಮರಣೆ ಮಾಡಲು ಏಕೆ ಆಕ್ಷೇಪವೆತ್ತಬೇಕೋ ನನಗೆ ಅರ್ಥವಾಗದು. ಆದರೆ ಅವನು ದೇವರನ್ನ ರಾಮನೆಂದೇ ಭಾವಿಸಬೇಕೆಂಬ ಕಟ್ಟಿಲ್ಲ. ಅಲ್ಲಾ, ಖುದಾ, ಯಾವುದು ಅವನಿಗೆ ಹಿತವೋ ಅದನ್ನು ಸ್ವರಮೇಳ ಕೆಡದಂತೆ ತನ್ನಲ್ಲಿಯೇ ಉಚ್ಚರಿಸಿಕೊಳ್ಳಬಹುದು. (ರಾಮನಾಮ–ಪುಟ. 22)

ಇಲ್ಲಿ ಹೇಳಬೇಕಾದ ಮತ್ತೊಂದು ಅಂಶವಿದೆ. ಭಾರತದ ಎಲ್ಲಾ ರಾಜರಿಗೂ ಧಾರ್ಮಿಕ ನಂಬಿಕೆಯಿತ್ತು. ಆದರೆ ಭಾರತದಲ್ಲಿ ಒಂದೇ ಧರ್ಮ, ಒಂದೇ ಆರಾಧನೆಯೆಂಬುದಿರಲಿಲ್ಲ. ಇದರ ಅರ್ಥವಿಷ್ಟೆ : ಇಡಿಯ ಪ್ರಭುತ್ವವು ಧರ್ಮ ಸೂತ್ರವನ್ನು ಬಿಟ್ಟಿದೆಯೆಂದಲ್ಲ. ಪ್ರಭುತ್ವದ ಆಡಳಿತಾತ್ಮಕ ಸೂತ್ರಗಳಿಗೆ ಕೆಲವರು ಧರ್ಮಶಾಸ್ತ್ರವನ್ನು ಅವಲಂಬಿಸಿಕೊಂಡಿರುವುದು ಅಷ್ಟೇ ನಿಜ. ರಾಜನಿಗೆ ದೇವರ ಸ್ಥಾನವನ್ನು ಕೊಟ್ಟವರೂ ಇದ್ದಾರೆ. "ರಾಜೋ ಪ್ರತ್ಯಕ್ಷ ದೇವತಾ ರಾಜ"– ಸಾಮಾನ್ಯರನ್ನು ಪಾಲಿಸುತ್ತಾನೆ. ರಾಜ ಧರಣಿಯ ಪಾಲಕ ಮತ್ತು ಧರಣಿಯ ಗಂಡ. ಆದರೆ ಅದಕ್ಕೆ ತದ್ವಿರುದ್ಧವಾದ ನಿಲುವು ಗಾಂಧಿಯವರದು.

ದಾಸರ ಪಂಥ, ಶೈವ ಪಂಥ, ಶಾಕ್ತ ಪಂಥ, ಕ್ರಿಶ್ಚಿಯನ್ ಮತ, ಮುಸ್ಲಿಂ ಪಂಥ ತಾತ್ವಿಕವಾಗಿ ಭಿನ್ನವಾಗಿವೆ. ಅವುಗಳ ಆರಾಧನೆಯ ಕ್ರಮದಲ್ಲಿಯೂ ಭಿನ್ನತೆ ಸ್ಪಷ್ಟವಾಗಿ ವ್ಯಕ್ತವಾಗುತ್ತದೆ.

> ದೇವರಲ್ಲಿ ನಂಬಿಕೆಯಿಲ್ಲವೆಂದು ನೀವು ಹೇಳಬಹುದು. ದೇವರ ಚಿತ್ತವಿಲ್ಲದೆ ಒಂದು ಅರೆಕ್ಷಣವೂ ನೀವು ಉಸಿರಾಡಲಾರಿರೆಂದು ನೀವು ತಿಳಿದಿಲ್ಲ. ಅವನನ್ನು ಈಶ್ವರ, ಅಲ್ಲಾ, ದೇವರು, ಅಹುರ–ಮಜ್ದಾ, ಹೇಗೆ ಬೇಕಾದರೂ ಕರೆಯಿರಿ. ಅಸಂಖ್ಯ ಮಾನವರಿರುವಂತೆ, ಅವನ ನಾಮಗಳು ಅಸಂಖ್ಯ. ಅವನು ಅದ್ವಿತೀಯ. ಅವನೇ ಮಹಾ ಮಹಿಮ ಅವನಿಗಿಂತ ಮಹಿಮರಿಲ್ಲ. ಅವನು ಕಾಲಾತೀತ, ನಿರ್ವಿಕಾರ; ನಿಷ್ಕಲಂಕ. ಇಂಥವನು ನನ್ನ ರಾಮ. ಅವನೇ ನನ್ನ ಸ್ವಾಮಿ; ಒಡೆಯ. (24–11–45) (ರಾಮ ನಾಮ ಪುಟ. 22)

ಗಾಂಧಿ ಶೂನ್ಯವನ್ನು ಆರಾಧಿಸುವುದಿಲ್ಲ. ರಾಮನ ಪರಿಕಲ್ಪನೆಯೇ ಗಾಂಧಿಯಲ್ಲಿ ಸೃಜನಾತ್ಮಕವಾಗಿದೆ. ಪ್ರತಿಮಾತ್ಮಕ : ಸೃಜನಾತ್ಮಕವಾದ ಆರಾಧನೆಯನ್ನು ವಿರೋಧಿಸುತ್ತಾರೆ.

> **ಗುಡಿ-ಮಠ ಮೊದಲಾದವುಗಳೆಲ್ಲವೂ ನಿರುಪಯುಕ್ತ ಸಂಸ್ಥೆಗಳಲ್ಲ. ಅಲ್ಲಿಯ ವಾತಾವರಣವು ಪರಿಶುದ್ಧವಾಗಬೇಕು-ಪರಿಶುದ್ಧವಿರಬೇಕು ಎಂಬುದು ನಿರ್ವಿವಾದವು. ಆದರೆ ಇಂದು ಅಲ್ಲಿಂಯು ವಾತಾವರಣವು ಹದಗೆಟ್ಟಿದೆ. ಇದನ್ನು ಸುಧಾರಿಸುವುದು ಸಮಾಜ ಸುಧಾರಕರ ಮೇಲೆ ಅವಲಂಬಿಸಿದೆ. ಈ ದಿಕ್ಕಿನಲ್ಲಿ ಮಂದಗತಿಯಿಂದ ಸುಧಾರಣೆ ನಡೆದಿದೆ. ಗುಡಿಗಳಿಗೆ, ತೀರ್ಥ ಯಾತ್ರೆಗೆ ಹೋಗುವುದನ್ನು ಬಿಡುವದು ಯೋಗ್ಯವಲ್ಲ. ಪುನೀತರಾಗಬೇಕೆಂದು ಪರಿಶುದ್ಧ ಮನಸ್ಸಿನಿಂದ ತೀರ್ಥಯಾತ್ರೆ ಮಾಡುವವರನ್ನು ನಾವು ನಿರೀಕ್ಷಿಸಿದರೆ (ಇಂತಹ ವಾತಾವರಣವಿದ್ದರೂ) ಅವರಲ್ಲಿ ಅದ್ಭುತ ಪರಿವರ್ತನೆಯಾದುದನ್ನು ನಾವು ನೋಡುವೆವು. ಅವರವರ ಭಕ್ತಿಗೆ ಅನುಗುಣವಾಗಿ ಅವರು ಪರಿಶುದ್ಧ ಹೃದಯರಾಗಿ ತಿರುಗಿ ಬರುವರು. ಮೇಲಾಗಿ ಗುಡಿ, ಚರ್ಚು, ಮಸೀದೆ ಮೊದಲಾದವುಗಳು ಸಾಮೂಹಿಕ ಪ್ರಾರ್ಥನೆಯ ಸ್ಥಾನಗಳು. ಮತ್ತು ನಮ್ಮಲ್ಲಿ ಭಕ್ತಿಯನ್ನು ಹುಟ್ಟಿಸುವ ಸಾಧನಗಳು. ನಮ್ಮ ಭಾವನೆಗೆ ತಕ್ಕಂತೆ ಫಲ. (ಪ್ರಾರ್ಥನೆ ಪುಟ. 56)**

ಭಾರತೀಯ ಪ್ರಭುತ್ವದ ಕಲ್ಪನೆಯೇ ವಾಸ್ತವವಾಗಿ ಭಿನ್ನ ರೂಪದ್ದು. ಧಾರ್ಮಿಕ ನೆಲೆಗೆ ಬಂದರೆ ದೇವರು ಪ್ರಭು, ಸಾಮಾಜಿಕ ಹಿನ್ನೆಲೆಗೆ ಬಂದರೆ ಲೌಕಿಕದ ರಾಜರು ಪ್ರಭುಗಳು. ಈ ಮೊದಲು ವಿವರಿಸಿದಂತೆ ಲೌಕಿಕ ರಾಜರು ರಾಜ್ಯವನ್ನು ಆಳಿದ್ದು ಯುದ್ಧದಿಂದ ಮಾತ್ರವೇ ಅಲ್ಲ. ಬ್ರಿಟೀಶರು ಬಂದ ಮೇಲೆ ಅಧಿಕಾರದ ವ್ಯಾಖ್ಯೆಗಳು ಬದಲಾದವು. ಅಧಿಕಾರವೆಂದರೆ ಅದು ಕಾನೂನು ಮತ್ತು ನಿಯಮಾವಳಿಗಳು ಎಂದು ಭಾವಿಸಿದ್ದು ಬ್ರಿಟೀಶರು. ಅಧಿಕಾರವೆಂದರೆ ಒಂದು ಕೇಂದ್ರವಿದೆಯೆಂದು ಬ್ರಿಟೀಶರು ಭಾವಿಸಿದರು. ಆದುದರಿಂದಲೇ ಗಾಂಧಿ ರಾಜಧರ್ಮ, ರಾಮರಾಜ್ಯ, ಸತ್ಯಯುಗ, ಅಹಿಂಸೆ ಮುಂತಾದ ಪರಿಕಲ್ಪನೆಗಳನ್ನು ತಮ್ಮ ರಾಜಕೀಯ ಹೋರಾಟದಲ್ಲಿ ಬಳಸಿಕೊಂಡರು. ಈ ಹಿನ್ನೆಲೆಯಿಂದ ಹೇಳುವುದಿದ್ದರೆ ವಿನಯ ಮತ್ತು ಭಕ್ತಿ ನಮ್ಮ ಜೀವನ ಕ್ರಮದಲ್ಲಿ ಹಾಸುಹೊಕ್ಕಾಗಿವೆ.

ಗಾಂಧಿ ಸಾಮೂಹಿಕ ಪ್ರಾರ್ಥನೆಯ ಕುರಿತು ಹೇಳುವ ವಿಷಯವು ಗಮನಾರ್ಹ.

> **ಏಕಾಏಕಿಯಾಗಿ ಸಾಧಿಸಲು ಅಸಾಧ್ಯವಾದುದನ್ನು ಸಾಮೂಹಿಕವಾಗಿ ಸಾಧಿಸಬಹುದು. ಸಾಮೂಹಿಕ ಪ್ರಾರ್ಥನೆಯಲ್ಲಿ ಅದ್ಭುತಶಕ್ತಿ**

> ಇರುವದು. ಯಾಂತ್ರಿಕವಾಗಿಯಾದರೂ ಮೊದಲು ಸಾಮೂಹಿಕ ಪ್ರಾರ್ಥನೆಯಲ್ಲಿ ಭಾಗವಹಿಸಬೇಕು. ನಮಗೆ ಅರಿಯದಂತೆಯೇ ಒಬ್ಬರೊಬ್ಬರ ಭಕ್ತಿಭಾವನೆಯ ಪ್ರಭಾವವು ಹೊರಹೊಮ್ಮಿ ನಮ್ಮ ಗುರಿ ಸಾಧನೆಯಲ್ಲಿ ನೆರವನ್ನೀಯುವುದೇ ಸಾಮೂಹಿಕ ಪ್ರಾರ್ಥನೆಯ ಗುಟ್ಟು ಅಲ್ಲಿ ಯಾವುದೋ ಒಂದು ಅದೃಶ್ಯ ಅದ್ಭುತ ಶಕ್ತಿ ಎಲ್ಲರಲ್ಲಿಯೂ ಸಂಚರಿಸಿ ಎಲ್ಲರನ್ನೂ ಉದ್ಧರಿಸುವುದು. (ಪ್ರಾರ್ಥನೆ ಪುಟ. 28)

ಅವರು ದೇವರನ್ನು ದಾಟಿ ಮುಂದೆ ಹೋಗುವುದಿಲ್ಲ. ಗಾಂಧಿ ರಾಮ, ಕೃಷ್ಣರನ್ನು ಪ್ರಾರ್ಥಿಸುವಾಗ ತಮ್ಮ ವಿನಯವನ್ನು ಪ್ರದರ್ಶಿಸುತ್ತಾರೆ. ಅವರಲ್ಲಿ ಆಶ್ರಿತ ಭಾವವಿದೆ. ದಾಸನ ಗುಣವಿದೆ. ಆದರೆ ಗಾಂಧಿ ಹೇಳುವ ಮತ್ತೊಂದು ವಿಷಯವು ಇಲ್ಲಿ ಉಲ್ಲೇಖನೀಯ–

> ಜನರಿಗೆ, ಉಳುಮೆಗಾರರಿಗೆ ರಾಜಕೀಯ ಅಧಿಕಾರ ಇಲ್ಲದಾಗ ಬಳಸಲೆಂದು ಸವಿನಯ ಶಾಸನೋಲ್ಲಂಘನೆ ಮತ್ತು ಅಸಹಕಾರ ಯೋಜಿತವಾಗಿದೆ. ಅವರಿಗೆ ರಾಜಕೀಯ ಅಧಿಕಾರ ಲಭಿಸಿದ ಕೂಡಲೇ ಸ್ವಾಭಾವಿಕವಾಗಿ ಅವರ ತೊಂದರೆಗಳು ಎಂಥದೇ ಇದ್ದರೂ ಅವು ಶಾಸನದ ಮೂಲಕ ನಿವಾರಣೆ ಆದಾವು.
>
> ಆದರೆ 'ರೈತನಿಗೆ ಅಷ್ಟೆಲ್ಲ ರಾಜಕೀಯ ಅಧಿಕಾರ ಇರಲಿಕ್ಕಿಲ್ಲ' ಎಂದೀರಿ ನೀವು. ಅಹಿಂಸಾತ್ಮಕ ಪದ್ಧತಿಯಲ್ಲಿ ಆಗಲೇಬೇಕಾದಂತೆ ಸ್ವರಾಜ್ಯ ಇಡೀ ಜನತೆಯ ಪ್ರಯತ್ನದಿಂದ ಪ್ರಾಪ್ತವಾಗುತ್ತದೆ. ಆಗ ರೈತರು ತಮ್ಮ ಸಹಜ ಸ್ಥಾನಕ್ಕೆ ಬರಲೇಬೇಕು, ಅವರ ವಾಣಿಯೇ ಅತ್ಯಂತ ಮೇಲ್ಸ್ತೈಯಲ್ಲಿರಬೇಕು. ಹಾಗಿರದೆ ಜನಕ್ಕೂ ಸರಕಾರಕ್ಕೂ ಪರಿಮಿತ ಮತದಾನದ ಪದ್ಧತಿಯ ಆಧಾರದ ಮೇಲೆ ವ್ಯಾವಹಾರಿಕ ಒಪ್ಪಂದವಾಗುವುದಾದರೆ ಉಳುಮೆಗಾರನ ಹಿತವನ್ನು ಎಚ್ಚರದಿಂದ ಕಾಯಬೇಕಾದೀತು. ರೈತರ ಹಿತರಕ್ಷಣೆಯನ್ನು ಶಾಸಕಾಂಗ ಮಾಡಲಾರದೆ ಹೋದರೆ ಅವರಿಗೆ ಸವಿನಯ ಶಾಸನಭಂಗ ಹಾಗೂ ಅಸಹಕಾರದ ಪರಮ ಪರಿಹಾರೋಪಾಯವಂತೂ ಇದ್ದೇ ಇರುತ್ತದೆ. 1922ರಷ್ಟು ಹಿಂದೆಯೆ ಚಿರಾಲಾ ಪೆರಾಲಾ ಸಂದರ್ಭದಲ್ಲಿ ಹೇಳಿದಂತೆ ಅಂತಿಮವಾಗಿ ಅನ್ಯಾಯ ದಬ್ಬಾಳಿಕೆಗಳ ವಿರುದ್ಧ ಜನಕ್ಕೆ ನಿಜವಾದ ರಕ್ಷಣೆ ಕಾಗದದ ಮೇಲಿನ ಕಾನೂನಲ್ಲ, ಧೀರವಚನವಲ್ಲ, ಉಗ್ರ ಭಾಷಣಗಳಲ್ಲ, ಅಹಿಂಸಾತ್ಮಕ ಸಂಘಟನಾ ಶಕ್ತಿ, ಶಿಸ್ತು, ತ್ಯಾಗಗಳೇ ಅವು. (ಮೋ.ಕ.ಗಾಂಧೀ 1959 ಅರ್ಥ ವಿಚಾರ ಪುಟ.)

ಅಂಕೋಲಾ ತಾಲ್ಲೂಕಿನ ಹಳ್ಳಿಗಳ ಮುಖಂಡರಾದ ಬಾಸಗೋಡ ರಾಮ ನಾಯಕರ ನೇತೃತ್ವದಲ್ಲಿ ನಾಡವರ ಸಮಾಜದ ವೀರ ಸತ್ಯಾಗ್ರಹಿಗಳು ಎದೆಯುಬ್ಬಿಸಿ, ತೋಳೆತ್ತಿ–

"ಯಾರು ಒಲಿದರೇನು । ನಮಗಿನ್ನಾರು ಮುನಿದರೇನು ।
ಭಾರತಮಾತೆಯ । ಚರಣ ಕಮಲದಲಿ ।
ಪ್ರಾಣವೀವ ಸ । ತ್ಯಾಗ್ರಹಿಗಳಿಗೆ ॥ ಯಾರು ಒಲಿದರೇನು ॥"
"ಹೋಶಿಯಾರ್ । ಹೋಶಿಯಾರ್ ।
ನೌಜವಾನೋ । ಹೋಶಿಯಾರ್ ॥
ಇಂಕಿಲಾಬಿ ನಾರೇಮಾರ್ ।
ಜಯಜಯ ಕರನಾ ಹೋಶಿಯಾರ್ ।
ಸತ್ಯಾಗ್ರಹಕಿ ಜಯಜಯ ಕರನಾ ।
ಸೇವಾದಳಕಿ ಜಯಜಯ ಕರನಾ ।
ಗಾಂಧೀಜೀಕೆ ಜಯಜಯ ಕರನಾ ।"

ಮುಂತಾದ ವೀರಗೀತೆಗಳನ್ನು ಹಾಡುತ್ತಾ ಜಯಘೋಷಗಳನ್ನು ಮಾಡುತ್ತಾ ಮುನ್ನುಗ್ಗಿ ನಡೆದಿದ್ದರು. ಆ ಸನ್ನಿವೇಶವನ್ನು ನಿಂತು ನೋಡಿದ ನಮ್ಮೂರ ಕವಿ, ದಿನಕರ ದೇಸಾಯಿ ಅವರ ವೀರಹೃದಯದಿಂದ ಹಾಡೊಂದು ಹೊರಬಂತು – ಅದು ಹೀಗಿದೆ :

ನಾಡವರೇ ನಿಜ । ನಾಡಿಗರು ।
ನೋಡು ಕಾಳಗವ ಹೂಡಿಹರು ।
ಸ್ವಾತಂತ್ರ್ಯದ ಸವಿ । ಯೂಟವನುಂಡು ।
ವಿಜಯನಗರದಲಿ । ಕಾದಿದ ದಂಡು ।
ನಾಡವರಿಂದಿನ । ದಾಸ್ಯವಕಂಡು ।
ಉಪ್ಪ ಮಾಡುವರು । ಮುಂದಕೆ ಬಂದು ॥ ನಾಡವರೇ ನಿಜ
ನಾಡಿಗರು ॥1॥

ಅಂದಿನ ಹುರುಪೇ । ಇಂದಿಗೆ ಕೂಡಿ।
ನಾಡವರೆಲ್ಲರು । ಒಂದೆಡೆ ಸೇರಿ ।
ಗಾಂಧಿಮಹಾತ್ಮನ । ಕೊಂಬನು ಕೇಳಿ ।
ನೆಗೆದು ಕಾದುವರು । ಧೈರ್ಯವತಾಳಿ ನಾಡವರೇ ನಿಜ ನಾಡಿಗರು ॥ 2

ಕಲ್ಲಿನ ದೇಹವು । ಆರಡಿ ಉದ್ದ ।
ಸೋಲದು ಇವರಿದ್ದರೆ ಈ ಯುದ್ಧ ।
ಕನ್ನಡ ನಾಡಿನ । ಶೂರರು ಇವರು ।

ದೇಶಕ್ಕೋಸುಗ । ಕಾದುತಲಿಹರು ॥ 3 ॥

ಎಂದು ಹಾಡಿ, ನಾಡವರ ಶೂರತನ ಹಾಗೂ ದೇಶಪ್ರೇಮಗಳನ್ನು ಹೊಗಳಿದರು. ಆ ರೀತಿ ಅಮಿತೋತ್ಸಾಹದಿಂದ ಸಮುದ್ರಾಭಿಮುಖವಾಗಿ ಶಿಸ್ತಿನಿಂದ ಸಾಗಿದ ಮೆರವಣಿಗೆಯನ್ನು ಬ್ರಿಟೀಷ ಅಧಿಕಾರಿಗಳು ಮೂಕಪ್ರೇಕ್ಷಕರಾಗಿ, ಅಚ್ಚರಿಯಿಂದ ನೋಡುತ್ತ, ತಮ್ಮ ದಳವನ್ನು ಜಾಗ್ರತಗೊಳಿಸುತ್ತ ಸಾಗುತ್ತಿದ್ದರು. ಮೆರವಣಿಗೆಕಾರರು ಅರಬೀ ಸಮುದ್ರಕ್ಕೆ ಹೊಂದಿ ಇದ್ದ ಬೆಳಂಬಾರ ಗ್ರಾಮದ ಹತ್ತಿರ ಇರುವ ಉಪ್ಪು ನೀರಿನ ಪೂಜಗೇರಿ ಹಳ್ಳದ ಉಪ್ಪುನೀರನ್ನೂ ದಡದಬೈಲಲ್ಲಿದ್ದ ಒಂದಿಷ್ಟು ಉಪ್ಪಿನ ಮಣ್ಣನ್ನೂ ಗಡಿಗೆಗಳಲ್ಲಿ ತುಂಬಿತಂದು, ಅಂಕೋಲಾ ತಾಲೂಕು ಕಚೇರಿಯ ಮುಂದೆ ಒಲೆ ಹೂಡಿ ಬೆಂಕಿ ಮಾಡಿ, ಉಪ್ಪು ತಯಾರಿಸಿ, ಕರಕೊಡದ ಆ ಉಪ್ಪನ್ನು ಲಿಲಾವು ಮಾಡಿ ಬ್ರಿಟೀಷ ಸರಕಾರದ ಕಾಯದೆಯನ್ನು ಮುರಿದರು. ಆ ಕಾಲಕ್ಕೆ ಬ್ರಿಟೀಷ ಅಧಿಕಾರಿಗಳೂ ಪೋಲೀಸರೂ ಸಂಯಮ ಹಾಗೂ ಶಿಸ್ತಿನಿಂದಲೇ ವರ್ತಿಸಿದರು. (ಉತ್ತರ ಕನ್ನಡ ಜಿಲ್ಲೆಯಲ್ಲಿ ಸ್ವಾತಂತ್ರ್ಯ ಚಳವಳಿ ಪುಟ. 63 ಮತ್ತು 64)

* * *

೬. ಬುದ್ಧಿ ಮತ್ತು ವಿವೇಕದ ನಡುವಣ ಪ್ರಶ್ನೆ

ವಿವೇಕ ಹಾಗೂ ಬುದ್ಧಿಯ ನಡುವೆ
ಬೇಕಾದುದು ವಿವೇಕವೆಂದು
ಗಾಂಧಿಯ ಅಭಿಪ್ರಾಯ

ನಾವು ಈಗ ಮಾಡಲೇ ಬೇಕಾದ ಮುಖ್ಯ ಕೆಲಸವೆಂದರೆ ನಾವು ಮತ್ತು ನಾವು ಆಳುವ ಕೋಟಿಗಟ್ಟಲೆ ಜನರ ನಡುವೆ,ರಕ್ತ ಮಾಂಸಗಳಲ್ಲಿ ಭಾರತೀಯರಾಗಿಯೂ,ಅಭಿರುಚಿ,ಅಭಿಪ್ರಾಯ,ನೀತಿ ಮತ್ತು ಬುದ್ಧಿವಂತಿಕೆಗಳಲ್ಲಿ ಇಂಗ್ಲಿಷರಾಗಿಯೂ ಇರುವ ದುಭಾಷಿ ಎಂಬ ವರ್ಗವನ್ನು ನಿರ್ಮಾಣ ಮಾಡುವುದು_ಮೆಕಾಲೆ

ಭಾರತದ ರೈತನೊಡನೆ ಮಾತಾಡಿ ನೋಡಿ ಅವನಲ್ಲಿ ಪ್ರಾಪಂಚಿಕ ವಿವೇಕ ತುಂಬಿ ತುಳುಕಾಡುವುದನ್ನು ಕಾಣುತ್ತೀರಿ_ಗಾಂಧಿ

ಇಂಗ್ಲಿಷರ ಮೂಲಭೂತ ತತ್ವವು, ಸಾಧ್ಯವಾದಷ್ಟು ರೀತಿಯಲ್ಲಿ ನಮ್ಮ ಆಸಕ್ತಿ ಮತ್ತು ಅನುಕೂಲಕ್ಕೆ ತಕ್ಕಂತೆ ಇಡೀ ಭಾರತವನ್ನೇ ಸಾಧಕವಾಗಿ ಬಳಸಿಕೊಳ್ಳುವುದೇ ಆಗಿತ್ತು. ಇಂಗ್ಲಿಷರು ಒಪ್ಪಿಕೊಳ್ಳಬಹುದಾದ ಯಾವುದೇ ಕನಿಷ್ಠ ಗೌರವ,ಪ್ರತಿಷ್ಠೆ ಅಥವಾ ಅಧಿಕಾರದಿಂದಲೂ ಭಾರತೀಯರನ್ನು ಹೊರಗಿಡಲಾಗಿತ್ತು._ಜಾನ್ ಶೋರ್.

೧೮೭೮ ರಿಂದ ೧೯೧೪ ರವರೆಗಿನ ವಸಾಹತುಕಾಲಘಟ್ಟವು ಯುರೋಪ್ ಅತ್ಯಂತ ಹೆಚ್ಚು ಅಧಿಕಾರವನ್ನು ಕೇಂದ್ರಿಕರಿಸಿದ ಕಾಲಘಟ್ಟ.ಅದರ ಅಧಿಕಾರವು ಕೇಂದ್ರೀಕರಣಗೊಂಡಿದ್ದ ಸನ್ನಿವೇಶದಲ್ಲಿಯೇ ಗಾಂಧಿಯವರು ತಮ್ಮ ಸಾತ್ವಿಕ ಪ್ರತಿಭಟನೆಯನ್ನು ಪ್ರಾರಂಭಿಸಿದ್ದರು. ಆದರೆ ಇಂದಿನವರೆಗೂ ನಾವು ವಸಾಹತುಶಾಹಿ ಅಧಿಕಾರ ಅದರ ಅವಶೇಷಗಳ ಕುರಿತು ಮಾತಾಡುತ್ತಿದ್ದೇವೆ. ೧೯೪೭ ರಲ್ಲಿ ನಮಗೆ ಸ್ವಾತಂತ್ರ್ಯ ಬಂದಿದೆ. ಇನ್ನು ನಾವು ಸ್ವಾತಂತ್ರ್ಯ ಅನುಭವಿಸಬಹುದು ಮತ್ತು ಈಗಾಗಲೇ ವಸಾಹತುಶಾಹಿಯ ಅನುಭವವು ಮುಗಿದು ಹೋಗಿದೆಯೆಂದು ಭಾವಿಸುವುದು ಸರಿಯಲ್ಲ. ಅದು ಮುಗಿದ ಪ್ರಶ್ನೆಯೆಂದಾಗಲೀ; ಈಗಾಗಲೇ ಎಲ್ಲದಕ್ಕೂ ಉತ್ತರ ಸಿಕ್ಕಿದೆಯೆಂದಾಗಲೀ ನಾವು ಭಾವಿಸಿಕೊಳ್ಳಬಾರದು, ಸ್ವಾತಂತ್ರ್ಯ ಬಂದ ನಂತರ ಬ್ರಿಟೀಷರು ತೊಲಗಿದರು.ಇದೇ ಪ್ರಶ್ನೆಯು ಗಾಂಧಿಗೂ ಅನ್ವಯವಾಗುತ್ತದೆ. ಗಾಂಧಿ ತನ್ನ ನಂತರ ಯಾವುದೇ ವಾದವನ್ನು ಬಿಟ್ಟು ಹೋಗುತ್ತಿಲ್ಲವೆಂದು ಹೇಳಿದ್ದರು. ಆದರೆ ಗಾಂಧಿಯ ವಿಚಾರವು ವಾಸ್ತವವಾಗಿ ಮತ್ತೆ ಬೇರೆ ಬೇರೆ ರೀತಿಯಲ್ಲಿ ಮುಂದುವರಿಯಿತು.ನಮ್ಮ ಸಾಮಾಜಿಕ ಮತ್ತು ಆರ್ಥಿಕ ವ್ಯವಸ್ಥೆಯು ಗಾಂಧಿಯ ವಿಚಾರ ಧಾರೆಗಳನ್ನು ಮತ್ತೆ ಮತ್ತೆ ಪರಿಶೀಲಿಸುವಂತೆ ಮಾಡಿತು.

ವಸಾಹತುಶಾಹಿ ಕಾಲಘಟ್ಟದಲ್ಲಿ ಅಸಂಖ್ಯಾತಜನ ಅವಮಾನ ಮತ್ತು ಕಟು ಅನುಭವಗಳನ್ನು ಪಡೆದಿದ್ದರು. (ಉದಾ: ಶಿರಸಿ; ಅಂಕೋಲ; ಶಿವಪುರ; ಈಸೂರು; ಬೆಳಗಾಂಗಳಲ್ಲಿ ನಡೆದ ಹೋರಾಟಗಳು) ಶಿರಸಿ, ಸಿದ್ಧಾಪುರ ಮುಂತಾದ ಪ್ರದೇಶಗಳಲ್ಲಿ ಅನೇಕ ರೈತರಿಗೆ; ಹಿಡುವಳಿದಾರರಿಗೆ ಬ್ರಿಟೀಷ್ ಅಧಿಕಾರಿಗಳು ವಿಪರೀತ ಕಿರುಕುಳವನ್ನು ಕೊಟ್ಟಿದ್ದರು. ಇದರ ಪರಿಣಾಮವಾಗಿ ರಾಷ್ಟ್ರೀಯತಾವಾದಿ ಪ್ರಜ್ಞೆಯೂ ಕೂಡಾ ಈ ಪ್ರದೇಶಗಳಲ್ಲಿ ಮುಖ್ಯವಾಗಿ ಬೇರೂರ ತೊಡಗಿತು. ರಾಷ್ಟ್ರೀಯತಾವಾದಿ ಪ್ರಜ್ಞೆಯು ಉದಾರತೆ ಮತ್ತು ತಾಂತ್ರಿಕ ಅವಶ್ಯಕತೆ ಕೂಡಾ ಆಗಿತ್ತು ಎಂಬುದನ್ನು ಮರೆಯಬಾರದು. ಭಾರತದಲ್ಲಿ ಕೆಲವು ಬುದ್ಧಿಜೀವಿಗಳು ಬ್ರಿಟೀಷ್ ಆಳ್ವಿಕೆಯ ಬಗ್ಗೆ ವಿಶೇಷ ದ್ವೇಷವನ್ನು ಹೊಂದಿದ್ದರು. ಹಾಗೆಯೇ ಯುರೋಪಿನಲ್ಲಿಯೂ ಕೂಡ ಭಾರತದಲ್ಲಿ ಬ್ರಿಟೀಷ್ ಆಳ್ವಿಕೆಯನ್ನು ಸಮರ್ಥನೀಯವೆಂದು ಒಪ್ಪಿಕೊಂಡಿರಲಿಲ್ಲ. ಈ ಮಾತನ್ನು ಇಲ್ಲಿ ಯಾಕೆ ಹೇಳಬೇಕಾಯಿತೆಂದರೆ ಭಾರತೀಯ ರಾಷ್ಟ್ರೀಯ ಆಂದೋಲನವು ಹೇಗೆ ಎಲ್ಲರ ಅಭಿಪ್ರಾಯವಾಗಿರಲಿಲ್ಲವೋ ಅದೇ ರೀತಿ ಇಂಗ್ಲೆಡಿನಲ್ಲಿರುವ ಎಲ್ಲರೂ ವಸಾಹತು ಆಡಳಿತ ಪರವಾಗಿದ್ದರು ಎಂದು ತಿಳಿಯುವುದು ಕೂಡಾ ಅಷ್ಟೇ ಕಷ್ಟ. ಇದರ ಮುಖೇನವೇ ಇನ್ನೊಂದು ಪ್ರಶ್ನೆಯನ್ನು ಕೇಳಬಹುದು: ವಸಾಹತೋತ್ತರ

ಸಂದರ್ಭದಲ್ಲಿಯೂ ವಸಾಹತುಕಾಲದ ಪ್ರಮುಖ ಪ್ರಶ್ನೆಗಳು ಹಾಗೆಯೇ ಉಳಿದಿವೆ. ನಮ್ಮ ಬಟ್ಟೆ ಮುಳ್ಳಿನ ಮೇಲೆ ಬಿದ್ದಿದೆ. ಹೇಗೆ ನಾವು ಇದನ್ನು ಬಿಡಿಸಿಕೊಳ್ಳಬೇಕು.

> ಸ್ವರಾಜ್ಯ ಅಂದರೆ ವಿದೇಶೀ ನಿಯಂತ್ರಣದಿಂದ ಪೂರ್ಣ ಸ್ವಾತಂತ್ರ್ಯ ಮತ್ತು ಸಂಪೂರ್ಣ ಆರ್ಥಿಕ ಸ್ವಾತಂತ್ರ್ಯ. ರಾಜಕೀಯ ಸ್ವಾತಂತ್ರ್ಯ ಒಂದು ಕೊನೆ, ಮತ್ತೊಂದು ಆರ್ಥಿಕ ಸ್ವಾತಂತ್ರ್ಯ ಅದಕ್ಕೆ ಮತ್ತೆರಡು ಕೋನಗಳುಂಟು. ಒಂದು ನೈತಿಕ ಮತ್ತು ಸಾಮಾಜಿಕ, ಅದಕ್ಕನುಗುಣವಾದ ಧರ್ಮ ಮತ್ತೊಂದು. ಅತ್ಯಂತ ಪೂರ್ಣಾರ್ಥದಲ್ಲಿ ಅರಿಯಬೇಕಾದ ಧರ್ಮ ಅದು. ಇದನ್ನು ಸ್ವರಾಜ್ಯದ ಚಚ್ಚೌಕ ಎಂದು ಕರೆಯೋಣ. ಯಾವ ಒಂದು ಕೋನ ಮುಕ್ಕಾದರೂ ಅದರ ಸ್ವರೂಪವೇ ನಾಶವಾದೀತು. (ನನ್ನ ಕನಸಿನ ಸ್ವರಾಜ್ಯ ಕೆ.ಎಸ್.ನಾರಾಯಣ ಸ್ವಾಮಿ ಪುಟ.12)

ವಸಾಹತುಶಾಹಿ ಅನುಭವದ ಪ್ರಶ್ನೆಯು ಈಗಾಗಲೇ ಮುಗಿದು ಹೋಗಿದೆಯೆಂದೋ; ನಿರ್ವಸಹಾತೀಕರಣದ ಪ್ರಶ್ನೆಯು ಮುಗಿದಿದೆಯೆಂದೇ ಹೇಳುವುದು ಕಷ್ಟ ಸಾಧ್ಯ, ನಿರ್ವಸಹಾತೀಕರಣದ ರಾಜಕಾರಣದ ಪ್ರಶ್ನೆಯು ಮುಗಿದಿಲ್ಲ, ಅದಕ್ಕೆ ನಾವು ಒಂದೇ ಸಾಲಿನ ಉತ್ತರವನ್ನೂ ಬರೆದಿಲ್ಲ, ಪಶ್ಚಿಮದ ಅನೇಕ ಗವರ್ನರ್ ಜನರಲ್‌ಗಳಿಗೆ ಮತ್ತು ವೈಸರಾಯ್‌ಗಳಿಗೆ; ಲಾರ್ಡ ವಿಲಿಯಂ ಬೆಂಟಿಂಕನಿಗೆ; ಮೆಕಾಲೆಗೆ ಅಂತರಾಳದಲ್ಲಿದ್ದ ಧೋರಣೆಗಳು ಅವರ ಅಲ್ಲಲ್ಲಿಯ ಮಾತುಗಳಲ್ಲಿ ವ್ಯಕ್ತವಾಗುತ್ತದೆ. ನಾವು ವಸಾಹತುದೇಶದ ಜನರಿಗೆ ನಾಗರಿಕತೆಯನ್ನು ಕಲಿಸಿದೆವು. ಅವರಿಗೆ ಶಾಲೆ-ಕಾಲೇಜುಗಳ ಮೂಲಕ ಜ್ಞಾನಕೊಟ್ಟೆವು. ಆರ್ಥಿಕ ಅಭಿವೃದ್ಧಿಯೆಂದರೇನೆಂದು ತಿಳಿಸಿದೆವು. ಅವರಿಗೆ ಇರುವ ಅಸಂಖ್ಯ ದೇವರುಗಳು ದೆವ್ವಗಳು, ಅವರ ಮಾಟ ಪದ್ಧತಿ (ಇದನ್ನು ಮ್ಯಾಜಿಕ್ ಎಂದು ಕರೆದರು) ಕಂದಾಚಾರಗಳು ಹೇಗೆ ಅಭಿವೃದ್ಧಿಗೆ ಮಾರಕವಾಗಿದೆಯೆಂದು ತೋರಿಸಿಕೊಟ್ಟೆವು ಎಂದು "ಅವರು" ಹೇಳುತ್ತಿದ್ದರು. (ಸೈದನಲ್ಲಿ "ಅವರು" ಮತ್ತು "ನಾವು" ವಿಶೇಷ ಅರ್ಥದಲ್ಲಿ ಬಳಕೆಯಾಗಿದೆಯೆಂಬುದನ್ನು ಮರೆಯಬಾರದು.) ಆದರೆ ಇಲ್ಲಿ 'ಅವರು' 'ನಾವು' ಅಂದಾಗಲೂ ಒಂದೇ ಧ್ವನಿಯನ್ನು ವ್ಯಕ್ತ ಪಡಿಸುತ್ತಿಲ್ಲ. ಅವರ ಕೈಯಲ್ಲಿ ಬೇರೆ ಬೇರೆ ರೀತಿಯ ಉಪಕರಣಗಳಿದ್ದವು-ಕಂದಾಯ ವಸೂಲಿಯಿಂದ ಪ್ರಾರಂಭ ಮಾಡಿ ಕಾನೂನಿನ ವರೆಗೆ ಆರ್ಥಿಕ, ಸಾಮಾಜಿಕ ಪರಿವರ್ತನೆ; ಯುರೋಪಿನ ಮೇಲರಿಮೆ (Superiorty complex) ಇವೆಲ್ಲವು ಏಕ ಮುಷ್ಟಿಯುಲ್ಲಿ ಓಡಿಯುವಂಥದ್ದಲ್ಲ. ಯುರೋಪಿನ ಆರ್ಥಿಕ ಮೇಲರಿಮೆ ಯು ಗಾಂಧಿಗೆ ಸರಿಯಾಗಿ ತಿಳಿದಿತ್ತು.ಇಲ್ಲಿ ಗಾಂಧಿಯವರ ಒಂದು ವಾದವು ಗಮನಾರ್ಹವಾಗಿಗೆ.

> ಸಾಮಾನ್ಯವಾಗಿ ಪಾಶ್ಚಿಮಾತ್ಯರು ಅಭಿಪ್ರಾಯ ಪಡುವುದೇನೆಂದರೆ, ಬಹುಜನರ ಸುಖವನ್ನು ವರ್ಧಿಸುವುದೇ ಮಾನವನ ಸಕಲ ಕರ್ತವ್ಯವಾಗಿದೆ. ಶಾರೀರಿಕ ಸೌಖ್ಯ ಹಾಗೂ ಆರ್ಥಿಕ ಉನ್ನತಿಗಳೇ ನಿಜವಾದ ಸುಖವೆಂದು ಭಾವಿಸಲ್ಪಡುತ್ತವೆ. ಇಂಥ ಸುಖವನ್ನು ಗೆದ್ದುಕೊಳ್ಳುವುದಕ್ಕಾಗಿ ನೈತಿಕ ನಿಯಮಗಳನ್ನು ಮುರಿದರೆ ಅದು ಅಷ್ಟೇನೂ ಮಹತ್ವದ್ದಲ್ಲ. ಈ ರೀತಿಯಾಗಿ ವಿಚಾರ ಮಾಡುವುದರಿಂದ ಉಂಟಾಗುವ ದುಷ್ಪರಿಣಾಮಗಳು ಯುರೋಪ ಖಂಡದ ತುಂಬೆಲ್ಲ ಕಂಡುಬರುತ್ತಲಿವೆ.
>
> ನೀತಿಯನ್ನು ದುರ್ಲಕ್ಷಿಸಿ ಸಂಪೂರ್ಣವಾಗಿ ಶಾರೀರಿಕ ಮತ್ತು ಆರ್ಥಿಕ ಸುಖವನ್ನೇ ಹುಡುಕುತ್ತ ಹೋಗುವುದೆಂದರೆ ದೈವೀನಿಯಮಕ್ಕೆ ವಿರುದ್ಧವಾಗಿ ನಡೆದಂತೆಯೇ ಎಂದು ಪಾಶ್ಚಿಮಾತ್ಯರಲ್ಲಿ ಸುಜ್ಞಾನಿಗಳಾದವರು ತೋರಿಸಿಕೊಟ್ಟಿದ್ದಾರೆ. ಅಂಥ ಸುಜ್ಞಾನಿಗಳಲ್ಲಿ ಜಾನ್ ರಸ್ಕಿನ್ ಒಬ್ಬನಾಗಿದ್ದಾನೆ. ಅವನು ತನ್ನ ಸರ್ವೋದಯ ಎಂಬ ಗ್ರಂಥದಲ್ಲಿ ಮಾನವರು ನೀತಿಯ ನಿಯಮವನ್ನು ಪಾಲಿಸಿದರೆ ಮಾತ್ರ ಸುಖಿಗಳಾಗಬಲ್ಲರು ಎಂದು ಪ್ರತಿಪಾದಿಸಿದ್ದಾರೆ.
>
> ಜಗತ್ತಿನಲ್ಲಿರುವ ಎಲ್ಲ ಧರ್ಮಗಳೂ ನೀತಿಗೆ ಬಹಳ ಮಹತ್ವದ ಸ್ಥಾನವನ್ನು ಕೊಟ್ಟಿವೆ. ಧರ್ಮವು ಹೇಳುವ ಮಾತನ್ನು ಬದಿಗಿಟ್ಟರೂ ನಮ್ಮ ವ್ಯವಹಾರ ಜ್ಞಾನವೂ ಕೂಡ ನೀತಿಯನ್ನು ಪಾಲಿಸುವುದು ಬಹಳ ಅವಶ್ಯವಿದೆ ಎಂಬುದನ್ನು ಸೂಚಿಸುತ್ತದೆ. ನೀತಿಯನ್ನು ಪಾಲಿಸುವುದರಿಂದ ಮಾತ್ರ ನಾವು ಸುಖಿಗಳಾಗಬಲ್ಲೆವು. (ಸರ್ವೋದಯ ಮೋ.ಕ. ಗಾಂಧಿ 1960 ಪುಟ.28–29)

ಹಾಗೆ ನೋಡುವುದಿದ್ದರೆ ವಸಾಹತು ನೀತಿಯು ಒಂದೊಂದು ಸಂದರ್ಭದಲ್ಲಿ ಒಂದೊಂದು ನಿಲುಮೆಯನ್ನು ತಳೆದಿತ್ತು. ಈ ದೃಷ್ಟಿಯಿಂದ ವಸಾಹತುಶಾಹಿ ಆಡಳಿತವನ್ನು ಸಾಮಾನ್ಯೀಕರಣದ ಸೂತ್ರದ ಮೂಲಕ ನೋಡಲು ಬರುವುದಿಲ್ಲ. ಹಾಗೆಯೇ ಭಾರತಕ್ಕೆ ಬಂದ ವೈಸರಾಯ್‌ಗಳು ಗವರ್ನರ್ ಜನರಲ್‌ಗಳ ವೈಯಕ್ತಿಕ ಸ್ವಭಾವ; ಅವರು ಇಂಗ್ಲೆಂಡಿನಲ್ಲಿ ಪ್ರತಿನಿಧಿಸುತ್ತಿದ್ದ ರೀತಿಯು ಕೂಡಾ ಒಂದು ಸಾಮಾನ್ಯ ತಿಳುವಳಿಕೆಗೆ ಸಿಗುತ್ತಿದ್ದ ಮಾದರಿಯೂ ಅಲ್ಲ. ಪಶ್ಚಿಮವೆಂದರೆ ಅದು ಕಲ್ಪಿತ ಕುಲಸಮುದಾಯವೂ ಅಲ್ಲ. ಎಲ್ಲರಿಗೂ ತಿಳಿದಿರುವಂತೆ ವಸಾಹತುಶಾಹಿ ಆಡಳಿತ ಜನರನ್ನು ಗುರುತಿಸಿದ್ದು–ವ್ಯಕ್ತಿಗಳಾಗಿ ಮಾತ್ರ. ಹಾಗೆಯೇ ಒಬ್ಬವ್ಯಕ್ತಿ; ಅವನ ಕುಟುಂಬ; ಅವನಜಾತಿ; ಅವನು ವಾಸಿಸುವ ಗ್ರಾಮ ಇವುಗಳನ್ನು ಅರ್ಥವಿಸಿಕೊಳ್ಳುವುದು 'ಅವರಿಗೆ'

ಕಷ್ಟವಾಯಿತು.ಆದುದರಿಂದಲೇ ಗಾಂಧಿ ಗ್ರಾಮ ಸಮುದಾಯದ ಕುರಿತು ಬೇರೆ ರೀತಿಯಲ್ಲಿ ಹೇಳುತ್ತಾರೆ–

> ನಾವು ಭಾರತದ ಗ್ರಾಮೀಣ ಸಂಸ್ಕೃತಿಂಯೊಂದರ ಉತ್ತರಾಧಿಕಾರಿಗಳು. ಈ ದೇಶದ ವಿಸ್ತಾರ, ಇದರ ಜನಬಾಹುಳ್ಯ ಭೌಗೋಳಿಕ ಸ್ಥಾನ ಮತ್ತು ಈ ದೇಶದ ವಾಯುಗುಣ ಎಲ್ಲವೂ ಒಂದು ಗ್ರಾಮ ಸಂಸ್ಕೃತಿಗಾಗಿಯೇ ನಿಯತಗೊಂಡಿದೆ. ಅದರ ಅವಗುಣಗಳು ಎಲ್ಲರಿಗೂ ಗೊತ್ತಿದೆ. ಆದರೆ ಅವು ಯಾವುವೂ ಪರಿಹಾರಕ್ಕೆ ಮೀರಿದುವಲ್ಲ. ಈ ಸಂಸ್ಕೃತಿಯನ್ನು ಪಲ್ಲಟಗೊಳಿಸಿ ಒಂದು ನಗರ ಸಂಸ್ಕೃತಿಯನ್ನು ತಂದು ಸ್ಥಾಪನೆ ಮಾಡುವುದು ಅಸಾಧ್ಯವೇ ಸರಿ ಎನಿಸುತ್ತದೆ. ಈಗಿನ (1929ರಲ್ಲಿ) ಮೂವತ್ತು ಕೋಟಿ ಜನಸಂಖ್ಯೆಯನ್ನು ಮೂರು ಕೋಟಿಗೋ, ಕನಿಷ್ಠ ಮೂವತ್ತು ಲಕ್ಷಕ್ಕೋ ಇಳಿಸಿ ಬಿಡಲು ಅತ್ಯಂತ ಕಠಿಣ ಕ್ರಮಗಳನ್ನು ತೆಗೆದುಕೊಂಡಲ್ಲದೆ ನಗರೀಕರಣ ಅಸಾಧ್ಯ. ಆದ್ದರಿಂದ ನಮ್ಮ ಗ್ರಾಮೀಣ ಸಂಸ್ಕೃತಿಯನ್ನೇ ಊರ್ಜಿತಗೊಳಿಸಿ ಅದರಲ್ಲಿ ನುಸುಳಿರುವ ಅನೇಕ ಅವಗುಣಗಳನ್ನು ಅರಿತು ನಿವಾರಿಸಿ ಸುಧಾರಿಸಿಕೊಳ್ಳಬೇಕೆಂದು ಮಾತ್ರವೇ ನಾನು ಸಲಹೆ ನೀಡಬಲ್ಲೆ. ನಮ್ಮ ಸುಶಿಕ್ಷಿತ ಯುವಜನರು ಹಳ್ಳಿಗಳಲ್ಲಿ ನೆಲಸುವುದರಿಂದ ಮಾತ್ರವೇ ಇದು ಸಾಧ್ಯವಾದೀತು. ಇದನ್ನು ಕೈಗೊಳ್ಳಲು ಅವರು ತಮ್ಮ ಜೀವನ ಶೈಲಿಯನ್ನು ಬದಲಿಸಿಕೊಳ್ಳಬೇಕು. ತಮ್ಮ ಕಾಲೇಜು ಅಥವಾ ಶಾಲೆಗಳ ಸುತ್ತ ಇರುವ ಗ್ರಾಮಗಳಲ್ಲೇ ತಮ್ಮ ರಜೆಯ ದಿನಗಳನ್ನು ಕಳೆಯಬೇಕು. ಗ್ರಾಮದಲ್ಲೇ ನೆಲೆಸಿ ಜೀವಿಸಲು ಸಂಕಲ್ಪ ಮಾಡಬೇಕು. (ನನ್ನ ಕನಸಿನ ಸ್ವರಾಜ್ಯ ಕೆ.ಎಸ್.ನಾರಾಯಣ ಸ್ವಾಮಿ ಪುಟ.21)

ವ್ಯಕ್ತಿ ಮತ್ತು ಸಮಾಜಕ್ಕೆ; ವ್ಯಕ್ತಿಗೆ ಮತ್ತು ಸಮುದಾಯಕ್ಕೆ ಇರುವ ಸಂಬಂಧ ಸುಲಭ ರೀತಿಯ ವ್ಯಾಖ್ಯಾನಕ್ಕೆ ದೊರೆಯುವ ಮಾದರಿಯದಾಗಿರಲಿಲ್ಲ. ಈಗಲೂ ಇದು ಸುಲಭ ವ್ಯಾಖ್ಯಾನಕ್ಕೆ ಸಿಗುತ್ತಿದೆಯೆಂದು ಅನಿಸುತ್ತಿಲ್ಲ, ಭಾರತೀಯ ವ್ಯಕ್ತಿಗೆ ಮತ್ತು ಸಮೂಹಕ್ಕೆ ವಸಾಹತು ಆಡಳಿತದಲ್ಲಿ ಏರ್ಪಟ್ಟ ಬಿರುಕುಗಳು ಕೂಡಾ ಬೇರೆ ಬೇರೆ ಮಾದರಿಯವು. ವ್ಯಕ್ತಿ ಮತ್ತು ಸಮಾಜದ ನಡುವೆ ಒಂದು ರೀತಿಯ ದ್ವಂದ್ವಗಳು ಕಾಣಿಸಿಕೊಂಡವು, ಪ್ರಭುತ್ವವು ರೂಪಿಸಿದ ಬೇರೆ ಬೇರೆ ಅಧಿಕಾರದ ಮಾದರಿಗಳು ಭಾರತೀಯ ಸಮಾಜವನ್ನು ಹೀಗಿರಬೇಕೆಂದು ನಿರ್ವಚಿಸಿತು. ಶೈಕ್ಷಣಿಕ ವ್ಯವಸ್ಥೆ ಹೊಸದಾಗಿ ಪ್ರಾರಂಭವಾದ ವಿವಿಧ ರೀತಿಯ ಉದ್ಯೋಗಗಳು ಒಂದು ಕಡೆಯಿಂದ

ಹೊಸನಾಗರಿಕ ಜನರನ್ನು ಸೃಷ್ಟಿಸಿತು.ಗಾಂಧಿ ವ್ಯಕ್ತಿಯನ್ನು ವ್ಯಾಖ್ಯಾನಿಸುವ ಕ್ರಮವೇ ಬೇರೆ ಬೇರೆ ರೀತಿ ಇರುತ್ತವೆ.

> ಮನುಷ್ಯನ ಮನಸ್ಸಿಗೆ ಎರಡು ಗವಾಕ್ಷಿಗಳಿವೆ. ಒಂದರಲ್ಲಿ ತಾನು ಇದ್ದಂತೆಯ ಕಾಣಬರುತ್ತಾನೆ. ಇನ್ನೊಂದರಲ್ಲಿ ತಾನು ಇರಬೇಕಾದ ಎರಕದಂತೆ ಕಾಣಬರುತ್ತಾನೆ. ಸಾಮಾನ್ಯವಾದ ವಿಜ್ಞಾನಶಾಸ್ತ್ರವೆಲ್ಲ ಈ ಲೋಕವನ್ನು ಇರುವ ಹಾಗೆಯೆ ಚರ್ಚಿಸುತ್ತದೆ. ಈ ಲೋಕ ಹೇಗೆ ಇರಬೇಕೆಂಬುದನ್ನು ಚರ್ಚಿಸುವುದು ನೀತಿಶಾಸ್ತ್ರ.
> ಪ್ರತಿಯೊಬ್ಬರೂ ತಮ್ಮೊಳಗೆ ತಾವು ನೋಡಿಕೊಳ್ಳಬೇಕು; ತಮ್ಮ ನಿಜ ಸ್ವರೂಪವನ್ನು ಅರಿಯಬೇಕು; ತಮ್ಮ ತನು ಮನ ಅಂತಃಕರಣಗಳನ್ನು ಹದಗೊಳಿಸಿ ಉತ್ತಮಗೊಳಿಸಬೇಕು. ಅನ್ಯಾಯ, ಅಹಂಕರ, ದುಷ್ಟತನಗಳಿಂದ ಲೋಕದಲ್ಲಿ ಆಗಿರುವ ಅನಿಷ್ಟವನ್ನು ಅರ್ಥಮಾಡಿಕೊಂಡು 'ದುಷ್ಕೃತಿವಿನಾಶ'ಕ್ಕಾಗಿ ಹೊರಡಬೇಕು. ಆಯ ಶಾಸ್ತ್ರ, ಮನೆಯ ನಕ್ಷೆಗಳಿಂದ ಏನು ಪ್ರಯೋಜನ? ಮನೆ ಕಟ್ಟುವ ರೀತಿಯನ್ನು ಅವು ಹೇಳಿಕೊಡುತ್ತವೆ. ನೀತಿಶಾಸ್ತ್ರವೂ ಅಷ್ಟೆ. ನಮ್ಮ ಬಾಳನ್ನು ನೀತಿಸೂತ್ರಗಳ ಪ್ರಕಾರ ನಡೆಸಿದರೆ ಅದರ ಪ್ರಯೋಜನ. ನಡಸಲಾರದ ನಿಯಮ ವ್ಯರ್ಥ. ಎಷ್ಟೋ ಜನ ನೀತಿಸೂತ್ರಗಳನ್ನು ಬಾಯಿಪಾಠ ಮಾಡಿ ಅವನ್ನು ಕುರಿತು ದೊಡ್ಡದಾಗಿ ಉಪನ್ಯಾಸ ಮಾಡುತ್ತಾರೆ; ಅದರರಂತೆ ನಡೆಯುವ ಯೋಚನೆ ಮಾತ್ರ ಎಳ್ಳಷ್ಟೂ ಇಲ್ಲ. ಇನ್ನು ಕೆಲವರು ಇದಾರೆ; ಅವರ ಪಾಲಿಗೆ ನೀತಿಸೂತ್ರಗಳೆಂದರೆ ಪರಲೋಕದಲ್ಲಿ ಆಚರಿಸಬೇಕಾದ ಧರ್ಮ. ನಿಜವಾಗಿ ನೋಡಿದರೆ, ನೀತಿ ನಿಯಮಗಳಿಗೆ ವಿಧೇಯನಾಗಿ ನಡೆಯಲಾರದವನು ಪೂರ್ಣಾರ್ಥದಲ್ಲಿ ಮನುಷ್ಯನೇ ಅಲ್ಲ. ಎಷ್ಟೇ ಕಷ್ಟ ಬರಲಿ ನಷ್ಟವಾಗಲಿ ಸತ್ಯ, ಶೀಲಗಳಲ್ಲೇ ಸುಖವನ್ನು ಅನುಭವಿಸುವಂತೆ ಆಗಬೇಕು. (ಧರ್ಮ ಮತ್ತು ನೀತಿ–ಪುಟ. ೧೫೦)

ಹಾಗೆಯೇ ಅಮಲ್ದಾರರು ಸ್ಥಳೀಯರ ದೃಷ್ಟಿಯಿಂದ "ಸಾಹೇಬರಾದರು" ಅಂದರೆ ಬ್ರಿಟೀಷರ ಮಧ್ಯವರ್ತಿಗಳು "ದ್ವಿಭಾಷೆ"ಯ ಕ್ರಮದ ಮುಖೇನ ವರ್ತಿಸತೊಡಗಿದರು. ಈ ಬ್ರಿಟೀಷ್ ಆಡಳಿತಾತ್ಮಕ ವ್ಯವಸ್ಥೆಗೆ ಭಾರತದ ನೌಕರರು ಏಜೆಂಟರಂತೆ ವರ್ತಿಸಬೇಕಾಯಿತು. ಬೇರೆ ಬೇರೆ ಸಂದರ್ಭಗಳಲ್ಲಿ ಗಾಂಧಿ ವಸಾಹತುಶಾಹಿ ಆಡಳಿತಕ್ಕೆ; ಇಂಗ್ಲೀಷ್ ಭಾಷೆಯ ಬಗ್ಗೆ ಪ್ರತಿಕ್ರಿಯಿಸಿದ ಕ್ರಮಗಳು ಬೇರೆ. ವಸಾಹತುಶಾಹಿ ಆಡಳಿತದ ಬಗ್ಗೆ ಸ್ವಯಂ ಅನನ್ಯತೆಯನ್ನು; ಸ್ವಯಂಪ್ರಜ್ಞೆಯನ್ನು ರೂಪಿಸಿಕೊಂಡು ಗಾಂಧಿ ಬರೆದಿದ್ದಾರೆ.

ಈ ನಾಗರಿಕತೆ ಶುದ್ಧ ಅಧರ್ಮ, ಯುರೋಪಿನ ಜನ ಇದರ ಮಾಯಾಜಾಲದಲ್ಲಿ ಸಿಕ್ಕಿ ಹುಚ್ಚರಾಗಿ ಹೋಗಿದ್ದಾರೆ. ಅವರಿಗೆ ನಿಜವಾಗಿ ಗಟ್ಟಿಯಾದ ಮೈಯೂ ಇಲ್ಲ, ಸಾಹಸವೂ ಇಲ್ಲ. ಮದ್ಯದ ಅಮಲಿನ ಬಲದಿಂದ ಕೆಲಸ ಕಾರ್ಯಗಳನ್ನು ನಡೆಸುತ್ತಾರೆ. ಏಕಾಂತದಲ್ಲಿ ಅವರಿಗೆ ಸವಿಯೇ ಇಲ್ಲ. ಒಂಟಿಯಾಗಿ ಇರಲಾರರು. ಗೃಹಲಕ್ಷ್ಮಿಯರಾಗಿ, ಮನೆಯ ಅರಸಿಯರಾಗಿ ಇರಬೇಕಾದ ಹೆಂಗಸರು ಬೀದಿ ಬೀದಿ ಅಲೆಯುತ್ತಿರುತ್ತಾರೆ ಅಥವಾ ಕಾರಖಾನೆಗಳಲ್ಲಿ ಕೂಲಿ ಮಾಡಲು ಹೋಗುತ್ತಾರೆ. ಬರೀ ನಾಲ್ಕು ದುಡ್ಡಿಗಾಗಿ. ಹೊಟ್ಟೆಪಾಡಿಗಾಗಿ. ಇಂಗ್ಲೆಂಡೊಂದರಲ್ಲೇ ಐವತ್ತು ಲಕ್ಷ ಹೆಂಗಸರು ಕಾರಖಾನೆಗಳಲ್ಲಿ, ಇತರ ಗಿರಣಿಗಳಲ್ಲಿ ಅತಿ ಕಷ್ಟದ ಕೆಲಸ ಮಾಡುತ್ತ ತಮ್ಮ ದುರ್ದಿನಗಳನ್ನು ಕಳೆಯುತ್ತಿದ್ದಾರೆ. ಹೆಂಗಸರಿಗೂ ಮತಾಧಿಕಾರ ಬೇಕು ಎಂಬ ಚಳವಳಿ ಬೆಳೆಯಲು ಇದು ಒಂದು ಕಾರಣ. (ಹಿಂದ್ ಸ್ವರಾಜ್ಯ ೨೦೦೯ ಪುಟ. ೨೩)

ಅದೇ ರೀತಿಯಲ್ಲಿ ಗಾಂಧಿಯವರ ಮಾತುಗಳು ಚಾರಿತ್ರಿಕ ಸನ್ನಿವೇಶವನ್ನು ಅದು ಅನಾವರಣ ಮಾಡುತ್ತದೆ. ಆದರೆ ಈ ಚರಿತ್ರೆಯು ವಸಾಹತು ಸಂದರ್ಭಕ್ಕೆ ಸೇರಿದ್ದು. ಇವುಗಳ ಜೊತೆಗೆ ಕ್ರೈಸ್ತ ಮಿಶನರಿಗಳ ವಿವರಗಳಿವೆ. ಅಷ್ಟೇ ಅಲ್ಲ ಇವುಗಳಲ್ಲಿ ಬರುವ ಗ್ರಾಮಸಮುದಾಯವು ಭಾರತದ ಸಹಜ ನಿಸರ್ಗದೊಂದಿಗೆ ಸೇರಿಕೊಂಡಿವೆ. ಗಾಂಧಿ ವ್ಯಕ್ತಿ ಮತ್ತು ಸಮುದಾಯದ ಕುರಿತು ಹೇಳುವ ಮಾತುಗಳು ಇಲ್ಲಿ ಗಮನಾರ್ಹವಾಗಿದೆ.

ವ್ಯಕ್ತಿಯೇ ಪರಮಗಣ್ಯ. ವ್ಯಕ್ತಿಗೆ ಗಣನೆ ಇಲ್ಲದೆ ಹೋದರೆ, ಸಮಾಜದಲ್ಲಿ ಉಳಿವುದಾದರೂ ಏನು? ವ್ಯಕ್ತಿಸ್ವಾತಂತ್ರ್ಯವೊಂದೇ, ಮಾನವ ತನ್ನನ್ನು ಆತ್ಮ – ಸಂತೋಷದಿಂದ ಸಮಾಜ ಸೇವೆಗೆ ಪೂರ್ಣವಾಗಿ ಅರ್ಪಿಸಿಕೊಳ್ಳುವಂತೆ ಮಾಡೀತು. ಅದನ್ನು ಅವನಿಂದ ಬಲಾತ್ಕಾರವಾಗಿ ಕಸಿದುಕೊಂಡರೆ ಅವನು ಯಂತ್ರದಂತೆ ಆದಾನು; ಸವಾಜ ನಾಶವಾದೀತು. ವ್ಯಕ್ತಿ ಸ್ವಾತಂತ್ರ್ಯದ ನಿರಾಕರಣೆಯ ಆಧಾರದ ಮೇಲೆ ಯಾವ ಸಮಾಜವನ್ನೂ ನಿರ್ಮಿಸುವುದು ಅಶಕ್ಯ. ಅದು ಮಾನವ ಸ್ವಭಾವಕ್ಕೇ ವಿರುದ್ಧ. ಮನುಷ್ಯನಿಗೆ ಕೋಡು ಅಥವಾ ಬಾಲ ಹೇಗೆ ಮೂಡಲಾರವೋ ಹಾಗೆಯೇ ತನ್ನಧೀನದ ಮನವಿಲ್ಲದಿದ್ದರೆ, ಆತ ಮಾನವನಾಗಿ ಬಾಳಲಾರ. ವಾಸ್ತವವಾಗಿ, ವ್ಯಕ್ತಿ ಸ್ವಾತಂತ್ರ್ಯದಲ್ಲಿ ನಂಬಿಕೆ ಇಲ್ಲದವರೂ ತಮ್ಮದನ್ನು ಮಾತ್ರ ನಂಬಿಯೇ ಇರುತ್ತಾರೆ. ಚೆಂಘಿಸ್‌ಖಾನನ ಆಧುನಿಕ ಸ್ವರೂಪದಂತಹವರೂ ತಮ್ಮ

> ಸ್ವಾತಂತ್ರ್ಯವನ್ನು ಉಳಿಸಿಕೊಂಡೇ ಇರುತ್ತಾರೆ.
> ಮನುಷ್ಯ ತನಗೆ ತಾನೇ ಕಡು ವೈರಿಯೂ ಆಗಬಲ್ಲ, ಅತ್ಯಂತ ಗೆಳೆಯನೂ ಆಗಬಲ್ಲ, ಎಂದು ಎಲ್ಲ ಸಂತರೂ ಎಲ್ಲರಿಗೂ ಅರಿವಾಗುವಂತೆ ಸಾರಿದ್ದಾರೆ. ಸ್ವತಂತ್ರನಾಗಿರುವುದೂ, ಗುಲಾಮನಾಗಿರುವುದೂ, ಅವನ ಕೈಲೇ ಇದೆ. ವ್ಯಕ್ತಿಗೆ ನಿಜವಾದುದು ಸಮಾಜಕ್ಕೂ ನಿಜ. (ಸಮಾಜ ಧರ್ಮ 1959 ಪುಟ. 31–32)

ಗಾಂಧಿ ಬರಹಗಳಲ್ಲಿ ಬರುವ ಪ್ರಭುತ್ವ, ಮತ್ತು ರಾಜಕೀಯ ಒಂದು ಧೋರಣೆಯನ್ನು ಮಾತ್ರ ಒಳಗೊಂಡಿಲ್ಲ.ಅವು ಬ್ರಿಟೀಶ್ ರಾಜಕೀಯ ನಿಲುವುಗಳಿಗೆ ಮಾತ್ರ ಸಂಬಂಧಿಸಿದವುಗಳಲ್ಲ. ಗಾಂಧಿ ಹೇಳುವ ಅಧಿಕಾರ ಸ್ವರೂಪವು ನಿರ್ದಿಷ್ಟ ನಿಯಮಾವಳಿಗೆ ಸಂಬಂಧಿಸಿಯೂ ಇಲ್ಲ. ಬ್ರಿಟೀಶ್ ಅರಸೊತ್ತಿಗೆಯ ಕಠೋರ ರಾಜಕಾರಣದ ಮುಖ ಮಾತ್ರವೇ ಅವರಿಗೆ ಮುಖ್ಯವಲ್ಲ.

> ಅಸ್ಪೃಶ್ಯರೆಂದು ಕರೆಯಿಸಿಕೊಳ್ಳುವ ಜನರು ನಿಮ್ಮನ್ನು ತಿರಸ್ಕರಿಸಬಾರದೆಂದು ನಾನು ಹೇಗೆ ಬಯಸುವೆನೋ ಹಾಗೆಯೇ ನೀವಾದರೂ ಅವರ ಬಗೆಗೆ ದ್ವೇಷವನ್ನು ತಾಳಬಾರದೆಂದು ನನ್ನ ಇಚ್ಛೆ. ನೀವು ಹಿಂಸೆಯಿಂದ ನಿಮ್ಮ ಹಕ್ಕು –ಬಾಧ್ಯತೆಗಳನ್ನು ಪಡೆಯುವುದು ನನಗೆ ಸರಿ ಎನಿಸುವುದಿಲ್ಲ. ಇಂಥ ಹಿಂಸೆಗೆ ಜಗತ್ತಿನ ಅಭಿಮತವಾದರೂ ವಿರುದ್ಧವಾಗಿದೆ. ನಿಮ್ಮ ಉದ್ದೇಶ ಸಾಧನೆಗೆ ನೀವು ಹಿಂಸೆಯನ್ನು ಉಪಯೋಗಿಸಿದರೆ ನೀವು ಸೋಲುವುದು ಖಂಡಿತ. ನಾನು ನಿಮ್ಮೊಡನೆ ವ್ಯವಹರಿಸುವಾಗ ಆಗಲಿ ಅಥವಾ ಬೇರೆಯವರೊಡನೆ ವ್ಯವಹರಿಸುವಾಗ ಆಗಲಿ ಮುಚ್ಚುಮರೆಯಿಂದ ವರ್ತಿಸುವುದಿಲ್ಲ. ನಿಮಗೆ ಯಾವುದೇ ಪ್ರಕಾರದ ಮೋಸ ಮಾಡಲು ನಾನು ಬಯಸುವುದಿಲ್ಲ. ಅಥವಾ ನಿಮಗೆ ಏನಾದರೂ ಆಶೆ ತೋರಿಸಿ ನಿಮ್ಮ ಸಹಾಯ ಪಡೆಯಲು ನಾನು ಇಚ್ಛಿಸುವುದಿಲ್ಲ. ಏನಾದರೊಂದು ರಾಜಕೀಯ ಗುರಿಯನ್ನು ಸಾಧಿಸಲು ನಿಮ್ಮನ್ನು ಉಪಯೋಗಿಸ ಬಯಸುವುದಿಲ್ಲ. ನನಗೆ ಅಸ್ಪೃಶ್ಯತಾ ನಿವಾರಣೆಯ ಪ್ರಶ್ನೆಯು ಸ್ವರಾಜ್ಯಕ್ಕಿಂತ ಕೂಡ ದೊಡ್ಡ ಪ್ರಶ್ನೆಯಾಗಿದೆ. ಅಸ್ಪೃಶ್ಯತೆಯನ್ನು ಕೊನೆಗೊಳಿಸಲು ನಾನು ಆತುರನಾಗಿದ್ದೇನೆ; ಏಕೆಂದರೆ ಇದು ನನ್ನ ದೃಷ್ಟಿಯಲ್ಲಿ ಹಿಂದೂಗಳು ಮಾಡಲೇಬೇಕಾದ ಪಾಪಕ್ಷಾಲನೆ, ತಪಸ್ಸು, ಹಿಂದೂ ಧರ್ಮವು ಅಸ್ಪೃಶ್ಯತೆಗೆ ಆಸ್ಪದ ಕೊಟ್ಟು ಅನ್ಯಾಯ ಮಾಡಿದೆ: ಅದರ ಪರಿಮಾರ್ಜನೆ ಮಾಡಲು ನಾನು ವೈಯಕ್ತಿಕವಾಗಿ ಪ್ರಾಯಶ್ಚಿತ್ತ ತೆಗೆದುಕೊಳ್ಳ ಬಯಸುವೆ. (ಅಸ್ಪೃಶ್ಯತೆ ೧೯೬೦ ಮೋ.ಕ.ಗಾಂಧಿ ಪುಟ. ೬೨)

ಆದರೆ ಕಲೋನಿಯಲ್ ಆಡಳಿತದ ಅಧಿಕಾರದ ಬದಲು ಸ್ಥಳೀಯ ರಾಜಕಾರಣ ಮತ್ತು ಅದರ ಹಿಂದಿರುವ ಕ್ರೌರ್ಯದ ರೂಪಗಳನ್ನು ಗಾಂಧಿ ದಟ್ಟವಾಗಿ ವಿವರಿಸುತ್ತಾರೆ. ಸ್ಥಳೀಯ ಯಜಮಾನಿಕೆಯ ವಿವಿಧ ರೂಪಗಳೂ ಅವರಿಗೆ ಮುಖ್ಯವಾಗಿದೆ. ವಸಾಹತು ಆಡಳಿತ ಮತ್ತು ಅದು ರೂಪಿಸಿದ ಕಾನೂನು ಶಾಸ್ತ್ರದ ನಡುವಣ ಪ್ರಶ್ನೆಯು ಈ ಅರ್ಥದಲ್ಲಿ ಸಂಕೀರ್ಣವಾದುದು. ಇದೇ ಸಂದರ್ಭದಲ್ಲಿ ಭಾರತೀಯ ವಸಾಹತು ರಾಜಕಾರಣ; ಪ್ರಭುತ್ವದ ಸ್ವರೂಪ; ಅವರ ಬರಹಗಳಲ್ಲಿ ಬೇರೆ ಬೇರೆ ನೆಲೆಗಳಲ್ಲಿ ಕೆಲಸ ಮಾಡಬೇಕಾಯಿತು. ಇದರಲ್ಲಿ ಗಾಂಧಿ ಅನೇಕ ರೀತಿಯ ಆಯ್ಕೆಗಳನ್ನು ಎದುರಿಸಬೇಕಾಯಿತು. ಒಂದೆಡೆಯಿಂದ ಗಾಂಧಿಗೆ ಗೀತಾ ಮಾತೆಯಿತ್ತು ಮತ್ತೊಂದೆಡೆಯಿಂದ ಹಿಂದೂ ನೈತಿಕ ಶಾಸ್ತ್ರವಿತ್ತು. ಎರಡನೆಯದು ಅದನ್ನು ಅವರು ವರ್ತಮಾನಕ್ಕೆ ಅನ್ವಯಿಸಬೇಕಿತ್ತು. ಮೂರನೆಯದು ಪಶ್ಚಿಮದ ಅನೇಕ ರಾಜಕೀಯ ವಾದಗಳನ್ನು ಗಮನಿಸಿಕೊಳ್ಳಬೇಕಾಯಿತು. ವಸಾಹತುಶಾಹಿ ಅನುಭವವು ರೂಪಿಸಿದ ವೈಚಾರಿಕ ಆಕೃತಿಯನ್ನು ಇದು ಸೂಚಿಸುತ್ತದೆ.

> ಗೀತೆ ನನಗೆ ನಡವಳಿಕೆಯ ಅಮೋಘ ಮಾರ್ಗದರ್ಶಿ ಆಯಿತು. ಪ್ರತಿದಿನವೂ ನೋಡಬೇಕಾದ ನಿಘಂಟು ಆಯಿತು. ನಮಗೆ ಅರ್ಥವಾಗದ ಇಂಗ್ಲಿಷ್ ಶಬ್ದಗಳ ಅರ್ಥಕ್ಕಾಗಿ ಇಂಗ್ಲಿಷ್ ನಿಘಂಟನ್ನು ನೋಡುವುದಿಲ್ಲವೇ, ಹಾಗೆಯೇ ನನಗೆ ಯಾವುದೇ ತೊಂದರೆ ಪರೀಕ್ಷೆ ಒದಗಲಿ, ಪರಿಹಾರಕ್ಕಾಗಿ ಈ ನಡವಳಿಕೆಯ ನಿಘಂಟಿನತ್ತ ತಿರುಗುತ್ತಿದ್ದೆ. ಅಪರಿಗ್ರಹ, ಸಮಭಾವ ಮುಂತಾದ ಶಬ್ದಗಳು ನನ್ನನ್ನು ಸೆರೆಹಿಡಿದವು. ಸಮಭಾವವನ್ನು ಹೇಗೆ ಬೆಳೆಸಿ ಉಳಿಸಿಕೊಳ್ಳುವುದು ಇದು ಪ್ರಶ್ನೆಯಾಯಿತು. ದೂಷಿಸುವವರು, ಗರ್ವಿಷ್ಟರು, ಭ್ರಷ್ಟ ಅಧಿಕಾರಿಗಳು, ಅರ್ಥಹೀನ ವಿರೋಧ ತೋರುವ ನಿನ್ನೆ ಮೊನ್ನೆಯ ಸಹಕಾರ್ಯಕರ್ತರು ಹಾಗು ಯಾವಾಗಲೂ ನನಗೆ ಒಳ್ಳೆಯವರೇ ಆಗಿದ್ದವರು ಎಲ್ಲರನ್ನು ಒಂದೇ ತರ ಭಾವಿಸುವುದು ಹೇಗೆ? ನನ್ನ ಆಸ್ತಿಪಾಸ್ತಿಯನ್ನೆಲ್ಲ ಬಿಟ್ಟುಕೊಡುವುದು ಹೇಗೆ? ಶರೀರವೇ ಒಂದು ಆಸ್ತಿಯಲ್ಲವೆ? ಹೆಂಡತಿ ಮಕ್ಕಳು ಆಸ್ತಿಯುಲ್ಲವೆ? ನನ್ನಲ್ಲಿರುವ ಪುಸ್ತಕ ಸಂಗ್ರಹವನ್ನೇ ನಾಶಮಾಡಿಬಿಡಲೆ? ನನ್ನದು ಎಲ್ಲವನ್ನು ತ್ಯಜಿಸಿ ದೇವರನ್ನು ಅನುಸರಿಸಿ ಹೋಗಲೆ? ಅಂಬಿನಂತೆ ಬಂತು ಉತ್ತರ. ನನ್ನದೆಲ್ಲವನ್ನು ಬಿಡದೆ ಹೋದರೆ ಅವನನ್ನು ಅನುಸರಿಸುವುದು ಅಸಾಧ್ಯ. ನನ್ನ ಇಂಗ್ಲಿಷ್ ನ್ಯಾಯಶಾಸ್ತ್ರಾಭ್ಯಾಸ ನೆರವಿಗೆ ಬಂತು. ಧರ್ಮನ್ಯಾಯ ಪ್ರಮೇಯಗಳ ಬಗ್ಗೆ ಸ್ನೆಲ್ ಮಾಡಿ ಚರ್ಚೆ ನೆನಪಿಗೆ ಬಂತು.

> ಗೀತಾಬೋಧೆಯ ಬೆಳಕಿನಲ್ಲಿ, ಧರ್ಮದರ್ಶಿ ಪದದ ಅರ್ಥವ್ಯಾಪ್ತಿಯನ್ನು ನಿಚ್ಚಳವಾಗಿ ತಿಳಿದುಕೊಂಡೆ. ನ್ಯಾಯಶಾಸ್ತ್ರದ ಮೇಲೆ ನನ್ನ ಗೌರವ ಹೆಚ್ಚಿತು. ನನಗೆ ಅದು ಧರ್ಮದಲ್ಲಿ ಸಿಕ್ಕಿತ್ತು. ಮೋಕ್ಷಾಪೇಕ್ಷಿಗಳು ಧರ್ಮದರ್ಶಿ ಆಗಬೇಕು, ಭಾರಿ ಆಸ್ತಿಯ ಹತೋಟಿ ಹೊಂದಿದ್ದರೂ, ಒಂದು ಕ್ಷಣವನ್ನೂ ತನ್ನದು ಎಂದುಕೊಳ್ಳಬಾರದು. ಇದು ಗೀತೆಯ ಅಪರಿಗ್ರಹದ ಅರ್ಥ ಎಂದು ಹೊಳೆಯಿತು. ಅಪರಿಗ್ರಹ ಹಾಗೂ ಸಮಭಾವಕ್ಕೆ ಹೃದಯ ಪರಿವರ್ತನೆ, ಮನೋಭಾವದ ಪರಿವರ್ತನೆ ಅಗತ್ಯ ಎನ್ನುವುದು ನನಗೆ ಹಗಲಿನಷ್ಟು ನಿಚ್ಚಳವಾಯಿತು. ಆತ್ಮಕಥೆ, (೧೯೬೬) ಪು-೧೯೮. (ಸತ್ಯವಾಣಿ ೨೦೦೧ ಪುಟ. ೨೬೨)

ಗಾಂಧಿ ತನ್ನ ವಾದಗಳ ಮೂಲಕ ಉಪನಿಷತ್ತಿನ ಕಡೆಗೆ ಹೋಗುತ್ತಾರೆ. ಅವರ ಪ್ರಕಾರ ಸತ್ಯ: ಸದಾಚಾರ: ಅಹಿಂಸೆಯ ಸನಾತನವಾದುದು. ವಸಾಹತು ಪ್ರಭುತ್ವದ ವಿರುದ್ಧದ ಪರಿಕರವಾಗಿ ಸನಾತನತೆಯು ಗಾಂಧಿಗೆ ಮುಖ್ಯ. 'ಸನಾತನ'ಕ್ಕೆ ಒಂದು ಅರ್ಥವಿದೆ. ಅದಕ್ಕೆ ಚಾರಿತ್ರಿಕವಾಗಿ ಬಹುದೊಡ್ಡ ಹಿನ್ನೆಲೆಯಿದೆ. ಅವರು ಹೇಳುವ ಸನಾತನವೆನ್ನುವುದಕ್ಕೆ ಒಂದು ಸ್ಥಳವಿದೆ. ಬಹುದೊಡ್ಡ ಪರಂಪರೆಯಿದೆ. ಅದರ "ಸನಾತನ"ವೆನ್ನುವುದು ಅನೇಕ ರೀತಿಯ 'ಅನ್ವಯಗಳಿಗೆ' ಗುರಿಯಾಗಿದೆ. ಆನ್ವಯಿಕತೆಗಳಿಗೆ ವಿವಿಧ ಧೋರಣೆಗಳಿವೆ. ವಿವೇಕಾನಂದರು ಸನಾತನತೆಯನ್ನು ವ್ಯಾಖ್ಯಾನಿಸುವ ಕ್ರಮ ಗಾಂಧಿ ಸನಾತನತೆಯನ್ನು ವ್ಯಾಖ್ಯಾನಿಸುವ ಕ್ರಮಗಳು ಭಿನ್ನ.

> ಈಗಲಾದರೂ ನಮ್ಮ ಧರ್ಮವನ್ನು ಒತ್ತಿ ಹೇಳಿ. ಸಮಾಜಕ್ಕೆ ಸ್ವಾತಂತ್ರ್ಯವನ್ನು ಕೊಡುವುದರ ಮೂಲಕ ನಮ್ಮ ಇಷ್ಟಾರ್ಥ ಕ್ರಮೇಣ ಸಿದ್ಧಿಸಬೇಕು. ನಮ್ಮ ಸನಾತನ ಧರ್ಮವನ್ನು ಮುತ್ತಿಕೊಂಡಿರುವ ಪುರೋಹಿತರ ಅತ್ಯಾಚಾರ ಅನಾಚಾರಗಳೆಂಬ ಕಳೆಗಳನ್ನು ಕಿತ್ತೊಗೆದರೆ ಜಗತ್ತಿನಲ್ಲೆಲ್ಲ ಸರ್ವಶ್ರೇಷ್ಠವಾದ ಹಿಂದೂ ಧರ್ಮ ನಿಲ್ಲುವುದು. ನಾನು ಹೇಳುವುದು ತಿಳಿಯಿತೆ? ಹಿಂದೂ ಧರ್ಮದೊಂದಿಗೆ ಪಾಶ್ಚಾತ್ಯ ಸಮಾಜದ ರೀತಿಯನ್ನು ಕೂಡಿಸಬಲ್ಲಿರಾ? ಇದು ಸಾಧ್ಯ ಮತ್ತು ಆಗೇ ಆಗುತ್ತದೆ. ಎಂದು ನಾನು ನಂಬುತ್ತೇನೆ. ಇದಕ್ಕೆ ಒಂದೇ ಕಾರ್ಯೋಪಾಯ ಆವಶ್ಯಕ. ಅದೇನೆಂದರೆ, ಮಧ್ಯಭಾರತದಲ್ಲಿ ಉಪನಿವೇಶ ಒಂದನ್ನು ಸ್ಥಾಪಿಸಿ, ಅಲ್ಲಿ ನಮ್ಮ ಅಭಿಪ್ರಾಯಗಳಿಗನುಸಾರವಾಗಿ ಸ್ವಾತಂತ್ರ್ಯದಿಂದ ನಡೆದುಕೊಳ್ಳುವುದು. ಸ್ವಲ್ಪ ಮೊಸರನ್ನು ಹಾಲಿಗೆ ಹಾಕಿದರೆ ಹಾಲು ಮೊಸರಾಗುವುದು. ಅದರಂತೆಯೇ ಅಭಿಪ್ರಾಯಗಳು ಕ್ರಮೇಣ

ಬೇರೆ ಕಡೆಗೆ ಹರಡುವುವು. ಈ ನಡುವೆ ಒಂದು ಕೇಂದ್ರ ಸಂಘವನ್ನು ಸ್ಥಾಪಿಸಿ ನಂತರ ಇಂಡಿಯಾ ದೇಶದಲ್ಲಿ ನಾನಾ ಕಡೆಗೆ ಅದರ ಶಾಖೆಗಳು ಹರಡಬೇಕು. ಸದ್ಯಕ್ಕೆ ಧರ್ಮದ ತಳಹದಿಯ ಮೇಲೆ ಸಂಘ ನಿಲ್ಲಲಿ. ಈಗಲೇ ಯಾರೂ ಉಗ್ರ ಸಮಾಜ ಸುಧಾರಣೆಯನ್ನೂ ತರಬೇಡಿ. ಮೂಢ ಆಚಾರಗಳು ಮಾತ್ರ ಬರದಂತೆ ಮಾಡಿ. ಶ್ರೀಶಂಕರ, ಶ್ರೀರಾಮಾನುಜ, ಶ್ರೀಚೈತನ್ಯರೇ ಮುಂತಾದ ಪ್ರಾಚೀನ ಆಚಾರ್ಯರು, ವಿಧಿಸಿದಂತೆ ಮುಕ್ತಿ ಸರ್ವರಿಗೂ ಉಂಟು, ಸರ್ವಸಮತ್ವವುಂಟು, ಎಂಬ ಆಧಾರದ ಮೇಲೆ ಸಾಮಾಜಿಕ ಪುನರುಜ್ಜೀವನವನ್ನು ಕೈಕೊಳ್ಳಿ. (ಸ್ವಾಮಿ ಶಾಂಭವಾನಂದ ೧೯೫೮ ಸ್ವಾಮಿ ವಿವೇಕಾನಂದರ ಪತ್ರಮಾಲೆ ಪುಟ. ೧೭೯)

ನಾನು ಸನಾತನೀ ಹಿಂದೂ ಎಂಬುದನ್ನು ಒತ್ತಿ ಹೇಳಿದ್ದೇನೆ. ಆದರೂ ಹಿಂದೂತ್ವದ ಹೆಸರಿನಲ್ಲಿ ನಡೆದಿರುವ ಕೆಲ ಸಂಗತಿಗಳನ್ನು ನಾನು ಒಪ್ಪುವುದಿಲ್ಲ. ನಾನು ಸನಾತನಿಯಾಗದಿದ್ದರೆ ಆ ಹೆಸರಿನಿಂದ ಕರೆಸಿಕೊಳ್ಳುವ ಇಚ್ಛೆಯು ನನಗಿಲ್ಲ. ಆದುದರಿಂದ ಸನಾತನ ಹಿಂದೂ ಧರ್ಮದ ನನ್ನ ಅರ್ಥವನ್ನು ಸ್ಪಷ್ಟವಾಗಿ ಒಮ್ಮೆ ಹೇಳಿಬಿಡುವುದು ಅವಶ್ಯವಾಗಿದೆ.

'ಸನಾತನ' ಎಂಬ ಶಬ್ದವನ್ನು ಅದರ ಸ್ವಾಭಾವಿಕ ಅರ್ಥದಲ್ಲಿ ನಾನು ಉಪಯೋಗಿಸುತ್ತೇನೆ.

ನಾನು ಸನಾತನೀ ಹಿಂದೂ ಎಂದು ಕರೆದುಕೊಳ್ಳುವ ಕಾರಣಗಳು ಹೀಗಿವೆ.

1) ವೇದಗಳು, ಉಪನಿಷತ್ತುಗಳು, ಪುರಾಣಗಳು ಮತ್ತು ಹಿಂದೂ ಪವಿತ್ರ ಗ್ರಂಥಗಳೆಂದು ಕರೆಸಿಕೊಳ್ಳುವುವುಗಳಲ್ಲಿ ಅಲ್ಲದೆ ಅವತಾರಗಳಲ್ಲಿ ಪುನರ್ಜನ್ಮದಲ್ಲಿ ನನಗೆ ನಂಬಿಕೆಯಿದೆ.

2) ವೇದಪ್ರತಿಪಾದಿತವಾದ ವರ್ಣಾಶ್ರಮದಲ್ಲಿ ನನಗೆ ನಂಬಿಕೆಯಿದೆ. ಆದರೆ ಈಗಿನ ಸಾಮಾನ್ಯ ತಿಳಿವಳಿಕೆಯ ಹಾಗೂ ಅಪಾರ್ಥದಲ್ಲಿಲ್ಲ.

3) ಸಾಮಾನ್ಯ ಜನರು ತಿಳಿದುಕೊಂಡಿರುವುದಕ್ಕಿಂತಲೂ ಹೆಚ್ಚು ವ್ಯಾಪಕವಾದ ಅರ್ಥದಲ್ಲಿ ಗೋರಕ್ಷಣೆಯನ್ನು ನಾನು ನಂಬುತ್ತೇನೆ.

4) ಮೂರ್ತಿಪೂಜೆಯಲ್ಲಿ ನನಗೆ ನಂಬಿಕೆ ಇಲ್ಲದಿಲ್ಲ.

ವೇದಗಳ ಅಥವಾ ಇತರ ಆಗಮಗಳ ವಿಷಯವನ್ನು ಹೇಳುವಾಗ ನಾನು ಅವುಗಳು ದೈವಮೂಲಗಳೆಂದು ಹೇಳುವುದನ್ನು

ಬುದ್ಧಿಪೂರ್ವಕವಾಗಿಯೆ ಬಿಟ್ಟಿದ್ದೇನೆ. ಯಾಕೆಂದರೆ ವೇದಗಳು ಮಾತ್ರವೇ ದೈವಮೂಲವಾದವುಗಳೆಂದು ನಾನು ನಂಬುವುದಿಲ್ಲ. ಬೈಬಲ್, ಕೊರಾನ್, ರ್ಝೆಂದ್ ಅವೆಸ್ತಾ ಇವುಗಳಾದರೂ ವೇದಗಳಂತೆಯೇ ದೈವೀಸ್ಫೂರ್ತಿಯುಳ್ಳವುಗಳೆಂದು ನಾನು ನಂಬುತ್ತೇನೆ. ಹಿಂದೂ ಗ್ರಂಥಗಳಲ್ಲಿ ನನಗೆ ಶ್ರದ್ಧೆಯಿದೆಯೆಂದ ಮಾತ್ರಕ್ಕೆ ಅಲ್ಲಿ ಇರುವ ಪ್ರತಿಯೊಂದು ಶ್ಲೋಕವೂ ಪ್ರತಿಯೊಂದು ಶಬ್ದವೂ ದೈವೀಸ್ಫೂರ್ತಿಯುಳ್ಳವೆಂದು ನಾನು ನಂಬಬೇಕಾಗಿಲ್ಲ. ಅಲ್ಲದೆ ನನಗೆ ಈ ಅದ್ಭುತವಾದ ಗ್ರಂಥಗಳ ನೇರವಾದ ಪರಿಚಯವಿದೆ ಎಂದು ನಾನು ಹೇಳುವುದಿಲ್ಲ. ಆದರೆ ಪವಿತ್ರ ಗ್ರಂಥಗಳ ಸಾರಭೂತವಾದ ಸತ್ವಗಳನ್ನು ನಾನು ಬಲ್ಲೆನೆಂದೂ ನನಗೆ ಅನುಭವವೇದ್ಯವೆಂದೂ ಹೇಳಬಲ್ಲೆ. ಬುದ್ಧಿಗಾಗಲಿ ನೀತಿಗಾಗಲಿ ವಿರೋಧವಾಗಿ ಕಂಡು ಬರುವ ಅವುಗಳ ಅರ್ಥವು– ಆ ಅರ್ಥವು ಎಷ್ಟು ಪಾಂಡಿತ್ಯ ಪೂರ್ಣವಾಗಿದ್ದರೂ– ನನ್ನನ್ನು ಬಂಧಿಸಲಾರದು. ಅರ್ಥಾತ್ ಅದನ್ನು ನಾನು ಮನ್ನಿಸುವುದಿಲ್ಲ. ಈಗಿನ ಶಂಕರಾಚಾರ್ಯರುಗಳಾಗಲಿ, ಶಾಸ್ತ್ರಿಗಳಾಗಲೀ ಹಿಂದೂ ವೇದಾಗಮಗಳ ಸರಿಯಾದ ಅರ್ಥವನ್ನು ಹೇಳಬಲ್ಲೆವೆಂದು ಅವರೇ ಹೇಳಿಕೊಂಡರೆ ಅವರ ಅಧಿಕಾರವನ್ನು ನಾನು ಪ್ರಬಲವಾಗಿ ವಿರೋಧಿಸುತ್ತೇನೆ; ನಿರಾಕರಿಸುತ್ತೇನೆ. ತದ್ವಿರುದ್ಧ ಈ ಗ್ರಂಥಗಳ ಬಗೆಗೆ ನಮ್ಮಲ್ಲಿ ಈಗಿರುವ ಜ್ಞಾನವು ಬಹಳ ಅಸ್ತವ್ಯಸ್ತವಾಗಿದೆಯೆಂದು ನಾನು ತಿಳಿದಿದ್ದೇನೆ. ಅಹಿಂಸೆ, ಸತ್ಯ, ಬ್ರಹ್ಮಚರ್ಯೆಗಳಲ್ಲಿ ಪರಿಪೂರ್ಣನಾಗದವನಿಗೆ ಮತ್ತು ಸಂಗ್ರಹ ಬುದ್ಧಿಯನ್ನು ಸಂಪೂರ್ಣ ತ್ಯಜಿಸಿದವನಿಗೆ ಶಾಸ್ತ್ರಗಳ ನಿಜವಾದ ಅರ್ಥವು ತಿಳಿಯುವುದಿಲ್ಲೆಂಬ ಹಿಂದೂ ಸೂತ್ರದಲ್ಲಿ ನನ್ನ ನೈಸರ್ಗಿಕ ವಿಶ್ವಾಸವಿದೆ. ಈ ಯುಗದಲ್ಲಿ ಕೋಟ್ಯಾಂತರ ಜನರಿಗೆ ಗುರುಗಳೇ ದೊರೆಯುವುದಿಲ್ಲ. ಯಾಕೆಂದರೆ, ಪರಿಪೂರ್ಣ ಪಾವಿತ್ರ್ಯ ಮತ್ತು ಪರಿಪೂರ್ಣ ಪಾಂಡಿತ್ಯ ಒಂದೆಡೆಯಲ್ಲಿ ದೊರೆಯುವುದೇ ದುರ್ಲಭ. ಆದರೆ ತನ್ನ ಧರ್ಮದ ಸತ್ಯವನ್ನು ತಿಳಿದುಕೊಳ್ಳುವುದರಲ್ಲಿ ಯಾವನೂ ನಿರಾಶನಾಗಬಾರದು. ಯಾಕೆಂದರೆ ಪ್ರತಿಯೊಂದು ಧರ್ಮದ ಮೂಲತತ್ವಗಳು ಬದಲಾವಣೆ ಹೊಂದದಿರುವಂತೆ ಹಿಂದೂ ಧರ್ಮದ ಮೂಲತತ್ವಗಳೂ ಬದಲಾವಣೆ ಹೊಂದದವಾಗಿವೆ. ಸುಲಭವಾಗಿ ತಿಳಿಯುವಂಥವು; ಆದರೆ ಅವು ಪ್ರತಿಯೊಬ್ಬ ಹಿಂದೂವು ದೇವರಲ್ಲಿ, ಅವನ ಏಕತ್ವದಲ್ಲಿ, ಪುನರ್ಜನ್ಮದಲ್ಲಿ ಮತ್ತು ಮೋಕ್ಷದಲ್ಲಿ ನಂಬಿಕೆಯುಳ್ಳವನು. (ಸಮಾಜ

ಧರ್ಮ 1959 ಪುಟ. 51–52)

ಅದೇ ಸಂದರ್ಭದಲ್ಲಿ ವಿಶ್ವಾತ್ಮಕತೆ: ಧರ್ಮ; ನೈತಿಕತೆಯನ್ನು ಗಾಂಧಿ ವಿಶಿಷ್ಟ ಪರಿಭಾಷೆಯೆಂಬಂತೆ ಬಳಸಿದರು. ಈ ಕಾರಣದಿಂದಲೇ ಹೇಳಬಹುದಾದ ಅಂಶವೆಂದರೆ ಅವರ ಆಧುನಿಕ ರಾಜಕೀಯ ಮಿಮಾಂಸೆಯು ಸಂಧಿಕಾಲದಲ್ಲಿ ಹುಟ್ಟಿಕೊಂಡಿದೆ. ನಿರೂಪಣೆಯ ಕ್ರಮ; ಪ್ರಭುತ್ವದ ದೋರಣೆ ಅದು ಹೇರಿದ ಭಾಷೆ ಅವುಗಳ ಮೂಲಕ ನಡೆದ ವ್ಯವಹಾರಗಳು ಒಂದು ನಿರ್ಣಾಯಕ ಚೌಕಟ್ಟನ್ನು ವಿಧಿಸಿತು. "ನಿನ್ನ ಸ್ವಯಂ ಪ್ರಜ್ಞೆಯೆನ್ನುವುದು ಪರದೇಶಗಳಿಗಿಂತ ಬೇರೆ. ಆದರೆ ವಿದ್ಯಾವಂತನಾದ ನೀನು ಕೂಡಾ ಅನ್ಯ" ಎಂಬುದನ್ನು ವಸಾಹತು ಶಿಕ್ಷಣ ನೀತಿಯು ರೂಪಿಸಿತು. ವಸಾಹತುಶಾಹಿ ಪ್ರಭುತ್ವವು ಅದರ ರಾಜಕಾರಣಗಳು; ಅದರ ಮುಖೇನ ಬಂದ ಧೋರಣೆಗಳು ಒಂದು ಮಾದರಿಯವು. ಆದರೆ ಅದಕ್ಕೆ ಪರ್ಯಾಯವಾದ ಮಾರ್ಗವೊಂದನ್ನು ಗಾಂಧಿ ರೂಪಿಸಿಕೊಳ್ಳಬೇಕಾಗಿತ್ತು. ಆದುದರಿಂದಲೇ ತನ್ನ ಹೋರಾಟವನ್ನು ನೈತಿಕ ಹೋರಾಟವೆಂದು ಬಣ್ಣಿಸಿಕೊಂಡಿದ್ದರು. ಆಧುನಿಕ ಯುಗದ ಅಣ್ವಸ್ತ್ರದ ಎದುರು ತನ್ನದು ಅಹಿಂಸೆಯ ಅಸ್ತ್ರ ಎಂದು ಹೇಳಿಕೊಂಡರು.

> ಗಾಂಧೀಜಿ 1920ರ ದಶಕದಲ್ಲೇ ನುಡಿದ ಈ ಮೂರು ಮಾತುಗಳು ಅವರ ಚಿಂತನ ಕ್ರಮದ ಸಾರವನ್ನು ಸೂತ್ರೀಕರಿಸುತ್ತವೆ:
>
> "ಪಾಶ್ಚಾತ್ಯ ರಾಷ್ಟ್ರಗಳ ರೀತಿಯಲ್ಲಿ ಭಾರತವು ಒಟ್ಟಾರೆ ಉದ್ಯಮೀಕರಣದ ಮೋಹಕ್ಕೆ ಬಲೆಬೀಳದಂತೆ ಭಾರತವನ್ನು ದೇವರು ಸಂರಕ್ಷಿಸಲು. ಒಂದು ಚಿಕ್ಕ ದೇಶವಾದ ಇಂಗ್ಲೆಂಡಿನ ಆರ್ಥಿಕ ಸಾಮ್ರಾಜ್ಯಶಾಹೀ ಪ್ರವೃತ್ತಿ ಇಂದು. (1920ರ ದಶಕ) ಇಡೀ ಜಗತ್ತನ್ನೇ ಒತ್ತೆಯಿಟ್ಟುಕೊಂಡಿದೆ. 300 ಮಿಲಿಯ ಜನರಿರುವ ಭಾರತವು ಇದೇ ರೀತಿ ಸಾಮ್ರಾಜ್ಯಶಾಹೀ ಆರ್ಥಿಕ ಶೋಷಣೆ ಆರಂಭಿಸಿದರೆ, ಅದು ಜಗತ್ತನ್ನು ಸಂಪೂರ್ಣ ನಗ್ನಗೊಳಿಸೀತು.
>
> "ಬಯಕೆಗಳನ್ನು ಅವಶ್ಯಕತೆಗೆ ತಕ್ಕಷ್ಟೇ ಮಿತಿಗೊಳಿಸುವುದು ಕೈಗಾರಿಕಾ ಪೂರ್ವ ಸಮಾಜದ ಮೌಲ್ಯವಾಗಿತ್ತು. ಆದರೆ ಇದಕ್ಕೆ ವಿರುದ್ಧವಾಗಿ ಬಯಕೆಗಳನ್ನು ಒಟ್ಟಾರೆಯಾಗಿ ಪ್ರಚೋದಿಸಿ ಬೆಳೆಸುವುದೇ ಆಧುನಿಕ ನಾಗರಿಕತೆಯ ಪ್ರಮುಖ ಲಕ್ಷಣವಾಗಿದೆ."
>
> "ಮನುಷ್ಯ ತನ್ನ ಆಕ್ರಮಣಕಾರೀ ದುರಾಸೆಗಳನ್ನು ಸಿದ್ಧಿಸಿಕೊಳ್ಳಲು, ತನ್ನ ಪಾಶವೀ ಹಸವಿನ್ನು ತಣಿಸಿಕೊಳ್ಳಲು ಕಾಲದೇಶಗಳನ್ನೇ ನಾಶಗೊಳಿಸಿ, ಈ ಭೂಮಿಯ ಅಂಚಿನವರೆಗೂ ಅಪಾಯಕಾರಿಯಾಗಿ ಮುನ್ನುಗ್ಗುವುದನ್ನು ನಾವಿಂದು ಕಾಣುತ್ತಿದ್ದೇವೆ. ನಾನು ಅರ್ಥೈಸಿಕೊಂಡಂತೆ ಇದೇ ಇಂದಿನ ನಾಗರಿಕತೆಯ

ಉದ್ದೇಶವಾಗಿದ್ದರೆ, ನಾನು ಈ ನಾಗರಿಕತೆಯನ್ನು ಪೈಶಾಚಿಕ ನಾಗರಿಕತೆ ಎಂದು ಕರೆಯುತ್ತೇನೆ" ಎಂದು ಹತಾಶೆಯಿಂದ ನುಡಿದಿದ್ದರು. ಈ ಪೈಶಾಚಿಕ ನಾಗರಿಕತೆಗೆ ಬಹುತೇಕ ಕಾರಣವಾದ ಆಧುನಿಕ ವಿಜ್ಞಾನವನ್ನು ಸಹಸ್ರಬುಧೆ 'ಆಸುರೀ ವಿಜ್ಞಾನ' ಎಂದು ಕರೆಯುತ್ತಾರೆ.

ಗಾಂಧೀಜಿಗೆ ತಂತ್ರಜ್ಞಾನ ಪ್ರೇರಿತ ಮನುಷ್ಯನ ಮನೋಭಾವದಲ್ಲೇ ಬಲವಾಗಿ ಬೇರೂರಿದ ಕೊಳ್ಳುಬಾಕ ಸಂಸ್ಕೃತಿಯ ಪ್ರಳಯಾಂತಕ ಮುಖದ ಅರಿವಿತ್ತು. ಇಂದಿನ ದುರಾಸೆಯ ಸಂಸ್ಕೃತಿಯನ್ನು ಹುಟ್ಟು ಹಾಕುವಲ್ಲಿ ಪ್ರಧಾನ ಪಾತ್ರವಹಿಸಿದ ಆಧುನಿಕ ವಿಜ್ಞಾನದ ಬಗ್ಗೆ ತನಗಿದ್ದ ಅನುಮಾನಗಳಿಗೆ ಅವರಿಗೆ ವೈಜ್ಞಾನಿಕ ಪುರಾವೆ ಅಥವಾ ತರ್ಕದ ಬಲದ ಬೆಂಬಲ ಬೇಕಿರಲಿಲ್ಲ. ಅವರ ಮೇಲೆ ಅತ್ಯಂತ ಪ್ರಭಾವ ಬೀರಿದ "ತೇನ ತ್ಯಕ್ತೇನ ಭುಂಜೀಥಾಲಃ" (ಈ ಭೂಮಿ ಯಾರಿಗೂ ಸೇರಿದ್ದಲ್ಲ ನಿನ್ನ ಅಗತ್ಯಕ್ಕೆ ತಕ್ಕಷ್ಟೇ ಈ ಭೂಮಿಯ ಸಂಪತ್ತನ್ನು ಬಳಸಿಕೊಂಡು ತ್ಯಾಗದಿಂದ ಬದುಕು) ಎಂಬ ಯಾಜ್ಞವಲ್ಕ್ಯರ ನುಡಿಯು ಹಿನ್ನೆಲೆಯುಲ್ಲಿ ಸಾಮಾನ್ಯ ಜೀವನಾನುಭವದಿಂದ ಕಂಡುಕೊಂಡ ಒಳನೋಟ ಅದು. (ಪ್ರೊ. ಸುನಿಲ್ ಸಹಸ್ರಬುಧೆ 2003 ಆಧುನಿಕ ವಿಜ್ಞಾನಕ್ಕೆ ಗಾಂಧಿಯ ಸವಾಲು ಪುಟ. 96–97)

ಪ್ರಭುತ್ವವು ಚರಿತ್ರೆಯನ್ನು ಒಂದು ನಿರ್ದಿಷ್ಟ ಜಾಗದಲ್ಲಿ ನಿಲ್ಲಿಸಿಕೊಂಡು ಅದರ ಮುಖಾಂತರವಾಗಿ ಚರ್ಚೆಯನ್ನು ಪ್ರಾರಂಭಿಸಿತು. ಬ್ರಿಟೀಶ್ ಸರಕಾರವು ರೂಪಿಸಿದ ಚರಿತ್ರೆಯ ಪರಿಕಲ್ಪನೆಗೆ ಪಶ್ಚಿಮದ ಧೋರಣೆಯಿದೆ. ಅದಕ್ಕೆ ಪರ್ಯಾಯವಾದ ಚಾರಿತ್ರಿಕ ನಿಲುವನ್ನು ಬುದ್ಧಿಜೀವಿಗಳು ಒಪ್ಪಿಕೊಳ್ಳಲೇಬೇಕಾಯಿತು. ವಸಾಹತುಕಾಲದಲ್ಲಿ ನಿರ್ಮಾಣಗೊಂಡ ಚಾರಿತ್ರಿಕ ಅಧ್ಯಯನಗಳು ನಿರ್ದಿಷ್ಟ ಪ್ರಮೇಯಗಳನ್ನು ಹೊಂದಿದ್ದವು. ಚರಿತ್ರೆ; ಸಮಾಜ; ಮಾನವ ಜನಾಂಗ; ಬುಡಕಟ್ಟುಗಳ ಅಧ್ಯಯನ ಕ್ರಮವನ್ನು ರೂಪಿಸಿದ ವೈಚಾರಿಕ ಚೌಕಟ್ಟುಗಳಿಗೆ ಒಂದು ಪ್ರಮೇಯವಿದೆ. ಇದರ ಪ್ರಭಾವ ಏಕಾಂತವಾದಿ ಚಿಂತನೆಯ ಕ್ರಮದ ಬುದ್ಧಿಜೀವಿಗಳಲ್ಲಿಯೂ ಕಾಣಬಹುದು. ಬ್ರಿಟೀಶ್ ಆಡಳಿತಾತ್ಮಕ ಕ್ರಮ ಕಾನೂನು; ಮನುಷ್ಯ; ಚರಿತ್ರೆ; ಸಾಹಿತ್ಯದ ಅಧ್ಯಯನ ಕ್ರಮಗಳನ್ನು ಯಾಂತ್ರಿಕವಾಗಿ ರೂಪಿಸಿತು.ಗಾಂಧಿ ಇದನ್ನು ಕಟುವಾಗಿಯೇ ಟೀಕಿಸಿದರು.ಅವರಿಗೆ ಚರಿತ್ರೆಯು ಹೇಳುವ ಸಾಮಾನ್ಯವಾದ ತಾರ್ಕಿಕತೆಯು ಮುಖ್ಯವಾಗಿರಲಿಲ್ಲ.ಗಾಂಧಿ ಚರಿತ್ರೆಯ ಪರಿಕಲ್ಪನೆಯನ್ನೇ ಎರವಲು ಎಂದು ಟೀಕಿಸಿದ್ದು ಇಲ್ಲಿ ಉಲ್ಲೇಖನೀಯ.

> ಆಂಗ್ಲೇಯ ಚರಿತ್ರೆಕಾರರ ಗ್ರಂಥಗಳಿಂದ ನಾನು ಭಾರತದ ಚರಿತ್ರೆಯನ್ನು ಕಲಿತಿದ್ದೇನೆ. ನಮ್ಮ ತಾಯ್ನುಡಿಯಲ್ಲಾಗಲಿ ರಾಷ್ಟ್ರಭಾಷೆಯಾದ ಹಿಂದುಸ್ತಾನಿಯಲ್ಲಾಗಲೀ ನಾವು ಪುಸ್ತಕಗಳನ್ನು ಬರೆಯದೆ ಇಂಗ್ಲೀಷ್ ಭಾಷೆಯಲ್ಲೇ ಚರಿತ್ರೆಕಾರರ ಪುಸ್ತಕಗಳನ್ನೇ ಓದುತ್ತೇವೆ. ನಮ್ಮ ಇತಿಹಾಸವನ್ನು ಮೂಲದಿಂದ ನಾವು ಕಲಿಯುವುದು, ಇಂಗ್ಲಿಷರ ಬರಹಗಳಿಂದ. ಈ ರೀತಿ ಭಾರತೀಯ ಸಂಸ್ಕೃತಿಯ ಮೇಲೆ ಗೆಲುವನ್ನು ಸಾಧಿಸಲಾಗಿದೆ. (ಸತ್ಯವಾಣಿ ೨೦೦೧ ಪುಟ. ೬೦)

ಅದು ರೂಪಿಸಿದ ಶಿಕ್ಷಣ ಕ್ರಮವಂತೂ ಯಾಂತ್ರಿಕತೆಯ ಉತ್ಪನ್ನ. ಇದರಿಂದ ವಸಾಹತುಕಾಲದಲ್ಲಿ ಎರಡು ಜಗತ್ತುಗಳು ನಿರ್ಮಾಣಕೊಂಡವು:

ಅ) ಪಶ್ಚಿಮ ಮುಖಿ – ವಿದ್ಯಾವಂತವರ್ಗ. ಗಾಂಧಿಯವರು ಹೇಳಿರುವ ಮಾತು ಇಲ್ಲಿ ಗಮನಾರ್ಹ.

> ದೇಶದ ಸ್ವಾತಂತ್ರ್ಯಕ್ಕಾಗಿಯೆ ಬದುಕಿ, ಅದಕ್ಕಾಗಿಯೆ ಪ್ರಾಣ ತೆರಲು ಸಿದ್ಧರಾದ ನಿಜವಾದ ಜನಸೇವಕರನ್ನು ರೂಪಿಸುವುದೇ ವಿಶ್ವವಿದ್ಯಾನಿಲಯ ಶಿಕ್ಷಣದ ಗುರಿ ಆಗಬೇಕು. ಆದ್ದರಿಂದ ವಿಶ್ವವಿದ್ಯಾನಿಲಯ ಶಿಕ್ಷಣವನ್ನು ಮೂಲಶಿಕ್ಷಣಕ್ಕೆ ಹೊಂದಿಸಬೇಕು ಎನ್ನುವುದು ನನ್ನ ಅಭಿಪ್ರಾಯ. ಹರಿಜನ, ೨೫-೮-೪೬. ಪುಟ.೨೮೩ (ಸತ್ಯವಾಣಿ ೨೦೦೧ ಪುಟ. ೩೭೪)

ಆ) ಅಧಿಕೃತ ಸಾರ್ವಭೌಮತ್ವ ಹೊಂದಿದ ಅಧಿಕಾರ ಕೇಂದ್ರಿತ ಚಿಂತನೆಯನ್ನು ಒಡೆದಿರುವ ಕ್ರಮಗಳು.

> ಕಾಲೇಜು ಶಿಕ್ಷಣವನ್ನೂ ಪರಿವರ್ತನೆ ಮಾಡಿ ರಾಷ್ಟ್ರದ ಆವಶ್ಯಕತೆಗಳಿಗೆ ಅದನ್ನು ಹೊಂದಿಸಬಯಸುತ್ತೇನೆ ನಾನು. ಯಂತ್ರವಿದ್ಯೆ, ಉಳಿದ ನಿರ್ಮಾಣ ತಂತ್ರಗಳನ್ನು ಕಲಿತ ಇಂಜನಿಯರುಗಳಿಗೆ ಪದವಿಗಳಿರಲಿ. ಆ ಶಾಲೆಗಳನ್ನೆಲ್ಲ ಆ ವಿದ್ಯೆ ಯಾವ ಉದ್ಯೋಗಗಳಿಗೆ ಅಗತ್ಯವೋ ಅವರೇ ನಡೆಸಬೇಕು. ತಾತಾ ಕಂಪನಿಯವರು ಸರಕಾರದ ಮೇಲ್ವಿಚಾರಣೆಯಲ್ಲಿ ಇಂಜನಿಯರ್ ಶಿಕ್ಷಣ ಶಾಲೆಯನ್ನು ನಡೆಸಿಯಾರು; ತಮಗೆ ಬೇಕಾದಂಥ ಪದವೀಧರರನ್ನು ಗಿರಣಿಗಳ ಸಂಘ ತರಬೇತು ಮಾಡೀತು., ಉಳಿದ ಉದ್ಯೋಗಗಳಿಗೂ ಹೀಗೇ. ವಾಣಿಜ್ಯದವರು ತಮ್ಮ ಕಾಲೇಜನ್ನು ನಡೆಸಲಿ. ಇನ್ನುಳಿದುದು ಕಾವ್ಯ, ಸಾಹಿತ್ಯ, ಕಲೆ, ವೈದ್ಯ, ವ್ಯವಸಾಯ. ಎಷ್ಟೋ ಕಾವ್ಯ-ಸಾಹಿತ್ಯ-ಕಲೆಯ ಖಾಸಗಿ ಕಾಲೇಜುಗಳು ಈಗ ಸ್ವಾವಲಂಬಿಗಳಾಗಿವೆ. ಆದುದರಿಂದ ಸರಕಾರ ಅವನ್ನು ತಾನು

ನಡೆಸಬೇಕಾಗಿಲ್ಲ; ಕೈಬಿಟ್ಟಿತು. ಕೆಲವು ಪ್ರಮಾಣಿತ ಆಸ್ಪತ್ರೆಗಳಿಗೆ ವೈದ್ಯದ ಕಾಲೇಜುಗಳನ್ನು ಜೋಡಿಸಬೇಕು. ಆಸ್ಪತ್ರೆಗಳಲ್ಲಿ ಶ್ರೀಮಂತರಿಗೆ ಅಸ್ಥೆ ಹೆಚ್ಚು. ಆ ವೈದ್ಯದ ಕಾಲೇಜುಗಳನ್ನು ಅವರು ದಾನ ಕೊಟ್ಟು ಪೋಷಿಸಬಲ್ಲರು. ವ್ಯವಸಾಯದ ಕಾಲೇಜು, ಆ ಹೆಸರಿಗೆ ಯೋಗ್ಯವಾಗಬೇಕಾದರೆ, ಸ್ವಾವಲಂಬಿಯಾಗಿರಬೇಕು. ಕೆಲವರು ವ್ಯವಸಾಯ ಪದವೀಧರರ ದುಃಖಮಯ ಅನುಭವ ನನಗಿದೆ. ಅವರ ಜ್ಞಾನ ಬರೀ ಸಿಪ್ಪೆ. ಕ್ರಿಯಾತ್ಮಕ ಅನುಭವ ಇಲ್ಲವೇ ಇಲ್ಲ. ಈ ದೇಶಕ್ಕೆ ಅನುಗುಣವಾದ ಸ್ವಸಂಪೂರ್ಣ ವ್ಯವಸಾಯಕ್ಷೇತ್ರಗಳಲ್ಲಿ ಕಲಿತಿದ್ದರೆ, ಪದವೀಧರರಾದ ಮೇಲೆ ಇವರಿಗೆ ಸಂಬಳ ಕೊಡುವವರ ವೆಚ್ಚದಲ್ಲಿ ಇವರು ಅನುಭವಗಳಿಸಬೇಕಾದ ಪ್ರಮೇಯವಿರುತ್ತಿರಲಿಲ್ಲ. ಹರಿಜನ, ೩೧-೭-೩೭, ಪುಟ. ೧೯೭ (ಸತ್ಯವಾಣಿ ೨೦೦೧ ಪುಟ. ೩೭೪)

ನಾವು ಈಗ ನಕ್ಷೆಯ ಮೂಲಕ ಪಶ್ಚಿಮವನ್ನು ಗುರುತಿಸುತ್ತೇವೆ. (ಪಶ್ಚಿಮದವರು) ಆದರೆ ಗಾಂಧಿ ಬರೆಯುವಾಗ ಬ್ರಿಟೀಶ್ ಜಗತ್ತು-ಅಲ್ಲಿನವರು ಇಲ್ಲಿ ಬಂದು ಆಡಳಿತ ನಡೆಸುತ್ತಿರುವುದು ಕಣ್ಣಿಗೆ ಕಾಣಿಸುತ್ತಿತ್ತು. ಹಿಂದೆ ಯುರೋಪ್ ಏನಾಗಿತ್ತು? ಅದು ನಮ್ಮ ಮೇಲೆ ಯಾವ ರೀತಿಯ ಆಡಳಿತವನ್ನು ನಡೆಸಿತು. ಅದರ ಪರಿಣಾಮವನ್ನು ನಾವೀಗ ಹೇಗೆ ಎದುರಿಸುತ್ತಿದ್ದೇವೆ ಎಂಬುದು ನಮ್ಮ ಮುಂದಿರುವ ಈಗಿನ ಸವಾಲು.ಅದಕ್ಕೆ ಗಾಂಧಿಯ ವಿಚಾರಧಾರೆಗಳು ಮತ್ತೆ ಮತ್ತೆ ಉಪಯುಕ್ತವೆಂದು ಅನಿಸುತ್ತದೆ. ಗಾಂಧಿಗೆ ಪಶ್ಚಿಮದ ಅಧಿಕಾರವೆನ್ನುವುದು ಕಳೆದು ಹೋದ ಸಂಗತಿಯಲ್ಲ. ಅವರೆದುರು ಯುರೋಪಿಯನ್ ಸಂಸ್ಕೃತಿಯ ಪರಿಣಾಮಗಳು ಎದ್ದು ಕಾಣಿಸುತ್ತಿತ್ತು. ಗಾಂಧಿಗೆ ಸ್ವಾತಂತ್ರ್ಯ ಹೋರಾಟದ ಮಾದರಿಗಳ ಅರಿವಿತ್ತು. ಅವರಿಗೆ ಸ್ವಾತಂತ್ರ್ಯ ಹೋರಾಟವು ಪರಕೀಯವಲ್ಲ, ಅವರೆದುರು ಬ್ರಿಟೀಶರು ಇದ್ದರು; ಸ್ವಾತಂತ್ರ್ಯ ಹೋರಾಟ ಇತ್ತು. ನಡೆಯುತ್ತಿದ್ದ ಸಂಗತಿಗಳು. ಸಂಸ್ಕೃತಿಯು ಬದಲಾಗುತ್ತಿರುವುದನ್ನು ಅವರು ಕಣ್ಣಾರೆ ಕಂಡವರು. ಅನೇಕ ರಾಷ್ಟ್ರೀಯ ಆಂದೋಲನಕಾರರಿಗೆ ಸಂಸ್ಕೃತಿಯಲ್ಲಿ ಕಳೆದು ಹೋಗುತ್ತಿರುವ ಅಂಶಗಳು ಅವರ ಅನುಭವಕ್ಕೆ ಬಂದಿತ್ತು.

ನೈತಿಕ ಶಾಸನದ, ಮಾನವೀಯ ಮೌಲ್ಯಗಳ ಸರ್ವಸಮಾನತೆಯ ರಾಜ್ಯ ಇನ್ನೂ ವಿಕಾಸಗೊಳ್ಳಬೇಕಾಗಿದೆ. ಗಾಂಧೀಜಿಯ ಚಿಂತನೆ ಮತ್ತು ಪ್ರಯೋಗಗಳು ಭಾರತೀಯ ಸ್ವಾತಂತ್ರ್ಯ ಸಂಗ್ರಾಮದ ಕಾಲಕ್ಕೆ ಹೊಚ್ಚ ಹೊಸ 'ಪೂರ್ಣಸ್ವರಾಜ್ಯ'ದ ಈ ಕಲ್ಪನೆಯನ್ನು ಮೂಡಿಸಿದ್ದವು. ರಾಜಕೀಯ ಸ್ವಾತಂತ್ರ್ಯವನ್ನಷ್ಟೇ ಗಳಿಸಿಕೊಂಡ

ಭಾರತ ಈಗ ಗಾಂಧೀ ವಿಚಾರ ಮಾರ್ಗದಲ್ಲಿ ನಮ್ಮ ರಾಜನೀತಿಕ್ಷೇತ್ರವನ್ನು ಮುಂದಿನ ಹೆಜ್ಜೆಗೆ ಕೊಂಡೊಯ್ಯುವುದರಲ್ಲಿ ವಿಫಲವಾಗಿದೆ.

ಲೋಕಮಾನ್ಯ ತಿಲಕರು ಆಧ್ಯಾತ್ಮಿಕ ಸ್ಫೂರ್ತಿಯಿಂದ ಈ ನಾಡಿನ ವಿಕಾಸ ಕ್ರಮವನ್ನು ಗುರ್ತಿಸಿ 'ಸ್ವರಾಜ್ಯ ನಮ್ಮ ಜನ್ಮ ಸಿದ್ಧ ಹಕ್ಕು, ನಾವದನ್ನು ಪಡೆದೇ ತೀರುತ್ತೇವೆ' ಎಂದು ಘೋಷಿಸಿ ಸ್ವಾತಂತ್ರ್ಯ ಸಂಗ್ರಾಮಕ್ಕೆ ನಾಂದಿ ಹಾಡಿದರು. ಅದೇ ನಿಟ್ಟಿನಲ್ಲಿ ಮುಂದುವರಿದು ಗಾಂಧೀಜಿ 'ಸ್ವರಾಜ್ಯ' ಎಂಬ ಆದರ್ಶಕ್ಕೆ ಅತ್ಯಾಧುನಿಕ ಸಂದರ್ಭದಲ್ಲಿ ಸತ್ಯ ಮತ್ತು ಅಹಿಂಸಾನಿಷ್ಠೆಯ ಪ್ರಜಾಪ್ರಭುತ್ವ ತತ್ವಗಳನ್ನು ಅಳವಡಿಸಿಕೊಟ್ಟಿದ್ದಾರೆ. ತಮ್ಮ ಅದಮ್ಯ ಶ್ರದ್ಧೆಯನ್ನು ವ್ಯಕ್ತಮಾಡುತ್ತಾ ಅವರು ಹೀಗೆ ನುಡಿದಿದ್ದಾರೆ.

"Science of war leads one to dlctatorship pure and simple. Science of nonviolence can alone lead one to pure democracy"

(ಸಮರ ವಿಜ್ಞಾನ ಅನಿವಾರ್ಯವಾಗಿ ಸರ್ವಾಧಿಕಾರೀ ಪ್ರಭುತ್ವಕ್ಕೆ ದಾರಿ ಮಾಡಿಕೊಡುತ್ತದೆ. ಅಹಿಂಸಾ ವಿಜ್ಞಾನ ಮಾತ್ರವೇ ನಿಜವಾದ ನಿರ್ಮಲವಾದ ಪ್ರಜಾರಾಜ್ಯ ನಿರ್ಮಾಣ ಮಾಡಬಲ್ಲದು) (ಹರಿಜನ 15, 10, 1938) (ನನ್ನ ಕನಸಿನ ಸ್ವರಾಜ್ಯ ಪುಟ. ೬)

ಅವರು ರಾಜಕೀಯವಾಗಿ ಕೆಲವನ್ನು ಎದುರಿಸಲೇಬೇಕಾಗಿತ್ತು, ಅದು ಅವರ ರಾಜಕೀಯ ಆಯ್ಕೆ.

ಪಾಶ್ಚಿಮಾತ್ಯ ದೇಶಗಳಿಂದ ನಾವು ಕಲಿತು ಅರಗಿಸಿಕೊಳ್ಳಬೇಕಾದ ಅನೇಕ ವಿಷಯಗಳುಂಟು ಎಂದು ಒಪ್ಪಿಕೊಳ್ಳುವಷ್ಟು ನಮ್ರತೆ ನನ್ನಲ್ಲಿದೆ. ವಿವೇಕವೆನ್ನುವುದು ಒಂದೇ ರಾಷ್ಟ್ರದ ಅಥವಾ ಒಂದೇ ಜನಾಂಗದ ಸ್ವತ್ತೇನೂ ಅಲ್ಲ. ಆದರೆ ಏಷ್ಯಾಖಂಡದವರೆಲ್ಲ ಪಾಶ್ಚಿಮಾತ್ಯ ದೇಶಗಳಿಂದ ಬರುವುದನ್ನೆಲ್ಲ ಅನುಕರಣೆ ಮಾಡುವುದಕ್ಕೆ ಮಾತ್ರ ಅರ್ಹರೆಂದು ಮೊದಲೇ ನಿರ್ಧರಿಸಿ, ಅಲ್ಲಿಂದ ಬರುವುದನ್ನೆಲ್ಲ ವಿವೇಚನಾ ರಹಿತರಾಗಿ, ತಾರತಮ್ಯ ವಿವೇಕ ಶೂನ್ಯರಾಗಿ ಅನುಕರಿಸುವುದನ್ನು ವಿರೋಧಿಸುವುದೇ ನಾನು ಪಾಶ್ಚಾತ್ಯ ಸಂಸ್ಕೃತಿಯ ಪ್ರಭಾವಗಳನ್ನೆದುರಿಸಿ ನಿಂತಿರುವುದರ ಅರ್ಥ. ಆದರೆ ನನ್ನಲ್ಲಿ ಪೂರ್ಣ ನಂಬಿಕೆಯೊಂದಿದೆ, ಭಾರತಕ್ಕೆ ಸಾಕಷ್ಟು ತಾಳ್ಮೆಯಿದ್ದು, ಸಂಕಷ್ಟಗಳ ಅಗ್ನಿಕುಂಡದಲ್ಲಿ ಗಮಿಸುತ್ತಾ ತನ್ನ ಸಾಂಸ್ಕೃತಿಕ ನೆಲೆಗಟ್ಟುಗಳ ಮೇಲಿನ ನ್ಯಾಯುರಹಿತ

ಧಾಳಿಯನ್ನೆದುರಿಸಬೇಕು. ಎಷ್ಟೇ ಅಪೂರ್ಣವೆನಿಸಿದ್ದರೂ ನಮ್ಮ ಸನಾತನ ಸಂಸ್ಕೃತಿ ಪ್ರಾಚೀನ ಕಾಲದಿಂದ ಎಷ್ಟೋ ಧಾಳಿಗಳಿಗೆ ಮಣಿಯದೇ ನಿಂತು ಜೀವಂತವಾಗಿದೆ. ಈ ವಿಶ್ವದ ಶಾಂತಿಗೂ ಭದ್ರವಾದ ಪ್ರಗತಿ ಪಥಕ್ಕೂ ಭಾರತ ಈಗಲೂ ಶಾಶ್ವತ ಕಾಣಿಕೆಯನನು ನೀಡಬಲ್ಲದೆಂಬುದೇ ನನ್ನ ದೃಢವಿಶ್ವಾಸ.

(ನನ್ನ ಕನಸಿನ ಸ್ವರಾಜ್ಯ ಕೆ.ಎಸ್.ನಾರಾಯಣ ಸ್ವಾಮಿ ಪುಟ.31)

ಎರಡನೆಯದಾಗಿ ಗಾಂಧಿ ಮಾತಾಡುವ 'ಸನಾತನ' ಮುಂತಾದ ಧಾರ್ಮಿಕ ಪರಿಭಾಷೆಗಳು ಅವರೆದುರು ಇದ್ದ ತುರ್ತು ಕೂಡಾ ಆಗಿತ್ತು. ಮೂರನೆಯದಾಗಿ ಈ ಎಲ್ಲಾ ರಾಷ್ಟ್ರೀಯವಾದಿ ಚಿಂತಕರು ಪಶ್ಚಿಮದ ವೈಚಾರಿಕ ರೂಪಕ್ಕೆ ಪ್ರತಿಯಾಗಿ ಬೇರೆ ಮಾದರಿಗಳನ್ನು ಕಟ್ಟಿಕೊಡಬೇಕಾಗಿತ್ತು. ಗಾಂಧಿಯ ಚಿಂತನೆಯು ಪರಕೀಯವೆಂದು ಅನಿಸದಿರುವುದು ಈ ಕಾರಣಕ್ಕೆ. ಯುರೋಪಿಯನ್ನರನ್ನು ಸಂಪೂರ್ಣವಾಗಿ ಒಪ್ಪಿಕೊಳ್ಳುವುದು ಅಥವಾ ಸಂಪೂರ್ಣವಾಗಿ ತಿರಸ್ಕರಿಸುವುದು ಎಂಬ ತರ್ಕಗಳನ್ನು ಗಾಂಧಿ ನಮ್ಮ ಮುಂದೆ ಇಡಲಿಲ್ಲ.

ಗಾಂಧೀಜಿಯವರ ಕೃತಿಗಳನ್ನು ಓದಿದರೆ ಒಂದು ಸ್ಪಷ್ಟವಾಗುತ್ತದೆ. ಇಂಗ್ಲೀಷರನ್ನು ಗಾಂಧಿ ನೋಡಿದ್ದಾರೆ. ಅವರು ಬಿಳಿಯರು ಎಂದು ತಿಳಿದಿದ್ದರು. ಅವರು ಪರಕೀಯರೆಂದು ತಿಳಿದರೂ ಕೂಡಾ ಅವರ ಮಾತುಗಳನ್ನು ನಮ್ಮ ಸಂಪೂರ್ಣವಾಗಿ ತಿರಸ್ಕರಿಸಲಿಲ್ಲ. 'ಅವರು ಪರಕೀಯರು' 'ನಾವು ದೇಶಿಯರು' ಎಂಬ ಸರಳ ದ್ವಂದ್ವ ಗಾಂಧಿಗೆ ಮುಖ್ಯವಾಗಲಿಲ್ಲ. ಇದು ಕೇವಲ "ನಾವು" ಮತ್ತು "ಅವರು" ಎಂಬ ಸರಳ ಧೋರಣೆಯ ಅಥವಾ ನಾವು ದೇಶದೊಳಗಿನವರು ಅವರು ದೇಶದ ಹೊರಗಿನವರು ಎಂಬಂಥ ಧೋರಣೆ ಈ ಮಾದರಿಯ ಅವರ ಕೃತಿಗಳಲ್ಲಿ ಕಾಣಿಸುವುದಿಲ್ಲ. ವಸಾಹತುಶಾಹಿ ಅನುಭವವೆಂದರೆ ಅದು ಯುರೋಪ್ ಕೇಂದ್ರಿತ ಆಡಳಿತ ಮತ್ತು ಮಾರುಕಟ್ಟೆಯೆಂದು ಹೇಳುತ್ತೇವೆ ಆದರೆ ಅದು ಅಷ್ಟು ಮಾತ್ರವೇ ಆಗಿರಲಿಲ್ಲ. ಅದು ಮೇಲುನೋಟದ ಹೇಳಿಕೆ ಮಾತ್ರವಾಗುತ್ತದೆ. ವಸಾಹತು ಆಡಳಿತವು ಬೇರೆ ಬೇರೆ ರೀತಿಯ ಪ್ರಭಾವವನ್ನು ಉಂಟು ಮಾಡಿತು ಅದು ಸಂಸ್ಕೃತಿಯ ಮೇಲೆ ಬೇರೆ ಬೇರೆ ಪ್ರಭಾವಗಳನ್ನು ಬೀರಿತ್ತು. ಗಾಂಧಿ ಹೊಸ ರೀತಿಯ ಬರವಣಿಗೆಯ ಕ್ರಮವನ್ನು ರೂಪಿಸಿಕೊಂಡರು. ಈ ರೀತಿಯ ಗಾಂಧಿ ಚಿಂತನೆಯು ಸಂಪೂರ್ಣ ಪಶ್ಚಿಮದ ಅನುಕರಣೆಯಲ್ಲ ಹಾಗೂ ಅವರು ನಗರ ಕೇಂದ್ರಿತ ಬುದ್ಧಿಜೀವಿಗಳನ್ನು ಮಾತ್ರವೇ ಉದ್ದೇಶಿಸಿಕೊಂಡು ತಮ್ಮ ಚಿಂತನೆಯನ್ನು ಮಂಡಿಸಲಿಲ್ಲ.ಅವರ ಕಲ್ಪನೆಯಲ್ಲಿ

ಇದ್ದ ಓದುಗರು ಬೇರೆ. ಅವರು ಬರೆದಿರುವುದಕ್ಕೆ ಅನೇಕ ಕಾರಣಗಳಿವೆ. ಗಾಂಧಿ ನುಡಿಗಟ್ಟುಗಳು ಪ್ರಾರಂಭವಾಗಿರುವುದು ಈ ಕಾಲ ಘಟ್ಟದಲ್ಲಿ. ಹಾಗೆಯೇ ತಮ್ಮ ಚಿಂತನೆಗೆ ಹೊಸ ಮಾನ್ಯತೆಯನ್ನು ಗಾಂಧಿ ರೂಪಿಸಬೇಕಾಗಿತ್ತು, ಮತ್ತು ಹೊಸ ಮಾದರಿಗಳ ಬಗೆಗೆ ಅವರು ಮಾತಾಡಬೇಕಾಗಿತ್ತು. ತಮ್ಮ ಚಿಂತನೆ ಮತ್ತು ಅದಕ್ಕಿರುವ ಚಾರಿತ್ರಿಕ ಅಗತ್ಯಗಳ ಕುರಿತು ಅವರು ಮಾತಾಡಬೇಕಿತ್ತು. ಅವರ ಚಿಂತನೆಗೆ ಸಾಂಸ್ಕೃತಿಕ ಮತ್ತು ತಾತ್ವಿಕ ಕಾರಣಗಳಿವೆ. ಅವನ್ನು ಮರೆಯಬಾರದು. ಅವರ ಆಲೋಚನೆಯು ಒಂದರ್ಥದಲ್ಲಿ ಸಂಸ್ಕೃತಿಯ ಹುಡುಕಾಟಗಳಾಗಿವೆ. ಹಾಗೆಯೇ ಇವುಗಳು ನಿರ್ದಿಷ್ಟ ಮಾದರಿ ವಿಶ್ಲೇಷಣೆಗಳನ್ನು ಮಾಡಿವೆ. ಇವು ಚಾರಿತ್ರಿಕ ಅನುಭವಗಳಿಂದ ಹುಟ್ಟಿರುವುದೇ ವಿನಃ ಚಾರಿತ್ರಿಕ ಆಕಸ್ಮಿಕವೆಂದು ಕರೆಯುವುದು ಸಾಧ್ಯವಿಲ್ಲ. ಈ ದೃಷ್ಟಿಯಿಂದ ವಸಾಹತುಕಾಲದ ಸನ್ನಿವೇಶದಲ್ಲಿ ಗಾಂಧಿಯ ನಿಲುವು ನಿರ್ದಿಷ್ಟವಾದ ಪರಂಪರೆಯನ್ನು ಹುಟ್ಟುಹಾಕಿತು.

ವಸಾಹತು ಸನ್ನಿವೇಶವೇ ಈಗಾಗಲೇ ಹೇಳಿರುವಂತೆ ಹೊಸ ಸಂಸ್ಕೃತಿಯ ನಿರ್ಮಾಣಕ್ಕೆ ಅನುಗುಣವಾಗಿ ರೂಪುಗೊಂಡಿತು.ಇದರಲ್ಲಿ ಗಾಂಧಿಯ ಪಾತ್ರವು ಮಹತ್ವದ್ದು. ಸಿದ್ಧಾಂತಗಳ ದೃಷ್ಟಿಯಿಂದ ಹೇಳುವುದಾದರೆ ಪ್ರತಿರೋಧ ಮತ್ತು ಆತ್ಮ ಕೇಂದ್ರಿತ ಶಕ್ತಿಗಳು ಗಾಂಧಿಗೆ ಮುಖ್ಯವಾದುವು. ಪಶ್ಚಿಮದ ಬಹು ಮುಖ್ಯ ನಡವಳಿಕೆಯೆಂದರೆ ಎಲ್ಲವನ್ನು ಚಾರಿತ್ರಿಕಗೊಳಿಸುವುದು. ಮತ್ತು ಚಾರಿತ್ರಿಕ, ಸಾಂಸ್ಕೃತಿಕ ನಿರೂಪಣೆಗಳನ್ನು ಬೇರೆ ಮಾಡುವುದು. ಇದಕ್ಕೆ ಅನುಗುಣವಾಗಿಯೇ ವಸಾಹತುಕಾಲದ ಪ್ರಭುತ್ವವು ಜನರ ಬಗ್ಗೆ ವ್ಯಾಖ್ಯಾನ ನೀಡಲು ಪ್ರಯತ್ನಿಸಿತು. ವಸಾಹತುಕಾಲದಲ್ಲಿಯೇ ಭಾರತದಲ್ಲಿ ನಾಗರಿಕ ಸಂಹಿತೆಯ ಸೂತ್ರಗಳು ಪ್ರಾರಂಭವಾದವು. ಹಾಗೆಯೇ ವಸಾಹತು ಕಾಲದಲ್ಲಿ ಸಂಸ್ಕೃತಿಯ ವ್ಯಾಖ್ಯೆಗಳು ಪ್ರಾರಂಭವಾದವು. ಈ ದೃಷ್ಟಿಯಿಂದ ವಸಾಹತುಕಾಲದ ಚಿಂತಕರು ಅನೇಕ ರೀತಿಯ ತಾತ್ವಿಕ ಪ್ರಶ್ನೆಗಳನ್ನು ಎದುರಿಸಬೇಕಾಯಿತು. ಅದು ಪ್ರದೇಶಕ್ಕೆ ಸಂಬಂಧಿಸಿದಂತೆ ಇದೆ, ರಾಷ್ಟ್ರೀಯತೆಗೆ ಸಂಬಂಧಿಸಿಕೊಂಡಿದೆ. ಅನೇಕ ಚಿಂತಕರು ವಸಾಹತುಶಾಹಿ ಅನುಭವವನ್ನು ಪ್ರದೇಶ; ಕಾಲ; ಅವಕಾಶಗಳೊಂದಿಗೆ ಅನುಸಂಧಾನ ಮಾಡಿದರು. ಇದು ಬಹುಮುಖ್ಯ ಪ್ರಕ್ರಿಯೆಯಾಯಿತು. ಗಾಂಧಿ ವಿಚಾರಧಾರೆಯು, ಅವರ ಬರಹಗಳು.

ಸಾಮಾನ್ಯ ಕಾರಣಗಳಿಗಾಗಿ ಹುಟ್ಟಿಲ್ಲ. ಈ ಎಲ್ಲಾ ಚಿಂತನೆಗಳು ನೇರವಾಗಿ ವಸಾಹತು ಧೋರಣೆಗಳನ್ನು ಪ್ರಶ್ನಿಸಿವೆ. ಹಾಗೂ ಅವುಗಳು ಎತ್ತಿಕೊಂಡ ಪ್ರಶ್ನೆಗಳು ಬಹುದೊಡ್ಡವು. ಗಾಂಧಿಯವರ ಬರಹಗಳು ರೂಪಾತ್ಮಕವಲ್ಲ.

ಮೆಕಾಲೆ ಹೇಳಿದ್ದ: "ಇಂಡಿಯಾದ ಜನರಿಗೆ ಏನೂ ತಿಳಿದಿಲ್ಲ. ಅವರಿಗೆ ನಾವು ಕಲಿಸಬೇಕು." ಇದು ಆಗಾಗ ಪುನರಾವರ್ತಿತವಾಯಿತು. ಅವರು ರೂಪಿಸಿದ ಶಿಕ್ಷಣ ವ್ಯವಸ್ಥೆಯು ಅಂತರಾಳದಲ್ಲಿ ನಿಮಗೆ ನಾವು ಕಲಿಸಿದ್ದೇವೆ. ನಾವು ನಿಮಗೆ ಏನು ಕಲಿಸಿದ್ದೇವೆಯೋ ಅಷ್ಟು ಮಾತ್ರ ಕಲಿತುಕೊಳ್ಳಿ. ನಿಮ್ಮನ್ನು ಉದ್ಧರಿಸಲು ನಾವು ಬಂದಿದ್ದೇವೆ ನಿಮಗಾಗಿ ನಾವು ಇದ್ದೇವೆಯೇ ಹೊರತು ನಮಗಾಗಿ ನೀವಿಲ್ಲ ಎಂಬಂಥ ಧೋರಣೆಯು ವಸಾಹತು ಆಡಳಿತಕ್ಕೆ ಇತ್ತು. ಇದಕ್ಕೆ ತಕ್ಕಂತೆ ಜ್ಞಾನದ ಮೌಲ್ಯಗಳನ್ನು ನಿರ್ಣಯಿಸಲು ನಾವು ವಕ್ತಾರರು ನಾವು ನಿಮಗೆ ಜ್ಞಾನ ಕೊಡುತ್ತೇವೆ ಎಂದು ಪ್ರಭುತ್ವ ಹೇಳಿದರೆ ಆ ರೀತಿಯ ಜ್ಞಾನ ಮಾದರಿಯ ಹೊರಗೆ ನಿಂತುಕೊಂಡು ನಮ್ಮ ಸಂಸ್ಕೃತಿಯಿದು ಎಂದು ಆ ಕಾಲದ ಕೆಲವು ರಾಷ್ಟ್ರೀಯತಾವಾದಿಗಳು ನಿರೂಪಿಸಲು ಪ್ರಯತ್ನಿಸಿದರು. ಮೇಲು ನೋಟಕ್ಕೆ ಸಾಮಾನ್ಯರಿಗೆ ವಸಾಹತು ಜಗತ್ತು ರೂಪಿಸಿದ ಜ್ಞಾನರೂಪಗಳು ತಿಳಿದಿಲ್ಲ. ಅನೇಕರಿಗೆ ರಾಷ್ಟ್ರೀಯತೆಯ ಹೋರಾಟವೇ ತಿಳಿದಿಲ್ಲ. ಗಾಂಧಿಗೆ– ಈ ಸಂಗತಿಗಳ ಅರಿವಿತ್ತು.

ಗಾಂಧಿ ತಮ್ಮ ವರ್ತಮಾನಕ್ಕೆ ಅನುಸಾರವಾಗಿ ಬರೆದರು. ಅವರ ಬರಹಗಳು ಎಂದರೆ ಅದು ವಸಾಹತುಶಾಹಿ ಅನುಭವಕ್ಕೆ ನೀಡಿದ ಪ್ರತಿಕ್ರಿಯೆಗಳು. ಈ ಪ್ರತಿಕ್ರಿಯೆಗಳು ಏಕರೂಪಿಯಲ್ಲ. ಏಕರೂಪಿಯೂ ಆಗಬೇಕಾಗಿಲ್ಲ. ಅದು ಅನೇಕ ರೀತಿಯ ವೈರುದ್ಧ್ಯಗಳಿಂದ ಕೂಡಿಕೊಂಡಿತ್ತು. ಸಂಸ್ಕೃತಿಯ ಕುರಿತ ಅವರ ಚಿಂತನೆಗಳಲ್ಲಿ ಎರಡೆರಡು ಮಾದರಿಗಳು ಕಾಣಿಸಿಕೊಂಡವು. ಒಂದು ಶುದ್ಧ ತಾತ್ವಿಕ. .ಇದು ತತ್ವಜ್ಞಾನದ ಬರಹದಿಂದ ಪ್ರಾರಂಭವಾಗುತ್ತದೆ. ಗಾಂಧಿಯ ಸತ್ಯ,ಅಹಿಂಸೆ, ಕರ್ಮದ ಪರಿಕಲ್ಪನೆಗಳು ಈ ರೀತಿಯವು.

> ನಾನೂ ಸನ್ಯಾಸ ಮಾರ್ಗದಲ್ಲಿ ಶ್ರದ್ಧೆಯುಳ್ಳವನಾಗಿದ್ದೇನೆ. ಆದರೆ ಅದನ್ನು ಕರ್ಮದಲ್ಲಿಯೂ, ಕರ್ಮದ ಮೂಲಕವೂ ಸಾಧಿಸಬೇಕೆಂದು ನಂಬುತ್ತೇನೆ. ದೇಹ ಧಾರಿಗಳಾಗಿರುವವರೆಗೂ ಕರ್ಮ ಅನಿವಾರ್ಯ. ಜೀವನ ಚಕ್ರವೂ ಕರ್ಮವಿಲ್ಲದೆ ಒಂದು ಕ್ಷಣ ಪರ್ಯಂತವೂ ನಡೆಯಲಾರದು. ಆದುದರಿಂದ ಈ ಸಂದರ್ಭದಲ್ಲಿ ಸನ್ಯಾಸಕ್ಕೆ ಒಂದೇ ಅರ್ಥವನ್ನು ಕೊಡಲು ಸಾಧ್ಯ: ದೇಹದಿಂದ ಕರ್ಮ ಮಾಡುವಾಗಲೂ ಕರ್ಮದಿಂದ ನಾವು ಅಲಿಪ್ತರಾಗಿರಬೇಕು. ಸನ್ಯಾಸ ಮಾರ್ಗದಲ್ಲಿ ನಡೆಯುವವನು, ಕರ್ಮವನ್ನು ಬಿಟ್ಟು ಬಿಡದೆ, ತಾನು ಕೇವಲ ನಿಮಿತ್ತ ಮಾತ್ರನೆಂದು ಅನಾಸಕ್ತನಾಗಿ ಸರ್ವಭೂಹಿತಕ್ಕಾಗಿ ಕರ್ಮ ಮಾಡಬೇಕು. ಈ ರೀತಿ ಮಾಡಿದರೆ, ಬೇಸಾಯವಾಗಲಿ, ನೂಲುವುದಾಗಲಿ – ಯಾವ

ಕೆಲಸವನ್ನೇ ಆಗಲಿ – ಸನ್ಯಾಸ ಮಾರ್ಗದಿಂದ ಸರಿಯದೆ, ನಿಸ್ವಾರ್ಥ ಸೇವಾಬುದ್ಧಿಯಿಂದ – ಅಹಂಕಾರ – ಆಸಕ್ತಿಗಳನ್ನು ತೊರೆದು ಈ ಕರ್ಮಗಳನ್ನು ಮಾಡುತ್ತ ಹೋಗಬಹುದು. ಈ ಬಗೆಯ ಸನ್ಯಾಸ ಮಾರ್ಗದಲ್ಲಿ ನಂಬಿಕೆಯನ್ನುಳ್ಳ ನನ್ನಂತಹವರು ಅಹಿಂಸಾ ತತ್ತ್ವವು ನಾವು ಈ ದೇಹದಲ್ಲಿರುವಾಗಲೇ ಹೇಗೆ ಅನ್ವಯವಾಗಬಹುದೆಂಬುದನ್ನೂ, ನಿತ್ಯಜೀವನದಲ್ಲಿ ಈ ತತ್ತ್ವದ ಪ್ರಯೋಗವನ್ನು ಹೇಗೆ ಮಾಡಬಹುದೆಂದೂ ನಮ್ಮ ಮಟ್ಟಿಗೆ ನಾವೇ ಕಂಡುಹಿಡಿಯಬೇಕಾಗುವುದು. ಒಂದು ಧರ್ಮದ ಗುಣವೇನೆಂದರೆ ಸರ್ವರಿಗೂ ಸರ್ವಕಾಲಕ್ಕೂ ಅದು ಅನ್ವಯವಾಗುವುದೆಂಬುದೇ. ಅದು ಕೆಲವರ ಸೊತ್ತಲ್ಲ, ಎಲ್ಲರೂ ಅದರ ಆಚರಣೆಯಿಂದ ಕೃತಾರ್ಥರಾಗಬಹುದು. ಸತ್ಯ ಮತ್ತು ಅಹಿಂಸೆಗಳು ಪ್ರಪಂಚಕ್ಕೆಲ್ಲ ಅನ್ವಯವಾಗುವ ಇಂತಹ ಸಾಮಾನ ಧರ್ಮ ಎಂದು ನನ್ನ ದೃಢವಾದ ನಂಬಿಕೆ. ಹೀಗಿರುವುದರಿಂದಲೇ ಇದರ ಸಂಶೋಧನೆಗಾಗಿ ನನ್ನ ಜೀವನವನ್ನು ಮುಡುಪಾಗಿಡುವುದರಲ್ಲಿ ನನಗೆ ಅಮಿತಾನಂದ. ಇತರರಿಗೂ ಈ ಪ್ರವೃತ್ತಿ ಉಂಟಾಗಿ ಈ ಆನಂದದಲ್ಲಿ ಅವರೂ ಭಾಗಿಗಳಾಗಬೇಕೆಂದು ನನ್ನ ಹಾರೈಕೆ. (ಯಂಗ್ ಇಂಡಿಯಾ, 25.10.1928) (ಸತ್ಯ–ಅಹಿಂಸೆ 1958 ಮೋ. ಕ. ಗಾಂಧಿ ಪುಟ. 119)

ಇನ್ನೊಂದು ಶುದ್ಧ ತತ್ವಜ್ಞಾನವಲ್ಲದ ಮಾದರಿ. ಇವುಗಳು ಬೇರೆ ಬೇರೆ ವಿಷಯಗಳ ಕುರಿತಂಥ ಚರ್ಚೆಗಳು ಗೋಧಿಯ ಆಮದು; ಸುಂಕದ ಪದ್ಧತಿ; ಉಪ್ಪಿನತೆರಿಗೆ; ರಾಷ್ಟ್ರೀಯತೆ; ಸ್ವದೇಶಾಭಿಮಾನ, ಸ್ವರಾಜ್ಯ–ಹೀಗೆ. ಇವೆಲ್ಲವೂ ವಸಾಹತು ಕಾಲದ ಪ್ರಮುಖ ಸಮಸ್ಯೆಗಳೇ ಆಗಿದ್ದವು ಸ್ವದೇಶದ ಬಗೆಗಿನ ಹೋರಾಟ ಯಾವ ಮಾದರಿಯದಾಗಬೇಕು; ನಮ್ಮ ಸಮಸ್ಯೆಯೇನು? ಸಂಸ್ಕೃತಿಯ ಅನನ್ಯತೆಯು ಯಾವ ಬಗೆಯದು.? ರಾಷ್ಟ್ರ ಯಾವ ರೀತಿಯಲ್ಲಿರಬೇಕು? ಇವೆಲ್ಲವೂ ಹೊಸ ಹೊಸ ಮಾದರಿಯ ಪ್ರಶ್ನೆಗಳಾಗಿದ್ದವು. ಯುರೋಪಿನ ಕೇಂದ್ರಿತ ಅಧಿಕಾರ ಮತ್ತು ಅದರ ಅಧಿಕಾರ ವ್ಯಾಪ್ತಿಗೆ ಒಳಪಟ್ಟ ಸಮಾಜಗಳ ನಡುವಣ ಸಂಘರ್ಷದಲ್ಲಿ ಈ ಗಾಂಧಿ ಪರ ಮತ್ತು ವಿರೋಧಗಳ ನಡುವೆ ವಾಸಿಸಬೇಕಾಯಿತು. ಆಗಿನ ಚಿಂತಕರಲ್ಲಿ ಪರ ವಿರೋಧದ ದ್ವಂದ್ವವಿತ್ತು. ಬ್ರಿಟೀಶರ ಪರವಾದ ನಿಲುವು; ಬ್ರಿಟೀಶರ ವಿರುದ್ಧದ ನಿಲುವು ಎಂಬ ಸರಳ ವರ್ಗೀಕರಣ ಮಾಡುವಂತಿರಲಿಲ್ಲ. ಅಥವಾ ನಿರ್ವಸಹಾತೀಕರಣದ ಪ್ರಶ್ನೆಯನ್ನು ಕೂಡಾ ಒಂದೇ ತಾತ್ವಿಕತೆಯೆಂದು ವಿವರಿಸುವಂತಿಲ್ಲ. ವಸಾಹತು ಸಂದರ್ಭದಲ್ಲಿ ಬಂದ ಮಿಶನರಿಗಳು ನಡೆಸಿರುವ ಕೆಲಸ ಕಾರ್ಯಗಳು

ಒಂದು ಗುರಿಯನ್ನು ಇಟ್ಟುಕೊಂಡಿದ್ದವು. ಶಿಕ್ಷಣ, ಸಮಾಜಸೇವೆ, ಮತಾಂತರಗಳು ಚರ್ಚ್‌ಗಳ ಕೇಂದ್ರ ಗಮನದಲ್ಲಿದ್ದವು. ಇಲ್ಲಿ ಎರಡು ಅಂಶಗಳಿವೆ: ಒಂದು ಕೆಳಜಾತಿಯವರಿಗೆ ಇದ್ದ ಸ್ಥಾನದ ಸಮಸ್ಯೆ; ಇನ್ನೊಂದು ಬಡತನ. ಆದರೆ ಮತಾಂತರ ಹೊಂದಿದವರು ತುಂಬಾ ಒಳ್ಳೆಯ ಸ್ಥಾನಮಾನ ಪಡೆದಿರಲಿಲ್ಲವೆಂಬುದು ಗಮನಾರ್ಹ. ಮಿಶನರಿಗಳು ಈ ಮೂಲಕ ತಮ್ಮ ಹಿಡಿತದೊಳಗೆ ಸಾಮಾನ್ಯರನ್ನು ನಿಯಂತ್ರಿಸುವ ಪ್ರಯತ್ನ ಮಾಡಿದರು. ಆದರೆ ಈ ಕೆಲಸ ಕಾರ್ಯಗಳು ಅಧಿಕಾರದಿಂದ ಅಥವಾ ಬಲಾತ್ಕಾರದಿಂದ ಉಂಟಾದ ಪ್ರಕ್ರಿಯೆಯಲ್ಲ. ಹಾಗೆಯೇ ಆದರೆ ಅವರು ಹೇರಿರುವ ಮೌಲ್ಯಗಳು ಏಕ ಮುಖಿಯಾಗಿರಲಿಲ್ಲ. ಗಾಂಧಿ ವಿಚಾರಧಾರೆಯು ಇದರಲ್ಲಿ ಹುಟ್ಟು ಪಡೆದು ಕೊಂಡಿದೆ.

ಇಂಗ್ಲೀಷ್ ಮಾದರಿಯ ಶಿಕ್ಷಣ ಕ್ರಮ ರಾಜಕೀಯ ಮತ್ತು ಸಾಂಸ್ಕೃತಿಕ ಲಕ್ಷಣಗಳಿವೆ. ಬ್ರಿಟೀಶ ಅಧಿಕಾರಿಗಳು ಒಂದಡೆಯಿಂದ ಮಿಶನರಿಗಳನ್ನು ಪ್ರೋತ್ಸಾಹಿಸಿದರು ಮತ್ತು ಕಡೆಯಿಂದ ಕಾನೂನು ಮತ್ತು ನಿಯಮಗಳನ್ನು (ದಂಡಸಂಹಿತೆ=Law and order) ರೂಪಿದರು. ಅದೇ ರೀತಿಯಲ್ಲಿ ಬ್ರಿಟೀಶ್ ಆಡಳಿತಗಾರರಿಗೆ ಭಾರತೀಯ ಅರಸೊತ್ತಿಗೆಯ ಪ್ರಭುತ್ವದ ಬಗೆಗೆ ಸಣ್ಣ ಭಯವು ಇತ್ತು. ಇದನ್ನು ಅನೇಕ ಗವರ್ನರ್ ಜನರಲ್‌ಗಳು ಮತ್ತು ವೈಸರಾಯ್‌ಗಳು ಪದೇ ಪದೇ ಚರ್ಚಿಸಿದ್ದಾರೆ. ಇಂಗ್ಲೀಷ್ ಆಡಳಿತವು ಹೇರಿರುವ ಶಿಕ್ಷಣ ಪದ್ಧತಿಯು ಕೂಡಾ ಕೊಂಚ ಮಟ್ಟಿಗೆ ಉದರವಾದ ಧೋರಣೆಯನ್ನು ಹೊಂದಿದ್ದವು. ಈ ಶಿಕ್ಷಣದ ಜೊತೆಗೆ ಬಂದ ಮುಖ್ಯ ಅಂಶವೆಂದರೆ ನಾಗರಿಕತೆ ಮತ್ತು ಮಾನವೀಯತೆ. ಇವುಗಳೇ ನಿಜವಾದ ಪ್ರಮುಖ ಮೌಲ್ಯಗಳೆಂದು ಘೋಷಿಸಲಾಯಿತು. ಇಂಥ ಸಂದರ್ಭದಲ್ಲಿ ಉಂಟಾಗುವ ಪ್ರಮುಖ ಅಂಶವೆಂದರೆ ಮಿಶ್ರಸಂಸ್ಕೃತಿ. ಈ ಹಿನ್ನೆಲೆಯಿಂದ ಗಾಂಧಿ ಹೇಳುವ ಸಾಂಸ್ಕೃತಿಕ ಪಾವಿತ್ರ್ಯದ ಪ್ರಶ್ನೆಗಳು ಮಹತ್ವದ್ದು. ಇಂಗ್ಲೀಷ್ ಆಗ ಹೇಗೆ ಆಡಳಿತ ಭಾಷೆಯಾಯಿತೋ ಅದೇ ರೀತಿಯಲ್ಲಿ ಅದು ನಾಗರಿಕ ಸಂಹಿತೆಯೂ ಆಯಿತು. ಆಗಲೇ ಗಾಂಧಿ ಹೇಳಿದ್ದು ಇಂಗ್ಲಿಶರ ನಾಗರಿಕ ವ್ಯಾಖ್ಯೆಗಳು ಸರಿಯಲ್ಲ.

> ನಾಗರಿಕತೆಯ ವಾಸ್ತವಿಕ ಅರ್ಥ ಅವಶ್ಯಕ ವಸ್ತುಗಳನ್ನು ಬಹಳ ಮಾಡಿಕೊಳ್ಳುವುದಲ್ಲ. ಸಾವಧಾನವಾಗಿ ಯೋಚಿಸಿ ಸ್ವಂತ ಇಚ್ಛೆಯಿಂದ ಅವನ್ನು ಕಡಮೆ ಮಾಡಿಕೊಳ್ಳುವುದು. ಇದರಿಂದ ಮಾತ್ರ ಯಥಾರ್ಥವಾದ ಸೌಖ್ಯ ತೃಪ್ತಿಗಳ ಪ್ರಚೋದನೆ ಹಾಗೂ ಸೇವಾಸಾಮರ್ಥ್ಯದ ವೃದ್ಧಿ. (ಮಂಗಳ ಪ್ರಭಾತ (ಧರ್ಮ ಮತ್ತು ನೀತಿ ಪುಟ-೧೨೯)

ಮತ್ತೊಂದು ಮಾತು ಹೇಳಬಹುದು: ವಸಾಹತು ಕಾಲಘಟ್ಟದಲ್ಲಿ ಕೆಲಸ ಮಾಡುತ್ತಿದ್ದ ಬುದ್ಧಿಜೀವಿಗಳು ಒಂದು ಕಡೆಯಿಂದ ಯುರೋಪಿಯನ್ ನೈತಿಕ ಸಿದ್ಧಾಂತಗಳನ್ನು ಅಲ್ಲಿನ ನಾಗರಿಕತೆಯ ಬೆಳವಣಿಗೆಯನ್ನು ಅರ್ಥ ಮಾಡಿಕೊಂಡಿದ್ದರು. ಯುರೋಪಿಯನ್ ಸಿದ್ಧಾಂತಗಳಿಗೆ ಅವುಗಳದೇ ಅನ್ನಬಹುದಾದ ಚಾರಿತ್ರಿಕ ಹಿನ್ನೆಲೆಗಳಿವೆ. ಸಾಂಸ್ಕೃತಿಕ ಪರಂಪರೆಗಳಿವೆ. ವಸಾಹತು ದೇಶಗಳಲ್ಲಿ ಯುರೋಪಿಯನ್ ನೈತಿಕ ಕೃತಿಗಳು ವಸಾಹತು ಪಠ್ಯಗಳಾಗಿ ಪರಿವರ್ತನೆ ಹೊಂದಿದವು. ರಾಜಕೀಯ ಸಾಂಸ್ಕೃತಿಕ ಏಕರೂಪಿಯಾದ ಚಿಂತನೆಯ ಕ್ರಮವನ್ನು ಯುರೋಪ್ ಹೇರಿರುವುದು ಮಾತ್ರವಲ್ಲ. ಯಾರು ಅದನ್ನು ಅನುಕರಣೆ ಮಾಡುತ್ತಾರೋ ಅಂಥವರನ್ನು ಒಂದು ಹಂತದವರೆಗೆ ಒಪ್ಪಿತು ಕೂಡಾ. ವಸಾಹತು ಆಡಳಿತವನ್ನು ಒಪ್ಪಿಕೊಂಡವರಿಗೆ ಇದೊಂದು ವಿಶೇಷ ಸ್ಥಾನಮಾನ ದೊರೆಯಿತೆಂಬ ಭಾವನೆಯು ಹುಟ್ಟಿಕೊಳ್ಳಲು ಕಾರಣವಾಯಿತು. ಹಾಗೆಯೇ ವಸಾಹತುಕಾಲಘಟ್ಟದಲ್ಲಿ ಜ್ಞಾನ ಮತ್ತು ಅಧಿಕಾರದ ನಡುವಣ ಸಂಬಂಧವು ತುಂಬಾ ನಿಕಟವಾದುದರಿಂದ ಜ್ಞಾನವು ಅಧಿಕಾರದ ವಾಹಕವಾಗಿ ಕೆಲಸ ಮಾಡಿತು. ಗಾಂಧಿ ಬರಹಗಳಲ್ಲಿ ಇದು ಎದ್ದುಕಾಣಿಸುತ್ತದೆ. ವಸಾಹತುಕಾಲಘಟ್ಟದ ರಾಷ್ಟ್ರೀಯ ಆಂದೋಲನಕಾರರು ಎದುರಿಸಿದ ಬಿಕ್ಕಟ್ಟುಗಳನ್ನು ಗಾಂಧಿ ಚಿಂತನೆಗಳು ಸೂಚಿಸುತ್ತದೆ. ಗಾಂಧಿ ಬರೆದ ಸಂಪಾದಕೀಯ ಟಿಪ್ಪಣಿಗಳು ಸರಳವಾಗಿ ಬರಿಯ ವಸಾಹತುಶಾಹಿ ಅನುಭವಕ್ಕೆ ಬಂದ ನೇರ ಅಭಿವ್ಯಕ್ತಿ ರೂಪಗಳಲ್ಲ, ಜಾಗತೀಕರಣದಲ್ಲಿ ಹೇಗೆ ಹೊಸ ಹೊಸ ರೂಪಗಳೂ ಬಂದವು ಅದೇ ರೀತಿಯಲ್ಲಿ ವಸಾಹತುಕಾಲದ ಬುದ್ಧಿಜೀವಿಗಳು ಮತ್ತು ಸಾಮಾನ್ಯರ ನಡುವಣ ಸಂಬಂಧವು ಸರಳವಾಗಿರಲಿಲ್ಲ ಮತ್ತು ವಸಾಹತುಕಾಲದ ಲೇಖಕರು; ರಾಷ್ಟ್ರೀಯತಾವಾದಿಗಳು ಸಾಂಸ್ಕೃತಿಕ ಅನನ್ಯತೆಯು ಮುಖ್ಯವೆಂದು ಪ್ರತಿ ಪಾದಿಸತೊಡಗಿದ್ದರು. ಆದರೆ ಈ ಪ್ರಶ್ನೆಯು ಹೆಂಗಸರಿಗೆ ಕೆಳಜಾತಿಯವರಿಗೆ ಸಮಾಜದ ಚೌಕಟ್ಟಿನಿಂದ ಹೊರಗೆ ಉಳಿದವರಿಗೆ ಮುಖ್ಯವಾಯಿತೆ ಎಂದು ಕೇಳಿದರೆ ಅವರ ವಾಗ್ವಾದವು ಮುಖ್ಯವಾಗಿರಲಿಲ್ಲ. ಈ ಸಂದರ್ಭದಲ್ಲಿಯೇ ಗಾಂಧಿ ಮಹಿಳೆಯರ ಮತ್ತು "ಹರಿಜನ" ಕುರಿತು ಬರೆದಿದ್ದರು. ಈ ಅರ್ಥದಲ್ಲಿಯೇ ಗಾಂಧಿಯ ನಿಲುವು ಮುಖ್ಯವಾಗಿದೆ. ಒಂದರ್ಥದಲ್ಲಿ ಈಗ ಈ ರೀತಿಯ ಸಾಂಸ್ಕೃತಿಕ ವಿಮರ್ಶೆಯೆನ್ನುವುದು ಸಾಹಿತ್ಯ ಮತ್ತು ಸಾಮಾಜಿಕ ವಾಗ್ವಾದಗಳ ಕೇಂದ್ರದಲ್ಲಿ ಗೈರು ಹಾಜರಿಯಾಗುತ್ತಿದೆ. ಅದು ಅಂಚನ್ನು ಸೇರಿದೆ ಮತ್ತು ಅದಕ್ಕೆ ನಿರ್ದಿಷ್ಟವಾದ ಹಣೆ ಪಟ್ಟಿಯೂ ಕೂಡಾ ಇಲ್ಲ. ನಾವೀಗ ಸಾಂಸ್ಕೃತಿಕ ವಾದ ವಿವಾದಗಳು ನಡೆಸುತ್ತಿರುವುದು ಜನಾಂಗ

ಮತ್ತು ಸಾಮಾಜಿಕ ವರ್ಗೀಕರಣಕ್ಕೆ ಅನುಸಾರವಾಗಿ ಮಾತ್ರ. ಜನಾಂಗ; ಪ್ರದೇಶ; ಸಾಮಾಜಿಕ ವರ್ಗೀಕರಣಗಳನ್ನು ಬಿಟ್ಟರೆ ಸಂಸ್ಕೃತಿ ವಿಶ್ಲೇಷಣೆಯನ್ನು ಮಾಡಲಾಗುತ್ತಿದೆಯೆ ಎಂದು ಕೇಳಿದರೆ ಉತ್ತರಿಸುವುದು ನಿಜಕ್ಕೂ ಕಷ್ಟ. ಈಗ ಯಾವುದೇ ಪ್ರದೇಶ; ಜಾತಿ; ವರ್ಗಗಳು ಬರಿಯ ಸಾಮಾಜಿಕ ಮಾದರಿಗಳಾಗಿ ಮಾತ್ರವೇ ಉಳಿದಿಲ್ಲ. ವಸಾಹತು ಕಾಲದ ಸಮಸ್ಯೆಯು ಇದಾಗಿರಲಿಲ್ಲ. ಗಾಂಧಿ ಮತ್ತೆ ಮತ್ತೆ ಪ್ರತಿಪಾದಿಸುವುದೇನೆಂದರೆ ನಮಗೆ ನಮ್ಮ ಒಂದು ಶಿಸ್ತು ಮತ್ತು ಜ್ಞಾನಮಾರ್ಗವಿದೆ. ಅನೇಕ ಸಾಂಸ್ಕೃತಿಕ ಅಂಶಗಳಿದೆ. ಈ ದೃಷ್ಟಿಯಿಂದ ಗಾಂಧೀವಾದವು ಹೇಳುವ ಕೆಲವು ಅಂಶಗಳನ್ನು ಇಲ್ಲಿ ಗುರುತಿಸಬಹುದು–

೧) ಗಾಂಧೀವಾದದ ಪ್ರಕಾರ–ಸಂಸ್ಕೃತಿಯು ಬಹುತ್ವದ ಅಂಶವನ್ನು ಹೊಂದಿದೆ.

೨) ಗಾಂಧಿ ವಾದವುಅಧಿಕಾರದ ಶ್ರೇಣಿಕರಣವನ್ನು ಪ್ರಶ್ನಿಸುತ್ತದೆ.

೩) ಬ್ರಿಟೀಶರು ಪರಿಭಾವಿಸಿದ ಅಧಿಕಾರ ಮತ್ತು ಸಂಸ್ಕೃತಿಯ ಶ್ರೇಣೀಕರಣವನ್ನು ಗಾಂಧಿ ಒಪ್ಪುವುದಿಲ್ಲ.

೪) ಯಾವುದು ವಸಾಹತು ಕಾಲಘಟ್ಟದಲ್ಲಿ ಅಂಚಿಗೆ ಸೇರಿತೋ ಅದು ಕೇಂದ್ರಕ್ಕೆ ಬಂತು. ಅವುಗಳನ್ನು ಗಾಂಧಿ ತಮ್ಮ ರಾಜಕೀಯ ನಿಲುವುಗಳಲ್ಲಿ ವ್ಯಕ್ತ ಪಡಿಸಿದರು.

೫) ಜ್ಞಾನದ ಮಾದರಿಗಳು ಮತ್ತು ಅವುಗಳ ಸ್ವರೂಪ ಬೇರೆಯಾಯಿತು. ಗಾಂಧಿಯ "ಜೀವನಶಿಕ್ಷಣ" ಪರಿಕಲ್ಪನೆಯು ಈ ರೀತಿಯದು.

೬) ಜ್ಞಾನದ ವ್ಯಾಖ್ಯಾನವೇ ಬೇರೆಯಾಗಬೇಕೆಂದು ಗಾಂಧಿ ಹೇಳುತ್ತಾರೆ

೭) ವಸಾಹತುಜಗತ್ತಿನ ಸಾಂಸ್ಕೃತಿಕ ಮಿಮಾಂಸೆಗಳು ಮತ್ತೆ ಮುಂಚೂಣಿಗೆ ಬರಬೇಕು.

೮) ಮತ್ತು ಜ್ಞಾನ ಕ್ಷೇತ್ರಕ್ಕೆ ಪಶ್ಚಿಮದ ಮಾನದಂಡಗಳು ಮಾತ್ರ ಮುಖ್ಯವಲ್ಲ. ಪಶ್ಚಿಮದಿಂದ ಕಲಿಯುವುದಕ್ಕಿಂತ ಕಲಿಸಬೇಕಾದ್ದು ಹೆಚ್ಚಿದೆ.

ಯಾವುದೇ ಪ್ರಾದೇಶಿಕ ಸಂಸ್ಕೃತಿಯ ಚರ್ಚೆಯ ಸಂದರ್ಭದಲ್ಲಿ ಹೊಸ ಶಿಸ್ತು ಅದಕ್ಕೆ ಬೇಕಾದ ಪರಿಕರಗಳು ಹೊಸ ರೀತಿಯ ಬಹುತ್ವ ಹೊಸ ರೀತಿಯ ವಿಸ್ತರಣೆಗಳು ಬೇಕಾಗುತ್ತವೆಯೆಂದು ಪುಕೋ ಹೇಳುತ್ತಾನೆ. ಭಾರತೀಯತೆಯು ಅವರ ಬರಹಗಳಲ್ಲಿ ವಿಶಿಷ್ಟವಾಗಿ ಕಾಣಿಸಿತು. ಗಾಂಧಿ ಅಸ್ಪೃಶ್ಯರನ್ನು ಅನ್ಯರೆಂಬಂತೆ ನೋಡಿಲ್ಲ. ಅವರು ಪರಕೀಯರೆಂದು ಗಾಂಧಿಗೆ ಅನಿಸಲಿಲ್ಲ. ಭಾರತೀಯ ಸಂಸ್ಕೃತಿಯ ನೆಲೆಗಳು ಇವುಗಳ ಮೂಲಕ ಮತ್ತೆ ಅನಾವರಣಗೊಂಡವು. ಇವುಗಳ ಮಟ್ಟ ಬೇರೆ. ವಸಾಹತುಕಾಲದ ಹರಿಜನದಲ್ಲಿ ಪ್ರಾರಂಭಿಸಿರುವುದು ಹೊಸ ರೀತಿಯ ಸಂವಾದಗಳನ್ನು. ಬ್ರಿಟೀಶ್

ಆಡಳಿತಶಾಹಿ ನೀತಿಯು ಏಕ ಸಂಹಿತೆಯನ್ನು ರೂಪಿಸಿದರೆ. ನಮ್ಮ ಗಾಂಧಿ ಬರೆದಿರುವುದೇ ಬೇರೆ. ಎಷ್ಟೊಂದು ಜೀವನ ವಿಧಾನಗಳಿವೆ? ಎಷ್ಟೊಂದು ಹೊಸದಾರಿಗಳು ವಸಾಹತುಕಾಲದಲ್ಲಿ ಪ್ರಾರಂಭವಾದವು? ಗಾಂಧಿಯ ಬರಹಗಳು ಅನೇಕ ರೀತಿಯ ಸಂವಾದಗಳನ್ನು ರೂಪಿಸಿದ್ದು ಚಾರಿತ್ರಿ ಸತ್ಯ. ಗಾಂಧಿ ಈ ವಿಷಯದಲ್ಲಿ ಹಟಮಾರಿಯಲ್ಲ.ಆದುದರಿಂದಲೇ ಗಾಂಧಿ ಬರವಣಿಗೆಯಲ್ಲಿ ತರ್ಕವೇ ಮುಖ್ಯವಲ್ಲ.

ವಸಾಹತುಕಾಲದ ಸನ್ನಿವೇಶಗಳನ್ನು ಗಾಂಧಿ ಬರಹಗಳು ಚಿತ್ರಿಸಿದವು. ಇವುಗಳಿಗೆ ಒಂದು ತಾಯ್ನೆಲವಿದೆ. ನಿರ್ದಿಷ್ಟ ಸಾಮಾಜಿಕ–ಸಾಂಸ್ಕೃತಿಕ ಬೇರುಗಳಿವೆ.

> ಮ್ಯಾಂಚೆಸ್ಟರ್ ನಮಗೆ ಮಾಡಿರುವ ಹಾನಿಗೆ ಮಿತಿಯೇ ಇಲ್ಲ. ಮ್ಯಾಂಚೆಸ್ಟರ್‌ನಿಂದಲೇ ಹಿಂದುಸ್ಥಾನದ ಕೈಗಾರಿಕೆಯೆಲ್ಲ ನಾಶವಾಗಿದೆ. ಇಲ್ಲ. ನಾನು ಮರೆತೆ. ಮ್ಯಾಂಚೆಸ್ಟರ್‌ನ್ನು ನಾನು ಹೇಗೆ ನಿಂದಿಸಲಿ? ನಾವು ಮ್ಯಾಂಚೆಸ್ಟರ್ ಬಟ್ಟೆಯನ್ನು ತೊಟ್ಟೆವು; ಅವರು ಅದನ್ನು ನೇಯ್ದರು. ಬಂಗಾಳದ ಶೌರ್ಯದ ವಿಷಯ ಓದಿ ನನಗೆ ಬಹಳ ಹರ್ಷವಾಯಿತು. ಆ ಪ್ರಾಂತ್ಯದಲ್ಲಿ ಬಟ್ಟೆಯ ಗಿರಣಿಗಳಿಲ್ಲ. ಆದುದರಿಂದ, ಹಿಂದಣ ಕೈಮಗ್ಗದ ಕೈಗಾರಿಕೆಯನ್ನು ಮತ್ತೆ ರೂಢಿಗೆ ತಂದರು. ಬೊಂಬಾಯಿ ಗಿರಣಿಗಳಿಗೆ ಬಂಗಾಳ ಪ್ರೋತ್ಸಾಹ ಕೊಡುತ್ತದೆ. ನಿಜ. ಬಂಗಾಳ ಸಂಪೂರ್ಣವಾಗಿ ಸಮಸ್ತ ಗಿರಣಿ ಪದಾರ್ಥಗಳನ್ನೂ ಬಹಿಷ್ಕರಿಸಿದ್ದರೆ ಚೆನ್ನಾಗಿತ್ತು.
>
> ಗಿರಣಿ–ಕಾರಖಾನೆಗಳಿಂದ ಯುರೋಪು ಹಾಳಾಗುತ್ತಿದೆ. ವಿನಾಶ ಆಗಲೇ ಇಂಗ್ಲಿಷರ ಬಾಗಿಲು ತಟ್ಟುತ್ತಿದೆ. ಆಧುನಿಕ ನಾಗರಿಕತೆಗೆ ಯಂತ್ರ ಕಾರಖಾನೆ ಮುಖ್ಯ ಲಕ್ಷಣ. ಇದು ಮಹಾ ಪಾಪ. ಬೊಂಬಾಯಿ ಗಿರಣಿ ಕೆಲಸಗಾರರು ಗುಲಾಮರಾಗಿದ್ದಾರೆ. ಗಿರಣಿಗಳಲ್ಲಿ ಕೆಲಸ ಮಾಡುವ ಹೆಂಗಸರ ಸ್ಥಿತಿ ಮನ ಕುದಿಸುತ್ತದೆ. ಗಿರಣಿಗಳಿಲ್ಲದಾಗ ಈ ಹೆಂಗಸರು ಉಪವಾಸವಿರಲಿಲ್ಲ. ಈ ಯಂತ್ರಗಳ ಭ್ರಾಂತಿ ಹೆಚ್ಚಿದರೆ ನಮ್ಮ ದೇಶ ಬಹಳ ದುಃಖಕ್ಕೆ ಗುರಿಯಾಗುತ್ತದೆ. ಈ ಮಾತು ಲೋಕವಿರುದ್ಧವಾಗಿ ಕಂಡೀತು; ಆದರೂ ಹೇಳುತ್ತೇನೆ. ಮ್ಯಾಂಚೆಸ್ಟರಿಗೇ ಹಣ ಕಳಿಸಿ ಆ ದರಿದ್ರ ಬಟ್ಟೆಯನ್ನು ಉಪಯೋಗಿಸಿದರೂ ಚಿಂತೆಯಿಲ್ಲ. ಹಿಂದೂಸ್ಥಾನದಲ್ಲಿ ಗಿರಣಿಗಳು ಹೆಚ್ಚುವುದು ಬೇಡ. ಮ್ಯಾಂಚೆಸ್ಟರ ಬಟ್ಟೆಯನ್ನು ಬಳಸಿದರೆ ನಮ್ಮ ಹಣವಷ್ಟೇ ಹಾಳು; ಹಿಂದೂಸ್ಥಾನದಲ್ಲಿ ಮ್ಯಾಂಚೆಸ್ಟರಿನ ನಕಲು ಮಾಡಿದರೆ ನಮ್ಮ ಹಣ ಹಿಂದೂಸ್ಥಾನದಲ್ಲಿಯೇ ಉಳಿದೀತು. ಆದರೆ ನಮ್ಮ ನೆತ್ತರನ್ನೆ ಅದು ಹೀರಿಬಿಟ್ಟೀತು. ನಮ್ಮ ನೀತಿಯೆಲ್ಲ

> ಹಾಳಾದೀತು. (ಮೋ.ಕ. ಗಾಂಧೀ ೨೦೦೯ ಹಿಂದ್ ಸ್ವರಾಜ್ಯ ಪುಟ. ೮೬–೮೭)

ಎರಡನೆಯದು ಈ ಸಂದರ್ಭದಲ್ಲಿ ಗಾಂಧಿಗೆ ತಮ್ಮ ಬರವಣಿಗೆ .ಅದರ ವಸ್ತು ನಿರೂಪಣೆಯ ಬಗೆಗಿನ ಆಯ್ಕೆಗಳು ಖಚಿತವಿದ್ದವು. ಅವರ ಬರಹಗಳು ನಿಷ್ಕಾರಣವಲ್ಲ.ಗಾಂಧಿ ವೈದ್ಯರ ಬಗ್ಗೆ ಅವರು ಹೇಳುವ ಮಾತು ಗಮನಾರ್ಹ.

> ಒಂದು ಕಾಲದಲ್ಲಿ ನನಗೆ ವೈದ್ಯರನ್ನು ಕಂಡರೆ ಬಹಳ ಪ್ರೀತಿಯಿತ್ತು. ಲೋಕಸೇವಾರ್ಥ ನಾನೂ ಒಬ್ಬ ವೈದ್ಯನಾಗಬೇಕೆಂಬ ಆಸೆಯೂ ಇತ್ತು. ಈಗ ಆ ಮೋಹವಿಲ್ಲ. ವೈದ್ಯರಿಗೆ ನಮ್ಮಲ್ಲಿ ಏಕೆ ಶ್ರೇಷ್ಠಸ್ಥಾನವನ್ನು ಕೊಟ್ಟಿರಲಿಲ್ಲವೆಂಬುದು ಈಗ ನನಗೆ ಅರ್ಥವಾಗಿದೆ. ಇಂಗ್ಲಿಷರು ನಮ್ಮನ್ನು ಅಧೀನದಲ್ಲಿಡಲು ವೈದ್ಯವೃತ್ತಿಯನ್ನು ಚೆನ್ನಾಗಿ ಉಪಯೋಗಿಸಿಕೊಂಡಿದ್ದಾರೆ. ಮೊಗಲ ಬಾದಷಹನನ್ನು ಪುಸಲಾಯಿಸಿದವನು ಒಬ್ಬ ಇಂಗ್ಲಿಷ್ ವೈದ್ಯ. ಏಷ್ಯಾದಲ್ಲಿ ಅನೇಕ ಕಡೆ ವೈದ್ಯರು ಹೀಗೆ ರಾಜಕೀಯ ಸಾಧಿಸಿದ್ದಾರೆ.
>
> ವೈದ್ಯರು ನಮಗೆ ಕೀಲೇ ತಪ್ಪಿಸಿದ್ದಾರೆ. ಈ ವಿದ್ವಾಂಸ ವೈದ್ಯರಿಗಿಂತ ನಮ್ಮ ನಾಟಿ ವೈದ್ಯರೇ ಲೇಸು ಎಂದು ಆಗಾಗ ನನಗನಿಸಿದೆ. ಸ್ವಲ್ಪ ಆಲೋಚಿಸೋಣ; ವೈದ್ಯನ ಕೆಲಸ ದೇಹ ರಕ್ಷಣೆ ಅಥವಾ ಅದೂ ಅಲ್ಲ. ದೇಹಕ್ಕೆ ಬರಬಹುದಾದ ರೋಗಗಳ ನಿವಾರಣೆ ಅವರ ಕೆಲಸ. ಈ ರೋಗಗಳು ಬರುತ್ತವೆ ಹೇಗೆ? ನಮ್ಮ ಅಸಡ್ಡೆಯಿಂದ ಅಥವಾ ಅತ್ಯುಪಯೋಗದಿಂದ. ನಾನು ಹೊಟ್ಟೆ ಬಿರಿಯೆ ತಿಂದೆ. ಅಜೀರ್ಣವಾಯಿತು. ವೈದ್ಯನ ಬಳಿಗೆ ಹೋದೆ, ಔಷಧಿ ಕುಡಿದೆ, ಗುಣವಾಯಿತು ಮತ್ತೆ ಹೊಟ್ಟೆ ಬಿರಿಯೆ ತಿಂದೆ, ಮತ್ತೆ ವೈದ್ಯನ ಗುಳಿಗೆ ತಿಂದೆ. ಮೊದಲನೆ ಸಲವೇ ಆ ಗುಳಿಗೆಯನ್ನು ತಿನ್ನದಿದ್ದರೆ, ನನ್ನ ತಪ್ಪಿಗೆ ಸರಿಯಾದ ಶಿಕ್ಷೆಯನ್ನು ಅನುಭವಿಸುತ್ತಿದ್ದೆ. ಮತ್ತೊಮ್ಮೆ ಹೊಟ್ಟೆಗೆ ಕೂರುತ್ತಿರಲಿಲ್ಲ. ವೈದ್ಯ ನಡುವೆ ಬಂದು ನಾನು ಮತ್ತೆ ತಿಂಡಿಪೋತನಾಗಲು ದಾರಿ ಮಾಡಿದ. ನನ್ನ ದೇಹಕ್ಕೇನೋ ಅದರಿಂದ ಹಗುರವಾಯಿತು. ನನ್ನ ಮನಸ್ಸು ದುರ್ಬಲವಾಯಿತು. ಹೀಗೆ ಬಹಳ ದಿನ ಔಷಧ ಸೇವಿಸಿದರೆ ಕ್ರಮೇಣ ನನ್ನ ಮನೋದಾರ್ಢ್ಯವೇ ನಷ್ಟವಾದೀತು. (ಮೋ.ಕ. ಗಾಂಧೀ ೨೦೦೯ ಹಿಂದ್ ಸ್ವರಾಜ್ಯ ಪುಟ. ೪೮–೪೯)

ನಿರ್ವಸಹಾತೀಕರಣದ ರಾಜಕಾರಣವು ಸುಲಭದ ಹಾದಿಯಾಗಿರಲಿಲ್ಲ. ಈ ದೃಷ್ಟಿಯಿಂದ ವಸಾಹತುಕಾಲದ ಸಾಮಾಜಿಕ ಚಾರಿತ್ರಿಕ ಪ್ರತಿಕ್ರಿಯೆಗಳು ಬಹು ರೂಪಿಯಾದವು. ಆದುದರಿಂದ ವಸಾಹತುಕಾಲದ ಬರಹಗಳ ಬಗ್ಗೆ ನಾ

ಹೇಳಬಹುದಾದ ಮಾತುಗಳೆಂದರೆ ಅವು ಮುಕ್ತಾಯಗೊಂಡಿಲ್ಲ.ಮಹಾತ್ಮನ ಬರಹಗಳಿಗೆ ಬೇರೆ ಬೇರೆ ಹಾದಿಗಳಿವೆ. ಅವುಗಳ ಚರ್ಚೆಯನ್ನು ಎಲ್ಲಿಂದಲೂ ಪ್ರಾರಂಭಿಸಬಹುದು– 'ಸಂವಿಧಾನ' 'ಪ್ರಜೆಗಳು' 'ರಾಜಕಾರಣ' 'ಪ್ರದೇಶ' 'ತಾಯ್ನಾಡು'–ಇವುಗಳ ಸಾಮಾಜಿಕ ಕಟ್ಟುವಿಕೆಯು ನಮ್ಮ ಗಾಂಧೀಜಿಯವರ ಹೆಗಲ ಮೇಲಿದ್ದವು. ವಸಾಹತುಕಾಲದ ಶಿಕ್ಷಣ ಕ್ರಮದಿಂದ ಉಂಟಾದ ಅವಕಾಶವು (Space) ಗಾಂಧಿಯ ಸತ್ಯಾಗ್ರಹ,ಅವರ ಸಂಪಾದಕೀಯ ಬರಹಗಳಿಂದ ತುಂಬಿಕೊಂಡವು ಎಂದು ಅನಿಸುತ್ತದೆ. ಖಾಲಿಯಾದ ಜಾಗವನ್ನು ಅವರ ಬರವಣಿಗೆಗಳು ತುಂಬಿಕೊಂಡವು ಇವು ನೈತಿಕ ವಿಶ್ವಾತ್ಮಕತೆ ಮತ್ತು ಸಾಂಸ್ಕೃತಿಕ ನಿರ್ದಿಷ್ಟತೆಗಳನ್ನು ಸೂಚಿಸುತ್ತದೆ. ಈ ಸಂದರ್ಭದ ಮೌಲ್ಯಗಳು ಈ ರೂಪದ್ದು: ಗಾಂಧಿಯ ನೈತಿಕ ಮೌಲ್ಯವೆಂದರೆ ಸರಳ ಮತ್ತು ವಸ್ತುರಹಿತವಲ್ಲ. ಮೌಲ್ಯವೆನ್ನುವುದಕ್ಕೆ ಯಾವುದೇ ಮಾಧ್ಯಮವಿಲ್ಲ. ಅದು ಸಮಾಜದೊಂದಿಗೆ ಅಡಕವಾಗಿರುತ್ತದೆ ಅಷ್ಟೇ! ಆದರೆ ಗಾಂಧಿಯ ಮಾತು ಮೌಲ್ಯದ ಪ್ರಶ್ನೆಯು ಮಾತ್ರವಲ್ಲ ಮನಃಶಾಸ್ತ್ರದ ಪ್ರಶ್ನೆಯೂ ಹೌದು. ವಸಾಹತುಕಾಲಘಟ್ಟದಲ್ಲಿ ಬಂದ ಪ್ರಮುಖ ಸಮಸ್ಯೆಗಳ ಸ್ವರೂಪ ಈ ಕೆಳಗಿನಂತಿವೆ:

೧) ಯಾವುದನ್ನು ಅಂಗೀಕರಿಸಬೇಕು? ಯಾವುದು ನಿಜವಾದ ಮೌಲ್ಯ? ಈ ಪ್ರಶ್ನೆಯು ರಾಜಕೀಯ ಸಾಂಸ್ಕೃತಿಕ ಮತ್ತು ಸಾಮಾಜಿಕ ಪ್ರಶ್ನೆಯಾಗಿದ್ದಂತೆ ಅದು ಸಾಂಸ್ಥಿಕ ರೂಪಗಳ ಮೇಲೂ ಪ್ರಭಾವಬೀರಿತ್ತು. ಸಾಹಿತ್ಯದಲ್ಲಿ ಯಾವುದನ್ನು ಕಲಿಸಬೇಕು? ಯಾವುದರ ಕುರಿತು ಮಾತಾಡಬೇಕು. ಇದು ಪ್ರಮುಖ ಸಮಸ್ಯೆಯಾಗಿತ್ತು. ಗಾಂಧಿ ಇದನ್ನೇ ತಮ್ಮ ಎದುರು ಇಟ್ಟುಕೊಂಡಿದ್ದಾರೆ.

೨) ಯಾವುದು ಪರಕೀಯ? ಯಾವುದು ದೇಶಿಯ? ಈ ಪ್ರಶ್ನೆಯು ಸರಳವಾಗಿರಲಿಲ್ಲ. ರಾಷ್ಟ್ರೀಯ ಚಿಂತಕರಾಗಿದ್ದ ಗಾಂಧಿ, ಅಂಬೇಡ್ಕರ; ತಿಲಕ್ ಮೊದಲಾದ ಎಲ್ಲರಿಗೂ ಕಾಡಿದ ಪ್ರಶ್ನೆಯಿದು: ಯಾವುದು ಆಧುನಿಕ? ಯಾವುದು ಸನಾತನ? ಈ ಪ್ರಶ್ನೆಯು ಕೇವಲ ರಾಜಕಾರಣಕ್ಕೆ ಸಂಬಂಧಿಸಿರುವುದು ಮಾತ್ರವಲ್ಲ.. ಈ ದೃಷ್ಟಿಯಿಂದ ವಸಾಹತು ಕಾಲಘಟ್ಟದಲ್ಲಿ ಗಾಂಧಿ ಅತ್ಯಂತ ಸಂಕೀರ್ಣವಾದ ಸ್ಥಿತಿಯೊಂದಿಗೆ ಬರೆದರು. ಇದು ಗಮನಾರ್ಹವಾಗಿದೆ.

ಪ್ರಸನ್ನರು ಮಾಡಿದ ಒಂದು ಪ್ರಯೋಗ ಈ ರೀತಿಯಲ್ಲಿದೆ–

> **ದೇಸಿ ಎಂಬುದು ಕೈಮಗ್ಗ ಹಾಗೂ ಕರಕುಶಲ ವಸ್ತುಗಳನ್ನು ಮಾರಾಟ ಮಾಡುವ ಅಂಗಡಿಗಳಿಗೆ ನಮ್ಮ ಧರ್ಮದರ್ಶಿ ಸಂಸ್ಥೆಯು ಇಟ್ಟ ಹೆಸರಾಗಿದೆ. ನಾವು ದೇಸಿ ಅಂಗಡಿಗಳನ್ನು ಆರಂಭಿಸಿದ್ದಕ್ಕೆ**

ಕಾರಣವಿದೆ. ಇದಕ್ಕೂ ಮೊದಲು ನಾವು ಕೆಲವರು ಮಲೆನಾಡಿನ ಗ್ರಾಮವೊಂದರಲ್ಲಿ 'ಚರಕ' ಎಂಬ ಹೆಸರಿನ ಕೈಮಗ್ಗದ ಉತ್ಪಾದನಾ ಘಟಕವೊಂದನ್ನು ಆರಂಭಿಸಿದ್ದೆವು. ಚರಕ ಸಂಸ್ಥೆ ತಯಾರಿಸುತ್ತಿದ್ದ ಕೈಮಗ್ಗದ ಸಿದ್ಧ ಉಡುಪುಗಳನ್ನು ಮಾರಾಟ ಮಾಡಲಿಕ್ಕೆ ನಮಗೊಂದು ವ್ಯವಸ್ಥೆ ಬೇಕಿತ್ತು. ಹಾಗಾಗಿ ದೇಸಿ ಅಂಗಡಿಗಳು ಆರಂಭವಾದವು.

ಶಿವಮೊಗ್ಗ ಜಿಲ್ಲೆಯ ಸಾಗರ ತಾಲ್ಲೂಕಿನ ಭೀಮನಕೋಣೆ ಗ್ರಾಮದಲ್ಲಿ 'ಚರಕ' ಆರಂಭವಾದದ್ದು 1996ರಲ್ಲಿ. ಆ ಸುತ್ತಮುತ್ತಲ ಗ್ರಾಮಗಳಲ್ಲಿ ಸಕ್ರಿಯವಾಗಿದ್ದ ಕವಿ-ಕಾವ್ಯ ಎಂಬ ಸ್ವಯಂಸೇವಾ ಸಂಸ್ಥೆ ಚರಕವನ್ನು ಆರಂಭಿಸಿತು. ಕವಿ-ಕಾವ್ಯ ಸಂಸ್ಥೆಯ ಹಿನ್ನೆಲೆ ವಿಶೇಷವಾದದ್ದು. ಅದರ ಹೆಸರೇ ಸೂಚಿಸುವಂತೆ ಕವಿ-ಕಾವ್ಯ ಸಾಹಿತ್ಯ ಹಾಗೂ ಸಂಸ್ಕೃತಿ ಕ್ಷೇತ್ರಗಳಲ್ಲಿ, ಅದರಲ್ಲೂ ವಿಶೇಷವಾಗಿ ಕಾವ್ಯದ ಮಾಧ್ಯಮದಲ್ಲಿ ಕೆಲಸ ಮಾಡಲು ಹುಟ್ಟಿಕೊಂಡ ಸಂಸ್ಥೆ. ಮೊದಲ ಕೆಲವು ವರ್ಷ ಈ ಸಂಸ್ಥೆ ಸಂಸ್ಕೃತಿ ಕ್ಷೇತ್ರಕ್ಕೆ ಮಾತ್ರವೇ ಸೀಮಿತವಾಗಿತ್ತು. ಮೌಖಿಕ ಪರಂಪರೆಯ ಬಗ್ಗೆ ಕವಿ-ಕಾವ್ಯ ಸಂಸ್ಥೆ ಮಾಡಿರುವ ಕೆಲಸಗಳು ಗಮನಾರ್ಹವಾದದ್ದು.

ಮಲೆನಾಡಿನ ಸಾಮಾಜಿಕ ಪರಿಸ್ಥಿತಿಯು ನಮ್ಮ ಕಿವಿ ಹಿಂಡಿ ಗ್ರಾಮೀಣ ಅಭಿವೃದ್ಧಿ ಕ್ಷೇತ್ರದತ್ತ ನಮ್ಮ ಆಸಕ್ತಿಯನ್ನು ತಿರುಗಿಸಿತು. ಕವಿ-ಕಾವ್ಯ ಸಂಸ್ಥೆ ಕೈಮಗ್ಗದ ಉತ್ಪಾದನಾ ಘಟಕವನ್ನು ಆರಂಭಿಸಲಿಕ್ಕೆ ಕಾರಣವಿದೆ. ಪಶ್ಚಿಮ ಘಟ್ಟದ ಪ್ರದೇಶಗಳು ಅದರಲ್ಲೂ ಕರ್ನಾಟಕದ ಸಹ್ಯಾದ್ರಿ ಶ್ರೇಣಿಯ ಮಲೆನಾಡು ಪ್ರದೇಶ ಇತ್ತೀಚಿನ ದಿನಗಳಲ್ಲಿ ತೀವ್ರತರವಾದ ಪರಿಸರ ನಾಶಕ್ಕೆ ತುತ್ತಾಗಿ ಸಂಕಷ್ಟದಲ್ಲಿದೆ. ಮಡಿಕೇರಿ, ಹಾಸನ, ಚಿಕ್ಕಮಗಳೂರು, ಶಿವಮೊಗ್ಗ ಹಾಗೂ ಉತ್ತರ ಕನ್ನಡ ಜಿಲ್ಲೆಗಳಲ್ಲಿ ಹರಡಿರುವ ಮಲೆನಾಡಿನ ದಟ್ಟವಾದ ಕಾಡು ಇಂದು ಕುರುಚಲು ಕಾಡಿನ ಮಟ್ಟಕ್ಕೆ ಇಳಿದಿದೆ. ಕಳೆ ಮೂರು ನಾಲ್ಕು ದಶಕಗಳಲ್ಲಿ ಈ ಪ್ರದೇಶದ ಜನಸಂಖ್ಯೆ ಹೆಚ್ಚಾದ್ದರಿಂದ ವ್ಯವಸಾಯ ಚಟುವಟಿಕೆಗಳು ಮಿತಿಮೀರಿ ಬೆಳೆದದ್ದು ಕಾಡಿನ ನಾಶಕ್ಕೆ ಬಹುಮುಖ್ಯ ಕಾರಣವಾಗಿದೆ.

ವ್ಯವಸಾಯ ಚಟುವಟಿಕೆಯ ಭಾರ ಹೊರುವಲ್ಲಿ ಮಲೆನಾಡಿನ ಕಾಡು ಪ್ರದೇಶಕ್ಕೆ ಒಂದು ಮಿತಿಯಿದೆ. ಪ್ರತಿಶತ ಹತ್ತರಷ್ಟು ಜಾಗದಲ್ಲಿ ವ್ಯವಸಾಯ ಚಟುವಟಿಕೆ ನಡೆದರೆ ಮಲೆನಾಡಿನ ಪರಿಸರ ತನ್ನ ಸಮತೋಲನವನ್ನು ಕಾಯ್ದುಕೊಳ್ಳಬಲ್ಲುದಾಗಿದೆ. ಆದರಿಂದ ಅಲ್ಲಿನ ವ್ಯವಸಾಯ ಚಟುವಟಿಕೆ ಹಲವಾರು ಪಟ್ಟು ಹೆಚ್ಚಿದೆ. ಮೊದಲು

ಕಣಿವೆ ಪ್ರದೇಶಗಳಿಗೆ ಮಾತ್ರ ಸೀಮಿತವಾಗಿದ್ದ ಬೇಸಾಯವು ನಿಧಾನವಾಗಿ ಹರಡಿ ಕಾಡುಗುಡ್ಡೆಗಳನ್ನು ಆವರಿಸಿಕೊಂಡಿದೆ. ದುರಂತವೆಂದರೆ ಕಾಡಿನ ಒತ್ತುವರಿ ಮಾಡಿ ಗುಡ್ಡೆಗಳಲ್ಲಿ ಬೇಸಾಯ ಮಾಡುವ ವ್ಯರ್ಥ ಪ್ರಯತ್ನ ನಡೆಸಿರುವವರು ಮಲೆನಾಡಿನ ಬಡವರೇ ಹೌದು. (ದೇಸಿ ಜೀವನ ಪದ್ಧತಿ ೨೦೦೫ ಪ್ರಸನ್ನ ಪುಟ. ೩೭)

* * *

೭ ಜ್ಞಾನ, ವಿದ್ಯೆ ಮತ್ತು ಅಧಿಕಾರ ಅಥವಾ ಸತ್ಯ, ಮತ್ತು ಶುದ್ಧಿ

(ಗಾಂಧಿ, ಫುಕೋ, ಸೈದ್ – ಈ ಮೂವರ ಸಂಬಂಧ ಎತ್ತಣಿಂದ ಎತ್ತಣವರೆಗೆ?)

"ನಿಮ್ಮ ಎಲ್ಲ ಜ್ಞಾನ, ವಿದ್ಯೆ ಹಾಗೂ ವಿದ್ವತ್‌ಗಳನ್ನು ಒಂದು ಪರಡೆಯಲ್ಲಿ ಹಾಕಿರಿ.ಸತ್ಯ ಹಾಗೂ ಶುದ್ಧಿಗಳನ್ನು ಇನ್ನೊಂದರಲ್ಲಿ ಹಾಕಿರಿ. ಈ ಎರಡನೆಯ ಪರಡಿಯೇ ಹೆಚ್ಚು ತೂಗುವುದು"

– ಗಾಂಧಿ

ಸ್ವಭಾವತಃ ಅಹಿಂಸೆ ಅಧಿಕಾರವನ್ನು ಹಿಡಿಯಲಾರದು. ಅದು ಅದರ ಗುರಿಯೂ ಅಲ್ಲ. ಆದರೆ ಅಹಿಂಸೆ ಇನ್ನೂ ಹೆಚ್ಚಿನದನ್ನು ಮಾಡಬಲ್ಲುದು; ಸರ್ಕಾರಿ ಯಂತ್ರವನ್ನು ವಶಮಾಡಿಕೊಳ್ಳದೆಯೇ ಅದು ಪರಿಣಾಮಕಾರಿಯಾಗಿ ಅಧಿಕಾರವನ್ನು ನಿಯಂತ್ರಸಬಹುದು, ನಿರ್ದೇಶಿಸಬಹುದು. ಅದು ಅದರ ಸೊಗಸು.

–ಗಾಂಧಿ.

ಶಸ್ತ್ರಗಳು ಈ ಶರೀರಿವನ್ನು ತುಂಡರಿಸಲಾರದು, ಅಗ್ನಿಯು ಇದನ್ನು ಸುಡಲಾರದು, ನೀರು ಇದನ್ನು ನೆನಸಲಾರದು. ಮತ್ತು ಗಾಳಿಯು ಇದನ್ನು ಒಣಗಿಸಲಾರದು.

– ಭಗವದ್ಗೀತೆ ೨–೨೩

ಹಿಂದಿನ ಬಾಗಿಲಿನಿಂದ ಬಂದ ಜ್ಞಾನ ಹಾಗೂ ಅವುಗಳನ್ನು ಗಾಂಧಿ ಎದುರಿಸಿದ ಬಗೆಯು ತುಂಬಾ ಕುತೂಹಲದಾಯಕ

ನಾವು ಈಗ ಮಾತಾಡುತ್ತಿರುವ ವಸಾಹತು ಜ್ಞಾನ ಪರಂಪರೆ ಮತ್ತು

ವಸಾಹತುಕಾಲದ ಅಧಿಕಾರದ ಸ್ವರೂಪವು ಅಷ್ಟು ಸರಳವಾಗಿರಲಿಲ್ಲ. ಇವು ಬೇರೆ ಬೇರೆ ಪರಿಣಾಮಗಳನ್ನು ಬೀರಿವೆ. ಆದರೆ ವಸಾಹತುಶಾಹಿ ಕಾಲಘಟ್ಟದ ಜ್ಞಾನರೂಪ ಮತ್ತು ಅದು ವ್ಯಾಖ್ಯಾನಿಸಿಕೊಂಡ ಅಧಿಕಾರದ ರೂಪವು ಒಂದು ಮಾದರಿಯದು ಅಲ್ಲ; ವಸಾಹತು ಯುಗದಲ್ಲಿ ಅನೇಕ ರೀತಿಯ ಸಾಂಸ್ಥಿಕ ರೂಪಗಳು ಸ್ಥಾಪನೆಗೊಂಡವು. ಆ ರೀತಿಯ ಸಾಂಸ್ಥಿಕ ರೂಪಗಳಲ್ಲಿ ಶಿಕ್ಷಣವೂ ಒಂದು. ಜ್ಞಾನವು ಹೊಸ ರೀತಿಯ ನಿರೂಪಣೆಗಳಿಗೆ ಒಳಗಾಯಿತು. ಯುರೋಪಿನ ತಿಳುವಳಿಕೆಯು ಭಾರತೀಯ ಶಾಲಾಕಾಲೇಜುಗಳಲ್ಲಿ "ಪಾಠಗಳು" ಎಂಬ ಹೆಸರಿನಲ್ಲಿ ಪ್ರವೇಶಿಸಿದವು, ಒಂದು ಅರ್ಥದಲ್ಲಿ ಜ್ಞಾನರೂಪಗಳು ಹಿಂಬಾಗಿಲಿನಿಂದ ಬಂದವು, ವಸಾಹತು ಪೂರ್ವದ ಭಾರತೀಯ ಅನೇಕ ರೀತಿಯ ಜ್ಞಾನಮಾದರಿಗಳು ಸಾಂಸ್ಥಿಕರೂಪಗಳಾಗಿರಲಿಲ್ಲ. ಅವುಗಳಿಗೆ ಬೇರೆ ಬೇರೆ ಅರ್ಥಗಳಿದ್ದವು. ಕೌಶಲಗಳು ಕೂಡಾ ಬೇರೆ ಬೇರೆ ರೀತಿಯಲ್ಲಿದ್ದವು. ಉದಾಹರಣೆಗೆ ಚಪ್ಪಲಿಯನ್ನು ಹೊಲಿಯುವುದು; ಮರಗೆಲಸ; ಕಟ್ಟಡಗಳ ನಿರ್ಮಾಣ; ಸಾಹಿತ್ಯದ ಕಲಿಕೆ – ಹೀಗೆ ಬೇರೆ ಬೇರೆ ಮಾದರಿಗಳಿದ್ದವು. ವೇದಗಳನ್ನು ಕಲಿತವರು ವೈದಿಕರು, ಅವರ ಕೆಲಸ ವೇದ ಪಠಣ. ಶಾಸ್ತ್ರಗಳನ್ನು ಓದಿದವರು ಶಾಸ್ತ್ರಿಗಳು–ಇವರ ಕೆಲಸ ನಿಯಮಗಳನ್ನು ಹೇಳುವುದು, ಅರ್ಚಕರು ಅರ್ಚನೆ ಮಾಡುವುದು, ವ್ಯಾಕರಣ; ಅಲಂಕಾರ; ಸೌಂದರ್ಯಶಾಸ್ತ್ರ; ನ್ಯಾಯಸೂತ್ರಗಳು ಬೇರೆ ಬೇರೆ ಮಾದರಿಗಳಿದ್ದವು ಆದರೆ ವಸಾಹತು ಆಡಳಿತಕ್ಕೆ ಇವು ಯಾವುದೂ ಮುಖ್ಯವಾಗಿರಲಿಲ್ಲ. ಉದಾಹರಣೆಗೆ – ಭಾರತೀಯ ಕಾವ್ಯಮೀಮಾಂಸೆ. ವಸಾಹತುಕಾಲದಲ್ಲಿ ಭಾರತೀಯ ಕಾವ್ಯಗಳು ಕೂಡಾ ಹೊಸ ವ್ಯಾಖ್ಯೆಗೆ ಗುರಿಯಾದವು. ಅದರ ನಿರೂಪಣೆ; ವ್ಯಾಖ್ಯೆ; ಅದರ ಚಿತ್ರಗಳು ಭಿನ್ನವಾದವು, ಈ ಅರ್ಥದಲ್ಲಿ ಸಾಂಸ್ಕೃತಿಕ ವ್ಯಾಖ್ಯೆ ಅದರ ಸ್ವರೂಪಗಳು ಹಾಗೂ ಅಧಿಕಾರದ ಕೇಂದ್ರಗಳಿಗೂ ಸಂಬಂಧ ಪ್ರಾರಂಭವಾಯಿತು..

ಆಧುನಿಕತೆ; ವೈಜ್ಞಾನಿಕತೆ, ಕೈಗಾರಿಕೆ, ಕುರಿತು ಮಾತುಗಳು ಈ ಕಾಲದಲ್ಲಿಯೇ ಪ್ರಾರಂಭವಾಯಿತು.

ವಾರನ್ ಹೇಸ್ಟಿಂಗ್ಸ ಭಗವದ್ಗೀತೆಯ ಇಂಗ್ಲೀಷ್ ಅನುವಾದ ಓದಿ ನೈತಿಕತೆಯ ಹಾಗೂ ಬೃಹತ್, ವಿಶಿಷ್ಟ ಬಹುರೀತಿಯ ಪ್ರಾತಿನಿಧಿಕ ರೂಪದ ಪಠ್ಯವಾಗಿದೆ ಎಂದು ಉದ್ಗರಿಸಿದ್ದ. ಇದೇ ಭಗವದ್ಗೀತೆಯೆಂಬ ಪಠ್ಯವು ಮಹಾತ್ಮಾಗಾಂಧಿಗೆ ವರದಾನವಾಯಿತು.

"1888 – 89ರಲ್ಲಿ ನನಗೆ ಮೊಟ್ಟ ಮೊದಲು ಗೀತೆಯ

ದರ್ಶನವಾದಾಗಲೇ ಗೀತೆ ಐತಿಹಾಸಿಕ ಗ್ರಂಥವಲ್ಲ; ಇದರಲ್ಲಿನ ಭೌತಿಕ ಯುದ್ಧ ಒಂದು ನಿಮಿತ್ತ, ಪ್ರತಿಯೊಬ್ಬ ಮನುಷ್ಯನ ಹೃದಯದಲ್ಲಿ ನಿರಂತರವೂ ನಡೆಯುತ್ತಿರುವ ದ್ವಂದ್ವ ಯುದ್ಧದ ವರ್ಣನೆ ಇದು; ಹೃದಯಗತ ಯುದ್ಧವನ್ನು ಮನೋರಂಜಕವಾಗಿ ಮಾಡಲು ಮಾನವಯೋಧರ ಕಲ್ಪನೆ ಬಂದಿದೆ ಎನಿಸಿತು. ಧರ್ಮದ ಬಗ್ಗೆ, ಗೀತೆಯ ಬಗ್ಗೆ ಹೆಚ್ಚು ಹೆಚ್ಚು ವಿಚಾರಮಾಡಿದಂತೆಲ್ಲ ಈ ಪ್ರಥಮ ಸ್ಫೂರ್ತಿ ಮತ್ತಷ್ಟು ದೃಢವಾಯಿತು. ಮಹಾಭಾರತವನ್ನು ಓದಿದ ಮೇಲಂತೂ ಈ ವಿಚಾರ ಮತ್ತಷ್ಟು ಪುಷ್ಟಿಗೊಂಡಿತು. ಈಗಿನ ಅರ್ಥದಂತೆ ಮಹಾಭಾರತ ಒಂದು ಇತಿಹಾಸವೆಂದು ನಾನು ಭಾವಿಸಲಾರೆ. ಇದಕ್ಕೆ ಪ್ರಬಲ ಪ್ರಮಾಣಗಳು ಆದಿಪರ್ವದಲ್ಲಿಯೇ ಇವೆ. ಪಾತ್ರಗಳ ಮಾನುಷ ಅಮಾನುಷ ಉತ್ಪತ್ತಿಯ ವರ್ಣನೆ ಮಾಡಿ, ವ್ಯಾಸಭಗವಾನರು ರಾಜಪ್ರಜೆಗಳ ಇತಿಹಾಸವನ್ನು ನಿರ್ಮೂಲಗೊಳಿಸಿದ್ದಾರೆ. ಮಹಾಭಾರತದಲ್ಲಿ ವರ್ಣಿಸಿದ ಪಾತ್ರಗಳು ಮೂಲತಃ ಐತಿಹಾಸಿಕವಾಗಿರಬಹುದು. ಆದರೆ ವ್ಯಾಸಭಗವಾನರು ಧರ್ಮದ ದರ್ಶನ ಮಾಡಿಸಲೆಂದು ಮಹಾಭಾರತದಲ್ಲಿ ಆ ಪಾತ್ರಗಳನ್ನು ಉಪಯೋಗಿಸಿದ್ದಾರೆ.

ಮಹಾಭಾರತ ಕರ್ತೃ ಭೌತಿಕ ಯುದ್ಧ ಅವಶ್ಯಕವೆಂದಲ್ಲ, ಅದು ನಿರರ್ಥಕವೆಂದೇ ಸಿದ್ಧಪಡಿಸಿದ್ದಾನೆ. ಗೆದ್ದವನನ್ನು ಅಳಿಸಿದ್ದಾನೆ, ಪಶ್ಚಾತ್ತಾಪ ಪಡಿಸಿದ್ದಾನೆ; ಅವನಿಗೆ ದುಃಖವಲ್ಲದೆ ಮತ್ತೇನೂ ದೊರೆಯದಂತೆ ಮಾಡಿದ್ದಾನೆ.

ಈ ಮಹಾಗ್ರಂಥದಲ್ಲಿ ಗೀತೆಯ ಸ್ಥಾನ ಮುಕುಟಮಣಿಯಂತೆ ಸರ್ವೋಚ್ಚ ಗೀತೆಯ ಎರಡನೆಯ ಅಧ್ಯಾಯ ಭೌತಿಕಯುದ್ಧದ ವ್ಯವಹಾರವನ್ನು ತಿಳಿಸುವುದಕ್ಕೆ ಬದಲು ಸ್ಥಿತಪ್ರಜ್ಞನ ಲಕ್ಷಣಗಳನ್ನು ಬೋಧಿಸುತ್ತದೆ. ಸ್ಥಿತಪ್ರಜ್ಞನ ಲಕ್ಷಣಗಳಿಂದಲೇ ಅವನಿಗೂ ಐಹಿಕಯುದ್ಧಕ್ಕೂ ಯಾವ ಸಂಬಂಧವೂ ಇರಲಾರದೆಂಬುದು ಕಂಡುಬರುತ್ತದೆ. ಇನ್ನು ಸಾಮಾನ್ಯ ಕೌಟುಂಬಿಕ ಕಲಹಗಳ ಔಚಿತ್ಯ ಅನೌಚಿತ್ಯಗಳ ನಿರ್ಣಯ ಮಾಡಲು ಗೀತೆಯಂಥ ಗ್ರಂಥನಿರ್ಮಾಣ ಅಸಂಭವ.

(ಗೀತಾ ಮಾತೆ 1958 ಪುಟ. 5)

ರಾಷ್ಟ್ರೀಯತಾವಾದಿ ಆಂದೋಲನಕಾರರೂ ಕೂಡಾ ಭಗವದ್ಗೀತೆಯ ಸತ್ಯ; ಧರ್ಮ; ನ್ಯಾಯ; ಕರ್ಮ ತತ್ವಜ್ಞಾನಗಳನ್ನು ಒಪ್ಪಿಕೊಂಡರು, ಗೀತೆಯ ಪ್ರಭಾವ ಗಾಂಧಿಯ ಅನೇಕ ಬರಹಗಳಲ್ಲಿ ಎದ್ದು ಕಾಣಿಸುತ್ತದೆ.

೧೭೮೪ ರಲ್ಲಿ ವಿಲಿಯಂ ಜೋನ್ಸ್, ವಾರನ್‌ಹೇಸ್ಟಿಂಗ್ಸ್‌ಗೆ ಬರೆದ ಪ್ರಮುಖ

ಸಾಲು ಹೀಗಿದೆ: "ಹಿಂದೂ ಪಂಡಿತರು ಅವರದೇ ಅನ್ನಬಹುದಾದ ಒಂದು ಕಾನೂನು ರೂಪಿಸಿಕೊಂಡಿದ್ದಾರೆ."

ಗಾಂಧಿ ಹೇಳಿರುವ ಮತ್ತೊಂದು ಮಾತು ಇಲ್ಲಿ ಗಮನಾರ್ಹವಾಗಿದೆ. ಅವರು ಹೀಗೆ ಹೇಳುತ್ತಾರೆ.

> **ಬ್ರಿಟಿಷ್ ಪಾರ್ಲಿಮೆಂಟಿನ ಅನುಕರಣೆಯಾಗಲೋ, ರಶಿಯಾದ ಸೋವಿಯೆಟ್ ರಾಜ್ಯ, ಇಟಲಿಯ ಫೇಸಿಸ್ಟ್ ಆಳ್ವಿಕೆ ಇಲ್ಲವೆ ಜರ್ಮನಿಯ ನಾಝಿ ಪದ್ಧತಿಯ ಅನುಕರಣೆಯಾಗಲೀ ನನ್ನ ಕಲ್ಪನೆಯ ರಾಜಕೀಯ ಸ್ವಾತಂತ್ರ್ಯವಾಗಲಾರದು. ಅವೆಲ್ಲ ಅವರ ಅಭಿರುಚಿಗೆ ತಕ್ಕವಾದ ಪದ್ಧತಿ ಇರಬೇಕು. ಅವರದೇನಿರಬೇಕೆಂಬುದನ್ನು ನಾನು ಹೇಳಲಾರೆನು. ಆದರೂ , ನೀತಿವಂತನೆಂಬ ನೈತಿಕ ಶಕ್ತಿಯ ಆಧಾರದ ಮೇಲೆ ರಚಿತವಾದ ಜನತಾ ಸರಕಾರವೇ ರಾಮರಾಜ್ಯವೆಂದು ನಾನು ಬಣ್ಣಿಸಿದ್ದೇನೆ.**
>
> **(ಸ್ವಾತಂತ್ರ್ಯ ಮೋ.ಕ. ಗಾಂಧಿ 1960–2008 ಪುಟ.11)**

ಈ ಮಾತು ಆಕಸ್ಮಿಕವಲ್ಲ, ಕರ್ನಲ್‌ಮೆಕೆಂಜಿ ಅನೇಕ ಸಮಯಗಳನ್ನು ಭಾರತದಲ್ಲಿನ ಕೈಫಿಯತ್ತುಗಳು; ಚಿತ್ರಗಳು, ಕರಕುಶಲ ಕಲೆಗಳನ್ನು ಹಕ್ಕೆ ಮೀಸಲಿಟ್ಟ ಅವುಗಳಿಗೆ ಟಿಪ್ಪಣಿಗಳನ್ನು ಬರೆದಿಟ್ಟ. ಅವನು ಸಂಗ್ರಹಿಸಿದ ಅನೇಕ ಮಾಹಿತಿಗಳು ಸ್ಥಳೀಯ ವಿದ್ವಾಂಸರ ಮೂಲಕ ಪಡೆದು ಕೊಂಡವುಗಳು. ಈಗ ನೋಡಿದರೆ ಅವುಗಳು ವಸಾಹತು ಆಡಳಿತದ ಸಂಕಥನದ ಮಾದರಿಗಳನ್ನು ಸೂಚಿಸುತ್ತವೆ. ಸ್ಥಳೀಯ ಮಾಹಿತಿದಾರರು ನೀಡಿರುವ ಮಾಹಿತಿಗಳು ಆಯಾ ಮಾಹಿತಿದಾರರ ಜ್ಞಾನರೂಪ ಮತ್ತು ಅನುಭವ ರೂಪಗಳೂ ಮಾತ್ರವೇ ಆಗಿದ್ದವು. ಶೆಲ್ಡನ್‌ಪೊಲಾಕ್ ಅವರು ಕೂಡಾ ಈ ವಿಷಯದಲ್ಲಿ ಆಧರಿಸಿಕೊಂಡದ್ದು ಸ್ಥಳೀಯ ಜ್ಞಾನ ಪರಂಪರೆಗಳ ಒಂದು ವಿಧಾನವನ್ನು ಮಾತ್ರ. ಆರ್ಯ – ಅನಾರ್ಯ; ಆರ್ಯ – ದ್ರಾವಿಡ; ಈ ವರ್ಗೀಕರಣಗಳು ಕೂಡಾ ನಾಗರಿಕ–ಅನಾಗರಿಕ ಪರಿಕಲ್ಪನೆಗಳನ್ನು ಆಧರಿಸಿಕೊಂಡಿವೆ "ದಸ್ಯು" ಗಳೆಂದರೆ ಅನಾಗರಿಕರೆಂದು ಕರೆಯುತ್ತಾರೆ. ಆದರೆ ವ್ಯಾಸ ಭಾರತದಲ್ಲಿ ದಸ್ಯುಗಳೆಂದರೆ ದಾಸಿಯ ಪುತ್ರರು ಎಂದಷ್ಟೇ ಅರ್ಥ ಇದೇ ರೀತಿಯಲ್ಲಿಯೇ ಮಂಡಿಸಬೇಕಾದ ವಿಚಾರವೊಂದಿದೆ. ಯುರೋಪ್ ವಿಜ್ಞಾನವನ್ನು ನಿರ್ವಚಿಸಿದ ರೀತಿ ಪುನರುಜ್ಜೀವನ ಕಾಲಘಟ್ಟದ ಅನಂತರ ವಿಜ್ಞಾನಕ್ಕೆ ಬಂದ ಪರಿಕಲ್ಪನೆಗಳು ಬೇರೆ.

ಫಲಿತಾಂಶವು ಸರಿಯಾಗಿಲ್ಲವೆಂದರೆ ಅದಕ್ಕೆ ಕಾರಣ–ಪ್ರಮೇಯ ಮತ್ತು

ಪ್ರಯೋಗಗಳು. ಪುನರುಜ್ಜೀವನ ಕಾಲಘಟ್ಟದ ಅನಂತರ ಇದನ್ನು ಅನೇಕ ವಿಷಯಗಳಿಗೆ ಅನ್ವಯಿಸಲಾಯಿತು. ಸಮಾಜಶಾಸ್ತ್ರ; ಮಾನವಶಾಸ್ತ್ರ; ಗುಣವರ್ತನೆಯಶಾಸ್ತ್ರ; ಅರ್ಥಶಾಸ್ತ್ರ; ರಾಜ್ಯಶಾಸ್ತ್ರ-ಗಳೆಂಬ ಅನೇಕ ಶಾಸ್ತ್ರ ಬಂದಿರುವುದು ಈ ಹಿನ್ನಲೆಯಿಂದ. ಶಾಸ್ತ್ರಗಳ ಪರಿಕಲ್ಪನೆಯೇ ಮೂಲತಃ ಪಶ್ಚಿಮ ಆಧಾರಿತವಾದುದು.

ನೋಡಿ: ಸಮಾಜಶಾಸ್ತ್ರ; ರಾಜ್ಯಶಾಸ್ತ್ರ; ಅರ್ಥಶಾಸ್ತ್ರ ಈ ಎಲ್ಲವುಗಳಲ್ಲಿಯೂ ಶಾಸ್ತ್ರವೆಂಬುದು ಬಂದಿದೆ. ಶಾಸ್ತ್ರವೆಂದರೆ ಅದು ನಿರ್ಣೀತಗೊಂಡಿರುವುದು ಪ್ರಮೇಯ, ಪ್ರಯೋಗ ಮತ್ತು ನಿಲುವುಗಳ ಮೂಲಕ ಇದಕ್ಕೆ ಪೂರಕವಾಗಿ ಮತ್ತೊಂದು ಉದಾಹರಣೆಯನ್ನು ಕೊಡಬಹುದು-ಕುಟುಂಬವೆಂದರೆ ಏನು? ಅದು ಒಂದು ಸಾಮಾನ್ಯ ಪ್ರಶ್ನೆ. ಇದಕ್ಕೆ ಕೊಡುವ ಉತ್ತರ: ಕುಟುಂಬವು ಸಮಾಜ ಅತ್ಯಂತ ಸಣ್ಣಸಂಸ್ಥೆ ಅಥವಾ ಘಟಕ. ಕುಟುಂಬವಾಗುವುದು ಹೇಗೆ? ಗಂಡ-ಹೆಂಡತಿ-ಮಕ್ಕಳು ಇದ್ದರೆ ಕುಟುಂಬವಾಗುತ್ತದೆ. ಇದನ್ನು ಹೇಗೆ ಹೇಳಲಾಯಿತು? ಕುಟುಂಬವೆನ್ನುವುದರ ಬಗೆಗಿನ ಪ್ರಮೇಯ ಅನಂತರ ನಿಲುವಾಗಿ ಪರಿಣಾಮಿಸಿತು. ಪೌರಾತ್ಯವಾದದ ಚರ್ಚೆಯನ್ನು ಇಲ್ಲಿ ಗಮನಿಸುವುದು ಸೂಕ್ತ. ಸೈದ್ ಇಂಥದ್ದನೆಲ್ಲ ಸಮಾಜಶಾಸ್ತ್ರ ನಿರ್ವಹಿಸಿತು ಎಂದು ಹೇಳುತ್ತಾನೆ. ಭಾರತೀಯ ಅರ್ಥಶಾಸ್ತ್ರ; ಭಾರತೀಯ ರಾಜಕಾರಣವನ್ನು ನೋಡುವಾಗ ಇದು ಸ್ಪಷ್ಟವಾಗುತ್ತದೆ. ವಸಾಹತು ಆಡಳಿತಕಾರರು ಅನಂತರ ಇದನ್ನು ಅನ್ವಯಿಸಿಕೊಂಡರು. ಇದಕ್ಕೆ ಪ್ರತಿರೋಧವೊಡ್ಡಿದ ಸೈದ್ ಕೂಡಾ ಒಂದು ಅತಿರೇಕದ ನಿಲುವಿಗೆ ಬಂದು ತಲುಪುತ್ತಾನೆಂದು ಅನಿಸುತ್ತದೆ. ಯಾಕೆಂದರೆ ಸೈದ್ ಮಾರ್ಕ್ಸವಾದದ ವಿಷಯಕ್ಕೆ ಬಂದಾಗ ಅದು ಒಂದು ಚೌಕಟ್ಟಿನ ಒಳಗೆ ಸಿಕ್ಕಿಹಾಕಿಕೊಂಡಿದೆಯೆಂದು ಹೇಳುತ್ತಾನೆ. ಮಾರ್ಕ್ಸವಾದ ಕೂಡಾ ಪಶ್ಚಿಮದ ಶಾಸ್ತ್ರೀಯ ಭಾಗವನ್ನು ಒಪ್ಪಿಕೊಂಡು ಅದರ ಮೂಲಕ ರಾಜಕೀಯ ಅರ್ಥಶಾಸ್ತ್ರವನ್ನು ಬಳಸಿಕೊಂಡು ಮುಂದುವರಿದಿದೆ. ಎರಡನೆಯದಾಗಿ ಮಾರ್ಕ್ಸವಾದದ ಪ್ರಭುತ್ವ ಮತ್ತು ಆರ್ಥಿಕ ಉತ್ಪಾದನೆಯ ವಿಧಿವಿಧಾನಗಳು ಸಮಾಜವನ್ನು ಬದಲಾಯಿಸುತ್ತದೆಯೆಂಬ ಅಭಿಪ್ರಾಯವನ್ನು ಕೂಡಾ ಸೈದ್ ನಿರಾಕರಿಸಿದ್ದಾನೆ. ಸೈದ್‌ನ ವಿಚಾರಗಳು ಪುಕೋನಿಂದ ಪ್ರೇರಿತವಾದುದು ಆದರೆ ಮಾರ್ಕ್ಸವಾದದ ಕಡೆಗೆ ಬರುವಾಗ ಪಶ್ಚಿಮದ ಶಾಸ್ತ್ರೀಯವಾದ ಬಳಸಿಕೊಂಡಿರುವುದರಿಂದ: ಅದನ್ನೇ ಅನ್ವಯಿಸುವಾಗ ವಿಫಲವಾಗುತ್ತದೆಯೆಂದು ಮಾರ್ಕ್ಸವಾದವನ್ನು ಕಟುಟೀಕೆ ಮಾಡುತ್ತಾನೆ. ಫುಕೋನಲ್ಲಿ ಶಿಸ್ತು ಮತ್ತು ಶಿಕ್ಷೆಯ ಪರಿಕಲ್ಪನೆಯು ಹುಟ್ಟಿಕೊಂಡಿರುವುದು ಗ್ರೀಕ್ ಮತ್ತು ಪಶ್ಚಿಮದ ದೇಶಗಳಿಗೆ ಅನ್ವಯವಾಗುತ್ತದೆ. ಹಾಗೆಂದು ಅದನ್ನು ಪೂರ್ವ ದೇಶಗಳಿಗೆ ಎಷ್ಟರ ಮಟ್ಟಿಗೆ

ಅನ್ವಯಿಸಬಹುದು? ಫುಕೋನ ವಿಚಾರಧಾರೆಗಳು ಯುರೋಪಿನ ಹದಿನಾರನೆಯ ಶತಮಾನದ ಅನಂತರದ ಪರಿವರ್ತನೆಯನ್ನು ಮತ್ತು ಪರಿಶೀಲನೆಯನ್ನು ಮಾನದಂಡವಾಗಿರಿಸಿಕೊಂಡಿದೆ. ಫುಕೋ ಮತ್ತೊಂದು ವಿಷಯವನ್ನು ಪ್ರಸ್ತಾವಿಸಿದ. ಮತ್ತೊಂದು ಸಂಗತಿಯೆಂದರೆ ಅವನು ಸಂಕಥನಗಳನ್ನು ಆಧರಿಸಿ ಮೊದಲೇ ಅನ್ವಯಿಸಿಕೊಂಡ ಹಾಗಾಗಿದೆ. ಎರಡನೆಯದಾಗಿ ವಿಚಾರವಾದ ಮತ್ತು ಅದರ ಪರಿಣಾಮವಾಗಿ ಉಂಟಾದ ಹೊಸ ಪ್ರಭುತ್ವದ ರೂಪವನ್ನು ಅವನು ಚರ್ಚಿಸುತ್ತಾನೆ. ಆಧುನಿಕಯುಗದ ಪ್ರಭುತ್ವವು ಸಾಂಸ್ಥಿಕ ರೂಪವನ್ನು ಪಡೆದುಕೊಂಡವು. ಆಧುನಿಕತೆಯ ಅನೇಕ ಸಂಗತಿಗಳು ಸಾಂಸ್ಥಿಕರೂಪಗಳನ್ನು ಪಡೆದುಕೊಂಡವು. ಆರ್ಥಿಕನೀತಿಯನ್ನು ಅದು ಒಂದು ವಸ್ತುನಿಷ್ಠ ವಿಷಯವೆಂದು ಪರಿಗಣಿಸಿಕೊಂಡಿತು (ಇದನ್ನು ಬಕ್ತಿನ್ ಕೂಡಾ ತನ್ನ ಡಯಾಜಿಕಲ್ ಇಮಾಜಿನೇಶನ್‌ನಲ್ಲಿ ಇದನ್ನು ಚರ್ಚಿಸಿದ್ದಾನೆ) ಎರಡನೆಯದು ಅಭಿವೃದ್ಧಿಯ ಬಗೆಗೆ ಯುರೋಪ್ ತಳೆದ ನಿಲುವು. ಆಧುನಿಕ ಆರ್ಥಿಕತೆಯು ಅಭಿವೃದ್ಧಿ ಪರವಾಗಿರಬೇಕೆಂಬ ನಿಲುವು ವಸ್ತುನಿಷ್ಠವಾಯಿತು. ಸೈದನ ಚಿಂತನೆಯ ಪ್ರಕಾರ ಯುರೋಪ್ ಕೇಂದ್ರವು ಪ್ರಭುತ್ವಕ್ಕೆ ಅತ್ಯಂತ ಹೆಚ್ಚಿನ ಮಹತ್ವವನ್ನು ಕೊಟ್ಟಿತು. ಇಲ್ಲಿ ಮತ್ತೆ ಗಾಂಧಿಯವರ ಚಿಂತನೆಗಳನ್ನು ಉಲ್ಲೇಖಿಸಬೇಕು–

> **ಔದ್ಯೋಗಿಕರಣದ ಭವಿಷ್ಯವು ಕಗ್ಗತ್ತಲಿನಿಂದ ಕೂಡಿದೆ. ಅಮೇರಿಕ, ಜಪಾನ್, ಫ್ರಾನ್ಸ, ಜರ್ಮನಿಗಳು ಇಂಗ್ಲೆಂಡಿನ ಕೂಡ ಯಶಸ್ವಿಯಾಗಿ ಸ್ಪರ್ಧಿಸುತ್ತಲಿವಿ. ಭಾರತದಲ್ಲಿರುವ ತುಸುಗಿರಣಿಗಳೂ ಇಂಗ್ಲೆಂಡಿನ ಕೂಡ ಸ್ಪರ್ಧೆ ನಡೆಸಿವೆ. ಅದೂ ಅಲ್ಲದೆ, ಭಾರತದಲ್ಲಿ ಈಗ ಜಾಗೃತಿಯಾದಂತೆ ಪ್ರಕೃತಿ ಸಂಪತ್ತು. ಖನಿಜ ಸಂಪತ್ತು ಮತ್ತು ಮನುಷ್ಯ ಸಂಪತ್ತಿನಿಂದ ಸಮೃದ್ಧವಾದ ದಕ್ಷಿಣ ಆಫ್ರಿಕೆಯಲ್ಲಿಯೂ ಜಾಗೃತಿಯುಂಟಾಗುವುದು. ಬಲಶಾಲಿಗಳಾದ ಇಂಗ್ಲೀಷರು ಆಫ್ರಿಕೆಯ ಶಕ್ತಿಶಾಲಿಗಳಾದ ಇಂಗ್ಲೀಷರು ಆಫ್ರಿಕೆಯ ಶಕ್ತಿಶಾಲಿಗಳಾದ ಜನಾಂಗಗಳ ಮುಂದೆ ಕುಳ್ಳರಾಗಿ ಕಾಣುವರು. ಆಫ್ರಿಕನ್‌ರು ಉದಾರಿಗಳಾದ ಕಾಡು ಜನರೆಂದು ನೀವು ಅನ್ನಬಹುದು. ಆಫ್ರಿಕನ್‌ರು ಉದಾರಿಗಳೇನೋ ನಿಜ. ಆದರೆ ಅವರು ಕಾಡು ಜನರಲ್ಲ. ಆಫ್ರಿಕೆಯೆಂದರೆ ತಮ್ಮ ವಸ್ತುಗಳನ್ನು ಒಯ್ದು ತುಂಬುವ ಒಂದು ಉಗ್ರಾಣವೆಂದು ತಿಳಿದ ಪಾಶ್ಚಿಮಾತ್ಯರಿಗೆ ಇನ್ನು ಕೆಲವೇ ವರುಷಗಳಲ್ಲಿ ಅದು ತಮ್ಮ ವಸ್ತುಗಳನ್ನು ಒಯ್ದು ತುಂಬುವ ಒಂದು ಸ್ಥಳವಲ್ಲವೆಂಬುದು ಅನುಭವಕ್ಕೆ ಬರುವುದು ಔದ್ಯೋಗೀಕರಣದ ಭವಿಷ್ಯತ್ತು ಪಾಶ್ಚಿಮಾತ್ಯರಿಗೆ ಕತ್ತಲಿನಿಂದ ಒಡಗೂಡಿದ ದಾರೆ**

ಭಾರತಕ್ಕೆ ಅದು ಕಗ್ಗತ್ತಲಿನಿಂದ ಒಡಗೂಡಿದುದಾಗಲಾರದೆ? (ಯ. ಇ. 1931)

(ಸರ್ವೋದಯ ಮೋ.ಕ.ಗಾಂಧಿ 1960 ಪುಟ.66-68)

ಯುರೋಪಿನ ಪ್ರಭುತ್ವದ ವಸಾಹತು ನೀತಿಯು ರಾಜಕೀಯ ಅರ್ಥಶಾಸ್ತ್ರದ ಮೂಲಕ ಭಾರತೀಯ ಅಭಿವೃದ್ಧಿಯು ಸಾಧ್ಯವೆಂದು ಪ್ರತಿನಿಧಿಸಿತು. ಈ ರೀತಿಯ ಪರಿವರ್ತನಾ ಶೀಲ ಚಾರಿತ್ರಿಕತೆಯು ಪೌರಾತ್ಯವಾದಿ ಸಂಕಥನಕ್ಕೆ ದಾರಿಯಾಯಿತು. ಗಾಂಧಿಯವರ ಅರ್ಥ ಶಾಸ್ತ್ರದ ಪರಿಕಲ್ಪನೆಯು ಇದಕ್ಕಿಂತ ಭಿನ್ನವಾಗಿದೆ.

ಪಾಶ್ಚಾತ್ಯ ರಾಷ್ಟ್ರಗಳು ಇಂದು ಭೌತವಾದದ (ವಸ್ತುವಾದದ) ಭೂತದ ಅಡಿಯಲ್ಲಿ ಸಿಕ್ಕಿ ನರಳತ್ತಿವೆ. ಅವುಗಳ ನೀತಿವಿಕಾಸ ಕುಂಠಿತವಾಗಿಬಿಟ್ಟಿದೆ. ರೂಪಾಯಿ, ಆಣೆ, ಕಾಸಿನಲ್ಲಿ ಅವರು ತಮ್ಮ ಪ್ರಗತಿಯನ್ನು ಅಳೆಯುತ್ತಾರೆ. ಅಮೇರಿಕದ ಸಿರಿವಂತಿಕೆಯೇ ಮಾನದಂಡವಾಗಿ ಬಿಟ್ಟಿದೆ. ಇತರ ರಾಷ್ಟ್ರಗಳು ಅದನ್ನು ಕಂಡು ಕರುಬುತ್ತವೆ. ಅಮೆರಿಕದ ಸಿರಿವಂತಿಕೆಯನ್ನು ಗಳಿಸೋಣ, ಆದರೆ ಅವರ ಮಾರ್ಗವನ್ನು ಮಾತ್ರ ಬಿಡೋಣ ಎಂದು ನಮ್ಮ ದೇಶಬಾಂಧವರು ಕೆಲವರು ಹೇಳುವುದನ್ನು ಕೇಳಿದ್ದೇನೆ. ಅಂಥ ಪ್ರಯತ್ನವನ್ನೇನಾದರೂ ಮಾಡಿದರೆ ಅದಕ್ಕೆ ಸೋಲು ಕಟ್ಟಿಟ್ಟದ್ದೆಂದು ಸೂಚಿಸಲೆಳಸುತ್ತೇನೆ. ನಾವು ಏಕಕಾಲದಲ್ಲಿ ವಿವೇಕಿಗಳೂ, ಸಮಚಿತ್ತರೂ ಹಾಗೂ ರೋಷಾವಿಷ್ಟರೂ ಆಗಿರುವುದು ಸಾಧ್ಯವಿಲ್ಲ. ಜಗತ್ತಿನಲ್ಲೇ ಪರಮ ನೀತಿವಂತರಾಗುವಂತೆ ನಮ್ಮ ನಾಯಕರು ನಮಗೆ ಕಲಿಸಲಿ. ಈ ನಮ್ಮ ಭೂಮಿ ಒಂದು ಕಾಲದಲ್ಲಿ ದೇವತೆಗಳ ತವರು ಆಗಿತ್ತಂತೆ. ಗಿರಣಿಯ ಚಿಮಣಿಗಳು, ಕಾರ್ಖಾನೆಗಳ ಗದ್ದಲವೋ ಭೀಕರ, ಗುರಿ ಅರಿಯದ ಜನ, ಎಷ್ಟೋ ವೇಳೆ ಅಡ್ಡಜ್ಞಾನ ಅವರಿಗೆ, ಪೆಟ್ಟಿಗೆಗಳಲ್ಲಿ ಮೀನುಗಳನ್ನು ಒಟ್ಟಿದಂತೆ ಒಟ್ಟಲ್ಪಟ್ಟುದರಿಂದ ಪ್ರಸನ್ನಚಿತ್ತವೃತ್ತಿಯಿಲ್ಲ; ತೀರಾ ಅಪರಿಚಯಸ್ಥರ ನಡುವೆ ಇದ್ದಾರೆ, ಸಾಧ್ಯವಿದ್ದರೆ ಅವರು ಇವರಿಗೆ ಅರ್ಧಚಂದ್ರ ಪ್ರಯೋಗಿಸಿಯಾರು, ಪ್ರತಿಯಾಗಿ ಇವರು ಅವರಿಗೆ ಅರ್ಧಚಂದ್ರ ಪ್ರಯೋಗಿಸಬಹುದು-ಇಂಥ ಜನರಿಂದ ತುಂಬಿದ ಮೋಟಾರು ವಾಹನಗಳು ಹರಿದಾಡುವ ರಸ್ತೆಗಳು-ಇಂಥ ನಾಡು ದೇವತೆಗಳ ಆವಾಸಸ್ಥಳವೆಂದು ಊಹಿಸುವುದು ಆಶ್ಚರ್ಯ. ಇವೆಲ್ಲ ಐಹಿಕ ಪ್ರಗತಿಯ ಪ್ರತೀಕಗಳೆಂದು ಎಣಿಸಲ್ಪಟ್ಟಿರುವ ದೆಸೆಯಿಂದ ಇವನ್ನು ಉಲ್ಲೇಖಿಸಿದ್ದೇನೆ. ಇವಂತೂ ನಮ್ಮ (ಭೌತ) ಸುಖವನ್ನು ಅಣುವಿನಷ್ಟೂ ಹೆಚ್ಚಿಸವು. (ಅರ್ಥ ವಿಚಾರ ಮೋ.ಕ.ಗಾ ೧೯೫೯. ಪುಟ. ೫೮)

ಫುಕೋ ಹೇಳಿದಂತೆ ಇದರ ಪರಿಣಾಮವಾಗಿ ಪ್ರಭುತ್ವದ ಅಧಿಕಾರದ ಪರಿಕಲ್ಪನೆಯು ಮುಂಚೂಣಿಗೆ ಬಂದಿತು. ಅಷ್ಟೇ ಅಲ್ಲ ಹದಿನೆಂಟನೆಯ ಶತಮಾನದ ಅನಂತರ ಹೊಸ ರೀತಿಯ ಸಂಕಥನಗಳು ಪ್ರಾರಂಭವಾದವು. ವಸಾಹತು ಪ್ರಭುತ್ವ ತನಗೆ ತಾನೇ ಆಡಳಿತಾತ್ಮಕ ಅಧಿಕಾರಕ್ಕೆ ಹೊಸ ಭಾಷ್ಯವನ್ನು ಬರೆಯಿತು. ೧೯೭೮ರ ಅನಂತರ ಸೈದ್ ಫುಕೋನ ಅಧಿಕಾರ ಕೇಂದ್ರಿತ ಚಿಂತನೆಯ ಮಾದರಿಯನ್ನು ಬದಲಾಯಿಸಿಕೊಂಡು, ತೌಲನಿಕ ಸಾಹಿತ್ಯದ ಅಧ್ಯಯನ ಮುಖಾಂತರ ಮಾನವೀಯತೆಯವಾದವನ್ನು ತನ್ನ ಚಿಂತನೆಯ ಕ್ರಮಕ್ಕೆ ಜೋಡಿಸಿಕೊಂಡ. ಎರಡನೆಯದಾಗಿ ಸೈದ್ ಪೌರಾತ್ಯವಾದಕ್ಕೆ ಸಂಕೇತಶಾಸ್ತ್ರವನ್ನು ಅಳವಡಿಸಿದ. ಇದರಿಂದಾಗಿ ಅವನಿಗೆ ಪಠ್ಯಗಳ ಆಯ್ಕೆ ಮುಖ್ಯವಾಯಿತು. ಅವನ ಪ್ರಕಾರ ಯುರೋಪಿನ ಪಾಶ್ಚಾತ್ಯ ಮಾದರಿಯ ಅನನ್ಯತೆಯು ಹೊಸ ಚಾರಿತ್ರಿಕ ಅಧ್ಯಯನಕ್ಕೆ ಮಾದರಿಯಾಯಿತು. ಎರಡನೆಯದಾಗಿ ಯುರೋಪಿನ ಅನನ್ಯತೆಯು ವಾಸ್ತವವಾಗಿ ಗ್ರೀಕ್ (ಅದರಲ್ಲಿಯೂ ಪ್ರಾಚೀನ ಗ್ರೀಕ್‌ನ ಸೌಂದರ್ಯಶಾಸ್ತ್ರದ) ಪುನರ್ ಅನ್ವಯಕ್ಕೆ ಕಾರಣವಾಯಿತು. ಇದನ್ನು ನಾವಿಲ್ಲಿ ಗಂಭೀರವಾಗಿ ಪರಿಗಣಿಸಬೇಕು. ಯಾಕೆಂದರೆ ಈ ಚಿಂತನೆಗಳ ಪರೋಕ್ಷ ಪರಿಣಾಮಗಳು ಕನ್ನಡ ಸಾಹಿತ್ಯದ ಮೇಲೆಯೂ ಆಗಿದೆ. ಗೀತಾಮಾತೆಯೇ ಗಾಂಧಿಗೆ ಬಹಳ ಮುಖ್ಯವಾಗಿದೆ.ಗಾಂಧಿ ಪಶ್ಚಿಮಕ್ಕೆ ಮುಖಾಮುಖಿಯಾಗುವಾಗ ಇದನ್ನೇ ಪ್ರತಿಪಾದಿಸುತ್ತಾರೆ. ನೀತಿ ಮತ್ತು ಧರ್ಮವೇ ಗಾಂಧಿ ಚಿಂತನೆಯ ಅಡಿಗಲ್ಲಾಗಿದೆ.

> **ಶೀಲನಿಯಮಗಳು, ನೀತಿಶಾಸ್ತ್ರ, ಧರ್ಮ–ಇವು ಸಮಾನಾರ್ಥಕ ಶಬ್ದಗಳು. ಧರ್ಮಬಾಹಿರವಾದ ನೈತಿಕ ಜೀವನವು ಮರಳಿನ ಮೇಲೆ ಕಟ್ಟಿದ ಮನೆಯನ್ನು ಹೋಲುತ್ತದೆ. ಹಾಗೆಯೇ, ನೀತಿಬಾಹಿರವಾದ ಧರ್ಮವನ್ನು ಕೇವಲ ಸಪ್ಪಳ ಮಾಡುವುದಕ್ಕೂ, ಒಬ್ಬರನ್ನೊಬ್ಬರು ತಲೆ ಒಡೆದುಕೊಳ್ಳುವುದಕ್ಕೂ ಉಪಯುಕ್ತವಾಗುವ ತಾಳ ಜಾಗಟೆಗೆ ಸಮವೆನ್ನಬಹುದು. ಸತ್ಯ, ಅಹಿಂಸೆ, ಇಂದ್ರಿಯನಿಗ್ರಹಗಳು ನೀತಿನಿಷ್ಠೆಯ ಭಾಗವಾಗಿವೆ. ಮನುಷ್ಯಕುಲ ಎಂದೆಂದೋ ಅನುಷ್ಠಾನಕ್ಕೆ ತಂದಿರುವ ಪ್ರತಿಯೊಂದು ಸದ್ಗುಣವೂ ಆಶ್ರಯಭೂತವಾದ ಈ ಮೂಲ ಸದ್ಗುಣತ್ರಯದಿಂದಲೇ ಬಂದದ್ದು. ಅಲ್ಲದೇ, ನಾನು ದೇವರೆಂದು ಪರಿಗಣಿಸಿರುವ ಸತ್ಯದಿಂದ ಅಹಿಂಸೆಯೂ, ಇಂದ್ರಿಯನಿಗ್ರಹವೂ ಉತ್ಪನ್ನವಾಗುತ್ತವೆ. (ಹರಿಜನ. ೩–೧೦–೩೬) (ಧರ್ಮ ಮತ್ತು ನೀತಿ ಮೋ.ಕ.ಗಾ. ೧೯೫೮. ಪುಟ. ೨)**

ವಸಾಹತುಶಾಹಿ ಆಡಳಿತ ಕ್ರಮದಲ್ಲಿ ಅನೇಕ ಯುರೋಪಿನ ವಿದ್ವಾಂಸರು ಭಾರತ ಕುರಿತು ವಿವಿಧ ರೀತಿಯ ಅಧ್ಯಯವನ್ನು ಕೈಗೊಂಡರು. ಪೌರಾತ್ಯವಾದಿ ಅಧ್ಯಯನಕ್ಕೆ

ಸಂಬಂಧಿಸಿದಂತೆ ಇದು ಹೊಸ ಅವಕಾಶವನ್ನು ಕಲ್ಪಿಸಿತು. ಉದಾ: ಕಿಟ್ಟೆಲ್‌ಕೋಶ: ಮೆಕೆಂಜಿ ಕೈಫಿಯತ್ತು; ಇತ್ಯಾದಿ; ಪೌರಾತ್ಯವಾದಿ ಚಿಂತನೆಯ ಕ್ರಮವು ಸಂಸ್ಕೃತಿಯ ಅಧ್ಯಯನಕ್ಕೆ ಪೂರಕವಾಯಿತು. ಈ ಅಧ್ಯಯನ ಕ್ರಮವು ಎಷ್ಟು ಮುಂಚೂಣಿಗೆ ಬಂತೆಂದರೆ ಗ್ರಂಥಸಂಪಾದನೆಯ ಶಾಸ್ತ್ರದಲ್ಲಿ ಯಾವ ಅಕ್ಷರ ಸರಿ ಯಾವ ಅಕ್ಷರ ತಪ್ಪು; ಯಾವುದು ಸ್ಖಾಲಿತ್ಯ ಮುಂತಾದ ಪ್ರಶ್ನೆಗಳು ಮುಂಚೂಣಿಗೆ ಬಂದವು. ಇದರಿಂದಾಗಿ ಬುದ್ಧಿಜೀವಿಗಳು ವಸಾಹತು ಕಾಲದಲ್ಲಿ ಪಠ್ಯಕ್ಕೆ ಮೂಲರೂಪವೊಂದಿದೆ, ಅದನ್ನು ವಸ್ತುನಿಷ್ಠ ಅಧ್ಯಯನಕ್ಕೆ ಅಳವಡಿಸಿಕೊಳ್ಳಬೇಕು ಎಂದು ಹೇಳತೊಡಗಿದರು. ಸಂಸ್ಕೃತಿಗೆ ಇರುವ ಮೂಲರೂಪವನ್ನು ಹುಡುಕುವುದು ಬಹು ಮುಖ್ಯವೆಂದು ಬುದ್ಧಿಜೀವಿಗಳು ಹೇಳತೊಡಗಿದರು. ಬುದ್ಧಿಜೀವಿಗಳು ಹೇಳಿರುವ 'ಹುಡುಕಾಟ' ಪಶ್ಚಿಮ ಕೇಂದ್ರಿತ ಚಿಂತನೆಗೆ ಕಾರಣವಾಯಿತು. ಈ ಕಾರಣಕ್ಕೆ ಪೌರಾತ್ಯವಾದವು, 'ಪ್ರತಿಚರಿತ್ರೆಯು ಅಗತ್ಯವಿದೆ. ಹಾಗೂ ಪಶ್ಚಿಮದ ಅನುಕರಣೆಯಿಂದ ಬಿಡುಗಡೆಗೊಳ್ಳಬೇಕೆಂದು' ಹೇಳಿತು. ಭೂತಕಾಲದ ಹುಡುಕಾಟ ಪೌರಾತ್ಯವಾದಕ್ಕೆ ಅತ್ಯಂತ ಅಗತ್ಯದ ಪರಿಕರವಾಯಿತು. ಯುರೋಪಿನ ವಾಸ್ತವತಾವಾದ ಮತ್ತು ಪ್ರಗತಿಪರತೆಯು ಕೇವಲ ಪುನರುಜ್ಜೀವನ ಚಳುವಳಿಯ ಉಪಉತ್ಪನ್ನವಲ್ಲ.

> ಔದ್ಯೋಗೀಕರಣ ನಿಸರ್ಗನಿಯಮವಿದ್ದಂತೆ, ಆದರೆ ನಿಸರ್ಗವನ್ನು ನಿಯಂತ್ರಿಸಲು, ಅದರ ನಿಯಮಗಳನ್ನು ಗೆಲ್ಲಲ್ಲು ಮನುಷ್ಯನಿಗೆ ಸಾಧ್ಯ. ಅವನ ಗೌರವ, ಗಾಂಭೀರ್ಯ, ಅಭೇದ್ಯ ಅಡ್ಡಿಗಳ ಇದುರಿನಲ್ಲೂ ದೃಢಸಂಕಲ್ಪವನ್ನು ಅವನಿಂದ ಬೇಡುತ್ತವೆ. ನಮ್ಮ ಅನುದಿನದ ಬದುಕೂ ಅಂಥ ಜೈತ್ರ ಯಾತ್ರೆಯೇ. ಬೇಸಾಯಗಾರನಿಗೆ ಅದು ಚೆನ್ನಾಗಿ ಗೊತ್ತು.
>
> ಔದ್ಯೋಗಿಕರಣ ಎಂದರೆ ಬಹುಸಂಖ್ಯ ಜನರ ಮೇಲೆ ಹಿಡಿಯಷ್ಟು ಜನರ ಹಿಡಿತ ಎಂದಲ್ಲದೆ ಮತ್ತೇನು? ಅದರಲ್ಲಿ ಆಕರ್ಷಕವಾದುದೇನೂ ಇಲ್ಲ, ಅನಿವಾರ್ಯವಾದುದೂ ಅದರಲ್ಲಿಲ್ಲ. ಹಿಡಿಯಷ್ಟು ಜನರ ಸವಿಮಾತುಗಳಿಗೆ ನಕಾರ ನುಡಿಯುವ ಎದೆಗಾರಿಕೆಯನ್ನು ಬಹುಜನರು ತಂದುಕೊಂಡರೆ ಅಲ್ಪ ಸಂಖ್ಯಾಕರ ಆಟ ನಿಂತಂತೆಯೇ.
>
> ಮಾನವಸ್ವಭಾವದಲ್ಲಿ ವಿಶ್ವಾಸಹೊಂದಿರುವುದು ಒಳಿತೇ. ಅಂಥ ಶ್ರದ್ಧೆ ಇರುವುದರಿಂದಲೇ ನಾ ಬದುಕಿದೇನೆ. ಅಂತಿಮವಾಗಿ ಎಲ್ಲವೂ ಒಳಿತೇ ಆದರೂ, ವ್ಯಕ್ತಿಗಳೂ ರಾಷ್ಟ್ರಗಳೆಂಬ ವ್ಯಕ್ತಿಸಮುದಾಯಗಳೂ ಈ ಹಿಂದೆ ನಾಶವಾಗಿವೆಯೆಂಬ ಇತಿಹಾಸದ ಸತ್ಯಕ್ಕೆ ನನ್ನ ಈ

> ಶ್ರದ್ಧೆ ನನ್ನನ್ನು ಕುರುಡಾಗಿಸಿಲ್ಲ. ರಾಷ್ಟ್ರಗಳು ತಮ್ಮ ಅಕಾರ್ಯಗಳ ನಿಮಿತ್ತ ನಾಶವಾಗಿವೆಯೆಂಬುದಕ್ಕೆ ರೋ, ಗ್ರೀಸ್, ಬ್ಯಾಬಿಲಾನ್, ಈಜಿಪ್ಟ್ ಹಾಗೂ ಇತರ ಅನೇಕವು ಶಾಶ್ವತ ಸಾಕ್ಷಿಗಳು. ಯೂರೋಪ್ ತನ್ನ ಉತ್ತಮ ವೈಜ್ಞಾನಿಕ ವಿಚಾರಶಕ್ತಿಯ ದೆಸೆಯಿಂದಾಗಿ ಸ್ಪಷ್ಟ ನಿರ್ದೇಶವನ್ನು ಗ್ರಹಿಸಿ, ತನ್ನ ಹೆಜ್ಜೆ ಹಿಂತೆಗೆದುಕೊಂಡಿತು, ಅನೀತಿಕರ ಔದ್ಯೋಗಿಕರಣದಿಂದ ಪಾರಾಗುವ ಹಾದಿ ಹುಡುಕೀತು–ಎಂದು ಆಶಿಸಬಹುದು, ಅದೇನೂ ಆ ಹಳೆಯ ನಿರಪೇಕ್ಷ ಸರಳತೆಗೆ ಪುನರಾಗಮನವಾಗಬೇಕಾದುದಿಲ್ಲ. ಆದರೆ ಅದು ಪುನರ್ವ್ಯವಸ್ಥೆ ಖಂಡಿತ, ಅದರಲ್ಲಿ ಗ್ರಾಮಜೀವನವೇ ಪ್ರಧಾನ; ಪಶುಶಕ್ತಿ, ಭೌತಶಕ್ತಿ ಆತ್ಮಶಕ್ತಿಗೆ ಅಧೀನ. (ಅರ್ಥ ವಿಚಾರ ಮೋ.ಕ.ಗಾ ೧೯೫೫. ಪುಟ.೧೮೨)

ಪೌರಾತ್ಯವಾದವು ಒಂದಡೆಗೆ ಪ್ರಾಚ್ಯದ ಕುರಿತು ಮತ್ತೊಂದು ಕಡೆಯಿಂದ ವಸಾಹತುಶಾಹಿ ಅನುಭವದ ಸಂಕಥನದ ಕುರಿತು ಮಾತಾಡುತ್ತದೆ. ಈ ದೃಷ್ಟಿಯಿಂದ ಸಾಹಿತ್ಯ ಚರಿತ್ರೆಯುನ್ನು; ಸಾಂಸ್ಕೃತಿಕ ಬಹುತ್ವವನ್ನು; ಉದಾರತೆಯುನ್ನು ಸಹಾನುಭೂತಿಯನ್ನು ಅದರ ಜೊತೆಗೆ ವಾದಮಂಡನೆಗಾಗಿ ಸಂವಾದಿತನವನ್ನು ಇಟ್ಟುಕೊಂಡಿರುವ ಪೌರಾತ್ಯವಾದವು ಅಂತಿಮವಾಗಿ ಎತ್ತಿಹಿಡಿಯುವುದು ಉದಾರವಾದಿ ಮಾನವತಾವಾದವನ್ನು ಮಾತ್ರ. ಸೈದ್ ಒಂದಡೆಯಿಂದ ಕ್ರಿಯಾಶೀಲ ಮಾನವತಾವಾದಿ ಮತ್ತೊಂದುಕಡೆಯಿಂದ ಪುಕೋನ ಸಂಕಥನ ಮಾದರಿಯ (ಅಧಿಕಾರ ಮತ್ತು ಅಧಿಕಾರೇತರೆ ವರ್ಗಗಳಲ್ಲಿ ನಡೆಯುವ ಸಂಕಥನಗಳು ಇದನ್ನೇ ಅಧಿಕಾರ ಸಿದ್ಧಾಂತವೆಂದೂ ಕರೆಯಬಹುದು) ವಕ್ತಾರನಂತೆಯೂ ಮಾತಾನಾಡುತ್ತಾನೆ. ಸೈದ್ ಒಂದು ಸಂದರ್ಭದಲ್ಲಿ ಹೀಗೆ ಹೇಳುತ್ತಾನೆ: "ಪೌರಾತ್ಯವೆಂದರೆ ಒಂದು ರೀತಿಯ ಸಂಕಥನ ಮಾತ್ರ. ಯುರೋಪಿಯನ್ ಸಂಸ್ಕೃತಿಯು ವಸಾಹತು ಯುಗದಲ್ಲಿ ಒಂದೇ ರೀತಿಯ ವ್ಯಾಖ್ಯೆಯಲ್ಲಿ ಭಾರತವನ್ನು ನೋಡಿರಲಿಲ್ಲ. ಅದು ಭಾರತವನ್ನು ಒಂದು ಚೌಕಟ್ಟಿನೊಳಗೆ ತರಲು ಪ್ರಯತ್ನಿಸಿತು. ಮತ್ತೊಂದು ಕಡೆಯಿಂದ ಸಾಮಾಜಿಕ ನಾಗರಿಕತೆಯ ಕುರಿತು ಮಾತಾಡಿತು. ಇದರೊಂದಿಗೆ ಇಂಗ್ಲೀಷ್ ಪ್ರಭುತ್ವಕ್ಕೆ ಬಂದೂಕುಗಳಿದ್ದವು ಮಿಲಿಟರಿ ಶಕ್ತಿಗಳಿದ್ದವು. ಬಂದೂಕು ಹಿಡಿಯಲು ಭಾರತೀಯರಿಗೆ ಅವರು ಕಲಿಸಿದರು" ಆಗಿನ ಅತ್ಯಂತ ಜನಪ್ರಿಯ ಪರಿಭಾಷೆಯೆಂದರೆ ಇಂಗ್ಲೀಷರ ಒಂದು ಕೈಯಲ್ಲಿ ಬಂದೂಕು ಇತ್ತು. ಮತ್ತೊಂದು ಕೈಯಲ್ಲಿ ಪುಸ್ತಕಗಳಿದ್ದವು. ಅದಕ್ಕಾಗಿಯೇ ಗಾಂಧಿ ಅಹಿಂಸೆಯ ಕುರಿತು ಹೇಳಿದ್ದು.

ಯುರೋಪಿನ ಪುನರುಜ್ಜೀವನ ಕಾಲಘಟ್ಟದಲ್ಲಿ ಚಾಲ್ತಿಗೆ ಬಂದ ವೈಜ್ಞಾನಿಕತೆ, ತಾತ್ವಿಕತೆ, ಪ್ರಗತಿಪರತೆಗಳು ವಸಾಹತು ದೇಶಗಳ ಮೇಲೆಯೂ ಪ್ರಭಾವ ಬೀರಿತು ಎಂಬುದನ್ನು ಮರೆಯಬಾರದು. ವಿಶೇಷವೆಂದರೆ ಪುಕೋ ಪಶ್ಚಿಮದ ಚಾರಿತ್ರಿಕ ಬೆಳವಣಿಗೆಯನ್ನು ಸೂಕ್ಷ್ಮವಾಗಿ ಗಮನಿಸಿಕೊಂಡಿದ್ದ ಹದಿನಾರನೆಯ ಶತಮಾನದಿಂದ ಹದಿನೆಂಟನೆಯ ಶತಮಾನದವರೆಗೆ ಯುರೋಪಿನಲ್ಲಿ ನಡೆದ ಅನೇಕ ಚಾರಿತ್ರಿಕ ಸಾಮಾಜಿಕ ಸ್ಥಿತ್ಯಂತರಗಳನ್ನು ಮನಗಂಡಿದ್ದರ ಪರಿಣಾಮವಾಗಿ ಪುಕೋ ಮಾನವೀಯತೆ ಮತ್ತು ಜ್ಞಾನಕ್ಕೆ ನೇರ ಸಂಬಂಧವಿಲ್ಲವೆಂದು ಪ್ರತಿಪಾದಿಸಿದ. ಮಾನವೀಯತೆಯು ಮೂಲತಃ ಮನುಷ್ಯ ಸಂಬಂಧಗಳನ್ನು ಆಧರಿಸಿಕೊಂಡಿದೆ. ಅದಕ್ಕೆ 'ಜ್ಞಾನ'ದ ಅವಶ್ಯಕತೆಯೆ? ಈ ದೃಷ್ಟಿಯಿಂದಲೇ ಪುಕೋ ಅಧಿಕಾರ ಸಿದ್ಧಾಂತವನ್ನು ಜ್ಞಾನದ ಶಾಸ್ತ್ರವನ್ನು (ಆರ್ಕ್ಯಾಯಲಾಜಿ ಆಪ್ ನಾಲೆಜ್) ಮಂಡಿಸಿದ್ದು ಚಾರಿತ್ರಿಕ ಬದಲಾವಣೆಯಾದ ಹಿನ್ನೆಲೆಯಲ್ಲಿ. ಈ ದೃಷ್ಟಿಯಿಂದ ಜ್ಞಾನ; ಅಧಿಕಾರ ಮತ್ತು ಚರಿತ್ರೆಯ ನೀಲಿನಕ್ಷೆಯನ್ನು ಅವನು ಸಿದ್ಧಪಡಿಸಿದ. ಗ್ರಾಮೀಣ ಬುದ್ಧಿವಂತಿಕೆ (ರೂರಲ್‌ಟೈಪ್ ಆಪ್ ಇಂಟಲೆಕ್ಚುವಲ್)ನಗರಕೇಂದ್ರಿತ ಬುದ್ಧಿವಂತಿಕೆಯ ರೂಪಕಗಳು ಹುಟ್ಟಿದ್ದು ಕೂಡಾ ಇದೇ ಕಾರಣಕ್ಕೆ. ಓರಿಯಂಟಲಿಸಂ ಸಾಹಿತ್ಯ ಪ್ರಕಾರಗಳನ್ನು ವರ್ಗೀಕರಿಸಿ ಅದರ ಮೂಲಕ ಪಠ್ಯಗಳ ತೌಲನಿಕ ಅಧ್ಯಯನ ಕ್ರಮಗಳನ್ನು ರೂಪಿಸಿತು. ಇಂಗ್ಲೆಂಡಿನ ಏಕಕೇಂದ್ರಿತ ಚರಿತ್ರೆಯು ತನ್ನ ಚಾರಿತ್ರಿಕ ಅಗತ್ಯಕ್ಕನುಸಾರವಾಗಿ ಪಠ್ಯಗಳನ್ನು ಅಧ್ಯಯನ ನಡೆಸಿತು. ಇದರ ಜೊತೆಗೆ ಯುರೋಪಿನ ಅನನ್ಯತೆಗೆ ಈಗಾಗಲೇ ಹೇಳಿರುವಂತೆ ಗ್ರೀಕ್ ಕೃತಿಗಳ ಪ್ರಭಾವವಿದೆ. ಯುರೋಪಿನ ಹತ್ತೊಂಬತ್ತನೆಯ ಶತಮಾನದ ಸಾಹಿತ್ಯದ ಮೇಲೆ ಫ್ರೆಂಚ್ ಸಾಹಿತ್ಯದ ಪ್ರಭಾವವಿದೆ. ಅದರಿಂದಾಗಿ ಇಂಗ್ಲೀಷಿನ ನಿರೂಪಣೆಯ ಕ್ರಮವು ಪರಿವರ್ತಿತಗೊಂಡಿವೆ. ಓರಿಯಂಟಲಿಸಂ ಶೈಕ್ಷಣಿಕ ವಲಯದಲ್ಲಿ ತನ್ನದೇ ಆದ ವೈಚಾರಿಕ ಚೌಕಟ್ಟನ್ನು ನಿರ್ಮಿಸಿಕೊಂಡಿತು. ಮಾತ್ರವಲ್ಲ ಫುಕೋನ ಸಿದ್ಧಾಂತವನ್ನು ತನಗೆ ಬೇಕಾದ ರೀತಿಯಲ್ಲಿ ಓರಿಯೆಂಟ್‌ಲಿಸಂ ಅಳವಡಿಸಿಕೊಂಡಿತು. ಗಾಂಧಿಯ ವಿಚಾರ ಧಾರೆಯು ಇದಕ್ಕಿಂತ ಭಿನ್ನ.

ಕಟ್ಟಕಡೆಗೆ ಮತ್ತೊಮ್ಮೆ ಹೇಳುತ್ತೇನೆ:

೧. ನಿಜವಾದ ಸ್ವರಾಜ್ಯ ಎಂದರೆ ಆತ್ಮರಾಜ್ಯ ಅಥವಾ ಆತ್ಮಸಂಯಮ.

೨. ಅದಕ್ಕೆ ದಾರಿ ಸತ್ಯಾಗ್ರಹ. ಆತ್ಮಬಲ ಅಥವಾ ಪ್ರೇಮಬಲ.

೩. ಈ ಬಲವನ್ನು ಪ್ರಯೋಗಿಸಲು ಸರ್ವವಿಧದಲ್ಲಿಯೂ ಸರ್ವಥಾ ಸ್ವದೇಶಿ ಅಗತ್ಯ

೪. ಇಂಗ್ಲಿಷರ ಮೇಲೆ ಹಗೆಯಿಂದ ಅಥವಾ ಪ್ರತೀಕಾರ ಬುದ್ಧಿಯಿಂದ ಏನೂ

ಮಾಡಬೇಕಾಗಿಲ್ಲ. ಮಾಡಬೇಕಾದುದನ್ನೆಲ್ಲ ಕರ್ತವ್ಯ ಎಂದು ಮಾಡಬೇಕು. ಒಂದು ವೇಳೆ ಇಂಗ್ಲಿಷರು ಉಪ್ಪಿನ ತೆರಿಗೆ ತೆಗೆದುಹಾಕಿದರೆ, ನಮ್ಮ ಹಣವನ್ನು ಹಿಂತಿರುಗಿ ಕೊಟ್ಟರೆ, ಭಾರತೀಯರಿಗೆ ದೊಡ್ಡ ದೊಡ್ಡ ಅಧಿಕಾರಗಳನ್ನು ಕೊಟ್ಟರೆ, ಇಂಗ್ಲಿಷ್ ಸೇನೆಯನ್ನು ಇಲ್ಲಿಂದ ತೆಗೆದುಹಾಕಿದರೆ, ಆಗಲೂ ನಾವು ಅವರ ಗಿರಣಿ ಪದಾರ್ಥಗಳನ್ನು ಉಪಯೋಗಿಸುವುದಿಲ್ಲ. ಇಂಗ್ಲಿಷ್ ಭಾಷೆಯನ್ನು ಬಳಸುವುದಿಲ್ಲ. ಅವರ ಉದ್ಯೋಗಗಳಿಗೆ ಆಶ್ರಯ ಕೊಡುವುದಿಲ್ಲ. ಖಂಡಿತ, ಇವೆಲ್ಲವೂ ನಮಗೆ ಹಾನಿಕರ. ಆದುದರಿಂದ ನಮಗೆ ಅವು ಬೇಡ. ನನಗೆ ಇಂಗ್ಲಿಷರನ್ನು ಕಂಡರೆ ಕಿಂಚಿತ್ತೂ ಹಗೆಯಿಲ್ಲ. ಅವರ ನಾಗರಿಕತೆಗೆ ಮಾತ್ರ ನಾನು ಪೂರ್ಣ ವಿರೋಧಿ.

ಸ್ವರಾಜ್ಯ–ಶಬ್ದಕ್ಕೆ ನಿಜವಾದ ಅರ್ಥ ತಿಳಿಯದೆ ನಾವು ಅದನ್ನು ಉಪಯೋಗಿಸಿದ್ದೇವೆ ಎನಿಸುತ್ತದೆ. ನನಗೆ ತಿಳಿದ ಮಟ್ಟಿಗೆ ನಾನು ಅದನ್ನು ತಿಳಿಸುವ ಪ್ರಯತ್ನ ಮಾಡಿದ್ದೇನೆ. ಈ ಬಗೆಯ ಸ್ವರಾಜ್ಯ ಸಂಪಾದನೆಗೆ ನನ್ನ ಬಾಳು ಮೀಸಲು. ಇದಕ್ಕೆ ನನ್ನ ಅಂತರಾತ್ಮವೇ ಸಾಕ್ಷಿ. (ಹಿಂದ್ ಸ್ವರಾಜ್ಯ ಮೋ.ಕ.ಗಾ. ೨೦೦೯ ಪುಟ. ೯೮)

ಪೌರಾತ್ಯವಾದವು ಪ್ರಭುತ್ವ ವಿರೋಧಿ ಚೌಕಟ್ಟನ್ನು ಹೊಂದಿದೆ. ಸೈದನ ಪ್ರಕಾರ ಯುರೋಪಿನ ಎಲ್ಲಾ ಜ್ಞಾನಪರಂಪರೆಗಳು ಮತ್ತು ಪೌರಾತ್ಯಜ್ಞಾನ ಪರಂಪರೆಗಳು ಬೇರೆ. ಯುರೋಪಿನ ನಿಜವಾದ ಜ್ಞಾನಪರಂಪರೆ; ಅದರ ಹಿಂದಿರುವ ತಾತ್ವಿಕತೆಗಳ ಸ್ವರೂಪವು ಸಂಕೀರ್ಣವಾದವು. ಪೌರಾತ್ಯವಾದವು ಆಧುನಿಕ ಜ್ಞಾನ ಜಗತ್ತಿನ ಪರಿಕರಗಳನ್ನು ಬಳಸಿಕೊಂಡಿವೆ. ಯುರೋಪಿನ ಜ್ಞಾನಪರಪಂರೆಯೇ ನಿಜವಾದುದು ವಸಾಹತು ದೇಶಗಳ ಜ್ಞಾನಪರಂಪರೆ ಸತ್ಯವಾದುದಲ್ಲ ಎಂಬ ಯುರೋಪಿಯನ್ ಪಂಡಿತರ ನಿಲುವಿಗೆ ಮಾತ್ರ ಪೌರಾತ್ಯವಾದದ ಪ್ರತಿಕ್ರಿಯೆಯು ಕುತೂಹಲದಾಯಕ.

ಸೈದ್‌ನ ಮಾತುಗಳು ಕುತೂಹಲದಾಯಕ. ಅವನು ಹೇಳುವಂತೆ ಯಾರು ಪೌರಾತ್ಯವಾದದಲ್ಲಿ ಆಸಕ್ತರಾಗಿದ್ದಾರೊ ಮಾನವಶಾಸ್ತ್ರಜ್ಞರಂತೆ; ಸಮಾಶಾಸ್ತ್ರಜ್ಞರಂತೆ; ಚರಿತ್ರೆಕಾರರಂತೆ ಕೆಲಸ ಮಾಡಬೇಕಾಗುತ್ತದೆ. ಯಾವುದನ್ನು ಆಧುನಿಕ ಯುರೋಪ್ ಅಧ್ಯಯನದ ಶಿಸ್ತುಗಳೆಂದು ಕರೆಯಿತೋ ಅದನ್ನೇ ಸೈದ್ ಅನ್ವಯಿಸಿರುವುದು ಚಿಂತನಾರ್ಹವಾಗಿದೆ.

ಪೌರಾತ್ಯವಾದವು ಕೂಡಾ ಈ ಅರ್ಥದಲ್ಲಿ ಆಧುನಿಕಯುಗದ ಅಧ್ಯಯನ ಶಾಸ್ತ್ರವಾಗಿದೆ. ಅದು ಎರಡನ್ನು ಬೇರೆ ಮಾಡುತ್ತದೆ: 'ಪಶ್ಚಿಮದ ನೀವು' ಹಾಗೂ "ಪೂರ್ವದ ನಾವು". ಅದು ಪಶ್ಚಿಮದ ಬೌದ್ಧಿಕ ಯಜಮಾನಿಕೆಯನ್ನು ನಿರಾಕರಿಸುತ್ತದೆ. ಮಾತ್ರವಲ್ಲ ಅದು ಸೃಷ್ಟಿಸಿದ ತಾತ್ವಿಕ ಯಜಮಾನಿಕೆಯನ್ನು ಕೂಡಾ ಅದರ ಮೂಲಕ ಪೌರಾತ್ಯ ಚಿಂತನೆಯ ಕ್ರಮವನ್ನು ಸಮೇತ ಪೌರಾತ್ಯವಾದವು ಈ ಮೊದಲು ಹೇಳಿದಂತೆ

ನಿರ್ದಿಷ್ಟ ವರ್ಗೀಕರಣವನ್ನು ಮಾಡುತ್ತದೆ. ಯುರೋಪಿನ ಕಲ್ಪಿತ ಭೂರೇಖೆಯನ್ನು ಪೌರಾತ್ಯವಾದ ನಿರಾಕರಿಸಿ, ಯುರೋಪ್ ಹೆಚ್ಚು ಅಧಿಕೃತವೆಂಬ ಮಾನದಂಡವನ್ನು ತಳ್ಳಿಹಾಕುತ್ತದೆ. ಯುರೋಪ್ ಈತನಕ "ವಸಾಹತುದೇಶಗಳು" ಅವುಗಳ ಬಲಹೀನತೆ ಅವುಗಳ ಅನಾಗರಿಕತೆ ಸಾಂಪ್ರದಾಯಿಕತೆ ; ಜಾತೀಯತೆ ಮುಂತಾದ ಅನೇಕ ಪರಿಕಲ್ಪನೆಗಳಿಂದ ನಿರಾಕರಿಸಿದ ವಾದಗಳನ್ನು ಪೌರಾತ್ಯವಾದವು ಅಲ್ಲಗಳೆಯುತ್ತದೆ. ಏಷ್ಯಾ ಎನ್ನುವುದು ಏನಿದೆ ಅದಕ್ಕೆ ಅದರದೇ ಚರಿತ್ರೆಯಿದೆ ಜ್ಞಾನರೂಪಗಳಿವೆ. ಅವುಗಳನ್ನು ಪುನಃಕಟ್ಟಬೇಕು. ಎನ್ನುವುದು ಓರಿಯಿಂಟಲಿಸಂನ ಪ್ರಮುಖವಾದ ನಿಲುವು ಪಶ್ಚಿಮಕ್ಕಿರುವ ಕಲ್ಪಿತರೇಖೆ ಮತ್ತು ಪುನರುಜ್ಜೀವನ ಕಾಲಘಟ್ಟದ ಅನಂತರ ಅದು ರೂಪಿಸಿದ ಪ್ರಾದೇಶಿಕ ಸ್ವಯಕೇಂದ್ರಿತ ಚಿಂತನೆಗಳನ್ನು ಪೌರಾತ್ಯವಾದವು ನಿರಚನೆಗೊಳಿಸಿ ಜ್ಞಾನಪರಂಪರೆಯ ದೃಷ್ಟಿಯಿಂದ ಪಂಥಾಹ್ವಾನವನ್ನು ಒಡ್ಡುತ್ತದೆ. ಯುರೋಪ್ ತನಗೆ ತಾನೇ ಭ್ರಮಿಸಿಕೊಂಡ ಅಹಂಕಾರವನ್ನು ಅದರದೇ ಸೀಮಾರೇಖೆಗಳನ್ನು; ಅದರ ಯಜಮಾನಿಕೆಯ ಧೋರಣೆಯನ್ನು ಪೌರಾತ್ಯವಾದ ತಳ್ಳಿಹಾಕುತ್ತದೆ. ವಸಾಹತು ಆಡಳಿತದಿಂದ ಏಷ್ಯಾ ಅನೇಕರನ್ನು ಕಳೆದುಕೊಂಡರು. ಯುರೋಪ್ ದಿಗ್ವಿಜಯವನ್ನು ಸಾಧಿಸಿತು. ಸೈದ್‌ನ ಪ್ರಕಾರ ಯುರೋಪ್ ಭಾರತೀಯ ಸಂಸ್ಕೃತಿ; ಪ್ರಾದೇಶಿಕ ಸಂಸ್ಕೃತಿ ನಿರ್ವಚಿಸುವಲ್ಲಿ ತಪ್ಪು ಮಾಡಿದೆ. ಆದರೆ ಸೈದ್ ಚರ್ಚಿಸುವ ಸಂಕಥನದ ಮಾದರಿಗಳು ಯುರೋಪಿನ ಪುನರುಜ್ಜೀವನ ಕಾಲಘಟ್ಟದ ಅನಂತರದ ತಿಳುವಳಿಕೆಗಳಾಗಿವೆ. ಹೀಗಾಗಿ ಪೌರಾತ್ಯವಾದಕ್ಕೂ ಒಂದು ಸಂಬಂಧವಿದೆ. ಯುರೋಪ್‌ನ ಮಧ್ಯಯುಗೀನ ಕಾಲದ (ಇಲ್ಲಿ ಮಧ್ಯಯುಗವೆಂದು ಅಧ್ಯಯನದ ಅಗತ್ಯಕ್ಕೆ ಮಾತ್ರ) ಕಲ್ಪಿತ ಅಂಶಗಳು ಮತ್ತು ಪರಿಕರಗಳಿಗೆ ಅನುಸಾರವಾಗಿ ಮಾತ್ರ ಓರಿಯಂಟಲಿಸಂ ಪ್ರತಿಕ್ರಿಯಿಸಿದೆ. ಇವೆಲ್ಲವನ್ನು ದಾಟಿದ ಗಾಂಧಿ ಹೇಳಿದ್ದು ಈ ಸನಾತನತೆಗೆ ವಿಶಿಷ್ಟತೆಯಿದೆ.

ಓರಿಯಂಟಲಿಸಂ ಯುರೋಪ್ ಕೇಂದ್ರಿತ ಚಿಂತನೆಯ ಕ್ರಮವನ್ನು ನಿರಾಕರಿಸುವುದರ ಮೂಲಕ ತನಗೆ ಬೇಕಾದ ರೀತಿಯ ಬರವಣಿಗೆಯನ್ನು ರೂಪಿಸಿತು. ಯುರೋಪ್ ಸೃಷ್ಟಿಸಿದ ವಿಚಾರಧಾರೆಯೆಂದರೆ ಪೌರಾತ್ಯವೆನ್ನುವುದು ಪ್ರತ್ಯೇಕಗೊಂಡ ಒಂದು ವಿಷಯ ಅಥವಾ ಖಾಲಿಯಾದ ಜಾಗವಲ್ಲ ಅನೇಕ ಬ್ರಿಟೀಶ್ ಅಧಿಕಾರಿಗಳು ಭಾರತವನ್ನು ಅತ್ಯಂತ ಅಪಾಯಕಾರಿಯಾದ ಕ್ರೂರ ಮೃಗಗಳಂತೆ ಬದುಕುವ ಸಮಾಜವೆಂದು ಪರಿಗಣಿಸುವುದು ಅಸಾಧ್ಯ. ಮತ್ತೆ ಕೆಲವು ಬ್ರಿಟೀಶ್ ಅಧಿಕಾರಿಗಳಿಗೆ ಅತ್ಯಂತ ನಿಗೂಢವಾದುದು ಭಾರತದ ಜಾತಿ; ಅದರ ನಿಯಾಮಾವಳಿಗಳು ಮತ್ತು ಅವುಗಳ ರೂಪಿಸಿಕೊಂಡ ಪ್ರತೀಕಗಳು. ಯುರೋಪಿಯನ್ನರಿಗೆ ಭಾರತದ ಸಂಸ್ಕೃತಿಯ

ಬಹುಮುಖತೆಯನ್ನು ಅರ್ಥಮಾಡಿಕೊಳ್ಳುವುದು ಕಷ್ಟವಾಯಿತು. ಕೆಲವು ಗವರ್ನರ್ ಜನರಲ್‌ಗಳಿಗೆ ಅತ್ಯಂತ ಗುಪ್ತವಾದ ಒಂದು ಒಳಸ್ತರದಂತೆ ಅದು ಕಾಣಿಸಿತು. ಅದಕ್ಕಾಗಿಯೇ ಇಲ್ಲಿ ಕಾನೂನು; ಶಿಕ್ಷಣ; ಇತ್ಯಾದಿಗಳನ್ನು ರೂಪಿಸುವಾಗ ತುಂಬಾ ಸಮಸ್ಯೆಗಳು ಉಂಟಾದವು. ಸೈದ್ ಬಳಸಿಕೊಂಡ ಅನೇಕ ಪರಿಕಲ್ಪನೆಗಳು ಇದಕ್ಕೆ ತದ್ವಿರುದ್ಧವಾಗಿದ್ದರೂ ಅವು ಬೌದ್ಧಿಕಸ್ತರದ ಚರ್ಚೆಯಂತೆ ಭಾಸವಾಗುತ್ತದೆ. ಸೈದ್‌ನ ವಿಚಾರಧಾರೆಗಳು ಒಂದು ಚೌಕಟ್ಟಿಗೆ ಬದ್ಧವಾದಂತಿಲ್ಲ. ಕೆಲವಡೆ ಸಾರ್ತ್ರೆಯ ಅಸ್ತಿತ್ವವಾದ; ಕಮಿಟ್‌ಮೆಂಟ್‌ಗಳನ್ನು ಕೂಡಾ ಸೈದ್ ಬಳಸಿಕೊಳ್ಳುತ್ತಾನೆ. ಮತ್ತೆ ಕೆಲವಡೆ ಡೆರಿಡಾನ "ಅನನ್ಯತೆ ಮತ್ತು ವ್ಯತ್ಯಾಸ"ಗಳ ಕುರಿತು ಬಳಸಿಕೊಳ್ಳುತ್ತಾನೆ. ಅಂದರೆ ಸೈದನ ವಿಚಾರಧಾರೆಗಳು ಚಲನಶೀಲವಾದುದು, ಸೈದ್ ಮಾತಾಡುವ ಅನೇಕ ವಿಷಯಗಳಲ್ಲಿ ಬಂಡವಾಳವಾದ; ಜಾಗತೀಕರಣ ಮುಂತಾದವುಗಳು ಜೊತೆ ಜೊತೆಗೆ ಸೇರಿಕೊಂಡಿವೆ. ಈ ದೃಷ್ಟಿಯಿಂದ ಸೈದನ ವಿಚಾರಧಾರೆಗಳು "ಹೀಗೆಯೇ ಇದೆ"ಯೆಂದು ವಾದಿಸುವುದು ಕಷ್ಟ. ಸೈದನ ವಿಚಾರಧಾರೆಯಲ್ಲಿ ಬಂಡವಾಳವಾದದ ಪ್ರಭಾವ, ವಸಾಹತುಶಾಹಿ ಜಗತ್ತು; ಆಧುನಿಕತೆಯ ನಿರ್ವಚನಗಳು ಕಾಣಿಸುತ್ತದೆ. ಮತ್ತೊಂದು ಕಡೆಗೆ ಪಶ್ಚಿಮದ ಮನೋವಿಶ್ಲೇಷಣೆಯ ಪರಿಕರಗಳೂ ಇವೆ.

> **ದೇಶದ, ನೂತನ ಸಿದ್ಧಾಂತಗಳನ್ನೂ ನಾನು ಮಂಡಿಸಿಲ್ಲ. ಅದರ ಬದಲು ಪುರಾತನ ಸಿದ್ಧಾಂತಗಳ ಪುನರ್ನಿರೂಪಣೆಯ ಪ್ರಯತ್ನವೆ ನನ್ನದು. ಅದು ಎಷ್ಟರ ಮಟ್ಟಿಗೆ ಸರಿಯಾಗಿ ಸಾಗಿದೆಯೊ ಹೇಳಲಾರೆ. ಆದರೆ ಅದು ನನ್ನ ಪ್ರಾಮಾಣಿಕವಾದ ನಂಬಿಕೆಯನ್ನು ಪ್ರತಿನಿಧಿಸುತ್ತಿದೆ.**
>
> **ಯಾವ ನೂತನ.ನೂತನ ಸಿದ್ಧಾಂತಗಳನ್ನೂ ನಾನು ಮಂಡಿಸಿಲ್ಲ. ಅದರ ಬದಲು ಪುರಾತನ ಸಿದ್ಧಾಂತಗಳ ಪುನರ್ನಿರೂಪಣೆಯ ಪ್ರಯತ್ನವೆ ನನ್ನದು. ಅದು ಎಷ್ಟರ ಮಟ್ಟಿಗೆ ಸರಿಯಾಗಿ ಸಾಗಿದೆಯೊ ಹೇಳಲಾರೆ. ಆದರೆ ಅದು ನನ್ನ ಪ್ರಾಮಾಣಿಕವಾದ ನಂಬಿಕೆಯನ್ನು ಪ್ರತಿನಿಧಿಸುತ್ತಿದೆ.**
>
> **[ಯಂಗ್ ಇಂಡಿಯಾ, 3.12.1926] (ಸಮಾಜ ಧರ್ಮ 1959 ಪುಟ. 14)**

ಪೌರಾತ್ಯವಾದದ ಪ್ರಮುಖ ಚಿಂತನೆಗಳನ್ನು ಹೀಗೆ ಕ್ರೋಢೀಕರಿಸಬಹುದು:

೧. ಓರಿಯಂಟಲಿಸಂ ಅನ್ನುವುದು ಒಂದು ಆಲೋಚನೆಯ ಕ್ರಮದ ಶೈಲಿ. ಅದು ಒಂದು ಕಡೆಯಿಂದ ಸಿದ್ಧಾಂತದ ಮತ್ತೊಂದು ಕಡೆಯಿಂದ ಶಾಸ್ತ್ರೀಯತೆಯ

ಪ್ರಶ್ನೆಯನ್ನು ಎತ್ತಿಕೊಳ್ಳುತ್ತದೆ. ಅನೇಕ ವಿದ್ವಾಂಸರು ಅದೇ ಹಾದಿಯಲ್ಲಿ ಸಾಗಿದ್ದಾರೆ ಸಾಹಿತ್ಯ ಮತ್ತು ಸಂಸ್ಕೃತಿಯ ಅಧ್ಯಯನ ಕ್ರಮದಲ್ಲಿ ಈ ಮಾದರಿಯನ್ನು ಅಳವಡಿಸಿಕೊಂಡಿದ್ದಾರೆ. ತೌಲನಿಕ ಸಾಹಿತ್ಯ ಮತ್ತು ಸಂಸ್ಕೃತಿಯೆರಡರಲ್ಲಿಯೂ ಭಾರತದ ಪಠ್ಯಗಳನ್ನು ಪೌರಾತ್ಯವಾದ ಹಿನ್ನೆಲೆಯಲ್ಲಿಯೂ ಚರ್ಚಿಸಿದ್ದಾರೆ. ಪ್ರಾಚ್ಯ v/s ಪಾಶ್ಚಾತ್ಯ ದೇಶಿಯಪರದೇಶೀಯವೆಂಬಂಥ ಸರಳ ವರ್ಗೀಕರಣಗಳು ಪ್ರಾರಂಭವಾದುದು ಕೂಡ ಇದೇ ಹಿನ್ನೆಲೆಯಿಂದ. ಎರಡನೆಯದಾಗಿ ಪಶ್ಚಿಮಕ್ಕೆ ಒಂದು ನಿರ್ದಿಷ್ಟವಾದ ತಾತ್ವಿ ಚೌಕಟ್ಟನ್ನು ಪೌರಾತ್ಯವಾದವು ರೂಪಿಸಿತು. ಪಶ್ಚಿಮಕ್ಕೆ ಇರುವ ಸಾಂಸ್ಕೃತಿಕ ಅನನ್ಯತೆಯ ತನ್ನನ್ನು ತಾನೇ ಅಭಿವ್ಯಕ್ತಿಗೊಳಿಸಿದೆ. ಅದಕ್ಕೆ ಅದರದೇ ಆದ ಯೋಜನೆಗಳಿವೆ ಅದು ತನ್ನನ್ನು ನಿರ್ವಚಿಸಿದೆ. ಆದರೆ ಪೌರಾತ್ಯ ಚಿಂತನೆಯೆನ್ನುವುದು ಇನ್ನೂ ಅಧ್ಯಯನ ಗುರಿಪಡಿಸಬೇಕಾದ ಒಂದು ವಿಷಯ ಮಾತ್ರ. ನಾವು ಗಾಂಧಿಯನ್ನು ಗ್ರಹಿಸಬೇಕಾದುದ ಈ ಹಿನ್ನೆಲೆಯಿಂದಲೂ ಹೌದು.

> ಭೌತಿಕ ವಿಷಯುಗಳಲ್ಲಿ ಪಶ್ಚಿಮ ದೇಶಗಳ ಜನರು ಆಶ್ಚರ್ಯಕರವಾದ ಶೋಧನೆಗಳನ್ನು ಮಾಡಿರುವಂತೆ ಧಾರ್ಮಿಕ ಆಧ್ಯಾತ್ಮಿಕ ವಿಷಯಗಳಲ್ಲಿ ಹಿಂದೂ ಧರ್ಮವು ಇನ್ನೂ ಹೆಚ್ಚಿನ ವಿಸ್ಮಯಕರವಾದ ಶೋಧನೆಗಳನ್ನು ಮಾಡಿದೆ. ಆದರೆ ಮಹತ್ತಮವೂ ಸುಂದರವೂ ಆದ ಈ ಶೋಧನೆಗಳನ್ನು ಕಾಣುವ ಕಣ್ಣುಗಳು ನಮಗಿಲ್ಲ. ಪಾಶ್ಚಾತ್ಯ ವಿಜ್ಞಾನವು (ಸಾಮಾನ್ಯ) ಸಾಧಿಸಿರುವ ಭೌತಿಕ ಪ್ರಗತಿಯಿಂದ ನಾವು ದಿಗ್ಭ್ರಾಂತರಾಗಿದ್ದೇವೆ. ಆ ಪ್ರಗತಿಯ ಮೋಹವು ನನಗಿಲ್ಲ. ವಸ್ತುತಃ ಭೌತವಾದದ ದಾಳಿಯನ್ನು ಎದುರಿಸುವ ತನ್ನ ಗುರಿಯನ್ನು ಕೈಗೂಡಿಸಿಕೊಳ್ಳಲು ಭಾರತಕ್ಕೆ ಅನುಕೂಲವಾಗಲೆಂಬ ಸದುದ್ದೇಶದಿಂದ ಭೌತಿಕ ಪ್ರಗತಿಯ ಮಾರ್ಗದಲ್ಲಿ ಅದು ಮುಂದುವರಿಯುದಂತೆ ದೇವನೇ ಜಾಣತನದಿಂದ ಮಾಡಿರುವನೆಂದು ಅನಿಸುತ್ತದೆ ನನಗೆ. ಇಂದಿನವರೆಗೆ ಹಿಂದೂ ಧರ್ಮವು ಜೀವಂತವಾಗಿರಲು ಯಾವುದೋ ಒಂದು ಸತ್ತ್ವವು ಅದರಲ್ಲಿರುವುದೇ ಕಾರಣ. ಬೇಬಿಲೋನಿಯಾದ, ಸಿರಿಯಾದ, ಪರ್ಷಿಯಾದ, ಐಗುಪ್ತರ ನಾಗರಿಕತೆಗಳು ಅಧೋಗತಿಯನ್ನು ಹೊಂದಿದವು. ಅದನ್ನು ಹಿಂದೂ ಧರ್ಮವು ನೋಡಿದೆ. ನಿಮ್ಮ ಸುತ್ತ ನೋಡಿರಿ. ರೋಮ್ ಮತ್ತು ಗ್ರೀಸ್‌ಗಳು ಎಲ್ಲಿವೆ? ಗಿಬ್ಬನ್ನನ ಇಟಲಿಯನ್ನು ನೀವು ಎಲ್ಲಿಯಾದರೂ ಕಾಣಬಹುದೆ? ಅಥವಾ ಪ್ರಾಚೀನ ರೋಮ್ ನಗರವನ್ನು – 'ಏಕೆಂದರೆ ರೋಮ್' ಇಟಲಿಯಾಗಿತ್ತು – ನೀವು ಎಲ್ಲಿಯಾದರೂ ಕಾಣುವಿರಾ? ಗ್ರೀಸಿಗೆ

ಹೋಗಿರಿ. ಪ್ರಾಚೀನತಮ ಶಿಲಾಲೇಖ ತಾಮ್ರಪಟ ಮುಂತಾದವುಗಳನ್ನು ನೋಡಿರಿ. ಅನಂತರ ನಿಮ್ಮ ಸುತ್ತಮುತ್ತ ನೀವು ನೋಡಿಕೊಳ್ಳಿರಿ. ಆಗ ನೀವು, "ಅಹುದು, ಪ್ರಾಚೀನ ಭಾರತವಿನ್ನೂ ಜೀವಿಸಿದೆ" ಎಂದುಕೊಳ್ಳುವಿರಿ. ನಿಜ, ಅಲ್ಲಲ್ಲಿ ತಿಪ್ಪೆಗಳಿವೆ. ಆದರೆ ಅವುಗಳ ಬುಡದಲ್ಲಿ ಅಮೂಲ್ಯವಾದ ಸಂಪತ್ತು ಅಡಗಿದೆ. ಭೌತಿಕ ಪ್ರಗತಿಯನ್ನು ಧ್ಯೇಯವಾಗಿಟ್ಟುಕೊಳ್ಳದೆ ಆಧ್ಯಾತ್ಮಿಕ ಉನ್ನತಿಯನ್ನೇ ಹಿಂದೂಧರ್ಮವು ತನ್ನ ಗುರಿಯಾಗಿಟ್ಟುಕೊಂಡುದರಿಂದಲೇ ಅದು ಇಂದಿನವರಿಗೆ ಬದುಕಿ ಉಳಿದಿದೆ.

(ಸಮಾಜ ಧರ್ಮ 1959 ಪುಟ. 44–45)

ಪಶ್ಚಿಮದ ಯುರೋಪ್ ಅನ್ನುವುದು ಈಗ ಜ್ಞಾನವನ್ನು ಸೃಷ್ಟಿಸುವ ಜಗತ್ತು ಎಂಬ ಭ್ರಮೆ ಗಾಂಧಿಗಿಲ್ಲ. ಅದರ ದೃಷ್ಟಿಯಲ್ಲಿ ವಿಷಯ ಬೇರೆ ವಸ್ತು ಬೇರೆ ಈ ಎರಡರ ನಡುವೆ ಭಿನ್ನತೆಯನ್ನು ಸ್ಥಾಪಿಸಿಕೊಂಡಿದೆ. ಇದರ ತಾತ್ವಿಕತೆಯನ್ನು ಮುಂದುವರಿಸಿದರೆ 'ಯುರೋಪ್ ಬೇರೆ' 'ವಸಾಹತು ದೇಶದ ಸಾಂಸ್ಕೃತಿಕ ರೂಪಗಳು ಬೇರೆ'. ಸೈದನ ಪ್ರಕಾರ ಯುರೋಪ್ ಅಂದರೆ ಒಂದು ಏಕಕೇಂದ್ರಿತ ಚಿಂತನೆಗಳನ್ನು ಸೃಷ್ಟಿಮಾಡಿದ ದೇಶ. ಅದು ತನ್ನನ್ನು ತಾನೇ ವ್ಯಾಖ್ಯಾನಿಸಿಕೊಂಡಿದೆ. ಅದು ಗ್ರೀಕ್ ರಂಗಭೂಮಿಯಿಂದ; ಲ್ಯಾಟಿನಿನಿಂದ; ಫ್ರೆಂಚ್‌ನಿಂದ ಬೇರೆ ಬೇರೆ ವಾದಗಳನ್ನು ತನ್ನದನ್ನಾಗಿಸಿತು. ಅಷ್ಟೇ ಅಲ್ಲ ಅರಿಸ್ಟಾಟಲ್‌ನಿಂದ ಐ.ಎ. ರಿಚರ್ಡ್ಸ್‌ನ ತನಕ ಮುಂದುವರಿಸಿತು. ಉದಾ: ಐ.ಎ. ರಿಚರ್ಡ್ಸ್‌ನ ಪ್ರಾಯೋಗಿಕ ವಿಮರ್ಶೆ; ವಸ್ತುನಿಷ್ಠ ವಿಮರ್ಶೆಯೆಂಬ ಪರಿಕಲ್ಪನೆಯು ಹುಟ್ಟಿರುವುದು ಹೀಗೆ. ರಿಚರ್ಡ್‌ಗೆ ಕವಿತೆಯು ಪ್ರಯೋಗಕ್ಕೆ ಇರುವ ವಸ್ತು. ವಸ್ತುನಿಷ್ಠತೆಯೆಂದರೆ–ಪಶ್ಚಿಮದ ವಿಜ್ಞಾನ ಕೇಂದ್ರಿತ ಬುದ್ಧಿ; ನಾವು ಈವತ್ತು ಸಂಸ್ಕೃತಿಯನ್ನು ಅಧ್ಯಯನ ಮಾಡುವುದು ಇದೇ ಕ್ರಮದಲ್ಲಿ! ಪಶ್ಚಿಮದ ಯುರೋಪ್ ನಾಗರಿಕತೆಯ ಬಹುದೊಡ್ಡ ವಾಗ್ವಾದಗಳನ್ನು ಪ್ರಾರಂಭಿಸಿದ್ದು ಆಧುನಿಕ ಯುಗದಲ್ಲಿ ಸೈದ್–ಪೌರಾತ್ಯವಾದವನ್ನು ಚರ್ಚಿಸುವಾಗ ಆಯ್ಕೆ ಮಾಡಿಕೊಂಡಿರುವುದು ಲ್ಯಾಟಿನ್ ಮತ್ತು ಗ್ರೀಕ್ ಮೂಲಗಳನ್ನು ಆದರೆ ಸೈದನ ಗಮನಕ್ಕೆ ಬಾರದ ಸಂಗತಿಗಳಿವೆ. ಅದರಲ್ಲಿಯ ಗಾಂಧಿ ಈ ಮಾತು ಕೂಡಾ.

ಇಂದು ವಿಜ್ಞಾನ ಮತ್ತು ಕಲೆ ಎನಿಸಿಕೊಳ್ಳುವುದೆಲ್ಲ ಬಹುಪಾಲು, ಆತ್ಮನಾಶಕ ವಿನಾ ಆತ್ಮೋದ್ಧಾರಕವಲ್ಲ. ನಮ್ಮ ಅತ್ಯಂತ ಶ್ರೇಷ್ಠತೆಯನ್ನು ಸ್ಫುರಿಸುವ ಬದಲು ಅತ್ಯಂತ ಕೀಳು ರಾಗದ್ವೇಷಗಳಿಗೆ

ನೂಕುತ್ತವೆ. ಇದನ್ನು ಯಾರು ತಾನೇ ಅಲ್ಲಗಳೆದಾರು?
(ಯಂಗ್ ಇಂಡಿಯಾ. ೧೧-೮-೨೭. ಪುಟ.೨೨೫) (ಸತ್ಯವಾಣಿ ಸಂಪುಟ-೫ ೨೦೦೧ ಪುಟ.೨೧೨)

ಗಾಂಧಿ ಹೇಳಿರುವ ಮತ್ತೊಂದು ಮಾತು ಇಲ್ಲಿ ಗಮನಾರ್ಹ. ಸನಾತನತೆಯೇ ನಿಜವಾದ ಸಂಸ್ಕೃತಿಯ ಶಕ್ತಿ.

ಗಾಂಧಿ ಪ್ರಾರಂಭಿಸಿದ ನೀತಿಯ ಪ್ರಶ್ನೆಯು ಅನ್ನುವುದು ಶುದ್ಧ ಶೈಕ್ಷಣಿಕ ವಿಮರ್ಶೆಯಲ್ಲ. ಒಂದು ಸಾಂಸ್ಕೃತಿಕ ವಿಮರ್ಶೆಯಾಗಿದೆ. ಗಾಂಧಿ ಹುಡಕಾಡಿದ್ದು ಸಂಸ್ಕೃತಿಯ ಕೇಂದ್ರಗಳನ್ನು. ನೀತಿ ಮತ್ತು ಧರ್ಮ ಎಂಬ ಪದವೇ ಸೂಚಿಸುವಂತೆ ಅದಕ್ಕೊಂದು ತಾತ್ವಿಕ ನೆಲೆಗಟ್ಟು ಗಾಂಧಿ ರೂಪಿಸಿದ್ದು ಗಮನಾರ್ಹ. ಯೂರೋಪನ್ನು ,ಅದರ ಜ್ಞಾನ ಮಾದರಿಗಳನ್ನು ಗಾಂಧಿ ಒಪ್ಪಿಕೊಳ್ಳಲಿಲ್ಲ. ಅದಕ್ಕೆ ತದ್ವಿರುದ್ಧವಾದುದನ್ನು ಹುಡುಕಿದರು.ಆದುದರಿಂದಲೇ ಗಾಂಧಿಗೆ ಡಾರ್ವಿನ್ ವಾದವನ್ನು ಮರು ಪರಿಶೀಲಿಸಲು ಸಾಧ್ಯವಾಯಿತು.

ಈ ಸಂದರ್ಭದಲ್ಲಿ ಡಾರ್ವಿನ್‌ನ ಸಿದ್ಧಾಂತವನ್ನು ವಿಮರ್ಶಿಸೋಣ. ಆತನ ಅಭಿಪ್ರಾಯದಂತೆ ಬಲಿಷ್ಠವಾದುದು ಮಾತ್ರ ಉಳಿಯುತ್ತದೆ. ಅದೇ ಪ್ರಕೃತಿಯ ನಿಯಮ. ಎಂದರೆ, ಮನುಷ್ಯನೂ ಉಳಿದ ಪ್ರಾಣಿಗಳೂ ಆತ್ಮ ಸಂರಕ್ಷಣೆಗಾಗಿ ಸದಾ ಯುದ್ಧ ಮಾಡುತ್ತಿವೆ; ಅದರಲ್ಲಿ 'ಬಲಿಷ್ಠ'ವಾದುದು ಮಾತ್ರ ಉಳಿಯುತ್ತದೆ, ಬಲಹೀನವಾದುದು ದಯಾರಹಿತವಾಗಿ ಧ್ವಂಸವಾಗಿ ಹೋಗುತ್ತದೆ. ಉಳಿಯಲು ಬೇಕಾದ ಯೋಗ್ಯತೆ ಕೇವಲ ಬೌದ್ಧಿಕ ಶಾರೀರಿಕ ಮಾತ್ರವಾದರೆ ಮಾನವ ಲೋಕದ ವ್ಯವಹಾರದಲ್ಲಿ ನೀತಿಗೆ ಸ್ಥಾನವೇ ಇಲ್ಲ. ಆದರೆ ನಿಜವಾಗಿ ಲೋಕ ಹಾಗಿದೆಯೆ? ನೀತಿ ನಿಯಮಕ್ಕೂ ಬಾಹ್ಯ ಜಗತ್ತಿಗೂ ನಿಕಟ ಸಂಬಂಧವಿದೆಯೆಂದು ಡಾರ್ವಿನ್ನೇ ಹೇಳಿದ್ದಾನೆ.

ಕರಡಿ ಕೋಣ ಮೊದಲಾದ ಪ್ರಾಣಿಗಳಿಗಿಂತ ಮನುಷ್ಯ ದೇಹಬಲದಲ್ಲಿ ಕೀಳು. ದೇಹಬಲದ ಪೋಟಿಯಲ್ಲಿ ಸೋಲು ಇವನಿಗೆ ಖಂಡಿತ. ಆದರೂ ತನ್ನ ಬುದ್ಧಿ ಬಲದಿಂದ ಆ ಪ್ರಾಣಿಗಳು ಮೇಲೆ ಯಜಮಾನ್ಯ ಗಳಿಸಿಕೊಂಡಿದ್ದಾನೆ. ಹಾಗೆಯೇ ಮಾನವಸಮೂಹದಲ್ಲಿ ಪೋಟಿ ಬಿದ್ದರೆ ಬರೀ ಸಂಖ್ಯಾಬಲಕ್ಕೆ ಗೆಲವು ಸಾಧ್ಯವಲ್ಲ. ಯಾವ ಪಕ್ಷದ ನಾಯಕ ಹೆಚ್ಚು ಬುದ್ಧಿಶಾಲಿಯೋ ಆ ಪಕ್ಷಕ್ಕೆ ಎಷ್ಟೇ ಆತಂಕವಿದ್ದರೂ ಗೆಲವು ಸುಲಭಸಾಧ್ಯ. ಅಂತೇ ದೇಹಬಲಕ್ಕಿಂತ ಬುದ್ಧಿಬಲ ನಿರ್ವಿವಾದವಾಗಿ ಶ್ರೇಷ್ಠ.

ಬುದ್ಧಿ ಬಲಕ್ಕಿಂತ ನೀತಿಬಲ ಶ್ರೇಷ್ಠ; ಡಾರ್ವಿನ್ನೇ ಇದನ್ನು ಒಪ್ಪಿಕೊಂಡಿದ್ದಾನೆ. ಈ ಜಗತ್ತಿನಲ್ಲಿ ಉಳಿಯುವವರು ನೈತಿಕ ಯೋಗ್ಯತೆಯುಳ್ಳವರೇ. ಡಾರ್ವಿನ್ ಹೇಳಿದುದು ಪ್ರಕೃತಿನಿಯಮಗಳ ಸರ್ವಶ್ರೇಷ್ಠತೆ, ಆದ್ದರಿಂದ ಈ ಲೋಕದಲ್ಲಿ ನೀತಿನಿಯಮಗಳಿಗೆ ಸ್ಥಾನವೇ ಇಲ್ಲ ಎಂದು ಕೆಲವರು ತಿಳಿದಿದ್ದಾರೆ. ಇದು ಶುದ್ಧಾಂಗವಾಗಿ ತಪ್ಪು. ಜಗತ್ತಿನ ಇತಿಹಾಸವನ್ನು ಓದಿದರೆ ನೀತಿ ನಿಯಮದ ಶಾಸನ ಎಂಬ ನಿತ್ಯ ಶಿಲಾಶಾಸನ, ಆಚಂದ್ರತಾರಾರ್ಕಪರ್ಯಂತವಿರುವ ಶಾಸನ ಎಂಬ ಸತ್ಯ ಹೊಳೆಯುತ್ತದೆ. 'ಸತ್ಯಮೇವ ಜಯತೇ, ನಾನೃತಂ'. ಕಡೆಗೂ ಸತ್ಯವೇ ಗೆಲ್ಲುತ್ತದೆ; ಸುಳ್ಳು ಅಲ್ಲ. ಸತ್ಯ ಧರ್ಮ ಕಡೆತನಕ ಬಾಳುತ್ತವೆ, ಬದುಕುತ್ತವೆ. ಸುಳ್ಳು ಅಧರ್ಮ ಬಹುಕಾಲ ಬದುಕುಲೂಬಹುದು; ಆದರೆ ಅದಕ್ಕೆ ವಿನಾಶ ಕಾಲ ಬಂದೇಬರುತ್ತದೆ. ಜಗತ್ತಿನ ಕ್ರಾಂತಿಗಳೇ ಇದಕ್ಕೆ ಸಾಕ್ಷಿ.

(ಧರ್ಮ ಮತ್ತು ನೀತಿ ಮೋ.ಕ.ಗಾ ೧೯೫೮ ಪುಟ. ೧೬೧)

ಗಾಂಧಿ ಬರಿಯ ಯೂರೋಪಿನ ನಿಲುವುಗಳನ್ನು ಮಾತ್ರವೇ ಗಮನಿಸುವುದಿಲ್ಲ ಅದರ ಮೂಲಕ ಭಾರತೀಯ ನೀತಿ ಶಾಸ್ತ್ರವನ್ನು ಒಂದು ಪ್ರತಿಚರಿತ್ರೆ ರೀತಿಯಲ್ಲಿ ಕಟ್ಟಲು ಬಯಸುತ್ತಾರೆ.

ನಾನು ತಿಳಿದುಕೊಂಡಿರುವ ಹಿಂದೂಧರ್ಮವು ಒಂದು ಸಂಕುಚಿತ ಮತವಲ್ಲ. ಕಾಲದಷ್ಟು ಪುರಾತನವಾದ ವಿಕಾಸಾತ್ಮಕ ಭವ್ಯಕ್ರಮವೇ ಅದಾಗಿದೆ. ಝುರತುಷ್ಟ, ಮೋಸೆಸ್, ಕ್ರಿಸ್ತ, ಮಹಮ್ಮದ್, ನಾನಕ ಮತ್ತು ಇತರ ಪ್ರವಾದಿಗಳ ಉಪದೇಶಗಳನ್ನೆಲ್ಲ ಅದು ಒಳಗೊಂಡಿದೆ. ಅದು ಹೀಗೆ ವಿವರಿಸಲ್ಪಟ್ಟಿದೆ.

ವಿದ್ವದ್ಭಿಃ ಸೇವಿತಃ ಸದ್ಭಿರ್ನಿತ್ಯಮದ್ವೇಷರಾಗಿಭಿಃ।
ಹೃದಯೇ ನಾಭ್ಯನುಜ್ಞಾತೋ ಯೋ ಧರ್ಮಸ್ತಂ ನಿಬೋಧತ॥

("ರಾಗದ್ವೇಷಾದಿಗಳಿಲ್ಲದ ಸಜ್ಜನರಿಂದಲೂ ವಿದ್ವಾಂಸರಿಂದಲೂ ಆಚರಿಸಲ್ಪಡುತ್ತಿರುವ ಹೃದಯಾಭ್ಯನುಜ್ಞಾತವಾದ ಧರ್ಮವೇ ನಿಜವಾದ ಧರ್ಮವೆಂದು ತಿಳಿ.")

(ಹರಿಜನ: 8–3–42)

ಇತಿಹಾಸ ಪೂರ್ವಕಾಲದಿಂದಲೂ ಇದ್ದ ವೇದ ಹಾಗೂ ತದನಂತರದ ಗ್ರಂಥಗಳನ್ನು ಆಧರಿಸಿ ಪರಂಪರೆಯಾಗಿ ಬಂದ ಜೀವಂತವಾದ ಧರ್ಮವೇ ನನ್ನ ಮಟ್ಟಿಗೆ ಸನಾತನ ಧರ್ಮ. ದೇವರು ಹಾಗೂ ಹಿಂದೂತ್ವವು ಅನಿರ್ವಚನೀಯಗಳಾಗಿದ್ದಂತೆಯೆ ವೇದಗಳು ನನ್ನ ಮಟ್ಟಿಗೆ ಅನಿರ್ವಚನೀಯಗಳಾಗಿವೆ. ಮುದ್ರಿತವಾದ ನಾಲ್ಕು ಪುಸ್ತಕಗಳೇ ವೇದಗಳೆಂದು ಹೇಳುವುದು ಅಂಶತಃ

ಸತ್ಯವಲ್ಲದೆ ಪೂರ್ಣ ಸತ್ಯವಲ್ಲ. ಅಜ್ಞಾತ ದ್ರಷ್ಟಾರರು ಬಿಟ್ಟು ಹೋಗಿರುವ ಬೋಧೆಗಳ ಅವಶೇಷಗಳೇ ಇವು. ಮುಂದೆ ಬಂದ ಪೀಳಿಗೆಯವರು ತಮಗೆ ಅರಿವಾದಂತೆ ಈ ಮೂಲ ನಿಧಿಗೆ ತಮ್ಮ ವಿಚಾರಗಳನ್ನು ಸೇರಿಸಿದರು. ಕಾಲಾನಂತರದಲ್ಲಿ ವಿಶಾಲಬುದ್ಧಿಯ ಒಬ್ಬ ಮಹಾವ್ಯಕ್ತಿಯು ಉದಯಿಸಿದನು. ಅವನೇ ಗೀತಾಕಾರನೂ. ಹಿಂದೂ ಧರ್ಮದ ಸಾರವನ್ನು ಹಿಂದೂ ಪ್ರಪಂಚಕ್ಕೆ ಅವನು ಕೊಟ್ಟನು. ಅದು ಅತ್ಯಂತ ಆಧ್ಯಾತ್ಮಿಕವಾಗಿದ್ದರೂ ಸರಲಾಂತಃಕರಣೆಗಳು ಅದನ್ನು ಸುಲಭವಾಗಿ ತಿಳಿಯಬಲ್ಲರು. ಅಭ್ಯಾಸ ಮಾಡಬೇಕೆಂಬ ಇಚ್ಛೆಯುಳ್ಳವರಿಗೆ ಅದು ತೆರೆದಿಟ್ಟ ಪುಸ್ತಕವಾಗಿದೆ. ವೇದಾಗಮಗಳೆಲ್ಲ ಸುಟ್ಟು ಬೂದಿಯಾದರೂ ಹಿಂದೂಧರ್ಮ ವೆಂದರೇನೆಂಬುದನ್ನು ಹಾಗೂ ಅದನ್ನು ಹೇಗೆ ಆಚರಿಸಬೇಕೆಂಬುದನ್ನು ತಿಳಿದುಕೊಳ್ಳಲು ಅವಿನಾಶಿಯಾದ ಈ ಚಿಕ್ಕ ಪುಸ್ತಕದ ಏಳುನೂರು ಶ್ಲೋಕಗಳು ಸಾಕು, ಈ ಪುಸ್ತಕದ ಉಪದೇಶದಂತೆ ಅಕ್ಷರಶಃ ಬಾಳಲು ನಾನು ನಲ್ವತ್ತು ವರ್ಷಗಳಿಂದ ಪ್ರಯತ್ನಿಸುತ್ತಿದ್ದೇನೆ; ಅಂತೆಯೇ ನಾನು ಸನಾತನಿಯೆಂದು ತಿಳಿದುಕೊಂಡಿದ್ದೇನೆ ಅದರ ಮುಖ್ಯಾಂಶಕ್ಕೆ ವಿರುದ್ಧವಾದುದೆಲ್ಲವನ್ನೂ ಹಿಂದೂತ್ವಕ್ಕೆ ವಿರುದ್ಧವೆಂದು ನಾನು ನಿರಾಕರಿಸಿದ್ದೇನೆ. ಯಾವ ಮತವನ್ನೂ ಯಾವ ಗುರುವನ್ನೂ ಅದು ಬಿಟ್ಟಿಲ್ಲ. ಬೈಬಲ್, ಕೊರಾನ್, ಝೆಂಡ್ – ಅವೆಸ್ತಗಳನ್ನು ನಾನು ಓದಿದ್ದೇನೆಂದು ಹೇಳಲು ನನಗೆ ಆನಂದವಾಗುತ್ತದೆ. ಇವುಗಳನ್ನಲ್ಲದೆ ವಿಶ್ವದ ಇತರ ಧರ್ಮಗ್ರಂಥಗಳನ್ನು ನಾನು ಗೀತೆಯನ್ನು ಓದಿದಷ್ಟೇ ಆದರದಿಂದ ಅಭ್ಯಸಿಸಿದ್ದೇನೆ. ನನ್ನ ಈ ಆದರದ ಅಭ್ಯಾಸದಿಂದ ಗೀತೆಯಲ್ಲಿಯ ನನ್ನ ಶ್ರದ್ಧೆಗೆ ಹೆಚ್ಚು ಒಲವು ಬಂದಿದೆ. ನನ್ನ ದೃಷ್ಟಿಕೋನವನ್ನು ಅವು ವಿಶಾಲಗೊಳಿಸಿವೆ; ಆದಪ್ರಯುಕ್ತ ನನ್ನ ಹಿಂದೂತ್ವವನ್ನೂ ವಿಸ್ತರಿಸಿವೆ. ನಾನು ಅರಿತಂತೆ, ಝುರತುಷ್ಟ, ಜೀಸಸ್ ಮತ್ತು ಮಹಮ್ಮದ್‌ರ ಜೀವನ ಗೀತೆಯ ಅನೇಕ ವಾಕ್ಯಗಳ ಮೇಲೆ ಬೆಳಕು ಚೆಲ್ಲಿದೆ.

(ಸಮಾಜ ಧರ್ಮ 1959 ಪುಟ. 49–50)

ಪಶ್ಚಿಮದ ಪಠ್ಯಗಳನ್ನು ಒಪ್ಪಿಕೊಳ್ಳುವ ರೀತಿಯಲ್ಲಿ ಗಾಂಧಿ ಓದುವುದಿಲ್ಲ. ಇದನ್ನು ಹೀಗೆಯೂ ಹೇಳಬಹುದು–ಮಾಮೂಲಿ ಸಾಂಪ್ರದಾಯಿಕವಾದ ಹಿನ್ನಲೆಯಿಂದ ಪಶ್ಚಿಮದ ನೀತಿ ಶಾಸ್ತ್ರವನ್ನು ಗ್ರಹಿಸಲು ಪ್ರಯತ್ನಿಸಲಿಲ್ಲ.

ಪೌರಾತ್ಯವಾದಿ ಜ್ಞಾನ ಮಾದರಿ ಎಂದರೆ ಅದು ಗ್ರೀಕನ ಹಳೆಯ ಸೌಂದರ್ಯ ಮೀಮಾಂಸೆಯ ತತ್ವ ಮತ್ತು ಆಧುನಿಕತೆಯ ಸಂಕರದಿಂದ ಹುಟ್ಟಿಕೊಂಡಿದೆ. ಪೌರಾತ್ಯವಾದಿ ಚಿಂತನೆಯು ಪಠ್ಯಗಳನ್ನು ಗ್ರಹಿಸುವಾಗ, ಸಾಹಿತ್ಯ ಮತ್ತು ಸಂಕೇತ ಶಾಸ್ತ್ರವನ್ನು ಗ್ರಹಿಸುವಾಗ; ಮಾನವ ವಿಜ್ಞಾನದ ಜೊತೆಗೆ ಅನುಸಂಧಾನ ಮಾಡುತ್ತದೆ. ಪೌರಾತ್ಯವಾದಿ ಚಿಂತನೆಯು ಗಾಂಧಿ ಮಾರ್ಗವಲ್ಲ. ಅವರು ಅರ್ಥಶಾಸ್ತ್ರ, ವಿಜ್ಞಾನ, ನೀತಿಶಾಸ್ತ್ರ ಮೊದಲಾದವನ್ನು ನೋಡಿದ ಕ್ರಮಗಳೇ ಬೇರೆ–ಮೂರು ಪ್ರಶ್ನೆಗಳು ಗಾಂಧಿಗೆ ಮುಖ್ಯವಾದವು–ಒಂದು ನೀತಿ ಮತ್ತು ಧರ್ಮ,ಎರಡನೆಯದು ಬಡತನ, ಮೂರನೆಯದು ಶ್ರಮ ಮತ್ತು ಉತ್ಪಾದನೆ.

ಸೈದ್ ಗ್ರೀಕ್‌ನ ಸೌಂದರ್ಯಶಾಸ್ತ್ರದಲ್ಲಿ ಚಾಲ್ತಿಗೆ ಬಂದ ಅನುಕರಣೆಯ ತತ್ವವನ್ನು ಯೂರೋಪಿನ ಪಠ್ಯಗಳಿಂದ ಹೊರತು ಪಡಿಸಿ ನೋಡಿದ್ದಾನೆ. ಇದಕ್ಕಾಗಿ ಅವನು ಗ್ರೀಕ್ ದುರಂತ ನಾಟಕಗಳಿಂದ ಪ್ರಾರಂಭಿಸುತ್ತಾನೆ. ಈ ಮುಖೇನ ಯುರೋಪಿನ ಜ್ಞಾನ ಮಾದರಿಗಿಂತ ಪ್ರತಿಜ್ಞಾನ ಪರಂಪರೆಯನ್ನು ಕಟ್ಟುವುದು ಸೈದ್‌ಗೆ ಮುಖ್ಯವಾಯಿತು. ಈ ಕಾರಣಕ್ಕಾಗಿಯೇ ಅನುಕರಣೆಯ ತತ್ವವನ್ನು ಬೇರೆ ಬೇರೆ ರೀತಿಗಳಲ್ಲಿ ಅರ್ಥವಿಸಿಕೊಳ್ಳುವ ಪ್ರಯತ್ನಗಳನ್ನು ಅವನು ಮಾಡುತ್ತಾನೆ.ಗಾಂಧಿ ಹೇಳುವ ಅನುಕರಣೆಯ ದಿಕ್ಕು ಬೇರೆ_ಅದು ಕೂಡಾ ಎರಡು ರೀತಿಯದು–ಒಂದು ಪಶ್ಚಿಮದ ನಾಗರಿಕತೆಯ ಅನುಕರಣೆ,ಇನ್ನೊಂದು ಮಕ್ಕಳ ಶಿಕ್ಷಣದಲ್ಲಿ ಅಳವಡಿಸಬೇಕಾದ ಅನುಕರಣೆ.

> ಹಿಂದುಸ್ತಾನಕ್ಕೆ ಅವರನ್ನು ಹಿಂದಕ್ಕೆ ಕಳಿಸಲು ನನಗೆ ಇಷ್ಟವಿರಲಿಲ್ಲ. ಚಿಕ್ಕ ಮಕ್ಕಳನ್ನು ತಂದೆತಾಯಿಗಳಿಂದ ಅಗಲಿಸಬಾರದೆಂದು ಆಗಿನಿಂದಲೂ ನನಗೆ ದೃಢಾಭಿಪ್ರಾಯ. ಸುವ್ಯವಸ್ಥಿತವಾದ ಕುಟುಂಬದಲ್ಲಿ ಸಹಜವಾಗಿಯೆ ಮಕ್ಕಳು ಪಡೆಯುವ ಶಿಕ್ಷಣ ವಿದ್ಯಾರ್ಥಿನಿಲಯಗಳಲ್ಲಿ ಸಾಧ್ಯವಿಲ್ಲ. ಆದ್ದರಿಂದ ಮಕ್ಕಳನ್ನು ನನ್ನ ಬಳಿಯಲ್ಲೇ ಇಟ್ಟುಕೊಂಡೆ.
> ಆದರೆ ನಾನು ಎಷ್ಟು ವೇಳೆಯನ್ನು ಕೊಡಬೇಕೆಂದು ಬಯಸಿದೆನೋ ಅಷ್ಟು ವೇಳೆಯನ್ನು ಅವರಿಗೆ ಕೊಡಲಾಗಲಿಲ್ಲ. ಸಾಕಷ್ಟು ಗಮನ ಕೊಡಲು ನನಗೆ ಆಗದಿದ್ದರೂ ಇತರ ಅನಿವಾರ್ಯ ಕಾರಣಗಳೂ ಸೇರಿ ನನಗೆ ಇಷ್ಟವಿದ್ದಷ್ಟು ಅಕ್ಷರಜ್ಞಾನವನ್ನು ಅವರಿಗೆ ಕೊಡಲಾಗಲಿಲ್ಲ. ಈ ವಿಷಯದಲ್ಲಿ ನನ್ನ ಮಕ್ಕಳು ಎಲ್ಲರೂ ನನ್ನ ವಿರುದ್ಧ ದೂರಿದ್ದಾರೆ, ಒಬ್ಬ ಎಂ.ಬಿ.ಎ, ಅಥವಾ ಮೆಟ್ರಿಕ್

ಆದವರನ್ನು ಕಂಡರೆ ತಮಗೆ ಶಾಲಾಶಿಕ್ಷಣವಿಲ್ಲದೆ ಹೋಯಿತಲ್ಲ ಎಂದುಕೊಂಡ

ಆದರೆ ನನ್ನ ಅಭಿಪ್ರಾಯದಲ್ಲಿ, ಹೇಗಾದರೂ ಮಾಡಿ ಅವನನ್ನು ಸಾರ್ವಜನಿಕ ಶಾಲೆಗಳಿಗೆ ಕಳಿಸಿ ಓದಿಸಲು ನಾನು ಹಟ ತೊಟ್ಟಿದ್ದರೆ ಅನುಭವದ ಶಾಲೆಯಲ್ಲಿ ಅಥವಾ ತಂದೆತಾಯಿಗಳ ಸಹವಾಸದಿಂದ ದೊರೆಯುವ ಶಿಕ್ಷಣ ಅವರಿಗೆ ತಪ್ಪಿ ಹೋಗುತ್ತಿತ್ತು. ನನ್ನ ಮಕ್ಕಳ ಓರಗೆಯವರು ಅನೇಕರಿದಾರೆ. ಅವರು ನಮ್ಮ ಹುಡುಗರಿಗಿಂತ ವ್ಯಕ್ತಿಶಃ ಉತ್ತಮರೆಂದಾಗಲಿ ಅವರಿಂದ ನಮ್ಮ ಹುಡುಗರು ಕಲಿಯಬೇಕಾದುದು ಇದೆ ಎಂದಾಗಲಿ ನನಗನಿಸದು.

ಆದರೆ ನನ್ನ ಪ್ರಯೋಗದ ಅಂತಿಮ ಫಲ ಕಾಲಗರ್ಭದಲ್ಲಿ. ಇದನ್ನು ಇಲ್ಲಿ ಚರ್ಚಿಸಲು ಕಾರಣ, ನಾಗರಿಕತೆಯ ಇತಿಹಾಸದ ವಿದ್ಯಾರ್ಥಿಗೆ ಸಂಯಮ ಪೂರ್ಣ ಗೃಹಶಿಕ್ಷಣಕ್ಕೂ, ಶಾಲಾಶಿಕ್ಷಣಕ್ಕೂ ಇರುವ ವ್ಯತ್ಯಾಸ ತಿಳಿಯಲಿ ಎಂದು.

ಆತ್ಮಗೌರವಕ್ಕೆ ಗಮನ ಕೊಡದೆ ಯಾವುದೋ ಒಂದು ಶಾಲೆಯಲ್ಲಿ ನಮ್ಮ ಹುಡುಗರಿಗೆ ಶಿಕ್ಷಣ ಕೊಡಿಸಿದ್ದರೆ, ಅಕ್ಷರಶಿಕ್ಷಣ ಸಿಗದಿದ್ದರೂ ಸಾಕು ಅವರಿಗೆ ಕೊಟ್ಟ ಸ್ವಾತಂತ್ರ್ಯ–ಆತ್ಮಗೌರವಗಳ ಶಿಕ್ಷಣ ಸಿಗುತ್ತಿರಲಿಲ್ಲ. ಅವರಲ್ಲಿ ಸೇವಾಭಾವ, ಸರಳತೆಗಳು ಮೂಡುತ್ತಿರಲಿಲ್ಲ.

(ಜೀವನ ಶಿಕ್ಷಣ ಮೋ.ಕ.ಗಾ ೧೯೬೬ ಪುಟ.೩೬–೩೭)

ಕುತೂಹಲದಾಯಕ ಸಂಗತಿ ಎಂದರೆ ವಸಾಹತು ಕಾಲದಲ್ಲಿ ಮತ್ತು ಅನಂತರ ಯೂರೋಪ್ ಜ್ಞಾನಶ್ರೇಷ್ಠತೆಯ ಅಹಂಕಾರದಿಂದ ಮೆರೆಯುವಾಗ ಗಾಂಧಿ ಅದನ್ನು ಸನಾತನೆಯ ಮೂಲಕ ನಿರಾಕರಿಸುತ್ತಾರೆ. ಹೀಗಾಗಿಯೇ ಗಾಂಧಿ ಬರಹಗಳಲ್ಲಿ ಪ್ರತಿಚರಿತ್ರೆ ಮತ್ತು ಪ್ರತಿಜ್ಞಾನ ಪರಂಪರೆಯನ್ನು ಕಟ್ಟುವ ಹಂಬಲವನ್ನು ನಾವು ಕಾಣುತ್ತೇವೆ. ಇಲ್ಲಿ ಗಮನಿಸಬೇಕಾದ ಅಂಶವೆಂದರೆ ಜ್ಞಾನವನ್ನು,ಧರ್ಮವನ್ನು ,ನೀತಿಯನ್ನು ಗಾಂಧಿ ವೈಯಕ್ತಿಕ ಕೇಂದ್ರದ ಮೂಲಕ ಹೇಳುವುದಿಲ್ಲ. ಈ ದೃಷ್ಟಿಯಿಂದ ಅವರ ಚಿಂತನೆಯ ಕ್ರಮವನ್ನು ಬರಿಯ ಅವಾಸ್ತವಿಕ ಚಿಂತನೆಯೆಂದೂ ಹೇಳುವಂತಿಲ್ಲ.

ಹಾಗೇ ಗಾಂಧಿ ಚಿಂತನೆಗಳು ಒಂದು ದೃಷ್ಟಿಯಿಂದ ಸ್ಥಳಕೇಂದ್ರಿತವು ಅಲ್ಲ. ಅದು ಸ್ಥಳಾಂತರ ಹೊಂದುತ್ತದೆ. (Personal location) ವಸಾಹತು ಕಾಲದ ಯೂರೋಪಿಯನ್ ಚಿಂತನೆಯ ಕ್ರಮಕ್ಕೆ ಯಜಮಾನಿಕೆಯ ಸ್ವರೂಪವಿದೆ. ಆದ್ದರಿಂದಲೇ ವಸಾಹತುಶಾಹಿ ಅನುಭವವನ್ನು ಕುರಿತು ಚರ್ಚಿಸುವಾಗ ಗಾಂಧಿ ಯುರೋಪಿನ ಯಜಮಾನಿಕೆಯ ಒಂದು ರೂಪವನ್ನೇ ಮಾತ್ರ ಗ್ರಹಿಸುವುದಿಲ್ಲ. ಗಾಂಧಿ ಚಿಂತನೆಯು

ಈ ದೃಷ್ಟಿಯಿಂದ ಸಾಂಸ್ಕೃತಿಕ ಪ್ರಶ್ನೆಯೇ ಆಯಿತು. ಇನ್ನೊಂದು ಕಡೆಯಿಂದ ಗಾಂಧೀಜಿ ಏನು ಮಾಡುತ್ತಾರೆ ಎಂದರೆ ವಸಾಹತುಶಾಹಿ ಅನುಭವವನ್ನು ಜಾಗತಿಕ ವಿದ್ಯಮಾನದ ಜೊತೆಗೆ ಇಟ್ಟು ನೋಡುತ್ತಾರೆ . ವಿಶೇಷವೆಂದರೆ ಗಾಂಧಿ ವಸಾಹತು ಪ್ರಭುತ್ವ ಮತ್ತು ವಸಾಹತು ಜ್ಞಾನ ಪರಂಪರೆಯನ್ನು ಕಟುವಾಗಿ ಟೀಕಿಸುತ್ತಾರೆ. ಅದು ಅನೈತಿಕವಾದ ರಾಜಕಾರಣವೆಂದು ಗಾಂಧಿಯ ಅಭಿಪ್ರಾಯ. ವಸಾಹತು ಶಾಹಿ ರೂಪಿಸಿದ ಜ್ಞಾನ ಪರಂಪರೆಯು ಹೇರುವಿಕೆಯಿಂದ ಕೂಡಿದೆಯೆಂದು ಗಾಂಧಿ ಹೇಳುತ್ತಾರೆ. ಈ ದೃಷ್ಟಿಯಿಂದ ಜ್ಞಾನದ ಯಜಮಾನಿಕೆಯು ಅಹಂಕಾರ ಜನ್ಯವಾದುದು. ವಸಾಹತುಶಾಹಿ ಜ್ಞಾನಮಾದರಿಗಳಿಗೆ ಸೀಮಿತ ಧೋರಣೆಗಳಿವೆ. ನೈತಿಕ ಜ್ಞಾನದ ತಿಳುವಳಿಕೆಯು ಇದಕ್ಕಿಂತ ಭಿನ್ನವಾದುದು.

ವಾಸ್ತವವಾಗಿ ಪುನರುಜ್ಜೀವನ ಎನ್ನುವುದು ಯುರೋಪಿನಲ್ಲಿ ಅನೇಕ ರೀತಿಯ ಬದಲಾವಣೆಯನ್ನು ತಂದಿತು. ಆ ಬದಲಾವಣೆಯೇ ವಸಾಹತುಶಾಹಿಯ ಮೇಲೆಯು ಪ್ರಭಾವ ಬೀರಿದ್ದು ಸುಳ್ಳಲ್ಲ. ಹಾಗಾಗಿ ಯುರೋಪಿನ ಆ ಕಾಲದ ಮಾನವತಾವಾದ ಮತ್ತು ವಸಾಹತುಶಾಹಿ ಆಡಳಿತ ಇವುಗಳನ್ನು ಗಮನಿಸುತ್ತಾ ಗಾಂಧಿ ಅದರ ಹಿಂದಿರುವ ಧೋರಣೆಯನ್ನು ಪ್ರಶ್ನಿಸುತ್ತಾರೆ.

> **ಸತ್ಯಾಗ್ರಹ ಶಾಸ್ತ್ರದ ಪ್ರಕಾರ, ಆಡಳಿತದ ದಬ್ಬಾಳಿಕೆ ಮತ್ತು ನ್ಯಾಯ ಬಾಹಿರತೆ ಹೆಚ್ಚಿದಷ್ಟು, ಅದಕ್ಕೆ ತುತ್ತಾಗುವವರು ವೇದನೆ ಸಹಿಸುವುದೂ ಹೆಚ್ಚಾಗಬೇಕು. ಆತ್ಮ ಪ್ರೇರಣೆಯಿಂದಲೇ ಅತ್ಯಂತ ಉಗ್ರರೂಪದ ವೇದನೆಯನ್ನು ಸಹಿಸುವುದರ ಪರಿಣಾಮ ಖಂಡಿತವಾದ ವಿಜಯ.**
>
> **ಸಾಧನೆ ಶುದ್ಧಿಯಿರುವೆಡೆ ಭಗವಂತನ ಕೃಪೆ ಖಂಡಿತ. ಆಗ ಸೋಲೆಂಬುದು ಅಸಾಧ್ಯ. ಸ್ವತಂತ್ರನಾಗಿರಿಲಿ, ಬಂಧಿತನಾಗಿರಲಿ, ಸತ್ಯಾಗ್ರಹಿ, ಸದಾ ಅಂತರವಾಣಿಗೆ ಕಿವಿಗೊಡದಿದ್ದರೆ ಸೋತ ಹಾಗೆಯೇ ಸರಿ. ಸತ್ಯಾಗ್ರಹಿ ಎನ್ನಿಸಿಕೊಂಡವನಿಗೂ ಸೋಲೆನ್ನುವುದು ಉಂಟಾದರೆ ಅವನೆ ಅದಕ್ಕೆ ಕಾರಣ.**
>
> **(ಸತ್ಯಾಗ್ರಹ ಹೋ. ಶ್ರೀನಿವಾಸಯ್ಯ ೧೯೬೭. ಪುಟ. ೪೯)**

ಗಾಂಧಿ ಪ್ರಕಾರ ವಸಾಹತುಶಾಹಿ ಅನುಭವ ಅತ್ಯಂತ ಸಂಕೀರ್ಣ ರೂಪದ್ದು. ಅದರಲ್ಲಿ ಉದಾರವಾದಿ ಮಾನವತಾವಾದವಿದೆ. ಅದರೊಂದಿಗೆ ಸಾಂಸ್ಕೃತಿಕ ಬಹುತ್ವವಿದೆ. ವಸಾಹತು ಆಡಳಿತ ವಸಾಹತುಶಾಹಿ ಅನುಭವಕ್ಕೆ ಒಳಗಾದ ದೇಶಗಳ ಮೇಲೆ ಅದು ಕರುಣೆ ಇಟ್ಟಿದೆ. ಇನ್ನೊಂದು ಕಡೆಯಿಂದ ಸಾಂವಿಧಾನಿಕ ರೂಪದ ಕಾನೂನುಗಳನ್ನು ಜಾರಿಗೆ ತಂದಿದೆ. ಆಡಳಿತ ಜೊತೆಗೆ ಭಾರತೀಯರನ್ನು ಸೇರಿಸಿಕೊಳ್ಳುವ ಪ್ರಯತ್ನವನ್ನು

ಮಾಡಿದೆ. ಹಾಗೆಯೇ ಭಾರತೀಯರನ್ನು ಅಂತರವಿಟ್ಟು ನೋಡಿದೆ. ಈ ಹಿನ್ನಲೆಯಿಂದ ಸೈದ್‌ನ ವಾದ ಫುಕೋನ ಸಂಕರತನ ಸಿದ್ಧಾಂತದ ಪ್ರಭಾವವೆಂದು ಅನಿಸಿದರೂ ಆಶ್ಚರ್ಯವಿಲ್ಲ. ಪೌರಾತ್ಯವಾದದ ಮೇಲೆ ಪುಕೋನ ಸಂಕಥನ ಸಿದ್ಧಾಂತದ ಪ್ರಭಾವ ಇರುವ ಹಾಗೆಯೇ ನೀಷೆಯ ವಾಸವತ್ತಾವಾದಿ ವಿರೋಧ; ಉದಾರವಾದಿ ಮಾನವತಾವಾದದ ವಿರೋಧ ಹಾಗೂ ನೀಷೆಯ ಪ್ರಾತಿನಿಧಿಕರಣ ತತ್ವದ ಪ್ರಭಾವವನ್ನು ಕಾಣಬಹುದು.

> ಭಾರತವು ಹೇಗೆ ತೀರ ದರಿದ್ರ ಸ್ಥಿತಿಗೆ ಇಳಿಯಿತೆಂಬುದನ್ನು ನೋಡೋಣ. ಈಸ್ಟ್ ಇಂಡಿಯಾ ಕಂಪೆನಿಯವರು ಈ ದೇಶದ ಹತ್ತಿಯ ಕೈಗಾರಿಕೆಯನ್ನು ಅನೇಕ ಉಪಾಯಗಳಿಂದ ನಾಶಮಾಡಿ, ಮನುಷ್ಯನ ಅವಶ್ಯಕತೆಗಳಲ್ಲಿ ಎರಡನೆಯದಾದ ವಸ್ತ್ರಕ್ಕೆ ನಾವು ಲ್ಯಾಂಕಷೈರಿನ ಮೇಲೆ ಅವಲಂಬಿಸುವಂತೆ ಮಾಡಿದರೆಂದು ಇತಿಹಾಸ ನಮಗೆ ತಿಳಿಸುತ್ತದೆ. ಇಂದಿಗೂ ನಮ್ಮ ಅಮದುಗಳಲ್ಲಿ ಇದೇ ಎಲ್ಲಕ್ಕೂ ದೊಡ್ಡ ಪ್ರಮಾಣದ್ದು. ಇದರಿಂದ ಲಕ್ಷಾಂತರ ಪುರುಷರು ಅರ್ಧ ನಿರುದ್ಯೋಗಿಗಳಾದರು. ಅವರಿಗೆ ಅದಕ್ಕೆ ಬದಲಾಗಿ ಇತರ ಉದ್ಯೋಗಗಳನ್ನು ಒದಗಿಸಲಿಲ್ಲ. ಹತ್ತಿಕಾಳು ಬಿಡಿಸುವ ಕೆಲಸ. ಹಿಂಜುವ ಕೆಲಸ, ನೂಲುವುದು, ನೇಯ್ಗೆ- ಇವೆಲ್ಲವೂ ನಾಶವಾದ ಮೇಲೆ, ಇತರ ಹಳ್ಳಿಯ ಕೈಗಾರಿಕೆಗಳೂ ಸ್ವಲ್ಪ ಮಟ್ಟಿಗೆ ಕ್ಷೀಣವಾದುವು. ನಿರಂತರ ಕೆಲಸವಿಲ್ಲದೆ ಇರುವುದರಿಂದ ಜನರಲ್ಲಿ ಒಂದು ಬಗೆಯ ಸೋಮಾರಿತನ ಆವರಿಸಿತು. ಇದು ಅವರನ್ನು ವಿಷಣ್ಣರನ್ನಾಗಿ ಮಾಡಿತು. ಹೀಗೆ ನಮ್ಮ ಜನರು ದಿನೇ ದಿನೇ ದರಿದ್ರರಾಗುತ್ತಿರುವುದಕ್ಕೆ ನಿಸ್ಸಂದೇಹವಾಗಿ ಪರರ ಆಳ್ವಿಕೆ ಕಾರಣವಾದರೂ, ಈ ಸ್ಥಿತಿಗೆ ನಾವು ಇನ್ನೂ ಹೆಚ್ಚು ಜವಾಬುದಾರರು. ನಮ್ಮ ಮಧ್ಯಮ ವರ್ಗದವರು ತಮ್ಮ ಕರ್ತವ್ಯವನ್ನು ಮರೆತು, ಅವರನ್ನು ನಂಬಿದವರಿಗೆ ದ್ರೋಹಮಾಡಿ, ಭಾರತದ ಆರ್ಥಿಕ ಸ್ವಾತಂತ್ರ್ಯವನ್ನು, ತಮಗೆ ಕೊಟ್ಟ ಒಂದು ತುತ್ತು ಅನ್ನಕ್ಕೆ ಮಾರಿಕೊಂಡರು. ಈಗ ಇವರು ತಾವು ಮಾಡಿದ ತಪ್ಪನ್ನು ಮನಗಂಡು, ಚರಖಾದ ಸಂದೇಶವನ್ನು ಹಳ್ಳಿಯ ಜನರಿಗೆ ಮುಟ್ಟಿಸಿ, ಹಳ್ಳಿಯವರು ತಮ್ಮ ಸೋಮಾರಿತನವನ್ನು ಬಿಟ್ಟು ನೂಲುವಂತೆ ಮಾಡುವುದಾದರೆ ನಮ್ಮ ಜನರ ಸ್ಥಿತಿಯನ್ನು ಬಹು ಮಟ್ಟಿಗೆ ನಾವು ಸುಧಾರಿಸಬಲ್ಲೆವು. ಉದ್ಯೋಗಶೀಲತೆಗೆ ಬದಲಾಗಿ ಸೋಮಾರಿತನ, ಆಶೆಗೆ ಬದಲಾಗಿ ನಿರಾಶೆ ನೆಲೆಸುವುದಾದರೆ ಅದು ಭಯಾನಕ ಪರಿಸ್ಥಿತಿಯೇ ಹೌದು. (ಭಾಷಣಗಳು-ಹೇಳಿಕೆಗಳು ಮೋ.ಕ.ಗಾ. ೧೯೬೭ ಪುಟ.೭೮)

ಘುಕೋ ಕೆಲವು ವಿಶಿಷ್ಟ ಪರಿಭಾಷೆಗಳನ್ನು ಬಳಸುತ್ತಾನೆ. ನಿಯಂತ್ರಣ, ಸಂಕರತನ, ಪ್ರಾತಿನಿಧೀಕರಣ; ಪ್ರಾಕ್ತನತೆ, ಅಂತರಗಳ ನಡುವಣಶಾಸ್ತ್ರ; ಹೀಗೆ ಮುಂದುವರಿಯುತ್ತದೆ. ಘುಕೋನಿಗೆ ಮಾರ್ಕ್ಸವಾದದ ಬಗೆಗೆ ಕೆಲವು ಅಂಶಗಳಲ್ಲಿ ಒಪ್ಪಿಗೆ ಇದೆ. ಇನ್ನೂ ಕೆಲವು ಅಂಶಗಳಲ್ಲಿ ಅವನು ಮಾರ್ಕ್ಸವಾದದವನ್ನು ವಿರೋಧಿಸುತ್ತಾನೆ. ಘುಕೋನಪ್ರಕಾರ ಮಾರ್ಕ್ಸವಾದವು ಪಶ್ಚಿಮದ ಶಾಸ್ತ್ರಭಾಗವನ್ನು ಹೊಂದಿದೆ. ಹಾಗೆಯೇ ಮಾರ್ಕ್ಸ ಪಶ್ಚಿಮದ ರಾಜಕೀಯ ಅರ್ಥಶಾಸ್ತ್ರವನ್ನು ಮನಸ್ಸಿನಲ್ಲಿ ಇಟ್ಟುಕೊಂಡು ಚರ್ಚಿಸುತ್ತಾನೆ ಎನ್ನುವುದು ಘುಕೋನ ವಾದ. ಮಾರ್ಕ್ಸನ ಆಲೋಚನೆಗಳು ಚಾರಿತ್ರಿಕ ನಿರೂಪಣೆಯನ್ನು ಒಳಗೊಂಡಿದೆ. ಅದು ಆರ್ಥಿಕ ಉತ್ಪಾದನೆಯನ್ನು; ಉತ್ಪಾದನಾ ಸಂಬಂಧಗಳನ್ನು ಮಾತ್ರ ಚರ್ಚಿಸುತ್ತದೆ ಎಂದು ಪುಕೋನ ಅಭಿಪ್ರಾಯ. ಪಶ್ಚಿಮದ ಚಿಂತನೆಯ ಕ್ರಮವು ೧೬,೧೮, ನೇ ಶತಮಾನದ ತನಕ ಒಂದು ರೀತಿಯ ತಾತ್ವಿಕ ಚೌಕಟ್ಟನ್ನು ಹೊಂದಿತ್ತು. ಅದಕ್ಕೆ ಅನುಗುಣವಾದ ಮಾನವತಾವಾದ ರೂಪುಗೊಂಡಿತು ಮಾರ್ಕ್ಸ ಆಲೋಚನೆಯಲ್ಲಿ ಬರುವ ಚಾರಿತ್ರಿಕ ನಿರೂಪಣೆಗೆ ಮತ್ತು ಸಾಮಾಜಿಕ, ಆರ್ಥಿಕ ನಿರ್ವಹಣೆಯ ಪ್ರಶ್ನೆಗೆ ಇವುಗಳ ಪ್ರಭಾವವಿದೆ ಎಂದು ಘುಕೋ ಹೇಳುತ್ತಾನೆ. ಆದರೆ ಕೈಗಾರಿಕಾ ಕ್ರಾಂತಿಯ ಅನಂತರ ಆದ ಸಾಮಾಜಿಕ ಪಲ್ಲಟದ ಬಗ್ಗೆ ಮಾರ್ಕ್ಸ ಬರೆದ್ದನ್ನು ಘುಕೋ ಒಪ್ಪಿಕೊಂಡಿದ್ದಾನೆ. ಮಾರ್ಕ್ಸನ ಇನ್ನೊಂದು ಗಮನಾರ್ಹವಾದ ವಾದವೆಂದರೆ ಕೈಗಾರಿಕೀಕರಣದ ಅನಂತರ ಹುಟ್ಟಿಕೊಂಡ ಬೂರ್ಜ್ವವರ್ಗ. ಇದು ಬೂರ್ಜ್ವವರ್ಗದ ಮೊದಲನೆಯ ಹಂತ. ಅದರ ಅನಂತರವೇ ಯುರೋಪಿನಲ್ಲಿ ಆಧುನಿಕತೆಯ ಪರಿಕಲ್ಪನೆ ಮತ್ತು ಅದರ ಚರ್ಚೆಗಳು ಶುರುವಾದವು. ಈ ದೃಷ್ಟಿಯಿಂದ ಸಂಕಥನವು ಚರಿತ್ರೆ ಮತ್ತು ಪಠ್ಯಗಳ ಮೂಲಕ ರೂಪುಗೊಂಡಿತು. ಸಂಕಥನ ಎನ್ನುವ ಪರಿಭಾಷೆಯು ಕೇವಲ ಬಂಡವಾಳಶಾಹಿ ಜಗತ್ತಿಗೆ ಮಾತ್ರ ಸಂಬಂಧಿತವಾದುದ್ದಲ್ಲ. ಅದು ಕೈಗಾರೀಕರಣಕ್ಕಿಂತಲೂ ಪೂರ್ವದಲ್ಲಿದ್ದ ಸಮಾಜಕ್ಕೂ ಅನ್ವಯವಾಗುತ್ತದೆ. ಪುನರ್‌ಜ್ಜೀವನದ ಅನಂತರ ಸಾಹಿತ್ಯ ಕೃತಿಗಳ ಮೇಲೆ ಬಂಡವಾಳಶಾಹಿ ಜಗತ್ತಿನ ಪ್ರಭಾವ ರೂಪುಗೊಂಡದ್ದರಿಂದ ಸಾಹಿತ್ಯದಲ್ಲಿ ಹೊರ ಪರಿವರ್ತನೆಯನ್ನು ನಾವು ಕಾಣುತ್ತೇವೆ. ಆದರೆ ಗಾಂಧಿಯದು ಇದಕ್ಕಿಂತ ಭಿನ್ನವಾದ ಆಲೋಚನೆಯ ಕ್ರಮ.

ಗಾಂಧಿಯು ಹೇಳುವ ಕ್ರಮವನ್ನು ನಾವಿಲ್ಲಿ ಗಣನೆಗೆ ತೆಗೆದು ಕೊಳ್ಳಬೇಕು.

ಆಧುನಿಕ ನಾಗರಿಕತೆ ನಿಜಕ್ಕೂ ಶ್ರೇಷ್ಠತರ ಸಂಗತಿ, ಅದನ್ನು ಯಶಸ್ವಿಯಾಗಿ ಎದುರಿಸುವುದು ಅಸಾಧ್ಯ-ಎಂಬ ಕಲ್ಪನೆಯ ಆಧಾರದ ಮೇಲೆ ನಿಂತ ಸೂಚನೆಗಳಿವು. ತಣಿಯದ ಭೌತ ಆಕಾಂಕ್ಷೆ ಒಂದೆಡೆ, ತತ್ಫಲವಾದ ಯುದ್ಧ ಇನ್ನೊಂದೆಡೆ ಇರುವ ಈ ನಾಗರಿಕತೆಯನ್ನು ನಂಬದಿರುವ ಪ್ರಬುದ್ಧ ವಿಚಾರಪರಂಪರೆಯೊಂದು ಪಶ್ಚಿಮ ದೇಶಗಳಲ್ಲಿ ಬೆಳೆಯುತ್ತಿದೆ.

ಒಳ್ಳೆಯದೋ ಕೆಟ್ಟದೋ, ಪಾಶ್ಚಾತ್ಯ ಅರ್ಥದಂತೆ ಭಾರತ ಔದ್ಯೋಗಿಕೃತವೇಕಾಗಬೇಕು? ಪಾಶ್ಚಾತ್ಯ ನಾಗರಿಕತೆ ನಗರಪ್ರಧಾನವಾದುದು. ಇಂಗ್ಲೆಂಡ್ ಇಟಲಿಗಳಂಥ ರಾಷ್ಟ್ರಗಳು ಪಟ್ಟಣಗಳನ್ನು ಕಟ್ಟಿಕೊಳ್ಳಬಲ್ಲವು. ಬಹುವಿರಳ ಜನಸಂಖ್ಯೆಯುಳ್ಳ ಅಮೇರಿಕದಂಥ ದೊಡ್ಡ ದೇಶಕ್ಕೂ ಬಹುಶಃ ಬೇರೆ ದಾರಿ ಇರದು. ವಿಪುಲ ಜನಸಂಖ್ಯೆಯುಳ್ಳ ವಿಸ್ತಾರವಾಧ ದೇಶ ಭಾರತ. ಈ ತನಕ ಅದರ ಆವಶ್ಯಕತೆಗಳನ್ನು ಪೂರೈಸಿದೆ ಅದರ ಗ್ರಾಮೀಣ ಪರಂಪರೆ. ಅದು ಪಾಶ್ಚಾತ್ಯ ಮಾದರಿಯನ್ನು ನಕಲು ಮಾಡಬೇಕಿಲ್ಲ, ಮಾಡಬಾರದು. ಒಂದು ಸನ್ನಿವೇಶದಲ್ಲಿರುವ ಒಂದು ರಾಷ್ಟ್ರಕ್ಕೂ ವಿಹಿತವಾದುದು ಬೇರೊಂದು ಸನ್ನಿವೇಶದಲ್ಲಿರುವ ಮತ್ತೊಂದು ರಾಷ್ಟ್ರಕ್ಕೂ ವಿಹಿತವಾಗಬೇಕೆಂಬುದೇನೂ ಇಲ್ಲ. ಒಬ್ಬನಿಗೆ ಅಮೃತವಾದುದು ಎಷ್ಟೋ ವೇಳೆ ಇನ್ನೊಬ್ಬನಿಗೆ ವಿಷ. ಒಂದು ದೇಶದ ಭೌತ ಭೂಗೋಳ ಅದರ ಸಂಸ್ಕೃತಿಯ ಸ್ವರೂಪವನ್ನು ಪ್ರಧಾನವಾಗಿ ನಿರ್ಧರಿಸುತ್ತದೆ. ಉತ್ತರಧ್ರುವದಲ್ಲಿರುವವನಿಗೆ ಫರ್ ಕೋಟು ಅತ್ಯಗತ್ಯವಿರಬಹುದು, ಸಮಭಾಜಕವೃತ್ತದ ಬಳಿ ಇರುವವನ ಉಸಿರುಕಟ್ಟಿಸೀತು ಅದು.

(ಅರ್ಥವಿಚಾರ ಮೋ.ಕ.ಗಾ ೧೯೫೫ ಪುಟ. ೧೯೦)

ಕೈಗಾರಿಕೀಕರಣದ ಸಂದರ್ಭದಲ್ಲಿ ರೂಪುಗೊಂಡ ವೈಚಾರಿಕತೆಗೆ ಮಧ್ಯ ಯುಗೀನ ಕಾಲದ ಯುರೋಪಿನ ಚಿಂತನಾ ಕ್ರಮದ ಪ್ರಭಾವವಿದೆ. ಸೈದ್ ಆಧುನಿಕ ಪ್ರಭುತ್ವ ಮತ್ತು ಅದರ ಯುರೋಪ್ ಕೇಂದ್ರಿತ ಚಿಂತನೆ ಎರಡನ್ನು ಕುರಿತು ಮಾತನಾಡುತ್ತಾನೆ. ಸೈದ್ ವಸಾಹತು ಶಾಹಿ ಜಗತ್ತನ್ನು ಅಚಾರಿತ್ರಿಕವೆಂದು ಕರೆಯುವುದಿಲ್ಲ. ಆದರೆ ಗಾಂಧಿಯವರು ಆಧುನಿಕ ಯಾಂತ್ರಿಕತೆಯು ಮನುಷ್ಯರನ್ನು ಆಲಸಿಗಳನ್ನಾಗಿ ಮಾಡುತ್ತದೆಯೆಂದು ನಂಬಿದ್ದರು. ಇದರೊಂದಿಗೆ ಮತ್ತೊಂದು ಅಂಶವನ್ನು ಗಮನಿಸಬೇಕು–

೧೮ ನೇ ಶತಮಾನದ ನಂತರ ಯುರೋಪಿನಲ್ಲಿ ಅಧಿಕಾರ ಪರಿಕಲ್ಪನೆ ಬೇರೆಯಾಯಿತು ಎಂದು ಸೈದನ ವಾದ ಇದರಿಂದಲೇ ಹೊಸ ರೀತಿಯ ಸಂಕಥನಗಳು ರೂಪುಗೊಂಡವು. ಎಂದು ಅವನ ಪ್ರತಿಪಾದನೆ.ಯುರೋಪಿನ ಅಧಿಕಾರದ ಪರಿಕಲ್ಪನೆಯು ವಿವೇಕವಿಲ್ಲದ ಪಶುಬಲವೆಂದು ಗಾಂಧಿ ಹೇಳುತ್ತಾರೆ.

> **ಇಂಗ್ಲಿಷರು ಪಶುಬಲವನ್ನು ಉಪಯೋಗಿಸಿ ತಮ್ಮ ಗುರಿಯನ್ನು ಸಾಧಿಸಿದರು; ಆದುದರಿಂದ ನಾವು ಪಶುಬಲವನ್ನು ಪ್ರಯೋಗಿಸಿ ನಮ್ಮ ಗುರಿಯುನ್ನು ಸಾಧಿಸಬೇಕೆಂಬುದನ್ನು ಮೊದಲು ತೆಗೆದುಕೊಳ್ಳೋಣ. (ಹಿಂದೂ ಸ್ವರಾಜ್ಯ ಮೋ.ಕ.ಗಾ ೧೦೦೯ ಪುಟ. ೬೩)**

* * *

೮. ಯುರೋಪ್ ಮಾದರಿಯ ಶಿಕ್ಷಣಕ್ಕೆ ಗಾಂಧಿ ಪ್ರತಿಕ್ರಿಯೆ

– ಜೀವನವೇ ಶಿಕ್ಷಣ

ಸಾಹಿತ್ಯ ಮತ್ತು ಅಕ್ಷರ ಚಳುವಳಿಯು 18ನೇ ಶತಮಾನದ ಪೂರ್ವದಲ್ಲಿ ಯುರೋಪಿನಲ್ಲಿ ವ್ಯಾಪಕವಾಯಿತು. ಅದರೊಂದಿಗೆ ಬರವಣಿಗೆ ಮತ್ತು ಸಂವಹನವು ವಿಶೇಷ ಮಾಧ್ಯಮವಾಯಿತು. ಚಿತ್ರಕಲೆಯಂಥ ಬರವಣಿಗೆಯು ಕೂಡಾ ಒಂದು ರೀತಿಯ ಅಭಿವ್ಯಕ್ತಿ ಮಾಧ್ಯಮ. ಹದಿನೆಂಟನೆಯ ಶತಮಾನದಲ್ಲಿ ಅಕ್ಷರ ಮಾಧ್ಯಮವೆನ್ನುವುದು ಮುದ್ರಣ ಮಾಧ್ಯಮವಾಗಿ ಪರಿವರ್ತಿತವಾಯಿತು. ಇದರಿಂದ ಹೊಸ ಸಾಧ್ಯತೆಗಳು ರೂಪುಗೊಂಡವು. 19ನೆಯ ಶತಮಾನದ ಪೂರ್ವದಲ್ಲಿ ಅನಕ್ಷರತೆ ಮತ್ತು ಸಾಕ್ಷರತೆ ಎನ್ನುವುದು ಯುರೋಪಿನ ಸಮಾಜದಲ್ಲಿ ಪ್ರಮುಖ ಸಾಮಾಜಿಕ ಪರಿಕಲ್ಪನೆಗಳಾದವು. ಸಾಮಾಜಿಕ ಅಭಿವೃದ್ಧಿಯ ಪ್ರಮಾಣವನ್ನು ಅಳೆಯಲು ಇದು ಕೂಡ ಒಂದು ಸಾಧನವಾಯಿತು.ಈ ಕುರಿತು ಗಾಂಧಿಯವರು ಹೇಳಿರುವ ಮಾತು ಗಮನಾರ್ಹವಾಗಿದೆ".

> **"ಮೂಲಶಿಕ್ಷಣದ ಮೂಲ ಲಕ್ಷಣಗಳನ್ನು ಈಗ ಹೇಳುವೆ:**
>
> **1) ಮೂಲಶಿಕ್ಷಣ ಜೀವನಕ್ಕಾಗಿ ಶಿಕ್ಷಣ, ಜೀವನದ ಮೂಲಕ ಶಿಕ್ಷಣ, ಜೀವನ ಪರ್ಯಂತ ಶಿಕ್ಷಣ. ಆದುದರಿಂದ ಅದು ದೇಹ,**

ಬುದ್ಧಿ ಹಾಗೂ ಆತ್ಮಗಳ ಶಿಕ್ಷಣ. ಹುಡುಗ ಹುಡುಗಿಯರು ಪರಿಪೂರ್ಣ ಪುರುಷತ್ವ, ಸ್ತ್ರೀತ್ವ ಪಡೆವ ಸಮಗ್ರ ವಿಕಾಸ ಅದು. ಅದರಲ್ಲಿ ಕೈಕಾಲು ಹಾಗೂ ಬುದ್ಧಿ, ಹೃದಯ ಹಾಗೂ ಮೆದುಳು, ಕ್ರಿಯೆ ಅಧ್ಯಯನ ಹಾಗೂ ಸುಸಂಬದ್ಧ ಬಾಳುವೆ ಮತ್ತು ವಿಕಾಸದ ಕಾರ್ಯ ಕ್ರಮದಲ್ಲಿ ತಮ್ಮ ಸಹಜ ಸಂಬಂಧವನ್ನು ಸಾಧಿಸುತ್ತವೆ.

2) ಆದುದರಿಂದ ಮೂಲಶಿಕ್ಷಣ ಶೈಶವದ ಮೊದಲ ವರ್ಷಗಳಿಂದ ಆರಂಭವಾಗಿ ಪ್ರೌಢಾವಸ್ಥೆಯವರೆಗೆ ಹೋಗುತ್ತದೆ. ಆದರೆ 'ನಯೀ ತಾಲೀಂ'ನ ತನ್ನ ವಿಶ್ವರೂಪದಲ್ಲಿ ಬಾಳ ಆದಿಯಿಂದ ಹಿಡಿದು ಅಂತ್ಯದವರೆಗೆ ಹಬ್ಬಿದೆ.

3) ಆದರೆ ಏಳು ಅಥವಾ ಎಂಟು ವರ್ಷಗಳ ಪ್ರಾಥಮಿಕ ಶಿಕ್ಷಣವಾಗಿ ಮೂಲಶಿಕ್ಷಣ ಹುಡುಗ ಅಥವಾ ಹುಡುಗಿಗೆ ಉತ್ಪಾದಕ ಕೆಲಸದ ಮೂಲಕ ಶಿಕ್ಷಣ; ಶಾಲೆಯ, ಸಮಾಜದ ನೈಸರ್ಗಿಕ ಹಾಗೂ ಸಾಮಾಜಿಕ ಸನ್ನಿವೇಶದೊಡನೆ ಸರ್ವಮುಖಗಳಲ್ಲಿಯೂ ಜೀವಚಿತ ಬಾಂಧವ್ಯ ಸ್ಥಾಪನೆಯ ಮೂಲಕ ಶಿಕ್ಷಣ. ಹೇಳಲು ಸುಲಭ ಇದು. ಆದರೆ ಅದರ ಪರಿಣಾಮಗಳು, ಸವಾಲುಗಳು ಅಗಾಧವಾಗಿ ಕ್ರಾಂತಿಕಾರಕ. ಈ ಪರಿಣಾಮಗಳನ್ನು ಸವಾಲುಗಳನ್ನು ಯಾರೇ ಆಗಲಿ ಕಂಡುಕೊಂಡಿರುವುದು ಅತ್ಯಲ್ಪ.

4) ಗಾಂಧೀ ಸಿದ್ಧಾಂತದಂತೆಯೇ ಮೂಲಶಿಕ್ಷಣದಲ್ಲೂ ಸಾಧನೆಗಳೇ ಸಾಧ್ಯಗಳು, ಸಾಧ್ಯಗಳು ಸಾಧನಗಳಲ್ಲೇ ಅಡಕವಾಗಿರುತ್ತವೆ. ಉತ್ಪಾದಕ ಕ್ರಿಯೆ, ನಿಸರ್ಗದೊಡನೆ ಸಮಾಜದೊಡನೆ ತಾದಾತ್ಮ್ಯ, ಅವೆಲ್ಲವುಗಳ ಮೂಲಕ ಶಿಕ್ಷಣ; ಹಾಗಾಗಿ ಕೆಲಸವೇ ಕಲಿಕೆಯಾಗುತ್ತದೆ, ಕಲಿಕೆ ಕೆಲಸದ ಸತ್ತ್ವವನ್ನು ಅದರ ಅತ್ಯುತ್ತಮ ಅರ್ಥದಲ್ಲಿ ಸೃಜನಶಕ್ತಿಯಾಗಿ ಮೇಲೆ ಎತ್ತುತ್ತದೆ. ಪ್ರತಿಯೊಬ್ಬರೂ ಪರಸ್ಪರ ಸಮಾನರಾಗಿರುವ, ಒಬ್ಬರು ಇನ್ನೊಬ್ಬರನ್ನು ಪೂರಾ ಗೌರವಿಸುವ ಹಾಗಾಗಿ ಪರಸ್ಪರ ತಿಳಿವಳಿಕೆ ಸೇವೆಗಳಿಂದಲೂ ಅಂತಿಮವಾಗಿ ಮಾನವೀಯತೆಯಿಂದಲೂ ಬೆಸೆಯಲ್ಪಟ್ಟ ಸಹಕಾರಾತ್ಮಕ ಶಾಂತ ಜೀವನವೇ ಮತ್ತೆ ಸಾಧನ.

5) ಫಲಿತಾಂಶ: ತನ್ನ ಸನ್ನಿವೇಶದಲ್ಲೇ ದೃಢವಾಗಿ ನೆಲೆನಿಂತ, ಅದನ್ನು ಪರಿವರ್ತಿಸುವ, ಆದರೆ ಬೌದ್ಧಿಕವಾಗಿ, ಆಧ್ಯಾತ್ಮಿಕವಾಗಿ ಇಡೀ ವಿಶ್ವದ ಪೌರತ್ವದವರೆಗೆ ಚೇತನವನ್ನು ಚಾಚುವ ಸ್ತ್ರೀಪುರುಷರು. ಹೀಗೆ ಹುಟ್ಟುವ ಹೊಸ ವ್ಯಕ್ತಿ ಉತ್ಪಾದಕ ಕೆಲಸಗಾರ; ಅದ್ಭುತ ವಾಗಿ ಶಕ್ತಿ ಸಂಪನ್ನರಾದ ನಿಚ್ಚಳ ವಿಚಾರ ಉಚಿತ, ತನ್ನ ಸಮಾಜವನ್ನು ಉನ್ನತತರ ಶ್ರೇಣಿಗೆ ಏರಿಸುವ ಎಲ್ಲ ಕೆಲಸದಲ್ಲಿ

ಇತರರೊಡನೆ ಸಹಕಾರಿ, ತನ್ನ ಕೆಲಸದಲ್ಲಿ, ಬಾಳುವೆಯಲ್ಲಿ ಸತ್ಯ ಅಹಿಂಸೆಗಳಿಗೆ ಸಮರ್ಪಿಸಿಕೊಂಡ ಜೀವಿ.

6) ಇದೇ ಮೂಲಶಿಕ್ಷಣದ ಮಹತ್ ದರ್ಶನ. ಮತ್ತಾವ ದೃಷ್ಟಿಯೂ ಯಾವುದೇ ಸುಶಿಕ್ಷಣಕ್ಕೆ ಯುಕ್ತವಾಗದು. ಒಳ್ಳೆಯ ಆಹಾರ ದೈಹಿಕ ಜೀವನದ ಆಧಾರವಾಗಿರುವಂತೆಯೇ ಸುಶಿಕ್ಷಣವೇ ಇಡೀ ಜೀವನದ ಆಧಾರ. ನಾವು ದೊಡ್ಡವರಾಗಬೇಕಾದರೆ ಬೃಹತ್ತಾಗಿ ಯೋಚಿಸಬೇಕು, ಎಂದೂ ನಮ್ಮ ಅಲ್ಪತೆಯಲ್ಲೇ ಅಡಗಿರಬಾರದು. ಮೂಲಶಿಕ್ಷಣವನ್ನು ಬೆಳೆಸುವುದರಲ್ಲಿ, ವ್ಯಾವಹಾರಿಕ ತೊಡಕುಗಳಿರಬಹುದು. ಅವುಗಳ ಅಂಜಿಕೆ ನಮ್ಮೆದುರು ಇಟ್ಟುಕೊಂಡ ಆದರ್ಶದಿಂದ ನಮ್ಮನ್ನು ಹಿಮ್ಮೆಟ್ಟಿಸಬಾರದು. ಆದರ್ಶದತ್ತ ಸಾಗುವಾಗ ಎಡವಿದರೂ ಅಡ್ಡಿಯಿಲ್ಲ, ಆದರ್ಶಕ್ಕೆ ನಿಷ್ಠರಾಗಿರಬೇಕು.

(ಜೀವನ ಶಿಕ್ಷಣ 1966 ಪುಟ. 15)

ಭಾರತದ ವಸಾಹತುಶಾಹಿ ಕಾಲಘಟ್ಟವು ರೂಪಿಸಿದ ಶಿಕ್ಷಣ ಕ್ರಮದ ಹಿಂದೆ ಅದರ ಯಜಮಾನಿಕೆಯು ; ಅದರ ಸ್ವ ಲಾಭದ ಹಿತಾಸಕ್ತಿಯೂ ಕೆಲಸ ಮಾಡಿದೆಯೆಂಬುದನ್ನು ಎಲ್ಲರೂ ತಿಳಿದಿದ್ದಾರೆ. 1820ರ ಹೊತ್ತಿಗಾಗಲೇ ಇಂಗ್ಲಿಷ್ ಸಾಹಿತ್ಯವೆನ್ನುವುದು ಸಾಂಸ್ಥೀಕರಣಕ್ಕೆ ಗುರಿಯಾಗಿತ್ತು. ಗಾಂಧಿ ಈ ಮಾದರಿಯ ಶಿಕ್ಷಣಕ್ಕೆ ವಿರೋಧವಾಗಿದ್ದರು.

ಬ್ರಿಟೀಷರು ಭಾರತದಲ್ಲಿ ಪ್ರಾರಂಭಿಸಿದ ಶಿಕ್ಷಣದ ಹಿಂದಿದ್ದ ಪ್ರಮುಖ ಉದ್ದೇಶಗಳನ್ನು ಅರ್ಥಮಾಡಿಕೊಳ್ಳಬೇಕು.

1. ಭಾರತದಲ್ಲಿ ಬ್ರಿಟೀಷರು ಶಾಲೆಗಳನ್ನು ಪ್ರಾರಂಭಿಸುವಾಗ ಅವರಿಗೆ ಬೇಕಾದ ಆಡಳಿತ ನೀತಿಯನ್ನು ವಿಸ್ತರಿಸುವ ಉದ್ದೇಶವಿತ್ತು. ಆದರೆ ಗಾಂಧಿಗೆ ಜೀವನ ಶಿಕ್ಷಣವೇ ಮುಖ್ಯ. ಆ ಮೂಲಕ ಅವರು ಅದರ ಸಾಂಸ್ಕೃತಿಕ ವಿಸ್ತರಣೆಯನ್ನು ಮಾಡಬೇಕಾಗಿತ್ತು. ಸೆಕ್ಯುಲರಿಸಂ ಈ ಪರಿಕಲ್ಪನೆಯ ಮುಂದುವರಿಕೆ. ಬ್ರಿಟಿಶರು ಆಡಳಿತ ಯಂತ್ರಕ್ಕೆ ಬೇಕಾದ ಜನರನ್ನು ಸೃಷ್ಟಿಸಬೇಕಾದ ಅಗತ್ಯವಿತ್ತು. ಬ್ರಿಟೀಷ್ ಸರಕಾರಕ್ಕೆ ಭಾರತದಲ್ಲಿ ಆಡಳಿತ ನಿರ್ವಹಿಸುವಾಗ ಆಡಳಿತಕ್ಕೆ ಬೇಕಾದ ಎಲ್ಲಾ ಜನರನ್ನು ಇಂಗ್ಲೆಂಡಿನಿಂದಲೇ ಕಳಿಸುವುದು ತುಂಬಾ ಕಷ್ಟಕರವಾಗಿತ್ತು. ಉದಾ : ಕ್ಲಾರ್ಕ್‌ಗಳು ಇತ್ಯಾದಿ. ಯಾವಾಗ ಬ್ರಿಟೀಷರು ಭಾರತಕ್ಕೆ ಬಂದು ಆಡಳಿತವನ್ನು ಪ್ರಾರಂಭಿಸಿದರೋ ಅವರು ಒಂದು ನಿರ್ದಿಷ್ಟ ರಾಜಕೀಯ ನೀತಿ, ಒಂದು ಆಡಳಿತಾತ್ಮಕ ಕ್ರಮ, ಒಂದು ನಾಗರಿಕ ಸಮಾಜ ಪರಿಕಲ್ಪನೆಯನ್ನು ಜಾರಿಗೆ ತರುವ ಪ್ರಯತ್ನ ಮಾಡಿದರು. ಭಾರತದಲ್ಲಿದ್ದ ಬಹುಭಾಷೆ

ಹಾಗೂ ಅದರ ಸಂಸ್ಕೃತಿಯು ಬ್ರಿಟೀಷರಿಗೆ ಅಷ್ಟೊಂದು ಉಪಯುಕ್ತವೆಂದು ಅನಿಸಲಿಲ್ಲ. ಬೇರೊಂದು ರೀತಿಯಲ್ಲಿ ಹೇಳಬೇಕೆಂದರೆ ಈ ಬಹು ಭಾಷಾ ಸಂಸ್ಕೃತಿಗಳ ಅರಿವು ಸಂಪೂರ್ಣ ಬ್ರಿಟೀಷರಿಗೆ ಅರ್ಥವಾಗಿರಲಿಲ್ಲ. ಮತ್ತು ಅದು ಅವರ ಆಡಳಿತಕ್ಕೆ ಮುಖ್ಯವಾಗಿರಲಿಲ್ಲ. ಅವರಿಗೆ ಇಡೀ ಭಾರತದಲ್ಲಿ ಏಕ ಭಾಷಾ ಸೂತ್ರವನ್ನು ತಂದಷ್ಟು ಆಡಳಿತ ನಡೆಸಲು ಅನುಕೂಲವಾಗುತ್ತಿತ್ತು. ಸಂವಹನ ಮಾಧ್ಯಮವಾಗಿ ಇಂಗ್ಲಿಷಿನ ಹೇರುವಿಕೆಯು ಅವರ ಆಡಳಿತದ ದೃಷ್ಟಿಯಿಂದ ಅತ್ಯಂತ ಉಪಯುಕ್ತವಾಗಿತ್ತು. ಇದರಿಂದ ಅನೇಕ ಲಾಭವಿತ್ತು. ಒಮ್ಮೆ ಭಾಷೆಯನ್ನು ಒಂದು ಸಮಾಜದಲ್ಲಿ ಹೇರಿ ಬಿಟ್ಟರೆ ಉಳಿದಂತೆ ವ್ಯಾವಹಾರಿಕವಾಗಿ ಅವರಿಗೆ ತೊಂದರೆಯಾಗಲಾರದು ಎಂಬುದು ಅವರ ದೃಢವಾದ ನಂಬಿಕೆಯಾಗಿತ್ತು. ಭಾರತದಲ್ಲಿ ಶಿಕ್ಷಣವನ್ನು ನೀಡಲು ನೇರವಾಗಿ ಬ್ರಿಟೀಷ್ ಕಂಪೆನಿಗಳು ಮಾತ್ರವೇ ಕಾರಣವಾಗಿರಲಿಲ್ಲ. ಅದರೊಂದಿಗೆ ಸಹಾಯ ಹಸ್ತವನ್ನು – ಕ್ರೈಸ್ತ ಮಿಶನರಿ ಸಂಸ್ಥೆಗಳು ನೀಡಿದವು. ಕ್ರೈಸ್ತ ಮಿಶನರಿಗಳು ಮೂರು ರೀತಿಯ ಉದ್ದೇಶವನ್ನು ಹೊಂದಿದ್ದವು :

1. ಶಿಕ್ಷಣ

2 ಆಸ್ಪತ್ರೆ

3 ಧರ್ಮ ಪ್ರಚಾರ

ಈ ಮೂರು ಅಂಶಗಳಲ್ಲಿ ಕ್ರಿಶ್ಚಿಯನ್ ಧರ್ಮದ ಅಂತಸ್ಥವಾದ ಪ್ರಣಾಳಿಕೆಗಳಿವೆ ಯೆಂಬುದು ಗಮನಾರ್ಹ. ಶಿಕ್ಷಣ ಮತ್ತು ಆಸ್ಪತ್ರೆಯನ್ನು ತೆರೆಯುವುದೆಂದರೆ ಕ್ರಿಶ್ಚಿಯನ್ ಧರ್ಮದ ಪ್ರಕಾರ ದೀನ ದಲಿತರ ಸೇವೆಯನ್ನು ಮಾಡುವುದು. ಪಾಪಿಗಳನ್ನು ಉದ್ಧರಿಸುವುದು, ಇದಕ್ಕೂ ಕಂಪೆನಿ ಸರಕಾರಕ್ಕೂ ಅಷ್ಟು ನೇರವಾದ ಸಂಬಂಧ ಇರಲಿಲ್ಲ. ಆದರೆ ಮತ್ತೊಂದೆಡೆ ಕಂಪೆನಿ ಸರಕಾರಕ್ಕೂ ಭಾರತದಲ್ಲಿ ಶಿಕ್ಷಣವನ್ನು ನೀಡುವ ಅವಶ್ಯಕತೆಯಿತ್ತು. ಇದು ಅದರ ಕಂಪೆನಿ ವ್ಯವಹಾರವನ್ನು : ಆಡಳಿತ ವ್ಯವಹಾರವನ್ನು ಮುಂದುವರಿಸಲು ಬೇಕಾದ ಆಂತರಿಕ ರಚನೆಯನ್ನು ಭಾರತದಲ್ಲಿಯೇ ರೂಪುಗೊಳಿಸುವುದೇ ಆಗಿತ್ತು. ಇಲ್ಲಿ ಆಂತರಿಕ ರಚನೆ (Infrastructure) ಯನ್ನು ಸಿದ್ಧಗೊಳಿಸುವುದು ಅವರ ವ್ಯಾಪಾರ ವಹಿವಾಟುಗಳ ದೃಷ್ಟಿಯಿಂದ ತುಂಬಾ ಮುಖ್ಯವಾಗಿತ್ತು. ಇಲ್ಲಿಯ ಮಾನವ ಸಂಪನ್ಮೂಲಗಳನ್ನು ಕಂಪೆನಿಗಳಿಗೆ ಬೇಕಾದ ರೀತಿಯಲ್ಲಿ ರೂಪಿಸುವುದು ಅವರ ಅಗತ್ಯಗಳಲ್ಲಿ ಒಂದಾಗಿತ್ತು. ಶಿಕ್ಷಣದ ವಿಚಾರದಲ್ಲಿ ಗಾಂಧಿಯದು ನೈತಿಕ ದೃಷ್ಟಿಕೋನ ಗಾಂಧಿ ಇದನ್ನೇ ಹೃದಯ ಶಿಕ್ಷಣವೆಂದು ಕರೆಯುತ್ತಾರೆ.

> ಎಷ್ಟೇ ಸದುದ್ದೇಶ್ಯವಿದ್ದರೂ ಇಂಗ್ಲೀಷರಿಗೇನು ಬೇಕೋ ಹಿಂದುಸ್ತಾನಕ್ಕೇನು ಬೇಕೋ ಆ ವ್ಯತ್ಯಾಸ ಇಂಗ್ಲೀಷ್ ಉಪಾಧ್ಯಾಯರಿಗೆ ಪೂರ್ಣವಾಗಿ ಅರ್ಥವಾಗಲಿಲ್ಲ. ನಮ್ಮ ಹವಾಗುಣಕ್ಕೆ ಅವರಿಗೆ ಬೇಕಾಗುವ ಕಟ್ಟಡಗಳು ಬೇಡ. ಅಲ್ಲದೆ, ಪ್ರಧಾನವಾಗಿ ಗ್ರಾಮಪರಿಸರಗಳಲ್ಲಿ ಬೆಳೆದ ನಮ್ಮ ಹುಡುಗರಿಗೆ ಪಟ್ಟಣಗಳಿಲ್ಲಿ ಬೆಳೆದ ಇಂಗ್ಲಿಷ್ ಹುಡುಗರಿಗೆ ಬೇಕಾದ ವಿದ್ಯಾಭ್ಯಾಸ ಪದ್ಧತಿ ಅಗತ್ಯವಲ್ಲ.
>
> ಶಾಲೆಗೆ ಸೇರಿದರೆ ನಮ್ಮ ಹುಡುಗರಿಗೆ ಬೇಕಾದ್ದು ಹಲಗೆ ಬಳಪ ಪುಸ್ತಕ ಅಲ್ಲ; ತಾವು ಕೈಯಾರೆ ಹಿಡಿದು ಸುಲಭವಾಗಿ ಕೆಲಸಮಾಡಿ ಪ್ರಯೋಜನ ಪಡೆಯಬಹುದಾದ ಸರಳವಾದ ಹಳ್ಳಿಯ ಉಪಕರಣಗಳು. ಇದಕ್ಕೆ ಶಿಕ್ಷಣ ಕ್ರಮದಲ್ಲೇ ಒಂದು ಕ್ರಾಂತಿಯಾಗಬೇಕಾದೀತು. ಅಂಥ ಕ್ರಾಂತಿಯಾಗದಿದ್ದರೆ ಶಾಲೆಗೆ ಹೋಗುವ ವಯಸ್ಸಿನ ಪ್ರತಿಯೊಂದು ಮಗುವಿಗೂ ಶಿಕ್ಷಣ ದೊರೆಯಲು ಸಾಧ್ಯವಿಲ್ಲ.
>
> ಈಗ ಸರಕಾರಿ ಶಾಲೆಗಳಲ್ಲಿ ಕೊಡುವ ಓದುಬರಹ ಗಣಿತಗಳ ಜ್ಞಾನ ಮಕ್ಕಳಿಗೆ ಮುಂದೆ ಬದುಕಿನಲ್ಲಿ ಏನೂ ಪ್ರಯೋಜನವಾಗದು ಎಂಬುದು ಎಲ್ಲರಿಗೂ ಒಪ್ಪಿಗೆ, ಒಂದು ವರ್ಷದೊಳಗೇ ಅದರಲ್ಲಿ ಹೆಚ್ಚು ಪಾಲು ಮರೆತುಹೋಗುತ್ತದೆ, ಉಪಯೋಗವಿಲ್ಲದೆ. ಹಳ್ಳಿಯ ಪರಿಸರದಲ್ಲಿ ಅದು ಬೇಕಾಗುವುದೇ ಇಲ್ಲ.
>
> (ಜೀವನ ಶಿಕ್ಷಣ ಮೋ.ಕ.ಗಾ. 1966 ಪುಟ. 12)

ವಸಾಹತು ಪೂರ್ವದ ಸನ್ನಿವೇಶದಲ್ಲಿ ಶಿಕ್ಷಣವೆನ್ನುವುದು ಈಗಾಗಲೇ ವಿವರಿಸಿರುವಂತೆ 'ಎಲ್ಲರಿಗೂ ಸಮಾನ ಶಿಕ್ಷಣ' ಎಂಬ ಪರಿಕಲ್ಪನೆಯನ್ನು ಹೊಂದಿರಲಿಲ್ಲ. ಈ ಸಂಗತಿಯು ವಸಾಹತೋತ್ತರ ಸಂದರ್ಭದಲ್ಲಿ ಅನೇಕ ಬುದ್ಧಿಜೀವಿಗಳ ಆಕ್ಷೇಪಗಳಿಗೆ ಕಾರಣವಾಯಿತು. ಬ್ರಿಟೀಷ್ ಮಾದರಿಯ ಶಿಕ್ಷಣದ ಪರಿಕಲ್ಪನೆಯ ಮೂಲಕ ನೋಡಿದರೆ ನಮಗೆ ಹೀಗೆ ಅನಿಸುವುದು ಸಹಜ ಕೂಡಾ.

ವಸಾಹತು ಪೂರ್ವದ ಶಿಕ್ಷಣದ ಮಾದರಿಯು ಏಕರೂಪದ ಸಮತಲ ಚಿಂತನೆಯ ಮತ್ತು ಪರಿವಿಡಿ ಆಧಾರದ ಶಿಕ್ಷಣ ಕ್ರಮವಾಗಿರಲಿಲ್ಲ. ಆದರೆ ಗಾಂಧಿ ಅನುಭವಕೇಂದ್ರಿತ ಶಿಕ್ಷಣ ಕುರಿತು ಹೇಳುತ್ತಾರೆ.

ವೈದಿಕ ಶಿಕ್ಷಣ ಪದ್ಧತಿಯು ವೇದ ಪಠ್ಯವನ್ನು ಆಧರಿಸಿಕೊಂಡಿದ್ದರೂ ಅದರ ಕಲಿಕೆಯ ಕ್ರಮದಲ್ಲಿ ವಿವಿಧ ಕ್ರಮಗಳಿದ್ದವು. ಪಠ್ಯವನ್ನು ಓದುವುದು, ಮನನ ಮಾಡುವುದು ಮತ್ತು ಅದನ್ನು ಬಾಯಿ ಪಾಠ ಮಾಡಿ ಒಪ್ಪಿಸುವುದು ವೈದಿಕ ಶಿಕ್ಷಣದಲ್ಲಿ ಒಂದು ಕ್ರಮವಾಗಿತ್ತು. ಅದರಲ್ಲಿಯೂ ಬೇರೆ ಬೇರೆ ರೀತಿಯ ವಿಶೇಷ ತಜ್ಞರಿದ್ದರು. ಶತಾವಧಾನಿ,

ಅಷ್ಟಾವಧಾನಿಗಳು, ಘನಪಾಠಿಗಳು ಇತ್ಯಾದಿ. ವೈದಿಕೇತರಲ್ಲಿ ಶಿಕ್ಷಣ ಕ್ರಮವು ಪಠ್ಯ ಆಧಾರಿತವಾದುದಲ್ಲ. ಅಂದರೆ ಅಕ್ಷರ ಮತ್ತು ಅದರ ಓದಿಗೆ ಅದು ಸಂಬಂಧಿಸಿರುವುದಿಲ್ಲ. ಅದನ್ನು 'ಕಸುಬಿನ ಕೌಶಲದ ಕಲಿಕೆ' ಎಂದು ಕರೆಯಲಾಯಿತು. ಬ್ರಿಟೀಷರಿಗೆ ಈ ಸೂಕ್ಷ್ಮ ವ್ಯತ್ಯಾಸಗಳು ಬೇಕಿರಲಿಲ್ಲ. ಆದುದರಿಂದ ಅವರು ಭಾರತದ ವೈವಿಧ್ಯಪೂರ್ಣವಾದ ಕಲಿಕೆಯ ಕ್ರಮದ ಕಡೆಗೆ ಗಮನ ಹರಿಸಲಿಲ್ಲ. ಎಲ್ಲಕ್ಕಿಂತ ಹೆಚ್ಚಾಗಿ ಕಂಪೆನಿ ಸರಕಾರಕ್ಕೆ ಅದು ಉಪಯುಕ್ತವಾಗಿರಲಿಲ್ಲ. ಉದಾ : ಕಸೂತಿ ಕಲೆಯು ಕಂಪೆನಿಗೆ ಉಪಯೋಗಕ್ಕೆ ಬರುವುದು ಸಾಧ್ಯವಿರಲಿಲ್ಲ. ಆದರೆ ಗಣಿತ ಶಾಸ್ತ್ರ ಅವರಿಗೆ ಉಪಯುಕ್ತವಾಗಿತ್ತು. ಯಾಕೆಂದರೆ ಗಣಿತವನ್ನು ಕಲಿತವನು ಲೆಕ್ಕ ಪತ್ರ ಇಡಲು ಸಾಧ್ಯವಿತ್ತು. ಎರಡನೆಯದಾಗಿ ಬ್ರಿಟೀಷರಿಗೆ ಇಲ್ಲಿನ ಬಹು ಭಾಷೆಗಳು ತುಂಬಾ ತೊಡಕಾಗಿತ್ತು. ಏಕ ರೂಪಿಯಾದ ಇಂಗ್ಲಿಷ್ ಭಾಷೆಯನ್ನು ಬಳಸದೆ ಅವರಿಗೆ ಗತ್ಯಂತರವಿರಲಿಲ್ಲ. ಸ್ಥಳೀಯರ ವಿವಿಧ ಭಾಷೆಗಳ ದೆಸೆಯಿಂದ ಇಂಗ್ಲಿಷರಿಗೂ, ಸ್ಥಳೀಯರಿಗೂ ಒಂದು ಮಾದರಿಯ ಸಂವಹನದ ಅಂತರ ಉಂಟಾಗುತ್ತಿತ್ತು. ಸ್ಥಳೀಯರು ಏನು ಮಾತಾಡುತ್ತಾರೆ ಎಂದು ಇಂಗ್ಲೀಷರಿಗೆ ಅರ್ಥವಾಗುತ್ತಿರಲಿಲ್ಲ. ಇಂಗ್ಲೀಷರು ಏನು ಮಾತಾಡುತ್ತಿದ್ದಾರೆ ಎಂದು ಸ್ಥಳೀಯರಿಗೆ ತಿಳಿಯುತ್ತಿರಲಿಲ್ಲ. ಇದು ಪರಸ್ಪರರ ತಿಳುವಳಿಕೆಯಲ್ಲಿ ಬಹುದೊಡ್ಡ ಅಂತರಕ್ಕೆ ಮತ್ತು ಅವರು ನಡೆಸುವ ಆಡಳಿತಕ್ಕೆ ತೊಡಕಾಗಿತ್ತು. ಗಾಂಧಿ ಗಣಿತದ ಉಪಯೋಗ ಹೆಚ್ಚಿಲ್ಲವೆಂದೇ ಭಾವಿಸಿದ್ದರು.

ಇಂಗ್ಲೀಷರು ಭಾರತದಲ್ಲಿ ಶಿಕ್ಷಣ ಸಂಸ್ಥೆಗಳನ್ನು ಮತ್ತು ಶಿಕ್ಷಣ ನೀತಿಗಳನ್ನು ರೂಪಿಸುವಾಗ ಇಂಗ್ಲೆಂಡಿನಲ್ಲಿಯೂ ಅನೇಕ ಬದಲಾವಣೆಗಳು ಉಂಟಾಗಿದ್ದವು. 17ನೆಯ ಶತಮಾನದ ಕೊನೆಗೆ ಮತ್ತು ಹದಿನೆಂಟನೆಯ ಆದಿಯಲ್ಲಿ ಇಂಗ್ಲೆಂಡಿನ ಶಿಕ್ಷಣ ನೀತಿಯಲ್ಲಿ ಅನೇಕ ರೀತಿಯ ಬದಲಾವಣೆಗಳು ಉಂಟಾಗಿದ್ದವು. ಇಂಗ್ಲೆಂಡಿನಲ್ಲಿ ಬದಲಾದ ಶಿಕ್ಷಣದ ಸ್ವರೂಪಗಳು ಸಹಜವಾಗಿ ಭಾರತದಲ್ಲಿಯೂ ಪರಿವರ್ತನೆಗಳನ್ನು ತಂದಿದ್ದವು. ಇದಕ್ಕಾಗಿಯೇ ಗಾಂಧಿ ಸ್ವಾವಲಂಬನೆಗೆ ಶಿಕ್ಷಣವೆಂದು ಕರೆದರು.

ಭಾರತದಲ್ಲಿ ಇಂಗ್ಲೀಷರು ಶಿಕ್ಷಣವನ್ನು ಜಾರಿಗೆ ತಂದಾಗಲೂ ಅವರ ಅಧಿಕಾರಕ್ಕೆ ಧಕ್ಕೆಯಾಗಬಾರದು ಎಂಬ ದೃಷ್ಟಿಕೋನವಿತ್ತು. ಅದಕ್ಕಾಗಿಯೇ ಶಾಲೆಯನ್ನು ಕಾರ್ಖಾನೆ ಮಾಡಬೇಡಿ ಎಂದರು.

ಬ್ರಿಟೀಷ್ ಶಿಕ್ಷಣ ಮಾದರಿಯು ನಮ್ಮ ಹಳೆಯ ಶಿಕ್ಷಣ ಮಾದರಿಗಿಂತ ಬೇರೆ ರೀತಿಯದು. ಇದನ್ನು ಸರಳ ಉದಾಹರಣೆಯ ಮೂಲಕ ವಿವರಿಸಬಹುದು : ನಮ್ಮ ದೇಶೀಯ ಶಿಕ್ಷಣ ಮಾದರಿಗಳಲ್ಲಿ ಒಂದಾದ ಗುರುಕುಲ ಪದ್ಧತಿಯಲ್ಲಿ ಗುರು ಮತ್ತು

ಶಿಷ್ಯರ ಸಂಬಂಧವು 'ವಿಶಿಷ್ಟ ಬಗೆಯದು'. ಗುರುವಿನ ಸೇವೆಯನ್ನು ಶಿಷ್ಯ ಮಾಡಬೇಕೆಂದು ಆ ಪದ್ಧತಿಯು ಹೇಳುತ್ತದೆ. ಗುರುವಿಗೆ ಬೇಕಾದುದನ್ನು ತಂದುಕೊಡುವುದು, ಗುರುವಿನ ಜೊತೆಗೆ ಸದಾ ಇರುವುದು, ಗುರು ತನಗೆ ಮನಸ್ಸು ಬಂದಾಗ ಶಿಷ್ಯನಿಗೆ ಹೇಳಿಕೊಡುವುದು ಈ ಪರಂಪರೆಯ ಮುಖ್ಯ ಗುಣ. ಬ್ರಿಟೀಷ್ ಶಿಕ್ಷಣ ಪದ್ಧತಿಯು ವಿದ್ಯಾಭ್ಯಾಸದ ಕ್ರಮಕ್ಕೆ ವೇಳಾ ಪಟ್ಟಿಯನ್ನು ನಿರ್ಧರಿಸಿತು. ಎರಡನೆಯದಾಗಿ ಅದು ಜಾರಿಗೆ ತಂದಿದ್ದ ಹೊಸ ರೀತಿಯ ಶಿಕ್ಷಣ ಪದ್ಧತಿಯಲ್ಲಿ ಯಾರೂ ಬೇಕಾದರೂ ಶಿಕ್ಷಣವನ್ನು ಪಡೆಯಬಹುದಿತ್ತು. ಆದುದರಿಂದ ಶಿಕ್ಷಕ ಮತ್ತು ವಿದ್ಯಾರ್ಥಿ ನಡುವೆ ವೈಯಕ್ತಿಕ ಹಾಗೂ ಸ್ನೇಹಪೂರ್ಣ ಸಂಬಂಧವು ಸಾಧ್ಯವಾಗಿರಲಿಲ್ಲ. ಗಾಂಧಿಯವರು ಹೀಗೆ ಹೇಳುತ್ತಾರೆ.

> ಸಮ್ಮೇಳನದ ಮುಂದೆ ನಾನು ಇಡುವ ವಿಷಯ ಈಗ ತೋಚುತ್ತಿರುವಂತೆ ಇದು:
>
> 1) ಈಗಿನ ಶಿಕ್ಷಣ ಪದ್ಧತಿ ದೇಶದ ಆವಶ್ಯಕತೆಗೆ ಯಾವ ವಿಧದಲ್ಲೂ ಸರಿ ಹೋಗುತ್ತಲಿಲ್ಲ. ಪ್ರೌಢಶಿಕ್ಷಣಕ್ಕೆ ಇಂಗ್ಲೀಷು ಭಾಷೆಯನ್ನು ಮಾಧ್ಯಮವಾಗಿ ಮಾಡಿದುದರಿಂದ ಸುಶಿಕ್ಷಿತರಾದ ವಿದ್ಯಾವಂತರಿಗೂ ಅಶಿಕ್ಷಿತ ಅವಿದ್ಯಾವಂತ ಜನಸ್ತೋಮಕ್ಕೂ ನಡುವೆ ಒಂದು ಗೋಡೆ ಕಟ್ಟಿದಂತೆ ಆಗುತ್ತದೆ; ಅದರಿಂದ ಜನತೆಗೆ ಜ್ಞಾನ ಹರಿದುಬರುತ್ತಿಲ್ಲ. ಇಂಗ್ಲೀಷಿಗೆ ಕೊಟ್ಟ ಈ ಅತಿಪ್ರಾಧಾನ್ಯ ವಿದ್ಯಾವಂತರಿಗೆ ಭಾರವಾಗಿ ಅವರ ಮನಸ್ಸು ಊನವಾಗುತ್ತದೆ. ಅವರು ತಮ್ಮ ದೇಶದಲ್ಲಿ ತಾವೇ ಪರದೇಶಿಗಳಾಗುತ್ತಾರೆ. ವೃತ್ತಿ ಶಿಕ್ಷಣದ ಲೋಪದಿಂದ ವಿದ್ಯಾವಂತರು ಉತ್ಪಾದಕ ಕಾರ್ಯಕ್ಕೆ ನಿಷ್ಪ್ರಯೋಜಕರಾಗಿ, ದೈಹಿಕವಾಗಿ ವ್ಯರ್ಥಜೀವಿಗಳೂ ಆಗಿದ್ದಾರೆ. ಪ್ರಾಥಮಿಕ ಶಿಕ್ಷಣದಲ್ಲಿ ಕಲಿಸಿದ ಅಲ್ಪಸ್ವಲ್ಪವೂ ಬೇಗ ಮರೆತುಹೋಗುತ್ತದೆ; ಗ್ರಾಮಜೀವನ, ನಗರಜೀವನ ಯಾವುದಕ್ಕೂ ಇದರಿಂದ ಪ್ರಯೋಜನವಿಲ್ಲ. ಹೀಗಾಗಿ ಇದಕ್ಕೆ ವೆಚ್ಚ ಮಾಡಿದ ಹಣವೆಲ್ಲ ಹಾಳು. ಈ ಶಿಕ್ಷಣದಿಂದ ಸಿಗುವ ಅಲ್ಪಲಾಭವೂ ಇದಕ್ಕಾಗಿ ಹಣ ತೆರುವವನಿಗೆ ಸಿಗುತ್ತಿಲ್ಲ. ಅವನ ಮಕ್ಕಳಿಗೆ ಆಗುವ ಪ್ರಯೋಜನ ಅತ್ಯಲ್ಪ.
>
> 2)ಪ್ರಾಥಮಿಕ ಶಿಕ್ಷಣದ ಅವಧಿ ಕನಿಷ್ಠ ಪಕ್ಷ ಏಳು ವರ್ಷಗಳಾದರೂ ಆಗಬೇಕು. ಮೆಟ್ರಿಕ್ಯುಲೇಷನ್ ಓದಿನಲ್ಲಿ ಬರುವ ಸಾಮಾನ್ಯ ಜ್ಞಾನ ಎಲ್ಲ ಇದರಲ್ಲಿ ಬರಬೇಕು. ಇಂಗ್ಲೀಷು ಬೇಕಾಗಿಲ್ಲ. ಒಂದು ಉಪಯುಕ್ತ ಉದ್ಯೋಗ ಬರಬೇಕು.

3) ಹುಡುಗ ಹುಡುಗಿಯರ ಸರ್ವತೋಮುಖವಾದ ವಿಕಾಸವಾಗಬೇಕಾದರೆ ಲಾಭಕರ ಉದ್ಯೋಗವೊಂದನ್ನು ಅವರಿಗೆ ಕಲಿಸಬೇಕು. ಆ ಉದ್ಯೋಗದಿಂದ ಎರಡು ಬಗೆಯ ಲಾಭವಾಗಬೇಕು; ವಿದ್ಯಾರ್ಥಿ ತನ್ನ ಪರಿಶ್ರಮದಿಂದ ಉತ್ಪತ್ತಿ ಮಾಡಿವುದು ಅವನ ಶಿಕ್ಷಣದ ಶುಲ್ಕಕ್ಕೆ ಆಗಬೇಕು; ಶಾಲೆಯಲ್ಲಿ ಕಲಿತ ಉದ್ಯೋಗದ ಮೂಲಕ ವಿದ್ಯಾರ್ಥಿಯ ಪೂರ್ಣ ಮಾನವೀಯ ವಿಕಾಸವಾಗಬೇಕು

ಶಾಲೆಯ ಕಟ್ಟಡ, ಸಲಕರಣೆಗಳ ವೆಚ್ಚ ವಿದ್ಯಾರ್ಥಿಗಳ ಶ್ರಮದಿಂದ ಬರಬೇಕಾಗಿಲ್ಲ. ಹತ್ತಿ, ಉಣ್ಣೆ, ರೇಷ್ಮೆಗಳ ಎಲ್ಲಾ ಕ್ರಿಯೆಗಳನ್ನು – ಹತ್ತಿ ಬಿಡಿಸುವುದು, ಕಾಳು ಅರೆಯುವುದು, ಹಿಂಜುವುದು, ನೂಲುವುದು, ಬಣ್ಣ ಹಾಕುವುದು, ದುಪಟ್ಟಾ ಮಾಡುವುದು, ನೇಯ್ಗೆ, ಮಾದರಿ ಜೋಡಿಸುವುದು, ಕಸೂತಿ, ಹೊಲಿಗೆ, ಕಾಗದ ಮಾಡುವುದು, ಪುಸ್ತಕಕ್ಕೆ ರಟ್ಟು ಕಟ್ಟುವುದು, ಗೊಂಬೆ ಮಾಡುವುದು, ಮನೆಯ ಮುಟ್ಟು ಮಾಡುವುದು, ಬೆಲ್ಲ ಮಾಡುವುದು ಇವನ್ನು ಅತ್ಯಂತ ಸುಲಭವಾಗಿ ಕಲಿಯಬಹುದು. ಇವಕ್ಕೆ ಹೆಚ್ಚು ಬಂಡವಾಳವೂ ಬೇಡ.

ಪ್ರಾಥಮಿಕ ವಿದ್ಯಾಭ್ಯಾಸದಲ್ಲಿ ಹುಡುಗ ಹುಡುಗಿಯರು ಕಲಿತ ಕೈಗಾರಿಕೆಯಿಂದ ಅವರ ಬದುಕು ನಡೆಯುತ್ತದೆ ಎಂಬ ಭರವಸೆಯನ್ನು ಸರಕಾರ ಕೊಡಬೇಕು. ಸರಕಾರವೇ ಆದರೂ ಅವರು ಮಾಡಿದ ಪದಾರ್ಥವನ್ನು ಕೊಳ್ಳಬೇಕು. ಹೊಟ್ಟೆ ಹೊರೆಯುವ ಈ ಸಾಧನವನ್ನು ಪ್ರಾಥಮಿಕ ಶಿಕ್ಷಣ ಮಕ್ಕಳಿಗೆ ನೀಡಬೇಕು.

4) ಉದ್ಯೋಗ, ಕಲೆ, ಸಾಹಿತ್ಯ, ಯಂತ್ರವಿದ್ಯೆ, ಎಲ್ಲದರಲ್ಲೂ ಪ್ರೌಢಶಿಕ್ಷಣವನ್ನು ಖಾಸಗೀ ಉದ್ಯಮಕ್ಕೆ ಬಿಡಬೇಕು.

ಸರಕಾರದ ವಿಶ್ವವಿದ್ಯಾನಿಲಯಗಳು ಬರೀ ಪರೀಕ್ಷಾ ಸಂಸ್ಥೆಗಳಾಗಬೇಕು. ಅವುಗಳ ವೆಚ್ಚ ಆ ಪರೀಕ್ಷಾ ಶುಲ್ಕದಿಂದ ಸರಿತೂಗಬೇಕು.

ವಿಶ್ವವಿದ್ಯಾನಿಲಯಗಳು ಇಡೀ ಶಿಕ್ಷಣಕ್ಷೇತ್ರದ ಮೇಲ್ವಿಚಾರಣೆ ನಡೆಸಬೇಕು. ಶಿಕ್ಷಣದ ಬೇರೆ ಬೇರೆ ವಿಭಾಗಗಳಿಗೆ ಪಾಠಪ್ರವಚನಗಳ ಪಟ್ಟಿಯನ್ನು ಅಣಿಮಾಡಬೇಕು. ವಿಶ್ವವಿದ್ಯಾನಿಲಯದ ಅನುಮತಿ ಇಲ್ಲದೆ ಯಾವ ಶಾಲೆಯೂ ಪ್ರಾರಂಭವಾಗಕೂಡದು. ಗುಣ, ಯೋಗ್ಯತೆ ಉಳ್ಳವರು ಯಾರು ಬೇಕಾದರೂ ಒಂದು ವಿಶ್ವವಿದ್ಯಾನಿಲಯವನ್ನು ಪ್ರಾರಂಭಿಸಲು ಅವಕಾಶ ಕೊಡಬೇಕು.

> ವಿಶ್ವವಿದ್ಯಾನಿಲಯ ಸರಕಾರಕ್ಕೆ ಹೊರೆಯಾಗಕೂಡದು. ಒಂದು ಕೇಂದ್ರ ಶಿಕ್ಷಣಶಾಖೆಯನ್ನು ಮಾತ್ರ ಸರಕಾರ ನಡೆಸಿತು. ಹೀಗೆಂದ ಮಾತ್ರಕ್ಕೆ ರಾಜ್ಯಭಾರಕ್ಕೆ ಅಗತ್ಯವಾದ ಶಿಕ್ಷಣವನ್ನು ಕೊಡಲು ಶಿಕ್ಷಣದ ಸೂತ್ರಗಳನ್ನು ನಡೆಸುವ ಜವಾಬದಾರಿ ಸರಕಾರಕ್ಕೆ ತಪ್ಪದು. (ಜೀವನ ಶಿಕ್ಷಣ 1966 ಪುಟ. 43–45)

ಬ್ರಿಟೀಷರು ರೂಪಿಸಿದ ಶಿಕ್ಷಣ ಪದ್ಧತಿಯು ಈಗಾಗಲೇ ಅವರ ದೃಷ್ಟಿಕೋನಕ್ಕೆ ಅನುಸಾರವಾಗಿತ್ತು. ಭಾರತೀಯರಿಗೆ ಅದರ ಅಗತ್ಯ ಎಷ್ಟಿದೆ ಎಂಬುದನ್ನು ಅದು ಯೋಚಿಸಲು ಹೋಗಲಿಲ್ಲ. 1835ರಲ್ಲಿ ಇಂಗ್ಲೀಷ್ ಎಜುಕೇಶನ್ ಆ್ಯಕ್ಟ್ English Education Act of Governor ಜಾರಿಗೆ ಬಂತು. ಇದನ್ನು ಜಾರಿಗೆ ತಂದವನು ವಿಲಿಯಂ ಬೆಂಟಿಂಕ್. ಇದನ್ನೇ ಮೆಕಾಲೆಯು ಅನುಸರಿಸಿದ. ಇದರ ಅಂತರಾಳದ ಮೂಲ ಸೂತ್ರವೆಂದರೆ ಇಂಗ್ಲೀಷ್ ಶಿಕ್ಷಣದ ಮೂಲಕ ಪಶ್ಚಿಮದ ಚಿಂತನೆಯನ್ನು ಭಾರತದ ಮೇಲೆ ಹೇರುವುದು. ಇಲ್ಲಿ ಇಂಗ್ಲೀಷ್ ಸಾಹಿತ್ಯ ಕಲಿಕೆ ಮತ್ತು ವಿಜ್ಞಾನದ ಬೋಧನೆ ಎರಡೂ ಇದ್ದವು. ಆದರೆ ಶಿಕ್ಷಣವು ಇಂಗ್ಲೀಷ್ ಮಾಧ್ಯಮದಲ್ಲಿ ನಡೆಯುತ್ತಿತ್ತು. ಪ್ರಮುಖ ಸಂಗತಿಯೆಂದರೆ ಮೆಕಾಲೆಯನ್ನು ಹೋಲಿಸಿದರೆ ಬೆಂಟಿಂಕ್ ಶಿಕ್ಷಣದ ದೃಷ್ಟಿಯಿಂದ ಸ್ವಲ್ಪ ಮಟ್ಟಿಗೆ ಮೃದು ಧೋರಣೆ ತಳೆದಿದ್ದ. ಗಾಂಧಿಯ ರಾಷ್ಟ್ರೀಯ ಶಿಕ್ಷಣ ಸಮಿತಿಯ ಪರಿಕಲ್ಪನೆ ಕುತೂಹಲದಾಯಕ.

> ಹೊಸದಾಗಿ ರಚಿಸಿದ ರಾಷ್ಟ್ರೀಯ ಶಿಕ್ಷಣಸಮಿತಿ ಸಭೆಯಲ್ಲಿ ಗಾಂಧೀಜೀ ಹೊಸ ಶಿಕ್ಷಣದ ಗುರಿ, ಒಳ ಅರ್ಥಗಳನ್ನು ತಿಳಿಸಿದರು. ಇಲ್ಲಿಯೂ ಅವರ ಆಶಾಭಂಗದ ಭಾವ ಕಾಣುತ್ತಿತ್ತು. ಕಡೆಗೆ ಹೇಳಿದರು: 'ಹೊಸ ಶಿಕ್ಷಣದ ಯೋಜನೆಯನ್ನು ಪ್ರಾರಂಭಿಸಿದಾಗ ನನಗೆ ಪೂರ್ಣ ಆತ್ಮವಿಶ್ವಾಸವಿತ್ತು. ಈಗ ಇಲ್ಲ ಎನಿಸುತ್ತದೆ. ಈಗ ನನ್ನ ಮಾತಿನಲ್ಲಿ ಶಕ್ತಿಯಿಲ್ಲ, ಆಗ ಒಂದು ಶಕ್ತಿ ಇತ್ತು. ಈ ವಿಶ್ವಾಸಲೋಪಕ್ಕೆ ಕಾರಣ ಹೊರಗಿನದು ಯಾವುದೂ ಅಲ್ಲ, ಒಳಗಿನದೇ ಕಾರಣ. ನನ್ನ ಇಂದ್ರಿಯಗಳಿಗೇನು ಪಾರ್ಶ್ವವಾಯು ಬಡೆದಿಲ್ಲ. ನನ್ನ ವಯಸ್ಸಿಗೆ ನನ್ನ ಬುದ್ಧಿ ಹೆಚ್ಚಾಗಿಯೇ ಕೆಲಸಮಾಡುತ್ತಿದೆ. ಅಹಿಂಸೆಯಲ್ಲಿ ನನ್ನ ಶ್ರದ್ಧೆಯೂ ತಗ್ಗಿಲ್ಲ. ಆ ಶ್ರದ್ಧೆ ಮೊದಲಿಗಿಂತ ಹೆಚ್ಚು ಬೆಳಗುತ್ತಿದೆ. ಆದುದರಿಂದ ನಾನು ಹೇಳಿದುದನ್ನು ಬರಿದೇ ಒಪ್ಪಿಕೊಳ್ಳಬೇಡಿ. ನಿಮಗೆ ಹಿಡಿಸಿದುದನ್ನು ಮಾತ್ರ ಒಪ್ಪಿಕೊಳ್ಳಿ. ಸರಿಯಾದ ರೀತಿಯಲ್ಲಿ ಎರಡೇ ಶಾಲೆಗಳನ್ನು ನಡೆಸಿದರೂ ನಾನು ಸಂತೋಷದಿಂದ ಕುಣಿದೇನು.'
>
> (ಜೀವನ ಶಿಕ್ಷಣ ಮೋ.ಕ.ಗಾ. 1966 ಪುಟ. 134)

ಈ ರೀತಿಯ ಶಿಕ್ಷಣದ ಮೂಲ ಉದ್ದೇಶ ಭಾರತೀಯರಲ್ಲಿ ಇಂಗ್ಲೀಷರ ನಡೆ-ನುಡಿಯನ್ನು ಕಲಿಸುವುದು (Manners). ಎರಡನೆಯದಾಗಿ ಆಧುನಿಕ ಓದುಗ ವರ್ಗವನ್ನು ಸೃಷ್ಟಿಸುವುದು. ಅದೇ ಕಾಲಕ್ಕೆ ಬ್ರಿಟೀಷ್ ಕಂಪೆನಿಗಳು ಭಾರತದಲ್ಲಿ ಜನರಿಗೆ ಇಂಗ್ಲೀಷ್ ಜ್ಞಾನದ ಅಗತ್ಯವಿದೆಯೆಂದು ಪ್ರತಿಪಾದಿಸಿದವು. ಇದರಿಂದ ಶಿಕ್ಷಣ ವ್ಯವಸ್ಥೆಯಲ್ಲಿ ಹೊಸ ರೀತಿಯ ಕೆಲಸ ಕಾರ್ಯಗಳು ಪ್ರಾರಂಭವಾದವು.

ಮುಸ್ಲಿಮರಿಗೆ ಮುಲ್ಲಾಗಳು ವಿದ್ಯಾಭ್ಯಾಸ ಹೇಳಿಕೊಡುತ್ತಿದ್ದರು. ಈ ವಿದ್ಯಾಭ್ಯಾಸದಲ್ಲಿ ಭೌತಿಕ ಮತ್ತು ಧಾರ್ಮಿಕ ವಿದ್ಯಾಭ್ಯಾಸ ಮುಖ್ಯವಾಗಿತ್ತು. ಅರೆಬಿಕ್ ಮತ್ತು ಉರ್ದುವಿನಲ್ಲಿ ಶಿಕ್ಷಣ ನಡೆಯುತ್ತಿತ್ತು. ವೈದಿಕರ ಶಿಕ್ಷಣ ಮಾಧ್ಯಮವು ಸಂಸ್ಕೃತ, ಆದರೆ ಉಳಿದ ಜಾತಿಯವರಿಗೆ ಈ ತರಹದ ಶಿಕ್ಷಣವು ಕಸುಬು ಆಧಾರಿತವಾದುದರಿಂದ ಆಯಾ ಜಾತಿಗಳ ಮಾತೃಭಾಷೆಯಲ್ಲಿಯೇ ಬೋಧನೆಯಾಗುತ್ತಿತ್ತು. ವಾಸ್ತವವಾಗಿ ಇಂಗ್ಲೀಷರಿಗೆ ಇದು ಯಾವುದು ಮುಖ್ಯವಾಗಿರಲಿಲ್ಲ. ಮತ್ತು ಅವರು ಕಲಿಸುವ ಕ್ರಮವೇ ಬೇರೆಯಾಗಿತ್ತು (Teaching Methodology). ಯಾವಾಗ ಮಿಶನರಿಗಳು ಭಾರತದಲ್ಲಿ ಶಿಕ್ಷಣ ಸಂಸ್ಥೆಗಳನ್ನು ಪ್ರಾರಂಭಿಸಿ ಶಿಕ್ಷಣ ನೀಡಲು ಪ್ರಾರಂಭಿಸಿದವೋ ಆಗ ಶಿಕ್ಷಣಕ್ಕೆ ಹೊಸ ರೀತಿಯ ಅವಕಾಶ ದೊರೆಯಿತು.

ಆದರೆ ಮಿಶನರಿಗಳು ತಾವು ಕಲಿಸುವ ಶಿಕ್ಷಣವನ್ನು ಜಾತ್ಯಾತೀತವೆಂದು ಕರೆದವು. ಆದರೆ ಮಿಶನರಿ ಹೇಳಿಕೊಂಡ 'ಜಾತ್ಯಾತೀತ' ಪರಿಕಲ್ಪನೆ' ಉದಾರವಾದಿ ಮನೋಭಾವ, ಶಿಕ್ಷಣದಲ್ಲಿ ಮಾನವತಾವಾದ (Liberal Humanist Attitude) ಮೂಲತಃ ಇಂಗ್ಲೆಂಡಿನಿಂದಲೇ ಹುಟ್ಟು ಪಡೆದುಕೊಂಡು ಬಂದಂಥವುಗಳು (ವಿವರಗಳಿಗೆ ನೋಡಿ : Raymond Williams). ಗಾಂಧಿಯ ಒಂದು ಪ್ರತಿಕ್ರಿಯೆ ಕುತೂಹಲದಾಯಕ.

> **ಹಿಂದುಸ್ತಾನದಲ್ಲಿ ಉಚಿತ, ಬಲಾತ್ಕಾರ ಪ್ರಾಥಮಿಕ ಶಿಕ್ಷಣ ಬರಬೇಕು ಎಂಬುದರಲ್ಲಿ ನನಗೆ ದೃಢವಾದ ನಂಬುಗೆ. ಈ ಗುರಿಯನ್ನು ಸಾಧಿಸಲು ಮಕ್ಕಳ ಮನಸ್ಸು, ಶರೀರ, ಆತ್ಮಶಕ್ತಿಗಳನ್ನು ಬೆಳೆಸಿಕೊಳ್ಳಲು ಸಾಧ್ಯವಾಗುವ ಒಂದು ಪ್ರಯೋಜನಕರ ಉದ್ಯೋಗವನ್ನು ಅವರಿಗೆ ಕಲಿಸಿದರೇನೇ ಸಾಧ್ಯ ಎಂದು ನನ್ನ ಅಭಿಪ್ರಾಯ. ಶಿಕ್ಷಣದಲ್ಲಿ ಈ ರೂಪಾಯಿ, ಆಣೆ, ಕಾಸುಗಳ ಲೆಕ್ಕಾಚಾರವೆ, ಛೆ, ಎಂದು ಯಾರೂ ತಿಳಿಯಬಾರದು. ಹಣಕಾಸಿನ ಲೆಕ್ಕದಲ್ಲಿ ಹೀನವಾದುದು ಏನೂ ಇಲ್ಲ. ನಿಜವಾದ ಅರ್ಥಶಾಸ್ತ್ರ ಉಚ್ಚತರ ನೀತಿಗೆ ಅನುಗುಣವಾಗಿ ಇರಲೇಬೇಕು; ಸತ್ಯವಾದ ನೀತಿಯೂ ಸಹ ನಿಜವಾದ ಅರ್ಥಶಾಸ್ತ್ರ ಹೊಂದಿರಲೇಬೇಕು. ಧನಪಿಶಾಚದ ಪ್ರಜೆಯನ್ನು ಕಲಿಸಿ**

ದುರ್ಬಲರನ್ನು ಹಿಂಡಿ, ಗಾಣ ಆಡಿ ಬಲಿಷ್ಠರು ಹಣ ಕೂಡಹಾಕುವಂತೆ ಮಾಡುವ ಅರ್ಥಶಾಸ್ತ್ರ ಅಸತ್ಯ ಭಯಂಕರ ಶಾಸ್ತ್ರ, ಸಾವಿನ ಶಾಸ್ತ್ರ ಅದು. ನಿಜವಾದ ಅರ್ಥಶಾಸ್ತ್ರ ಸಾಮಾಜಿಕ ನ್ಯಾಯವನ್ನು ಸಾಧಿಸಬೇಕು; ಅದು ದುರ್ಬಲರಿಗೂ ಸಹ ಹಿತವನ್ನು ಮಾಡಬೇಕು. ಸತ್-ಜೀವನಕ್ಕೆ ಅದು ಅತ್ಯಗತ್ಯ. (ಜೀವನ ಶಿಕ್ಷಣ ಮೋ.ಕ.ಗಾ. 1966 ಪುಟ. 78)

ಆಗಿನ ಶಿಕ್ಷಣ ಪದ್ಧತಿಯಲ್ಲಿ ಬೈಬಲ್ ಕೂಡಾ ಒಂದು ಪಠ್ಯ ಪುಸ್ತಕ. ಹಾಗೆಯೇ ನೀತಿ ಪಾಠ ಕೂಡಾ. ಇದನ್ನು ಕುವೆಂಪು ನೆನಪಿನ ದೋಣಿಯಲ್ಲಿ ಉಲ್ಲೇಖಿಸಿದ್ದಾರೆ. 'ಜಾತ್ಯಾತೀತ' (Secualrism) ಅನ್ನುವುದು ತುಂಬಾ ಆಕರ್ಷಕವಾದ ಪದ. ಹಾಗೆಯೇ ಕ್ರಿಶ್ಚಿಯನ್ ಮಿಶನರಿಗಳ ಉದಾರವಾದಿ ಮಾನವತಾವಾದವು ಬಹಳ ಬೇಗನೆ ಅದರ ಯಶಸ್ಸಿಗೆ ಕಾರಣವಾಯಿತು ಎಂದು ಕಾಣುತ್ತದೆ.

ಗೌರಿ ವಿಶ್ವನಾಥನ್ ಹೇಳುವಂತೆ ಈಸ್ಟ್ ಇಂಡಿಯಾ ಕಂಪೆನಿಯು ಬ್ರಿಟೀಷ್ ಮಾದರಿಯ ಕಲಿಕೆಯ ಕ್ರಮದ ಯಶಸ್ಸು – ಅಪಯಶಸ್ಸನ್ನು ಪ್ರಯೋಗಿಸಲು ಭಾರತವನ್ನು ಒಂದು ಪ್ರಯೋಗಶಾಲೆ ಎಂದು ಭಾವಿಸಿತು (ಗೌರಿ ವಿಶ್ವನಾಥನ್, 1989, ಪು. 8). ಇದರೊಂದಿಗೆ ಗಮನಿಸಬೇಕಾದ ಅಂಶವೆಂದರೆ ಇಂಗ್ಲೀಷ್ ರೂಪಿಸಿದ ಜ್ಞಾನ ಪರಂಪರೆ ಮತ್ತು ಭಾರತೀಯ ಜ್ಞಾನಪರಂಪರೆಗೆ ಇದ್ದ ಆಗಾಧ ವ್ಯತ್ಯಾಸ. ಈ ಮೊದಲು ಹೇಳಿರುವಂತೆ ಭಾರತೀಯ ಜ್ಞಾನ ಪರಂಪರೆಗೆ ಅದರದೇ ಆದ ಒಂದು ತಳಹದಿಯಿತ್ತು. ಅದು ವೈದಿಕವಿರಬಹುದು' ಅವೈದಿಕವಿರಬಹುದು. ಅದಕ್ಕೊಂದು ಜೀವನದ ದರ್ಶನವಿತ್ತು. ಭೌತಿಕ ಅವಶ್ಯಕತೆಗೆ ಅನುಸಾರವಾಗಿ ಅದು ರೂಪುಗೊಂಡಿತ್ತು. ಆದರೆ ಬ್ರಿಟೀಷ್ ಮಾದರಿಯ ಶಿಕ್ಷಣ ಕ್ರಮದ ಹಿಂದಿರುವ ಜ್ಞಾನ ಪರಂಪರೆಯ ಪುನರುಜ್ಜೀವನ ಕಾಲಘಟ್ಟದಲ್ಲಿ ಬಹು ದೊಡ್ಡ ಬಿಕ್ಕಟ್ಟನ್ನು ಎದುರಿಸಬೇಕಾಗಿ ಬಂದಿತ್ತು. ಮುಂದುವರಿದು ಜ್ಞಾನ, ತಂತ್ರಜ್ಞಾನ ಒಂದೆಡೆಯಾದರೆ, ಪ್ರಭುತ್ವ ಮತ್ತು ಚರ್ಚುಗಳು ಒಂದೆಡೆಯಾದವು. ಯುರೋಪಿನಲ್ಲಿ ಚರ್ಚಿನ ಪರಮೋಚ್ಛ ಅಧಿಕಾರವು ಸ್ವಲ್ಪ ಮಟ್ಟಿಗೆ ನಡುಗತೊಡಗಿತು. ಅದರಿಂದಾಗಿ ಚರ್ಚು ಮತ್ತು ಪ್ರಭುತ್ವ (State Power) ಎರಡೂ ಶಿಕ್ಷಣ ಕ್ಷೇತ್ರಕ್ಕೆ ಕೈಯಿರಿಸಿದವು. ಭಾರತಕ್ಕೆ ಮಿಶನರಿಗಳ ಆಗಮನವಾಗಲು ಇದೂ ಕೂಡ ಒಂದು ಕಾರಣವಾಗಿತ್ತು. ಒಂದು ರಾಜ್ಯಾಂಗ ವ್ಯವಸ್ಥೆಯಲ್ಲಿ ನೈತಿಕ ಕಾನೂನು ತಿಳಿಯದ ಮನುಷ್ಯ ಸಾಮಾಜಿಕವಾಗಿ ತನ್ನ ವರ್ಚಸ್ಸನ್ನು ಕಳೆದುಕೊಂಡಿರುತ್ತಾನೆ. ಹಾಗಾಗಿ ಮನುಷ್ಯನಿಗೆ ನೈತಿಕ ಕಾನೂನಿನ ಅರಿವು ತುಂಬಾ ಮುಖ್ಯ. ಈ ಮೂಲಕ ವಸಾಹತುಕಾಲದ ಶಿಕ್ಷಣವು ಒಂದು ನಿರ್ದಿಷ್ಟ ತಾತ್ವಿಕತೆಯನ್ನು ರೂಪಿಸಲು ಪ್ರಯತ್ನಿಸಿತು.

ಆದರೆ ಇದರೊಂದಿಗೆ ಭಾರತೀಯರಿಗೆ ಆಧುನಿಕ ಜ್ಞಾನ ಪರಂಪರೆಯ ಅರಿವು ಮೂಡಿತು ಎಂಬುದು ಅಷ್ಟೇ ಸತ್ಯ. ಉದಾ : ಇಂಗ್ಲೀಷ್ ವಿದ್ಯಾಭ್ಯಾಸದ ಉಪ ಉತ್ಪಾದನೆಯಾದ ರಾಷ್ಟ್ರೀಯತೆ, ಪಾಶ್ಚಾತ್ಯ ಉದಾರವಾದಿ ಮನೋಭಾವ, ಪ್ರಗತಿಪರತೆ, ವೈಜ್ಞಾನಿಕ ದೃಷ್ಟಿಕೋನ ಇತ್ಯಾದಿ. ಇಂಗ್ಲೀಷ್ ಶಿಕ್ಷಣದಿಂದ ನ್ಯಾಯ ಮತ್ತು ಸ್ವಾತಂತ್ರ್ಯದ ಪರಿಕಲ್ಪನೆ ಬಂತು. ಭಾರತೀಯರಿಗೆ ಚರಿತ್ರೆ ಮತ್ತು ಸಾಮಾಜಿಕ ವಾಸ್ತವವನ್ನು ಬೇರೊಂದು ರೀತಿಯಲ್ಲಿ ಅರ್ಥಮಾಡಿಕೊಳ್ಳುವುದಕ್ಕೆ ಅದು ಸಹಾಯ ಮಾಡಿತು. ಗಾಂಧಿ ಚಾರಿತ್ರ್ಯ ಮತ್ತು ನೈತಿಕತೆಯ ಕುರಿತು ಹೇಳಿದರು.

> ದೇಶದಲ್ಲಿರುವ ಪ್ರತಿಯೊಂದು ಮನೆಯೂ ಶಾಲೆಯೆ. ತಂದೆತಾಯಿಗಳೇ ಶಿಕ್ಷಕರು. ಈಗ ತಂದೆತಾಯಿ ಕಲೆಸುವುದನ್ನು ಕೈಬಿಟ್ಟಿದ್ದಾರೆ. ತಮ್ಮ ಪವಿತ್ರವಾದ ಕರ್ತವ್ಯವನ್ನು ಕಡೆಗಣಿಸಿ ಭ್ರಷ್ಟರು ಆಗಿದ್ದಾರೆ. ಪರದೇಶದ ನಾಗರಿಕತೆಯ ಗುಣ-ಅವಗುಣಗಳು ನಮಗೆ ಗೊತ್ತಿಲ್ಲ. ಅದರ ತಿರುಳು ತಿಳಿಯದು. ಎರವಲು ತಂದಿದೇವೆ ಅಥವಾ ಕದ್ದು ತಂದಿದೇವೆ. ಕಳುವಿನ ಪದಾರ್ಥ ನಮಗೆ ಗತಿ ಕಾಣಿಸದು.
>
> ಎಷ್ಟೇ ಅಪಾರ ಸಂಪತ್ತು ಇರಲಿ, ಚಾರಿತ್ರ್ಯ ಇಲ್ಲದಿದ್ದರೆ ಆ ಮನುಷ್ಯ ಪಾಳುಬಿದ್ದ ಅರಮನೆಯ ಹಾಗೆ. ದುಡ್ಡಿಗಿಂತ ಬುದ್ಧಿಯದೇ ಮೇಲುಗೈ. ಇದರಲ್ಲಿ ಭಿನ್ನಾಭಿಪ್ರಾಯವಿಲ್ಲ. ಆದರೆ ಕಡೆಗೆ ಬುದ್ಧಿಗಿಂತ ಹೆಚ್ಚಾಗಿ ಹೃದಯವೇ ದಾರಿ ತೋರೀತೆಂಬುದನ್ನು ಒಪಲೇಬೇಕು. ಪರೀಕ್ಷಾಸಮಯದಲ್ಲಿ ಬುದ್ಧಿಯಲ್ಲ, ಚಾರಿತ್ರ್ಯಕ್ಕೇ ಬೆಲೆ. ಚಾರಿತ್ರ್ಯವಿಲ್ಲದ ಜ್ಞಾನ ಆಸುರೀಶಕ್ತಿ. ಎಷ್ಟು ಜನ ಪ್ರತಿಭಾಶಾಲಿ ಕಳ್ಳರನ್ನು, ಗೋಮುಖವ್ಯಾಘ್ರಗಳನ್ನು ನೋಡಿಲ್ಲ.
>
> ನಿಮ್ಮ ಹೃದಯ ಪರಿಶುದ್ಧವಲ್ಲದಿದ್ದರೆ, ನಿಮ್ಮ ವಿಕಾರಗಳನ್ನು ನೀವು ನಿಗ್ರಹಿಸಲು ಆಗದಿದ್ದರೆ, ನೀವು ವಿದ್ಯಾವಂತರಲ್ಲ. ಚಾರಿತ್ರ್ಯಶುದ್ಧಿಯಿಲ್ಲದ್ದು ವಿದ್ಯೆಯೆ? ವೈಯಕ್ತಿಕ ಪ್ರಾಥಮಿಕ ಪರಿಶುದ್ಧಿಯೂ ಇಲ್ಲದೆ ಚಾರಿತ್ರ್ಯವೆ? (ಜೀವನ ಶಿಕ್ಷಣ ಮೋ.ಕ.ಗಾ. 1966 ಪುಟ. 192)

1813ರಲ್ಲಿ ಜಾರಿಗೆ ಬಂದ ಚಾರ್ಟರ್ ಆ್ಯಕ್ಟ್‌ನ ಮುಖ್ಯ ಗುರಿ ಧಾರ್ಮಿಕ ನೈತಿಕ ಪುನರುತ್ಥಾನ. ಇದರ ಉದ್ದೇಶ-ದೇಶೀ ಜನರನ್ನು ಪೌರರನ್ನಾಗಿಸುವುದು. ಪಶ್ಚಿಮದ ಪೌರತ್ವದ ವ್ಯಾಖ್ಯೆಯು ಇದರ ಹಿಂದೆ ಕೆಲಸ ಮಾಡಿರುವುದು ಗಮನಾರ್ಹ. 1774-1785 ವಾರೆನ್ ಹೇಸ್ಟಿಂಗ್ಸ್ ಭಾರತೀಯ ಸಂಸ್ಕೃತಿಯನ್ನು ಮಾಹಿತಿ ಮತ್ತು ಆಡಳಿತಾತ್ಮಕ ವಿಧಾನದಿಂದ ಅರ್ಥಮಾಡಿಕೊಳ್ಳಲು ಪ್ರಯತ್ನಿಸಿದ. ಇದಕ್ಕೆ ಅವನು ಬಳಸಿಕೊಂಡಿರುವ

ವಿಧಾನವು ದ್ವಂದ್ವಾತ್ಮಕವಾದುದು ಎಂದು ಎಡ್ವರ್ಡ್ ಸೈದ್ ಹೇಳಿರುವುದು ಗಮನಾರ್ಹ. ಸರಿಸುಮಾರು ಈ ಕಾಲದಲ್ಲಿಯೇ 'ವಸ್ತುನಿಷ್ಠ ಜ್ಞಾನ'ದ ಮೂಲಕ ಭಾರತೀಯ ಜನರ ಜೀವನ ಕ್ರಮವನ್ನು ಅಧ್ಯಯನ ಮಾಡಬೇಕೆಂದು ಪ್ರತಿಪಾದಿಸಲಾಯಿತು. ವಾರನ್ ಹೇಸ್ಟಿಂಗ್ಸ್ ಸಿವಿಲ್ ಸರ್ವಿಸ್ ಮತ್ತು ಆಡಳಿತದಲ್ಲಿ ಮಾನವೀಯತೆಯನ್ನು ಒಳಗೊಂಡ ಜ್ಞಾನದ ಅಥವಾ ಪಾಂಡಿತ್ಯದ ಅಗತ್ಯವಿದೆಯೆಂದು ಪ್ರತಿಪಾದಿಸಿದ. ಅವನ ಪ್ರಕಾರ ಇವುಗಳಿಂದ ಮಾತ್ರ ಸಾಮಾಜಿಕ ಸಂವಹನ ಸಾಧ್ಯ. 1830ರಲ್ಲಿ ಪ್ರಾಚೀನ ಭಾರತೀಯ ಭಾಷೆ ಮತ್ತು ಸಾಹಿತ್ಯದ ಕಲಿಕೆಗಳು ಶಿಕ್ಷಣ ಸಂಸ್ಥೆಗಳನ್ನು ಪ್ರವೇಶಿಸಿದವು. 1835ರಲ್ಲಿ ಬೆಂಟಿಂಕ್ ಇಂಗ್ಲೀಷ್ ಎಜುಕೇಶನ್ ಆ್ಯಕ್ಟ್ ತಂದ. ಅದೇ ವರ್ಷ ಬಂದ ಮೆಕಾಲೆಯು ಈ ರೀತಿಯಲ್ಲಿ ಹೇಳುತ್ತಾನೆ : 'ಭಾರತದ ಯುವಕರು ಸೆಮಿನಾರ್‌ಗಳಲ್ಲಿ ಮತ್ತು ಇತರ ಸಂದರ್ಭಗಳಲ್ಲಿ ಇಂಗ್ಲೀಷನ್ನು ಸುಲಲಿತವಾಗಿ ಮಾತಾಡುವುದರಲ್ಲಿ ಯಾಕೆ ಸೋಲುತ್ತಾರೆ ಎಂದರೆ ಅವರ ಸಮಯ ಮೂರು ಭಾಷೆಯ ಕಲಿಕೆಯಲ್ಲಿ ವ್ಯರ್ಥವಾಗುತ್ತದೆ'. ಮೆಕಾಲೆಯ ಸಲಹೆಯ ಪ್ರಕಾರ ಇಂಗ್ಲಿಷ್ ಬೋಧನಾ ಮಾಧ್ಯಮವಾಯಿತು. 1852ರ ಹೊತ್ತಿಗೆ ಪ್ರಾರಂಭವಾದ ಚರ್ಚ್‌ಸ್ಕೂಲ್‌ಗಳಲ್ಲಿ ರೊಮ್ಯಾಂಟಿಕ್ ಬರಹಗಾರರ ಕೃತಿಗಳು ಪಠ್ಯ ಪುಸ್ತಕಗಳಾಗಿದ್ದವು. ಮಿಶನರಿ ಶಾಲೆಗಳಲ್ಲಿ ಒಂದೆಡೆಯಲ್ಲಿ ರೊಮ್ಯಾಂಟಿಕ್ ಪಠ್ಯಗಳು ಮತ್ತೊಂದೆಡೆಯಿಂದ ಕ್ಲಾಸಿಕಲ್ ಪಠ್ಯಗಳು ಹಾಗೂ ಕ್ಲಾಸಿಕಲ್ ಚರಿತ್ರೆಗಳು ಬೋಧಿಸಲ್ಪಡುತ್ತಿದ್ದವು.

ಇಲ್ಲಿ ಇನ್ನೊಂದು ಅಂಶವನ್ನು ಗಮನಿಸಬೇಕು. ಇಂಗ್ಲೆಂಡಿನ (1860ರ ವೇಳೆಗೆ) ಶಿಕ್ಷಣ ಪದ್ಧತಿಯಲ್ಲಿ ಎರಡು ಧ್ರುವಗಳಿದ್ದವು. ಒಂದು ಅಭಿಜಾತ ಪರಂಪರೆಗಳ ಕುರಿತು ಅಧ್ಯಯನ ನಡೆಸುವುದು. ಇದು ಮೇಲು ವರ್ಗಕ್ಕೆ ಮೀಸಲು. ಕೆಳವರ್ಗಕ್ಕೆ ಧಾರ್ಮಿಕ ಅಧ್ಯಯನಗಳು.

ಭಾರತದಲ್ಲಿಯೂ ಮಿಶನರಿಗಳು ಇದನ್ನೇ ಅನ್ವಯ ಮಾಡಿಕೊಂಡಿದ್ದವು. ಆದರೆ ಅವು ಕಲಿಸುತ್ತಿದ್ದ ನೈತಿಕ ವ್ಯಾಖ್ಯಾನಗಳು ಆವರಣವನ್ನು ಬಿಟ್ಟವುಗಳಾಗಿದ್ದವು. ಮತ್ತು ಅವಕ್ಕೆ ಹೊಸ ಆವರಣ ಬೇಕಿತ್ತು. ಇದರಿಂದ ಸಂದರ್ಭ ಬದಲಾದವು. ಇಂಗ್ಲೀಷ್ ಶಿಕ್ಷಣವು ಮೂಲಭೂತವಾಗಿ ಹೊಸದೊಂದು ವರ್ಗವನ್ನು ಸೃಷ್ಟಿಸಿತು. ಮಿಶನರಿಗಳು ಆ ಕಾಲದಲ್ಲಿ ಎರಡು ರೀತಿಯ ಸಮಸ್ಯೆಯನ್ನು ಎದುರಿಸಬೇಕಾಗಿತ್ತು.

ಒಂದು: ಅದು ಪುನರುಜ್ಜೀವನ ಕಾಲದಲ್ಲಿ ಪ್ರಾರಂಭವಾದ ವಿಜ್ಞಾನ, ತಂತ್ರಜ್ಞಾನ, ಅಭಿವೃದ್ಧಿ ಮತ್ತು ವಸ್ತುನಿಷ್ಠತೆ ಇತ್ಯಾದಿಗಳನ್ನು ಬಿಟ್ಟು ಬಿಡುವ ಹಾಗಿರಲಿಲ್ಲ. ಅವುಗಳು ಸಾಮಾಜಿಕ ಅಗತ್ಯವಾಗಿದ್ದವು.

ಎರಡನೆಯದು : ಕ್ರಿಶ್ಚಿಯಾನಿಟಿಗೆ ಇರುವ ಮೂಲಭೂತವಾದ ಕೆಲವು ತಾತ್ವಿಕತೆಯನ್ನು ಅವು ಬಿಟ್ಟುಕೊಡುವ ಹಾಗಿರಲಿಲ್ಲ. ಹೀಗಾಗಿ ಮಿಶನರಿಗಳು ಅನಿವಾರ್ಯವಾಗಿಯೇ ಆಧುನಿಕ ಯುಗದ ಜ್ಞಾನವನ್ನು ಒಪ್ಪಿಕೊಂಡು, ತಮ್ಮ ಧಾರ್ಮಿಕ ಅಸ್ತಿತ್ವವನ್ನು ಬಿಡದೆ ಎರಡರ ಸಾಮರಸ್ಯದಲ್ಲಿ ಶಿಕ್ಷಣವನ್ನು ರೂಪಿಸಿದವು. ಈ ದೃಷ್ಟಿಯಿಂದಲೇ ಕ್ರಿಶ್ಚಿಯನ್ ಮಿಶನರಿಗಳು ಭಾರತದಲ್ಲಿದ್ದ ಸಂಪ್ರದಾಯ ಮತ್ತು ಆಧುನಿಕತೆಯ ನಡುವೆ ಇರುವ ವ್ಯತ್ಯಾಸವನ್ನು ಗುರುತಿಸುವ ಪ್ರಯತ್ನವನ್ನು ಮಾಡಿದವು. 1792ರಲ್ಲಿ ಚಾರ್ಲ್ಸ್‌ಗ್ರಾಂಟ್ ಭಾರತದ ಬಗ್ಗೆ ಬರೆಯುತ್ತಾ ಈ ರೀತಿಯಲ್ಲಿ ಹೇಳುತ್ತಾನೆ : ಜಾತಿ ಪದ್ಧತಿ, ಮೂರ್ತಿ ಪೂಜೆ ಮುಂತಾದವುಗಳು ಖಂಡನಾರ್ಹವಾಗಿವೆ. ಜಾತಿಯಿಂದ ಕ್ರಿಮಿನಲ್ ಚಟುವಟಿಕೆಯು ಹೆಚ್ಚಾಗುತ್ತದೆ ಮತ್ತು ಭಾರತದಲ್ಲಿರುವ ಜಾತಿ ವ್ಯವಸ್ಥೆಯಲ್ಲಿರುವ ಶ್ರೇಣೀಕರಣವು ಆರೋಗ್ಯಕರ ಸಮಾಜ ನಿರ್ಮಾಣಕ್ಕೆ ಪೂರಕವಾಗಿಲ್ಲ (Observations on the State or Society among the Asiatic Subjects of Great Britain ಕೃತಿಯಲ್ಲಿ). ಈ ಹಿನ್ನೆಲೆಯಲ್ಲಿ ಗ್ರಾಂಟ್‌ನ ಅಭಿಪ್ರಾಯಗಳನ್ನು ಕ್ರೋಢೀಕರಿಸಿ ಹೀಗೆ ಹೇಳಬಹುದು:

1. ಒಂದು ಅಧಿಕಾರ – ಒಂದೇ ಮನಸ್ಸು
2. ಪಶ್ಚಿಮದ ಜ್ಞಾನದ ಮಾದರಿಗಳಿಂದ ದೇಶೀಯ ಜನರನ್ನು ಬದಲಾಯಿಸಬಹುದು

ಪಾಶ್ಚಾತ್ಯ ಚಿಂತನೆಯ ಕ್ರಮದಿಂದ ಪ್ರೇರಿತರಾದ ಭಾರತೀಯರು ಭಾರತದ ಐತಿಹ್ಯ, ಪುರಾಣಗಳು, ಮಾನವಾತೀತ ಶಕ್ತಿಗಳು ಮುಂತಾದವುಗಳ ಬಗ್ಗೆ ಅನುಮಾನದಿಂದ ನೋಡಿದರು. ಕನ್ನಡದಲ್ಲಿ ಈ ಬಗೆಯ ಅನೇಕ ಬರಹಗಳು ಬಂದಿವೆ.

ಮಿಶನರಿಗಳು ಮುಖ್ಯವಾಗಿ ಎರಡು ಅಂಶಗಳನ್ನು ಪ್ರತಿಪಾದಿಸಿದವು. ಧಾರ್ಮಿಕ ಪಾವಿತ್ರ್ಯ, ಎರಡನೆಯದು ಕ್ರಿಶ್ಚಿಯಾನಿಟಿಗೆ ಇರುವ ವಿಶ್ವಾತ್ಮಕತೆ, ಕುವೆಂಪು ಮತ್ತು ಕಾರಂತರ ಕಾದಂಬರಿಗಳಲ್ಲಿ ಬರುವ ಪಾದ್ರಿಗಳು ಹೇಳುವುದು ಇದನ್ನೇ.

ಮಿಶನರಿಗಳು ಒಂದು ಸಮಾಜದಲ್ಲಿ ಸಾಹಿತ್ಯದ ನಿಜವಾದ ಪಾತ್ರವೇನು ಎಂಬುದನ್ನು ವ್ಯಾಖ್ಯಾನಿಸಲು ಪ್ರಯತ್ನಿಸಿದರು. ಅದರ ಒಂದು ಸಂಕೇತ ಕಿಟ್ಟೆಲ್ ಕೋಶ. ಎರಡನೆಯದಾಗಿ ವೈಜ್ಞಾನಿಕ ಚಿಂತನೆ ಮತ್ತು ಸಾಹಿತ್ಯದಿಂದ ಭಾರತೀಯ ಯುವ ಜನರ ನೈತಿಕತೆಯು ಹೆಚ್ಚುತ್ತಿದ್ದುದಕ್ಕೆ ಗುರಿಯಾಗಬಹುದು ಎಂದು ಅವರು ಭಾವಿಸಿದ್ದರು. ವಿಚಿತ್ರವೆಂದರೆ ಇದರ ಪರಿಣಾಮವಾಗಿ ಹಿಂದೂ ಆರಾಧನಾ ಪದ್ಧತಿಯು ಹೆಚ್ಚು ಚರ್ಚೆಗೆ ಗುರಿಯಾಯಿತು. ಇದರ ಮೂಲಕ ಹೇಳಬೇಕಾದ ಬಹುಮುಖ್ಯ ಅಂಶವೆಂದರೆ

– ಇಂಗ್ಲೀಷ್ ಎನ್ನುವುದು ಶಿಕ್ಷಣ ಕ್ರಮದಲ್ಲಿ ಕೇಂದ್ರ ಬಿಂದು. ಅದು ಯಜಮಾನಿಕೆಯನ್ನು ವಹಿಸಿರುವುದು. ಗಾಂಧಿಯವರ ಪ್ರತಿಕ್ರಿಯೆ ಕುತೂಹಲದಾಯಕ.

> ನಮ್ಮ ರಾಷ್ಟ್ರ ಶಿಕ್ಷಣದಲ್ಲಿ ಬಹಳ ಹಿಂದುಳಿದಿದೆ. ಶಿಕ್ಷಣದ ಯೋಜನೆ ಹಣವನ್ನು ಅವಲಂಬಿಸಿದರೆ ಈ ಪೀಳಿಗೆಯಲ್ಲೇನು ನಮ್ಮ ಈ ವಿದ್ಯಾಋಣ ತೀರಲಾರದು. ಆದುದರಿಂದ ರಚನಾತ್ಮಕ ಸಾಮರ್ಥ್ಯಕ್ಕೆ ನನಗಿರುವ ಕೀರ್ತಿ ಹೋದರೂ ಚಿಂತೆಯಿಲ್ಲ ಎಂದು ಶಿಕ್ಷಣ ಸ್ವಾವಲಂಬಿಯಾಗಬೇಕು ಎಂಬ ಸೂಚನೆ ಮಾಡಿದೇನೆ. ಶಿಕ್ಷಣವೆಂದರೆ ಮಗುವಿನ, ಮನುಷ್ಯನ ದೇಹ–ಮನ ಆತ್ಮಗಳ ಉತ್ತಮ ಶಕ್ತಿಗಳನ್ನೆಲ್ಲ ಸರ್ವತೋಮುಖವಾಗಿ ವಿಕಸನಗೊಳಿಸುವುಉದ ಎಂದು ನನ್ನ ಅಭಿಪ್ರಾಯ. ಅಕ್ಷರದ ಕಲಿವು ಶಿಕ್ಷಣದ ಕೊನೆಯಲ್ಲ. ಪ್ರಾರಂಭವೂ ಅಲ್ಲ. ಗಂಡು ಹೆಣ್ಣು ಶಿಕ್ಷಣ ಪಡೆಯಲು ಅಕ್ಷರಜ್ಞಾನವೂ ಒಂದು ಸಾಧನ. ಅಷ್ಟೆ. ಅಕ್ಷರಜ್ಞಾನವೇ ವಿದ್ಯಾಭ್ಯಾಸವಲ್ಲ. ಆದುದರಿಂದ ಮಗುವಿಗೆ ಒಂದು ಪ್ರಯೋಜನಕರ ಕೈಗಾರಿಕೆಯನ್ನು ಕಲಿಸುತ್ತ ನಾನು ಶಿಕ್ಷಣವನ್ನು ಮೊದಲಿಡುತ್ತೇನೆ. ಈ ಶಿಕ್ಷಣದ ಆರಂಭದಲ್ಲಿಯೇ ಮಗು ಸ್ವಾವಲಂಬಿಯಾದೀತು. ಈ ಶಾಲೆಗಳಲ್ಲಿ ಉತ್ಪತ್ತಿಯಾದುದನ್ನು ಸರಕಾರ ಕೊಳ್ಳಬೇಕೆಂಬ ನಿಯಮ ಇದ್ದರಾಯಿತು.
>
> ಇಂಥ ಶಿಕ್ಷಣದಿಂದ ಮನಸ್ಸು – ಆತ್ಮಗಳ ಅತ್ಯುನ್ನತ ವಿಕಾಸ ಸಾಧ್ಯ ಎಂದು ನನ್ನ ಸಿದ್ಧಾಂತ. ಕೈಗಾರಿಕೆಯನ್ನು ಈಗ ಕಲಿಸುವಂತೆ ಯಾಂತ್ರಿಕವಾಗಿ ಕಲಿಸಿದರೆ ಆಗದು; ಶಾಸ್ತ್ರೀಯವಾಗಿ ಕಲಿಸಬೇಕು. ಅದರ ಪ್ರತಿಯೊಂದು ಕ್ರಿಯೆಯ ಕಾರಣ–ಪರಿಣಾಮಗಳನ್ನೂ ಮಗು ಅರಿತಿರಬೇಕು. ಆತ್ಮವಿಶ್ವಾಸ ಇಲ್ಲದೆ ಈ ಮಾತನ್ನು ನಾನು ಬರೆಯುತ್ತಿಲ್ಲ. ಅದಕ್ಕೆ ಅನುಭವದ ಆಧಾರವಿದೆ. ಕೆಲಸಗಾರರಿಗೆ ನೂಲುವುದನ್ನು ಕಲಿಸುವಲೆಲ್ಲ ಈ ಪದ್ಧತಿಯನ್ನನುಸರಿಸುತ್ತಾ ಇದಾರೆ. ಈ ರೀತಿ ನಾನೇ ಮೆಟ್ಟು ಹೊಲಿಯುವುದನ್ನೂ ನೂಲುವುದನ್ನೂ ಕಲಿಸಿದೇನೆ; ಒಳ್ಳೆಯ ಫಲ ಕೊಟ್ಟಿದೆ. ಈ ಪದ್ಧತಿಯಲ್ಲಿ ಇತಿಹಾಸ, ಭೂಗೋಳಗಳ ಜ್ಞಾನಕ್ಕೆ ಬಹಿಷ್ಕಾರವಿಲ್ಲ. ಆದರೆ ಇಂಥ ಸಾಮಾನ್ಯಜ್ಞಾನವನ್ನೆಲ್ಲ ಬಾಯಿಂದ ಹೇಳಿ ಕಲಿಸುವುದು ಉತ್ತಮವೆಂದು ನನಗೆ ಕಂಡುಬಂದಿದೆ. ಓದಿಸಿದರೆ, ಬರೆಸಿದರೆ ಎಷ್ಟೋ ಅದಕ್ಕಿಂತ ಹತ್ತರಷ್ಟು ಹೆಚ್ಚು ಜ್ಞಾನವನ್ನು ಈ ಶ್ರವಣಪದ್ಧತಿಯಿಂದ ಕಲಿಸಬಹುದು. ಕೆಲಕಾಲದ ಮೇಲೆ, ವಿದ್ಯಾರ್ಥಿಗೆ ಗಟ್ಟಿ–ಜೊಳ್ಳು ಯಾವುದು ಎಂಬುದು ತಿಳಿಯುವಂತಾದ ಮೇಲೆ, ಅಭಿರುಚಿ ಬೆಳೆದ ತರುವಾಯ,

ಅಕ್ಷರಗಳನ್ನು ಕಲಿಸಬಹುದು. ಈ ಸೂಚನೆ ಕ್ರಾಂತಿಕಾರಿ. ಆದರೆ ಅದರಿಂದ ಅಪಾರ ಶ್ರಮ ಉಳಿಯುತ್ತದೆ. ಸಾಮಾನ್ಯವಾಗಿ ಬಹಳ ಕಾಲ ಹಿಡಿಯುವುದನ್ನು ವಿದ್ಯಾರ್ಥಿ ಒಂದೇ ವರ್ಷದಲ್ಲಿ ಕಲಿಯುತ್ತಾನೆ. ಎಂದರೆ ಎಲ್ಲಾ ರೀತಿಯಲ್ಲೂ ಉಳಿತಾಯ, ಮಿತವ್ಯಯ. ಕೈಗಾರಿಕೆ ಕಲಿಯುವಾಗಲೇ ವಿದ್ಯಾರ್ಥಿ ಗಣಿತವನ್ನೂ ಕಲಿಯುತ್ತಾನೆ.
ಪ್ರಾಥಮಿಕ ಶಿಕ್ಷಣಕ್ಕೆ ನಾನು ಅತ್ಯಂತ ಪ್ರಾಧಾನ್ಯವನ್ನು ಕೊಡುತ್ತೇನೆ. ಪ್ರಾಥಮಿಕ ಶಿಕ್ಷಣ ಈಗಿನ ಮೆಟ್ರಿಕ್ಯುಲೇಷನ್ ಮಟ್ಟದ್ದು- ಇಂಗ್ಲೀಷೊಂದು ಬಿಟ್ಟು ಆಗಿರಬೇಕು. ಈಗ ಕಾಲೇಜು ಶಿಕ್ಷಣ ಪಡೆದಿರುವವರಿಗೆಲ್ಲ ಏಕಾಏಕಿ ಏನೋ ಆಗಿ, ಅವರು ಕಲಿತುದನ್ನೆಲ್ಲ ಮರೆತುಬಿಟ್ಟರು ಎನ್ನಿ. ಈ ಹಲವು ಲಕ್ಷ ಜನರ ಮರವಿನಿಂದ ರಾಷ್ಟ್ರಕ್ಕೆ ಆಗುವ ನಷ್ಟಕ್ಕಿಂತ ನಮ್ಮ ಮೂವತ್ತು ಕೋಟಿ ಜನರನ್ನು ಕವಿದಿರುವ ಕತ್ತಲೆಯ ಕಡಲಿನಿಂದ ಆಗುತ್ತಿರುವ ನಷ್ಟ ಅಪಾರ ಆದುದು. ಅನಕ್ಷರತೆಯೊಂದು ಗುರುತೂ ಅಲ್ಲ. ಅಳತೆಯೂ ಅಲ್ಲ, ನಮ್ಮ ಕೋಟ್ಯಂತರ ಗ್ರಾಮಸ್ಥರ ಅಜ್ಞಾನಕ್ಕೆ. (ಜೀವನ ಶಿಕ್ಷಣ 1966 ಪುಟ. 57–59)

ಅಲೆಕ್ಸಾಂಡರ್ ಡಫನ ಪ್ರಕಾರ ಇಂಗ್ಲೀಷ್ ಅಧ್ಯಯನ ಮತ್ತು ಸಾಹಿತ್ಯ ಅಧ್ಯಯನ ಎನ್ನುವುದು ಜಾತ್ಯಾತೀತವಾಗಿರಬೇಕು. ಇಲ್ಲಿ ಅವನು 'ಜಾತ್ಯಾತೀತ' ಎನ್ನುವುದನ್ನು ಒಂದು ಪ್ರಯೋಗ ಮಾತ್ರ ಎಂದು ಕರೆಯುತ್ತಾನೆ. ಅವನ ಪ್ರಕಾರ ಶಿಕ್ಷಣಕ್ಕೂ ಧರ್ಮಕ್ಕೂ ಸಂಬಂಧವಿಲ್ಲ. ಈ ಪದವನ್ನು ಅವನು ಉದ್ದೇಶಪೂರ್ವಕವಾಗಿ ಬಳಸುತ್ತಾನೆ. ಈ ಚಿಂತನೆಯ ಕ್ರಮವು ಭಾರತದಲ್ಲಿ ಮಹತ್ವಪೂರ್ಣವಾದ ಪ್ರಭಾವವನ್ನು ಬೀರಿತು. ಇಂಗ್ಲೀಷ್ ಶಿಕ್ಷಣವು ಭಾರತದಲ್ಲಿ ಅನೇಕ ರೀತಿಯ ಪರಿವರ್ತನೆಗಳಿಗೆ ಕಾರಣವಾಯಿತು.

1. ಪಶ್ಚಿಮದ ನಾಗರಿಕತೆ ಮತ್ತು ಸಂಸ್ಕೃತಿಯನ್ನು ಭಾರತಕ್ಕೂ ವಿಸ್ತರಿಸಲು ಶಿಕ್ಷಣ ಸಾಧನವಾಯಿತು. ಗಾಂಧಿ ಪಶ್ಚಿಮ ಸಂಸ್ಕೃತಿಯನ್ನು ನಿರಾಕರಿಸಿದರು. ಯಾವುದನ್ನು ಬ್ರಿಟೀಷ್ ಸಮಾಜವು ಧರ್ಮಾತೀತ (Secularism) ಎಂದು ಕರೆಯಿತೋ ಅದನ್ನು ಭಾರತದ ಮೇಲೂ ಹೇರಲಾಯಿತು. ಬ್ರಿಟೀಷ್ ಸಾಮಾಜಿಕ ಸಂರಚನೆ ಮತ್ತು ಭಾರತೀಯ ಸಂರಚನೆಯ ನಡುವೆ ವಿಶಿಷ್ಟ ಸಂವಾದವೊಂದು ರೂಪುಗೊಂಡಿತು. ಹೊಸದಾಗಿ ರೂಪುಗೊಂಡ ಶಿಕ್ಷಣದಿಂದ ಹೊಸದೊಂದು ಪ್ರಜ್ಞಾವಲಯ ರಚನೆಗೊಂಡು ಭಾರತೀಯ ಹಳೆಯ ಪದ್ಧತಿಗಳನ್ನು ಮರು ಪರಿಶೀಲನೆ ನಡೆಸಿತು. ಇಂಗ್ಲೀಷ್ ಶಿಕ್ಷಣದಿಂದ ಸಾಮಾಜಿಕ ಗುಣ ಧರ್ಮಗಳಲ್ಲಿಯೂ ಬದಲಾವಣೆ ಕಾಣಿಸಿಕೊಂಡಿತು.

ಭಾರತದಲ್ಲಿ ಸುಶಿಕ್ಷಿತರ ಗುಂಪು, ಅನಕ್ಷರಸ್ಥರ ಗುಂಪು ಎಂಬ ಪ್ರಭೇದಗಳು ಉಂಟಾದವು. ಶಿಕ್ಷಣವು ವಿನಯ, ನ್ಯಾಯವಂತಿಕೆ, ನಾಗರಿಕತೆ ಮುಂತಾದವುಗಳ ಕಡೆಗೆ ಗಮನ ಕೊಡುತ್ತದೆ. ಇಂಗ್ಲೀಷ್ ಕಲಿತವರು ಇದಕ್ಕೆ ಹೆಚ್ಚಿನ ಪ್ರಾಶಸ್ತ್ಯ ಕೊಟ್ಟರು. ಶಿಕ್ಷಣದ ಪ್ರಧಾನ ಲಕ್ಷ್ಯ ಇರುವುದು – ಸಾಮಾಜಿಕ ವ್ಯಕ್ತಿಯು ಹೇಗೆ ವರ್ತಿಸಬೇಕೆಂದು ತರಬೇತು ನೀಡುವಲ್ಲಿ. ಯುರೋಪಿಯನ್ ಮೂಲದ ಶಿಕ್ಷಣ ಕ್ರಮದಿಂದ ಭಾರತದಲ್ಲಿ ಸುಶೀಕ್ಷಿತರು ತಮ್ಮ ವೇಷಭೂಷಣ ಸಮೇತ ಎಲ್ಲದರಲ್ಲಿಯೂ ಬದಲಾವಣೆಯನ್ನು ತಂದುಕೊಂಡರು. ವಸಾಹತುಕಾಲದ ಪಠ್ಯ ಪುಸ್ತಕಗಳಲ್ಲಿ ವ್ಯಾಕರಣ, ಚರಿತ್ರೆ, ಕಾನೂನು, ಕಾವ್ಯ, ಮುಂತಾದವುಗಳನ್ನು ಇಂಗ್ಲೀಷ್ ನೀತಿಗೆ ಅನುಸಾರವಾಗಿ ಕಲಿಸಲಾಯಿತು. ವ್ಯಾಕರಣವನ್ನು ಕಲಿಸುವುದೆಂದರೆ ಭಾಷೆಯ ನಿಯಮವನ್ನು ಕಲಿಸುವುದು. ಇದು ಭಾಷೆಗೆ ಇರುವ ವಿವಿಧತೆಗಳನ್ನು ಕೊಲ್ಲುತ್ತದೆ.

ಗ್ರಾಮರ್ ಕಲಿಕೆಯು ಭಾಷೆಯನ್ನು ಒಂದು ನಿಯಮದ ವ್ಯಾಪ್ತಿಗೆ ತರುತ್ತದೆ.

ಭಾರತದಲ್ಲಿ ವಸಾಹತು ಶಿಕ್ಷಣವು ಯಾಕೆ ಹೀಗಾಯಿತು ಎನ್ನುವುದು ಮುಖ್ಯ ಪ್ರಶ್ನೆ.

ಹದಿನೇಳನೆಯ ಶತಮಾನದಲ್ಲಿ ಶೈಕ್ಷಣಿಕ ಸಿದ್ಧಾಂತವು ಇಂಗ್ಲೆಂಡಿನಲ್ಲಿ ಭಾರೀ ಬದಲಾವಣೆಯನ್ನು ಹೊಂದಿತ್ತು. ಶಿಕ್ಷಣವು ಅಲ್ಲಿ ಬದಲಾವಣೆ ಹೊಂದಲು ಮುಖ್ಯ ಕಾರಣ ಅಲ್ಲಿನ ರಾಜಕೀಯ ಪರಿಣಾಮಗಳು. ಎರಡನೆಯದಾಗಿ ಶಿಕ್ಷಣದಲ್ಲಿ ಗುಣಾತ್ಮಕವಾದ ಮೌಲ್ಯವು ಬೇಕೆನ್ನುವ ಪ್ರತಿಪಾದನೆ. ಗಾಂಧಿ ಬುದ್ಧಿಯ ವಿಕಾಸವೇ ಶಿಕ್ಷಣದ ಗುರಿಯೆಂದರು.

ಹದಿನೆಂಟನೆಯ ಶತಮಾನದ ಹೊತ್ತಿಗೆ ಇಂಗ್ಲೆಂಡಿನಲ್ಲಿ ಶಿಕ್ಷಣವು ಆಧುನಿಕತೆಯ ಸ್ವರೂಪವನ್ನು ಪಡೆದುಕೊಂಡಿತು. ಇದರಿಂದಾಗಿ ಹದಿನೆಂಟನೆಯ ಶತಮಾನದ ಶಿಕ್ಷಣದಲ್ಲಿ ಗಣಿತ, ಜಿಯೊಗ್ರಫಿ, ಆಧುನಿಕ ಭಾಷಾ ವಿಜ್ಞಾನ, ಭೌತಿಕ ವಿಜ್ಞಾನಗಳನ್ನು ಕಲಿಸಲಾಯಿತು. ಇದರ ಪರಿಣಾಮವಾಗಿ ಶಿಕ್ಷಣದಲ್ಲಿ ರಾಷ್ಟ್ರೀಯತೆಯ ತಳಹದಿಯು ರೂಪುಗೊಳ್ಳುವಂತೆ ನೋಡಲಾಯಿತು. ಆದರೂ ಇದೇ ಸಂದರ್ಭದಲ್ಲಿ ಇಂಗ್ಲೆಂಡಿನ ಹಳೆಯ ಶಾಲೆಗಳು, ಹಳೆಯ ಪಠ್ಯ ಕ್ರಮಗಳನ್ನೇ ಹೊಂದಿದ್ದವು. ಹದಿನೆಂಟನೆಯ ಶತಮಾನದಲ್ಲಿ ನವೀನ ಉದ್ಯೋಗಗಳು ಸೃಷ್ಟಿಯಾದವು. ಅದಕ್ಕೆ ಬೇಕಾದಂತೆ ಶಿಕ್ಷಣವನ್ನು ನೀಡಲಾಯಿತು. ವಿಜ್ಞಾನ, ಇಂಜಿನಿಯರಿಂಗ್, ಕಲೆ, ಕಾನೂನು, ವೈದ್ಯಕೀಯ ಇದರಲ್ಲಿ ಮುಖ್ಯವಾದವು. ಇದರೊಂದಿಗೆ ವ್ಯವಹಾರ–ಉದ್ದಿಮೆಗಳು ತುಂಬಾ ವಿಸ್ತಾರವಾಗಿ ಬೆಳೆದುದರಿಂದ ಅದಕ್ಕೆ ಅನುಗುಣವಾದ ಶಿಕ್ಷಣವು ಬೆಳೆಯಿತು. ಈ ಕಾರಣದಿಂದ

ಶಿಕ್ಷಣ ಕ್ಷೇತ್ರವು ಕೂಡಾ ಒತ್ತಡಕ್ಕೆ ಗುರಿಯಾಯಿತು. ಕೈಗಾರಿಕೀಕರಣ ರೂಪಿಸಿದ ಅಪಾರ ಉದ್ಯೋಗದ ಅವಕಾಶಕ್ಕೆ ತಕ್ಕಂತೆ ಶಿಕ್ಷಣವನ್ನು ನೀಡಬೇಕಾಗಿ ಬಂತು. ವಿಶ್ವವಿದ್ಯಾನಿಲಯದ ಶಿಕ್ಷಣದ ಕುರಿತು ಗಾಂಧಿ ಹೀಗೆ ಹೇಳಿದರು.

> **ಇವೊತ್ತು ನಮ್ಮ ವಿಶ್ವವಿದ್ಯಾನಿಲಯಗಳಲ್ಲಿ ಶಿಕ್ಷಣಪಡೆದ ಯುವಕರು ಸರಕಾರಿ ಚಾಕರಿಗೆ ಓಡುತ್ತಾರೆ, ಇಲ್ಲವೆ ಅಡ್ಡದಾರಿ ಹಿಡಿದು ತಮ್ಮ ನಿಶಾನೆಗೆ ಅಶಾಂತಿ ಹುಟ್ಟಿಸುವ ಕೆಲಸ ಹುಡುಕುತ್ತಾರೆ. ತಿರುಪೆಗೂ, ಪರರಿಗೆ ಭಾರವಾಗಿ ಬದುಕಲಿಕ್ಕೂ ಅವರು ಹೆಸರು. ಇದು ಅವರ ದುಃಸ್ಥಿತಿ. ದೇಶದ ಸ್ವಾತಂತ್ರ್ಯಕ್ಕಾಗಿ ಬದುಕುವ, ಸಾಯುವ ನಿಜವಾದ ಜನಸೇವಕರನ್ನು ಅಣಿಮಾಡುವುದು ವಿಶ್ವವಿದ್ಯಾನಿಲಯದ ಗುರಿ. ಆದುದರಿಂದ ವಿಶ್ವವಿದ್ಯಾಲಯದ ಶಿಕ್ಷಣವನ್ನು ಮೂಲಶಿಕ್ಷಣ ಪದ್ಧತಿಗೆ ಅಳವಡಿಸಿಕೊಳ್ಳಲು ತಾಲೀಮೀ ಸಂಘದ ಶಿಕ್ಷಕರನ್ನು ತೆಗೆದುಕೊಳ್ಳಬೇಕು.**
>
> **(ಜೀವನ ಶಿಕ್ಷಣ ಮೋ.ಕ.ಗಾ. 1966 ಪುಟ. 142)**

ಹದಿನೆಂಟನೆಯ ಶತಮಾನದ ಕೊನೆಯ ಭಾಗದಲ್ಲಿ ಉನ್ನತ ಶಿಕ್ಷಣವು ಆಗ ಪ್ರಾರಂಭಗೊಂಡಿದ್ದ ಹೊಸ ಕಾರ್ಮಿಕ ವರ್ಗಕ್ಕೆ ಬುದ್ಧಿಮತ್ತೆಯನ್ನು ರೂಪಿಸಲು ಯತ್ನಿಸಿತು. ಹತ್ತೊಂಬತ್ತನೆಯ ಶತಮಾನದಲ್ಲಿ ಉದಾರವಾದಿ ಶಿಕ್ಷಣ ನೀತಿಯು ರೂಪುಗೊಂಡಿತು. ಅದು ಹೊಸ ಜ್ಞಾನ ಪರಂಪರೆಯನ್ನು ಹುಟ್ಟು ಹಾಕಲು ಯತ್ನಿಸಿತು. ಇಡಿಯ ಶಿಕ್ಷಣ ಪದ್ಧತಿಯು ಉದ್ಯೋಗವನ್ನು ಆಧರಿಸಿಕೊಂಡು ರೂಪುಗೊಂಡಿತು. ಶಿಕ್ಷಣ ಮತ್ತು ಉದ್ಯೋಗದ ನಡುವೆ ಸಂಬಂಧ ಕಲ್ಪಿತವಾಯಿತು. ಸುಶೀಕ್ಷಿತ, ಸರ್ಕಾರಿ ಸೇವೆಯಲ್ಲಿರುವವನು, ಸಾರ್ವಜನಿಕ ಉದ್ದಿಮೆಯಲ್ಲಿ ಕೆಲಸ ಮಾಡುತ್ತಿರುವವನು ಒಂದು ರೀತಿಯಿಂದ ತನ್ನ ಕೆಲಸ ಕಾರ್ಯಗಳೆಲ್ಲಾ ಸಾರ್ವಜನಿಕ ಸೇವೆಗೆ ಮುಡಿಪಾಗಿರುವಂಥವುಗಳು ಎಂಬುದನ್ನು ಅವರ ಮನೋಭಿತ್ತಿಯಲ್ಲಿ ಬೇರೂರುವಂತೆ ಮಾಡಲು ಶಿಕ್ಷಣವನ್ನು ಒಂದು ಅಸ್ತ್ರವನ್ನಾಗಿ ಬಳಸಿಕೊಳ್ಳಲಾಯಿತು. ಇದೇ ಸಮಯದಲ್ಲಿ ಸರಕಾರವು ಎಲ್ಲರಿಗೂ ಸಮಾನ ಅವಕಾಶಗಳು ಇರಬೇಕು ಎಂಬುದನ್ನು ಪ್ರತಿಪಾದಿಸಿತು. ಇದರ ಪರೋಕ್ಷ ಪರಿಣಾಮಗಳು ವಸಾಹತು ದೇಶಗಳ ಮೇಲೂ ಆಯಿತು. ಇದರೊಂದಿಗೆ ಶಿಕ್ಷಣದ ಪ್ರಸ್ತುತತೆಯಿರುವುದು ಅದರ ಸಾಮಾಜಿಕ ಅಗತ್ಯದಲ್ಲಿ ಎಂದೂ ಹೇಳಲಾಯಿತು. ಸಮಾಜಕ್ಕೆ ಅಗತ್ಯವಿಲ್ಲದ ಶಿಕ್ಷಣ ನಿರುಪಯುಕ್ತ ಶಿಕ್ಷಣವನ್ನು ನೀಡುವುದು ಸಮಯದ ದುರುಪಯೋಗವೆಂದು ಶಿಕ್ಷಣ ಸಂಸ್ಥೆಗಳು ಭಾವಿಸಿದವು. ಈ ಪ್ರಶ್ನೆಯೂ ಕೂಡಾ ವಸಾಹತು ಶಿಕ್ಷಣ ನೀತಿಯ ಮೇಲೆ ಪರಿಣಾಮ ಬೀರಿದೆ. ಗಾಂಧಿಯವರು ಇದಕ್ಕೆ ತದ್ವಿರುದ್ಧ ನಿಲುವು ಹೊಂದಿದ್ದರು.

ಪ್ರಾಂತಗಳಲ್ಲಿ ಹೊಸ ವಿದ್ಯಾನಿಲಯಗಳನ್ನು ಸ್ಥಾಪಿಸುವ ಭ್ರಾಂತಿ ಹಿಡಿದಂತಿದೆ. ಗುಜರಾತಕ್ಕೆ ಒಂದು ಗುಜರಾತಿಯದು, ಮಹರಾಷ್ಟ್ರಕ್ಕೆ ಮರಾಠಿಯದು, ಕರ್ನಾಟಕಕ್ಕೆ ಕನ್ನಡದ್ದು, ಉತ್ಕಲಕ್ಕೆ ಒರಿಯಾದ್ದು ಮತ್ತು ಅಸ್ಸಾಮಿಗೆ – ಹೀಗೇ. ಸಕಲ ಸಂಪನ್ನವಾದ ಈ ದೇಶಭಾಷೆಗಳೂ ಆ ಭಾಷೆಗಳನ್ನಾಡುವ ಜನರೂ ಪೂರ್ಣವಿಕಾಸಗೊಳ್ಳಬೇಕಾದರೆ ಅಂಥ ವಿಶ್ವವಿದ್ಯಾನಿಲಯಗಳಿರಬೇಕೆಂದು ನನ್ನ ನಂಬಿಗೆ.

ಆದರೆ, ಈ ಗುರಿಯ ಸಾಧನೆಗಾಗಿ ನಾವು ಸಲ್ಲದ ಗಡಿಬಿಡಿ ಮಾಡುತ್ತಿದೇವೆ ಎಂಬ ಅಂಜಿಕೆಯೂ ಇದೆ. ಮೊದಲನೆ ಹೆಜ್ಜೆ ಭಾಷೀಯ ಪ್ರಾಂತ ರಚನೆ. ಆಗ ವಿಶ್ವವಿದ್ಯಾನಿಲಯಗಳಿಲ್ಲದ ಕಡೆ ಹೊಸವನ್ನು ರಚಿಸಬೇಕಾಗುತ್ತದೆ ಬೇರೆ ಬೇರೆ ಪ್ರಾಂತಗಳಲ್ಲಿ. ಬೊಂಬಾಯಿಯಲ್ಲಿ ಮೂರು ಭಾಷೆಗಳಿವೆ: ಗುಜರಾತಿ, ಮರಾಠಿ, ಕನ್ನಡ. ಅವಕ್ಕೆ ಬೆಳವಣಿಗೆಯಿಲ್ಲ. ಮದರಾಸಿನಲ್ಲಿ ನಾಲ್ಕು ಭಾಷೆ: ತಮಿಳು, ತೆಲುಗು, ಮಲೆಯಾಳಿ, ಕನ್ನಡ ಒಂದಕ್ಕೆರಡೂ ಇದೆ. ಆಂಧ್ರ ದೇಶಕ್ಕೆ ಒಂದು ಆಂಧ್ರವಿಶ್ವವಿದ್ಯಾಲಯವಿದೆ. ಆದರೆ ಪರಾಧೀನವಲ್ಲದ ಆಂಧ್ರ ಒಂದು ಬೇರೆ ಪ್ರಾಂತವಾಗಿದ್ದರೆ ಆ ವಿಶ್ವವಿದ್ಯಾನಿಲಯಕ್ಕೆ ಇರುತ್ತಿದ್ದ ಸ್ಥಾನ ಈಗಿಲ್ಲ. ಹಿಂದುಸ್ಥಾನಕ್ಕೆ ಸ್ವಾತಂತ್ರ್ಯ ಬಂದು ಇನ್ನೂ ಎರಡೇ ತಿಂಗಳು. ಅಣ್ಣಾಮಲೆ ವಿಶ್ವವಿದ್ಯಾನಿಲಯವೂ ಅಷ್ಟೇ ಆ ವಿಶ್ವವಿದ್ಯಾನಿಲಯದಲ್ಲಿ ತಮಿಳಿಗೆ ಸ್ವಸ್ಥಾನ ಸಿಕ್ಕಿದೆಯೆನ್ನಬಹುದೆ?

ಹೊಸ ವಿಶ್ವವಿದ್ಯಾನಿಲಯಗಳಿಗೆ ಸರಿಯಾದ ಹಿನ್ನೆಲೆ ಅಗತ್ಯ. ಅದಕ್ಕೆ ಆಧಾರವಾಗಿ ದೇಶಭಾಷೆಯಲ್ಲಿ ಪಾಠ ಕಲಿಸುವ ಶಾಲೆ ಕಾಲೇಜುಗಳು ಬೇಕು. ಆಗಲೇ ಸರಿಯಾದ ವಿಶ್ವವಿದ್ಯಾನಿಲಯ. ಇದು ಗೋಪುರ. ಭದ್ರವಾದ ತಳಹದಿಯಿಲ್ಲದೆ ಗೋಪುರ ನಿಲ್ಲಲಾರದು.

(ಜೀವನ ಶಿಕ್ಷಣ 1966 ಪುಟ. 143)

ಇಂಗ್ಲೆಂಡಿನಲ್ಲಿ ಆಗ ಬಂದ ಮತ್ತೊಂದು ಪ್ರಮುಖ ಪ್ರಶ್ನೆಯೆಂದರೆ ಶಿಕ್ಷಣ ಮತ್ತು ವಿದ್ಯಾರ್ಥಿಗಳ ಬುದ್ಧಿ ಶಕ್ತಿ ಮಾಪನ. ಇದು ಉದ್ಯೋಗದ ಮಾಪಕವೂ ಹೌದು. ಈಗಲೂ ನಮ್ಮಲ್ಲಿ I.A.S., I.F.S., I.P.S. ಕ್ಯಾಂಪಸ್ ಸೆಲೆಕ್ಷನ್‌ಗಳಲ್ಲಿ ಬಳಸಿಕೊಳ್ಳುವ ಮಾನದಂಡಗಳು ಇವೇ. ಈ ದೃಷ್ಟಿಯಿಂದ ಗಾಂಧಿಯ ಜೀವನ ಶಿಕ್ಷಣ ಮುಖ್ಯವಾದುದು.

ಕೆಲವು ವಿಷಯಗಳಲ್ಲಿ ವಿಶೇಷ ತರಬೇತಿ ಕೂಡಾ ನೀಡಲಾಗುತ್ತಿತ್ತು. ಈ ಸಂದರ್ಭದಲ್ಲಿ ಬಡಹುಡುಗರು ಅವರ ವರ ಅದೃಷ್ಟದ ಮೇಲೆ ಅವಕಾಶ

ಪಡೆಯಬೇಕಾಗುತ್ತಿತ್ತು. ಎಡ್ವರ್ಡ್ ಸೈದ್ ಹೇಳುವಂತೆ ವಸಾಹತುಶಾಹಿ ಅನುಭವದ ಅನಂತರ ಆಧುನಿಕ ಭಾರತ-ಆಧುನಿಕ ಇಂಗ್ಲೆಂಡಿನ ಅನುಭವಗಳು ಸರ್ವೇ ಸಾಮಾನ್ಯ ಎಂಬಂತಾಯಿತು (Said, 1993, p. XXIV).

ಸುದೀಪ್ತ ಕವಿರಾಜ್ ಆ ಕಾಲದ ಶಿಕ್ಷಣ ಕುರಿತು ಹೇಳುವಾಗ ಒಂದು ಮಾತನ್ನು ಒತ್ತುಕೊಟ್ಟು ಹೇಳುತ್ತಾರೆ : ಪಶ್ಚಿಮದ ಶಿಕ್ಷಣ ಅನ್ನುವುದು ಅನೇಕ ವೈರುಧ್ಯದ ಅನುಭವಗಳಿಗೆ ಕಾರಣವಾಯಿತು (ಸುದೀಪ್ತ ಕವಿರಾಜ್, 1995, ಪು. 116).

ಮಹಾತ್ಮ ಗಾಂಧಿಯವರು "ಸತ್ಯ ಶೋಧನೆ"ಯಲ್ಲಿ ಹೀಗೆ ಹೇಳುತ್ತಾರೆ : 'ಈಗ ನನ್ನ ಅಭಿಪ್ರಾಯವೇನೆಂದರೆ ಭಾರತ ವರ್ಷದಲ್ಲಿರುವ ಎಲ್ಲಾ ಉಚ್ಚ ಶಿಕ್ಷಣ ಕ್ರಮಗಳಲ್ಲಿಯೂ ಮಾತೃಭಾಷೆಯಲ್ಲದೆ ಹಿಂದಿ, ಸಂಸ್ಕೃತ, ಪಾರಸಿ, ಅರಬ್ಬಿ ಮತ್ತು ಇಂಗ್ಲೀಷ್ ಈ ಭಾಷೆಗಳಿಗೆ ಸ್ಥಾನವನ್ನು ಕೊಡಬೇಕು. ಈ ಭಾಷೆಗಳ ಸಂಖ್ಯೆಯನ್ನು ನೋಡಿ ಯಾರೂ ಹೆದರಲು ಕಾರಣವಿಲ್ಲ. ನಮ್ಮ ಶಿಕ್ಷಣ ಕ್ರಮ ಸರಿಯಾದದ್ದು, ಎಲ್ಲಾ ವಿಷಯಗಳನ್ನು ಪರಭಾಷೆಯಾದ ಇಂಗ್ಲೀಷಿನ ಮುಖಾಂತರ ಕಲಿತುಕೊಳ್ಳಬೇಕಾದ ಹೊರೆಯು ಹುಡುಗರಿಗೆ ತಪ್ಪಿದರೆ ಈ ಭಾಷೆಗಳನ್ನು ಕಲಿಯುವುದು ಸುಲಭವಷ್ಟೇ ಅಲ್ಲ. ಸಂತೋಷದಾಯಕವೂ ಹೌದು' (ಸತ್ಯಶೋಧನೆ, 2001, ಭಾಗ-1, ಪು. 20). ಇದಷ್ಟಲ್ಲದೆ ಗಾಂಧೀಜಿಯವರು ಸತ್ಯಾಗ್ರಹವನ್ನು ಒಂದು ರೀತಿಯಲ್ಲಿ ಶಾಸ್ತ್ರರೂಪವಾಗಿ ನೋಡಿದ್ದರು. ಸತ್ಯಾಗ್ರಹದಲ್ಲಿ ಭಾಗವಹಿಸುವವರಿಗೆ ಗಾಂಧಿಯವರು ತರಬೇತಿಯನ್ನು ನೀಡುತ್ತಿದ್ದರು.

1. ಅಹಿಂಸಾತ್ಮಕ ತತ್ವ
2. ಸಂಯಮ
3. ಶಾಂತಿ
4. ಶೋಷಣೆಯಿಂದ ಜೀವನ ಸಾಗಿಸಬಾರದು
5. ನೈತಿಕತೆಯ ಅವಶ್ಯಕತೆ
6. ತತ್ವಗಳ ಬದ್ಧತೆ
7. ಸ್ವಾವಲಂಬನೆ
8. ಮಾನವೀಯತೆಯ ಅಗತ್ಯ
9. ತ್ಯಾಗದ ಅಗತ್ಯ
10. ಜನಸೇವೆ

11. ಸತ್ಯದ ಪ್ರತಿಪಾದನೆ

12. ಸ್ವಾಭಿಮಾನ

13. ಸಹಕಾರ, ಐಕ್ಯ, ಪರಸ್ಪರ ಸಹಾಯ, ಸತ್ಯಪ್ರೀತಿ

ಗಾಂಧೀಜಿಯವರ ಪ್ರಕಾರ ಇವೆಲ್ಲವನ್ನು ಸಾಧಿಸಲು ಮೂರು ನಾಲ್ಕು ವರ್ಷಗಳ ಶಿಕ್ಷಣ ಅಗತ್ಯ. ಇವು ಗಾಂಧೀಜಿಯವರ ಶಿಕ್ಷಣದ ಬಗೆಗಿನ ಒಂದು ದೃಷ್ಟಿಕೋನವನ್ನು ವಿವರಿಸುತ್ತದೆ. "ಗಾಂಧಿಜಿಯವರು ಎಲ್ಲರಿಗೂ ಒಂದೇ ವಿಧವಾದ ನೈತಿಕ ಶಿಕ್ಷಣವನ್ನು ನೀಡಬಹುದೆನ್ನುವ ದೃಢವಿಶ್ವಾಸ ಹೊಂದಿದ್ದರು. (ಸತ್ಯಶೋಧನೆ, ಭಾಗ–2, ಪು. 91)."

ಗಾಂಧೀಜಿಯವರು ಮತ್ತೊಂದು ಕಡೆ ಶಿಕ್ಷಣ ಕುರಿತಂತೆ ತಮ್ಮ ನಿಲುವನ್ನು ಸ್ಪಷ್ಟಪಡಿಸುತ್ತಾರೆ. "ಶಾರೀರಿಕ ಶಿಕ್ಷಣವನ್ನು ಶರೀರದ ವ್ಯಾಯಾಮದ ಮೂಲಕವೂ, ಮಾನಸಿಕ ಶಿಕ್ಷಣವನ್ನು ಮನೋವ್ಯವಸಾಯದ ಮೂಲಕವೂ ಕೊಡುವಂತೆಯೇ ಆಧ್ಯಾತ್ಮಿಕ ಶಿಕ್ಷಣವು ಕೂಡಾ ಆಧ್ಯಾತ್ಮಿಕ ಅಭ್ಯಾಸಗಳಿಂದಲೇ ಸಾಧ್ಯ (ಸತ್ಯ ಶೋಧನೆ, ಭಾಗ–2, 2001, ಪು. 96). ಪ್ರಾಂತೀಯ ಭಾಷೆಗಳ ಶಿಕ್ಷಣದ ಅಗತ್ಯದ ಕುರಿತೂ ಗಾಂಧಿಜಿ ಹೇಳುತ್ತಾರೆ (ಅದೇ, ಪು. 276)."

1835 ರಿಂದ ಬ್ರಿಟೀಷ್ (ಕಂಪೆನಿ) ಸರಕಾರದ ನೀತಿಯಾಯಿತು. ಇದೇ ಅದರ ಅನಿವಾರ್ಯ ಅಂಗವಾಗಿ ಇಂಗ್ಲೀಷ್ ಮಾಧ್ಯಮದ ಮೂಲಕ ಶಿಕ್ಷಣವನ್ನು ನೀಡುವ ಪದ್ಧತಿ ಜಾರಿಯಲ್ಲಿ ಬಂತು. ಇದರಿಂದ ಆಡಳಿತ ಕ್ಷೇತ್ರದಲ್ಲಿ ಹಾಗೂ ಶಿಕ್ಷಣ ಮಾಧ್ಯಮದಲ್ಲಿ ಕನ್ನಡದ ಉಚ್ಚಾಟನೆಯಾಗಿ ದೇಶೀಯರಿಗೆ ಕನ್ನಡ ಅಧ್ಯಯನದಲ್ಲಿ ಉತ್ಸಾಹ ಭಂಗವಾಗುವಂತಹ ಪರಿಣಾಮವಾಯಿತಾದರೂ ಪಾಶ್ಚಾತ್ಯದ ಕನ್ನಡ ಅಧ್ಯಯನ ತೊಂದರೆಯಾಗಲಿಲ್ಲ (ಕನ್ನಡ ತೀರ್ಪುಗಳು, 1977, ಪು. 13).

ಮೆಕಾಲೆಯ ಪಿರಮಿಡ್ಡುವಿನಂತಹ ಶಿಕ್ಷಣದ ನೀತಿಯನ್ನು ಖಂಡಿಸಿ, ಭಾರತೀಯ ಭಾಷೆಗಳನ್ನು ಪ್ರೋತ್ಸಾಹಿಸಿದ. ವಿಶ್ವವಿದ್ಯಾನಿಲಯಗಳಿಗೆ ಸೆನೆಟ್ ಮತ್ತು ಸಿಂಡಿಕೇಟ್ ನಿರ್ಮಿಸಿದ ಕೀರ್ತಿಯು 1902ರ ಸರ್. ಥಾಮಸ್ ಸಿದ್ದಲಗೆ ಸೇರುತ್ತದೆ. ಇವನನ್ನು ನೇಮಿಸಿದ್ದು ಲಾರ್ಡ್ ಕರ್ಜನ್.

ಇಂಟರ್ ಮೀಡಿಯಟ್ ತರಗತಿಗಳು ಪ್ರೌಢ ಶಾಲೆಗಳಿಗೆ ವರ್ಗಾವಣೆ.

ಅನಂತರ ವಿ.ವಿ.ಗೆ ಪ್ರವೇಶ.

ವಿ.ವಿ.ಯ ಮಾನ್ಯತೆಯ ನಿಯಮಾವಳಿಗಳನ್ನು ಮಾನ್ಯತೆಗೊಳಿಸಬೇಕು.

ಶಿಕ್ಷಕರಿಗೆ ಶಿಕ್ಷಣ ನೀಡಲು ಪ್ರತ್ಯೇಕ ವ್ಯವಸ್ಥೆ.

ವಿ.ವಿ.ಗಳಿಗೆ ಪ್ರತ್ಯೇಕ ಸೇವಾ ನಿಯಮ.

ಪ್ರೌಢಶಾಲೆಯವರೆಗೆ ದೇಶೀಯ ಭಾಷೆಯ ಮಾಧ್ಯಮ ಅನಂತರ ಇಂಗ್ಲಿಷ್ ಮಾಧ್ಯಮ.

ಪರೀಕ್ಷೆಯ ಪದ್ಧತಿಯಲ್ಲಿ ಸಂಪೂರ್ಣ ಸುಧಾರಣೆ.

"ಬ್ರಿಟೀಷರ ಆಳ್ವಿಕೆ ಕಾಲದಲ್ಲಿ ನಾವು ಬಹಳಷ್ಟು ಕಲಿತಿದ್ದೇವೆ. ಆದರೆ ನಾವು ಎಚ್ಚರಿಕೆಯಿಂದ ಇರದಿದ್ದರೆ ಬ್ರಿಟನ್, ಭೌತಿಕ ವೈಭೋಗಗಳ ರೋಗದಿಂದ ಅನುಭವಿಸುತ್ತಿರುವ ಎಲ್ಲ ದುಶ್ಚಟಗಳನ್ನು ನಮ್ಮಲ್ಲಿಯೂ ಪ್ರವೇಶಿಸುತ್ತವೆ. ನಾವು ಆ ಸಂಪರ್ಕದಿಂದ ಲಾಭ ಪಡೆಯುವುದು, ನಮ್ಮ ನಾಗರಿಕತೆಯನ್ನು, ನಮ್ಮ ನೀತಿಯನ್ನು ಸ್ವಚ್ಛವಾಗಿ ಇಟ್ಟುಕೊಂಡಾಗ ಮಾತ್ರ. ಅಂದರೆ ನಮ್ಮ ಪ್ರಾಚೀನ ವೈಭವವನ್ನು ನಾವು ಹೊಗಳಿಕೊಳ್ಳುವುದನ್ನು ಬಿಟ್ಟು, ಅದನ್ನು ನಮ್ಮ ಜೀವನದಲ್ಲಿ ಅಳವಡಿಸಿ ನಮ್ಮ ಬಾಳ್ವೆಯೇ ನಮ್ಮ ಪ್ರಾಚೀನ ವೈಭವಕ್ಕೆ ಸಾಕ್ಷಿಯಾಗುವಂತೆ ತೋರಿಸಬೇಕು. ಇಂಗ್ಲೆಂಡ್ ನಮ್ಮ ಆಳ್ವಿಕೆಗಾರರನ್ನು ಒದಗಿಸುತ್ತದೆಯೆಂದು ನಾವು ಅದನ್ನು ಅನುಸರಿಸಿದರೆ ನಾವೂ ಅದೂ ಇಬ್ಬರೂ ಅಧೋಗತಿಗಿಳಿಯುತ್ತೇವೆ(ಗಾಂಧಿ). ಗಾಂಧೀಜಿಯವರು ಹಿಂದಿ ರಾಷ್ಟ್ರಭಾಷೆಯಾಗಬೇಕೆಂದು ಹೇಳುತ್ತಾರೆ. ಅವರ ಮತ್ತೊಂದು ಶೈಕ್ಷಣಿಕ ನೀತಿಯು ಹೀಗಿದೆ: "ಹಿಂದೂಸ್ತಾನಿ ಸುಸಂಸ್ಕೃತ ವರ್ಗದ ಮತ್ತು ಸಾಮಾನ್ಯ ಜನರ ಮಾಧ್ಯಮವಾಗುವರೆಗೆ, ದ್ವಿತೀಯ ಭಾಷೆಯಾಗಿ ಎಲ್ಲಾ ಶಾಲೆಗಳಲ್ಲಿ ಕಡ್ಡಾಯವಾಗುವವರೆಗೆ ಸುಶೀಕ್ಷಿತ ಭಾರತಕ್ಕೆ ಅದರಲ್ಲೂ ಮದರಾಸು ಪ್ರೆಸಿಡೆನ್ಸಿಗೆ ನಾವು ತಿಳಿಯಪಡಿಸಬೇಕಾದುದನ್ನು ಇಂಗ್ಲಿಷಿನಲ್ಲೇ ಹೇಳುವುದು ಅನಿವಾರ್ಯವಾಗುತ್ತದೆ (ಸತ್ಯಶೋಧನೆ ಪು. 407). ಅಂದರೆ ಗಾಂಧೀಜಿಯವರು ಎರಡು ವಿಧದಲ್ಲಿ ವಿವರಿಸುತ್ತಾರೆ. ಒಂದು ಸತ್ಯಾಗ್ರಹದ ಪರಿಭಾಷೆಯಲ್ಲಿ, ಒಂದು ಅರ್ಥದಲ್ಲಿ ಅದಕ್ಕೆ ರಾಜಕೀಯದ ಮುಖವಿದೆ. ಇನ್ನೊಂದು ಶೈಕ್ಷಣಿಕ ಮುಖ ಮದರಾಸು ಪ್ರೆಸಿಡೆನ್ಸಿಗೆ, ಅವರು ಇಂಗ್ಲೀಷಿನಲ್ಲಿ ಒಂದು ಹಂತದ ವರೆಗೆ ಇಂಗ್ಲಿಷಿನಲ್ಲಿ ಶಿಕ್ಷಣ ಹೇಳಿ ಅನಂತರ ಅದರಿಂದ ಬಿಡಿಸಿಕೊಳ್ಳಬಹುದು ಮತ್ತು ಹಿಂದಿಯನ್ನು ಓದಬಹುದು ಎಂದು ಅವರ ವಾದ."

ಬ್ರಿಟೀಷರ ಆಡಳಿತದಲ್ಲಿ ಮುಂಬಯಿ ಪ್ರಾಂತದಲ್ಲಿ ವಿದ್ಯಾಭ್ಯಾಸ ಪ್ರಾರಂಭವಾದದ್ದು 1815ರಲ್ಲಿ ಅಂದರೆ ಬಾಂಬೆ ಎಜುಕೇಷನ್ ಸೊಸೈಟಿ ಸ್ಥಾಪಿತವಾದಾಗಲೇ ಎನ್ನಬೇಕು. ಆ ಸಂಸ್ಥೆಯು ತನ್ನ ಪ್ರಯತ್ನಗಳನ್ನು ಯುರೋಪಿಯನ್ ಮಕ್ಕಳ ವಿದ್ಯಾಭ್ಯಾಸಕ್ಕೆ ಸೀಮಿತಗೊಳಿಸಲಿಲ್ಲ. ಸೂರತ್ ಮತ್ತು ಠಾಣಾಗಳಲ್ಲಿ ಅದರ ಶಾಲೆಗಳಿಗೆ ಹೋಗಲು

ಸಾಧ್ಯವಾಗುವಂತೆ ದೇಶೀಯ ಮಕ್ಕಳಿಗಾಗಿಯೆ ಮುಂಬಯಿಯಲ್ಲಿ ನಾಲ್ಕು ಪ್ರತ್ಯೇಕ ಶಾಲೆಗಳನ್ನು ಸ್ಥಾಪಿಸಲಾಯಿತು. ಸುಮಾರು 250 ಹುಡುಗರು ಈ ಶಾಲೆಗಳಿಗೆ ಹೋಗುತ್ತಿದ್ದರು. ದೇಶೀಯ ವಿದ್ಯಾರ್ಥಿಗಳ ಶಿಕ್ಷಣವನ್ನು ವಿಸ್ತರಿಸಲು ಅದೇ ವರ್ಷದ ಆಗಸ್ಟ್ ತಿಂಗಳಲ್ಲಿ ಇನ್ನಷ್ಟು ಕ್ರಮಗಳನ್ನು ಕೈಗೊಳ್ಳಲಾಯಿತು. ದೇಶೀಯ ಭಾಷೆಗಳಲ್ಲಿ ಶಾಲೆಗಳ ಪುಸ್ತಕಗಳನ್ನು ಶಾಲೆಗಳು ಪ್ರಾರಂಭಿಸಲು ಒಂದು ವಿಶೇಷ ಸಮಿತಿಯನ್ನು ಈ ಸಂಸ್ಥೆ ನೇಮಿಸಿತು. ಆದರೆ ಈ ಪ್ರಯತ್ನದ ವಿಶಾಲ ವ್ಯಾಪ್ತಿಯು ಮುಖ್ಯವಾಗಿ ಬಡವರ ವಿದ್ಯಾಭ್ಯಾಸಕ್ಕಾಗಿಯೆ ಸ್ಥಾಪಿಸಲಾದ ಸಂಸ್ಥೆಯ ಗುರಿಗಳನ್ನು ಮೀರಿದ್ದು ಎನ್ನುವುದು ಬೇಗ ಸ್ಪಷ್ಟವಾಯಿತು. 1822ರಲ್ಲಿ ಈ ಸಮಿತಿಯು ಪ್ರತ್ಯೇಕ ನಿಗಮ ಆಗಿ ಮಾರ್ಪಟ್ಟು 'ಬಾಂಬೆ ನೇಟಿವ್ ಸ್ಕೂಲ್ ಬುಕ್ ಅಂಡ್ ಸ್ಕೂಲ್ ಸೊಸೈಟಿ' ಎನ್ನುವ ಹೆಸರನ್ನು ಪಡೆಯಿತು. 1827ರಲ್ಲಿ ಈ ಹೆಸರು 'ಬಾಂಬೆ ನೇಟಿವ್ ಎಜುಕೇಷನ್ ಸೊಸೈಟಿ' ಎಂದು ಬದಲಾಯಿತು. ಈ ಸೊಸೈಟಿಯ ಮೊದಲ ಅಧ್ಯಕ್ಷರು ದಿ ಆನರಬಲ್ ಮೌಂಟ್ ಸ್ಟೂಅರ್ಟ್ ಎಲ್ಫಿನ್ಸ್ಟನ್. ಮುಖ್ಯ ನ್ಯಾಯಾಧೀಶರೂ ಮತ್ತು ಮುಂಬಯಿ ಸರ್ಕಾರದ ಕಾರ್ಯ ನಿರ್ವಾಹಕ ಸಮಿತಿಯಲ್ಲಿ ಹನ್ನೆರಡು ಮಂದಿ ಯುರೋಪಿಯನ್ನರು, ಹನ್ನೆರಡು ಮಂದಿ ಭಾರತೀಯರು ಸದಸ್ಯರಾಗಿದ್ದು ಕ್ಯಾಪ್ಟನ್ ಜಾರ್ಜ್ ಜರ್ವಿಸ್, ಆರ್.ಇ. ಮತ್ತು ಶ್ರೀ ಸದಾಶಿವ ಕಾಶೀನಾಥ ಛತ್ರೆ ಕಾರ್ಯದರ್ಶಿಗಳಾಗಿದ್ದರು. ಸೊಸೈಟಿಯು ಸರ್ಕಾರದಿಂದ ತಿಂಗಳಿಗೆ 600 ರೂಪಾಯಿ ಅನುದಾನ ಪಡೆದು ಕೆಲಸವನ್ನು ಪ್ರಾರಂಭಿಸಿತು. 1825ರಷ್ಟು ಹಿಂದೆಯೇ ಮುಂಬಯಿ ಸರ್ಕಾರವು ತನ್ನ ಖರ್ಚಿನಲ್ಲಿ ಜಿಲ್ಲಾ ನಗರಗಳಲ್ಲಿ ಪ್ರಾಥಮಿಕ ಶಾಲೆಗಳನ್ನು ಪ್ರಾರಂಭಿಸಿ ಅವುಗಳನ್ನು ಕಲೆಕ್ಟರರ ನಿರ್ವಹಣೆಗೆ ಒಪ್ಪಿಸಿದ್ದಿತು. ಈ ಎರಡು ಪ್ರತ್ಯೇಕ ಸಂಸ್ಥೆಗಳ ಕೆಲಸ ಕಾರ್ಯಗಳ ಹೊಂದಾಣಿಕೆ ಮಾಡಲು 1840ರಲ್ಲಿ ಆರು ಸದಸ್ಯರ ಬೋರ್ಡ್ ಆಫ್ ಎಜುಕೇಷನ್ ಅನ್ನು ಸ್ಥಾಪಿಸಲಾಯಿತು. ಸರ್ಕಾರವು ಮೂವರು ಸದಸ್ಯರನ್ನು ಮತ್ತು ನೇಟಿವ್ ಎಜುಕೇಷನ್ ಸೊಸೈಟಿಯು ಮೂವರು ಸದಸ್ಯರನ್ನು ನೇಮಿಸುತ್ತಿದ್ದವು. 1855ರಲ್ಲಿ ಡೈರೆಕ್ಟರ್ ಆಫ್ ಪಬ್ಲಿಕ್ ಇನ್ಸ್ಟ್ರಕ್ಶನ್ ಅವರ ನೇಮಕವಾಗುವವರೆಗೆ ಬೋರ್ಡ್ ಶಿಕ್ಷಣ ಇಲಾಖೆಯು ಪ್ರಚಾರದಲ್ಲಿತ್ತು.

ಈ ಪ್ರಾಂತದಲ್ಲಿ ಕೆಳಜಾತಿಯವರಿಗೆ ಶಾಲೆಯನ್ನು ಸ್ಥಾಪಿಸಿದ್ದು ಇದೇ ಮೊದಲು ಎನ್ನುವ ಬೋರ್ಡ್‌ನ ಹೇಳಿಕೆಯಿಂದ 1855ಕ್ಕೆ ಮೊದಲು ನಿಮ್ನ ವರ್ಗದವರ ವಿದ್ಯಾಭ್ಯಾಸದ ಪ್ರಶ್ನೆ ಸಹಜವಾಗಿ ಏಳುತ್ತದೆ. ಈ ಪ್ರಶ್ನೆಗೆ ಸರ್ಕಾರದ ಶಿಕ್ಷಣ ಧೋರಣೆಯ ಇಣುಕು ನೋಟವನ್ನು ಪಡೆಯುವುದು ಅಗತ್ಯ. ಪೇಷ್ವಾ ಸರ್ಕಾರದ ಆಡಳಿತದಲ್ಲಿ

ನಿಮ್ನ ವರ್ಗದವರು ಪೂರ್ಣವಾಗಿ ಶಿಕ್ಷಣದ ವ್ಯಾಪ್ತಿಯ ಎಲ್ಲೆಯಾಚೆ ಇದ್ದರು ಎಂದು ಒಪ್ಪಬೇಕು. ಸರ್ಕಾರ ನೀಡುವ ಶಿಕ್ಷಣದ ಯಾವುದೇ ವಿಚಾರದಲ್ಲಿ ಅವರಿಗೆ ಸ್ಥಾನ ಸಿಕ್ಕಲಿಲ್ಲ. ಅದಕ್ಕೆ ಕಾರಣ ಸರಳವಾಗಿತ್ತು. ಪೇಷ್ವಾ ಸರ್ಕಾರವು ಮನುವಿನ ಸೂತ್ರಗಳು ಆಧಾರವಾಗಿದ್ದ ಧರ್ಮತಂತ್ರ ಇವುಗಳ ಪ್ರಕಾರ (ಶಿಕ್ಷಣ ಇಲಾಖೆಯ ಹಿಂದುಳಿದ ವರ್ಗಗಳಿಗೆ ಸಂವಾದಿಯಾದ) ಶೂದ್ರರು ಮತ್ತು ಅತಿ ಶೂದ್ರರಿಗೆ ಪ್ರಾಣ, ಸ್ವಾತಂತ್ರ್ಯ ಮತ್ತು ಆಸ್ತಿಗಳ ಮೇಲೆ ಏನಾದರೂ ಹಕ್ಕಿದ್ದರೂ ಸಹ ಶಿಕ್ಷಣದ ಹಕ್ಕಿರಲಿಲ್ಲ. ಇಂತಹ ಅನರ್ಹತೆಗಳಿಂದ ಕಷ್ಟಪಡುತ್ತಿದ್ದ ನಿಮ್ನ ವರ್ಗದವರು ತಾವು ದ್ವೇಷಿಸುತ್ತಿದ್ದ ಈ ಧರ್ಮತಂತ್ರ ಉರುಳಿದಾಗ ನೆಮ್ಮದಿಯ ನಿಟ್ಟುಸಿರು ಬಿಟ್ಟರು. ಬ್ರಿಟೀಷ್ ಆಡಳಿತದ ಉದಯದಿಂದ ನಿಮ್ನ ವರ್ಗದವರಲ್ಲಿ ದೊಡ್ಡ ಭರವಸೆಗಳು ಮೂಡಿದವು. ಪ್ರತಿಯೊಬ್ಬ ಮನುಷ್ಯನಿಗೂ ಅವನು ಉಚ್ಚಸ್ಥಾನದಲ್ಲಿರಲಿ, ಕೆಳಗಿನ ಸ್ಥಾನದಲ್ಲಿರಲಿ ಒಂದೇ ಮೌಲ್ಯ ಎಂದು ನಂಬುವ ಪ್ರಜಾಪ್ರಭುತ್ವ ಬ್ರಿಟೀಷ್ ಆಡಳಿತ ಎಂದು ಅವರು ನಂಬಿದ್ದು ಮೊದಲನೆಯ ಕಾರಣ. ಅದು ತನ್ನ ತತ್ವಗಳಿಗೆ ಬದ್ಧವಾಗಿದ್ದಲ್ಲಿ, ಇಂತಹ ಪ್ರಜಾಪ್ರಭುತ್ವವು ಪೇಷ್ವಾಗಳ ಧರ್ಮತಂತ್ರಕ್ಕಿಂತ ತೀರ ಭಿನ್ನವಾಗಿತ್ತು. ಎರಡನೆಯದಾಗಿ ಈ ದೇಶವನ್ನು ಗೆಲ್ಲಲು ನಿಮ್ನ ವರ್ಗದವರು ಬ್ರಿಟೀಷರಿಗೆ ಸಹಾಯ ಮಾಡಿದ್ದರು. ಆದ್ದರಿಂದ ಬ್ರಿಟೀಷರು ತಮಗೆ ವಿಶೇಷ ಸಹಾಯ ನೀಡದಿದ್ದರೂ ಇತರರಿಗೆ ನೀಡಿದಷ್ಟು ಸಹಾಯವನ್ನು ನೀಡುವರೆಂದು ಸಹಜವಾಗಿ ನಂಬಿದ್ದರು. ಈ ದೃಷ್ಟಿಯಿಂದ ಗಾಂಧಿಯವರ ಮಾತು ಗಮನಾರ್ಹ

ಶಿಕ್ಷಣದ ಬಗ್ಗೆ ನನಗೆ ಸಮ್ಮತವಾದುದು ಇಷ್ಟು:

ಪ್ರಥಮ ಕಾಲ

1) **ಹುಡುಗರಿಗೂ ಹುಡುಗಿಯರಿಗೂ ಒಟ್ಟಿಗೆ ಶಿಕ್ಷಣ ಕೊಡಬೇಕು. ಎಂಟು ವರ್ಷದವರೆಗೆ ಬಾಲ್ಯ**
2) **ಅವರ ಕಾಲ ಮುಖ್ಯವಾಗಿ ಶಾರೀರಿಕ ಕೆಲಸದಲ್ಲಿ ಕಳೆಯಬೇಕು. ಈ ಕೆಲಸವೂ ಶಿಕ್ಷಕನ ಮೇಲ್ವಿಚಾರಣೆಯಲ್ಲಿ ನಡೆಯಬೇಕು. ಶಾರೀರಿಕ ಕೆಲಸವನ್ನು ಶಿಕ್ಷಣದ ಅಂಗವೆಂದು ತಿಳಿಯಬೇಕು.**
3) **ಪ್ರತಿಯೊಬ್ಬ ಹುಡುಗನ, ಹುಡುಗಿಯ ರುಚಿಯನ್ನು ಅರಿತು ಅವರಿಗೆ ಕೆಲಸವನ್ನು ವಹಿಸಬೇಕು.**
4) **ಪ್ರತಿಯೊಂದು ಕೆಲಸವನ್ನೂ ಕೈಗೊಳ್ಳುವಾಗ ಅದಕ್ಕೆ ಕಾರಣವನ್ನು ತಿಳಿಸಿ ಹೇಳಬೇಕು.**
5) **ಹುಡುಗರು ಅಥವಾ ಹುಡುಗಿ ಅರ್ಥಮಾಡಿಕೊಳ್ಳಲು**

ಪ್ರಾರಂಭಿಸಿದಾಗಿನಿಂದ ಅವರಿಗೆ ಸಾಧಾರಣ ಜ್ಞಾನವನ್ನು ಕೊಡಬೇಕು. ಈ ಜ್ಞಾನ ಅಕ್ಷರಜ್ಞಾನದಿಂದ ಮೊದಲಾಗಬೇಕು.

6) ಅಕ್ಷರಜ್ಞಾನ ಅಥವಾ ಸುಂದರ ಲೇಖನ ಕಲೆಯ ಅಂಗ ಎಂದರಿತು ಮೊಟ್ಟಮೊದಲು ಮಕ್ಕಳಿಗೆ ರೇಖಾಗಣಿತದ ಆಕೃತಿಗಳನ್ನು ಬರೆಯುವುದನ್ನು ಕಲಿಸಬೇಕು. ಅವರ ಬೆರಳು ಅವರಿಗೆ ಸ್ವಾಧೀನವಾಗಬೇಕು. ಆಮೇಲೆ ಅವರಿಗೆ ವರ್ಣಮಾಲೆ ಬರೆಯಲು ಕಲಿಸಬೇಕು. ಎಂದರೆ, ಮೊದಲಿನಿಂದಲೂ ಅವರಿಗೆ ಶುದ್ಧ ಅಕ್ಷರ ಬರೆಯಲು ಕಲಿಸಬೇಕು.

7) ಬರೆಯುವುದಕ್ಕೆ ಮೊದಲು ಮಗು ಓದಲು ಕಲಿಯಲಿ. ಅಕ್ಷರಗಳನ್ನು ಚಿತ್ರಗಳೆಂದು ತಿಳಿದು ಅವನನ್ನು ಗುರುತಿಸಲು ಕಲಿಯಲಿ.

8) ಹೀಗೆ ಶಿಕ್ಷಕನ ಮುಖದಿಂದ ಜ್ಞಾನ ಪಡೆದ ಹುಡುಗ ಎಂಟು ವರ್ಷದ ಒಳಗಾಗಿಯೆ ತನ್ನ ಶಕ್ತಿಗನುಸಾರ ಸಾಕಷ್ಟು ಜ್ಞಾನ ಪಡೆಯುತ್ತಾನೆ.

9) ಮಕ್ಕಳಿಗೆ ಬಲಾತ್ಕಾರವಾಗಿ ಏನನ್ನೂ ಕಲಿಸಬಾರದು.

10) ಅವರು ಕಲಿಯುವುದರಲ್ಲಿ ಅವರಿಗೆ ರುಚಿ ಎನಿಸಬೇಕು.

11) ಮಕ್ಕಳಿಗೆ ಆಟ ಎನಿಸಬೇಕು. ಶಿಕ್ಷಣ. ಆಟ– ಓಟಗಳೂ ಶಿಕ್ಷಣದ ಅಂಗವೇ.

12) ಮಕ್ಕಳ ಶಿಕ್ಷಣಸಮಸ್ತವೂ ತಾಯಿನುಡಿಯಲ್ಲೇ ನಡೆಯಬೇಕು.

13) ರಾಷ್ಟ್ರಭಾಷೆಯೆಂಬ ದೃಷ್ಟಿಯಿಂದ ಮಕ್ಕಳಿಗೆ ಹಿಂದೀ ಜ್ಞಾನ ಮಾಡಿ ಕೊಡಬೇಕು. ಅಕ್ಷರಜ್ಞಾನಕ್ಕೆ ಮೊದಲೇ ಅದು ಆರಂಭವಾಗಬೇಕು.

14) ಧಾರ್ಮಿಕ ಶಿಕ್ಷಣ ಅಗತ್ಯವೆಂದು ತಿಳಿಯಬೇಕು. ಪುಸ್ತಕದ ಮೂಲಕ ಅಲ್ಲ, ಶಿಕ್ಷಕನ ಆಚರಣೆಯ ಮೂಲಕ ಹಾಗೂ ಶಿಕ್ಷಕನ ಮುಖದಿಂದ ಅದು ದೊರೆಯಬೇಕು.

ದ್ವಿತೀಯ ಕಾಲ

15) ಒಂಬತ್ತರಿಂದ ಹದಿನಾರರವರೆಗೆ ಎರಡನೆ ಕಾಲ.

16) ಎರಡನೆ ಕಾಲದಲ್ಲೂ ಕೊನೆಯವರೆಗೂ ಹುಡುಗರಿಗೂ ಹುಡುಗಿಯರಿಗೂ ಒಟ್ಟಿಗೆ ಶಿಕ್ಷಣ ಕೊಟ್ಟರೆ ಒಳ್ಳೆಯದು.

17) ಎರಡನೆ ಕಾಲದಲ್ಲಿ ಹಿಂದೂ ಹುಡುಗರಿಗೆ ಸಂಸ್ಕೃತ ಭಾಷಾ ಜ್ಞಾನ, ಮುಸಲ್ಮಾನರಿಗೆ ಅರಬ್ಬೀ ಜ್ಞಾನ ದೊರೆಯಬೇಕು.

18) ಈ ಕಾಲದಲ್ಲೂ ಶಾರೀರಿಕ ಕೆಲಸ ನಡೆದೇ ಇರುತ್ತದೆ. ಓದು ಬರಹದ ಸಮಯವನ್ನು ಅಗತ್ಯವಿದ್ದಂತೆ ಬಳಸಬೇಕು.

19) ತಂದೆ ತಾಯಿಗಳ ವೃತ್ತಿ ನಿಶ್ಚಿತವಾದುದು ಎನಿಸಿದರೆ, ಈ ಕಾಲದಲ್ಲಿ ಹುಡುಗನಿಗೆ ಆ ವೃತ್ತಿಯ ಜ್ಞಾನ ದೊರೆಯಬೇಕು. ತನ್ನ ತಂದೆ ತಾತಂದಿರು ನಡೆಸಿದ ವೃತ್ತಿಯನ್ನೇ ತಾನೂ ನಡೆಸಲು ಇಷ್ಟಪಡುವಂತೆ

ಅವನನ್ನು ಅಣಿಮಾಡಬೇಕು. ಈ ನಿಯಮ ಹುಡುಗಿಗೆ ಅನ್ವಯಿಸದು.

20) ಹದಿನಾರು ವರ್ಷದೊಳಗಾಗಿ ಹುಡುಗ – ಹುಡುಗಿಯರಿಗೆ ಜಗತ್ತಿನ ಇತಿಹಾಸ, ಭೂಗೋಳ, ವನಸ್ಪತಿಶಾಸ್ತ್ರ, ಜ್ಯೋತಿಷ್ಯ, ಗಣಿತ, ರೇಖಾಗಣಿತ, ಬೀಜಗಣಿತಗಳ ಸಾಧಾರಣ ಜ್ಞಾನ ಆಗಬೇಕು.

21) ಹದಿನಾರು ವರ್ಷದ ಹುಡುಗ–ಹುಡುಗಿಯರಿಗೆ ಹೊಲಿಗೆ, ಅಡಿಗೆ ಎರಡೂ ಬರಬೇಕು.

ತೃತೀಯ ಕಾಲ

22) ಹದಿನಾರರಿಂದ ಇಪ್ಪತ್ತೈದು ವರ್ಷದವರೆಗೆ ಮೂರನೆಯ ಕಾಲ. ಆ ಕಾಲದಲ್ಲಿ ಪ್ರತಿಯೊಬ್ಬ ಯುವಕನಿಗೂ ಅವರವರ ಇಚ್ಛೆ – ಸ್ಥಿತಿಗಳಿಗೆ ಅನುಸಾರವಾಗಿ ಶಿಕ್ಷಣ ದೊರೆಯಬೇಕು.

23) ಒಂಬತ್ತು ವರ್ಷದ ತರುವಾಯ ಆರಂಭವಾಗುವ ಶಿಕ್ಷಣ ಸ್ವಾವಲಂಬಿಯಾಗಬೇಕು. ವಿದ್ಯಾರ್ಥಿ ಅಭ್ಯಾಸ ಮಾಡುವಾಗಲೇ ಶಾಲೆಯ ವೆಚ್ಚಕ್ಕೆ ಸಾಲುವಷ್ಟು ವರಮಾನ ಬರುವ ಉದ್ಯೋಗವನ್ನು ಮಾಡಬೇಕು.

24) ಶಾಲೆಯಲ್ಲಿ ಮೊದಲಿನಿಂದಲೂ ವರಮಾನ ಬರಬೇಕು, ಆದರೆ ಪ್ರಾರಂಭದ ವರ್ಷಗಳಲ್ಲಿ ವೆಚ್ಚ ಪೂರಾ ನಡೆಯುವಷ್ಟು ವರಮಾನ ಬರಲಿಕ್ಕಿಲ್ಲ.

25) ಶಿಕ್ಷಕರಿಗೆ ಭಾರಿ ಭಾರಿ ಸಂಬಳ ಸಿಗದು, ಆದರೂ ಅವರು ಉಪಜೀವನ ಮಾಡುವಷ್ಟು ಯೋಗ್ಯರಾಗಬೇಕು. ಶಿಕ್ಷಕನಿಗೆ ಸೇವಾಭಾವನೆಯಿರಬೇಕು. ಪ್ರಾಥಮಿಕ ಶಿಕ್ಷಣವನ್ನು ಎಂಥ ಶಿಕ್ಷಕನಿಂದಾದರೂ ಮಾಡಿಸುವ ರೂಢಿ ನಿಂದನೀಯ. ಎಲ್ಲಾ ಶಿಕ್ಷಕರೂ ಗುಣವಂತರೂ ಚಾರಿತ್ರ್ಯವಂತರೂ ಆಗಬೇಕು.

26) ಶಿಕ್ಷಣಕ್ಕೆ ಬಹಳ ಹಣ ವೆಚ್ಚ ಮಾಡಿ ಕಟ್ಟಿದ ಭಾರಿ ಕಟ್ಟಡಗಳು ಅಗತ್ಯವಿಲ್ಲ.

27) ಇಂಗ್ಲೀಷನ್ನು ಒಂದು ಭಾಷೆಯೆಂದು ಕಲಿಯಬೇಕು. ಅದಕ್ಕೆ ಪಾಠಕ್ರಮದಲ್ಲಿ ಸ್ಥಾನವಿರಬೇಕು, ಹಿಂದೀ ರಾಷ್ಟ್ರಭಾಷೆಯಿದ್ದ ಹಾಗೆ ಇತರ ರಾಷ್ಟ್ರಗಳೊಡನೆ ವ್ಯವಹಾರ–ವ್ಯಾಪಾರಗಳಿಗೆ ಇಂಗ್ಲೀಷು.

28) ಹೆಂಗಸರಿಗೆ ವಿಶೇಷ ಶಿಕ್ಷಣ ಹೇಗೆ ಮೊದಲಾಗಬೇಕೋ ಎಲ್ಲಿ ಮೊದಲಾಗಬೇಕೋ ನಾನು ಆಲೋಚಿಸಿದ್ದೇನೆ, ಬರೆದೂ ಇದ್ದೇನೆ. ಆದರೂ ಇದರ ಬಗ್ಗೆ ಯಾವುದೊಂದು ನಿಶ್ಚಯಕ್ಕೆ ಮುಟ್ಟಿಲ್ಲ. ಗಂಡಸಿಗೆ ಸಿಗುವಷ್ಟು ಸೌಕರ್ಯ ಹೆಂಗಸಿಗೂ ಸಿಗಬೇಕು; ಇದು ನನ್ನ ದೃಢಾಭಿಪ್ರಾಯ. ವಿಶೇಷ ಸೌಕರ್ಯ ಅಗತ್ಯವಾದರೆ ಅದೂ ಸಿಗಬೇಕು.

ಪ್ರೌಢಶಿಕ್ಷಣ

29) **ಪ್ರೌಢವಯಸ್ಸಿನ ನಿರಕ್ಷರ ಸ್ತ್ರೀಪುರುಷರಿಗೆ ತರಗತಿಗಳು ಅಗತ್ಯ. ಆದರೆ ಅವರಿಗೆ ಅಕ್ಷರಜ್ಞಾನ ಆಗಲೇಬೇಕು ಎಂದು ನಾನು ಒಪ್ಪುವುದಿಲ್ಲ. ಭಾಷಣ ಮುಂತಾದವುಗಳ ಮೂಲಕ ಅವರಿಗೆ ಸಾಧಾರಣ ಜ್ಞಾನ ಸಿಗುವ ಸೌಕರ್ಯಗಳಿರಬೇಕು; ಯಾರಿಗೆ ಅಕ್ಷರಜ್ಞಾನ ಬೇಕೇನಿಸುತ್ತಾ ಇದೆಯೋ ಅವರಿಗೆ ಅದಕ್ಕೆ ಪೂರ್ಣ ಸೌಕರ್ಯ ದೊರೆಯಬೇಕು.**

(ಜೀವನ ಶಿಕ್ಷಣ 1966 ಪುಟ. 151–153)

ಬಹುಕಾಲ ಬ್ರಿಟೀಷರು ದೇಶೀಯ ಪ್ರಜೆಗಳಲ್ಲಿ ಶಿಕ್ಷಣವನ್ನು ಬೆಳೆಸುವ ವಿಷಯದಲ್ಲಿ ಮೌನವಾಗಿಯೇ ಇದ್ದರು. ಭಾರತದ ಜನತೆಯಲ್ಲಿ ತಿಳುವಳಿಕೆಯನ್ನು ಬೆಳೆಸುವ ನೈತಿಕ ಕರ್ತವ್ಯ ಮತ್ತು ಆಡಳಿತದ ಅಗತ್ಯವನ್ನು ಭಾರತದ ಆಡಳಿತದಲ್ಲಿ ಉನ್ನತ ಸ್ಥಾನಗಳಲ್ಲಿದ್ದ ವ್ಯಕ್ತಿಗಳು ಮರೆಯದೆ ಇದ್ದರೂ 1813ರವರೆಗೆ ಈ ವಿಷಯದಲ್ಲಿ ಸರ್ಕಾರದ ಹೊಣೆಯನ್ನು ಕುರಿತು ಯಾವುದೇ ಸಾರ್ವಜನಿಕ ಘೋಷಣೆಯನ್ನು ಮಾಡಲಿಲ್ಲ. ಆ ವರ್ಷ ಜಾರ್ಜ್ ಐ‌ಬ 155ನೇ ಅಧ್ಯಾಯದ 53ನೇ ನಿಯಮದ 43ನೇ ವಿಭಾಗದಲ್ಲಿ ಸಂಸತ್ತು, 'ಭಾರತದ ನಿವ್ವಳ ಆದಾಯದಲ್ಲಿ ಪ್ರತಿ ವರ್ಷ ಒಂದು ಲಕ್ಷ ರೂಪಾಯಿಗಳಿಗೆ ಕಡಿಮೆಯಿಲ್ಲದಷ್ಟು ಹಣವನ್ನು ಪ್ರತ್ಯೇಕವಾಗಿ ತೆಗೆದಿಟ್ಟು ಇದನ್ನು ಸಾಹಿತ್ಯದ ಪುನರುಜ್ಜೀವನ ಮತ್ತು ಸುಧಾರಣೆಗಳಿಗಾಗಿಯೂ ಭಾರತದ ದೇಶೀಯ ವಿದ್ವಾಂಸರಿಗೆ ಪ್ರೋತ್ಸಾಹ ಕೊಡುವುದಕ್ಕಾಗಿಯೇ ಭಾರತದಲ್ಲಿ ಬ್ರಿಟೀಷ್ ಆಡಳಿತದಲ್ಲಿರುವ ಪ್ರದೇಶಗಳಲ್ಲಿರುವ ಜನತೆಯಲ್ಲಿ ವಿಜ್ಞಾನದ ತಿಳುವಳಿಕೆಯನ್ನು ಮೂಡಿಸಿ ಪ್ರೋತ್ಸಾಹಿಸುವುದು ಮುಂತಾದವುಗಳಿಗಾಗಿಯೇ ಬಳಸತಕ್ಕದ್ದು' ಎಂದು ವಿಧಿಸಿತು. ಆದರೆ ಈ ಶಾಸನಬದ್ಧ ಅವಕಾಶದಿಂದ ಸಹ ಈ ದೇಶದ ಜನರ ಶಿಕ್ಷಣವನ್ನು ದೃಢವಾದ ಮತ್ತು ವ್ಯವಸ್ಥಿತವಾದ ಆಧಾರದ ಮೇಲೆ ರೂಪಿಸುವ ಪ್ರಯತ್ನ 1823ರವರೆಗೆ ನಡೆಯಲಿಲ್ಲ. ಏಕೆಂದರೆ ಕೋರ್ಟ್ ಆಫ್ ಡೈರೆಕ್ಟರ್ಸ್ 1814ರ ಜೂನ್ 3ರಂದು ಗವರ್ನರ್ ಜನರಲ್ ಆಫ್ ಕೌನ್ಸಿಲ್‌ಗೆ ಅಧಿಕೃತವಾದ ಪತ್ರದಲ್ಲಿ ಹಿಂದೂಗಳಲ್ಲಿ ಸಂಸ್ಕೃತದ ಅಭ್ಯಾಸಕ್ಕೆ ಪ್ರೋತ್ಸಾಹ ಕೊಟ್ಟರೆ ಸಂಸತ್ತು ಮನಸ್ಸಿನಲ್ಲಿ ಹೊಂದಿದ್ದ ಉದ್ದೇಶ ಈಡೇರಿದಂತೆಯೆ ಎಂದು ಅಪ್ಪಣೆ ಮಾಡಿತು.

1905 ರಿಂದ 1921ರ ಕಾಲಾವಧಿಯಲ್ಲಿ ರಾಷ್ಟ್ರೀಯ ಚಳುವಳಿಯ ಜೊತೆಗೆ ರಾಷ್ಟ್ರೀಯ ಶಿಕ್ಷಣ ಪರಿಕಲ್ಪನೆಯು ಹುಟ್ಟಿಕೊಂಡಿತು. 1905ರಲ್ಲಿ (ಜುಲೈ 20) ಕಲ್ಕತ್ತ ಅಧಿವೇಶನ ನಡೆದ ಸಂದರ್ಭದಲ್ಲಿ ಕೆಲವು ಮುಖ್ಯ ನಿರ್ಣಯಗಳನ್ನು ತೆಗೆದುಕೊಳ್ಳಲಾಯಿತು.

ಅ) ಸ್ವರಾಜ್ಯ ಪ್ರಾಪ್ತಿ

ಆ) ವಿದೇಶಿ ವಸ್ತುಗಳ ಬಹಿಷ್ಕಾರ

ಇ) ಸ್ವದೇಶಿ ವಸ್ತುಗಳ ಬಳಕೆ

ಈ) ಸ್ವದೇಶಿ ಶಿಕ್ಷಣ ಪದ್ಧತಿಯ ಪ್ರಯೋಗ (ಇದು ಮಹತ್ವಪೂರ್ಣವಾದ ನಿರ್ಣಯವಾಗಿತ್ತು)

1882ರಲ್ಲಿ ರಚಿತ ಭಾರತೀಯ ಶಿಕ್ಷಣ ಆಯೋಗದಲ್ಲಿ ನೀಡಲಾದ ಉಪಯುಕ್ತ ಸಲಹೆಯನ್ನು ಗಮನದಲ್ಲಿರಿಸಿಕೊಂಡು ಭಾರತೀಯ ಶಿಕ್ಷಣ ನೀತಿಯು ತುಂಬಾ ಮುಖ್ಯ ಅಂಶಗಳನ್ನು ಪ್ರತಿಪಾದಿಸಿತು.

ಈ ಸಂದರ್ಭದ ಪ್ರಮುಖ ಪ್ರತಿಪಾದನೆಯು ಈ ರೀತಿಯಲ್ಲಿದೆ

1. ಭಾರತೀಯ ನಿಯಂತ್ರಣದ ಅಗತ್ಯ

ಭಾರತೀಯ ಮಾದರಿಯ ಶಿಕ್ಷಣ ಪದ್ಧತಿಯಲ್ಲಿ ಭಾರತೀಯ ಧಾರ್ಮಿಕ ಭಾವನೆಗಳಿಗೆ ಯಾವುದೇ ರೀತಿಯ ಧಕ್ಕೆಯು ಉಂಟಾಗಬಾರದು. ಭಾರತೀಯತೆ, ಅದರ ನೈತಿಕತೆ, ಧಾರ್ಮಿಕ ಭಾವನೆಗಳ ಚ್ಯುತಿ ಬಾರದ ಶಿಕ್ಷಣಕ್ಕೆ ಆದ್ಯತೆಯಿರಬೇಕು.

2. ಸ್ವದೇಶಿ ಪ್ರೇಮದ ಶಿಕ್ಷಣ

ಭಾರತೀಯ ಪರಂಪರೆಯನ್ನು ಎತ್ತಿ ಹಿಡಿಯುವ ಶಿಕ್ಷಣದಲ್ಲಿ ಭಾರತೀಯ ಮೂಲದ ಸಾಹಿತ್ಯ, ಇತಿಹಾಸ, ವಿಜ್ಞಾನ, ಕಲೆ, ರಾಜನೀತಿ ಮೊದಲಾದ ಅರಿವು ವಿದ್ಯಾರ್ಥಿಗಳಲ್ಲಿ ಮೂಡುವಂತಿರಬೇಕು. ಲಾಲಾಲಜಪತರಾಯ್ ಅವರು ಒಂದು ಸಂದರ್ಭದಲ್ಲಿ ಹೀಗೆ ಹೇಳುತ್ತಾರೆ. ರಾಷ್ಟ್ರೀಯತೆಯ ಜೀವನ ಕ್ರಮ, ರಾಷ್ಟ್ರೀಯತೆಯ ಭಾವೈಕ್ಯತೆಯು ಮೂಡಲು ಮತ್ತು ವಿದೇಶಿ ಪ್ರಭಾವವನ್ನು ತಪ್ಪಿಸಲು ನಾವು ನಮ್ಮದೇ ಆದ ಶಿಕ್ಷಣ ನೀತಿಯನ್ನು ರೂಪಿಸಿಕೊಳ್ಳಬೇಕು. ಅದು ತುಂಬಾ ಅಗತ್ಯ **(The Problem of National Education in India, p. 28).**

3. ದಾಸ್ಯ ಅನುಕರಣೆಯ ಅಗತ್ಯ

ಪ್ರಚಲಿತವಿರುವ ಶಿಕ್ಷಣ ನೀತಿಯು ಪಾಶ್ಚಿಮಾತ್ಯ ಧೋರಣೆಯನ್ನು ಅನುಸರಿಸುತ್ತಿದೆ. ಇದು ಕೇವಲ ಆಚಾರ-ವಿಚಾರಗಳಿಗೆ ಮಾತ್ರ ಸಂಬಂಧಿಸಿಲ್ಲ. ಇದು ಶಿಕ್ಷಣದಲ್ಲಿಯೂ ಕಂಡುಬರುತ್ತಿದೆ. ಹೀಗಾಗಿ ಭಾರತೀಯ ವಿದ್ಯಾರ್ಥಿಗಳ ಮನಸ್ಸನ್ನು ಭಾರತೀಯತೆಗೆ ತಕ್ಕಂತೆ ರೂಪುಗೊಳಿಸಬೇಕಾದ ಅಗತ್ಯವಿದೆ. ಭಾರತೀಯ ಆದರ್ಶವನ್ನು ಶಿಕ್ಷಣದ ಮೂಲಕ ಸಾರಬೇಕಾಗಿದೆ. ಭಾರತದ ಅತ್ಯುನ್ನತ ಮೌಲ್ಯಗಳನ್ನು ಹೇಳಿ ಕೊಟ್ಟು ಭಾರತದ ರಾಷ್ಟ್ರೀಯತೆಯನ್ನು ಕಟ್ಟಬೇಕಾಗಿದೆ.

> 'ವಿದೇಶಿ ಭಾಷೆಯ ಮೂಲಕ ನಿಜವಾದ ಶಿಕ್ಷಣವು ಸಾಧ್ಯವಿಲ್ಲ' ಎಂದು ಗಾಂಧಿ ಹೇಳಿದ್ದು ಈ ಕಾರಣಕ್ಕೆ (ಯಂಗ್ ಇಂಡಿಯಾ 1919–22, ಪು. 451).

ರಾಷ್ಟ್ರೀಯ ಶಿಕ್ಷಣವು ಭಾರತೀಯ ಸಾಹಿತ್ಯ, ಭಾರತೀಯ ಚರಿತ್ರೆ, ಭಾರತೀಯ ವಿಜ್ಞಾನ, ಕಲೆ, ರಾಜಕಾರಣ, ಅರ್ಥಶಾಸ್ತ್ರ ಮೊದಲಾದವುಗಳನ್ನು ಒಳಗೊಂಡಿರಬೇಕೆಂದು ಅನಿಬೆಸೆಂಟ್ ಹೇಳುತ್ತಾರೆ **(Annie Besant, The Problem of National Education in India, p. 29).**

4. ಪಾಶ್ಚಾತ್ಯ ಜ್ಞಾನ ಮತ್ತು ವಿಜ್ಞಾನಗಳ ಅಧ್ಯಯನ

ಪಾಶ್ಚಾತ್ಯ ಜ್ಞಾನ ಮತ್ತು ವಿಜ್ಞಾನಗಳ ಸಂಪೂರ್ಣ ನಿರಾಕರಣೆ ಸರಿಯಲ್ಲ. ಅವುಗಳ ಅಧ್ಯಯನದಿಂದ ನಮಗೆ ಜ್ಞಾನ ಉಂಟಾಗುತ್ತದೆ. ಆದರೆ ಅದೇ ಸರ್ವಸ್ವವಲ್ಲ.

> ನನಗೆ ಇಲ್ಲೆಲ್ಲಿ ಪ್ರವೇಶ ಎಂದು ಆಶ್ಚರ್ಯವಾಗುತ್ತದೆ. ಬೆಕ್ಕಸ ಬೆರಗಾಗಿ ಮಾತಿಲ್ಲದೆ ನಿಲ್ಲಬೇಕಾದ ನನ್ನಂಥ ಒಡ್ಡು ಮನುಷ್ಯನಿಗೆ ಇಲ್ಲಿ ಸ್ಥಾನವಿಲ್ಲ. ಹೆಚ್ಚಿಗೆ ಹೇಳುವ ಮನಸ್ಸಿಲ್ಲ ನನಗೆ. ನಾನು ಹೇಳುವುದು ಇಷ್ಟೆ–ಇಲ್ಲಿ ನೀವು ಕಾಣುವ ಎಲ್ಲ ಭಾರಿ ಪ್ರಯೋಗಶಾಲೆ, ವಿದ್ಯುತ್ ಉಪಕರಣ ಎಲ್ಲವೂ ಲಕ್ಷಾಂತರ ಜನರ ದುಡಿಮೆಯ ಫಲ, ಇಚ್ಛೆ ಇಲ್ಲದೆ, ಒತ್ತಾಯಕ್ಕೆ ಮಾಡಿದ ದುಡಿಮೆಯ ಫಲ. ಏಕೆಂದರೆ ತಾತಾರವರ ಮೂವತ್ತು ಲಕ್ಷ ಏನು ಆಕಾಶದಿಂದ ಉದುರಲಿಲ್ಲ. ಅಥವಾ ಮೈಸೂರಿನ ಕೊಡುಗೆ ಬಂದದ್ದೂ ಈ ಬೇಗಾರ (ಕಡ್ಡಾಯ ಶ್ರಮ) ಪ್ರಪಂಚದಿಂದಲ್ಲದೆ ಬೇರೆ ಕಡೆಯಿಂದಲ್ಲ. ನಾವು ಹಳ್ಳಿಗರ ಬಳಿ ಹೋಗಿ, ಅವರ ಹಣವನ್ನು ನಾವು ಹೇಗೆ ಕಟ್ಟಡಗಳ ಮೇಲೆ, ಯಂತ್ರ ಸ್ಥಾವರಗಳ ಮೇಲೆ ವೆಚ್ಚಮಾಡುತ್ತಿದೇವೆ, ಅವುಗಳ ಲಾಭ ಆ ಜನಕ್ಕೆ ಸಿಗಲಾರದು, ಅವರು ಮುಂದಿನ ಪೀಳಿಗೆಗೆ ಸಿಕ್ಕೀತು ಎಂದೆಲ್ಲ ವಿವರಿಸಿದರೆ, ಅವರಿಗೇನೂ ಅರ್ಥವಾಗುವುದಿಲ್ಲ. ತಣ್ಣಗೆ ನಿಂತಿರುತ್ತಾರೆ. ಆದರೆ ನಾವು ಅವರನ್ನು ವಿಶ್ವಾಸಕ್ಕೆ ತೆಗೆದುಕೊಳ್ಳುವುದೇ ಇಲ್ಲ. ನಮ್ಮ ಹಕ್ಕು ಎಂದೇ ಭಾವಿಸುತ್ತೇವೆ. "ಪ್ರಾತಿನಿಧ್ಯವಿಲ್ಲದೆ ತೆರಿಗೆ ಇಲ್ಲ" ಎಂಬ ನಿಯಮ ಅವರಿಗೂ ಉಂಟು ಎಂಬುದನ್ನು ಮರೆಯುತ್ತೇವೆ. ಅದನ್ನು ಅವರಿಗೆ ನಿಜಕ್ಕೂ ಅನ್ವಯಿಸಿದರೆ ಹಾಗೂ ಅವರಿಗೆ ಲೆಕ್ಕ ಒಪ್ಪಿಸಬೇಕು ಎಂಬ ಜವಾಬ್ದಾರಿಯನ್ನು ಅರಿತುಕೊಂಡರೆ, ಈ ಎಲ್ಲ ನೇಮಕಗಳಿಗೂ ಇನ್ನೊಂದು ಮುಗ್ಗಲು ಇದೆ ಎಂದು ಕಾಣುತ್ತೀರಿ, ಆಗ ನಿಮ್ಮ ಹೃದಯದಲ್ಲಿ ಅವರಿಗೆ ಒಂದು ಸ್ಥಾನ, ಸಣ್ಣದಲ್ಲ, ದೊಡ್ಡಸ್ಥಾನ

ನೀಡುವಿರಿ. ಇದನ್ನು ಒಳ್ಳೆ ಸುಸ್ಥಿತಿಯಲ್ಲಿಟ್ಟುಕೊಂಡರೆ, ನಿಮ್ಮ ಶಿಕ್ಷಣ ಯಾರ ಪರಿಶ್ರಮದ ಮೇಲೆ ನಿಂತಿದಿಯೊ, ಆ ಜನಕೋಟಿಯ ಒಳಿತಿಗಾಗಿ ನಿಮ್ಮ ಜ್ಞಾನವನ್ನು ಉಪಯೋಗಿಸುತ್ತೀರಿ. ನೀವು ನನಗೆ ಕೊಟ್ಟಿರುವ ನಿಧಿಯನ್ನು ದರಿದ್ರನಾರಾಯಣನ ಸಲುವಾಗಿ ಬಳಸುತ್ತೇನೆ. ನಿಜವಾದ ದರಿದ್ರನಾರಯಣನನ್ನು ನಾನೂ ನೋಡಿಲ್ಲ. ಕಲ್ಪನೆಯಲ್ಲಿ ತಿಳಿಸಿದ್ದೇನೆ ಅಷ್ಟೆ ಈ ಹಣ ಯಾರಿಗೆ ಹೋಗುವುದೊ ಆ ನೂಲುಗಾರರೂ ನಿಜವಾದ ದರಿದ್ರನಾರಾಯಣರಲ್ಲ. ನಿಜವಾದ ದರಿದ್ರ ನಾರಾಯಣರು ದೂರದ ಹಳ್ಳಿಗಳ ಮೂಲೆಯಲ್ಲಿದ್ದಾರೆ. ಅವರನ್ನು ಇನ್ನೂ ಕಂಡುಹಿಡಿದೇ ಇಲ್ಲ. ನಿಮ್ಮ ಪ್ರಾಧ್ಯಾಪಕರು ಹೇಳಿದರು, ಕೆಲವು ರಾಸಾಯನಿಕ ವಸ್ತುಗಳ ಗುಣಗಳನ್ನು ಅರಿತುಕೊಳ್ಳಬೇಕಾದರೆ ವರ್ಷಗಟ್ಟಲೆ ಪ್ರಯೋಗ ಮಾಡಬೇಕು ಎಂದು. ಆದರೆ ಈ ಹಳ್ಳಿಗಳನ್ನು ಶೋಧಿಸುವವರು ಯಾರು? ನಿಮ್ಮ ಪ್ರಯೋಗಾಲಯದಲ್ಲಿ ಕೆಲವು ಪ್ರಯೋಗಗಳು ಇಡೀ ಇಪ್ಪತ್ತು ನಾಲ್ಕು ಗಂಟೆಯೂ ಸಾಗುವುದಿಲ್ಲವೇ, ಅದೇ ರೀತಿ, ನಿಮ್ಮ ಹೃದಯದ ದೊಡ್ಡ ಸ್ಥಾನ ಬಡ ಜನಕೋಟಿಯ ಒಳಿತಿಗಾಗಿ ಸದಾ ಬೆಚ್ಚಗಿರಲಿ, ಪ್ರೇಮಮಯವಾಗಿರಲಿ.

(ಸತ್ಯವಾಣಿ ಶ್ರೀಮನ್ ನಾರಾಯಣ 2001 ಪುಟ. 229)

1854 ಪ್ರಾಥಮಿಕ ಶಿಕ್ಷಣದ ಕುರಿತು ಆಯೋಗವು ದೇಶೀ ಶಿಕ್ಷಣದ ಕುರಿತು ತನ್ನ ಘೋಷಣಾ ಪತ್ರ ಅಥವಾ ನಿಲುವಳಿಯನ್ನು ಮಂಡಿಸಿತು. ಅದರಲ್ಲಿ ಮೊದಲನೆಯದಾಗಿ ಪ್ರಾಥಮಿಕ ಶಿಕ್ಷಣವು ಹೇಗಿರಬೇಕೆಂದು ಪ್ರತಿಪಾದಿಸಲಾಯಿತು.

1. ಪ್ರಾಥಮಿಕ ಶಿಕ್ಷಣದ ಉದ್ದೇಶವೇನೆಂದರೆ ಸಾಧಾರಣ ಮನುಷ್ಯರಿಗೂ ವಿದ್ಯೆಯು ತಲುಪುವಂತಿರಬೇಕು. ಪ್ರಾಥಮಿಕ ಶಿಕ್ಷಣವು ಉಚ್ಚ ಶಿಕ್ಷಣಕ್ಕೆ ಒಂದು ಸೋಪಾನ ಮಾತ್ರ
2. ಸಾಧಾರಣ ಮನುಷ್ಯರ ಜನಜೀವನದಲ್ಲಿ, ಅವರ ಬಳಕೆಯ ಅಗತ್ಯಕ್ಕೆ ತಕ್ಕಂತೆ ಶಿಕ್ಷಣವು : ಅದರ ವಿಷಯಗಳು ರೂಪುಗೊಳ್ಳಬೇಕು.
3. ಪ್ರಾಥಮಿಕ ಶಿಕ್ಷಣದ ಮಾಧ್ಯಮವು ದೇಶ ಭಾಷೆಯನ್ನು ಹೊಂದಿರಬೇಕು.
4. ಪ್ರಾಥಮಿಕ ಶಿಕ್ಷಣಕ್ಕೆ ಸರಕಾರವು ಸಂಪೂರ್ಣ ರಕ್ಷಣೆಯನ್ನು ನೀಡಬೇಕು.
5. ನಿಮ್ನ ವ್ಯಕ್ತಿಗಳ ಕಡೆಗೂ ಶಿಕ್ಷಣವು ಗಮನ ಹರಿಸಬೇಕು.
6. ಹಿಂದುಳಿದ ಜಾತಿ, ಆದಿವಾಸಿ ಜನರ ಶಿಕ್ಷಣದ ಕಡೆಗೆ ಸರಕಾರವು ಗಮನಹರಿಸಬೇಕು.

ವಿಲಿಯಂ ಬೆಂಟಿಂಕ್‌ನ ಘೋಷಣೆಯಲ್ಲಿ ಪ್ರಕಟಣೆಯಾಗಿರುವಂತೆ ಶಿಕ್ಷಣದ ಮೇಲೆ ವಿನಿಯೋಗವಾಗಬೇಕಾಗಿರುವ ಎಲ್ಲಾ ಸಂಪನ್ಮೂಲವು ಇಂಗ್ಲೀಷ್ ಶಿಕ್ಷಣ ಪಡೆಯುವವರ ಮೇಲೆ ಮಾತ್ರ ವಿನಿಯೋಗವಾಗುವುದು ಒಳ್ಳೆಯದು. ಇದರಿಂದ ಫಲಾನುಭವಿಗಳು ಯಾರು ಎಂದು ತಿಳಿಯುತ್ತದೆ **(C.H. Sharp, Selections from Educational Records, Part I, 1781-1838, p. 109-30).** ಪ್ರಧಾನವಾಗಿ ಉನ್ನತ ಮಟ್ಟದ ಇಂಗ್ಲೀಷ್ ಶಿಕ್ಷಣಕ್ಕೆ ಮಾತ್ರ ಹಣವನ್ನು ಉಪಯೋಗಿಸಬೇಕೆಂದು ಮದರಾಸು ಸರ್ಕಾರಕ್ಕೆ ಸೂಚನೆಯಾಗಿತ್ತು (ಪು. 29) (ಎಸ್. ಚಂದ್ರ ಶೇಖರ್).

ಬ್ರಿಟೀಷರು ಸಂಸ್ಕೃತ ಕಾಲೇಜುಗಳನ್ನು ಪ್ರಾರಂಭಿಸಿ ಅದರಲ್ಲಿ ಎಲ್ಲರಿಗೂ ಪ್ರವೇಶ ಸಿಗಬೇಕೆಂದು ಒತ್ತಾಯಿಸಿದ್ದರು. 1850 ರಲ್ಲಿ ಡಾಲ್‌ಹೌಸಿಯು ಬಾಲಕಿಯರಿಗಾಗಿ ಪ್ರತ್ಯೇಕ ಶಾಲೆಗಳನ್ನು ಸ್ಥಾಪಿಸಬೇಕೆಂದು ಮತ್ತು ಸಾಧ್ಯವಾದ ಎಲ್ಲ ರೀತಿಗಳಲ್ಲಿ ಬಾಲಕಿಯರಲ್ಲಿ ಶಿಕ್ಷಣ ಪ್ರಸಾರ ಮಾಡಬೇಕೆಂದು ಒತ್ತಾಯಿಸಿದ್ದನು.

1882ರ ಶಿಕ್ಷಣ ಆಯೋಗದ ಶಿಫಾರಸ್ಸು ಮತ್ತು 1904–1913 ಶೈಕ್ಷಣಿಕ ಕಾರ್ಯನೀತಿಯ ಸರ್ಕಾರ ನೀತಿಯ ಮುಖ್ಯ ನಿಲುವುಗಳು ಹೀಗಿದ್ದವು

1. ಅಸ್ಪೃಶ್ಯರಿಗೂ ಶಿಕ್ಷಣ
2. ಬಾಲಕಿಯರಿಗೂ ಶಿಕ್ಷಣ
3. ಸಾಂಪ್ರದಾಯಿಕ ನಿಷೇಧಗಳ ಭೇದವಿಲ್ಲದೆ ಶಿಕ್ಷಣ
4. ಸಾರ್ವಜನಿಕ ನಿಧಿಯಿಂದ ಸ್ಥಾಪಿಸಲ್ಪಟ್ಟ ಅಥವಾ ಸಹಾಯ ಧನ ಪಡೆಯುವ ಶಾಲೆಗಳಿಗೆ ಪ್ರತಿಯೊಬ್ಬ ಮಗುವಿಗೆ ಪ್ರವೇಶದ ಹಕ್ಕು
5. ಕೆಳಸ್ತರದವರಿಗೆ ಶಿಕ್ಷಣದ ಹಕ್ಕು
6. ಶಿಕ್ಷಣ ಪಡೆದವರಿಗೆ ಸರಕಾರಿ ಹುದ್ದೆ
7. ವಯಸ್ಕ ಶಿಕ್ಷಣ
8. ಸಾಮಾಜಿಕ ಮತ್ತು ಮತೀಯ ಶಿಕ್ಷಣದಲ್ಲಿ ಹಸ್ತಕ್ಷೇಪ ಮಾಡದಿರುವುದು

ಬ್ರಿಟೀಷರ ಹೊಸ ಶಿಕ್ಷಣವು ಉದಾರವಾಗಿತ್ತು. ಖಾಸಗಿ ಸಂಸ್ಥೆಗಳು ಖಾಸಗಿ ಶಾಲೆಗಳನ್ನು ಪ್ರಾರಂಭಿಸಿದವು. ಕ್ರಮಬದ್ಧ ಶಿಕ್ಷಣ ಕ್ರಮ ಪ್ರಾರಂಭವಾಯಿತು. 1881ರಲ್ಲಿ ಭಾರತದ ದಾದಾಬಾಯಿ ನವರೋಜಿಯವರು ಎಲ್ಲಾ ಮಕ್ಕಳಿಗೂ ನಾಲ್ಕು ವರ್ಷದ ಶಿಕ್ಷಣ ಕೊಡಬೇಕೆಂದು ಪ್ರತಿಪಾದಿಸಿದರು. 1918–1931ರ ಅವಧಿಯಲ್ಲಿ ಕಡ್ಡಾಯ

ಪ್ರಾಥಮಿಕ ಶಿಕ್ಷಣದ ಕಾನೂನು ಅಂಗೀಕಾರವಾಯಿತು (ವಿವರಗಳಿಗೆ ನೋಡಿ : ಜೆ.ಪಿ. ಪಟ್ನಾಯಕ್, 1986, ಭಾರತೀಯ ಶಿಕ್ಷಣದಲ್ಲಿ ಸಮತೆ, ಗುಣ ಮತ್ತು ಪರಿಮಾಣ, ಪು. 10).

ಬ್ರಿಟೀಷ್ ಆಡಳಿತಗಾರರಿಗೆ ಎರಡು ಪರ್ಯಾಯಗಳಲ್ಲಿ ಒಂದನ್ನು ಆರಿಸುವ ಅವಕಾಶವಿತ್ತು. ಈ ಆಯ್ಕೆಯ ಬಗ್ಗೆ ಅವರಲ್ಲಿ ತೀವ್ರ ಭಿನ್ನಾಭಿಪ್ರಾಯಗಳಿದ್ದವು. ಒಂದು ಗುಂಪು (ಸಾಂಪ್ರದಾಯಿಕರದು ಕ್ಲಾಸಿಸಿಸ್ಟ್) ದೇಶೀಯ ಶಿಕ್ಷಣ ಪದ್ಧತಿಯು ಜನತೆಗೆ ಒಳ್ಳೆಯದಾಗಿರುವುದರಿಂದ ಅದನ್ನು ಸರಕಾರವು ಸಂಪೂರ್ಣ ಸಮರ್ಥಿಸಬೇಕೆಂದಿತು. ಎರಡನೆಯ ಗುಂಪು (ಆಂಗ್ಲ ಸಮರ್ಥಕರು – ಆಂಗ್ಲೆಸಿಸ್ಟ್) ಇಂಗ್ಲೀಷ್ ಮಾಧ್ಯಮದಿಂದ ಯುರೋಪಿಯನ್ ಜ್ಞಾನವನ್ನು ಕಲಿಸುವ ಹೊಸ ಶಿಕ್ಷಣ ಪದ್ಧತಿಯನ್ನು ಸೃಜಿಸಬೇಕೆಂದು ನಂಬಿತ್ತು. ಕೆಲ ಮಟ್ಟಿಗೆ ಲಾರ್ಡ್ ವಿಲಿಯಂ ಬೆಂಟಿಂಕ್ ಮತ್ತು ರಾಜಾರಾಂ ಮೋಹನ್ ರಾಯ್‌ರಂತಹ ಪ್ರಬುದ್ಧ ಭಾರತೀಯರ ಬೆಂಬಲದಿಂದ ಕೊನೆಯಲ್ಲಿ ಎರಡನೆಯ ಅಭಿಪ್ರಾಯ ಗೆದ್ದಿತು (ಅದೇ, ಪು. 49). ಮೂಲತಃ ಬ್ರಿಟೀಷರು ಅವರ ಉದ್ದೇಶಕ್ಕೆ ತಕ್ಕಂತೆ ಔದ್ಯೋಗಿಕ ಅವಕಾಶ ಅನುವಾಗುವ ಶಿಕ್ಷಣ ನೀಡಲು ಉದ್ದೇಶಿಸಿದ್ದರು. ಅನೇಕರು ಅದನ್ನು ಅಂಗೀಕರಿಸಿದ್ದರು.[4] ಶಿಕ್ಷಣ ಮತ್ತು ಸಾಹಿತ್ಯದ ಕುರಿತ ಗಾಂಧಿ ನಿಲುವು ಗಮನಾರ್ಹ.

> "ಲೇಖಕರಿಗೆ ಹೇಳುತ್ತೇನೆ–ಪಟ್ಟಣದವರಿಗಾಗಿ ಬರೆಯುವ ಬದಲು ನಮ್ಮ ಮೂಕಜನರಿಗಾಗಿ ಬರೆಯಿರಿ. ಆ ಕ್ಷೇತ್ರದೊಳಕ್ಕೆ ಧುಮುಕಿರಿ. ನೀವು ಮನೋರಂಜಕ ಕಥೆಗಳನ್ನು ಬರೆದೀರಿ. ಅದರಿಂದ ಅವರ ಬುದ್ಧಿಯ ಮೇಲೆ ಪ್ರಭಾವ ಬೀಳದು. ನಮ್ಮಲ್ಲಿ ಗ್ರಾಮಸೇವಕ ವಿದ್ಯಾಲಯವಿದೆ. ಅದರ ಆಚಾರ್ಯರಿಗೆ ನಾನು ಹೇಳಿದೆ. ಅವರಿಗೆ ಉದ್ಯೋಗವನ್ನು ಕಲಿಸುವ ಮುನ್ನ ಉದ್ಯೋಗದ ಉಪಕರಣಗಳ ಅಧ್ಯಯನ ಮಾಡಿ, ಬಾಜಿಯ ರಚನೆಯನ್ನು ತಿಳಿದುಕೊಳ್ಳಿ. ನಿಮ್ಮ ಬುದ್ಧಿ ವಿಕಾಸವಾಗಬೇಕೋ, ಹಳ್ಳಿಯ ಸಾಧನಗಳನ್ನು ಅಧ್ಯಯನ ಮಾಡಿ. ಅವುಗಳ ಗುಣಗಳನ್ನೂ ದೋಷಗಳನ್ನೂ ಅರಿಯಿರಿ. ಬುದ್ಧಿಯ ವಿಕಾಸಕ್ಕೆ ನಿಜವಾದ ಕ್ಷೇತ್ರ ಹಳ್ಳಿ, ಪಟ್ಟಣವಲ್ಲ. (ಜೀವನ ಶಿಕ್ಷಣ 1966 ಪುಟ. 212)

ವಸಾಹತುಶಾಹಿ ಶಿಕ್ಷಣದ ವಿರೋಧ ಮತ್ತು ಸ್ವಯಂ ಮಾದರಿಗಳ ಹುಡುಕಾಟ

> ಶಿಕ್ಷಣ ಎಂದರೆ ಬರೀ ಅಕ್ಷರಜ್ಞಾನವಲ್ಲ. ಅಕ್ಷರಜ್ಞಾನ ಶಿಕ್ಷಣಕ್ಕೆ ಸಾಧನ ಮಾತ್ರ. ಮನಸ್ಸಿನಿಂದ ಹಿಡಿದು ಎಲ್ಲಾ ಇಂದ್ರಿಯಗಳಿಂದಲೂ ಒಳ್ಳೆಯ ಕೆಲಸ ಮಾಡುವುದನ್ನು ಕಲಿಯುವುದೇ ಶಿಕ್ಷಣ. ಕೈಯಿಂದ

ಕಳ್ಳತನ ಮಾಡಬಾರದು, ನೊಣ ಕೊಲ್ಲಬಾರದು, ತನ್ನ ಜೊತೆಯ ಚಿಕ್ಕ ಮಕ್ಕಳನ್ನು ಹೊಡೆಯಬಾರದು ಎಂಬ ಅರಿವು ಯಾವ ಮಗುವಿಗೆ ದೊರೆಯುತ್ತದೆಯೋ ಆ ಮಗುವಿನ ಶಿಕ್ಷಣ ಪ್ರಾರಂಭವಾಯಿತು. ತನ್ನ ಮೈ, ತನ್ನ ಹಲ್ಲು ನಾಲಗೆ ಕಿವಿ, ಮೂಗು ಕಣ್ಣು, ತಲೆ, ಉಗುರು ಎಲ್ಲವನ್ನೂ ಚೊಕ್ಕವಾಗಿಟ್ಟುಕೊಳ್ಳುವುದು ಅಗತ್ಯ ಎನಿಸಿದರೆ ಮಗುವಿಗೆ, ಚೊಕ್ಕಟವಾಗಿಟ್ಟುಕೊಂಡರೆ, ಅದರ ಶಿಕ್ಷಣ ಆರಂಭವಾಯಿತೆಂದು ತಿಳಿಯಬಹುದು. ಊಟ ಮಾಡುವಾಗ ಚಂಡಿ ಮಾಡದೆ ಒಂಟಿಯಾಗಿಯೋ ಇತರರ ಜೊತೆಯಲ್ಲೇ ಕೂತು ನಿಯಮಪ್ರಕಾರವಾಗಿ ಊಟ ಮಾಡುವ ಮಗು, ಸರಿಯಾಗಿ ಕೂತು ಊಟದಲ್ಲಿ ಶುದ್ಧ- ಅಶುದ್ಧ ಪದಾರ್ಥಗಳನ್ನು ಅರಿತು ಮಗು, ತಿಂಡಿಪೋತನಾಗಿ ಕೂರಿ ತುರುಕಿಕೊಳ್ಳದ ಮಗು, ತಾನೇ ಯಾವುದನ್ನೂ ಬೇಡದೆ ಬಡಿಸಿದುದ್ದನ್ನು ತಿಂದು ಬಡಿಸದಿದ್ದರೆ ಗದ್ದಲ ಮಾಡದೆ ತಿನ್ನುವ ಮಗು, ಆಗಲೇ ಶಿಕ್ಷಣದಲ್ಲಿ ಉನ್ನತಿ ಪಡೆದಿದ್ದಾನೆ. ಯಾರ ಉಚ್ಚಾರಣೆ ಶುದ್ಧವಾಗಿದೆಯೋ, ಇತಿಹಾಸ-ಭೂಗೋಳ ಎಂಬ ಹೆಸರು ತಿಳಿಯದಿದ್ದರೂ ನೆರೆಹೊರೆಯ ಪ್ರದೇಶದ ಇತಿಹಾಸ - ಭೂಗೋಳ ಯಾರಿಗೆ ಗೊತ್ತಿದೆಯೋ, ದೇಶ ಎಂದರೆ ಏನೋ ಯಾರಿಗೆ ತಿಳಿದಿದೆಯೋ ಅಂಥ ಮಗು ಶಿಕ್ಷಣದ ದಾರಿಯಲ್ಲಿ ಸಾಕಷ್ಟು ದೂರ ಸಾಗಿ ಬಂದಿದಾನೆ. ನಿಜ ಯಾವುದು ಸುಳ್ಳು ಯಾವುದು, ಸಾರ ಯಾವುದು ಅಸಾರ ಯಾವುದು ಎಂಬ ಭೇದವನ್ನು ಅರಿಯಬಲ್ಲ ಮಗು, ಒಳ್ಳೆಯದನ್ನೋ ನಿಜವನ್ನೂ ಆರಿಸಿಕೊಂಡು, ಮೊಂಡತನವನ್ನು ಸುಳ್ಳನ್ನು ಬಿಟ್ಟ ಮಗು ಶಿಕ್ಷಣದಲ್ಲಿ ಬಹಳ ಮುಂಬರಿದಿದ್ದಾನೆ. ಇದನ್ನು ಬೆಳೆಸಬೇಕಾಗಿಲ್ಲ. ಉಳಿದ ಬಣ್ಣಗಳನ್ನು ಓದುಗರೇ ತುಂಬಿಕೊಳ್ಳಬಹುದು. ಒಂದು ಮಾತನ್ನು ಸ್ಪಷ್ಟವಾಗಿ ಹೇಳಬೇಕು. ಇದರಲ್ಲಿ ಎಲ್ಲೂ ಅಕ್ಷರಜ್ಞಾನ ಅಥವಾ ಲಿಪಿಜ್ಞಾನ ಅಗತ್ಯವಿದ್ದಂತೆ ಕಾಣಿಸದು. ಮಕ್ಕಳಿಗೆ ಲಿಪಿಯ ಜ್ಞಾನದ ಭಾರವನ್ನು ಹೊರಿಸುವುದು ಅವರ ಮನಸ್ಸು - ಇಂದ್ರಿಯಗಳ ಮೇಲೆ ಭಾರ ಹೊರಿಸಿದಂತೆ. ನಿಜವಾದ ಶಿಕ್ಷಣ ಪಡೆದ ಮಗು ಸಕಾಲದಲ್ಲಿ ಓದು ಬರಹವನ್ನು ಕಲಿಯುತ್ತಾನೆ, ಆನಂದದಿಂದ ಕಲಿಯುತ್ತಾನೆ. ಈಗ ಮಕ್ಕಳಿಗೆ ಈ ಜ್ಞಾನ ಭಾರವಾಗದೆ. ಮಗು ಮುಂದೆ ಸಾಗಲು ಅನುಕೂಲವಾದ ಒಳ್ಳೆಯ ಸಮಯ ವ್ಯರ್ಥವಾಗಿ ಹೋಗುತ್ತದೆ. ಕಡೆಯಲ್ಲಿ ಅಂದವಾದ ಅಕ್ಷರ ಬರೆಯುವುದನ್ನು ಒಳ್ಳೇ ರೀತಿಯಲ್ಲಿ ಓದುವುದನ್ನು ಬಿಟ್ಟು,

ಕೋಳಿಯ ಕಾಲಿನ ಹಾಗೆ ಅಕ್ಷರ ಬರೆಯಲು ಕಲಿಯುತ್ತಾನೆ. ಚೆನ್ನಾಗಿ ಓದಲಾರ, ತಪ್ಪು ತಪ್ಪಾಗಿ ಓದುತ್ತಾನೆ. ಇದನ್ನು ಶಿಕ್ಷಣ ಎಂದರೆ ಶಿಕ್ಷಣಕ್ಕೆ ಅಪಚಾರ ಮಾಡಿದಂತೆ. ಮಗು ಓದು ಬರಹವನ್ನು ಕಲಿಯುವ ಮೊದಲೇ ಅವನಿಗೆ ಪ್ರಾಥಮಿಕ ಶಿಕ್ಷಣ ಸಿಗಬೇಕು. ಹಾಗೆ ಮಾಡಿದರೆ ಈ ಬಡದೇಶ ಅನೇಕ ಪಾಠಶಾಲೆಗಳ ಮಕ್ಕಳ ಪುಸ್ತಕಗಳ ವೆಚ್ಚವನ್ನೂ ಅನೇಕ ಕೆಡುಕುಗಳನ್ನೂ ತಪ್ಪಿಸಬಹುದು. ಬಾಲಬೋಧೆಯ ಪುಸ್ತಕ ಬೇಕು ಎಂದರೆ ಅದು ಶಿಕ್ಷಕರಿಗೆ ಕೈಪಿಡಿಯಾಗಿ ಇರಲಿ, ನಾನು ಹೇಳುವ ಮಕ್ಕಳಿಗೆ ಮಾತ್ರ ಎಂದಿಗೂ ಬೇಡ. ಹರಿಯುವ ನೀರಿನಲ್ಲಿ ಕೊಚ್ಚಿಕೊಂಡು ಹೋಗುತ್ತಿರದಿದ್ದರೆ, ನಮಗೆ ಈ ಮಾತು ದೀಪದಂತೆ ಸ್ಪಷ್ಟವಾಗಿ ತೋರಬೇಕು.

(ಜೀವನ ಶಿಕ್ಷಣ 1966 ಪುಟ. 216–218)

ರಾಷ್ಟ್ರೀಯ ಶಿಕ್ಷಣದ ಪರಿಕಲ್ಪನೆಯು ರಾಷ್ಟ್ರೀಯ ಆಂದೋಲನದಂತೆ ಪ್ರಭಾವ ಶಾಲಿಯಾಗಿತ್ತು.

ಆಗಿನ ರಾಷ್ಟ್ರೀಯ ಶಾಲೆಗಳ ಪರಿಕಲ್ಪನೆ ಕುರಿತು ನಾರಾಯಣರಾವ್ ವೈದ್ಯ ಅವರು ಪ್ರಸ್ತಾಪಿಸುತ್ತಾರೆ (1998).

1. ನೂಲುವುದು – ನೇಯುವುದು.
2. ಕನ್ನಡ, ಇಂಗ್ಲೀಷ್, ಸಂಸ್ಕೃತ, ಗಣಿತ, ಇತಿಹಾಸ, ಭೂಗೋಳ.
3. ರಾಷ್ಟ್ರಪ್ರೇಮ – ದೇಶಭಕ್ತಿ ಉಪದೇಶ.
4. ದುಡಿಮೆ ಮತ್ತು ಕಲಿಕೆ (ಪು. 16).

ನಾವು ರಾಷ್ಟ್ರೀಯ ವಿದ್ಯಾಲಯಕ್ಕೆ ಪೂರಕವಾಗುವಂತೆ ನಾಲ್ಕು ಪ್ರಾಥಮಿಕ ರಾಷ್ಟ್ರೀಯ ಶಾಲೆಗಳನ್ನು ಸ್ಥಾಪಿಸಿದೆವು. ಅವಕ್ಕೆ 'ಮುಷ್ಠಿಫಂಡಿನ ಶಾಲೆಗಳು' ಎಂದು ಹೆಸರು. ಅಲ್ಲಿಯೂ ಸಹ ಮಕ್ಕಳಿಗೆ ರಾಷ್ಟ್ರ ಪ್ರೇಮವೇ ಪ್ರಧಾನ ವಿಷಯ (ಪು. 16). ಗದಗಿನಲ್ಲಿ ಶ್ರೀ ವೀರನಾರಾಯಣನ ಗುಡಿ, ತ್ರಿಕೂಟೇಶ್ವರನ ಗುಡಿ, ರಾಚೋಟಿ ವೀರಭದ್ರೇಶ್ವರ ದೇವಸ್ಥಾನ, ಬೆಟಗೇರಿಯಲ್ಲಿ ಈಶ್ವರನ ದೇವಸ್ಥಾನ ಇವು ನಮ್ಮ ಪ್ರಾಥಮಿಕ ಶಿಕ್ಷಣ ಶಾಲೆಗಳಾಗಿದ್ದವು (ಅದೇ, ಪು. 17).

"ಮನೆ ಮನೆಗೆ ಖಾದಿಯ ಚಿಕ್ಕ ಚಿಕ್ಕ ಚೀಲಗಳನ್ನು ಕೊಟ್ಟು ದಿನಾಲು ಒಂದು ಮುಷ್ಠಿ ಕಾಳು ಆ ಚೀಲದಲ್ಲಿ ಹಾಕಿಡುವಂತೆ ಗೃಹಸ್ಥರಿಗೆ ವಿನಂತಿಸುತ್ತಿದ್ದೆವು. ಅವರು ಸಂಗ್ರಹಿಸುತ್ತಿದ್ದ ಧಾನ್ಯವನ್ನು ವಾರಕ್ಕೊಮ್ಮೆ 'ವಂದೇ ಮಾತರಂ' ಎಂದು ಕೂಗಿ ತಕ್ಕೊಂಡು ಬಂದು ಅದನ್ನು ಮಾರಿ ಶಿಕ್ಷಕರಿಗೆ ಸಂಬಳ ಕೊಡುತ್ತಿದ್ದೆವು" (ಅದೇ, ಪು. 17).

ಈ ವಿವರಗಳು ವಸಾಹತುಶಾಹಿ ಶಿಕ್ಷಣ ನೀತಿಗಿಂತ ಭಿನ್ನ ಮಾದರಿಯನ್ನು ಸೂಚಿಸುತ್ತವೆ. ಶಿಕ್ಷಣದಲ್ಲಿ ಹೊಸ ರೀತಿಯ 'ಕಟ್ಟುವಿಕೆ'ಯ ಪ್ರಕ್ರಿಯೆಯು ಜರುಗಿತು. ಅದನ್ನು ಮೇಲಿನ ಮಾತುಗಳು ಸೂಚಿಸುತ್ತವೆ.

ವಸಾಹತುಶಾಹಿ ಶಿಕ್ಷಣ ಪದ್ಧತಿಯು ಭಾಷೆಯ ಕಲಿಕೆಯ ಬಗ್ಗೆ ಒಂದು ಪ್ರಮಾಣೀಕರಣವನ್ನು ರೂಪಿಸಿತು. ಉದಾ : ಅಕ್ಷರ ಮಾಲೆಯನ್ನು ಕಲಿಸುವುದು, ವ್ಯಾಕರಣ ಕಲಿಸುವುದು ಇತ್ಯಾದಿ. ಇದರಿಂದ ಭಾಷೆಗೆ ಒಂದು ರೂಪವು ಸಿಗುತ್ತದೆ. ಪ್ರಭುತ್ವ ವಿರೋಧಿ ಶಿಕ್ಷಣ ಕ್ರಮವೂ ಅದನ್ನೇ ಅನುಕರಿಸಿತು. ದೇಶೀಯ ಶಿಕ್ಷಣ ಮಾದರಿಯಲ್ಲಿ 'ರಾಷ್ಟ್ರೀಯತೆ' ಎನ್ನುವುದು ಕೂಡಾ ಕಲಿಕೆಯ ಒಂದು ಮಾದರಿಯಾಯಿತು. ಇದರಿಂದ ಇದಕ್ಕೆ ಒಂದು ಸಾಂಸ್ಕೃತಿಕ ರೂಪ ಕೂಡಾ ಸಿಕ್ಕಿತು.

ಮಿಶನರಿಗಳು ನಡೆಸುತ್ತಿದ್ದ ಶಾಲೆಗಳಲ್ಲಿ ನೀತಿ ಬೋಧನೆ, ಬೈಬಲ್‌ಗಳ ಬೋಧನೆ ಸಾಮಾನ್ಯವಾಗಿತ್ತು. ಆದರೆ ಸ್ವದೇಶಿ ಬೋಧನೆಗಳ ಕ್ರಮದಲ್ಲಿ ರಾಷ್ಟ್ರೀಯತೆಯ ಬೋಧನೆ, ಭಾರತೀಯ ಆದರ್ಶದ ಬೋಧನೆಯು ಮುಖ್ಯವಾಯಿತು. ಇದರಿಂದ ಶಿಕ್ಷಣಕ್ಕೆ ಹೊಸ ರೀತಿಯ ವ್ಯಾಖ್ಯಾನವು ದೊರೆತಿರುವುದು ಸ್ಪಷ್ಟ ಕಲಿತವರು ಜಾತಿ ಮತ ಬಿಟ್ಟು ರಾಷ್ಟ್ರವನ್ನು ಕಟ್ಟಬೇಕೆಂದು ಹೇಳಿದರು. ನವ ಶಿಕ್ಷಣದ ದೆಸೆಯಿಂದ ಮೌಖಿಕ ಪರಂಪರೆಯು ಗೈರು ಹಾಜರಿಯಾಗಿ ಹೊಸತೊಂದು ಪರಂಪರೆಯು ಹುಟ್ಟಿಕೊಂಡಿತು. 1838ರಲ್ಲಿ ಕೋರ್ಟ್ ಆಫ್ ಡೈರೆಕ್ಟರ್ಸ್ ಅವರ ಆದೇಶದ ಪ್ರಕಾರ ಮದರಾಸು ಸರ್ಕಾರ ಎಲ್ಲಾ ದೇಶೀಯ ಧಾರ್ಮಿಕ ಸಂಸ್ಥೆಗಳಿಂದ ದೂರ ಸರಿಯಿತು. ನಿಧಾನವಾಗಿ, ಪ್ರಧಾನವಾಗಿ ಮಿಷನರಿಗಳು ತಾವು ನಡೆಸುತ್ತಿದ್ದ ಶಾಲೆಗಳ ಮೂಲಕ ಹಿಂದೂ ಕೆಳ ಜಾತಿಯವರನ್ನು ಕ್ರಿಶ್ಚಿಯನ್ನಾಗಿ ಮತಾಂತರಗೊಳಿಸುವ ಕಾಯಕಕ್ಕೆ ತೊಡಗಿದವು. ಅದಕ್ಕೆ ಮೊದಲು ಮತಾಂತರಗಳು ನಡೆದಿರಲಿಲ್ಲವೆಂದಲ್ಲ, ಕರಾವಳಿ ಪಟ್ಟಣ ಮತ್ತು ಜಿಲ್ಲೆಗಳಲ್ಲಿ ಲಕ್ಷಾಂತರ ಮಂದಿ ಮತಾಂತರಗೊಂಡಿದ್ದರು (ಎಸ್. ಚಂದ್ರಶೇಖರ್, ಪು. 28).

ಮೇಲು ಜಾತಿಯವರು ಮತಾಂತರಗೊಳ್ಳುವುದು. ಮುಖ್ಯವಾಗಿ ಮದರಾಸು, ಬೆಂಗಳೂರು ಅಥವಾ ತಂಜಾವೂರು ಮುಂತಾದ ನಗರದ ಜನರು ಮತಾಂತರವಾಗುವುದು ಧರ್ಮ ವಿರೋಧಿಯಾಗಿತ್ತು (ಅದೇ, ಪು. 28). ಮಿಷನರಿಗಳ ಚಟುವಟಿಕೆಯನ್ನು ತಡೆಹಿಡಿಯುವ ಸಲುವಾಗಿ 1833ರಲ್ಲಿ 'ದ ಹಿಂದೂ ಲಿಟರರಿ ಸೊಸೈಟಿ' ಜನ್ಮ ತಾಳಿತು. ಕ್ರಿಶ್ಚಿಯನ್ ಮಿಷನರಿ ಶಾಲೆಗಳಿಗೆ ಪರ್ಯಾಯವಾಗಿ ಗೌರವಾನ್ವಿತ ಕುಟುಂಬಗಳ ಹುಡುಗರಿಗೆ ಇಂಗ್ಲೀಷ್ ಶಿಕ್ಷಣವನ್ನು ನೀಡಲು ಆ

ಸೊಸೈಟಿಯು ಶಾಲೆಯೊಂದನ್ನು ತೆರೆಯಿತು. 1833ನೇ ಇಸವಿಯಲ್ಲಿ ಅದೇ ಮಾದರಿಯಲ್ಲಿ ಮೈಸೂರು ಹಾಗೂ ತಿರುವಾಂಕೂರಿನ ಮಹಾರಾಜರು ಇಂಗ್ಲೀಷ್ ಶಾಲೆಗಳನ್ನು ತೆರೆದರು (ಅದೇ, ಪು. 28).

ಪ್ರೆಸಿಡೆನ್ಸಿ ಹೈಸ್ಕೂಲನ್ನು ಪ್ರಾರಂಭಿಸಲು ಕಂಪೆನಿ ಸರಕಾರವು ಯೋಜನೆಗಳನ್ನು ಪೂರ್ಣಗೊಳಿಸಿದಾಗ ಆಡಳಿತ ಮಂಡಳಿಯ ಅಧ್ಯಕ್ಷರಾಗಿ ಮತ್ತು ಕೆಲವು ಸದಸ್ಯರಾಗಿ ತಾವು ಚುನಾಯಿಸಿದ ವ್ಯಕ್ತಿಗಳು ಇರಬೇಕೆಂದು ದೇಶೀಯರು ಲಾಬಿ ಮಾಡಿದರು. ಹಲವರು ದೇಶೀಯರು ಹಾಗೂ ಮೆಕಾಲೆಯಂಥ ಇಂಗ್ಲೀಷಿನವರು ಇಚ್ಛೆಪಟ್ಟಿದ್ದಂತೆ ಆ ಶಾಲೆಯು ಇಂಗ್ಲೆಂಡಿನಲ್ಲಿದ್ದ ಶಾಲೆಗಳ ಮಾದರಿಯಲ್ಲಿ ರೂಪುಗೊಳ್ಳಬೇಕಾಗಿತ್ತು. ಮೆಕಾಲೆ ತನ್ನ ಸರ್ಕಾರಿ ನಡಾವಳಿಯಲ್ಲಿ ದಾಖಲಿಸಿರುವುದು ದೇಶೀಯರ ಮನಸ್ಸು ಆ ವೇಳೆಗೆ ಹೇಗೆ ಕೆಲಸ ಮಾಡುತ್ತಿತ್ತು ಎಂಬುದಕ್ಕೆ ಸಾಕ್ಷಿಯಾಗಿದೆ. ಮೆಕಾಲೆ ಬರೆಯುತ್ತಾನೆ : ಪೌರಾತ್ಯ ಶಿಕ್ಷಣ ಯೋಜನೆಯನ್ನು ಬೆಂಬಲಿಸುವ ಸದಸ್ಯರೂ ಕೂಡಾ ಪಾಶ್ಚಾತ್ಯ ಸಾಹಿತ್ಯದ ಶ್ರೇಷ್ಠತೆಯನ್ನು ಒಪ್ಪಿಕೊಳ್ಳುತ್ತಾರೆ (ಅದೇ)

ವಸಾಹತುಶಾಹಿ ಕಾಲಘಟ್ಟದಲ್ಲಿ ಬಂದ ಜ್ಞಾನ ಮಾದರಿಗಳು. ವಸಾಹತುಶಾಹಿ ಅಗತ್ಯಕ್ಕೆ ತಕ್ಕಂತೆ ಕೆಲವನ್ನು ಅಧಿಕೃತ ಜ್ಞಾನವೆಂದು ಕರೆಯಿತು. ವಸಾಹತುಶಾಹಿ ಆಡಳಿತವು ಒಂದು ಜ್ಞಾನವೆಂದು ಒಪ್ಪಲು ಸಿದ್ಧವಿರಲಿಲ್ಲ. ನಮ್ಮ ಅನೇಕ ಜ್ಞಾನ ಪರಂಪರೆಯ ಕಲಿಕೆಯ ಕ್ರಮವು ಕೂಡಾ ಈ ಒಂದು ಶಿಕ್ಷಣ, ವಿದ್ಯೆ (Discipline) ಎಂಬ ಅರ್ಥದಲ್ಲಿರಲಿಲ್ಲ. ವಿದ್ಯೆ ಎಂಬ ಪದವು ಶಿಕ್ಷಣದ ಜೊತೆಗೆ ಸಂಬಂಧವನ್ನು ಪಡೆದುಕೊಂಡಿರುವುದು ವೈಜ್ಞಾನಿಕತೆಯ ಉಗಮದ ಅನಂತರ. ಅಂದರೆ 'ಕಲಿಕೆ'ಯ 'ವಿದ್ಯೆ' ಎಂಬ ಚೌಕಟ್ಟಿನೊಳಗೆ ಸೇರ್ಪಡೆಯಾದಾಗ ಅದಕ್ಕೆ ಬೇರೆ ಅರ್ಥ ಬರುತ್ತದೆ. ವಸಾಹತು ಪೂರ್ವದ ನಮ್ಮ ಕಲಿಕೆಯ ಕ್ರಮಗಳು ಬೇರೆ ಬೇರೆ ರೀತಿಯವು. ಅವು ಬೇರೆ ಬೇರೆ ಸಂದರ್ಭವನ್ನು ಆಧರಿಸಿಕೊಂಡು ರೂಪುಗೊಂಡಿರುವ ಮಾದರಿಯವು. ಇದರಲ್ಲಿ ಕೇವಲ ಲಾಭದ ಉದ್ದೇಶ ಮಾತ್ರ ಇತ್ತು ಎಂದು ಹೇಳಲಾಗುವುದಿಲ್ಲ.

ಒಂದು ಪ್ರಮೇಯ ರಚಿಸಿ ಹೇಳುವುದಿದ್ದರೆ ಬ್ರಿಟೀಷ್ ಆಡಳಿತಾತ್ಮಕ ವ್ಯವಸ್ಥೆಗೆ ಸ್ಥಳೀಯ ಈ ಮಾದರಿಯ ಜ್ಞಾನ ಪರಂಪರೆಗಳು ಅಗತ್ಯವಿರಲಿಲ್ಲ. ಅಂದರೆ ಬ್ರಿಟೀಷ್ ಮಾದರಿಯ ಚಿಂತನೆಯ ಕ್ರಮಕ್ಕೂ ಅವರ ರಾಜಕೀಯ ನೀತಿಗೂ, ಅದರ ವಿಸ್ತರಣೆಯ ದೃಷ್ಟಿಕೋನಕ್ಕೂ ಸ್ಥಳೀಯ ಜ್ಞಾನ ಪರಂಪರೆಗೂ ಯಾವ ಸಂಬಂಧವೂ ಇರಲಿಲ್ಲ. ಉದಾಹರಣೆಗೆ ಬ್ರಿಟೀಷ್ ಕಂಪೆನಿ ವ್ಯವಹಾರಕ್ಕೆ ಮತ್ತು ಕಮರಿ ಬೇಸಾಯಕ್ಕೆ ಸಂಬಂಧವಿರಲಿಲ್ಲ. ಬ್ರಿಟೀಷ್ ಕಂಪೆನಿಯ ದೃಷ್ಟಿಕೋನದಿಂದ ಅದು ಲಾಭದಾಯಕವಲ್ಲ.

ಈ ದೃಷ್ಟಿಯಿಂದ ಹೊಸ ರೀತಿಯ ಜ್ಞಾನವನ್ನು ಭಾರತದಲ್ಲಿ ಬಿತ್ತುವ ಮತ್ತು ಅದರ ಮೂಲಕ ಭಾರತದ ಬುದ್ಧಿ ಜೀವಿಗಳಲ್ಲಿ ಪರೋಕ್ಷವಾಗಿಯಾದರೂ ಶಿಕ್ಷಣ ಮತ್ತು ಉದ್ಯೋಗ ಮತ್ತು ಅದಕ್ಕಿರುವ ವಿನಿಯಮದ ಮೌಲ್ಯ ಇವುಗಳಿಗೆ ಒಂದು ಸಮಾನಾಂತರವಾದ ಯೋಜನೆಯನ್ನು ಕಲ್ಪಿಸುವ ಉದ್ದೇಶ ವಸಾಹತು ಶಿಕ್ಷಣಕ್ಕಿತ್ತು. ಆದರೆ ಇದು ಬರಿಯ ವಸಾಹತುಶಾಹಿ ಶಿಕ್ಷಣದ ಪರಿಣಾಮವೆಂದು ನಾವು ಭಾವಿಸಬೇಕಿಲ್ಲ. ಮೂಲಭೂತವಾಗಿ 17-18ನೇ ಶತಮಾನದ ಹೊತ್ತಿಗೆ ಯೂರೋಪಿನಲ್ಲಿ ಶಿಕ್ಷಣ ಕ್ರಮದ ದೃಷ್ಟಿಕೋನದಿಂದ ವ್ಯಾಪಕವಾದ ಬದಲಾವಣೆಗಳು ಕಾಣಿಸಿಕೊಂಡವು. ಯಾವಾಗ ವಿಜ್ಞಾನ ಮತ್ತು ತಂತ್ರಜ್ಞಾನಗಳು ಹಾಗೂ ಬಂಡವಾಳಶಾಹಿ ವ್ಯವಸ್ಥೆ ಯುರೋಪಿನ ಸಮಾಜದಲ್ಲಿ ಕ್ರಾಂತಿಕಾರಕವಾದ ಬದಲಾವಣೆ ತಂದಿತೋ ಆವಾಗ ಅದಕ್ಕೆ ತಕ್ಕಂತೆ ಶಿಕ್ಷಣದಲ್ಲೂ ಕೂಡ ವ್ಯಾಪಕವಾದ ಬದಲಾವಣೆ ಉಂಟಾಯಿತು. ಒಂದೆಡೆಯಿಂದ ಕುಸಿಯುತ್ತಿರುವ ನೈತಿಕ ಮೌಲ್ಯಗಳು, ಸಾಮಾಜಿಕ ಬಿಕ್ಕಟ್ಟು ಪ್ರಭುತ್ವದ ಎದುರುಗಡೆ ನಿಂತ ಹೊಸ ನಾಗರಿಕ ಸವಾಲುಗಳು ಇವುಗಳಿಂದಾಗಿ ಅನಿವಾರ್ಯವಾಗಿ ಯುರೋಪಿನಲ್ಲಿ ಶಿಕ್ಷಣದ ಬಗ್ಗೆ ವ್ಯಾಪಕವಾದ ಚರ್ಚೆಗಳು ಆಗಾಗ ನಡೆಯುತ್ತಿದ್ದುದು ಗಮನಾರ್ಹ. ಶಿಕ್ಷಣದಲ್ಲಿ ನೀತಿ ಶಾಸ್ತ್ರದ ಜಾಗ ಎಷ್ಟು? ಭೂಗೋಲದ ಜಾಗವೆಷ್ಟು? ಗಣಿತದ ಜಾಗವೆಷ್ಟು? ಯಾವ ತರಗತಿಯಿಂದ ಯಾವುದನ್ನು ಕಲಿಸಬೇಕು, ಚರಿತ್ರೆ ಮತ್ತು ಸಾಹಿತ್ಯ ಇವುಗಳನ್ನು ಸಾಂಸ್ಥಿಕವಾಗಿ ಕಲಿಸುವ ಕ್ರಮ ಹೇಗೆ ಮುಂತಾದವು ಈ ಕಾಲಘಟ್ಟಗಳಲ್ಲಿ ಚರ್ಚೆಗೆ ಬಂತು ಅದರ ನೆರಳು ಸಹಜವಾಗಿಯೇ ವಸಾಹತುಶಾಹಿ ದೇಶಗಳ ಮೇಲೆಯೂ ಬಿದ್ದಿವೆ. ಯಾವಾಗ ಜ್ಞಾನ ಶಿಸ್ತುಗಳ ಸಾಂಸ್ಥಿಕ ಕಲಿಕೆಯ ಭಾಗವಾಗುತ್ತವೆಯೋ ಆಗ ಅವು ಅನೇಕ ನಿಯಮ ಸಂಹಿತೆಯ ಒಳಗಡೆ ಮತ್ತು ಕ್ರಮಬದ್ಧವಾದ ವಿಧಾನವಾಗಿಯೂ ರೂಪಿಸಲ್ಪಡುತ್ತವೆ.

ಆದರೆ ಸಾಹಿತ್ಯ ಮತ್ತು ಚರಿತ್ರೆಗೆ ದ್ವಂದ್ವಾತ್ಮಕವಾದ ಸಂಬಂಧವಿದೆ. ಚರಿತ್ರೆಯು ಸಾಹಿತ್ಯವನ್ನು ನಿಯಂತ್ರಿಸುತ್ತದೆ. ಕೃತಿಕಾರನ ಮನಸ್ಸನ್ನು ಚಾರಿತ್ರಿಕ ಒತ್ತಡಗಳು ರೂಪಿಸುತ್ತವೆ. ಹೀಗಾಗಿ ಬೇರೆ ಬೇರೆ ಚಾರಿತ್ರಿಕ ಘಟ್ಟದಲ್ಲಿ ಬೇರೆ ಬೇರೆ ರೀತಿಯ ಸಾಹಿತ್ಯ ಕೃತಿಗಳು ಸಿಗುತ್ತವೆ. ಲೇಖಕ, ಚರಿತ್ರೆಗೆ ಪೂರಕವಾಗಿಯೋ, ವಿರೋಧವಾಗಿಯೋ ಸ್ಪಂದಿಸುತ್ತಾನೆ. ಆ ಪ್ರತಿಕ್ರಿಯೆಗಳು ಬೇರೆ ಬೇರೆ ವಿಧಾನದಲ್ಲಿ ಕಾಣಿಸಿಕೊಳ್ಳಬಹುದು. ಗಾಂಧಿಯವರ ನಿಲುವು ಗಮನಾರ್ಹ.

> 'ನಮ್ಮ ಹಳ್ಳಿಗಳಿಗೆ ಅತ್ಯುತ್ತಮವಾಗಿ ಹೊಂದಿಕೊಳ್ಳುವ ಶಿಕ್ಷಣವನ್ನು
> ಕೊಡಬೇಕೆಂದರೆ, ನಮ್ಮ ವಿದ್ಯಾಪೀಠವನ್ನು ಹಳ್ಳಿಗಳಿಗೇ ಒಯ್ಯಬೇಕು.

ನಮ್ಮ ಹಳ್ಳಿಗಳ ಅಗತ್ಯಕ್ಕೆ ತಕ್ಕಂತೆ ಶಿಕ್ಷಕರಿಗೆ ಕ್ರಿಯಾತ್ಮಕ ಶಿಕ್ಷಣವನ್ನು ಕೊಡಲು ವಿದ್ಯಾಪೀಠವನ್ನು ಅಧ್ಯಾಪಕ ಶಾಲೆ ನಡೆಸಿ ಹಳ್ಳಿಗಳಿಗೆ ಬೇಕಾದ ಶಿಕ್ಷಣವನ್ನು ಶಿಕ್ಷಕರಿಗೆ ಕೊಡಲು ಸಾಧ್ಯವಿಲ್ಲ. ಹಳ್ಳಿಗಳ ಸ್ಥಿತಿಯ ಬಗ್ಗೆ ಅವರಿಗೆ ಆಸಕ್ತಿಯನ್ನು ಹುಟ್ಟಿಸಲೂ ಸಾಧ್ಯವಿಲ್ಲ. ಪಟ್ಟಣಿಗರಿಗೆ ಹಳ್ಳಿಗಳಲ್ಲಿ ರುಚಿ ಹುಟ್ಟಿಸಿ ಅವರು ಹಳ್ಳಿಗಳಲ್ಲಿ ಬಾಳುವಂತೆ ಮಾಡುವುದು ಸುಲಭವಲ್ಲ. ಸೇವಾಗ್ರಾಮದಲ್ಲಿ ದಿನವೂ ನನಗೆ ಇದು ಅನುಭವವಾಗುತ್ತಿದೆ. ಒಂದು ವರ್ಷವಾಯಿತು ನಾವು ಇಲ್ಲಿಗೆ ಬಂದು ನೆಲೆಸಿ. ನಾವೂ ಇನ್ನೂ ಹಳ್ಳಿಗರಾಗಿಲ್ಲ. ಸಮಷ್ಟಿ ಹಿತಕ್ಕಾಗಿ ನಾವು ಅವರೊಡನೆ ಬೆರೆತುಹೋಗಿದ್ದೇವೆ ಎನ್ನುವ ಹಾಗೂ ಇಲ್ಲ.

'ಇನ್ನು ಪ್ರಾಥಮಿಕ ಶಿಕ್ಷಣದ ವಿಷಯ – ಅಕ್ಷರಾಭ್ಯಾಸ, ಓದು ಬರೆಹಗಳಿಂದ ಶಿಕ್ಷಣವನ್ನು ಮೊದಲಿಟ್ಟರೆ ಬುದ್ಧಿಯ ವಿಕಾಸಕ್ಕೆ ಅಡ್ಡಿಯಾಗುತ್ತದೆ ಎಂದು ನನ್ನ ದೃಢ ಅಭಿಪ್ರಾಯ. ಮಕ್ಕಳಿಗೆ ಸ್ವಲ್ಪಮಟ್ಟಿಗೆ ಇತಿಹಾಸ, ಭೂಗೋಳ, ಮನೋಗಣಿತಗಳ ಜ್ಞಾನ, ಕಲಾಪರಿಚಯ – ನೂಲುವ ಕಲೆ ಎನ್ನಿ – ಆಗುವವರೆಗೆ ನಾನು ಅವರಿಗೆ ಅಕ್ಷರ ಕಲಿಸುವುದಿಲ್ಲ. ಈ ಮೂರರ ಮೂಲಕ ಅವರ ಬುದ್ಧಿಯನ್ನು ವಿಕಾಸಗೊಳಿಸುತ್ತೇನೆ. ತಕಲಿಯಿಂದ ರಾಟೆಯಿಂದ ಬುದ್ಧಿಯನ್ನು ಹೇಗೆ ಬೆಳೆಸುತ್ತೀರಿ ಎಂದು ಕೇಳಬಹುದು. ಬರೀ ಯಾಂತ್ರಿಕವಾಗಿ ಕಲಿಸದಿದ್ದರೆ ಅದರಿಂದ ಅತ್ಯಾಶ್ಚರ್ಯವಾಗಿ ಬುದ್ಧಿ ಬೆಳೆಯುತ್ತದೆ. ಪ್ರತಿಯೊಂದು ಕ್ರಿಯೆಗೂ ಕಾರಣ ಹೇಳಿ, ತಕಲಿ–ರಾಟೆಗಳ ರಚನೆಯ ವಿವರಗಳನ್ನು ತಿಳಿಸಿ, ಹತ್ತಿಯ ಇತಿಹಾಸವನ್ನೂ ಅದಕ್ಕೂ ನಾಗರಿಕತೆಗೂ ಇರುವ ಸಂಬಂಧವನ್ನೂ ವರ್ಣಿಸಿ, ಮಗುವನ್ನು ಹತ್ತಿಯ ಹೊಲಕ್ಕೇ ಕರೆದೊಯ್ದು, ಅವನು ನೂತ ನೂಲಿನ ಸುತ್ತುಗಳನ್ನು ಎಣಿಸಲು, ಅವನ ನೂಲಿನ ಬಲ ಸಮಾನತೆಗಳನ್ನು ಅರಿತುಕೊಳ್ಳಲು ಕಲಿಸಿದರೆ ಅವನಿಗೆ ಕಲಿತದಲ್ಲಿ ರುಚಿ ಹುಟ್ಟುತ್ತದೆ. ಅವನ ಕೈ ಕಣ್ಣು ಮನಸ್ಸುಗಳನ್ನು ಒಂದೇ ಸಲ ಒಟ್ಟಿಗೆ ತರಬೇತು ಮಾಡುತ್ತೀರಿ. ಈ ಪ್ರಾಥಮಿಕ ಶಿಕ್ಷಣಕ್ಕೆ ಆರು ತಿಂಗಳು ಸಾಕು. ಅಷ್ಟು ಹೊತ್ತಿಗೆ ಮಗು ಅಕ್ಷರ ಓದುವುದನ್ನು ಕಲಿಯಲು ಪಕ್ವವಾಗಿ ಇರುತ್ತದೆ. ಅಕ್ಷರಗಳನ್ನು ವೇಗವಾಗಿ ಓದುವ ಹೊತ್ತಿಗೆ ಚಿಕ್ಕಪುಟ್ಟ ಸರಳ ಚಿತ್ರಲೇಖನವನ್ನು ಪ್ರಾರಂಭಿಸಿದ್ದರೆ, ಪಶುಪಕ್ಷಿಗಳ ರೇಖಾಗಣಿತದ ಆಕೃತಿಗಳ ಚಿತ್ರಗಳನ್ನು ಬರೆಯತೊಡಗಿ, ಅಕ್ಷರಗಳನ್ನು ಈಗಿನಂತೆ ತಿದ್ದದೆ ತೀಡದೆ ಮುದ್ದಾಗಿ ಚಿತ್ರಿಸುತ್ತಾನೆ. ಚಿಕ್ಕಂದಿನಲ್ಲಿ ನನಗೆ ಅಕ್ಷರಾಭ್ಯಾಸ

> ಮಾಡಿಸುತ್ತಾ ಇದ್ದುದು ನೆನಪಿದೆ. ಎಷ್ಟು ಬೇಸರದ ಕೆಲಸ! ನನ್ನ ಬುದ್ಧಿಗೆ ಏಕೆ ಮಂಕು ಹಿಡಿದಿತ್ತೋ ಯಾರೂ ವಿಚಾರಿಸಲೇ ಇಲ್ಲ. ಬರವಣಿಗೆ ಒಂದು ಚಿತ್ರಕಲೆ. ಎಳೆಯ ಮಕ್ಕಳ ಮೇಲೆ ವರ್ಣಮಾಲೆಯ ಭಾರ ಹೊರಿಸಿ ಅಕ್ಷರಾಭ್ಯಾಸದಿಂದ ವಿದ್ಯಾಭ್ಯಾಸವನ್ನು ಮೊದಲಿಟ್ಟು, ಆ ಕಲೆಯನ್ನು ನಿರ್ನಾಮ ಮಾಡಿದ್ದೇವೆ. ಇತ್ತ ಆ ಕಲೆಯೂ ನಾಶ; ಕಾಲಕ್ಕೆ ಮುಂಚೆಯೇ ಅಕಾಲದಲ್ಲಿ ಅಕ್ಷರ ಕಲಿಸಿ ಅತ್ತ ಮಗುವಿನ ಬೆಳವಣಿಗೆಗೂ ಅಡ್ಡಿ. 'ನಮ್ಮ ಅನಕ್ಷರತೆಗೆ ನಾವೇನು ನಾಚಬೇಕಾಗಿಲ್ಲ. ನಮ್ಮ ಅಜ್ಞಾನಕ್ಕೆ ತಲೆತಗ್ಗಿಸಬೇಕು. ಆದುದರಿಂದ ಅಜ್ಞಾನ ನಿರ್ಮೂಲನಕ್ಕಾಗಿ ವಚುಸ್ಕರ ಶಿಕ್ಷಣದ ತೀವ್ರಕಾರ್ಯಕ್ರಮವನ್ನು ಕೈಗೊಳ್ಳಬೇಕು. ಯೋಗ್ಯರಾದ ಶಿಕ್ಷಕರನ್ನು ಆರಿಸಿ, ಜಾಗರೂಕತೆಯಿಂದ ಒಂದು ಪಾಠಕ್ರಮವನ್ನು ಅಣಿಮಾಡಿ, ಅದರ ಪ್ರಕಾರ ಗ್ರಾಮಸ್ಥರ ಮನಸ್ಸನ್ನು ತಿದ್ದಿ ಎನ್ನಬೇಕು. ಹಳ್ಳಿಯವರಿಗೆ ಅಕ್ಷರ ಕಲಿಸುವುದಿಲ್ಲವೆಂದಲ್ಲ. ವರ್ಣಮಾಲೆಯನ್ನು ಸುಲಭವಾಗಿ ಕಲಿಯಲು ಪ್ರೋ. ಲಾಬಾಕ್ ಮಾಡಿರುವ ಪ್ರಯೋಗಗಳನ್ನೂ, ಅದೇ ಮಾರ್ಗದಲ್ಲಿ ಪ್ರೋ ಭಾಗವತರು ಮಾಡಿರುವ ಕೆಲಸವನ್ನೂ ನನು ಒಪ್ಪಿದೇನೆ. ಬಿಡುವಿದ್ದಾಗ ಸೇವಾಗ್ರಾಮಕ್ಕೆ ಬಂದು ಇಲ್ಲಿನ ಗಂಡಸರಿಗೆ ಹೆಂಗಸರಿಗೆ, ಮಕ್ಕಳಿಗೆ ಕೂಡ, ನಿಮ್ಮ ಕಲೆಯ ಪರಿಚಯ ಮಾಡಿಕೊಡಿ ಎಂದು ಭಾಗವತರಿಗೆ ಬರೆದಿದ್ದೇನೆ. (ಜೀವನ ಶಿಕ್ಷಣ 1966 ಪುಟ. 32–33)

ಜಾತಿ ನಿರ್ಮೂಲನೆಯಿಂದಲ್ಲದೆ ರಾಷ್ಟ್ರೀಯತೆಯ ಅಭಿವೃದ್ಧಿಯು ಅಸಾಧ್ಯ ಎಂಬಂಥ ಪರಿಕಲ್ಪನೆಗಳು ಹುಟ್ಟಿಕೊಂಡ ಸಂದರ್ಭದಲ್ಲಿ ; ಗಾಂಧೀಜಿಯವರ ರಾಷ್ಟ್ರೀಯವಾದಿ ಆಂದೋಲನದ ಪ್ರಭಾವದ ಕಾಲದಲ್ಲಿ ಕನ್ನಡದ ಬರವಣಿಗೆಗಳು ಎಷ್ಟೊಂದು ರೀತಿಯಿಂದ ಪ್ರತಿಕ್ರಿಯಿಸಿದವು ಎಂದರೆ ಆ ಪ್ರತಿಕ್ರಿಯೆಗಳನ್ನು ನಾವು ಇನ್ನೂ ಬೇರೆ ಬೇರೆ ರೀತಿಯಲ್ಲಿ ಸಂಯೋಜಿಸಬಹುದು. ಚರಿತ್ರೆಕಾರರು, ಸಾಹಿತ್ಯ ವಿದ್ಯಾರ್ಥಿಗಳು ಜೊತೆ ಸೇರಿಕೊಂಡು ವಿಭಿನ್ನ ರೀತಿಯಲ್ಲಿ ಅಧ್ಯಯನವನ್ನು ನಡೆಸಬಹುದು. ಆದುದರಿಂದ ಚರಿತ್ರೆ, ಸಮಾಜ ಮತ್ತು ಸಾಹಿತ್ಯದ ನಡುವಣ ಸಂಬಂಧ ತುಂಬಾ ಸಂಕೀರ್ಣವಾದುದು. ನಾವು ಅದಕ್ಕೆ ಸಂಬಂಧವಿಲ್ಲವೆಂದು ತಿಳಿಯಬೇಕಾಗಿಲ್ಲ.

ಇಲ್ಲಿ ಇನ್ನೊಂದು ಅಂಶವನ್ನು ಪ್ರಸ್ತಾವಿಸಬೇಕು. ಜನರು–ಪ್ರಭುತ್ವ–ರಾಷ್ಟ್ರೀಯತೆ ಇವುಗಳ ನಡುವಿನ ಅಂತರ್ ಸಂಬಂಧವು ತುಂಬಾ ಸಂಕೀರ್ಣವಾದುದು. ಮತ್ತು ಅದರ ಅನನ್ಯತೆಯು ಬೇರೆ ಮಾದರಿಯದು. ಜನರ ಭಾವನೆಗಳಿಗೂ, ರಾಷ್ಟ್ರೀಯತೆಗೂ ಒಂದೇ ರೀತಿಯ ಅನನ್ಯತೆಯು ಇದೆಯೆಂದು ಹೇಳಲು ಬರುವುದಿಲ್ಲ.

ಶಿವರಾಮ ಕಾರಂತರು ಬರೆಯುತ್ತಾರೆ : "ಅಸಹಕಾರ ಚಳುವಳಿಯಲ್ಲಿ ಧುಮುಕಿ ಕುಂದಾಪುರವನ್ನು ಸೇರಿದಾಗ, ಮನಸ್ಸಿನಲ್ಲಿ ಗಾಂಧೀಜಿಯವರ ಆದರ್ಶವೇ ತುಂಬಿಕೊಂಡಿತ್ತು. ಅವರು 'ಹಿಂದ್ ಸ್ವರಾಜ್ಯ' ಎಂಬ ಗ್ರಂಥದಲ್ಲಿ ಬರೆದಿರುವ ಮಾತುಗಳನ್ನು ವೇದ ವಾಕ್ಯವೆಂದೇ ತಿಳಿದಿದ್ದೆ. ಯಂತ್ರಯುಗಕ್ಕೆ ಅವರು ತೀರ ವಿರೋಧಿಗಳು. ಐಹಿಕ ಬಾಳ್ವೆಯ ತಿರಸ್ಕಾರ, ಬ್ರಹ್ಮಚರ್ಯ, ಮೊದಲಾದ ಆದರ್ಶಗಳನ್ನು ನಾನು ಒಂದೇ ಗುಟುಕಿಗೆ ಕುಡಿದು, ಜೀರ್ಣಿಸಿಕೊಂಡವನಂತೆ ದೊಡ್ಡ ದೊಡ್ಡ ಕನಸುಗಳನ್ನು ಕಟ್ಟಿಕೊಂಡು ಬಾಳಲು ತೊಡಗಿದೆ" (ಹುಚ್ಚು ಮನಸ್ಸಿನ ಹತ್ತು ಮುಖಗಳು, 2002, ಪು. 37).

ಇವು ವಸಾಹತು ಅನುಭವದ ಬಗ್ಗೆ ಬೇರೆ ಬೇರೆ ಪ್ರತಿಕ್ರಿಯೆಗಳನ್ನು ಸೂಚಿಸುತ್ತದೆ. ಅಷ್ಟೇ ಅಲ್ಲ, ರಾಷ್ಟ್ರೀಯತೆಯ ಪರಿಕಲ್ಪನೆಯನ್ನು ಕೂಡಾ ಬೇರೆ ಬೇರೆ ರೀತಿಯಲ್ಲಿ ಕಂಡರಿಸುತ್ತವೆ.

"ನಮ್ಮ ಜಿಲ್ಲೆಗೆ ಸೇರಿದ ಭದ್ರಾವತಿ ಕೈಗಾರಿಕಾ ಸ್ಥಳದಲ್ಲಿ ಕೂಲಿಕಾರರು ಆತ್ಮ ಪ್ರೇರಣೆಯಿಂದ ಮುಷ್ಕರವನ್ನು ಹಿಡಿದರು. ಈ ಮುಷ್ಕರ ಪ್ರಾರಂಭವಾದೊಡನೆ ಸರ್ಕಾರದವರು ತಾವಾಗಿಯೇ ಕಾರ್ಖಾನೆಯನ್ನು ಮುಚ್ಚಿದರು. ಕೂಲಿಕಾರರ ಸಂಸ್ಥೆಯನ್ನು ನ್ಯಾಯಬಾಹಿರ ಎಂದು ಸಾರಿದರು. ಕೂಲಿಕಾರರನ್ನು ಸಮಾಧಾನಗೊಳಿಸಿ ಅವರೊಡನೆ ಒಪ್ಪಂದಕ್ಕೆ ಬಾರದೆ ಸುಮ್ಮನೆ ಕೆಣಕಿ ನೋಡಿದರು. ಕೂಲಿಕಾರರ ಕಾರ್ಯಕಾರಿ ಸಮಿತಿಯವರು ಕೆಲಸಕ್ಕೆ ಹೋಗಬೇಕೆಂದು ತೀರ್ಮಾನಿಸಿ ಬಹಿರಂಗ ಸಭೆಯ ಮುಂದಿಡಲಾಗಿ ಬಹಿರಂಗ ಸಭೆಯು ಸರ್ಕಾರದ ವರ್ತನೆಯನ್ನು ಖಂಡಿಸಿ ಕೂಲಿಕಾರರೊಡನೆ ಒಪ್ಪಂದ ಮಾಡಿಕೊಳ್ಳಬೇಕು, ಅವರ ಬೇಡಿಕೆಗಳನ್ನು ಒಪ್ಪುವುದಾದರೆ ಕೆಲಸಕ್ಕೆ ಹೋಗಬೇಕೆಂದು, ಮುಷ್ಕರವನ್ನು ಮುಂದುವರಿಸಬೇಕೆಂದು ಕಾರ್ಯಕಾರಿ ಸಮಿತಿಯವರು ನಿರ್ಧರಿಸಿ, ಒಂದೆರಡು ದಿನಗಳಲ್ಲಿಯೇ ಮುಷ್ಕರವನ್ನು ನಿಲ್ಲಿಸಲು ಪ್ರಯತ್ನಿಸುತ್ತಿದ್ದರು. ಕಾರಣವಿಲ್ಲದೆ ದಸ್ತಗಿರಿಗಳು ಪ್ರಾರಂಭವಾದದ್ದೇ ಕಾರಣವಾಗಿ ಶಾಂತ ವಾತಾವರಣವನ್ನು ಅಧಿಕಾರಿಗಳು ಕದಡಿದರು" (ಡಿ.ಎಸ್. ದಿನಕರ, 1993, ಪು. 27).

ಈ ಸಂಗತಿಗಳು ರಾಷ್ಟ್ರೀಯತೆಯು ಏಕ ಏಕತೆಯನ್ನು ಹೊಂದಿರಲಿಲ್ಲ ಎಂಬುದನ್ನು ಸೂಚಿಸುತ್ತದೆ.

ವಸಾಹತು ಶಿಕ್ಷಣದ ಪರಿಣಾಮವಾಗಿ ಪ್ರಗತಿಪರರು ಮತ್ತು ಸಂಪ್ರದಾಯವಾದಿಗಳ ನಡುವೆ ಭಿನ್ನಾಭಿಪ್ರಾಯಗಳು ಪ್ರಾರಂಭವಾದವು. ಇದು ಕೇವಲ ಸುಶಿಕ್ಷಿತರು ಮತ್ತು

ಅನಕ್ಷರಸ್ಥರ ನಡುವೆ ಮಾತ್ರ ಉಂಟಾದ ಭಿನ್ನಾಭಿಪ್ರಾಯವಲ್ಲ. ವಸಾಹತು ಮತ್ತು ವಸಾಹತೋತ್ತರ ಸಂದರ್ಭ ಎರಡರಲ್ಲಿಯೂ ಅನಕ್ಷರಸ್ಥರು, ಸಾಮಾನ್ಯ ಜನರ ಅಭಿಪ್ರಾಯಗಳ ಬಗೆಗೆ ಒಂದು ನಿರ್ದಿಷ್ಟ ಮಾನ್ಯತೆಯೆನ್ನುವುದು (Accountability) ಸಿಗಲಿಲ್ಲ. ಆದರೆ ಅಕ್ಷರಸ್ಥರರಲ್ಲಿಯೇ ಎರಡು ಗುಂಪುಗಳಿದ್ದವು. ಒಂದು ಪ್ರಗತಿಪರ ಗುಂಪು. ಇನ್ನೊಂದು ಸಂಪ್ರದಾಯವಾದಿಗಳ ಗುಂಪು. ಪ್ರಗತಿಪರರ ಗುಂಪು ವಸಾಹತುಶಾಹಿ ಸಂದರ್ಭದಲ್ಲಿ ಹೊಸ ರೀತಿಯ ಪಾತ್ರವನ್ನು ವಹಿಸಬೇಕಾಗಿ ಬಂತು. ಅವರು ನಿರ್ವಹಿಸಿರುವ ಪಾತ್ರದ ಮೇಲೆ ವಸಾಹತುಶಾಹಿ ದೃಷ್ಟಿಕೋನದ ಪ್ರಭಾವವಿದೆ. ಮತ್ತು ವಸಾಹತುಶಾಹಿ ಚಿಂತನಾಕ್ರಮವು ರೂಪಿಸಿದ ಜ್ಞಾನರೂಪಗಳ ಪರಿಣಾಮವಿದೆ. 'ವಿಧವಾ ವಿವಾಹ', 'ಸ್ತ್ರೀ ವಿದ್ಯಾಭ್ಯಾಸ', 'ಅಸ್ಪೃಶ್ಯತಾನಿವಾರಣೆ' ಇವುಗಳ ಕುರಿತು ಪ್ರಗತಿಪರರು ಚರ್ಚಿಸುತ್ತಿದ್ದರು. ಇದಕ್ಕೆ ವಿರುದ್ಧವಾಗಿ ಸಂಪ್ರದಾಯವಾದಿಗಳು ಚರ್ಚಿಸುತ್ತಿದ್ದರು. ಬ್ರಿಟೀಷರ ಪ್ರಕಾರ ರೈಲ್ವೆಯಿಂದ, ವೈಜ್ಞಾನಿಕ ಶಿಕ್ಷಣದಿಂದ, ಸ್ಥಿರವಾದ ಶಿಕ್ಷಣದಿಂದ, ಭಾರತೀಯರು ನವನಾಗರಿಕ ಜೀವನವನ್ನು ಸಾಧಿಸಿಕೊಂಡರು (ಸುದೀಪ್ತ ಕವಿರಾಜ್, ಪು. 28). ಹೆಂಗಸರ ಶಿಕ್ಷಣದ ಕುರಿತು ಗಾಂಧಿ ಹೀಗೆ ಹೇಳಿದ್ದಾರೆ.

> ಗಂಡಸು ಹೆಂಗಸು ಸಮಾನರು; ಆದರೆ ಒಂದೇ ಅಲ್ಲ. ಒಬ್ಬರಿಗೊಬ್ಬರು ಜೊತೆಯಾಗಿ, ಪೂರಕವಾಗಿ ಇಬ್ಬರೂ ಒಂದು ಸಾಟಿಯಿಲ್ಲದ ಜೋಡಿ. ಒಬ್ಬರಿಗೆ ಒಬ್ಬರು ಸಹಾಯಕರು. ಒಬ್ಬರನ್ನು ಬಿಟ್ಟು ಇನ್ನೊಬ್ಬರ ಅಸ್ತಿತ್ವವನ್ನು ಕೂಡ ಊಹಿಸುವಂತಿಲ್ಲ. ಆದ್ದರಿಂದ ಇಬ್ಬರಲ್ಲಿ ಯಾರ ಸ್ಥಾನಕ್ಕೆ ಭಂಗ ಬಂದರೂ ಇಬ್ಬರಿಗೂ ಸಮಾನವಾಗಿ ನಷ್ಟ ಎಂಬುದೂ ಅದರಿಂದ ಹುಟ್ಟಿಬರುವ ಅನಿವಾರ್ಯ ಸೂತ್ರ. ಹೆಂಗಸರಿಗಾಗಿ ಶಿಕ್ಷಣದ ಯೋಜನೆ ಮಾಡುವಾಗ ಈ ಮೂಲ ಸತ್ಯವನ್ನು ಸದಾ ಇದಿರಿಗೆ ಇಟ್ಟುಕೊಳ್ಳಬೇಕು. ದಂಪತಿಗಳಲ್ಲಿ ಹೊರಗಿನ ಕೆಲಸಗಳಲ್ಲಿ ಗಂಡಸು ಶ್ರೇಷ್ಠ. ಆದ್ದರಿಂದ ಆ ವಿಷಯದ ಜ್ಞಾನ ಅವನಿಗೆ ಹೆಚ್ಚು ಇರಬೇಕಾದ್ದು ಅಗತ್ಯ, ಉಚಿತ. ಅದೇ ರೀತಿ ಮನೆಯ ವ್ಯವಹಾರ ಅಥವಾ ಗೃಹಕೃತ್ಯ ಸಂಪೂರ್ಣವಾಗಿ ಹೆಂಗಸಿನ ಕ್ಷೇತ್ರ. ಆದ್ದರಿಂದ ಗೃಹಕೃತ್ಯದಲ್ಲಿ, ಮಕ್ಕಳ ಪಾಲನೆ-ಪೋಷಣೆ-ಶಿಕ್ಷಣಗಳಲ್ಲಿ, ಹೆಂಗಸಿಗೆ ಹೆಚ್ಚು ಜ್ಞಾನ ಇರಬೇಕಾದ್ದು ಅತ್ಯಗತ್ಯ. ಹೀಗೆಂದರೆ ಜ್ಞಾನವನ್ನು ಶಾಖೆಗಳಾಗಿ ಭಾಗಮಾಡಬೇಕೆಂದಲ್ಲ. ಕೆಲವು ಭಾಗದ ಜ್ಞಾನವನ್ನು ಕೆಲವರಿಗೆ ಕೊಡಬಾರದೆಂದಲ್ಲ. ಆದರೆ ಈ ಮೂಲತತ್ತ್ವಗಳ ವೈವಿಧ್ಯವನ್ನರಿತು ಅದಕ್ಕೆ ತಕ್ಕಂತೆ ಶಿಕ್ಷಣವನ್ನು ರೂಪಿಸದಿದ್ದರೆ ಸ್ತ್ರೀಪುರುಷರ ಪೂರ್ಣಜೀವನ ವಿಕಾಸಗೊಳ್ಳದು.

> ಹೆಂಗಸರು ಉಪಜೀವನಕ್ಕಾಗಿ ದುಡಿಯುವುದರಲ್ಲಿ, ವ್ಯಾಪಾರ ಮಾಡುವುದರಲ್ಲಿ ನನಗೆ ನಂಬಿಕೆಯಿಲ್ಲ. ಇಂಗ್ಲೀಷು ಶಿಕ್ಷಣ ಬೇಕೆನ್ನುವ ಹುಡುಗಿಯರು ಹುಡುಗರ ಶಾಲೆಗಳಿಗೆ ಸೇರಿ ಸುಲಭವಾಗಿ ತಮ್ಮ ಉದ್ದೇಶವನ್ನು ಸಾಧಿಸಬಹುದು. ಆದರೆ ಹೆಂಗಸರ ಶಾಲೆಗಳಲ್ಲಿ ಇಂಗ್ಲೀಷನ್ನು ತೂರಿಸುವುದು ನಮ್ಮ ಅಸಹಾಯತೆಗೆ ಆಯುಸ್ಸು ಎರೆದಂತೆ. ಇಂಗ್ಲೀಷ್ ಸಾಹಿತ್ಯದ ಅಮೋಘ ಸಂಪತ್ತು ಹೆಂಗಸರಿಗೂ ಗಂಡಸರಿಗೂ ಸಮವಾಗಿಯೆ ಸಿಗಬೇಕು ಎಂದು ಹೇಳುವುದನ್ನು ಆಗಾಗ ಕೇಳಿದ್ದೇನೆ. ಈ ಧೋರಣೆಯಲ್ಲೇನೋ ತಪ್ಪು ತಿಳಿವಳಿಕೆ ಇದೆಯೆಂದು ಅತ್ಯಂತ ವಿನಯದಿಂದ ತಿಳಿಸುತ್ತೇನೆ. ಈ ಸಂಪತ್ತನ್ನು ಗಂಡಸರಿಗೆ ನೀಡಿ ಹೆಂಗಸರಿಗೆ ಇಲ್ಲದಂತೆ ಮಾಡುವುದಲ್ಲ ಉದ್ದೇಶ. ಸಾಹಿತ್ಯಾಭಿರುಚಿ ಇದ್ದರೆ ಇಡೀ ಜಗತ್ತಿನ ಸಾಹಿತ್ಯವನ್ನೇ ಓದಿ. ಈ ಲೋಕದಲ್ಲಿ ನಿಮಗೆ ಅಡ್ಡಿ ಮಾಡಬಲ್ಲವರು ಯಾರೂ ಇಲ್ಲ. ಆದರೆ ಇಡೀ ಸಮಾಜದ ಆವಶ್ಯಕತೆಗಳ ದೃಷ್ಟಿಯಿಂದ ಶಿಕ್ಷಣದ ಯೋಜನೆ ಮಾಡಿದಾಗ ಸಾಹಿತ್ಯಾಭಿರುಚಿಯುಳ್ಳ ಕೆಲವರ ಆವಶ್ಯಕತೆಗಳನ್ನು ಪೂರೈಸಲು ಸಾಧ್ಯವಿಲ್ಲ.
>
> ಹೆಂಗಸರಲ್ಲಿ ನಿರಕ್ಷರತೆ ಹೆಚ್ಚು ಎಂದರೆ ಗಂಡಸರಲ್ಲಿ ಇದ್ದಂತೆ ಬರೀ ಸೋಮಾರಿತನ, ಜಡತೆಗಳು ಅದಕ್ಕೆ ಕಾರಣವಲ್ಲ. ಅನಾದಿಕಾಲದಿಂದಲೂ ಅನ್ಯಾಯವಾಗಿ ಹೆಂಗಸಿಗೆ ವಿಧಿಸಿದ ಹೀನಸ್ಥಾನವೇ ಅದಕ್ಕೆ ಹೆಚ್ಚು ಬಲವಾದ ಕಾರಣ. ತನ್ನ ಸಹಕಾರಿ 'ಉತ್ತಮಾಂಗನೆ' ಎಂದು ನಡೆಸಿಕೊಳ್ಳುವುದನ್ನು ಬಿಟ್ಟು, ಗಂಡಸು ಅವಳನ್ನು ಮನೆಗೆಲಸದ ತೊತ್ತಾಗಿ, ತನ್ನ ಭೋಗದ ಬೊಂಬೆಯಾಗಿ ಮಾಡಿದ್ದಾನೆ. ಅದರ ಫಲವೇ ನಮ್ಮ ಸಮಾಜಕ್ಕೆ ಹಿಡಿದ ಅರ್ಧ ಪಾರ್ಶ್ವವಾಯು. ಹೆಂಗಸು ವಂಶದ ತಾಯಿ. ಸರಿ. ಆಕೆಗೆ ನಾವು ಮಾಡಿರುವ ಘೋರ ಅಪರಾಧವನ್ನು ತಿದ್ದಿಕೊಳ್ಳಬೇಕಾದ್ದು ಆಕೆಗಾಗಿಯೂ ನಮಗಾಗಿಯೂ ಅಗತ್ಯ (ಜೀವನ ಶಿಕ್ಷಣ 1966 ಪುಟ. 173–175)

ವಸಾಹತುಶಾಹಿ ಸಂದರ್ಭದಲ್ಲಿ ಹೊಸ ರೀತಿಯ ಸಾಮಾಜಿಕ ನಿಯಮ ಮತ್ತು ನ್ಯಾಯ ಪದ್ಧತಿಯು ಜಾರಿಗೆ ಬಂದಿತು. ಹೊಸ ರೀತಿಯ ಶಿಕ್ಷಣ ಪದ್ಧತಿಯಿಂದ ಪಾಂಡಿತ್ಯದ ಪ್ರಶ್ನೆಯು ಬೇರೆಯಾಯಿತು. ಇದರ ಪರಿಣಾಮವಾಗಿ ಭಾರತೀಯ ಇತಿಹಾಸ (Discovery of India, Nehru) ಮತ್ತು ಸ್ಥಳೀಯ ಚರಿತ್ರೆಯ ಮಾದರಿಗಳು ಬೇರೆಯಾದವು.

ಬ್ರಿಟೀಷ್ ಮಾದರಿಯ ಶಿಕ್ಷಣ ಕ್ರಮ ಶಿಕ್ಷಣವು ಎಲ್ಲರಿಗೆ ಎಂಬುದನ್ನು ಪ್ರತಿಪಾದಿಸಿತು. ವಸಾಹತು ಕಾಲದ ಶಿಕ್ಷಣ ಕ್ರಮಕ್ಕೆ ಲಿಂಗ ತಾರತಮ್ಯ ಮತ್ತು ಜಾತಿ ತಾರತಮ್ಯ ಮುಖ್ಯವಾಗಿರಲಿಲ್ಲ. ಇದರಿಂದ ವಸಾಹತು ಕಾಲದ ಶಿಕ್ಷಣವು ಹೊಸ ಮಾದರಿಯ ಅವಕಾಶವನ್ನೂ ತೆರೆಯಿತು. ವಸಾಹತು ಪೂರ್ವದ ಶಿಕ್ಷಣ ಕ್ರಮಕ್ಕೂ – ವಸಾಹತು ಕಾಲದ ಶಿಕ್ಷಣ ಕ್ರಮಕ್ಕೂ ಇರುವ ವ್ಯತ್ಯಾಸವನ್ನು ಅರ್ಥಮಾಡಿಕೊಳ್ಳಬಹುದು. ವಸಾಹತು ಪೂರ್ವದ ಶಿಕ್ಷಣ ಕ್ರಮದಲ್ಲಿ ಜಾತಿ ತಾರತಮ್ಯ ಮತ್ತು ಲಿಂಗತಾರತಮ್ಯದ ನೀತಿಯಿದೆ. ಅಂದರೆ ಶಿಕ್ಷಣವೆನ್ನುವುದು ಎಲ್ಲರಿಗೂ ಸಮಾನ ಅವಕಾಶವನ್ನು ಕಲ್ಪಿಸಿದ ಪ್ರಕ್ರಿಯೆಯಾಗಿರಲಿಲ್ಲ. ಸಾಂಪ್ರದಾಯಿಕ ಶಿಕ್ಷಣ ಕ್ರಮದಲ್ಲಿ ಅಸ್ಪೃಶ್ಯರನ್ನು, ಮಹಿಳೆಯರನ್ನು ಹೊರಗಿರಿಸಲಾಗಿತ್ತು. ವಸಾಹತು ಕಾಲದ ಶಿಕ್ಷಣದ ಹಿಂದಿರುವ ಪ್ರಭುತ್ವ ಆಸಕ್ತಿಯು ಯಾವುದೇ ಇರಲಿ ಅದರ ಪರಿಣಾಮವು ಮಾತ್ರ ಬೇರೆಯಾಗಿತ್ತು. ಹೊಸ ಶಿಕ್ಷಣದ ಪರಿಣಾಮವಾಗಿ ಜನರನ್ನು, ಸಮಾಜವನ್ನು ಬೇರೆ ರೀತಿಯಲ್ಲಿ ಅರ್ಥಮಾಡಿಕೊಳ್ಳುವ ಅವಕಾಶ ಸಾಧ್ಯವಾಯಿತು. ಶಿಕ್ಷಣದ ಬಗ್ಗೆ ನಭಾ ಕಾದಂಬರಿಯಲ್ಲಿ ಬರುವ ಪ್ರತಿಕ್ರಿಯೆಯೂ ಈ ತರಹದ ಸಾಂಸ್ಕೃತಿಕ ಮತ್ತು ಸಾಮಾಜಿಕ ಪರಿಸ್ಥಿತಿಯಿಂದ ಹುಟ್ಟಿದೆ.

ಇಂಗ್ಲೀಷ್ ಮಾದರಿಯ ಶಿಕ್ಷಣ ಕ್ರಮದಿಂದ ಬರವಣಿಗೆಯ ಕ್ರಮದಲ್ಲಿದ್ದ ಧಾರ್ಮಿಕ ಅರ್ಥವಂತಿಕೆಯು ಹೊರಟು ಹೋಯಿತು. ಹೊಸ ರೀತಿಯ ಸಂಕಥನಗಳು ಹುಟ್ಟಿಕೊಂಡವು. ಅದು ಅವರ ಬೌದ್ಧಿಕ ಸ್ಥಾನಮಾನದ ಸೂಚನೆಯೂ ಹೌದು. ಅವರ ನಭಾ ಕಾದಂಬರಿಯು ಈ ದೃಷ್ಟಿಯಿಂದ ಒಂದು ಚಾರಿತ್ರಿಕ ಮುಖಾಮುಖಿಯ ಅಂಶವನ್ನು ಒಳಗೊಂಡಿದೆ. ಶಿಕ್ಷಣದ ಬಗ್ಗೆ ಮಹಿಳಾ ಪರವಾದ ನಿಲುವನ್ನು ತಳೆಯುವ ಅವರ ಕಾದಂಬರಿಗೆ ಈ ದೃಷ್ಟಿಯಿಂದ ಸಾಂಸ್ಕೃತಿಕ ಮತ್ತು ಚಾರಿತ್ರಿಕ ಅರ್ಥವಂತಿಕೆಯಿದೆ. ಶಿಕ್ಷಣದ ಬಗ್ಗೆ ಅತ್ಯಂತ ತೀವ್ರವಾದ ನಿಲುವು ತಿರುಮಲಾಂಬಾ ಅವರದಲ್ಲ ಎಂಬುದು ಕೂಡಾ ಅಷ್ಟೇ ಗಮನಾರ್ಹ. ಬ್ರಿಟೀಷ್ ಕಾಲದ ಭಾರತೀಯ ಶಿಕ್ಷಣ ಪದ್ಧತಿಯ ಕುರಿತು ಹೇಳುವಾಗ ಗೌರಿವಿಶ್ವನಾಥನ್ ಅವರು ಪ್ರತಿಪಾದಿಸುವ ಎರಡು ಅಂಶಗಳು ಇಲ್ಲಿ ಗಮನಾರ್ಹ (1989, ಪು. 3 ಮತ್ತು 8). ಆ ಕಾಲದ ಶಿಕ್ಷಣಕ್ಕೆ ನಿರ್ದಿಷ್ಟ ಮಾನವತೆಯ ಪ್ರಶ್ನೆಗಳು ಮುಖ್ಯವಾಗಿದ್ದವು. ಎರಡನೆಯದಾಗಿ ವಸಾಹತು ಕಾಲದ ಶಿಕ್ಷಣವು ಧಾರ್ಮಿಕೇತರ ಸ್ವರೂಪದ್ದಾಗಿತ್ತು (Non-Religious Theory of Education).

ಬ್ರಿಟೀಷ್ ಮಾದರಿಯ – ಶಿಕ್ಷಣ ಕ್ರಮವು ಸಾಂಸ್ಥಿಕ ರೂಪದ್ದು. ಮತ್ತು ಕಲಿಕೆಯ ಕ್ರಮ ನೀತಿ ಸಂಹಿತೆಯನ್ನು ರೂಪಿಸಿತು. ಬ್ರಿಟೀಷರು ಶಿಕ್ಷಣ ರೂಪಿಸುವಾಗ ತಮಗೆ

ಬೇಕಾದ ರೀತಿಯಲ್ಲಿ ಪಠ್ಯ ಕ್ರಮಗಳನ್ನು ನಿಗದಿಪಡಿಸಿದರು. ಇದರಿಂದ ಶಿಕ್ಷಣದಲ್ಲಿ ಏಕರೂಪತೆಯು ಬಂತು. ಶಿಕ್ಷಣಕ್ಕೆ ಸಂಬಂಧಿಸಿ ಹೇಳುವುದಾದರೆ ವಸಾಹತುಶಾಹಿ ಅನುಭವದ ಸಂದರ್ಭದಲ್ಲಿ ದ್ವಿಮುಖವಾದ ಪ್ರಯೋಜನಕ್ಕೆ ಕಾರಣವಾಯಿತು. ಶಿಕ್ಷಣದ ವಿಷಯದಲ್ಲಿ ಇಂಗ್ಲೀಷರು ಭಾರತೀಯರನ್ನು ತಮಗೆ ಬೇಕಾದಂತೆ ಪರಿವರ್ತಿಸುವ ಪ್ರಯತ್ನ ಮಾಡಿದರು. ಮತ್ತೊಂದು ಕಡೆಯಿಂದ ಭಾರತೀಯರಿಗೂ ಇದನ್ನು ಅಂಗೀಕರಿಸುವ ಹೊಸ ಅರಿವಿನ ಸಾಧ್ಯತೆಯು ರೂಪುಗೊಂಡಿತು. ಇದರೊಂದಿಗೆ ಮುಕ್ತಾಯ ಮುನ್ನ ಮೂರು ಅಂಶಗಳನ್ನು ನಾವು ಮನಗಾಣಬಹುದು.

1. ಬ್ರಿಟೀಷರು ಶಿಕ್ಷಣವನ್ನು ಹೇರಿದ್ದು ತಮ್ಮ ಅನುಕೂಲಕ್ಕೆ ಇದರಿಂದ ಬ್ರಿಟೀಷ್ ಪ್ರಭುತ್ವ ರೂಪಿಸಿದ ಶಿಕ್ಷಣ ಕೇವಲ ರಾಜಕೀಯವಾಗಿರಲಿಲ್ಲ. ಆದರೆ ಅದು ಪ್ರಭುತ್ವದ ಸಾಂಸ್ಕೃತಿಕ ವಿಸ್ತರಣೆಯಾಗಿತ್ತು. ಇದು ಹೇರುವಿಕೆಯ ಸಂಕೇತ.
2. ರಾಷ್ಟ್ರೀಯತಾವಾದಿ ಆಂದೋಲನವು ಹುಟ್ಟು ಹಾಕಿದ ಶಾಲೆಗಳು ಮೂಲತಃ ಗಾಂಧಿ ಪ್ರಣೀತ ಶಿಕ್ಷಣ ಕ್ರಮವನ್ನು ಅನ್ವಯಿಸಲು ಪ್ರಯತ್ನಿಸಿತು. ಇದರಿಂದ ಶಿಕ್ಷಣ ಕ್ರಮಕ್ಕೆ ಸಂಬಂಧಿಸಿದಂತೆ ರಾಷ್ಟ್ರೀಯವಾದಿ ಚಳುವಳಿಯು ನಿರಾಕರಣೆಯ ತತ್ವವನ್ನು ಅಳವಡಿಸಿಕೊಂಡಿತು. ಇದು ಸ್ವಯಂ ಮಾದರಿಗಳ ಶಿಕ್ಷಣ ಕ್ರಮ ಹುಟ್ಟಿಗೆ ಕಾರಣವಾಯಿತು. ಉದಾ : ಸ್ವಾವಲಂಬನೆ ಮತ್ತು ಶಿಕ್ಷಣ ಎರಡೂ ಪರಸ್ಪರ ಪೂರಕವೆಂದು ರಾಷ್ಟ್ರೀಯ ಆಂದೋಲನ ಗ್ರಹಿಸಿರುವುದು. ಇದು ಶಿಕ್ಷಣ ಕ್ರಮದಲ್ಲಿ – ಪಠ್ಯದ ಕಲಿಕೆಯಲ್ಲಿ ಬ್ರಿಟೀಷ್ ನೀತಿಯನ್ನು, ಸ್ವಾವಲಂಬನೆಯ ಸಂದರ್ಭದಲ್ಲಿ ನಿರಾಕರಣೆಯನ್ನು ಏಕಕಾಲಕ್ಕೆ ರೂಪಿಸಿತು.
3. ಮೆಕಾಲೆ ಮುಂತಾದವರು ಬಂದ ನಂತರ ಶಿಕ್ಷಣದಲ್ಲಿ ಸಂಮಿಶ್ರ ರೂಪದ ತಿಳುವಳಿಕೆಯನ್ನು ಕಾಣುತ್ತೇವೆ. ಇದರಿಂದ ಸಾಂಪ್ರದಾಯಿಕ ಶಿಕ್ಷಣ ಕ್ರಮದ ವಿದಾಯ, ಹೊಸ ಶಿಕ್ಷಣದ ನಡುವಣ ದ್ವಂದ್ವ ಕಾಣಿಸಿತು. ಇದು ಗಮನಾರ್ಹವಾಗಿದೆ.

ವಿಜ್ಞಾನ, ತಂತ್ರಜ್ಞಾನ, ಅರ್ಥಶಾಸ್ತ್ರವು ಆ ಕಾಲದಲ್ಲಿ ಪರಕೀಯವಾದರೂ, ಬ್ರಿಟೀಶ್ ಆಢಳಿತ ದೆಸೆಯಿಂದ ಸಾಂಸ್ಕೃತಿಕ ಅನನ್ಯತೆಗೆ ಮತ್ತು ಅದು ಸಾಮಾಜಿಕ ಅಂತರಂಗದ ಬದಲಾವಣೆಗಳಿಗೆ ಕಾರಣವಾಯಿತು (ಪಾರ್ಥ ಚಟರ್ಜಿ, 1997, ಪು. 6). ಕ್ರಿಶ್ಚಿಯನ್ ಮಿಶನರಿಗಳು ಮತಾಂತರಕ್ಕೆ ಪ್ರಚೋದಿಸುವಾಗ ಸರಕಾರದ ರಾಜಕೀಯ ದೃಷ್ಟಿಕೋನವನ್ನು ಮತ್ತು ಅದು ಸರಕಾರದ ಬೆಂಬಲವನ್ನು ಪಡೆದಿರುವುದು ಸುಳ್ಳಲ್ಲ. ಅದಕ್ಕೆ ಕಾನೂನಿನ ಸಂರಕ್ಷಣೆಯೂ ಬೇಕಾಗಿತ್ತು. ಏಕ ಕಾಲಕ್ಕೆ ಬ್ರಿಟೀಶ್ ಸರಕಾರವು

ಒಂದು ಕಡೆಯಿಂದ ಅಧಿಕಾರವನ್ನು ; ಮತ್ತೊಂದು ಕಡೆಯಿಂದ ಸತಿನಿಷೇಧ ; ಶಿಶು ಹತ್ಯೆಯ ನಿರಾಕರಣೆ, ಮತಾಂತರದ ಅವಕಾಶವನ್ನು ಸೃಷ್ಟಿಸಿತು. ಇದರಿಂದ ರಾಜಕೀಯ ಪ್ರಭುತ್ವವು ಯಜಮಾನಿಕೆಯನ್ನು ವಹಿಸುವುದರ ಜೊತೆಗೆ ಸಾಂಸ್ಕೃತಿಕ ಬದಲಾವಣೆಗೂ ಕಾರಣವಾಯಿತು. ಮತಾಂತರವು ಒಂದು ಧರ್ಮದಿಂದ ಮತ್ತೊಂದು ಧರ್ಮಕ್ಕೆ ಪರಿವರ್ತನೆಗೊಳ್ಳುವ ಅವಕಾಶ. ಗಾಂಧಿ ಧರ್ಮಾಂತರದ ಬಗ್ಗೆ ಹೇಳಿರುವ ಎರಡು ಸಂಗತಿಗಳು ಗಮನಾರ್ಹ.

> ಹಿಂದೂ ಧರ್ಮವನ್ನು ಬಿಟ್ಟು ಇಸ್ಲಾಂ ಅಥವಾ ಕ್ರಿಶ್ಚನ್ ಧರ್ಮಕ್ಕೆ ಒಟ್ಟಾಗಿಯೇ ಮತಾಂತರ ಹೊಂದುವುದು ಹರಿಜನರಿಗೆ ಸೂಚಿಸಲಾದ ಪರಿಹಾರಗಳಲ್ಲಿ ಒಂದಾಗಿದೆ. ಒಂದು ಧರ್ಮವನ್ನು ಬಿಟ್ಟಕೊಡುವುದರಿಂದ ಐಹಿಕ ಉನ್ನತಿ ಆಗುತ್ತಿದ್ದರೆ, ನಾನು ಹಿಂದುಮುಂದು ನೋಡದೆ ಹಾಗೆ ಸೂಚಿಸುತ್ತಿದ್ದೆ. ಆದರೆ ಧರ್ಮವು ಹೃದಯಕ್ಕೆ ಸಂಬಂಧಿಸಿದುದು. ಎಷ್ಟೇ ದೈಹಿಕ ಅನಾನುಕೂಲ ವುಂಟಾದರೂ ಸ್ವಧರ್ಮವನ್ನು ತ್ಯಜಿಸಕೂಡದು. ಪಂಚಮರನ್ನು ಇಂಥ ಅಮಾನುಷ ರೀತಿಯಿಂದ ನಡೆಸಿಕೊಳ್ಳುವುದು ಹಿಂದೂ ಧರ್ಮದ ಒಂದು ಅಂಗವೇ ಆಗಿದ್ದರೆ, ಧರ್ಮವನ್ನು ಒಂದು ಕುರುಡು ನಂಬಿಗೆಯನ್ನಾಗಿ ಪರಿಗಣಿಸದ ನನ್ನಂತವರಿಗೂ ಮತ್ತು ಇತರರಿಗೂ ಅದನ್ನು ತ್ಯಜಿಸಿ, ಅದರ ಪವಿತ್ರ ಹೆಸರಿನಲ್ಲಿ ನಡೆಯುವ ಎಲ್ಲ ಕೆಡುಕನ್ನು ಕ್ಷಮಿಸಿಬಿಡುವುದು ಒಂದು ಪ್ರಧಾನ ಕರ್ತವ್ಯವಾಗುತ್ತಿದ್ದಿತು. ಆದರೆ, ಅಸ್ಪೃಶ್ಯತೆಯು ಹಿಂದೂ ಧರ್ಮದ ಒಂದು ಅಂಗವಾಗಿಲ್ಲ ಎಂದು ನಾನು ನಂಬಿದ್ದೇನೆ. ನಮ್ಮ ಎಲ್ಲ ಪ್ರಯತ್ನಗಳಿಂದಲೂ ನಿವಾರಿಸಲ್ಪಡಬೇಕಾದ ಮೇಲಿನ ಅನವಶ್ಯಕ ಬೆಳವಣಿಗೆ ಅದು. ಹಿಂದೂ ಧರ್ಮದಿಂದ ಈ ಕಲಂಕವನ್ನು ತೆಗೆದುಹಾಕಲು ಸ್ಥಿರಸಂಕಲ್ಪ ಮಾಡಿರುವ ಅಸಂಖ್ಯ ಹಿಂದೂ ಸುಧಾರಕರಿದ್ದಾರೆ. ಆದ್ದರಿಂದ ಧರ್ಮಾಂತರವು ಯಾವ ರೀತಿಯಲ್ಲಿಯೂ ಒಂದು ಪರಹಾರವಲ್ಲವೆಂದು ನನ್ನ ಅಭಿಪ್ರಾಯ.
>
> (ಯಂಗ್ ಇಂಡಿಯಾ, 27-10-20)
>
> (ಅಸ್ಪೃಶ್ಯತೆ ಮೋ.ಕ.ಗಾ. 1960 ಪುಟ. 96-97)

ಮತಾಂತರವು ಕ್ರಿಶ್ಚಿಯನ್ ಧರ್ಮದ ಪ್ರಾಯೋಗಿಕ ಸಾಧ್ಯತೆಯನ್ನು ಒಳಗೊಂಡಿತ್ತು. ಎಲ್ಲರಿಗೂ ತಿಳಿದಿರುವಂತೆ ಕ್ರಿಶ್ಚಿಯನ್ ಧರ್ಮವು 'ಪುನರ್ ಜನ್ಮ'ವನ್ನು ನಿರಾಕರಿಸುತ್ತದೆ. ಈ ರೀತಿಯ ಮತಾಂತರವು ವ್ಯಕ್ತಿತ್ವದಲ್ಲಿ ಮಹತ್ವಪೂರ್ಣವಾದ ಬದಲಾವಣೆಯನ್ನು

ತರುತ್ತದೆ. ಈ ಮೂಲಕ ಮಿಶನರಿಗಳು ಪ್ರಾರಂಭಿಸಿದ ಶಾಲೆ–ಕಾಲೇಜುಗಳು ಮಾನಸಿಕ ಪರಿವರ್ತನೆಗಳನ್ನು ತಂದವು. ಇವು ಹೊಸ ರೀತಿಯ ಬೌದ್ಧಿಕ ಸಂವಾದಗಳನ್ನು ಸೃಷ್ಟಿಸಿದವು. ಈ ಮೂಲಕ 'ಪ್ರಗತಿಪರತೆ' ಮತ್ತು ವೈಯಕ್ತಿಕತೆಯ ಪ್ರಾಶಸ್ತ್ಯವು ಹೆಚ್ಚಾಯಿತು. ಚಾರ್ಲ್ಸ್ ಗ್ರಾಂಟ್ ಭಾರತದ ಕಾನೂನು, ಕಲೆ, ಕೃಷಿ ಪದ್ಧತಿ, ಕರಕುಶಲ ಕಲೆಗಳು, ಜನರ ವರ್ತನೆಗಳು, ಅವರ ಅಭ್ಯಾಸಗಳನ್ನು ಕಟುವಾಗಿ ಟೀಕಿಸುತ್ತಾನೆ (Eric Stokes, p. 31 31). ಬ್ರಿಟೀಶ್ ಸರಕಾರ, ಕಾನೂನು, ಆಡಳಿತ ವ್ಯವಸ್ಥೆಯು ಭಾರತೀಯ ಧರ್ಮಕ್ಕಿಂತ ಮೇಲಿನದು. ಅನೇಕ ಬ್ರಿಟೀಶ್ ಗವರ್ನರ್‌ಗಳು ಭಾರತೀಯ ಕೃಷಿ ಪದ್ಧತಿಯನ್ನು ಇದೇ ರೀತಿ ನೋಡಿದರು. ಕೃಷಿ ಎಂದರೆ ಮಾರುಕಟ್ಟೆ, ಕೃಷಿಯ ಜಮೀನು ಎಂದರೆ ಖಾಸಗಿ ಆಸ್ತಿ. ಕೃಷಿಯ ಉತ್ಪನ್ನವೆಂದರೆ ಮಾರುಕಟ್ಟೆಗೆ ಇಳಿಯುವ ಸ್ಪರ್ಧಾತ್ಮಕ ಕ್ರಮವೆಂದು ಅವರ ಭಾವನೆಯಾಗಿತ್ತು. ಆದರೆ ಭಾರತೀಯ ರೈತ ಸಮುದಾಯ ಈ ರೀತಿಯ ಚೌಕಟ್ಟನ್ನು ಹೊಂದಿರಲಿಲ್ಲ. ಕಾರಂತರ 'ಕುಡಿಯರ ಕೂಸು' ಕಾದಂಬರಿಯಲ್ಲಿ ಬರುವ ಚಿತ್ರಣಗಳನ್ನು ಇಲ್ಲಿ ನೆನಪಿಸಿಕೊಳ್ಳಬಹುದು. ಅಲ್ಲಿ ಮುಕ್ತ ಮಾರುಕಟ್ಟೆಯಾಗಲೀ, ಅದರ ಸ್ಪರ್ಧಾತ್ಮಕ ಸಂಗತಿಯಾಗಲಿ ಮುಖ್ಯವಲ್ಲ. ಮತ್ತು ಕುಡಿಯರು ಖಾಸಗಿ ಜಮೀನು ಹೊಂದಿರಲಿಲ್ಲ. ಅವರ ಕೃಷಿ ಪದ್ಧತಿಯು 'ಕುಮ್ಮರಿ' ಬೇಸಾಯವನ್ನು ಒಳಗೊಂಡಿತ್ತು. ಈ ಸಂಗತಿಗಳು ಬ್ರಿಟೀಶ್ ಮಾದರಿಯ ಆಡಳಿತ ಕ್ರಮಕ್ಕೆ ಅರ್ಥವಾಗುವುದು ಸಾಧ್ಯವಿರಲಿಲ್ಲ. ಭಾರತದ ಒಟ್ಟು ಬದಲಾಗಬೇಕಾದ ಪರಿಸ್ಥಿತಿಯನ್ನು ಬ್ರಿಟೀಶರು ಪ್ರತಿಪಾದಿಸಿದರು. ಗ್ರಾಂಟ್ ಮತ್ತೊಂದು ಸಂದರ್ಭದಲ್ಲಿ ಹೇಳುತ್ತಾನೆ: ಯುರೋಪ್ ಮಾದರಿಯಲ್ಲಿ ಪುನರ್‌ಸ್ಥಾಪನೆ (Eric Stokes, p. 31) ಅಗತ್ಯ. ದೈವದ ನಂಬಿಕೆಯಿಂದ ಜನರು ಬಿಡುಗಡೆಯಾಗಲು ಭಾರತದಲ್ಲಿಯೂ ಯುರೋಪ್ ಮಾದರಿಯ ಶಿಕ್ಷಣ ಅಗತ್ಯವೆಂದು ಅವನು ಪ್ರತಿಪಾದಿಸಿದ. ಇದರ ಮೂಲಕ ಸಮಾಜದ ಪರಿವರ್ತನೆಯಾಗುತ್ತದೆ. ಜನರನ್ನು ಹೆಚ್ಚು ನಾಗರಿಕರನ್ನಾಗಿ ಮಾಡಿದಂತಾಗುತ್ತದೆ. ವೈಯಕ್ತಿಕ ಅಭಿವೃದ್ಧಿ ಸಾಧ್ಯ. ಜನರ ಜ್ಞಾನವು ಉತ್ತುಂಗಕ್ಕೇರುತ್ತದೆ.

1820 ರಿಂದ 1870 ರ ಅವಧಿಯು ಸಾಮಾಜಿಕ ಪರಿವರ್ತನೆಯ ಯುಗ ಎಂಬುದನ್ನು ಪಾರ್ಥಚಟರ್ಜಿಯವರು ಹೇಳುತ್ತಾರೆ (1997, ಪು. 5). ಶಿಕ್ಷಣ ಮತ್ತು ಕ್ರಿಶ್ಚಿಯಾನಿಟಿಯು ಭಾರತದಲ್ಲಿ ಅನೇಕ ಪರಿವರ್ತನೆಗಳನ್ನು ತಂದಿತು. 'ಅಸ್ಪೃಶ್ಯತೆಯನ್ನು ಹೋಗಲಾಡಿಸಬೇಕು' ವೈಜ್ಞಾನಿಕ ಚಿಂತನೆಯು ಬೆಳೆಯಬೇಕು – ಮುಂತಾದವು ಇದರ ಪ್ರತಿಫಲವಾಗಿದೆ. ಗ್ರಾಂಟ್‌ನ ಕಾಲದಲ್ಲಿ ಬ್ರಿಟೀಶ್ ಸರಕಾರದ ಆಡಳಿತ ನೀತಿಯು ಪ್ರಗತಿಯನ್ನು ಸಾಧಿಸಿತು. ಬ್ರಿಟೀಶ್ ಸರಕಾರದ ಆರ್ಥಿಕ ನೀತಿಯು ವರ್ತಕ ಶಾಹಿಯನ್ನು

ಉದಾರವಾಗಿ ನೋಡಿತು. ಇದು ಯುರೋಪಿನ ಜನರು ನೆಲೆಯೂರುವುದಕ್ಕೆ ಸಹಾಯ ಮಾಡಿತು. ಮಿಶನರಿಗಳ ಕೆಲಸವು ಒಂದೆಡೆಯಿಂದ ತನ್ನ ಉದ್ದೇಶವನ್ನು ಈಡೇರಿಸಿಕೊಂಡಂತೆ, ಮತ್ತೊಂದು ಕಡೆಯಿಂದ ವಾಣಿಜ್ಯ ಕ್ಷೇತ್ರವು ಪ್ರಗತಿಯನ್ನು ಕಂಡುಕೊಂಡಿದ್ದರಿಂದ ಬೇರೆ ಬೇರೆ ಪರಿಣಾಮಗಳು ವಸಾಹತು ದೇಶಗಳಲ್ಲಿ ಕಾಣಿಸಿಕೊಂಡವು. ಬೇರೆ ಬೇರೆ ಗವರ್ನರ್ ಜನರಲ್‌ಗಳು ಬಂದಾಗಲೆಲ್ಲಾ ಕಾನೂನುಗಳು ಬದಲಾಗುತ್ತಾ ಹೋಗಿರುವುದು ಅವರ ನಿರ್ಣಯಗಳನ್ನು ಮಾತ್ರ ಸೂಚಿಸುವುದಿಲ್ಲ. ಅದರ ಹಿನ್ನೆಲೆಯಲ್ಲಿ ಬ್ರಿಟನ್‌ನಲ್ಲಿ ಉಂಟಾದ ಏರುಪೇರುಗಳು ಕೂಡಾ ಕಾರಣವಾಗಿವೆ.

"ರಾಷ್ಟ್ರೀಯ ಮಟ್ಟದ ಒಂದು ಬೌದ್ಧಿಕ ವಲಯವು ಅಖಿಲ ಭಾರತ ವಲಯಕ್ಕೆ ತೆರೆದುಕೊಂಡಿತು. ಇದು ವಸಾಹತು ಕಾಲದಲ್ಲಿ ಭಾರತದಲ್ಲಿ ಕಾಣಿಸಿಕೊಂಡ ಒಂದು ರೀತಿಯ ಪ್ರಕ್ರಿಯೆಯಾಗಿದೆ. ಉಚ್ಚ ವರ್ಗದವರು ಮತ್ತು ಮಧ್ಯ ವರ್ಗದವರು ವಸಾಹತು ಆಡಳಿತ, ಕಾನೂನು, ವ್ಯವಹಾರ ನೀತಿ, ಇಂಗ್ಲೀಷ್ ಭಾಷೆಯ ಕಲಿಕೆ, ಪತ್ರಿಕೋದ್ಯಮ, ಕಾಲೇಜುಗಳಲ್ಲಿ ಉಪನ್ಯಾಸಕ ವೃತ್ತಿಗೆ ತೊಡಗಿದರು. ಈ ಮೂಲಕ ಬ್ರಿಟೀಶ್ ಪ್ರಭುತ್ವಕ್ಕೆ ಹತ್ತಿರವಾದರು"[4] (ಏಜಾಜ್ ಅಹಮದ್, 1999, In Theory, p. 76)

ಬ್ರಿಟೀಶ್ ಮಾದರಿಯ ರೈತರನ್ನು ರೂಪಿಸುವುದು ಆಗಿನ ಅಧಿಕಾರಿಗಳಿಗೆ ಮುಖ್ಯವಾಗಿತ್ತು. ಕೃಷಿಯ ಉತ್ಪಾದನೆಯು ರಫ್ತು ಮಾಡುವುದರಿಂದ ಆಗುವ ಲಾಭವನ್ನು ಕೃಷಿಕರಿಗೆ ತೋರಿಸಬೇಕಾಗಿತ್ತು. ಹಾಗೆಯೇ ಪ್ರಭುತ್ವವು ತನ್ನ ಕೈಗಾರಿಕೆಗಳಿಂದ ತಯಾರಾದ ವಸ್ತುಗಳನ್ನು ಭಾರತದ ಮಾರುಕಟ್ಟೆಯಲ್ಲಿ ಮಾರಬೇಕಾಗಿತ್ತು. 1813ರ ಹೊತ್ತಿಗಾಗಲೇ ಲಾಂಕಶೈರ್ ಬಟ್ಟೆಗಳು ಭಾರತೀಯ ಮಾರುಕಟ್ಟೆಯಲ್ಲಿ ಸಿಕ್ಕತೊಡಗಿದವು. ಆಗಿನ ವಿದೇಶಿ ವರ್ತಕ ಜನಾಂಗಗಳಿಗೆ ಇಂಗ್ಲೀಷ್ ಕಾನೂನು, ಅದರ ಬೆಳವಣಿಗೆಗೆ ಪೂರಕವಾಗಿದ್ದವು. ಖಾದಿಯ ಅರ್ಥಶಾಸ್ತ್ರದ ಬಗ್ಗೆ ಗಾಂಧಿ ಹೀಗೆ ಹೇಳುತ್ತಾರೆ.

> **"ನಮ್ಮ ವಿದೇಶೀವಸ್ತ್ರದ ಪ್ರೇಮವೇ ರಾಟೆಯನ್ನು ಅದರ ಗೌರವಾನ್ವಿತ ಸ್ಥಾನದಿಂದ ಉಚ್ಚಾಟನೆ ಮಾಡಿತು. ಅಂತಲೇ ವಿದೇಶೀವಸ್ತ್ರಧಾರಣೆ ಪಾಪವೆಂದು ನಾ ಗ್ರಹಿಸುತ್ತೇನೆ. ಅರ್ಥಶಾಸ್ತ್ರ–ನೀತಿಶಾಸ್ತ್ರಗಳ ನಡುವೆ ನಾನೇನೂ ಹರಿತವಾದ ಅಥವಾ ಯಾವುದೇ ಎಳೆ ಬಿಡಿಸುವುದಿಲ್ಲ. ವ್ಯಕ್ತಿಯ ಅಥವಾ ಒಂದು ರಾಷ್ಟ್ರದ ನೈತಿಕ ಸ್ವಾಸ್ಥ್ಯಕ್ಕೆ ಧಕ್ಕೆ ತಗಲಿಸುವ ಅರ್ಥಶಾಸ್ತ್ರ ಅನೀತಿಪರ, ಆದಕಾರಣ ಪಾಪಕರ. ಹಾಗೆಯೇ ಒಂದು ದೇಶವನ್ನು ಇನ್ನೊಂದು ದೇಶ ಕಿತ್ತುತಿನ್ನಲು ಅನುಮತಿಸುವ ಅರ್ಥಶಾಸ್ತ್ರವೂ ಅನೀತಿಪರ. ಜೀತದ ದುಡಿಮೆಯಿಂದಾದ**

ವಸ್ತುಗಳನ್ನು ಕೊಳ್ಳುವುದು, ಬಳಸುವುದು ಪಾಪಕರ. ಅಮೆರಿಕದ ಗೋಧಿಯನ್ನು ಉಂಡು ನೆರೆಯ ವರ್ತಕ ಗಿರಾಕಿಯಿಲ್ಲದಂತೆ ಉಪವಾಸ ಸಾಯುವಂತೆ ಮಾಡುವುದು ಪಾಪಕರ. ನನ್ನ ನೆರೆಹೊರೆಯ ನೂಲುವುದು, ನೇಯುವವರು ತಯಾರಿಸಿದ ಬಟ್ಟೆಯನ್ನು ಉಪಯೋಗಿಸಿದರೆ ನನಗೆ ಬಟ್ಟೆಯೂ ಆದೀತು, ಅವರಿಗೆ ಹೊಟ್ಟೆಗೂ ಬಟ್ಟೆಗೂ ಕೊಟ್ಟಂತೆ ಆದೀತೆಂದು ತಿಳಿದೂ ರೀಜೆಂಟ್ ಸ್ಟ್ರೀಟ್‌ನ ಆತ್ಯಾಧುನಿಕ ಮಾದರಿ ವಸ್ತ್ರ ಧರಿಸುವುದೂ ಹಾಗೆಯೇ ನನಗೆ ಪಾಪಕರ. ಈ ಪಾಪದ ಗಡಿಗೆ ತುಂಬಿ ಒಡೆಯುತ್ತಿದೆಯೆಂದು ಅರಿವಾದ ಮೇಲೆ ಈ ವಿದೇಶೀ ವಸ್ತ್ರಗಳನ್ನು ಬೆಂಕಿಗೆ ಆಹುತಿ ಕೊಟ್ಟು ನನ್ನನ್ನು ಪಾವನಗೊಳಿಸಿಕೊಳ್ಳಬೇಕು, ಮುಂದೆ ನೆರೆಯವರು ತಯಾರಿಸಿದ ಒರಟು ಖಾದಿ ಧರಿಸಿಯೇ ತೃಪ್ತನಾಗಬೇಕು. ನನ್ನ ನೆರೆಹೊರೆಯವರು ಒಮ್ಮೆ ಬಿಟ್ಟುಕೊಟ್ಟ ರಾಟೆಯನ್ನು ಮತ್ತೆ ಕೈಗೊಳ್ಳಲಾರರೆಂಬುದಕ್ಕಾಗಿ ನಾನೇ ಮೊದಲು ಅದನ್ನು ನಡೆಸಲು ತೊಡಗಬೇಕು. ಅದನ್ನು ಹಾಗೆ ಜನಪ್ರಿಯಗೊಳಿಸಬೇಕು. (ಅರ್ಥವಿಚಾರ 2011 ಪುಟ. 129)

ಇಲ್ಲಿಯ ಜನರನ್ನು ಬೌದ್ಧಿಕವಾಗಿ ಬೆಳೆಯಬೇಕೆಂದೂ, ಅವರಿಗೆ ಹೊಸ ಜ್ಞಾನ ರೂಪಿತವಾಗಬೇಕೆಂದು ಭಾವಿಸಿದ್ದ. ಬ್ರಿಟೀಶ್ ಆಡಳಿತ ಅದರಿಂದ ಅವರ ಜೀವನದಲ್ಲಿ ಸುಧಾರಣೆಯಾಗುತ್ತದೆ. ಈ ದೃಷ್ಟಿಯಿಂದ ಯುರೋಪಿನ ನಾಗರಿಕತೆಯು ಭಾರತದ ಬಗ್ಗೆ ಸ್ವಯಂ ಕೇಂದ್ರಿತ ಮನೋಭಾವ ಇಟ್ಟುಕೊಳ್ಳಬಾರದು ಎಂದು ಪ್ರತಿಪಾದಿಸಿತು. ಪೋರ್ಟ್ ವಿಲಿಯಂ ಕಾಲೇಜು 1800ರಲ್ಲಿ ಪ್ರಾರಂಭವಾಯಿತು. 1857–58ರ ಕಾಲಾವಧಿಯಲ್ಲಿ ಮೂರು ವಿಶ್ವವಿದ್ಯಾನಿಲಯಗಳೂ ಶುರುವಾದವು. ಇಂಡಿಯಾದ ಜನರಿಗೆ ಅವರದೇ ಆದ ಅರಸರಿದ್ದರು. ಆದರೂ ಇಲ್ಲಿಯ ಜನರು ನಮ್ಮ ಬಟ್ಟೆಗಳನ್ನು ಕೊಂಡುಕೊಳ್ಳುತ್ತಾರೆ. ನಮ್ಮ ಅಂಗಡಿಗಳಲ್ಲಿ ದುಡಿಯುತ್ತಾರೆ. ಭಾರತೀಯರು ಇಂಗ್ಲಿಷ್ ಕಲೆಕ್ಟರುಗಳಿಗೆ, ಇಂಗ್ಲಿಷ್ ಮ್ಯಾಜಿಸ್ಟ್ರೇಟರುಗಳಿಗೆ ಸಲಾಂ ಹೊಡೆಯುತ್ತಾರೆ. ಅವರ ಮೌಲ್ಯಗಳು ಅವರಿಗೆ ತಿಳಿಯದಷ್ಟು ಮುಗ್ಧರಾಗಿದ್ದಾರೆ. ಯುರೋಪಿನ ವಾಣಿಜ್ಯ ನೀತಿಯು ಅವರನ್ನು ನಾಗರಿಕರನ್ನಾಗಿಸುತ್ತದೆ. ಆದುದರಿಂದ ಅವರನ್ನು ಗುಲಾಮರ ರೀತಿ ನೋಡುವುದಕ್ಕೆ ಅರ್ಥವಿಲ್ಲ. ಅವರನ್ನು ನಮ್ಮ ಗಿರಾಕಿಗಳ ಥರ ನೋಡಬೇಕೇ ಹೊರತು ಗುಲಾಮರಂಥಲ್ಲ ಎಂದು ಗ್ರಾಂಟ್ ಪ್ರತಿಪಾದಿಸಿದ.

ನೂರು ಮಿಲಿಯ ಜನರು ನಮ್ಮ ಗಿರಾಕಿಗಳು. ಇದರ ಮೂಲಕ ಅವರನ್ನು ನಮ್ಮ ಮೇಲೆ ಅವಲಂಬಿತರನ್ನಾಗಿ ಮಾಡಬೇಕು ಎಂಬುದು ಮೆಕಾಲೆಯ ನೀತಿ. ಈ ಮೂಲಕ ಇಂಡಿಯಾದ ಮನಸ್ಸುಗಳ ಮೇಲೆ ನಿಯಂತ್ರಣ ಸಾಧಿಸಲು ಪ್ರಯತ್ನಪಟ್ಟ,

ಅವನ ಕೈಯಲ್ಲಿ ಖಡ್ಗವಿರಲಿಲ್ಲ. ಯುರೋಪ್ ಮಾದರಿಯ ಚಿಂತನೆಯ ಕ್ರಮವಿತ್ತು. ಅದರ ಪ್ರಭಾವವು ಭಾರತೀಯರ ಮೇಲಾಗುವಂತೆ ನೋಡಿದ. ಅದಕ್ಕಾಗಿ ಪ್ರಭುತ್ವವು ಶಿಕ್ಷಣದ ಮೂಲಕ ಭಾರತೀಯರ ಮನಸ್ಸಿನ ಮೇಲೆ ಆಡಳಿತ ನಡೆಸುವತ್ತ ಅವನು ಗಮನ ಹರಿಸಿದ. ಹೊಸ ಜ್ಞಾನ ಪರಂಪರೆಯ ಅರಿವು ಮೂಡಲು ಅವನು ಯುರೋಪಿನ ಶಿಕ್ಷಣ ಕ್ರಮವನ್ನು ಜಾರಿಗೆ ತಂದ. ಯುರೋಪಿನ ಶಿಕ್ಷಣ ಕ್ರಮವು ಭಾರತೀಯರಿಗೆ ಹೇಗೆ ಉತ್ತಮ ನಡೆನುಡಿಯನ್ನು ಕಲಿಸಬಹುದು ಎಂಬುದು ಮಾತ್ರ ಅವನ ಗುರಿಯಾಗಿತ್ತು. ಅನೇಕರು ಅದನ್ನು ಒಪ್ಪಿದ್ದರು. ಮೆಕಾಲೆಯ ಶಿಕ್ಷಣದ ನೀತಿ (ಮೆಕಾಲೆಯ ಮಿನಿಟ್, 1835)ಯ ಹಿಂದಿನ ದೃಷ್ಟಿಕೋನವಿದು.

ಜಾನ್ ಸ್ಟುವರ್ಟ್‌ಮಿಲ್ (1823) ಅವನ ತಂದೆ ಜೇಮ್ಸ್ ಮಿಲ್‌ನ ಕುರಿತು ಹೀಗೆ ಹೇಳುತ್ತಾನೆ : "ಅವನು ಒಳ್ಳೆಯ ಸರಕಾರ ಕೊಟ್ಟ. ಭಾರತೀಯ ಪ್ರಜೆಗಳನ್ನು ಯಾವುದೇ ರೀತಿಯಲ್ಲಿ ಒತ್ತಡ ಹೇರದೆ. ಅವರು ಒಂದು ರೀತಿಯಲ್ಲಿ ಕಂಪೆನಿಯ ಸರಕಾರದಿಂದ ಪ್ರಯೋಜನ ಪಡೆಯುವಂತೆ ಮಾಡಿದ. ಅವನಿಗೆ ಪ್ರಾಯೋಗಿಕತೆ ಅರಿವು ಇತ್ತು. ಭಾರತೀಯ ವಾಸ್ತವ ಗೊತ್ತಿತ್ತು. ಕಂಪೆನಿಯ ಸರಕಾರವು ಅವರಿಗೆ ನೀಡಬಹುದಾದ ಸಕಲ ಪ್ರಯೋಜನವನ್ನು ಪಡೆಯಲಿ ಎಂಬ ಉದ್ದೇಶವಿತ್ತು. 1824 ಕಂಪೆನಿಯು ಆರ್ಥಿಕ ಪ್ರಯೋಜನ ಪಡೆಯಲಿ ಎಂಬ ಕಾರಣಕ್ಕೆ ತನ್ನ ಆರ್ಥಿಕ ಚಟುವಟಿಕೆಯನ್ನು ಪ್ರಾರಂಭಿಸಿದ. ಇದು ಇಂಗ್ಲೀಷರ ಉಪಯುಕ್ತತಾ ಸಿದ್ಧಾಂತವನ್ನು (Utilitarian Theory) ರೂಪಿಸಲು ಕಾರಣವಾಯಿತು. ಬೆಂಟಿಂಕ್ ಭಾರತೀಯ ಪ್ರಜೆಗಳಿಗೆ ಹೊಸ ರೀತಿಯ ಮಾಪನ ಪದ್ಧತಿಯನ್ನು ಜಾರಿಗೆ ತರಲು ಪ್ರಯತ್ನಿಸಿದ. ಆದರೆ ರಾಜಕೀಯುವಾಗಿ ಬೆಂಟಿಂಕ್ ಸರಳ ವ್ಯಕ್ತಿಯಾಗಿರಲಿಲ್ಲ. ಇಂಗ್ಲಿಷ್ ಉಪಯೋಗತಾವಾದಿ ಚಿಂತನೆಗಿಂತ ಗಾಂಧಿ ನಿಲುವು ಭಿನ್ನವಾಗಿತ್ತು.

ಇಲ್ಲಿ ಗಾಂಧಿ ನಿಲುವನ್ನು ಪ್ರಸ್ತಾವಿಸಬಹುದು.

> **ಧಾರ್ಮಿಕ ಶಿಕ್ಷಣಕ್ಕೆ ಅವಕಾಶ ಮಾಡಿಕೊಟ್ಟು ಶಾಲೆಗಳಲ್ಲಿ ಅದಕ್ಕೆ ವೇಳೆಯನ್ನು ಗೊತ್ತು ಮಾಡಬೇಕು; ಧರ್ಮವನ್ನು ಬಲ್ಲವರು ಒಂದು ಪಾಠ ಹೇಳಲಿ. ಆದರೆ ಸರಕಾರದವರು ಹೆಚ್ಚೇನೂ ಮಾಡಬಾರದು ಎಂದರು' ಡಾ. ಜಾಕಿರ್ ಹುಸೇನ್.**
>
> **ಉತ್ತರವಾಗಿ ಗಾಂಧೀಜಿ ಹೇಳಿದರು: 'ಮೌಲಾನಾ ಸಾಹೇಬರ ಕೂಡ ಮಾತನಾಡಿ ನೋಡಿ. ಸರಕಾರ ಧಾರ್ಮಿಕ ಶಿಕ್ಷಣವನ್ನು ಒದಗಿಸಬೇಕೆಂಬುದನ್ನು ನಾನು ಒಪ್ಪುವುದಿಲ್ಲ. ತಪ್ಪು ರೀತಿಯ ಧಾರ್ಮಿಕ ಶಿಕ್ಷಣ ಕೊಡಬೇಕೆಂಬ ಜನರಿದ್ದರೆ ಅದನ್ನು**

ತಡೆಯಲಾಗಲಿಕ್ಕಿಲ್ಲ. ಹಾಗೆ ಮಾಡಿದರೆ, ಪರಿಣಾಮ ಕೆಟ್ಟದೇ ಆದೀತು. ಧಾರ್ಮಿಕ ಶಿಕ್ಷಣ ಕೊಡುವವರು ತಾವೇ ವ್ಯವಸ್ಥೆ ಮಾಡಿಕೊಳ್ಳಲಿ. ಆದರೆ ನ್ಯಾಯ – ನೀತಿಗೆ ವಿರುದ್ಧವಾಗಿರಬಾರದು, ಸರ್ವಧರ್ಮಗಳಿಗೂ ಸಮಾನವಾದ, ಎಲ್ಲಾ ಗುಂಪುಗಳಿಗೂ ಒಪ್ಪಿಗೆಯಾಗುವ ಮುಖ್ಯ ನೀತಿಧರ್ಮವನ್ನು ಮಾತ್ರ ಸರಕಾರ ಕಲಿಸಬಹುದು. ವಸ್ತುತಃ ನಮ್ಮದು ಮತಾತೀತ ರಾಷ್ಟ್ರ'. (ಜೀವನ ಶಿಕ್ಷಣ 1966 ಪುಟ. 125–126)

ಜೇಮ್ಸ್ ಮಿಲ್ (1820) History of India ಕೃತಿಯನ್ನು ರಚಿಸಿದ. ಅವನ ವಾದಗಳು ಹೀಗಿವೆ :

1. ಶಿಕ್ಷಣವು ವ್ಯಕ್ತಿಯ ಮನಸ್ಸನ್ನು ತಿದ್ದುತ್ತದೆ.
2. ಇದು ಭಾರತದಲ್ಲಿ ಅತ್ಯಂತ ಅಗತ್ಯವಾಗಿ ರೂಪುಗೊಳ್ಳಬೇಕಾದ ಪ್ರಕ್ರಿಯೆಯಾಗಿದೆ.
3. ಅದು ಸಾರ್ವಜನಿಕರ ನಡೆ–ನುಡಿಗಳನ್ನು ತಿದ್ದುತ್ತದೆ.

ಇದಕ್ಕೆ ಪ್ರತಿಕ್ರಿಯೆ ಎಂಬ ರೀತಿಯಲ್ಲಿ ಗಾಂಧಿ ಹೀಗೆ ಹೇಳುತ್ತಾರೆ:

"ಈಗ ನನ್ನ ಅಭಿಪ್ರಾಯವೇನೆಂದರೆ, ಭಾರತ ವರ್ಷದಲ್ಲಿರುವ ಎಲ್ಲ ಶಿಕ್ಷಣ ಕ್ರಮದಲ್ಲಿಯೂ ಮಾತ್ರ ಭಾಷೆಯಲ್ಲದೆ ಹಿಂದಿ, ಸಂಸ್ಕೃತ, ಪಾರಸಿ, ಅರಬ್ಬಿ ಮತ್ತು ಇಂಗ್ಲೀಷ್‌ಗೆ ಸ್ಥಾನ ಕೊಡಬೇಕು (ಗಾಂಧಿ, ಸತ್ಯ ಶೋಧನೆ ಐ, ಪು. 20).

ಮಿಲ್‌ನ ಸಿದ್ಧಾಂತವು ಕಾನೂನು ಮತ್ತು ತೆರಿಗೆಯ ಪದ್ಧತಿಯಲ್ಲಿ ಹೊಸ ಮಾದರಿಯನ್ನು ರೂಪಿಸಿತು. 1958ರಲ್ಲಿ ಹಿಂದೂ ಕಾನೂನಿನ ಸಂಸ್ಥೆಯನ್ನು ವರ್ಣ ಸಿದ್ಧಾಂತದ ಕೆಲಸದ ವರ್ಗೀಕರಣ Division of Labour ಪರಿಕಲ್ಪನೆಯಿಂದ ವಿವರಿಸುತ್ತಾನೆ. ಮತ್ತು ಇದು ಹಿಂದೂ ಸಮಾಜದ ಪ್ರಾಥಮಿಕ ಅಂಶಗಳು ಎಂದು ಭಾವಿಸುತ್ತಾನೆ (Ronald Inden, 1990, p. 57).

ಮಿಲ್ಲನ ಪ್ರತಿಪಾದನೆಯ ಪ್ರಮುಖ ಅಂಶಗಳು ಹೀಗಿವೆ :

1. ಶಿಕ್ಷಣವು ಭಾರತೀಯರಲ್ಲಿ ಒಂದು ನೈತಿಕ ಪ್ರಜ್ಞೆಯನ್ನು ರೂಪಿಸಲು ಕಾರಣವಾಗುತ್ತದೆ.
2. ಅದು ಭಾರತೀಯ ಸಮಾಜದ ತಿದ್ದುಪಡಿಗೆ ಅನುಕೂಲ ಕಲ್ಪಿಸುತ್ತದೆ.
3. ಕಾನೂನು ಇರುವುದು ಸರಕಾರದ ನಿಲುವುಗಳನ್ನು ಅರ್ಥೈಸಿಕೊಳ್ಳುವುದಕ್ಕೆ.
4. ಭಾರತೀಯ ಬಡ ಜನರು ಮುಗ್ಧರಾಗಿದ್ದಾರೆ.
5. ಬಡ ಜನರ ಮುಗ್ಧತೆಯು ಕೆಟ್ಟ ಕಾನೂನು ಮತ್ತು ಕೆಟ್ಟ ಸರಕಾರಕ್ಕೆ ಕಾರಣವಾಗಿದೆ.

6. ಸರಕಾರವು ಈ ಅಂಶಗಳ ಬಗ್ಗೆ ಗಮನವನ್ನು ಕೊಡಬೇಕು.

ಮೆಕಾಲೆಯು ಇದೇ ನೆರಳಿನಲ್ಲಿ ಮುಂದುವರಿಯುತ್ತಾನೆ. ಇವರಲ್ಲಿ ನೈತಿಕ ಮೌಲ್ಯ ಮತ್ತು ನೈತಿಕ ಅಧಿಕಾರ ಕೇಂದ್ರವನ್ನು ರೂಪಿಸಲು ಕಾರಣವಾಯಿತು. ಡಫ್‌ನ ಶೈಕ್ಷಣಿಕ ಸಿದ್ಧಾಂತವು ಧರ್ಮ ಮತ್ತು ಶಿಕ್ಷಣವು ಬೇರೆ ಬೇರೆಯೆ ಎಂದು ಪ್ರತಿಪಾದಿಸಿತು.

ಭಾರತದಲ್ಲಿ ಉದಾರ, ಸ್ವತಂತ್ರ ಅರ್ಥಶಾಸ್ತ್ರವನ್ನು ಬ್ರಿಟೀಷ್ ಯುಗವು ಹುಟ್ಟುಹಾಕಿತು. ಇದು ರಿಕಾರ್ಡೊ (Ricardo) ಅರ್ಥಶಾಸ್ತ್ರವನ್ನು ಅವಲಂಬಿಸಿದುದು, ಕುವೆಂಪು ಇದನ್ನು 'ಬಂಡವಾಳದ ಜಿಗಣೆ' ಎಂದು ಕರೆಯುತ್ತಾರೆ. ಇಲ್ಲಿ ಫಂಕೋ ಹೇಳುವ ಮಾತೊಂದನ್ನು ನೆನಪಿಸಿಕೊಳ್ಳಬೇಕು. ಹಣದ ಎರಡು ಕೆಲಸವೆಂದರೆ ಸಾಮಾನ್ಯ ಮಾಪನವನ್ನು (Common Measure) ವಸ್ತುವಿಗೆ ಅನ್ವಯಿಸಿ ಅದರ ಬೆಲೆಯನ್ನು ನಿಗದಿಗೊಳಿಸುವುದು. ವಸ್ತುವಿಗೆ ಇರುವ ನಿಜವಾದ ಮೌಲ್ಯವನ್ನು ನಿರ್ಧರಿಸಿ, ಅದಕ್ಕೆ ವಿನಿಮಯ ಮೌಲ್ಯವೇನು ಎಂದು ತಿಳಿದುಕೊಳ್ಳುವುದು (1997, ಪು. 169). ವಿದೇಶಿ ವರ್ತಕ ಶಾಹಿ ಮತ್ತು ಅದರ ಶೈಕ್ಷಣಿಕ ವ್ಯವಸ್ಥೆಯು ಒಂದಕ್ಕೊಂದು ಪೂರಕವಾಗಿದ್ದವು. ಇಂಗ್ಲಿಷ್ ಶಿಕ್ಷಣ ಪದ್ಧತಿಯಲ್ಲಿ ಜ್ಞಾನದ ಪರಿಕಲ್ಪನೆಯು ಬದಲಾಯಿತು. ಆಧುನಿಕ ಮಾನವನ ನವೀನ ದೃಷ್ಟಿಯು ರಚನೆಯಲ್ಲಿ ವಿಜ್ಞಾನದ ಪ್ರಭಾವವು ಬಹು ಮುಖ್ಯವಾದ ಭಾಗವಹಿಸಿಕೊಂಡಿದೆ (ಕುವೆಂಪು, ಹೊಸ ಸಾಹಿತ್ಯ, ಹೊಸ ದೃಷ್ಟಿ).

ಮಿಲ್ ಮತ್ತೊಂದು ಅಂಶವನ್ನು ಹೇಳುತ್ತಾನೆ. ಭಾರತದಲ್ಲಿರುವ ಬಡತನವು ಕ್ರಿಮಿನಲ್ ಮನೋವೃತ್ತಿಗೂ ಕಾರಣವಾಗಿದೆ.

ಪಾರ್ಥ ಚಟರ್ಜಿಯವರು ಹೇಳುತ್ತಾರೆ : 'ವಸಾಹತುಶಾಹಿ ಅನುಭವದ ಕಾಲದಲ್ಲಿ ಸಾಮಾನ್ಯ ಮನುಷ್ಯ. ಅಕ್ಷರ ಸ್ಥರ ನಡುವೆ ಅಂತರ ಬೆಳೆಯಿತು. ಸುಶಿಕ್ಷಿತರು ಯುರೋಪ್ ರೂಪಿಸಿದ ಜ್ಞಾನ ಜಗತ್ತಿನ ಚೌಕಟ್ಟಿನೊಳಗೆ ಪ್ರವೇಶಿಸಿದರು'. ಈ ದೃಷ್ಟಿಯಿಂದ ವಸಾಹತು ಸಂದರ್ಭ ಭಾರತದಲ್ಲಿ ಹೊಸದೊಂದು ಸಂದರ್ಭವನ್ನು ಹುಟ್ಟುಹಾಕಿತು.

ಆದರೆ ವಸಾಹತುಶಾಹಿಯ ಆರ್ಥಿಕ ಸಿದ್ಧಾಂತ, ಶಿಕ್ಷಣ ಸಿದ್ಧಾಂತ, ನಾಗರಿಕತೆಯ ಸಿದ್ದಾಂತ ಇವುಗಳು ಬೇರೆ ರೂಪಗಳನ್ನು ತಾಳಿದ್ದವು. ಆದರೆ ಮನುಷ್ಯರ ನಿಜವಾದ ರೂಪವೆಂದರೆ ಯಾವುದು ಎಂದು ಅರ್ಥಮಾಡಿಕೊಳ್ಳದ ಸ್ಥಿತಿಯದು (Fanon, p. 30).

ವಸಾಹತುಕಾಲದ ಪ್ರಮುಖ ಅಂಶವೆಂದರೆ, ಕಾನೂನಿನ ಬಗ್ಗೆ ಹೊಸ ತಿರುವು ಕಾಣಿಸಿಕೊಂಡದ್ದು. ಸರಕಾರವು ಕಾನೂನಿನ ಮುಖಾಂತರ ಭಾರತೀಯರ ಮನಸ್ಸನ್ನು ಹಿಡಿತದಲ್ಲಿರಿಸಿಕೊಳ್ಳಲು ಪ್ರಯತ್ನಿಸಿತು. ಅಧಿಕಾರವೆಂದರೆ ಅದು ವಸ್ತು ನಿಷ್ಠ. ಅದರಲ್ಲಿ

ವೈಯಕ್ತಿಕ ಭಾವನೆಗಳ ಅವಕಾಶವಿಲ್ಲ. ಮಿಲ್ ಹೆಚ್ಚು ಕಂದಾಯ ಹೇರದೆ, ಒಳ್ಳೆಯ ಕಾನೂನು ರೂಪಿಸಿದ. ಮನ್ರೋ ಆಡಳಿತ ವ್ಯವಸ್ಥೆ, ಕಂದಾಯ ವ್ಯವಸ್ಥೆ, ಪೋಲೀಸ್ ವ್ಯವಸ್ಥೆ ಮತ್ತು ಮ್ಯಾಜಿಸ್ಟ್ರೇಟ್ ಅಧಿಕಾರವನ್ನು ಜೊತೆಜೊತೆಗೆ ಅಳವಡಿಸಿದ (Eric Stokes, 1989, p. 80). ಇವು ಭಾರತೀಯ ಸಾಂಪ್ರದಾಯಿಕ ಸಮಾಜದ ಮೇಲೆ ಪರಿಣಾಮ ಉಂಟುಮಾಡಿದವು. ಇದನ್ನು ಮರೆಯುವ ಹಾಗಿಲ್ಲ. ಬ್ರಿಟೀಶ್ ಆಡಳಿತ ಪದ್ಧತಿಯು ಹೀಗಾಗಿ ಏಕಮುಖವಾಗಿರಲಿಲ್ಲ : ಮಿಶನರಿಗಳು, ವರ್ತಕರು, ಆಡಳಿತಕಾರರು, ಸೈನಿಕರು, ವಿದೇಶೀ ಸಂಸ್ಕೃತಿಗಳು, ಹದಿನೇಳನೆಯ ಶತಮಾನದ ಯುರೋಪಿನಲ್ಲುಂಟಾದ ಪರಿವರ್ತನೆಗಳು ; ಆರ್ಥಿಕ ಸಿದ್ಧಾಂತಗಳು ಭಾರತದ ಮಣ್ಣಿನಲ್ಲಿ ಹೊಸ ಪರಿಕಲ್ಪನೆಯನ್ನು ರೂಪಿಸಿದವು. ಭಾರತೀಯ ಸಾಮಾಜಿಕ ಸ್ಥಿತ್ಯಂತರಗಳಿಗೆ ಇವು ಕಾರಣವಾದವು. ಯುರೋಪಿನಿಂದ ಬಂದವರು ತಮ್ಮ ಜೊತೆಯಲ್ಲಿ ಹೊಸತನ್ನು ತಂದರು. ಅವರಿಗೆ ಭಾರತವು ಪ್ರಯೋಗಶಾಲೆ, ಅವುಗಳ ಸಾಂಸ್ಕೃತಿಕ ಪರಿಣಾಮಗಳು ಬೇರೆ. ಅವರು ತಂದರು. ಭಾರತೀಯರು ಸ್ವೀಕರಿಸಿದರು. ಕೆಲವನ್ನು ಅವರಿಗೆ ಕೊಟ್ಟರು. ಆದುದರಿಂದ ವಸಾಹತುಶಾಹಿ ಯುಗದಲ್ಲಿ ಉಂಟಾದ ಪಲ್ಲಟಗಳು ಸಾಮಾನ್ಯವಾಗಿರಲಿಲ್ಲ. ಆಸ್ಪತ್ರೆ, ಶಿಕ್ಷಣ, ಆಡಳಿತ, ವ್ಯವಹಾರಗಳು ಕೈಗಾರಿಕೆಗಳು ಬ್ರಿಟೀಶರಿಂದಾಗಿ ಹೊಸ ಪರಿಕಲ್ಪನೆಗಳ ಉದಯಕ್ಕೆ ಕಾರಣವಾದವು. ಬ್ರಿಟೀಶ್ ನೀತಿಗೆ ಅನೇಕ ಮುಖಗಳಿವೆ – 'ನಾವು' ಮತ್ತು 'ಅವರು' ಬೇರೆ ಬೇರೆ ಎಂಬ ತಿಳಿವಿಗೆ ಕಾರಣವಾಯಿತು. ಒಂದು ಉದಾಹರಣೆಯ ಮೂಲಕ ಇದನ್ನು ಮುಕ್ತಾಯಗೊಳಿಸಬಹುದು. ನಮ್ಮ ಆಯುರ್ವೇದ (ವೇದ ಎಂಬುದನ್ನು ಒತ್ತುಕೊಟ್ಟು ಗಮನಿಸಬೇಕು) ನಮ್ಮ ನಾಟ್ಯವೇದ (ಭರತನ ಪರಿಕಲ್ಪನೆ), ನಮ್ಮ ವಿದ್ಯಾದಾನ (ದಾನ ಪದವನ್ನು ಗಮನಿಸಬೇಕು). ನಮ್ಮ ಕೃಷಿಯಲ್ಲಿದ್ದ ಭೂ ಮಾತೆಯ ಕರುಣೆ, ನಮ್ಮ ಸಮಯದ ಪರಿಕಲ್ಪನೆ (ಹುಣ್ಣಿಮೆ–ಅಮಾವಾಸ್ಯೆ) ಮುಂತಾದವುಗಳ ಬದಲಿಗೆ 'ಆಲೋಪತಿಕ್', 'ಶಿಕ್ಷಣ ಸಂಸ್ಥೆ' ಕೈಗೆ ಗಡಿಯಾರ. ಕುಡಿಯಲು ಕಾಫಿ, ಕೃಷಿಯ ಉದ್ದಿಮೆಗಳು ಭಾರತೀಯ ರೈತರನ್ನು ಬದಲಿಸಿತು. ಕೃಷಿ ಜಮೀನಿನಲ್ಲಿ ಬಿರುಗಾಳಿ ಕಾಣಿಸಿತು. ವ್ಯಕ್ತಿಯು ಒಬ್ಬ ಘಟಕವಾದ (Individual) ಬಾಯಿ ಮಾತಿನ ಪಾವಿತ್ರ್ಯ ಕಾನೂನಿನ ರೂಪಾಂತರಕ್ಕೆ ಒಳಗಾದವು. ಆಣೆ, ಪ್ರಮಾಣದ ಬದಲಿಗೆ ಕುಂಪಣಿ ಸರಕಾರ ಲಿಖಿತ ಆಧಾರ ಕೇಳಿತು. ಬಡ ರೈತರ ಮೇಲೆ ಕಂದಾಯ ಎಂಬ ಮೂಟೆ ಹೊರಿಸಲಾಯಿತು. ಸುಶಿಕ್ಷಿತರು ಕೋಟು ಧರಿಸಲು ಶುರು ಮಾಡಿದರು. ನೈತಿಕ ಪ್ರಜ್ಞೆ

ಬದಲಾಯಿತು. ವಿಲಾಯತಿಯ ವಸ್ತ್ರ, ಆಡಳಿತ ತಂತ್ರಜ್ಞಾನ, ಕಂದಾಯ, ಮಿಶನರಿಗಳು ಹೊಸ ಆಮಿಷ ಒಡ್ಡಿದವು. ಇದಕ್ಕೆ ವಿರುದ್ಧವಾಗಿ ವಿಲಾಯತಿಯ ವಸ್ತ್ರಗಳ ಬಹಿಷ್ಕಾರ ಉಪ್ಪಿನ ಸತ್ಯಾಗ್ರಹ. ಕರನಿರಾಕರಣೆ ಚಳುವಳಿ, ಅನಾರೋಗ್ಯಕ್ಕೆ ಉಪವಾಸದ ಮಂತ್ರ, ಕೃಷಿಕರಿಗೆ ಸ್ವಾವಲಂಬನೆಯ ದಾರಿ (ಕೃಷಿಯು ಭೋಗಕ್ಕಲ್ಲ) ಎಂಬ ಹಾದಿಯನ್ನು ಗಾಂಧಿ ಹೇಳಿದರು. ಹೀಗಾಗಿ ಬ್ರಿಟೀಶರೊಂದಿಗಿನ ಮುಖಾಮುಖಿಗೆ (ನಾವು ಮತ್ತು ಅವರು) ಹಲವು ದಾರಿಗಳು ಕಾಣಿಸಿದವು. ಟಿಪ್ಪು ಖಡ್ಗ ತೆಗೆದುಕೊಂಡ. ಗಾಂಧಿ ಸತ್ಯಾಗ್ರಹ ಪ್ರಾರಂಭಿಸಿದರು. ಮಿಶನರಿಗಳು ಆಸ್ಪತ್ರೆ ಪ್ರಾರಂಭಿಸಿದರು. ನಮ್ಮವರು 'ಒಂದೆಲಗ' ತಿಂದರೆ ನೆನಪಿನ ಶಕ್ತಿ ವೃದ್ಧಿಸುತ್ತದೆಯೆಂದರು. ಆದುದರಿಂದ ಪರಂಗಿಯವರ ದೈಹಿಕ ಬಿಳಿ, ಮುಖವಾಡದಲ್ಲಿದ್ದ ಹಿಂಸೆ – ಒಂದು ಧ್ರುವ. ನಮ್ಮ ಸಣ್ಣ ಹಿಡುವಳಿದಾರರು, ಕೆಳ ಜಾತಿಯವರು, ಸಾಮಾನ್ಯರು ಇನ್ನೊಂದು ಧ್ರುವ, ಗಾಂಧಿ ಎರಡನೆಯವರಲ್ಲಿದ್ದ 'ನಿಜಶಕ್ತಿ' (ಇದು ವಿಸ್ಮೃತಿಗೆ ಒಳಗಾಗಿಲ್ಲ)ಯಿಂದ ಹೋರಾಟ ಪ್ರಾರಂಭಿಸುತ್ತಾರೆ. ಅದು ನಮ್ಮ ಮುಖ್ಯ ಗ್ರಹಿಕೆಯೊಳಗೆ ಬರಬೇಕು.

ವಸಾಹತೋತ್ತರ ಸಂದರ್ಭದಲ್ಲಿ ಜರುಗಿದ ಮಹತ್ವದ ಶೈಕ್ಷಣಿಕ ಬದಲಾವಣೆಯು ಇಲ್ಲಿ ಉಲ್ಲೇಖನೀಯ.

1986ರ ಶಿಕ್ಷಣ ನೀತಿಯು ಮೊಟ್ಟಮೊದಲನೆಯ ಏಕರೂಪದ ಶಿಕ್ಷಣ ನೀತಿ ಎಂದು ಹೇಳಲಾಯಿತು. ಅಂದರೆ 1968ರ ಶಿಕ್ಷಣ ನೀತಿಯು ಭಿನ್ನರೂಪದ್ದು ಎನ್ನುವ ಅರ್ಥ ಬರುತ್ತದೆ. ಎನ್‌ಸಿಎಫ್– 2005ರಲ್ಲಿ ಹೇಳಿರುವಂತೆ 1986ರ ಶಿಕ್ಷಣ ನೀತಿಯಲ್ಲಿ 'ಒಂದು ರಾಷ್ಟ್ರೀಯ ಪಠ್ಯಕ್ರಮದ ಚೌಕಟ್ಟನ್ನು ತಯಾರಿಸಿಕೊಡುವ ಮತ್ತು ನಿರ್ದಿಷ್ಟ ಅವಧಿಯ ನಂತರ ಅದನ್ನು ಆಗಾಗ ಮರುಪರಿಶೀಲಿಸುವ ಹೊಣೆಯನ್ನು ಎನ್‌ಸಿಇಆರ್‌ಟಿಗೆ ಒಪ್ಪಿಸಲಾಗಿದೆ' ಎಂಬ ಬಗ್ಗೆ ಒಂದು ಶಬ್ದವೂ ಇಲ್ಲ (ಇಂತಹ ಸಡಿಲವಾದ, ಕರಾರುವಕ್ಕಾಗಿರದ ಹಲವಾರು ಹೇಳಿಕೆಗಳು ಎನ್‌ಸಿಎಫ್–2005ರಲ್ಲಿದ್ದು ಅವುಗಳನ್ನೆಲ್ಲಾ ಆಯ್ದು ತೋರಿಸುವುದು ಬಹಳ ಆಯಾಸದ ಕೆಲಸ). ಈ ಮೊದಲು ಹೇಳಿದಂತೆ, ಎನ್‌ಸಿಎಫ್ಎಸ್ಇ–2000ದ ಮರುಪರಿಶೀಲನೆ ಎನ್ನುವ ಹೆಸರಿನಲ್ಲಿ ಒಂದು ಹೇಳಿಕೆ ಮಾತ್ರ ಕಾಣಿಸಿಕೊಂಡಿದೆ. ಆದರೆ 1988ರ ಪಠ್ಯಕ್ರಮದ ಚೌಕಟ್ಟಿನ ಮರುಪರಿಶೀಲನೆಯನ್ನು ವಿಸ್ತಾರವಾಗಿ ಒಂದು ಇಡೀ ಪರಿಚ್ಛೇದದಲ್ಲಿ ಮಾಡಲಾಗಿದೆ. ಬೇರೆ ಬೇರೆ ಕೋರ್ಸುಗಳ ಮೂಲಕ ಮತ್ತು ಪಠ್ಯಪುಸ್ತಕಗಳ ಮೂಲಕ ಈ 1988ರ ಚೌಕಟ್ಟನ್ನು ಕಾರ್ಯರೂಪಕ್ಕೆ ತಂದದ್ದೇ ಈ ಪಠ್ಯಕ್ರಮದ ಹೊರೆ ಎಲ್ಲಾ ಕೆಡುಕುಗಳಿಗೆ ಮೂಲವಾಯಿತು ಎಂದು ಇಲ್ಲಿ ಗುರುತಿಸಲಾಗಿದೆ. ಇದರಿಂದ 'ಪಠ್ಯಕ್ರಮದ

ಹೊರೆ ಹೆಚ್ಚಾಯಿತು ಮತ್ತು ಬಾಲ್ಯದಲ್ಲಿರುವ ಮತ್ತು ಹದಿಹರೆಯದಲ್ಲಿರುವ ಮಕ್ಕಳ ಮನಸ್ಸಿನ ಮೇಲೆ ಕಲಿಕೆಯ ಭಾರೀ ಒತ್ತಡ ಬೀಳತೊಡಗಿತು'. ಎನ್‌ಸಿಎಫ್‌ಎಸ್‌ಇ–2000ದ ಮೇಲೆ ಕೊಡಲಾದ ಏಕಮಾತ್ರ ಹೇಳಿಕೆಯು ಹೀಗಿದೆ: "2000ದಲ್ಲಿ ಪಠ್ಯಕ್ರಮದ ಚೌಕಟ್ಟಿನ ಮರುವಿಮರ್ಶೆ ಮಾಡಲಾಗಿದ್ದರೂ ಸಹ, ಪಠ್ಯಕ್ರಮದ ಹೊರೆಯ ಸಮಸ್ಯೆ ಮತ್ತು ಪರೀಕ್ಷೆಯ ಪೀಡೆ ಬಗೆಹರಿಯಲಿಲ್ಲ" (ಎನ್‌ಸಿಎಫ್‌ಎಸ್‌ಇ–2000ದಲ್ಲಿ ಡಾ.ರಜಪ್ರತ್ ಈ ಹೊರೆಯನ್ನು ಕಡಿಮೆ ಮಾಡಲು ಖಂಡಿತಾ ಪ್ರಯತ್ನಿಸಿದರು ಮತ್ತು ತಕ್ಕಮಟ್ಟಿಗೆ ಯಶಸ್ವಿಯೂ ಆದರು ಎಂಬುದನ್ನು ಗುರುತಿಸುವಲ್ಲಿ ಇಲ್ಲಿ ವಿಫಲತೆ ಕಾಣುತ್ತದೆ. ಏಕೆಂದರೆ ಅವರು ಇತಿಹಾಸದ ಪ್ರಮಾಣವನ್ನು ಕಡಿಮೆ ಮಾಡಿದರು, 10ನೆಯ ತರಗತಿಯವರೆಗೆ ಇತಿಹಾಸ ಪ್ರತ್ಯೇಕ ವಿಷಯವಾಗಿರುವುದನ್ನು ರದ್ದುಪಡಿಸಿದರು ಹಾಗೂ ಶಾಲಾಪಠ್ಯಕ್ರಮದಿಂದ ಪ್ರಪಂಚವನ್ನು ಮಾಯ ಮಾಡಿ ಬಿಟ್ಟರು!).

ಯಶಪಾಲ್ ಸಮಿತಿಯ ವರದಿಯ ಔಚಿತ್ಯ ಅಥವಾ 'ಗಮನಾರ್ಹತೆ'ಯನ್ನು ಸಂಕ್ಷಿಪ್ತವಾಗಿ ಚರ್ಚಿಸುವುದು ಉಪಯುಕ್ತವಾದೀತು. ವಿಚಿತ್ರವೆಂದರೆ, ಶಿಕ್ಷಣ ಕಾರ್ಯದರ್ಶಿಯವರು ಎನ್‌ಸಿಇಆರ್‌ಟಿಯ ನಿರ್ದೇಶಕರಿಗೆ ಆ ವರದಿಯನ್ನು ಶಿಫಾರಸು ಮಾಡುವಾಗ, ಅದೇ ಮಾನವ ಸಂಪನ್ಮೂಲ ಸಚಿವಾಲಯವೇ ನೇಮಿಸಿದ್ದ ಮತ್ತೊಂದು ತಜ್ಞರ ಗುಂಪಿನ ವರದಿ ಅರ್ಥಾತ್ ಯಶಪಾಲ್ ಸಮಿತಿಯ ವರದಿಯನ್ನು ಜಾರಿಗೊಳಿಸುವ ಸಾಧ್ಯಾಸಾಧ್ಯತೆಯನ್ನು ಪರೀಕ್ಷಿಸುವ ಗುಂಪಿನ ವರದಿಯೂ ಇದೆ ಎಂದೇನೂ ಹೇಳಲಿಲ್ಲ. ಯಶಪಾಲ್ ವರದಿ ಬಂದ ಎರಡು ತಿಂಗಳ ನಂತರ ಇದನ್ನು ಸಚಿವಾಲಯಕ್ಕೆ ಸಲ್ಲಿಸಲಾಗಿತ್ತು. ಈ ಎರಡೂ ವರದಿಗಳನ್ನು ಎನ್‌ಸಿಇಆರ್‌ಟಿ ಸಚಿವಾಲಯದ ಪರವಾಗಿ ಪ್ರಕಟಿಸಿತ್ತು. ಈ ತಜ್ಞರ ಗುಂಪಿನ ವರದಿಯ ಬಗ್ಗೆ ಅಲ್ಲಿ ಯಾವ ಉಲ್ಲೇಖವೂ ಯಾಕೆ ಕಾಣಿಸುವುದಿಲ್ಲ? ಇದಕ್ಕೆ (ಬೇಡವೆನಿಸಿದ್ದನ್ನು) ಮರೆಯುವ ರೋಗ ಕಾರಣವೋ? ಅಥವಾ ಒಂದು ನೇರ, ಸರಳ ದಬಾವಣೆಯೋ? (ಭಾರತದಲ್ಲಿ ಶಿಕ್ಷಣ ಸವಾಲು ಸಾಧ್ಯತೆ (ಕನ್ನಡಕ್ಕೆ) ಆರ್.ಡಿ.ಹೆಗಡೆ ಪು.15) ಇದಕ್ಕೆ ಸಂಬಂಧಿಸಿದಂತೆ ಕೆ.ಎಂ.ಶ್ರೀಮಾಲಿಯವರು ಈ ರೀತಿಯಲ್ಲಿ ಹೇಳುತ್ತಾರೆ.

ಯಶಪಾಲ್ ಸಮಿತಿಯ ವರದಿಯು ಹನ್ನೆರಡು ಶಿಫಾರಸುಗಳನ್ನು ಮಾಡಿದೆ. ವರದಿಯಲ್ಲಿ ಪ್ರಸ್ತಾಪಿಸಿ ಚರ್ಚಿಸಲಾದ ವಿವಾದಾಂಶಗಳ ಆಧಾರದಲ್ಲಿ ಸಮಿತಿಯು ತನ್ನ ಶಿಫಾರಸುಗಳನ್ನು ಸಿದ್ಧಪಡಿಸುತ್ತದೆ ಎನ್ನುವುದು ಸಾಮಾನ್ಯ ತಿಳುವಳಿಕೆ. ಆದರೆ, ಇಲ್ಲಿ ವರದಿಯಲ್ಲಿನ ಅಂಶಗಳಿಗೂ ಶಿಫಾರಸುಗಳಿಗೂ ಸಾಂಗತ್ಯವಿಲ್ಲ. ಇದನ್ನು ತಜ್ಞರ

ಗುಂಪಿನ ವರದಿಯು ಬೆರಳು ಮಾಡಿ ತೋರಿಸಿದೆ. ಇದಕ್ಕೆ ಉದಾಹರಣೆಗಳು: ಎಲ್ಲಿಯೂ ಸಹ ವರದಿಯಲ್ಲಿ ಇತಿಹಾಸದ ಪಠ್ಯಪುಸ್ತಕದಲ್ಲಿರುವ ಪುನರುಕ್ತಿಯ ಪ್ರಸ್ತಾಪವಿಲ್ಲ. ಆದರೆ 'ಇತಿಹಾಸ ಪಠ್ಯಕ್ರಮದ ಪುನರುಕ್ತಿ ಸ್ವರೂಪವನ್ನು' ಬದಲಿಸಬೇಕು ಎಂದು ವರದಿ ಶಿಫಾರಸು ಮಾಡುತ್ತದೆ ಮತ್ತು "9ನೆಯ ಮತ್ತು 10ನೆಯ ತರಗತಿಗಳಲ್ಲಿ, ಅಧ್ಯಯನವನ್ನು ಕ್ರಮಬದ್ಧವಾಗಿ ಕೈಗೊಳ್ಳಲು ಪ್ರಾಚೀನ ಕಾಲದ ಇತಿಹಾಸವನ್ನು ಸೇರಿಸಬೇಕು". "ಆರರಿಂದ ಎಂಟನೆಯ ತರಗತಿಗಳ ಇತಿಹಾಸ ವಿಷಯವು ಸ್ವಾತಂತ್ರ್ಯ ಹೋರಾಟದ ಮೇಲೆ ಮತ್ತು ಸ್ವಾತಂತ್ರ್ಯೋತ್ತರ ಬೆಳವಣಿಗೆಗಳ ಮೇಲೆ ಬೆಳಕು ಚೆಲ್ಲಬೇಕು" ಎಂದೂ ಶಿಫಾರಸು ಮಾಡಲಾಗಿದೆ. ಯಾವ ಕಾರಣಕ್ಕಾಗಿ ಈ ಶಿಫಾರಸುಗಳನ್ನು ಮಾಡಲಾಗಿದೆ ಎಂದು ಎಲ್ಲಿಯೂ ಹೇಳುವುದಿಲ್ಲ. ಇತಿಹಾಸದ ಕೋರ್ಸುಗಳು ಪ್ರಾಚೀನ ಭಾರತ ಮತ್ತು ಸ್ವಾತಂತ್ರ್ಯ ಹೋರಾಟ–ಇವುಗಳಿಗೆ ಮಾತ್ರ ಸಂಬಂಧಿಸಿರಬೇಕು ಎನ್ನುವಂತೆ ಇದರಿಂದ ಭಾಸವಾಗುತ್ತದೆ. ಪೌರನೀತಿಯನ್ನು ಕೈಬಿಡುವಂತೆ ಇದು ಸೂಚಿಸುತ್ತದೆ. ಇದರಲ್ಲಿ ಹೇಳಿರುವ ಪ್ರಕಾರ, ಇಂದು ಇದನ್ನು ಓದಬೇಕಾದ ಕ್ರಮವನ್ನು ನೋಡಿದರೆ, ವಿದ್ಯಾರ್ಥಿಗಳ ನೆನಪಿನ ಶಕ್ತಿಯ ಮೇಲೆ ಇದರಿಂದ ದೊಡ್ಡ ಹೊರೆ ಬೀಳುತ್ತದೆ. ಆದ್ದರಿಂದ ಇದರ ಬದಲಿಗೆ 'ಸಮಕಾಲೀನ ಅಧ್ಯಯನ'ವನ್ನು ಇಡಬೇಕಾಗಿದೆ. ಇಡೀ ವರದಿಯಲ್ಲಿ ಪೌರನೀತಿ ಪದದ ಪ್ರಯೋಗವಾಗಿರುವುದು ಇದೊಂದು ಬಾರಿ ಮಾತ್ರ. ಆದರೆ 'ಸಮಕಾಲೀನ ಅಧ್ಯಯನ'ಕ್ಕೆ ಎಲ್ಲೂ ವಿವರಣೆ ಸಿಗುವುದಿಲ್ಲ (ಪೌರನೀತಿಯನ್ನು ತೆಗದುಹಾಕಿ, ರಾಜ್ಯಶಾಸ್ತ್ರವನ್ನು ಎನ್‌ಸಿಎಫ್–2005 ಶಿಫಾರಸು ಮಾಡಿತ್ತು. ಈ ಹಿಂದೆ 11 ಮತ್ತು 12ನೆ ತರಗತಿಗಳಲ್ಲಿ ಇದನ್ನು ಆರಂಭಿಸಲಾಗಿತ್ತು. ಒಬ್ಬ ಪ್ರಸಿದ್ಧ ರಾಜ್ಯಶಾಸ್ತ್ರಜ್ಞರ ಮುಂದಾಳತ್ವದಲ್ಲಿ ರಚಿಸಲಾಗಿದ್ದ ಸಮಾಜ ವಿಜ್ಞಾನಗಳ ಮೇಲಿನ ಪರಿಶೀಲನಾ ತಂಡವು ಪೌರನೀತಿಯು ವಸಾಹತುಶಾಹಿಯಿಂದ ಬಂದ ವಿಷಯವೆಂದು ಅಭಿಪ್ರಾಯ ಪಟ್ಟು ಅದನ್ನು ಕೈಬಿಡಬೇಕೆಂದು ನಿರ್ಧರಿಸಿತ್ತು).

ಇಡೀ ವರದಿಯನ್ನು ರಾಷ್ಟ್ರೀಯ ಪಠ್ಯಕ್ರಮದ ತತ್ವಕ್ಕೆ ವಿರುದ್ಧವಾಗಿ ಹರಡಿದಂತೆ ತೋರುತ್ತದೆ. ಈ ವರದಿಯನ್ನು ಅನುಸರಿಸಿ ಅದರಂತೆಯೇ ಎನ್‌ಸಿಎಫ್–2005 ನಡೆದುಕೊಳ್ಳಲು ಯತ್ನಿಸುತ್ತಿದೆ. (ಅದೇ ಪು. 16–18)

ಜ್ಞಾನದ ಕುರಿತಂತೆ ಮಿಶಾಯಿಲ್ ಪುಕೋ ಹೇಳಿರುವ ನಿಲುವುಗಳು ಕೂಡಾ ಗಮನಾರ್ಹ.

"ಜ್ಞಾನದ ಸೃಷ್ಟಿ"ಯ ಸಾಮರ್ಥ್ಯವು ಎಲ್ಲ ಮಕ್ಕಳಲ್ಲಿಯೂ ಇರುತ್ತದೆ ಎನ್ನುವುದನ್ನು ಅನೇಕ ಕಡೆ ಎನ್‌ಸಿಎಫ್ ಗುರುತಿಸಿದೆ. ಅದೇನೇ ಇದ್ದರೂ, ಎನ್‌ಸಿಎಫ್ ದಾಖಲೆಯಲ್ಲಿ,

ಆಧುನಿಕೋತ್ತರವಾದಿ (Posrmodernist)ಯಾದ ಫೌಕಾಲ್ಟನ ಅಭಿಪ್ರಾಯವನ್ನು (Foucaultian version) ಅವಲಂಬಿಸಿ 'ಜ್ಞಾನದ' ತಾತ್ವಿಕ ಲಕ್ಷಣವನ್ನು ನಿರೂಪಿಸಲಾಗಿದೆ. "ಜ್ಞಾನವನ್ನು ಭಾಷೆಯ ಮೂಲಕ ವಿಚಾರದ ಮಾದರಿಗಳಲ್ಲಿ (ಅಥವಾ ಪರಿಕಲ್ಪನೆಗಳ ಸಂರಚನೆಯ ರೂಪದಲ್ಲಿ) ಸಂಘಟನೆಗೊಂಡ ಅನುಭವ ಎಂದು ಪರಿಭಾವಿಸಬಹುದು; ಹೀಗೆ ಅದು ಅರ್ಥವನ್ನು ಸೃಷ್ಟಿಸಿ ತನ್ಮೂಲಕ ನಾವು ಬದುಕುತ್ತಿರುವ ಪ್ರಪಂಚವನ್ನು ಅರಿಯಲು ಸಹಾಯವಾಗುತ್ತದೆ............... ಕಾಲಾನುಕ್ರಮದಲ್ಲಿ ಮಾನವ ಜೀವಿಗಳು ಚಿಂತನೆಯ, ಭಾವನೆಯ ಹಾಗೂ ಕೆಲಸದ ವಿಧಾನಗಳ ಭಂಡಾರವೂ ಸೇರಿದಂತೆ ಜ್ಞಾನದ ಪುಷ್ಕಳವಾದ ಸಂಚಯಗಳನ್ನು ಮತ್ತು ಹೆಚ್ಚು ಹೆಚ್ಚು ಜ್ಞಾನವನ್ನು ನಿರ್ಮಿಸುವುದನ್ನು ಕೂಡಾ ವಿಕಾಸಗೊಳಿಸಿಕೊಂಡರು" ಎಂದು ಎನ್‌ಸಿಎಫ್ ನಿರೂಪಿಸುತ್ತದೆ. ಮತ್ತೊಂದು ಕಡೆ ಈ ದಸ್ತಾವೇಜು ಈ ರೀತಿ ಹೇಳುತ್ತದೆ: "ಜ್ಞಾನದ ಸೃಷ್ಟಿ ಅಥವಾ ಪುನಃಸೃಷ್ಟಿಗೆ ಪ್ರಾಯೋಗಿಕ ತಳಹದಿ, ಭಾಷಾ ಸಾಮರ್ಥ್ಯಗಳು ಹಾಗೂ ಉಳಿದ ಮನುಷ್ಯರೊಡನೆ ಮತ್ತು ನೈಸರ್ಗಿಕ ಪ್ರಪಂಚದೊಡನೆ ಪರಸ್ಪರ ಸಂವಹನ ಇವು ಬೇಕಾಗುತ್ತವೆ. ಮೊದಲನೆಯ ಬಾರಿಗೆ ಶಾಲೆಗೆ ಸೇರಿಕೊಳ್ಳುತ್ತಿರುವ ಮಕ್ಕಳು ಪ್ರಪಂಚದ ಜ್ಞಾನವನ್ನು ನಿರ್ಮಿಸಿಕೊಳ್ಳಲು ಆಗಲೇ ಆರಂಭಿಸಿರುತ್ತಾರೆ. ಅವರು ಅನಂತರ ಏನೆಲ್ಲ ಕಲಿಯುತ್ತಾರೋ ಅವೆಲ್ಲ ಅವರು ಶಾಲೆಯೊಳಗೆ ಜೊತೆಯಲ್ಲಿ ತಂದುಕೊಂಡಿರುವ ಈ ಜ್ಞಾನಕ್ಕೆ ಅನುಗುಣವಾಗಿಯೇ ಇರುತ್ತವೆ. ಈ ಜ್ಞಾನ ಕೂಡ ಅಂತರ್ದೃಷ್ಟಿಯಿಂದ ಬಂದಿರುತ್ತದೆ"(ಪುಟ. 32).

ಭಾವನೆ, ಅಂತರ್‌ದೃಷ್ಟಿ ಮತ್ತು ಅನುಭವ ಇವೆಲ್ಲ ಸೇರಿ "ಜ್ಞಾನ"ಕ್ಕೆ ಆಧಾರವಾಗುತ್ತವೆ ಎಂಬುದು ನಿಜ. ಆದರೆ ತರ್ಕ, ವಿವೇಚನೆ, ವೈಜ್ಞಾನಿಕ ಕುತೂಹಲ ಮತ್ತು ಅದನ್ನಾಧರಿಸಿದ 'ಮಾಹಿತಿ'ಗಳಿಗೆ ಅವಕಾಶ ಎಲ್ಲಿದೆ? 'ಮಾಹಿತಿ'ಯನ್ನು 'ಜ್ಞಾನ'ದ ವಿರೋಧಿಯನ್ನಾಗಿ ಯಾಕೆ ಕಾಣಲಾಗುತ್ತದೆ? 'ಮಾಹಿತಿಯ ಕುಣಿಕೆ'ಯನ್ನು ಸಡಿಲಗೊಳಿಸುವುದರ ಮೇಲೆ ಪ್ರೊ. ಶಾಹಿದ್ ಅಮಿನ್ ಬಲವಾಗಿ ನೀಡುವ ಒತ್ತು "ಮಾಹಿತಿಯನ್ನು ಜ್ಞಾನವೆಂದು ಗೊಂದಲಗೊಳಿಸುವ ಪ್ರವೃತ್ತಿಯನ್ನು ಹತ್ತಿಕ್ಕಬೇಕು"(ಪುಟ 96) ಎಂಬ ಎನ್‌ಸಿಎಫ್ ನಿರೂಪಣೆಯನ್ನು ಪ್ರತಿಬಿಂಬಿಸುತ್ತದೆ. ವೈಜ್ಞಾನಿಕ ಮನೋಭಾವಕ್ಕಿಂತ ಹೆಚ್ಚಾಗಿ "ಸ್ಥಳೀಯ ಜ್ಞಾನ" ಮತ್ತು "ಸ್ಥಳೀಯ ನಂಬಿಕೆಯ ವ್ಯವಸ್ಥೆಗಳು" "ಮಾಹಿತಿಯ ಶ್ರೀಮಂತ ಭಂಡಾರ"ವಾಗಿರುತ್ತವೆ ಎಂಬ ಬಗ್ಗೆ ಯಾರಿಗೂ ಸಂದೇಹವುಳಿಯದಂತೆ ಈ ಎನ್‌ಸಿಎಫ್ ದಸ್ತಾವೇಜು ಮಾಡುತ್ತದೆ (ಪುಟ 29). ಬಹುಶಃ "ಏನೇ ಆಗಲಿ, ಎಲ್ಲಾ ವಿಧಗಳ ಸ್ಥಳೀಯ ಜ್ಞಾನ ಸಂವಿಧಾನಾತ್ಮಕವಾದ ಮೌಲ್ಯಗಳ ಮತ್ತು ತತ್ವಗಳ

ಮೂಲಕ ಹಾಯ್ದುಬರಬೇಕು" ಎಂದು ಎನ್‌ಸಿಎಫ್ ಒಪ್ಪಿಕೊಂಡಿರುವುದು ನಂತರ ಬಂದ ಯೋಚನೆ(ಮೂಲ ಕರಡು ಪ್ರತಿಯಲ್ಲಿ ಈ ಅಂಶ ಇರಲಿಲ್ಲ). ಈಗಲೂ ಸಹ, ತರ್ಕದ ದನಿಗೆ ಇಲ್ಲಿ ತಕ್ಕ ಅವಕಾಶವಿಲ್ಲ.

ಶಿಕ್ಷಣದಲ್ಲಿ ಭಾಷಾ ಶಿಕ್ಷಣದ ಬಗ್ಗೆ ಎನ್‌ಸಿಎಫ್ ಹೀಗೆ ಹೇಳುತ್ತದೆ: "ಹಿಂದಿಯೇತರ ರಾಜ್ಯಗಳಲ್ಲಿ ಮಕ್ಕಳು ಹಿಂದಿಯನ್ನು ಕಲಿಯುತ್ತಾರೆ. ಹಿಂದೀ ರಾಜ್ಯಗಳಲ್ಲಿ ಮಕ್ಕಳು ತಮ್ಮ ಪ್ರದೇಶದಲ್ಲಿ ಮಾತನಾಡದ ಒಂದು ಭಾಷೆಯನ್ನು ಕಲಿಯುತ್ತಾರೆ. ಈ ಭಾಷೆಗಳ ಸಂಗಡ ಹೆಚ್ಚಿನದಾಗಿ ಆಧುನಿಕ ಭಾಷೆಯಾಗಿ ಸಂಸ್ಕೃತವನ್ನು ಅಧ್ಯಯನ ಮಾಡಬಹುದು"(ಪುಟ 35). ಸಂಸ್ಕೃತದ ಮೇಲೆ ಈ ವಿಶೇಷವಾದ ಒತ್ತು ಏಕೆ? ಸಂವಿಧಾನದ ಎಂಟನೆಯ ಅನುಸೂಚಿಯಲ್ಲಿ ಸಂಸ್ಕೃತವನ್ನು ಪಟ್ಟಿ ಮಾಡಲಾಗಿದೆಯಾದರೂ ಕೂಡ ಇದು ಹೇಗೆ ಮತ್ತು ಎಂದು 'ಪ್ರಾಚೀನ'ದಿಂದ 'ಆಧುನಿಕ ಭಾರತೀಯ' ಭಾಷೆಯಾಗಿ ಮೇಲ್ದರ್ಜೆಗೆ ಬಂದಿತು? ಇದು ಮುರಳಿ ಮನೋಹರ ಜೋಶಿಯವರ ಎನ್‌ಸಿಎಫ್ 2000ದಲ್ಲಿ ಕೊಟ್ಟಿದ್ದ "ರಾಷ್ಟ್ರೀಯ ಶಿಕ್ಷಣ ಪದ್ಧತಿಯ ಮೇಲೆ ಸಂಸ್ಕೃತಕ್ಕೆ ಒಂದು ವಿಶೇಷವಾದ ಹಕ್ಕಿದೆ. ಏಕೆಂದರೆ ಸಾವಿರಾರು ವರ್ಷಗಳಿಂದ ಭಾರತದಲ್ಲಿ ಇದರ ಅಗತ್ಯ ನಿರಂತರವಾಗಿ ಇತ್ತು ಹಾಗೂ ಇಂದು ಕೂಡ ವಿಶಾಲವಾದ ಭಾರತೀಯ ಸಮೂಹಗಳ ಬದುಕು, ರೂಢಿಗಳು, ಆಚರಣೆಗಳು ಹಾಗೂ ಹಬ್ಬಗಳ ಜೊತೆಗೆ ಸಂಸ್ಕೃತವು ಪ್ರತ್ಯೇಕಿಸಲಾಗದ ರೀತಿಯಲ್ಲಿ ಬೆಸೆದು ಕೊಂಡಿದೆ..... ಈ ಭಾಷೆ ಜೀವಂತವಾದುದ್ದೆಂದು ಪರಿಗಣಿಸಲ್ಪಡಬೇಕಾಗಿದೆ" (ಪುಟಗಳು 53–54) ಎಂಬ ನಿರೂಪಣೆಯಿಂದ ಪ್ರೇರಿತವಾಗಿದೆಯೇ ಎಂದು ಆಶ್ಚರ್ಯವಾಗುತ್ತದೆ. (ಅದೇ ಪು. 18)

ಶಿಕ್ಷಣ ಮಾಧ್ಯಮದ ಕುರಿತ ಗಾಂಧಿ ನಿಲುವು ಗಮನಾರ್ಹ:

> ನಮ್ಮ ಭಾಷೆ ನಮ್ಮದೇ ಪ್ರತಿಬಿಂಬ. ವಿಚಾರ ಪ್ರಕಟನೆಗೆ ನಮ್ಮ ಭಾಷೆಗಳು ತೀರಾ ಅಶಕ್ತ ಎಂದರೆ ಆದಷ್ಟು ಬೇಗ ನಾವು ನಿರ್ನಾಮವಾಗುವುದೇ ಮೇಲು. ಇಂಗ್ಲೀಷು ನಮ್ಮ ರಾಷ್ಟ್ರ ಭಾಷೆಯಾದೀತೆಂದು ಕನಸು ಕಾಣಬಲ್ಲವರೂ ಉಂಟೆ? (ಎಂದಿಗೂ ಇಲ್ಲ ಎಂಬ ಕೂಗು) ಈ ಭಾರವೇಕೆ ರಾಷ್ಟ್ರಕ್ಕೆ? ಕಳೆದ ಐವತ್ತು ವರ್ಷ ನಮ್ಮ ದೇಶಭಾಷೆಗಳಲ್ಲೇ ಶಿಕ್ಷಣ ದೊರೆತಿದ್ದರೆ ಈ ವೇಳೆಗೆ ಹಿಂದುಸ್ತಾನ ಸ್ವತಂತ್ರವಾಗುತ್ತಿತ್ತು. ನಮ್ಮ ವಿದ್ಯಾವಂತರು ತಮ್ಮ ಜನರ ನಡುವೆಯೆ ಪರದೇಶಿಗಳಾಗಿ ಇರುತ್ತಿರಲಿಲ್ಲ. ರಾಷ್ಟ್ರಹೃದಯವನ್ನು ಅರಿಯುತ್ತಿದ್ದರು. ಇವತ್ತು ನಮ್ಮ ಉತ್ತಮ

ವಿಚಾರ ಹೆಂಡತಿಗೂ ತಿಳಿಯದು. ಬೋಸ್, ರಾಯ್ ಮಾಡಿದ ಸಂಶೋಧನೆಗಳನ್ನು ನೋಡಿ. ಅವು ಸಾಮಾನ್ಯ ಜನತೆಯ ಪಾಲಿಗೆ ಇಲ್ಲ ಎಂದರೆ ಎಂತಹ ನಾಚಿಕೆಗೇಡು?

ಪರಭಾಷೆಯ ಮಾಧ್ಯಮ ಬುದ್ಧಿಗೆ ಆಯಾಸ, ಮಕ್ಕಳ ಶಕ್ತಿಗೆ ಒಂದು ಭಾರ; ಅದರಿಂದ ಅವರು ಬರೀ ಗಿಳಿಪಂಡಿತರೂ ಅನುಕರಣಶೀಲರೂ ಆಗಿದ್ದಾರೆ. ಸ್ವತಂತರ ವಿಚಾರ ಕೃತಿಗಳಿಗೆ ಅಸಮರ್ಥರಾಗಿದ್ದಾರೆ. ತಮ್ಮ ವಿದ್ಯೆಯನ್ನು ಜನತೆಗೆ ನೀಡಲು ಅವರಿಗೆ ಸಾಧ್ಯವಿಲ್ಲ. ನನಗೇ ನಿರಂಕುಶಾಧಿಕಾರವಿದ್ದಿದ್ದರೆ ಇವತ್ತೇ ಈ ಪರಭಾಷಾಮಾಧ್ಯಮದ ಶಿಕ್ಷಣವನ್ನು ನಿಲ್ಲಿಸಿಬಿಡುತ್ತಾ ಇದ್ದೆ. ಪಠ್ಯಪುಸ್ತಕಗಳಿಗಾಗಿ ನಾನು ಕಾಯುವುದಿಲ್ಲ. ಪರಿವರ್ತನೆಯಾದರೆ ಅವು ತಾನೇ ಬರುತ್ತವೆ. ಕೂಡಲೆ ಪರಿಗಣಿಸಬೇಕಾದ ರೋಗ ಇದು.

ಪರದೇಶೀ ಪ್ರಭುತ್ವದ ಅನೇಕ ದೋಷಗಳಲ್ಲಿ ಪರಭಾಷಾ ಶಿಕ್ಷಣದ ಈ ದುರ್ಭರ ಆಘಾತ ಬಹಳ ಹೆಚ್ಚಾದ ದೋಷವೆಂದು ಇತಿಹಾಸ ಹೇಳಿತು. ರಾಷ್ಟ್ರ ನಿರ್ವೀರ್ಯವಾಗಿದೆ ಅದರಿಂದ ವಿದ್ಯಾರ್ಥಿಗಳ ಆಯುಸ್ಸು ಕ್ಷೀಣವಾಗಿದೆ. ಆನತೆಯಿಂದ ಅವರನ್ನು ಸಿಡಿಸಿದೆ, ಶಿಕ್ಷಣ ಅನಾವಶ್ಯಕವಾಗಿ ದುಬಾರಿಯಾಗಿದೆ. ಹೀಗೆ ನಡೆದರೆ ರಾಷ್ಟ್ರದ ಆತ್ಮಘಾತವಾದೀತು. ಭಾರತದ ವಿದ್ಯಾವಂತರು ಎಷ್ಟು ಬೇಗ ಈ ಪರಭಾಷಾಮಾಧ್ಯಮದ ಮೋಹವನ್ನು ತೊಲಗಿಸಿಬಿಟ್ಟರೆ ಅವರಿಗೂ ಅಷ್ಟು ಒಳ್ಳೆಯದು, ದೇಶಕ್ಕೂ ಒಳ್ಳೆಯದು.

ಇಂಗ್ಲೀಷು ಅಂತರರಾಷ್ಟ್ರೀಯ ವ್ಯಾಪಾರದ ಭಾಷೆ, ರಾಜಕೀಯ ಸಂಧಾನ ವ್ಯವಹಾರದ ಭಾಷೆ. ಅದರಲ್ಲಿ ಅಪಾರ ಸಾಹಿತ್ಯವಿದೆ. ಪಶ್ಚಿಮದ ವಿಚಾರ-ಸಂಸ್ಕೃತಿಗಳಿಗೆ ಅದು ಬಾಗಿಲು. ನಮಗೆ ಕೆಲವರಿಗೆ ಇಂಗ್ಲೀಷಿನ ಜ್ಞಾನ ಅತ್ಯಗತ್ಯ. ಇವತ್ತು ಇಂಗ್ಲೀಷು ನಮ್ಮ ಮಾತೃಭಾಷೆಯನ್ನು ಸಿಂಹಾಸನದಿಂದ ತಳ್ಳಿದೆ. ಇಂಗ್ಲೀಷಿನ ಜ್ಞಾನವಿಲ್ಲದೆ ಭಾರತೀಯ ಮನಸ್ಸು ಅತ್ಯುತ್ತಮ ವಿಕಾಸವನ್ನು ಪಡೆಯುವಂತಿರಬೇಕು. ಇಂಗ್ಲೀಷು ಗೊತ್ತಿಲ್ಲದಿದ್ದರೆ ಉತ್ತಮರ ಸಹವಾಸ ಸೌಲಭ್ಯ, ಉನ್ನತ ಸಮಾಜದಲ್ಲಿ ಪ್ರವೇಶವಿಲ್ಲ ಎಂದರೆ ನಮ್ಮ ಪುರುಷತ್ವಕ್ಕೇ ನಮ್ಮ ಸ್ತ್ರೀತ್ವಕ್ಕೇ ಅಪಮಾನ. ನಮ್ಮ ಹುಡುಗರಿಗೆ ಆ ಅಭಿಪ್ರಾಯ ಬರುವಂತೆ ಮಾಡಬಾರದು. ಈ ವಿಚಾರವೇ ಸಹಿಸಲಾರದಷ್ಟು ಅತ್ಯಂತ ಅಪಮಾನಕರ. ಇಂಗ್ಲೀಷಿನ ವ್ಯಾಮೋಹವನ್ನು ನೀಗುವುದೂ ಸ್ವರಾಜ್ಯದ ಒಂದು ಮುಖ್ಯ ಲಕ್ಷಣ. ಇಂಗ್ಲೀಷು ಹಿಂದೀಗಳ ಈ ವಿರೋಧ ಎಂದಿಗೂ ಇದ್ದದ್ದೇ.

> ಇಂಗ್ಲಿಷನ್ನು ಕಲಿಯಿರಿ, ಬೇಡವೆನ್ನುವುದಿಲ್ಲ. ಆದರೆ ನನಗೆ ತಿಳಿದಮಟ್ಟಿಗೆ, ಇಂಗ್ಲೀಷು ನಮ್ಮ ಕೋಟ್ಯಂತರ ಮನೆಗಳ ಮಾತು ಆಗಲಾರದು. ಸಾವಿರಾರು ಜನರಿಗೆ ಮಾತ್ರ ಅದು ಬಂದೀತು, ಜನಸಮೂಹದವರೆಗೆ ಅದು ಹೋಗಲೇಬಾರದು.
>
> (ಜೀವನ ಶಿಕ್ಷಣ 1966 ಪುಟ. 129–131)

1988ರಲ್ಲಿ ರೂಪೀಕರಿಸಿದ 'ಪ್ರಾಥಮಿಕ ಮತ್ತು ಮಾಧ್ಯಮಿಕ ಶಿಕ್ಷಣದ ರಾಷ್ಟ್ರೀಯ ಪಾಠಕ್ರಮದ ಚೌಕಟ್ಟು' ಸ್ಪಷ್ಟವಾಗಿ ವ್ಯಕ್ತಪಡಿಸಿದ ಅಭಿಪ್ರಾಯ ಹೀಗಿದೆ:

"............ಶಿಕ್ಷಣದ ಒಂದು ರಾಷ್ಟ್ರೀಯ ವ್ಯವಸ್ಥೆಯು ಸಾಮಾನ್ಯ ಶೈಕ್ಷಣಿಕ ರಚನೆ, ರಾಷ್ಟ್ರೀಯ ಪಾಠಕ್ರಮದ ಚೌಕಟ್ಟು ಮತ್ತು ಪ್ರತಿಯೊಂದು ಶೈಕ್ಷಣಿಕ ಹಂತದಲ್ಲಿ ಕನಿಷ್ಠ ಪ್ರಮಾಣದ ಕಲಿಕೆಯ ಗುಣಮಟ್ಟ– ಇವುಗಳ ಮೇಲೆ ಆಧಾರಿತವಾಗಿರುತ್ತದೆ. ಇದರ ನಿರ್ವಹಣೆ ಮೂಡಿ ಬರುತ್ತಿರುವ ರಾಷ್ಟ್ರೀಯ ಶಿಕ್ಷಣ ವ್ಯವಸ್ಥೆಗೆ ಒಂದು ನಿರ್ದಿಷ್ಟ ಆಕಾರ ಕೊಡಬೇಕೆಂದು ನಿರೀಕ್ಷಿಸಲಾಗುತ್ತದೆ. ಭಾರತದ ವಿಶಿಷ್ಟವಾದ ಸಾಮಾಜಿಕ–ಸಾಂಸ್ಕೃತಿಕ ಅನನ್ಯತೆಯನ್ನು ಪ್ರೋತ್ಸಾಹಿಸುವ, ದೇಶವನ್ನು ಭವಿಷ್ಯದ ಹೊಣೆಗಾರಿಕೆಗೆ ಸಜ್ಜುಗೊಳಿಸುವ ಮತ್ತು ರಾಷ್ಟ್ರೀಯ ಅಭಿವೃದ್ಧಿ ಪ್ರಯತ್ನಗಳಲ್ಲಿ ಮಾನವ ಸಂಪನ್ಮೂಲಗಳು ಪರಿಣಾಮಕಾರಿಯಾಗಿ ಭಾಗವಹಿಸುವಂತೆ ಮಾಡುವ ಒಂದು ಶಿಕ್ಷಣ ವ್ಯವಸ್ಥೆಯನ್ನು ವಿಕಾಸಗೊಳಿಸುವುದರ ಮೇಲೆ ಪ್ರಧಾನ ಗಮನ ನೀಡಬೇಕು. ಶಿಕ್ಷಣಪದ್ಧತಿ ಮತ್ತು ಶಿಕ್ಷಣದ ವಿಷಯುಗಳನ್ನು ಮತ್ತೊಮ್ಮೆ ಸಜ್ಜುಗೊಳಿಸಬೇಕಾದ ಅಗತ್ಯವನ್ನು ಇದು ವ್ಯಕ್ತಪಡಿಸುತ್ತದೆ, ಪ್ರಮುಖವಾಗಿ ಶಾಲೆಯ ಹಂತದಲ್ಲಿ. ಇದು ಮೂಡಿ ಬರುತ್ತಿರುವ ಶಿಕ್ಷಣದ ರಾಷ್ಟ್ರೀಯ ವ್ಯವಸ್ಥೆಯ ಗುರಿಗಳಿಗೆ ಅನುಗುಣವಾಗಿರಬೇಕು". (NCEFESE 1988 ಪು.3) (ಅದೇ ಪು.26–27)

ಇದಕ್ಕೂ ಸ್ಥಳೀಯ ಜ್ಞಾನ ಪರಂಪರೆಗೂ ಶಿಕ್ಷಣ ಕ್ರಮಕ್ಕೂ ಇರುವ ಸಂಬಂಧಗಳು ಗಮನಾರ್ಹ.

ಹೀಗೆ 'ಸ್ಥಳೀಯ ಜ್ಞಾನ' ಅವೈಚಾರಿಕ ಎಂದು ಪರಿಷ್ಕೃತ ಕರಡು ಪರೋಕ್ಷವಾಗಿ ಒಪ್ಪಿಕೊಂಡಿದೆ. ಏಕೆಂದರೆ ಇವು ಸಾಬೀತಾಗದ 'ನಂಬುಗೆ'ಗಳ ವ್ಯವಸ್ಥೆಯನ್ನು ಮತ್ತು 'ವರ್ಗೀಕರಣ'ವನ್ನು ಅವಲಂಬಿಸಿವೆ. ಈ ಸ್ಥಳೀಯ ಜ್ಞಾನವು ಮೂಢನಂಬಿಕೆ. ಸಾಮಾಜಿಕ ಪೂರ್ವಾಗ್ರಹಗಳು, ಜಾತೀಯತೆ ಮತ್ತು ಮತೀಯತೆಗಳಿಂದ ತುಂಬಿ ಹೋಗಿರುತ್ತವೆ ಎನ್ನುವುದನ್ನು ಕರಡಾಗಲೀ, ಪರಿಷ್ಕೃತ ಕರಡಾಗಲೀ ಹೇಳುವುದಿಲ್ಲ. "ಎಲ್ಲಾ ಪ್ರಕಾರದ ಸ್ಥಳೀಯ ಜ್ಞಾನಗಳು ಸಂವಿಧಾನ ಸಮ್ಮತವಾದ ಮೌಲ್ಯಗಳ ಮತ್ತು ನೀತಿಗಳ ಮೂಲಕ ಬರಬೇಕು" ಎಂದು ಜೋರಾಗಿ ಹೇಳುವ ಹೆಚ್ಚುವರಿ

(ಪರಿಷ್ಕೃತ ಕರಡಿನಲ್ಲಿ ಸೇರಿಸಿದ) ಶರತ್ತು(ಪುಟ 29) 'ಸ್ಥಳೀಯ ಜ್ಞಾನ'ದ ಈ ಅಂಶಗಳು ಹಬ್ಬದಂತೆ ಏನೂ ರಕ್ಷಣೆ ಕೊಡುವುದಿಲ್ಲ. ಮೂಢನಂಬಿಕೆಯನ್ನು ಬೋಧಿಸುವುದು ಸಂವಿಧಾನಬಾಹಿರವಲ್ಲ. ನಮ್ಮ ಪ್ರಧಾನ ಸಾಮಾಜಿಕ ಮೌಲ್ಯಗಳು "ಸಂತರಿಂದ ಮತ್ತು ಋಷಿಮುನಿಗಳಿಂದ" ಬಂದಿವೆ ಎಂದು ಸರ್ವೋಚ್ಚ ನ್ಯಾಯಾಲಯ ಭಾವಿಸಿದೆ. ಆ ಆಧಾರದ ಮೇಲೆಯೇ ಇಂದು ಎನ್ ಸಿ ಎಫ್ –2005ರ ಅದ್ಭುತಗಳನ್ನು ಪ್ರತಿಪಾದಿಸುತ್ತಿರುವ ಅದೇ ಎನ್‌ಸಿಇಆರ್‌ಟಿಯು ಎನ್‌ಸಿಎಫ್–2000ದ ನಿರ್ದೇಶನದಲ್ಲಿ ತಯಾರಿಸಲಾದ ಕೇಸರೀಕರಣಗೊಂಡ ಪುಸ್ತಕಗಳು ಸಂವಿಧಾನದಲ್ಲಿ ಉಕ್ತವಾದ ಮೌಲ್ಯಾದರ್ಶಗಳಿಗೆ ಸಂಪೂರ್ಣವಾಗಿ ಅನುಗುಣವಾಗಿದೆ ಎಂದು ಈ ಮೊದಲು ನಮಗೆ ಹೇಳುತ್ತಿತ್ತು ಎಂಬುದನ್ನೀಗ ನೆನಪು ಮಾಡಿಕೊಳ್ಳಬೇಕು. ಶಾಲಾ ಶಿಕ್ಷಣವು ಖಂಡಿತವಾಗಿಯೂ ವಿಜ್ಞಾನ ಮತ್ತು ವೈಚಾರಿಕ ಜ್ಞಾನದ ಕುರಿತು ಇರಬೇಕು. ಸಂವಿಧಾನಾತ್ಮಕವಾಗಿ ಒಪ್ಪಿಗೆ ಪಡೆದ ಮೂಢನಂಬಿಕೆಗಳು ಹಾಗೂ ಸಾಂಪ್ರದಾಯಿಕ ನಂಬಿಕೆಗಳ ಕುರಿತಲ್ಲ. ಅಸ್ಪೃಶ್ಯತೆಯ ಆಚರಣೆಯು ಒಂದು ಅಪರಾಧವಾಗಿರುವಂತೆ, ಜಾತೀಯತೆಯು (ನಮ್ಮ ದಿನಪತ್ರಿಕೆಗಳಲ್ಲಿ ಮದುವೆಯ ಜಾಹೀರಾತುಗಳು ಇದನ್ನು ಸಾಬೀತುಪಡಿಸಿರುವ ಪ್ರಕಾರ) ನಮ್ಮ ಸಂವಿಧಾನದಂತೆ ಅಪರಾಧವಲ್ಲ–ಎಂದು ನಿಜವಾಗಿಯೂ ವಾದಿಸಬಹುದಾಗಿದೆ. ಹೀಗಿರುವಾಗ, ಸಂವಿಧಾನಾತ್ಮಕವಾಗಿ ಅನುಮತಿಸಬಹುದಾದ ಇಂತಹ ಜಾತಿವಾದಿ ನಂಬಿಕೆಗಳನ್ನು ಶಾಲೆಗಳು ಶಾಲಾ ಬೋಧನೆಯೊಳಗೆ ಒಳಗೆ ಸೇರಗೊಡಬೇಕೇ? (ಅದೇ ಪು.51–52)

ಬ್ರಿಟೀಷರು ಭಾರತಕ್ಕೆ ಬರುವ ಪೂರ್ವ ಹಾಗೂ ನಂತರದ ಶಿಕ್ಷಣದ ತುಲನಾತ್ಮಕ ಅವಲೋಕನ ಹಾಗೂ ಇಂದಿನ ಪರಿಸ್ಥಿತಿಯಲ್ಲಿ ಅದರ ಮಹತ್ವ, ಈ ಕುರಿತು ಗಾಂಧಿಯವರ ಕೆಲವು ನಿಲುವುಗಳು ಗಮನಾರ್ಹ. (ಜೀವನ ಶಿಕ್ಷಣ ಪುಟ. 53–54)

1. **ಬ್ರಿಟೀಷರು ಬರುವ ಪೂರ್ವದಲ್ಲಿ ಭಾರತದಲ್ಲಿ ಕಸಬಿಗನು ಸಾರವಾಗಿ ಶಿಕ್ಷಣ ನೀಡಲಾಗುತ್ತಿದ್ದರೆ ಬ್ರಿಟೀಷರ ಕಾಲದ ಶಿಕ್ಷಣದಲ್ಲಿ ಆಡಳಿತ ನೀತಿ ವಿಸ್ತರಣೆ ಉದ್ದೇಶಕ್ಕೆ, ಆಂಗ್ಲ ಸಂಸ್ಕೃತಿಗೆ, ಆಡಳಿತಕ್ಕೆ ಅಗತ್ಯವಿದ್ದ ಜನರ ಸೃಷ್ಟಿಗೆ ಆದ್ಯತೆ ನೀಡಲಾಯಿತು. ಗಾಂಧಿ ಪ್ರಾಥಮಿಕ ಶಿಕ್ಷಣ ಕುರಿತು ಹೇಳಿರುವ ಮಾತು ಗಮನಾರ್ಹ. (ಪುಟ. 85)**
2. **ರಾಷ್ಟ್ರವ್ಯಾಪಿಯಾಗಿ ಏಳು ವರ್ಷದ ಉಚಿತ, ಬಲಾತ್ಕಾರ ಪ್ರಾಥಮಿಕ ಶಿಕ್ಷಣದ ವ್ಯವಸ್ಥೆಯಾಗಬೇಕೆಂದು ಈ ಸಮ್ಮೇಳನ ಅಭಿಪ್ರಾಯಪಡುತ್ತದೆ.**

3. ಶಿಕ್ಷಣದ ಮಾಧ್ಯಮ ತಾಯಿನುಡಿಯಾಗಬೇಕು.
4. ಈ ಅವಧಿಯಲ್ಲಿ ಶಿಕ್ಷಣಕ್ರಮ ಯಾವುದಾದರೊಂದು ಉತ್ಪಾದಕ ಕೈಗೆಲಸವನ್ನು ಮಧ್ಯಬಿಂದುವಾಗಿಟ್ಟುಕೊಂಡು ಸಾಗಬೇಕೆಂದೂ, ಮಕ್ಕಳ ಪರಿಸ್ಥಿತಿಗನುಸಾರವಾಗಿ ಆರಿಸಿದ ಕೈಗೆಲಸಕ್ಕೆ ಉಳಿದೆಲ್ಲ ಶಕ್ತಿಗಳ ವಿಕಾಸವೂ, ಶಿಕ್ಷಣವೂ ಸಮರಸವಾಗಿ ಹೊಂದಿಕೊಳ್ಳಬೇಕೆಂದೂ ಮಹಾತ್ಮಾ ಗಾಂಧಿಯವರು ಮಾಡಿದ ಸೂಚನೆಯನ್ನು ಈ ಸಮ್ಮೇಳನ ಅನುಮೋದಿಸುತ್ತದೆ.
5. ಈ ಪದ್ಧತಿಯಿಂದ ಕ್ರಮೇಣ ಶಿಕ್ಷಕರ ಸಂಭಾವನೆಗೆ ಸಾಕಾಗುವಷ್ಟು ಒದಗುತ್ತದೆಂದು ಈ ಸಮ್ಮೇಳನ ನಿರೀಕ್ಷಿಸುತ್ತದೆ.

(ಹರಿಜನ 30–10–37)

ಬ್ರಿಟೀಷರು ಬರುವ ಪೂರ್ವದಲ್ಲಿ ಇದ್ದ ಶಿಕ್ಷಣವು ಸಾಂಸ್ಥಿಕ ರೂಪ ಹೊಂದಿರದಿದ್ದರೂ ವೈವಿಧ್ಯತೆಯಿಂದ ಕೂಡಿತ್ತು. ಆದರೆ ಬ್ರಿಟೀಷರ ಕಾಲದ ಶಿಕ್ಷಣವು ವೈವಿಧ್ಯತೆಯಿಂದ ಕೂಡಿರದಿದ್ದರೂ ನಿರ್ದಿಷ್ಟತೆಯನ್ನು ಹೊಂದಿತ್ತು. ಬ್ರಿಟೀಷರು ಈ ಮೊದಲೇ ಹೇಳಿರುವಂತೆ ಅವರ ಅಗತ್ಯಕ್ಕೆ ಅನುಸಾರವಾಗಿ ಶಿಕ್ಷಣವನ್ನು ರೂಪಿಸಿದರು. ಗಾಂಧಿ ಹೇಳುವ ಮತ್ತೊಂದು ಮಾತಿದು:

"ನಮ್ಮ ಪ್ರಾಥಮಿಕ ಶಿಕ್ಷಣದಲ್ಲಿ ಇವು ಇರಬೇಕು :

1) *ತಾಯಿನುಡಿ*
2) *ಅಂಕಗಣಿತ*
3) *ಪ್ರಕೃತಿ ವಿಜ್ಞಾನ*
4) *ಸಮಾಜವಿಜ್ಞಾನ*
5) *ಭೂಗೋಳ, ಇತಿಹಾಸ*
6) *ಕೈಗೆಲಸ ಅಥವಾ ವಿವಿಧ ಕಲಾಶಾಲೆ*
7) *ಶರೀರಶಿಕ್ಷಣ*
8) *ಕಲೆ, ಸಂಗೀತ*
9) *ಹಿಂದೂಸ್ತಾನಿ*

'ಇಲ್ಲಿ ಹುಟ್ಟುವ ಒಂದೇ ಪ್ರಶ್ನೆ ಮಕ್ಕಳಿಗೆ ಯಾವ ವಯಸ್ಸಿನಲ್ಲಿ ಶಿಕ್ಷಣ ಮೊದಲಾಗಬೇಕು? 5–6 ನೆಯ ವಯಸ್ಸಿನಲ್ಲಿ ಪ್ರಾರಂಭಿಸಿದರೆ ಆಗ ಕೈಗಾರಿಕೆ ಕಲಿಸುವ ವೆಚ್ಚ ಎಷ್ಟು? ಅಕ್ಷರಶಿಕ್ಷಣಕ್ಕಿಂತ ಸುಲಭವೂ ಅಲ್ಲ, ವೆಚ್ಚ ಕಡಮೆಯೂ ಅಲ್ಲ. 8–10ನೆಯ ವಯಸ್ಸಿನಲ್ಲಿ ಕೈಗಾರಿಕೆಯನ್ನು ನಾನು ಮೊದಲಿಡುತ್ತೇನೆ.

ಉಪಕರಣಗಳನ್ನು ಬಳಸಲು ತಕ್ಕ ದಾರ್ಢ್ಯ, ಸ್ಥಿರತೆ ಬೇಕಷ್ಟೆ. ಆದರೆ ಪ್ರಾಥಮಿಕ ಶಿಕ್ಷಣವೇನೋ 5–6ನೆಯ ವಯಸ್ಸಿಗೆ ಮೊದಲಾಗಬೇಕು. ಮಗುವನ್ನು ಕಾಯಿಸಲಾಗದು.

'ಮೇಟ್ರಿಕ್ಯುಲೇಷನ್ ಮಟ್ಟಕ್ಕೆ ಮಗುವನ್ನು ಒಯ್ಯಲು ಈ ಉದ್ಯೋಗ ಶಿಕ್ಷಣದ ಜತೆಗೆ ಹತ್ತು ವರ್ಷದ ಪಾಠಕ್ರಮ ಒಂದು ಬೇಕು. ಪ್ರಾರಂಭಕಾಲದಲ್ಲಿ ಮಕ್ಕಳು ಉತ್ಪಾದನೆಗೆ ಬೆಲೆ ದೊರೆಯುವುದು ಸಂದೇಹಾಸ್ಪದ. ಸ್ವತಂತ್ರ ವಾಣಿಜ್ಯ ಪ್ರಗತಿಪರ ರೀತಿಗಳು ಇರುವ ದೇಶದಲ್ಲಿ ಹುಡುಗರು ಮಾಡಿದ ವಸ್ತುಗಳು ಮಾರಾಟವಾಗಲಾರವು. ಇವು ಬಾಳಿಕೆ ಬರುವುದೂ ಇಲ್ಲ, ನಯವಾಗಿರುವುದೂ ಇಲ್ಲ. ಸರಕಾರ ತಾನು ಕೊಟ್ಟ ಸಹಾಯಕ್ಕೆ ಬದಲಾಗಿ ಇವನ್ನು ತೆಗೆದುಕೊಂಡು ಏನು ಮಾಡಬೇಕು? ಈ ಪದ್ಧತಿಗಿಂತ ಶಿಕ್ಷಣಕ್ಕಾಗಿಯೇ ನೇರಾಗಿ ಹಣವನ್ನು ಕೊಡುವುದು ಒಳ್ಳೆಯದು. ಹನ್ನೆರಡರ ಮೇಲಿನ ಹುಡುಗರು ಮಾಡಿದ ಪದಾರ್ಥಗಳು ಮಾರಿಹೋಗಬಲ್ಲವು. ಅವು ವರಮಾನದ ಒಂದು ಮುಖ್ಯ ಅಂಶವೇ ಸರಿ.

'ಅಕ್ಷರಶಿಕ್ಷಣದ ಸಮಸ್ಯೆಯನ್ನು ನಾನು ಬೇರೆ ರೀತಿಯಲ್ಲಿಯೇ ಬಿಡಿಸುತ್ತೇನೆ. ಅದಕ್ಕೆ ಅಗತ್ಯವಾದ ವೆಚ್ಚ, ತೆರಿಗೆಗಳನ್ನು ಧೈರ್ಯವಾಗಿ ಪ್ರತಿಪಾದಿಸುತ್ತೇನೆ.

'ಉಪಯೋಗಕರವಾದ ಒಂದು ಕೈಗಾರಿಕೆಯ ವಿಚಾರವನ್ನು ಪ್ರಾಥಮಿಕ ಶಿಕ್ಷಣದ ಮೇಲಿನ ಹಂತದಲ್ಲಿ ಚೆನ್ನಾಗಿ ವೃದ್ಧಿಗೊಳಿಸಬಹುದು. ಸ್ವಲ್ಪಮಟ್ಟಿಗೆ ಸ್ವಾವಲಂಬನವನ್ನು ಸಾಧಿಸಿ, ಅ ಅನುಭವದಿಂದ ಪೂರ್ಣ ಸ್ವಾವಂಲಬನದ ಪ್ರಯತ್ನ ಮಾಡಬಹುದು. ಆದರೆ ದೇಹ, ಮನಸ್ಸು, ಆತ್ಮಗಳ ಸಾಂಸ್ಕೃತಿಕ ಶಿಕ್ಷಣವೆಲ್ಲ ಆರ್ಥಿಕ ಉದ್ದೇಶ್ಯಕ್ಕೆ, ಶಾಲೆಯ ಹಣಕಾಸಿನ ಲೆಕ್ಕಕ್ಕೆ ಅಧೀನವಾಗುವಂತೆ ಮಾಡುವ ಅಪಾಯವಿದೆ. ಹಾಗಾಗದಂತೆ ಎಚ್ಚರವಾಗಿರಬೇಕು.

'ಪ್ರಾಥಮಿಕ ಶಿಕ್ಷಣ, ಇಂಗ್ಲೀಷು ಬಿಟ್ಟು, ಹಿಂದೂಸ್ತಾನಿ ಸೇರಿಸಿ (ನಾನು ಇದನ್ನು ಸೇರಿಸುತ್ತೇನೆ), ಮೆಟ್ರಿಕುಲೇಷನ್ ಮಟ್ಟಕ್ಕೆ ಸಮವಾಗಬೇಕು. ನಿಮ್ಮ ಈ ಸೂಚನ ನನಗೆ ಸಮ್ಮತ, ಪ್ರೌಢಶಿಕ್ಷಣವನ್ನೂ ಇದರಲ್ಲಿಯೇ ಸೇರಿಸಿದ ಹಾಗಾಯಿತು. ನಿಮ್ಮ ವಿಚಾರ ಒಟ್ಟು ಹತ್ತು ವರ್ಷದ ಪೂರ್ತಿ ಶಾಲಾಶಿಕ್ಷಣ. ಇದನ್ನು ತಾಯಿನುಡಿಯ ಮೂಲಕವೇ ಕಲಿಯಬೇಕು, ಬೇರೆ ಯಾವ ನುಡಿಯ ಮೂಲಕವೂ ಅಲ್ಲ ಎಂದು ನಾನು ಸೇರಿಸುತ್ತೇನೆ.

ಇದರಿಂದ ಮಗುವಿನ ಮನಸ್ಸು ಮುಕ್ತವಾಗಿ ಜ್ಞಾನ-ಜೀವನಗಳ ಸಮಸ್ಯೆಗಳಲ್ಲಿ ಅದಕ್ಕೆ ಉತ್ಸಾಹ-ಆಸಕ್ತಿಗಳು ಹುಟ್ಟಿ, ರಚನಾತ್ಮಕ ದೃಷ್ಟಿ ಸ್ವಭಾವ ಬರುತ್ತದೆ.

ಮಧ್ಯಕಾಲದಲ್ಲಿ ಶಿಕ್ಷಣ ಬಹುಮಟ್ಟಿಗೆ ಸ್ವಾವಲಂಬಿಯಾಗಿತ್ತು. ನಿಜ. ಈಗಲೂ ನಮ್ಮ ಸಾಮಾಜಿಕ, ಆರ್ಥಿಕ, ರಾಜಕೀಯ ರಚನೆ ಮಧ್ಯಕಾಲದುದೇ ಆಗಿದ್ದರೆ ಹಾಗೆಯೇ ಮಾಡಬಹುದು. ಹಿಂದಿನ ಜಾತಿಮತಗಳ ಸಾಮಾಜಿಕ ಸಂಕುಚಿತ ಧೋರಣೆಯೇ ಮುಂದುವರಿಯಬೇಕಾದೀತು. ಈಗ ರಾಷ್ಟ್ರೀಯ, ಸಮಾಜವಾದಿ ಪ್ರಜಾಪ್ರಭುತ್ವದ ಕಾಲ. ಈಗ ಅದು ಸಾಧ್ಯವಿಲ್ಲ. ಈಗ ಸಮಾಜದ ಸರ್ವಶಕ್ತಿಯೂ ಅಧಿಕಾರವೂ ರಾಜ್ಯದಲ್ಲಿ ಸಂಘಟಿತವಾಗಿದೆ. ಆದುದರಿಂದ ರಾಜ್ಯವೇ ಈ ಕೆಲಸ ಮಾಡಬೇಕು. ಜಾತಿ, ಶ್ರೇಣಿ, ವರ್ಗ, ಗುರುಕುಲ, ಮತಗಳಿಗೆ ಇದ್ದ ಅಧಿಕಾರ, ಗೌರವ, ಅವಕಾಶ, ಆಗಿನ ಹಾಗೆ ಈಗ ಇಲ್ಲ. ಜನರಿಗೆ ಅವುಗಳಲ್ಲಿ ವಿಶ್ವಾಸವೂ ಇಲ್ಲ. ಹಿಂದುಸ್ತಾನದಲ್ಲಿ ಕೂಡಾ ರಾಜಕೀಯ ಗುಂಪಿಗೆ ಅಧಿಕಾರ ಬಂದರೆ, ಆರ್ಥಿಕ, ಸಾಮಾಜಿಕ ಶಕ್ತಿಯೂ ಅದಕ್ಕೇ, ಆದುದರಿಂದ ಒಂದು ಮಧ್ಯಯುಗೀನ-ಇನ್ನೊಂದು ಆಧುನಿಕ. ಒಂದು ಸರ್ವಸಮಗ್ರ-ಇನ್ನೊಂದು ಏಕಾಂಗೀ ವಿಶಿಷ್ಟ. ಒಂದು ಸಾರ್ವತ್ರಿಕ-ಒಂದು ಪ್ರಾದೇಶಿಕ. ಹೀಗೆ ಎರಡು ವಿಚಾರಸರಣಿ ಏಕಕಾಲದಲ್ಲಿ ನಡೆಯಲು ಸಾಧ್ಯವಿಲ್ಲ.

'ಹಿಂದಿನ ಕಾಲದಲ್ಲಿ ಸಾರ್ವತ್ರಿಕ ಶಿಕ್ಷಣ ಇರಲಿಲ್ಲ. ಸಾರ್ವಭೌಮ ಪ್ರಜಾರಾಜ್ಯ, ರಾಷ್ಟ್ರೀಯ ಸಮಾಜವಾದಿ ದೃಷ್ಟಿ ಇರಲಿಲ್ಲ.

ಶಿಕ್ಷಣದ ಕೆಲಸ ಮಾಡಲು ತರುಣರನ್ನು ಬಲತ್ಕಾರ ಮಾಡುವುದು ಹೊಸ ವಿಚಾರವಲ್ಲ. ಆದರೆ ಅನುಸರಣೀಯ. ಜನತೆಯ ಶಿಕ್ಷಣದಲ್ಲಿ ಆಸಕ್ತಿ ಇರುವವರು ಎಲ್ಲರನ್ನೂ ಸಂಸ್ಕೃತಿ, ಶಿಕ್ಷಣ, ಅಕ್ಷರವಿದ್ಯೆಗಳ ಪ್ರಚಾರದಲ್ಲಿ ಸರಕಾರಕ್ಕೆ ನೆರವಾಗಬೇಕೆಂದು ಮಂತ್ರಿಗಳು ಪ್ರಾರ್ಥಿಸಲಿ. ಅದರಿಂದ ಹೊಸ ಬಗೆಯ ಜನತಾಸಂಪರ್ಕ ಆದೀತು. ಜನಶಕ್ತಿಯನ್ನು ಜನರ ಬುದ್ಧಿಬಲವನ್ನು ಎಚ್ಚರಗೊಳಿಸಿ ಸಂಘಟಿಸುವ ಅತ್ಯುತ್ತಮ ಕೆಲಸವೂ ಇದರಿಂದ ಆದೀತು.'

ಬ್ರಿಟೀಷ್ ಪೂರ್ವ ಶಿಕ್ಷಣದಲ್ಲಿ ಬಹುಭಾಷಿತ ಹಾಗೂ ಜಾತಿ ಆಧರಿತ ಶಿಕ್ಷಣಕ್ಕೆ ಅವಕಾಶ ನೀಡಲಾಯಿತು. ಆದರೆ ಬ್ರಿಟೀಷರ ಶಿಕ್ಷಣ ನೀತಿಯ ಏಕಭಾಷಾ ಶಿಕ್ಷಣ ಅಂದರೆ ಆಂಗ್ಲ ಶಿಕ್ಷಣಕ್ಕೆ ಆದ್ಯತೆಯನ್ನು ಅವರ ವ್ಯವಹಾರಕ್ಕೆ ಪೂರಕವಾಗುವ ದೃಷ್ಟಿಯಿಂದ ನಿಯೋಜಿಸಲಾಯಿತು. ಇಂಗ್ಲಿಷ್ ವ್ಯಾವಹಾರಿಕ ಭಾಷೆಯಾಯಿತು. ಮತ್ತು ಇಂಗ್ಲಿಷ್ ಕಲಿಯದವರು ತಿಳುವಳಿಕೆಯಿಲ್ಲದವರು ಎಂಬಂತೆ ಬಿಂಬಿಸಲಾಯಿತು.

ಬ್ರಿಟೀಷ್ ಪೂರ್ವ ಶಿಕ್ಷಣವು ಕುಲಕಸಬಿಗೆ ಪೂರಕವಾಗಿ ಜೀವನೋಪಾಯಕ್ಕೆ ಅವಕಾಶ ನೀಡುತ್ತಿತ್ತು. ಆದರೆ ಬ್ರಿಟೀಷ್ ಶಿಕ್ಷಣ ನೀತಿಯ ಕ್ರೈಸ್ತ ಮಿಶನರಿಗೆ ಧರ್ಮ ಪ್ರಚಾರದ ಹಾಗೂ ಕಂಪೆನಿಗಳ ಮಾನವ ಸಂಪನ್ಮೂಲದ ರೂಪಣೆಗೆ ಆದ್ಯತೆ ನೀಡಿತು.

ಬ್ರಿಟೀಷ್ ಪೂರ್ವ ಹಾಗೂ ತದನಂತರದ ಶಿಕ್ಷಣ ನೀತಿಯನ್ನು ತುಲನಾತ್ಮಕವಾಗಿ ಹೋಲಿಸಿದಾಗ ಇಂದಿನ ಸ್ವತಂತ್ರ ಭಾರತದಲ್ಲಿರುವ ಶಿಕ್ಷಣವು ಹೊಂದಿರಬೇಕಾದ ಅಂಶಗಳೇನೆಂದರೆ:

1) ಭಾರತೀಯ ಶಿಕ್ಷಣವು ನಮ್ಮ ಸಂಸ್ಕೃತಿಗೆ ಪೂರಕವಾಗಿರಬೇಕು

2) ಶಿಕ್ಷಣ ಮತ್ತು ಉದ್ಯೋಗದ ಅವಕಾಶವು ಇಂದಿನ ತುರ್ತು.

3) ಶಿಕ್ಷಣದಲ್ಲಿ ಕೆಲವು ರೀತಿಯ ವಿದ್ಯಾಭ್ಯಾಸವೇ ಮುಖ್ಯವೆಂದು ಪರಿಭಾವಿಸಬೇಕಾಗಿಲ್ಲ.

4) ಸಮಾಜದ ಸ್ವಾಸ್ಥ್ಯಕ್ಕೆ ಸಂಬಂಧಿಸಿದ ಶಿಕ್ಷಣವು ಅಗತ್ಯವಾಗಿದೆ.

5) ನಮ್ಮ ಸಮಾಜಕ್ಕೆ ಕೇವಲ ಇಂಜಿನಿಯರ್‌ಗಳು; ಡಾಕ್ಟರರು ಮಾತ್ರವೇ ಸಾಕಾಗುವುದಿಲ್ಲ.

6) ಇಂದಿನ ಶಿಕ್ಷಣದ ಪದ್ಧತಿಯು ವಿದ್ಯಾರ್ಥಿಗಳಿಗೆ ಭಯ ಹುಟ್ಟಿಸುವ ರೀತಿಯಲ್ಲಿದೆ.

7) ಶಿಕ್ಷಣವು ಪಠ್ಯಕೇಂದ್ರಿತವಾಗಿದೆ. ಆದರೆ ಶಿಕ್ಷಣವು ವಿದ್ಯಾರ್ಥಿ ಕೇಂದ್ರಿತವಾಗಿರಬೇಕು.

8) ಇಂದಿನ ಶಿಕ್ಷಣ ಕ್ರಮದ ಪ್ರಧಾನ ಸಮಸ್ಯೆಗಳ ಕುರಿತು ಶಿವರಾಮ ಕಾರಂತರು ಹೀಗೆ ಹೇಳಿದ್ದಾರೆ:

(ಪುಟ. 69) ಪುಟ. 71 – ಪುಟ. 131)

ಇನ್ನು ಯಾವ ಪ್ರಾಯದಲ್ಲಿ ಮಕ್ಕಳಿಗೆ ಏನು ಹೇಳಿದರೆ ತಿಳಿದೀತು ಎಂಬ ಅರಿವಿಲ್ಲದೆ, ಬರೆದ ಪುಸ್ತಕಗಳೂ ವ್ಯರ್ಥ. ಕಂಠಪಾಠ ಮಾಡಿ, ಸರಳಾನುವಾದ ಕೇಳಿ, ಸಂಧಿ ವಿಂಗಡಿಸಿ, ವ್ಯಾಕರಣ ಸಿಗಿದು ತೋರಿಸುವ ರೀತಿಗಳೆಲ್ಲ ಮಕ್ಕಳ ಉತ್ಸಾಹವನ್ನು ಕೊಂದು, ಪುಸ್ತಕ ವೈರಾಗ್ಯವನ್ನು ಸಾಧಿಸುವಂತಹ ಶಿಕ್ಷಣದ ಅಪಮಾರ್ಗಗಳು.

ಮುಂದೆ, ಶಿಕ್ಷಣಕ್ಕೆ ಸಂಬಂಧಿಸಿದ ಎರಡು ಪ್ರಶ್ನೆಗಳಿವೆ. ಒಂದು, ಭಾಷೆ ಕಲಿಯುವುದು, ಕಲಿಸುವುದು ಹೇಗೆಂಬ ಪ್ರಶ್ನೆ; ಎರಡನೆಯದು – ಕಲಿಸುವ ವಸ್ತು, ವಿಷಯ, ಯೋಗ್ಯತೆಗಳ ಪ್ರಶ್ನೆ.

ಹಿಂದೆ, ಭಾರತದಲ್ಲಿ ಈಗಿನಷ್ಟು ಭಾಷೆಗಳು ಇದ್ದರೂ 'ಸಂಸ್ಕೃತ'ವನ್ನು ಯಾರೂ, ಯಾರ ತಲೆಯ ಮೇಲೆಯೂ ಹೊರಿಸಲಿಲ್ಲ. ಅದರಲ್ಲಿರುವ ಜ್ಞಾನವಿಶೇಷಕ್ಕೆ ಮನ್ನಣೆ ಕೊಡಬೇಕಾದಾಗ, ಅದನ್ನು ಕಲಿಸಬಲ್ಲವರ ಬಳಿಗೆ ವಿವಿಧ ಭಾಷೆಯ ಜನರು ಹೋಗಿ ಕಲಿತರು; ಕಲಿಸಬಲ್ಲ ಶಿಕ್ಷಕರನ್ನು ಇರಿಸಿಕೊಂಡರು.

ಇವತ್ತು, ನಮ್ಮ ಮುಂದಿರುವ ಪ್ರಶ್ನೆ – ಮತಧರ್ಮಗಳ ಮಹಿಮೆ ಮುಖ್ಯವೆಂದು ತಿಳಿಯುವವರು ಸಂಸ್ಕೃತವನ್ನೋ, ಅರಬ್ಬಿ ಭಾಷೆಯನ್ನೇ ಕಲಿಯುತ್ತಾರೆ. ಸಾಂಸ್ಕೃತಿಕ ಪ್ರಭಾವಕ್ಕೆ ಮನ್ನಣೆ ಕೊಡುವವರು ಅದನ್ನು ಕಲಿಯಬೇಕಾಗುತ್ತದೆ. ಅದನ್ನು ಕಲಿಯಲು ಅವಕಾಶವಿದ್ದರೆ ಸಾಕು. ಅದನ್ನು ಕಡ್ಡಾಯವಾಗಿಸಬೇಕೇ? ಆದರೆ, ಜಾಗತಿಕ ಜ್ಞಾನಾರ್ಜನೆಗೆ ಮತ್ತು ನಿತ್ಯ ವ್ಯವಹಾರಕ್ಕೆ ಭಾಷೆ ಬೇಕಾದವರು ಯಾವುದನ್ನು ಮೊದಲು ಕಲಿಯಬೇಕು? ಅದು, ನಿತ್ಯ ಜೀವನದಲ್ಲಿ ಒಂದು ಪ್ರಾಂತದವರಿಗೆ ಎಲ್ಲರಿಗೂ ಬೇಕಾಗುವ ಭಾಷೆ. ಕರ್ನಾಟಕ ಸರಕಾರ ನಡೆಯಲು ಬೇಕಾಗುವುದು ಕನ್ನಡ ಭಾಷೆ. ಜನರ ಮಾನಸಿಕ ಪ್ರಥಮ ವಿಕಾಸ ಕನ್ನಡದಲ್ಲಿ. ಪ್ರತಿಯೊಂದು ಭಾಷೆಗೂ ಆ ಹಕ್ಕು ಇದೆ.; ತೀರ ನಿಜ. ಆದರೆ, ಅದನ್ನು ಬೆಳೆಯಿಸಲು, ಸಾಧಿಸಲು ಯಾವ ಏರ್ಪಾಡು ಬೇಕು? ಏನೆಲ್ಲ ಯೋಗ್ಯತೆ, ಎಷ್ಟೆಲ್ಲ ಹಣ ಬೇಕು–ಎಂದು ಯೋಚಿಸಬಲ್ಲವರಿಗೆ 14 ಪ್ರಾಂತೀಯ ಭಾಷೆಗಳೂ, ಈ ತನಕ ಯಾವತ್ತು ಭಾರತದಲ್ಲಿ ಅಂಥ ಕೆಲಸ ಮಾಡಿಕೊಂಡು ಬಂದ 'ಇಂಗ್ಲೀಷು' ಬೇಕಾದಿತು. ಇಂಗ್ಲೀಷನ್ನು ಬಹಿಷ್ಕರಿಸಬಹುದು. ಆಧುನಿಕ ಜ್ಞಾನವನ್ನು ನಿರಾಕರಿಸಬಲ್ಲ ಮಹಿಮರು ಅದನ್ನು ಮಾಡಬಹುದು. ಹಿಂದೆ, ಭಾರತದಲ್ಲಿ ಸಂಸ್ಕೃತ ಏನು ಮಾಡಿತ್ತೋ, ಇಂದು ಜಗತ್ತಿಗೆ ಇಂಗ್ಲೀಷು ಅದನ್ನು ಮಾಡಲು ಶಕ್ತವಾಗಿದೆ.

ಯಾವಾಗಲೂ, ಎಳೆಯರ ಶಿಕ್ಷಣ ಪದ್ಧತಿಯಲ್ಲಿ From the Known to the unknown ಎಂಬ ರೀತಿಯೇ ಸರಿಯಾದದ್ದು. ಅನೇಕ ವೈಜ್ಞಾನಿಕ ವಿಷಯಗಳನ್ನು ಪೀಠಿಕೆಯಲ್ಲಿಯೇ ತಂದು ವಿದ್ಯಾರ್ಥಿಯನ್ನು ಹೆದರಿಸುವ ಬದಲು, ಅವನಿಗೆ ತಿಳಿದಿರುವ ವಿಷಯಗಳಿಂದ ತೊಡಗಿ, ಮುಂದುವರಿಸಬೇಕು. ತೀರ್ಮಾನ ಅವನೇ ಮಾಡುವಂತೆ ಪ್ರೇರೇಪಿಸಬೇಕು. ಅವನ ಮಾತಿನಲ್ಲೇ ವಿವರಣೆ ಇದ್ದರೆ, ಇದೇನೋ ಕುತೂಹಲಕಾರಿ ಆಗಿದೆಯಲ್ಲ ಎಂದೆನಿಸಬಹುದು. ಆದ್ದರಿಂದ, ಇನ್ನಷ್ಟು ತಿಳಿಯೋಣ ಎಂದು ವಿದ್ಯಾರ್ಥಿಗೆ ಅನಿಸುತ್ತದೆ. ಈ ದೃಷ್ಟಿಯಿಂದ, ನೀವು ಪ್ರಯೋಗ ಮಾಡಬೇಕು. ಅದರ ಯಶಸ್ಸು ಹೇಗೆ ಎಂದು ಚಿಂತಿಸಿದರೆ ಏನೂ ಪ್ರಯೋಜನ ಬರುವುದಿಲ್ಲ. ಈ

ವಿಷಯವನ್ನು ತಿಳಿದುಕೊಂಡಿರುವಂಥ ನಾಲ್ಕು ಜನರನ್ನು ಕೂರಿಸಿ, ಅವರಿಗೆ ಓದಲು ಕೊಡಿ, ಬೇಕಾದರೆ ನೀವೇ ಓದಿಯೂ ಹೇಳಬಹುದು. ನೀವು ಹೇಳಿದ್ದು ಅವರಿಗೆ ತಿಳಿಯಿತೇ, ಇಲ್ಲವೇ ಎಂಬುದನ್ನು ಪರೀಕ್ಷಿಸಲು, ಪರೀಕ್ಷಾ ವಿಧಾನ ಏರ್ಪಡಿಸಿ. ಅವರು ಬುದ್ಧಿವಂತರೋ, ಅಲ್ಲವೋ ಎಂಬುದನ್ನು ತುಲನೆ ಮಾಡುವ ಸುಳಿವೂ ಇಲ್ಲಿ ಬರಕೂಡದು. ಇಲ್ಲಿ ಹೆಡ್ಡ ಇಲ್ಲವೆ ಬುದ್ಧಿವಂತ ಎಂಬ ತುಲನೆಗೋಸ್ಕರವೇ ಪುಸ್ತಕ ರಚಿತವಾದಂತಿದೆ (ಶಿವರಾಮ ಕಾರಂತ).

ನಮ್ಮ ಶಿಕ್ಷಣವು ಈವತ್ತಿಗೂ ಬ್ರಿಟೀಷ್ ಮಾದರಿಯಲ್ಲಿಯೇ ಮುಂದುವರಿಸಿದೆ. ಅದನ್ನು ಬಿಡಿಸಿಕೊಳ್ಳಬೇಕು.

ನಮ್ಮ ಶಿಕ್ಷಣ ಪದ್ಧತಿಯು ವಿದ್ಯಾರ್ಥಿಗಳ ಸೃಜನಶೀಲತೆಯನ್ನು: ಅವರ ಮನೋವಿಕಾಸವನ್ನು ಹೊಂದುವಂತಿರಬೇಕು. ಅದಕ್ಕೆ ಕಾನೂನಿನ ರಚನೆಯು ಅತ್ಯಗತ್ಯ

* * *

೯. ಕರನಿರಾಕರಣೆ ಪರ್ಯಾಯರೂಪವಾದ ನೈತಿಕಶಸ್ತ್ರ

"ನಾನಾದರೂ ಇಂಗ್ಲೀಷ್ ಆಡಳಿತವನ್ನು ಪೀಡೆ ಎನ್ನುತ್ತೇನೆ. ಏಕೆ ದಿನೇ ದಿನೇ ಜೀವ ಹಿಂಡಿ, ಈ ದೇಶ ಹೊರಲಾರದಂಥ ಮನೆಹಾಳು ಶ್ರೀಮಂತಿಕೆಯ ದಿವಾನೀ ಫೌಜೀ ಆಡಳಿತವನ್ನು ನಡೆಸಿ, ಮೂಕಜನಕೋಟಿಯನ್ನು ಬಡತನಕ್ಕೆ ನೂಕಿದೆ ಈ ಆಡಳಿತ. ರಾಜಕೀಯ ದೃಷ್ಟಿಯಿಂದ ನಮ್ಮನ್ನು ಗುಲಾಮಗಿರಿಗೆ ತುಳಿದಿದೆ. ನಮ್ಮ ಸಂಸ್ಕೃತಿಯ ಬೇರನ್ನೇ ಕಡಿದು ಹಾಕಿದೆ. ನಿಶ್ಯಸ್ತ್ರರನ್ನಾಗಿ ಮಾಡಿ, ನಮ್ಮನ್ನು ಅಧ್ಯಾತ್ಮಹೀನರಾಗಿಸಿದೆ. ನಾವೆಲ್ಲರೂ ಅಂತಶಕ್ತಿಹೀನರಾಗಿ, ಸಾರ್ವತ್ರಿಕ ನಿರಾಯುಧೀಕರಣಕ್ಕೆ ತುತ್ತಾಗಿ, ಹೇಡಿ ಕುನ್ನಿಗಳಂತೆ ನಿಸ್ಸಹಾಯರಾಗಿದ್ದೇವೆ.

ನನ್ನ ದೇಶ ಭಾಂಧವರನೇಕರಂತೆ ನಾನು ಈ ಚಕ್ರ ಗೋಷ್ಠಿಯಿಂದ ಏನಾದರೂ ಪರಿಹಾರೋಪಾಯ ತೋರಿ ಬಂದೀತು ಎಂದು ಬಹಳವಾಗಿ ನೆಚ್ಚಿಕೊಂಡಿದ್ದೆ. ಆದರೆ ಅಧೀನ ರಾಜ್ಯ "ಡೋಮಿನಿಯನ್ ಸ್ಟೇಟಸ್" ಯೋಜನೆಗೆ ಬೆಂಬಲ ಕೊಡುತ್ತವೆ ಎಂದು ವಚನ ಕೊಡಲಿಕ್ಕೆ ನಿಮಗೂ ನಿಮ್ಮ ಬ್ರಿಟೀಷ್ ಮಂತ್ರಿಮಂಡಲಕ್ಕೂ ಸಾಧ್ಯವಿಲ್ಲವೆಂದಾಗಲೇ ಈ ಗೋಷ್ಠಿ, ಬಾಯಿಲ್ಲದ ಮೂಕ ಹಿಂದೂಸ್ಥಾನ ಅರಿಯದೆಯೂ, ಮಾತಾಳಿ ಭಾರತೀಯರೂ ಅರಿತು ಅರಯ್ದೂ, ಆರ್ತರಾಗಿ ಬಯಸುತ್ತಿರುವ

ಸುಧಾರಣೆಗಳನ್ನು ನೀಡಲಾರದಾಯಿತು. ಪಾರ್ಲಿಮೆಂಟಿನ ತೀರ್ಮಾನಕ್ಕೆ ಪೂರ್ವಭಾವಿಯಾಗಿ ಹೀಗೆ ಮಾಡಲು ಸಾಧ್ಯವೆ ಎಂಬ ತೊಡಕೇ ಇರಲಿಲ್ಲ. ಪಾರ್ಲಿಮೆಂಟಿನ ತೀರ್ಮಾನಕ್ಕೆ ಮೊದಲೇ ಹೀಗೆ ಯಾವುದಾದರೊಂದು ಯೋಜನೆಗೆ ಬ್ರಿಟೀಷ್ ಮಂತ್ರಿಮಂಡಲ ಬೆಂಬಲ ಕೊಟ್ಟ ಸಂದರ್ಭಗಳು ಇಲ್ಲದಿಲ್ಲ.

ದಿಲ್ಲಿಯ ಭೇಟಿ ವಿಫಲವಾದ ಮೇಲೆ ಪಂಡಿತ ಮೋತಿಲಾಲ್ ನೆಹರೂಗೆ ನನಗೂ 1928ರ ಕಲ್ಕತ್ತಾ ಅಧಿವೇಶನದಲ್ಲಿ ಕಾಂಗ್ರೆಸ್ ಮಾಡಿದ ಮಹಾ ನಿರ್ಣಯದಂತೆ ನಡೆದುಕೊಳ್ಳುವುದಲ್ಲದೆ ಬೇರೆ ದಾರಿಯೇ ಇರಲಿಲ್ಲ.

ಆದರೆ, ನಿಮ್ಮ ಭಾಷಣದಲ್ಲಿ ನೀವು ಬಳಸಿರುವ ಡೋಮಿನಿಯನ್ ಸ್ಟೇಟಸ್ ಶಬ್ದಕ್ಕೆ ರೂಢಿಯಲ್ಲಿರುವ ಅರ್ಥವೇ ಇದ್ದರೆ ಸ್ವಾತಂತ್ರ್ಯದ ನಿರ್ಣಯದಿಂದ ಗಾಬರಿಗೊಳ್ಳಬೇಕಾದ್ದಿಲ್ಲ. ಅಧೀನರಾಜ್ಯವೆಂದೂ ಸ್ವಾತಂತ್ರ್ಯವೆಂದರೂ ಒಂದೇ ಎಂದು ಹಿರಿಯ ಬ್ರಿಟೀಷ್ ರಾಜನೀತಿವೇತ್ತರೇ ಹೇಳಿಲ್ಲವೇ? ಆದರೆ ನನಗೇನೋ ಅಳುಕು ತತ್‌ಕ್ಷಣವೇ ಹಿಂದೂಸ್ತಾನಕ್ಕೆ ಅಂಥ ಅಧೀನ ರಾಜ್ಯಾಡಳಿತವನ್ನು ಕೊಡುವ ಉದ್ದೇಶವೇ ನಿಮಗಿಲ್ಲ ಎಂದು.

ಇದೆಲ್ಲ ಗತಕಾಲದ ಇತಿಹಾಸ. ನಿಮ್ಮ ಘೋಷಣೆ ಆದಮೇಲೆ ನಡೆದ ಹಲವಾರು ವಿದ್ಯಮಾನಗಳು ಬ್ರಿಟೀಷ್ ಮನೋವೃತ್ತಿಗೆ ಹೇಗೆ ಹರಿಯುತ್ತಿದೆ ಎಂಬುದನ್ನು ತಿಳಿಸುತ್ತಿವೆ.

ಹಿಂದೂಸ್ಥಾನದೊಂದಿಗೆ ಬ್ರಿಟನ್ ಮಾಡುತ್ತಿರುವ ವ್ಯಾಪಾರಕ್ಕೆ ಊನವಾಗುವಂತಹ ಬ್ರಿಟನ್-ಹಿಂದೂಸ್ಥಾನಗಳ ಪರಸ್ಪರ ವ್ಯವಹಾರದ ನಿಷಾಕ್ಷಿಕ ಪರಿಶೀಲನೆಗಾಗಿ, ತಮ್ಮ ದೋರಣೆಯಲ್ಲಿ ಯಾವ ವ್ಯತ್ಯಾಸಕ್ಕೂ ಪ್ರಮುಖ ಬ್ರಿಟೀಷ್ ರಾಜಕೀಯ ನಾಯಕರು ಒಪ್ಪರೆಂಬುದು ಬೆಳ್ಳಂಬೆಳಕಾಗಿದೆ. ಈ ಶೋಷಣೆಯನ್ನು ನಿಲ್ಲಿಸಲು ಏನೂ ಮಾಡದಿದ್ದರೆ ಹಿಂದೂಸ್ತಾನದ ನೆತ್ತರನ್ನೂ ಇನ್ನೂ ಹೆಚ್ಚಾಗಿ ವೇಗವಾಗಿ ಹಿಂಡಬೇಕಾದೀತು. ರೂಪಾಯಿಗೆ ಒಂದೂವರೆ ಷಿಲಿಂಗ್ ವಿನಿಮಯದ ಧಾರಣೆಯಿಂದ ಒಂದೇ ಏಟಿಗೆ ಹಿಂದೂಸ್ತಾನಕ್ಕೆ ಕೋಟ್ಯಾಂತರ ರೂಪಾಯಿ ನಷ್ಟವಾಗುತ್ತದೆ. ಕೊಚ್ಚಿಹೋಗುತ್ತದೆ. ಆದರೂ ನಿಮ್ಮ ಅರ್ಥ ಮಂತ್ರಿಗೆ ಅದೇ ಪರಮ ಸಿದ್ಧಾಂತ. ಇಂಥವು ಇನ್ನು ಎಷ್ಟೋ ಇವೆ. ಇದನ್ನೂ ಅವನ್ನೂ ಯಾವುದೋ ಒಂದು ಬಗೆಯ ಸರಳ ಮಾರ್ಗದಿಂದ ಸವಿನಯವಾಗಿಭಗ್ನಗೊಳಿಸಬೇಕೆಂದು ಯತ್ನ ಮಾಡಿದರೆ, ಈ ಗಂಭೀರ ಪ್ರಯತ್ನವನ್ನು ಅದುಮಿ ಹಾಕಲು ದೇಶದ ಶ್ರೀಮಂತರ

> ಸಹಾಯವನ್ನು ಕೇಳಲು ನೀವು ಹಿಂದೆಗೆಯಲಿಲ್ಲ. ಯಾವ ಹೆಸರಿನಲ್ಲಿ ಈ ನೆರವು ಬೇಡುತ್ತೀರಿ ಗೊತ್ತೇ? ಹಿಂದೂಸ್ತಾನವನ್ನು ಪುಡಿ ಪುಡಿಯಾಗಿ ಧೂಳಾಗಿ ಮಾಡುತ್ತಿರುವ ಆಡಳಿತದ ಹೆಸರಿನಲ್ಲಿ. ನಮ್ಮ ಸ್ವಾತಂತ್ರ್ಯ ದಾಹದ ಕಾರಣವೇನೆಂಬುದು ರಾಷ್ಟ್ರದ ಹೆಸರಿನಲ್ಲಿ ದುಡಿಯುತ್ತಿರುವ ಕೆಲಸಗಾರರೆಲ್ಲ ಅರಿತುಕೊಂಡು ಎಲ್ಲರಿಗೂ ತಿಳಿಸದಿದ್ದರೆ, ನಮಗೆ ಬೇಡದ ರೀತಿಯಲ್ಲಿ ಸ್ವಾತಂತ್ರ್ಯ ಬಂದೇ ಬಿಟ್ಟೀತು ಎಂಬ ಭಯವಿದೆ. ಯಾವ ಮೂಕ ಜನ ಕೋಟಿಗಾಗಿ ಈ ಸ್ವಾತಂತ್ರ್ಯವನ್ನು ಬಯಸುತ್ತಿದ್ದೇವೋ, ಯಾರಿಗಾಗಿ ಅದು ಪರಿಗ್ರಾಹ್ಯವೋ ಅವರಿಗೆ ಆಗ ಅದು ನಿಷ್ಪ್ರಯೋಜಕವಾದೀತು. ಈ ಕಾರಣಕ್ಕಾಗಿಯೇ ಇತ್ತೀಚೆಗೆ ನಾನು ಸ್ವಾತಂತ್ರ್ಯವೆಂದರೇನು ಎಂಬುದನ್ನು ಜನತೆಗೆ ಮೇಲಿಂದ ಮೇಲೆ ತಿಳಿಸುತ್ತಿರುವುದು. (ಆಯ್ದ ಪತ್ರಗಳು– ಪುಟ. 118)

ವಸಾಹತುಶಾಹಿ ಅನುಭವದ ರಾಜಕಾರಣದಲ್ಲಿ ಹೀಗೆ ಮೂರು ಮುಖಗಳಿವೆ : ಅದರ ಅನುಭವವನ್ನು ವಿವರಿಸುವುದಿದ್ದರೆ ಆಗಿನ ಪ್ರಭುತ್ವಕ್ಕೆ ಮೂರು ತಲೆಯಿದೆ.

1 ಸರಕಾರೀ ರೂಪ ಆಡಳಿತ ಪದ್ಧತಿ: ಇದು ರಾಜಕಾರಣಕ್ಕೆ ನೇರವಾದ ಸಂಬಂಧ ಇರಿಸಿಕೊಂಡಿರುವಂಥದ್ದು. ಇದರಲ್ಲಿ ಕಾನೂನು, ತೀರ್ಪು, ಕಂದಾಯ, ಆಡಳಿತ, ಆರ್ಥಿಕ ನೀತಿಗಳು ಸೇರಿಕೊಂಡಿವೆ. ಉದಾ : ವಾರನ್ ಹೇಸ್ಟಿಂಗ್ಸ್‌ನಿಂದ ಬಂದ ಆಡಳಿತ ಕ್ರಮಗಳು ಗಾಂಧಿಗೆ ಇದು ಇಷ್ಟವಿರಲಿಲ್ಲ.

2 ಸೇವೆಯ ಹೆಸರಿನಲ್ಲಿ, ಭಾರತದ ಜನರನ್ನು ಅಭಿವೃದ್ಧಿಯತ್ತ ಕೊಂಡೊಯ್ಯುವ ನೀತಿ : ಇದರಲ್ಲಿ ಇಂಗ್ಲೆಂಡಿನಿಂದ ಇಲ್ಲಿಗೆ ಬಂದ ಗವರ್ನರ್ ಜನರಲ್‌ಗಳ ಉದಾರವಾದಿ ನೀತಿ. ಕ್ರೈಸ್ತ ಮಿಶನರಿಗಳು ಪ್ರಾರಂಭಿಸಿದ ಶಿಕ್ಷಣ ಸಂಸ್ಥೆಗಳು : ಆಸ್ಪತ್ರೆಗಳು ಸೇರಿಕೊಂಡಿವೆ. ಈ ಹಿನ್ನೆಲೆಯಿಂದ ಗಾಂಧಿಯ ಸ್ವಾವಲಂಬನೆಯನ್ನು ಅರ್ಥಮಾಡಿಕೊಳ್ಳಬೇಕು.

3 ಕೇವಲ ಮಾರುಕಟ್ಟೆಯ ದೃಷ್ಟಿಯಿಂದ ಇಲ್ಲಿಗೆ ಬಂದ ಇಂಗ್ಲೆಂಡಿನ ವರ್ತಕರು. ಈ ವರ್ತಕರ ನೀತಿಗೆ ಬ್ರಿಟೀಶ್ ಸರಕಾರವು ಎರಡನೆಯ ಹಂತದಲ್ಲಿ ಕಡಿವಾಣವನ್ನು ರೂಪಿಸಿತು. ಅದು ಬೇರೆ ಪ್ರಶ್ನೆ.

ಹಾಗೆ ನೋಡುವುದಿದ್ದರೆ ಕಂದಾಯ, ಆಡಳಿತದಲ್ಲಿ ನಾಗರಿಕ ನ್ಯಾಯ, ಸರಕಾರದ ನೀತಿಗಳು ಭಾರತಕ್ಕೆ ತುಂಬಾ ಹೊಸದಾಗಿರಲಿಲ್ಲ. ಕಂದಾಯ, ಆಡಳಿತವನ್ನು ಬ್ರಿಟೀಶ್ ಸರಕಾರವು ಹೇರುವಾಗ ಮೊಗಲ ಅರಸರು ಯಾವ ನೀತಿಯನ್ನು ಹೊಂದಿದ್ದರೋ

ಅದನ್ನು ಮುಂದುವರಿಸುವ ಪ್ರಯತ್ನ ಮಾಡಿತು. 'ದಿ ಗ್ರಾಂಟ್ ಆಫ್ ದಿ ದಿವಾನಿ, 1765' ಎಂಬ ಹೆಸರಿನಿಂದ ಇದನ್ನು ಕರೆಯಲಾಗಿದೆ. ಭಾರತದಲ್ಲಿ ಕಂಪೆನಿ ಸರಕಾರ, ಅದರ ಅಧಿಕಾರ, ಮೊಗಲ ಅರಸರ ಆಡಳಿತ ಎರಡೂ ಜೊತೆಜೊತೆಗೆ ಅಸ್ತಿತ್ವದಲ್ಲಿ ಇದ್ದಾಗ ಅದನ್ನು ಇಬ್ಬಗೆಯ ಅಧಿಕಾರ ಕೇಂದ್ರಗಳೆಂದು ಕರೆಯಲಾಗುತ್ತಿತ್ತು. ಉದಾಹರಣೆಗೆ ಮೈಸೂರು ಪ್ರಾಂತ್ಯದಲ್ಲಿನ ಜನರು ಟಿಪ್ಪುವಿನ ಆಡಳಿತ, ಮೈಸೂರು ಅರಸೊತ್ತಿಗೆಯನ್ನು, ಪಾಳೆಯಗಾರರನ್ನು, ಬ್ರಿಟೀಶರನ್ನು ನೋಡಿದ್ದಾರೆ. ಇಂಥ ಪ್ರಾಂತ್ಯದ ಜನರು ಅನೇಕ ರೀತಿಯ ಆಡಳಿತ 'ಅಧಿಕಾರ'ವನ್ನು ನೋಡಿದರು. ಆಯಾ ಸಂದರ್ಭದ ಆಡಳಿತ ನೀತಿಯನ್ನು ಒಪ್ಪಿದರು. ಮತ್ತು ಅದನ್ನು ಅವರು ಸ್ವೀಕರಿಸಲೇಬೇಕಾದ ಚಾರಿತ್ರಿಕ ಅನಿವಾರ್ಯವಾಗಿತ್ತು. ದಕ್ಷಿಣ ಕನ್ನಡ ಮತ್ತು ಉತ್ತರ ಕನ್ನಡ ಜಿಲ್ಲೆಗಳಲ್ಲಿ ಪ್ರಾಂತೀಯ ಅರಸರು ಒಂದು ಕಡೆಯಿಂದ, ಮತ್ತೊಂದು ಕಡೆಯಿಂದ ಮೈಸೂರಿನ ಪ್ರತಿನಿಧಿಗಳು, ಬೇರೊಂದು ಕಡೆಯಿಂದ ಬಂದರಿನಿಂದ ಬಂದಿಳಿದ ಮಿಶನರಿಯ ಜನರು, ಬ್ರಿಟೀಶರು – ಹೀಗೆ ಜನಸಾಮಾನ್ಯರು ಬೇರೆ ಬೇರೆ ಪ್ರಭಾವಕ್ಕೆ ಒಳಗಾಗಿದ್ದರು. ದ್ವಿ ಮಾದರಿ ಆಡಳಿತ ಪದ್ಧತಿ, ಅದರ ಪರಿಣಾಮಗಳು ಹದಿನೆಂಟನೆಯ ಶತಮಾನದಲ್ಲಿ ತುಳು ನಾಡಿನ ಮೇಲೆ ಒಂದು ರೀತಿಯ ಪ್ರಭಾವ ಬೀರಿದ್ದವು ಎನ್ನುವುದು ಗಮನಾರ್ಹ ಭಾರತದ ಒಂದೊಂದು ರೀತಿಯ ಯಜಮಾನಿಕೆಯು ಅದರ ಪ್ರಾತಿನಿಧಿಕವೆನ್ನಬಹುದಾದ ಸಂಹಿತೆಗಳು ಒಂದು ತೆರವಾಗಿದ್ದರೆ, ಬ್ರಿಟೀಶರು ಬಂದ ಮೇಲೆ ಅದು ನಡೆಸಿದ ಆಡಳಿತ ಪದ್ಧತಿಗಳು ಬೇರೊಂದು ರೀತಿಯವಾಗಿದ್ದವು. ಇದು ಕೇವಲ ಭಾರತಕ್ಕೆ ಸೀಮಿತವಾಗಿಲ್ಲ. ಹದಿನೆಂಟನೆಯ ಶತಮಾನದ ಇಂಗ್ಲೆಂಡಿನಲ್ಲಿಯೇ ರಾಷ್ಟ್ರೀಯತೆ, ಪ್ರಭುತ್ವ, ನಾಗರಿಕ ಸಮಾಜ ಇವುಗಳು ಚರ್ಚೆಗೆ ಗುರಿಯಾಗಿದ್ದವು. ನಾಗರಿಕ ಸಮಾಜವು ಪುನರ್ ವ್ಯಾಖ್ಯೆಗೆ ಗುರಿಯಾದ ಕಾರಣ ಮನುಷ್ಯನ ಸ್ವಾತಂತ್ರ್ಯ. ಅವನ ಅಭಿವೃದ್ಧಿ, ಒಬ್ಬ ವ್ಯಕ್ತಿಯ ಘನತೆಯ ಪ್ರಶ್ನೆಗಳು ಆಗಿನ ಇಂಗ್ಲೆಂಡಿನ ರಾಜಕೀಯ ನೀತಿಯಾಯಿತು (Seneviratne (ed.), 1997, Nicolas Dirks, p. 120).

> **ನೀತಿ ಅನೀತಿಯ ವಿಚಾರಮಾಡದೆ ಧನಸಂಗ್ರಹದ ನಿಯಮದ ರಚನೆ ಮನುಷ್ಯನ ಜಂಬ ತೋರಿಸುವ ಸಂಗತಿ. ಅತ್ಯಂತ ಅಗ್ಗವಾಗಿ ಕೊಂಡು ತೀರಾ ತುಟ್ಟಿಯಾಗಿ ಮಾರುವ ನಿಯಮಕ್ಕೆ ಸಮನಾದ ಲಜ್ಜಾಸ್ಪದ ಸಂಗತಿ ಮತ್ತೊಂದಿಲ್ಲ. ಅತಿ ಅಗ್ಗವಾಗಿ ಕೊಳ್ಳುವುದೇನೋ ಸರಿ, ಆದರೆ ಆ ಧಾರಣೆ ಇಳಿದದ್ದಾದರೂ ಹೇಗೆ? ಬೆಂಕಿ ಬಿದ್ದುದರಿಂದ ಸುಟ್ಟ ಕಟ್ಟಿಗೆಯಿಂದಾದ ಇದ್ದಲು ಅಗ್ಗವೇ ಇದ್ದೀತು. ಭೂಕಂಪದಿಂದ ಕುಸಿದು ಬಿದ್ದ ಮನೆಗಳ ಇಟ್ಟಿಗೆ**

ಅಗ್ಗವೇ; ಬೆಂಕಿ, ಭೂಕಂಪದ ಅನಾಹುತಗಳು ಜನರ ಲಾಭಕ್ಕೆಂದೇ ಎಂದು ಯಾರೂ ಹೇಳರು. ಹೀಗೆಯೇ ತೀರಾ ತುಟ್ಟಿಯಾಗಿ ಮಾರುವುದು ಸರಿಯೇ, ಆದರೆ ತುಟ್ಟಿ ಆದುದಾದರೂ ಹೇಗೆ? ಇಂದು ನಿಮ್ಮರೊಟ್ಟಿಗೆ ಒಳ್ಳೆಯ ಬೆಲೆ ಸಿಕ್ಕೀತು. ಇನ್ನೇನು ಸಾಯುವುದರಲ್ಲಿದ್ದ ಮನುಷ್ಯನ ಕೊನೆಯ ಕಾಸುಗಳನ್ನು ಪಡೆದು ಆ ಧಾರಣೆ ಉಂಟುಮಾಡಿದಿರಾ? ಅಥವಾ ನೀವು ಆ ರೊಟ್ಟಿಗಳನ್ನೂ ನಾಳೆ ನಿಮ್ಮ ಸರ್ವಸ್ವವನ್ನೂ ನುಂಗಿಹಾಕಿಬಿಡುವ ಸಾಹುಕಾರನಿಗೆ ಕೊಟ್ಟುಬಿಟ್ಟಿರಾ? ಇಲ್ಲವೆ ನಿಮ್ಮ ಬ್ಯಾಂಕನ್ನು ನಾಳೆ ಕೊಳ್ಳೆ ಹೊಡೆಯುವ ಸಿಪಾಯಿಗೆ ಕೊಟ್ಟಿರೋ? ಇವುಗಳಲ್ಲಿ ಒಂದಕ್ಕೂ ನೀವು ಈಗ ಉತ್ತರ ಕೊಡದಿರುವುದು ಸಾಧ್ಯ, ಏಕೆಂದರೆ ನಿಮಗೆ ಇದಾವುದರ ಅರಿವೂ ಇರದು. ನೀವು ನಿಮ್ಮ ರೊಟ್ಟಿಯನ್ನು ಉಚಿತವಾದ ಬೆಲೆಗೆ ನೀತಿಪೂರ್ವಕವಾಗಿ ಮಾರಿರುವಿರೋ ಇಲ್ಲವೋ ಎಂಬುದನ್ನು ಹೇಳಬಲ್ಲಿರಿ. ಯೋಗ್ಯನ್ಯಾಯದ ಚಿಂತೆ ಇಡುವುದು ಅಗತ್ಯ. ನಿಮ್ಮ ಕೃತಿಯಿಂದ ಬೇರಾರಿಗೂ ದುಃಖವಾಗಬಾರದೆಂದು ತಿಳಿದು ಅದರಂತೆ ನಡೆಯುವುದು ನಿಮ್ಮ ಕರ್ತವ್ಯ

ಹಣ ಕೊಟ್ಟರೆ ಎಷ್ಟು ದುಡಿಮೆ ಸಿಗುತ್ತದೆಯೆಂಬುದನ್ನೇ ಅದರ ಬೆಲೆ ಅವಲಂಬಿಸಿದೆ. ದುಡಿಮೆ ಪುಕ್ಕಟೆಯಾಗಿ ಸಿಗುತ್ತಿದ್ದರೆ ಹಣದ ಅಗತ್ಯವೇ ಬೀಳುತ್ತಿರಲಿಲ್ಲ. ಹಣವಿಲ್ಲದೆಯೇ ಜನರ ಪರಿಶ್ರಮ ಸಿಕ್ಕೀತು, ಅಂಥ ಉದಾಹರಣೆಗಳೂ ಇವೆ, ಅವನ್ನು ನಾವು ಮೊದಲೇ ವಿಮರ್ಶಿಸಿದ್ದೇವೆ, ಧನಬಲಕ್ಕಿಂತ ನೀತಿಬಲವೇ ಹೆಚ್ಚು ಕಾರ್ಯಕಾರಿ ಎಂಬುದನ್ನು ನೋಡಿದ್ದೇವೆ, ಧನ ಕೆಲಸ ಮಾಡದ ಕಡೆ ಸದ್ಗುಣ ಕೆಲಸಮಾಡುವುದನ್ನೂ ನೋಡಿಬಿಟ್ಟಿದೇವೆ. ಇಂಗ್ಲೆಂಡಿನ ಅನೇಕ ಸ್ಥಳಗಳಲ್ಲಿ ಜನ ಹಣದ ಮೋಹಕ್ಕೆ ಬಲಿ ಬೀಳರು.

ಹಣವೆಂದರೆ ಜನರಿಂದ ಕೆಲಸ ಮಾಡಿಸುವ ಶಕ್ತಿ ಎಂದು ನಾವು ಭಾವಿಸಿದರೆ ಅಂಥವರು ಎಷ್ಟೆಷ್ಟು ಚತುರರೋ ಅಷ್ಟೇ ಪ್ರಮಾಣದಲ್ಲಿ ಸಂಪತ್ತು ಬೆಳೆದೀತು. ಹೀಗೆ ವಿಚಾರ ಮಾಡಿದರೆ ನಿಜವಾದ ಸಂಪತ್ತು ಬೆಳ್ಳಿಬಂಗಾರ ಅಲ್ಲ, ಮನುಷ್ಯನೇ ಎಂಬುದು ಅರಿವಾದೀತು. ಭೂಮಿಯ ಬಸಿರು ಬಗೆದು ಧನ ಹುಡಕಬೇಕಿಲ್ಲ, ಮನುಷ್ಯನ ಹೃದಯದಲ್ಲಿ ಅದನ್ನು ಶೋಧಿಸಬೇಕು. ಇದು ಸರಿಯೆಂದಾದರೆ ಜನರ ತನುಮನಗಳನ್ನು ಸ್ವಸ್ಥವಾಗಿ ಇಡುವುದೇ ಅರ್ಥಶಾಸ್ತ್ರದ ನಿಜವಾದ ನಿಯಮ. ಆಗ ಇಂಗ್ಲೆಂಡು ಗೋಲ್ಕಂಡದ ವಜ್ರ

> ವೈಡೂರ್ಯಗಳಿಂದ ತನ್ನ ಗುಲಾಮರನ್ನು ಅಲಂಕರಿಸಿ ತನ್ನ ವೈಭವಪ್ರದರ್ಶನ ಮಾಡುವ ಬದಲು ಯೂನಾನಿ ಸುಪ್ರಸಿದ್ಧ ಪುರುಷನೊಬ್ಬ ಹೇಳಿದಂತೆ ತನ್ನ ನೀತಿವಂತ ಮಹಾಪುರುಷರ. ಕಡೆ ತೋರಿಸಿ "ಇವರೇ ನನ್ನ ಐಶ್ವರ್ಯ" ಎಂದು ಹೇಳುವ ಕಾಲವೂ ಬಂದೀತು.
>
> **(ಗಾಂಧಿ ಅರ್ಥವಿಚಾರ ಪುಟ. 18)**

ಗಾಂಧಿ ಅರ್ಥಶಾಸ್ತ್ರ ಭಿನ್ನ

ಹದಿನೇಳನೆಯ ಶತಮಾನದ ಪೂರ್ವಾರ್ಧದಿಂದ ಪ್ರಾರಂಭವಾದ ಅನೇಕ ರೀತಿಯ ಬದಲಾವಣೆಗಳು ಹದಿನೆಂಟನೆಯ ಶತಮಾನಕ್ಕೆ ತಲುಪುವಷ್ಟರಲ್ಲಿ ವ್ಯಕ್ತಿ, ಅವನ ವೈಯಕ್ತಿಕತೆ ಮುಂತಾದ ಪರಿಕಲ್ಪನೆಗಳ ಕಡೆಗೆ ಬಂದು ತಲುಪಿತು. ಈ ಪರಿಕಲ್ಪನೆಯನ್ನು ಮನಸ್ಸಿನಲ್ಲಿ ಇರಿಸಿಕೊಂಡು ಬ್ರಿಟೀಶರು ಇಂಡಿಯಾಕ್ಕೆ ಅದನ್ನೇ ಅನ್ವಯಿಸಲು ತೊಡಗಿದರು. ವಾಸ್ತವವಾಗಿ ಭಾರತದಲ್ಲಿ ಬ್ರಿಟೀಶರು ಮತ್ತು ಮೊಗಲರು ಆಳುತ್ತಿದ್ದ ಸ್ಥಿತಿಯನ್ನು 'ಎರಡು ರೀತಿಯ ಸರಕಾರದ ಮಾದರಿಯದು' ಎಂದು ಕರೆದುದು ರಾಬರ್ಟ್‌ಕ್ಲೈವ್. ಆದರೆ ಬ್ರಿಟೀಶರು ಭಾರತಕ್ಕೆ ಬಂದ ಇಲ್ಲಿಯ ಮೂಲ ಸಮಸ್ಯೆಗಳೇನು ಎಂಬುದನ್ನು ಅರ್ಥಮಾಡಿಕೊಳ್ಳಬೇಕಾದ ಅಗತ್ಯವು ಅವರಿಗಿರಲಿಲ್ಲ. ಭಾರತೀಯ ಮೂಲದ ಸ್ಥಳೀಯ ನಿಯಮಾವಳಿ, ಆಡಳಿತದ ಕ್ರಮ, ಸಾಮಾಜಿಕ ಸಂಹಿತೆಗಳ ಬದಲಿಗೆ ಬ್ರಿಟೀಶ್ ಕಂಪೆನಿಯು ಹೊಸ ರೀತಿಯ ಕಂದಾಯ, ನ್ಯಾಯಾಂಗ ಆಡಳಿತಾತ್ಮಕ ಪರಿಕ್ರಮವನ್ನು, ಅದಕ್ಕೆ ಬೇಕಾದ ಪರಿಕರವನ್ನು ಅಂದರೆ ನಿಯಮಾವಳಿಯನ್ನು ಬಳಸಿಕೊಂಡಿತು. ಹೀಗಾಗಿ ಭಾರತೀಯ ಸಾಮಾಜಿಕ ಜೀವನದಲ್ಲಿ ಹೊಸತನ ಪ್ರವೇಶವಾಯಿತು. 'ನಾಗರಿಕ' ಎನ್ನುವ ಪರಿಕಲ್ಪನೆಯೇ ವಸಾಹತು ರಾಷ್ಟ್ರಗಳಲ್ಲಿ ಹೊಸ ರೀತಿಯ ಪರಿಭಾಷೆಗಳಾಗಿವೆ. ಬ್ರಿಟೀಶರ ಜೊತೆಗೆ ಬಂದ ಬೇರೆ ಸಂಸ್ಥೆಗಳು ಕೂಡಾ ಇದೇ ಪ್ರಯತ್ನವನ್ನು ಮಾಡಿದವು. (ಉದಾ : ಚರ್ಚ್, ಶಿಕ್ಷಣ, ನಾಗರಿಕ ಸಮಾಜದ ಭಿನ್ನ ಭಿನ್ನ ರೀತಿಯ ಸಂಸ್ಥೆಗಳು ವ್ಯಕ್ತಿಯ ಹಿತಾಸಕ್ತಿಯ ಪರವಾಗಿದ್ದವು. ಇದು ಅಧಿಕಾರದ ರೂಪಕ್ಕಿಂತ ಬೇರೆಯಾದವು. ಆಧುನಿಕ ರಾಜಕೀಯ ಪ್ರಭುಸಂಹಿತೆಗಳು (Modern Political State) ಅದಕ್ಕೆ ತಕ್ಕುದಾದ ಸೇನೆಯು, ಆಧುನಿಕ ತಾಂತ್ರಿಕತೆಯು ರಾಜಕಾರಣ ಭಾರತೀಯ ಸಮಾಜದಲ್ಲಿ ಹೊಸ ಪರಿವರ್ತನೆಯನ್ನು ರೂಪಿಸಿತು. ಆಧುನಿಕ ನಾಗರಿಕ ಸಮಾಜದಲ್ಲಿ ವ್ಯಕ್ತಿಯನ್ನು ಗುರುತಿಸುವುದು ಅವನ ಹುದ್ದೆ. ಅವನ ವೈಯಕ್ತಿಕತೆಗಳ ಮೂಲಕ ಆಗಿರುವುದರಿಂದ ಅದರಲ್ಲಿ 'ವ್ಯಕ್ತಿ'ಯು ತನ್ನ

ಅನನ್ಯತೆಯನ್ನು ತನ್ನ ಹೊಸ ನಾಗರಿಕ ರೂಪಿಸಿದ ಉದ್ಯೋಗದ ಮೂಲಕ ಗುರುತಿಸುವಂತಾಯಿತು ಎಂದು ಒಂದು ಸಂದರ್ಭದಲ್ಲಿ ಎರಿಕ್ ಫ್ರಾಂ ಹೇಳುತ್ತಾನೆ. ಹೊಸದಾಗಿ ಬಂದ 'ಕಂಪೆನಿ ಸರಕಾರ'ವು (ಇದು ಜನಸಾಮಾನ್ಯರ ಮಾತಿನಲ್ಲಿ – ಗ್ರಾಮ್ಯವಾಗಿ 'ಕುಂಪಣಿ ಸರಕಾರ'ವೆಂದು, ಸಂಸ್ಕೃತ ಭಾಷೆಯನ್ನು ರೂಢಿಯಲ್ಲಿ ತಂದ ಮೇಲುಜಾತಿಯ ಜನರು ಮ್ಲೇಚ್ಛರ ಸರಕಾರವೆಂದೂ ಕರೆದರು. ವ್ಯಕ್ತಿ ಹಿತಾಸಕ್ತಿಯ ಪರವಾಗಿರುವುದರಿಂದ ಅದಕ್ಕನುಸಾರವಾದ ವ್ಯಾಖ್ಯೆ ಪ್ರಾರಂಭವಾಯಿತು. ಅವನ ಉದ್ಯೋಗಗಳನ್ನು ಹೊಸದಾಗಿ ಸೃಷ್ಟಿಸಿತು. ಕಂಪೆನಿಗೆ ಅದು ಅಗತ್ಯವೂ ಆಗಿತ್ತು.

ಭಾರತದಲ್ಲಿ ಕಾನೂನು, ಆಢಳಿತ, ನ್ಯಾಯಾಂಗವನ್ನು ಬ್ರಿಟೀಶರು ಪರಿಚಯಿಸುವಾಗ ಅದಕ್ಕೆ ಯಾವುದೇ ಧಾರ್ಮಿಕ, ನೈತಿಕ, ತಳಹದಿಯಿರಲಿಲ್ಲ. ಯಾವ ರೀತಿ ಭಾರತೀಯರ ಮೇಲೆ ತಮ್ಮ ರಾಜಕೀಯ ನೀತಿಯ ಮೂಲಕ ಆಳಬಹುದು ಎಂಬುದರ ಬಗ್ಗೆ ಚಿಂತಿಸಿದರು. ಕಾನೂನು, ಆಡಳಿತ, ನ್ಯಾಯಾಂಗವನ್ನು ಭಾರತದ ಮೇಲೆ ಹೇರುವುದು ಎಂದರೆ ಬರಿಯ ಆಳ್ವಿಕೆಯು ಮಾತ್ರ. ಆಡಳಿತ ಯಂತ್ರದ ನೀತಿಯೆಂದರೆ ಭಾರತೀಯರ ಮೇಲೆ ಹಿಡಿತ ಸಾಧಿಸುವುದು ಎಂದು ತಿಳಿದುಕೊಂಡ ಬ್ರಿಟೀಶರ ನೀತಿಗೂ, ಭಾರತೀಯ ಮೂಲದ ಅರಸೊತ್ತಿಗೆಯ ಕ್ರಮಕ್ಕೂ ಬಹಳ ಭಿನ್ನತೆಯಿದೆ. ಮೊದಲನೆಯದರಲ್ಲಿ ನಿಯಮಗಳು, ಅದಕ್ಕೆ ಸಂಬಂಧಿಸಿದ ದಾಖಲೆಯ ಕ್ರಮಗಳು ಪ್ರಧಾನವಾದವು. ಭಾರತೀಯ ಮೂಲದ ಅರಸೊತ್ತಿಗೆಯಲ್ಲಿ ನಿಯಮ, ಸಾಕ್ಷ್ಯ, ಆಧಾರ ಇತ್ಯಾದಿ ಪರಿಭಾಷೆಗಳು ಮುಖ್ಯವಾಗಿರಲಿಲ್ಲ. ಮೂಲತಃ ಪ್ರಜೆ–ಪ್ರಭುಗಳ ನಡುವಣ ಸಂಬಂಧವು ಆಡಳಿತಾತ್ಮಕವಾಗಿ ಮಾತ್ರ ಮುಖ್ಯವಾಗಿರಲಿಲ್ಲ. ಅದರಲ್ಲಿ ಪ್ರಜೆ–ಪ್ರಭುಗಳ ಸಂಬಂಧವು ಭಾವನಾತ್ಮಕವಾದುದು ಕೂಡಾ ಆಗಿತ್ತು. ಅದಕ್ಕೆ ನೈತಿಕ ತಳಹದಿಯಿತ್ತು. ಅದರ ಕಾನೂನುಗಳು ಕೂಡಾ ಧಾರ್ಮಿಕ ಸಂಹಿತೆಗಳಿಂದ ಕೂಡಿಕೊಂಡಿತ್ತು. ಪ್ರಜೆಗಳನ್ನು ರಕ್ಷಿಸುವುದು ಪ್ರಭುವಿನ ಕರ್ತವ್ಯ. ಅದರಲ್ಲಿ ರಕ್ಷಣೆ ಎನ್ನುವುದು ಮುಖ್ಯ ಪರಿಕಲ್ಪನೆಯಾಗಿದೆ. 'ರಾಜನೀತಿ' ಎಂಬುದು ರಕ್ಷಣೆ, ಧರ್ಮ, ನೀತಿ ಇವುಗಳಿಗಿಂತ ಬೇರೆಯಾಗಿರಲಿಲ್ಲ. ಹಿಂದೂ ರಾಜರು ಆಳ್ವಿಕೆಯನ್ನು ನಡೆಸುವಾಗ ಅದಕ್ಕೆ ಸಂಬಂಧಿಸಿದ ನಿಯಮಾವಳಿಗಳು – ಸ್ಮೃತಿ, ರಾಜನೀತಿಗಳಿಂದ ಕೂಡಿಕೊಂಡಿತ್ತು. ಅದು ಚಾಣಕ್ಯ ನೀತಿಯಾಗಿರಬಹುದು ಅಥವಾ ಕೌಟಿಲ್ಯನ ಅರ್ಥಶಾಸ್ತ್ರವಾಗಿರಬಹುದು – ಅವಕ್ಕೆ ನಿರ್ದಿಷ್ಟ ನಿಯಮಗಳಿವೆ. ಕೌಟಿಲ್ಯನ ಅರ್ಥಶಾಸ್ತ್ರ ಮತ್ತು ಮಾನಸೋಲ್ಲಾಸದಲ್ಲಿ ಬರುವ ಕೆಲವು ಅಂಶಗಳನ್ನು ಇಲ್ಲಿ ಉಲ್ಲೇಖಿಸಬಹುದು: ಅದನ್ನು ಮೀರಿ ರಾಜನು

ವರ್ತಿಸುವಂತಿಲ್ಲ. ಆದುದರಿಂದಲೇ ಆಳುವ ದೊರೆಯನ್ನು ಜನಸಾಮಾನ್ಯರು ದೇವತಾಂಶ ಸಂಭೂತ ಎಂಬಂತೆ ಕಾಣುತ್ತಿದ್ದರು. ಇದರಿಂದ 'ರಾಜಭಕ್ತಿ' ಎಂಬ ಪರಿಕಲ್ಪನೆಯು ಹುಟ್ಟಿಕೊಂಡಿತು. ಇಂಥದೊಂದು ಸಂದರ್ಭದಲ್ಲಿ ಗಾಂಧಿಯವರ ಅಭಿಪ್ರಾಯವನ್ನು ದಾಖಲಿಸುವುದು ಸೂಕ್ತ.

> **'ಧರ್ಮ ಎಂಬ ಶಬ್ದಕ್ಕೆ ವಿಶಾಲವಾದ ಮತ್ತು ಉದಾರವಾದ ಅರ್ಥವನ್ನು ಕೊಡಬೇಕು. ಧರ್ಮವೆಂದರೆ ಆತ್ಮದ ಸ್ವರೂಪವನ್ನು ಅರಿಯುವುದು." (ಗಾಂಧಿ, 2001, ಪು. 36).**

"1930 ಸೆಪ್ಟಂಬರ್ 30 ರಂದು ಮದನ ಮೋಹನ ಮಾಲವೀಯ ಅವರು 'ಅಸ್ಪೃಶ್ಯತಾ ನಿರೋಧಕ ಸಂಘ' ಪ್ರಾರಂಭಿಸಿದ್ದರು. ಮತ್ತು ಗಾಂಧಿಯವರು ಅಸ್ಪೃಶ್ಯವರ್ಗವನ್ನು 'ಹರಿಜನ' ಎಂದು ಕರೆದರು. ಇಲ್ಲಿ ಗಾಂಧಿಯವರು ಅಸ್ಪೃಶ್ಯತಾ ವರ್ಗವನ್ನು 'ಹರಿಜನ' ಎಂದು ಕರೆದಿರುವುದಕ್ಕೂ ಧಾರ್ಮಿಕವಾದ ತಳಹದಿಯಿದೆ. ಇದಕ್ಕೆ ಪೂರಕವಾಗಿ ಮತ್ತೊಂದು ಸಂಗತಿಯನ್ನು ಪ್ರಸ್ತಾವಿಸಬಹುದು. ಅದು 'ಮಲೆ ಕುಡಿಯ' ಎಂಬ ವರ್ಗಕ್ಕೆ ಸಂಬಂಧಿಸಿದ್ದು. 'ಮಲೆ ಕುಡಿಯರ ಯಜಮಾನನಿಗೆ ಸಮಾಜದ ಜಾತಿ, ನೀತಿ, ಕಟ್ಟಳೆಗಳಿಗೆ ಎಳ್ಳಷ್ಟು ಕುಂದು ಬಾರದ ರೀತಿಯಲ್ಲಿ ಜಾಗರೂಕತೆ ವಹಿಸುವನು. ಜಾತಿ ನೀತಿಗೆ, ಕಟ್ಟಳೆಗೆ ಎಳ್ಳಷ್ಟು ಕುಂದು ಬಾರದ ರೀತಿಯಲ್ಲಿ ಜಾಗರೂಕತೆ ವಹಿಸುವನು. ಜಾತಿ–ನೀತಿಗೆ ಯಾರಾದರೂ ತಪ್ಪಿದರೆ ಕೂಡಲೇ ಕರೆದು ವಿಚಾರ ಮಾಡುವನು" (ಕಮಲಾಕ್ಷ, ಪಿ., 1994, ಪು. 134).

ಗಾಂಧಿಯವರು ಧರ್ಮದ ಮೂಲಕ, ನೀತಿ ಸಂಹಿತೆಗಳ ಮುಖಾಂತರ ರಾಜಕಾರಣವನ್ನು ಗ್ರಹಿಸುವತ್ತ ಮುಖ ಮಾಡಿದರೆ, ಬುಡಕಟ್ಟು ಜನರು ಅವರದೇ ಆದ ನೀತಿ, ನಿಯಮಗಳನ್ನು, ತಮ್ಮ ಜನಾಂಗಕ್ಕೆ ಅನುಸಾರವಾಗಿ ತಮ್ಮ ('ಲಿಖಿತ'ವಲ್ಲದ) ಆಡಳಿತವನ್ನು ನಡೆಸುತ್ತಿದ್ದರು. ಆದರೆ ಬ್ರಿಟೀಶರು ಇಂಗ್ಲಿಷ್ ಆಲೋಚನೆಯ ಕ್ರಮ ಹೊಂದಿದ್ದರು. ಅದರಿಂದ ಆಡಳಿತಾತ್ಮಕ ಪರಿಕರವನ್ನು ರೂಪಿಸಿಕೊಂಡು ಅಧಿಕಾರ ನಡೆಸಲು ತಮ್ಮ ಕಾನೂನುಗಳನ್ನು ರೂಪಿಸಿಕೊಂಡರು. ಅವರ ಕಾನೂನು ಸಿದ್ಧಾಂತವು ಅಧಿಕಾರ ಕೇಂದ್ರಿತ ದೃಷ್ಟಿಕೋನವನ್ನು ಹೊಂದಿದ್ದರಿಂದ ಅದು ಭಾರತೀಯರಿಗೆ ಪಥ್ಯವಾಗುವುದು ಸಾಧ್ಯವಿರಲಿಲ್ಲ ಬ್ರಿಟೀಶರ ನ್ಯಾಯ, ತೀರ್ಪು, ಸಾಕ್ಷಿ ಮತ್ತು ಆಧಾರವನ್ನು ಹೊಂದಿತ್ತು ಕೌಟಿಲ್ಯನ ಅರ್ಥಶಾಸ್ತ್ರದಲ್ಲಿ ಸುಂಕವನ್ನು – ಬಾಹ್ಯ ಅಭ್ಯಂತರ, ಆತಿಥ್ಯವೆಂದು ಮೂರು ಬಗೆಯಲ್ಲಿ ವಿವರಿಸಲಾಗಿದೆ. ಸ್ವದೇಶಿ ಉತ್ಪನ್ನವು ಪುಣ್ಯ ವಸ್ತುಗಳಾದರೆ ಸುಂಕ ಬಾಹ್ಯ, ಸ್ಥಾನೀಯಗಳೇ ಮೊದಲಾದ ಒಳ ಪ್ರದೇಶದ ಭೂ ಭಾಗದಲ್ಲಿ

ಉದ್ಭವಿಸಿದ ಪಣ್ಯ ವಸ್ತುಗಳ ಮೇಲಿನ ಸುಂಕವು, ಅಭ್ಯಂತರ. ವಿದೇಶಿ ಮೂಲಗಳ ಮೇಲಿನ ಸುಂಕ ಆತಿಥ್ಯ ಎಂದು ವಿವರಿಸಲಾಗಿದೆ.

> ಅರ್ಥಶಾಸ್ತ್ರಜ್ಞರು ಮನುಷ್ಯನ ನಡತೆಯ ಗೋಜಿಗೇ ಹೋಗುವುದಿಲ್ಲ. ಕೇವಲ ಹೆಚ್ಚಿನ ಹಣಸಂಗ್ರಹವೇ ಉನ್ನತಿಯ ಗುರುತು, ಅದೇ ಜನರ ಸುಖದ ಆಧಾರ ಎಂದು ತಿಳಿಯುತ್ತಾರೆ. ಕಲಾಕೌಶಲಗಳನ್ನು ಬೆಳೆಸಿಕೊಂಡು ಎಷ್ಟೆಷ್ಟು ಹೆಚ್ಚು ಹಣ ಗಳಿಸಿದರೆ ಅಷ್ಟಷ್ಟು ಒಳಿತು ಎನ್ನುತ್ತಾರೆ. ಇಂಥ ವಿಚಾರದ ಪ್ರಚಾರದಿಂದ ಇಂಗ್ಲೆಂಡ್ ಮತ್ತು ಇತರ ದೇಶಗಳಲ್ಲಿ ಕಾರ್ಖಾನೆಗಳು ಹೆಚ್ಚಿಬಿಟ್ಟವೆ. ಬಹಳಷ್ಟು ಮಂದಿ ಪಟ್ಟಣಗಳಲ್ಲಿ ಸೇರಿಬಿಟ್ಟದಾರೆ. ಹೊಲ ಮನೆ ಬಿಟ್ಟು ಬಂದುಬಿಟ್ಟಿದ್ದಾರೆ. ಬಯಲಿನ ಸುಂದರ, ಸ್ವಚ್ಛ ಗಾಳಿ ಸೇವಿಸುವುದನ್ನು ಬಿಟ್ಟು ಕಾರ್ಖಾನೆಯ ದುರ್ವಾಯುವನ್ನು ಹಗಲಿರುಳೂ ಸೇವಿಸುವುದರಲ್ಲೇ ಸುಖ ಕಾಣುತ್ತಿದ್ದಾರೆ. ಫಲಿತ: ಜನ ದುರ್ಬಲರಾಗುತ್ತಾ ಇದಾರೆ, ಲೋಭ ಹೆಚ್ಚಾಗುತ್ತಿದೆ, ಅನೀತಿ ಹಬ್ಬುತ್ತಿದೆ. ಅನೀತಿಯನ್ನು ದೂರಗೊಳಿಸುವ ಮಾತನಾಡಿದರೆ ಬುದ್ಧಿವಂತರೆನ್ನಿಸಿಕೊಳ್ಳುವವರು ಹೇಳುತ್ತಾರೆ; ಅನೀತಿ ದೂರವಾಗದು ಅಜ್ಞಾನಿಗಳಿಗೆ ಇದ್ದಕ್ಕಿಂತ ಜ್ಞಾನ ಪ್ರಾಪ್ತವಾಗದು. ಆದಕಾರಣ ಹೇಗೆ ನಡೆಯುತ್ತಿದೆಯೋ ಹಾಗೆಯೇ ಸಾಗಲಿ– ಎಂದು ಈ ವಾದ ಹೂಡುವಾಗ ಬಡವರ ಅನೀತಿಗೆ ಧನಿಕರೇ ಕಾರಣರು ಎಂಬುದನ್ನು ಅವರು ಮರೆಯುತ್ತಾರೆ. ಅವರ ಭೋಗವಿಲಾಸದ ಸಾಮಗ್ರಿಗಳನ್ನು ಹೊಂದಿಸಲು ಬಡವರು ಹಗಲಿರುಳೂ ದುಡಿಯುತ್ತಾರೆ. ಏನಾದರೂ ಕಲಿಯಲು, ಏನಾದರೂ ಒಳ್ಳೆ ಕೆಲಸಮಾಡಲು ಅರೆಗಳಿಗೆಯೂ ಸಿಗದು ಅವರಿಗೆ. ಧನಿಕರನ್ನು ನೋಡಿ ತಾವೂ ಧನಿಕರಾಗಬೇಕೆಂದು ಹಂಬಲಿಸುತ್ತಾರೆ ಧನಿಕರಾಗದೆ ಹೋದಾಗ ಖಿನ್ನರಾಗುತ್ತಾರೆ, ಸಿಟ್ಟಿಗೇಳುತ್ತಾರೆ. ಬಳಿಕ ವಿವೇಕ ಕಳೆದುಕೊಂಡು ಒಳ್ಳೆ ಹಾದಿಯಲ್ಲಿ ಹಣ ಸಿಗದಿದ್ದುದನ್ನು ಕಂಡು ಮೋಸ–ವಂಚನೆಗಳಿಂದ ಹಣ ಗಳಿಸುವ ವ್ಯರ್ಥಪ್ರಯಾಸ ಮಾಡುತ್ತಾರೆ. ಈ ರೀತಿ ಧನ–ದುಡಿಮೆ ಎರಡೂ ಹಾಳಾಗುತ್ತವೆ, ಇಲ್ಲವೆ ಮೋಸ–ವಂಚನೆ ಹಬ್ಬಲು ಉಪಯೋಗವಾಗುತ್ತವೆ.
> (ಗಾಂಧಿ ಅರ್ಥವಿಚಾರ ಪು. 25)

ಆದರೂ 'ಯುರೋಪಿನ ಸಾಮಾಜಿಕ ಸ್ವರೂಪ ; ಅದರ ಸಾಮಾಜಿಕ ತಾಂತ್ರಿಕತೆಗಳು, ಮುದ್ರಣ, ಭಾಷೆಯ ಪ್ರಮಾಣೀಕರಣ,[3] ಕಾನೂನಿನ ಸ್ವಾಯತ್ತತೆಗಳು ಭಾರತದ ಮೇಲೆ ಪ್ರಭಾವ ಬೀರಿದವು. ಈ ಕುರಿತು ವಾರನ್ ಹೇಸ್ಟಿಂಗ್ಸ್‌ನಂಥವರು ನೀಡಿದ

ಹೇಳಿಕೆಗಳು ಗಮನಾರ್ಹವಾಗಿದೆ. ಈ ದೇಶದ ಜನರು ನಾವು ನೀಡುತ್ತಿರುವ ಸಹಾಯ, 'ಅವರ ಅಭಿವೃದ್ಧಿಗಾಗಿ ರೂಪಿಸುತ್ತಿರುವ ಕಾನೂನುಗಳು, ಅವರ ಜೀವನದ ನಡತೆಯಲ್ಲಿ ಅಳವಡಿಸಿಕೊಳ್ಳಬೇಕಾದ ನೀತಿಗಳು ಅಥವಾ ಅವರ ಜಮೀನಿಗೆ ಇರಬೇಕಾದ ಮೌಲ್ಯವನ್ನು ಹೆಚ್ಚಿಸುವುದನ್ನು ಅರ್ಥಮಾಡಿಕೊಳ್ಳುವುದು ಕಷ್ಟ. ಆದರೆ ಅದರ ಅಗತ್ಯ ಇಲ್ಲಿಯ ಜನರಿಗಿದೆ'. ಇದರ ಪರಿಣಾಮವಾಗಿ ಬ್ರಿಟೀಶರ ನೀತಿಯು ಮತ್ತೊಂದು ಸಂಗತಿಗೆ ಪ್ರಚೋದನೆಯನ್ನು ನೀಡಿದಂತಾಯಿತು. ವಿದ್ಯಾವಂತರಲ್ಲಿ ವ್ಯಕ್ತಿವಾದ ಬೆಳೆಯಿತು. ಅವರ ಚಟುವಟಿಕೆಯು ಇಂಗ್ಲೀಷಿನ ಪರ ವಿರೋಧ ಎಂಬ ನಿಲುವನ್ನು ವ್ಯಕ್ತಪಡಿಸದೆ ಸ್ಥಗಿತ ದೃಷ್ಟಿಕೋನವನ್ನು ಹೊಂದಿತು. ಜನನ ಪ್ರಮಾಣ ಪತ್ರ, ವಿವಾಹಕ್ಕೆ ಪತ್ರ, ಹೆಬ್ಬೆರಳ ಗುರುತನ್ನು ಪಡೆಯುವುದು ಮುಂತಾದವು ಪ್ರಾರಂಭವಾದವು. ಆದರೆ ವಸಾಹತು ಶಾಹಿ ಆಡಳಿತವು ಈ ಪ್ರಕ್ರಿಯೆಯನ್ನು 'ವೈಜ್ಞಾನಿಕ'ವೆಂದು ಕರೆಯಿತು (Nicolas B. Dirks,121). ಅಷ್ಟೇ ಅಲ್ಲ, ಬ್ರಿಟೀಶ್ ನೀತಿಯು ರೂಪಿಸಿದ ಸಾಂಸ್ಥಿಕ ಮತ್ತು ಆಡಳಿತಾತ್ಮಕ ಪ್ರಕ್ರಿಯೆಯ ದೆಸೆಯಿಂದ 'ಜ್ಞಾನ' (ವಸಾಹತು ಆಡಳಿತವು ಕೆಲವನ್ನು ಜ್ಞಾನವೆಂದು ಕೆಲವನ್ನು ಅಜ್ಞಾನವೆಂದು ಕರೆಯಿತು). ಮತ್ತು ಅಧಿಕಾರದ ಕೇಂದ್ರಗಳ ನಡುವೆ ನಿರ್ದಿಷ್ಟ ಸಂಬಂಧ ಏರ್ಪಟ್ಟಿತು. ಇದು ಹೆಚ್ಚು ಸ್ಪಷ್ಟವಾಗಿ ರೂಪುಗೊಂಡದ್ದು ಕಾರ್ನ್‌ವಾಲೀಸ್ ಕಾಲದಲ್ಲಿ. ಈತ ಗವರ್ನರ್ ಜನರಲ್ (1786 ರಿಂದ 1793) ಆಗಿದ್ದಾಗ – ಅವನ ವ್ಯಾವಹಾರಿಕ ಜಾಣತನದಿಂದ ಬ್ರಿಟೀಶ್ ಸರ್ಕಾರವು ಮೊದಲನೆಯದಾಗಿ ತನ್ನೆದುರು ಇದ್ದ ಸಮಸ್ಯೆಯನ್ನು ಬಗೆಹರಿಸಿಕೊಳ್ಳಲು ಕೆಲವು ನಿಯಮಾವಳಿಗಳನ್ನು ಜಾರಿಗೆ ತಂದಿತು. ಕಾರ್ನ್‌ವಾಲೀಸ್ ಕಂಪೆನಿಯ ಅಧಿಕಾರದ ವ್ಯಾಪ್ತಿಯ ಪ್ರದೇಶಗಳಲ್ಲಿ ಯುರೋಪಿನ ಸಿಬ್ಬಂದಿಗಳನ್ನು ಕರೆದು ತಂದು ಆಡಳಿತ ನಡೆಸುವುದರ ಕಷ್ಟವನ್ನು ಅರ್ಥಮಾಡಿಕೊಂಡ. ಅನಿವಾರ್ಯವಾಗಿ ಅವನು ಅದಕ್ಕೆ ಸಂಬಂಧಿಸಿದಂತೆ ನಿಯಮಾವಳಿಯನ್ನು ರೂಪಿಸಿದ. ಅವನು ರೂಪಿಸಿದ ಕಾನೂನು ಇಂಗ್ಲೀಷ್ ಸಂವಿಧಾನದ ಮಾದರಿಯನ್ನು ಹೋಲುತ್ತಿತ್ತು. ಕಾರ್ನ್‌ವಾಲೀಸ್ ಅದನ್ನು ಅಳವಡಿಸುವಾಗಲೂ ಎರಡರ ಕಲಬೆರಕೆಯನ್ನು ಮಾಡಿಕೊಂಡ. ಒಂದು ಬ್ರಿಟೀಶ್ ಮಾದರಿಯ ಕಾನೂನು. ಮತ್ತೊಂದು ಮೊಗಲ ಅರಸರ ಕಾನೂನು. ಇದು ಹೊಸ ಪದ್ಧತಿಯ ತರಹ ಕಾಣಿಸತೊಡಗಿತು. ವೈಯಕ್ತಿಕ ಆಸ್ತಿ ಮತ್ತು ವ್ಯಕ್ತಿಗೆ ಅದರ ಮೇಲೆ ಇರುವ ನಿಯಂತ್ರಣಕ್ಕೆ ತಕ್ಕುದಾದ ಕಾನೂನುಗಳನ್ನು ಅವನು ರೂಪಿಸಿದ. ಎರಡನೆಯದಾಗಿ ಕಾನೂನು ನಿರ್ವಹಣೆಯು ನ್ಯಾಯಬದ್ಧವಾಗಿರಬೇಕಾದರೆ ಅಲ್ಲಿ

ನ್ಯಾಯಾಧೀಶನಿರಬೇಕಾಗುತ್ತದೆ. ಮತ್ತು ನಾಗರಿಕ ಸಮಾಜದ ಅಭಿವೃದ್ಧಿಯು ರೂಪುಗೊಳ್ಳಬೇಕಾದರೆ ಅದರ ಅಗತ್ಯವಿದೆಯೆಂದು ಅವನು ಭಾವಿಸಿದ್ದರಿಂದ ಅದರ ಮಾದರಿಗಳು ಸರಕಾರದಿಂದ ನಿಯುಕ್ತಗೊಳ್ಳಬೇಕು ಎಂದು ಪ್ರತಿಪಾದಿಸಿದ. ಜಮೀನಿನ ಮೇಲೆ ನಿರ್ದಿಷ್ಟ ರೂಪದ ಕಂದಾಯದ ಅಳವಡಿಕೆಯಲ್ಲಿ ಕಾರ್ನವಾಲೀಸ್ ಮೊದಲಿಗನಾಗಿದ್ದಾನೆ. ಖಾಸಗಿ ಆಸ್ತಿ, ಅದರ ಮೇಲೆ ವ್ಯಕ್ತಿಯ ಹಿಡಿತ, ಅವನು ತೆರಬೇಕಾದ ಕಂದಾಯ – ಇವುಗಳನ್ನು ಅಳವಡಿಸಿಕೊಳ್ಳುವಾಗ ಕಾರ್ನವಾಲೀಸ್ ಪಶ್ಚಿಮದ ಅನುಕರಣೆಯನ್ನು ಮಾಡಿದ. ಕಂದಾಯದ ಅಧಿಕಾರಿಗಳಿಗೆ ನ್ಯಾಯ ತೀರ್ಮಾನಿಸುವ ಹಕ್ಕನ್ನು ಕೊಟ್ಟ, ಕಂದಾಯವನ್ನು ನಿಗದಿಪಡಿಸುವ, ಅದರ ಮೊತ್ತವನ್ನು ಸರಕಾರಕ್ಕೆ ಸಲ್ಲಿಸುವ ಅಧಿಕಾರವನ್ನು ಕಲೆಕ್ಟರಿಗೆ ಕೊಟ್ಟ. ಅಂದಿನಿಂದ 'ಕಲೆಕ್ಟರ್' ಎಂಬ ಹೊಸ ಅಧಿಕಾರ ಕೇಂದ್ರ ಪ್ರಾರಂಭವಾಯಿತು. ಈ ಮೂಲಕ ಸಮಾಜವನ್ನು ನಿಯಂತ್ರಣ ತರುವಲ್ಲಿ ಅವನು ಯಶಸ್ವಿಯಾದ. ಈಗಲೂ ಗ್ರಾಮೀಣ ಜನರು ಡಿ.ಸಿ.ಯನ್ನು 'ಕಲೆಕ್ಟರ್ ಸಾಹೇಬರು' ಎಂದು ಕರೆಯುತ್ತಾರೆ. ಕಲೆಕ್ಟರ್, ಜಿಲ್ಲಾ ನ್ಯಾಯಾಧೀಶರು – ಬ್ರಿಟೀಶ್ ಕಂಪೆನಿ ಅಧಿಕಾರದ ಪ್ರತಿನಿಧಿಗಳಂತೆ ಕೆಲಸ ಮಾಡಿದರು.

ವೆಲ್ಲೆಸ್ಲಿ (1798–1805) ಎರಡು ಪ್ರತ್ಯೇಕವಾದ ಕೋರ್ಟುಗಳಿಗೆ ಕಾರಣನಾದ. ಒಂದು ಸರ್ದಾರ್‌ದಿವಾನಿ, ಮತ್ತೊಂದು ನಿಜಾಮತ್ ಅದಾಲತ್. ಇದು ಅಧಿಕಾರವನ್ನು ಪ್ರತ್ಯೇಕಗೊಳಿಸಿದ ಕ್ರಮವೂ ಹೌದು. ಇದರ ಹಿನ್ನೆಲೆ ಬೇರೆಯಿದೆ. ಕ್ಲಾಸಿಕಲ್ ಯುಗದಲ್ಲಿ ಯುರೋಪಿನಲ್ಲಿ ಸಂಪತ್ತು ಎಂಬುದಕ್ಕೆ ಬೇರೆ ಬೇರೆ ಅರ್ಥಗಳು ಬಂದಿದ್ದವು. ಆದರೆ ಹಣ ಮತ್ತು ಅದರ ಮೌಲ್ಯ ಮತ್ತು ಮಾರುಕಟ್ಟೆಯ ಬೆಲೆಯ ನಡುವೆ ಈ ರೀತಿಯ ಸಣ್ಣ ಸಂದೇಹಗಳಿದ್ದವು (ಪುಕೋ, 1970, ಪು. 160). ಹದಿನೆಂಟನೆಯ ಶತಮಾನದಲ್ಲಿ ಅರ್ಥಶಾಸ್ತ್ರಕ್ಕೆ ಧನಾತ್ಮಕ ಅರ್ಥ ಕೂಡಾ ಬಂತು. ಈ ಶತಮಾನದಲ್ಲಿ ಹಣವೆಂದರೆ ಸಂವಾದಿ ಅಲ್ಲ. ಅದಕ್ಕೊಂದು ನಿರ್ದಿಷ್ಟ ಗುಣವಿದೆ ಎಂಬ ನಿಲುವು ಸ್ಥಾಪಿತವಾಯಿತು (ಅದೇ, ಪು. 167).

> **ನೀತಿಯನ್ನು ಹಾಗೂ ಸದ್ಭಾವನೆಯನ್ನು ದುರ್ಲಕ್ಷಿಸುವ ಅರ್ಥಶಾಸ್ತ್ರ ಮೇಣದ ಗೊಂಬೆಗಳಿದ್ದಂತೆ, ಜೀವಂತವಿದ್ದಂತೆ ಕಂಡರೂ ಸಜೀವವಾಗಿರುವುದರಲ್ಲಿರುವ ಪ್ರಾಣ ಅಲ್ಲಿ ಇಲ್ಲ. ಪ್ರತಿಯೊಂದು ಆಯತವೇಳೆಯಲ್ಲಿಯೂ ಈ ನವೀನ ಅರ್ಥಶಾಸ್ತ್ರದ ನಿಯಮಗಳು ವ್ಯವಹಾರದಲ್ಲಿ ಮುರಿದುಬಿದ್ದಿವೆ. ಅವನ್ನು ನಿರ್ದೇಶಕ ತತ್ತ್ವಗಳೆಂದು ತಿಳಿಯುವ (ಒಪ್ಪುವ) ರಾಷ್ಟ್ರಗಳೂ ವ್ಯಕ್ತಿಗಳೂ ಹಾಳಾಗಲೇಬೇಕು.**
> **(ಗಾಂಧಿಅರ್ಥವಿಚಾರ ಪುಟ. 40)**

ಮಾರುಕಟ್ಟೆಯ ಮೌಲ್ಯ ಮತ್ತು ಹಣಕ್ಕೆ ಅತ್ಯಂತ ತುರಿಯಾವಸ್ಥೆ ಎನ್ನಬಹುದಾದ ಮೌಲ್ಯ ಬಂದಿತು (ಅದೇ, ಪು. 167). ಯುರೋಪಿನಲ್ಲಿ ಸಂಪತ್ತಿಗೆ, ಹಣಕ್ಕೆ ಬಂದಿರುವ ಮೌಲ್ಯಾತ್ಮಕ ಗುಣವು ವಸಾಹತು ದೇಶಗಳ ಮೇಲೆಯೂ ಪ್ರಭಾವ ಬೀರಿತು. ಹೀಗಾಗಿ ವಸಾಹತು ಯುಗದ ಆಡಳಿತದಲ್ಲಿಯೂ ಬೇರೆ ಬೇರೆ ರೀತಿಯ ಪರಿವರ್ತನೆಗಳನ್ನು ಕಾಣಬಹುದು. ಮತ್ತು ಗವರ್ನರ್ ಜನರಲ್‌ಗಳಾಗಿ ಬಂದವರು ಭಾರತದ ವಿವಿಧ ಪ್ರಾಂತ್ಯಗಳಲ್ಲಿ ತಮ್ಮ ನೀತಿಗಳನ್ನು ಅಳವಡಿಸುವಾಗ ವಿಭಿನ್ನ ರೀತಿಯ ನಿಲುವುಗಳನ್ನು ತಳೆದಿದ್ದರು. ಉದಾಹರಣೆಗೆ, ಮದರಾಸು ಪ್ರಾಂತ್ಯದಲ್ಲಿ ಆಸ್ತಿಯ ಮೇಲಿನ ತೆರಿಗೆಗೆ ಸಂಬಂಧಿಸಿದಂತೆ ವೆಲ್ಲೆಸ್ಲಿಯು ಹೊಸ ಮೂಲಭೂತವಾದ ಸಂವಿಧಾನಿಕ ರೂಪವನ್ನು ಜಾರಿಗೆ ತರಬೇಕಾಯಿತು. ಆದರೆ ಉತ್ತರ ಭಾರತದ ಸ್ಥಿತಿಯು, ದಕ್ಷಿಣ ಭಾರತದಲ್ಲಿ ಅನ್ವಯವಾಗುವಂತಿರಲಿಲ್ಲ. ದಕ್ಷಿಣ ಪ್ರಾಂತ್ಯದಲ್ಲಿ ಕಂದಾಯದ ಬಗೆಗೆ ಕಾನೂನು ರೂಪಿಸುವಾಗ ಇಲ್ಲಿಯ ಸಾಮಾಜಿಕ, ರಾಜಕೀಯ, ಸಾಂಸ್ಕೃತಿಕ ಸ್ಥಿತ್ಯಂತರಗಳನ್ನು ಬ್ರಿಟೀಶ್ ಸರಕಾರವು ಗಮನಕ್ಕೆ ತಂದು ಕೊಂಡಿತು. ದಕ್ಷಿಣ ಭಾರತದಲ್ಲಿ ಅದರಲ್ಲಿಯೂ ಮೈಸೂರು ಪ್ರಾಂತ್ಯದಲ್ಲಿ ಬೇರೆ ಬೇರೆ ಪಾಳೆಯಗಾರರು ನೆಲೆಯೂರಿದ್ದರು. ಬ್ರಿಟೀಶರು ಅವರನ್ನು ಎದುರಿಸಬೇಕಾಗಿ ಬಂತು. ಅವರನ್ನು ಕುರಿತು ಎಂ.ಎಸ್. ಪುಟ್ಟಣ್ಣ ಅವರು ಹೀಗೆ ವಿವರಿಸುತ್ತಾರೆ (ಎಂ.ಎಸ್. ಪುಟ್ಟಣ್ಣ, 1923) :

ಯುರೋಪ್ ಖಂಡದ ಫ್ಯೂಡಲ್ ಸಂಸ್ಥೆಯ ಹಿಡುವಳಿ ಶಿಸ್ತು ಹೇಗೆ ಹುಟ್ಟಿತೋ, ಜಮೀನ್ದಾರಿ ಪದ್ಧತಿ ಹೇಗೆ ಹುಟ್ಟಿತೋ ನಮ್ಮ ಭರತ ಖಂಡದಲ್ಲಿಯೂ ಹಾಗೆಯೇ ಹುಟ್ಟಿದಂತೆ ಇದೆ. ಫ್ರಾನ್ಸ್ ದೇಶದೊಳಗೆ 5ನೇ ಶತಮಾನದಿಂದ 8ನೇ ಶತಮಾನದವರೆಗೆ ಆಳಿದ ದೊರೆಗಳ ಕಾಲದಲ್ಲಿ ಆಯಾ ದೊರೆಗಳು ತಮ್ಮ ಬಂಧು ವರ್ಗದ ಜನರಿಗೂ, ಕೆಲವು ಮುಖಂಡರಿಗೂ ದೊಡ್ಡದಾದ ಭೂಪ್ರದೇಶಗಳನ್ನು ಮಾನ್ಯವಾಗಿ ಕೊಡುತ್ತಾ ಬಂದರು. ಹಾಗೆ ತೆಗೆದುಕೊಂಡವರು ದೊರೆಯ ವಿಷಯದಲ್ಲಿ ಭಯ ಭಕ್ತಿಯಿಂದ ನಡೆದುಕೊಳ್ಳುತ್ತಿರಬೇಕೆಂಬುದು ನಿಯಮವಾಗಿತ್ತು. ಮೊದಲು ಮೊದಲು ಒಂದೊಂದು ತಲೆಮಾರಿನವರೆಗೆ ಮಾತ್ರ ಕೊಡುತ್ತಾ ಇದ್ದ ಈ ಇನಾಮು ಕಾಲಕ್ರಮೇಣ ಸಂತತಿ ಪರಂಪರೆಯಾಗಿ ಅನುಭವಿಸುವ ಹಾಗೆ ಆಗುತ್ತಾ ಬಂತು. ದೊರೆಗೆ ತನ್ನ ಪ್ರೀತಿಪಾತ್ರರ ಮೇಲೆ ಅಭಿಮಾನ ಹೆಚ್ಚಿದ ಹಾಗೆಲ್ಲಾ ಇನಾಂದಾರರು ವಂಶಪಾರಂಪರ್ಯವಾಗಿ ಇಂಥ ಇನಾಮನ್ನು ಅನುಭವಿಸುವ ಹಕ್ಕು ದೊರೆಯುತ್ತಾ ಬಂತು. ಇದೂ ಅಲ್ಲದೆ ದೊರೆಯ ದರ್ಪ ಕಡಿಮೆಯಾಗುತ್ತಾ ಬಂದ ಹಾಗೆ ಇನಾಂದಾರರು ಅರಸನನ್ನು ಧಿಕ್ಕರಿಸಿ, ಸ್ವತಂತ್ರರಾಗುತ್ತಾ, ವಂಶಪಾರಂಪರ್ಯವಾದ ಹಕ್ಕನ್ನು ಸಂಪಾದಿಸಿಕೊಳ್ಳುತ್ತಾ ಬಂದರು.

ಇದೂ ಅಲ್ಲದೆ ಹೀಗೆ ಸ್ವತಂತ್ರರಾದ ಇನಾಂದಾರರೂ ಕೂಡಾ ಕೆಲವರು ಶತ್ರುಗಳ ಬಾಧೆಯನ್ನು ತಪ್ಪಿಸಿಕೊಳ್ಳುವುದಕ್ಕಾಗಿ ದಿನಕ್ರಮೇಣ ಒಬ್ಬ ಪ್ರಬಲವಾದ ದೊರೆಯನ್ನೋ ಚರ್ಚು ಎಂಬ ಗುಡಿ ಅಧಿಕಾರಗಳನ್ನೋ ಅನುಸರಿಸಿಕೊಂಡು ಅವರಿಗೆ ಅಧೀನರಾಗಿ ಕಂದಾಯ ಕೊಡುತ್ತಾ ಮತ್ತು ಇತರರ ಸೇವೆಯನ್ನು ಸಮಯ ಬಿದ್ದಾಗ ಅವರಿಗೋಸ್ಕರ ಮಾಡುತ್ತಾ ಇದ್ದರು. ಈ ಬಗೆ ಭೂಸಾಗುವಳಿ ಶಿಸ್ತಿಗೆ 'ಫಲಾನುಭವಿ' ಎಂದು ಹೆಸರು. ಇದರ ಅರ್ಥಕ್ಕೆ ಸಮೀಪವಾದ ಶಬ್ದವನ್ನು ನಾವು ಹುಡುಕಿ ನೋಡಿದರೆ "ಖಾಯಂಗುತ್ತಾ" ಎಂಬ ಶಬ್ದವನ್ನು ಭಾಷಾಂತರವಾಗಿ ಇಟ್ಟುಕೊಳ್ಳಬಹುದು. ಈ (ಖಾಯಂಗುತ್ತಾ ಬದಲು ಮೂಲ ಗೇಣಿ ಎಂದು ಬಳಸಬಹುದು) ಏರ್ಪಾಡಿನಿಂದ ಜಮೀನುದಾರನಿಗೂ, ರೈತನಿಗೂ ಇರುವ ಸಂಬಂಧವೇ ಯುರೋಪಿನಲ್ಲಿಯೂ ಇದ್ದ ಹಾಗಾಯಿತು.

ಭೂಸಾಗುವಳಿ, ಅದರ ಆದಾಯ, ಇದನ್ನು ಕುರಿತು ಯೋಚಿಸಲಾಗಿ, ಭೂಮಿಯನ್ನು ಗೇಮೆಮಾಡುವುದು, ರಾಜಪಾಲನ್ನು ಕೊಟ್ಟು ಕುಳಪಾಲನ್ನು ಅನುಭವಿಸಿಕೊಳ್ಳುವುದು, ಎಷ್ಟೋ ಅಷ್ಟೆ. ಇದಕ್ಕಿಂತಲೂ ಹೆಚ್ಚಾಗಿ ಸಂಬಂಧವು ಸ್ವಾಮಿಗೂ, ಕುಳಕ್ಕೂ ಇಲ್ಲವೇ ಇಲ್ಲವೆಂಬುದು ಕೆಲವರ ಮತವಾಗಿತ್ತು. ಇಷ್ಟು ಹೊರತು ರೈತನು ಯಜಮಾನನಿಗೆ ಮತ್ತೆ ಯಾವ ಭಾಗದಲ್ಲಿಯೂ ಅಧೀನನಲ್ಲವೆಂದು ಕೆಲವು ಪರವಾದಿಗಳು ವಾದಿಸಲು ಮಾರ್ಗವಿತ್ತು. ಈಗಲೂ ನಮ್ಮ ದೇಶದಲ್ಲಿ ಕೂಡ ಇನಾಂದಾರರಿಗೂ, ರೈತರಿಗೂ ಈ ವಿಧವಾದ ಚರ್ಚೆಯೂ, ತೀಯಾಟವೂ ಇದ್ದೇ ಇರುವುದು. ಇನಾಂ ಗ್ರಾಮಗಳಲ್ಲಿ ರೈತರಿಗೆ ಖಾಯಂ ಕಂದಾಯಕ್ಕೆ ಭೂಮಿಯನ್ನು ಕೊಡುತ್ತಾರೆ. ಅಂಥಾ ರೈತರು ಸರ್ವಮಾನ್ಯ ಅಥವಾ ಜೋಡಿದಾರರಿಗೋಸ್ಕರ ಇತರ ಚಿಲ್ಲರೆ ಕೆಲಸವನ್ನು ಮಾಡಿಕೊಡಬೇಕೆಂತಲೂ, ಎಲ್ಲಾ ಭಾಗದಲ್ಲಿಯೂ ಸಮಯ ಬಂದಾಗ ಆ ರೈತನು ಸರ್ವಮಾನ್ಯದಾರನ ಆಳಿನಂತೆ ಭಾವಿಸಿಕೊಂಡಿರಬೇಕೆಂತಲೂ, ಕೆಲವು ಗ್ರಾಮಗಳಲ್ಲಿ ಆಚರಣೆಯುಂಟು. ಆದರೆ ಕೆಲವು ರೈತರು ಸರ್ವಮಾನ್ಯದಾರನ ಮೇಲೆ ಕೈ ಮಾಡುತ್ತಾ, ಭೂಮಿ ಕೊಟ್ಟಿದ್ದಕ್ಕೆ ಕಂದಾಯ ತೆಗೆದುಕೊಳ್ಳುತ್ತೀರಿ, ಉಳಿದ ಚಾಕರಿ ಮಾಡುವುದಕ್ಕೆ ನಾವು ಬದ್ಧರಲ್ಲ ಎನ್ನುತ್ತಾ ಇದ್ದರಷ್ಟೇ ಇದೇ ವಿಧವಾದ ರೈತರು ಪೂರ್ವಕಾಲದಲ್ಲಿಯೂ ಇದ್ದರು. ದೇಶಾಂತರಗಳಲ್ಲಿಯೂ ಇದ್ದರು. ಈ ಕಾರಣದಿಂದ ರೈತರೆಲ್ಲಾ ಆದ್ಯಂತವಾಗಿ ಇನಾಂದಾರರ ವಶವೇ ಆಗಿರಬೇಕೆಂದು ಯುರೋಪ್ ಖಂಡದಲ್ಲಿ ವ್ಯವಸ್ಥೆ ಮಾಡಿಕೊಂಡು, ಅದಕ್ಕಾಗಿ ಭೂಮಿಯಲ್ಲಿ ನಿರುಪಾಧಿಕವಾಗಿ ಸ್ವಾಮ್ಯವುಳ್ಳ ಇನಾಂದಾರರಾದ ಯಜಮಾನರುಗಳು ಇನ್ನೊಂದು ಏರ್ಪಾಡನ್ನು ಮಾಡಿಕೊಂಡರು.

ಪ್ರತಿ ರೈತನೂ ಇನಾಂದಾರ ಅಥವಾ ಸ್ವಾಮಿಗೆ ಆದ್ಯಂತ ಭೃತ್ಯ ಎಂದು ತೋರಿಸಲು, ಅಂಥ ರೈತನು ಬೋಳು ತಲೆಯಲ್ಲಿ ಸೊಂಟಕ್ಕೆ ಏನೂ ಕಟ್ಟಿಕೊಳ್ಳದೆ, ಕತ್ತಿಯನ್ನು ಕಟ್ಟಿಕೊಳ್ಳದೆ ವೀರ ಮಂಡಿ ಹೂಡಿ ಕೂತು, ಸ್ವಾಮಿಯ ಕೈಯನ್ನು ಹಿಡಿದು ಸ್ವಾಮಿಗೆ ತಾನು ಆದ್ಯಂತ ಭೃತ್ಯನೆಂದು ಪ್ರಮಾಣ ಮಾಡಿಕೊಡಬೇಕು ಎಂದು ವಾಗ್ದಾನದ ಪದ್ಧತಿಯನ್ನು ಏರ್ಪಾಡು ಮಾಡಿದರು. ಈ ಏರ್ಪಾಡಿಗೆ "ರೆಕಮೆಂಡೇಷನ್" (ಶಿಫಾರಸ್) ಎಂದು ಹೆಸರು. ಇದಕ್ಕೆ 'ವಶವರ್ತಿ' ಎಂದು ಅರ್ಥಮಾಡಬಹುದು. ಹೀಗೆಂದರೆ ಆ ಆದ್ಯಂತ ಭೃತ್ಯನು ಸ್ವಾಮಿಯ ವಶವಾದನೆಂದು ಅರ್ಥಮಾಡಬಹುದು.

ಈ ಪದ್ಧತಿಯು ಕಾಲಕ್ರಮೇಣ ಬದಲಾಯಿತು. ಈ ವಿಧವಾದ ಸ್ವಾಮಿಭೃತ್ಯರ ಸಂಬಂಧದಲ್ಲಿ ಭೂಸಂಬಂಧ ಹೋಯಿತು. ಬರೀ ಸ್ವಾಮಿಭೃತ್ಯ ಸಂಬಂಧ ಮಾತ್ರ ಉಳಿಯಿತು. ಆದರೆ ಭೃತ್ಯನು ಬೇರೆ ಭೂಮಿಯನ್ನು ಸಾಗುವಳಿ ಮಾಡಿಸುವ ವಿಚಾರದಲ್ಲಿ ನಿರ್ಬಂಧವೇನೂ ಇರಲಿಲ್ಲ. ಕೆಲವು ಸಂದರ್ಭದಲ್ಲಿ ಯುದ್ಧ ಪ್ರಸಕ್ತಿ ಬಿದ್ದಾಗ, ಸ್ವಾಮಿಗೆ ಉಪಜಮೀನುದಾರರನು ಸೇನೆ ಸೇರಿಸಿಕೊಂಡು ಸೇವೆ ಮಾಡುವುದೂ ಕೂಡಾ ಉಂಟು. ಇದಕ್ಕೆ ಪ್ರತಿಯಾಗಿ ಸ್ವಾಮಿಯು ಭೃತ್ಯನನ್ನು ಎಲ್ಲಾ ಭಾಗದಲ್ಲಿಯೂ ಕಾಪಾಡಬೇಕಾದ್ದು ಒಂದು ವಿಧಿಯಾಗಿತ್ತು.

ಇದೂ ಅಲ್ಲದೆ ಪಶ್ಚಿಮ ಸಮುದ್ರ ತೀರದ ಪ್ರಾಂತ್ಯದಲ್ಲಿ ಅನೇಕ ಚಿಲ್ಲರೆ ರಾಜರುಗಳಿದ್ದರು. ಮೈಸೂರು ದಕ್ಷಿಣ ದೇಶ ಮೊದಲಾದ ಪ್ರದೇಶಗಳಲ್ಲಂತೂ ಲೆಕ್ಕವಿಲ್ಲದಷ್ಟು ಜನ ಅಧಿಪತಿಗಳಿದ್ದರು. ಇವರಲ್ಲಿ ಅನೇಕರು ಸ್ವತಂತ್ರವಾಗಿ ರಾಜರೆಂದು ಆಳುತ್ತಾ ಆಯಾ ಕಾಲದಲ್ಲಿ ರಾಜಾಧಿರಾಜರೆನಿಸಿಕೊಂಡವರಿಗೆ ಸಾಮಂತರ ಪತಿಗಳಾಗಿದ್ದರು. ವಿಜಯ ನಗರದ ಸಂಸ್ಥಾನದ ರಾಯರುಗಳು ಇವರೆಲ್ಲರನ್ನೂ ಜೈಸಿ ಚಕ್ರವರ್ತಿಗಳೆನ್ನಿಸಿಕೊಂಡಿದ್ದುದೂ ಅಲ್ಲದೆ ಕೆಲವು ಹೊಸ ಪ್ರಾಂತಗಳನ್ನು ಕೊಟ್ಟು ಹೊಸದಾಗಿ ಕೆಲವು ಅಧೀನ ರಾಜ್ಯಗಳನ್ನು ಸ್ಥಾಪನೆ ಮಾಡಿದರು (ಪು. 13). ಇದೇ ಪಾಳೆಯಗಾರರ ಸಂಸ್ಥೆ ಎನಿಸಿಕೊಂಡಿತು. ಎಂ.ಎಸ್. ಪುಟ್ಟಣ್ಣನವರು ಪಾಳೆಯಗಾರರನ್ನು 'ಫ್ಯೂಡಲ್ ಲಾರ್ಡ್' ಎಂಬರ್ಥ ನಿರ್ವಚಿಸಿರುವುದು ಗಮನಾರ್ಹವಾಗಿದೆ. ಈ ವ್ಯಾಖ್ಯೆಯು ಪಶ್ಚಿಮದ ತಿಳುವಳಿಕೆಯಿಂದ ಹುಟ್ಟಿಕೊಂಡಿರುವ ಮತ್ತು ಅದನ್ನು ಅನುಸರಿಸುವ ವ್ಯಾಖ್ಯೆಯಾಗಿದೆ. ಆದರೆ ಗಾಂಧಿ ಹೀಗೆ ಹೇಳುತ್ತಾರೆ.

> **ತಮ್ಮ ಹಿಡುವಳಿಗಳು ಜಮೀನುದಾರರಿಗೆ ಸಂಬಂಧಪಟ್ಟುದಲ್ಲ,**
> **ಕೇವಲ ತಮ್ಮದೇ ಎಂಬ ತತ್ತ್ವವನ್ನು ರೈತರು ತಿರಸ್ಕರಿಸಬೇಕು.**
> **ತಾವೆಲ್ಲ ಒಂದು ಒಟ್ಟು ಕುಟುಂಬದ ಸದಸ್ಯರು, ಜಮೀನುದಾರ**

> ಆಕ್ರಮಣದ ವಿರುದ್ಧ ತಮ್ಮನ್ನು ಕಾಯುವ ಯಜಮಾನ ಎಂದು ತಿಳಿಯಬೇಕು ಅಥವಾ ಹಾಗೆ ಆಗಬೇಕು. ಕಾನೂನು ಹೇಗೇ ಇರಲಿ, ಜಮೀನುದಾರೀ ಪದ್ಧತಿ ಸಮರ್ಥನೀಯವಾಗಬೇಕಾದರೆ ಒಟ್ಟು ಕುಟುಂಬದ ಸ್ಥಿತಿಗತಿಯ ಹತ್ತಿರ ಹತ್ತಿರ ಅದು ಬರಲೇಬೇಕು. (ಅರ್ಥವಿಚಾರ ಪುಟ. 138)

ಪಟ್ಟಣಗಳ ನಿರ್ಮಾಣ ಮತ್ತು ಆಡಳಿತವನ್ನು ನಡೆಸುವುದಕ್ಕೆ ವಿಭಿನ್ನ ಮಾದರಿಗಳ ರಾಜಕೀಯ ಕೇಂದ್ರಗಳ ಸ್ಥಾಪನೆ. ಇದನ್ನು ಬ್ರಿಟೀಶರು ಆಡಳಿತಾತ್ಮಕ ಸುಧಾರಣೆಯೆಂದು ಕರೆದರು. ಒಂದು ಸಂದರ್ಭದಲ್ಲಿ ವೆಲ್ಲೆಸ್ಲಿಯು 'ಬ್ರಿಟೀಶ್ ಆಡಳಿತದ ಕ್ರಮವೆಂದರೆ, ಅದು ಸಾರ್ವಜನಿಕರ ಕಾನೂನಿಗೆ ಸಂಬಂಧಿಸಿದ್ದು, ಒಂದು ದೃಷ್ಟಿಯಿಂದ ಅದು ಸ್ವತಂತ್ರ ನ್ಯಾಯಾಂಗ ಹಕ್ಕನ್ನು ಪಡೆದಿದೆ. ಈ ಮೂಲಕ ಸಾರ್ವಜನಿಕ ಹಿತಾಸಕ್ತಿಯನ್ನು ಕಾಪಾಡಬಲ್ಲುದು' ಎಂದು ಹೇಳಿದ. 'ಆ ಕಾಲಕ್ಕೆ ಪಟೇಲರಿಗೆ ಗ್ರಾಮ ನ್ಯಾಯಾಧೀಶನ ಅಧಿಕಾರವಿತ್ತು. ಊರಿನಲ್ಲಿ ನಡೆಯುತ್ತಿದ್ದ ಅನೇಕ ವಿವಾದಗಳನ್ನು ಬಗೆಹರಿಸುವುದು, ಅಪರಾಧಿಗಳಿಗೆ ಶಿಕ್ಷೆ ಕೊಡುವುದು, ಕಂದಾಯ ವಸೂಲಿ ಮಾಡುವುದು, ಗ್ರಾಮದ ಜನನ-ಮರಣ ಮುಂತಾದ ಲೆಕ್ಕ ಪತ್ರ ಇಡುವುದು – ಹೀಗೆ ಬಹು ಬಗೆಯ ಅಧಿಕಾರದ ಜವಾಬ್ದಾರಿಗಳಿದ್ದವು (ಪುರಂದರ ರೈ ಅಗ್ರಾಳ, 2001, ಪು. 18). ಈ ದೃಷ್ಟಿಯಿಂದಲೇ ಆಗಿನ ಗ್ರಾಮ ಪದ್ಧತಿಯು ಒಂದು ದೃಷ್ಟಿಯಿಂದ ಚಿಕ್ಕ ಗಣರಾಜ್ಯದಂತೆ ಇತ್ತು ಎಂಬುದನ್ನು ಇದು ಸೂಚಿಸುತ್ತದೆ (Little Republic).

> ಭಾರತದಷ್ಟೇ ಪ್ರಾಚೀನವಾದ ಹಳ್ಳಿಗಳ ಭಾರತ ಹಾಗೂ ವಿದೇಶೀ ಆಳ್ವಿಕೆಯ ಸಚಿತಾನವಾದ ನಗರಗಳ ಭಾರತಗಳ ನಡುವೆ ನಾವು ಒಂದನ್ನು ಆರಿಸಿಕೊಳ್ಳಬೇಕು. ಇಂದು ನಗರಗಳು ಆಳುತ್ತಿವೆ, ಹಳ್ಳಿಗಳನ್ನು ಹಿಂಡುತ್ತಿವೆ, ಹಾಗಾಗಿ ಅವು ಮಣ್ಣುಗೂಡುತ್ತಿವೆ. ಈ ದಬ್ಬಾಳಿಕೆ ಹೋದಮೇಲೆ ನಗರಗಳು ಹಳ್ಳಿಗಳ ಹಿತಕ್ಕೆ ಅಧೀನವಾಗಬೇಕೆಂದು ನನ್ನ ಖಾದಿ ಮನೋವೃತ್ತಿ ಹೇಳುತ್ತದೆ. ಹಳ್ಳಿಗಳ ಶೋಷಣೆಯೇ ಸಂಘಟಿತ ಹಿಂಸೆ. ಸ್ವರಾಜ್ಯವನ್ನು ಅಹಿಂಸೆಯ ಆಧಾರದ ಮೇಲೆ ನಿರ್ಮಿಸಬಯಸುವೆವಾದರೆ ಹಳ್ಳಿಗಳಿಗೆ ನಾವು ಯೋಗ್ಯ ಸ್ಥಾನ ಕೊಡಲೇಬೇಕು.
>
> ನನ್ನ ಕಲ್ಪನೆಯ ಗ್ರಾಮಸ್ವರಾಜ್ಯವೆಂದರೆ ಅದೊಂದು ಪರಿಪೂರ್ಣ ಗಣರಾಜ್ಯ ತನ್ನ ಪ್ರಧಾನ ಅಗತ್ಯಗಳಲ್ಲಿ ಅದು ನೆರೆಹೊರೆಯವರಿಂದ ಸ್ವತಂತ್ರ ಆದರೂ ಅವಲಂಬನ ಅಗತ್ಯವಾದಲ್ಲಿ ಎಷ್ಟೋ ವಿಷಯಗಳಲ್ಲಿ ಪರಸ್ಪರಾವಲಂಬಿ. ಹೀಗೆ ತನ್ನ ಆಹಾರದ ಬೆಳೆ ಬೆಳೆಯುವುದು, ಬಟ್ಟೆಗಾಗಿ ಹತ್ತಿ ಬೆಳೆಯುವುದು ಪ್ರತಿ ಹಳ್ಳಿಯ

ಮೊದಲ ಗಮನ, ದನಕರುಗಳಿಗಾಗಿ ಕಾವಲು, ಮಕ್ಕಳಿಗಾಗಿಯೂ ಪ್ರೌಢರಿಗಾಗಿಯೂ ಆಟಕ್ಕೆ, ಮನೋರಂಜನೆಗೆ ಸ್ಥಳ ಇರಬೇಕು. ಇದಕ್ಕೆಲ್ಲಾ ಆಗಿ ಹೆಚ್ಚು ಭೂಮಿ ಮಿಕ್ಕರೆ ಅದರಲ್ಲಿ ಗಾಂಜಾ, ತಂಬಾಕು, ಅಫೀಮುಗಳ ಹೊರತಾಗಿ ಉಪಯೋಗಕರ ಹಣದ ಬೆಳೆಗಳನ್ನು ಬೆಳೆಯಬಹುದು. ಹಳ್ಳಿಹಳ್ಳಿಯಲ್ಲೂ ನಾಟಕಮಂದಿರ, ಶಾಲೆ, ಸಭಾಭವನಗಳು ಇದ್ದಾವು. ಶುದ್ಧವಾದ ನೀರನ್ನು ಪೂರೈಸುವ ನೀರಿನ ಪೂರೈಕೆ ಕೇಂದ್ರ ಇದ್ದೀತು. ಹತೋಟಿಗೆ ಒಳಪಡಿಸಿದ ಬಾವಿಗಳು ಅಥವಾ ಕೆರೆಗಳ ಮೂಲಕ ಈ ಕೆಲಸ ಮಾಡಬಹುದು. ಮೂಲಶಿಕ್ಷಣದ ಅವಧಿಯ ಪೂರಾ ಶಿಕ್ಷಣ ಕಡ್ಡಾಯವಿದ್ದೀತು. ಸಾಧ್ಯವಿದ್ದಷ್ಟು ಮಟ್ಟಿಗೂ ಪ್ರತಿಯೊಂದು ಕೆಲಸವನ್ನೂ ಸಹಕಾರ ತತ್ತ್ವದ ಆಧಾರದ ಮೇಲೆ ಕೈಗೊಳ್ಳಲಾದೀತು. ಘಟ್ಟಘಟ್ಟಗಳ ಅಸ್ಪೃಶ್ಯತೆಯುಳ್ಳ ಇಂದಿನಂಥ ಜಾತಿಗಳಿರವು. ಸತ್ಯಾಗ್ರಹ ಹಾಗೂ ಅಸಹಕಾರ ತಂತ್ರವುಳ್ಳ ಅಹಿಂಸೆಯೇ ಗ್ರಾಮಸಮಾಜದ ಆಧಾರಶಕ್ತಿ. ಹಳ್ಳಿಯಲ್ಲಿ ಇಡಲಾದ ಒಂದು ಖಾತೆಯಿಂದ ಸರದಿ ಪ್ರಕಾರ ಆರಿಸಲ್ಪಡುವ ಎಲ್ಲರಿಗೂ ಅನಿವಾರ್ಯದ ಗ್ರಾಮರಕ್ಷಕ ಪಡೆ ಇದ್ದೀತು. ಯೋಗ್ಯ-ಕನಿಷ್ಠ ಅರ್ಹತೆಗಳುಳ್ಳ ಹಳ್ಳಿಯ ಎಲ್ಲ ಪ್ರೌಢ ಸ್ತ್ರೀಪುರುಷರೂ ವರ್ಷಕ್ಕೊಮ್ಮೆ ಚುನಾಯಿಸುವ ಐವರ ಪಂಚಾಯತಿ ಹಳ್ಳಿಯ ಆಡಳಿತವನ್ನು ನಡೆಸಿಕೊಂಡು ಹೋಗುವುದು. ಅದಕ್ಕೆ ಬೇಕಾದ ಅಧಿಕಾರ-ವ್ಯಾಪ್ತಿ ಎರಡೂ ಈ ಮಂಡಳಿಗೆ ಇರುವುವು. ಪ್ರಚಲಿತ ಅರ್ಥದ ಶಿಕ್ಷೆಯ ಪದ್ಧತಿ ಇರುವುದಿಲ್ಲವಾದುದರಿಂದ ಪಂಚಾಯುತಿಯೇ ಶಾಸಕಾಂಗ, ನ್ಯಾಯಾಂಗ ಹಾಗೂ ಕಾರ್ಯಾಂಗವಾಗಿ ತನ್ನ ಒಂದು ವರ್ಷದ ಅಧಿಕಾರಾವಧಿಯಲ್ಲಿ ಕೆಲಸಮಾಡೀತು. ಹಳ್ಳಿಯಿಂದ ಕೇವಲ ಕಂದಾಯ ವಸೂಲಿಯೊಂದೇ ಪರಿಣಾಮಕಾರೀ ಸಂಬಂಧವಾಗಿ ಉಳ್ಳ ಇಂದಿನ ಸರಕಾರದ ಹೆಚ್ಚಿನ ಹಸ್ತಕ್ಷೇಪವೂ ಇಲ್ಲದಂತೆ ಯಾವ ಹಳ್ಳಿ ಬೇಕಾದರೂ ಇಂದೂ ಇಂಥ ಗಣರಾಜ್ಯವಾಗಬಹುದು. ಕೇಂದ್ರದೊಡನೆ, ಇತರ ನೆರೆಯ ಹಳ್ಳಿಗಳೊಡನೆ ಸಂಬಂಧದ ಪ್ರಶ್ನೆಯನ್ನು ನಾನು ಪರಿಶೀಲಿಸಿಲ್ಲ. ಗ್ರಾಮರಾಜ್ಯದ ರೂಪರೇಷೆ ಕೊಡುವುದೇ ನನ್ನ ಉದ್ದೇಶ. ಇಲ್ಲಿ ವ್ಯಕ್ತಿಸ್ವಾತಂತ್ರ್ಯದ ಆಧಾರದ ಮೇಲೆ ಪರಿಪೂರ್ಣ ಜನತಂತ್ರವಿದೆ. ವ್ಯಕ್ತಿಯೇ ತನ್ನ ಪ್ರಭುತ್ವದ ಶಿಲ್ಪಿ. ಅವನಿಗೂ ಅವನ ಸರಕಾರಕ್ಕೂ ಅಹಿಂಸೆಯ ನಿಯಮವೇ ಕಟ್ಟಳೆ. ಅವನೂ ಅವನ ಹಳ್ಳಿಯೂ ಇಡೀ ಲೋಕದ ಶಕ್ತಿಯನ್ನೇ ಬೇಕಾದರೂ ಎದುರಿಸಬಲ್ಲರು. ತನ್ನ, ತನ್ನೂರಿನ ಗೌರವ ರಕ್ಷಿಸಲು ತಾನೇ ಸಾವನ್ನು ಅಪ್ಪಿಯಾನು ಎಂಬುದೇ ಪ್ರತಿಯೊಬ್ಬ ಹಳ್ಳಿಗನ

ಮೂಲ ನೇಮ. (ಅರ್ಥವಿಚಾರ ಮೋ.ಕ.ಗಾ. 2011 ಪುಟ. 132–133)

ಹಾಗೆಂದು ಅದು ಸರ್ವತಂತ್ರ ಸ್ವತಂತ್ರವಲ್ಲ. ಪಟೇಲರು ಗ್ರಾಮ ಮಟ್ಟದಲ್ಲಿ ನ್ಯಾಯಾಧೀಶನಂತೆ ಕೆಲಸ ಮಾಡುತ್ತಿದ್ದುದರಿಂದ ಅಲ್ಲಿಯ ವ್ಯವಸ್ಥೆಯೂ ಕೂಡಾ ಬಹುಬಗೆಯ ಜವಾಬ್ದಾರಿಯನ್ನು ಹೊಂದಿದ್ದವು. ಇದು ಕುತೂಹಲದಾಯಕ ಸಂಗತಿಯಾಗಿದೆ. ಮತ್ತು ಪರಿವರ್ತನೆಗೊಂಡ ಸಾಮಾಜಿಕ ಸ್ಥಿತಿಯನ್ನು ಇದು ಸೂಚಿಸುತ್ತದೆ. ರೈತರ ಕುರಿತಂತೆ ಗಾಂಧಿ ನಿಲುವು ಗಮನಾರ್ಹ.

ಕಿಸಾನ್ ಅಥವಾ ರೈತ, ಭೂಮಿಹೀನ ಕೂಲಿಗಾರನಾಗಿರಲಿ ಅಥವಾ ಉಳುಮೆಗಾರ ಒಡೆಯನಾಗಿರಲಿ ಅವನಿಗೆ ಪ್ರಥಮ ಸ್ಥಾನ. ಅವನೇ ಅವನ ಭೂಮಿಯ ಉಪ್ಪು, ಸಾರ. ಆ ನೆಲ ನ್ಯಾಯವಾಗಿ ಅವನದೇ ಅಥವಾ ಅವನಿಗೇ ಸಲ್ಲಬೇಕು, ದೂರದ ಒಡೆಯನಿಗಲ್ಲ, ಜಮೀನುದಾರನಿಗಲ್ಲ. ಆದರೆ ಅಹಿಂಸಾ ವಿಧಾನದಲ್ಲಿ ದುಡಿಮೆಗಾರ ದೂರದ ವಿರಾಮಜೀವಿ ಒಡೆಯನನ್ನು ಬಲಾತ್ಕಾರವಾಗಿ ಓಡಿಸುವಂತಿಲ್ಲ. ತನ್ನನ್ನು ಶೋಷಿಸಲು ಸಾಧ್ಯವೇ ಆಗದಂಥ ಪರಿಸ್ಥಿತಿ ಒಡೆಯನಿಗೆ ಉಂಟುಮಾಡಬೇಕು. ಇದಕ್ಕೆ ರೈತರಲ್ಲಿ ಅತ್ಯಂತ ನಿಕಟ ಸಹಕಾರ ಅತ್ಯವಶ್ಯ. ಇದಕ್ಕಾಗಿ ವಿಶೇಷವಾಗಿ ವ್ಯವಸ್ಥಾ ಸಮಿತಿಗಳನ್ನು ಇಲ್ಲದಿರುವೆಡೆ ರಚಿಸಬೇಕು. ಹಳೆಯವು ಇದ್ದರೆ ಅವಶ್ಯವಿದ್ದರೆ ಪುನರ್‌ವ್ಯವಸ್ಥೆಗೊಳಿಸಬೇಕು. ಬಹುಪಾಲು ರೈತರು ಅನಕ್ಷರಸ್ಥರು. ಪ್ರೌಢರಿಗೂ, ಶಾಲೆಯ ವಯಸ್ಸಿನ ಮಕ್ಕಳಿಗೂ ಶಿಕ್ಷಣ ಕೊಡಬೇಕಾದಿತು. ಗಂಡಸರಿಗೂ ಹೆಂಗಸರಿಗೂ ಭೂಮಿಹೀನ ಕೂಲಿಗಾರರಾಗಿದ್ದಲ್ಲಿ ಸಮವಾದ ಊಟ, ಆರೋಗ್ಯಕ್ಕೆ ಯೋಗ್ಯವಾದ ವಸತಿ, ವಸ್ತ್ರಗಳುಳ್ಳ ಯೋಗ್ಯ ಜೀವನ ಕೊಡುವಂಥ ವೇತನ ಪ್ರಮಾಣದ ಭರವಸೆ ಇರಬೇಕು.

ಭೂಶಾಸನಗಳನ್ನು ಪರಿಶೀಲಿಸಬೇಕು. ರೈತರ ಋಣಸ್ಥಿತಿ ಪರಿಶೋಧನೆಗೆ ಅಪಾರ ಕ್ಷೇತ್ರ. ಪಶುವಿನ ಸಮಸ್ಯೆಯೂ ಭಾರತದ ಬೇಸಾಯದ ಅಖಂಡ ಅಂಗವೇ. ಅಂತಲೇ ಈ ಜಟಿಲ, ಭ್ರಾಮಕ ಸಮಸ್ಯೆಯತ್ತ ಕುಶಲ ಕಾರ್ಯ ಕರ್ತರ ಗಮನ ಅತ್ಯಗತ್ಯ. (ಗಾಂಧಿ ಅರ್ಥವಿಚಾರ ಪುಟ. 146)

ವೆಲ್ಲೆಸ್ಲಿಯು ತನ್ನ ಆಡಳಿತ ಕ್ರಮವನ್ನು ಸಂವಿಧಾನದ ರೂಪದಂತೆ ವ್ಯಾಖ್ಯಾನಿಸಿದ್ದರಿಂದ ಆತನ ಖಾಸಗಿ ಆಸ್ತಿಯ ಪರಿಕಲ್ಪನೆ, ಅದರ ಹಕ್ಕು ಬಾಧ್ಯತೆ, ಕಂದಾಯದ ರೂಪಗಳು ಪಶ್ಚಿಮದ ಶೈಲಿಯನ್ನು ಹೋಲುತ್ತಿತ್ತು. ಭಾರತೀಯ ಮೂಲದ

ಜಮೀನಿನ ಹಕ್ಕು, ಅದರ ಕಂದಾಯ ರೂಪಕ್ಕೂ, ವೆಲ್ಲೆಸ್ಲಿಯು ರೂಪಿಸಿದ ಖಾಸಗಿ ಆಸ್ತಿಯ ಪರಿಕಲ್ಪನೆಗೂ ಅಜಗಜಾಂತರ ವ್ಯತ್ಯಾಸವಿದೆ. ಇದರಿಂದ ಹಳೆಯ ಮಾದರಿಯ ಸಮಾಜವು ಪಲ್ಲಟಕ್ಕೆ ಗುರಿಯಾಯಿತು. ಬ್ರಿಟೀಶರು ಕಂದಾಯ ಹೇರುವಾಗ ಅದು ಸುರಳೀತವಾದ ಪ್ರಕ್ರಿಯೆಯಾಗಿರಲಿಲ್ಲ. ಆಗಿನ ಅಳತೆಯ ಪದ್ಧತಿ; ಚಾಲ್ತಿಗೆ ಬಂದ ನಾಣ್ಯಗಳು; ಬಾಂದಿನ ಕಲ್ಲುಗಳು; ಸಾಕ್ಷಿ ಆಧಾರಗಳು ಮುಂತಾದವುಗಳ ಕುರಿತು "ಕುಂಪಣಿ ಸರಕಾರದ ಪೂರ್ವಣುದಂಡಕಾ"ದಲ್ಲಿ ಹೀಗೆ ಹೇಳಿದ್ದಾರೆ.

ನಿಶಾನಿಗಳ ಕೊಡಿಸಿ, ನೆಲ್ದೆಸೆಯೊಳವನಡಿಸಿ
ಮಧ್ಯ ಶಂಕುವ ನಿಲಿಸಿ, ಕೊಂಕುಕೊರತೆಯ ತೆಗಿಸಿ
ಸಂಕಳಿಗಳಿಂದಳಿಸಿ, ಅಂಕಿತಕ್ಕೆ ಕಲ್ನನಡಿಸಿ
ಐದೈದು ಸರಪಳಿಗೆ ಒಂದು, ನಡುವೆ ತುಂಡ್ಬಾಂದು
ದಾರಿಸರ ಬಾಂದು ಹಾಕಿಸಿದರಂದು, ಹೊಲಹೊಲಕೆ
ಇದರಂತೆ ಹೊಲೆಯರಿಂದಳಸುತ್ತ
ನಾಲ್ವತ್ತು ಸರಪಳಿಗೆ ಒಂದು, ಎಕರೆಯಂತೆಂದು
ಲೆಖ್ಖದೋಳ್ತಂದು, ಅದರಂತೆ ನಕಾಶ
ಏಕಪಠದಲಿ ತೆಗೆದು ಹಾಕಲಾ ಸಾಹೇಬನ ಕಡಿ
(ಫ್ಲೀಟರು ಸಂಗ್ರಹಿಸಿದ ಲಾವಣಿ)

(ದುರ್ಬೀನು)

ಖರಾಬು ಜಮೀನನ್ನು ವಜಾ ಮಾಡಲಾಯಿತು. 'ದುರ್ದುಂಬಿ ಹಚ್ಚಿ' (ದುರ್ಬೀನು) ಒಂದು ಕಣ್ಣು ಮುಚ್ಚಿ ನಕಾಶೆಯನ್ನು ಎಳೆಯಲಾಯಿತು. ಹೊಸ ರೊಕ್ಕ ಬಿಲ್ಲಿಯ ರೂಪದಲ್ಲಿ, ರುಂಡರು ಪಾಯದಲಿ, ಲೈನು ಮಾರ್ಗದಲಿ, ಪಾವು ತೂಕಕ್ಕೆ ಪರಿವರ್ತನೆಯಾಯಿತು. ಕಲ್ಲು ಮೊಹರ, ಮಾಪುಮುದ್ರೆ ಬಂತು. ಛಾಪಿಸಿದ ಅಕ್ಷರಗಳು ಬಂದವು. ಹೊಸ ರೀತಿಯ ಲೆಖ್ಖಗಳು ಬಂದವು. ಪೂರ್ಣಾಂಕ, ಅಪೂರ್ಣಾಂಕ, ಬೀಜ ಗಣಿತ, ಸಿದ್ಧಾಂತ ಭೂಗೋಳ ಕಾಯಿದೆಗಳು, ಖಾನೇಶುಮಾರಿಗಳು ಬಂದವು. ಪೊಡ್ಬಂದು ಫೈಸಲಿನಾ ಪತ್ರ, ಕುದುರೆಯ ರಿಜಿಸ್ತ್ರಿ, ಜನನ, ಮರಣಕ್ಕೆ ರಿಜಿಸ್ತ್ರಿಗಳು ಬಂದವು. ಇಡಿಯ ಸರಕಾರವು ಲೆಕ್ಕ ಪತ್ರದಲ್ಲಿ ಮುಳುಗಿತ್ತು. ಈ ಲಾವಣಿಯು ಇಂಗ್ರೇಜಿ ಸರಕಾರವನ್ನು ಕೊಂಚ ಲೇವಡಿಯನ್ನೂ ಮಾಡುತ್ತದೆ.

"ಅನುಕ್ರಮದ ಪತ್ರಿಕೆಯು ಒಂದು
ಜಮೀನಿನ ಪತ್ರ ಹನ್ನೊಂದು
ಗ್ರಾಮದ ಸಂಬಂಧ ಖರ್ಚಿನರಶೀದಿ ಇಪ್ಪತ್ತು ಒಂದು
ವರುಷದ ವಸೂಲ್ಬಾಕಿ ಇಪ್ಪತ್ತು ಎರಡು

ಕಂತಿನ ವಸೂಲ್ಬಾಕಿ ಹನ್ನೆರಡು
ಕಿರ್ದಿವಹಿ ಎರಡು, ಮತ್ಪಾತೆ ವಹಿ ಮೂರು
ಪತ್ರಿಕೆ ರಶೀದಿ ನಾಕು, ಜಪ್ತಿಯ ಪತ್ರಿಕ್ಷದಿನಾರು
ಸಂಶಹದಿಮೂರು, ತಕಾವಿಬಾಕಿ ಆರು
ಏಳನೆಯ ಟಿಪ್ಪಣವು
ಬೀಳ್ಭೂಮಿ ಪತ್ರಿಕೆಂಟು
ಕೇಳ್ವಾಹಣಿ ಒಂಭತ್ತು
ಸಾಗುವಳಿಯ ಪತ್ರಿಕೆಯ ಹತ್ತು"
ಇದು ಆಗಿನ ವಾಸ್ತವ ಸ್ಥಿತಿ. ಮತ್ತೊಂದು 'ಬಾಂದಿನ ಪದ 'ದಲ್ಲಿ ಹೀಗೆ ಹೇಳಲಾಗಿದೆ.
'ಬಂದೀತು ರಾಜ್ಯದ ಮೇಲೆ ಬಾಂದ ಹಾಕುವುದು
ಬಡವರ ಸುತ್ತ ತಂದು ಇಟ್ಟರಣ ಯಂಥಾ ಘೋರಾ
ಮೂಲಿಮೇಲಿನ ನಿಶಾನಿಗಳು ಮುಂದಕ್ಕ ಜೋಲಿ ಹೊಡದರ
ಮೇಜಣಿದಾರ ಆದಬೆಂಕಿ ಚೂರ' (ಅದೇ, ಪು. 302)

ಆದಾಯ ತೆರಿಗೆಯ ಭೀಕರತೆಯು ಹಿಂಸೆಯ ರೂಪಕ್ಕೂ ತಿರುಗಿತ್ತು. 1860 ಜುಲೈ 31 ರಿಂದ ಜಾರಿಗೆ ಬಂದ 32ನೆಯ ಕಾಯಿದೆಯ ಪ್ರಕಾರ ಆಸ್ತಿ, ಉದ್ಯೋಗ, ವ್ಯಾಪಾರ ಮತ್ತು ಕಚೇರಿಗಳ ಆದಾಯಗಳ ಮೇಲೆ ಹಾಕಿದ ಸುಂಕವನ್ನು ಕುರಿತದ್ದು ಈ ಲಾವಣಿ. 1868ರ 8ನೆಯ ಕಾಯಿದೆಯು ಬಂದಿತ್ತು. ಈ ಲಾವಣಿ ಅದರಲ್ಲಿನ ಹಿಂಸೆಯ ಕುರಿತು ಹೇಳುತ್ತದೆ.

"ಏನ ಹೇಳಲಿ ಜಮ್ಮದ ಗೋಳಾ
ಇಂಗ್ರಜಿ ಉಪದರ್ ಆದೀತ ಬಾಳಾ
ಬಡವರ ಅಳತಾರೊಗಳ ಗಳಾ
ಮಾಡುತಾರ ಚಿಂತಿ" (ಇದು ಪಲ್ಲವಿ)
....
ಸರಕಾರಕ ದೊರಿತ ಮಸಲತ್ತಾ
ಕರಪಟ್ಟಿ ಹಾಕ್ಯಾರ ತುರತಾ – ತುರತಾ
ರೈತರ ದುಡ್ಡು ಎಳುವ ಹಿಕಮತ್ತಾ
ಮಾಡಿದಾರ ಹಿಂಗ (ಆದಾಯ ತೆರಿಗೆ, ಅದೇ, ಪು. 51)

ಮನೆ ಮಾರಿ ಕಂದಾಯ ಕಟ್ಟುವ ಸ್ಥಿತಿಯು ಬಂದಿತು. ಆದಾಯ ತೆರಿಗೆಯ ಲಾವಣಿಯಲ್ಲಿ ಗಾಡಿನ್ ಸಾಹೇಬನ ಬಗ್ಗೆ ಉಲ್ಲೇಖವಿದೆ. ಇಬ್ಬರು ಇಂಗ್ಲಿಷ್ ಅಧಿಕಾರಿಗಳನ್ನು ಹೆಸರಿಸಬೇಕು : "ಒಬ್ಬ ಗಾಡಿನ್ ಸಾಹೆಬ್" ಎಂದು ಕರೆಸಿಕೊಳ್ಳುತ್ತಿದ್ದ ಧಾರವಾಡ ಜಿಲ್ಲೆಯ ನ್ಯಾಯಾಧೀಶನೂ ಮೊಟ್ಟಮೊದಲ ಸಹಾಯಕ ಕಲೆಕ್ಟರನೂ

ಆಗಿದ್ದ ಬೊಂಬಾಯಿ ಸಿವಿಲ್ ಸರ್ವಿಸ್‌ನ ದಿ.ಮಿ. ಸ್ಟೀವರ್ಟ್ ಸೆಯಿಂಟ್ ಜಾನ್ ಗಾರ್ಡನ್ : 1860ರ ಅಕ್ಟೋಬರ್‌ನಲ್ಲಿ ಧಾರವಾಡ ಜಿಲ್ಲೆಯ ಆದಾಯ ತೆರಿಗೆಯ ವಿಶೇಷ ಅಧಿಕಾರಿಯಾಗಿ ನೇಮಿಸಲ್ಪಟ್ಟನು. ಗವರ್ನರ್ ಜನರಲ್ ಅವರ ಆಲೋಚನಾ ಸಭೆಯ ಹೆಚ್ಚಿನ ಸದಸ್ಯನ ಸ್ಥಾನದಲ್ಲಿದ್ದಾಗ ಈತ 1867 ಅಥವಾ 1868ರಲ್ಲಿ ನಿಧನನಾದ. ಈತ ಸತ್ತ ಮೇಲೆ ಹುಬ್ಬಳ್ಳಿಯ ಹೊಸ ಬಡಾವಣೆಯೊಂದಕ್ಕೆ 'ಗೋರ್ಡನ್ ಪೇಟೆ' ಎಂದು ಕರೆಯಲಾಯಿತು. ಔಷಧಾಲಯ, ಹಳೆಯ ಮತ್ತು ಹೊಸ ಹುಬ್ಬಳ್ಳಿಗಳನ್ನು ಬೆಸೆದಿರುವ ಸೇತುವೆ. ಊರಿಗೆ ನೀರನ್ನು ಪೂರೈಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತಿದ್ದ ಗುರುಸಿದ್ದಪ್ಪ ಹೊಂಡ ಅಥವಾ ಜಲಾಶಯ – ಇವೆಲ್ಲಾ ಅವನ ನಿದರ್ಶನದಲ್ಲೆ ನಿರ್ಮಾಣವಾದವು. ಎರಡನೆಯ ಅಧಿಕಾರಿ 'ಯೆಲಪಾಟ್ ಸಾಹೇಬ್' ಎಂದು ಕರೆಸಿಕೊಳ್ಳುತ್ತಿದ್ದನು. ಜಾನ್ ಎಲ್ಫಿನ್‌ಸ್ಟನ್ ಇತ್ತೀಚೆಗೆ ನಿವೃತ್ತನಾದ. ಈತ ಮೊದಲ ಸಹಾಯಕ ಜಿಲ್ಲಾಧಿಕಾರಿಯಾಗಿ, ಅನಂತರ ಜಿಲ್ಲಾಧಿಕಾರಿ ಮತ್ತು ನ್ಯಾಯಾಧೀಶನಾಗಿ 1861ರ ಆಗಸ್ಟ್‌ನಿಂದ 1863ರ ಜೂನ್ ವರೆಗೆ ಮತ್ತು ಅನಂತರ ಅನೇಕ ಸಂದರ್ಭಗಳಲ್ಲಿ ಕೆಲಸ ಮಾಡಿದ. ಜಿಲ್ಲೆಯ ಜನಗಳಲ್ಲಿ ಅತ್ಯಂತ ಪ್ರಸಿದ್ಧವಾಗಿದ್ದ (ಮುನ್ನುಡಿ, ಪು. 49). ಗಾಂಧಿಯವರ ಸ್ವಾತಂತ್ರ್ಯಕ್ಕಾಗಿ ಕರನಿರಾಕರಣ ಎಂಬುದಿಲ್ಲಿ ಉಲ್ಲೇಖನೀಯ.

> **ಜನತೆಯನ್ನು ಜಾಗ್ರತಗೊಳಿಸುವುದರಲ್ಲಿ ನಾವು ಮೊದಲಿನಿಂದಲೂ ತೊಡಗಿಕೊಂಡಿದ್ದೇವೆ. ಅವರೇ ನಮ್ಮ ಮುಖ್ಯ ಬೆಂಬಲವಾಗಬೇಕು. ಏಕೆಂದರೆ ಸ್ವಾತಂತ್ರ್ಯಬೇಕಾದದ್ದು ಅವರ ಸಲುವಾಗಿಯೇ ಹೆಚ್ಚು ಸ್ವಾತಂತ್ರ್ಯವು ಹಣವಂತರು ಇಲ್ಲವೇ ಸುಶಿಕ್ಷಿತ ಜನರಿಗಷ್ಟೇ ಸಂಬಂಧಿಸಿದ ವಸ್ತುವಲ್ಲ. ಅವರೂ ಜನತೆಯೂ ತಮ್ಮ ತಮ್ಮ ಸಂಕುಚಿತ ಸ್ವಾರ್ಥಗಳನ್ನು ಸ್ವಾತಂತ್ರ್ಯ ಸಾಧನೆಗಾಗಿ ಒಟ್ಟುಗೂಡಿಸಿ, ಸಾಕಷ್ಟು ಸಂಯಮದಿಂದಲೂ ಶಿಸ್ತಿನಿಂದಲೂ ಬೆರೆತು, ಸ್ವ-ಹಿತವನ್ನು ಕಡೆಗಣಿಸಿ, ತಮ್ಮ ಶೋಷಣೆಯಲ್ಲೇ ತೊಡಗಿರುವ ಸರಕಾರದ ವಿರುದ್ಧ ಕರನಿರಾಕರಣ ಚಳುವಳಿ ಹೂಡು ವಂತಾಗಬೇಕು. (ಯ.ಇ.1921) (ಸ್ವಾತಂತ್ರ್ಯ ಮೋ.ಕ.ಗಾ 1960 ಪುಟ. 65)**

ಮೇಲಿನ ಉದಾಹರಣೆಗಳಿಂದ ತಿಳಿದು ಬರುವ ಮುಖ್ಯ ಅಂಶವೇನೆಂದರೆ, ಭಾರತದ ಮೇಲೆ ಕಂದಾಯವನ್ನು ಬ್ರಿಟೀಶರು ಹೇರುವಾಗ – ಅವರು ಭಾರತದ ಕೃಷಿ ಜೀವನದ ಪದ್ಧತಿಯನ್ನು ಅರ್ಥಮಾಡಿಕೊಂಡಿರಲಿಲ್ಲ. ವೆಲ್ಲೆಸ್ಲಿಯ ಅನಂತರ ಬಂದ ಮನ್ರೋ, ಮಾಲ್ಕಂ, ಎಲ್ಫಿನ್‌ಸ್ಟಾನ್, ಮೆಟಕಾಫ್ ಮೊದಲಾದವರು 'ಆಂಗ್ಲೀಕರಣ'

ರೂಪವನ್ನು ಕಾನೂನಿಗೆ ಅನ್ವಯಿಸುವಲ್ಲಿ ಯಶಸ್ವಿಯಾದರು. 'ಇಂಗ್ಲೆಂಡಿನ ಕಾಮನ್‌ಲಾ' ಪದ್ಧತಿಯಲ್ಲಿ ಬಹಳ ಕಾಲದವರೆಗೆ ಅಪೀಲು ಎಂಬುದೇ ಇರಲಿಲ್ಲ', ಹದಿನಾರೆಯ ಶತಮಾನದ ಕೊನೆಯಲ್ಲಿ ಇಂಗ್ಲೆಂಡಿನಲ್ಲಿ ಈ ಪದ್ಧತಿಯು ರದ್ದುಗೊಂಡು ಸಾಕ್ಷ್ಯ ಪರಾಮರ್ಶನವನ್ನು ಜಾರಿಗಳು ಸರಿಯಾಗಿ ಮಾಡದ್ದರಿಂದ ಅನ್ಯಾಯವಾಗಿರುವ ಸಂದರ್ಭಗಳಲ್ಲಿ ನ್ಯಾಯಾಲಯಗಳೇ ಮರು ವಿಚಾರಣೆ ಮಾಡುವ ರೂಢಿ ಬಳಕೆ ಬಂತೆಂದು ಡಾ. ಜಿಂಕ್ವೆ ತಿಳಿಸಿದ್ದಾರೆ (ವಿ. ರಾಘವಯ್ಯ, 1984, ಪು. 310). ಇದರಿಂದ ಬ್ರಿಟೀಶರು ಭಾರತದಲ್ಲಿಯೂ ಅದೇ ಪ್ರಯೋಗವನ್ನು ಮಾಡಿದರು. ನೀತಿಯ ಕುರಿತಂತೆ ಗಾಂಧಿಯ ನಿಲುವು ಇಲ್ಲಿ ಉಲ್ಲೇಖನೀಯ.

> **ನೀತಿನಿಯಮದ ಇನ್ನೊಂದು ಲಕ್ಷಣ ನಿತ್ಯ ನಿರ್ವಿಕಾರತ್ವ; ಅದಕ್ಕೆ ಅಳಿವಿಲ್ಲ, ವ್ಯತ್ಯಾಸವಿಲ್ಲ. ಅದಕ್ಕೆ ದೇಶ ಜಾತಿ ಭೇದವಿಲ್ಲ. ಎಲ್ಲ ದೇಶಗಳಿಗೂ ಎಲ್ಲ ಜಾತಿಗಳಿಗೂ ಒಂದೇ ಪರಿ. (ಧರ್ಮ ಮತ್ತು ನೀತಿ ಮೋ.ಕ.ಗಾ. 1958 ಪುಟ. 156)**

ವಸಾಹತು ಕಾಲದಲ್ಲಿ ನ್ಯಾಯ, ಕಾನೂನು, ಮದುವೆಯ ಕುರಿತಂತೆ ಒಂದು ಸಮತೋಲಿತ ಎನ್ನಬಹುದಾದ ಧೋರಣೆಯನ್ನು ರೂಪಿಸಿದವು. ವಾರನ್ ಹೇಸ್ಟಿಂಗ್ಸ್ 1772ರಲ್ಲಿಯೇ ಈ ಕುರಿತು ತನ್ನ ಧೋರಣೆಯನ್ನು ಪ್ರತಿಪಾದಿಸಿದ್ದ. ಪರಂಪರಾಗತವಾದ ನಂಬಿಕೆಗಳು, ಮದುವೆಯ ಸಂಪ್ರದಾಯಗಳು, ಜಾತಿ ಪದ್ಧತಿ, ಮತ್ತು ಬೇರೆ ಬೇರೆ ರೀತಿಯ ಧಾರ್ಮಿಕ ಉಪಕ್ರಮಗಳು ಅಥವಾ ಸಾಂಸ್ಥಿಕ ಗ್ರಹಿಕೆಗಳು ಭಾರತೀಯರ ಜೀವನ ಕ್ರಮಗಳ ಮೇಲೆ ಆಡಳಿತವನ್ನು ಬೇರೆ ಬೇರೆ ರೀತಿಯಲ್ಲಿ ನಿರ್ದೇಶಿಸುತ್ತವೆ. ಇಲ್ಲಿಯ ಹಿಂದೂಗಳ ಮತ್ತು ಮುಸ್ಲಿಂರ ಮೇಲೆ ಇವು ಹೆಚ್ಚು ಪ್ರಭಾವಶಾಲಿಯಾಗಿವೆ. ಹಿಂದೂಗಳಲ್ಲಿ 'ಶಾಸ್ತ್ರಿ' (Shaster) ಮತ್ತು ಮುಸ್ಲಿಂರಲ್ಲಿ ಉಲೇಮಗಳಿದ್ದಾರೆ. ಬ್ರಿಟೀಶ್ ಇಂಡಿಯಾ ಕಾಲದ ಕೋರ್ಟು ಪದ್ಧತಿಯು ಅವರನ್ನು ನೇಮಿಸಬೇಕಾಯಿತು. ಇದು 1864ರ ವರೆಗೆ ಮುಂದುವರಿಯಿತು. ಇದು ವಸಾಹತುಶಾಹಿಯ ಜ್ಞಾನ ಪದ್ಧತಿಯನ್ನು ನಿರೂಪಿಸುತ್ತವೆ. ಕೋರ್ಟು ಮತ್ತು ವಕೀಲರ ಬಗ್ಗೆ ಹೇಳುತ್ತಾ ಗಾಂಧಿ ಆಗಿನ ಸಂದರ್ಭದ ಕುರಿತು ಹೀಗೆ ಹೇಳಿದ್ದಾರೆ.

> **ಎಲ್ಲಕ್ಕಿಂತ ಹೆಚ್ಚಾಗಿ ಅವರಿಂದ ದೇಶಕ್ಕಾದ ನಷ್ಟ ಇಂಗ್ಲಿಷರ ಮುಷ್ಟಿಯನ್ನು ಬಲಪಡಿಸಿದುದು. ಕೋರ್ಟುಗಳಿಲ್ಲದಿದ್ದರೆ ಇಂಗ್ಲಿಷರು ತಮ್ಮ ಆಡಳಿತ ನಡೆಯಿಸಲಾಗುತ್ತಿರಲಿಲ್ಲ. ಕೋರ್ಟುಗಳು ಜನರ ಹಿತಕ್ಕಾಗಿ ಏರ್ಪಾಡಾಗಿವೆ ಎಂದು ತಿಳಿಯುವುದು ತಪ್ಪು. ತಮ್ಮ ಸತ್ತೆಯನ್ನು ಸ್ಥಿರಗೊಳಿಸಬೇಕೆನ್ನುವವರು ಕೋರ್ಟುಗಳ ಮೂಲಕ**

ಹಾಗೆ ಮಾಡುತ್ತಾರೆ. ಜನರು ತಮ್ಮ ಜಗಳಗಳನ್ನು ತಾವೇ ಪರಿಹರಿಸಿಕೊಂಡರೆ ಅವರ ಮೇಲೆ ಮೂರನೆಯವರದೇನು ಅಧಿಕಾರ? ಕಾದಡಿಯೋ ತಮ್ಮ ಅಪ್ತೇಷ್ಟರಿಂದ ತೀರ್ಪು ಮಾಡಿಸಿಕೊಂಡೋ ಜನರು ತಮ್ಮ ತಮ್ಮೊಳಗೆಯೆ ಜಗಳಗಳನ್ನು ಪರಿಹರಿಸುತ್ತಿದ್ದಾಗ ಇಷ್ಟು ನಪುಂಸಕರಾಗಿರಲಿಲ್ಲ. ಈ ಕೋರ್ಟು ಕಚೇರಿಗಳಿಗೆ ಹೋಗಲು ಮೊದಲಿಟ್ಟ ಮೇಲೆ ಜನರು ಹೆಚ್ಚು ಅಂಜುಕುಳಿಗಳೂ ನಪುಂಸಕರೂ ಆದರೂ ಹೊಡೆದಾಡಿ ಸಾಯುವುದು ಅಸಭ್ಯತೆಯೆ, ಸಂದೇಹವಿಲ್ಲ. ಆದರೆ ನಮ್ಮ ಜಗಳವನ್ನು ನೀವು ತೀರಿಸಿಕೊಡಿ ಎಂದು ಮೂರನೆಯವರನ್ನು ಕೇಳುವುದು ಮಾತ್ರ ಅಸಭ್ಯತೆಯಲ್ಲವೇ? ಮೂರನೆಯವರು ಮಾಡಿದ ತೀರ್ಮಾನ ಯಾವಾಗಲೂ ಸರಿಯೆ ಎಂದು ಹೇಳಬಲ್ಲವರು ಯಾರು? ಯಾರದು ಸತ್ಯವೋ ಆ ಕಕ್ಷಿಗಳಿಗೆ ಮಾತ್ರವೇ ಗೊತ್ತು. ನಾವು ಭೋಳೇ ಜನ. ಅಜ್ಞಾನಿಗಳು, ನಮ್ಮ ಹಣ ತೆಗೆದುಕೊಂಡ ಹೊಸಬ ನಮಗೆ ನ್ಯಾಯದಾನ ಮಾಡಬಲ್ಲ ಎಂದು ತಿಳಿಯುತ್ತೇವೆ.. ಮುಖ್ಯವಾಗಿ ನೆನಪಿಡಬೇಕಾದುದು ಇಷ್ಟು; ವಕೀಲರಿಲ್ಲದಿದ್ದರೆ ಈ ಕೋರ್ಟುಗಳೇ ಸ್ಥಾಪಿತವಾಗುತ್ತಿರಲಿಲ್ಲ; ಕೋರ್ಟುಗಳಿಲ್ಲದೆ ಇಂಗ್ಲಿಷರು ರಾಜ್ಯ ನಡೆಸಲಾಗುತ್ತಿರಲಿಲ್ಲ. ಬರೀ ಇಂಗ್ಲಿಷ್ ನ್ಯಾಯಾಧೀಶರು, ಇಂಗ್ಲಿಷ್ ವಕೀಲರು, ಇಂಗ್ಲಿಷ್ ಪೋಲಿಸರೇ ಇದ್ದಿದ್ದರೆ. ಇಂಗ್ಲಿಷರನ್ನು ಮಾತ್ರ ಅವರು ಆಳಬಹುದಾಗಿತ್ತು. ಭಾರತೀಯ ನ್ಯಾಯಧೀಶರು ವಕೀಲರು ಇಲ್ಲದೆ ಇಂಗ್ಲಿಷರ ಕೆಲಸ ನಡೆಯುತ್ತಿರಲಿಲ್ಲ. ಮೊಟ್ಟಮೊದಲು ವಕೀಲರು ಹೇಗೆ ಹುಟ್ಟಿಕೊಂಡರೋ, ಅವರ ಮೇಲೆ ಹೇಗೆ ಕೃಪಾಕಟಾಕ್ಷ ಬಿತ್ತೋ ನೀವು ತಿಳಿದುಕೊಳ್ಳಬೇಕು. ಆಗ ಈ ಕಸುಬಿನ ಬಗ್ಗೆ ನನಗಿರುವಷ್ಟೇ ತಿರಸ್ಕಾರ ನಿಮಗೂ ಹುಟ್ಟುತ್ತದೆ. ಈ ವಕೀಲರು ತಮ್ಮ ಕಸಬನ್ನು ಬಿಡಲಿ, ಈ ಕಸಬು ಹೀನ ಎನ್ನಲಿ; ಇಂಗ್ಲಿಷರ ರಾಜ್ಯ ಒಂದು ದಿನದಲ್ಲಿ ಕರಗಿ ಹೋಗುತ್ತದೆ. ಹಿಂದೂಸ್ಥಾನಿಗಳು ಜಗಳಗಂಟರು, ಕೋರ್ಟು ಎಂದರೆ ಇವರಿಗೆ ಮೀನಿಗೆ ನೀರಿದ್ದ ಹಾಗೆ ಎಂದು ನಮಗೆ ಅಪನಿಂದೆ ಬರಲು ವಕೀಲರು ಕಾರಣ.

ವಕೀಲರನ್ನು ಕುರಿತು ಹೇಳಿದುದೆಲ್ಲಾ ನ್ಯಾಯಾಧೀಶರಿಗೂ ಅನ್ವಯಿಸುತ್ತದೆ. ಅವರೂ ಇವರೂ ದಾಯಾದಿಗಳು. ಅವರಿಂದ ಇವರಿಗೆ ಬಲ, ಇವರಿಂದ ಅವರಿಗೆ ಬಲ.

(ಮೋ.ಕ ಗಾಂಧಿ 2009 ಹಿಂದೂ ಸ್ವರಾಜ್ಯ ಪುಟ. 46)

ಬ್ರಿಟೀಶ್ ಗವರ್ನರ್ ಜನರಲ್‌ಗಳು ಹೊಸ ರೀತಿಯ ಆಡಳಿತವನ್ನು ರೂಪಿಸಿದ್ದರಿಂದ ಬೇರೆ ಬಗೆಯ ಅರ್ಥಶಾಸ್ತ್ರವು ಜಾರಿಗೆ ಬಂದಿತು. ಸಂಖ್ಯಾಶಾಸ್ತ್ರದಲ್ಲಿ ಬದಲಾವಣೆಯು

ಬಂದಿತು. ಖಡ್ಗದ ಬದಲಿಗೆ ಪೆನ್ನುಗಳು ಬಂದವು. ಪ್ರಭುತ್ವದ ಸ್ಥಾಪನೆಗಾಗಿ ಆಡಳಿತಗಾರರು ಬಂದರು. ನ್ಯಾಯಾಧೀಶರು ಬಂದರು. ಕಾರ್ನವಾಲೀಸ್ ಪದ್ಧತಿಯಲ್ಲಿ ಚರಿತ್ರೆ ಮತ್ತು ಅದರ ಅನುಭವವು : ರಾಜಕೀಯದ ಕುರಿತ ಆಲೋಚನಾ ಕ್ರಮ ಭಾರತೀಯ ಚರಿತ್ರೆ, ಮತ್ತು ರಾಜಕೀಯ ಸಮಾಜದಿಂದ ಬೇರ್ಪಟ್ಟ ಮಾದರಿಯದಾಗಿತ್ತು. ಭಾರತೀಯ ಸನ್ನಿವೇಶವನ್ನು ಅದು ಸರಿಯಾದ ರೀತಿಯಲ್ಲಿ ಅರ್ಥಮಾಡಿಕೊಂಡ ಮಾದರಿಯದಾಗಿರಲಿಲ್ಲ (ವಿವರಳಿಗೆ ನೋಡಿ : Ericstokes, 1989, ಪು. 13). ಮನ್ರೋ ರಾಜಕಾರಣವು ಪ್ರಯೋಗಾತ್ಮಕವಾಗಿತ್ತು. ಆದರೆ ಕಾರ್ನವಾಲೀಸನ ಪದ್ಧತಿಯನ್ನು ಅನಂತರದವರು ಅನುಕರಿಸಿದರು. ಅಮೂರ್ತ ತಾತ್ವಿಕತೆ : ರಾಜಕಾರಣದಲ್ಲಿ ಅವ್ಯೈಯಕ್ತಿಕವಾದ ಆಡಳಿತ ಮುಖ್ಯವೆಂದು ಬ್ರಿಟೀಶರು ಚಿಂತಿಸಿದರು. ಮನ್ರೋ ರಾಜಕಾರಣವು ಭಾರತೀಯ ಪರಂಪರೆಯನ್ನು ಅರ್ಥಮಾಡಿಕೊಳ್ಳುವ, ಮತ್ತು ಅದನ್ನು ಮುಂದುವರಿಸುವ ಮಾದರಿಯದಾಗಿತ್ತು. ಮನ್ರೋ ಕೂಡಾ ರಾಜಕಾರಣದಲ್ಲಿ ಸಾಮಾನ್ಯದವನಾಗಿರಲಿಲ್ಲ. ಅವನ ಪ್ರಭುತ್ವದ ಪರವಾದ ನಿಲುವು ಅವನ ಕೆಲವು ಯುದ್ಧನೀತಿಯಲ್ಲಿ ವ್ಯಕ್ತವಾಗುತ್ತದೆ.

ಮೆಟಾಕಾಫ್ ಒಂದು ಸಂದರ್ಭದಲ್ಲಿ ಹೀಗೆ ಹೇಳುತ್ತಾನೆ : "ಭಾರತೀಯ ರಾಜಕೀಯ ಪ್ರಭುತ್ವವು ತಮ್ಮ ರಾಜಸತ್ತೆಯನ್ನು ಉಳಿಸಿಕೊಳ್ಳಲು ಒಂದೇ ರೀತಿಯ ಪರಿಕರವನ್ನು ಬಳಸಿಕೊಂಡಿದೆ ಮತ್ತು ಅದೇ ಕಾಲಕ್ಕೆ ಅದು ಭಾರತೀಯ ಜೀವನ ಕ್ರಮ, ಸಂಸ್ಕೃತಿ, ಅದರ ಔನ್ನತ್ಯವನ್ನು ಕಾಪಾಡಿಕೊಳ್ಳಲು ಕೂಡಾ ಬಯಸಿದೆ". ಪಶ್ಚಿಮದ ಉದಾರವಾದಿ ಚಿಂತನೆಯ ಕ್ರಮಕ್ಕೆ ಇದು ಒಂದು ಉದಾಹರಣೆ. ಆದರೆ ಮೆಟಾಕಾಫ್ ಮ್ಯಾಜಿಸ್ಟ್ರೇಟರ ಅಧಿಕಾರವನ್ನು ಹೆಚ್ಚು ಎತ್ತಿಹಿಡಿಯುತ್ತಾನೆ. ರೆವಿನ್ಯೂ, ಜುಡಿಶಿಯಲ್, ಸೈನ್ಯಾಧಿಕಾರವು ಒಬ್ಬನೇ ವ್ಯಕ್ತಿಗೆ ಸೇರಿರಬೇಕು. ಮತ್ತು ಈ ವಿಷಯದಲ್ಲಿ ಅವನ ಬಗ್ಗೆ ಅನುಮಾನ ವ್ಯಕ್ತಪಡಿಸಬಾರದು ಎಂದು ಪ್ರತಿಪಾದಿಸುತ್ತಾನೆ. ಮನ್ರೋ ಪಾಶ್ಚಾತ್ಯ ಕಾನೂನಿನ ಅಂಶವನ್ನು ಹೆಚ್ಚು ಪ್ರತಿಪಾದಿಸುತ್ತಾನೆ. ಮತ್ತು ಎಲ್ಲವೂ ಬರವಣಿಗೆಯ ರೂಪದಲ್ಲಿರಬೇಕೆಂದು ಒತ್ತಿಹೇಳುತ್ತಾನೆ. ಅವನು ಕೂಡಾ ಒಬ್ಬನೇ ಅಧಿಕಾರವನ್ನು ಹೊಂದಿರಬೇಕು ಎಂದು ಪ್ರತಿಪಾದಿಸಿರುವುದು ಗಮನಾರ್ಹವಾಗಿದೆ. ಚಾರ್ಟರ್‌ನ ಕಾಯಿದೆಯು 1833ರಲ್ಲಿ ಜಾರಿಗೆ ಬಂತು. ಅದನ್ನು ಇತಿಹಾಸಕಾರರು ಹೇಳುವಾಗ : "ಅದು ವರ್ಣರಹಿತ ; ಸಮವಸ್ತ್ರದಂತೆ ಒಂದೇ ನಿಯಮ ಹೊಂದಿದ್ದು ಅತ್ಯಂತ ರೊಮಾಂಟಿಕ್ ಪರಿಕಲ್ಪನೆಯನ್ನು ಒಳಗೊಂಡಿತ್ತು" ಎಂದು ಹೇಳುತ್ತಾರೆ (Eric Stokes, 1989).

ಎಲ್ಫಿನ್ ಸ್ಟಾನ್, 'ನಮ್ಮ ಸರಕಾರವು ಈಗಲೂ ಭಾರತದ ಆಡಳಿತ ವ್ಯವಸ್ಥೆಯನ್ನು ರೂಪಿಸುತ್ತಿರುವಾಗ ಒಂದು ಪ್ರಯೋಗವೆಂದು, (Experimental) ಭಾವಿಸುತ್ತದೆ. ಇದಕ್ಕಿಂತ ಹೆಚ್ಚಿನದನ್ನು ಪ್ರತಿಪಾದಿಸುವಂತಿಲ್ಲ ಎಂದು ಹೇಳುತ್ತಾನೆ.

ಮನ್ರೋ ಭಾರತೀಯ ಅಧಿಕಾರ ಕ್ರಮವನ್ನು ಮತ್ತು ಅದು ಆಡಳಿತ ನಡೆಸುವ ಕ್ರಮವನ್ನು ಕುರಿತು ಹೀಗೆ ಹೇಳುತ್ತಾನೆ : ಈ ರಾಜ್ಯದ ವ್ಯವಸ್ಥೆಯು ತುಂಬಾ ನೀರಸವಾದ ಕ್ರಮ (Dull response) ಹೊಂದಿದೆ. ಆದರೆ ಇಲ್ಲಿ ಬೇರೆ ಬೇರೆ ಜ್ಞಾನ ಪರಂಪರೆಗಳಿವೆ ಮತ್ತು ಅವುಗಳ ಬಗ್ಗೆ ಔದಾಸೀನ್ಯ ತುಂಬಿದೆ. ಜನರು ಕಂದಾಚಾರ, ಸಂಪ್ರದಾಯ, ಆಧ್ಯಾತ್ಮಿಕ, ಧರ್ಮ, ಆದಿ ಭೌತಿಕ ಸಂಗತಿಗಳ ನಂಬಿಕೆಯಿರಿಸಿದ್ದಾರೆ. ಯುದ್ಧ ಮತ್ತು ಶಾಂತಿ ಇಲ್ಲಿ ಮರೀಚಿಕೆಯಾಗಿದೆ. ಗಾಂಧೀಜಿಯವರ ಧರ್ಮದರ್ಶಿತ್ವ ತತ್ವ ಗಮನಾರ್ಹ.

> ಕುಲಧನವಾಗಿಯೋ ವ್ಯಾಪಾರ ಉದ್ಯೋಗಗಳ ದೆಸೆಯಿಂದಲೋ ನನ್ನಲ್ಲಿ ಸಾಕಷ್ಟು ಪ್ರಮಾಣದ ಸಂಪತ್ತು ಸೇರಿದೆಯೆನ್ನಿ. ಆ ಎಲ್ಲ ಸಂಪತ್ತೂ ನನಗೆ ಸೇರಿದ್ದಲ್ಲ ಎಂದು ನಾ ತಿಳಿಯಬೇಕು. ಕೋಟಿಗಟ್ಟಲೆ ಜನರು ಅನುಭವಿಸುತ್ತಿರುವುದಕ್ಕಿಂತ ಹೆಚ್ಚಿಲ್ಲದ ಗೌರಯುತ ಜೀವನದ ಹಕ್ಕು ಮಾತ್ರ ನನಗೆ ಉಂಟು ನನ್ನ ಸಂಪತ್ತಿನ ಉಳಿದ ಭಾಗವೆಲ್ಲ ಸಮಾಜಕ್ಕೆ ಸೇರಿದ್ದು, ಅದರ ಕಲ್ಯಾಣಕ್ಕಾಗಿಯೇ ಉಪಯೋಗಿಸಲ್ಪಡಬೇಕು. ಜಮೀನುದಾರರು ಹಾಗೂ ದೇಶೀ ಅರಸರ ಆಸ್ತಿಪಾಸ್ತಿಗಳ ಬಗೆಗೆ ದೇಶದ ಎದುರು ಸಮಾಜವಾದಿಗಳು ಇಟ್ಟ ತತ್ತ್ವದ ಸಂದರ್ಭದಲ್ಲಿ ನಾನು ಈ ತತ್ತ್ವವನ್ನು ಪ್ರತಿಪಾದಿಸಿದೆ. ಅವರಂತೂ ಈ ವಿಶಿಷ್ಟ ಹಕ್ಕುಗಳುಳ್ಳ ವರ್ಗಗಳನ್ನು ತೊಡೆದಾರು. ನಾನಾದರೋ ಬಲ್ಲಿದರು ತಮ್ಮ ಲೋಭ ಹಾಗೂ ಆಸ್ತಿಭಾವನೆಯನ್ನು ಮೀರಿ ಬೆಳೆಯಲಿ, ತಮ್ಮಲ್ಲಿ ಸಂಪತ್ತಿದ್ದರೂ ದುಡಿದು ಅನ್ನ ಗಳಿಸುವವರ ಮಟ್ಟಕ್ಕೆ ಬರಲಿ ಎಂದು ಆಶಿಸುತ್ತೇನೆ. ದುಡಿಮೆಗಾರ ತನ್ನ ದುಡಿಯುವ ಶಕ್ತಿಯ ಒಡೆಯನಾಗಿರುವುದಕ್ಕಿಂತ ಕಡಿಮೆ ಪಾಲು ಶ್ರೀಮಂತ ತನ್ನ ಐಶ್ವರ್ಯದ ಒಡೆಯ ಎಂಬುದನ್ನು ದುಡಿಮೆಗಾರ ಮನಗಾಣಬೇಕು.
>
> "ಈ ವ್ಯಾಖ್ಯೆಯಂತೆ ಎಷ್ಟು ಮಂದಿ ನಿಜವಾದ ಧರ್ಮದರ್ಶಿಗಳಾದಾರು ಎಂಬುದು ಬೇರೆ ಮಾತು. ತತ್ತ್ವ ಸರಿಯೆಂದಾದರೆ ಅನೇಕರು ಅದನ್ನು ಆಚರಿಸಲಿ, ಒಬ್ಬನೇ ಒಬ್ಬ ಆಚರಿಸಲಿ ಅದು ಅಪ್ರಕೃತ. ಇದು ಸಂಕಲ್ಪ ಶಕ್ತಿಯ ಪ್ರಶ್ನೆ. ಗೆಲ್ಲುವಿರೋ ಸೋಲುವಿರೋ, ಅಹಿಂಸೆಯನ್ನು ಅಂಗೀಕರಿಸುವ

ಪಕ್ಷಕ್ಕೆ ಅದರಂತೆ ಬದುಕಲು ನೀವು ಹೆಣಗಲೇಬೇಕು. ಬುದ್ಧಿಗೆ ನಿಲುಕದಂಥದು ಈ ತತ್ತ್ವದಲ್ಲಿ ಯಾವುದೂ ಇಲ್ಲ, ಆಚರಣೆಗೆ ಕಷ್ಟ ಎಂದು ನೀವು ಹೇಳಬಹುದು, ಅಷ್ಟೆ."

(ಅರ್ಥವಿಚಾರ ಪುಟ. 272)

ಕಾರ್ನವಾಲೀಸ್ ವಾಸ್ತವವಾಗಿ ಅತ್ಯುತ್ತಮ ಆಡಳಿತಗಾರ ಮತ್ತು ಆಡಳಿತ ಕಾರ್ಯಾಂಗದ ಯಂತ್ರವನ್ನು ಶಾಂತಿ ಮತ್ತು ಸೌಹಾರ್ದತೆಯಿಂದ ಕಾಪಾಡಿಕೊಂಡು ಬಂದವನು ಎಂದು ಹೇಳಲಾಗಿದೆ. ಕಾರ್ನವಾಲೀಸ್ ಜಮೀನುದಾರಿ ಪದ್ಧತಿಯನ್ನು ಎತ್ತಿ ಹಿಡಿದ. ಆದರೆ ಮುನ್ರೋನ ರಾಯತ್‌ವಾರಿ ಪದ್ಧತಿಯನ್ನು ಅಳವಡಿಸಿದ. ಇವೆರಡೂ ಪಶ್ಚಿಮದ ಕಾನೂನಿನ ಕ್ರಮವನ್ನು ಅಳವಡಿಸಿಕೊಂಡಿದ್ದವು ಹಾಗೂ ಖಾಸಗಿ ಆಸ್ತಿ ಮತ್ತು ಅದರ ಮೇಲಿನ ಅಧಿಕಾರ ಸ್ಥಾಪನೆಯನ್ನು ಹೇಳುತ್ತವೆ. ಮುನ್ರೋ ಮದರಾಸು ಪ್ರಾಂತ್ಯದಲ್ಲಿ ಖಾಸಗಿ ಆಸ್ತಿಯನ್ನು, ಅದರ ಮೇಲೆ ಇರಬೇಕಾದ ಹಕ್ಕು ಬಾಧ್ಯತೆಗಳನ್ನು ಪ್ರತಿಪಾದಿಸಿದ. ಕಾರ್ನವಾಲೀಸ್ ಉದ್ದೇಶವು ಸ್ಪಷ್ಟವಾಗಿತ್ತು. ಅವನು ಇಂಗ್ಲೀಷ್ ಮಾದರಿಯ ಆಡಳಿತ ಮತ್ತು ಭಾರತೀಯ ಸಮಾಜಕ್ಕೆ ಹೊಸ ರೀತಿಯ ನೈತಿಕ ನಿಲುವುಗಳು ಇರಬೇಕೆಂದು ಉದ್ದೇಶಿಸಿದವನು. ಹೊಸ ಸಾಮಾಜಿಕತೆಯ ಉದಯವು ಅವನ ಪ್ರಮುಖ ಗುರಿಯಾಗಿತ್ತು.

ಎಂ.ಎಸ್. ಪುಟ್ಟಣ್ಣನವರು ಭಾರತೀಯ ಭೂ ಹಿಡುವಳಿ ಮತ್ತು ಅದಕ್ಕೆ ಸಂಬಂಧಿಸಿದ ಕಂದಾಯವನ್ನು ವಿವರಿಸುವಾಗ ಯುರೋಪಿನ ಮಾನದಂಡಗಳು ಏನಿವೆಯೋ ಅದನ್ನು ಪ್ರಸ್ತಾವಿಸುತ್ತಾರೆ. ಯುರೋಪ್ ಖಂಡದ ಫ್ಯೂಡಲ್ ಸಂಸ್ಥೆಯ ಹಿಡುವಳಿ ಶಿಸ್ತು ಹೇಗೆ ನಮ್ಮ ಭರತ ಖಂಡದಲ್ಲಿಯೂ ಹಾಗೆಯೇ ಹುಟ್ಟಿದಂತೆ ಇದೆ (ಪಾಳೆಯಗಾರರು, 1923, ಪು. 21). ಅದೇ ಕೃತಿಯಲ್ಲಿ ಎಂ.ಎಸ್. ಪುಟ್ಟಣ್ಣನವರು ಹೀಗೆ ಹೇಳುತ್ತಾರೆ. ಭೂ ಸಾಗುವಳಿ ಶಿಸ್ತಿಗೆ ಬೆನಿಫಿಶಿಯರಿ ಎಂದು ಹೆಸರು. ಇದರ ಅರ್ಥಕ್ಕೆ ಸಮೀಪವಾದ ಶಬ್ದವನ್ನು ನಾವು ಹುಡುಕಿ ನೋಡಿದರೆ 'ಖಾಯಂಗುತ್ತಾ' ಎಂಬ ಶಬ್ದವನ್ನು ಭಾಷಾಂತರವಾಗಿ ಇಟ್ಟುಕೊಳ್ಳಬಹುದು. ಈ ಖಾಯಂ ಗುತ್ತಾ ಏರ್ಪಾಡಿನಿಂದ ಜಮೀನುದಾರನಿಗೂ, ರೈತನಿಗೂ ಇರುವ ಸಂಬಂಧವೇ ಯುರೋಪಿನಲ್ಲಿಯೂ ಇದ್ದ ಹಾಗಾಯಿತು (ಅದೇ, ಪು. 22). ಭೂ ಸಾಗುವಳಿ, ಅದರ ಆದಾಯ, ಇದನ್ನು ಕುರಿತು ಯೋಚಿಸಲಾಗಿ ಭೂಮಿಯನ್ನು ಸೀಮೆ ಮಾಡುವುದು, ರಾಜಪಾಲನ್ನು ಕೊಟ್ಟು ಕುಳಪಾಲನ್ನು ಅನುಭವಿಸುವುದು ಎಷ್ಟೋ ಅಷ್ಟೆ (ಅದೇ, ಪು. 23). ಭರತ ಖಂಡದಲ್ಲಿ ಪೂರ್ವದಲ್ಲಿ ಇದ್ದ ಜಮೀನುದಾರ

ತಾಲೂಕುದಾರ, ಜಹಗೀರ್, ಮಿಟ್ಟಾದಾರ್ ಸಂಸ್ಥೆಗಳು ಫ್ಯೂಡಲ್ ಸಂಸ್ಥೆಯನ್ನು ಹೋಲುವುದು. ಇವುಗಳೇ ಪಾಳೆಯಗಾರರ ಸಂಸ್ಥೆಗೆ ಹೋಲುವುದು. ಎಂ.ಎಸ್. ಪುಟ್ಟಣ್ಣ ಯುರೋಪಿನ ಫ್ಯೂಡಲ್ ಸಂಸ್ಥೆ ಮತ್ತು ಭರತ ಖಂಡದ ಜಮೀನುದಾರರ ಸಂಸ್ಥೆಯನ್ನು ತೌಲನಿಕವಾಗಿ ಹೀಗೆ ನೋಡುತ್ತಾರೆ (ಅದೇ, ಪು. 28–29)

ಯುರೋಪಿನ ಫ್ಯೂಡಲ್ ಸಂಸ್ಥೆ

1 ದೊರೆಯಿಂದ ರಾಜಬಂಧುಗಳಿಗೂ ಇತರ ಮುಖಂಡರಿಗೂ ಗ್ರಾಮ ಭೂಮಾನ್ಯವಾಗಿ ದೊರೆಯಿತು.

2 ಜಮೀನುದಾರರು ಯುದ್ಧ ಪ್ರಸಕ್ತಿ ಬಂದಾಗ ದೊರೆಗೆ ಸೇನೆಯನ್ನು ಕಳುಹಿಸಿ ತಾವೂ ಕದನಕ್ಕೆ ಹೋಗುತ್ತಿದ್ದರು.

3 ಜಮೀನುದಾರರು ದೊರೆಗೆ ಆಗಾಗ್ಗೆ ನಿಗದಿಯಾದ ಮೊಬಲಗನ್ನು ಕೊಡುತ್ತಿದ್ದರು.

4 ಜಮೀನುದಾರರು ವ್ಯಾಸಲ್ ಅಥವಾ ಉಪ ಜಮೀನುದಾರರಿಗೆ ಭೂಮಿಯನ್ನು ಕೊಟ್ಟು ಕೆಲವರಿಂದ ಗೊತ್ತಾದ ಹಣವನ್ನು ವಸೂಲ್ಮಾಡುತ್ತಿದ್ದರು. ಈ ಒಳ ಜಮೀನುದಾರರು ಧಣಿಯ ವಿಷಯದಲ್ಲಿ ಭಕ್ತಿಯಿಂದಲೂ, ನಂಬಿಕೆಯಿಂದಲೂ ನಡೆದುಕೊಳ್ಳಬೇಕಾಗಿತ್ತು.

5 ಸಾಗುವಳಿ ಮಾಡುವ ಖಾಯಂ ಕುಳಗಳೂ ಗುಲಾಮರೂ ಸಹ ಇದ್ದರು. ಗುಲಾಮರಿಗೆ ಯಾವಾಗಲೂ ಅಧೀನ ವೃತ್ತಿಯೇ, ವಿಮೋಚನೆಯೇ ಇಲ್ಲ.

6 ಕಾಲಾನುಕಾಲದಲ್ಲಿ ಜಮೀನುದಾರರು ದೊರೆಯನ್ನು ಎದುರಿಸಿ ಸ್ವತಂತ್ರವಾಗಿ ರಾಜ್ಯಸ್ಥಾಪನೆ ಮಾಡಿಕೊಳ್ಳುತ್ತಿದ್ದರು.

7 ಪೂರ್ವದಿಂದ ಹಕ್ಕುಳ್ಳ ಜಮೀನುದಾರರಾದಾಗ್ಯೂ, ಕೆಲವರು ತಾವಾಗಿ ದೊರೆಯ ಪೋಷ್ಯವರ್ಗಕ್ಕೆ ಸೇರಿಕೊಂಡು ಅವನಿಗೆ ಅಧೀನರಾಗುತ್ತಿದ್ದರು.

ಭರತ ಖಂಡದ ಜಮೀನುದಾರರ ಸಂಸ್ಥೆ

1 ದೊರೆಯಿಂದ ರಾಜಬಂಧುಗಳಿಗೂ, ಇತರ ಮುಖಂಡರಿಗೂ ಗ್ರಾಮ ಭೂಮಿ ಮಾನ್ಯವಾಗಿ ದೊರೆಯಿತು. ಕೆಲವು ಜಮೀನುದಾರರು ಮುಂತಾದವರು ಅನಾದಿಯಾಗಿ ಬಂದರು, ಕೆಲವರು ಸ್ವಂತವಾಗಿ ಹಣ ಸಂಪಾದನೆ ಮಾಡಿಕೊಂಡು ಸೀಮೆಯನ್ನು ಕಟ್ಟಿದರು.

2 ಯುದ್ಧಕಾಲದಲ್ಲಿ ದೊರೆಯ ಪಕ್ಷವಾಗಿ ಸೇನೆಯನ್ನು ತೆಗೆದುಕೊಂಡು ಹೋಗಿ ಸಹಾಯ ಮಾಡುತ್ತಿದ್ದರು.

3 ಪ್ರತಿ ವರ್ಷವೂ ನಿಗದಿಯಾದ ಹಣವನ್ನು ಖಾಯಂಗುತ್ತಿಗೆಯಾಗಿ ದೊರೆಗೆ ಕೊಡುತ್ತಿದ್ದರು.

4 ಒಳ ಜಮೀನುದಾರರು ಅಥವಾ ವ್ಯಾಸಲ್‌ಗಳು ಎಂಬ ಜನ ಯಾರೂ ಇರಲಿಲ್ಲ.

5 ಖದೀಂ ಹಿಡುವಳಿದಾರರು, ಅರೆಗೋರು ಹಿಡುವಳಿದಾರರು ಎಂದು ಖಾಯಂ ರೈತರು ಉಂಟು. ವಾರಕ್ಕೆ ಅಥವಾ ಗುತ್ತಿಗೆಗೆ ಸಾಗುವಳಿ ಮಾಡುವ ರೈತರೂ ಉಂಟು. ಜೀತಗಾರರೆಂಬ ಚಾಕರರೂ ಉಂಟು. ಸ್ವಾಮಿಯಿಂದ ಹಣ ಸಾಲ ತೆಗೆದುಕೊಂಡು ಅದು ತೀರುವವರೆಗೆ ಸ್ವಾಮಿಯ ಮನೆಯಲ್ಲಿ ದುಡಿಯುತ್ತಾ, ಅವನಿಂದ ಅನ್ನ ಬಟ್ಟೆ ತೆಗೆದುಕೊಂಡು ಜೀತಗಾರರು ಜೀವಿಸುತ್ತಾ, ದಿನಕ್ರಮೇಣ ಸಾಲವನ್ನು ತೀರಿಸಿಕೊಂಡು ಸ್ವಾತಂತ್ರ್ಯವನ್ನು ಹೊಂದಬಹುದು ಎಂದು ನೆಪಮಾತ್ರಕ್ಕೆ ಸಾಹುಕಾರರು ಹೇಳುತ್ತಿದ್ದರು. ಕಾರ್ಯತಃ ಆ ಬಡವರಿಗೆ ವಿಮೋಚನೆಯೇ ಇಲ್ಲ. ಜೀತಗಾರರು ಸ್ವಾಮಿಯ ಮನೆಯಲ್ಲಿ ಎಷ್ಟು ಗೇಯ್ದರೂ, ಸಾಲಗಾರನ ಮನೆಗೆ ಸೌದೆ ಹೊತ್ತರೆ ಮೇಲಿನ ಬಡ್ಡಿಗೆ ಉತ್ತಾರವೆನ್ನುವ ಗುಲಾಮಗಿರಿಯು ಮೈಸೂರು ರಾಜ್ಯದ ಪಶ್ಚಿಮ ಪ್ರಾಂತ್ಯದಲ್ಲಿ ಇನ್ನೂ ನಿರ್ಮೂಲವಾಗಿಲ್ಲವೆಂದು ತಿಳಿಯಬರುತ್ತಿದೆ.

ಕಾಲಾನುಕಾಲದಲ್ಲಿ ದೊರೆಯ ಅಧಿಕಾರ ದುರ್ಬಲವಾದಾಗ ಈ ಭಾರಿ ಜಮೀನುದಾರರು ಸ್ವತಂತ್ರರಾಗಿ ಆಳುತ್ತಿದ್ದರು. ಇವರೇ ಪಾಳೆಯಗಾರರೆಂದೂ ಅಧೀನರಾಜರು ಎಂದೂ ಹೆಸರನ್ನು ಪಡೆದರು.

ಸ್ವತಂತ್ರವಾಗಿ ರಾಜ್ಯವನ್ನು ಸಂಪಾದಿಸಿಕೊಂಡವರಾದಾಗ್ಯೂ, ಕೆಲವು ಪಾಳೆಯಗಾರರು ದೊರೆಯಿಂದ ಜೈಸಲ್ಪಟ್ಟೋ ಅಥವಾ ತಾವಾಗಿಯೇ ದೊರೆಯ ಸಾಮಂತನರಪತಿ ವರ್ಗಕ್ಕೆ ಸೇರಿಕೊಂಡು ಅವನಿಗೆ ಕಪ್ಪವನ್ನು ಕೊಡುತ್ತಿದ್ದರು.

ಭಾಗ – 2

ಹರಿದ ಗೋಣಿಯಲೊಬ್ಬ ಕಳವೆಯತುಂಬಿದ
ಇರುಳೆಲ್ಲಾ ನಡೆದನಾ ಸುಂಕಕಂಜಿ
ಕಳವೆಯೆಲ್ಲಾ ಹೋಗಿ ಬರಿಗೋಣಿ ಉಳಿಯಿತ್ತು ।
ಅಳಿಮನದವನ ಭಕ್ತಿ ಇಂತಾಯಿತ್ತು ! ರಾಮನಾಥ
(ಜೇಡರ ದಾಸಿಮಯ್ಯ)

ಭೂಮಿಯ ಸಾಮುದಾಯಿಕ ಒಡೆತನವಿದ್ದ ಕುಲಪತಿ ಆಡಳಿತ ಸಮಾಜದ ಚೌಕಟ್ಟುಗಳನ್ನು ಬ್ರಿಟಿಷರು ಮುರಿದು ಹಾಕಿದರು. ಎರಡು ಭೂ ಕಂದಾಯ ಹಾಗೂ ಭೂ ಹಿಡುವಳಿ ಪದ್ಧತಿಗಳನ್ನು ಜಾರಿಗೆ ತಂದರು. ಇವು ಈ ದೇಶದ ಪುರೋಭಿವೃದ್ಧಿಯನ್ನು ಮಂದಗೊಳಿಸಿದವು. ಭಾರತೀಯ ರೈತರ ಮೇಲೆ ಸಹಿಸಲಾಗದಷ್ಟು ತೆರಿಗೆಯ ಹೊರೆ ಹೊರಿಸಿದರು.

ಜಮೀನುಗಳ ಮೇಲಿನ ಕಂದಾಯವನ್ನು ಹಣದ ರೂಪದಲ್ಲಿಯೇ ಸಲ್ಲಿಸಬೇಕಾದ ಕಡ್ಡಾಯದಿಂದಾಗಿ ಲೇವಾದೇವಿಗಾರರು ಗ್ರಾಮ ಜೀವನದಲ್ಲಿ ಪ್ರಮುಖ ಪಾತ್ರ ವಹಿಸಿದರು. ಮೊಗಲ ಅರಸರು ಭೂ ಕಂದಾಯ ಮತ್ತು ನಾಗರಿಕ ನ್ಯಾಯ ತೀರ್ಮಾನವನ್ನು ದಿವಾನಿ ಎಂಬ ಹೆಸರಿನಲ್ಲಿ ಕರೆಯುತ್ತಿದ್ದರು. ಬ್ರಿಟೀಶರು ಇದನ್ನು ಮುಂದುವರಿಸಿದರು. ಕ್ಲೈವ್ ಇದನ್ನು ದ್ವಿಸರಕಾರ ಪದ್ಧತಿಯೆಂದು ಕರೆಯುತ್ತಾನೆ.

ಹಿಂದೂ ಮುಸ್ಲಿಂ ಪದ್ಧತಿಯನ್ನು ವಾರನ್ ಹೇಸ್ಟಿಂಗ್ಸ್ ಪ್ರೋತ್ಸಾಹಿಸುತ್ತಾನೆ. ಭಾರತೀಯ ಪಾಂಡಿತ್ಯವನ್ನು ಅವನು ಒಂದರ್ಥದಲ್ಲಿ ತುಂಬಾ ಮೆಚ್ಚುತ್ತಾನೆ ಕೂಡಾ. ಆದರೆ ಅದರ ಅನಂತರ ಖಾಸಗಿ ಆಸ್ತಿಯು ಒಂದು ಖಾಯಂ ಆದ ನೆಲೆಗಟ್ಟು, ಹಾಗೂ ವ್ಯಕ್ತಿಯ ಹಕ್ಕು. ಆದುದರಿಂದ ಅದಕ್ಕೆ ನಿರ್ದಿಷ್ಟವಾದ ಕಾನೂನುಗಳ ಅಗತ್ಯವಿದೆಯೆಂದು ಕಾರ್ನವಾಲೀಸ್ ಪ್ರತಿಪಾದಿಸುತ್ತಾನೆ. ಇದಕ್ಕೆ ಬೇಕಾದ ರೂಪುರೇಷೆಗಳನ್ನು ಪಶ್ಚಿಮದ ಅದರಲ್ಲಿಯೂ ಇಂಗ್ಲೆಂಡಿನ (1812) ಮಾದರಿಯಲ್ಲಿ ರೂಪುಗೊಳ್ಳುಬೇಕೆಂಬುದು ಅವನ ನಿಲುವು. ಗ್ರೇಟ್ ಬ್ರಿಟನ್ನಿನ ಕೃಷಿ ಕ್ಷೇತ್ರದಲ್ಲಿ ಹದಿನೆಂಟನೆಯ ಶತಮಾನದಲ್ಲಿ ಉಂಟಾದ ಕೆಲವು ಪ್ರಮುಖ ಪರಿವರ್ತನೆಗಳನ್ನು ಇಲ್ಲಿ ಗುರುತಿಸಿ ಹೇಳಬಹುದು.

1 ಜನಸಂಖ್ಯೆ ವೃದ್ಧಿಯಾಯಿತು. ಅದಕ್ಕೆ ಅನುಗುಣವಾದ ಕೃಷಿ ಉತ್ಪಾದನೆ ಅಗತ್ಯವಾಯಿತು.

2 ಅದಕ್ಕಿಂತ ಮೊದಲು ಜಮೀನನ್ನು ಬೀಳು ಬಿಡುತ್ತಿದ್ದರು. ಬೇಲಿ ಹಾಕುತ್ತಿರಲಿಲ್ಲ. ಆದರೆ ಅನಂತರ ಹಿಡುವಳಿಯನ್ನು ವಿಸ್ತರಿಸಬೇಕಾಯಿತು.

3 ಅದೇ ಸಮಯದಲ್ಲಿ ಪಾರ್ಲಿಮೆಂಟಿನಲ್ಲಿ ಜಮೀನುದಾರರು ಇದ್ದುದರಿಂದ ಭೂ ಕೇಂದ್ರೀಕರಣದ ಕಾಯಿದೆಯನ್ನು ಜಾರಿಗೆ ತರಲಾಯಿತು.

4 ಹಿಡುವಳಿದಾರರು ಗೇಣಿದಾರರಿಂದ ಜಮೀನನ್ನು ವಿಸ್ತರಿಸಿಕೊಳ್ಳಲು ಪ್ರಾರಂಭಿಸಿದ್ದರು.

5 ಹಿಡುವಳಿಗಳನ್ನು ಹಂಚಲು ಕಮೀಷನರುಗಳನ್ನು ನೇಮಿಸಲಾಯಿತು. ಇದರಿಂದ ಸಣ್ಣ ಸಣ್ಣ ರೈತರು ತಮ್ಮ ಭೂ ಮಾಲಿಕತ್ವ ಹಕ್ಕು ಕಳೆದುಕೊಂಡರು.

6 1760–1820ರ ನಡುವೆ ದೊಡ್ಡ ದೊಡ್ಡ ಜಮೀನಿನ ಕೃಷಿ ನಡೆಯಿತು.

7 ಸುಧಾರಿತ ಬೇಸಾಯ ಕ್ರಮ ಪ್ರಾರಂಭವಾಯಿತು.

8 ಕೃಷಿ ರಂಗದಲ್ಲಿ ಯಂತ್ರಗಳ ಬಳಕೆ ಶುರುವಾಯಿತು (ಸಿ.ಕೆ. ರೇಣುಕಾರಾಧ್ಯ, 1971, ಪು. 30).

ಭಾರತದಲ್ಲಿ ಹಿಂದಿನಿಂದಲೂ ಭೂ ಕಂದಾಯ ಪದ್ಧತಿಯು ಇತ್ತು ಎನ್ನುವುದು ನಿರ್ವಿವಾದ. ಹಾಗೂ ಬೇರೆ ಬೇರೆ ರಾಜರು ತಮ್ಮ ಅರಸೊತ್ತಿಗೆಯ ಕಾಲದಲ್ಲಿ ತಮಗೆ ಬೇಕಾದಂತೆ ಭೂ ಕಂದಾಯ ಪದ್ಧತಿಯಲ್ಲಿ ಸುಧಾರಣೆ ಮತ್ತು ಬದಲಾವಣೆ ಮತ್ತು ಪರಿವರ್ತನೆಗಳನ್ನು ತಂದಿದ್ದರು. ಆದರೆ ರೈತನಿಗೆ ಕಾನೂನು ಬದ್ಧವಾದ ಹಕ್ಕುಗಳು ಇರಲಿಲ್ಲ. ಹೆಚ್ಚಿನ ಸಂದರ್ಭದಲ್ಲಿ ಭೂ ಕಂದಾಯವನ್ನು ಗ್ರಾಮಾಧಿಕಾರಿಗಳು ಅಂದರೆ ಪಟೇಲರು ಸರಕಾರಕ್ಕೆ ಸಲ್ಲಿಸುತ್ತಿದ್ದರು. ಕಂದಾಯ ನಿಗದಿಯನ್ನು ಪಟೇಲರು ಅಥವಾ ಕಂದಾಯ ಅಧಿಕಾರಿಗಳು ಮಾಡುತ್ತಿದ್ದರು. ಭಾರತದಲ್ಲಿ ಬ್ರಿಟೀಶರ ಭೂ ಕಂದಾಯ ನೀತಿಯ ಬೆಳವಣಿಗೆಯನ್ನು 1865ರಲ್ಲಿ ರಾಬರ್ಟ್ ಕ್ಲೈವನು ಮೊಗಲ್ ಚಕ್ರವರ್ತಿ ಷಾ ಆಲಂನಿಂದ ದಿವಾನಿ ಹಕ್ಕನ್ನು ಬಂಗಾಳದ ಮೇಲೆ ದೊರಕಿಸಿಕೊಂಡ. ದಿವಾನಿ ಹಕ್ಕಿನಿಂದಾಗಿ ಕಂಪೆನಿಗೆ ಬಂಗಾಳದಲ್ಲಿ ಕಂದಾಯವನ್ನು ವಸೂಲು ಮಾಡುವ ಅವಕಾಶ ದೊರಕಿತ್ತು. ಅದಕ್ಕಾಗಿ ಬ್ರಿಟಿಷರು ಭಾರತೀಯರನ್ನು 'ಉಪದಿವಾನರನ್ನಾಗಿ' ಮಾಡಿದರು. ಇವರು ರೈತರಿಗೆ ಕಿರುಕುಳ ಕೊಡುತ್ತಿದ್ದಾರೆ ಎಂದು ಕೇಳಿತು. ಕಂಪೆನಿಯು. ಮುಖ್ಯವಾಗಿ ವಾರನ್ ಹೇಸ್ಟಿಂಗ್ಸ್‌ನ ಕಾಲದಲ್ಲಿ ಸುಧಾರಣೆಯನ್ನು ತಂದಿತು. ಆಗ ನೇಮಕವಾಗಿರುವುದು 'ಕಲೆಕ್ಟರ್' ಹುದ್ದೆ. ಕಲೆಕ್ಟರನಿಗೆ ಸಹಾಯ ಮಾಡಲು 'ಬೋರ್ಡ್ ಆಫ್ ರೆವಿನ್ಯೂ' ವಿಭಾಗವನ್ನು ಏರ್ಪಡಿಸಲಾಯಿತು. ವಾರನ್ ಹೇಸ್ಟಿಂಗ್ಸ್ ಭೂ ಕಂದಾಯವನ್ನು ಐದು ವರ್ಷಗಳಿಗೊಮ್ಮೆ ಹರಿಜನ ಮೂಲಕ ನಿಗದಿ ಪಡಿಸುವ ವ್ಯವಸ್ಥೆಯನ್ನು ಜಾರಿಗೆ ತಂದನು. ಆದರೆ ಇದು ಪ್ರತಿಕೂಲ ಪರಿಣಾಮ ಬೀರಿತು. ಇದರ ಆನಂತರ ಅವನು 1777ರಲ್ಲಿ ಅವನೇ ಒಂದು ವರ್ಷಕ್ಕೊಮ್ಮೆ ಹರಾಜು ಹಾಕುವ ವ್ಯವಸ್ಥೆಯನ್ನು ಮಾಡಿದನು.

ವಾಸ್ತವವಾಗಿ ಭಾರತದಲ್ಲಿ ಬ್ರಿಟಿಷರ ಭೂ ಕಂದಾಯ ನೀತಿಯ ಬೆಳವಣಿಗೆಯನ್ನು 1865ರ ಕಾಲಕ್ಕೆ ಕಾಣಬಹುದು.

ಕಾರ್ನವಾಲೀಸ್ ಬ್ರಿಟೀಶ್ ಮಾದರಿಯ ಆಳ್ವಿಕೆಯನ್ನು ಜಾರಿಗೆ ತರಲು ಪ್ರಯತ್ನಿಸುವಾಗ ಕೆಲವು ನೂತನ ಹುದ್ದೆಗಳನ್ನು ಸೃಷ್ಟಿಸಿದ. ಅದರಲ್ಲಿ ಜಿಲ್ಲಾ

ನ್ಯಾಯಾಧೀಶರ ಹುದ್ದೆಯೂ ಒಂದು (ಮ್ಯಾಜಿಸ್ಟ್ರೇಟ್). ಇದರಿಂದ ವಸ್ತುನಿಷ್ಠ ಕಾನೂನು ಜಾರಿಗೆ ತರಲು ಸಾಧ್ಯವೆಂದು ಕಾರ್ನ್‌ವಾಲೀಸ್ ಭಾವಿಸಿದ್ದ. ನೂತನ ನಿಯಮಾವಳಿಗಳು ಜಾರಿಗೆ ಬರುವುದರೊಂದಿಗೆ ಪೊಲೀಸರು. ಈ ನಿಯಮಗಳನ್ನು ಜಾರಿಗೆ ತರುವಲ್ಲಿ ಮಧ್ಯವರ್ತಿಗಳಾದರು. 1819–1830ರ ಕಾಲಘಟ್ಟದಲ್ಲಿ ಈ ಪದ್ಧತಿಯು ಮದರಾಸು ಪ್ರಾಂತ್ಯದಲ್ಲಿ ಜಾರಿಗೆ ಬಂದಿತ್ತು. ಇದನ್ನು ಹೇಳಲು ಪ್ರಮುಖ ಕಾರಣವಿದೆ : ಬ್ರಿಟೀಶ್ ಆಳ್ವಿಕೆಯಲ್ಲಿ ಎರಡು ಪ್ರಮುಖ ಕೇಂದ್ರಗಳಿವೆ – ಒಂದು ಬಂಗಾಳ ಪ್ರಾಂತ್ಯ, ಮತ್ತೊಂದು ಮದರಾಸು ಪ್ರಾಂತ್ಯ. ಭಾರತದಲ್ಲಿ ವಸಾಹತು ಶಾಹಿ ಅನುಭವಕ್ಕಿಂತ ಪೂರ್ವದಲ್ಲಿ ಹಿಂದೂ ಆಚರಣೆ ಮತ್ತು ಮುಸ್ಲಿಂ ಆಚರಣೆಗಳು ಒಂದೊಂದು ರೀತಿಯಲ್ಲಿದ್ದವು. ಭಾರತಕ್ಕೆ ಬಂದ ಕ್ರಿಶ್ಚಿಯನ್ ಆಚರಣೆಗಳು ಬೇರೆಯಾಗಿದ್ದವು ಮತ್ತು ಅದು ಸ್ಥಳೀಯರಿಗೆ ಪರಕೀಯ ಎಂಬಂತೆ ಕಾಣಿಸಿತು. ಭಾರತದಲ್ಲಿ ಮಿಶನರಿಗಳ ಪ್ರಭಾವದಿಂದ ಮತಾಂತರಗೊಂಡವರು – ಹಿಂದೂ, ಮುಸ್ಲಿಂ, ಕ್ರಿಶ್ಚಿಯನ್ – ಮೂರು ಆಚರಣೆಗಳಿಂದ. ಧಾರ್ಮಿಕತೆಗಳಿಂದ ಬೇರೆಯಾಗಬೇಕಾಯಿತು. ಕಾರಂತರ ಕುಡಿಯರ ಕೂಸು, ಚೋಮನದುಡಿ ಕಾದಂಬರಿಗಳನ್ನು ಈ ದೃಷ್ಟಿಯಿಂದ ಗಮನಿಸಬಹುದು. ಕ್ರಿಶ್ಚಿಯನ್ ಆಚರಣೆಗಳು ನೇರವಾಗಿ ದೇವರ ಪ್ರಾರ್ಥನೆಯನ್ನು ಒಳಗೊಂಡಿದೆ. ದೇವರು ಮತ್ತು ಮನುಷ್ಯನ ಸಂಬಂಧವು ನೇರವಾಗಿದೆ. ಇದರಿಂದ ದೇವರು ಮತ್ತು ವ್ಯಕ್ತಿಯ ಸಂಬಂಧ ವೈಯಕ್ತಿಕ ಮಟ್ಟದಲ್ಲಿದೆ. ಎರಡನೆಯದಾಗಿ, ಈ ರೀತಿಯ ಧಾರ್ಮಿಕ ರೀತಿಗೂ, ವಿದ್ಯಾಭ್ಯಾಸಕ್ಕೂ ಒಂದು ಬಗೆಯ ಸಂಬಂಧ ಕಲ್ಪಿತವಾಗಿತ್ತು. ಗಾಂಧಿಯ ಒಂದು ಪ್ರತಿಕ್ರಿಯೆಯು ಗಮನಾರ್ಹ.

> **ಭಾರತವನ್ನು ಪಾರತಂತ್ರ್ಯದಿಂದ ಬಿಡುಗಡೆ ಮಾಡಲು–ಹಂತ ಹಂತವಾಗಲ್ಲದೆ ಒಂದೇ ಬಾರಿಗೆ–ಘೋಷಣೆಯನ್ನು ಮಾಡಿದ ಕೂಡಲೇ ತಾತ್ಕಾಲಿಕ ಪರಿಹಾರವನ್ನು ಕಂಡುಹಿಡಿಯುವುದು ಸುಲಭ. ಅಲ್ಪಸಂಖ್ಯಾತರ ಹಕ್ಕುಗಳ ರಕ್ಷಣೆಯನ್ನು ಬಹಳ ಸರಳವಾಗಿ ಮಾಡಿ ಬಿಡಬಹುದು. ಈ ಡೋಲಾಯಮಾನದ ಆಟ ನಿಲ್ಲುವುದು. ಹಂತಗಳಲ್ಲದೆ, ಒಂದೇ ಬಾರಿಗೆ ಪೂರ್ತಿಯಾಗಿ ಅಲ್ಪಸಂಖ್ಯಾತರು ರಕ್ಷಣೆಗೆ ಹಕ್ಕುಳ್ಳವರು. ಯಾವ ಸ್ವಾತಂತ್ರ್ಯದ ಶಾಸನವು ಬಹುಸಂಖ್ಯಾತರಿಗೆ ಎಷ್ಟು ಸ್ವಾತಂತ್ರ್ಯವಿರುವುದೊ ಅಷ್ಟೇ ಸ್ವಾತಂತ್ರ್ಯವನ್ನು ಅಲ್ಪಸಂಖ್ಯಾತರಿಗೂ ನಿಶ್ಚಿತರೂಪದಲ್ಲಿ ಒದಗಿಸುವುದಿಲ್ಲವೊ ಅಂತಹ ಸ್ವಾತಂತ್ರ್ಯ ಶಾಸನಕ್ಕೆ ಬೆಲೆಯೇ ಇಲ್ಲ. ಸಂವಿಧಾನದ ರಚನೆಯಲ್ಲಿ ಅವರೂ ಪೂರ್ಣ ಅಧಿಕಾರವುಳ್ಳ**

ಭಾಗಿಗಳಾಗುತ್ತಾರೆ. ಇದನ್ನು ಹೇಗೆ ಸಾಧಿಸಬೇಕೆನ್ನುವುದು. ಈ ಸಂವಿಧಾನವನ್ನು ರಚಿಸುವ ಪವಿತ್ರ ಕರ್ತವ್ಯವನ್ನು ಯಾವ ಪ್ರತಿನಿಧಿಗಳಿಗೆ ಒಪ್ಪಿಸಲಾಗುತ್ತದೆಯೋ ಅವರ ವಿವೇಕದ ಮೇಲೆ ಅವಲಂಬಿಸಿದೆ. ಈವರೆಗೂ ಎಲ್ಲ ಅಧಿಕಾರವನ್ನೂ ಬ್ರಿಟನ್ ತನ್ನ ಕೈಯಲ್ಲಿಟ್ಟುಕೊಂಡಿತ್ತು. ಸಾಮ್ರಾಜ್ಯ ಶಾಹೀ ಪದ್ಧತಿಯಲ್ಲಿ ಇದು ಅನಿವಾರ್ಯ. ಇದಕ್ಕಾಗಿ ಅಲ್ಪಸಂಖ್ಯಾತರನ್ನು ಬಹುಸಂಖ್ಯಾತರ ಮೇಲೆ ಅದು ಎತ್ತಿ ಕಟ್ಟಿತು. ಹೀಗಾಗಿ ಜನಾಂಗಕ್ಕೆ ವಿವಿಧ ಭಾಗದವರೆಲ್ಲರೂ ಒಪ್ಪುವಂತಹ ಏರ್ಪಾಡು ಅಸಾಧ್ಯವೇ ಅಗುತ್ತಿತ್ತು. ಅಲ್ಪಸಂಖ್ಯಾತರ ರಕ್ಷಣೆಗೆ ಸರಿಯಾದ ಸೂತ್ರವನ್ನು ಕಂಡುಹಿಡಿಯುವ ಹೊಣೆಯನ್ನು ಅವರ ಮೇಲೆಯೇ ಹೊರಿಸಬೇಕು. ಎಂದಿನವರಿಗೂ ಈ ಹೊರೆಯನ್ನು ತಾನೇ ಹೊರುವುದು ತನ್ನ ಪವಿತ್ರ ಕರ್ತವ್ಯವೆಂದು ಬ್ರಿಟನ್ ಭಾವಿಸುವುದೊ, ಅಂದಿನವರೆಗೂ ಭಾರತವನ್ನು ತನ್ನ ಅಧೀನದಲ್ಲಿಟ್ಟುಕೊಳ್ಳುವುದು ಆವಶ್ಯವೆಂದು ಅದು ಭಾವಿಸುವುದು. ದೇಶದ ವಿಮೋಚನೆ ತಡವಾಗುವುದುನ್ನು ಸಹಿಸಲಾರದ ದೇಶಭಕ್ತರು ಹೋರಾಟಕ್ಕಿಳಿಯುವರು; ಅದಿಲ್ಲದೆ ನಾನು ಈ ಪ್ರಯತ್ನದಲ್ಲಿ ಮಡಿದೆನಾದರೆ –ಹಿಂಸಾಮಾರ್ಗವನ್ನು ಅವರು ಕೈಗೊಳ್ಳುವರು. ಈ ಯುದ್ಧ ಭಗವಂತನ ಶಾಪ. ಇದನ್ನು ವರವನ್ನಾಗಿ ಬ್ರಿಟನ್ ರೂಪುಗೊಳಿಸುವುದೆಂದು ನಾನು ವಿಶ್ವಾಸವನ್ನು ಹೊಂದಿದ್ದೆ. ಈಗಲೂ ಹೊಂದಿದ್ದೇನೆ. ಈ ಯುದ್ಧದಲ್ಲಿ ಪ್ರವೇಶ ಮಾಡಿದ್ದಕ್ಕೆ ಸಮರ್ಥನೆಯಾಗಿ ಮತ್ತು ಯುದ್ಧವನ್ನು ಬೇಗ ಕೊನೆಗಾಣಿಸಲು ತಾನು ಮಾಡಬೇಕಾದ ಅವಶ್ಯ ಕರ್ತವ್ಯವೆಂದರೆ ಪಾರತಂತ್ರ್ಯದಿಂದ ಭಾರತದಂತಹ ದೊಡ್ಡ ಮತ್ತು ಪುರಾತನ ದೇಶವನ್ನು ವಿಮುಕ್ತವನ್ನಾಗಿ ಮಾಡುವುದೆಂದು ಬ್ರಿಟನ್ ಮನಗಂಡರೆ ಈ ಶಾಪವರವಾಗಿಯೇ ಪರಿಣಮಿಸುವುದು.

ವೈಸರಾಯರು ಪ್ರಾಮಾಣಿಕರೆಂದು ನಾನು ನಂಬುವುದರಿಂದ ನನ್ನ ಸಹೋದ್ಯೋಗಿಗಳು ತಮ್ಮ ತಾಳ್ಮೆಯನ್ನು ಕಳೆದುಕೊಳ್ಳಬಾರದೆಂದು ನಾನು ಅವರನ್ನು ಆ ಗ್ರಹ ತಾಳ್ಮೆಯನ್ನು ಕಳೆದುಕೊಳ್ಳಬಾರದೆಂದು ನಾನು ಅವರನ್ನು ಆ ಗ್ರಹ ಪೂರ್ವಕ ಕೇಳಿಕೊಳ್ಳುತ್ತೇನೆ. ಶಾಂತಿಯುತ ಪ್ರತಿಭಟನೆ, ಸಾಧ್ಯವಿಲ್ಲ. ಏಕೆಂದರೆ ಪ್ರಥಮತಃ ವೈಸರಾಯರು ಒಪ್ಪಂದದ ಮಾರ್ಗವನ್ನು ಹುಡುಕುತ್ತಿದ್ದಾರೆ. ಎರಡನೆಯದಾಗಿ ಮುಸ್ಲಿಂಲೀಗ್ ದಾರಿಗೆ ಅಡ್ಡವಾಗಿ ನಿಂತಿದೆ. ಮೂರನೆಯದಾಗಿ ಕಾಂಗ್ರೆಸ್ಸಿನ ಕಾರ್ಯಕರ್ತರಲ್ಲಿ ಆಶಿಸ್ತಿದೆ; ಒಗ್ಗಟ್ಟಿಲ್ಲ. (ಭಾಷಣಗಳು ಹೇಳಿಕೆಗಳು ಮೋ.ಕ.ಗಾ 1962 ಪುಟ. 130–131)

ಇದೇ ಸಂದರ್ಭದಲ್ಲಿ ಅಧಿಕಾರವು ಜವಾಬ್ದಾರಿ ಮತ್ತು ಕರ್ತವ್ಯವೆರಡನ್ನು ಹೊರಬೇಕೆಂದು ಪ್ರಭುತ್ವವು ಭಾರತೀಯ ಜನರಿಗೆ ಪ್ರತಿಪಾದಿಸಿತು. ಗಮನಿಸಬೇಕಾದ ಅಂಶವೆಂದರೆ ಭಾರತದ ಆಚರಣೆಗಳಿಗೆ ; ಹಬ್ಬಗಳಿಗೆ ಅದರದ್ದೇ ಅನ್ನಬಹುದಾದ ನೀತಿ ಸಂಹಿತೆಗಳಿವೆ, ವಿಶಿಷ್ಟತೆಗಳಿವೆ, ಐತಿಹ್ಯ, ಪುರಾಣಗಳಿವೆ. ಉದಾ : ಶ್ರೀ ಕೃಷ್ಣ ಜನ್ಮಾಷ್ಟಮಿ.

> ಶ್ರೀಕೃಷ್ಣನ ಜೀವನ ನಮಗೆ ಯಾವ ಅರ್ಥ ಹೊಂದಿದೆ ಎಂಬುದು ಗೊತ್ತಿಲ್ಲ. ನಾವು ಗೀತೆಯನ್ನು ಓದುವುದಿಲ್ಲ. ನಮ್ಮ ಮಕ್ಕಳಿಗೆ ಅದನ್ನು ಹೇಳಿಕೊಡಲು ನಾವು ಯಾವ ಪ್ರಯತ್ನವನ್ನೂ ಮಾಡುವುದಿಲ್ಲ. ಗೀತೆಯು ಎಷ್ಟು ಅತ್ಯುತ್ಕೃಷ್ಟ ಗ್ರಂಥವೆಂದರೆ ಎಲ್ಲಾ ಮತದ, ವಯಸ್ಸಿನ ಮತ್ತು ದೇಶದ ಜನ ಅದನ್ನು ಗೌರವಪೂರ್ವಕವಾಗಿ ಓದಬಹುದು ಮತ್ತು ತಮ್ಮ ತಮ್ಮ ಧರ್ಮಗಳ ತತ್ವಗಳನ್ನು ಅದರಲ್ಲಿ ಕಾಣಬಹುದು. ಪ್ರತಿ ಜನ್ಮಾಷ್ಟಮಿಯ ದಿನವೂ ನಾವು ಕೃಷ್ಣನ ವಿಷಯಚಿಂತಿಸಿ, ಗೀತೆಯನ್ನು ಓದಿ, ಅದರ ಉಪದೇಶಗಳನ್ನು ಅನುಸರಿಸಲು ನಿರ್ಧರಿಸಿದ್ದಲ್ಲಿ ನಾವು ನಮ್ಮ ಇಂದಿನ ದುಃಸ್ಥಿತಿಯಲ್ಲಿ ಇರುತ್ತಿರಲಿಲ್ಲ. ಶ್ರೀಕೃಷ್ಣನು ತನ್ನ ಜೀವಮಾನವೆಲ್ಲ ಜನರ ಸೇವೆ ಮಾಡಿದ್ದ, ಅವನು ಜನಗಳ ನಿಜವಾದ ಸೇವಕನಾಗಿದ್ದ.
>
> (ಹಿಂದೂ ಧರ್ಮವೆಂದರೇನು? ಎನ್. ಬಾಲಸುಬ್ರಹ್ಮಣ್ಯ 1995ಪುಟ. 82)

ಇದು ಬ್ರಿಟೀಶರಿಗೆ ಅರ್ಥವಾಗುವುದು ಸಾಧ್ಯವಿರಲಿಲ್ಲ. ಮತ್ತು ಬ್ರಿಟೀಶ್ ಆಡಳಿತಕ್ಕೆ ಇವು ಯಾವುದೂ ಮುಖ್ಯವಾಗಿರಲಿಲ್ಲ.

ಎರಡನೆಯದಾಗಿ, ಪ್ರತಿಯೊಂದು ಅದರದ್ದೇ ಅನ್ನಬಹುದಾದ ಕಾನೂನುಗಳನ್ನು (ಅಲಿಖಿತ) ಹೊಂದಿವೆ.

ಮೂರನೆಯದಾಗಿ, ಭಾರತೀಯ ಗ್ರಾಮಗಳು ಕೂಡಾ ಸ್ವತಂತ್ರವಾದ ಅಸ್ತಿತ್ವ ಹೊಂದಿದ್ದು, ಅವುಗಳು ತಮ್ಮ ನಿಯಮಾವಳಿಗಳನ್ನು ಹೊಂದಿವೆ. ಗಾಂಧಿಯು ಗ್ರಾಮದ ಕುರಿತು ಹೇಳಿರುವುದಕ್ಕೆ ವಿಶಿಷ್ಟ ಅರ್ಥವಿದೆ.

ನಾಲ್ಕನೆಯದು, ಯಾವುದಾದರೂ ವ್ಯಾಜ್ಯಗಳು ಇದ್ದಲ್ಲಿ ಆಯಾ ವ್ಯಾಜ್ಯಗಳು ಊರಿನಲ್ಲಿ ಪರಿಹಾರವಾಗದೇ ಹೋದರೆ ಅವು ದೇವಸ್ಥಾನಗಳಲ್ಲಿ ಪರಿಹಾರವಾಗುತ್ತಿದ್ದವು. ಮಠಗಳಲ್ಲಿ ಪರಿಹಾರವಾಗುತ್ತಿತ್ತು. ಉದಾ : ಧರ್ಮಸ್ಥಳ, ಸಿರಿಗೆರೆ ಮಠ ಇತ್ಯಾದಿ.

ಇಂಗ್ಲೀಷರು ಪ್ರಾರಂಭಿಸಿದ ಶಿಕ್ಷಣ ನೀತಿಯು ಮೂಲತಃ ವ್ಯಕ್ತಿ ಕೇಂದ್ರಿತವಾದುದು. ಭಾರತದಲ್ಲಿ ಅದನ್ನು ಸ್ಥಾಪಿಸುವುದು ಅವರ ಮುಖ್ಯ ಉದ್ದೇಶವಾಗಿತ್ತು.

ಚಾರ್ಲ್ಸ್ ಗ್ರಾಂಟ್ ಬರಿಯ ಭಾರತದ ಧಾರ್ಮಿಕತೆಯನ್ನು ಮಾತ್ರ ಖಂಡಿಸುವುದಿಲ್ಲ. ಅದರೊಂದಿಗೆ ಅವನು ಭಾರತದಲ್ಲಿ ಚಾಲ್ತಿಯಲ್ಲಿದ್ದ ಕಾನೂನುಗಳು, ಕಲೆಗಳು, ಕೃಷಿ, ಕರಕುಶಲ ಕಲೆಗಳೂ, ಇಲ್ಲಿಯ ಜನರ ನಡವಳಿಕೆಗಳು ಮತ್ತು ಅಭ್ಯಾಸಗಳನ್ನು ತೀವ್ರ ಖಂಡಿಸುತ್ತಾನೆ. ಇದರ ಮೂಲಕ ಅವನು ಭಾರತದ ನೈತಿಕ ಮುಖಕ್ಕಿಂತ – ಭಾರತದ ಒಟ್ಟಾರೆಯಾದ ಭೌತಿಕ ಪರಿಸರವನ್ನು ಬದಲಾಯಿಸಬೇಕೆಂದು ಇಷ್ಟಪಡುತ್ತಾನೆ. ಚಾರ್ಲ್ಸ್‌ಗ್ರಾಂಟ್ ಉದಾರವಾದಿಯಲ್ಲ. ಅವನ ಧೋರಣೆಗಳು ಕಟುವಾದ ದೃಷ್ಟಿಕೋನವನ್ನು ಹೊಂದಿವೆ.

ಗ್ರಾಂಟ್‌ನ ಪ್ರಕಾರ ಭಾರತೀಯ ಧಾರ್ಮಿಕತೆಯೆನ್ನುವುದು ಮೂಲತಃ ಕೆಲಸಕ್ಕೆ ಬಾರದ ಮತ್ತು ನಿರರ್ಥಕವಾದ ಭಾರತದ ಸಕಲ ರೋಗಗಳಿಗೆ ಕಾರಣವಾದ ಧರ್ಮ. ಅವನ ದೃಷ್ಟಿಯಲ್ಲಿ ಕ್ರಿಶ್ಚಿಯಾನಿಟಿಗೆ ಇರುವಷ್ಟು ಉದಾರತೆಯು ಭಾರತದ ಧಾರ್ಮಿಕತೆಗೆ ಇಲ್ಲ. ಇಲ್ಲಿ ಒಂದು ಅಂಶವನ್ನು ಗಮನಿಸಬೇಕು : ಚಾರ್ಲ್ಸ್‌ಗ್ರಾಂಟ್ ಭಾರತದ ಧರ್ಮವನ್ನು ಕಟುವಾಗಿ ಟೀಕಿಸುವಾಗ ಭಾರತೀಯ ಧರ್ಮಕ್ಕೆ ಇರುವ ಒಂದು ಮುಖವನ್ನು ಮಾತ್ರ ಗಮನಿಸುತ್ತಾನೆ.

1829ರ ಹೊತ್ತಿಗೆ ಖಾಸಗಿ ಸಂಬಂಧಿತ ಕಾನೂನು ಜಾರಿಗೆ ಬಂತು. ಇದನ್ನು ಹೆಚ್ಚು 'ಆಧುನಿಕ'ವೆಂದು ಬಣ್ಣಿಸಲಾಯಿತು. ಇಂಗ್ಲಿಷ್ ಕಾನೂನು ಎಂದರೆ ಅದು ತುಂಬಾ ವಿಶಿಷ್ಟ ಮತ್ತು ಪರಿಣಿತವಾದುದು. ಹಾಗೂ ಆಡಳಿತ ಮತ್ತು ನ್ಯಾಯದ ದೃಷ್ಟಿಯಿಂದ ಅದು ಪರಿಣಾಮಕಾರಿಯೆಂದು ಬಣ್ಣಿಸಲಾಯಿತು. 1831ರಲ್ಲಿ ಮತ್ತೆ ಇಂಗ್ಲಿಷ್ ಕಾನೂನನ್ನು ಬದಲಾಯಿಸಿ, ಹೆಚ್ಚು ಪರಿಣಾಮಕಾರಿಯಾಗಿ ಬಳಸುವಂತೆ ಯೋಜಿಸಲಾಯಿತು. ಮಿಲ್‌ನ ಕಾಲದಲ್ಲಿ ಸುಪ್ರೀಂ ಕೋರ್ಟಿಗೆ ತುಂಬಾ ಹೆಚ್ಚಿನ ಅಧಿಕಾರವನ್ನು ಕೊಡಲಾಯಿತು. ಇದು ಗಮನಾರ್ಹ ಅಂಶವಾಗಿದೆ.

1828ರ ತರುವಾಯ ಕಾರ್ನವಾಲೀಸ್ ಯಾವ ಪದ್ಧತಿಯನ್ನು ಜಾರಿಗೆ ತಂದಿದ್ದನೋ ಅದರ ಬದಲಿಗೆ ಮನ್ರೋನ ಪದ್ಧತಿಯು ಜಾರಿಗೆ ಬಂತು. ಮನ್ರೋ ಭೂ ಕಂದಾಯವನ್ನು ಹೆಚ್ಚು ಖಚಿತಗೊಳಿಸಿದ. ಖಾಸಗಿ ಆಸ್ತಿಗೆ ಸಂಬಂಧಿಸಿದಂತೆ ಭೂ ಕಂದಾಯ ವಿಧಿ ವಿಧಾನಗಳನ್ನು ರೂಪಿಸಿದ.

1819–1830ರ ಕಾಲಾವಧಿಯಲ್ಲಿನ ಜೇಮ್ಸ್ ಮಿಲ್ 'ಲಾರಿ ಫಾರ್ಮರ್' ಎಂದೇ ಕರೆಯಿಸಲ್ಪಟ್ಟವನು. ಅವನು ಒಂದು ರೀತಿಯಿಂದ ಗ್ರಾಂಟ್‌ನ ರೀತಿಯಲ್ಲಿಯೇ

ಯೋಚನೆಯನ್ನು ಮಾಡುತ್ತಿದ್ದ. ಭಾರತೀಯ ಜನರಿಗೆ ನೈತಿಕ ಪಾಠದ ಅಗತ್ಯವಿದೆಯೆಂದು ಅವನ ಪ್ರತಿಪಾದನೆಯಾಗಿತ್ತು. ಅವನ ಪ್ರಕಾರ ಇಂಡಿಯಾದಲ್ಲಿ ವೈಯಕ್ತಿಕ ಹಕ್ಕು ಎಂಬುದೇ ಇಲ್ಲ. ಗಾಂಧಿಯ ಟೀಕೆಯು ಗಮನಾರ್ಹ.

> **ಯೂರೋಪಿಯನ್ನರು ಅನುಭವಿಸುತ್ತಿರುವ ವಿಶೇಷಾಧಿಕಾರಗಳು, ಸರ್ವ ಮಾನ್ಯಗಳನ್ನು ಚೆನ್ನಾಗಿ ಅಭ್ಯಸಿಸಿರುವವರು ನಮ್ಮಲ್ಲಿ ಹಲವಾರು ಇಲ್ಲಿದ್ದೇವೆ – ಬರಿಯ ಯೂರೋಪಿಯನರಷ್ಟೇ ಅಲ್ಲ, ಅಂಥವರಲ್ಲಿ ನನ್ನ ಮನಸ್ಸಿನಲ್ಲಿ ಅನೇಕ ಭಾರತೀಯರೂ ಇದ್ದಾರೆ ಉಚಿತ ಕೊಡುಗೆಯಾಗಿ ಭೂಮಿ ಪಡೆದುಕೊಂಡಿರುವವರು, ರಾಷ್ಟ್ರಕ್ಕೆ ಸಲ್ಲಿಸಿದ ಯಾವುದೇ ಸೇವೆಗೆ ಪ್ರತಿಯಾಗಿಯಲ್ಲ, ಸರಕಾರಕ್ಕೆ ಸಲ್ಲಿಸಿದ ಸೇವೆಗಾಗಿ ಎಂದೂ ಹೇಳಲು ಬಾರದು, ಏಕೆಂದರೆ ಅವರಿಂದ ಸರಕಾರಕ್ಕೆನೂ ಲಾಭವಾಗಿಲ್ಲ, ಯಾವನೋ ಒಬ್ಬ ಅಧಿಕಾರಿಗೆ ಸಂದ ಸೇವೆಗಾಗಿ ಅವರಿಗೆ ಆ ಭೂಮಿ ಸಿಕ್ಕಿದೆ. ಈ ರಿಯಾಯಿತಿಗಳನ್ನು ವಿಶೇಷ ಅಧಿಕಾರಗಳನ್ನೂ ಪ್ರಭುತ್ವ ವಿಮರ್ಶಿಸಬಾರದೆಂದು ಹೇಳುವುದಾದರೆ ದರಿದ್ರರು ಹಾಗೂ ಹತಾಧಿಕಾರರ ಪರವಾಗಿ ಆಡಳಿತಯಂತ್ರವನ್ನು ನಡೆಸುವುದೇ ಅಶಕ್ಯವಾದೀತು. ಅಂದಿನ ಅಧಿಕಾರಿಗಳು ಕೆಲವರಿಗೆ ಮಾಡಿದ ಸೇವೆಗಾಗಿ ಹಲವಾರು ಮೈಲಿಯುದ್ದ ಭೂಮಿಯನ್ನು ಪಡೆದಿರುವಾಗ ಸರಕಾರ ನನ್ನ ಕೈಲಿದ್ದರೆ ಅವರಿಂದ ಶೀಘ್ರವೇ ಆ ಭೂಮಿ ಕಸಿದುಕೊಳ್ಳುವೆ. ಭಾರತೀಯರು ಎಂಬ ಕಾರಣದಿಂದ ಅವರನ್ನು ಪರಿಶೀಲಿಸೆ. ಅವರು ಎಂದು ಮೆಚ್ಚುವಂಥವರೇ ಇರಲಿ, ಎಷ್ಟೇ ಸ್ನೇಹಪರರಾಗಿರಲಿ ಸರ್ ಹ್ಯೂಬರ್ಟ್ ಕಾರ್ ಅಥವಾ ಬೆಂಥಾಲರನ್ನು ಹೇಗೋ ಇವರನ್ನೂ ಕೂಡಲೇ ಆಸ್ತಿರಹಿತಗೊಳಿಸಿಯೇನು. ಶಾಸನಕ್ಕೆ ವ್ಯಕ್ತಿಗೌರವವೆಂಬುದು ಎಷ್ಟು ಇಲ್ಲವಲ್ಲ. (ಮೋ.ಕ ಗಾಂಧಿ 1959 ಅರ್ಥವಿಚಾರ ಪುಟ. 139)**

ದಾರಿದ್ರ್ಯ, ಹಿಂಸೆ, ಭೂತ ದೆವ್ವಗಳ ನಂಬಿಕೆ, ಸ್ವಾತಂತ್ರ್ಯ ಇಲ್ಲದಿರುವಿಕೆ. ಇವೆಲ್ಲಾ ಭಾರತೀಯ ಗುಣಲಕ್ಷಣಗಳು ಎಂದು ಜೇಮ್ಸ್‌ಮಿಲ್ ಕರೆಯುತ್ತಾನೆ. ಇದನ್ನು ಸರಿಪಡಿಸಲು ಕಾನೂನು ಬೇಕು. ಕಾನೂನಿನ ಮುಖಾಂತರವೇ ಸಮಾಜವನ್ನು ಸರಿಪಡಿಸಲು ಸಾಧ್ಯವೆಂದು ಅವನ ಅಭಿಪ್ರಾಯ.

1822ರಿಂದ ಹಕ್ಕು ಪತ್ರದ ಕ್ರಮ (Record of Right) ಜಾರಿಗೆ ಬಂತು. ಇದು ಇಂಗ್ಲಿಷ್ ಮಾದರಿಯ ನ್ಯಾಯ ಪರಿಕಲ್ಪನೆಯೆಂಬುದನ್ನು ನಾವು ಮರೆಯಬಾರದು. ನ್ಯಾಯ ತೀರ್ಮಾನ ಪದ್ಧತಿಯನ್ನು ಜಿಲ್ಲಾ ನ್ಯಾಯಾಲಯದ ವ್ಯಾಪ್ತಿಗೆ ತರಲಾಯಿತು.

ಅಪರಾಧಿಯಾಗಲೀ, ವಾದಿಯೇ ಆಗಲಿ ಕೋರ್ಟಿನಲ್ಲಿ ತಾನೇ ವಾದವನ್ನು ಮಂಡಿಸಬಹುದಿತ್ತು. ವಾದಿ, ಪ್ರತಿವಾದಿಗಳಿಗೆ ಸಂಬಂಧ ಪಟ್ಟಂತೆ ಸಾಕ್ಷಿಗಳು ಕೂಡಾ ಕೋರ್ಟಿನಲ್ಲಿ ಹಾಜರಾಗಬಹುದಿತ್ತು. ಹೀಗೆ "ಕಾನೂನು" ಎಂಬುದು ಅಧಿಕೃತ ವಾಯಿತು. ಭೂ ಕಂದಾಯ, ಉಪ್ಪಿನ ಮೇಲಿನ ತೆರಿಗೆಯು ಕೂಡಾ ಜಾರಿಗೆ ಬಂತು. ಅನೇಕ ಬ್ರಿಟೀಶ್ ಅಧಿಕಾರಿಗಳು ಪ್ರತಿಪಾದಿಸಿರುವಂತೆ ಎಲ್ಲಾ ಕಾನೂನುಗಳು ವೈಜ್ಞಾನಿಕ ಸಂಕೇತ (Codes) ಮತ್ತು ನ್ಯಾಯ ಪದ್ಧತಿಯೆನ್ನುವುದು ಒಂದು ನಿರ್ದಿಷ್ಟವಾದ ನಿಯಮ – ಇವೆರಡು ಭಾರತಕ್ಕೆ ಅತ್ಯಗತ್ಯ. ಹೀಗೆ ಭಾರತಕ್ಕೆ 'ಕಾನೂನು' ಎಂಬುದನ್ನು ವಸಾಹತು ಕಾಲದಲ್ಲಿ ಹೇರಲಾಯಿತು. ಇದನ್ನು ಗಮನದಲ್ಲಿರಿಸಿಕೊಂಡೇ ಗಾಂಧಿ ಅರ್ಥ ಶಾಸ್ತ್ರಿಗಳ ಅಮಾನುಷ ಸಿದ್ಧಾಂತವೆಂದು ಹೇಳಿದರು.

> "ಆಧುನಿಕ ಅರ್ಥಶಾಸ್ತ್ರಿಗಳು ವಿಧಿಸಿರುವ ಅತ್ಯಂತ ಅಮಾನುಷ ಸಿದ್ಧಾಂತಗಳಲ್ಲಿ ಇದೊಂದು. ಅಂಥ ಕುತ್ಸಿತ ಪರಿಗಣನೆಯಿಂದ ಮಾನವ ಸಂಬಂಧಗಳನ್ನು ನಾವು ಯಾವಾಗಲೂ ನಿಯಮನಗೊಳಿಸೆವು. ಇಂಗ್ಲೀಷಿನವ ಅಗ್ಗವಾದ ಇಟಾಲಿಯನ್ ಕೂಲಿಗಾರರನ್ನು ಬಿಟ್ಟು ಇಂಗ್ಲಿಷ್ ಗಣಿಕೂಲಿಗಾರನಿಗೆ ನ್ಯಾಯವಾಗಿಯೇ ಹೆಚ್ಚು ಕೊಟ್ಟಾನು. ಅಗ್ಗದ ದುಡಿಮೆಗಾರರನ್ನು ಇಂಗ್ಲೆಂಡಿಗೆ ತರುವ ಪ್ರಯತ್ನ ಕ್ರಾಂತಿಯನ್ನೇ ಉಂಟುಮಾಡೀತು. ಹೆಚ್ಚು ವೇತನ ಕೊಡುತ್ತಿರುವ ನಂಬಿಕಸ್ಥ ಸೇವಕನ ಬದಲು ಅಗ್ಗವಾಗಿ ಸಿಗುವ ಹೆಚ್ಚು ಸಮರ್ಥನೂ, ಮೊದಲಿನವನಷ್ಟೆ ನಂಬಿಕಸ್ಥನೂ ಆದವನನ್ನು ತೆಗೆದುಕೊಂಡು ಮೊದಲಿನವನನ್ನು ವಜಾ ಮಾಡುವುದು ಪಾಪಕರ. ನೀತಿಯ ಭಾವನೆಯ ಪರಿಗಣನೆಗಳನ್ನು ದುರ್ಲಕ್ಷಿಸುವ ಅರ್ಥಶಾಸ್ತ್ರ ಜೀವಂತವಾಗಿ ಕಂಡರೂ ಸಜೀವ ವಸ್ತುಗಳಲ್ಲ ; ಜೀವವಿರಹಿತವಾದ ಮೇಣದ ಗೊಂಬೆಗಳಂತೆ. ಪ್ರತಿಯೊಂದು ಆಯುತ ವೇಳೆಯಲ್ಲಿಯೂ ಈ ನವೀನ ಅರ್ಥನಿಯಮಗಳು ಮುರಿದುಬಿದ್ದಿವೆ. ಅವನು ಅಂಗೀಕರಿಸುವ ರಾಷ್ಟ್ರಗಳಿಗೂ ವ್ಯಕ್ತಿಗಳಿಗೂ ವಿನಾಶವೇ ಕಟ್ಟಿಟ್ಟದ್ದು. ಧರ್ಮದ ವಿಧಿಪ್ರಕಾರ ತಯಾರಾದ ಆಹಾರಕ್ಕೆ ಹೆಚ್ಚು ಬೆಲೆಕೊಡುವ ಮುಸಲ್ಮಾನನ ಅಥವಾ ಶಾಸ್ತ್ರೋಕ್ತವಾಗಿ ಶುದ್ಧವಾಗಿ ತಯಾರಿಸಿದ ಅನ್ನವನನು ಮುಟ್ಟೆನೆನ್ನುವ ಹಿಂದೂವಿನ ಆತ್ಮನಿಷೇಧದಲ್ಲಿ ಉದಾತ್ತವಾದುದೇನೋ ಇದೆ. ಇಂಗ್ಲೆಂಡ್ ಮತ್ತು ಜಪಾನಿನ ಅಗ್ಗದ ಮಾರುಕಟ್ಟೆಗಳಲ್ಲಿ ಕೊಂಡುಕೊಳ್ಳಲು ಪ್ರಾರಂಭಿಸಿದಾಗಲೇ ನಾವು ಸೋತೆವು. ನಮ್ಮ ನೆರೆಯವರು ತಮ್ಮ ಕುಟೀರಗಳಲ್ಲಿ ತಯಾರಿಸಿದ ಅರಿವೆಗಳನ್ನು ಕೊಳ್ಳುವ ಧಾರ್ಮಿಕ ಅಗತ್ಯವನ್ನು ಮನಗಂಡಾಗಲೇ

ನಾವು ಪುನರುಜ್ಜೀವನಗೊಂಡೆವು". (ಗಾಂಧಿ ಅರ್ಥವಿಚಾರ. ಪುಟ. 78)

ಕಂದಾಯ

ರಾಜಕೀಯ ಪದಕೋಶದಲ್ಲಿ ತೆರಿಗೆ ಮತ್ತು ಬಾಡಿಗೆಗೆ ವಿಶೇಷ ಮಹತ್ವವಿದೆ. ಭಾರತದಲ್ಲಿ ಹಿಂದಿನಿಂದಲೂ ಬೇರೆ ಬೇರೆ ರೀತಿಯ ಕಂದಾಯಗಳಿದ್ದವು. ವಾಸ್ತವವಾಗಿ ಹೊಸ ರಾಜಕೀಯ ಅರ್ಥಶಾಸ್ತ್ರವು ಪ್ರಾರಂಭವಾದ ಹಂತದಲ್ಲಿ ಇದರ ಪರಿಣಾಮ ವಸಾಹತು ಕಾಲದಲ್ಲಿ ಭಾರತದ ಮೇಲೂ ಆಯಿತು. 1819–1830 ಕಾಲಘಟ್ಟದಲ್ಲಿ ರೆವಿನ್ಯೂ ಪದ್ಧತಿಯಲ್ಲಿಯೂ ತುಂಬಾ ಬದಲಾವಣೆಯನ್ನು ಕಾಣಬಹುದು. ಬ್ರಿಟೀಶರ ಕಾಲದಲ್ಲಿಯೇ ಸಾರ್ವಜನಿಕ ಕಾನೂನು ಬೇರೆ, ವೈಯಕ್ತಿಕ ಕಾನೂನು ಬೇರೆ ಎಂಬ ವರ್ಗೀಕರಣವು ಪ್ರಾರಂಭವಾಯಿತು. ಅದಕ್ಕಿಂತ ಮೊದಲು ಇದ್ದ ಮೌಖಿಕ ನ್ಯಾಯಗಳು, ಕಾನೂನುಗಳು ಬ್ರಿಟೀಶರ ಕಾನೂನಿನ ಕ್ರಮದಲ್ಲಿ ಅರ್ಥಹೀನವಾದವು. ಬ್ರಿಟೀಶರು ರೂಪಿಸಿದ ಕಾನೂನುಗಳೇ 'ಅಧಿಕೃತ' ಕಾನೂನುಗಳು ಎಂದು ಪ್ರತಿಪಾದಿಸಲಾಯಿತು.

ಒಂದು ದೃಷ್ಟಿಯಿಂದ ಭೂ ಕಂದಾಯ ಎನ್ನುವುದು ಖಾಸಗಿ ತೆರಿಗೆ ಪದ್ಧತಿ, ವಸಾಹತು ಕಾಲದಲ್ಲಿ ಭೂಮಿ ಎನ್ನುವುದು ಸಂಪತ್ತು ಎಂದು ಪರಿವರ್ತಿತವಾಯಿತು. 1793ರಲ್ಲಿ ಕಾರ್ನವಾಲೀಸ್ ಬಂಗಾಳದಲ್ಲಿ ಜಮೀನುದಾರರ ಉಳುಮೆ ರಹಿತ ; ಬಂಜರು ಭೂಮಿಗೂ ಕಂದಾಯ ವಿಧಿಸಿದ. ಇದು ಪ್ರಭುತ್ವದ ಅಧಿಕಾರ ವ್ಯಾಪ್ತಿಗೆ ಬರುತ್ತದೆ ಮತ್ತು ಸರಕಾರದ ಆಂತರಿಕ ವ್ಯವಹಾರಕ್ಕೆ ಸಂಬಂಧಿಸಿದೆಯೆಂದು, ಪರಿಭಾವಿಸಿದೆಯೆಂದು ವಾದಿಸಿದ. ಆಸ್ತಿಯನ್ನು ಮಾರುವಾಗ ಸರಕಾರಕ್ಕೆ ಸುಂಕ ಕಟ್ಟಬೇಕೆಂದು ತಿಳಿಸಿದ. ಈ ಕಾನೂನು ಈಗಲೂ ಜಾರಿಯಲ್ಲಿರುವುದು ಗಮನಾರ್ಹ ಅಂಶವಾಗಿದೆ. ಮುನ್ರೋ ಕೂಡಾ ಜಮೀನಿನ ಸುಂಕದ ಬಗ್ಗೆ ತುಂಬಾ ನಿಗಾ ಇಟ್ಟುಕೊಂಡಿದ್ದ. 1801ರಲ್ಲಿ ಇದನ್ನು ನೋಡಿಕೊಳ್ಳಲು ಮತ್ತು ಸ್ಥಳೀಯರು ಮತ್ತು ಬ್ರಿಟೀಶ್ ಅಧಿಕಾರಿಗಳ ಮಧ್ಯೆ ಸಮಸ್ಯೆ ಉಂಟಾದರೆ ಬಗೆಹರಿಸಲು ತಾಲೂಕುದಾರರನ್ನು ಮುನ್ರೋ ನೇಮಿಸಿದ. ಸರಕಾರ ಮತ್ತು ಜಮೀನುದಾರರ ಮಧ್ಯೆ ತಾಲೂಕುದಾರರು (ತಹಶೀಲ್ದಾರರು) ಮಧ್ಯವರ್ತಿಗಳಾದರು. ಜಮೀನಿಗೆ ಕಟ್ಟಲಾಗುವ ಕಂದಾಯವು ಯಾವುದೇ ಕಾರಣಕ್ಕೆ ಬದಲಾವಣೆಗೆ ಗುರಿಯಾಗಬಾರದು ಮತ್ತು ಅದಕ್ಕೆ ರಶೀದಿಯನ್ನು ನೀಡಬೇಕೆಂದು ಮುನ್ರೋ ಪ್ರತಿಪಾದಿಸಿದ. ಭೂ ಕಂದಾಯ ನೀಡುವುದೆಂದರೆ ಒಂದೆಡೆಯಿಂದ ಭಾರತೀಯರು ರಾಜಕೀಯ ನೀತಿಯನ್ನು ಕಲಿಯುವುದು ಮತ್ತು

ಇನ್ನೊಂದು ಕಡೆಯಿಂದ ಸರಕಾರದ ಅಧಿಪತ್ಯವನ್ನು ಒಪ್ಪಿಕೊಳ್ಳುವುದು ; ಜಮೀನು ಕೂಡಾ ಒಂದು ರಾಷ್ಟ್ರದ ಆಸ್ತಿಯೆಂದು ಪರಿಗಣಿಸುವುದು ಎಂದು ವಸಾಹತು ಕಾಲದಲ್ಲಿ ಪ್ರತಿಪಾದಿಸಲಾಯಿತು. ಕಾರ್ನವಾಲೀಸ್‌ನ ಕಾಲದಲ್ಲಿ ಸಣ್ಣ ರೈತರಿಗೂ – ಭೂ ಕಂದಾಯವನ್ನು ವಿಸ್ತರಿಸಲಾಯಿತು.

ಯಾವಾಗ ಸಣ್ಣ ಹಿಡುವಳಿದಾರರಿಗೂ ಕಂದಾಯವನ್ನು ವಿಸ್ತರಿಸಲಾಯಿತೋ ಆಗ ಭಾರತದಲ್ಲಿ ಬೇರೆ ಬೇರೆ ಪರಿಣಾಮಗಳು ಉಂಟಾದವು. ವಾಸ್ತವವಾಗಿ ಮಾಲ್ತಸ್ – ಖ್ಯಾತ ಅರ್ಥಶಾಸ್ತ್ರಜ್ಞ (1805–1834) ತೆರಿಗೆಯ ಕಾನೂನು ಪದ್ಧತಿಯನ್ನು ತನ್ನ ಅರ್ಥಶಾಸ್ತ್ರದಲ್ಲಿ ಮೊಟ್ಟಮೊದಲ ಬಾರಿಗೆ ಪ್ರತಿಪಾದಿಸಿದ. ಅವನು 1815ರಲ್ಲಿ The Nature and Progress of Rent ನಲ್ಲಿ ಹೀಗೆ ಹೇಳುತ್ತಾನೆ

1 ತೆರಿಗೆ ಎನ್ನುವುದು ಸಂಪತ್ತಿನ ವಿಶಿಷ್ಟ ಅಂಶವಾಗಿದೆ.
2 ತೆರಿಗೆಯನ್ನು ವಿಧಿಸುವುದೆಂದರೆ ಅದು ವೈಜ್ಞಾನಿಕ ವಿಧಾನವನ್ನು ಅಳವಡಿಸಿಕೊಂಡಿರಬೇಕು.
3 ತೆರಿಗೆಯೆಂದರೆ ಅದು ಲಾಭಾಂಶ ಅಥವಾ ಕೂಲಿಯ ಭಾಗವೆಂದು ಯಾರೂ ತಿಳಿಯಬಾರದು.
4 ಭೂಮಿಯೆಂದರೆ ಅದು ಆಹಾರ ಉತ್ಪಾದನೆಯ ಸಂಪನ್ಮೂಲ.
5 ಭೂಮಿಯಲ್ಲಿಯೂ ಬರಡು ಭೂಮಿ ಮತ್ತು ಕೃಷಿ ಭೂಮಿ ಎಂಬ ವ್ಯತ್ಯಾಸವಿದೆ. ಅವುಗಳ ಗುಣಲಕ್ಷಣಗಳು ಬೇರೆಬೇರೆ.
6 ಮೇಲಿನ ಕಾರಣಗಳಿಂದ ತೆರಿಗೆಯ ವಿಧಾನಗಳಲ್ಲಿಯೂ ವ್ಯತ್ಯಾಸ ಇರಬೇಕಾಗುತ್ತದೆ.
7 ತೆರಿಗೆಗಳು ಆದಾಯಕ್ಕೆ ಅನ್ವಯವಾಗುವ ಹಾಗೆ ಎಲ್ಲಾ ಸಂಪನ್ಮೂಲಗಳಿಗೂ ಅನ್ವಯವಾಗುತ್ತದೆ.

ಮಾಲ್ತಸ್‌ನ ಈ ಸಿದ್ಧಾಂತವು ಅಧಿಕಾರದ ಶಕ್ತಿಗೆ ಹೆಚ್ಚು ಅನುಕೂಲಕರವಾಯಿತು. ಇದಕ್ಕಿಂತ ಪೂರ್ವ ತೆರಿಗೆ ಪದ್ಧತಿಯೆನ್ನುವುದು ಕಟ್ಟುನಿಟ್ಟಾದ ನಿಯಮವಾಗಿ ಚಾಲ್ತಿಯಲ್ಲಿರಲಿಲ್ಲ. ಉಳುಮೆ, ಸಂಪತ್ತು ಮತ್ತು ಕಂದಾಯ ಇವುಗಳಿಗೆ ಸಂಬಂಧ ಕಲ್ಪಿತವಾದುದು ಇದರ ನಂತರ. ಭೂ ಕಂದಾಯವೆನ್ನುವುದು ಒಂದು ಆರ್ಥಿಕ ವ್ಯವಹಾರವಾಗಿ ಮಾರ್ಪಾಡಾಯಿತು

ಮಾಲ್ತಸ್‌ನ ಈ ಸಿದ್ಧಾಂತವು ಸರಕಾರಕ್ಕೆ ಸಿಕ್ಕಿದ ಬಹುದೊಡ್ಡ ವರಮಾನವೆಂದು ಹೇಳಬಹುದು. 1830–1832ರ ಕಾಲಾವಧಿಯ ಭಾರತೀಯ ಉಸ್ತುವಾರಿಯನ್ನು

ನೋಡಿಕೊಳ್ಳಲು ಇಂಗ್ಲೆಂಡ್ ನೇಮಿಸಿದ ಸಮಿತಿಯು (Select Committee on Indian Affairs) ಭೂ ಕಂದಾಯದ ಬಗ್ಗೆ ನಿಗಾ ವಹಿಸಿತು. ಜೇಮ್ಸ್ ಮಿಲ್‌ನ ವಾದದ ಪ್ರಕಾರ 19ನೆಯ ಆದಿ ಭಾಗದ ಸರಕಾರದ ನಿಯಮಾವಳಿಯಂತೆ ಜಮೀನು ಎಂಬುದು ಕೇವಲ ಒಬ್ಬನಿಗೆ ಸಂಬಂಧಿಸಿರುವುದಿಲ್ಲ. ಯಾವುದೇ ವ್ಯಕ್ತಿಗೆ ಸಂಬಂಧಿಸಿದ ಜಮೀನಿಗೂ, ಸರಕಾರಕ್ಕೂ ಸಂಬಂಧವಿದೆ. ಹಾಗೆಯೇ ಒಂದು ಜಮೀನಿನಲ್ಲಿ ಉತ್ಪಾದಿತವಾಗುವ ಉತ್ಪಾದನೆಗೆ ಕಂದಾಯ ವಿಧಿಸುವ ಮೂಲಕ ಸರಕಾರವು ವ್ಯಕ್ತಿಯ ಜಮೀನು ಮತ್ತು ಉತ್ಪಾದನೆಗೆ ಪ್ರವೇಶಿಸಿತು. ಶೃಂಗೇರಿ ಮಠದ ದಾಖಲೆಯಲ್ಲಿ ಕಾಣ ಸಿಗುವಂತೆ ಸಾಗುವಳಿ ಮಾಡುವಂಥ ಜನರು ಕಂದಾಯ ಕೊಡಲು ಹರಕತ್ತು ಮಾಡಿದರು. ಆಗ ಅವರಿಂದ ಕಂದಾಯ ವಸೂಲು ಮಾಡಲು ಮೈಸೂರು ಸೀಮೆಯ 'ಸೂಪ್ರೆಂಟೆಂಡ್' ಮೆಕ್ಲೆವಾಡ ಸಾಹೇಬ ಕಂದಾಯ ವಸೂಲು ಮಾಡಲು ಆಜ್ಞಾಪಿಸುತ್ತಾನೆ. ಅಮಲದಾರ, ಶಿರಸ್ತೆದಾರ, ಶೇಕ್‌ದಾರ, ಕಿಲ್ಲೆದಾರ, ಠಾಣೆ ದಫೆದಾರ, ಹಣವನ್ನು ವಸೂಲು ಮಾಡುತ್ತಾರೆ (ದಾಖಲೆ 282, ಕೆ. 165, ದಾಖಲೆ–59, ಪು. 132). ಮುನ್ರೋ ಮೊದಲ ಬಾರಿ ಜಮೀನು ಅಳತೆ ಮಾಡುವ ಮತ್ತು ಅದರ ಮೌಲ್ಯಮಾಪನ ಮಾಡಿ ಅದಕ್ಕೆ ತೆರಿಗೆ ನಿಗದಿಪಡಿಸುವ ಪದ್ಧತಿಯನ್ನು ಜಾರಿಗೆ ತಂದ. ಮುನ್ರೋವಿನ ಈ ಜಮೀನಿನ ಅಳತೆ ಮಾಡುವ ಪದ್ಧತಿ ಮತ್ತು ಅದಕ್ಕೆ ಮೌಲ್ಯಮಾಪನ ಮಾಡುವ ಪದ್ಧತಿಯಿಂದ, ಅದಕ್ಕಿಂತ ಮೊದಲು ಭಾರತದಲ್ಲಿ ಜಾರಿಯಲ್ಲಿ ಭಾರತೀಯ ಸಂಪ್ರದಾಯಗಳು (ಅಂದರೆ ಭೂಮಿಯನ್ನು ಅಳತೆ ಮಾಡುವ ಪದ್ಧತಿ) ಹೊರಟು ಹೋಯಿತು. ಪ್ರಭುತ್ವ, ಭೂಮಿ, ಒಡೆತನ ಇವುಗಳ ನಿರ್ವಚನ ಮುನ್ರೋವಿನಿಂದಾಗಿ ಬದಲಾಯಿತು.

ಒಳ್ಳೆಯ ಜಮೀನು ಅಂದರೆ ಒಳ್ಳೆಯ ಇಳುವರಿ. ಅದು ಅಧಿಕ ಲಾಭವನ್ನು ತಂದುಕೊಡುತ್ತದೆ. ಫಲವತ್ತಾದ ಜಮೀನನ್ನು ಯಾವಾಗಲೂ ಕೃಷಿ ಮಾಡಲೇಬೇಕು. ಆದರೆ ಕೆಲವು ಜಮೀನು ಫಲವತ್ತಾಗಿರುವುದಿಲ್ಲ. ಅದರಿಂದ ಹೆಚ್ಚು ಬೆಳೆ ತೆಗೆಯಲಾಗುವುದಿಲ್ಲ. ಇಂಥ ಜಮೀನುಗಳಿಗೆ ತೆರಿಗೆ ಅಥವಾ ಕಂದಾಯ ಅಗತ್ಯವಿಲ್ಲವೆಂದು ಮುನ್ರೋ ಪ್ರತಿಪಾದಿಸುತ್ತಾನೆ. ಈ ಪದ್ಧತಿ 1831ರ ತನಕ ಮುಂದುವರಿಯಿತು.

ಮೆಕೆಂಜಿಯು ಜಾತಿಯಿಂದ ಜಾತಿಗೆ, ಗ್ರಾಮದಿಂದ ಗ್ರಾಮಕ್ಕೆ ಇರುವ ವ್ಯತ್ಯಾಸಗಳನ್ನು ಗಮನಿಸಿದ. ಜಮೀನು ಹಂಚಿಕೆಯಲ್ಲಿರುವ ತಾರತಮ್ಯವನ್ನು ಅರ್ಥಮಾಡಿಕೊಂಡ. ಅವನು ಬೆಳೆ, ಮಣ್ಣು, ಕೃಷಿ, ಜಾತಿ, ಚರಿತ್ರೆ ಇವುಗಳ ಮಾಹಿತಿ ಸಂಗ್ರಹಿಸಿ ಅವುಗಳ

ಮೂಲಕ ಮೌಲ್ಯಮಾಪನ ಮಾಡಿದ. ಮತ್ತು ಪ್ರತಿಯೊಂದು ಗ್ರಾಮಗಳಿಗೂ ಪ್ರತ್ಯೇಕ ತಖ್ತೆ ; ಲೆಕ್ಕಾಚಾರವಿರಬೇಕು ಎಂದು ಪ್ರತಿಪಾದಿಸಿದ (ಮೆಕೆಂಜಿ, Regulation VII, 1822).

1833ರ ಜನವರಿಯಲ್ಲಿ ಅಲಹಾಬಾದಿನಲ್ಲಿ ಕೆಲವು ಬದಲಾವಣೆಗಳನ್ನು ಮಾಡಿದ:

1 ಪ್ರತಿ ಎಕ್ರೆಗೆ ಕಂದಾಯ ನಿಗದಿ.

2 ವ್ಯಕ್ತಿಗೆ ಪ್ರತ್ಯೇಕ ಕಂದಾಯವಿಲ್ಲ.

3 ಸ್ಥಳೀಯ ಗುಂಪುಗಳಿಗೆ ಅನುಸಾರವಾಗಿ ತೆರಿಗೆ.

1850 ರಲ್ಲಿ ಬಾಡೆನ್ ಪೊವೆಲ್ ಆದಾಯ, ಕೂಲಿಗಳಿಗೆ ಸಾಮಾನ್ಯ ಎನ್ನಬಹುದಾದ ಮೌಲ್ಯ ನಿಗದಿಗೊಳಿಸಿದ. ಆದರೆ 1855ರ ವರೆಗೆ ಮದರಾಸು ಪ್ರಾಂತ್ಯದಲ್ಲಿ ಮುನ್ರೋ ಪದ್ಧತಿಯೇ ಜಾರಿಯಲ್ಲಿತ್ತು. ಭೂ ಕಂದಾಯ, ವಸ್ತುಗಳ ಮೇಲಿನ ಕಂದಾಯ, ಉಪ್ಪಿನ ಮೇಲಿನ ಕರಗಳು, ಬ್ರಿಟೀಶ್ ಪ್ರಭುತ್ವಕ್ಕೆ ವಾಸ್ತವವಾಗಿ ತಿರುಗು ಬಾಣಗಳಾದವು.

ಇದೇ ಮುನ್ರೋವಿಗೂ ಕರ್ನಾಟಕಕ್ಕೂ ಬೇರೆ ರೀತಿಯ ಸಂಬಂಧವಿದೆ. ಈ ಹೊತ್ತು ಕರ್ನಾಟಕ್ ಪ್ರಾಂತದಲ್ಲಿ ದಕ್ಷಿಣ ಕನ್ನಡ ಮತ್ತು ಉತ್ತರ ಕನ್ನಡ ಎಂಬ ಪ್ರತ್ಯೇಕ ಜಿಲ್ಲೆಗಳು ಇರುವುವು. 1852ರ ಪೂರ್ವದಲ್ಲಿ ಅವೆರಡೂ ಕೂಡ ಒಂದೇ ಕನ್ನಡ ಜಿಲ್ಲೆ ಎಂದು ಎಣಿಸಲ್ಪಡುತ್ತಿತ್ತು. ಅದು ಆಗ ಮದರಾಸು ಪ್ರಾಂತಕ್ಕೆ ಸೇರಿತ್ತು. 1852ರಲ್ಲಿ ಅದು ವಿಭಜಿಸಲ್ಪಟ್ಟು ದಕ್ಷಿಣ ಕನ್ನಡ ಮದ್ರಾಸಕ್ಕೆ, ಉತ್ತರ ಕನ್ನಡ ಜಿಲ್ಲೆ ಮುಂಬಯಿಗೆ ಜೋಡಿಸಲ್ಪಟ್ಟವು. ಬ್ರಿಟೀಶರು ಜಯಿಸುವ ಮೊದಲು ಆ ಜಿಲ್ಲೆಯು ಮೈಸೂರು ಜಿಲ್ಲೆಯು ಮೈಸೂರು ರಾಜ್ಯಕ್ಕೆ ಸೇರಿತ್ತು. ಮೈಸೂರು ಯುದ್ಧದಲ್ಲಿ ಬ್ರಿಟೀಷರು ಟೀಪು ಸುಲ್ತಾನನ್ನು 1799ರಲ್ಲಿ ಸೋಲಿಸಿ ಅವನ ಇಡೀ ರಾಜ್ಯವನ್ನು ವಶಪಡಿಸಿಕೊಂಡರು. ಕನ್ನಡ ಜಿಲ್ಲೆಯನ್ನು ಸರ್ ಥಾಮಸ್ ಮುನ್ರೋ ಇವನು 1799ರಲ್ಲಿ ಆಕ್ರಮಿಸಿದನು (ದಿವಾಕರ, ರಂ.ರಾ. 1985, ಪು. 242).

ಇದರಿಂದ ಭಾರತೀಯರು ಪೂರ್ಣ ಅಸಹಕಾರ, ಸಾಮಾಜಿಕ ಹಾಗೂ ರಾಜಕೀಯ ಬಹಿಷ್ಕಾರ, ಅವಶ್ಯವಿದ್ದಾಗ ಊರು ತೆರವು ಮಾಡುವುದು ಇತ್ಯಾದಿ ಮಾರ್ಗಗಳನ್ನು ಅವರು ಅವಲಂಬಿಸಿದರು. ಭೂಮಿಯ ಮೇಲೆ ಹೊಸ ಕಂದಾಯ ಮುಂತಾದವುಗಳನ್ನು ನಿಶ್ಚಯಿಸಿ ಪಟ್ಟಾಕೊಟ್ಟು ಬ್ರಿಟೀಶ್ ಅಧಿಕಾರವನ್ನು ಜನರ ಮೇಲೆ ಸ್ಥಾಪಿಸಬೇಕೆಂದು ಸರ್ ಮುನ್ರೋ ಇವರು ಉದ್ದೇಶ ಪಟ್ಟರು (ಅದೇ.).

ಭಾರತದಲ್ಲಿ ಕಂದಾಯವು ನಿಗದಿಯಾದ ಕ್ರಮಕ್ಕೆ ಬ್ರಿಟಿಷರಲ್ಲಿ ಬೇರೆಬೇರೆ ಹಂತಗಳಿದ್ದವು. ಬೇರೆ ಬೇರೆ ಅಭಿಪ್ರಾಯಗಳಿದ್ದವು. ಬೇರೆ ಬೇರೆ ವೈಸರಾಯ್‌ಗಳು

ಬಂದ ಕಾಲಕ್ಕೆ ಭೂ ಕಂದಾಯಗಳನ್ನು ಬೇರೆ ಬೇರೆ ರೀತಿಯಲ್ಲಿ ನಿಗದಿಪಡಿಸಿದ್ದನ್ನು ಈ ಮೊದಲೇ ಉಲ್ಲೇಖಿಸಲಾಗಿದೆ. ಇದರಿಂದಾಗಿ ಬ್ರಿಟೀಶ್ ಅಧಿಕಾರಿಗಳಲ್ಲಿ ಕಂದಾಯದ ಬಗ್ಗೆ ಒಮ್ಮತದ ಅಭಿಪ್ರಾಯವಿರಲಿಲ್ಲ.

ತಾರಾಚಂದ್ ಅವರು 'ಭಾರತದಲ್ಲಿ ಸ್ವಾತಂತ್ರ್ಯ ಚಳುವಳಿ' ಕೃತಿಯಲ್ಲಿ ಹೀಗೆ ಹೇಳುತ್ತಾರೆ(1992, ಸಂ. 2, ಪು. 481) : ಈ ರೀತಿಯಾದ ದುಂದು ವೆಚ್ಚವನ್ನು ಸರಿತೂಗಿಸಿಕೊಳ್ಳಲು ಸರಕಾರವು ಭಾರತದ ಬಡವರ್ಗಗಳ ಮೇಲೆ ಅಧಿಕ ಒತ್ತಡದಿಂದ ಹೊರಬೀಳುವ ರೀತಿಯ ಅಸಾಧಾರಣ ಅಧಿಕ ಮಟ್ಟದ ಹಾಗೂ ದಬ್ಬಾಳಿಕೆಯ ರೀತಿಯ ಕಂದಾಯವನ್ನು ಹೇರುವುದು ಅನಿವಾರ್ಯವಾ ಯಿತು. ಸರಕಾರದ ಆಡಳಿತಗಾರರೇ ಕೆಲವರು ಈ ಶೋಷಣೆಯ ವಿಷಯದಲ್ಲಿ ತಮ್ಮ ತಪ್ಪೊಪ್ಪಿಕೊಂಡಿದ್ದರು. ಸೆಕ್ರೆಟರಿ ಆಫ್ ಸ್ಟೇಟ್ ಆದ ಲಾರ್ಡ್ ಸ್ಯಾಲಿಸ್ ಬರಿಯವರು ಈ ರೀತಿ ಬರೆದರು: ಈ ಮೊದಲೇ ಬಂಡವಾಳವು ಅತಿ ಸ್ವಲ್ಪ ಪ್ರಮಾಣದಲ್ಲಿರುವ ಹಳ್ಳಿಗಾಡು ಜಿಲ್ಲೆಗಳಿಂದ ನಮ್ಮೀ ಕಂದಾಯ ವರಮಾನದ ಬಹು ಭಾಗವನ್ನು ಬರಮಾಡಿಕೊಳ್ಳುವುದು ಬಂಡವಾಳವು ಮತ್ತು ಅಧಿಕ ಪ್ರಮಾಣದಲ್ಲಿ ವ್ಯಯವಾಗುತ್ತಾ ಕೊನೆಗೆ ಪೂರಾ ಪೋಲು ಆಗುತ್ತಿರುವ ನಗರ ಪ್ರದೇಶಗಳನ್ನು ಬಿಡುವುದೂ ಒಂದು ಮಿತವ್ಯಯ ನೀತಿಯೇ ಅಲ್ಲ ... ಭಾರತದಿಂದ ರಕ್ತವನ್ನೇನೋ ಎಳೆದುಕೊಳ್ಳಬೇಕು ನಿಜ. ಆದರೆ ರಕ್ತವನ್ನು ಹೀರುವ ಸಾಧನವನ್ನು ರಕ್ತವು ತುಂಬಿ ತುಳುಕುತ್ತಿರುವ ಅಥವಾ ಅಗಾಧವಾಗಿರುವ ಭಾಗಗಳಲ್ಲಿಟ್ಟು ರಕ್ತ ಹೀರಿ ಬೆಳೆಯಬೇಕೇ ಹೊರತು ಈಗಾಗಲೇ ರಕ್ತದಿಂದ ದುರ್ಬಲವಾಗಿರುವ ಭಾಗಗಳಲ್ಲಿಡಬಾರದು".

ಹೀಗೆ ವೈಸ್‌ರಾಯ್‌ರವರ ಎಕ್ಸಿಕ್ಯೂಟಿವ್ ಕೌನ್ಸಿಲ್‌ನ ಫೈನಾನ್ಸ್ ಮೆಂಬರ್ ಆಗಿದ್ದ ಸರ್ ಆಕ್ಲೆಂಡ್ ಕೋಲ್ವಿನ್‌ರವರು ನ್ಯಾಯ ವಿಧಾಯಕ ಸಭೆಯಲ್ಲಿ ಈ ರೀತಿ ಹೇಳಿದರು. 'ನಮ್ಮೀ ಆಡಳಿತವು ಕಲುಷಿತವಾಗಿರುವ ಮತ್ತು ಅದರ ವಿವರಣೆಯಿಲ್ಲದೆ ಇತ್ತೀಚಿನ ಘಟನೆಗಳಿಂದ ಅದೂ ಇನ್ನೂ ಹೆಚ್ಚುತ್ತಿರುವ ಅಂಶವೇನೆಂದರೆ ನಮ್ಮೀ ಸರಕಾರದಿಂದ ಅತ್ಯಂತ ಕಡಿಮೆ ಹಣವನ್ನು ಪಾವತಿ ಮಾಡುತ್ತಿವೆಯೆಂಬುದೇ'. ಆದರೆ ಶ್ರೀಮಂತ ಹಾಗೂ ಮಧ್ಯಮ ವರ್ಗಗಳವರು ಈ ರೀತಿ ನಡೆದುಕೊಳ್ಳಲು ಸಹಾಯಕವಾಗಿದ್ದ ಹಿನ್ನೆಡೆಯ ಕಂದಾಯ ಪದ್ಧತಿಗೆ ಅವರುಗಳೇನೂ ತಪ್ಪಿತಸ್ಥರಾಗಿರಲಿಲ್ಲ. ಏಕೆಂದರೆ ಲ್ಯಾಂಕೆಷೈರಿನ ಒತ್ತಾಯ ಹಾಗೂ ರಾಜಕೀಯ ಕಾರಣಗಳು, ಸರಕಾರವು 1878ರ ಅನಂತರ ಎಲ್ಲಾ ವಿಧವಾದ ಸುಂಕಗಳನ್ನು ರದ್ದು ಮಾಡಿ ಸ್ವತಂತ್ರ ವ್ಯಾಪಾರವನ್ನು ಅನುಮೋದಿಸುವಂತೆ ಮಾಡಿದವು. ಈ ರೀತಿ ಆಗುವುದರಿಂದ ಶ್ರೀಮಂತ ವರ್ಗಗಳನ್ನು

ಬಳಸುವ ರೀತಿಯಿಂದ ಕಂದಾಯದ ಹಿಡಿತಕ್ಕೆ ಸಿಕ್ಕಿಸಿಕೊಳ್ಳುವುದಕ್ಕೆ ಭಾರತ ಸರಕಾರವು ಮೇಲ್ಪಟ್ಟವರ ಅಪ್ಪಣೆಯಂತೆ ರಕ್ತಯುತವಾಗಲಿಲ್ಲ.

ಆದುದರಿಂದ ಶ್ರೀಮಂತ ವರ್ಗದವರ ಹಣವನ್ನು ಕಸಿಯುವುದಕ್ಕೆ ನೇರ ಕಂದಾಯ ಪದ್ಧತಿಯೊಂದೇ ಮಾರ್ಗವಾಗಿದ್ದಿತು. ಆದರೆ 1860ರ ದಶಕದಲ್ಲಿ ನಡೆದ ಒಂದು ಅಲ್ಪಕಾಲದ ಪ್ರಯೋಗದ ನಂತರ ಆದಾಯ ತೆರಿಗೆಯ ವಸೂಲಿಯನ್ನು ರದ್ದು ಮಾಡಲಾಯಿತು. ಮರಳಿ ಅದನ್ನು ವಿಧಿಸಿದ್ದು 1886ರಲ್ಲಿಯೇ. ರೈಲುಗಳು ಇನ್ನು ಲಾಭದಾಯಕ ಉದ್ಯಮವಾಗಿ ಅಭಿವೃದ್ಧಿಗೊಂಡಿರಲಿಲ್ಲ ಮತ್ತು ವ್ಯವಸಾಯ ಸಂಬಂಧದ ಲೋಕೋಪಯೋಗಿ ಕೆಲಸಗಳು ಬೆಳೆದಿರಲಿಲ್ಲ. ಈ ಪರಿಸ್ಥಿತಿಯಲ್ಲಿ ಭೂ ಕಂದಾಯ, ಉಪ್ಪಿನ ಮೇಲಿನ ತೆರಿಗೆ, ಅಬ್ಕಾರೀ ಸುಂಕಗಳು (ಮಧ್ಯಸಾರ, ಭಂಗಿ, ಅಫೀಮು ಇತ್ಯಾದಿಗಳ ಮೇಲಿನವು) ಮತ್ತು ಸ್ಟಾಂಪುಗಳು ಇವೇ ಆದಾಯದ ಮುಖ್ಯ ಮೂಲಗಳಾಗಿದ್ದುವು. ಈ ಎಲ್ಲಾ ತೆರಿಗೆಗಳ ಭಾರವು ಹಳ್ಳಿಗಾಡಿನ ಜನತಾ ವರ್ಗದ ಮೇಲೆ ಅದರಲ್ಲೂ ಬಡವರ್ಗಗಳ ಮೇಲೆ ಬಿದ್ದಿತು. ಹೀಗಾಗಿ ಭಾರತೀಯ ಸುಂಕ ತೆರಿಗೆ ಪದ್ಧತಿಯು ಬಡ ವರ್ಗದವರ ಬಗೆಗೆ ಬಹಳ ಅನ್ಯಾಯದಿಂದ ಕೂಡಿತ್ತು. ಅದು ಮಹತ್ತರವಾದ ಅಸಂತುಷ್ಟಿಯನ್ನು ಹುಟ್ಟಿಸಿ, ಭಾರತದಲ್ಲಿ ರಾಜಕೀಯ ಚಳುವಳಿಗಳ ಮುಖ್ಯ ಮಾತಾಗಿತ್ತು. ಭಾರತ ರಾಷ್ಟ್ರೀಯ ಕಾಂಗ್ರೆಸ್ ಅಧಿವೇಶನಗಳಲ್ಲಿ ಪದೇ ಪದೇ ಮಂಡಿಸಲಾಗುತ್ತಿದ್ದ ಮಸೂದೆಗಳ ಪೈಕಿ ಈ ಮುಂದೆ ಹೇಳುವ ಅಂಶಗಳು ಸತತವಾಗಿಯೂ ಇರುತ್ತಿದ್ದವು. ಕಂದಾಯ ಪದ್ಧತಿಯನ್ನು ಕ್ರಮಬದ್ಧ ಪಡಿಸುವುದು, ರೈತರ ಮೇಲೆ ಸರಕಾರದ ಹೊರೆಯು ಹೆಚ್ಚುತ್ತಲೇ ಇರದಂತೆ ಮಾಡಲು ರೈತವಾರೀ ಪ್ರದೇಶಗಳಲ್ಲಿ ಶಾಶ್ವತ ಕಂದಾಯ ಪದ್ಧತಿ ಜಾರಿಗೆ ತರುವುದು, ಉಪ್ಪಿನ ತೆರಿಗೆ ಹಾಗೂ ಅಬಕಾರಿ ಸುಂಕಗಳನ್ನು ಕಡಿಮೆಮಾಡುವುದು, ಆದಾಯ ತೆರಿಗೆ ವಸೂಲ ಮಾಡಲು ಇದ್ದ ಕನಿಷ್ಠ ಮಟ್ಟವನ್ನು ಏರಿಸುವುದು, ಇವೇ ಆಗಿವೆ. ಹೀಗೆ 1888ರಲ್ಲಿ ಕಾಂಗ್ರೆಸ್ಸು ಆದಾಯ ತೆರಿಗೆಯ ವಸೂಲಿಯ ಕನಿಷ್ಠ ಮಟ್ಟವನ್ನು ರೂ. 1000ಕ್ಕೆ ಹೆಚ್ಚಿಸಿ ಎಂದು ಸರಕಾರಕ್ಕೆ ಕರೆ ಕೊಟ್ಟಿತು. ಅದೇ ಅಧಿವೇಶನದಲ್ಲಿಯೇ ಕಾಂಗ್ರೆಸ್ಸು ಇದನ್ನು ದಾಖಲೆಗಳಲ್ಲಿ ಸೇರಿಸಿತು. ಇತ್ತೀಚೆಗೆ ಜಾರಿಗೆ ಬಂದಿರುವ ಉಪ್ಪಿನ ತೆರಿಗೆಯ ಹೆಚ್ಚುವರಿಯ ವಿಷಯದಲ್ಲಿ ನಮಗೆ ಅಸಮಾಧಾನವಾಗಿದೆ. ಏತಕ್ಕೆಂದರೆ ಇದರಿಂದ ಬಡಜನಗಳ ಮೇಲೆ ಈಗ ಇರುವ ಹೊರೆಯು ಮತ್ತಷ್ಟು ಹೆಚ್ಚುವುದಲ್ಲದೆ ಬ್ರಿಟಿಷ್ ಸಾಮ್ರಾಜ್ಯದ ಕಷ್ಟ ಕಾಲಗಳಲ್ಲಿ ಉಪಯೋಗಕ್ಕೆ ಬರಬಹುದಾದ ಒಂದು ಆಪದ್ಧನ. ಭಂಡಾರವನ್ನು ಶಾಂತಿ ಮತ್ತು ಸಮೃದ್ಧಿಯ ಕಾಲದಲ್ಲಿಯೇ ಬರಿದು ಮಾಡುವ

ರೀತಿಯಲ್ಲಿದೆ. ಇದೇ ರೀತಿ ಭೂ ಕಂದಾಯದ ವಿಷಯದಲ್ಲಿಯೂ ಕೂಡ ಕಾಂಗ್ರೆಸ್ಸು ತನ್ನ ಐದನೆಯ ವಾರ್ಷಿಕ ಅಧಿವೇಶನ (1889)ರಲ್ಲಿ ಸರಕಾರಕ್ಕೆ ಎಲ್ಲೆಡೆಯಲ್ಲಿಯೂ ಶಾಶ್ವತ ಕಂದಾಯ ಪದ್ಧತಿಯನ್ನು ಜಾರಿಗೆ ತರಬೇಕೆಂದು ಕರೆಕೊಟ್ಟಿತು. ಮರಳಿ 1902 ಕಾಂಗ್ರೆಸ್ಸು ಭಾರತೀಯ ಜನ ಜಂಗುಳಿಯು ನರಳುತ್ತಿರುವ ಹಾಗೂ ವಿಸ್ತಾರವಾಗಿ ವ್ಯಾಪಿಸುತ್ತಿರುವ ಅನೇಕ ರೋಗಗಳು ಆಹಾರದಲ್ಲಿ ಉಪ್ಪಿನ ಕೊರತೆಯಿಂದ ಎಂದು ಕಂಡು ಹಿಡಿಯಲ್ಪಟ್ಟಿದುದರಿಂದ ಉಪ್ಪಿನ ಮೇಲೆ ಇರುವ ತೆರಿಗೆಯು ಅತ್ಯಂತ ಹೆಚ್ಚೆಂದು ಸರಕಾರವನ್ನು ಖಂಡಿಸಿ ಉಪ್ಪಿನ ಮೇಲಿನ ತೆರಿಗೆಯನ್ನು ಕೊನೆಯ ಪಕ್ಷ 1888ರಲ್ಲಿ ಹೆಚ್ಚಿಸಿದಷ್ಟು ಮೊತ್ತದಿಂದಾಗಲೀ ಇಳಿಸಬೇಕೆಂದು ಒತ್ತಾಯಪಡಿಸಿತು. ಅದೇ ವರ್ಷದಲ್ಲಿ ಅದು ಹತ್ತಿಯ ಬಟ್ಟೆಯ ಮೇಲೆ 1895ರಲ್ಲಿ ವಿಧಿಸಿದ್ದ ಅಬಕಾರೀ ಸುಂಕವನ್ನು ರದ್ದುಪಡಿಸಬೇಕೆಂದು ಸರಕಾರವನ್ನು ಒತ್ತಾಯಪಡಿಸಿತು. ಏಕೆಂದರೆ ಈ ಸುಂಕವು ನೇಯಿಗೆ ಕೈಗಾರಿಕೆಯು ಧಾರಾಳವಾಗಿ ಬೆಳೆದು ಮುಂದುವರೆಯುವುದನ್ನು ತಡೆಗಟ್ಟುವುದಲ್ಲದೆ ಅದು ತಯಾರಿಕೆಗಾರರಿಗೆ ಅತ್ಯಂತ ಅನ್ಯಾಯವಾಗಿರುತ್ತದೆ ಹಾಗೂ ಒರಟಾದ ದೇಶೀಯ ತಯಾರಿಕೆಗಳನ್ನೇ ಕೊಂಡು ಉಡುವ ಜನಜಂಗುಳಿಯ ಮೇಲೆ ಅಧಿಕವಾದ ತೊಂದರೆಯನ್ನು ತರುತ್ತದೆ ಎಂಬುದಾಗಿ ತಿಳಿಸಲಾಗಿತ್ತು. ಡಿಸೆಂಬರ್ 1904ರಲ್ಲಿ ನಡೆದ ಅದರ 20ನೆಯ ಅಧಿವೇಶನದಲ್ಲಿ ಕಾಂಗ್ರೆಸ್ಸು ಜಿ.ಕೆ. ಗೋಖಲೆಯವರು ಮಂಡಿಸಿದ ಒಂದು ವ್ಯಾಪಕವಾದ ಮಸೂದೆಯಿಂದ ಈ ರೀತಿಯ ಒತ್ತಾಯದ ಬೇಡಿಕೆ ಸಲ್ಲಿಸಿತು. ನಾಣ್ಯ ಹಾಗೂ ವಿನಿಮಯ ರೀತಿ ನೀತಿಗಳಲ್ಲಿ ಆದ ಮಾರ್ಪಾಡಿನಿಂದ ಸಾರ್ವಜನಿಕ ಹಣದಲ್ಲಿ ಬರುವ ಹೆಚ್ಚುವರಿ ಆದಾಯುವನ್ನು ಈ ರೀತಿ ಉಪಯೋಗಿಸಬೇಕು. (ಅ) ಜನತೆಯ ಮೇಲೆ ಇರುವ ಕಂದಾಯದ ಹೊರೆಯನ್ನು ಹಗುರ ಮಾಡುವುದಕ್ಕೆ ಅದರಲ್ಲಿಯೂ ವಿಶೇಷವಾಗಿ. i) ಉಪ್ಪಿನ ತೆರಿಗೆಯಲ್ಲಿ ಮತ್ತಿಷ್ಟು ಖೋತಾ ಮಾಡುವುದು, ii) ವ್ಯವಸಾಯಗಾರರು ಸತತವಾಗಿ ಕೆಟ್ಟ ಸುಗ್ಗಿಗಳನ್ನೇ ಅನುಭವಿಸುತ್ತಿರುವ ಪ್ರದೇಶಗಳಲ್ಲಿ ಭೂ ಕಂದಾಯದ ಬೇಡಿಕೆಯಲ್ಲಿ ಕಡಿಮೆ ಮಾಡುವುದು ಮತ್ತು iii) ಹತ್ತಿಯ ಬಟ್ಟೆಗಳ ಮೇಲಿನ ಅಬಕಾರೀ ಸುಂಕವನ್ನು ರದ್ದುಮಾಡುವುದು. (ಆ) ಈ ರೀತಿ ಇಳಿಸುವವರೆಗೂ ಮೇಲೆ ಹೇಳಿದ ಹೆಚ್ಚುವರಿಯನ್ನು ಭಾಗಶಃ ಜನತೆಗೆ ನೇರ ಅನುಕೂಲ ಮಾಡಿಕೊಡುವಂತ ಕಾರ್ಯಗಳಲ್ಲಿ ಅಂದರೆ ವೈಜ್ಞಾನಿಕ ರೀತಿ ವ್ಯವಸಾಯುವನ್ನು ಮತ್ತು ಕೈಗಾರಿಕಾ ವಿದ್ಯಾಭ್ಯಾಸವನ್ನು ಮುಂದುವರೆಸುವುದು ಮತ್ತು ವೈದ್ಯಕೀಯ ಪರಿಹಾರಕ್ಕೆ ಹೆಚ್ಚು ಸೌಲಭ್ಯಗಳನ್ನು ಒದಗಿಸುವುದು ಇವುಗಳಲ್ಲಿ ತೊಡಗಿಸಿ ಮಿಕ್ಕ ಮೊಬಲಗನ್ನು ಸ್ಥಳೀಯ ಹಾಗೂ

ಮ್ಯುನಿಸಿಪಲ್ (ಪೌರಾಡಳಿತ) ಸಂಸ್ಥೆಗಳಿಗೆ ಸಹಾಯ ಮಾಡುವುದಕ್ಕೆ ಉಪಯೋಗಿಸಬೇಕು.

ಜನತೆಯ ಮೇಲೆ ಒಟ್ಟಾರೆ ಬೀಳುತ್ತಿದ್ದ ಹೊರೆಯ ವಿಚಾರದಲ್ಲಿ ಭಾರತದ ರಾಷ್ಟ್ರೀಯ ಕಾಂಗ್ರೆಸ್ ಮುಖಂಡರು ಭಾರತದಲ್ಲಿನ ಈ ತೆರಿಗೆಯ ಹೊರೆಯು ಅಸಹನೀಯ ಮತ್ತು ಜನತೆಯನ್ನು ನುಜ್ಜು-ಗುಜ್ಜು ಮಾಡುವಂತಹದಾಗಿದೆಯೆಂದೂ ಪರಿಗಣಿಸಿದ್ದರು. ದಾದಾಭಾಯಿ ನವರೋಜಿಯವರು ಮಾಡಿದ ರಾಷ್ಟ್ರೀಯ ವರಮಾನದ ಅಂದಾಜುಗಳ ಪ್ರಕಾರ 1871ರಲ್ಲಿ ಭಾರತದಲ್ಲಿ ತೆರಿಗೆ ರೂಪವಾಗಿ ವಸೂಲಾದ ಮೊತ್ತವು ಪೌಂ. 50 ಮಿಲಿಯನ್ ಇತ್ತೆಂದೂ ಈ ಮೊತ್ತವನ್ನು ಬಿಟ್ಟು ರಾಷ್ಟ್ರೀಯ ವರಮಾನದಿಂದ ಪೌಂ. 340 ಮಿಲಿಯನ್‌ಗಳ ಮೇಲೆ ಅಂದರೆ ಸುಮಾರು ಶೇಕಡ 15ರಷ್ಟು ಆಯಿತೆಂದೂ ತಿಳಿದು ಬಂತು. ಇದು ಪ್ರತಿ ವ್ಯಕ್ತಿಯ 40 ಷಿಲ್ಲಿಂಗ್ ವರಮಾನದಲ್ಲಿ 5 ಷಿಲ್ಲಿಂಗ್‌ನಷ್ಟು ತೆರಿಗೆ ಆಯಿತು. ಮಿಕ್ಕ ಹಲ ಕೆಲವು ದೇಶಗಳಲ್ಲಿ ಜನಗಳು ಕೊಡುತ್ತಿದ್ದ ತೆರಿಗೆಯ ಮೊತ್ತವನ್ನು ನೋಡಿದರೆ ಇದು ಬಹಳ ಕಡಿಮೆ ಎಂಬುದೇನೋ ನಿಜ. ಉದಾಹರಣೆಗೆ ಲಾರ್ಡ್ ಮೇಯೋರವರ ಪ್ರಕಾರ ತುರ್ಕಿಯಲ್ಲಿ ಪ್ರತಿವ್ಯಕ್ತಿ ಪ್ರತಿವರ್ಷ 7 ಷಿಲ್ಲಿಂಗ್ 5 ಪೆನ್ನಿ ತೆರಿಗೆ ಕೊಡುತ್ತಿದ್ದ. ಅದೇ ರಷ್ಯಾದಲ್ಲಿ 12 ಷಿಲ್ಲಿಂಗ್ ಎರಡು ಪೆನ್ನು, ಸ್ಪೇನಿನಲ್ಲಿ 18 ಷಿಲ್ಲಿಂಗ್ 5 ಪೆನ್ನು, ಆಸ್ಟ್ರೇಲಿಯಾದಲ್ಲಿ 19 ಷಿಲ್ಲಿಂಗ್ 7 ಪೆನ್ನಿ ಹಾಗೂ ಇಟಲಿಯಲ್ಲಿ 17 ಷಿಲ್ಲಿಂಗ್ ಈ ರೀತಿ ಇತ್ತು.

ಆದರೆ ಈ ಹೋಲಿಕೆಯು ಲೋಪದಿಂದ ಕೂಡಿದ ಮತ್ತು ತಪ್ಪುದಾರಿಗೆಳೆಯುವ ರೀತಿಯದೂ ಆಗಿತ್ತು. ದಾದಾಭಾಯಿ ನವರೋಜಿಯವರು ಸ್ಪಷ್ಟಪಡಿಸಿದಂತೆ ಒಂದು ತೆರಿಗೆಯ ಹೊರೆಯು ಅಸಹನೀಯುವಾಗಿದೆಯೇ ಇಲ್ಲವೇ ಎಂಬುದನ್ನು ನಿರ್ಣಯಿಸಬೇಕಾದರೆ ಆ ತೆರಿಗೆದಾರನ ವರಮಾನವನ್ನು ಗಣನೆಗೆ ತಂದುಕೊಳ್ಳಬೇಕು. ಹೀಗೆ ಒಬ್ಬ ಭಾರತೀಯನು ತನ್ನ ಅಲ್ಪ ವರಮಾನದ ಶೇಕಡ 15ರಷ್ಟನ್ನು ಸರಕಾರಕ್ಕೆ ತೆರಿಗೆಯ ರೂಪದಲ್ಲಿ ಕೊಡುತ್ತಿರುವಾಗ ಇಂಗ್ಲೀಷಿನವರು ತನ್ನ ಹೆಚ್ಚು ವರಮಾನವಾದ ವರ್ಷ ಒಂದಕ್ಕೆ ಪೌಂ. 30ರಲ್ಲಿ ಕೇವಲ ಶೇಕಡ 8ರಷ್ಟು ಮಾತ್ರ ತೆರಿಗೆ ರೂಪದಲ್ಲಿ ಕೊಡುತ್ತಿದ್ದ. ಅದೂ ಅಲ್ಲದೆ ಪೌಂ. 30 ರಷ್ಟು ವಾರ್ಷಿಕ ವರಮಾನದಲ್ಲಿ ಪೌಂ. 2 ಷಿಲ್ಲಿಂಗ್ 10ರಷ್ಟು ಕೊಟ್ಟರೂ ಕೂಡ ಅದು ಕೇವಲ ಜೀವನದ ಅವಶ್ಯಕತೆಗಳನ್ನು ಕೂಡ ಕೊಂಡುಕೊಳ್ಳಲು ಸಾಧ್ಯವಿಲ್ಲದ ವಾರ್ಷಿಕ 40 ಷಿಲ್ಲಿಂಗ್ ವರಮಾನದಲ್ಲಿ 9 ಷಿಲ್ಲಿಂಗ್ ಕೊಡುವಷ್ಟು ದುಸ್ಸಹ ತೆರಿಗೆಯಾಗಲಿಲ್ಲ.

ಭಾರತಕ್ಕೆ ಆದ ತೊಂದರೆ ಮತ್ತು ಅನ್ಯಾಯವು ಹೆಚ್ಚುತ್ತಲೇ ಬರುವುದಕ್ಕೆ ಕಾರಣಗಳಿದ್ದವು. ಅವೇನೆಂದರೆ ಸರಕಾರಕ್ಕೆ ಬಂದ ವರಮಾನದ ಬಹು ದೊಡ್ಡ ಭಾಗವು ಇದೇ ದೇಶದಲ್ಲಿಯೇ ವಿನಿಯೋಗವಾಗಿ ಅದನ್ನು ಫಲವತ್ತರ ಹಾಗೂ ಸಂಪದ್ಯುಕ್ತವನ್ನಾಗಿ ಮಾಡುವುದರ ಬದಲು ಹೋಂ ಚಾರ್ಜಸ್ ಮತ್ತು ಭಾರತದಲ್ಲಿ ಹೂಡಲಾಗಿದ್ದ ಇಂಗ್ಲೀಷ್ ಬಂಡವಾಳದ ಮೇಲಿನ ಬಡ್ಡಿಯ ರೂಪದಲ್ಲಿ ಇಂಗ್ಲೆಂಡಿಗೆ ಪೋಷಣೆಯಾಗಿ ಹೋಗಿಬಿಡುತ್ತಿತ್ತು. ಈ ರೀತಿಯಿಂದ ಶೋಷಣೆಯೊಂದು ಇಲ್ಲದೇ ಹೋಗಿದ್ದರೆ ಕಾಲಕ್ರಮೇಣ ಭಾರತದ ಉತ್ಪಾದನಾಶಕ್ತಿಯು ಹೆಚ್ಚುತ್ತ ಹೋಗಿ ಅದು ಕೊಡುವ ಪ್ರತಿಫಲಗಳು ಒಂದೇ ಮೊತ್ತವಾಗಿಯೇ ಮುಂದುವರೆದರೂ ಕೂಡ ವರಮಾನಕ್ಕೆ ಹೋಲಿಸಿದಲ್ಲಿ ಕಡಿಮೆಯಾಗುತ್ತ ಬರುವ ಸಂಭವವಿತ್ತು. ಆದರೆ, ವಸ್ತುಶಃ ಹೀಗಾದರೆ ರಾಷ್ಟ್ರೀಯ ವರಮಾನವು ತಟಸ್ಥವಾಗಿ ತೆರಿಗೆಯು ಹೆಚ್ಚುತ್ತ ಬಂದುದರಿಂದ ಆಹಾರ ಹೊರೆಯು ಕೇವಲ ದುಸ್ಸಹವಾಯಿತು.

ಇಲ್ಲಿ ಕೆಲವು ಅಂಶಗಳನ್ನು ನಾವು ಗಮನಿಸಬೇಕು :

1. ಹಿಂದಿನಿಂದಲೂ ಭೂ ಕಂದಾಯ ಪದ್ಧತಿಯಿತ್ತು.
2. ಆದರೆ ಭೂಮಿಯ ಮಾಲೀಕತ್ವದ ಮೇಲೆ ಕಾನೂನು ಬದ್ಧ ಹಕ್ಕು ಇರಲಿಲ್ಲ.
3. ಗ್ರಾಮಾಧಿಕಾರಿಗಳು ಭೂ ಕಂದಾಯವನ್ನು ನಿಗದಿಪಡಿಸುತ್ತಿದ್ದರು.
4. ವಾರ್ಷಿಕ ಉತ್ಪನ್ನದ 1/6 ಭಾಗದಿಂದ 1/3 ಭಾಗದವರೆಗೆ ನಿಗದಿಯಾಗುತ್ತಿತ್ತು.
5. ಭೂ ವ್ಯಾಜ್ಯಗಳು ಗ್ರಾಮದಲ್ಲಿಯೇ ಪರಿಹಾರವಾಗುತ್ತಿತ್ತು.
6. ಭೂಮಿಯನ್ನು ಪಟ್ಟಾ / ಅಥವಾ ಸರಪಳಿ ಮೂಲಕ ಅಳೆಯುವ ಪದ್ಧತಿಯಿರಲಿಲ್ಲ. ಹೆಜ್ಜೆ ಆಳ ಅಳತೆ, ಕೈ ಉದ್ದದ ಮೂಲಕ ಅಳತೆಯಿತ್ತು
7. ರಾಜರು ಭೂ ಕಂದಾಯ ಬಗ್ಗೆ ಮಧ್ಯೆ ತಲೆಹಾಕುತ್ತಿರಲಿಲ್ಲ. ಆದರೆ ಬ್ರಿಟೀಶರು ಬಂದ ಮೇಲೆ ಅದರ ಸ್ವರೂಪ ಬದಲಾಯಿತು.

ಬ್ರಿಟೀಶರು ಭಾರತದ ಬಹು ಭಾಗಗಳನ್ನು ಆಕ್ರಮಿಸಿದಂತೆ ಹಿಂದಿನಿಂದ ಅನೂಚಾನವಾಗಿ ಬಂದಿದ್ದ ಭೂ ಕಂದಾಯ ವ್ಯವಸ್ಥೆಯಲ್ಲಿ ಅನೇಕ ಮಹತ್ತರ ಬದಲಾವಣೆಗಳುಂಟಾದವು. ಭಾರತಕ್ಕೆ ಬಂದ ಬ್ರಿಟೀಶ್ ಈಸ್ಟ್ ಇಂಡಿಯಾ ಕಂಪನಿ ಮುಕ್ತ ವ್ಯಾಪಾರ ನೀತಿಯನ್ನು ಪಾಲಿಸುತ್ತ ಇದ್ದುದರಿಂದ ಅದಕ್ಕೆ ಸರಕು ಮತ್ತು ವ್ಯಾಪಾರದ ಮೇಲೆ ಹೆಚ್ಚು ತೆರಿಗೆ ಮತ್ತು ಸುಂಕಗಳನ್ನು ವಿಧಿಸಲಾಗಲಿಲ್ಲ. ಆದ್ದರಿಂದ ಅದು ರಾಜಕೀಯ ಕಂಪನಿಯಾಗಿ ಮಾರ್ಪಟ್ಟಾಗ, ವಿವಿಧ ಪ್ರದೇಶಗಳನ್ನು ಆಳಲು ಮೊದಲು ಮಾಡಿದಾಗ ತನ್ನೆಲ್ಲ ಖರ್ಚು ವೆಚ್ಚಗಳಿಗೆ ಭೂ ಕಂದಾಯದ ಮೂಲ

ವೊಂದನ್ನೇ ಅವಲಂಬಿಸಬೇಕಾಯಿತು. ಇದರಿಂದಾಗಿ ಕಂಪನಿಯ ಆಡಳಿತಗಾರರು ಭೂ ಕಂದಾಯದ ನಿಗದಿ, ವಸೂಲಿ ಮತ್ತು ವ್ಯವಸ್ಥೆಗೆ ಹೆಚ್ಚು ಗಮನ ಹರಿಸಿದರು.

ಭಾರತದಲ್ಲಿ ಬ್ರಿಟೀಷರ ಭೂ ಕಂದಾಯ ನೀತಿಯ ಬೆಳವಣಿಗೆಯನ್ನು 1965ರಲ್ಲಿ ರಾಬರ್ಟ್ ಕ್ಲೈವನು ಮೊಗಲ್ ಚಕ್ರವರ್ತಿ ಷಾ ಆಲಂ ನಿಂದ ದಿವಾನಿ ಹಕ್ಕನ್ನು ಬಂಗಾಳದ ಮೇಲೆ ದೊರಕಿಸಿಕೊಂಡ ಕಾಲಕ್ಕೆ ಕೊಂಡೊಯ್ಯಬಹುದು. ದಿವಾನಿ ಹಕ್ಕಿನಿಂದಾಗಿ ಕಂಪನಿಗೆ ಬಂಗಾಳದಲ್ಲಿ ಕಂದಾಯವನ್ನು ವಸೂಲು ಮಾಡುವ ಹಕ್ಕು ದೊರಕಿತು. ಆದರೆ ಆಗ ಕಂಪನಿ ನೇರವಾಗಿ ಕಂದಾಯವನ್ನು ವಸೂಲು ಮಾಡು ಸ್ಥಿತಿಯಲ್ಲಿರಲಿಲ್ಲ. ಇದಕ್ಕಾಗಿ ಕಂಪನಿಯು ಇಬ್ಬರು ಭಾರತೀಯರನ್ನು ಉಪ ದಿವಾನರನ್ನಾಗಿ ನೇಮಕ ಮಾಡಿತು. ಇವರು ಕಂಪನಿಗೆ ಕಂದಾಯವನ್ನು ವಸೂಲು ಮಾಡಿ ಒಪ್ಪಿಸುವ ಹೊಣೆ ಹೊತ್ತರು. ಆದರೆ ಇವರು ರೈತರನ್ನು ಸುಲಿಗೆ ಮಾಡುತ್ತ ಅವರಿಗೆ ಹೆಚ್ಚಿನ ಕಿರುಕುಳ ಕೊಡುತ್ತಿದ್ದರು. ಇದರಿಂದ ಕಂಪನಿಯ ಬೊಕ್ಕಸಕ್ಕೆ ಹೆಚ್ಚಿನ ಆದಾಯವೇನೂ ಆಗಲಿಲ್ಲ. ಇದನ್ನರಿತ ವಾರೆನ್ ಹೇಸ್ಟಿಂಗ್ಸ್‌ನು ಭೂ ಕಂದಾಯ ವ್ಯವಸ್ಥೆಯಲ್ಲಿ ಸುಧಾರಣೆಗಳನ್ನು ತರ ಬಯಸಿದನು. ಇದಕ್ಕಾಗಿ ಒಂದು ಸಮಿತಿಯನ್ನು ನೇಮಕ ಮಾಡಿ ಅದರ ವರದಿಯಂತೆ ಕೆಲವು ಸುಧಾರಣೆಗಳನ್ನು ಜಾರಿಗೆ ತಂದನು. ಈ ವರದಿಯಂತೆ ಅವನು ಕಂದಾಯದ ನೇರ ವಸೂಲಿಗೆ ತೀರ್ಮಾನಿಸಿ, ಕಂದಾಯದ ವಸೂಲಿಗೆ ಕಲೆಕ್ಟರ್ ಎಂಬ ಅಧಿಕಾರಿಗಳನ್ನು ನೇಮಿಸಿದನು. ಇವರಿಗೆ ಸಹಾಯ ನೀಡಲು ಭಾರತೀಯ ಅಧಿಕಾರಿಗಳನ್ನು ನೇಮಕ ಮಾಡಲಾಯಿತು. ಭೂ ಕಂದಾಯದ ಮೇಲ್ವಿಚಾರಣೆಗಾಗಿ ಕಲ್ಕತ್ತೆಯಲ್ಲಿ ಬೋರ್ಡ್ ಆಫ್ ರೆವಿನ್ಯೂ ವಿಭಾಗವನ್ನು ಏರ್ಪಡಿಸಲಾಗಿತ್ತು. ಮೊದಲಿಗೆ ವಾರನ್ ಹೇಸ್ಟಿಂಗ್ಸ್‌ನು ಭೂ ಕಂದಾಯವನ್ನು ಐದು ವರ್ಷಗಳಿಗೊಮ್ಮೆ ಹರಾಜಿನ ಮೂಲಕ ನಿಗದಿ ಮಾಡುವ ಜಾರಿಗೆ ತಂದನು. ಆದರೆ ಇದರಿಂದ ಅನುಕೂಲಕ್ಕಿಂತ ಪ್ರತಿಕೂಲಗಳೇ ಹೆಚ್ಚಾದವು. ರೈತರ ಶೋಷಣೆ ಮತ್ತಷ್ಟು ಹೆಚ್ಚಿತು. ಅವರು ತಮ್ಮ ಮನೆ ಮಠಗಳನ್ನು ಕಳೆದುಕೊಂಡು ನಿರ್ಗತಿಕರಾದರು. ದುರಾಸೆಯಿಂದ ಹೆಚ್ಚಿನ ಹಣಕ್ಕೆ ಕೂಗಿದ ಬಿಡ್ಡುದಾರರು ಸಹ ನಿರ್ದಿಷ್ಟ ಕಂದಾಯವನ್ನು ತೆತ್ತಲಾಗದೆ ಭಿಕಾರಿಗಳಾದರು ಮತ್ತು ತಲೆತಪ್ಪಿಸಿಕೊಂಡರು. ಇದರಿಂದ ಕಂಪನಿಗೆ ಆದ ಲಾಭ ಸೊನ್ನೆ. ಇದನ್ನು ಮನಗಂಡ ವಾರೆನ್ ಹೇಸ್ಟಿಂಗ್ಸ್‌ನು ಈ ಪದ್ಧತಿಯನ್ನು ರದ್ದುಗೊಳಿಸಿ 1777ರಲ್ಲಿ ಮೊದಲಿದ್ದ ಒಂದು ವರ್ಷಕ್ಕೊಮ್ಮೆ ಹರಾಜು ಹಾಕುವ ವ್ಯವಸ್ಥೆಯನ್ನು ಜಾರಿಗೆ ತಂದನು.

ವಾರೆನ್ ಹೇಸ್ಟಿಂಗ್ಸನ ನಂತರ ಅಧಿಕಾರಕ್ಕೆ ಬಂದ ಕಾರ್ನ್‌ವಾಲೀಸನು ಭೂ ಕಂದಾಯದ ವ್ಯವಸ್ಥೆಯಲ್ಲಿದ್ದ ಅವ್ಯವಸ್ಥೆ, ಅನಿಶ್ಚಿತತೆ ಮತ್ತು ಅವ್ಯವಹಾರಗಳನ್ನು ಹೋಗಲಾಡಿಸಲು ಮತ್ತು ಶಾಶ್ವತ ವ್ಯವಸ್ಥೆಯೊಂದನ್ನು ಏರ್ಪಡಿಸಲು ಶ್ರಮ ವಹಿಸಿದನು. ಇದಕ್ಕಾಗಿ ಇವನು ಬೋರ್ಡ್ ಆಫ್ ರೆವಿನ್ಯೂದ ಅಧ್ಯಕ್ಷ ಸರ್ ಜಾನ್ ಷೋರ್ ಮತ್ತು ದಾಖಲೆಗಳ ಅಧಿಕಾರಿ ಜೇಮ್ಸ್ ಗ್ರಾಂಟ್ ಅವರೊಡನೆ ದೀರ್ಘ ಚರ್ಚೆ ನಡೆಸಿದನು. ಇವರ ಚರ್ಚೆಯು ಭೂ ಕಂದಾಯವನ್ನು ಯಾರೊಂದಿಗೆ ನಿಗದಿ ಮಾಡಬೇಕು? ಜಮೀನ್ದಾರರೊಂದಿಗೆಯೋ ಅಥವಾ ನಿಜವಾಗಿ ಉಳುವವನೊಂದಿಗೊ? ಯಾರಿಗೆ ಭೂಮಿಯ ಒಡೆತನದ ಹಕ್ಕು ಇರಬೇಕು? ಭೂಮಿಯ ಉತ್ಪಾದನೆಯಲ್ಲಿ ರಾಜ್ಯದ ಭಾಗವೆಷ್ಟು? ಭೂ ಕಂದಾಯದ ನಿಗದಿ ಕೆಲವು ವರ್ಷಗಳಿಗಿರಬೇಕೆ ಅಥವಾ ಖಾಯಂ ಆಗಿರಬೇಕೆ ? ಎಂಬ ಪ್ರಶ್ನೆಗಳತ್ತ ಸುತ್ತುವರಿದಿದ್ದಿತು. ಇದರ ಪರಿಣಾಮವಾಗಿ ರೂಪಗೊಂಡ ವ್ಯವಸ್ಥೆ ಅಥವಾ ಪದ್ಧತಿಯೇ ಖಾಯಂ ಜಮೀನ್ದಾರಿ ಪದ್ಧತಿ. ಇದರ ಕರ್ತೃ ಮತ್ತು ಪಿತೃ ಲಾರ್ಡ್ ಕಾರನ್‌ವಾಲೀಸ್.

ಕಾರನ್‌ವಾಲೀಸನಿಂದ ರೂಪಿತವಾದ ಖಾಯಂ ಜಮೀನ್ದಾರಿ ಪದ್ಧತಿಯು 1790ರಲ್ಲಿ ಜಾರಿಗೆ ಬಂದಿತು. ಮೊದಲಿಗೆ ಕಂದಾಯವನ್ನು ಹತ್ತು ವರ್ಷಗಳ ಅವಧಿಗೆ ಗೊತ್ತು ಮಾಡಲಾಗಿದ್ದಿತು. 1793ರಲ್ಲಿ ಇದನ್ನು ರದ್ದುಗೊಳಿಸಿ ಭೂ ಕಂದಾಯವನ್ನು ಜಮೀನ್ದಾರರಿಗೆ ಖಾಯಂ ಆಗಿ ನಿಗದಿಪಡಿಸಲಾಯಿತು. ಜಮೀನ್ದಾರರಿಗೆ ಭೂಮಿಯ ಒಡೆತನದ ಹಕ್ಕನ್ನು ನೀಡಲಾಯಿತು. ಅವರು ಅದನ್ನು ವಂಶಪಾರಂಪರ್ಯವಾಗಿ ಅನುಭವಿಸುವ ಮತ್ತು ಮಾರುವ ಹಕ್ಕನ್ನು ಪಡೆದುಕೊಂಡರು. ಇದಕ್ಕೆ ಪ್ರತಿಯಾಗಿ ಅವರು ಸರ್ಕಾರಕ್ಕೆ ನಿಗದಿಪಡಿಸಿದ ಕಂದಾಯವನ್ನು ಕೊಡಬೇಕಾಗಿದ್ದಿತು. ಆಗ ಏರ್ಪಟ್ಟ ಒಡಂಬಡಿಕೆಯಂತೆ ಜಮೀನ್ದಾರರು ತಮ್ಮ ಆದಾಯದಲ್ಲಿ ಶೇ. 89 ಭಾಗವನ್ನು ಕಂದಾಯದ ರೂಪದಲ್ಲಿ ಕೊಡಬೇಕಾಗಿದ್ದಿತು. ಉಳಿದ ಶೇ. 11 ಭಾಗವನ್ನು ಅವರು ಕಂದಾಯವನ್ನು ವಸೂಲು ಮಾಡುವ ಶ್ರಮ ಮತ್ತು ಹೊಣೆಗಾರಿಕೆಗೆ ಪ್ರತಿಫಲವಾಗಿ ನೀಡಬೇಕಾಗಿದ್ದಿತು. ಕಾರನ್ ವಾಲೀಸ್‌ನು ಜಾರಿಗೆ ತಂದ ಈ ಖಾಯಂ ಜಮೀನ್ದಾರಿ ಪದ್ಧತಿಯನ್ನು ಜಾಗೀರುದಾರಿ, ಮಾಲ್ ಗುಜಾರಿ, ಬಿಸ್ವೆದಾರಿ ಇನ್ನು ಮುಂತಾದ ವಿವಿಧ ಹೆಸರುಗಳಲ್ಲಿ ಕರೆಯಲಾಗುತ್ತಿದ್ದಿತು. ಸರ್ಕಾರ ಈ ಪದ್ಧತಿಯನ್ನು ಜಾರಿಗೆ ತರಲು ಆರ್ಥಿಕ ಕಾರಣಗಳು ಮಾತ್ರವೇ ಅಲ್ಲದೆ ಆರ್ಥಿಕವಲ್ಲದ ಕಾರಣಗಳೂ ಇದ್ದವು. ಕಾರನ್‌ವಾಲೀಸನ ಪ್ರಮುಖ ಉದ್ದೇಶವೆಂದರೆ ಕಂಪನಿಗೆ ಕಡಿಮೆ ವೆಚ್ಚದಲ್ಲಿ ನಿರಂತರವಾಗಿ ಯಾವ ಅಡಚಣೆಯಿಲ್ಲದಂತೆ ಸಾಮಾನ್ಯ ಕಂದಾಯವನ್ನು ಒದಗಿಸಿ

ಕೊಡುವುದೇ ಆಗಿದ್ದಿತು. ಪರೋಕ್ಷವಾಗಿ ಅವನ ಉದ್ದೇಶ ಬಲಶಾಲಿಗಳು ಮತ್ತು ಪ್ರಭಾವ ಶಾಲಿಗಳು ಆಗಿದ್ದ ಜಮೀನ್ದಾರರ ಕೃತಜ್ಞತೆ ಮತ್ತು ಬೆಂಬಲವನ್ನು ಕಂಪನಿಯ ಆಳ್ವಿಕೆಗೆ ಸಿಗುವಂತೆ ನೋಡಿಕೊಳ್ಳುವುದಾಗಿತ್ತು.

ಆರ್ಥಿಕವಾಗಿ ಈ ಪದ್ಧತಿಯು ಕಂಪನಿಗೆ ನಿರ್ದಿಷ್ಟವಾದ ಮತ್ತು ನಿರಂತರವಾದ ಆದಾಯವನ್ನೊದಗಿಸಿತು. ಇದಲ್ಲದೆ ಕಂಪನಿಯ ಆಡಳಿತ ವೆಚ್ಚವನ್ನು ಕಡಿಮೆ ಮಾಡಿತು. ಈ ಪದ್ಧತಿಯು ಕೃಷಿಗೆ ಪ್ರೋತ್ಸಾಹ ನೀಡುವುದೆಂದು ಆಶಿಸಲಾಯಿತು. ಜಮೀನ್ದಾರರು ಬಂಜರು ಭೂಮಿಗಳನ್ನು ಕೃಷಿಗೆ ಅಳವಡಿಸುವರೆಂದು, ಹೊಸ ಕೃಷಿ ವಿಧಾನಗಳನ್ನು ಜಾರಿಗೆ ತರುವರೆಂದು ನಂಬಲಾಯಿತು. ಭೂಮಿಯ ಬಳಕೆ ಮತ್ತು ಉತ್ಪಾದನೆಗಳು ಹೆಚ್ಚು ಜನರ ಸೌಖ್ಯಕ್ಕೆ ಕಾರಣವಾಗುತ್ತದೆಂದು ಹೇಳಲಾಗಿದ್ದಿತ್ತು.

ರಾಜಕೀಯವಾಗಿ ಖಾಯಂ ಜಮೀನ್ದಾರಿ ಪದ್ಧತಿಯು ಕಂಪನಿಯ ಪ್ರಭುತ್ವಕ್ಕೆ ಜಮೀನ್ದಾರರ ಬೆಂಬಲ ಮತ್ತು ನಮ್ರತೆಯನ್ನು ದೊರಕಿಸಿಕೊಟ್ಟಿತು. ಅವರಿಗೆ ದೊರೆತ ಭೂ ಮಾಲೀಕತನ ಅವರನ್ನು ಕಂಪನಿಗೆ ಚಿರಋಣಿಗಳಾಗುವಂತೆ ಮಾಡಿತು. ಸೇಟನ್ ಕೌರ್ ಅಭಿಪ್ರಾಯ ಪಡುವಂತೆ ಇದರ ರಾಜಕೀಯ ಅನುಕೂಲತೆಗಳು; ಇದರ ಆರ್ಥಿಕ ನ್ಯೂನತೆಗಳನ್ನು ಮುಚ್ಚಿ ಹಾಕಿದವು.

ಸಾಮಾಜಿಕವಾಗಿ ಜಮೀನ್ದಾರರು ರೈತ ಸಮೂಹದ ನಿಜವಾದ ನಾಯಕರಾಗಿ ಮಾರ್ಪಟ್ಟು ಅವರ ಪ್ರಗತಿಗೆ ಶ್ರಮಿಸುವರೆಂದು, ವಿದ್ಯಾ ಪ್ರಸಾರ ಮತ್ತು ಧರ್ಮ ಕಾರ್ಯಗಳಲ್ಲಿ ತೊಡಗುವರೆಂದು ನಂಬಲಾಗಿದ್ದಿತ್ತು.

ಈ ಪದ್ಧತಿಯಿಂದ ಉಂಟಾದ ಅನುಕೂಲಗಳಿಗಿಂತ ಪ್ರತಿಕೂಲಗಳೇ ಹೆಚ್ಚು. ಇದರಿಂದ ಮೊದಲಿಗೆ ಕೆಲವೊಂದು ಕ್ಷಣಿಕವಾದ ಆರ್ಥಿಕ ಮತ್ತು ರಾಜಕೀಯ ಲಾಭಗಳುಂಟಾದರೂ ದೀರ್ಘಾವಧಿಯಲ್ಲಿ ಈ ಪದ್ಧತಿಯು ಶೋಷಣೆಯ ಮತ್ತು ದಬ್ಬಾಳಿಕೆಯ ಯಂತ್ರವಾಗಿ ಮಾರ್ಪಟ್ಟಿತು.

ಆರ್ಥಿಕವಾಗಿ ಇದರಿಂದ ಸರ್ಕಾರಕ್ಕೆ ನಷ್ಟವಾಯಿತೇ ವಿನಃ ಲಾಭವಾಗಲಿಲ್ಲ. ಕಂದಾಯವನ್ನು ಖಾಯಂ ಆಗಿ ನಿಗದಿ ಪಡಿಸಿದುದರಿಂದ ಸರ್ಕಾರವು ಅಭಿವೃದ್ಧಿ ಹೊಂದಿದ ಭೂಮಿಯಿಂದ ಮತ್ತು ಹೆಚ್ಚಿನ ಉತ್ಪಾದನೆಯಿಂದ ಅಧಿಕ ಕಂದಾಯವನ್ನು ಪಡೆಯುವ ಹಕ್ಕನ್ನು ಶಾಶ್ವತವಾಗಿ ಕಳೆದುಕೊಂಡಿತು. 1793ರಲ್ಲಿ ನಿಗದಿಪಡಿಸಿದ ಕಂದಾಯವೇ ಬ್ರಿಟೀಷರ ನಿರ್ಗಮನದವರೆಗೂ ಮುಂದುವರೆಯಿತು. ಇದಲ್ಲದೆ ಖಾಯಂ ಜಮೀನ್ದಾರಿ ಪದ್ಧತಿಯಿಂದ ನಿರೀಕ್ಷಿಸಿದ್ದ, ಭೂಮಿಯ ಅಭಿವೃದ್ಧಿ, ಅಧಿಕ ಉತ್ಪಾದನೆ, ರೈತರ ಸುಖ ಸಂವೃದ್ದಿಗಳು ಕೇವಲ ಮರೀಚಿಕೆಯಾಗಿದ್ದವು.

ರಾಜಕೀಯವಾಗಿ ಈ ಪದ್ಧತಿಯಿಂದಾಗಿ ಕಂಪನಿಗೆ ಜಮೀನ್ದಾರರ ಬೆಂಬಲ ದೊರಕಿದರೂ ಸಹ ಅದು ಅಲ್ಪ ಸಂಖ್ಯಾತರ ಬೆಂಬಲಕ್ಕಾಗಿ ಅಧಿಕ ಸಂಖ್ಯಾತರ ಬೆಂಬಲವನ್ನು ಬಲಿಕೊಟ್ಟಿತು. ಕೃಷಿಕರ ಹಕ್ಕುಗಳು ನಿರ್ಲಕ್ಷಿಸಲ್ಪಟ್ಟು ಅವರು ಕಂಪನಿಯನ್ನು ಶಪಿಸುವಂತಾಯಿತು. ಇದರಿಂದಾಗಿ ಗ್ರಾಮಾಂತರ ಪ್ರದೇಶಗಳಲ್ಲಿ ದ್ವೇಷ ವೈಷಮ್ಯಗಳಿಂದ ಕೂಡಿದ ಎರಡು ವರ್ಗಗಳು ಏರ್ಪಟ್ಟವು. ಅವುಗಳೆಂದರೆ, ಜಮೀನ್ದಾರರು ಮತ್ತು ಗೇಣಿದಾರರು, ಶೋಷಕರು ಮತ್ತು ಶೋಷಿತರು.

ಸಾಮಾಜಿಕವಾಗಿ ಇದರಿಂದ ಉಂಟಾದ ಪರಿಣಾಮಗಳು ಮತ್ತಷ್ಟು ತೀವ್ರವಾದವು. ಜಮೀನ್ದಾರರನ್ನು ಆಸ್ತಿಯ ಒಡೆಯರನ್ನಾಗಿ ಮಾಡಿ ನಿಜವಾದ ಕೃಷಿಕರನ್ನು ಗೇಣಿದಾರರನ್ನಾಗಿ ಮಾಡಲಾಯಿತು. ಅವರು ಪರತಂತ್ರ ಜೀವಿಗಳಾಗಿ ಮಾರ್ಪಟ್ಟು, ಜಮೀನ್ದಾರರ ಆಶ್ರಿತರು ಮತ್ತು ಅವಲಂಬಿತರಾಗಿ ಮಾರ್ಪಟ್ಟರು. ಜಮೀನ್ದಾರರು ಅವರ ಮೇಲೆ ನಡೆಸುವ ದಬ್ಬಾಳಿಕೆಗಳಿಗೆ ಮತ್ತು ಸುಲಿಗೆಗೆ ಅಂಕುಶವಿಲ್ಲದಂತಾಯಿತು. ಗೇಣಿದಾರರ ಜೀವನ ಜೀತಗಾರರ ಜೀವನವಾಗಿ ಮಾರ್ಪಟ್ಟು ಅಸಹನೀಯವಾಯಿತು. ಈ ಕುರಿತಂತೆ ಗಾಂಧಿ ಹೀಗೆ ಹೇಳಿದ್ದಾರೆ :

1. ಸಾಮೂಹಿಕ ವ್ಯವಸ್ಥೆಯಲ್ಲಿ ಯಾವನೇ ಬಿಡಿ ರೈತ ಇಂದಿನಂತೆ ತನ್ನ ಮನೆಯಲ್ಲಿ ದನಕರು ಇಟ್ಟುಕೊಳ್ಳ. ಅವು ಹವೆಯನ್ನು ಹೊಲಸುಮಾಡಿ, ಸ್ಥಳವನ್ನು ಕೊಳಕಾಗಿಸುತ್ತವೆ. ಪ್ರಾಣಿಗಳೊಡನೆಯೇ ವಾಸಿಸುವುದರಲ್ಲಿ ಬುದ್ಧಿವಂತಿಕೆಯೂ ಇಲ್ಲ, ಭೂತದಯೆಯೂ ಇಲ್ಲ. ಮನುಷ್ಯನ ಸೃಷ್ಟಿ ಅದಕ್ಕಾಗಿ ಆಗಿಲ್ಲ. ಸಾಮೂಹಿಕ ವ್ಯವಸ್ಥೆಯನ್ನು ಅನುಸರಿಸಿದರೆ ಇಂದು ದನಕರುಗಳು ಆಕ್ರಮಿಸುವ ಸ್ಥಳಾವಕಾಶ ರೈತನಿಗೇ ಉಳಿದೀತು.
2. ದನಕರುಗಳು ಸಂಖ್ಯೆ ಹೆಚ್ಚಿದಂತೆಲ್ಲ ರೈತ ಮನೆಯಲ್ಲಿ ಬದುಕುವುದೇ ದುಸ್ತರವಾಗುತ್ತದೆ. ಅಂತಲೇ ಕರುಗಳನ್ನು ಮಾರಿ, ಕೋಣಗಳನ್ನು ಕಡಿದೋ ಅಥವಾ ಹೊರಗೆ ಅಟ್ಟಿ ಅವನ್ನು ಹೊಟ್ಟೆಗಿಲ್ಲದೆ ಸಾಯಗೊಟ್ಟೋ ಬಿಡಬೇಕಾಗುತ್ತದೆ. ಸಹಕಾರ ತತ್ತ್ವದಂತೆ ಗೋರಕ್ಷಣೆ ಕೈಗೊಂಡರೆ ಈ ಅಮಾನುಷತೆಯನ್ನು ತಡೆಗಟ್ಟಬಹುದು.
3. ಸಾಮೂಹಿಕ ಗೋಪಾಲನೆ ಕೈಗೊಂಡರೆ ದನಕರುಗಳು ಬೇನೆ ಬಿದ್ದಾಗ ಪಶುವೈದ್ಯಚಿಕಿತ್ಸೆ ಖಂಡಿತವಾಗಿ ನೀಡಬಹುದು. ಸಾಮಾನ್ಯ ರೈತನಿಗೆ ತನ್ನಷ್ಟಕ್ಕೆ ತಾನೇ ಇದು ಅಸಾಧ್ಯ.
4. ಸಾಮೂಹಿಕ ಪದ್ಧತಿಯಲ್ಲಿ ಹಲವಾರು ಆಕಳುಗಳಿಗೆ ಒಂದು ಆರಿಸಿದ ಬೀಜದ ಹೋರಿಯ ವ್ಯವಸ್ಥೆ ಮಾಡಬಹುದು.

ಬೇರೆ ರೀತಿಯಲ್ಲಿ ದಾನ ಧರ್ಮದ ಹೊರತಾಗಿ ಇದು ಸಾಧ್ಯವೇ ಇಲ್ಲ.

5. ಒಟ್ಟಿನ ಹುಲ್ಲುಗಾವಲು ಅಥವಾ ದನಕ್ಕೆ ವ್ಯಾಯಾಮಕ್ಕೆ ಸ್ಥಳ ಸಹಕಾರ ಪದ್ಧತಿಯಲ್ಲಿ ಸುಲಭವಾಗಿ ಸಿಗುತ್ತದೆ. ಇಂದು ಬಿಡಿ ರೈತರಿಗೆ ಇಂಥ ಯಾವ ಸೌಕರ್ಯವೂ ಇಲ್ಲವೇ ಇಲ್ಲ.
6. ಸಾಮುದಾಯಿಕ ವ್ಯವಸ್ಥೆಯಲ್ಲಿ ಮೇವಿಗಾಗಿ ಖರ್ಚು ಬಹುಮಟ್ಟಿಗೆ ಕಡಿಮೆ.
7. ಒಳ್ಳೆಯ ಬೆಲೆಗೆ ಹಾಲಿನ ಮಾರಾಟಕ್ಕೆ ಸೌಕರ್ಯ ಹೆಚ್ಚುತ್ತದೆ. ವ್ಯಕ್ತಿಗತವಾಗಿ ಅದನ್ನು ಬೆರಿಕೆಮಾಡಿ ಆಸೆಗೆ ಒಳಗಾಗಬೇಕಿಲ್ಲ.
8. ಪ್ರತಿಯೊಂದು ದನಕ್ಕೂ ಬಿಡಿಯಾಗಿ ತಳಿ ಅರ್ಹತೆಯ ಪರೀಕ್ಷೆ ನಡೆಸುವುದು ಸಾಧ್ಯವಿಲ್ಲ. ಇಡೀ ಊರಿನ ಎಲ್ಲ ದನಕರುಗಳಿಗಾದರೆ ಇದು ಸುಲಭ. ತಳಿ ಅಭಿವೃದ್ಧಿಕಾರ್ಯವೂ ಇದರಿಂದ ಸುಲಭವಾಗುತ್ತದೆ.
9. ಮೇಲಿನ ಅನುಕೂಲಗಳೇ ಸಾಕು ಸಹಕಾರ ಪದ್ಧತಿಯಂತೆ ಪಶುಪಾಲನೆಯ ಪರವಾಗಿ ವಾದಿಸಲು. ವ್ಯಕ್ತಿಗತ ಪಾಲನಪದ್ಧತಿಯಿಂದ ನಮ್ಮ ಸ್ಥಿತಿ, ದನಕರುಗಳ ಸ್ಥಿತಿ– ಎರಡೂ ಶೋಚನೀಯವಾಗಿರುವುದೇ ಅದರ ಪರ ಅತಿ ಪ್ರಬಲ ವಾದ. ಈ ಮುಖ್ಯವಾದ ಪರಿವರ್ತನೆ ಉಂಟುಮಾಡಿ ತಮ್ಮನ್ನೂ ದನಕರುಗಳನ್ನೂ ಉಳಿಸಿಕೊಳ್ಳಬಹುದು.

ಸಹಕಾರ ಬೇಸಾಯ ಕೈಗೊಂಡಲ್ಲದೆ ಬೇಸಾಯದ ಪೂರ್ಣ ಪ್ರಯೋಜನವನ್ನೂ ನಾವು ಪಡೆಯಲಾರೆವೆಂಬುದು ನನ್ನ ದೃಢನಂಬಿಕೆ. ಒಂದು ಊರಿನ ನೂರು ಕುಟುಂಬಗಳು ಒಟ್ಟಿಗೆ ಬೇಸಾಯಮಾಡಿ ಆದಾಯವನ್ನು ಹಂಚಿಕೊಳ್ಳುವುದು ಭೂಮಿಯನ್ನು ನೂರು ಪಾಲಾಗಿ ಹಂಚಿಕೊಳ್ಳುವುದಕ್ಕಿಂತ ತರ್ಕಶುದ್ಧವಲ್ಲವೆ? ಭೂಮಿಗೆ ಅನ್ವಯಿಸುವುದೇ ದನಕ್ಕೂ ಅನ್ವಯಿಸೀತು.

(ಅರ್ಥವಿಚಾರ ಪುಟ. 159–160)

ಗಾಂಧಿಯವರ ನಿಲುವಿಗೂ ಬ್ರಿಟೀಶ್ ಆಢಳಿತಗಾರರ ನಿಲುವಿಗೂ ಅಜಗಜಾಂತರ ವ್ಯತ್ಯಾಸವಿದೆ. ಗಾಂಧಿಯವರು ಸಾಮೂಹಿಕ ವ್ಯವಸ್ಥೆ ತಳಿ ಅಭಿವೃದ್ಧಿಯ ಕುರಿತು ಹೇಳಿರುವ ವಿವರಗಳು ತುಂಬಾ ಭಿನ್ನವಾಗಿದೆ. ಸಾಮೂಹಿಕ ಸಹಕಾರಿ ಪದ್ಧತಿಯು ಅನೇಕ ಸಮಸ್ಯೆಗಳನ್ನು ನಿವಾರಿಸುತ್ತದೆಯೆಂದು ಅವರ ಅಭಿಪ್ರಾಯವಾಗಿದೆ. ಬ್ರಿಟೀಷರ

ಆಳ್ವಿಕೆಯ ಕಾಲದಲ್ಲಿ ಜಾರಿಗೆ ಬಂದ ಭೂ ಕಂದಾಯ ಪದ್ಧತಿಯಲ್ಲಿ ಮಹಲ್ವಾರಿ ಪದ್ಧತಿಯೂ ಒಂದಾಗಿದ್ದಿತ್ತು. ಈ ಪದ್ಧತಿಯಲ್ಲಿ ಭೂ ಕಂದಾಯದ ನಿಗದಿಗೆ ಗ್ರಾಮ ಅಥವಾ ಮಹಲ್ ಅನ್ನು ಒಂದು ಘಟಕ ಅಥವಾ ಯುನಿಟ್‌ಆಗಿ ತೆಗೆದು ಕೊಳ್ಳಲಾಗಿದ್ದಿತು. ಗ್ರಾಮದ ಭೂಮಿಯು ಗ್ರಾಮದ ಸಮಾಜಕ್ಕೆ ಸೇರಿರುತ್ತಿತ್ತು. ಈ ಭೂಮಿಯನ್ನು ಸಾಮೂಹಿಕವಾಗಿ ಉಳುತ್ತಿದ್ದವರೆಲ್ಲರೂ ಸಾಮೂಹಿಕವಾಗಿ ಭೂ ಕಂದಾಯವನ್ನು ಸಲ್ಲಿಸಬೇಕಾಗಿದ್ದಿತು. ಇದರಲ್ಲಿ ಜಂಟಿ ಹೊಣೆಗಾರಿಕೆ ಇದ್ದಿತು. ಯಾರಾದರೂ ಈ ಹೊಣೆಗಾರಿಕೆಯಿಂದ ತಪ್ಪಿಕೊಂಡಲ್ಲಿ ಅವನ ಸದಸ್ಯತ್ವವನ್ನು ರದ್ದುಗೊಳಿಸಿ ಅವನ ಭೂಮಿಯನ್ನು ಗ್ರಾಮ ಸಮಾಜಕ್ಕೆ ಸೇರಿಸಿಕೊಳ್ಳಲಾಗುತ್ತಿತ್ತು. ಗ್ರಾಮ ಸಮಾಜಕ್ಕೆ ಗ್ರಾಮದ ಸಾಮಾನ್ಯ ಭೂಮಿಯೇ ಅಲ್ಲದೆ ಅರಣ್ಯ, ಹುಲ್ಲುಗಾವಲು ಇತ್ಯಾದಿಗಳ ಮೇಲೂ ಒಡೆತನವಿದ್ದಿತು. ಈ ಪದ್ಧತಿಯು ಉತ್ತರ ಭಾರತದ ಹಲವಾರು ಪ್ರದೇಶಗಳಲ್ಲಿ ಅಸ್ತಿತ್ವದಲ್ಲಿದ್ದಿತು. ಮಹಲ್ವಾರಿ ಪದ್ಧತಿಯಲ್ಲಿ ಬೆಂಟಿಂಕನ ಕಾಲದಲ್ಲಿ ಕೆಲವು ಸುಧಾರಣೆಗಳು ನಡೆದವು. ಇದರಂತೆ ಸರ್ಕಾರದ ಪಾಲು ಶೇ. 66 ಎಂದು ಹೇಳಿ ಇದನ್ನು 30 ವರ್ಷಗಳ ಅವಧಿಗೆ ನಿಗದಿಪಡಿಸಲಾಯಿತು. ಡಾಲ್‌ಹೌಸಿಯ ಕಾಲದಲ್ಲಿ ಇದನ್ನು ಶೇ. 50ಕ್ಕೆ ಇಳಿಸಲಾಯಿತು.

ಈ ಪದ್ಧತಿಯು ಮುಖ್ಯವಾಗಿ ದಕ್ಷಿಣ ಭಾರತದಲ್ಲಿ ಬ್ರಿಟೀಷ್ ಆಡಳಿತಗಾರರು ಜಾರಿಗೆ ತಂದ ಕಂದಾಯ ಪದ್ಧತಿ. ರೈತ್ವಾರಿ ಪದ್ಧತಿಯ ಪ್ರಕಾರ ನೊಂದಣಿಯಾದ ಪ್ರತಿಯೊಬ್ಬ ಭೂ ಹಿಡುವಳಿದಾರರನ್ನು ಭೂ ಮಾಲೀಕನೆಂದು ಪರಿಗಣಿಸಲಾಗಿತ್ತು. ಅವನು ಸರ್ಕಾರ ನಿಗದಿ ಪಡಿಸಿದ ಭೂ ಕಂದಾಯವನ್ನು ನೇರವಾಗಿ ಸಲ್ಲಿಸುವುದಕ್ಕೆ ಹೊಣೆಗಾರನಾಗಿದ್ದನು. ಇಂತಹ ರೈತನು ತನ್ನ ಭೂಮಿಯನ್ನು ಮಾರುವುದಕ್ಕೆ ಗೇಣಿ ಕೊಡುವುದಕ್ಕೆ, ಅಡವಿಡುವುದಕ್ಕೆ ಮತ್ತು ವರ್ಗಾಯಿಸುವುದಕ್ಕೆ ಅಧಿಕಾರ ಹೊಂದಿದ್ದನು. ಎಲ್ಲಿಯವರೆಗೆ ಅವನು ಸರ್ಕಾರಕ್ಕೆ ತನ್ನ ಕಂದಾಯವನ್ನು ನಿಗದಿಪಡಿಸಿದಂತೆ ಸಲ್ಲಿಸುತ್ತಿದ್ದನೋ ಅಲ್ಲಿಯವರೆಗೆ ಸರ್ಕಾರಕ್ಕೆ ಅವನನ್ನು ಭೂಮಿಯಿಂದ ಉಚ್ಚಾಟಿಸುವ ಹಕ್ಕಿರಲಿಲ್ಲ. ಈ ಪದ್ಧತಿಯನ್ನು ಮೊಟ್ಟಮೊದಲಿಗೆ ಮದ್ರಾಸ್ ಪ್ರಾಂತದ ಬಾರಾಮಹಲ್ ಪ್ರದೇಶದಲ್ಲಿ 1792ರಲ್ಲಿ ಜಾರಿಗೆ ತರಲಾಯಿತು.

ಈ ಪದ್ಧತಿಯನ್ನು ಮದ್ರಾಸ್ ಪ್ರಾಂತ್ಯದಾದ್ಯಂತ ಜಾರಿಗೆ ತರುವುದಕ್ಕೆ ಕಾರಣಕರ್ತನಾದವನು ಥಾಮಸ್ ಮನ್ರೊ. ಇವನು 1820ರಿಂದ 1827ರವರೆಗೆ ಮದ್ರಾಸಿನ ರಾಜ್ಯಪಾಲನಾಗಿದ್ದನು. ಹಿಂದಿನ ಪದ್ಧತಿಯಲ್ಲಿದ್ದ ಲೋಪದೋಷಗಳನ್ನು ಇಲ್ಲವಾಗಿಸಿ ರೈತ್ವಾರಿ ಪದ್ಧತಿಯನ್ನು ಎಲ್ಲ ಕಡೆ ಜಾರಿಗೆ ತಂದನು. ಇದರ ಪ್ರಕಾರ

ರೈತರು ತಮ್ಮ ಭೂಮಿಯ ಉತ್ಪಾದನೆಯ ಭಾಗವನ್ನು ಕಂದಾಯ ರೂಪದಲ್ಲಿ ನೀಡಬೇಕೆಂದು ನಿಗದಿಪಡಿಸಲಾಯಿತು. ಈ ಕಂದಾಯವನ್ನು ಹಣದ ರೂಪದಲ್ಲಿ ಕೊಡಬೇಕಾಗಿದ್ದಿತು. ಭೂಮಿಯ ನಿಜವಾದ ಉತ್ಪಾದನೆ ಮತ್ತು ಮಾರುಕಟ್ಟೆಯ ಬೆಲೆಗಳು ಈ ಕಂದಾಯದ ಮೇಲೆ ಯಾವ ಪ್ರಭಾವವನ್ನು ಬೀರುವಂತಿರಲಿಲ್ಲ. ಮನ್ರೊ ಜಾರಿಗೆ ತಂದ ಪದ್ಧತಿಯು 30 ವರ್ಷಗಳ ಕಾಲ ಜಾರಿಯಲ್ಲಿದ್ದಿತು. ಈ ಪದ್ಧತಿಯ ಪ್ರಕಾರ ಅತಿ ಹೆಚ್ಚು ಕಂದಾಯವನ್ನು ವಿಧಿಸಿದ್ದುದರಿಂದ ರೈತರು ತೀವ್ರವಾದ ಕಷ್ಟನಷ್ಟಗಳಿಗೆ ಗುರಿಯಾದರು. ಭೂ ಕಂದಾಯವನ್ನು ಸಲ್ಲಿಸಲೋಸುಗವಾಗಿ ಅವರು ಖಾಸಗಿ ಲೇವಾದೇವಿಗಾರರಾಗಿದ್ದ ಚೆಟ್ಟಿಯಾರರ ಕಪಿಮುಷ್ಟಿಯಲ್ಲಿ ಸಿಲುಕಿದರು. ಕಂದಾಯ ವಸೂಲು ಮಾಡುವ ಅಧಿಕಾರಿಗಳು ನಿರ್ದಯಿಗಳು ಮತ್ತು ಲಂಚಗುಳಿಗಳು ಆಗಿದ್ದುದರಿಂದ ರೈತರ ಗೋಳು ಮತ್ತಷ್ಟು ಹೆಚ್ಚಿ, ರೈತರಿಗೆ ಕೊಡುತ್ತಿದ್ದ ಶಿಕ್ಷೆಗಳು, ಅವಮಾನಗಳು ಮತ್ತು ಕಿರುಕುಳಗಳು ಮೇರೆ ಮೀರಿದವು. ಇವು ಬ್ರಿಟೀಷ್ ಪಾರ್ಲಿಮೆಂಟಿನ ಸದಸ್ಯರ ತೀವ್ರವಾದ ಟೀಕೆಗಳಿಗೂ ಒಳಗಾದವು.

1855ರಲ್ಲಿ ಮತ್ತೊಮ್ಮೆ ಎಲ್ಲ ಭೂಮಿಗಳ ಭೂ ಮಾಪನ ಕಾರ್ಯವನ್ನು ನಡೆಸಲಾಯಿತು. 1864ರಲ್ಲಿ ಜಾರಿಗೆ ಬಂದ ಕಾನೂನಿನ ಪ್ರಕಾರ ಕಂದಾಯವನ್ನು ವಾರ್ಷಿಕ ಉತ್ಪಾದನೆಯ ಭಾಗಕ್ಕೆ ಮಿತಿಗೊಳಿಸಲಾಯಿತು. ಆದರೆ ಈ ನಿರ್ಧಾರಗಳು ಕಾಗದದಲ್ಲಿ ಉಳಿದವೇ ಹೊರತು ಕಾರ್ಯರೂಪಕ್ಕೆ ಬರಲಿಲ್ಲ. 1867–68ರಲ್ಲಿ ಮದ್ರಾಸ್ ಪ್ರಾಂತವು ತೀವ್ರವಾದ ಬರಗಾಲಕ್ಕೆ ಈಡಾಯಿತು. ರೈತರ ನಿಜವಾದ ಜೀವನದ ಚಿತ್ರಣ ಕಣ್ಣಿಗೆ ಬಿದ್ದಿತು.

ಬೊಂಬಾಯಿ ಪ್ರಾಂತದಲ್ಲಿಯೂ ಕೂಡ ಮದ್ರಾಸಿನ ರೈತ್ವಾರಿ ಪದ್ಧತಿಯನ್ನು ಜಾರಿಗೆ ತರಲಾಯಿತು. ಇದರ ಉದ್ದೇಶ ಜಮೀನ್ದಾರರ ಶೋಷಣೆಯನ್ನು ತಪ್ಪಿಸಿ ರೈತರಿಗೆ ಭೂ ಒಡೆತನವನ್ನು ನೀಡುವುದಾಗಿತ್ತು. 1819 ರಿಂದ 27ರವರೆಗೆ ಬೊಂಬಾಯಿಯ ರಾಜ್ಯಪಾಲನಾಗಿದ್ದ ಎಲ್ಫಿನ್‌ಸ್ಟೋನನು ಈ ಬಗೆಗೆ ವಿವರವಾದ ವರದಿಯೊಂದನ್ನು ತಯಾರಿಸಿದನು. 1824–28ರ ಅವಧಿಯಲ್ಲಿ ಈ ಭಾಗದ ಎಲ್ಲ ಭೂಮಿಯನ್ನು ವಿವರವಾಗಿ ಭೂ ಮಾಪನ ಮಾಡಿಸಿ ಕಂದಾಯವನ್ನು ನಿಗದಿಪಡಿಸಲು ಕ್ರಮ ಕೈಗೊಳ್ಳಲಾಯಿತು. ಇದರ ಪ್ರಕಾರ ವಾರ್ಷಿಕ ಉತ್ಪನ್ನದಲ್ಲಿ ಸರ್ಕಾರದ ಪಾಲು ಶೇ. 55 ಎಂದು ನಿಷ್ಕರ್ಷಿಸಲಾಯಿತು (ವಿವರಗಳಿಗೆ ನೋಡಿ : ರಾಮಲಿಂಗಪ್ಪ, 1995, ಪು. 705–709).

ಬ್ರಿಟಿಶ್ ಕಾಲದ ಭೂಕಂದಾಯ ನೀತಿಯನ್ನು ಚಾರಿತ್ರಿಕವಾಗಿ ವಿಶ್ಲೇಷಿದವರು ಬಿಪನ್ ಚಂದ್ರ.

> ಜಮೀನ್ದಾರಿ ಮತ್ತು ರೈತವಾರಿ ಪದ್ಧತಿ ಎರಡೂ, ದೇಶದ ಸಾಂಪ್ರದಾಯಿಕ ಭೂವ್ಯವಸ್ಥೆಯಿಂದ ಮೂಲಭೂತವಾಗಿ ಬೇರೆಯೇ ಆಗಿದ್ದವು. ಭೂಮಿಗೆ ಸಂಬಂಧಿಸಿದಂತೆ, ಬ್ರಿಟಿಶರು, ಖಾಸಗಿ ಆಸ್ತಿ ಎಂಬ ಹೊಸ ರೂಪವನ್ನು ಸೃಷ್ಟಿಸಿದರು. ಈ ಬದಲಾವಣೆಯಿಂದ ಆದ ಅನುಕೂಲವು ಉಳಿಮೆದಾರರಿಗೆ ತಲುಪುತ್ತಿರಲಿಲ್ಲ. ದೇಶದ ಎಲ್ಲೆಡೆ, ಭೂಮಿಯನ್ನು ಮಾರಾಟ ಮಾಡಬಹುದಾಗಿತ್ತು, ಒತ್ತೆ ಇಡಬಹುದಾಗಿತ್ತು ಮತ್ತು ಪರಭಾರೆ ಮಾಡಬಹುದಾಗಿತ್ತು. ಮುಖ್ಯವಾಗಿ, ಸರ್ಕಾರದ ಕಂದಾಯವನ್ನು ರಕ್ಷಿಸಲು, ಈ ಕ್ರಮವನ್ನು ತೆಗೆದುಕೊಳ್ಳಲಾಯಿತು. ಭೂಮಿಯನ್ನು ವರ್ಗಾವಣೆ ಮಾಡಲು ಅಥವಾ ಮಾರಾಟ ಮಾಡಲು ಅವಕಾಶ ಇಲ್ಲದಿದ್ದರೆ, ಯಾವುದೇ ಉಳಿತಾಯ ಅಥವಾ ಮಾರಾಟ ಮಾಡಲು ಅವಕಾಶ ಇಲ್ಲದಿದ್ದರೆ, ಯಾವುದೇ ಉಳಿತಾಯ ಅಥವಾ ಆಸ್ತಿಯನ್ನು ಹೊಂದಿರದ ಉಳುಮೆದಾರನಿಂದ ಕಂದಾಯವನ್ನು ವಸೂಲು ಮಾಡಲು ಸರ್ಕಾರಕ್ಕೆ ಕಷ್ಟವಾಗುತ್ತಿತ್ತು. ಈಗ ಅವನು ತನ್ನ ಭೂಮಿಯ ಆಧಾರದ ಮೇಲೆ ಸಾಲವನ್ನು ಮಾಡಿ ಅಥವಾ ಭೂಮಿಯ ಸ್ವಲ್ಪ ಭಾಗವನ್ನು ಮಾರಿ ತನ್ನ ಭೂಕಂದಾಯವನ್ನು ಪಾವತಿ ಮಾಡಬಹುದಾಗಿತ್ತು. ಅವನು ಹಾಗೆ ಮಾಡಲು ನಿರಾಕರಿಸಿದರೆ, ಸರ್ಕಾರವು ಅವನ ಭೂಮಿಯನ್ನು ಹರಾಜು ಹಾಕಿ, ಹಣವನ್ನು ಪಡೆಯಬಹುದಾಗಿತ್ತು. ಭೂಮಿಯ ಖಾಸಗಿ ಮಾಲೀಕತ್ವವನ್ನು ಜಾರಿಗೆ ತರಲು ಮತ್ತೊಂದು ಕಾರಣವೆಂದರೆ, ಮಾಲೀಕತ್ವದ ಹಕ್ಕಿನಿಂದ ಭೂಮಾಲೀಕ ಅಥವಾ ರೈತ ಅಭಿವೃದ್ಧಿಗೆ ಶ್ರಮಿಸುತ್ತಾನೆ ಎಂಬ ನಂಬಿಕೆಯಾಗಿತ್ತು.
>
> ಬ್ರಿಟಿಷರು ಭೂಮಿಯನ್ನು ಒಂದು ಸರಕನ್ನಾಗಿ ಮಾಡಿ, ಅದನ್ನು ಸುಲಭವಾಗಿ ಕೊಳ್ಳಬಲ್ಲ ಮತ್ತು ಮಾರಾಟಮಾಡಬಲ್ಲ ಅವಕಾಶ ಕಲ್ಪಿಸಿ, ದೇಶದಲ್ಲಿ ಆಗ ಚಾಲ್ತಿಯಲ್ಲಿದ್ದ ಭೂವ್ಯವಸ್ಥೆಯಲ್ಲಿ ಮೂಲಭೂತ ಬದಲಾವಣೆಯನ್ನು ತಂದರು. ಭಾರತೀಯ ಗ್ರಾಮಗಳ ಸ್ಥಿರತೆ ಮತ್ತು ನಿರಂತರತೆಯು ಇದರಿಂದ ಅಲುಗಾಡಿತು. ವಾಸ್ತವವಾಗಿ, ಇಡಿಂಯಾಗಿ ಗ್ರಾಮ ವ್ಯವಸ್ಥೆಂಯೇ ಒಡೆಯಲಾರಂಭಿಸಿತು. (ಆಧುನಿಕ ಭಾರತದ ಇತಿಹಾಸ ಡಾ॥ ಎಚ್.ಎಸ್. ಗೋಪಾಲ ರಾವ್ 2012 ಪುಟ. 123)

ಜಮೀನುದಾರಿ ಪದ್ಧತಿಯು ವ್ಯಾಪ್ತಿಯಲ್ಲಿದ್ದ ಭೂಮಿಯು ಶೇಕಡಾ ನಲವತ್ತೆಂಟು ಇರುತ್ತಿತ್ತು. ಇದರ ಪೈಕಿ 29 ಶೇಕಡಾ ರಷ್ಟಕ್ಕೆ ಕಂದಾಯವು 20 ರಿಂದ 30 ವರ್ಷಗಳ ವರೆಗೆ ನಿಗದಿಮಾಡಲ್ಪಟ್ಟು ಮಿಕ್ಕ 19% ರಷ್ಟಕ್ಕೆ ಶಾಶ್ವತವಾದ ಕಂದಾಯ ನಿಗದಿಯಾಗಿತ್ತು. (ತಾರಾಚಂದ್, ಪೂರ್ವೋಕ್ತ, ಪು. 407)

ಈ ರೀತಿ ಶಾಶ್ವತ ಕಂದಾಯ ನಿಗದಿಯಾದ ಪ್ರದೇಶಗಳನ್ನು ಬಿಟ್ಟರೆ ಮಿಕ್ಕೆಲ್ಲೆಡೆಗಳಲ್ಲಿಯೂ ಭೂ ಕಂದಾಯದ ಮೊತ್ತವು ಬಹಳ ಹೆಚ್ಚಾಗಿದ್ದು ರೈತನ ವರಮಾನದಲ್ಲಿ ಜೀವನದ ಖರ್ಚು ಕಳೆದು ಜಮೀನು ಸುಧಾರಣೆಗೆ ಏನೂ ಉಳಿಯುತ್ತಿರಲಿಲ್ಲ. (ಅದೇ)

ಶಾಶ್ವತವಾದ ನಿಗದಿಯಾಗಿದ್ದ ಬಂಗಾಳದ ಜಿಲ್ಲೆಗಳಲ್ಲಿ ಗೇಣಿಯು ಜಮೀನಿನ ಒಟ್ಟು ಉತ್ಪನ್ನದಲ್ಲಿ 11% ಕ್ಕಿಂತ ಸ್ವಲ್ಪ ಹೆಚ್ಚಾಗಿತ್ತು. ಅದೇ ಗುಜರಾಥಿನಲ್ಲಿದ್ದ ಶಾಶ್ವತ ನಿಗದಿ ಇಲ್ಲದೆಯೇ ಭೂ ಕಂದಾಯವು ಜಮೀನಿನ ಉತ್ಪನ್ನದ 20% ರಷ್ಟಿತ್ತು. ಇದು ಸರಿ ಸುಮಾರು ಬಂಗಾಳದ ಅಂಕಿ–ಅಂಶಗಳ ದ್ವಿಗುಣವಾಯಿತು. ಉತ್ತರ ಭಾರತದಲ್ಲಿ ಗೇಣಿಯ 50%ರಷ್ಟು ಭೂ ಕಂದಾಯವಾಗಿ ಕೊಡಲ್ಪಟ್ಟರೂ ಭೂ ಮಾಲೀಕನ ಭಾಗವು ಸೆಸ್‌ಗಳಿಂದ ಕಂದಾಯಿಸಲ್ಪಡುತ್ತಿದ್ದುದಲ್ಲದೆ (ಗೇಣಿಯ 8% ರಷ್ಟು) ಅವನು ಗ್ರಾಮದ ತಳವಾರ ಪಟೇಲನ ಸೇವೆಯ ಖರ್ಚು ವಹಿಸಬೇಕಾಗಿತ್ತು. ಪಂಜಾಬಿನಲ್ಲಿ ಸೆಸ್‌ಗಳು ಗೇಣಿಯ 12% ಆಗಿರುತ್ತಿದ್ದವು. ಮಧ್ಯ ಪ್ರಾಂತ್ಯಗಳಲ್ಲಿ ಗೇಣಿಯ 40% ರಿಂದ 50% ರಷ್ಟು ಸರಕಾರದ ಪಾಲೆಂದು ನಿಷ್ಕರ್ಷಿಸಿದ್ದರೂ ಕೂಡ ಇದು ವಾಸ್ತವವಾಗಿ 50% ರಿಂದ 76% ರವರೆಗೆ ಏರುತ್ತಿತ್ತು. (ಅದೇ)

ರೈತ್ವಾರಿ ಪದ್ಧತಿಗೆ ಒಳಪಟ್ಟ ಪ್ರದೇಶವು ಒಟ್ಟು ಸಾಗುವಳಿ ಭೂಮಿಯ 52% ರಷ್ಟಿದ್ದಿತು ಹಾಗೂ ಈ ರೈತ್ವಾರಿ ಇದ್ದ ಪ್ರದೇಶಗಳಲ್ಲಿ ಅಂದರೆ ಮದ್ರಾಸ್ ಮತ್ತು ಬೊಂಬಾಯಿ ಪ್ರಾಂತಗಳಲ್ಲಿ ಪರಿಸ್ಥಿತಿಯು ಇನ್ನೂ ಹದಗೆಟ್ಟಿತ್ತು. ಬೊಂಬಾಯಿ ಪ್ರಾಂತದಲ್ಲಿ 1866ರ ಪುನರ್ ನಿಗದಿಯ ನಂತರ ಆದ ಕಂದಾಯದ ಹೆಚ್ಚುವರಿ ಬೇಡಿಕೆಯು ಅಗಾಧವಾಗಿದ್ದು ಅದನ್ನು ಮಿತಿಮೀರಿದ ಕಂದಾಯದ ಅತ್ಯಂತ ಹೀನಾಯ ಮುಖ ಎಂದು ಹೇಳಬಹುದಾಗಿತ್ತು? ವಾಸ್ತವವಾಗಿ ಬೇಸಾಯದ ಖರ್ಚು ಹಾಗು ಸರಕಾರದ ಕಂದಾಯ ಇವೆರಡನ್ನು ಪಾವತಿ ಮಾಡಿದ ಮೇಲೆ ಹೆಚ್ಚಿನ ಉತ್ಪನ್ನ ಏನೂ ಉಳಿಯುತ್ತಿರಲಿಲ್ಲ. ಮದ್ರಾಸಿನಲ್ಲಿ ಒಂದು ಹೊಸ ಭೂ ಕಂದಾಯ ಕ್ರಮವನ್ನು ನಿಗದಿಮಾಡಿದ್ದುದರ? ಅಭಿಪ್ರಾಯದಲ್ಲಿ ಕಂದಾಯದ ಹೊರೆಯನ್ನೇ ಹೆಚ್ಚಿಸಿತು. ಅವರು ಹೀಗೆ ಹೇಳುತ್ತಾರೆ – ಸರಕಾರದ ಬೇಡಿಕೆ ಹಾಗೂ ಪ್ರಾಂತದ ಒಟ್ಟು ಉತ್ಪನ್ನ ಮತ್ತು ಅದರ ಬೆಲೆ ಇವುಗಳನ್ನು ತುಲನೆ ಮಾಡಿ ನೋಡಿದಲ್ಲಿ 1860ರಲ್ಲಿ ಇದ್ದುದಕ್ಕಿಂತ

1875ರಲ್ಲಿ ಕಂದಾಯದ ಹೊರೆಯು ಜನಗಳ ಮೇಲೆ ಹೆಚ್ಚಾಗಿ ಇತ್ತು. ಆಗಿನ ಅಂಡರ್ ಸೆಕ್ರೆಟರಿ ಆಫ್ ಸ್ಟೇಟ್ ಫಾರ್ ಇಂಡಿಯಾ ಆಗಿದ್ದ ಸರ್ ಜೇಮ್ಸ್ ಮ್ಯಾಲೆಟ್‌ನಂತಹವರ ಮಾತುಗಳಲ್ಲೇ ಹೇಳಬೇಕೆಂದರೆ ಕಾರ್ಯಕಾರಿ ಕ್ಷೇತ್ರದಲ್ಲಿ ನಾವು ಬೇಡಿದ ಕಂದಾಯವು ಅನೇಕ ವೇಳೆ ಗೇಣಿ ಮೊಬಲುಗಳನ್ನೆಲ್ಲ ನುಂಗಿಕೊಂಡಿದೆ. ಅದು ಹಲವು ಬಾರಿ ಜಮೀನಿನಿಂದ ದೊರಕುವ ಅಲ್ಪ – ಸ್ವಲ್ಪ ಲಾಭವನ್ನು ಕೂಡ ನುಂಗುತ್ತಿದೆ ಎಂಬ ಸಂಶಯವೂ ಹುಟ್ಟುತ್ತದೆ. (ಅದೇ)

ಕಂದಾಯದ ಬೇಡಿಕೆಯು ಭೂಮಾಲೀಕನ ಗೇಣಿಯ ಆಧಾರದ ಮೇಲೆ ನಿಗದಿಮಾಡಲ್ಪಟ್ಟಿದ್ದ ಪ್ರದೇಶಗಳಲ್ಲಿ ಕೂಡ ಭಾರತ ಸರಕಾರವನ್ನು ಬ್ರಿಟಿಷ್ ನೇರ ಆಡಳಿತಕ್ಕೆ ವರ್ಗಾಯಿಸಿದ ಅರ್ಧ ಶತಮಾನದ ಅವಧಿಯಲ್ಲಿ ಭೂಮಾಲೀಕರು ತಮ್ಮ ಭೂಮಿಗಳ ಮೊಬಲಗನ್ನು ಹೆಚ್ಚಿಸುವ ಹಾಗೂ ಸರಕಾರದವರು ಹೆಚ್ಚಿಸಿರುವ ಅಂಶವನ್ನೇ ಉಪಯೋಗಪಡಿಸಿಕೊಂಡು ಆಗಿಂದಾಗ್ಗೆ ಕಂದಾಯ ಪುನರ್ನಿಗದಿ ಮಾಡುವಾಗ ಅದನ್ನು ಹೆಚ್ಚಿಸುತ್ತ ಬರುವ ಒಲವುಗಳೇ ಕಂಡುಬಂದವು. ಈ ವಿಧವಾದ ಕಾಲಕಾಲಕ್ಕೇ ನಡೆಯುತ್ತಿದ್ದ ಕಂದಾಯ ನಿಗದಿಗಳು ಗ್ರಾಮಾಂತರ ಪರಿಸ್ಥಿತಿಯಲ್ಲಿ ಕೂಡ ಕಾಲಕಾಲಕ್ಕೇ ಕಷ್ಟದ ಪರಿಸ್ಥಿತಿಗಳನ್ನು ತರುತ್ತಿದ್ದವು. ಏಕೆಂದರೆ ಬೇಸಾಯಗಾರರು ಈ ಹೆಚ್ಚಿನ ಕಂದಾಯ ನಿಗದಿಗಳನ್ನು ತಪ್ಪಿಸಿಕೊಳ್ಳುವ ಸಲುವಾಗಿ ತಮ್ಮ ಭೂಮಿಯನ್ನು ಕಂದಾಯ ನಿಗದಿ ಆಗುವುದಕ್ಕೆ ಒಂದೆರಡು ವರ್ಷಗಳ ಹಿಂದಿನಿಂದ ಸಾಗುವಳಿ ಮಾಡುವುದೇ ಬಿಟ್ಟುಬಿಡುತ್ತಿದ್ದರು. (ಅದೇ)

ಪರಿಸ್ಥಿತಿಯು ಏನಿದ್ದರೂ ಕೂಡ ಭೂಕಂದಾಯದ ಆದಾಯವು 1860–61 ರಿಂದ 1904–05ರ ಅವಧಿಯಲ್ಲಿ ಶೇಕಡಾ 50ರಷ್ಟು ಹೆಚ್ಚಿತು. ಈ ಪೈಕಿ ಸ್ವಲ್ಪ ಹೆಚ್ಚುವರಿಯಲ್ಲಿ ಸಾಗುವಳಿಗೆ ಬಂದ ಭೂಮಿಯ ವಿಸ್ತೀರ್ಣವು ಹೆಚ್ಚಾದುದರಿಂದ ಬಂದಿತಾದರೂ ಎಲ್ಲವೂ ಅದರಿಂದಲೇ ಬರಲಿಲ್ಲ. ಅದೂ ಅಲ್ಲದೆ ಬೆಲೆಗಳು ಹೆಚ್ಚಿದ್ದರಿಂದ ಬಂದ ಲಾಭವನ್ನು ಈ ರೀತಿ ಸರಕಾರ ನುಂಗಿಕೊಂಡಿತೇ ವಿನಃ ಇದು ಪ್ರಾಯಶಃ ಬೇಸಾಯಗಾರನವರೆಗೂ ಹೋಗಲೇ ಇಲ್ಲ. ಈ ವಿಧವಾದ ಗೇಣಿ ಕ್ರಮಗಳು ಹಾಗೂ ಕಂದಾಯ ಪದ್ಧತಿಗಳೇ ದೇಶದ ವ್ಯವಸಾಯಿಕ ಹಿನ್ನಡೆ ಹಾಗೂ ರೈತನ ಬಡತನಕ್ಕೆ ಕಾರಣವಾಗಿದ್ದವು. (ಅದೇ) ಆದರೆ ಹೊಣೆದಾರರ ಸಮಸ್ಯೆಯು ಮುಂದುವರಿದಿದೆ.

1. ಈ ಕೆಳಗಿನ ಪಟ್ಟಿಯು ಭೂ ಕಂದಾಯದ ಪಾವತಿ ಆದ ಮೊಬಲುಗುಗಳನ್ನು 1860–61 ರಿಂದ 1904–05ರ ಅವಧಿಯವರೆಗೆ ತೋರಿಸುತ್ತಿದೆ :

ವರ್ಷ	ಆದಾಯ ಕೋಟಿ
1860–61	18.15
1870–71	21.08
1880–81	21.11
1890–91	24.04
1900–01	26.22
1904–05	28.39

ಈ ಮೇಲಿನ ಅಂಕಿಗಳು ಲ್ಯಾಂಡ್ ರೆವಿನ್ಯೂ ಶಿರೋನಾಮೆಯ ಕೆಳಗೆ ನೀರಾವರಿ ಅನುಕೂಲಗಳಿಂದ ಹೆಚ್ಚು ಮೊಬಲಗನ್ನು ತೋರಿಸುತ್ತಿಲ್ಲವಾದ್ದರಿಂದ ಇವು ಹೆಚ್ಚುವರಿಯ ಸಂಪೂರ್ಣ ಚರಿತ್ರೆಯನ್ನು ಹೇಳಲಾರವು. ಈ ಅಂಕಿಗಳನ್ನು ಸ್ಟಾಟಿಸ್ಟಿಕಲ್ ಅಬಸ್ಟ್ರಾಕ್ಟ್ ಆಫ್ ಇಂಡಿಯಾದ ಅನೇಕ ಸಂಚಿಕೆಗಳಿಂದ ಸಂಗ್ರಹಿಸಲಾಗಿದೆ.

ನಾನಾವತಿ ಮತ್ತು ಅಂಜಾರಿಯಾರವರ ಮಾತುಗಳಲ್ಲಿ ಶಾಶ್ವತ ನಿಗದಿಯ ಆಧಾರದ ಮೇಲೆ ರಚಿತವಾಗಿದ್ದ ಗೇಣಿಯ ಕ್ರಮವು ಹಲವಾರು ವಿಧದ ಕೇಡುಗಳಿಗೆ ಕಾರಣವಾಗಿದೆ. ಹಾಜರಿಲ್ಲದ ಭೂಮಾಲಿಕತ್ವ, ಮಿತಿಮೀರಿದ ಕಂದಾಯ ಪದ್ಧತಿ, ಗೇಣಿದಾರರ ಆರ್ಥಿಕ ಗುಲಾಮಗಿರಿ ಮುಂತಾದ ಕೆಡಕುಗಳನ್ನು ಕಾಣಬಹುದು. ಆದರೆ ಮಿಕ್ಕ ಗೇಣಿ ಪದ್ಧತಿ ಇರುವ ಪ್ರದೇಶಗಳೂ ಸಹ ಈ ಕೇಡುಗಳಿಂದ ವಿಮುಕ್ತವಾಗಿಲ್ಲ. ಇದಲ್ಲದೆ ಸ್ಪಷ್ಟವಾಗಿ ಗುರುತಿಸಬಹುದಾದ ಮೂಲ ತತ್ವಗಳ ಮೇಲೆ ಆಧಾರಿತವಾದ ಏಕೈಕ ಕ್ರಮವೊಂದು ಇಲ್ಲದಿರುವುದು ಕಂದಾಯ ಪದ್ಧತಿಯನ್ನು ಬಹಳ ಅನ್ಯಾಯಪೂರಿತ ಹಾಗೂ ನಿರಂಕುಶವನ್ನಾಗಿ ಮಾಡಿದೆ. ಇದೇ ಕಾಲದಲ್ಲಿಯೇ ಬಡವರ ವರ್ಗಕ್ಕೆ ಸೇರಿದ ವ್ಯವಸಾಯಗಾರರ ಅಸಹಾಯ ಸ್ಥಿತಿಯಿಂದಾಗಿ ರೂಪಿತವಾದ ಈ ಗೇಣಿ ಕ್ರಮವು ಸದರಿ ವ್ಯವಸಾಯಗಾರರನ್ನು ಇನ್ನೂ ನಿರ್ಗತಿಕರನ್ನಾಗಿ ಮಾಡುತ್ತಿರುವುದಲ್ಲದೆ ಭೂಮಿಯನ್ನು ಅವರು ಮನಸೋಇಚ್ಛೆಯಾಗಿ ಉಪಯೋಗಿಸುವ ರೀತಿಯಲ್ಲಿ ಕೊನೆಗೊಂಡಿದೆ.

ಪ್ರತಿಯೊಬ್ಬ ಬೇಸಾಯಗಾರನಿಗೆ ಇದ್ದ ಸರಾಸರಿ ಜಮೀನಿನ ವಿಸ್ತಾರವು ಬಹಳ ಕಡಿಮೆ ಇದ್ದುದರಿಂದ ವ್ಯವಸಾಯಗಾರನು ವ್ಯವಸಾಯೋತ್ಪನ್ನಗಳಿಗೆ ಏರುತ್ತಿದ್ದ ಬೆಲೆಗಳು ಹಾಗೂ ಅವುಗಳಿಗೆ ಹೆಚ್ಚುತ್ತಿದ್ದ ವಿದೇಶೀ ಬೇಡಿಕೆ ಇವುಗಳಿಂದ ದೊರಕುವ ಲಾಭವನ್ನು ಪಡೆದುಕೊಳ್ಳಲು ಅವಕಾಶ ಕೊಡುತ್ತಿರಲಿಲ್ಲ. ಸಾಕಷ್ಟು ಅಂಕಿ-ಅಂಶಗಳಿಲ್ಲದ ಕಾರಣ ಹತ್ತೊಂಬತ್ತನೆಯ ಶತಮಾನದಲ್ಲಿ ಆದ ಸತತವಾದ ಭೂ ಸ್ಥಿತಿಯ ವಿಸ್ತೀರ್ಣವನ್ನು ಖಚಿತವಾಗಿ ಗುರುತಿಸಲು ಕಷ್ಟವಾಗಿರುತ್ತದೆ.

ಗೇಣಿಯಲ್ಲಿ ಆದ ಹೆಚ್ಚುವರಿಯನ್ನು ಈ ಕೆಳಗಿನ ಕೋಷ್ಟಕದಲ್ಲಿ ನಾವು ಕಾಣಬಹುದು.

ಗೇಣಿಯಲ್ಲಿ ಹೆಚ್ಚುವರಿ	**ರೂ. ಕೋಟಿಗಳು**
ಬಂಗಾಳ	
1793	3.13
1885	16
1858 ರಿಂದ 1879ರ ವರೆಗೆ ಹೆಚ್ಚುವರಿ	ಶೇಕಡ
ವಾಯವ್ಯ ಪ್ರಾಂತ್ಯ	14.1
ಅಯೋಧ್ಯೆ	17
ಮಧ್ಯಪ್ರಾಂತ	13.8
ಪಂಜಾಬ್	3.9
ಓರಿಸ್ಸಾ	4.3
ಮದ್ರಾಸ್	5.5
ಬೊಂಬಾಯಿ	23.3
ಮೈಸೂರು	10
ಬೀರಾರ್	22

(ಸರ್ ಜಾನ್ ಕೇರ್ಡ್‌ರವರ ರಿಪೋರ್ಟ್ ಆನ್ ದಿ ಕಂಡೀಷನ್ ಆಫ್ ಇಂಡಿಯಾ, ಪು. 39 ನೋಡಿ.

ನಾನಾವತಿ ಮತ್ತು ಅಂಜಾರಿಯಾ ಆಗಲೇ ಹೇಳಿದೆ. ಪು. 42.)

ಆದರೆ ಬೊಂಬಾಯಿ ದಖ್ಖನ್ನಿನಲ್ಲಿ ಆದದ್ದನ್ನು ನೋಡಿದರೆ ದೇಶದಲ್ಲೆಲ್ಲ ಆದದ್ದರ ನಮೂನೆಯು ಖಚಿತವಾಗುತ್ತದೆ. ಹೆರಾಲ್ಡ್ ಮ್ಯಾನ್‌ರವರು ಲೆಕ್ಕ ಹಾಕಿದ ಪ್ರಕಾರ ದಖ್ಖನ್ನಿನ ಜಮೀನು ವಿಸ್ತೀರ್ಣವು (ಸರಾಸರಿ) 1771ರಲ್ಲಿ 40 ಎಕರೆಗಳಿದ್ದುದು 1818ರ ಹೊತ್ತಿಗೆ 17 ಎಕರೆಗೂ, 1820.40ರ ಹೊತ್ತಿಗೆ 17 ಎಕರೆಗಳಿಗೂ ಹೇಗೆ ಸಾಧ್ಯ 1915ರ ಹೊತ್ತಿಗೆ 7 ಎಕರೆಗಳಿಗೂ ಇಳಿದಿತ್ತು. ಈ ಜಮೀನುಗಳ ಪೈಕಿ ಶೇಕಡಾ 60ರಷ್ಟು ಜಮೀನುಗಳು ವಿಸ್ತೀರ್ಣದಲ್ಲಿ 5 ಎಕರೆಗಳಿಗಿಂತ ಕಡಿಮೆ ವಿಸ್ತೀರ್ಣ ಹೊಂದಿದ್ದು ಲಾಭದಾಯಕವಾಗಿರಲಿಲ್ಲ

ಇದನ್ನು ಬ್ರಿಜ್ ನಾರಾಯಣರವರು ಈ ರೀತಿ ಸ್ಪಷ್ಟೀಕರಿಸಿದ್ದಾರೆ. ಸಮಗ್ರ ಪಂಜಾಬಿನಲ್ಲಿಯೇ (ಪಂಜಾಬಿನಲ್ಲಿ ಮಿಕ್ಕ ಭಾರತಕ್ಕಿಂತ ವಿಶೇಷವೇನೂ ಇಲ್ಲ) ನೀರಾವರಿ ಕಾಲುವೆಗಳ ಉಪಯೋಗದಿಂದ ಹೊಸದಾಗಿ ಸಾಗುವಳಿಗೆ ಬಂದ ಜಮೀನುಗಳ ವಿನಃ ಹಿಡುವಳಿ ಜಮೀನುಗಳ ವಿಸ್ತೀರ್ಣವು ಈಗಲೇ ಕಡಿಮೆ ಇದ್ದು, ಅವುಗಳ ಸಂಖ್ಯೆಯು ಹೆಚ್ಚಾದಂತೆ ಇನ್ನೂ ಕಡಿಮೆಯಾಗುತ್ತ ಬರುತ್ತಿದೆ.

ಈ ರೀತಿಯ ಅಲ್ಪ ವಿಸ್ತೀರ್ಣದ ಜಮೀನುಗಳ ಇನ್ನೊಂದು ಕೆಟ್ಟ ಲಕ್ಷಣವೆಂದರೆ ಈ ಜಮೀನುಗಳು ತುಂಡು-ತುಂಡಾಗಿ ವಿಸ್ತಾರವಾದ ಪ್ರದೇಶದಲ್ಲಿ ಹಂಚಿ ಹೋಗಿರುವುದಾಗಿದೆ. ಪ್ರತಿ ಜಮೀನು ಕೂಡ ಸರಾಸರಿ ಐದರಿಂದ 8 ಪಟ್ಟಿಗಳಾಗಿ ಭಾಗವಾಗಿರುತ್ತಿತ್ತು. ಹೀಗಿದ್ದುದರಿಂದ ಈ ತುಂಡುಜಮೀನುಗಳ ಸಾಗುವಳಿಯ ಖರ್ಚು ಅವುಗಳ ಉತ್ಪನ್ನಕ್ಕಿಂತ ಹೆಚ್ಚಾಗಿದ್ದು ವ್ಯವಸಾಯಗಾರನ ಕಾಲ ಮತ್ತು ಶ್ರಮವು ವ್ಯರ್ಥವಾಗುತ್ತಿತ್ತು. ಇವೆಲ್ಲದರಿಂದ ವ್ಯವಸಾಯವು ಲಾಭದಾಯಕವಾಗಿಲ್ಲ ಎನ್ನುವ ಅಂಶವು ಎದ್ದು ಕಾಣುತ್ತಿತ್ತು.

ಹೀಗೆ ಭೂ ಸ್ಥಿತಿಯು ಕೆಟ್ಟುದಾಗಿ ಹರಿದು ಹಂಚಿಹೋಗುವುದಕ್ಕೆ ಕಾರಣ ಏನೆನ್ನುವುದನ್ನು ನಾವು ಹಿಂದೂ ಮತ್ತು ಮುಸ್ಲಿಂ ಪಿತ್ರಾರ್ಜಿತ ಆಸ್ತಿಯ ವಿಷಯದ ನ್ಯಾಯ ನಿಬಂಧನೆಗಳಲ್ಲಿ ಗುರುತಿಸಬಹುದು. ಆದರೆ ಜನಸಂಖ್ಯೆಯ ಹೆಚ್ಚಳ ಹಾಗೂ ದೇಶೀಯ ಕೈಗಾರಿಕೋದ್ಯಮವು ಗಳಿಸಿದ್ದು, ಇವುಗಳು ಈ ಕೇಡನ್ನು ಹೆಚ್ಚು ಮಾಡಿ ಅದನ್ನು ತ್ವರಿತಗೊಳಿಸಿದವು.

ಬೇಸಾಯಗಾರರ ಭೂ ಸ್ವಾಮಿಗಳ ಜಮೀನಿನ ವಿಸ್ತೀರ್ಣವು ಕಡಿಮೆಯಾಗುತ್ತ ಬಂದಿದ್ದು, ಮಧ್ಯವರ್ತಿಗಳಿಗೆ ನಗದು ಹಾಗೂ ಕಾಳುಕಡ್ಡಿಗಳ ರೂಪದಲ್ಲಿ ಗೇಣಿಯನ್ನು

ಸಲ್ಲಿಸುವ ಗೇಣಿದಾರರ ಸಂಖ್ಯೆಯು ಹೆಚ್ಚಿದ್ದು, ಸಾಂಪ್ರದಾಯಿಕ ಹಾಗೂ ಪ್ರಾಯಶಃ ಸ್ಥಿರವಾದ ಗೇಣಿ ಮೊಬಲಿಗೆ ಬದಲಾಗಿ ಪೈಪೋಟಿಯ ಆಧಾರದ ಮೇಲೆ ನಿಗದಿ ಆದ ಗೇಣಿ ಮೊಬಲಗು, ಕೊಡುವಂಥದ್ದು (ತಾರಾಚಂದ್, ಪೂರ್ವೋಕ್ತ, ಪು. 406–411). ಇವೂ ಕೂಡ ಕಾರಣ

ಆಗಿನ ಭಾರತೀಯ ರಾಜ್ಯಾಂಗ ಪದ್ಧತಿ ಮತ್ತು ಕರಕ್ಕೆ ಸಂಬಂಧಿಸಿದ ವಿವರಗಳು ಕುತೂಹಲದಾಯಕವಾಗಿದೆ. ಸರ್ವಾಧಿಪತಿಯ ಅನುಮತಿಯಿಲ್ಲದೆಯೇ ಪ್ರತಿ ಪ್ರಾಂತಿಕ ಶಾಸನ ಸಭೆಯೂ ನಿಬಂಧನೆಗಳ ಮೂಲಕವಾಗಿ ಗೊತ್ತಾಗಿರುವ ಬಾಬತುಗಳಲ್ಲಿ ಮಾತ್ರ ಕಂದಾಯವನ್ನು ಹಾಕಬಹುದು. ಈ ಬಾಬತುಗಳಾವುವೆಂದರೆ,

1 ವ್ಯವಸಾಯವಲ್ಲದೆ ಇತರ ಉಪಯೋಗದಲ್ಲಿರತಕ್ಕ ಭೂಮಿಯ ಮೇಲಣ ಕಂದಾಯ.
2 ಅವಿಭಕ್ತ ಕುಟುಂಬದ ಮತ್ತು ಇತರ ಉತ್ತರಾಧಿಕಾರಿಗಳ ಮೇಲೆ ಹಾಕುವ ದಾಯಸಂಬಂಧವಾದ ಕಂದಾಯ.
3 ಶಾಸನಸಮ್ಮತವಾದ ಪಂದ್ಯ, ಜೂಜುಗಳ ಮೇಲಣ ಕಂದಾಯ.
4 ಪ್ರಕಟಣೆಗಳ (Adverstisements) ಮೇಲಣ ಕಂದಾಯ.
5 ವಿನೋದಗಳ (Amusements) ಮೇಲಣ ಕಂದಾಯ.
6 ನಿರ್ದಿಷ್ಟ ಐಶಾರಾಮಿ ವಸ್ತುಗಳ (Specified Laxury) ಮೇಲಣ ಕಂದಾಯ.
7 ಪತ್ರಗಳ ದಾಖಲಿನ ಶುಲ್ಕ (Registration fee) ಮತ್ತು
8 ಪ್ರಧಾನ ಶಾಸನ ಸಭೆಯು ನಿರ್ಣಯಿಸಿರುವ ಸುಂಕಗಳನ್ನು ಬಿಟ್ಟು ಇತರೆ ಮುದ್ರಾಂಕ ಶುಲ್ಕ (Stamp Duty).

ಸರ್ವಾಧಿಪತಿಯ ಅನುಮತಿಯಿಲ್ಲದೆ ಪ್ರಾಂತಿಕ ಶಾಸನ ಸಭೆಯು ಕೆಳಗೆ ಕಾಣಿಸಿರುವ ತೆರಿಗೆಗಳನ್ನು ಹಾಕುವುದಕ್ಕಾಗಲಿ ಸ್ಥಳೀಯ ಸರ್ಕಾರ (Local Authority) ಗಳಿಗೆ ಈ ತೆರಿಗೆಗಳನ್ನು ಹಾಕತಕ್ಕ ಅಧಿಕಾರವನ್ನು ಕೊಡುವುದಕ್ಕಾಗಲಿ ಶಾಸನ ಮಾಡಬಹುದು.

1 ಹಾದಿಯ ಸುಂಕ (Toll)
2 ನೆಲತೆರಿಗೆ (Tax on land or land values)
3 ಮನೆ ತೆರಿಗೆ (Tax on buildings)
4 ಗಾಡಿ ಅಥವಾ ದೋಣಿಯ ತೆರಿಗೆ (Tax on vehicles or boats)
5 ಬಾಲತೆರಿಗೆ (Tax on animals)
6 ಖನಿಜ ಮತ್ತು ಇತರ ಮನೆ ಸೇವಕರ ಮೇಲಣ ತೆರಿಗೆ (Tax on minerals and domestic servants)

7 ಊರು ಬಾಗಲಿನ ಸುಂಕ (Octroi)

8 ಆಮದಾದ ಪದಾರ್ಥಗಳ ಮೇಲಣ ಸುಂಕ

9 ವ್ಯಾಪಾರ, ಉದ್ಯೋಗ, ವೃತ್ತಿಗಳ ಮೇಲಣ ತೆರಿಗೆ (Tax on trades, professions and callings)

10 ಖಾಸಗಿ ಮಾರುಕಟ್ಟೆಗಳ ಮೇಲಣ ತೆರಿಗೆ (Tax on private markets) ಮತ್ತು

11 ನೀರಿನ ತೆರಿಗೆ, ದೀಪದ ತೆರಿಗೆ, ಗ್ರಾಮ ಶುದ್ಧಿಯ ತೆರಿಗೆ, ಸರ್ಕಾರಿ ಸಕ್ಷಿಂತೆಯ ಉಪಯೋಗದ ಬಾಡಿಗೆ, ಇತರೆ ಸಾರ್ವಜನಿಕವಾದ ಅನುಕೂಲತೆಗಳಿಗಾಗಿ ಎತ್ತುವ ತೆರಿಗೆಗಳು.

ಸರ್ವಾಧಿಪತಿಯು ಮೇಲೆ ಕಾಣಿಸಿರುವ ತೆರಿಗೆ ಮತ್ತು ಕಂದಾಯಗಳ ಜೊತೆಗೆ ಹೊಸ ಬಾಬತುಗಳನ್ನು ಸೇರಿಸಬಹುದು. ಈ ವಿಚಾರದಲ್ಲಿ ಅವನು ಕಾರ್ಯನಿರ್ವಾಹ ಸಮಿತಿಯ ಮೂಲಕವಾಗಿ ಆಜ್ಞೆ ಮಾಡಬೇಕು (ವಿವರಗಳಿಗೆ ನೋಡಿ : ಮಂ.ಅ.ಗೋ., 1929, ಇಂಡಿಯಾದ ರಾಜ್ಯಾಂಗ ಪದ್ಧತಿ).

ಕಂದಾಯ ಪದ್ಧತಿಯು ಬ್ರಿಟೀಶರಿಂದಾಗಿ ಭಾರತೀಯ ರೈತರಿಗೆ ಹೊಸ ಹೊರೆಯಾಯಿತು. ಅಷ್ಟೇ ಅಲ್ಲ, ಬ್ರಿಟೀಷ್ ಅಧಿಕಾರಿಗಳು ಕಂದಾಯ ಪದ್ಧತಿಗೆ ಕೆಲವು ರೀತಿಯ ನಿಯಮಾವಳಿಯನ್ನು ರೂಪಿಸಿದರು. ಸ್ಥೂಲವಾಗಿ ಅವುಗಳನ್ನು ಹೀಗೆ ಹೇಳಬಹುದು :

1 ಎಲ್ಲಾ ರೀತಿಯ ಜಮೀನುಗಳಿಗೂ ಭೂ ಕಂದಾಯವನ್ನು ಕಂಪೆನಿ ಸರಕಾರವು ನಿಗದಿಪಡಿಸಿತು.

2 ಜಮೀನುಗಳಿಗೆ ಅದು ನಕ್ಷೆಯನ್ನು ರೂಪಿಸಿತು.

3 ಪಟ್ಟಾ ಮತ್ತು ಜಮೀನಿನ ಅಳತೆಯನ್ನು ರೂಪಿಸಿ ಅದಕ್ಕೆ ನಿರ್ದಿಷ್ಟ ರೂಪವನ್ನು ಕೊಟ್ಟಿತು.

4 ಇಳುವರಿ ಜಮೀನಿಗೆ ಒಂದು ರೀತಿಯ ಕಂದಾಯ, ಇಳುವರಿಯಿಲ್ಲದ ಬಂಜರು ಜಮೀನಿಗೂ ಕಂದಾಯವನ್ನು ಚಾಲ್ತಿಗೆ ತಂದಿತು.

5 ಕಂದಾಯವನ್ನು ಕಟ್ಟದ ರೈತರಿಗೆ ಬಲವಂತವಾಗಿ ಕಂದಾಯ ಕಟ್ಟುವಂತೆ ಸೂಚಿಸಲಾಯಿತು. ಮತ್ತು ಕೆಲವು ಸಂದರ್ಭದಲ್ಲಿ ಕಂದಾಯ ಕಟ್ಟದ ರೈತರ ಮನೆಯನ್ನು ಜಪ್ತಿ ಮಾಡಲಾಯಿತು.

6 ಕಂದಾಯ ವಸೂಲಾತಿಗೆ ಪ್ರತ್ಯೇಕವಾದ ಒಂದು ವಿಭಾಗವನ್ನು ಬ್ರಿಟೀಶ್ ಕಂಪನಿಯು ಪ್ರಾರಂಭಿಸಿತು. ಅದರಲ್ಲಿ ಕಮೀಷನರ್, ಅಮಲ್ದಾರ್ ಮುಂತಾದ

ಹುದ್ದೆಗಳ ಸೃಷ್ಟಿಯಾದವು. ಕಂದಾಯ ಇಲಾಖೆಯು ರೂಪುಗೊಂಡದ್ದು ಹೀಗೆ.

7 ಭೂಮಿಯ ಅಳತೆಗಾಗಿ ಸರಪಳಿಯನ್ನು ಬಳಸಲಾಯಿತು. ಭೂ ನಕ್ಷೆಯನ್ನು ಸಿದ್ಧಪಡಿಸಲಾಯಿತು. ವೈಯಕ್ತಿಕ ಭೂ ನಕ್ಷೆ, ತಾಲೂಕು ಭೂ ನಕ್ಷೆ ಸಿದ್ಧವಾಯಿತು.

8 ಗ್ರಾಮ ಲೆಕ್ಕಾಧಿಕಾರಿಯು ಗ್ರಾಮದ ರೈತರಿಂದ ಕಂದಾಯ ವಸೂಲಿ ಮಾಡಿ ಸರಕಾರದ ಖಜಾನೆಗೆ ಕಟ್ಟಬೇಕಾಯಿತು.

9 ಕಂದಾಯವು ಬ್ರಿಟೀಶ್ ಸರಕಾರದ ಆದಾಯದ ಮೂಲ ಸಂಪತ್ತಾದುದರಿಂದ ಅದಕ್ಕೆ ಹೆಚ್ಚಿನ ಮಹತ್ವ ಕೊಡಲಾಯಿತು.

10 ಸರ್ವೆಗಾಗಿ ಭಾರತೀಯರಿಗಾಗಿ ಪ್ರತ್ಯೇಕ ತರಬೇತಿ ನೀಡಲಾಯಿತು. ಈ ಕುರಿತು ಅಗ್ರಾಳ ಪುರಂದರ ರೈಯವರು ಹೀಗೆ ಹೇಳುತ್ತಾರೆ : ಹಾಗಾಗಿ 1938ರಲ್ಲಿ ಪಡುಬಿದ್ರಿಯಲ್ಲಿ ಸರ್ವೆ ಟ್ರೈನಿಂಗ್ ಮಾಡಿದ. ಶ್ಯಾನುಭೋಗನಾಗಲು ಅರ್ಹತೆ ಪಡೆದ. ಆದರೆ ಪೂರ್ಣ ಪ್ರಮಾಣದ ಶ್ಯಾನುಭೋಗ ಹುದ್ದೆ ದೊರೆಯಲಿಲ್ಲ. ಆರ್ಯಾಪು ಗ್ರಾಮದ ಶ್ಯಾನುಭೋಗರಿಗೆ ಸಹಾಯಕನಾಗಿ ಸ್ವಲ್ಪ ಕಾಲ ಕೆಲಸ ಮಾಡಿದ. ಸರ್ವೆ ಟ್ರೈನಿಂಗ್ ಕಲಿತದ್ದಕ್ಕೆ ಸಂಕೋಲೆ ಹಿಡಿಯುವ ದೊರೆಯಿತು (ಅಗ್ರಾಳ ಪುರಂದರ ರೈ, 2001, ಪು. 18). ಅವರೇ ಹೇಳುವಂತೆ ಆಗ ಗ್ರಾಮ ಲೆಕ್ಕಿಗ ಹುದ್ದೆ, ಪಟೇಲ, ಶ್ಯಾನುಭೋಗ ಇವರ ಹುದ್ದೆಗಳು ಬೇರೆ ಬೇರೆ. ಪಟೇಲರಿಗೆ ನ್ಯಾಯಾಧೀಶರಿಗೆ ಸಂವಾದಿಯಾದ ಹುದ್ದೆ. ಕಂದಾಯ ವಸೂಲು ಮಾಡುವ ಅದಿಕಾರ ಅವರಿಗಿತ್ತು. ಜನನ–ಮರಣ ದಾಖಲೆಯನ್ನೂ ಅವರು ಇಡಬೇಕಾಗುತ್ತಿತ್ತು. ಪಟೇಲರಿಗೆ ರಿಜಿಸ್ತ್ರಿ ಮಾಡುವುದು ಕೆಲಸವಾಗಿತ್ತು (ಅದೇ.).

11 ಕಂದಾಯವನ್ನು ಬ್ರಿಟೀಶರು ಸಂಪತ್ತಿನ ಕ್ರೋಢೀಕರಣದ ಮುಖ್ಯ ನೆಲೆಯೆಂದು ಭಾವಿಸಿದ್ದರಿಂದ ಅದರ ಹೊರೆಯು ತನ್ನಿಂದ ತಾನಾಗಿಯೇ ಭಾರತೀಯ ರೈತರ ಮೇಲೆ ಪ್ರಭಾವ ಬೀರತೊಡಗಿತು.

12 ಇಲ್ಲಿ ಮೂರು ಅಂಶಗಳನ್ನು ನಾವು ಗಮನಿಸಬೇಕು :

ಅ) ಬ್ರಿಟೀಶರು ಸುಶಿಕ್ಷಿತರನ್ನು ಕಂಡ ಕ್ರಮ ಬೇರೆ : ಅವರನ್ನು ಅವರು ಬಳಸಿಕೊಂಡಿರುವ ರೀತಿಯು ಬೇರೆ. ಸುಶಿಕ್ಷಿತರು ಆಗ ತಾನೇ ಉದಯವಾದ ಹೊಸ ರೀತಿಯ ಉದ್ಯೋಗಕ್ಕೆ ಬೇಕಾದ ಕಾರಕೂನರಾದರು. ಗಾಂಧಿಯ ಗಮನ ಬೇರೆಕಡೆ ಇತ್ತು. ಇದನ್ನು ಗಾಂಧಿ ನಿರೂಪಿಸಿದ್ದು ಬೇರೆ ರೀತಿ.

ಆ) ಕೃಷಿವಲಯ ಕಂದಾಯದ ಬಲೆಯೊಳಗೆ ಸಿಲುಕಿತು.

ಇ) ಆದರೆ ಈ ವಲಯದ ಒಳಗೆ ಇಲ್ಲದ ಜನರಿಗೆ ಇದರ ಅರಿವು ಇರಲಿಲ್ಲ ಎನ್ನುವುದು ಗಮನಾರ್ಹ.

ಆದರೆ ಬ್ರಿಟೀಶರ ಕಂದಾಯದ ನೀತಿಯು ಭಾರತದ ಮೇಲೆ ಭಾರೀ ಪರಿಣಾಮವನ್ನು ಉಂಟುಮಾಡಿತು. ಕಂದಾಯದ ನೀತಿಯನ್ನು ಉಲ್ಲಂಘಿಸಲು ಭಾರತದಲ್ಲಿ ಹುಟ್ಟಿ ಹಾಕಿರುವ ಪದವೇ ನಿರಾಕರಣೆ ವಾಸ್ತವವಾಗಿ ಈ ನಿರಾಕರಣೆಯು ಬ್ರಿಟೀಶ್ ಪ್ರಭುತ್ವದ ಆರ್ಥಿಕ ನೀತಿಯ ಮೇಲೆ ಅತ್ಯಂತ ದೊಡ್ಡ ಪರಿಣಾಮವನ್ನುಂಟುಮಾಡಿತು ಎಂಬುದು ಗಮನಾರ್ಹ. ಮೇಲು ನೋಟಕ್ಕೆ ನಿರಾಕರಣೆಯೆಂದರೆ ಕೊಡುವುದಿಲ್ಲ ತಿರಸ್ಕರಿಸುತ್ತಿದ್ದೇನೆ ಎಂಬ ಅರ್ಥವನ್ನು ಸೂಚಿಸುತ್ತದೆ. ಆದರೆ ನಿರಾಕರಣೆಯು ಭಾರತೀಯ ಚರಿತ್ರೆಯಲ್ಲಿ ಒಂದು ಮಹತ್ವದ ಚಾರಿತ್ರಿಕ ತಿರುವಿಗೆ ಕಾರಣವಾಯಿತು ಎಂಬುದನ್ನು ಮರೆಯಲಾಗದು. ನಮ್ಮ ಅನೇಕ ಚರಿತ್ರೆಕಾರರು ರಾಷ್ಟ್ರೀಯ ಚಳುವಳಿಯ ಹುಟ್ಟನ್ನು ನವಸುಶಿಕ್ಷಿತ ಮಧ್ಯಮ ವರ್ಗದಿಂದ ಹುಟ್ಟಿತು ಎಂದು ಪ್ರತಿಪಾದಿಸುತ್ತಿದ್ದಾರೆ. ಆದರೆ ಕರನಿರಾಕರಣೆಯ ರೂಪವು ಬೇರೆ. ನಿರಾಕರಣೆಯು ಆ-ಗ್ರಹದ ರೂಪದ್ದಲ್ಲ. ಅಥವಾ ಅದು ಮೈತ್ರಿಯನ್ನು ಬಯಸುವುದಿಲ್ಲ. ಅದರಲ್ಲಿ ಯಾವುದೇ ರೀತಿಯ ಕರಾರು ಕೂಡ ಇಲ್ಲ. ಬ್ರಿಟೀಶರು ಮೊದಮೊದಲು ರಾಜಸತ್ತೆಯನ್ನು ಗೆಲ್ಲುವಾಗ ಬಳಸಿರುವ ತಂತ್ರಗಳಲ್ಲಿ ಮೈತ್ರಿ ; ಕರಾರು ರೂಪಗಳಿದ್ದವು. ಮೈಸೂರು ಅರಸೊತ್ತಿಗೆಯು ಬ್ರಿಟೀಶರೊಂದಿಗೆ ಮಾಡಿಕೊಂಡಿದ್ದ ಮೈತ್ರಿಯನ್ನು ಇಲ್ಲಿ ನೆನಪಿಸಿಕೊಳ್ಳಬಹುದು. ನಿರಾಕರಣೆಯೆಂದರೆ ಅದು ಖಡಾಖಂಡಿತವಾದ ಯುದ್ಧರೂಪಿಯೂ ಕೂಡಾ ಅಲ್ಲ. ಆದುದರಿಂದ ವಸಾಹತು ಸಂದರ್ಭದಲ್ಲಿ ಅದಕ್ಕೆ ವಿಶೇಷ ಅರ್ಥವಿದೆ. ನಿರಾಕರಣೆಯೂ ರೈತರು ಕಟ್ಟಿಕೊಂಡ ಪರಿಭಾಷೆಯೂ ಹೌದು. ಯಾಕೆಂದರೆ ಅದು ಕಂದಾಯಕ್ಕೆ ಸಂಬಂಧಿಸಿರುವುದು ಕಂದಾಯವು ಎಲ್ಲ ಜನವರ್ಗಕ್ಕೆ ಸಂಬಂಧಿತವಾಗಿಲ್ಲವಾಗಿರುವುದರಿಂದ ನಿರಾಕರಣೆಯು ಎಲ್ಲಾ ಜನರ ಪ್ರಾತಿನಿಧಿಕ ರೂಪವಲ್ಲ. ನಿರಾಕರಣೆಯ ತತ್ವವು ಮೂಲತಃ ಉದ್ಯೋಗಸ್ಥರ ಸಮಸ್ಯೆಯಲ್ಲ. ಅದು ತಿಂಗಳ ಪಗಾರವನ್ನು ಕಂಪೆನಿಯಿಂದ ಪಡೆಯುವವರ ಸಮಸ್ಯೆಯೂ ಆಗಿರಲಿಲ್ಲ. ಬ್ರಿಟೀಶರ ಕಂದಾಯ ನೀತಿಯ ಮೂಲವನ್ನು ಹೀಗೆ ವಿವರಿಸುತ್ತಾರೆ. ಅದು ನೇಟಾಲಿನಲ್ಲಿ ಕುರಿತದ್ದು.

> "ಬಾಲಸುಂದರಂನ ಮೊಕದ್ದಮೆಯಿಂದ ಕರಾರು ಕೂಲಿಗಾರರಾದ ಭಾರತೀಯರ ಪರಿಚಯವುಂಟಾಯಿತು. ಆದರೆ ಅವರ ಪರಿಸ್ಥಿತಿಯನ್ನು ಚೆನ್ನಾಗಿ ಪರಿಶೀಲಿಸಿ ತಿಳಿದುಕೊಳ್ಳುವುದಕ್ಕೆ ನನ್ನನ್ನು

ಪ್ರೇರೇಪಿಸಿದುದು ಅವರ ಮೇಲೆ ಪ್ರತ್ಯೇಕವಾಗಿ ಹೆಚ್ಚಾದ ತಲೆಗಂದಾಯವನ್ನು ಹೊರಿಸಲು ಅಲ್ಲಿನ ಬಿಳಿಯ ಜನರು ಮಾಡಿದ ಸನ್ನಾಹವೆ.

ಆ ವರ್ಷದಲ್ಲಿ, ಎಂದರೆ 1894ರಲ್ಲಿ ನೇಟಾಲಿನ ಸರಕಾರವು ಕರಾರು ಕೂಲಿಗಾರರ ಮೇಲೆ ವರ್ಷಕ್ಕೆ 25 ಪೌಂಡಿನ ತೆರಿಗೆಯನ್ನು ಹೊರಿಸಲು ಹೊರಟಿತು. ಇದನ್ನು ನೋಡಿ ನನಗೆ ಸೋಜಿಗವಾಯಿತು. ನಾನು ಈ ವಿಷಯವನ್ನು ಕಾಂಗ್ರೆಸ್ಸಿನ ಮುಂದೆ ಚರ್ಚೆಗೆ ತಂದೆನು. ಇದನ್ನು ವಿರೋಧಿಸುವುದಕ್ಕೆ ಬೇಕಾದ ಏರ್ಪಾಟನ್ನು ಮಾಡಬೇಕೆಂದು ಒಡನೆಯೆ ನಿಶ್ಚಯವಾಯಿತು.

ಮೊಟ್ಟಮೊದಲು ನಾನು ಈ ಕಂದಾಯದ ಮೂಲವನ್ನು ಸಂಕ್ಷೇಪವಾಗಿ ವಿವರಿಸಬೇಕು.

ಸುಮಾರು 1860ನೆಯ ಇಸವಿಯಲ್ಲಿ ನೇಟಾಲಿನಲ್ಲಿ ಫರಂಗಿಯವರಿಗೆ ಅಲ್ಲಿ ಕಬ್ಬಿನ ವ್ಯವಸಾಯಕ್ಕೆ ಒಳ್ಳೆಯ ಅವಕಾಶವಿದೆಯೆಂದು ತಿಳಿದು ಅದನ್ನು ನಡೆಸಲು ಅವರಿಗೆ ಕೂಲಿಗಾರರ ಅವಶ್ಯಕತೆಯು ತೋರಿತು. ಹೆಚ್ಚು ಶ್ರಮವಿಲ್ಲದೆ ಕಬ್ಬಿನ ವ್ಯವಸಾಯವೂ ಸಕ್ಕರೆಯನ್ನು ಮಾಡುವುದೂ ಸಾಧ್ಯವಿರಲಿಲ್ಲ. ನೇಟಾಲಿನ ಜೂಲೂ ಜನರು ಈ ಕೆಲಸಕ್ಕೆ ತಕ್ಕವರಾಗಿರಲಿಲ್ಲ. ಆದುದರಿಂದ ನೇಟಾಲಿನ ಸರಕಾರವು ಹಿಂದುಸ್ತಾನದ ಸರಕಾರದೊಡನೆ ಪತ್ರವ್ಯವಹಾರ ನಡೆಸಿ ಹಿಂದೂಸ್ತಾನದಿಂದ ಕೂಲಿಯವರನ್ನು ಕರೆಯಿಸಲು ಅಪ್ಪಣೆಯನ್ನು ಪಡೆಯಿತು. ಈ ಏರ್ಪಾಟಿನ ಪ್ರಕಾರ ಈ ಕೂಲಿಗಾರರು ನೇಟಾಲಿನಲ್ಲಿ ಐದು ವರ್ಷ ಕೂಲಿ ಮಾಡುವೆವೆಂದು ಮುಚ್ಚಳಿಕೆ ಬರೆದು ಕೊಡಬೇಕಾಗಿದ್ದಿತು; ಮತ್ತು ಈ ಐದು ವರ್ಷವಾದ ಮೇಲೆ ಅವರು ಅಲ್ಲಿಯೇ ನೆಲೆಸುವುದಕ್ಕೂ ಸ್ವಂತವಾಗಿ ಭೂಮಿಯನ್ನು ಮಾಡಿಕೊಳ್ಳುವುದಕ್ಕೂ ಅಧಿಕಾರವಿರಬೇಕೆಂದಿದ್ದಿತು. ಕೂಲಿಗಾರರನ್ನು ಬರಮಾಡಿಕೊಳ್ಳಲು ಅವರಿಗೆ ಈ ಆಸೆಯನ್ನು ತೋರಿಸಿದರು. ಏಕೆಂದರೆ ಕರಾರಿನ ಕಾಲವು ಮುಗಿದ ಮೇಲೆ ಈ ಕೂಲಿಗಾರರ ಶ್ರಮದಿಂದ ತಮ್ಮ ವ್ಯವಸಾಯವನ್ನು ಅಭಿವೃದ್ಧಿಪಡಿಸಿಕೊಳ್ಳುವ ನಿರೀಕ್ಷಣೆಯನ್ನು ಅಲ್ಲಿಯ ಬಿಳಿಯ ಜನರು ಇಟ್ಟುಕೊಂಡಿದ್ದರು.

ಆದರೆ ಭಾರತೀಯರು ತಮ್ಮ ಮೇಲಿನ ಎಣಿಕೆಯನ್ನು ಮೀರಿಸಿದರು. ಅವರು ಬೇಕಾದಷ್ಟು ತರಕಾರಿಯನ್ನು ಬೆಳೆದರು. ತಮ್ಮ ದೇಶದ ತರಕಾರಿಯನ್ನು ಅಲ್ಲಿ ಬೆಳೆದುದಲ್ಲದೆ ಅಲ್ಲಿಯ ತರಕಾರಿಗಳನ್ನು ಇನ್ನು ಅಗ್ಗವಾಗಿ ಬೆಳೆಯುವುದನ್ನು ಸಾಧ್ಯ ಮಾಡಿದರು." (ಸತ್ಯಶೋಧನೆ, 2001, ಪು. 189).

ಗಾಂಧೀಜಿಯವರು 'ಕರನಿರಾಕರಣೆ'ಯನ್ನು ಸತ್ಯಾಗ್ರಹದ ಚಳುವಳಿಯ ವ್ಯಾಪ್ತಿಯೊಳಗೆ ತರುತ್ತಾರೆ. ಈ ಮೂಲಕ ಅದಕ್ಕೆ ವಿಶಾಲವಾದ ಅರ್ಥವನ್ನು ಕೊಡುತ್ತಾರೆ. ಗಾಂಧೀಜಿಯವರು ಕರನಿರಾಕರಣೆಯನ್ನು ಸತ್ಯಾಗ್ರಹದ ಚಳುವಳಿಯೊಳಗೆ ತರುವುದರ ಹಿಂದಿರುವ ರಾಜಕೀಯ ಉದ್ದೇಶ ಸ್ಪಷ್ಟ. ಸತ್ಯಾಗ್ರಹಕ್ಕೆ ಒಂದು ನಿರ್ದಿಷ್ಟ ವರ್ಗವೆಂಬುದು ಗುರಿಯಲ್ಲ. ಅದಕ್ಕೆ ಎಲ್ಲಾ ವರ್ಗಗಳನ್ನು ಒಳಗೊಳ್ಳುವ ಉದ್ದೇಶವಿದೆ. ಗಾಂಧೀಯವರು ಹೇಳುವಂತೆ ಭಾರತೀಯ ಹೋರಾಟವನ್ನು ವಿವರಿಸಲು ಮತ್ತು ಅದಕ್ಕೆ ತಕ್ಕುದಾದ ಒಂದು ಪದವನ್ನು ಅವರು ಹುಡುಕುತ್ತಾರೆ.

> "ಆದರೆ ನಾನು ಬಹು ಪ್ರಯತ್ನ ಪಟ್ಟರೂ ಅಂಥ ಪದವೊಂದು ನನಗೆ ಹೊಳೆಯಲಿಲ್ಲ. ಆದ್ದರಿಂದ ನಾನು ಈ ತತ್ವವನ್ನು ವರ್ಣಿಸಲು ಅತ್ಯುತ್ತಮವಾದ ಪದವನ್ನು ಸೂಚಿಸುವ ವಾಚಕರಿಗೆ ಸಣ್ಣದೊಂದು ಬಹುಮಾನ ಕೊಡುವುದಾಗಿ 'ಇಂಡಿಯನ್ ಓಪಿಯನ್' ಪತ್ರಿಕೆಯಲ್ಲಿ ಪ್ರಕಟಿಸಿದೆನು. ಇದರ ಫಲವಾಗಿ ಭಗನಲಾಲಾ ಗಾಂಧಿಯವರು 'ಸದಾಗ್ರಹ' (ಸತ್+ಆಗ್ರಹ) ಎಂಬ ಪದವನ್ನು ನಿರ್ಮಿಸಿ ಬಹುಮಾನ ಗೆದ್ದರು. ಆದರೆ ನಾನು ಈ ಪದದ ಅರ್ಥವನ್ನು ಇನ್ನೂ ಸ್ಪಷ್ಟ ಮಾಡಲಿಕ್ಕಾಗಿ ಅದನ್ನು 'ಸತ್ಯಾಗ್ರಹ'ವೆಂದು ಮಾರ್ಪಡಿಸಿದೆನು. ಈ ಪದವು ನಮ್ಮ ಹೋರಾಟವನ್ನು ವರ್ಣಿಸಲು ಅಂದಿನಿಂದಲೂ ಗುಜರಾತಿನಲ್ಲಿ ಪ್ರತೀತವಾಗಿದೆ (ಸತ್ಯಶೋಧನೆ, 2001, ಭಾಗ-2, ಪು. 74).

ಅವರೇ ಹೇಳುವಂತೆ ಸತ್ಯಾಗ್ರಹ ಶಬ್ದವನ್ನು ಸೃಷ್ಟಿಸುವುದಕ್ಕೆ ಮುಂಚೆಯೇ ಅದರ ತತ್ವವು ಹುಟ್ಟಿದ್ದಿತು. ಅಷ್ಟೇಕೆ ಅದು ಉದಿಸಿದಾಗ ನನಗೆ ಅದರ ಸ್ವರೂಪವು ತಿಳಿದಿರಲಿಲ್ಲ.

> ಗುಜರಾತಿನಲ್ಲಿ ಕೂಡ ನಾವು ಆ ತತ್ವವನ್ನು 'ಪ್ಯಾಸ್ಸಿವ್ ರೆಸಿಸ್ಟೆನ್ಸ್' ಎಂಬ ಮಾತಿಗೆ ಸಂಕುಚಿತಾರ್ಥ ಕೊಟ್ಟು ಅದು ಉದಿಸಿದಾಗ ನನಗೆ ಅದರ ಸ್ವರೂಪವು ತಿಳಿದಿರಲಿಲ್ಲ. ಗುಜರಾತಿನಲ್ಲಿ ಕೂಡ ನಾವು ಆ ತತ್ವವನ್ನು ಪ್ಯಾಸ್ಸಿವ್ ರೆಸಿಸ್ಟೆನ್ಸ್ ಎಂಬ ಮಾತಿಗೆ ಸಂಕುಚಿತಾರ್ಥ ಕೊಟ್ಟು ಅದು ನಿರ್ಬಲರ ಆಯುಧವೆಂದು, ಅದರಲ್ಲಿ ದ್ವೇಷಕ್ಕೆ ಕೂಡಾ ಎಡೆಯುಂಟೆಂದು ಕಟ್ಟಕಡೆಗೆ ಅದು ಹಿಂಸಾತ್ಮಕವಾಗಿ ಕೂಡ ಪರಿಣಮಿಸಬಲ್ಲುದೆಂದು ಅವರು ಅರ್ಥೈಸಿದುದನ್ನು ನಾನು ಕಂಡೆನು. ಆಗ ನಾನು ಇದೊಂದು ಭಾರತೀಯರ ಚಳುವಳಿಗೆ ಅನ್ವಯಿಸುವುದಿಲ್ಲವೆಂದು ಹೇಳಿ ಆ ಚಳುವಳಿಯ ನೈಜ ಸ್ವರೂಪವನ್ನು ವಿವರಿಸಬೇಕಾಯಿತು (ಅದೇ, ಪು. 73).

ಗಾಂಧೀಜಿಯವರು ಸತ್ಯಾಗ್ರಹಕ್ಕೆ ಪೂರಕವಾಗಿ ಅಹಿಂಸೆಯ ತತ್ವವನ್ನು ಮತ್ತು ಅಸಹಕಾರ ತತ್ವವನ್ನು ತಮ್ಮ ಚಳುವಳಿಯಲ್ಲಿ ರೂಪಿಸಿದ್ದಾರೆ.

> ಅಹಿಂಸಾತತ್ವವು ಅನಂತ ವ್ಯಾಪಕತೆಯುಳ್ಳದ್ದು. ನಾವು ಹಿಂಸೆಯ ದುಳ್ಳುರಿಯಲ್ಲಿ ಸಿಕ್ಕಿರುವ, ಕೈಲಾಗದ ಅನಿತ್ಯ ಜೀವಿಗಳು. ಜೀವಕ್ಕೆ ಜೀವವು ಆಹಾರವೆಂಬ ಹೇಳಿಕೆಯಲ್ಲಿ ಆಳವಾದ ಅರ್ಥವಿದೆ. ಮನುಷ್ಯನು ಅರಿತಾಗಲಿ, ಅರಿಯದಾಗಲಿ ಬಾಹ್ಯ ಹಿಂಸೆಯನ್ನು ಮಾಡದೆ ಕ್ಷಣಕಾಲವೂ ಜೀವಿಸಿರಲಾರನು. ಅವನು ಬದುಕಿರುವುದೇ ತಿನ್ನುವುದು, ಕುಡಿಯುವುದು, ಚಲಿಸಿವುದು – ಹಿಂಸಾತ್ಮಕವಾದುದು; ಎಷ್ಟೇ ಅಲ್ಪವಾಗಿರಲಿ ಪ್ರಾಣಹಾನಿಕರವಾದುದು. ಆದ್ದರಿಂದ ಅಹಿಂಸೋಪಾಸಕನ ಕ್ರಿಯೆಯೆಲ್ಲಾ ಅನುಕಂಪಾತ್ಮಕವಾಗಿದ್ದರೆ, ಅವನು ಅತ್ಯಲ್ಪ ಜಂತುವಿನ ಪ್ರಾಣಹಾನಿಗೆ ಕೂಡ ಕಾರಣಾಗದಿರಲು ತನ್ನ ಕೈಲಾದಷ್ಟು ಪ್ರಯತ್ನ ಪಟ್ಟರೆ, ಅದನ್ನುಳಿಸಲು ಪ್ರಯತ್ನಿಸಿದರೆ, ಹೀಗೆ ಎಡೆಬಿಡದೆ ಹಿಂಸೆಯ ಯಮಪಾಶದಿಂದ ಬಿಡುಗಡೆ ಹೊಂದಲು ಶ್ರಮಪಟ್ಟರೆ ಅವನು ತನ್ನ ಧರ್ಮವನ್ನು ಕಾಪಾಡಿದಂತಾಗುತ್ತದೆ. ಅವನು ಸದಾ ಆತ್ಮನಿಗ್ರಹದಲ್ಲಿಯೂ, ಕಾರುಣ್ಯ ವೃತ್ತಿಯಲ್ಲಿಯೂ ಪ್ರವರ್ತಿಸುತ್ತಿರುತ್ತಾನೆ. ಆದರೆ ಅವನು ಬಾಹ್ಯ ಹಿಂಸೆಯಿಂದ ಎಂದಿಗೂ ಸಂಪೂರ್ಣವಾಗಿ ಬಿಡುಗಡೆ ಹೊಂದಲಾರನು.
>
> ಇದಲ್ಲದೆ ಅಹಿಂಸಾತತ್ವದ ಮೂಲದಲ್ಲಿ ಸಕಲ ಜೀವನದ ಐಕ್ಯತೆಯು ಇರುವುದರಿಂದ ಒಬ್ಬನ ದೋಷವು ಎಲ್ಲರನ್ನು ತಟ್ಟದಿರಲಾರದು. ಆದ್ದರಿಂದ ಮನುಷ್ಯನು ಹಿಂಸೆಯ ಸಂಪರ್ಕವೇ ಇಲ್ಲದೆ ಇರಲಾರನು. ಅವನು ಸಾಮಾಜಿಕ ವ್ಯಕ್ತಿಯಾಗಿರುವವರೆಗೂ ಸಮಾಜದ ಅಸ್ತಿತ್ವಕ್ಕೇ ಹೊಂದಿದ ಹಿಂಸೆಯಲ್ಲಿ ಭಾಗಿಯಾಗದಿರಲಾರನು. ಎರಡು ಜನಾಂಗಗಳು ಯುದ್ಧ ಮಾಡುತ್ತಿರುವಾಗ ಅಹಿಂಸೋಪಾಸಕನ ಕರ್ತವ್ಯವು ಯುದ್ಧವನ್ನು ನಿಲ್ಲಿಸುವುದು. ಈ ಕರ್ತವ್ಯವನ್ನು ಪಾಲಿಸಲಾರದವನು, ಯುದ್ಧವನ್ನು ಇದಿರಿಸಲಾರದವನು, ಯುದ್ಧವನ್ನು ಇದಿರಿಸಲು ಯೋಗ್ಯತೆಯಿಲ್ಲದವನು ಯುದ್ಧದಲ್ಲಿ ಭಾಗಿಯಾಗಬಹುದು. ಆದರೂ ತನ್ನನ್ನು ತನ್ನ ಜನಾಂಗವನ್ನೂ, ಲೋಕವನ್ನೂ ಯುದ್ಧದಿಂದ ಬಿಡುಗಡೆ ಮಾಡಲು ಮನಃಪೂರ್ವಕವಾಗಿ ಪ್ರಯತ್ನಿಸಬಹುದು.
>
> ನಾನು ಬ್ರಿಟಿಷ್ ಚಕ್ರಾಧಿಪತ್ಯದ ಮೂಲಕ ನನ್ನ ಮತ್ತು ನನ್ನ ದೇಶದ ಅಂತಸ್ತನ್ನು ಹೆಚ್ಚಿಸುವ ಆಸೆಯನ್ನಿಟ್ಟುಕೊಂಡಿದ್ದೆನು. ನಾನು ಇಂಗ್ಲೆಂಡಿನಲ್ಲಿದ್ದಾಗ ಬ್ರಿಟಿಷರ ನೌಕಾಬಲದ ಸಂರಕ್ಷಣೆ

ಗೊಳಗಾಗಿದ್ದೆನು. ನಾನು ಅದರ ಶಸ್ತ್ರಾಸ್ತ್ರಗಳ ಶಕ್ತಿಯ ಆಶ್ರಯದಲ್ಲಿದ್ದುದರಿಂದ ನಾನು ಅದರಲ್ಲಡಗಿರುವ ಹಿಂಸಾವೃತ್ತಿಯಲ್ಲಿ ಸ್ವತಃ ಭಾಗಿಯಾಗಿಯೇ ಇದ್ದೆನು. ಆದ್ದರಿಂದ ನಾನು ಚಕ್ರಾಧಿಪತ್ಯದ ಸಂಬಂಧವನ್ನು ಬಿಡದೆ ಅದರ ಛತ್ರಚ್ಛಾಯೆಯಲ್ಲಿರಬೇಕೆಂದೆಳೆಸಿದರೆ ಈ ಮೂರು ಮಾರ್ಗಗಳಲ್ಲಿ ಒಂದನ್ನು ಆರಿಸಬೇಕಾಗಿದ್ದಿತು. ಯುದ್ಧವನ್ನು ಘಂಟಾಘೋಷವಾಗಿ ವಿರೋಧಿಸಿ ಚಕ್ರಾಧಿಪತ್ಯವು ಯುದ್ಧ ನೀತಿಯನ್ನು ತ್ಯಜಿಸುವವರೆಗೂ ಸತ್ಯಾಗ್ರಹದ ನಿಯಮದ ಪ್ರಕಾರ ಚಕ್ರಾಧಿಪತ್ಯಕ್ಕೆ ಬಹಿಷ್ಕಾರ ಹಾಕುವುದು ಅಥವಾ ಯೋಗ್ಯ ತೋರಿದ? ಕಾನೂನುಗಳನ್ನು ಸವಿನಯವಾಗಿ ಭಂಗಪಡಿಸಿ ಕಾರಾಗೃಹವನ್ನರಸುವುದು ಅಥವಾ ಚಕ್ರಾಧಿಪತ್ಯದ ಪರವಾಗಿ ಯುದ್ಧದಲ್ಲಿ ತೊಡಗಿ ಆ ಮೂಲಕ ಯುದ್ಧದ ಹಿಂಸೆಯನ್ನಿದಿರಿಸುವ ಯೋಗ್ಯತೆಯನ್ನೂ, ಸಿದ್ಧತೆಯನ್ನೂ ಪಡೆಯುವುದು. ನನ್ನಲ್ಲಿ ಈ ಯೋಗ್ಯತೆಯು ಇಲ್ಲದಿದ್ದುದರಿಂದ ಯುದ್ಧದಲ್ಲಿ ಭಾಗಿಯಾಗಿರುವುದಲ್ಲದೆ ನನಗೆ ಬೇರೆ ಮಾರ್ಗವಿಲ್ಲವೆಂದು ನಾನು ಯೋಚಿಸಿದೆನು.

ಯುದ್ಧದಲ್ಲಿ ಹೋರಾಡುವವರಿಗೂ, ಹೋರಾಡದಿರುವವರಿಗೂ ಮಧ್ಯೆ ನನಗೆ ಅಹಿಂಸಾದೃಷ್ಟಿಯಿಂದ ಯಾವ ಭೇದವೂ ಕಾಣುವುದಿಲ್ಲ. ಕಳ್ಳರು ಡಕಾಯಿತಿ ಮಾಡುತ್ತಿರುವಾಗ ಅವರ ಕೂಲಿಯಂತಾಗಲಿ, ಅವರ ಕಾವಲುಗಾರನಂತಾಗಲಿ ಅಥವಾ ಅವರು ಗಾಯ ಹೊಂದಿದಾಗ ಅವರ ಶುಶ್ರೂಷೆ ಮಾಡುವವನಂತಾಗಲಿ ಅವರಿಗೆ ಸೇವೆ ಮಾಡಲು ಒಪ್ಪಿರುವವನು ಡಕಾಯಿತರಷ್ಟೇ ತಪ್ಪಿತಸ್ಥನಾಗಿರುತ್ತಾನೆ. ಇದೇ ರೀತಿಯಾಗಿ ಯುದ್ಧದಲ್ಲಿ ಗಾಯ ಹೊಂದಿದವರ ಸೇವಾ ಕಾರ್ಯದಲ್ಲಿ ಮಾತ್ರ ತೊಡಗಿರುವವರು ಕೂಡ ಯುದ್ಧದ ದೋಷದಿಂದ ತಪ್ಪಿಸಿಕೊಳ್ಳಲಾಗುವುದಿಲ್ಲ (ಸತ್ಯಶೋಧನೆ II, ಪು. 109).

ಗಾಂಧಿಯವರು ಇದರ ಜೊತೆಗೆ ಅಸಹಕಾರ ತತ್ವವನ್ನು ತಮ್ಮ ರಾಜಕೀಯ ಹೋರಾಟದಲ್ಲಿ ಜಾರಿಗೆ ತರುವ ಪ್ರಯತ್ನ ಮಾಡಿದರು. ಅಸಹಕಾರವೆಂಬುದು ಗಾಂಧಿಯವರ ಹೋರಾಟದಲ್ಲಿ ಬಹು ಮುಖ್ಯವಾದ ಅಸ್ತ್ರವಾಗಿತ್ತು. ಗಾಂಧಿಯವರ ರಾಷ್ಟ್ರೀಯ ಆಂದೋಲನವನ್ನು ಗಮನಿಸಿದರೆ ಈ ಅಂಶವು ಸ್ಪಷ್ಟವಾಗುತ್ತದೆ. ಗಾಂಧಿಯವರು ಕೆಲವು ರಾಜಕೀಯ ತಂತ್ರವನ್ನು ಮೌನವಾಗಿಯೇ ಅಳವಡಿಸಿಕೊಂಡಿದ್ದರು. ಮೇಲುನೋಟಕ್ಕೆ ಅದು ಅತ್ಯಂತ ಸರಳವಾಗಿದೆ ಎಂಬಂತೆ ಕಂಡರೂ ಅಂತರಾಳದಲ್ಲಿ ಅದು ಅತ್ಯಂತ ಖಚಿತವಾದ ಧೋರಣೆಯನ್ನು ಒಲಗೊಂಡಿತ್ತು ಎಂಬುದು ಗಮನಾರ್ಹ.

1. ಸತ್ಯಾಗ್ರಹ [1]
2. ಅಹಿಂಸೆ
3. ಅಸಹಕಾರ
4. ಉಪವಾಸ
5. ಬಹಿಷ್ಕಾರ

ಈ ಪದಗಳು ಭಾರತೀಯರಿಗೆ ಹೊಸ ಪದಗಳಾಗಿರಲಿಲ್ಲ. ಅವು ಧಾರ್ಮಿಕವಾಗಿ ಈ ಮೊದಲೇ ಚಾಲ್ತಿಯಲ್ಲಿದ್ದ ಪದಗಳಾಗಿದ್ದವು. ಆದುದರಿಂದ ಗಾಂಧಿಯವರು ಬಹಿಷ್ಕಾರ ಮತ್ತು ಬಹಿಷ್ಕಾರವನ್ನು ವಿವರಿಸುವುದು ಹೀಗೆ. ಗಾಂಧಿಯವರು ಸತ್ಯವನ್ನು ಅರಸುವುದಕ್ಕೆ ಅಹಿಂಸೆಯೇ ಮೂಲವಾಗಿದೆ. ಅಹಿಂಸೆಯ ಆಧಾರದ ಮೇಲಲ್ಲದೆ ಸತ್ಯಾನ್ವೇಷಣವು ಸಾಧ್ಯವಿಲ್ಲವೆಂಬುದನ್ನು ನಾನು ಪ್ರತಿನಿತ್ಯವೂ ಮನಗಾಣುತ್ತಿದ್ದೇನೆ (ಸತ್ಯಶೋಧನೆ, ಭಾಗ–2, ಪು. 25). ಬಹಿಷ್ಕಾರದ ಕುರಿತು ಗಾಂಧಿಯವರು ಹೀಗೆ ಹೇಳುತ್ತಾರೆ :

> "ಕೇವಲ ವಿದೇಶಿ ವಸ್ತ್ರದ ಬಹಿಷ್ಕಾರದಿಂದ ನಮಗೆ ತೃಪ್ತಿಯಾಗುವುದಿಲ್ಲ. ನಮ್ಮ ಅವಶ್ಯಕತೆಗೆ ಬೇಕಾದಷ್ಟು ಸ್ವದೇಶಿ ಬಟ್ಟೆಯನ್ನು ತಯಾರು ಮಾಡಲು ಮತ್ತು ವಿದೇಶಿ ವಸ್ತ್ರವನ್ನು ಪೂರ್ತಿಯಾಗಿ ತೊಲಗಿಸಲು ಎಷ್ಟು ಕಾಲ ಹಿಡಿಯುವುದೋ ಯಾರಿಗೆ ಗೊತ್ತು ? ಬ್ರಿಟಿಷರ ಮೇಲೆ ತಕ್ಷಣವೇ ಪರಿಣಾಮವೆಸಗುವುದೇನಾದರೂ ನಮಗೆ ಬೇಕು. ವಿದೇಶಿ ವಸ್ತ್ರ ಬಹಿಷ್ಕಾರವಿರಲಿ. ಅದಕ್ಕೆ ನಮ್ಮ ಅಭ್ಯಂತರವೇನೂ ಇಲ್ಲ. ಆದರೆ ಅದರ ಜೊತೆಗೆ ಇನ್ನೂ ಶೀಘ್ರವಾದ, ತ್ವರಿತವಾದ, ಸಾಧನವನ್ನು ನಮಗೆ ಕೊಡಿ" ಎಂಬುದೇ ಒಟ್ಟಿನಲ್ಲಿ ಮೌಲಾನಾ ಹಜರತ್ ಮೊಹಾನಿಯವರ ಮಾತಾಗಿದ್ದಿತು. ಅವರ ಭಾಷಣವನ್ನು ನಾನು ಕೇಳುತ್ತಿದ್ದ ಹಾಗೆಯೇ ವಿದೇಶಿ ವಸ್ತ್ರ ಬಹಿಷ್ಕಾರದ ಜೊತೆಗೆ ಇನ್ನಾವುದಾದರೂ ಹೊಸದೊಂದು ಅಗತ್ಯವೆಂದು ನನಗೆ ತೋರಹತ್ತಿತು. ಈ ಬಹಿಷ್ಕಾರವನ್ನು ಕೂಡ ಒಡನೆಯೇ ಎಸಗುವುದು ಸ್ಪಷ್ಟವಾಗಿ ಅಸಾಧ್ಯವೆಂದು ನನಗೆ ಆಗ ತೋರಿತು. ಇಷ್ಟ ಬಂದರೆ ನಾವು ನಮಗೆ ಬೇಕಾದಷ್ಟು ಖಾದಿಯನ್ನು ಒದಗಿಸಿಕೊಳ್ಳಬಲ್ಲೆವೆಂದು ಆ ಕಾಲದಲ್ಲಿ ನನಗೆ ಗೊತ್ತಿರಲಿಲ್ಲ. ಇದನ್ನು ಕಂಡುಹಿಡಿದುದು ಆ ಮೇಲೆ. ಆದರೂ ಈ ಬಹಿಷ್ಕಾರವನ್ನು ಸಾಧಿಸುವುದಕ್ಕಾಗಿ ನಾವು ಗಿರಣಿಗಳನ್ನೇ ನಂಬಿದರೆ. ನಮಗೆ ಮೋಸವಾಗುವುದೆಂದು ಆಗ ಕೂಡ ನನಗೆ ಗೊತ್ತಿದ್ದಿತು. ನಾನು ಇನ್ನೂ ಈ ಉಭಯಸಂಕಟದಲ್ಲಿರುವಾಗಲೇ ಮೌಲಾನರು

ತಮ್ಮ ಭಾಷಣವನ್ನು ಮುಗಿಸಿದರು.

ಸರಿಯಾದ ಹಿಂದಿ ಅಥವಾ ಉರ್ದು ಮಾತುಗಳು ಹೊಳೆಯದಿದ್ದರಿಂದ ನನಗೆ ತೊಂದರೆಯಾಯಿತು. ಉತ್ತರ ದೇಶದ ಮುಸಲ್ಮಾನರೇ ಬಹುವಾಗಿ ಕೂಡಿದ್ದ ಸಭೆಯ ಮುಂದೆ ನಾನು ತಾರ್ಕಿಕ ಭಾಷಣವನ್ನಿತ್ತಿದ್ದು ಇದೇ ಮೊದಲು. ಕಲ್ಕತ್ತಾದಲ್ಲಿ ನಾನು ಮುಸಲ್ಮಾನರ ಮಹಾಸಭೆಯ ಮುಂದೆ ಉರ್ದುವಿನಲ್ಲಿಯೇನೇ ಮಾತನಾಡಿದ್ದೆನು. ಆದರೆ ನಾಲ್ಕಾರು ನಿಮಿಷ ಮಾತ್ರ, ಅದರ ಉದ್ದೇಶವು ಕೇವಲ ಸಭಿಕರ ಹೃದಯವನ್ನು ತಟ್ಟುವುದಾಗಿದ್ದಿತು. ಆದರೆ ಇಲ್ಲಾದರೋ ಸಭೆಯು ನನಗೆ ಒಂದು ವೇಳೆ ವಿರೋಧವರ್ತಿಯಾಗಿಲ್ಲದಿದ್ದರೆ ನನ್ನ ಮಾತನ್ನು ವಿಮರ್ಶೆಯ ದೃಷ್ಟಿಯಿಂದಲಾದರೂ ಗಮನಿಸುತ್ತಿದ್ದಿತು. ಇಂಥ ಸಭೆಗೆ ನಾನು ನನ್ನ ಅಭಿಪ್ರಾಯಗಳನ್ನು ವಿವರಿಸಿ ಮನಗಾಣಿಸಬೇಕಾಗಿದ್ದಿತು. ಆದರೆ ನಾನು ನನ್ನ ಲಜ್ಜಾವೃತ್ತಿಯನ್ನೆಲ್ಲಾ ಕಿತ್ತೊಗೆದಿದ್ದೆನು. ನಾನು ಅಲ್ಲಿದ್ದುದು ನನ್ನ ಯೋಗ್ಯತೆ ಮೀರಿದ ಹರಕುಮುರುಕು ಹಿಂದಿಯಲ್ಲಿ ಆ ಸಭೆಗೆ ನನ್ನ ಆಶಯವನ್ನು ವ್ಯಕ್ತಪಡಿಸುವುದಕ್ಕೆ ಹೊರತು ದಿಲ್ಲಿಯ ಮುಸಲ್ಮಾನರ ಕುಂದಿಲ್ಲದ, ಮೆರುಗಿಟ್ಟ, ಉರ್ದುವಿನಲ್ಲಿ ಉಪನ್ಯಾಸ ಕೊಡುವುದಕ್ಕಲ್ಲ. ಈ ಉದ್ದೇಶದಲ್ಲಿ ನಾನು ಕೃತಾರ್ಥನಾದೆನು. ಹಿಂದಿ–ಉರ್ದು ಭಾಷೆಯೊಂದೇ ಹಿಂದೂಸ್ತಾನದ ರಾಷ್ಟ್ರ ಭಾಷೆಯಾಗಲು ಯೋಗ್ಯವಾಗುವುದೆಂಬುದಕ್ಕೆ ಈ ಸಭೆಯು ನನಗೆ ಪ್ರತ್ಯಕ್ಷ ನಿರ್ದಶನ ಕೊಟ್ಟಿತು. ನಾನು ಇಂಗ್ಲೀಷಿನಲ್ಲಿ ಮಾತನಾಡಿದ್ದರೆ ಸಭೆಯ ಮೇಲೆ ಅಷ್ಟು ಗಂಭೀರ ಪರಿಣಾಮವಾಗುತ್ತಿರಲಿಲ್ಲ. ಮೌಲಾನರು ಬಹುಶಃ ಪಂದ್ಯವನ್ನು ಹೂಡುತ್ತಿರಲಿಲ್ಲ. ಅವು ಹಾಗೆ ಹೂಡಿದ್ದರೂ ನಾನು ಅದಕ್ಕೆ ಸರಿಯಾಗಿ ಉತ್ತರ ಕೊಡಲಾಗುತ್ತಿರಲಿಲ್ಲ.

ಆಗ ತೋರಿದ ಹೊಸ ಭಾವವನ್ನು ವ್ಯಕ್ತಪಡಿಸಲು ನನಗೆ ಸರಿಯಾದ ಹಿಂದಿ ಅಥವಾ ಉರ್ದು ಶಬ್ದವು ಹೊಳೆಯಲಿಲ್ಲ. ಇದರಿಂದ ನಾನು ಸ್ವಲ್ಪ ಕ್ಷತಿಗೊಂಡೆನು. ಕಟ್ಟಕಡೆಗೆ ನಾನು ಆ ಭಾವವನ್ನು 'ನಾನ್ ಕೋ–ಆಪರೇಷನ್' (ಅಸಹಕಾರ)ವೆಂಬ ಮಾತಿನಿಂದ ಸೂಚಿಸಿದೆನು. ಅದನ್ನು ಉಪಯೋಗಿಸಲು ಈ ಸಭೆಯೇ ಮೊದಲು. ಮೌಲಾನರು ಭಾಷಣ ಮಾಡುತ್ತಿದ್ದಾಗ ನನಗೆ ಹೀಗೆ ತೋರಿತು. ಅವರು ಸರಕಾರದೊಂದಿಗೆ ಎಷ್ಟೋ ವಿಷಯಗಳಲ್ಲಿ ಸಹಕಾರ ಮಾಡುತ್ತಿದ್ದಾರೆ. ನಾವು ಆಯುಧಪಾಣಿಗಳಾಗುವುದು ಸಾಧ್ಯವಲ್ಲದಿದ್ದರೆ ಅಥವಾ ಉಚಿತವಲ್ಲದಿದ್ದರೆ ಅಂಥ ಸರ್ಕಾರವನ್ನು

ಸಫಲವಾಗಿ ವಿರೋಧಿಸುವ ಮಾತು ಕೇವಲ ನಿರರ್ಥಕ. ಸರ್ಕಾರವನ್ನು ನಿಜವಾಗಿ ವಿರೋಧಿಸುವುದೆಂದರೆ ಅದರೊಡನೆ ಸಹಕರಿಸದಿರುವುದು 'ನಾನ್ ಕೋ–ಆಪರೇಷನ್' (ಅಲಿಪ್ತ) ಎಂಬ ಮಾತು ಹುಟ್ಟಿದುದು ಹೀಗೆ. ಅದರ ಆನೇಕ ಇಂಗಿತಾರ್ಥಗಳು ಆಗ ನನಗೆ ಸ್ಪಷ್ಟವಾಗಿ ತಿಳಿದಿರಲಿಲ್ಲ. ಆದ್ದರಿಂದ ನಾನು ವಿವರಕ್ಕೆ ಹೋಗಲಿಲ್ಲ. ನಾನು ಇಷ್ಟ ಮಾತ್ರ ಹೇಳಿದೆನು.

"ಮುಸಲ್ಮಾನರು ಈಗ ಬಹು ಮುಖ್ಯವಾದ ಗೊತ್ತುವಳಿಯನ್ನು ಸ್ವೀಕರಿಸಿದ್ದಾರೆ. ಸಂಧಿಯ ಶರತ್ತುಗಳು ಅವರಿಗೆ ಅನ್ಯಾಯವಾಗಿದ್ದಲ್ಲಿ (ಹಾಗೆ ಆಗಲು ದೇವರು ಅವಕಾಶ ಕೊಡದಿರಲಿ) ಅವರು ಸರಕಾರದೊಡನೆ ಸಹಕಾರವನ್ನೆಲ್ಲಾ ಬಿಟ್ಟುಬಿಡುವರು. ಹೀಗೆ ಸಹಾಯ ಸಂಬಂಧವನ್ನು ನಿರಾಕರಿಸುವುದು ಪ್ರಜೆಗಳ ಆಜನ್ಮಸಿದ್ಧ ಅಧಿಕಾರ. ಸರಕಾರದ ಬಿರುದುಬಾವಲಿಗಳನ್ನು ಇಟ್ಟುಕೊಳ್ಳು ವುದಾಗಲಿ ಸರಕಾರಿ ಚಾಕರಿಗೆ ಅಂಟಿಕೊಂಡಿರುವುದಾಗಲಿ ನಮ್ಮ ಕರ್ತವ್ಯವಲ್ಲ. ಖಿಲಾಫತ್ತಿನಂಥ ದೊಡ್ಡ ವಿಷಯದಲ್ಲಿ ಸರಕಾರದವರು ನಮಗೆ ದ್ರೋಹವೆಸಗುವುದಾದರೆ ನಾವು ಅವರೊಡನೆ ಅಸಹಕಾರ ತೋರದೆ ಅನ್ಯ ಮಾರ್ಗವಿಲ್ಲ. ಆದ್ದರಿಂದ ಸರಕಾರವು ತಮ್ಮ ಮಾತಿಗೆ ತಪ್ಪಿದರೆ ನಾವು ಅವರೊಡನೆ ಅಸಹಕಾರದಿಂದಿರಲು ನಮಗೆ ಹಕ್ಕುಂಟು".

ಆದರೆ 'ನಾನ್ ಕೋ–ಆಪರೇಷನ್' (ಅಸಹಕಾರ) ಎಂಬ ಮಾತು ಸಾಧಾರಣ ಉಪಯೋಗಕ್ಕೆ ಬರಲು ಇನ್ನೂ ಕೆಲವು ತಿಂಗಳಾಯಿತು. ಆಗಿನ ಮಟ್ಟಿಗೆ ಅದು ಆ ಸಭೆಯ ಕಾರ್ಯಕಲಾಪದಲ್ಲಿ ಮಾಯವಾಯಿತು. ಅಷ್ಟೇಕೆ ಅದಾದ ಒಂದು ತಿಂಗಳ ನಂತರ ಅಮೃತಸರದಲ್ಲಿ ನೆರೆದ ರಾಷ್ಟ್ರಮಹಾಸಭೆ (ಕಾಂಗ್ರೆಸ್) ಯಲ್ಲಿ ನಾನು ಸರಕಾರದೊಡನೆ ಸಹಕರಿಸಬೇಕೆಂಬ ಗೊತ್ತುವಳಿಯನ್ನು ಸಮರ್ಥಿಸಿದುದು ಸರ್ಕಾರವು ಮಾತಿಗೆ ತಪ್ಪುವುದಿಲ್ಲವೆಂಬ ಆಸೆಯಿಟ್ಟುಕೊಂಡೇ" (ಸತ್ಯಶೋಧನೆ, ಭಾಗ–2, 2001, ಪು. 253).

ಗಾಂಧೀಜಿಯವರು ಕೆಲವು ತತ್ವಗಳನ್ನು ಭಾರತೀಯ ಮೂಲದ ತತ್ವಜ್ಞಾನದಿಂದ ಆರಿಸಿಕೊಂಡರು. ಇದು ಗಾಂಧಿಯವರ ತಾತ್ವಿಕತೆಯನ್ನು ಸೂಚಿಸುತ್ತದೆ.

1 ಸತ್ಯಾಗ್ರಹ = ಸತ್ಯಕ್ಕಾಗಿ ಆಗ್ರಹ ಪಡಿಸುವುದು – ಜೈನ ತತ್ವ, ಎರಡನೆಯದಾಗಿ ಭಾರತೀಯ ಪುರಾಣ ಮೂಲ. ರಾಮಾಯಣದ ರಾಮ ಮತ್ತು ಸತ್ಯಹರಿಶ್ಚಂದ್ರರ ಕತೆ.

2 ಉಪವಾಸ = ಇದೂ ಕೂಡಾ ಜೈನ ತತ್ವ ಮತ್ತು ಶ್ರೀರಾಮನವಮಿ ; ಶಿವರಾತ್ರಿ ಉಪವಾಸ. ಇದರಿಂದ ಭೋಗದ ಆಸೆಯಿಲ್ಲ.

3 ಅಹಿಂಸೆ = ಜೈನ ತತ್ವ

4 ಬ್ರಹ್ಮಚರ್ಯ = ಭಾರತೀಯ ಆಧ್ಯಾತ್ಮಿಕ ಚಿಂತನೆಗಳಲ್ಲಿ ಒಂದು ಭಾಗ. ಬ್ರಹ್ಮಚರ್ಯದಿಂದ ಆಧ್ಯಾತ್ಮಿಕ ಸಾಧನೆಯು ಸಾಧ್ಯ ಎಂಬ ತಿಳುವಳಿಕೆ.

5 ಬಹಿಷ್ಕಾರ = ಭಾರತೀಯ ಮೂಲದ ನ್ಯಾಯಾಂಗ ಸಂಹಿತೆಯಲ್ಲಿ ಬಹಿಷ್ಕಾರವೂ ಒಂದು ತತ್ವ, ಇದಕ್ಕೆ ಕುಲಸಂಹಿತೆ / ಕುಟುಂಬ ಸಂಹಿತೆ ; ಗ್ರಾಮ ಸಂಹಿತೆ ; ರಾಜ್ಯ ಸಂಹಿತೆಗಳು ಬೇರೆಬೇರೆಯಿದ್ದವು.

6 ಅಸಹಕಾರ = ಭಾರತೀಯ ಮೂಲ ಅಸಹಕಾರ ತತ್ವದಲ್ಲಿ – ನ್ಯಾಯಾಂಗ ತತ್ವವು ಸೇರಿಕೊಂಡಿದೆ.

ಹೀಗಾಗಿ ಗಾಂಧೀಜಿಯವರು ಆರಿಸಿಕೊಂಡ ಈ ಮಾರ್ಗಗಳು ಹಳೆಯ ಸಿದ್ಧಾಂತಗಳ ಹೊಸ ವ್ಯಾಖ್ಯೆಗಳಾಗಿವೆ. ಮತ್ತು ಇದಕ್ಕೆ ಪ್ರತಿಯಾಗಿ ಬ್ರಿಟೀಶರಲ್ಲಿ ಪ್ರತ್ಯುತ್ತರ ನೀಡಲು ಬೇಕಾದ ಸಿದ್ಧತೆಗಳಿರಲಿಲ್ಲ. ಮೂಲಭೂತವಾಗಿ ಆಗಿನ ಬ್ರಿಟೀಶ್ ಪ್ರಭುತ್ವವು ಈ ಕೆಳಗಿನ ಅಂಶಗಳನ್ನು ಆಧರಿಸಿಕೊಂಡಿದ್ದವು :

1 ಅಧಿಕಾರ

2 ಬಲಾತ್ಕಾರ

3 ಹಿಂಸೆ

4 ಒತ್ತಡವನ್ನು ಹೇರುವುದು

5 ತನಗೆ ಬೇಕಾದಂತೆ ಭಾರತೀಯರನ್ನು ದುಡಿಸಿಕೊಳ್ಳುವುದು

6 ಭಾರತೀಯರನ್ನು ನವ ಶಸ್ತ್ರಾಸ್ತ್ರ ಮತ್ತು 'ನವಜ್ಞಾನ' ಮಾದರಿಗಳು ಸಾಕು ಎಂದು ತಿಳಿದುಕೊಂಡಿರುವುದು.

ಬ್ರಿಟೀಶರು ಒತ್ತಾಯಪೂರ್ವಕವಾಗಿ ಹೇರಿದ ಕಂದಾಯ ಪದ್ಧತಿಯನ್ನು ಗಾಂಧಿಯವರು ತಮ್ಮ ಸತ್ಯಾಗ್ರಹದ ಮೂಲಕ ತಿರಸ್ಕರಿಸಿದರು. ಅವರು ಆತ್ಮ ಕಥೆಯಲ್ಲಿ ಹೇಳುವಂತೆ, ಈ ರೀತಿಯ ಹೋರಾಟ ರೈತರಿಗೆ ಹೊಸದಾಗಿ ಗಾಂಧೀಜಿಯವರು ಅದನ್ನು ವಿವರಿಸಬೇಕಾಯಿತು.

> **"ಸರಕಾರ ಅಧಿಕಾರಿಗಳು ಜನತೆಯ ಒಡೆಯರಲ್ಲ. ಅವರು ಜನತೆಯ ಸೇವಕರು. ಅವರಿಗೆ ಸಂಬಳ ದೊರೆಯುತ್ತಿರುವುದು ಜನಗಳು ಕೊಡುತ್ತಿರುವ ತೆರಿಗೆಗಳಿಂದ (ಸತ್ಯಾನ್ವೇಷಣೆ, 1999, ಗೊರೂರು, ಪು. 453)."**

ಅನಂತರ ಪ್ರಾರಂಭವಾದುದು ಖೇಡಾ ಸತ್ಯಾಗ್ರಹ. 1918ರಲ್ಲಿ ಖೇಡಾ ಜಿಲ್ಲೆಯಲ್ಲಿ ರೈತರ ಸಮಸ್ಯೆಯು ತುಂಬಾ ಬಿಗಡಾಯಿಸಿತ್ತು.

ವ್ಯಾಪಕವಾದ ಬೆಳೆ ಹಾನಿಯಿಂದಾಗಿ ಖೇಡಾ ಜಿಲ್ಲೆಯ ಸ್ಥಿತಿ ಕ್ಷಾಮದ ಹತ್ತಿರ ಹತ್ತಿರ ಬಂದಿತ್ತು. ಖೇಡಾದ ಪಟ್ಟೇದಾರರು ಆ ವರ್ಷದ ಕಂದಾಯಕ್ಕೆ ತಾತ್ಕಾಲಿಕವಾಗಿ ತಡೆ ಆಜ್ಞೆ ಪಡೆಯುವ ಪ್ರಶ್ನೆಯನ್ನು ಪರಿಶೀಲಿಸುತ್ತಿದ್ದರು. ಗಾಂಧೀಯವರು ಬೇಸಾಯಗಾರರಿಗೆ ಯಾವುದೇ ಖಚಿತವಾದ ಸಲಹೆಯನ್ನು ನೀಡುವ ಮುನ್ನವೇ ಭಾರತ ಸೇವಾ ಸಮಾಜದ ಅಮೃತಲಾಲ್ ಥಕ್ಕರ್, ಜಿ.ಕೆ. ದೇವಧರ್ ಮತ್ತು ಎನ್.ಎಂ. ಜೋಷಿ ಅವರು ಪರಿಸ್ಥಿತಿಯನ್ನು ಪರಿಶೀಲಿಸಿ ಕಮಿಷನರಿಗೆ ವರದಿ ಸಲ್ಲಿಸಿದ್ದರು. ಮೋಹನಲಾಲ್ ಪಾಂಡ್ಯ ಮತ್ತು ಶಂಕರಲಾಲ್ ಪರೀಖ್ ಅವರು ಹೋರಾಟಕ್ಕೆ ಧುಮುಕಿದ್ದರು. ಬೊಂಬಾಯಿನ ವಿಧಾನ ಪರಿಷತ್ತಿನಲ್ಲಿ ವಿಠಲಭಾಯಿ ಪಟೇಲರು ಆಂದೋಲನವನ್ನು ಆರಂಭಿಸಿದ್ದರು. ಈ ಸಂದರ್ಭದಲ್ಲಿ ಒಂದಲ್ಲ, ಹಲವು ನಿಯೋಗಗಳು ಗವರ್ನರ್ ಅವರನ್ನು ಭೇಟಿ ಮಾಡಿದ್ದವು.

ಬೇಸಾಯಗಾರರ ಬೇಡಿಕೆ ಎಷ್ಟು ಮಧ್ಯಮವರ್ಗದ್ದಾಗಿತ್ತು ಎಂದರೆ ಅದು ಒಪ್ಪಲು ಯೋಗ್ಯವಾದದ್ದೆಂಬ ಬಲವಾದ ವಾದದಂತೆ ಕಾಣುತ್ತಿತ್ತು. ಭೂ ಕಂದಾಯದ ನಿಯಮಗಳ ಪ್ರಕಾರ ಬೆಳೆ ನಾಲ್ಕಾಣೆಯಷ್ಟು ಅಥವಾ ಅದಕ್ಕಿಂತ ಕಡಿಮೆ ಆಗಿದ್ದರೆ ಬೇಸಾಯಗಾರರು ಆ ವರ್ಷದ ಕಂದಾಯದ ಪಾವತಿಯನ್ನು ಪೂರ್ಣವಾಗಿ ತಡೆಹಿಡಿದುಕೊಳ್ಳಬಹುದಾಗಿತ್ತು. ಅಧಿಕೃತ ಅಂಕಿ ಅಂಶಗಳ ಪ್ರಕಾರ ಬೆಳೆ ನಾಲ್ಕಾಣೆಗಿಂತ ಹೆಚ್ಚಾಗಿತ್ತು. ಆದರೆ ರೈತರ ಪ್ರಕಾರ ಅದು ನಾಲ್ಕಾಣೆಗಿಂತ ಕಡಿಮೆಯಾಗಿತ್ತು.

ಗಾಂಧೀಜಿಯವರು ಖುದ್ದಾಗಿ ಐವತ್ತಕ್ಕೂ ಹೆಚ್ಚಿನ ಹಳ್ಳಿಗಳಿಗೆ ಭೇಟಿ ಕೊಟ್ಟರು. ಸಾಧ್ಯವಾದಷ್ಟು ಜನರ ಜೊತೆ ಮಾತನಾಡಿದರು. ಅವರ ಜಮೀನನ್ನು ನೋಡಿದರು. ಹಳ್ಳಿಗರನ್ನು ತೀವ್ರವಾದ ಪಾಟೀಸವಾಲಿಗೆ ಗುರಿ ಮಾಡಿ ಕೊನೆಗೆ ಅವರಿಗೆ ಬಂದಿದ್ದ ಬೆಳೆ ನಾಲ್ಕಾಣೆಗಿಂತ ಕಡಿಮೆಯಾಗಿತ್ತು ಎಂಬುದನ್ನು ಖಚಿತಪಡಿಸಿಕೊಂಡರು. ನಿಷ್ಪಕ್ಷಪಾತವಾದ ವಿಚಾರಣಾ ಸಮಿತಿಯೊಂದನ್ನು ನೇಮಿಸಬೇಕು ಎಂದು ಅವರು ಸಲಹೆ ಮಾಡಿದರು. ಸರ್ಕಾರವು ಅವರ ಸಲಹೆಯನ್ನು ತಳ್ಳಿ ಹಾಕಿತು. ಬಲಪ್ರಯೋಗ ಮಾಡಿ ಕಂದಾಯವನ್ನು ವಸೂಲಿ ಮಾಡಬೇಕು ಎಂದು ಹಟ ಹಿಡಿಯಿತು. ಗಾಂಧೀಜಿ ಅಂತಿಮವಾಗಿ ನೀಡಿದ ಸಲಹೆ ಇದು : ಇಡೀ ಜಿಲ್ಲೆಯಲ್ಲಿ ಕಂದಾಯದ ಪಾವತಿಯನ್ನು ಪೂರ್ಣವಾಗಿ ತಡೆಹಿಡಿಯುವುದು ನ್ಯಾಯ. ಆದರೂ ಎಲ್ಲರೂ ಒಪ್ಪುವಂತೆ ಎಲ್ಲಿ ಆರಾಣೆಗಿಂತ ಹೆಚ್ಚಿಗೆ ಬೆಳೆ ಆಗಿದೆಯೋ ಆ ಹಳ್ಳಿಗಳನ್ನು ಬಿಟ್ಟು ಉಳಿದ ಕಡೆ ಅರ್ಧ ಕಂದಾಯದ ಪಾವತಿಯನ್ನು ತಡೆಹಿಡಿಯಬೇಕು.

ಸರ್ಕಾರವು ಈ ನ್ಯಾಯವಾದ ಬೇಡಿಕೆಯನ್ನು ತಿರಸ್ಕರಿಸಿತು. ಆದ್ದರಿಂದ 1918ರ ಮಾರ್ಚಿ 22ರಂದು ಪಟ್ಟೇದಾರರು ಸತ್ಯಾಗ್ರಹ ಹೂಡುವಂತೆ ಗಾಂಧೀಜಿ ಸಲಹೆ ಮಾಡಿದರು.

ಖೇಡಾ ಜಿಲ್ಲೆಯ ಸ್ವಯಂ ಸೇವಕರ ಜೊತೆಗೆ ಈ ಹೋರಾಟದಲ್ಲಿ ಗಾಂಧೀಜಿಗೆ ಬೆಂಬಲವಾಗಿ ನಿಂತ ಕಾರ್ಯಕರ್ತರೆಂದರೆ ವಲ್ಲಭಭಾಯಿ ಪಟೇಲ್, ಶಂಕರಲಾಲ್ ಬ್ಯಾಂಕರ್, ಅನಸೂಯಾ ಬಹೆನ್, ಇಂದುಲಾಲ್ ಯಾಜ್ಞಿಕ್ ಮತ್ತು ಮಹಾದೇವ ದೇಸಾಯಿ. ನಾದಿಯದ್ ಅನಾಥಾಶ್ರಮವನ್ನು ಗಾಂಧೀಜಿ ತಮ್ಮ ಮುಖ್ಯ ಕೇಂದ್ರವನ್ನಾಗಿ ಮಾಡಿಕೊಂಡರು.

ಸತ್ಯಾಗ್ರಹಿಗಳು ಗಂಭೀರವಾಗಿ ಘೋಷಿಸಿದರು :

> "ನಮ್ಮ ಹಳ್ಳಿಗಳಲ್ಲಿ ಬೆಳೆ ನಾಲ್ಕಾಣೆಗಿಂತ ಕಡಿಮೆ ಎಂದು ತಿಳಿದು ಮುಂದಿನ ವರ್ಷದ ವರೆಗೆ ಕಂದಾಯವನ್ನು ವಸೂಲಿ ಮಾಡಕೂಡದು ಎಂದು ಸರ್ಕಾರವನ್ನು ಪ್ರಾರ್ಥಿಸಿಕೊಂಡೆವು. ಆದರೆ ಸರ್ಕಾರವು ನಮ್ಮ ಪ್ರಾರ್ಥನೆಯನ್ನು ಮನ್ನಿಸಿಲ್ಲ. ಆದ್ದರಿಂದ, ಈ ಕೆಳಗೆ ಸಹಿ ಮಾಡಿರುವ ನಾವು, ಸರ್ಕಾರಕ್ಕೆ ನಾವಾಗಿಯೇ ಪೂರಾ ಅಥವಾ ಬಾಕಿ ಇರುವ ಕಂದಾಯವನ್ನು ಪಾವತಿ ಮಾಡುವುದಿಲ್ಲ. ಸರ್ಕಾರವು ಯಾವುದೇ ಕಾನೂನಿನ ಕ್ರಮವನ್ನು ಬೇಕಾದರೂ ತೆಗೆದುಕೊಳ್ಳಬಹುದು. ಕಂದಾಯದ ಪಾವತಿಸದಿರುವದರಿಂದ ಉಂಟಾಗುವ ಎಲ್ಲ ಕಷ್ಟಗಳನ್ನು ನಾವು ಸಂತೋಷವಾಗಿ ಅನುಭವಿಸುತ್ತೇವೆ. ನಾವಾಗಿಯೇ ಕಂದಾಯ ಕಟ್ಟಿ ನಮ್ಮದು ಸುಳ್ಳುವಾದ ಎನ್ನಿಸಿಕೊಳ್ಳುವುದಕ್ಕಿಂತ, ಆತ್ಮ ಗೌರವವನ್ನು ಬಲಿಕೊಡುವುದಕ್ಕಿಂತ ನಮ್ಮ ಜಮೀನನ್ನು ಕಳೆದುಕೊಳ್ಳುವುದೇ ಲೇಸು. ಆದರೆ, ಒಂದು ವೇಳೆ ಸರ್ಕಾರವು ಇಡೀ ಜಿಲ್ಲೆಯಲ್ಲಿ ಕಂದಾಯದ ಎರಡನೆಯ ಕಂತಿನ ವಸೂಲಿಯನ್ನು ಕೈ ಬಿಡುವುದಾದರೆ ನಮ್ಮಲ್ಲಿ ಚೈತನ್ಯವುಳ್ಳವರು ಇಡೀ ಕಂದಾಯವನ್ನಾಗಲಿ, ಬಾಕಿ ಇರುವಷ್ಟನ್ನಾಗಲಿ ಕೊಟ್ಟು ಬಿಡುತ್ತೇವೆ. ಕಂದಾಯ ಕೊಡುವ ಚೈತನ್ಯ ಇರುವವರು ಕೂಡ ಏಕೆ ಕೊಡುತ್ತಿಲ್ಲ ಎಂದರೆ ಬಡವರಾಗಿರುವ ರೈತರು ಗಾಬರಿಯಾಗಿ ಕಂದಾಯ ಕಟ್ಟಲು ಇದ್ದು ಬಿದ್ದದ್ದನ್ನು ಮಾರಿ ಸಾಲ ಸೋಲಕ್ಕೆ ಸಿಕ್ಕಿ ಹಾಳಾಗುತ್ತಾರಲ್ಲಾ ಎಂದು. ಈ ಪರಿಸ್ಥಿತಿಯಲ್ಲಿ ಬಡವರಿಗಾಗಿ ಇದ್ದವರು ಕೂಡ ತಮ್ಮ ಕಂದಾಯವನ್ನು ಕಟ್ಟದೇ ಇರುವುದು ಕರ್ತವ್ಯ ಎಂದು ನಮ್ಮ ಭಾವನೆ". ಸತ್ಯಾಗ್ರಹಿಗಳ ಸಂಖ್ಯೆ 3000ವನ್ನು ಮೀರಿತು.

ಯುದ್ಧವು ವಿಷಮ ಸ್ಥಿತಿಯನ್ನು ಮುಟ್ಟಿದ ಸಮಯದಲ್ಲಿ ಈ ಚಳುವಳಿಯನ್ನು ಆರಂಭಿಸಿದ್ದಕ್ಕಾಗಿ ಕಮಿಷನರ್ ಗಾಂಧೀಜಿಯನ್ನು ದೂಷಿಸಿದರು. ಏಪ್ರಿಲ್ 15 ರಂದು ಗಾಂಧೀಜಿ ಉತ್ತರ ಕೊಟ್ಟರು. 'ಈ ವಿಷಮ ಸ್ಥಿತಿಯನ್ನು ಕಮಿಷನರ್ ಅವರೇ ಆಹ್ವಾನಿಸಿಕೊಂಡಿದ್ದಾರೆ. ಇದನ್ನು ಎಂಥ ಅಂಧಮಂತ್ರವನ್ನಾಗಿ ಮಾಡಿ ಕೂರಿಸಿದ್ದಾರೆ ಎಂದರೆ ಮೊದಲೇ ಅವರು ಲಾರ್ಡ್ ವಿಲಿಂಗ್‌ಟನ್ ಅವರ ತೀರ್ಮಾನದ ವಿರುದ್ಧ ಏನೂ ಮಾಡುವಂತಿಲ್ಲ. ಇದೇ ಕಮಿಷನರ್ ಕೈಯ್ಯಲ್ಲಿರುವ ಆಯುಧ. ತಮ್ಮ ನಿಲುವನ್ನು ಸಮರ್ಥಿಸಿಕೊಳ್ಳಲು ಅವರು ಯುದ್ಧದ ಹೆಸರು ಹೇಳುತ್ತಾರೆ. ಸಾಮ್ರಾಜ್ಯಕ್ಕೆ ಇಂಥ ಅಪಾಯ ಒದಗಿರುವಾಗ ರೈತರೂ ನಾನೂ ನಮ್ಮ ಉದ್ದೇಶವನ್ನು ಕೈಬಿಡಬೇಕು ಎನ್ನುತ್ತಿದ್ದಾರೆ. ಆದರೆ ಕಮಿಷನರ್ ಅವರ ಈ ಮನೋಭಾವ ಜರ್ಮನ್ ಅಪಾಯಕ್ಕಿಂತ ಹೆಚ್ಚಿನ ಅಪಾಯವನ್ನು ಒಡ್ಡುವಂಥದು ಎಂದು ಸೂಚಿಸುವ ಸಾಹಸ ಮಾಡುತ್ತಿದ್ದೇನೆ. ಒಳಗಿನ ಈ ಅಪಾಯದಿಂದ ಸಾಮ್ರಾಜ್ಯವನ್ನು ರಕ್ಷಿಸಿ ನಾನು ಅದಕ್ಕೆ ಸೇವೆ ಸಲ್ಲಿಸುತ್ತಿದ್ದೇನೆ. ಭರತಖಂಡವು ತನ್ನ ದೀರ್ಘ ನಿದ್ರೆಯಿಂದ ಎಚ್ಚೆತ್ತುಕೊಳ್ಳುತ್ತಿದೆ ಎಂಬ ವಿಷಯದಲ್ಲಿ ಯಾವ ಸಂದೇಹವೂ ಇಲ್ಲ. ತಮ್ಮ ಹಕ್ಕುಗಳೇನು, ಕರ್ತವ್ಯಗಳೇನು ಎಂಬುದನ್ನು ಅರಿಯಲು ರೈತರು ಅಕ್ಷರಸ್ಥರೇನೂ ಆಗಿರಬೇಕಾಗಿಲ್ಲ. ತಮ್ಮ ಶಕ್ತಿ ಅಭೇದ್ಯವಾದದ್ದು ಎಂದು ಅವರು ಮನಗಾಣಬೇಕು ಅಷ್ಟೆ. ಆಗ ಯಾವ ಸರ್ಕಾರವೂ, ಅದು ಎಷ್ಟೇ ಬಲಿಷ್ಠ ವಾದದ್ದಾದರೂ, ಅವರ ಸಂಕಲ್ಪಕ್ಕೆ ವಿರುದ್ಧವಾಗಿ ನಿಲ್ಲಲಾರದು. ಖೇಡಾ ರೈತರು ಭಾರತದಲ್ಲಿ ಮಹತ್ಪ್ರಮಾಣದ ಸಾರ್ವಭೌಮ ಸಮಸ್ಯೆಯನ್ನು ಬಿಡಿಸುತ್ತಿದ್ದಾರೆ. ತಮ್ಮ ಒಪ್ಪಿಗೆಯಿಲ್ಲದೆ ತಮ್ಮನ್ನು ಆಳುವುದು ಅಸಾಧ್ಯ ಎಂಬುದನ್ನು ಅವರು ತೋರಿಸಿಯೇ ತೀರುತ್ತಾರೆ. ಸರ್ಕಾರದ ಅಪ್ಪಣೆಗಳು ವಿಚಾರರಹಿತ ಹಾಗೂ ಅನ್ಯಾಯ ಎಂದು ಅವರ ವಿವೇಚನೆಗೆ ಕಂಡಾಗಲೂ ಅವುಗಳನ್ನು ಪಾಲಿಸುವಂತೆ ರೈತರನ್ನು ಒತ್ತಾಯಿಸಲು ಯುದ್ಧವು ಪರವಾನಗಿಯನ್ನು ಕೊಡುವುದಿಲ್ಲ'.

ಜಮೀನನ್ನು ಮುಟ್ಟುಗೋಲು ಹಾಕಿಕೊಳ್ಳುತ್ತೇವೆ ಎಂದು ಕಮಿಷನರ್ ಬೆದರಿಕೆ ಹಾಕಿದರು : "ಅವಿಧೇಯರಾಗಿರುವವರಿಗೆ ಇನ್ನು ಮುಂದೆ ಜಮೀನು ದೊರಕುವುದಿಲ್ಲ. ಹಕ್ಕಿನ ದಾಖಲೆಗಳಲ್ಲಿ ಅವರ ಹೆಸರುಗಳಿರುವುದು ಸರ್ಕಾರಕ್ಕೆ ಇಷ್ಟವಿಲ್ಲ. ಹೆಸರು ವಜಾ

ಆದವರನ್ನು ಮತ್ತೆ ಎಂದಿಗೂ ಸೇರಿಕೊಳ್ಳುವುದೇ ಇಲ್ಲ".

ಪ್ರಾರಂಭದಲ್ಲಿ ಸರ್ಕಾರವು ಉಗ್ರವಾದ ಕ್ರಮಗಳನ್ನು ತೆಗೆದುಕೊಳ್ಳಲಿಲ್ಲ. ಆದರೆ ಯಾವಾಗ ರೈತರು ಬಗ್ಗುವ ಚಿಹ್ನೆಗಳು ಕಾಣಲಿಲ್ಲವೋ ಆಗ ಅಧಿಕಾರಿಗಳು ಬಲ ಪ್ರಯೋಗಕ್ಕೆ ತೊಡಗಿದರು. ಅಧಿಕಾರಿಗಳು ರೈತರ ದನಕರುಗಳನ್ನು ಮಾರಿದರು. ಕೈಗೆ ಸಿಕ್ಕಿದ ಚರಾಸ್ತಿಯನ್ನೆಲ್ಲಾ ವಶಪಡಿಸಿಕೊಂಡರು. ಜುಲ್ಮಾನೆಯ ನೋಟೀಸುಗಳನ್ನು ಜಾರಿಗೆ ಮಾಡಿದರು. ಕೊಯ್ಲಿಗೆ ಬಂದಿದ್ದ ಬೆಳೆಗಳನ್ನು ಜಪ್ತಿ ಮಾಡಿದರು. ಇದೆಲ್ಲದರಿಂದ ರೈತರು ಬೆದರಿದರು. ಕೆಲವರು ಕಂದಾಯದ ಬಾಕಿಯನ್ನು ಪಾವತಿ ಮಾಡಿದರು ಮತ್ತು ಕೆಲವರು ಸುಲಭವಾದ ಚರಾಸ್ತಿಯನ್ನು ಅಧಿಕಾರಿಗಳಿಗೆ ಒಪ್ಪಿಸಿದರು. ಅವನ್ನೇ ಜಪ್ತಿ ಮಾಡಿ ಬಾಕಿಗೆ ವಜಾ ಹಾಕಿಕೊಳ್ಳಲಿ ಎಂಬುದು ಅವರ ಉದ್ದೇಶ.

ಹೆದರಿದ್ದ ರೈತರ ಹೃದಯವನ್ನು ಉಕ್ಕಾಗಿಸುವ ದೃಷ್ಟಿಯಿಂದ ಗಾಂಧೀಜಿ, ಅಕ್ರಮವಾಗಿ ಜಪ್ತಿ ಮಾಡಿದ್ದ ಈರುಳ್ಳಿ ಬೆಳೆಯನ್ನೂ ಒಂದು ಹೊಲದಲ್ಲಿ ಕಟಾವು ಮಾಡುವಂತೆ ಜನರಿಗೆ ಹೇಳಿದರು. ಹಾಗೆ ಮಾಡಲು ಮೋಹನಲಾಲ ಪಾಂಡ್ಯರು ಮುಂದೆ ಬಂದರು. ಏಳೆಂಟು ಜನ ಅವರ ನೆರವಿಗೆ ನಿಂತರು. ಅವರ ಮೇಲೆ ಅಪರಾಧ ಹೊರಿಸಿ ಶಿಕ್ಷೆ ವಿಧಿಸಲಾಯಿತು. ವಿಚಾರಣೆಯ ದಿನ ಜನ ಕೋರ್ಟನ್ನು ಮುತ್ತಿಬಿಟ್ಟರು. ಶಿಕ್ಷೆಗೆ ಗುರಿಯಾಗಿದ್ದ ಸತ್ಯಾಗ್ರಹಿಗಳನ್ನು ಜೈಲಿಗೆ ಒಯ್ಯುವಾಗ ಜನರೂ ಅವರ ಜೊತೆ ಮೆರವಣಿಗೆ ಹೋದರು. 'ಧುಂಗ್ಲೀ ಚೋರ್' ಅಥವಾ 'ಈರುಳ್ಳಿ ಕಳ್ಳ' ಎಂಬ ಗೌರವದ ಬಿರುದನ್ನು ಅಂದು ಮೋಹನಲಾಲ ಪಾಂಡ್ಯರಿಗೆ ಜನರು ಕೊಟ್ಟರು.

ಸುಮಾರು ನಾಲ್ಕು ತಿಂಗಳ ಹೋರಾಟದ ನಂತರ ಚಳುವಳಿ ಅನಿರೀಕ್ಷಿತವಾಗಿ ಮುಕ್ತಾಯಗೊಂಡಿತು. ನಾದಿಯದ್ ತಾಲ್ಲೂಕಿನ ಮಾಮ್ಲುತ್‌ದಾರರು ಗಾಂಧೀಜಿಗೆ ಬರೆದರು – ದುಡ್ಡುಳ್ಳ ಪಟ್ಟೇದಾರರು ಕಂದಾಯ ಪಾವತಿ ಮಾಡಿಬಿಟ್ಟರೆ ಬಡವರಿಗೆ ಕಂದಾಯದ ಪಾವತಿಯನ್ನು ತಡೆಹಿಡಿಯುತ್ತೇವೆ ಎಂದು. ಮಾಮ್ಲುತ್‌ದಾರರ ಕಾಗದದಲ್ಲಿ ನಮೂದಿಸಿದ್ದ ಷರತ್ತಿನಂತೆ ಕಂದಾಯದ ತಡೆಯಾಜ್ಞೆಯನ್ನು ಈಗಾಗಲೇ ಹೊರಡಿಸಲಾಗಿದೆ ಎಂದು ಗಾಂಧೀಜಿಗೆ ಕಲೆಕ್ಟರ್ ತಿಳಿಸಿದರು.

(ಮಹಾತ್ಮ, 1974, ಸಂ. 1, ಪು. 336–339).

ಅನಂತರ ರೌಲೆಟ್ ಆ್ಯಕ್ಟ್‌ಗೆ ಪ್ರತಿಯಾಗಿ ಚಳುವಳಿಗಳು ಪ್ರಾರಂಭವಾದವು

1917 ಹಾಗೂ 1918ರಲ್ಲಿ ಅನುಕ್ರಮವಾಗಿ ಚಂಪಾರಣ್ಯ ಹಾಗೂ ಖೇಡಾದಲ್ಲಿಯ ಸತ್ಯಾಗ್ರಹದ ಸಣ್ಣ ಪ್ರಯೋಗಗಳು ನಡೆದುಹೋದ ಬಳಿಕ ರಾಷ್ಟ್ರೀಯ ಪ್ರಮಾಣದಲ್ಲಿ ದೊಡ್ಡದೊಂದು ಸತ್ಯಾಗ್ರಹವನ್ನು ಸಂಘಟಿಸುವ ಸುಸಂಧಿಯು ಗಾಂಧೀಜಿಯವರಿಗೆ ಉಂಟಾಯಿತು. 3–3–1919ನೇ ದಿನ ರೌಲೆಟ್ ಬಿಲ್ಲುಗಳು ಪಾಸಾಗಿ ಕಾಯಿದೆ ಸ್ವರೂಪವನ್ನು ತಾಳಿದವು. ಅದೇ ಆ ಪ್ರಸಂಗ.

1918ರ ನವೆಂಬರ್‌ನಲ್ಲಿ ಮೊದಲಿನ ಮಹಾಯುದ್ಧದಲ್ಲಿ ಮಿತ್ರಪಕ್ಷದವರಿಗೆ ವಿಜಯವು ದೊರಕಿತು. ಆ ಮಹಾಯುದ್ಧದಲ್ಲಿ ಹಿಂದುಸ್ತಾನವು ಭಾಗವಹಿಸಿತ್ತು. ವಿಜಯ ಸಂಪಾದನೆಗಾಗಿ ತನ್ನ ನೆತ್ತರವನ್ನು ಬಸಿದಿತ್ತು. ಹಣವನ್ನು ನೀರಿನಂತೆ ವೆಚ್ಚ ಮಾಡಿತ್ತು. ಯುದ್ಧದ ನಂತರ ಪೂರ್ಣ ಸ್ವರಾಜ್ಯವಲ್ಲದಿದ್ದರೂ ಸ್ವರಾಜ್ಯದ ಬಹು ಅಂಶವು ತನಗೆ ದೊರಕಬಹುದೆಂದು ಹಿಂದುಸ್ತಾನವು ಅಪೇಕ್ಷಿಸಿತ್ತು. ಆದರೆ ಹಸಿದ ಹಿಂದುಸ್ತಾನದ ಎದುರು ಚಿಲ್ಲರೆ ರಾಜಕೀಯ ಅಧಿಕಾರಗಳ ತುಂಡುಗಳು ಎಸೆಯಲ್ಪಡುವ ಮೊದಲೆ ಹಿಂದೀಯರ ನಾಗರಿಕ ಹಕ್ಕುಗಳನ್ನು ಸಂಕುಚಿತಗೊಳಿಸುವ ಹಾಗೂ ಅವರ ಸ್ವಾತಂತ್ರ್ಯ ಪ್ರೀತಿಯನ್ನು ಹತ್ತಿಕ್ಕುವ ರೌಲೆಟ್ ಬಿಲ್ಲುಗಳು ತಮ್ಮ ವಿಕರಾಳ ಸ್ವರೂಪವನ್ನು ಧರಿಸಿದವು. ಡಿಫೆನ್ಸ್ ಆಫ್ ಇಂಡಿಯಾ ನಿಯಮಗಳಂತೆ ಸರಕಾರಕ್ಕೆ ನಿರಂಕುಶ ಅಧಿಕಾರಗಳನ್ನು ಕೊಡುವಂಥ ಹೊಸ ಕಟ್ಟಳೆಯನ್ನು ಮಾಡಿ ರಾಜಕೀಯ ಅಸಂತೋಷವನ್ನು ನಿರ್ನಾಮಗೊಳಿಸಬೇಕೆಂದು ಸರಕಾರದವರು ನಿರ್ಧರಿಸಿದ್ದರು.

ರಾಜದ್ರೋಹ ಹಾಗೂ ಕ್ರಾಂತಿಕಾರಕ ಚಳವಳಿ ಇವುಗಳನ್ನು ಕುರಿತು ರೌಲೆಟ್ ವರದಿಯು 19–1–1919ನೆ ದಿನ ಹಿಂದುಸ್ತಾನದಲ್ಲಿ ಪ್ರಕಟಿಸಲಾಯಿತು. ವರಿಷ್ಠ ವಿಧಿಮಂಡಳದಲ್ಲಿ ರೌಲೆಟ್ ಬಿಲ್ಲುಗಳು 6–2–1919ನೆ ದಿನ ಮಂಡಿಸಲ್ಪಟ್ಟವು. ಆ ಬಿಲ್ಲುಗಳಿಗೆ ಕಾಯಿದೆ ಸ್ವರೂಪವು ಪ್ರಾಪ್ತವಾದ ಪಕ್ಷದಲ್ಲಿ ಸತ್ಯಾಗ್ರಹ ಚಳವಳಿಯನ್ನು ತಾವು ಹೂಡುವೆವು ಎಂದು ಗಾಂಧೀಜಿಯವರು 24–2–1919ನೆ ದಿನ ಸಾರಿದರು. ಎರಡನೆ ಬಿಲ್ಲನ್ನು ಸರಕಾರದವರು ಮುಂದುವರಿಸಲಿಲ್ಲ. ಆದರೆ ಮೊದಲನೆ ಬಿಲ್ಲು 3–3–1919ನೆ ದಿನ ಕ್ರಿಮಿನಲ್ ಲಾ ಅಮೆಂಡ್‌ಮೆಂಟ್ ಆ್ಯಕ್ಟ್ ಎಂಬ ಹೆಸರಿನಿಂದ ಪಾಸಾಯಿತು. ಬಿಲ್ಲುಗಳ ವಿಚಾರ ನಡೆದಾಗ ಗಾಂಧೀಜಿಯವರು ಕಾಲಕಾಲಕ್ಕೆ ಹೇಳಿಕೆಗಳನ್ನು ಕೊಟ್ಟರು. ದೇಶದ ತುಂಬೆಲ್ಲ ಸಂಚಾರವನ್ನು ಕೈಗೊಂಡರು. ಎತ್ತೆತ್ತಲೂ ಜನರು ಉತ್ಸಾಹಪೂರ್ವಕವಾಗಿ ಅವರ ಮಾತಿಗೆ ಬೆಂಬಲ ಕೊಟ್ಟರು. ದಕ್ಷಿಣ ಹಿಂದುಸ್ತಾನದಲ್ಲಿ ವಿಶೇಷ ಉತ್ಸಾಹವು ಕಂಡುಬಂದಿತು. 18–3–1919ನೆ ದಿವಸ

ಸತ್ಯಾಗ್ರಹಿಗಳು ಮಾಡತಕ್ಕ ಒಂದು ಪ್ರತಿಜ್ಞೆಯ ಕರಡನ್ನು ಅವರು ಪ್ರಸಿದ್ಧಿಸಿದರು. ಸತ್ಯಾಗ್ರಹ ಮಂಡಳಿ ಎಂಬುದೊಂದನ್ನು ಸ್ಥಾಪಿಸಿ ತನ್ಮೂಲಕ ಈ ಎಲ್ಲ ಕೆಲಸವನ್ನು ನಡೆಸಿದರು.

ಸತ್ಯಾಗ್ರಹವನ್ನು 30ನೆ ಮಾರ್ಚ್ ದಿನ ಪ್ರಾರಂಭಿಸಬೇಕೆಂದು ಮದ್ರಾಸದಿಂದ ಅವರು ಸೂಚನೆಗಳನ್ನು ಪ್ರಕಟಿಸಿದರು. ಮುಂದೆ ಆ ತಾರೀಖು ಏಪ್ರಿಲ್ 6ಕ್ಕೆ ಬದಲಾಯಿಸಲ್ಪಟ್ಟಿತು. ಆದರೆ ಈ ಮಾತು ದಿಲ್ಲಿ ಮತ್ತು ಹಲವು ಇತರ ಸ್ಥಳಗಳಿಗೆ ಸಕಾಲದಲ್ಲಿ ತಿಳಿಯಲಿಲ್ಲ. ಆದುದರಿಂದ ಅವರು ಸತ್ಯಾಗ್ರಹ ದಿನವನ್ನು 30ನೆ ಮಾರ್ಚ್‌ನಲ್ಲಿ ನಿಗದಿಪಡಿಸಿದರು.

ಆ ಪ್ರತಿಜ್ಞೆಯಲ್ಲಿ ಆ ಬಿಲ್ಲುಗಳು ಅನ್ಯಾಯದಿಂದ ಕೂಡಿದ್ದು ನ್ಯಾಯ ಹಾಗೂ ಸ್ವಾತಂತ್ರ್ಯದ ತತ್ವಗಳ ವಿರುದ್ಧವೂ ವ್ಯಕ್ತಿಯ ಮೂಲಭೂತ ಹಕ್ಕುಗಳಿಗೆ ಮಾರಕವೂ ಆಗಿವೆ ಎಂದು ಉಲ್ಲೇಖಿಸಲಾಗಿತ್ತು. 28–2–1919ನೆ ದಿನ ಗಾಂಧೀಜಿಯವರು ಹೊರಡಿಸಿದ ನಿವೇದನ ಪತ್ರಿಕೆಯಲ್ಲಿ ಅವರು ಅಂದದ್ದೇನೆಂದರೆ, ನಾವು ಈಗ ಇಡುತ್ತಿರುವ ಹೆಜ್ಜೆಯು ಕದಾಚಿತ್ ಹಿಂದುಸ್ತಾನದ ಇತಿಹಾಸದಲ್ಲಿಯೆ ಅತ್ಯಂತ ಮಹತ್ವದ್ದೆನಿಸಬಹುದು... ಪ್ರತಿಜ್ಞಾಬದ್ಧರಾದ ಸತ್ಯಾಗ್ರಹಿಗಳು ಪ್ರತಿಯೊಂದು ಬಗೆಯ ಕಷ್ಟ–ನಷ್ಟ ಸಹಿಸಲು ಸಿದ್ಧರಾಗಿರುವರು. ಸರಕಾರದ ವಿರುದ್ಧ ಅವರ ಮನಸ್ಸಿನಲ್ಲಿ ಯಾವ ಅಹಿತಬುದ್ಧಿಯೂ ಇಲ್ಲ. ತಮ್ಮ ಕಷ್ಟಸಹನದ ನಿರ್ಮಾಣದ ಮುಖಾಂತರವೇ ಅವರು ಸರಕಾರಕ್ಕೆ ಬಿನ್ನಹ ಮಾಡುತ್ತಿರುವರು. ಅದೇ ರೀತಿ ಹಿಂಸಾಮಾರ್ಗದಲ್ಲಿ ವಿಶ್ವಾಸವಿದ್ದವರಿಗೆ ಬೇರೆ ಒಂದು ಅಜೇಯವಾದ ಅಸ್ತ್ರವನ್ನು ತೋರಿಸಿ ಕೊಡುತ್ತಿರುವರು. ಈ ಅಸ್ತ್ರವು ಉಭಯ ಪಕ್ಷಕ್ಕೂ ಕಲ್ಯಾಣಕಾರಕವು ... ದೇಶಕ್ಕೆ ಆದ ರೋಗವು ಅತಿಶಯ ಗಂಭೀರವಾದುದು. ಇತರ ಯಾವ ಉಪಾಯಗಳೂ ಸಫಲವಾಗದೆ ಹೋಗಿವೆ, ಎಂಬ ಬಗ್ಗೆ ಸತ್ಯಾಗ್ರಹಿಗಳು ಮನವರಿಕೆ ಮಾಡಿಕೊಂಡು, ಬಳಿಕ ಈ ಉಪಾಯವನ್ನು ಕೈಗೊಂಡಿರುವರು.

ಮಾರ್ಚ್ 23ನೆ ತಾರೀಖಿನ ದಿನ ಗಾಂಧೀಜಿಯವರು ಮದ್ರಾಸದಿಂದ ಸತ್ಯಾಗ್ರಹದ ಕಾರ್ಯಕ್ರಮವನ್ನು ಜಾಹೀರಪಡಿಸಿದರು. ಆ ಪ್ರಕಟಣೆಯಲ್ಲಿ ಅವರು ಅಂದದ್ದೇನೆಂದರೆ,

> **"ಸತ್ಯಾಗ್ರಹವೆಂಬುದು ಮೂಲತಃ ಧಾರ್ಮಿಕ ಚಳುವಳಿಯು. ಆತ್ಮಶುದ್ಧಿ ಹಾಗೂ ತಪಸ್ಸು ಇವೇ ಅದರ ಲಕ್ಷಣಗಳು. ಕಷ್ಟ ಪರಿಹಾರವನ್ನಾಗಲಿ ಸುಧಾರಣೆಯನ್ನಾಗಲಿ ಸತ್ಯಾಗ್ರಹವು ಅಹಿಂಸಾತ್ಮಕ ರೀತಿಯಿಂದ ಸಾಧಿಸಬೇಕೆನ್ನುವುದು. ಸತ್ಯಾಗ್ರಹಿಯು ಸ್ವತಃ ಕಷ್ಟಪಡುವನು ಹೊರತು ಪ್ರತಿಪಕ್ಷಿಗೆ ನೋವನ್ನು ಕೂಡ**

ಬಗೆಯನು. ವೈಸರಾಯರು ಏಪ್ರಿಲ್ 6ನೆ ತಾರೀಖಿನಷ್ಟೊತ್ತಿಗೆ ಹೊಸ ಕಾನೂನಿಗೆ ತಮ್ಮ ಸಮ್ಮತಿಯನ್ನು ನೀಡಿದರು. ಆದುದರಿಂದ ಆ ದಿನವನ್ನು ನಮ್ಮ ರಾಷ್ಟ್ರಕ್ಕೆ ಆದ ಭಯಂಕರ ಅಪಮಾನದ ದಿನವೆಂದು ನಾವು ಆಚರಿಸಬೇಕು. ಆ ದಿನ ಪರಮಾತ್ಮನಿಗೆ ನಾವು ಪ್ರಾರ್ಥಿಸಬೇಕು'. ಅವರು ಹಮ್ಮಿಕೊಂಡ ಕಾರ್ಯಕ್ರಮವು ಈ ಕೆಳಗಿನಂತಿದೆ : 1) ಎಲ್ಲರೂ 24 ತಾಸಿನ ಉಪವಾಸ ಮಾಡಬೇಕು. ಆದರೆ ಸರಕಾರದ ಮೇಲೆ ಒತ್ತಾಯ ಮಾಡುವ ಉದ್ದೇಶವು ಅದರಲ್ಲಿರಕೂಡದು. ಸವಿನಯ ಕಾಯದೇ ಭಂಗವನ್ನು ಮಾಡುವ ಯೋಗ್ಯತೆಯು ಸತ್ಯಾಗ್ರಹಿಗಳಲ್ಲಿ ಬರಬೇಕಾದರೆ ಈ ಬಗೆಯ ವ್ರತಗಳು ಹಾಗೂ ಶಿಸ್ತು ಅವಶ್ಯ. ಇತರರ ಮಟ್ಟಿಗೆ ಈ ಉಪವಾಸವೆಂದರೆ ನೊಂದ ಅಂತಃಕರಣಗಳ ಒಂದು ಕುರುಹು. 2) ಆ ದಿನ ಎಲ್ಲ ಕೆಲಸವು ಬಂದಿಡಲ್ಪಡಬೇಕು ಅಂದರೆ ಸಾರ್ವತ್ರಿಕ ಹರತಾಳವನ್ನು ಎಲ್ಲರೂ ಪಾಲಿಸಬೇಕು. 3) ರೌಲೆಟ್ ಆ್ಯಕ್ಟ್‌ಗಳನ್ನು ಸರಕಾರದವರು ರದ್ದುಪಡಿಸಬೇಕೆಂದು ಗೊತ್ತುವಳಿಗಳನ್ನು ಮಾಡುವುದಕ್ಕಾಗಿ ಜಾಹೀರ ಸಭೆಗಳು ಎಲ್ಲ ಕಡೆಗೂ ನಡೆಯಬೇಕು.

(ರಂ.ರಾ. ದಿವಾಕರ್, 1985, ಪು. 245–246)

ಇದರ ಜೊತೆಗೆ ಗಾಂಧೀಜಿಯವರ ದಂಡಿಯಾತ್ರೆಯನ್ನು ಉಲ್ಲೇಖಿಸಬಹುದು. 1930ರ ಏಪ್ರಿಲ್ 6 ರಂದು ಗಾಂಧೀಜಿಯವರು ತಮ್ಮ ಪ್ರಖ್ಯಾತವಾದ ದಂಡಿಯಾತ್ರೆಯನ್ನು ಸಬರಮತಿ ಆಶ್ರಮದಿಂದ ಕೈಗೊಂಡು ಸತ್ಯಾಗ್ರಹ ಆಂದೋಲವನ್ನು ಪ್ರಾರಂಭಿಸಿದರು. ಸಮುದ್ರದ ನೀರಿನಿಂದ ಉಪ್ಪನ್ನು ಉತ್ಪಾದಿಸುವುದನ್ನು ಪ್ರತಿಬಂಧಿಸಿರುವುದು ಮತ್ತು ಉಪ್ಪಿನ ಮೇಲೆ ಹೆಚ್ಚಿನ ತೆರಿಗೆಯನ್ನು ವಿಧಿಸಿರುವುದು ಗಾಂಧೀಜಿಯವರು ಈ ಕಾನೂನು ಭಂಗ ಚಳವಳಿಯನ್ನು ಹೂಡುವುದಕ್ಕೆ ಕಾರಣವಾಯಿತು. ಗಾಂಧೀಜಿಯು ಸಾಂಕೇತಿಕವಾಗಿ ಉಪ್ಪನ್ನು ಉತ್ಪಾದಿಸಿ ಸರ್ಕಾರದ ಕಾನೂನನ್ನು ಮುರಿದರು. ಇದು ಪ್ರಬಲವಾದ ಜನತಾ ಚಳವಳಿಯ ಬೆಳವಣಿಗೆಗೆ ನಾಂದಿಯಾಯಿತು. ಮುಷ್ಕರಗಳು, ವಿದೇಶಿ ವಸ್ತ್ರಗಳ ಬಹಿಷ್ಕಾರಗಳು ಮತ್ತು ಹಿಂಸಾತ್ಮಕ ಘಟನೆಗಳು ಅಧಿಕ ಪ್ರಮಾಣದಲ್ಲಿ ಜರುಗಿದವು. ಅನೇಕ ಕಡೆಗಳಲ್ಲಿ ಪ್ರತಿ ಸರ್ಕಾರಗಳು ಸ್ಥಾಪಿತವಾದವು. ಸರ್ಕಾರವು ಈ ಚಳವಳಿಗಳನ್ನು ಅಡಗಿಸಿ ತೀವ್ರವಾದ ದಮನಕಾರಿ ನೀತಿಯನ್ನು ಅನುಸರಿಸಿತು. ಸಹಸ್ರಾರು ಮಂದಿಯನ್ನು ಸೆರೆಮನೆಗೆ ತಳ್ಳಲಾಯಿತು. ಅನೇಕ ಮಂದಿ ಪೊಲೀಸರ ಗುಂಡಿಗೆ ಬಲಿಯಾದರು. ಈ ಮುಷ್ಕರಗಳು ಮತ್ತು ಬಹಿಷ್ಕಾರಗಳು ಬ್ರಿಟೀಶ್ ಸರ್ಕಾರಕ್ಕೆ ನುಂಗಲಾರದ ತುತ್ತಾದವು. ಬಲ ಪ್ರಯೋಗದಿಂದ ಚಳವಳಿಯನ್ನು ಅಡಗಿಸಲಾರದೆ ಹೋದ ಸರ್ಕಾರವು ಸಂಧಾನದ ಮೂಲಕವಾಗಿ ಜನರ ಮನಸ್ಸನ್ನು ಒಲಿಸಿಕೊಳ್ಳಲು ಪ್ರಯತ್ನಿಸಿತು.

ರೌಲಟ್ ಆ್ಯಕ್ಟ್‌ನ ಸಂದರ್ಭದಲ್ಲಿ ರೈತರು ಮಾಡಿದ ಪ್ರತಿಜ್ಞೆ ಈ ರೀತಿಯಿದೆ.

ಇಂಡಿಯನ್ ಕ್ರಿಮಿನಲ್ ಲಾ ಅಮೆಂಡಮೆಂಟ್ ಬಿಲ್ ನಂಬರ್ 1, 1919, ಕ್ರಿಮಿನಲ್ ಲಾ ಎಮರ್ಜೆನ್ಸಿ ಪವರ್ಸ್ ಬಿಲ್ ನಂಬರ್ 2, 1919, ಇವು ಅತ್ಯಂತ ಅನ್ಯಾಯದವು. ವೈಯಕ್ತಿಕ ಸ್ವಾತಂತ್ರ್ಯಕ್ಕೆ ಮಾರಕವಾದವು, ಯಾವ ಮೂಲಭೂತ ಹಕ್ಕುಗಳ ಆಧಾರದ ಮೇಲೆ ಸಮಾಜದ ಹಾಗೂ ಸರಕಾರದ ಸುರಕ್ಷಿತತೆಯು ಅವಲಂಬಿಸಿರುವುದೋ ಅಂಥ ವ್ಯಕ್ತಿಯು ಮೂಲಭೂತ ಹಕ್ಕುಗಳನ್ನು ನಾಶಪಡಿಸುವಂತಹವೂ ಇರುವವೆಂದು ನಮ್ಮ ಸದ್ವಿವೇಕ ಬುದ್ಧಿಯು ನಮಗೆ ಹೇಳುತ್ತಿರುವದರಿಂದ ನಾವು ಗಂಭೀರ ಭಾವದಿಂದ ಈ ಮೂಲಕ ಸಾರುವುದೇನೆಂದರೆ, ಈ ಬಿಲ್ಲುಗಳು ಕಾಯದೆಗಳಾದರೆ ಅವುಗಳನ್ನು ಸರಕಾರದವರು ರದ್ದುಪಡಿಸುವ ವರೆಗೆ ನಾವು ಅವುಗಳನ್ನು ಸವಿನಯವಾಗಿ ಉಲ್ಲಂಘಿಸುವೆವು. ಅದೇ ರೀತಿ ಈ ನಂತರ ಅಸ್ತಿತ್ವದಲ್ಲಿ ಬರುವ ಸತ್ಯಾಗ್ರಹ ಮಂಡಲವು ಹೇಳಬಹುದಾದ ಇತರ ಕಾಯಿದೆಗಳನ್ನು ಉಲ್ಲಂಘಿಸುವೆವು. ಈ ಮೂಲಕ ನಾವು ಇನ್ನೂ ಘೋಷಿಸುವುದೇನೆಂದರೆ, ಈ ಹೋರಾಟದಲ್ಲಿ ನಾವು ಸತ್ಯನಿಷ್ಠರಾಗಿ ನಡೆಯುವೆವು ಹಾಗೂ ಪ್ರಾಣ–ಜನ–ಧನ ಇವುಗಳಿಗೆ ಯಾವ ಹಿಂಸೆಯನ್ನೂ ಬಗೆಯೆವು.

"ಸ್ವಯಂ ಸೇವಕರ ಪ್ರತಿಜ್ಞೆ, ಡಿಸೆಂಬರ್ 1921
ದೇವರನ್ನು ಸಾಕ್ಷಿಯಿಟ್ಟು ನಾನು ಗಂಭೀರತನದಿಂದ ಸಾರುವುದೇನೆಂದರೆ,

1 ನಾನು ರಾಷ್ಟ್ರೀಯ ಸ್ವಯಂ ಸೇವಕ ದಳದ ಸದಸ್ಯನಾಗಲಿಚ್ಛಿಸುತ್ತೇನೆ.

2 ನಾನು ದಳದ ಸದಸ್ಯನಿರುವರೆಗೆ ಕಾಯಾ – ವಾಚಾ ಅಹಿಂಸಕನಿರುವೆನು. ಹಾಗೂ ಮನಸಾ ಅಹಿಂಸಕನಿರಲು ಅಂತಃಕರಣ ಪೂರ್ವಕವಾಗಿ ಯತ್ನಿಸುವೆನು. ಯಾಕೆಂದರೆ ಹಿಂದುಸ್ತಾನವು ಈಗ ಯಾವ ಪರಿಸ್ಥಿತಿಯಲ್ಲಿರುವುದೊ ಆ ಪರಿಸ್ಥಿತಿಯಲ್ಲಿ ಖಿಲಾಫತ್ ಹಾಗೂ ಪಂಜಾಬ ಸಮಸ್ಯೆಗಳ ಯೋಗ್ಯ ನಿಕಾಲೆಯಾಗಿ ಸ್ವರಾಜ್ಯವು ಪ್ರಾಪ್ತವಾಗಬೇಕಾದರೆ ಹಿಂದುಸ್ತಾನದಲ್ಲಿಯ ಹಿಂದು, ಮುಸ್ಲಿಂ, ಸೀಖ್, ಪಾರ್ಸಿ, ಕ್ರಿಶ್ಚಿಯನ್ ಅಥವಾ ಜ್ಯೂ ಈ ಮುಂತಾದ ಎಲ್ಲ ಜಾತಿ ಜನಾಂಗಗಳಲ್ಲಿ ಐಕ್ಯತೆಯುಂಟಾಗಬೇಕೆಂದರೆ ಅಹಿಂಸೆಯೊಂದೆ ಉಪಾಯವು.

3 ಜಾತಿ ಜಾತಿಗಳಲ್ಲಿಯ ಐಕ್ಯದಲ್ಲಿ ನನ್ನ ಪೂರ್ಣ ನಂಬಿಕೆ ಇದೆ ಹಾಗೂ ಆ ಐಕ್ಯವನ್ನು ಸಾಧಿಸುವುದಕ್ಕಾಗಿ ನಾನು ಯಾವಾಗಲೂ ಪ್ರಯತ್ನಪಡುವೆನು.

4 ಹಿಂದುಸ್ತಾನದ ಆರ್ಥಿಕ, ರಾಜಕೀಯ ಮತ್ತು ನೈತಿಕ ಉದ್ಧಾರಕ್ಕಾಗಿ ತತ್ವದ ಆಚರಣೆಯು ಅತ್ಯಂತ ಅವಶ್ಯವೆಂದು ನಾನು ನಂಬಿದ್ದೇನೆ. ಇತರ ಯಾವುದೇ ಬಗೆಯ ಬಟ್ಟೆಯನ್ನು ಉಪಯೋಗಿಸದೆ ನಾನು ಕೈ ನೂಲಿನ, ಕೈ ನೇಯ್ಗೆಯ ಬಟ್ಟೆ ಉಪಯೋಗಿಸುವೆನು.

5 ಹಿಂದೂ ನಾತೆಯಿಂದ ಅಸ್ಪೃಶ್ಯತೆಯ ಕಲಂಕವನ್ನು ತೊಡೆದುಹಾಕುವುದು ಅವಶ್ಯವೂ ನ್ಯಾಯವೂ ಎಂದು ನಾನು ನಂಬುವೆನು. ಹಾಗೂ ಶಕ್ಯವಾದ ಎಲ್ಲ ಪ್ರಸಂಗಗಳಲ್ಲಿ ದಲಿತ ವರ್ಗಗಳೊಡನೆ ಸಂಬಂಧ ಬೆಳೆಸಲು ಹಾಗೂ ಅವರ ಸೇವೆ ಮಾಡಲು ಯತ್ನಿಸುವೆನು (ರಂ.ರಾ. ದಿವಾಕರ, ಪೂರ್ವೋಕ್ತ, ಪು. 300-305)."

ಬ್ರಿಟೀಶರ ವಿರುದ್ಧ ಪ್ರಾರಂಭವಾದ ಕಂದಾಯ ನಿರಾಕರಣೆಯ ಚಳುವಳಿಯು ವಾಸ್ತವವಾಗಿ ಶಸ್ತ್ರಾಸ್ತ್ರದಿಂದೊಡಗೂಡಿದ ಯುದ್ಧವಾಗಿರಲಿಲ್ಲ. ಗಾಂಧಿಯವರು ಅದಕ್ಕೆ ಅತ್ಯಂತ ವ್ಯಾಪಕವಾದ ಅರ್ಥವನ್ನು ಕೊಟ್ಟಿದ್ದರು. ಒಂದು ದೃಷ್ಟಿಯಿಂದ ಬ್ರಿಟೀಶ್ ಆರ್ಥಿಕ ನೀತಿಯನ್ನು ತಡೆಹಿಡಿಯುವ ಆ ಮೂಲಕ ಅವರ ಸಂಪನ್ಮೂಲ ಕ್ರೋಢೀಕರಣದ ತತ್ವವನ್ನು ತಡೆಹಿಡಿಯುವ ಪ್ರಯತ್ನವೂ ಕೂಡಾ ಇದಾಗಿತ್ತು. ಗಾಂಧೀಜಿಯವರ ಕರನಿರಾಕರಣೆಯ ತತ್ವವು ಎರಡರ ಮೇಲೆ ಪ್ರಭಾವಶಾಲಿಯಾಗಿತ್ತು.[2]

ಉಪ್ಪಿನ ಮೇಲಿನ ತೆರಿಗೆ ಹಾಗೂ ರೈತರ ಮೇಲಿನ ಕಂದಾಯ ಇವೆರಡರ ಮೇಲೆ ಪ್ರಭಾವಶಾಲಿಯಾಗಿತ್ತು.

ಈ ಎರಡು ಸಂಗತಿಗಳನ್ನಾಧರಿಸಿ ಹೆಚ್ಚು ಜನರು ಭಾಗವಹಿಸುವುದು ಚಾರಿತ್ರಿಕ ಅನಿವಾರ್ಯವಾಗಿತ್ತು. 'ಉಪ್ಪು' ದೈನಂದಿನ ಬಳಕೆಗೆ ಸಂಬಂಧಿಸಿರುವುದು. ಹಾಗಾಗಿ ಜನಸಾಮಾನ್ಯರು ಅದಕ್ಕೆ ಪ್ರತಿಕ್ರಿಯಿಸುವುದು ಅನಿವಾರ್ಯವಾದರೆ, ರೈತರ ಮೇಲಿನ ಕಂದಾಯ ಈ ಮೊದಲೇ ಸೂಚಿಸಿರುವಂತೆ ಬ್ರಿಟೀಶರು ಅವರ ಆರ್ಥಿಕ ಸಿದ್ಧಾಂತ ಮೂಲ ಸೋಪಾನವೆನ್ನುವಂತೆ ಪ್ರತಿಪಾದಿಸಿದ್ದರು. ಹೀಗಾಗಿ ಗಾಂಧಿಯವರು ರೂಪಿಸಿರುವ ನಿರಾಕರಣೆಯ ಚಳಿವಳಿಯು ದೇಶದಾದ್ಯಂತ ರೂಪುಗೊಂಡಿತ್ತು. ಆ ಸಂದರ್ಭದಲ್ಲಿ ಮೈಸೂರು ಪ್ರಾಂತ್ಯದಲ್ಲಿದ್ದ ತೆರಿಗೆಗಳ ರೂಪಗಳು ಹೀಗಿದ್ದವು. ಇದನ್ನು ಮೈಸೂರು ಸರಕಾರವು ಅಚ್ಚು ಹಾಕಿಸಿತ್ತು ಕೂಡಾ. ಮೈಸೂರಿನ ಮಹಾರಾಜರು

ಬ್ರಿಟೀಶರೊಂದಿಗೆ ಒಪ್ಪಂದ ಮಾಡಿಕೊಂಡಿದ್ದರು. ಅವರು ಹೇರಿರುವ ಕಂದಾಯಗಳು 1929 ರಿಂದಲೇ ಜಾರಿಯಲ್ಲಿತ್ತು. ಮತ್ತು ಕೈಪಿಡಿಯೆಂಬಂತೆ ಜಾರಿಗೆ ತಂದಿದ್ದರು (ಸಂವಿಧಾನ ರೂಪದಲ್ಲಿ) ಅವರು ರೂಪಿಸಿದ ತೆರಿಗೆಗಳು 'ರಾಜ್ಯಬೊಕ್ಕಸ'ವನ್ನು ತುಂಬಿಸುವದನ್ನು ಆಧಾರವಾಗಿರಿಸಿಕೊಂಡಿತ್ತು ಎಂಬುದು ಗಮನಾರ್ಹವಾಗಿದೆ.

ಭಾರತೀಯ ಚಳುವಳಿಯಲ್ಲಿ ರೈತರು ಕರನಿರಾಕರಣೆಯನ್ನು ಮುಖ್ಯ ಕೇಂದ್ರವಾಗಿರಿಸಿದ್ದರು.

1 ಪುನಸ್ಥಾಪನೆ ದಂಗೆಗಳು

2 ಧಾರ್ಮಿಕ ಚಳುವಳಿಗಳು

3 ಸಮಾಜನಿಷ್ಟ ದರೋಡೆಗಳು

4 ಭಯೋತ್ಪಾದಕ ಪ್ರತೀಕಾರಗಳು ಮತ್ತು

5 ಜನತಾ ವಿಪ್ಲವಗಳು

ಇವನ್ನು ಕ್ಯಾಥಲಿಸ್ ಗುರುತಿಸುತ್ತಾಳೆ (ಎಚ್.ವಿ. ನಾಗೇಶ, 1984, ಪು. 21).

ಪುನಸ್ಥಾಪನ ದಂಗೆಗಳು – 1765–1853ರಲ್ಲಿ ಜರುಗಿತು. ಹಳೆಯ ಸಾಮಾಜಿಕ ಪದ್ಧತಿಯನ್ನು ಸ್ಥಾಪಿಸುವುದು ಉದ್ದೇಶ.

ಧಾರ್ಮಿಕ ಚಳುವಳಿ: ಧಾರ್ಮಿಕ ಚಳುವಳಿಯಲ್ಲಿ ಧಾರ್ಮಿಕ ನಾಯಕರ ಪಾತ್ರ ಹಿರಿದು. ಮಲಬಾರಿನ ಮಾಪಿಳ್ಳೆಯವರ ದಂಗೆ (1836–1921) ಇದನ್ನು ಹೋಲುತ್ತದೆ.

ಸಮಾಜ ನಿಷ್ಠದ ರೋಡೆಗಳು – ಠಕ್ಕರ ಹೋರಾಟಗಳು

ಭಯೋತ್ಪಾದಕ ಪ್ರತೀಕಾರಗಳು – ಹಿಂಸೆಯ ಮೂಲಕ ಚಳುವಳಿಗಳು.

ಜನತಾ ವಿಪ್ಲವಗಳು : 1946–51

ಉದಾರ ಸುಧಾರಣಾವಾದಿ ಚಳುವಳಿಗಳು – 1921 ರಿಂದ ಗಾಂಧಿ ಪ್ರಣೀತ ಚಳುವಳಿಗಳು (ವಿವರಗಳಿಗೆ : ಭಾರತದಲ್ಲಿ ರೈತ ಹೋರಾಟಗಳು, 1984).

ಇಲ್ಲಿಯೇ ರೈತರ ಮೇಲಿನ ಕಂದಾಯ ಬಗ್ಗೆ ನಡೆದ ಚಳುವಳಿಯ ಸ್ವರೂಪದ ಬಗ್ಗೆ ನಾವು ಕೆಲವು ಸ್ಥಳಗಳನ್ನು ಪ್ರಮುಖವಾಗಿ ಪ್ರಸ್ತಾವಿಸಬೇಕು

1 ಶಿರಸಿ

2 ಶಿವಪುರ

3 ಹುಬ್ಬಳ್ಳಿ – ಉತ್ತರ ಕರ್ನಾಟಕ

ಶಿರಸಿ, ಸಿದ್ದಾಪುರ ಮತ್ತು ಹಿರೇಕೆರೂರುಗಳಲ್ಲಿ ಕರಬಂದಿಗಳು ಹೇಗೆ ನಡೆದವು ಎಂಬುದನ್ನು ರಂ.ರಾ. ದಿವಾಕರರು ಹೀಗೆ ವಿವರಿಸುತ್ತಾರೆ.(ಪುಟ.204–205 ಶಿರಸಿ, ಸಿದ್ದಾಪುರ, ಹಿರೇಕೆರೂರಗಳಲ್ಲಿ ಕರಬಂದಿ .

1931ರಲ್ಲಿ ಕರ್ನಾಟಕ ಪ್ರಾಂತ್ಯದ ಮೂರು ತಾಲ್ಲೂಕುಗಳಲ್ಲಿ ಕರನಿರಾಕರಣೆ ಮಾಡಲಾಯಿತು. 1918ರಲ್ಲಿ ಖೇಡಾದಲ್ಲಿ ಇದ್ದ ಪರಿಸ್ಥಿತಿಯೆ ಆ ತಾಲ್ಲೂಕುಗಳಲ್ಲಿ ಇತ್ತು ಎನ್ನಬಹುದು. ಆಕಸ್ಮಾತ್ತಾಗಿ 1930–31ರಲ್ಲಿ ದೇಶದಲ್ಲಿ ನಡೆದ ಕಾಯದೇಭಂಗದ ಚಳವಳಿ ಪ್ರಾರಂಭವಾಗುವುದಕ್ಕೂ ಈ ಕರ ನಿರಾಕರಣೆ ಆಗುವುದಕ್ಕೂ ಆಕಸ್ಮಾತ್ತಾಗಿ ಗಂಟು ಬಿದ್ದಿತು. ಕಾಯದೇ ಭಂಗ ಚಳವಳಿಯು ಗಾಂಧಿ–ಆಯರ್ವಿನ್ ಒಪ್ಪಂದದ ಮೂಲಕ ನಿಂತು ಹೋಯಿತು. ಆದರೆ ಅಧಿಕಾರಿಗಳು ಈ ಚಳವಳಿಯ ಬಗ್ಗೆ ಪೂರ್ವಾಗ್ರಹ ದೂಷಿತರಾದುದರಿಂದ ಮತ್ತು ಇಲ್ಲಿಯ ಕಾರ್ಯಕರ್ತರು ರಾಜಕೀಯ ಉದ್ದೇಶದಿಂದ ಈ ಚಳುವಳಿಯನ್ನು ಕೈಗೊಂಡಿರುವರೆಂಬ ಕಲ್ಪನೆಯನ್ನು ಅಧಿಕಾರಿಗಳು ಮಾಡಿಕೊಂಡದ್ದರಿಂದ ರೈತರಿಗೆ ವಿಶೇಷ ತೊಂದರೆ ಉಂಟಾಯಿತು.

1931ರ ಪ್ರಾರಂಭಕ್ಕೆ ಈ ಮೂರು ತಾಲ್ಲೂಕುಗಳಲ್ಲಿ ಒಂದು ಬಗೆಯ ಬರದ ಕರಿಛಾಯೆ ಕಂಡುಬಂದಿತು. ಇತ್ತ ಬೆಳೆಯೂ ಚೆನ್ನಾಗಿ ಬರಲಿಲ್ಲ. ಅತ್ತ ಅಡಿಕೆಯ ಧಾರಣೆಯು ಅತಿಶಯವಾಗಿ ಇಳಿದುಹೋಯಿತು. ಸಿರ್ಸಿ, ಸಿದ್ದಾಪುರ ತಾಲೂಕುಗಳಲ್ಲಿ ಅಡಿಕೆಯೆ ಮುಖ್ಯ ಬೆಳೆ. ಆಣೇವಾರಿಯ ಪ್ರಕಾರ ಬೆಳೆ ನಾಲ್ಕಾಣೆಗಿಂತ ಕಡಿಮೆ ಬಂದಿತ್ತು. ಆದುದರಿಂದ ಆ ವರುಷದ ಕಂದಾಯವನ್ನು ತಹಕೂಬ ಮಾಡಬೇಕೆಂಬುದೆ ರೈತರ ಬೇಡಿಕೆ ಇತ್ತು. ಸಭೆ ಸಮ್ಮೇಳನಗಳ, ಶಿಷ್ಟ ಮಂಡಲಗಳ ಉಪಯೋಗವೇನೂ ಆಗಲಿಲ್ಲ. ಉತ್ತರ ಕನ್ನಡ ಜಿಲ್ಲೆಯಲ್ಲಿಯ ಅಂಕೋಲಾ ತಾಲೂಕಿನಲ್ಲಿ ನಡೆದ ರಾಜಕೀಯ ಕರನಿರಾಕರಣದ ಚಳವಳಿಯೊಡನೆ ಈ ಆರ್ಥಿಕ ಚಳವಳಿಯನ್ನು ತಳಕುಹಾಕಲು ಸರಕಾರಿ ಅಧಿಕಾರಿಗಳು ಪ್ರಯತ್ನ ಮಾಡಿದರು. ರಾಜಕೀಯ ಕ್ಷೇತ್ರದಲ್ಲಿ ಕೆಲಸ ಮಾಡುತ್ತಿದ್ದ ಹಲವು ಮುಖ್ಯ ಕಾರ್ಯಕರ್ತರು ಈ ಆರ್ಥಿಕ ಚಳವಳಿಯ ಪುರಸ್ಕಾರ ಮಾಡಿದ್ದರೆಂಬುದು ನಿಜ. ಆದರೆ ರೈತರ ಆರ್ಥಿಕ ದುಃಖಗಳು ನಿಜವಿದ್ದವು ಹಾಗೂ ಪರಿಹಾರ ಯೋಗ್ಯವಾಗಿದ್ದವು.

ಸಿರ್ಸಿ, ಸಿದ್ಧಾಪುರ ತಾಲೂಕುಗಳು ಉತ್ತರ ಕನ್ನಡ ಜಿಲ್ಲೆಯ ಘಟ್ಟದ ಮೇಲಿರುವವು. ಹಿರೇಕೆರೂರು ಎಂಬುದು ಧಾರವಾಡ ಜಿಲ್ಲೆಯ ಒಂದು ತಾಲೂಕು. ಮೂರು ತಾಲೂಕುಗಳ ರೈತರು ಕ್ರಮಬದ್ಧವಾಗಿ ಹೆಜ್ಜೆಯನ್ನಿಡುವ ಬಗ್ಗೆ ವಿಶೇಷ ಎಚ್ಚರಪಟ್ಟಿದ್ದರು. ರಾಜಕೀಯ ಹೋರಾಟದೊಡನೆ ತಳಕಾಗದಂತೆ ನಡೆಯಬೇಕೆಂದು ಅವರ ಉದ್ದೇಶವಿತ್ತು. ತಮ್ಮ ಅಡಚಣೆಗಳನ್ನು ಅವರು ಪರಿಪರಿಯಿಂದ ಅಧಿಕಾರಿಗಳೆದುರು ಇಟ್ಟರು. ಸಿರ್ಸಿಯ ಮಾಮಲೇದಾರರು ತಹಕೂಬಿಗೆ ಅನುಕೂಲರಿದ್ದರೆಂದೂ ಹಾಗೆ ಅವರು ಅನುಕೂಲರಿದ್ದುದಕ್ಕಾಗಿ ಅವರನ್ನು ಕೂಡಲೆ ಮೇಲಾಧಿಕಾರಿಗಳು ತಂತಿ

ಮೂಲಕ ವರ್ಗಾಯಿಸಿಬಿಟ್ಟರೆಂದೂ ತಿಳಿದು ಬಂದಿದೆ. ಏನೆ ಇರಲಿ ಬರಬರುತ್ತ ಚಳವಳಿಗೆ ಕರಬಂದಿಯ ಸ್ವರೂಪವೆ ಬಂದಿತು. ಯಥಾರ್ಥ ಪರಿಸ್ಥಿತಿ ವಿಚಾರಿಸುವುದನ್ನು ಬಿಟ್ಟು ರೈತರ ಮಗ್ಗಲನ್ನು ಮುರಿಯುವ ಹೀನ ವಿಚಾರದಲ್ಲಿ ಅಧಿಕಾರಿಗಳು ತೊಡಗಿದರು. ವಿಶೇಷತಃ ಸಿರ್ಸಿ, ಸಿದ್ದಾಪುರ ತಾಲೂಕುಗಳ ಬೇಡಿಕೆ ಅತೀವ ಯೋಗ್ಯವಾಗಿತ್ತು. ಒಬ್ಬ ದೊಡ್ಡ ಮುಲಕೀ ಸರಕಾರಿ ಅಧಿಕಾರಿಗಳಾದ ಕೊಲಿನ್ಸ (Collins) ಎಂಬವರು 1923ರಲ್ಲಿ ಆ ತಾಲೂಕುಗಳ ಆರ್ಥಿಕ ಪರಿಶೀಲನೆಯನ್ನು ಮಾಡಿದ್ದರು ಹಾಗೂ ಖಾಯಂ ಆಗಿ ಅಲ್ಲಿಯ ಕಂದಾಯವನ್ನು ಇಳಿಸಬೇಕೆಂದು ಶಿಫಾರಸ್ಸು ಬರೆದಿದ್ದರು. ಆದರೆ ಸರಕಾರವು ಅತ್ತ ಕಣ್ಣೆತ್ತಿ ನೋಡದೆ ರಾಜಕೀಯ ಉದ್ದೇಶದಿಂದ ರೈತರು ಕರನಿರಾಕರಣೆ ಮಾಡುತ್ತಿರುವರೆಂಬ ಆರೋಪವನ್ನು ಹೊರಿಸಿತು.

ಮೂರೂ ತಾಲೂಕಿನ ರೈತರು ನೂರಾರು ಜಪ್ತಿ ಮುಂತಾದ ಪೀಡೆಗಳನ್ನು ಧೈರ್ಯದಿಂದ ಸಹಿಸಿದರು. ಕೈಕಾಲು ಕಳಕೊಳ್ಳದೆ ಭೂಮಿಯನ್ನು ಸರಕಾರದ ಜಮಾ ಮಾಡುವ ಬಗ್ಗೆ ಹೊರಟ ನೋಟೀಸುಗಳನ್ನು ಶಾಂತ ಮನಸ್ಸಿನಿಂದ ಸ್ವೀಕರಿಸಿದರು. ಕೆಲವೊಂದು ಆಸ್ತಿ ಹಾಗೂ ಭೂಮಿ ಲಿಲಾವಿನಲ್ಲಿ ಮಾರಲಾಯಿತು. ಸ್ಥಾನಿಕ ಜನರು ಯಾರೂ ಕೊಳ್ಳಲು ಮುಂದೆ ಬರಲಿಲ್ಲ.

ಸುಮಾರು ಏಳೆಂಟು ನೂರು ಜಪ್ತಿಗಳು ನಡೆದುಹೋಗಿದ್ದವು. ಸುಮಾರು ಇನ್ನೂರು ನೋಟೀಸುಗಳು ಹೊರಟಿದ್ದವು. ಇಷ್ಟರಲ್ಲಿ 4–3–1931ನೆಯ ದಿನ ಗಾಂಧೀ–ಆಯರ್ವಿನ ಒಪ್ಪಂದದ ಸುದ್ದಿಯು ಬಂದುಮುಟ್ಟಿತು.

ಸ್ವಾಭಾವಿಕವಾಗಿ ಜನವರಿ 1931 ರಿಂದ ಪ್ರಾರಂಭಿಸಲಾದ ಅಂಕೋಲೆಯಲ್ಲಿಯ ರಾಜಕೀಯ ಕರಬಂದಿಯನ್ನು ಕೂಡಲೆ ನಿಲ್ಲಿಸಲಾಯಿತು. ಕಾರ್ಯಕರ್ತರ ಹೇಳಿಕೆಯಂತೆ ಅಲ್ಲಿಯ ರೈತರು ಕಂದಾಯವನ್ನು ಕೊಟ್ಟುಬಿಟ್ಟರು. ಆದರೆ ಆರ್ಥಿಕ ದೃಷ್ಟಿಯಿಂದ ಕೊಡಲು ಅಸಮರ್ಥರಿದ್ದ ಮೂರು ತಾಲೂಕಿನ ರೈತರು ಕರನಿರಾಕರಣೆಯನ್ನು ಹಾಗೇ ಸಾಗಿಸಿದರು. ಈ ಎಲ್ಲ ವಿಷಯಗಳ ವಿವರವು ಗಾಂಧೀಜಿಯವರಿಗೆ ತಿಳಿಸಲಾಯಿತು. ಈ ಚಳವಳಿಯನ್ನು ಚಾಲೂ ಮಾಡಲು ಅವರು ಸಮ್ಮತಿ ಕೊಟ್ಟರು..

ಅಷ್ಟರಲ್ಲಿ ಲಿಲಾವಿನ ಕಾಲಕ್ಕೆ ಪಿಕೆಟಿಂಗ ಮಾಡಿದ ಬಗ್ಗೆ ಹಾಗೂ ಇತರ ಇದೇ ಬಗೆಯ ಅಪರಾಧಗಳ ಬಗ್ಗೆ ಹಲವು ಸ್ವಯಂ ಸೇವಕರಿಗೆ ಶಿಕ್ಷೆ ವಿಧಿಸಲ್ಪಟ್ಟಿತ್ತು. ಹಲವರಿಗೆ ತಾಲೂಕು ಬಿಟ್ಟು ಹೋಗಬೇಕೆಂದು ನೋಟೀಸು ಕೊಡಲಾಗಿತ್ತು. ಧಾರವಾಡ, ಬೆಳಗಾವಿಗಳಲ್ಲಿ ಹಲವು ಮನೆಗಳ ಝಡತಿ ಆಗಿ ಹಲವರ ಮೇಲೆ ಈ ಚಳವಳಿ ನಡೆಸುವ ಸಂಚಿನ ಆರೋಪವಿಟ್ಟು ಖಟ್ಲೆ ನಡೆಸಬೇಕೆಂದು ಪೊಲೀಸ್ ಅಧಿಕಾರಿಗಳು

ಪ್ರಯತ್ನ ನಡೆಸಿದ್ದರು. ಆದರೆ ಕೊನೆಗೆ ರೈತರ ಆರ್ಥಿಕ ಕಷ್ಟಗಳನ್ನು ಕುರಿತು ಸರಕಾರಕ್ಕೆ ಮನವರಿಕೆ ಆಯಿತು. ಸ್ಥಾನಿಕ ಅಧಿಕಾರಿಗಳು ನಿಷ್ಪಕ್ಷಪಾತದಿಂದ ಈ ವಿಷಯದತ್ತ ನೋಡಲು ಸಮ್ಮತಿಸುವ ಮೊದಲು ಗಾಂಧೀಜಿಯವರು ಲಾರ್ಡ್ ಆಯರ್ವಿನ್ನರಿಗೆ ಒಂದು ಮಾತು ಹೇಳಬೇಕಾಯಿತು ಎಂಬ ಸುದ್ದಿ ಇದೆ. ಕೊನೆಗೆ 1931ರ ಮೇ ತಿಂಗಳಲ್ಲಿ ಮುಖ್ಯ ಕಾರ್ಯಕರ್ತನಿಗೂ ದಕ್ಷಿಣ ಭಾಗದ ಕಮೀಷನರಿಗೂ ಒಂದು ಬಗೆಯ ಒಪ್ಪಂದವಾಯಿತು. ಹಿರೇಕೆರೂರ ತಾಲೂಕಿನ ರೈತರಿಗೆ ನಿಜವಾದ ಪರಿಹಾರ ದೊರೆಯಿತು. ಆ ವರುಷದ ಕಂದಾಯದ ತಹಕೂಬಿ ಸಿಗುವುದಲ್ಲದೆ ಎಂದೆಂದೂ ದೊರೆಯದ ನೀರಾವರಿ ಕಂದಾಯದ ತಹಕೂಬಿಯೂ ಅವರಿಗೆ ದೊರಕಿತು. ಸಿರ್ಸಿ, ಸಿದ್ದಾಪುರ ತಾಲೂಕುಗಳಲ್ಲಿ ತಹಕೂಬಿ ಸಿಗಬೇಕು ಎಂಬ ಅರ್ಜಿ ಮಾಡಿದ ರೈತರಿಗೆ ಮಾತ್ರ ತಹಕೂಬಿ ಕೊಡುವೆವು ಎಂಬ ವಚನವನ್ನು ಸರಕಾರದವರು ಕೊಟ್ಟರು. ಆದರೆ ವಾಡಿಕೆಯಂತೆ ಸ್ಥಾನಿಕ ಅಧಿಕಾರಿಗಳು ಈ ವಿಷಯದತ್ತ ಉದಾರಭಾವದಿಂದ ನೋಡಲಿಲ್ಲ ಹಾಗೂ ರೈತರಿಗೆ ಬಹಳ ತೊಂದರೆಯಾಯಿತು. ಶಿಕ್ಷೆ ಆದವರನ್ನು ಮಾತ್ರ ಸರಕಾರದವರು ಕೂಡಲೆ ಬಿಟ್ಟುಬಿಟ್ಟರು ಹಾಗೂ ವಿಚಾರಣೆ ನಡೆದ ಖಟ್ಲೆಗಳನ್ನು ತಿರುಗಿ ತೆಗೆದುಕೊಂಡರು. ಚಳವಳಿಯಂತೂ ನಿಲ್ಲಿಸಲಾಗಿತ್ತು ಎಂದು ಬೇರೆ ಹೇಳಬೇಕಾಗಿಲ್ಲ.

ಮುಂದೆ 1931ರ ನವೆಂಬರ್ ತಿಂಗಳಲ್ಲಿ ಸರಕಾರದವರು ಸಿರ್ಸಿ, ಸಿದ್ದಾಪುರ ತಾಲೂಕುಗಳ ಮಟ್ಟಿಗೆ ಹಲವೊಂದು ಸವಲತ್ತುಗಳನ್ನು ಅಮಲಿನಲ್ಲಿ ತಂದರು. ಕೊಲಿನ್ಸರು 1923ರಲ್ಲಿ ಶಿಫಾರಸ್ಸು ಮಾಡಿದ ಸವಲತ್ತುಗಳೆ ಅವು. ಭೂ ಕಂದಾಯದಲ್ಲಿ ವರುಷವೊಂದಕ್ಕೆ 17,000 ರೂಪಾಯಿ ಕಾಯಂ ಕಡಿಮೆ ಮಾಡಲಾಯಿತು. ಸ್ವಲ್ಪ ತಡವಾದರೂ ಈ ಪರಿಹಾರವು ರೈತರ ಭಾರವನ್ನು ಸ್ವಲ್ಪ ಮಟ್ಟಿಗೆ ಕಡಿಮೆ ಮಾಡಿತು. ಆದರೆ ತಮ್ಮ ಹೋರಾಟದ ಮೂಲಕ ಈ ಸವಲತ್ತುಗಳು ತಮಗೆ ದೊರೆತವೆಂಬ ಆತ್ಮವಿಶ್ವಾಸವು ರೈತರ ಮನಸ್ಸಿನಲ್ಲಿ ಹುಟ್ಟುವುದು ಅಧಿಕಾರಿಗಳಿಗೆ ಇಷ್ಟವಿರಲಿಲ್ಲ. ಸರಕಾರದ ಔದಾರ್ಯದ ಮೂಲಕ ಈ ಸವಲತ್ತುಗಳು ದೊರೆತವೆಂಬ ಭಾವನೆಯನ್ನು ಅವರಲ್ಲಿ ಹುಟ್ಟಿಸಬೇಕೆಂಬುದು ಸರಕಾರದ ಉದ್ದೇಶವು. ಆದರೆ ಸತ್ಯವನ್ನು ಮುಚ್ಚಿಡುವುದು ಸಾಧ್ಯವೆ?

ಇತರರ ಸತ್ಯಾಗ್ರಹ

ಇನ್ನು ಗಾಂಧೀಜಿಯವರ ಗೈರು ಹಾಜರಿಯಲ್ಲಿ ಹಾಗೂ ಅವರ ನೇತೃತ್ವ ಅಥವಾ ಆಶೀರ್ವಾದವಿಲ್ಲದೆ ಇತರ ಮುಖಂಡರು ಅಥವಾ ಕಾರ್ಯಕರ್ತರು ನಡೆಸಿದ ಸತ್ಯಾಗ್ರಹ

ಗಳನ್ನು ಪರ್ಯಾಲೋಚಿಸುವಾ. ಇದು ಸತ್ಯಾಗ್ರಹದ ನಾಲ್ಕನೆಯ ವರ್ಗ. ಇವು ಹಿಂದುಸ್ತಾನದಲ್ಲಿ ನಡೆದವು.

ಕಾಡಿನ ಜನರ ಸತ್ಯಾಗ್ರಹ

ಸಿಮಲಾದ ಉತ್ತರಕ್ಕೆ ಹಿಮಾಲಯದಲ್ಲಿ ಕೋಟಗಡ ಎಂಬ ಒಂದು ಪರ್ವತ ಪ್ರದೇಶದ ಜಿಲ್ಲೆಯಿದೆ. ಅದು ಹಿಂದುಸ್ತಾನದಿಂದ ತಿಬೇಟಕ್ಕೆ ಹೋಗುವ ಮಾರ್ಗದ ಮೇಲೆ ಇರುವುದು. ಅಲ್ಲಿ ಬಿಟ್ಟಿಯ ದುಷ್ಟ ಪದ್ಧತಿಯು ಬಹಳ ಪ್ರಚಲಿತವಿತ್ತು. ಸರಕಾರಿ ಅಧಿಕಾರಿಗಳು ಅದರ ಲಾಭ ಪಡೆಯುತ್ತಿದ್ದರು. ಇಷ್ಟೇ ಅಲ್ಲ, ಅಲ್ಲಿ ಪ್ರವಾಸಕ್ಕೆ, ವಿಹಾರಕ್ಕೆ ಇಲ್ಲವೆ ಬೇಟೆಗೆ ಹೋದ ಎಲ್ಲ ಯುರೋಪಿಯನ್ ಜನರು ಹಳ್ಳಿಗರನ್ನು ಪೀಡಿಸುತ್ತಿದ್ದರು. ಕೇವಲ ಹೆಸರಿಗೆ ಕೂಲಿ ಕೊಟ್ಟು ಅನೇಕರನ್ನು ಬೇಕಾದಷ್ಟು ದುಡಿಸುತ್ತಿದ್ದರು. ಈ ಪ್ರಕಾರ ಅಲ್ಲಿಯ ರೈತರು ತಮ್ಮ ಹೊಲ ಕೆಲಸವನ್ನು ಬಿಟ್ಟು ಹಣ್ಣು ಹಣ್ಣಾಗುವ ವರೆಗೆ ಏನೂ ಲಾಭವಿಲ್ಲದೆ ದುಡಿಯಬೇಕಾಗುತ್ತಿತ್ತು. ಇದಲ್ಲದೆ ಅವರ ಒಕ್ಕಲತನಕ್ಕೂ ಪೆಟ್ಟು ಬೀಳುತ್ತಿತ್ತು. ಸಾಹೇಬರು ಇರುವ ಬಂಗಲೆಗಳಿಗೆ ತಮ್ಮ ಆಕಳಗಳನ್ನು ಸಾಗಿಸಿ ಅಲ್ಲಿ ಅತಿಶಯ ಅಗ್ಗ ಬೆಲೆಗೆ ಹಾಲು ಹಿಂಡಿ ಕೊಡಬೇಕಾಗುತ್ತಿತ್ತು.

ಈ ಪದ್ಧತಿ ಅಲ್ಲಿ ಬಹಳ ಹಳೆಯದು. ಈಚೆಗೆ ಅಲ್ಲಿಯ ಬಡಜನರಲ್ಲಿ ಜಾಗ್ರತಿಯಾಗಿ ಅವರು ಅಧಿಕಾರಿಗಳಿಗೆ ನಿಷೇಧಪರವಾದ ಅರ್ಜಿಗಳನ್ನು ಮಾಡಿಕೊಂಡಿದ್ದರು. ಅವರಿಗೆ ಪರಿಹಾರ ಕಲ್ಪಿಸುವ ಬದಲು ಅಧಿಕಾರಿಗಳು ಅವರ ಮುಖಿಯಾದ ಕಪೂರಸಿಂಗನನ್ನು ಸೆರೆಹಿಡಿದರು. ಭಯಕಾರಕ ಕ್ರಮಗಳನ್ನು ಸರಕಾರದವರು ಪ್ರಾರಂಭಿಸಿದರು. ಸಿಮ್ಲಾದಿಂದ ಪೊಲೀಸ ಪಡೆ ತರಲಾಯಿತು. ಅನೇಕ ಜನರನ್ನು ಸೆರೆಹಿಡಿದು ಮಶೀನಗನ್ನು ನಡೆಸುವೆವು, ಕಾಳಾಪಾಣಿಗೆ ಕಳುಹಿಸುವೆವು ಎಂದು ಪೊಲೀಸರು ಬೆದರಿಕೆ ಹಾಕಲಾರಂಭಿಸಿದರು. ಈ ಪರಿಸ್ಥಿತಿಯಲ್ಲಿ ಸುಳ್ಳು ಸಾಕ್ಷಿ ಪುರಾವೆ ರಚಿಸಿ ಕಪೂರಸಿಂಗನಿಗೆ ಶಿಕ್ಷೆ ವಿಧಿಸಲಾಯಿತು. ಇದೆಲ್ಲಾ 1921ರ ಪ್ರಾರಂಭದಲ್ಲಿ. ಆಗ ಹಿಂದುಸ್ತಾನದಲ್ಲಿ ಅಸಹಕಾರ ಚಳವಳಿಯ ಆಂದೋಲನವು ಒಳ್ಳೆ ಭರದಿಂದ ಸಾಗಿತ್ತು.

ಕೆಲವೊಂದು ಕಾಲದ ನಂತರ ಆ ಗುಡ್ಡಗಳಲ್ಲಿ ವಾಸವಾಗಿರುವ ಎಸ್.ಇ. ಸ್ಟೋಕ್ಸ್ ಇವರು ಆ ಪ್ರಶ್ನೆಯನ್ನು ಕೈಗೊಂಡರು. ಅವರು ಬಹುಕಾಲ ಅಲ್ಲಿಯೆ ಹಣ್ಣು ತೋಟವನ್ನು ಮಾಡುತ್ತ ಇರುತ್ತಿದ್ದರು. ಆದುದರಿಂದ ಅವರು ಎಲ್ಲರಿಗೂ ಪರಿಚಿತರು. ಬಹುದಿನದಿಂದ ನಡೆಯುತ್ತ ಬಂದ ಆ ಅನ್ಯಾಯವನ್ನು ಎದುರಿಸಲು ಅವರು ಬಲವಾದ ಪ್ರತಿಕಾರವನ್ನು ಸಂಘಟಿಸಿದರು. ಒಂದು ಪಂಚಾಯತಿಯನ್ನು ಸ್ಥಾಪಿಸಿದರು. ತಾವೆಲ್ಲರೂ ಆ

ಪಂಚಾಯಿತಿಗೆ ಅಧೀನವಾಗಿ ನಡೆಯುವುದು ಹಾಗೂ ಪಂಚಾಯತಿಯ ಮುಖದಿಂದಲೆ ನುಡಿಯುವುದು ಎಂದು ಅಲ್ಲಿಯ ಜನರು ಪಣತೊಟ್ಟರು.

ಬಳಿಕ ಒಂದು ವ್ಯವಸ್ಥಿತವಾದ ಅರ್ಜಿ ತಯಾರಿ ಮಾಡಿ ಅದನ್ನು ಪಂಚಾಯ ತಿಯವರು ಜಿಲ್ಲಾ ಕಮೀಶನರ ಕಡೆಗೆ ಕಳುಹಿಸಿದರು. ಅವನು ಅದರ ದರಕಾರ ಮಾಡಲಿಲ್ಲ. ಇತರ ಅಧಿಕಾರಿಗಳು ಅದೇ ರೀತಿ ನಡಕೊಂಡರು. ಹೀಗಾಗಿ ಆ ಪದ್ಧತಿ ಚಾಲೂ ಉಳಿಯಿತು. ಬ್ರಿಟಿಷ್ ಅಧಿಕಾರಿಗಳ ಸುಖ–ಸೋಯಿ, ಆಟಪಾಟ ಇವು ಆ ಪದ್ಧತಿಯನ್ನೆ ಬಹಳ ಮಟ್ಟಿಗೆ ಅವಲಂಬಿಸಿದ್ದವು. ಆದುದರಿಂದ ಆ ಅನ್ಯಾಯವನ್ನು ಅವರು ನಿರ್ಲಕ್ಷಿಸುತ್ತಿದ್ದರು. ಮುಂದೆ ಒಂದು ವಿಶಿಷ್ಟ ತಾರೀಖಿಗೆ ಆ ಬಿಟ್ಟ ಪದ್ಧತಿ ಪೂರ್ಣ ನಿಂತು ಹೋಗದಿದ್ದರೆ ಇಡೀ ಜಿಲ್ಲೆಯ ಜನರು ಪೂರ್ಣ ಅಸಹಕಾರ ಮಾಡುವರು ಹಾಗೂ ಯಾವುದೇ ಬಗೆಯ ಸೇವೆ ಮಾಡಲು ನಿರಾಕರಿಸುವರು ಎಂದು ಪಂಚಾಯತಿಯವರು ಕಮೀಶನರರಿಗೆ ನೋಟೀಸು ಕೊಟ್ಟರು.

ಕೂಡಲೆ ಸಿಮಲಾದ ಕಮೀಶನರನು ಕೋಟಗಡಕ್ಕೆ ಬಂದನು. ವಾಡಿಕೆಯಂತೆ ಅವನು ಜನಜನರಲ್ಲಿ ಹಳ್ಳಿ ಹಳ್ಳಿಗಳಲ್ಲಿ ಭೇದ ಭಾವವನ್ನು ಉಂಟುಮಾಡಲು ಯತ್ನಿಸಿದನು. ಕಠೋರ ಕ್ರಮಗಳ ಬೆದರಿಕೆ ಹಾಕಿದನು. ಅನೇಕರನ್ನು ಕರೆ ಕಳುಹಿಸಿದನು. ಆದರೆ ಸ್ವತಂತ್ರವಾಗಿ ಮಾತಾಡಲು ಯಾರೂ ಒಪ್ಪಲಿಲ್ಲ. ಎಲ್ಲರೂ ಪಂಚಾಯತಿ ಕಡೆಗೆ ಬೆರಳು ದೋರಿದರು. ಎಲ್ಲರೂ ಶಾಂತಿಯಿಂದ ಇದ್ದರು. ಯಾವುದೇ ಯುರೋಪಿಯನನಿಗೆ ಅಥವಾ ಅಧಿಕಾರಿಗೆ ಯಾವುದೇ ಬಗೆಯ ಸೇವೆಯನ್ನು ಅರ್ಪಿಸಲು ನಿರಾಕರಿಸಿದರು. ಈ ದುಷ್ಟ ಪದ್ಧತಿ ಮೊದಲು ನಷ್ಟವಾಗಲಿಕ್ಕೆ ಬೇಕು ಎಂದು ಹಟ ಹಿಡಿದರು. ಈ ತಿಕ್ಕಾಟವೇನೂ ಬಹುದಿನ ನಡೆದಿತ್ತು. ಆದರೆ ಕಮೀಶನರನು ಸ್ವತಃ ಅಲ್ಲಿಗೆ ಬಂದ ನಂತರ ಅಸಹಕಾರಕ್ಕೆ ತೀವ್ರ ಸ್ವರೂಪವು ಬಂದಿತು. ಅವನು ಬಂದು ಹೋದ ಹಲವು ದಿನಗಳಲ್ಲಿ ಹಳ್ಳಿಗರ ಬೇಡಿಕೆಗಳು ಮನ್ನಿಸಲಾದವು. ದೊಡ್ಡ ಬೀದಿಗುಂಟ ಪ್ರಮುಖ ಸ್ಥಳಗಳಲ್ಲಿ ಅಚ್ಚಾದ ಪತ್ರಿಕೆಗಳು ಸರಕಾರದವರಿಂದ ಅಂಟಿಸಲಾದವು. ಹಳ್ಳಿಗರು ಮಾಡಬಹುದಾದ ಸೇವೆ, ಅದಕ್ಕಾಗಿ ಸಲ್ಲಿಸತಕ್ಕ ಯೋಗ್ಯ ಕೂಲಿ ಮುಂತಾದವುಗಳು ನಿರ್ಧರಿಸಲಾದವು. ಈ ರೀತಿ ಹಳ್ಳಿಗರ ಸಮಾಧಾನ, ಐಕ್ಯ, ಕಷ್ಟಪಡುವ ಸಿದ್ಧತೆ ಮತ್ತು ಎಲ್ಲಕ್ಕೂ ಹೆಚ್ಚಿನದೆಂದರೆ ಅವರ ಅಹಿಂಸಾವೃತ್ತಿ ಇವುಗಳಿಗೆ ವಿಜಯವು ದೊರೆತಿತ್ತು.

ಈ ಚಳವಳಿಯ ಬಗ್ಗೆ ಗಾಂಧೀಜಿಯವರು ಯಂಗ ಇಂಡಿಯಾ ಪತ್ರಿಕೆಯಲ್ಲಿ 21–7–21ರಲ್ಲಿ ನಾಲ್ಕು ಮಾತುಗಳನ್ನು ಬರೆದಿರುವರು. ಅವರು ಅಂದದ್ದೇನೆಂದರೆ ಸ್ಟೋಕ್ಸ್‌ರಂತೆ ಯಾವ ಹಿಂದೀಯನು ಸರಕಾರದೊಡನೆ ಐಕ್ಯೈಕ ವೀರನಾಗಿ

ಹೋರಾಡುತ್ತಿಲ್ಲ. ಅವನು ಆ ಕಾಡುಜನರಿಗೆ ಮಿತ್ರನೂ ಅಹುದು, ತತ್ವಜ್ಞಾನಿಯೂ ಅಹುದು, ಮಾರ್ಗದರ್ಶಕನೂ ಅಹುದು. ಈ ಬಿಟ್ಟಿ ಪದ್ಧತಿಯು ವೈಸರಾಯರ ವಾಸಸ್ಥಾನವಾದ ಸಿಮಲಾದ ಎದುರಿನಲ್ಲಿಯೆ ನಡೆದಿದೆ. ... ಅಲ್ಲಿಯ ಜನರು ಈ ಪ್ರಸಂಗದಲ್ಲಿ ಯಾವುದೇ ಬಗೆಯ ದುರ್ಬಲತೆಯನ್ನು ತಾಳಕೂಡದು. ಅಧಿಕಾರಿಗಳ ಕೋಪವನ್ನು ಸಹಿಸಲು ಅವರು ಸಿದ್ಧರಾಗಬೇಕು. ಕಪೂರಸಿಂಗನಂತೆ ಅವರು ಶಿಕ್ಷೆ ಹೊಂದಲು ಸಿದ್ಧರಾಗಿ ನಿಲ್ಲಬೇಕು."

ಕೋಟಗಡದಲ್ಲಿ ನಡೆದ ಸತ್ಯಾಗ್ರಹದಂಥ ಒಂದು ಪರಿಣಾಮಕಾರಕವಾದ ಚಳವಳಿಯು ಉತ್ತರ ಕನ್ನಡ ಜಿಲ್ಲೆಯ ಸಿರ್ಸಿ ಊರಿನಲ್ಲಿ ಪ್ರಾರಂಭಿಸಿತು. ಅದು ಕೂಡ ಬಿಟ್ಟಿ ಪದ್ಧತಿಯ ವಿರುದ್ಧವೇ ಇತ್ತು. ಅವು ಅಸಹಕಾರ ಆಂದೋಲನದ ಪ್ರಥಮ ದಿನಗಳು. ವಾತಾವರಣದಲ್ಲಿ ನವಜಾಗ್ರತಿಯು ಎದ್ದೇಳುತ್ತಿತ್ತು. ಮುಂಬೈ ಇಲಾಖೆಯ ದಕ್ಷಿಣ ಭಾಗದ ಕಮೀಶನರರಾದ ಕೆಡೆಲ್ (Cadell) ಸಾಹೇಬರು ಸಿರ್ಸಿಯಲ್ಲಿ ಮುಕ್ಕಾಂ ಮಾಡಿದ್ದರು. ಬಿಟ್ಟಿ ಪದ್ಧತಿ ಆ ಜಿಲ್ಲೆಯಲ್ಲಿ ಮೈಯ್ಯುಂಡು ಹೋಗಿತ್ತು. ಅಧಿಕಾರಿಗಳಿಗೆ ಬೇಕಾದ ವಸ್ತುಗಳನ್ನು ಬೇಕಾದಾಗ ಎಲ್ಲರೂ ದರ ಕೇಳದೆ ಪೂರೈಸಿ ತೀರಲಿಕ್ಕೆ ಬೇಕು ಎಂಬ ಪದ್ಧತಿ ಕೂತಿತ್ತು. 1920ರಲ್ಲಿ ಒಂದು ದಿನ, ಸಿರ್ಸಿ ಶಹರದಲ್ಲಿ ಶ್ರೀ ಬಳಗಂಡಿ ರಾಮಕೃಷ್ಣ ಹೆಗಡೇರ ಎತ್ತಿನ ಗಾಡಿಯು ಹಂದಿಗೋಣದ ಶ್ರೀ ವೆಂಕಟರಮಣಭಟ್ಟರ ಅಡಿಕೆ ತುಂಬಿಕೊಂಡು ಬಂದಿತ್ತು. ಸರಕಾರೀ ಪಟ್ಟೇವಾಲರು ಬಲಾತ್ಕಾರದಿಂದ ಒಯ್ಯುವ ಪ್ರಯತ್ನದಲ್ಲಿ ಎತ್ತಿನ ಕಣ್ಣಿಗೆ ಹೊಡೆದರು. ಎತ್ತಿನ ಕಣ್ಣಿನಿಂದ ರಕ್ತ ಸುರಿಯಹತ್ತಿತು. ಇದು ರಾತ್ರಿ 9 ಗಂಟೆಯ ಸಮಯವಿತ್ತು. ಇದರಿಂದ ಊರ ಜನರಲ್ಲಿ, ಈ ಪ್ರಕರಣವನ್ನು ಮೇಲಾಧಿಕಾರಿಗಳ ಮುಂದೆ ಇಡಬೇಕು, ಇಲ್ಲಿಗೇ ಬಿಡಬಾರದು ಮತ್ತು ರಕ್ತ ಸುರಿಯುತ್ತಿದ್ದ ಎತ್ತಿನ ಸ್ಥಿತಿ ಕಣ್ಣಾರೆ ಕಲೆಕ್ಟರರಿಗೆ ತೋರಿಸಬೇಕು ಎಂದು ವಿಚಾರ ಬಂತು. ಕಲೆಕ್ಟರರ ಮುಕ್ಕಾಮು ಆ ದಿವಸ ಸಿರ್ಸಿಯಲ್ಲಿಯೆ ಇತ್ತು. ಆದರೆ ಅವರು ಮರುದಿನ ಬೆಳಗ್ಗೆ ಸಿದ್ದಾಪುರಕ್ಕೆ ಹೊರಡುವರೆಂದು ತಿಳಿದ ಮೂಲಕ ಕೂಡಲೆ ಎತ್ತು ಸಹಿತ ಹೋಗಿ ಕಲೆಕ್ಟರರ ಮುಂದೆ ಈ ಕೆಳ ನೌಕರರ ಅತ್ಯಾಚಾರವನ್ನು ತಿಳಿಸಿ ಹೇಳಬೇಕೆಂದು ಠರಾಯಿಸಿದರು. ಈ ವಿಧದ ಅತ್ಯಾಚಾರಗಳು ಆ ಕಾಲದಲ್ಲಿ ಆಗಾಗ್ಗೆ ಆಗುತ್ತಿದ್ದವು. ಮಾಮಲೇದಾರರಿರಲಿ, ಸಿರಸ್ತೇದಾರರಿರಲಿ, ಕಲೆಕ್ಟರರಿರಲಿ ಒಂದು ಊರಿಂದ ಮತ್ತೊಂದು ಊರಿಗೆ ಹೋಗಬೇಕಾದರೆ 4 ಗಾಡಿ ಅವಶ್ಯವಿದ್ದರೆ 10 ಗಾಡಿ ಬಿಟ್ಟಿ ಹಿಡಿದು ಕಡೆಗೆ ಕೆಲವರಿಂದ ಲಂಚ ತಕ್ಕೊಂಡು, ಬೇಕಾದಷ್ಟು ಗಾಡಿಗಳನ್ನು ಇಟ್ಟುಕೊಂಡು ಬಾಕಿಯವರನ್ನು ಬಿಟ್ಟುಬಿಡುತ್ತಿದ್ದರು. ಇಷ್ಟೇ ಅಲ್ಲ, ಇಟ್ಟುಕೊಂಡ ಗಾಡಿಯವರಿಗೆ

ಸರಕಾರೀ ಬಾಡಿಗೆ ಸಹ ಸರಿಯಾಗಿ ಮುಟ್ಟಿಸುತ್ತಿದ್ದಿಲ್ಲ. ಬಿಟ್ಟಿ ಹಿಡಿಯಬೇಕಾದರೆ ಶಹರಕ್ಕೆ ಬಂದ ಗಾಡಿಗಳನ್ನು ಹಿಡಿಯುತ್ತಿದ್ದರು. ಆ ಗಾಡಿಗಳು ಆಗಷ್ಟೇ ದೂರದಿಂದ ಪ್ರವಾಸ ಮಾಡಿ ಬಂದಿದ್ದು ಎತ್ತುಗಳು ದಣಿದಿದ್ದರೂ ಆ ಕಡೆಗೆ ಈ ನೌಕರರು ಲಕ್ಷಕೊಡುತ್ತಿದ್ದಿಲ್ಲ. ಗಾಡಿಯವರಿಗೆ ಮನೆಗೆ ತಿರುಗಿ ಹೋಗುವುದಿರಲಿ ಅವರ ಜರೂರಿಯ ಕೆಲಸವಿರಲಿ ಇವರಿಗೆ ಅದರ ಪರಿವೆ ಇಲ್ಲದೆ ಗಾಡಿಯವರನ್ನು ಗಾಡಿ ಸಹಿತ ಬಿಟ್ಟೀಹಿಡಕೊಂಡು ಹೋಗುತ್ತಿದ್ದರು. ಆದ್ದರಿಂದ ಈ ಅನ್ಯಾಯದ ಈಗ ತಾನೇ ಆದ ಉದಾಹರಣೆಯನ್ನು ಕಲೆಕ್ಟರರ ಮುಂದೆ ಸಮಕ್ಷಮ ಇಟ್ಟು ತಿಳಿಸಿ ಹೇಳಬೇಕೆಂದು ಜನರು ಠರಾಯಿಸಿದರು. ಅದಕ್ಕಾಗಿ ಎತ್ತಿನ ಗಾಡಿಯ ಮಾಲಿಕರೂ ಗಾಡಿಯ ಆಳೂ ಜನರ ಮುಖ್ಯ ಮುಂದಾಳುಗಳಾದ ಶ್ರೀ ಅಕ್ಕದಾಸ ಗಣಪತಿ ಭಟ್ಟರೂ ಶ್ರೀ ಕಡವೆ ರಾಮಕೃಷ್ಣ ಹೆಗಡೆಯವರೂ ಕೈ. ಗಂಗಾಧರಪಂತ ಪಟವರ್ಧನರೂ ಕಂದೀಲು (Lantern) ಮುಂತಾದ್ದು ತಕ್ಕೊಂಡು ಗಾಯವಾದ ಎತ್ತು ಸಹಿತ ರಾತ್ರಿ 9.30–10 ಗಂಟೆಯ ಸುಮಾರಕ್ಕೆ ಕಲೆಕ್ಟರರ ಬಂಗಲೆಗೆ ಹೋಗಬೇಕೆಂದು ಹೋದರು. ಆದರೆ ಆ ಸಂದರ್ಭದಲ್ಲಿ ದಕ್ಷಿಣ ಭಾಗ ಕಮೀಶನರರ ಮುಕ್ಕಾಮ ಸಹ ಶಿರಸಿಯಲ್ಲಿಯೆ ಇತ್ತು ಮತ್ತು ಈ ಮುಂದಾಳುಗಳು ಕಲೆಕ್ಟರರು ಇರುವ ಬಂಗಲೆಯೆಂಬ ಭಾವನೆಯಿಂದ ಹೋದ ಬಂಗಲೆಯಲ್ಲಿ ಕಮೀಶನರರು ಇಳಕೊಂಡಿದ್ದರು. ಕಲೆಕ್ಟರರು ಬೇರೆ ಬಂಗಲೆಯಲ್ಲಿದ್ದರು. ಆಗ ಹೋದ ಜನರಲ್ಲಿ ಒಬ್ಬರು "Your Honour" ಎಂದು ಗೌರವಪೂರ್ವಕವಾಗಿ ಸಾಹೇಬರಿಗೆ (ಕಲೆಕ್ಟರರು ಎಂಬ ಭಾವನೆಯಿಂದ) ಕರೆದರು. ಆಗ ಕಮೀಶನರ ಸಾಹೇಬರು ಹೊರಗೆ ಬಂದರೂ ಮುಂದಾಳುಗಳ ಹೇಳಿಕೆಯನ್ನು ಕೇಳಿಕೊಳ್ಳುವ ತಾಳ್ಮೆಯನ್ನು ತೋರಿಸಲಿಲ್ಲ. ಬಂಡಿಯ ಆಳಿನ ಮೈಮೇಲೆ ಏರಿಹೋದರು. ಆಗ ಶ್ರೀ ಅಕ್ಕದಾಸ ಗಣಪತಿಭಟ್ಟರು ಸಾಹೇಬರಿಗೆ ಸ್ವಲ್ಪ ತಾಳ್ಮೆ ಹಿಡಿಯಿರಿ ನಾವು ನಿಮ್ಮ ಮುಂದೆ ನಮ್ಮ ದೂರುಗಳನ್ನು ಹೇಳಿಕೊಳ್ಳಲು ಬಂದಿರುವಾಗ ಶಾಂತಚಿತ್ತದಿಂದ ಕೇಳಿಕೊಳ್ಳುವುದು ನಿಮ್ಮಂಥ ಜವಾಬದಾರ ಅಧಿಕಾರಿಯ ಕರ್ತವ್ಯ. ಈ ರೀತಿ ತಾಳ್ಮೆಗೆಟ್ಟು ನಡೆಯುವುದು ಸರಿಯಲ್ಲವೆಂದು ಹೇಳುತ್ತಿರುವಾಗಲೆ ಕಮಿಶನರರು ಅವರ ಕುತ್ತಿಗೆಗೆ ಕೈ ಹಾಕಿ ಅವರನ್ನು ದಬ್ಬಿದರು. ಶ್ರೀ ಕಡವೆ ರಾಮಕೃಷ್ಣ ಹೆಗಡೆಯವರಿಗೆ ಬೂಟಗಾಲಿನಿಂದ ಒದೆಯಹೋದರು. ಆಗ ಮುಂದಾಳುಗಳು ಶಾಂತ ರೀತಿಯಿಂದ ಇದೇನು ತಮ್ಮಂಥ ಅಧಿಕಾರಿಗೆ ಶೋಭಿಸುವುದಿಲ್ಲವೆಂದು ಹೇಳಿ ಹಿಂತಿರುಗಿ ಊರಿಗೆ ಬಂದರು. ಇಷ್ಟರಲ್ಲಿ ಈ ಪ್ರಕಾರ ಮುಂದಾಳುಗಳಿಗೆ ಅಪಮಾನ ಮಾಡಿದ್ದು ಊರಲ್ಲಿ ಹಬ್ಬಿಹೋಗಿತ್ತು. ಜನತೆಯು ಕ್ಷುಬ್ಧವಾಗಿತ್ತು. ಅನೇಕ ಜನರು ಸೇಡು ತೀರಿಸಿಕೊಳ್ಳುವ ವಿಚಾರವನ್ನು

ಸಹ ಮಾತಾಡತೊಡಗಿದರು. ಆದರೆ ಶ್ರೀ ಅಕ್ಕದಾಸರು, ಶ್ರೀ ಕಡವೆ ಮತ್ತು ಇತರ ಮುಂದಾಳುಗಳು ಜನರನ್ನು ಶಾಂತಪಡಿಸಿದರು. ಶಾಂತಿಯೆ ನಮ್ಮ ಮಂತ್ರವೆಂದು ತಿಳಿಸಿದರು. ನಮ್ಮ ನಿಷೇಧವನ್ನು ಶಾಂತ ರೀತಿಯಿಂದ ವ್ಯಕ್ತಮಾಡಬೇಕೆಂದು ತಿಳಿಸಿ ಹೇಳಿದ ಮೇಲೆ ಜನರು ಶಾಂತರಾದರು.

ಮರುದಿನ ಬೆಳಗಾಗುವುದರೊಳಗೆ ಊರಲ್ಲಿ ಕಮೀಶನರರ ಈ ಅತ್ಯಾಚಾರದ ಬಗ್ಗೆ ಸಂಪೂರ್ಣ ಹರತಾಳ ಪಾಲಿಸಬೇಕೆಂದು ನಿರ್ಣಯವಾಯಿತು. ಆ ಪ್ರಕಾರ ಇಡೀ ಸಿರ್ಸಿ ಶಹರವು ಜಾತಿ–ಮತ–ಪಂಥ ಭೇದವಿಲ್ಲದೆ ಸಂಪೂರ್ಣ ಹರತಾಳ ಆಚರಿಸಿತು. ಸಾಹೇಬರಿಗೆ ಆ ದಿನ ಕೋಳಿಯು ಸಿಗಲಿಲ್ಲ. ಕೋಳಿ ತತ್ತಿಯೂ ಸಿಗಲಿಲ್ಲ, ಹಾಲೂ ಸಿಗಲಿಲ್ಲ. ಕಮೀಶನರರು ಅಲ್ಲಿಂದ ತಮ್ಮ ಮುಕ್ಕಾಮು ಎಬ್ಬಿಸಿಕೊಂಡು ಪ್ರಯಾಣ ಬೆಳೆಸಬೇಕಾಯಿತು. ಆದರೆ ಕಮೀಶನರರ ಈ ಅಸಭ್ಯ ವರ್ತನದ ಸುದ್ದಿಯು ಇಡೀ ಜಿಲ್ಲೆಯಲ್ಲಿ ಪಸರಿಸಿತು. ಆದ್ದರಿಂದ ಆ ಸಾಹೇಬರು ಕುಮಠೆಗೆ ಹೋಗಲಿ, ಅಂಕೋಲಾ, ಕಾರವಾರಕ್ಕೆ ಹೋಗಲಿ, ಎಲ್ಲ ಕಡೆಯಲ್ಲಿ ಅವರಿಗೆ ಬಹಿಷ್ಕಾರವಾಯಿತು. ಹರತಾಳದಿಂದ ಅವರ ಸ್ವಾಗತವಾಯಿತು. ವೆಂಗುರ್ಲಾದಂಥ ಜಿಲ್ಲೆಯ ಹೊರಗಿನ ಸ್ಥಳಗಳಲ್ಲಿ ಸಹ ಅವರು ಹೋದಾಗ ಅವರನ್ನು ಇದೇ ತರಹ ಹರತಾಳದಿಂದ ಜನರು ನಿಷೇಧಿಸಿದರು. ಮುಂದೆ ಕಾಯದೆ ಕೌನ್ಸಿಲ್‌ನಲ್ಲಿ ಈ ಬಗ್ಗೆ ಪ್ರಶ್ನೆಗಳಾಗಿ ಈ ಕುರಿತು ಸಾಹೇಬರು ಖೇದ ವ್ಯಕ್ತಪಡಿಸುವ ಸೌಜನ್ಯ ತೋರಿಸಿದರು. ಮುಂದೆ ಸರಕಾರದವರು ಈ ಬಿಟ್ಟಿ ಹಿಡಿಯುವ ವಿಷಯ ಕುರಿತು ವಿಚಾರ ಮಾಡಿದರು. ಈ ತೆರನಾಗಿ ಸರಕಾರೀ ನೌಕರರ ಬಗ್ಗೆಯೂ ಸರಕಾರೀ ಅಧಿಕಾರಿಗಳ ಬಗ್ಗೆಯೂ ಗಾಡಿಗಳನ್ನು ಬಿಟ್ಟಿ ಹಿಡಿಯುವುದನ್ನು ನಿಲ್ಲಿಸಿದರು.

ಈ ರೀತಿ ಇದು ಜನರ ಶಾಂತಿಮಯ ಅಸಹಕಾರದ ವಿಜಯವಾಗಿದ್ದು ಈ ಕುರಿತು ಸಿರ್ಸಿಯ ಜನತೆಯು ಇಂದು ಹೆಮ್ಮೆಪಡುವುದು" (ರಂ.ರಾ. ದಿವಾಕರ, 1985, ಪು. 203–211).

ಶಿವಪುರ ಸತ್ಯಾಗ್ರಹದ ಸಂದರ್ಭದಲ್ಲಿ ಮೈಸೂರು ಸರಕಾರದವರು ಏರ್ಪಡಿಸಿದ ಸುಧಾರಣ ಸಮಿತಿಯ ವಿಚಾರವಾಗಿ ಕಾಂಗ್ರೆಸ್ ಕೂಟವು ಅತೃಪ್ತಿಯನ್ನು ವ್ಯಕ್ತಪಡಿಸಿತ್ತು. ಶಿವಪುರ ಧ್ವಜ ಸತ್ಯಾಗ್ರಹದ ಸಂದರ್ಭದಲ್ಲಿ ಕಂದಾಯಕ್ಕೆ ಸಂಬಂಧಿಸಿದ ಕೆಲವು ವಾದಗಳನ್ನು ಮಂಡಿಸಲಾಯಿತು :

1 ರೈತರ ನಾನಾ ವಿಧದ ತೊಂದರೆಗಳನ್ನು ನಿವಾರಣೆ ಮಾಡಲು ಕಾರ್ಯಕ್ರಮ ಹಮ್ಮಿಕೊಳ್ಳಬೇಕು.

2 ಭೂ ಕಂದಾಯ ಕಡಿಮೆ ಮಾಡಬೇಕು.

3 ರೈತರ ಶಕ್ತಿ ಮೀರಿದ ಸಾಲದ ಹೊರೆಯನ್ನು ವಜಾ ಮಾಡಬೇಕು.

4 ಬಡ್ಡಿಯ ದರವು 6% ಕ್ಕಿಂತ ಹೆಚ್ಚಿರಕೂಡದು.

5 ರೈತರಿಗೆ ನಾನಾ ವಿಧದ ಸುಂಕವಿರಕೂಡದು.

6 ರೈತರ ಬೆಳೆಗೆ ಸಾಹುಕಾರರು ನಡೆಸುವ ವಿಕ್ರಯದ ಅತ್ಯಾಚಾರ ತಡೆಗಟ್ಟಬೇಕು (ಡಿ.ಲಿಂಗಯ್ಯ, 1979, ಪು. 168).

ನಾರಾಯಣ ರಾವ್ ವೈದ್ಯ ಅವರು ಉಪ್ಪಿನ ಸತ್ಯಾಗ್ರಹದ ಕುರಿತು ಹೀಗೆ ಹೇಳುತ್ತಾರೆ (1998, ಪು. 77).

> "ಮಹಾತ್ಮಾಜೀಯವರು ಸಾಬರಮತಿ ಆಶ್ರಮದಿಂದ ಉಪ್ಪಿನ ಸತ್ಯಾಗ್ರಹಕ್ಕೆಂದು ದಂಡೀಯಾತ್ರೆ (ಕಾಲುನಡಿಗೆ)ಯನ್ನು ಕೈಗೊಂಡರು. ಉಪ್ಪು, ಮನುಷ್ಯ ಮಾತ್ರರಿಗೆ ಅತ್ಯವಶ್ಯಕ ವಸ್ತು. ಅದು ಭೂಮಿ, ನೀರು, ಹವೆ ಮುಂತಾದವುಗಳಂತೇ ದೇವರ ಕೊಡುಗೆ. ಅದಕ್ಕೆ ವಿಶೇಷ ಹಣ ಖರ್ಚು ಮಾಡಿ ಉತ್ಪತ್ತಿ ಮಾಡಬೇಕಿಲ್ಲ. ಬೇಕಾದವರು ಬೇಕಾದಲ್ಲಿ ತಾವೇ ಅದನ್ನು ಮಾಡಿಕೊಳ್ಳಬಹುದು. ಹಡಗುಗಳ ಸಮತೋಲನಕ್ಕೆಂದು ಅದನ್ನು ವಿಶೇಷವಾಗಿ ಉಪಯೋಗಿಸುತ್ತಾರೆ. ಹೀಗಿದ್ದೂ ಬಡವರೂ, ಬಲ್ಲಿದವರಿಗೂ ಅವಶ್ಯವಾದ ಇಂಥ ವಸ್ತುವಿನ ಮೇಲೆ ಬ್ರಿಟಿಷ್ ಆಡಳಿತಗಾರರು ಕರಹೇರಿದ್ದೂ ಮಹಾತ್ಮಾಜಿಯವರ ಮನಸ್ಸಿಗೆ ಬೇಸರವನ್ನುಂಟು ಮಾಡಿತು. ಅದಕ್ಕೆ ಈ ಸಣ್ಣ ಒಂದು ವಸ್ತುವಿನಿಂದ ಚಳುವಳಿ ಪ್ರಾರಂಭಿಸಿ ಬ್ರಿಟಿಷ್ ಸರಕಾರವನ್ನೇ ನಡುಗಿಸಿದರು. ಮತ್ತು ತಾವು ಸೆರಮನೆಯ ವಾಸ ಮಾಡಿದರು. ಈ ಆಂದೋಲನ ಇಡೀ ದೇಶವನ್ನೇ ಬಡಿದೆಬ್ಬಿಸಿತು. ಕರ್ನಾಟಕದಲ್ಲಿ ಮೊದಲು ಹುಬ್ಬಳ್ಳಿಯಲ್ಲಿ ಪ್ರಾರಂಭವಾಯಿತು.

ಕಾರಂತರ 'ಔದಾರ್ಯದ ಉರುಳ'ಲ್ಲಿ ಕಾದಂಬರಿಯ ಈ ಕುರಿತಂತೆ ಒಂದು ವಿವರವು ಹೀಗೆ ಬರುತ್ತಿದೆ :

> ರಾಧಾಕೃಷ್ಣ ಊರಿಂದ ಕಣ್ಮರೆಯಾಗಿ ಕೆಲವೇ ತಿಂಗಳು ಕಳೆದಿವೆ. ಆತನ ಕಾಗದ ಪತ್ರಗಳು ಮನೆಗೆ ಬರುತ್ತಿಲ್ಲವಾದರೂ ಅವನು ದಡ್ಡನಾಗಿ ಕುಳಿತಿರಲಿಲ್ಲ. ದಿನವೆಲ್ಲಾ ಶ್ರಮಿಸುತ್ತಿದ್ದಾನೆ. ಆತ ಕಾಲುದಾರಿಯಿಂದಲೇ ಜಿಲ್ಲೆಯ ಗಡಿಯನ್ನು ದಾಟಿ ಉತ್ತರ ಕನ್ನಡ ಜಿಲ್ಲೆಯಲ್ಲಿ ತೀರ ದೊಡ್ಡ ಪ್ರಮಾಣದಲ್ಲಿ ಸತ್ಯಾಗ್ರಹ ಚಳವಳಿ ಹಬ್ಬಿಕೊಂಡಿತ್ತು. ಜನಗಳು ಗುಂಪಾಗಿ ಉಪ್ಪಿನ ಸತ್ಯಾಗ್ರಹ

> ಮಾಡಿದರು. ಅರಣ್ಯ ಸತ್ಯಾಗ್ರಹ ಮಾಡಿದರು. ಕರನಿರಾಕರಣೆ ಎಂದೂ ದುಮುಕಿದರು. ರಾಜಕೀಯ ಅವ್ಯವಸ್ಥೆ ತಲೆದೋರಿತು (2001, ಪು. 238).

ಕಾರಂತರ ಕಾದಂಬರಿಯು ವಾಸ್ತವವನ್ನು ಮಂಡಿಸುತ್ತದೆ.

> ಮಲಬಾರ್ ಟೆನೆನ್ಸಿ ಕಾಯಿದೆಗೆ ಪ್ರತಿಭಟಣೆ
>
> ಕಾಸರಗೋಡಿನಲ್ಲಿ ತಾರೀಖು 26-12-50ರ ದಿನ ಶ್ರೀ ಚಮ್ನಾಡರವರ ಅಧ್ಯಕ್ಷತೆಯಲ್ಲಿ ಜರುಗಿದ ಸಭೆಯಲ್ಲಿ ಶ್ರೀ ಕೆ.ಆರ್. ಕಾರಂತ, ಶ್ರೀ ಉಮೇಶ್ ರಾವ್, ಶ್ರೀ ಬಿ.ಎಸ್. ಕಕ್ಕಿಲ್ಲಾಯ ಮೊದಲಾದವರು ಮೇಲಿನ ಕಾಯಿದೆ ಕಾಸರಗೋಡು ತಾಲೂಕಿನ ಹತ್ತೊಂಬತ್ತು ಗ್ರಾಮಗಳಿಗೆ ಅನ್ವಯಿಸಕೂಡದೆಂದು ನಿರ್ಣಯ ತಂದು ಆ ನಿರ್ಣಯ ಬಹುಮತದಿಂದ ಜನರ ಬೆಂಬಲ ಪಡೆಯಿತು. ಬಹು ಹಿಂದೆಯೇ ಕಾಂಗ್ರೆಸ್ ರೈತರ ರಕ್ಷಣೆಯ ಬಗ್ಗೆ ಕಾಯಿದೆ ಮಾಡಬೇಕಾಗಿತ್ತೆಂದೂ, ಅದಕ್ಕಾಗಿ ಮಾಡಿದ ಏರ್ಪಾಟನ್ನು ಈಗಿನ ಮದ್ರಾಸ್ ಸರಕಾರವು ಮೂಲೆಗೆ ತಳ್ಳಿತೆಂದೂ, ಶ್ರೀ ಮಾಧವಮೆನನ್‌ರವರು ಮಲಬಾರಿಗೆ ಮಾತ್ರ ಕಾಯಿದೆ ಹುಟ್ಟಿಸಿ ಅಲ್ಲಿನ ಗೇಣಿ ಪದ್ಧತಿಗೂ, ನಮ್ಮಲ್ಲಿಗೂ ಯಾವ ಹೋಲುವೆ ಇಲ್ಲದಿದ್ದರೂ, ಅದನ್ನು ಕನ್ನಡ ಜಿಲ್ಲೆಗಳ ಗ್ರಾಮಗಳ ಮೇಲೆ ಹೊರಿಸುವುದು ತಪ್ಪೆಂದೂ, ಕೆಲವು ಕಡೆ ಇದು ಕನ್ನಡ ಪ್ರಾಂತಗಳ ಮೇಲಿನ ಆಕ್ರಮಣವಾಗಿದೆಯೆಂದೂ ಈ ಬಗ್ಗೆ ನೇಮಕಗೊಂಡ ಕಮಿಟಿಯ ವರದಿಗೆ ವಿರುದ್ಧವಾಗಿ ಕಾಸರಗೋಡು ತಾಲೂಕಿನ ಅಂಶ ಸೇರಿಸಿದ್ದು ತಪ್ಪೆಂದೂ ವಾದಿಸಿದರು. ಹೀಗೆ, ನೀಲಗಿರಿ ಜಿಲ್ಲೆಯ ಕೆಲವು ಅಂಶವನ್ನೂ ಅದರ ಪ್ರಭಾವಕ್ಕೊಳಪಡಿಸಿದ್ದಾರಂತೆ – ಏಕೆಂದರೆ ಆ ಊರು ಕನ್ನಡಿಗರದ್ದಾದರೂ, ಒಬ್ಬಿಬ್ಬರು ಮಲೆಯಾಳಿ ಜನಗಳು. ಅಲ್ಲಿದ್ದಾರೆಂಬ ನೆಪ.
>
> ಮಾಡಿದ ಕಾಯಿದೆಯಾದರೂ ನ್ಯಾಯವಾಗಿರಬೇಡವೇ? ಅದೂ ಇಲ್ಲ. ಈ ಕಾಯಿದೆ ಇರಬೇಕಾದದ್ದು ರೈತನ ಹಿತ ಸಂಬಂಧದ ರಕ್ಷಣೆಗೆ. ಆದರೆ, ಈ ಶಾಸನದ ಅಂಶಗಳು ನಮ್ಮ ಘಟನಾವಳಿಯು ಕೊಡುವ ಹಕ್ಕುಗಳಿಗೆ, ಅಂದರೆ 'ಯಾರೊಬ್ಬನ ಆಸ್ತಿಪಾಸ್ತಿಯನ್ನು ಸಮಾನದ ಪ್ರತಿಫಲ ಕೊಟ್ಟಲ್ಲದೆ ಕಿತ್ತುಕೊಳ್ಳಲಾಗದು' ಎಂಬ ತತ್ವಕ್ಕೆ ವಿರುದ್ಧವಾಗಿವೆ. ರೆವಿನ್ಯೂ ಮಂತ್ರಿಗಳು ತಾವು ತರಬೇಕಾಗಿದ್ದ ಈ ಕಾಯಿದೆಯನ್ನು ಶ್ರೀ ಮಾಧವಮೆನನರು ತಮ್ಮ ಜಿಲ್ಲೆಗಾಗಿ ತರುವ ಈ ಉದ್ದೇಶ ಅನುಮಾನಕ್ಕೆ ಎಡೆಕೊಡುತ್ತದೆ ಎಂದು ಈ ವಿಷಯದಲ್ಲಿ ಉಪನ್ಯಾಸ ಮಾಡುತ್ತ ಕೆ.ಆರ್. ಕಾರಂತರವರು

ವಾದಿಸಿದರು (ಕಾರಂತರು ಬರದದ್ದು, ವಿಚಾರವಾಣಿ, 10-1-1951).

ವಸಾಹತುಶಾಹಿ ಯುಗಕ್ಕಿಂತ ಮೊದಲು ಕೃಷಿ, ಭೂಮಿ, ಮನುಷ್ಯರ ದುಡಿಮೆಗೆ ಇದ್ದ ಸಂಬಂಧಗಳ ಸ್ವರೂಪವು ಬೇರೆ ಬಗೆಯದಾಗಿತ್ತು. ಕೃಷಿ ಉತ್ಪಾದನೆಗೆ ಸಂಬಂಧಿಸಿದಂತೆ ಹೇಳುವುದಾದರೆ ಕೃಷಿಕರ ಮತ್ತು ನೆಲದ ಸಂಬಂಧ ; ಕೃಷಿ ಮತ್ತು ನಿಸರ್ಗ ಜೊತೆಗಿನ ಸಾಮರಸ್ಯವು ಬೇರೆ ಬಗೆಯದಾಗಿತ್ತು. ಕೃಷಿಯು ಬರಿಯ ಭೌತಿಕ (Material Production) ಉತ್ಪಾದನೆ ಆಗಿರಲಿಲ್ಲ. ಅದಕ್ಕೆ ಸಾಮಾಜಿಕ, ರಾಜಕೀಯ ಸಂರಕ್ಷಣೆಯಿತ್ತು. ಕೃಷಿಯು ಬರಿಯ ಸಂಪತ್ತು ಮತ್ತು ಅದಕ್ಕಿರುವುದು ಮಾರುಕಟ್ಟೆಯಾಧಾರಿತ ವಿನಿಮಯ ಮೌಲ್ಯಮಾತ್ರವಿದೆ ಎಂದು ಯಾರೂ ಭಾವಿಸಿಕೊಂಡಿರಲಿಲ್ಲ. ಭಾರತೀಯ ರೈತರಿಗೆ ಕೃಷಿಯೆನ್ನುವುದು ಅವನ ಜೀವನದ ಆಧಾರ ಮಾತ್ರ.

ಇವುಗಳು ವಸಾಹತುಕಾಲಕ್ಕಿಂತ ಪೂರ್ವದ ಆರ್ಥಿಕ ಸಂಬಂಧಗಳನ್ನು ಸೂಚಿಸುತ್ತವೆ. ಇದಕ್ಕೆ ಪೂರಕವಾಗಿ ಫ್ಲೀಟರ್ ಸಂಗ್ರಹಿಸಿದ 'ಆದಾಯ ತೆರಿಗೆ' ಲಾವಣಿಯನ್ನು ಗಮನಿಸಬಹುದು.

ಇದರಿಂದ ತಿಳಿಯುವುದೇನೆಂದರೆ, ಕೃಷಿ ಮತ್ತು ಕಂದಾಯವು ಆಯಾ ಊರಿಗೆ ತಕ್ಕಂತೆ ರೂಪುಗೊಳ್ಳುತ್ತಿದ್ದವು. ಅನೇಕ ಸಂದರ್ಭದಲ್ಲಿ ಬಡ ರೈತರ ಮೇಲೆ ಯಾವುದೇ ಸುಂಕವನ್ನು ಹೇರುತ್ತಿರಲಿಲ್ಲ. ಕೃಷಿಯಿಂದ ಬರುವ ಉತ್ಫಾದನೆ ಜೀವನದ ನಿರ್ವಹಣೆಗೆ ಎನ್ನುವ ನೈತಿಕ ನಿಲುವಿನಿಂದ ರೂಪುಗೊಳ್ಳುತ್ತಿದ್ದ ಹಾಗೆಯೇ ಕೃಷಿಕರು ಮತ್ತು ಸಾರ್ವಜನಿಕ ಜೀವನ ಕ್ರಮದಲ್ಲಿ ಒಂದು ರೀತಿಯ ಹೊಂದಾಣಿಕೆಯಿರುತ್ತಿತ್ತು. ಹಾಗೆಯೇ ಉತ್ಫಾದನೆಗೆ ಸಂಬಂಧಿಸಿದಂತೆ ಬೆಲೆಯು ನಿಗದಿಯಾಗಿರುತ್ತಿದ್ದುದರಿಂದ 'ಸಂಘರ್ಷ'ದ ಸಾಧ್ಯತೆಯು ಕಡಿಮೆಯಿರುತ್ತಿತ್ತು. ಭಾರತದಲ್ಲಿ ಕೃಷಿಯೆನ್ನುವುದು ಜೀವನದ ಅವಿಭಾಜ್ಯ ಅಂಗವಾಗಿದೆ. ಆದರೆ ಭಾರತದ ಕೃಷಿ ಪದ್ಧತಿಯಲ್ಲಿ ಸಂಪ್ರದಾಯ, ನಿಯಮಗಳು, ಉದ್ದೇಶಗಳು ವಸಾಹತು ಪೂರ್ವ ಕಾಲದಲ್ಲಿ ಒಂದು ನಿರ್ದಿಷ್ಟ ಕ್ರಮವನ್ನು ಅನುಸರಿಸಿಕೊಂಡು ರೂಪುಗೊಂಡಿದ್ದವು. ವಸಾಹತು ಶಾಹಿ ಅನುಭವದ ಅನಂತರ ನಮ್ಮ ಜ್ಞಾನ ಮಾದರಿಗಳ ವ್ಯಾಖ್ಯಾನಗಳು ಬದಲಾದುದರಿಂದ ಕೃಷಿ ಸಂಪ್ರದಾಯದ ಜ್ಞಾನ ಮಾದರಿಗಳ ಬಗ್ಗೆ ಮಧ್ಯಮ ವರ್ಗದ ವಿದ್ಯಾವಂತ ಜನತೆಗೆ ಅದರ ಬಗೆಗೆ ಅಸಡ್ಡೆ ಬೆಳೆಯಿತು. ವಾಸ್ತವವಾಗಿ ಕೃಷಿ ಸಂಸ್ಕೃತಿಯೆನ್ನುವುದು ನಿರ್ದಿಷ್ಟವಾದ ಜ್ಞಾನದ ಮಾದರಿಯಾಗಿದೆ. ಅದರಲ್ಲಿ

1 ಪರಿಸರದ ಬಗೆಗಿನ ಸಾಂಪ್ರದಾಯಿಕ ಜ್ಞಾನ.

2 ಭಾರತೀಯ ಕೃಷಿ ತಾಂತ್ರಿಕತೆ.

3 ದೈಹಿಕ ಚಟುವಟಿಕೆ – ಕೃಷಿಯ ಸಮತೋಲನ.

4 ಕೃಷಿಗೆ ಮತ್ತು ಸಾಮಾಜಿಕತೆ ಸಂಬಂಧ. ಇವುಗಳು ಸೇರಿಕೊಂಡಿವೆ.

ಈ ಕುರಿತು ಗಾಂಧಿಯ ನಿಲುವು ಗಮನಾರ್ಹ.

> ಆಸ್ತಿಯುಳ್ಳ ವರ್ಗದವರ ಸ್ವಂತದ ಆಸ್ತಿಯನ್ನು ನ್ಯಾಯಸಮ್ಮತವಾದ ಕಾರಣವಿಲ್ಲದೇ ಕಸಿದುಕೊಳ್ಳುವ ಕೆಲಸಕ್ಕೆ ನಾನೆಂದೂ ಪಾಲುಗಾರನಾಗಲಾರೆ ಎಂದು ನಿಮಗೆ ನಾನು ಆಶ್ವಾಸನೆ ಕೊಡುತ್ತೇನೆ. ನಿಮ್ಮ ಅಂತಃಕರಣವನ್ನು ಮುಟ್ಟಿ ನಿಮ್ಮಲ್ಲಿರುವ ಸ್ವಂತದ ಎಲ್ಲ ಸೊತ್ತೂ ನಿಮ್ಮ ರೈತರ ಸಲುವಾಗಿರುವ ಒಂದು ವಿಶ್ವಸ್ಥ ನಿಧಿಯೆಂದು ಭಾವಿಸಿ ಅದನ್ನು ನೀವು ಮುಖ್ಯವಾಗಿ ನಿಮ್ಮ ರೈತರ ಕಲ್ಯಾಣಕ್ಕಾಗಿಯೇ ಉಪಯೋಗಿಸುವಂತೆ ನಿಮ್ಮನ್ನು ಪರಿವರ್ತನೆಗೊಳಿಸುವುದೇ ಮತ್ತು ಆಕ್ಷೇಪರಹಿತವಾದ ರೀತಿಯಲ್ಲಿ ನಮ್ಮ ಜನತೆಯ ಮತವನ್ನು ತೆಗೆದುಕೊಂಡರೆ ಆಸ್ತಿವಂತ ವರ್ಗವನ್ನು ಸಂಪೂರ್ಣವಾಗಿ ಆಸ್ತಿರಹಿತರನ್ನಾಗಿ ಮಾಡ ಬೇಕೆಂಬುದಕ್ಕೆ ಅವರು ಮತ ಹಾಕುವುದಿಲ್ಲವೆಂದು ನನ್ನ ಸ್ಪಷ್ಟವಾದ ಅಭಿಪ್ರಾಯವಾಗಿದೆ. ರೈತರು ಮತ್ತು ಜಮೀನುದಾರರು, ಸಹಕಾರ ಮತ್ತು ಸಹ ವ್ಯವಸ್ಥೆಗಳನ್ನು ಬೆಳೆಸುವುದಕ್ಕಾಗಿ ಕೆಲಸ ಮಾಡುತ್ತಿದ್ದೇನೆ.
>
> ಆದರೆ ಇಲ್ಲಿ ನಾನು ಒಂದು ಎಚ್ಚರಿಕೆಯ ಮಾತನ್ನು ಹೇಳಲೇಬೇಕು. ಗಿರಣಿಗಳ ಒಡೆಯರಿಗೆ ಯಾವಾಗಲೂ ಹೇಳುತ್ತಾ ಬಂದಿದ್ದೇನೆ. ಅದೇ ರೀತಿಯಾಗಿ ನಿಮ್ಮ ಭೂಮಿಯ ಒಡೆತನವು ನಿಮಗೆ ಎಷ್ಟು ಸೇರಿದೆಯೋ ರೈತರಿಗೂ ಅಷ್ಟೇ ಸೇರಿದೆ, ಮತ್ತು ನಿಮಗೆ ಬರುವ ಉತ್ಪನ್ನವನ್ನು ನೀವು ವಿಲಾಸಸಮಯವಾದ ಹಾಗೂ ದುಂದುಗಾರಿಕೆಯ ಜೀವನದಲ್ಲಿ ಹಾಳು ಮಾಡಬಾರದು. ಅದನ್ನು ರೈತರ ಹಿತಕ್ಕಾಗಿಯೇ ಉಪಯೋಗಿಸಬೇಕೆಂದು ನಿಮಗಾದರೂ ನಾನು ಹೇಳುತ್ತೇನೆ. ನಿಮ್ಮ ಕೂಡ ನಿಮ್ಮ ರೈತರು ಬಾಂಧವ್ಯವನ್ನು ಅನುಭವಿಸುವಂತೆ ಮತ್ತು ನಿಮ್ಮ ಮನೆತನದ ಸದಸ್ಯರೆನಿಸಿರುವವರೆಗೆ ತಮ್ಮ ಹಿತ ಸಂಬಂಧಗಳ ಭದ್ರತೆಗೆ ಯಾವ ಧಕ್ಕೆಯೂ ಬಾರದು ಎಂದು ಅವರಿಗೆ ಅನಿಸುವಂತೆ ಒಮ್ಮೆ ನೀವು ನಡೆದರೆ ಸಾಕು. ಅವರಲ್ಲಿಯೂ ನಿಮ್ಮಲ್ಲಿಯೂ ಯಾವ ತರದ ಲೆಕ್ಕವು ಬರುವುದಿಲ್ಲ. ಎಂಬ ಬಗ್ಗೆ ನೀವು ನಿಶ್ಚಿತವಾದ ರೀತಿಯಲ್ಲಿ ಮನಗಾಣುವಿರಿ.
>
> ನಿಮ್ಮ ಎಲ್ಲ ಹೆದರಿಕೆಗಳೂ ಸಂಶಯಗಳೂ ನಿಮ್ಮ ಅಪರಾಧೀ ಮನೋವೃತ್ತಿಯಿಂದ ಬಂದಂಥವುಗಾಳಾಗಿವೆ. ತಿಳಿದೋ

ತಿಳಿದೆಯೋ ನಿಮ್ಮನ್ನು ಅಪರಾಧಿಗಳನ್ನಾಗಿಸುವ ಅನ್ಯಾಯಗಳನ್ನೆಲ್ಲ ತೊಡೆದು ಹಾಕಿರಿ. ಶಾಂತಿ ಹಾಗೂ ಸ್ವಾತಂತ್ರ್ಯಗಳಿಂದ ಬಾಳಬೇಕೆಂಬುದಕ್ಕಿಂತಲೂ ಹೆಚ್ಚಿನ ಮಹತ್ವಾಕಾಂಕ್ಷೆ ರೈತರಿಗಿಲ್ಲ; ನೀವು ನಿಮ್ಮ ಆಸ್ತಿಯನ್ನು ಅವರ ಸಲುವಾಗಿ ಉಪಯೋಗಿಸಿದರೆ ನಿಮ್ಮ ಒಡೆತನದಲ್ಲಿರುವ ಆಸ್ತಿಯ ಬಗ್ಗೆ ಅವರೆಂದೂ ಅಸೂಯೆಪಡುವುದಿಲ್ಲ.

(ಅಮೃತ ಬಝಾರ ಪತ್ರಿಕಾ, 1934)

ನಮ್ಮ ಪೂರ್ವಜರು ನಮಗೆ ನಿಜವಾದ ಸಮಾಜವಾದವನ್ನು ನೀಡಿ ಹೋಗಿದ್ದಾರೆ. ಅವರು ಕಲಿಸುತ್ತಿದ್ದುದೇನೆಂದರೆ "ಎಲ್ಲ ಭೂಮಿಯೂ ಗೋಪಾಲನಿಗೆ ಸೇರಿದುದಾಗಿದೆ. ಆದುದರಿಂದ ಸೀಮೆಯ ಗೆರೆ ಎಲ್ಲಿ ಇದೆ?" ಮನುಷ್ಯನೇ ಸೀಮೆಯ ಗೆರೆಯನ್ನು ಎಳೆಯುವವನಾಗಿದ್ದಾನೆ. ಆದುದರಿಂದ ಮಾನವನು ಆ ಸೀಮೆಯ ಗೆರೆಯನ್ನು ಅಳಿಸಿಬಿಡಿಬಲ್ಲನು. ಗೋಪಾಲ ಎಂಬುದರ ಶಬ್ದಶಃ ಅರ್ಥವು ದನಗಾಹಿ ಅರ್ಥವೂ ಅದಕ್ಕೆ ಇದೆ. ಆಧುನಿಕ ಭಾಷೆಯಲ್ಲಿ ಆ ಶಬ್ದವು ರಾಷ್ಟ್ರ ಅಥವಾ ಜನತೆ ಎಂಬ ಅರ್ಥವನ್ನು ಭೂಮಿಯು ಇಂದು ಜನತೆಗೆ ಸೇರಿಲ್ಲ ಎಂಬ ಮಾತು ಅತ್ಯಂತ ಸತ್ಯವಾಗಿದೆ ಈ ತಪ್ಪು ನಮ್ಮ ಪೂರ್ವಜರು ಮಾಡಿದ ಉಪದೇಶದಲ್ಲಿಲ್ಲ. ಈ ತತ್ವದಂತೆ ನಡೆದಿದ್ದ ನಮ್ಮಲ್ಲಿಯೇ ಈ ತಪ್ಪು ಇದೆ.

ಈ ಉಪದೇಶದಂತೆ ನಡೆಯಲು ಯಾವುದೇ ರಾಷ್ಟ್ರಕ್ಕೆ ರಶಿಯವನ್ನು ಒಳಗೊಂಡು–ಸಾಧ್ಯವಿರುವ ಒಳ್ಳೆಯ ಯತ್ನಗಳನ್ನೆಲ್ಲ ಅಹಿಂಸಾತ್ಮಕವಾಗಿ ಕೈಕೊಳ್ಳಲು ನಾವು ಸಮರ್ಥ ರಾಗಿದ್ದೇವೆಂಬುದರಲ್ಲಿ ಸಂದೇಹವೇ ಇಲ್ಲ. (ಹ, 1937).

ತಾವು ಹಿಡಿದಿರುವ ಭೂಮಿಗಳೆಲ್ಲ ಸಂಪೂರ್ಣವಾಗಿ ತಮ್ಮವೇ ಆಗಿವೆ. ಅವು ಜಮೀನುದಾರರಿಗೆ ಸೇರಿಲ್ಲ ಎಂಬ ಸಿದ್ಧಾಂತವನ್ನು ರೈತರು ಬಿಟ್ಟುಕೊಡಬೇಕು. ಇನ್ನೊಬ್ಬರ ಆಕ್ರಮಣದಿಂದ ತಮ್ಮ ಹಕ್ಕುಗಳನ್ನು ರಕ್ಷಿಸುವ ಜಮೀನುದಾರನು ಯಜಮಾನನಾಗಿರುವ ಅವಿಭಕ್ತ ಕುಟುಂಬ ಸದಸ್ಯರಾಗಿ ಈ ರೈತರು ಇರಬೇಕು. ಕಾಯದೆಯು ಏನೇ ಹೇಳಲಿ ಜಮೀದಾರಿಯು ತನ್ನ ಅಸ್ತಿತ್ವವನ್ನು ಸಮರ್ಥಿಸಿಕೊಳ್ಳಬೇಕಾದರೆ ಅದು ಅವಿಭಕ್ತ ಕುಟುಂಬದ ಮಟ್ಟಕ್ಕೆ ಬರಬೇಕು. (ಯ.ಇ. 1931)

ಒಬ್ಬರು ಒಂದು ಪ್ರಶ್ನೆ ಕೇಳಿದಾಗ ಗಾಂಧೀಜಿಯವರು ಅದಕ್ಕೆ ಉತ್ತರವಾಗಿ ಭೂಮಿಯ ಒಡೆಯರು ತಮ್ಮ ಭೂಮಿಯನ್ನು ಸಹಕಾರಿ ರೀತಿಯಲ್ಲಿ ಇಟ್ಟುಕೊಳ್ಳಬೇಕು. ಮತ್ತು ಸಹಕಾರಿ ಪದ್ಧತಿಯಿಂದ ಅದನ್ನು ಸಾಗುವಳಿ ಮಾಡಬೇಕು ಎಂಬುದೇ ತಮ್ಮ

ಸಹಕಾರದ ಕಲ್ಪನೆಯಾಗಿದೆ ಎಂದು ಹೇಳಿದರು. ಇದರಿಂದ ದುಡಿತ, ಭಂಡವಲು ಹಾಗೂ ಸಾಧನ ಸಾಮಗ್ರಿಗಳ ಉಳಿತಾಯವಾಗುತ್ತದೆ. ಭೂಮಿಯ ಒಡೆಯರು ಸಹಕಾರದಿಂದಲೇ ಕೆಲಸ ಮಾಡುತ್ತಾರೆ ಮತ್ತು ಬಂಡವಾಳ, ಸಾಧನ, ಸಲಕರಣೆಗಳು, ದನಕರುಗಳು, ಬೀಜದ ಕಾಳು ಮುಂತಾದವುಗಳಿಗೆ ಸಹಕಾರಿ ರೀತಿಯಲ್ಲಿಯೇ ಒಡೆಯರಾಗಿರುತ್ತಾರೆ. ಗಾಂಧೀಜಿಯವರ ವಿಚಾರದಂತೆ ಸಹಕಾರಿ ಪದ್ಧತಿಯ ಒಕ್ಕಲುತನವನ್ನು ಬಳಕೆಯಲ್ಲಿ ತಂದರೆ ನಮ್ಮ ದೇಶದ ಸ್ಥಿತಿ ಬದಲಾವಣೆ ಹೊಂದುವುದಲ್ಲದೆ ನಮ್ಮ ಜನತೆಯಲ್ಲಿರುವ ಬಡತನ ಮತ್ತು ಆಲಸ್ಯತನಗಳೂ ಹೇಳ ಹೆಸರಿಲ್ಲದಾಗುತ್ತದೆ. ಜನರು ತಮ್ಮ ತಮ್ಮಲ್ಲಿ ಸ್ನೇಹಭಾವವನ್ನು ಬೆಳೆಸಿಕೊಂಡು ಒಂದೇ ಕುಟುಂಬದವರಂತೆ ಆದಾಗ ಮಾತ್ರ ಇದೆಲ್ಲ ಸಾಧ್ಯವಾಗುತ್ತದೆ. (ಹ, 1947) (ಸರ್ವೋದಯ ಮೋ.ಕ.ಗಾಂಧಿ 1960 ಪುಟ.76–80)

ಕೃಷಿ ಮತ್ತು ಪರಿಸರದ ನಡುವೆ ಸಂಬಂಧವಿರುತ್ತಿದ್ದುದರಿಂದ ಯಾವ ಕಾಲದಲ್ಲಿ ಬಿತ್ತನೆ ಮಾಡಬೇಕು ; ಯಾವ ಮಣ್ಣಿಗೆ ಯಾವ ಕೃಷಿ ಉತ್ತಮ, ಎಂಬ ಅರಿವು ನಮ್ಮ ಸಾಂಪ್ರದಾಯಿಕ ಜ್ಞಾನ ಮಾದರಿಯಲ್ಲಿ ಇತ್ತು. ಕಾರಂತರ 'ಕುಡಿಯರ ಕೂಸು' ಕಾದಂಬರಿಯಲ್ಲಿ ಬರುವ ಕುಮರಿ ಬೇಸಾಯ ಇದಕ್ಕೆ ಉದಾಹರಣೆಯಾಗಿದೆ. ಭಾರತೀಯ ಸಾಂಪ್ರದಾಯಿಕ ಕೃಷಿ ಪದ್ಧತಿಯ ತಾಂತ್ರಿಕತೆಯು ಭಿನ್ನವಾದುದು. ಉಳುಮೆ ಇದಕ್ಕೊಂದು ಉದಾಹರಣೆ. ಎತ್ತಿನ ಬೇಸಾಯ, ಕಳೆ ತೆಗೆಯುವುದು, ಸಗಣಿ ಗೊಬ್ಬರ ಬಳಸುವುದು, ಅನಂತರ ಬೀಜ ಬಿತ್ತಿ, ಮಣ್ಣು ಮುಚ್ಚುವುದು – ಇದಕ್ಕೆ ನಿದರ್ಶನವಾಗಿದೆ. ಭಾರತೀಯ ಕೃಷಿ ಸಂಸ್ಕೃತಿಯಲ್ಲಿ ದೈಹಿಕ ದುಡಿಮೆಯು ಮುಖ್ಯವಾದುದು. ಬೆವರಿನ ಹನಿಯು ಬೀಳದೆ ಭೂಮಿ ತಾಯಿಯು ಬೆಳೆಯನ್ನು ನೀಡುವುದಿಲ್ಲ ಎನ್ನುವ ತಾತ್ವಿಕ ನಂಬಿಕೆಯನ್ನು ಕೃಷಿ ಸಂಸ್ಕೃತಿಯು ಪ್ರಮುಖ ಆಧಾರವಾಗಿರಿಸಿಕೊಂಡಿದೆ. ಕೃಷಿ ದುಡಿಮೆ ಮತ್ತು ಅದರ ಫಲವನ್ನು ಭಾರತೀಯ ಸಂಸ್ಕೃತಿಯು ಎರಡು ಪರಿಕಲ್ಪನೆಯ ಮೂಲಕ ವಿವರಿಸುತ್ತದೆ :

1 ಭೂಮಿ = ತಾಯಿ – ಒಲಿದರೆ ಬೆಳೆ ಬರುತ್ತದೆ

2 ಧಾನ್ಯಗಳು = ಲಕ್ಷ್ಮಿ – ಸಂಪತ್ತಿನ ಅಧಿದೇವತೆ

ಆದುದರಿಂದ ಭಾರತದಲ್ಲಿ ಮೊದಲ ಬೆಳೆಯನ್ನು ಮನೆಯೊಳಗೆ ತರುವಾಗ ಅದನ್ನು ಆನಂದದಿಂದ ಸ್ವಾಗತಿಸಲಾಗುತ್ತದೆ. ಸುಗ್ಗಿ ಹಬ್ಬ, ಹುತ್ತರಿ ಹಬ್ಬ, ವಿಶು

ಸಂಕ್ರಮಣವೆನ್ನುವುದು ಇದನ್ನು ಸೂಚಿಸುತ್ತದೆ. ಗೇಣಿದಾರರು, ಒಕ್ಕಲು ಹೂಡಿದವರು ತಾವು ಬೆಳೆದ ಬೆಳೆಯನ್ನು ಮನಗೆ ತುಂಬಿಕೊಂಡ ಮೇಲೆ : ಅದರ ಕೆಲ ಭಾಗವನ್ನು ತಮ್ಮ ಧಣಿಗಳಿಗೆ ಕೊಟ್ಟು, ಕಾಲಿಗೆ ನಮಸ್ಕರಿಸುತ್ತಾರೆ. ಬೆಳೆಯನ್ನು ಒಪ್ಪಿಸಿದ ರೈತನಿಗೆ ಧಣಿ (ಜಮೀನುದಾರ) ಹೊಸ ಬಟ್ಟೆಯನ್ನು ಕೊಟ್ಟು ಸತ್ಕರಿಸುತ್ತಾನೆ. ಇದು ಲೋಕ ರೂಢಿಯಲ್ಲಿ – ಚಾಲ್ತಿಯಲ್ಲಿದ್ದ ಪರಿಕಲ್ಪನೆಯಾಗಿದೆ. ಕೃಷಿಯ ಜ್ಞಾನ ಮತ್ತು ಅದರ ಉತ್ಪತ್ತಿಯಲ್ಲಿ ಈ ರೀತಿಯ ಕೊಳು–ಕೊಡುವಿಕೆಯು ಜಾರಿಯಲ್ಲಿತ್ತು. ಭೂಮಿಯನ್ನು ದಾನವಾಗಿ ಸ್ವೀಕರಿಸಿದವರು ಮಾತ್ರ ದಾನ ಕೊಟ್ಟವರಿಗೆ ಪ್ರತಿಯಾಗಿ ಯಾವುದನ್ನು ಕೊಡುತ್ತಿರಲಿಲ್ಲ. ಗೋದಾನ, ಭೂದಾನ, ವಿದ್ಯಾದಾನ, ಸಂಪತ್ತಿನದಾನ, ಮುಂತಾದ ವುಗಳಿಗೆ ವಾಸ್ತವವಾಗಿ ವಿನಿಮಯದ ಮೌಲ್ಯ ಇರುತ್ತಿರಲಿಲ್ಲ. ವಸಾಹತುಶಾಹಿ ಅನುಭವದ ಸಂದರ್ಭದಲ್ಲಿ ಕೃಷಿಯ ಜ್ಞಾನ ಪರಂಪರೆ ; ಅದರ ಅಳತೆಯ ಪದ್ಧತಿ; ಅದರ ಮಾರುಕಟ್ಟೆಯ ಕ್ರಮಗಳು ಬದಲಾದವು. ಕೃಷಿ ; ಮಾರುಕಟ್ಟೆ ; ಉತ್ಪಾದನೆಯ ಕ್ರಮಗಳಿಗೆ ಸಂಪತ್ತು ಅದರ ವಿನಿಮಯ ಮೌಲ್ಯಗಳು ಮುಖ್ಯವಾದವು. ಕೃಷಿ ಪದ್ಧತಿಯು ಮಾರುಕಟ್ಟೆಯನ್ನು ಅವಲಂಬಿಸಿದ್ದರ ಪರಿಣಾಮವಾಗಿ ಪರಂಪರಾಗತವಾಗಿ ಬಂದ ಕೃಷಿಯೆಂದರೆ ಅದಕ್ಕೆ ಬೆಲೆಯಿದೆ ಎಂಬಂಥ ತಿಳುವಳಿಕೆಯು ಬಂತು. ಕೃಷಿಯನ್ನು ಕೂಡಾ ಬ್ರಿಟೀಶರು ಒಂದು ಸಿದ್ಧ–ಶಿಸ್ತಿನ ಚೌಕಟ್ಟಿನ ಒಳಗೆ ತರುವ ಪ್ರಯತ್ನ ಮಾಡಿದರು. ಕೃಷಿ ಜ್ಞಾನ ವಾಸ್ತವವಾಗಿ ವಸಾಹತು ಪೂರ್ವದಲ್ಲಿ – ಜಾನಪದ ಜ್ಞಾನವಾಗಿತ್ತು. ಸಾಂಪ್ರದಾಯಿಕ ಕುಲಕಸುಬುಗಳು, ಕೃಷಿ ಪದ್ಧತಿಯಲ್ಲಿದ್ದ ತಿಳುವಳಿಕೆಗಳು ಹತ್ತಿರದ 'ಸಂತೆ' ಇತ್ಯಾದಿಗಳನ್ನು ಅವಲಂಬಿಸಿಕೊಂಡಿದ್ದರೆ, ಅದು ವಸಾಹತು ಕಾಲಘಟ್ಟದಲ್ಲಿ ಮಾರುಕಟ್ಟೆ ಕೇಂದ್ರಿತವಾಗಿ ರೂಪುಗೊಂಡಿತು. ಈ ಪರಿವರ್ತನೆಯು ಗ್ರಾಮೀಣ ಜನ–ಜೀವನದ ಚರಿತ್ರೆಯನ್ನು ಬದಲಾಯಿಸಿತು. ಕೃಷಿಯಲ್ಲಿ ಬದಲಾವಣೆಗಳಾದವು. ಉದಾ : ಚಿಕ್ಕಮಗಳೂರು – ಸುತ್ತುಮುತ್ತ ಕಾಫಿ ಬೆಳೆ ಜಾರಿಗೆ ಬಂದುದನ್ನು ಇಲ್ಲಿ ನೆನಪಿಸಿಕೊಳ್ಳಬಹುದು. ಇದರ ಮೂಲಕ ಜ್ಞಾನ ಶಿಸ್ತು ಕೂಡಾ ಬದಲಾಯಿತು. ರೈತರ ಚಿಂತನೆಯ ಕ್ರಮ ಕೂಡಾ ವಸಾಹತುಶಾಹಿ ಅನುಭವದಲ್ಲಿ ಬೇರೆಯಾದ ರೂಪ ತಳೆದುದರಿಂದ ಸಹಜವಾಗಿ ಅವರ ಜ್ಞಾನ ಮಾದರಿಗಳು ಬದಲಾಗತೊಡಗಿತು. ಕೃಷಿಯು ಮಾರುಕಟ್ಟೆ ಆಧಾರಿತವಾದಾಗ ಸಹಜವಾಗಿಯೇ ಅದಕ್ಕೆ ವಿನಿಮಯ ಮೌಲ್ಯ ಬರತೊಡಗಿತು. ಸಾಂಪ್ರದಾಯಿಕ ಕೃಷಿ ಪದ್ಧತಿಯಲ್ಲಿ – ಮಳೆ, ಬೆಲೆ, ಹತ್ತಿರದ ಸಂತೆ, ಜಾತ್ರೆಯ ಮಾರಾಟವನ್ನು ಅವಲಂಬಿಸಿಕೊಂಡಿದ್ದರೆ, ಅದು ಪರಿವರ್ತನೆಗೆ ಗುರಿಯಾಯಿತು. ವಸಾಹತುಶಾಹಿ ಅನುಭವವು ಕೃಷಿಗೆ ಹೊಸ ರೀತಿಯ ತಾಂತ್ರಿಕ

ತೆಯನ್ನು ರೂಪಿಸಿತು. ನೀರನ್ನೆತ್ತಲು ಪಂಪುಗಳು ಬಂದವು. ಏತದಿಂದ ನೀರು ಎತ್ತಿದ ಕೃಷಿಕರು ಹೊಸ ತಂತ್ರಜ್ಞಾನಕ್ಕೆ ಮಾರುಹೋದರು. ಬ್ರಿಟೀಶ್ ನೀತಿಯ ಪರಿಣಾಮವಾಗಿ 'ಆದಾಯ'ವನ್ನು ಅವಲಂಬಿಸಿಕೊಂಡಿತು. ವ್ಯಾಪಾರದಲ್ಲಿ ಬದಲಾವಣೆ, ಒಳ್ಳೆಯ ಉತ್ಪಾದನೆಗೆ ಒಳ್ಳೆಯ ಬೆಲೆ, ಬಡರೈತರ, ಸಣ್ಣ ಹಿಡುವಳಿದಾರರ ನಾಶ, ಸಾಂಪ್ರದಾಯಿಕ ಕುಲಕಸುಬುಗಳ ಪರಿವರ್ತನೆ ಗುರಿಯಾದವು. ಸಣ್ಣ ಹಿಡುವಳಿದಾರರಿಗೆ ಹೆಚ್ಚು ಮಾರುಕಟ್ಟೆ ಆಧಾರಿತ ಕೃಷಿ ರೂಪಿಸಿಕೊಳ್ಳುವಂತೆ ಒತ್ತಡ ಹೇರಲಾಯಿತು.

ಪಶ್ಚಿಮ ಕರಾವಳಿ ಪ್ರದೇಶಗಳಲ್ಲಿಯೇ ಅಲ್ಲದೆ ಇಂಗ್ಲಿಷರು ಹೋದ ಕಡೆಗಳಲ್ಲೆಲ್ಲಾ ಒಂದು ಹೊಸ ಉದ್ಯಮ ಆರಂಭಿಸಿದಂತೆ ಕಾಣುತ್ತದೆ. ಸುಮಾರು 1832ರಲ್ಲಿ ಡಾ. ವಾಲಿಕ್ (Dr. Wallich) ಮತ್ತು ಗೋರ್ಡನ್ (Mr. Gorden) ಎಂಬವರು ಬಂಗಾಳದಲ್ಲಿ ಕಾಫಿ ಬೆಳೆಯಲು ಆರಂಭಿಸಿದ್ದರಂತೆ. ಆಗಿನ ಕಂಪೆನಿ ಸರ್ಕಾರ ಈ ಉದ್ಯಮಕ್ಕೆ ತಕ್ಕ ಪ್ರೋತ್ಸಾಹವನ್ನು ಕೊಡಬೇಕೆಂದೂ ನಿರ್ಧರಿಸಿತ್ತಂತೆ. ಹೀಗೆ ಪ್ರೋತ್ಸಾಹ ಕೊಡುವಲ್ಲಿ ಇಂಗ್ಲೀಷರಿಗೇ ಮೊದಲು ಅವಕಾಶ ಕೊಡಬೇಕೆಂದು ಕಂಪೆನಿಯ ಅಭಿಪ್ರಾಯವಾಗಿತ್ತಂತೆ (ಎಚ್.ಎಲ್. ನಾಗೇಗೌಡ, 1983, ಪು. 70). ಇದು ಮೇಲಿನ ವಾದಕ್ಕೆ ಪೂರಕವಾದ ಸಾಕ್ಷ್ಯವನ್ನು ಒದಗಿಸುತ್ತದೆ.

ಬ್ರಿಟೀಶರಿಂದ ಹೊಸ ರೀತಿಯ ಗೊಬ್ಬರಗಳು ಬಂದವು. ಕೃಷಿಯ ಉತ್ಪಾದನೆಯಲ್ಲಿ ಹೆಚ್ಚಳವು ಅದರ ಗುರಿಯಾಗಿತ್ತು. ಸಾಮಾನ್ಯ ಕೃಷಿ ಸಂಸ್ಕೃತಿಯಲ್ಲಿ ಮನುಷ್ಯ ಮತ್ತು ಪರಿಸರಕ್ಕೆ ಇದ್ದ ಸಮತೋಲನ ಸಂಬಂಧ ನಾಶವಾಯಿತು. ಕೃಷಿ ಸಂಸ್ಕೃತಿಯ ಆಚರಣಾತ್ಮಕ ಕಾಲದ ಪರಿಕಲ್ಪನೆಯ ಬದಲಿಗೆ ಬ್ರಿಟೀಶ್ ಮಾದರಿಯ ಹೊಸ ಕ್ಯಾಲೆಂಡರ್‌ಗಳು ಬಂದವು. ಜೀವನೋಪಾಯ ಕೃಷಿ ಇದರ ನಡುವಣ ಸಂಬಂಧ ತಪ್ಪಿಹೋಯಿತು. ಬಂಡವಾಳ, ಸಂಪನ್ಮೂಲ, ಬ್ಯಾಂಕ್, ತೆರಿಗೆ, ಕೃಷಿ ಮಾರುಕಟ್ಟೆ, ತಕ್ಕಡಿ, ಹೊಸದಾಗಿ ಪ್ರಾರಂಭವಾದ ರಸ್ತೆಗಳು, ಕೃಷಿಕರಲ್ಲಿ ಬದಲಾವಣೆಯನ್ನು ತಂದವು. ಆಧುನಿಕ ಕೃಷಿ ಪದ್ಧತಿಯಿಂದಾಗಿ ಶ್ರೀಮಂತ ರೈತರು – ಬಡ ರೈತರ ನಡುವಣ ಸೌಹಾರ್ದಯುತ ಸಂಬಂಧ ತಪ್ಪಿಹೋಯಿತು. ಬಡ ರೈತರು ಆಧುನಿಕ ಯಂತ್ರೋಪಕರಣವನ್ನು ಬಳಸುವಂತಿರಲಿಲ್ಲ. ಬ್ರಿಟೀಶರು ಬರುವುದಕ್ಕಿಂತ ಮೊದಲು ಭಾರತೀಯ ಹಳ್ಳಿಗಳು ಆರ್ಥಿಕವಾಗಿ ಸ್ವಯಂ ತಂತ್ರವಾಗಿದ್ದವು. ಅವು ಸಾಮೂಹಿಕ, ಹಳ್ಳಿಗಳಿಗೆ ಅಗತ್ಯವಾದ ಬೆಳೆಯನ್ನು ಬೆಳೆಯುತ್ತಿದ್ದರು. ಕಂದಾಯವು ಇದಕ್ಕೆ ಅನುಗುಣವಾಗಿತ್ತು (Maine, 1907, 125–6). ಹಳ್ಳಿಯ ಜನರು ದವಸ ಧಾನ್ಯಗಳನ್ನು ಪರಸ್ಪರ ಹಂಚಿಕೊಳ್ಳುತ್ತಿದ್ದರು.

ಬ್ರಿಟೀಶರು ಕಂದಾಯವನ್ನು ಆಡಳಿತದ ಒಂದು ಆರ್ಥಿಕ ವ್ಯವಸ್ಥೆಯಾಗಿ ನೋಡಿದರು. ಹಿಂದಿನ ಗ್ರಾಮೀಣ ವ್ಯವಸ್ಥೆ, ಭಾರತೀಯ ರಾಜರು ಅನುಸರಿಸುತ್ತಿದ್ದ ರೀತಿಯನ್ನು ಅವರು ಗಮನಿಸಲಿಲ್ಲ. ಕಂದಾಯವು ಬ್ರಿಟೀಶ್ ಕಂಪೆನಿಗಳ ಕೇಂದ್ರೀಕೃತ ಅಧಿಕಾರದ ಒಂದು ಭಾಗವಾಯಿತು. ಆದರೂ ಈ ಹಿಂದೆ ಸೂಚಿಸಿರುವಂತೆ ಬ್ರಿಟೀಶರ ಕಂದಾಯ ನೀತಿಯು ವೈಜ್ಞಾನಿಕವಾಗಿರಲಿಲ್ಲ. ಬ್ರಿಟೀಶರು ಕಂದಾಯದ ವಸೂಲಾತಿಗೆ ಹೊಸ ನಿಯಮವನ್ನು ತಂದರು. ಹಳೆಯ ಪದ್ಧತಿಗಳು ಹೊರಟು ಹೋದವು. ಅದರೊಂದಿಗೆ ಹಿಂದೆ ಹಳ್ಳಿಗಳಲ್ಲಿ ಇದ್ದ ಅಧಿಕಾರದ ಸ್ಥಾನಗಳು ಕೂಡಾ ಬದಲಾದವು. ದೇಶಮುಖ, ಪಟೇಲ, ಗುರಿಕಾರ – ಇವರ ಅಧಿಕಾರಗಳು ಪರಿವರ್ತನೆ ಹೊಂದಿದವು. ಬ್ರಿಟೀಶರ ಮಟ್ಟಿಗೆ 'ಕಂದಾಯ' ಎನ್ನುವುದು ರಾಜಕೀಯ ಮತ್ತು ಆರ್ಥಿಕ ಚಟುವಟಿಕೆಯಾಗಿತ್ತು. ಬ್ರಿಟೀಶರು ಕೃಷಿ ಉತ್ಪಾದನೆ – ಭಾರತೀಯ ಜಾತಿ ಪದ್ಧತಿ ; ಪರಿಸರದೊಂದಿಗೆ ಭಾರತೀಯರಿಗೆ ಇದ್ದ ಸಂಬಂಧಗಳನ್ನು ಗಮನಿಸಲು ಹೋಗಲಿಲ್ಲ. ಬ್ರಿಟೀಶರು ಬರುವುದಕ್ಕಿಂತ ಮೊದಲು ಕಂದಾಯ ಸ್ಥಳೀಯ ಮಟ್ಟದ್ದು ; ಮತ್ತು ಕಂದಾಯ ಮತ್ತು ಜಾತಿಗೆ ಸಂಬಂಧವಿತ್ತು. ಭಾರತದಲ್ಲಿ ಜಮೀನಿನ ಮೇಲಿನ ಹಕ್ಕಿಗೂ, ಜಾತಿಗೂ ನಿರ್ದಿಷ್ಟ ರೂಪದ ಸಂಬಂಧಂತರಗಳಿದ್ದವು. ಉದಾ : ಕುಲುಮೆಗೂ–ಆಚಾರಿಗೂ ಇರುವ ಸಂಬಂಧ ; ಚರ್ಮದ ಕೆಲಸಗಾರ ಮತ್ತು ಭೂಮಿಯ ಸಂಬಂಧ; ಕ್ಷೌರಿಕ ಮತ್ತು ಭೂಮಿಯ ಮೇಲಿನ ಸಂಬಂಧ – ಹೀಗೆ ಇವು ಬೇರೆಬೇರೆಯಾಗುತ್ತಾ ಹೋದವು. ಬ್ರಿಟೀಶರು ಜಮೀನು, ಅದರ ಉತ್ಪಾದನೆ ಮತ್ತು ತೆರಿಗೆಗಳಿಗೆ ಸಂಬಂಧವಿದೆಯೆಂದು ತಿಳಿಯಲಿಲ್ಲ. ಭೂಮಿಯ ಅಳತೆಗೆ ಹೊಸ ಮಾನದಂಡ (ಚೈನ್ – ಸರಪಳಿ) ಬಂದವು. ಆದರೆ ಯಾವುದೇ ಬ್ರಿಟೀಶ್ ಅಧಿಕಾರಿಗೆ ರೈತರ ನೋವು–ನಲಿವುಗಳು ತಿಳಿಯಲಿಲ್ಲ. ತೆರಿಗೆಯನ್ನು ಬ್ರಿಟೀಶರು ವಿಧಿಸುವಾಗ ಅದಕ್ಕೆ ಒಂದು ರಾಜಕೀಯ ಹಿಡಿತ ಇಟ್ಟುಕೊಂಡರು. ಭೂಮಿಯ ಅಳತೆ ಪದ್ಧತಿ ಮತ್ತು ಅದರ ಮೇಲಿನ ತೆರಿಗೆಯನ್ನು (ಭೂ ಕಂದಾಯ) ವೈಜ್ಞಾನಿಕವೆಂದು ಬ್ರಿಟೀಶರು ಭಾವಿಸಿಕೊಂಡರು. ತೆರಿಗೆ ಹೆಚ್ಚಾದಷ್ಟು ಮನುಷ್ಯ ಹೆಚ್ಚು ಬೆಳೆಯುತ್ತಾನೆ ಎಂದು ತಿಳಿದುಕೊಂಡರು. ಇದರ ಬಗ್ಗೆ ಗೊರೂರು, ನವರತ್ನ ರಾಮರಾವ್, ಎಚ್.ಎಲ್. ನಾಗೇಗೌಡ ವಿವರಿಸಿದ್ದಾರೆ.

ಈ ಮೊದಲು ಹೇಳಿರುವಂತೆ ಬ್ರಿಟೀಶರ ಕಂದಾಯ ಪದ್ಧತಿ ಒಂದು ಕಡೆಯಿಂದ ಸಂಪತ್ತಿನ ಮೌಲ್ಯ, ಮತ್ತೊಂದು ಕಡೆಯಿಂದ ಹಣದ ಸಿದ್ಧಾಂತವನ್ನು ಮಂಡಿಸುತ್ತದೆ. ವ್ಯಕ್ತಿಯು ಹೊಂದಿರುವ ಜಮೀನಿನ ವಿಸ್ತೀರ್ಣಕ್ಕೆ ಅನುಸಾರವಾಗಿ ಕಂದಾಯವು

ಪ್ರಾರಂಭವಾಯಿತು. ಅಂದರೆ ವ್ಯಕ್ತಿಯು ಹೊಂದಿರುವ ಜಮೀನು ಅವನ ಪಾಲಿನ ಸಂಪತ್ತು. ಆ ಸಂಪತ್ತಿಗೂ – ಅಧಿಕಾರಕ್ಕೂ ಒಂದು ರೀತಿಯ ಸಂಬಂಧ ಕಲ್ಪಿತವಾಯಿತು. ವಾಸ್ತವವಾಗಿ ಭಾರತದ ನಿಜ ಚಿತ್ರವು ಬೇರೆಯಿದೆ. ವಿಶೇಷವೆಂದರೆ ಭಾರತೀಯ ಸಮಾಜದ ಜಾತಿಯ ಚೌಕಟ್ಟಿನಲ್ಲಿಯೇ ಭೂ ಹಂಚಿಕೆಯ ಭಿನ್ನತೆಗಳಿವೆ. ಆಯಾ ಜಾತಿಗಳು – ಕಾಲ, ದೇಶವನ್ನು ನಿರ್ವಚಿಸುವ ಕ್ರಮವೂ ಕೂಡಾ ಬೇರೆ.

ಶೂದ್ರರು, ಗೇಣಿದಾರ ಒಕ್ಕಲುಗಳ ಸಮಸ್ಯೆಯೇ ಬೇರೆಯಾಗಿತ್ತು. ಬ್ರಿಟೀಶರು – ಜಮೀನು ಮತ್ತು ಅದರಿಂದ ಬರುವ ಉತ್ಪಾದನೆ, ಅದಕ್ಕಿರುವ ಮಾರುಕಟ್ಟೆಯ ವ್ಯಾಪ್ತಿಯನ್ನು ಮಾತ್ರ ಗ್ರಹಿಸಿದ್ದರು. ಬ್ರಿಟೀಶರು ಕಂದಾಯ ಕಟ್ಟದಿರುವ ರೈತರ ಮಹಸೂಲನ್ನು ಜಪ್ತಿ ಮಾಡುವುದು ಹಾಗೂ ಅವರನ್ನು ಹಿಂಸಿಸಲು ಪ್ರಾರಂಭಿಸಿದರು. ಇದು ಅವರ ಆಡಳಿತದ ಅಧಿಕಾರದ ಒಂದು ರೂಪವಾಗಿತ್ತು. ಅವರ ಕಾನೂನುಗಳು ಮನುಷ್ಯರನ್ನು ಸ್ವತಂತ್ರವಾಗಿರಲು ಅವಕಾಶ ಕಲ್ಪಿಸಲಿಲ್ಲ. ಬ್ರಿಟೀಶ್ ಅಧಿಕಾರವು ರೈತರನ್ನು ಒಂದು ಬಗೆಯ ಜೀತದಾಳುಗಳ ರೀತಿ ನೋಡಲು ಪ್ರಾರಂಭಿಸಿತು. ರೈತರಿಗೆ ಇದು ಹೊಸ ಬಗೆಯ ಅರ್ಥಶಾಸ್ತ್ರವೆಂಬಂತೆ ಕಾಣಿಸಿತು. ಜಮೀನಿನ ಅಳತೆಗೆ ಸರಪಳಿ, ಜಮಾಬಂದಿ, ಬಾಂದಿನ ಕಲ್ಲುಗಳು ರೈತರ ಮಟ್ಟಿಗೆ ಒಂದು ಅಪರಿಚಿತ ಪದವಾಗಿತ್ತು.

ಕಂದಾಯವನ್ನು ಭಾರತದಲ್ಲಿ ಹೇರುವಾಗ ಯುರೋಪಿಯನ್ ಅರ್ಥಶಾಸ್ತ್ರದ ಹಿನ್ನೆಲೆಯು ಕೂಡಾ ಇತ್ತು ಎಂಬುದು ಗಮನಾರ್ಹ ಸಂಗತಿಯಾಗಿದೆ. ವಸಾಹತು ಕಾಲದಲ್ಲಿ ಕಂದಾಯವನ್ನು ಬೇರೆ ಬೇರೆ ವೈಸರಾಯ್‌ಗಳು ಬೇರೆ ಬೇರೆ ನಿಲುವನ್ನು ತಳೆದಿದ್ದರು ಎಂಬುದನ್ನು ಈಗಾಗಲೇ ನೋಡಿದ್ದೇವೆ. ಆಗ ಅವರು ತಳೆದಿದ್ದ ನಿಲುವುಗಳಿಗೆ ಯುರೋಪಿನ ಅರ್ಥಶಾಸ್ತ್ರದ ಸೂತ್ರಗಳಿದ್ದವು.

1 ಕೂಲಿ ಕಾರ್ಮಿಕ
2 ಅವನ ದುಡಿಮೆಯ ಮೌಲ್ಯ
3 ಬಂಡವಾಳ
4 ಮಾರುಕಟ್ಟೆ
5 ವಿನಿಮಯದ ಮೌಲ್ಯ
6 ಉತ್ಪಾದನೆಗೆ ಇರಬೇಕಾದ ದರಗಳು
7 ಒಂದು ವಸ್ತುವನ್ನು ಮಾರುಕಟ್ಟೆಗೆ ಬಿಡುಗಡೆ ಮಾಡಿದರೆ ಅದರ ಉಪಯೋಗವೇನು?
8 ಯಾವ ಕೃಷಿ ಉತ್ಪನ್ನವನ್ನು ಎಷ್ಟು ಮಾರುಕಟ್ಟೆಗೆ ಬಿಡುಗಡೆಗೊಳಿಸಬೇಕು ?

9 ದೈಹಿಕ ದುಡಿಮೆ – ಅದರ ಲೆಕ್ಕಾಚಾರ ; ಮಾನಸಿಕ ದುಡಿಮೆ (ಬೌದ್ಧಿಕ) ಅದರ ಮೌಲ್ಯ

ಈ ಎಲ್ಲಾ ಸಂಗತಿಗಳು ಹದಿನೇಳನೆಯ ಶತಮಾನದ ಕೊನೆಯ ಭಾಗದಿಂದ ಹದಿನೆಂಟನೆಯ ಶತಮಾನದ ವರೆಗೆ ಬೇರೆ ಬೇರೆ ರೀತಿಯ ಚರ್ಚೆಗಳು ಬಂದಿದ್ದವು. ಯುರೋಪಿನ ಜಾಗತಿಕ ಮಾರುಕಟ್ಟೆಯ ದೃಷ್ಟಿಕೋನವು ಇದರ ಮೇಲೆ ಪ್ರಭಾವ ಬೀರಿದ್ದವು. ಈ ರೀತಿಯ 'ಜ್ಞಾನ ಚಿಂತನೆ'ಗಳ ಸ್ವರೂಪದ ದೆಸೆಯಿಂದ ಕೃಷಿ ಉತ್ಪಾದನೆ ; ಮನುಷ್ಯ ಮತ್ತು ಪರಿಸರದ ನಡುವಣ ಸಮತೋಲನದ ಸ್ಥಿತಿಯು ಬದಲಾವಣೆಗೆ ಗುರಿಯಾಯಿತು. ಕೃತಕವಾಗಿ ಭೂಮಿಯಲ್ಲಿ ಗಿಡಗಳನ್ನು ನಡುವುದು (ಪ್ಲಾಂಟೇಶನ್ ಪದ್ಧತಿ) ಬ್ರಿಟೀಶರ ಕಾಲದಲ್ಲಿ ಜಾರಿಗೆ ಬಂದು, ಕೃಷಿಯ ಮೌಲ್ಯಗಳ ಪ್ರಶ್ನೆಯು ಬೇರೆಯಾಯಿತು. ಅಧಿಕಾರದ ನಿಯಮ ಸಂಹಿತೆಗಳು ಬ್ರಿಟೀಶರ ಕಾಲದಲ್ಲಿ ಹೇಗೆ ಕಾಲಕಾಲಕ್ಕೆ ಬೇರೆಯಾಯಿತೋ ಅದೇ ರೀತಿಯಲ್ಲಿ ಅದರ ಪರಿಣಾಮಗಳು ಬೇರೆಯಾದವು. ಈ ದೃಷ್ಟಿಯಿಂದಲೇ ಗಾಂಧಿಯ ಅರ್ಥ ಚಿಂತನೆಯು ಮಹತ್ವದ್ದು.

> "ಅರ್ಥಶಾಸ್ತ್ರ ನೀತಿಶಾಸ್ತ್ರಗಳ ನಡುವೆ ನಾನು ಹರಿತವಾದ ಗೆರೆ ಎಳೆಯುವುದಿಲ್ಲ. ಅಥವಾ ಭೇದ ಬಗೆಯೆನೆಂದು ಒಪ್ಪಿಕೊಳ್ಳಬೇಕು. ಒಬ್ಬ ವ್ಯಕ್ತಿಯ ಅಥವಾ ರಾಷ್ಟ್ರದ ನೀತಿ ಸ್ವಾಸ್ಥ್ಯಕ್ಕೆ ಮಾರಕವಾದ ಅರ್ಥಶಾಸ್ತ್ರ ಅನೀತಿಪರ. ಆದುದರಿಂದ ಪಾಪಕರ. ಒಂದು ದೇಶವನ್ನು ಮತ್ತೊಂದು ದೇಶ ಹರಿದು ತಿನ್ನಲು ಅನುಮತಿ ನೀಡುವ ಅರ್ಥಶಾಸ್ತ್ರ ಅನೀತಿಪರ. ಮಿತಿಮೀರಿ ದುಡಿಸಿಕೊಂಡು ತಯಾರಿಸಿದ ವಸ್ತುಗಳನ್ನು ಕೊಂಡುಕೊಳ್ಳುವುದು, ಬಳಸುವುದು ಪಾಪ".
>
> "ನನ್ನ ಪಕ್ಕದ ವರ್ತಕನನ್ನು ಗಿರಾಕಿಯಿಲ್ಲದೆ ಹೊಟ್ಟೆಗಿಲ್ಲದೆ ಸಾಯಗೊಟ್ಟು ಅಮೇರಿಕದ ಗೋಧಿಯನ್ನು ತಿನ್ನುವುದು ಪಾಪಕರ. ನನ್ನ ನೆರೆಹೊರೆಯ ನೂಲುಗಾರರು ನೇಕಾರರು ನೇಯ್ದ ಬಟ್ಟೆಗಳನ್ನು ನಾನು ಧರಿಸಿದ್ದರೆ, ನನಗೂ ಮೈ ಮುಚ್ಚುತ್ತಿತ್ತು. ಅವರಿಗೂ ಅನ್ನ ಬಟ್ಟೆ ಸಿಗುತ್ತಿತ್ತು. ಇದನ್ನು ತಿಳಿದೂ ತಿಳಿದೂ, ನಾನು ರೀಜೆಂಟ್ ಸ್ಟ್ರೀಟ್‌ದ (ವಿದೇಶಿ) ಅತ್ಯಾಧುನಿಕ ಸೊಗಸು ವಸ್ತ್ರಗಳನ್ನು ತೊಡುವುದು ಪಾಪಕರ".
>
> "ಧನಪಿಶಾಚಿಯ ಪೂಜೆಯನ್ನು ಬೋಧಿಸಿ, ಬಡವರನ್ನು ತುಳಿದು ಬಲ್ಲಿದರು ಸಂಪತ್ತನ್ನು ದೋಚಿಕೊಳ್ಳುವುದಕ್ಕೆ ಅನುಕೂಲ ಮಾಡುವ ಅರ್ಥಶಾಸ್ತ್ರ ಪೊಳ್ಳುಶಾಸ್ತ್ರ, ಕೀಳುಶಾಸ್ತ್ರ. ಅದು ಸಾವು ತರುತ್ತದೆ. ನಿಜವಾದ ಅರ್ಥಶಾಸ್ತ್ರ ಸಾಮಾಜಿಕ ನ್ಯಾಯದ ಪರ ನಿಲ್ಲುತ್ತದೆ. .....ಸತ್ ಜೀವನಕ್ಕೆ ಅದು ಅನಿವಾರ್ಯ".

"ಖಾದಿಯ ಅರ್ಥಶಾಸ್ತ್ರ ನಿಂತಿರುವುದು ಮಾನವೀಯ ಅಂಶದ ಮೇಲೆ. ಸಾಧಾರಣ ಅರ್ಥಶಾಸ್ತ್ರದಲ್ಲಿ ಮಾನವೀಯ ಅಂಶಕ್ಕೆ ಬೆಲೆ ಇಲ್ಲ. ಖದ್ದರ್‌ನ ಪೂರ್ಣ ಕಾಳಜಿ ಮಾನವನೇ". (ಸ.ವಾ. 231–233)

(ನೀಲತ್ತಹಳ್ಳಿ ಕಸ್ತೂರಿ 2008 ಗಾಂಧೀ ತತ್ತ್ವಚಿಂತನೆ ಪುಟ. 37)

"ಪ್ರತಿಯೊಬ್ಬ ಮಾನವ ಜೀವಿಗೂ ಬದುಕುವ ಹಕ್ಕಿದೆ. ಅಂತೆಯೇ ತನ್ನ ಅನ್ನ ಸಂಪಾದಿಸಲು, ಅಗತ್ಯವಾದ ಬಟ್ಟೆ, ಮನೆ ಕೂಡಿಸಿಕೊಳ್ಳಲು ಏನು ಬೇಕೋ ಅದನ್ನು ಮಾಡುವ ಹಕ್ಕೂ ಇದೆ. ಈ ಅತಿ ಸರಳ ಕಾರ್ಯಕ್ಕೆ ಅರ್ಥಶಾಸ್ತ್ರದ ಅಥವಾ ನಿಯಮಗಳ ಸಹಾಯ ಬೇಕಿಲ್ಲ".

ಒಂದು ದೇಶದ ಕಚ್ಚಾ ವಸ್ತುಗಳ ಶೋಷಣೆ ಮಾಡಿ, ಹೆಚ್ಚು ಅಂತಃಶಕ್ತಿಯುಳ್ಳ ಮಾನವ ಶಕ್ತಿಯನ್ನು ನಿರ್ಲಕ್ಷಿಸುವ ಯಾವುದೇ ಯೋಜನೆ. ಸಮತೂಕವಿಲ್ಲದ್ದು". "ಭಾರತದ ಕಚ್ಚಾವಸ್ತುಗಳನ್ನು ಹೊರಕ್ಕೆ ಕಳಿಸಿ ಸಿದ್ಧವಸ್ತುಗಳನ್ನು ಅಪಾರ ಬೆಲೆ ತೆತ್ತು ಮತ್ತೆ ಕೊಂಡುಕೊಳ್ಳುವುದಕ್ಕೆ ಪ್ರತಿಯಾಗಿ, ಭಾರತದ ಇಡೀ ಮಾನವ ಶಕ್ತಿಯನ್ನು ಅತ್ಯಂತ ಚೆನ್ನಾಗಿ ಬಳಸಿಕೊಳ್ಳುವುದು, ಕಚ್ಚಾವಸ್ತುಗಳನ್ನು ದೇಶದ ಅಸಂಖ್ಯಾತ ಹಳ್ಳಿಗಳಲ್ಲಿ ವಿತರಿಸುವುದು ಇದೇ ನಿಜವಾದ ಯೋಜನೆ".

"ಕೈಗಾರಿಕೆಯೆ ದೇವರು ಎಂದರೆ, ಮಾನವ ತನ್ನ ವೈಯಕ್ತಿಕತೆಯನ್ನು ಕಳೆದುಕೊಂಡು, ಯಂತ್ರದ ಮೊಳೆ ಆಗುತ್ತಾನೆ. ಇದು ಆತನ ಘನತೆಗೆ ಕಡಿಮೆ. ಪ್ರತಿಯೊಬ್ಬನೂ ಸಮಾಜದ ರಸಪೂರ್ಣನೂ ಪೂರ್ಣವಿಕಸಿತನೂ ಆದ ಸದಸ್ಯನಾಗಬೇಕು".

"ಹಸಿದ ಜನಕೋಟಿ ಕೇಳುವ ಪದ್ಯ ಒಂದೇ ಒಂದು, ಶಕ್ತಿದಾಯಕ ಆಹಾರ. ಅದನ್ನು ಅವರಿಗೆ ಭಿಕ್ಷೆಯಾಗಿ ನೀಡುವಂತಿಲ್ಲ. ಅವರೇ ಸಂಪಾದಿಸಿಕೊಳ್ಳಬೇಕು. ಬೆವರು ಸುರಿಸಿದರೆ ಮಾತ್ರ ಸಂಪಾದಿಸಿ ಕೊಳ್ಳುವುದು ಸಾಧ್ಯ. ಹಸಿದು ಕೆಲಸವಿಲ್ಲದೆ ಕಂಗಾಲಾಗಿರುವ ಜನ ಒಪ್ಪಿಕೊಳ್ಳುವಂತೆ ದೇವರೂ ಧೈರ್ಯ ಮಾಡಿ ತಾಳಬಲ್ಲ ರೂಪ ಒಂದೇ – ಕೆಲಸ, ಹಾಗೂ ಕೂಲಿಯಾಗಿ ಅನ್ನ ಸಿಗುವುದೆಂಬ ಭರವಸೆ".

"ಹಸಿದ ಜನಕೋಟಿಯ ಕಣ್ಣಲ್ಲಿ ಶಾಂತಿ ಇಲ್ಲ. ಅವರಿಗೆ ಅನ್ನ ಒಂದೇ ದೇವರು. ಅವರ ಮುಂದೆ ದೇವರ ಸಂದೇಶವನ್ನು ಇಡುವುದೂ, ನಾಯಿಯ ಮುಂದೆ ಇಡುವುದೂ ಎರಡೂ ಒಂದೇ".

"ಒಬ್ಬನೇ ಒಬ್ಬ ಸಶಕ್ತ ಗಂಡಸು ಅಥವಾ ಹೆಂಗಸು ಕೆಲಸವಿಲ್ಲದೆ ಅಥವಾ ಅನ್ನವಿಲ್ಲದೆ ಇರುವವರೆಗೂ, ವಿಶ್ರಾಂತಿ ಅನುಭವಿಸುವುದು ಇಲ್ಲವೇ ಭೂರಿ ಭೋಜನ ಮಾಡುವುದು ನಮಗೆ ನಾಚಿಕೆ ಯಾಗಬೇಕು".

"ನನ್ನ ಮಟ್ಟಿಗೆ ಭಾರತದ ಆರ್ಥಿಕ ರಚನೆ, ಅಷ್ಟೇ ಏಕೆ, ಜಗತ್ತಿನ ಆರ್ಥಿಕ ರಚನೆಯೂ ಹೇಗಿರಬೇಕು ಎಂದರೆ, ಅದರಲ್ಲಿ ಯಾರೊಬ್ಬರೂ ಅನ್ನ ಬಟ್ಟೆ ಇಲ್ಲದೆ ನರಳಬಾರದು, ಅಂದರೆ ಪ್ರತಿಯೊಬ್ಬನಿಗೂ ತನ್ನ ಹೊಟ್ಟೆ ಬಟ್ಟೆಗೆ ಸಾಕಾಗುವಷ್ಟು ಸಂಪಾದನೆಯ ಕೆಲಸವಿರಬೇಕು. ಪ್ರಾಥಮಿಕ ಜೀವನಾವಶ್ಯಕತೆಗಳ ಉತ್ಪಾದನಾ ಸಾಧನ ಜನಸಮೂಹದ ಹತೋಟಿಯಲ್ಲಿ ಉಳಿದಿದ್ದರೆ ಮಾತ್ರ ಈ ಆದರ್ಶವನ್ನು ಎಲ್ಲೆಲ್ಲೂ ಸಾಧಿಸಲು ಸಾಧ್ಯ. ದೇವರು ಕೊಟ್ಟಿರುವ ಗಾಳಿ ನೀರು ಎಲ್ಲರಿಗೂ ಸಿಗುವುದಿಲ್ಲವೇ? ಸಿಗಬೇಕಲ್ಲವೇ? ಹಾಗೆಯೇ ಜೀವನಾವಶ್ಯಕತೆಗಳೆಲ್ಲವೂ ಎಲ್ಲರಿಗೂ ಮುಕ್ತವಾಗಿ ದೊರಕುವಂತಿರಬೇಕು. ಅವು ಇನ್ನೊಬ್ಬರ ಶೋಷಣೆಗೆ ಸಾಧನವಾಗಬಾರದು. ಯಾವುದೇ ದೇಶ, ರಾಷ್ಟ್ರ ಅಥವಾ ಗುಂಪು ಅವುಗಳ ಸ್ವಾಮ್ಯ ಪಡೆಯುವುದು ಅನ್ಯಾಯವಾದೀತು. ಈ ಸರಳ ತತ್ತ್ವದ ನಿರ್ಲಕ್ಷ್ಯವೇ ಈ ನತದೃಷ್ಟ ನಾಡಿನಲ್ಲಿ ಹಾಗೂ ಜಗತ್ತಿನ ಇತರ ಭಾಗಗಳಲ್ಲಿ ಇಂದು ನಾವು ಕಾಣುವ ದಾರಿದ್ರ್ಯಕ್ಕೆ ಕಾರಣ. (ಸ.ವಾ. 234–235)

ಇಂಥ ಆರ್ಥಿಕತೆಗೆ ಅಗತ್ಯವಾದುದು ಸರಳತೆ. ಗಾಂಧೀ ಆಶ್ರಮದ ಏಕಾದಶ ವ್ರತಗಳಲ್ಲಿ 'ಅಸಂಗ್ರಹ' ಒಂದು ವ್ರತ. ಅಸಂಗ್ರಹ ಎಂದರೆ ಸರಳತೆಯೆ, ಸಂಯಮವೇ.

ಅಗತ್ಯಗಳ ಹೆಚ್ಚಳ ಹಾಗೂ ಅವುಗಳ ಪೂರೈಕೆಗಾಗಿ ಹೂಡುವ ತಂತ್ರಗಳು. ಇವೆಲ್ಲ ಜಗತ್ತನ್ನು ತನ್ನ ಗುರಿಯತ್ತ ಒಂದು ಹೆಜ್ಜೆಯಷ್ಟಾದರೂ ಸಾಗಿಸಿದೆ ಎಂದು ನಾನು ನಂಬುವುದಿಲ್ಲ. ದೇಶ ಕಾಲಗಳನ್ನು ಹಾಳು ಮಾಡುವ, ಮೃಗೀಯ ಹಸಿವನ್ನು ಹೆಚ್ಚಿಸುತ್ತ ಹಾಗೂ ಆ ಹಸಿವನ್ನು ನೀಗಿಸಲು ಭೂಮಿಯ ಮೂಲೆ ಮೂಲೆಗೂ ಅಲೆಯುವ ಹುಚ್ಚು ಆಸೆಯನ್ನು ನಾನು ಹೃತ್ಪೂರ್ವಕವಾಗಿ ಧಿಕ್ಕರಿಸುತ್ತೇನೆ".

"ನಾನು ಅರ್ಥಮಾಡಿಕೊಂಡಂತೆ, ಇದೇ ಆಧುನಿಕ ನಾಗರಿಕತೆ ಎಂದರೆ, ನಾನು ಅದನ್ನು ಸೈತಾನೀ ನಾಗರಿಕತೆ ಎನ್ನುತ್ತೇನೆ. ಕಡಿಮೆ ಇದ್ದಷ್ಟೂ ಕಡಿಮೆ ಬಯಸಿದಷ್ಟೂ ಉತ್ತಮರಾಗುವಿರಿ".

"ಸ್ವತಂತ್ರ ಭಾರತ ತನ್ನ ಸಾವಿರಾರು ಹಳ್ಳಿಗಳನ್ನು ಅಭಿವೃದ್ಧಿ

ಪಡಿಸಬೇಕು. ಜಗತ್ತಿನೊಂದಿಗೆ ಶಾಂತಿಯಿಂದ ಬಾಳಬೇಕು. ಹಾಗೆ ಮಾಡಿ ಸರಳವೂ ಉನ್ನತವೂ ಆದ ಜೀವನವನ್ನು ಅಳವಡಿಸಿಕೊಂಡು, ಸಂಕಟದಿಂದ ನರಳುತ್ತಿರುವ ಜಗತ್ತಿಗೆ ತನ್ನ ಕರ್ತವ್ಯವನ್ನು ಪೂರೈಸಲು ಸಾಧ್ಯ ಎಂದು ನಂಬುತ್ತೇನೆ".

"ಮಾನವ ಶರೀರ ಇರುವುದು ಸೇವೆಗಾಗಿ ಮಾತ್ರ, ಸುಖಭೋಗಕ್ಕಾಗಿ ಅಲ್ಲ. ಸುಖಜೀವನದ ಗುಟ್ಟು ತ್ಯಾಗದಲ್ಲಿದೆ. ತ್ಯಾಗವೇ ಜೀವನ, ಭೋಗವೇ ಮರಣ". (ಸ.ವಾ. 238)

ಇಂತಹ ಅರ್ಥವ್ಯವಸ್ಥೆಗೆ ಎರಡು ಆಧಾರ ಅಗತ್ಯ. ಒಂದು ವಿಕೇಂದ್ರೀಕರಣ, ಗ್ರಾಮ ಕೈಗಾರಿಕೆ. ಇನ್ನೊಂದು ಅನ್ನಕಾಯಕ, ಪರಿಶ್ರಮ, ಈ ಎರಡರ ಬಗ್ಗೆ ಗಾಂಧೀಜಿಗೆ ಎಲ್ಲಿಲ್ಲದ ಕಾಳಜಿ. ಇವುಗಳ ಬಗ್ಗೆ ಅವರು ಒತ್ತಿಹೇಳಿದಷ್ಟು ಬೇರಾರೂ ಹೇಳಿಲ್ಲ. (ನೀಲತ್ತಹಳ್ಳಿ ಕಸ್ತೂರಿ 2008 ಗಾಂಧೀ ತತ್ತ್ವಚಿಂತನೆ ಪುಟ. 38–40)

ಪ್ರತಿ ಡಿವಿಜನಿಗೆ ಒಬ್ಬ ಯುರೋಪಿಯನ್ ಸುಫರಿಂಟೆಂಡೆಂಟ್, ಅವನಿಗೆ ರೆವಿನ್ಯೂ, ನ್ಯಾಯಾಧಿಕಾರಿಗಳು ಇದ್ದವು. 1862ರಲ್ಲಿ ಬಾರಿಂಗ್ ಮೈಸೂರು ರಾಜ್ಯವನ್ನು ಎಂಟು ಜಿಲ್ಲೆ ಮಾಡಿದ. 1869 ಸೂಫರಿಂಟೆಂಡರನ್ನು ಕಮಿಷನರ್‌ಗಳೆಂದು, ಜಿಲ್ಲೆಯ ಸುಫರಿಂಟೆಂಡೆಂಟರನ್ನು ಡಿ.ಸಿ. ಎಂದು ಕರೆಯಲಾಯಿತ್ತು. (ಅದೇ, ಪು. 99). 1893ರ ಕಮಿಷನರ್ ಆಗಿದ್ದ ಮಾರ್ಕ್ ಕಬ್ಬನ್ (1834–1861) ಎಕ್ಸೈಸ್ ಸುಂಕ ಮತ್ತು ಹಾಲತ್ ಕಂದಾಯ (Export Duty) ವಿಧಿಸಿದ (ಅದೇ).

ಎಲಿಯಟ್ಟನ ಅಭಿಪ್ರಾಯ ಹೀಗಿದೆ : 'ಸಕಲೇಶಪುರದ ಒಕ್ಕಲಿಗರನ್ನು ಒಕ್ಕಲು ಮಕ್ಕಳು ಎಂದು ಕರೆಯುತ್ತಾರೆ. ಬಹುತೇಕ ಸಂಸಾರಗಳು ಅಷ್ಟು ಇಷ್ಟು ಕಾಫಿ ಬೆಳೆದು, ಬೀಜವನ್ನು ಬೆಳೆದ ದವಸ ಧಾನ್ಯಗಳನ್ನು ಸಂತೆಗೆ ತೆಗೆದುಕೊಂಡು ಮಾರುತ್ತಾರೆ' (ಅದೇ, ಪು. 123).

ಎ. ಮಿಡ್ಲಟನ್ 'ಗುಡ್ಡಗಳೇ ಬಾಂದಿನ ಕಲ್ಲುಗಳಾಗಿದ್ದವು' ಎಂದು ಹೇಳುತ್ತಾನೆ (ಅದೇ, ಪು. 129). ಅವನು ಹೇಳುವಂತೆ 1875ರಲ್ಲಿ ಕಾಡುಮನೆ ಎಸ್ಟೇಟನ್ನು ಮೊದಲ ಬಾರಿಗೆ ಸರ್ವೆ ಮಾಡಲಾಯಿತು (ಅದೇ, ಪು. 132). ಈ ದೃಷ್ಟಿಯಿಂದ ಗಾಂಧಿಯ ಮಾತುಗಳು ಗಮನಾರ್ಹ.

ಎಲ್ಲರಿಗೂ ಸಮನಾಗಿ ಹಂಚುವುದು ಎಂದರೆ, ಪ್ರತಿಯೊಬ್ಬನಿಗೂ ಅವನ ನೈಸರ್ಗಿಕ ಅವಶ್ಯಕತೆಯನ್ನು ಪೂರೈಸಿಕೊಳ್ಳುವಷ್ಟು ಸಾಧನ

ಸಂಪತ್ತು ದೊರೆಯಬೇಕಲ್ಲವೇ ಅದಕ್ಕೂ ಹೆಚ್ಚಿಗಲ್ಲ ಎಂದು ಅರ್ಥ, ಉದಾಹರಣೆಗೆ, ಒಬ್ಬ ಮನುಷ್ಯ ಜೀರ್ಣ ಶಕ್ತಿ ಕಡಿಮೆ ಇದ್ದು ಅವನಿಗೆ ರೊಟ್ಟಿ ಮಾಡಿಕೊಳ್ಳಲು ಕಾಲು ಪೌಂಡು ಹಿಟ್ಟು ಬೇಕಾಗುತ್ತದೆ. ಎಂದು ಇಟ್ಟುಕೊಳ್ಳೋಣ. ಈ ಇಬ್ಬರೂ ತಮ್ಮ ಈ ಬೇಡಿಕೆಯನ್ನು ಪೂರೈಸಿಕೊಳ್ಳುವ ಸ್ಥಿತಿಯಲ್ಲಿರಬೇಕು. ಇಂಥ ಸ್ಥಿತಿಯು ನಿಜವಾಗಿಯೂ ಆದರ್ಶವಾದುದು. ಆದರೆ ಈ ಆದರ್ಶವನ್ನು ಕೃತಿಯಲ್ಲಿ ತರಬೇಕಾದರೆ ನಮ್ಮ ಸಾಮಾಜಿಕ ರಚನೆಯ ಪೂರ್ಣವಾಗಿ ಪುನಾ ರಚಿಸಲ್ಪಡಬೇಕು. ಅಹಿಂಸೆಯ ಮೇಲೆ ನಿಂತ ಸಮಾಜವು ಇದಕ್ಕೂ ಬೇರೆಯಾದ ಆದರ್ಶವನ್ನು ಪೋಷಿಸಲಾರದು. ಈ ಆದರ್ಶವನ್ನು ಮುಟ್ಟಲು ನಾವು ಬಹುತೇಕವಾಗಿ ಸಮರ್ಥರಾಗಲಿಕ್ಕಿಲ್ಲ. ಆದರೆ ಈ ಆದರ್ಶವನ್ನು ನಾವು ನಮ್ಮ ಕಣ್ಣ ಮುಂದಿಟ್ಟುಕೊಂಡು ಅದನ್ನು ಸಮೀಪಿಸಲು ಎಡೆಬಿಡದೆ ಕಾರ್ಯಪ್ರವೃತ್ತರಾಗಬೇಕು. ನಾವು ಈ ನಮ್ಮ ಗುರಿಯ ಕಡೆಗೆ ಎಷ್ಟರ ಮಟ್ಟಿಗೆ ಸುಖ, ಸಮಾಧಾನಗಳನ್ನು ಪಡೆಯುತ್ತೇವೆ. ಮತ್ತು ಅಷ್ಟರ ಮಟ್ಟಿಗೆ ಅಹಿಂಸಾತ್ಮಕ ಸಮಾಜವನ್ನು ಅಸ್ತಿತ್ವದಲ್ಲಿ ತರಲು ನಮ್ಮ ಪಂತಿಗೆಯನ್ನು ನಾವು ಸಲ್ಲಿಸುತ್ತೇವೆ. ಹ. 1940

(ಸರ್ವೋದಯ ಮೋ.ಕ. ಗಾಂಧಿ 1960 ಪುಟ. 63–64)

ನಗರ ಡಿವಿಜನ್ನಿನ ಸೂಪರಿಂಟೆಂಡೆಂಟರು ಇದಕ್ಕೆ ಮೊದಲು 1854ರಲ್ಲಿಯೇ ಒಂದು ವರದಿ ಕಳುಹಿಸಿದ್ದರು. ಹಾಲತ್ ಸುಂಕ ಭೂಮಿಯ ಮೇಲೆ ಬೀಳದೆ ಬೆಳೆಯ ಮೇಲೆ ಬೀಳುತ್ತೆ. ಕಾಫಿ ಬೆಳೆಯುವ ನೆಪದ ಮೇಲೆ ಭಾರಿ ವಿಸ್ತೀರ್ಣಗಳನ್ನು ಪಡೆದು ಕಾಫಿ ಬೆಳೆಯುತ್ತಿಲ್ಲ. ಹಾಗೆ ಭೂಮಿ ಪಡೆದವರಿಗೆ ಕಾಫಿ ಬೆಳೆಯುವ ಉದ್ದೇಶವಾಗಲೀ ಶಕ್ತಿಯಾಗಲೀ ಇಲ್ಲ. ನೇಟಿವ್ ಜನರಂತೂ ಬೆಳೆಯುತ್ತಲೇ ಇಲ್ಲ. ಇದನ್ನು ತಪ್ಪಿಸಲು ಭೂ ಕಂದಾಯ ಹಾಕಬೇಕು – ಇವು ಅವರ ಸಲಹೆಗಳಾಗಿದ್ದವು. ಇದಕ್ಕೆ ಉತ್ತರವಾಗಿ ಕಮಿಷನರು ಇರುವುದರಲ್ಲಿ ಯಾವ ಬದಲಾವಣೆಯೂ ಬೇಡ ಎಂದು ಹೇಳಿ, ಹಾಗೇನಾದರೂ ಭೂಕಂದಾಯ ಹಾಕುವುದಾದರೆ ಅದು ಒಟ್ಟು ಉತ್ಪತ್ತಿಯಲ್ಲಿ (Gross Income) ಮೂರನೆಯ ಒಂದು ಭಾಗ ಇರಬೇಕೆಂದು ಅಭಿಪ್ರಾಯಪಟ್ಟರು.

ಕಾಫಿ ತೋಟಗಳ ವಿಸ್ತೀರ್ಣ ಹೆಚ್ಚಿದರೂ ಹಾಲತ್ ತೆರಿಗೆಯಿಂದ ಸರ್ಕಾರಕ್ಕೆ ಉತ್ಪನ್ನ ಹೆಚ್ಚಲೇ ಇಲ್ಲ. ಆದ್ದರಿಂದ ತೋಟಗಳ ಮೇಲೆ ಹೆಚ್ಚಿನ ಹತೋಟಿ ಅವಶ್ಯಕ ಎಂದು ಕಬ್ಬನ್ ಆಜ್ಞೆ ಮಾಡಿದ್ದರು. ಈ ಆಜ್ಞಾನುಸಾರ ಆಗ (1875ರಲ್ಲಿ) ಜಾರಿಯಲ್ಲಿದ್ದ ಪಟ್ಟಾ ನಿಗದಿ ಮಾಡಲಾಯ್ತು. ಪಡೆದ ಭೂಮಿಯಲ್ಲಿ ಇಂತಿಷ್ಟು ಭಾಗದಲ್ಲಿ ಕಾಫಿ

ಗಿಡ ಹಾಕದಿದ್ದರೆ ಜಮೀನನ್ನು ವಾಪಸ್ಸು ಪಡೆಯಲಾಗುವುದೆಂಬ ಷರತ್ತನ್ನು ಅದರಲ್ಲಿ ಸೇರಿಸಲಾಯುತ್ತ. ಕಬ್ಬನರೇ ಹೇಳಿದಂತೆ ಪರಂಗಿ ತೋಟಗಾರರು ಬಹಳ ಭೂಮಿ ಪಡೆದು, ಇನ್ನೊಬ್ಬರಿಗೆ ಸಿಕ್ಕದಂತೆ ಮಾಡಿ, ತಾವೂ ಸಾಗುವಳಿ ಮಾಡದೆ ಅಥವಾ ಒಳ್ಳೆಯ ಬೆಲೆಗಾಗಿ ಕಾಯುತ್ತ ಇದ್ದುದು ಕಂಡುಬಂದಿತು. ಬೆಲೆ ಬಂದಾಗ ಸಣ್ಣ ಸಣ್ಣ ಪಾಲು ಮಾಡಿ ಬೇರೆಯವರಿಗೆ ಮಾರುತ್ತಿದ್ದರು.

ಕಬ್ಬನ್ ನಂತರ 1862ರಲ್ಲಿ ಮೈಸೂರಿನ ಚೀಫ್ ಕಮಿಷನರಾಗಿ ಬಂದ ಬೌರಿಂಗ್ (1862–70) ಅವರು ಇಂಡಿಯಾ ಸರಕಾರಕ್ಕೆ ಒಂದು ವರದಿ ಕಳುಹಿಸಿದರು. ಮೈಸೂರಿನ ಮತ್ತು ಕೊಡಗಿನ ಪ್ಲಾಂಟರುಗಳನ್ನು ವಿಚಾರಿಸಿದ್ದರಲ್ಲಿ ಅವರು ಹಾಲತ್‌ಗೆ ಬದಲು ಭೂ ಕಂದಾಯಕ್ಕೆ ಒಪ್ಪುತ್ತಾರೆಂದೂ, ತಮ್ಮ ಅಭಿಪ್ರಾಯವೂ ಅದೇ ರೀತಿ ಇದೆಯೆಂದೂ, ಕಂದಾಯ ಹಾಕುವುದರಿಂದ ಭೂಮಿಯ ಮೇಲೆ ಮಾಲೀಕತ್ವ ಬರುವುದೆಂದೂ, ಭೂ ಮಾಲೀಕತ್ವ ಇದ್ದಲ್ಲಿ ಭೂಮಿಯ ಬೆಲೆ ಹೆಚ್ಚುತ್ತದೆಂದೂ, 'ನೇಟಿವ್' ಜನ ಹೊಸದಾಗಿ ಏನನ್ನಾದರೂ ಮಾಡದಿರಬಹುದು ಅಥವಾ ಅವರ ಮುಂದಾಳುತನ ವಹಿಸದಿರಬಹುದು. ಆದರೆ ಅವರಿಗೆ ಯಾವುದಾದರೂ ಬೆಳೆಯಿಂದ ಲಾಭ ಇದೆ ಎಂದು ಮನದಟ್ಟಾದರೆ ಲಾಭ ಪಡೆಯುತ್ತಿರುವವರನ್ನು ಅನುಸರಿಸುವುದರಲ್ಲಿ ಅನುಮಾನವಿಲ್ಲವೆಂದೂ ತಿಳಿಸಿದ್ದರು.

ಆದರೂ ಬೌರಿಂಗ್ ಅವರು ತಮ್ಮ ಸಲಹೆಯನ್ನು ಅನುಷ್ಠಾನಕ್ಕೆ ತರಲಿಲ್ಲ. ಕೊಡಗಿನಲ್ಲಿ ಭೂಕಂದಾಯ ಆಗಲೇ ಜಾರಿಯಲ್ಲಿತ್ತು. ಆದರೆ ಮೈಸೂರಿನ ಮುಕ್ಕಾಲು ಭಾಗ ಕಾಫಿ, ನಗರ್ ಡಿವಿಜನ್ನಿನಲ್ಲಿ ಬೆಳೆಯುತ್ತಿದ್ದುದರಿಂದ ಅಲ್ಲಿಯ ನೇಟಿವ್ ಜನರು ಅದಕ್ಕೆ ತಕರಾರು ಮಾಡುತ್ತಾರೆಂದು ನಿಲ್ಲಿಸಿದ್ದರು. ಮಂಜರಾಬಾದ್ ಪ್ರದೇಶದಲ್ಲಿ ಭೂಕಂದಾಯ ಸರಿ ಎಂದು ಕಂಡುಬಂದರೂ ಒಂದೇ ರಾಜ್ಯದಲ್ಲಿ ಎರಡು ತರಹ ಪದ್ಧತಿ ಬೇಡ ಎಂದು ಕೈಬಿಟ್ಟರು (ಎಚ್.ನಾಗೇಗೌಡ, ಪು. 102).

ಕೊನೆಗೆ 1881ನೆಯ ಆಗಸ್ಟ್ 2ನೆಯ ತಾರೀಖಿನಂದು ಈ ಕೆಳಗೆ ಕಂಡಂತೆ ಸರ್ಕಾರದ ಆರ್ಡರಾಯಿತು.

1 ಹಳೆಯ ತೋಟಗಳ ಮೇಲೆ ಎಕರೆಗೆ ಒಂದು ರೂಪಾಯಿ ಕಂದಾಯ. 30 ವರ್ಷಗಳ ಕಾಲ ಈ ಕಂದಾಯವನ್ನು ಬದಲಾಯಿಸುವುದಿಲ್ಲ.

2 ಖಾಯಂ ಕಂದಾಯಕ್ಕೆ ಒಪ್ಪುವುದಾದರೆ ಎಕರೆಗೆ ಒಂದೂವರೆ ರೂಪಾಯಿ ಬೇಕಾದವರು ಹೀಗೆ ಮಾಡಿಕೊಳ್ಳಬಹುದು.

3 ನಿಸ್ಸಾರವಾದ ಜಮೀನುಗಳಿಗೆ ಎಂಟಾಣೆ ಕಂದಾಯ.

4 ಹುಲ್ಲು ಬನಕ್ಕೆ ಎಕರೆಗೆ ನಾಲ್ಕಾಣೆ ಕಂದಾಯ.

5 ಹೊಸದಾಗಿ ಪಡೆದ ಜಮೀನುಗಳಿಗೆ ಮೂರು ವರ್ಷ ಕಂದಾಯ ಇಲ್ಲ. ಆಮೇಲೆ ಎರಡು ವರ್ಷ ಅರ್ಧ ಕಂದಾಯ. ಆರನೆಯ ವರ್ಷದಿಂದ ಪೂರ್ತಿ ಕಂದಾಯ.

6 ಖನಿಜ, ರತ್ನ ಮತ್ತು ಗಂಧ – ಇವುಗಳು ಸರಕಾರದ ಅಧೀನ.

1896ರಿಂದ ಹತ್ತು ವರ್ಷಗಳವರೆಗೆ ಮೇಲೆ ಹೇಳಿದ ಕಂದಾಯ ಪದ್ಧತಿಯೇ ಇತ್ತು. ಆಗ ಜಮೀನುಗಳನ್ನು ಒಂದು ಕಡೆಯಿಂದ ಅಳೆದು ಕಂದಾಯ ನಿಗದಿ ಮಾಡಬೇಕೆಂಬ ನಿರ್ಧಾರವನ್ನು ಇಂಡಿಯಾ ಸರ್ಕಾರ ಕೈಗೊಂಡಿತು. 1910ರಲ್ಲಿ ಮೋಜಿನಿ ಕೆಲಸ ಮುಗಿಯಿತು. ಅಳತೆ ಆಗಬೇಕೆಂದು ಮಾಡಿದ ಆಜ್ಞೆಯ ವೇಳೆ ಕಾಫಿ ಭೂಮಿಯ ಮೇಲೆ ಇರುವ ಕಂದಾಯವನ್ನು ಹೆಚ್ಚಿಸಬಾರದೆಂದು ಇಂಡಿಯಾ ಸರ್ಕಾರ ತಿಳಿಸಿತ್ತು. ಈ ನಿರ್ದೇಶದ ಪ್ರಕಾರ ಬೇರೆ ಜಮೀನುಗಳಿಗೆ ಹೊಸ ಕಂದಾಯ ಹಾಕಿದರೂ ಕಾಫಿ ಕಂದಾಯವನ್ನು ಮಾತ್ರ ಹೆಚ್ಚಿಸಲಿಲ್ಲ. ಮೊದಲಿದ್ದ ಎಕರೆಗೆ ಎರಡು ರೂಪಾಯಿ ಮತ್ತು ಕಾಲು ರೂಪಾಯಿಯೇ ಉಳಿಯಿತು. ಆದರೆ ಲೆಕ್ಕಗಳಲ್ಲಿ ತೋಟ ಮಾಡಿರುವವರು ಪರಂಗಿಯವರೇ ಅಥವಾ ಸ್ಥಳದವರೇ ಎಂಬುದನ್ನು ಸ್ಪಷ್ಟವಾಗಿ ನಮೂದಿಸಿದರು.

ಹಿಂದಿನಿಂದಲೂ ಭಾರತೀಯ ರಾಜಭಕ್ತಿಯ ಪರಿಕಲ್ಪನೆ ಬೇರೆ. ಬ್ರಿಟೀಶರು ತಮ್ಮ ರಾಜಕೀಯ ಅಧಿಕಾರವನ್ನು ಬಳಸಿಕೊಂಡ ಕ್ರಮ ಬೇರೆ. ಭಾರತೀಯರು ಇಟ್ಟುಕೊಂಡಿದ್ದ ಧರ್ಮ ಮತ್ತು ನೀತಿಯ ಪರಿಕಲ್ಪನೆಗಳು ಬ್ರಿಟೀಶರ ತಿಳುವಳಿಕೆಗೆ ಬರಲಿಲ್ಲ. ಕಾರ್ನ್‌ವಾಲೀಸ್ ಕಂದಾಯ ವಸೂಲಿಯಿಂದ ಭಾರತೀಯ ಕೃಷಿ ಸಂಸ್ಕೃತಿಯ ಅಭಿವೃದ್ಧಿ ಸಾಧ್ಯವೆಂದು ನಂಬಿದ್ದ. ವಸಾಹತು ಕಾಲದ ಕೃಷಿಯು ಅನೇಕ ಸಮಸ್ಯೆಗಳನ್ನು ಎದುರಿಸಬೇಕಾಯಿತು. ಇಂಥ ವೈರುಧ್ಯಗಳಿಂದ ಕೂಡಿಕೊಂಡಿದ್ದ ಸಂದರ್ಭದಲ್ಲಿಯೇ ಗಾಂಧಿ ಸತ್ಯಾಗ್ರಹ, ಅಹಿಂಸೆ, ಕರನಿರಾಕರಣೆಯ ಪರಿಕಲ್ಪನೆಗಳನ್ನು ಪರಿಚಯಿಸಿದರು. ಬ್ರಿಟೀಶರ ಹಿಂಸೆಗೆ ವಿರುದ್ಧವಾದ ಅಹಿಂಸೆಯ ಪರಿಭಾಷೆಯು ಆ ಸಂದರ್ಭದಲ್ಲಿ ವಿಶಿಷ್ಟವಾಗಿತ್ತು. ಗಾಂಧಿ ಅಹಿಂಸೆಯ ಪರಿಕಲ್ಪನೆಯನ್ನು ಧಾರ್ಮಿಕ ಹಿನ್ನೆಲೆಯಿಂದಲೂ ನೋಡಲು ಸಾಧ್ಯ. ಗಾಂಧಿ ತಮ್ಮ ಹೋರಾಟವನ್ನು ಪ್ರಾರಂಭಿಸುವಾಗಲೇ ಅದಕ್ಕೆ ಇರುವ ಧಾರ್ಮಿಕ ಮತ್ತು ನೈತಿಕ ವ್ಯಾಖ್ಯೆಗಳನ್ನು ಸ್ಪಷ್ಟಪಡಿಸಿಕೊಂಡಿದ್ದರು. ಸ್ವದೇಶಿ ಚಳುವಳಿ (1903–8). ಚಳುವಳಿಯು ಪ್ರಾರಂಭವಾಗುವಾಗ ಅದರ ಹಿನ್ನೆಲೆಯಲ್ಲಿ ಏಕತೆ ಮತ್ತು ಸಾಮರಸ್ಯದ ಅರ್ಥವಂತಿಕೆಯನ್ನು ರೂಪಿಸಿಕೊಂಡಿದ್ದರು. ಗಾಂಧಿಯವರು ಕರನಿರಾಕರಣೆ, ಸತ್ಯಾಗ್ರಹದ ಪರಿಕಲ್ಪನೆಯನ್ನು ರೂಪಿಸುವಾಗ ಅದಕ್ಕೆ ಈ ರೀತಿಯ

ಆಯಾಮವನ್ನು ಕೊಟ್ಟಿದ್ದರು ಎನ್ನುವುದು ಗಮನಾರ್ಹ ಸಂಗತಿಯಾಗಿದೆ : ಅದಕ್ಕೆ ವಾಸ್ತವವಾಗಿ ನಾಲ್ಕು ಮೆಟ್ಟಿಲುಗಳಿವೆ :

1 ಸತ್ಯಾಗ್ರಹ

2 ಸ್ವರಾಜ್ಯ

3 ಧರ್ಮರಾಜ್ಯ

4 ರಾಮರಾಜ್ಯ

ಗಾಂಧೀಯವರ ಆತ್ಮ ನಿವೇದನೆ : ಅವರು ಹೇಳುತ್ತಿದ್ದ ರಾಮರಾಜ್ಯದ ಪರಿಕಲ್ಪನೆಯು, ಆಧ್ಯಾತ್ಮಿಕವಾದ ಸ್ವರೂಪವನ್ನು ಹೊಂದಿದ್ದವು. ಭಕ್ತಿಯು ಭಾರತೀಯ ಸಾಂಪ್ರದಾಯಿಕ ಸಮಾಜದ ಒಂದು ಭಾಗ. ಅದಕ್ಕೆ ಆಧ್ಯಾತ್ಮಿಕ ಸ್ವರೂಪವಿರುವ ಹಾಗೆಯೇ. ಮನುಷ್ಯ ತನ್ನ ಮನಸ್ಸಿನ ಭಯ, ಆತಂಕ, ಕಷ್ಟಗಳ ಪರಿಹಾರಕ್ಕಾಗಿ ದೇವರ ಮೇಲೆ ಭಾರ ಹಾಕಿ ಬದುಕುವ, ಜೀವನವನ್ನು ಸಾಗಿಸುವ ಅರ್ಥವಂತಿಕೆಯೂ ಇದೆ. ಗಾಂಧಿಯವರು ತನ್ನ ಚಳುವಳಿಯಲ್ಲಿ ಇದನ್ನು ಅರ್ಥಪೂರ್ಣವಾಗಿ ಬಳಸಿಕೊಂಡರು. ಎರಡನೆಯದಾಗಿ ಗಾಂಧಿಯವರು ಸತ್ಯಕ್ಕಾಗಿ ಆಗ್ರಹವೆಂದು ತನ್ನ ಚಳುವಳಿಯನ್ನು ರೂಪಿಸುವಾಗಿ ಅದರಲ್ಲಿ ಸತ್ಯ ಎನ್ನುವುದು ಮುಖ್ಯವಾಗಿತ್ತು. ಮೈಸೂರು ಪ್ರಾಂತ್ಯಕ್ಕೆ ಬಂದ ; ಕಾಫಿ ಬೆಳೆಗೆ ಸಂಬಂಧಿಸಿದ ತಮ್ಮ ಅಭಿಪ್ರಾಯಗಳನ್ನು ಮಂಡಿಸಿದ ವಿದೇಶಿಯರ ನಿಲುವುಗಳನ್ನು ಈ ಮೊದಲು ಉಲ್ಲೇಖಿಸಲಾಗಿದೆ. ಅದರಲ್ಲಿ ಉದಾರವಾದಿಗಳಿದ್ದರು. ಭಾರತೀಯರ ಪರವಾಗಿದ್ದವರು ಇದ್ದರು. ಕಂಪನಿಯ ಕೇಂದ್ರೀಕೃತ ಅಧಿಕಾರದ ಜೊತೆಗೆ ಭಿನ್ನಾಭಿಪ್ರಾಯ ಹೊಂದಿದವರು ಇದ್ದರು. ಬ್ರಿಟೀಶ್ ಸರಕಾರದ ಉದಾರವಾದಿಗಳ ಚಿಂತನೆಗಳು ಒಂದು ಬಗೆಯದಾಗಿದ್ದ, ವಸಾಹತು ಪೂರ್ವದ ಭಾರತೀಯ ಅರೆ-ಜಮೀನುದಾರಿ ಪದ್ಧತಿಯ ಜಮೀನ್ದಾರರ ನಡತೆಯ ಸ್ವರೂಪವು ಈ ಕೆಳಗಿನಂತೆ ಇತ್ತು. ಇದನ್ನು ರಣಜಿತ್ ಗುಹಾ ಅವರು ತಮ್ಮ ಲೇಖನದಲ್ಲಿ ಗುರುತಿಸಿದ್ದಾರೆ.

ಬ್ರಿಟೀಶ್ ಉದಾರವಾದಿಗಳು ವಸಾಹತುಪೂರ್ವದ ಭಾರತೀಯ

ಅರೆ ಜಮೀನುದಾರಿ ಪದ್ಧತಿಯ		**ನಿಲುವುಗಳು**
1 ಆಜ್ಞೆ (Order)	–	ದಂಡ
2 ಅಭಿವೃದ್ಧಿ (Improvement)	–	ಧರ್ಮ

3 ವಿನಯ - ಭಕ್ತಿ

4 ಹಕ್ಕು ಸ್ಥಾಪನೆಗೆ ಭಿನ್ನಾಭಿಪ್ರಾಯ - ಧಾರ್ಮಿಕ ಪ್ರತಿಭಟನೆ

(ವಿವರಗಳಿಗೆ ನೋಡಿ : Dominance without hegemony and its histrography).

ಕರಬಂದಿ ಅಥವಾ ಕರ ನಿರಾಕರಣೆಯ ಚಳುವಳಿಗೆ ತತ್ವಜ್ಞಾನ, ಧಾರ್ಮಿಕ ಹಾಗೂ ರಾಜಕೀಯ ಅರ್ಥವಂತಿಕೆಯಿದೆ. ಅಷ್ಟೇ ಅಲ್ಲ, ಕರನಿರಾಕರಣೆಯ ಚಳುವಳಿಯು ಕೇವಲ ರಾಷ್ಟ್ರೀಯ ಆಂದೋಲನವಾಗಿರಲಿಲ್ಲ. ಅದು ಕೃಷಿಕರ ಸಾಮಾಜಿಕ, ಆರ್ಥಿಕ, ಸಂಸ್ಕೃತಿಯು ಕೂಡಾ ಆಗಿತ್ತು. ಗಾಂಧಿಯವರು ಅದನ್ನು ಬ್ರಿಟೀಶ್ ನೀತಿಯ ವಿರುದ್ಧ ನಿಲ್ಲಲು ತಂತ್ರವಾಗಿ ಬಳಸಿಕೊಂಡರು. ಹಾಗೆ ನೋಡುವುದಿದ್ದರೆ ರೈತರು ನಡೆಸುತ್ತಿದ್ದ ಆಂದೋಲನಕ್ಕೂ – ಅವರ ಒಟ್ಟಾರೆಯಾದ ಜೀವನ ಕ್ರಮಕ್ಕೂ ಅಂಥ ಭಿನ್ನತೆಯಿರಲಿಲ್ಲ. ಕಂದಾಯದ ನಿರಾಕರಣೆ ಮತ್ತು ಸತ್ಯಾಗ್ರಹದ ನಡುವಣ ಸಂಬಂಧ ಅವರ ಆರ್ಥಿಕ ಸ್ಥಿತಿಯನ್ನು ಸೂಚಿಸುತ್ತಿತ್ತು. ಕರನಿರಾಕರಣೆಯು ಭಾರತೀಯ ರೈತರ ಆರ್ಥಿಕ ಸ್ಥಿತಿಯನ್ನು ಸೂಚಿಸುತ್ತದೆ. ಅವರು ಅನಿವಾರ್ಯವಾಗಿ ಅದರಲ್ಲಿ ತೊಡಗಿಸಿಕೊಳ್ಳಲೇಬೇಕಾಗಿತ್ತು. ರಾಷ್ಟ್ರೀಯತೆಯ ಮಹಾನ್ ನಿರೂಪಣೆಗಿಂತ ಅದು ಬೇರೆ. ಕರನಿರಾಕರಣೆ ನೇರವಾಗಿ ರೈತರ ಜೀವನಾನುಭವಕ್ಕೆ ಸಂಬಂಧಿಸಿದ್ದು. ರಾಷ್ಟ್ರೀಯತೆಯ ಆಂದೋಲನವು ರಾಜಕೀಯ ನೀತಿಗಳ ವಿರುದ್ಧ ನಿಂತ ಸಮರ. ರೈತರು ಕರನಿರಾಕರಣೆಯನ್ನು ತಮ್ಮ ಅನುಭವ ಮತ್ತು ಅಭಿವ್ಯಕ್ತಿಯ ಭಾಗವಾಗಿ ಬಳಸಿಕೊಂಡರು. ಅದಕ್ಕೂ ಉತ್ಪಾದನೆಯ ರೀತಿಗೂ ಸಂಬಂಧವಿದೆ. ಕರನಿರಾಕರಣೆಯ ಚಳುವಳಿಯಲ್ಲಿ ರೈತರು ಭಾಗವಹಿಸದೇ ಹೋಗಿದ್ದರೆ ಅವರ ಅಸ್ತಿತ್ವಕ್ಕೆ ಕುಂದಾಗುತ್ತಿತ್ತು. ಇದರಲ್ಲಿ ಜಾತಿ, ಪ್ರದೇಶ, ಬೆಳೆಯ ಪ್ರಶ್ನೆಯು ಮುಖ್ಯವಾಗಿರಲಿಲ್ಲ. ಹಾಗಾಗಿ ಈ ಕರನಿರಾಕರಣೆಯ ಚಳುವಳಿಯಲ್ಲಿ ಆರ್ಥಿಕ ಆಸಕ್ತಿಯು ಕೂಡಾ ಮುಖ್ಯವಾಗಿದೆ. ರಾಷ್ಟ್ರೀಯತೆಯ ಚಳುವಳಿಗೂ, ಕರನಿರಾಕರಣೆಯ ಚಳುವಳಿಗೂ ಸಂಬಂಧವಿದೆಯೆಂದು ರೈತರು ಯೋಚಿಸುವಂಥ ಸ್ಥಿತಿಯು ಸಾಧ್ಯವಿರಲಿಲ್ಲ. ಮುಜಾಫರ್ ಹುಸೇನ ಅಸ್ಸಾದಿಯವರು ರೈತರ ಸತ್ಯಾಗ್ರಹದ ಚಳುವಳಿಯ ಕುರಿತು ಬರೆವಾಗ ಹೀಗೆ ಹೇಳುತ್ತಾರೆ : (ಅರಿವು ಬರಹ, (ಸಂ) 1996, ಡಾ. ಮುಜಾಪುರ ಹುಸೇನ್ ಅಸ್ಸಾದಿ, ಭಾರತ ಮತ್ತು ಕರ್ನಾಟಕದಲ್ಲಿ ರೈತ ಹೋರಾಟಗಳು, ಐತಿಹಾಸಿಕ ನೋಟ, ಭಾಗ–2).

ರೈತವಾರಿ ಪ್ರದೇಶಗಳಲ್ಲೂ ರೈತ ಹೋರಾಟಗಳಿಗೆ ಸಾಕಷ್ಟು ದೃಷ್ಟಾಂತಗಳಿವೆ. ಗೇಣಿ ಪದ್ಧತಿಯ ಬದಲಾವಣೆಯಿಂದಾಗಿ ಹುಟ್ಟಿಕೊಂಡು, ಮಧ್ಯವರ್ತಿಗಳ ಶೋಷಣೆಯಿಂದಾಗಿ ಈ ಹೋರಾಟಗಳು ಹಬ್ಬಿದವು. ಇಲ್ಲಿನ ವೈರುಧ್ಯ ಎರಡು ವಿಧವಾಗಿತ್ತು.

1 ಗೇಣಿದಾರ / ರೈತ ಮತ್ತು ವಸಾಹತು / ಸಂಸ್ಥಾನ ರಾಜ್ಯ

2 ರೈತ ಮತ್ತು ಭೂಮಾಲಿಕ ಮಧ್ಯವರ್ತಿ

ಈಗಾಗಲೇ ಅಸ್ತಿತ್ವದಲ್ಲಿದ್ದ ಒಂದು ಸಾಂಪ್ರದಾಯಿಕ ವ್ಯವಸ್ಥೆಯ ಮೇಲೆ ವಸಾಹತುಶಾಹಿ ರಾಜ್ಯವು ಹೊಸ ಉತ್ಪಾದನಾ ಸಂಬಂಧವನ್ನು ಬಲತ್ಕಾರವಾಗಿ ಹೇರಿದ್ದರಿಂದ ರೈತ ಮತ್ತು ರಾಜ್ಯದ ಘರ್ಷಣೆ ಪ್ರಾರಂಭವಾಯಿತು. ಉದಾಹರಣೆಗೆ ಇದುವರೆಗೆ ರೈತರು ಶ್ರಮ ಹಾಗೂ ಉತ್ಪಾದನೆಯ ರೂಪದಲ್ಲಿ ಗೇಣಿಯನ್ನು ನೀಡುತ್ತಿದ್ದು ವಸಾಹತುಶಾಹಿಯು ಅದನ್ನೂ ಹಣದ ರೂಪಕ್ಕೆ ಬದಲಾಯಿಸಿತು. ಈ ಬದಲಾವಣೆ ಸಂಘರ್ಷಕ್ಕೆಡೆಮಾಡಿತು. 1900ರಲ್ಲಿ ದಕ್ಷಿಣ ಕನ್ನಡದ ರೈತರ ಶಾಂತ ಪ್ರತಿಭಟನೆ ಇದಕ್ಕೊಂದು ಅತ್ಯುತ್ತಮ ಉದಾಹರಣೆಯಾಗಿದೆ. ಆಗಿನ ಮಂಗಳೂರಿನ ಜಿಲ್ಲಾಧಿಕಾರಿಯಾಗಿದ್ದ ಸರ್. ಥಾಮಸ್ ಮನ್ರೊ ವಸಾಹತು ರಾಜ್ಯದ ವಿರುದ್ಧ ರೈತರು ಅಳವಡಿಸಿಕೊಂಡಿದ್ದ ತಂತ್ರಗಳನ್ನು ಈ ರೀತಿಯಾಗಿ ವಿವರಿಸುತ್ತಾರೆ.

"ರೈತರನ್ನು ಕಛೇರಿಗೆ ಬರಲು ಆಹ್ವಾನಿಸಿದರೂ ಬರಲೊಪ್ಪುವುದಿಲ್ಲ. ಅವರನ್ನು ಕರೆತರಲು ಸಿಪಾಯಿಗಳನ್ನು ಕಳುಹಿಸಿದರೆ ಅವರು ಓಡಿಬಿಡುತ್ತಾರೆ. ಅಮಲ್ದಾರರು ಊರಿಗೆ ಬಂದಾಗ ಅವರಿಗೆ ನೀರಾಗಲೀ ಬೆಂಕಿಯಾಗಲೀ ಸಿಗದಂತೆ ನೋಡಿಕೊಳ್ಳುತ್ತಾರೆ. ನಾನು ಹಳ್ಳಿಗಳಿಗೆ ಹೋದಾಗಲೆಲ್ಲಾ ರೈತರು ಊರು ಖಾಲಿ ಮಾಡಿ ಇನ್ನೊಂದೆಡೆಗೆ ಓಡಿ ಹೋಗುತ್ತಾರಲ್ಲದೇ ವಲಸೆ ಕೂಡ ಹೋಗುತ್ತಾರೆ. ನಾವೆಲ್ಲ ಖಾಲಿ ಕೈಯಲ್ಲಿ ಹಿಂದಿರುಗುತ್ತೇವೆ".

ಇದೊಂದು ರೀತಿಯ ಸತ್ಯಾಗ್ರಹವೂ ಹೌದು. ಇದೇ ರೀತಿ ನಂತರದಲ್ಲಿ ಈ ಪ್ರತಿಭಟನೆ ಅವ್ಯಾಹತವಾಗಿ ನಡೆದದ್ದು ಕಂಡುಬರುತ್ತದೆ. 1817ರಲ್ಲಿ ಬೊಂಬಾಯಿ ಪ್ರೆಸಿಡೆನ್ಸಿಯ ಪ್ರದೇಶವಾದ ಉತ್ತರ ಕನ್ನಡ ಜಿಲ್ಲೆಯ ಕರ್ಕಿ ಮತ್ತು ಸುತ್ತಮುತ್ತಲಿನ ಪ್ರದೇಶದಲ್ಲಿ ಭೂಮಾಲೀಕರ ವಿರುದ್ಧ ಸಣ್ಣ ರೈತರು ದಂಗೆ ನಡೆಸಿದ್ದರು. 1824ರಲ್ಲಿ ಶಿಮ್ಡಿ ರೈತರು ವಸಾಹತುಶಾಹಿಯ ವಿರುದ್ಧ ಒಂದು ಯಶಸ್ವೀ ಹೋರಾಟ ನಡೆಸಿದರು. 1830ರಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ರೈತರು ಕೂಟ ರಚನೆಯ ತಂತ್ರವನ್ನೂ ಬಳಸಿ ಪ್ರತಿಭಟಿಸಿದರು. ಇತಿಹಾಸ ತಜ್ಞರು ಈ ಹೋರಾಟಕ್ಕೆ ಸಂಬಂಧಿಸಿ ಹೀಗೆ ಹೇಳುತ್ತಾರೆ.

"ದಕ್ಷಿಣ ಕನ್ನಡ ರೈತರು ಸಾಂಬಾರು ಏಕಸ್ವಾಮ್ಯದ ಅನುಷ್ಠಾನದ, ಸ್ಟಾಂಪ್ ಸುಂಕ ಮತ್ತು ಇತರೇ ಕುಂದುಕೊರತೆಗಳ ಜೊತೆಗೆ ಹೆಚ್ಚು ಭೂ ಕಂದಾಯದ ಹೇರಿಕೆ ಮತ್ತು ಬಲತ್ಕಾರವಾಗಿ ವಸೂಲಿ ಮಾಡುವುದರ ವಿರುದ್ಧ ಪ್ರತಿಭಟಿಸಿದರು. 1830–31ರಲ್ಲಾದ ಈ ರೈತ ದಂಗೆಯನ್ನು ಕೂಟ ಅಥವಾ ಸಂಘ ರಚನೆ ಎಂದು ಕರೆಯಲಾಗಿದೆ. ಕೂಟವು ದಕ್ಷಿಣ ಕನ್ನಡದ ದಕ್ಷಿಣ ಭಾಗದಲ್ಲಿ ಹುಟ್ಟಿಕೊಂಡು ಕುಂದಾಪುರ, ಬಂಟ್ವಾಳ, ಬ್ರಹ್ಮಾವರ, ಮಂಜೇಶ್ವರ, ಮುಲ್ಕಿ, ಕದ್ರಿ, ಕುಂಬ್ಳೆ ಮತ್ತು ಉದ್ಯಾವರಗಳಿಗೆಲ್ಲ ಹರಡಿತು. ಈ ಕೂಟದಲ್ಲಿ ಭಾಗಿಯಾದವರು ಸರಕಾರಿ ಸೇವಕರ ಮೇಲೆ ಆಕ್ರಮಣ ಮಾಡುವ ದಿಟ್ಟತನ ತೋರಿಸಿದರು".

ರೈತ ಹೋರಾಟದಲ್ಲಿ ಮೈಸೂರು ಸಂಸ್ಥಾನ ಕೂಡ ಹೊರತಾಗಿಲ್ಲ. ಆದರೆ ಇಲ್ಲಿ ನಡೆದ ಹೋರಾಟಗಳು ತೀರಾ ಕಡಿಮೆ. ಇದಕ್ಕೆ ಕಾರಣ ಇಲ್ಲವೆಂದಲ್ಲ : 1) ಇಲ್ಲಿ ಬಂಡವಾಳಶಾಹಿ ಬಹಳ ತಡವಾಗಿ, ಅಂದರೆ 19ನೇ ಶತಮಾನದ ಅಂತ್ಯಭಾಗದಲ್ಲಿ ಬೆಳೆಯಿತು. ಈ ಬಂಡವಾಳಶಾಹಿಯೂ ಊಳಿಗಮಾನ್ಯ ದೊಂದಿಗೆ ರಾಜಿ ಮಾಡಿಕೊಂಡಿತ್ತು. 2) ಇತರೆಡೆಗಳಲ್ಲಿದ್ದಂತೆ ಇಲ್ಲಿ ರೈತ ಹಾಗೂ ಭೂಮಾಲೀಕರ ಮಧ್ಯೆ ಸಾಂಸ್ಕೃತಿಕ, ಧಾರ್ಮಿಕ ಪರಕೀಯತೆ ಇರಲಿಲ್ಲ. ಗೇಣಿದಾರ ಮತ್ತು ಭೂಮಾಲೀಕ ಇಬ್ಬರೂ ಒಂದೇ ಪ್ರಾದೇಶಿಕ ಸಾಂಸ್ಕೃತಿಕ ಹಿನ್ನೆಲೆಗೆ ಸೇರಿದ್ದರು. 3) ಮೈಸೂರು ಸಂಸ್ಥಾನವು ತನ್ನ ಸ್ವಯಂ ತಂತ್ರವಾದೀ ನೀತಿಯ ಸರಂಜಾಮುಶಾಹಿ ವ್ಯವಸ್ಥೆಯೊಳಗೆ ಶ್ರೀಮಂತರ ರೈತ ವರ್ಗವನ್ನೂ ತನ್ನ ಕಕ್ಷೆಯಲ್ಲಿ ಇಟ್ಟುಕೊಂಡಿತು. 4) ಮೈಸೂರು ಸಂಸ್ಥಾನದಲ್ಲಿ ರಾಜಕೀಯ ಮತ್ತು ರಾಷ್ಟ್ರೀಯ ಹೋರಾಟದ ಪಕ್ಷಗಳು ಬೆಳೆದಿದ್ದು ತಡವಾಗಿ. 5) ಕೃಷಿಯಲ್ಲಿನ ಶೋಷಣೆಯ ರೀತಿ ಪ್ರದೇಶದಿಂದ ಪ್ರದೇಶಕ್ಕೆ ಇಲ್ಲಿ ಬದಲಾಗುತ್ತಿತ್ತು. ಹೀಗಾಗಿ ಏಕರೂಪದ ಶೋಷಣೆಯ ಪ್ರಜ್ಞೆಯಾಗಲೀ ಹೋರಾಟವಾಗಲೀ ಬೆಳೆಯದೇ ಹೋಯಿತು (ಅದೇ).

ಗಾಂಧಿಯವರು ರೈತರು ಬುದ್ಧಿಜೀವಿಗಳಲ್ಲ, ಅವರು ನಾಗರಿಕ ಸೇವಕರಲ್ಲ ಎಂಬುದನ್ನು ಅರ್ಥಮಾಡಿಕೊಂಡಿದ್ದರು. ರೈತಾಪಿ ವರ್ಗ ಎಂಬುದು ಭಾರತದಲ್ಲಿ ಒಂದು ಸಮೂಹ. ರೈತ ಒಬ್ಬ ವ್ಯಕ್ತಿಯಲ್ಲಿ ಅವನ ಅನನ್ಯತೆಯು ಬೇರೆಯೆಂದು ತಿಳಿದುಕೊಂಡಿದ್ದರು. ಇಡಿಯ ಭಾರತದಲ್ಲಿ ರೈತರ ದುಡಿಮೆ, ಅವರು ಬೆಳೆಯುತ್ತಿದ್ದ ಬೆಳೆಗಳು, ಅದಕ್ಕೆ ನಿಗದಿ ಪಡಿಸಿಕೊಂಡಿದ್ದ ಅವರದೇ ಅನ್ನಬಹುದಾದ ಸಮಯದ ಪರಿಕಲ್ಪನೆ ; ಅದಕ್ಕಿದ್ದ ಅವಕಾಶಗಳು ಬೇರೆ ಬೇರೆಯಾಗಿದ್ದವು. ಇದನ್ನು ಒಂದೇ ಮಾನದಂಡದಲ್ಲಿ ನೋಡುವುದು ಸಾಧ್ಯವಿರಲಿಲ್ಲ. ಅದರ ಭೌತಿಕ ವಾಸ್ತವಗಳೇ

ಬೇರೆಯಾಗಿದ್ದವು. ರೈತರ ಸಮಸ್ಯೆಯನ್ನು ರಾಷ್ಟ್ರದ ಸಮಸ್ಯೆಯಾಗಿ ನೋಡಿರುವುದು ಗಾಂಧಿ. ಬ್ರಿಟೀಶರು ಕಂದಾಯ ಹೇರುವಾಗ ರೈತರನ್ನು ಒಂದೇ ಚೌಕಟ್ಟಿನ ಒಳಗೆ ತಂದಿದ್ದರು. ಅವರ ವಿರುದ್ಧದ ಹೋರಾಟದಲ್ಲಿ – ಜನರ ಸಂಸ್ಕೃತಿ, ರಾಷ್ಟ್ರೀಯ ಸಂಸ್ಕೃತಿ ಮತ್ತು ರಾಜಕೀಯ ಹಾಗೂ ನೈತಿಕ ಸಂಸ್ಕೃತಿಯು ಸೇರ್ಪಡೆಯಾಗುವಂತೆ ರಾಷ್ಟ್ರೀಯ ಆಂದೋಲನಕಾರರು ನೋಡಿಕೊಂಡರು. ಬ್ರಿಟೀಶರು ಕಂದಾಯ ಹೇರವಾಗ ಅದರಲ್ಲಿ ಬಲಾತ್ಕಾರದ ಧೋರಣೆಯಿತ್ತು ಎಂಬುದನ್ನು ಈ ಮೊದಲೇ ಚರ್ಚಿಸಲಾಗಿದೆ. ಆದರೆ ಕಂದಾಯ ಹೇರುವುದು, ಅದನ್ನು ವಸೂಲು ಮಾಡುವುದು ಮುಂತಾದ ಕೆಲಸಗಳನ್ನು ಮಾಡಲು ಭಾರತೀಯ ಅಧಿಕಾರಿಗಳನ್ನು ನೇಮಕ ಮಾಡಲಾಯಿತು. ಇಂಗ್ಲಿಷ್ ಶಾಲೆಗಳು ನಿರ್ಮಾಣ ಮಾಡಿದ ಭಾರತೀಯರು ವಸೂಲಿ ಕಾರ್ಯಕ್ರಮದಲ್ಲಿ ಭಾಗವಹಿಸಿದರು (ವಿವರಗಳಿಗೆ ನೋಡಿ : ನವರತ್ನ ರಾಮರಾಯರ ಕೆಲವು ನೆನಪುಗಳು). ಇದರಿಂದ ಭಾರತೀಯ ಅಧಿಕಾರಗಳು ತಮ್ಮ ಭಾರತೀಯತೆಯ ಅನನ್ಯತೆಯನ್ನು ಕಳೆದುಕೊಂಡರು. ರೈತರ ಭಿನ್ನಾಭಿಪ್ರಾಯ ಕೇಳಲು ಅವರೂ ತಯಾರಿರಲಿಲ್ಲ. ಕಂದಾಯ ಹೇರಿಕೆಯಲ್ಲಿ ಬ್ರಿಟೀಶರು ಹಿಂಸಾತ್ಮಕ ಚಟುವಟಿಕೆಯಲ್ಲಿ ತೊಡಗಿದ್ದಾಗ ಭಾರತೀಯರು ತಮ್ಮ ಅಹಿಂಸಾತ್ಮಕ ಚಳುವಳಿಯ ಮೂಲಕ ಕೆಲವು ನಿರ್ಧಾರಗಳನ್ನು ತೆಗೆದುಕೊಂಡಿದ್ದರು. 1942ರಲ್ಲಿ ಕ್ವಿಟ್ ಇಂಡಿಯಾ ಚಳುವಳಿಯ ಶಿವಮೊಗ್ಗ ಜಿಲ್ಲಾ ವರದಿಯಲ್ಲಿ ಹೀಗೆ ದಾಖಲಾಗಿದೆ (ಕೆ. ಶಂಕರಪ್ಪ, ಡಿ.ಡಿ. ಶಂಕರನಾರಾಯಣ ರಾವ್).

ಆಗ ನಡೆದ ಕಾರ್ಯಗಳು

1 ನಮ್ಮ ಜಿಲ್ಲಾ ಮುಖಂಡರ ದಸ್ತಗಿರಿಯಾಯಿತು.

2 ಕಾಂಗ್ರೆಸ್ ಕೆಲಸಗಾರರು ತುರಂಗವನ್ನು ಸೇರಿದರು.

3 ವಿದ್ಯಾರ್ಥಿಗಳು ಶಾಲೆಗಳನ್ನು ಬಹಿಷ್ಕರಿಸಿ, ಕಾಂಗ್ರೆಸ್ ಅಹಿಂಸಾ ಮಾರ್ಗದಲ್ಲಿ ತುರಂಗವನ್ನು ಸೇರಲು ಸಿದ್ದರಿದ್ದರು. ಆದರೆ ಈ ವಾನರ ಸೈನ್ಯವನ್ನು ದಸ್ತಗಿರಿ ಮಾಡಲು ಹೆದರಿ, ಅವರು ಏನು ಮಾಡಿದರೂ ಸುಮ್ಮನಿದ್ದರು. ಪ್ರಭಾತ್‌ಫೇರಿಗಳು, ಬಹಿರಂಗಸಭೆಗಳು, ಖಂಡನಾ ಸಭೆಗಳು, ನಿಧಿ ಸಂಗ್ರಹ ಕಾರ್ಯ ಮೊದಲಾದ ಕೆಲಸಗಳನ್ನು ಮುಂದುವರಿಸಿ ಕಾಂಗ್ರೆಸ್ಸನ್ನು ಬಲಪಡಿಸಿದರು.

4 ಕೂಲಿಕಾರರು ಕಾರ್ಖಾನೆಗಳನ್ನು ಮುಚ್ಚಿಸಿದರು. ಅನೇಕರು ಸರ್ಕಾರದ ಕಾನೂನುಗಳಿಗೆ ಸಿಕ್ಕರು. ತುರಂಗವನ್ನು ಸೇರಿದರು. ಅಹಿಂಸಾ ಮಾರ್ಗದಲ್ಲಿಯೇ ಮುಂದುವರಿದು ಸರ್ಕಾರದ ದಬ್ಬಾಳಿಕೆಯನ್ನು ಅನೀತಿಯನ್ನು ಎದುರಿಸಿದರು.

5 ಸಂತೆಗಳಲ್ಲಿ ಸುಂಕ ಕೊಡಬಾರದೆಂದು ಪ್ರಚಾರವೂ ನಡೆದು ಅಲ್ಲಲ್ಲೇ ಕೆಲವು ಕಡೆ ಸುಂಕ ಕೊಡುವುದು ನಿಂತಿತ್ತು.

6 ಅನೇಕ ಹೆಂಡದ ಅಂಗಡಿಗಳ ಪಿಕೆಟಿಂಗ್ ನಡೆಯಿತು.

7 ಈಚಲ ಮರಗಳನ್ನು ಪಿಪಾಯಿಗಳನ್ನು ಒಡೆದರು.

8 ಅಧಿಕಾರಿಗಳ ವಾಹನ ಸೌಕರ್ಯಗಳನ್ನು ಅಹಿಂಸಾತ್ಮಕವಾಗಿಯೇ ಕೆಡಿಸಿ ಅಡ್ಡಿಪಡಿಸಿದರು. ಟೆಲಿಗ್ರಾಂ, ವೈರ್, ಟೆಲಿಪೋನ್ ಸೇತುವೆ ವಗೈರೆ.

9 ಬುಲೇಟಿನ್‌ಗಳನ್ನು ಬರೆದು ಪತ್ರಿಕೆಗಳಲ್ಲಿ ಬಾರದ ವಿಚಾರಗಳನ್ನು ಪ್ರಕಟಿಸಿ ಜನರಿಗೆ ತಿಳಿಸುತ್ತಿದ್ದರು.

10 ಜಿಲ್ಲೆಯಲ್ಲಿ ಯಾರನ್ನು ದಸ್ತಗಿರಿ ಮಾಡಲು ಹೋದರೂ, ಕೆಚ್ಚೆದೆಯಿಂದ ಅಧಿಕಾರಿಗಳ ವಶ ಆಗುತ್ತಿದ್ದರು. ತುರಂಗಗಳು ಭರ್ತಿಯಾದವು. ಸ್ಥಳವಿಲ್ಲದಾಗಿ ಸಂಸ್ಥಾನದ ಯಾವ ತುರಂಗದಲ್ಲಿ ನೋಡಿದರೂ ಶಿವಮೊಗ್ಗ ಜಿಲ್ಲಾ ಕಾಂಗ್ರೆಸ್ ಹಿತೈಷಿಗಳು, ವಿದ್ಯಾರ್ಥಿಗಳೂ, ಕೂಲಿಕಾರರು ಇದ್ದರು. ನಮ್ಮ ಜಿಲ್ಲೆಯ ಜನರು ತುರಂಗವನ್ನು ಸೇರಲು ಹೆದರದೇ ಇರುವುದನ್ನು ಕಂಡು ದಸ್ತಗಿರಿಗಳೇ ನಿಂತವು.

11 ಸರ್ಕಾರದ ದಬ್ಬಾಳಿಕೆಯನ್ನು ಬಹಿರಂಗವಾಗಿ ಎದುರಿಸಲಾಯಿತು. ಮೈಸೂರು ಕಾಂಗ್ರೆಸ್‌ನವರಾಗಲೀ, ಮಹಾತ್ಮಾಜಿಯವರಾಗಲೀ ನಿರ್ದಿಷ್ಟ ಕಾರ್ಯಕ್ರಮಗಳನ್ನು ತಿಳಿಸಿದರೆ ನಮ್ಮ ಜಿಲ್ಲೆಯು ಎಲ್ಲಾ ಕಾರ್ಯಕ್ರಮಗಳನ್ನು ಕೈಗೊಂಡು ನಡೆಸಲು ಸಿದ್ಧವಿದ್ದಿತು.

12 ಕೆಲವು ಕೆಲಸಗಾರರು ಒಂದು ವರ್ಷ ಕಾಲ ಅಧಿಕಾರಿಗಳಿಗೆ ಕಾಣಿಸಿಕೊಳ್ಳದೆ ಕಾಂಗ್ರೆಸ್ ಧ್ಯೇಯಗಳಿಗನುಸಾರವಾಗಿ ದುಡಿದು ತುರಂಗವನ್ನು ಸೇರಿದರು.

13 ಈಸೂರು ಮೊಖದ್ದಮೆಯನ್ನು ಸಾಗರ ಕೋರ್ಟು, ಶಿವಮೊಗ್ಗ ಕೋರ್ಟು ಮತ್ತು ಎರಡು ಬಾರಿ ಹೈಕೋರ್ಟುಗಳಲ್ಲಿ ವಿಚಾರಣೆಗಳನ್ನು ನಡೆಸುವ ಬಗ್ಗೆ ಸಾರ್ವಜನಿಕರಿಂದ ನಿಧಿ ಸಂಗ್ರಹಿಸಿ ಕೆಲಸ ಮಾಡಿದರು.

14 ಭದ್ರಾವತಿಯಲ್ಲಿ ಕೆಲವು ಸಂಸಾರಿಗಳಿಗೆ ಸಹಾಯ ಒದಗಿಸಲಾಯಿತು

ಪಾರ್ಥಚಟರ್ಜಿಯವರು ಹೀಗೆ ಹೇಳುತ್ತಾರೆ – ಯುರೋಪಿನಲ್ಲಿ ಆಧುನಿಕತೆ, ಬಂಡವಾಳವಾದ, ಕೈಗಾರಿಕೆಗಳು ಕೃಷಿಯ ವಿಸ್ತರಣೆಯ ರೂಪಗಳಾಗಿ ಬಂದವು. ಹತ್ತೊಂಬತ್ತನೆಯ ಶತಮಾನದ ಉತ್ತರಾರ್ಧದಲ್ಲಿ ಕೃಷಿಯು ಫ್ರಾನ್ಸಿನಲ್ಲಿ ಕೈಗಾರಿಕೆಯೆಂದೇ ಭಾವಿಸಿದ್ದರ ಪರಿಣಾಮವಾಗಿ ಕೃಷಿಯ ಬಗೆಗಿನ ನೀತಿಗಳು ಬದಲಾದವು.

ಆಧುನಿಕತೆಯು ಕೂಡಾ ಪ್ರಭಾವಶಾಲಿಯಾದುದರಿಂದ ಕೃಷಿಯ ವ್ಯಾಖ್ಯಾನಗಳು ಬದಲಾದವು. ಯುರೋಪಿನ ಆಧುನಿಕ ಪ್ರಭುತ್ವವು ಕೃಷಿಯನ್ನು ಮತ್ತು ಕೈಗಾರಿಕೆಗಳನ್ನು ಒಂದು ರೇಖೆಯೊಳಗೆ ತರುವ ಪ್ರಯತ್ನ ಮಾಡಿತು. ಆದರೆ ವಸಾಹತು ಶಾಹಿ ಸಂದರ್ಭದಲ್ಲಿ ರೈತರು ಹಾಗಿರಲಿಲ್ಲ. ಅವರು ಸರಳವಾಗಿದ್ದರು, ಮುಗ್ಧರಾಗಿದ್ದರು. ಅವರು ಜಮೀನುದಾರರಿಂದ, ವರ್ತಕರಿಂದ, ಲೇವಾದೇವಿ ವ್ಯವಹಾರಸ್ಥರಿಂದ ಶೋಷಣೆಗೆ ಒಳಗಾಗಿದ್ದರು. ರೈತರ ಮುಗ್ಧತೆಯ ಕಾರಣದಿಂದ, ಅವರು ಕೃಷಿಯ ಲಾಭ ಮತ್ತು ನಷ್ಟವನ್ನು ದೇವರ ಕೃಪೆಯಿಂದು ಭಾವಿಸಿದ್ದರು. ಇದಕ್ಕೆ ಯಾವುದೇ ರೀತಿಯ ರಾಜಕೀಯ ವಿನ್ಯಾಸಗಳು ಇರಲಿಲ್ಲ. ವಸಾಹತು ಶಾಹಿ ಆಡಳಿತವು ತನ್ನ ರಾಜಕೀಯ ನೀತಿಯನ್ನು ಅನುಸರಿಸುವಾಗ ಮತ್ತು ಕಂದಾಯ ಹೇರುವಾಗ ಅದು ರೈತರ ಜೀವನದೊಳಗೆ ಪ್ರವೇಶಿಸಿದಂತಾಯಿತು. ರೈತರ ಸಮಸ್ಯೆಯನ್ನು ರಾಷ್ಟ್ರೀಯ ಆಂದೋಲನಕಾರರು ಗ್ರಹಿಸಿದ ಕ್ರಮ ಬೇರೆ. ಬ್ರಿಟಿಶ್ ಅಧಿಕಾರಶಾಹಿ ಗ್ರಹಿಸಿದ ಕ್ರಮ ಬೇರೆ. ಇದೊಂದು ರೈತರ ಜೀವನದಲ್ಲಿ ಮಹತ್ವದ ತಿರುವಿಗೆ ಕಾರಣವಾಯಿತು. ರೈತರು ಅನಿವಾರ್ಯವಾಗಿ ರಾಷ್ಟ್ರೀಯ ಆಂದೋಲನದಲ್ಲಿ ಭಾಗವಹಿಸುವಂತಾಯಿತು. ಕಾರಂತರ 'ಔದಾರ್ಯದ ಉರುಳಲ್ಲಿ' ಕಾದಂಬರಿಯ ರಾಧಾಕೃಷ್ಣ ಮಲೆನಾಡು, ಶಿರಸಿ, ಸಿದ್ಧಾಪುರದ ಕಡೆಯಲ್ಲಿ ಓಡಾಡಿದ ಸಂದರ್ಭದಲ್ಲಿ ಏನಾಯಿತು ಎಂಬುದರ ವಿವರಣೆಯಿದೆ :

ಆತ ಹೊಕ್ಕ ಒಂದೊಂದು ಮನೆಯೂ ಒಂದೊಂದು ಕತೆಯನ್ನು ಹೇಳುತ್ತಿತ್ತು. ಬಂಧುಗಳನ್ನು ಸೆರೆಮನೆಗೆ ಕಳುಹಿಸಿದವರು ಕೆಲವರು ; ಪೊಲೀಸರ ದಬ್ಬಾಳಿಕೆಗೆ ಗುರಿಯಾದವರು ಕೆಲವರು. ತಮ್ಮ ಆಸ್ತಿ, ಮನೆಗಳನ್ನು ದಂಡತೆತ್ತು ಕಂಗಾಲಾದವರು ಕೆಲವರು. ಆದರೂ ಜನರಲ್ಲಿ ನಿರಾಶೆಯುಂಟಾಗಲಿಲ್ಲ. ನಾಳಿನ ಗೆಲುವನ್ನು ಇದಿರು ಕಾದಿದ್ದಾರೆ. ತಮಗೆ ಜಯವಿದೆ ಎಂದು ನಂಬಿ ಕುಳಿತಿದ್ದಾರೆ. ಒಂದು ವ್ಯಥೆ ಮಾತ್ರ ಅವರನ್ನು ಕೊರೆಯದೆ ಇಲ್ಲ. ಅದು ನಾಳಿನ ಚಿಂತೆಯಲ್ಲ, ಅಂದಿನ ಚಿಂತೆ. ಹೊಲಮನೆಗಳನ್ನು ಕಳೆದುಕೊಂಡು ನಿರ್ಗತಿಕರಾಗಿ, ತಮ್ಮವರನ್ನು ಸಾಕುವ ಹೊಣೆಗಾರಿಕೆ ಅವರನ್ನು ಹೆದರಿಸುತ್ತಿದೆ. ದನಕರುಗಳನ್ನು ಕಳೆದುಕೊಂಡುದದರಿಂದ ಇದ್ದ ಹೊಲ ಗದ್ದೆಗಳನ್ನು ಉತ್ತುಬಿತ್ತುವ ವಿಚಾರ ಅವರನ್ನು ಕಂಗಾಲಾಗಿ ಮಾಡಿದೆ. ಬೆಳೆದ ಬೆಳೆಯನ್ನು ಕತ್ತರಿಸುವುದೇ ಬಿಡುವುದೇ ಎಂಬ ಯೋಚನೆಯಾಗಿದೆ. ಅದನ್ನು ಮನೆಗೆ ತಂದು, ರಾಶಿ ಒಟ್ಟಿದ ಮರುದಿನವೇ ವಿಧಿಸಿದ ದಂಡಕ್ಕಾಗಿ ಸರಕಾರ ಅದನ್ನು ಹರಾಜು ಮಾಡಿದರೆ ಗತಿಯೇನು – ಎಂಬ ಭೀತಿ. ಯಾವ ಕದನವೇ ಆಗಲಿ, ಬರಿ ಹೊಟ್ಟೆಯಲ್ಲಿ

ಅದು ನಡೆಯಲಾರದಷ್ಟೇ ! ಅಲ್ಲಲ್ಲಿ ತಮ್ಮ ಮತ್ತು ಗೆಳೆಯರ ಆಸ್ತಿ, ಮನೆಗಳು ಹರಾಜಾಗುವುದನ್ನು ಕಾಣುತ್ತಿದ್ದಾರೆ. ಕೊಳ್ಳುವವರಿಲ್ಲದೆ ಹೋದರೆ ದೂರದ ಗಿರಾಕಿಗಳನ್ನು ಹಿಡಿದು ತಂದು, ಸಾವಿರಾರು ರೂಪಾಯಿ ಬೆಲೆ ಬಾಳುವ ಭೂಮಿಗಳನ್ನು ನೂರು, ಇನ್ನೂರಕ್ಕೆ ಹರಾಜು ಮಾಡಿ, ಜನರ ಮೇಲಿನ ಸೇಡು ತೀರಿಸುವುದನ್ನು ನೋಡುತ್ತಿದ್ದಾರೆ. ನಿನ್ನೆ ದಿನವಷ್ಟೇ ನೂರು ರೂಪಾಯಿಗಳನ್ನು ಕೊಟ್ಟು ಕೊಂಡ ಕೋಣಗಳ ಜತೆಯನ್ನು ತಮ್ಮ ಕಣ್ಣ ಮುಂದೆಯೇ ಇಪ್ಪತ್ತು ರೂಪಾಯಿಗಳಿಗೆ ಲಿಲಾವು ಮಾಡಿ, ಅವನ್ನು ಸ್ವಾರ್ಥಿಗಳಾದ ಯಾರೋ ಅಟ್ಟಿಕೊಂಡು ಹೋಗುವುದನ್ನು ಕಾಣುತ್ತಿದ್ದಾರೆ. ಆಗ ಮನಸ್ಸು ಉರಿಯುತ್ತದೆ ; ರಟ್ಟೆ ಸಿಟ್ಟಿನಿಂದ ಕುಣಿಯುತ್ತದೆ. ಬಡವನ ಸಿಟ್ಟಿನಂತೆ ಉಗುಳನ್ನು ನುಂಗಿ ಕುಳಿತಿದ್ದಾರೆ, ಜನ. ಅಂಥವರ ಎಡೆಯಲ್ಲಿ ಕುಳಿತು, ತನ್ನ ಕರ್ತವ್ಯದ ದಾರಿಯನ್ನು ಅರಸುತ್ತಿದ್ದಾನೆ ರಾಧಾಕೃಷ್ಣ.

(ಔದಾರ್ಯದ ಉರುಳಲ್ಲಿ, 2001, ಪು. 239).

ಕಾರಂತರು ಕಾದಂಬರಿಯಲ್ಲಿ ಸೂಚಿಸಿದಂತೆ ರೈತರ ಅನನ್ಯತೆಯು (Identity) ಬೇರೆಯಾಗಿತ್ತು. ಕಂದಾಯ ಅನ್ನುವುದು ಆಡಳಿತಾತ್ಮಕ ಶಿಕ್ಷೆಯಾಯಿತು. ರೈತರು ತಮ್ಮ ಬಂಡಾಯವು ರಾಷ್ಟ್ರೀಯತೆಗೆ ಪೂರಕವಾಗಿದೆಯೋ, ಇಲ್ಲವೋ ಎಂದು ತಿಳಿಯುವಷ್ಟು ಪ್ರಜ್ಞಾವಂತರಾಗಿರಲಿಲ್ಲ. ರೈತರ ಬಂಡಾಯವು ಈ ದೃಷ್ಟಿಯಿಂದ ಅಸ್ಪಷ್ಟತೆಯಿಂದ ಕೂಡಿತ್ತು. ರೈತರು ಬೇರೆ ಬೇರೆ ಪ್ರದೇಶದಲ್ಲಿ, ಬೇರೆ ಬೇರೆ ರೀತಿಯಲ್ಲಿ ಸಂಗ್ರಾಮದಲ್ಲಿ ತೊಡಗಿಸಿಕೊಂಡ ರೀತಿಗಳು ಗಮನಾರ್ಹವಾಗಿವೆ. ಇಲ್ಲಿಂದ ರೈತರು ನಾವು ಬೇರೆ, ಆಡಳಿತ ವಹಿಸುವ ಕುಂಪಣಿ ಸರಕಾರದವರು ಬೇರೆ ಎಂದು ಭಾವಿಸಿಕೊಳ್ಳುವಂತಾಯಿತು. ಕರನಿರಾಕರಣೆಯ ಚಳುವಳಿಯು ಜಾತಿ, ಮತವನ್ನು ಮೀರಿ ಬೆಳೆಯತೊಡಗಿತು. ರೈತರ ಕರನಿರಾಕರಣೆಯ ಚಳುವಳಿಯು ರೈತರ ಸಮುದಾಯಕ್ಕೆ ಸಂಬಂಧಿಸಿದ್ದು ಅನಂತರ ಅದು ರಾಷ್ಟ್ರೀಯತೆಯ ಪ್ರಜ್ಞೆಗೆ ಕಾರಣವಾಯಿತು. ಜಾತಿ ಮತ್ತು ಮತಗಳು ಭಾರತದಲ್ಲಿ ಒಬ್ಬರಿಗಿಂತ ಮತ್ತೊಬ್ಬರಿಗೆ ಬೇರೆಯೆಂಬುದನ್ನು ಸೂಚಿಸುತ್ತದೆ. ಸ್ವದೇಶಿ ಚಳುವಳಿ (1903–1908) ಅಸಹಕಾರ ಚಳುವಳಿ (1920–1922)ರ ಬೆಳವಣಿಗೆಯನ್ನು ಈ ಹಿನ್ನೆಲೆಯಿಂದ ಗಮನಿಸಬಹುದು. ಅಸಹಕಾರ ಚಳುವಳಿಯು ಸ್ವ ಅನನ್ಯತೆ, ನೈತಿಕ ಪಾವಿತ್ರ್ಯ, ಬ್ರಿಟೀಶ್ ಪ್ರಭುತ್ವದ ವಿರುದ್ಧ ಸಾಮೂಹಿಕ ಎಚ್ಚರ ಎಂಬದುನ್ನು ಸೂಚಿಸುತ್ತದೆ. ಗಾಂಧಿ ಹರತಾಳ (17–11–1921)ರಲ್ಲಿ ಪ್ರಾರಂಭಿಸಿದಾಗ ಅದನ್ನು ಅವಿಧೇಯ ಚಳುವಳಿ (Disloyality) ಎಂಬುದನ್ನು ಸೂಚಿಸುತ್ತದೆ. ಹರತಾಳವನ್ನು ಬ್ರಿಟೀಶ್ ಸರಕಾರವು ಕ್ರಿಮಿನಲ್ ಚಟುವಟಿಕೆಯೆಂದು ಭಾವಿಸಿತು (Section 107- 108, Code of Criminal Procedure and Sections-124A and 153-A of Indian Personal Code). ಮೈಸೂರಿನ

ಕುರಿತು ಬರೆಯುವಾಗ ಎಸ್. ಚಂದ್ರಶೇಖರ (1983) ಈ ರೀತಿಯಲ್ಲಿ ಹೇಳುತ್ತಾರೆ. ಅವರ ಮಾತುಗಳು ಕಂದಾಯ ಆರ್ಥಿಕ ನೀತಿಯನ್ನು ಪ್ರಸ್ತಾವಿಸುತ್ತದೆ

ಮೊದಲ ಜಾಗತಿಕ ಯುದ್ಧದ ಬಿಸಿ ಮೈಸೂರಿನ ಅರ್ಥವ್ಯವಸ್ಥೆಗೂ ಬಲವಾಗಿ ತಟ್ಟಿತ್ತು. ಇದರ ಜೊತೆಗೆ ಮುಂಗಾರು ವಿಫಲತೆ, ಸರ್ಕಾರ ನಡೆಯಿಸುವಲ್ಲಿನ ಖರ್ಚು ಹೆಚ್ಚಿ ಸ್ಥಿತಿ ಹದಗೆಟ್ಟಿತ್ತು. ಸರ್ಕಾರಿ ಖಜಾನೆಗೆ ಬರುತ್ತಿದ್ದ ಆದಾಯದಲ್ಲಿ ಭೂ ಕಂದಾಯದ್ದೇ ಸಿಂಹಪಾಲು. ಆದರೆ ಆಗಿನ ಪರಿಸ್ಥಿತಿಯಲ್ಲಿ ರೈತರನ್ನು ತೆರಿಗೆ ಸಲ್ಲಿಸುವುದಕ್ಕೆ ಒತ್ತಾಯ ಮಾಡುವಂತಿರಲಿಲ್ಲ. ಸರ್ಕಾರವೇ ಅವರ ನೆರವಿಗೆ ನಿಂತು 3 ಲಕ್ಷ ರೂಪಾಯಿ ಖರ್ಚು ಮಾಡಬೇಕಾಯಿತು. ಆಹಾರ ಧಾನ್ಯ ಕೊರತೆಯಿಂದ ಬರ್ಮಾ ಮತ್ತು ಮದ್ರಾಸಿನಿಂದ ಕ್ರಮವಾಗಿ ಅಕ್ಕಿ ಮತ್ತು ರಾಗಿಯನ್ನು ಆಮದು ಮಾಡಿಕೊಳ್ಳಬೇಕಾಯಿತು. ದಾಸ್ತಾನುಗಾರರು ಮುಕ್ತ ಪೇಟೆಗೆ ಧಾನ್ಯ ಬಿಡುವಂತೆ ಮಾಡಲು ಹಲವಾರು ಕ್ರಮಗಳನ್ನು ಸರ್ಕಾರ ಹಿಂಜರಿಯದೆ ಕೈಗೊಂಡಿತು. 1920ರಲ್ಲಿ ಪರಿಸ್ಥಿತಿ ಸುಧಾರಿಸಿತು. ರಾಜ್ಯ ಸರ್ಕಾರ ಬಿಕ್ಕಟ್ಟನ್ನು ಎದುರಿಸಲು ಕೈಗೊಂಡ ಕ್ರಮಗಳನ್ನು ಮೈಸೂರಿನ ಜನತೆ ಹಾಗೂ ಹೊರಗಿನ ಪತ್ರಿಕಾರಂಗ ಅಭಿನಂದಿಸಿ ಹೊಗಳಿದರೆ ವಿರೋಧಿಗಳ ಕೈಲಿದ್ದ ಮೈಸೂರು ಪತ್ರಿಕೆಗಳು ಸರ್ಕಾರವನ್ನು ಅಪ್ರಚಲಿತ, ಅದಕ್ಷ ಮತ್ತು ಅಜಾಗರೂಕವೆಂದು ಟೀಕಿಸಿದವು.

ಕಾಂತರಾಜರು ದಿವಾನರಾದ ಮೊದಲ ಎರಡು ವರ್ಷಗಳೂ ಸರ್ಕಾರ ಖೋತಾ ಆಯವ್ಯಯ ಮಂಡಿಸಿ, ಕೂಡಿಟ್ಟ ನಿಧಿಯಿಂದ ಹಣ ತೆಗೆದು ಹೊಂದಿಸಬೇಕಾಯಿತು. ಆದರೆ ಈ ನೀತಿ ಮುಂದುವರಿಸಿದರೆ ಆರ್ಥಿಕ ಅಭದ್ರತೆ ಹೆಚ್ಚುವ ಸಂಭವವಿರುವುದರಿಂದ ಸರ್ಕಾರ ಜಾಗರೂಕವಾಗಿರಬೇಕಿತ್ತು. ಸರ್ಕಾರಿ ವೆಚ್ಚದಲ್ಲಿ ಕಡಿತ ಹಾಗೂ ಆದಾಯದಲ್ಲಿ ಏರಿಕೆ ಕಾರ್ಯಕ್ರಮವನ್ನು ಹಾಕಿಕೊಂಡು, ಒಂದು ಸಮಿತಿಯನ್ನು ನೇಮಿಸಿ ಅದರ ವರದಿಯ ಆಧಾರದ ಮೇಲೆ ಸರ್ಕಾರಿ ಸೇವೆಯಲ್ಲಿ ಅನಗತ್ಯವೆಂದು ಕಂಡ ಕೆಲ ಅತಿ ವೆಚ್ಚದ ಜಾಗೆಗಳನ್ನು ರದ್ದುಮಾಡಿದುದರ ಪರಿಣಾಮವಾಗಿ ವರ್ಷಕ್ಕೆ ರೂ. 50 ಲಕ್ಷದಷ್ಟು ಸರ್ಕಾರಿ ವೆಚ್ಚ ಕಡಿಮೆಗೊಳಿಸಲಾಯಿತು. ಆದಾಯ ಹೆಚ್ಚಿಸಲು ಬಡವರ ಮೇಲೆ ಹೊರೆಯಾಗಲಾರದಂತೆ ರೂ. 1300ಕ್ಕೂ ಹೆಚ್ಚಿನ ಆದಾಯದ ಮೇಲೆ ವಾರ್ಷಿಕ ತೆರಿಗೆಯನ್ನು, ಕೋರ್ಟು ಫೀ, ಸ್ಟಾಂಪಿನ ಮೇಲೆ ತೆರಿಗೆಯನ್ನು ವಿಧಿಸಿ ರೂ. 20 ಲಕ್ಷದಷ್ಟು ನಿವ್ವಳ ಆದಾಯ ಖಜಾನೆಗೆ ಬರುವಂತೆ ಮಾಡಲಾಯಿತು. ಆದರೂ ಹಣಕಾಸಿನ ಸ್ಥಿತಿ ನಿರೀಕ್ಷಿತ ಮಟ್ಟವನ್ನು ಮುಟ್ಟದಿದ್ದಾಗ ಸರ್ಕಾರ ಸಾರ್ವಜನಿಕ ಸಾಲ ಎತ್ತುವ ಸಾಹಸಕ್ಕೆ ಕೈಹಾಕಬೇಕಾಯಿತು. ಪ್ರಜಾಪ್ರತಿನಿಧಿ ಸಭೆಯಲ್ಲಿ ವಿಷಯ ಚರ್ಚಿಸುತ್ತಾ

ಕಾಂತರಾಜರು ನಮ್ಮೆಲ್ಲ ಯೋಜನೆಗಳು ಪೂರ್ಣಗೊಳ್ಳಬೇಕಾದರೆ ನಾವು ಸಾಲವೆತ್ತದೆ ವಿಧಿಯಿಲ್ಲವೆಂದು ಹೇಳಿ ಎರಡು ವಿಧದ ಸಾಲವನ್ನು ಘೋಷಿಸಿದರು. ಒಂದು– ಏಳು ವರ್ಷ ಅವಧಿಯ ಶೇಕಡ 7 ರಷ್ಟು ಬಡ್ಡಿಯ ಸಾಲ ಮತ್ತೊಂದು 20 ರಿಂದ 30 ವರ್ಷ ಅವಧಿಯ ಶೇ. 6.5 ಬಡ್ಡಿಯ ಸಾಲ. ಮೂರು ತಿಂಗಳ ಅವಧಿಯಲ್ಲಿ ಸರ್ಕಾರ ನಿಗದಿ ಪಡಿಸಿದ್ದಕ್ಕಿಂತ ಹೆಚ್ಚಿನ ಹಣ ಈ ಸಾಲಗಳಲ್ಲಿ ಕೂಡಿತು.

ಈಸೂರು ಘಟನೆಯು ಇಲ್ಲಿ ಉಲ್ಲೇಖನೀಯ

ಶಿವಮೊಗ್ಗ ಜಿಲ್ಲೆಯ ಶಿಕಾರಿಪುರದ ಅಮಲ್ದಾರರಿಗೆ ಸೇರಿದ ಕುಗ್ರಾಮ ಈಸೂರು. ಗ್ರಾಮಾಂತರ ಪ್ರದೇಶಗಳನ್ನು ಚಳುವಳಿಗಳಲ್ಲಿ ತೊಡಗಿಸಿ, ಆಡಳಿತವನ್ನು ಸ್ಥಗಿತಗೊಳಿಸುವ ಕಾಂಗ್ರೆಸ್ ಕರೆಯಂತೆ ಈಸೂರಿನ ನಿರಕ್ಷರಿ ರೈತರು ಉತ್ಸಾಹ ಮತ್ತು ದೃಢತೆಯಿಂದ ಆಗಸ್ಟ್ 9ರಿಂದಲೇ ಗಾಂಧಿ ಟೋಪಿ ಧರಿಸಿ ರಾಷ್ಟ್ರಧ್ವಜ ಹಿಡಿದು ಚಳುವಳಿ ಆರಂಭಿಸಿದ್ದು, ಕಾನೂನು ಭಂಗ ಚಳುವಳಿ ತೀವ್ರಗೊಳ್ಳಲು ಕಾರಣವಾಯಿತು.

ಈಸೂರು ಚಳವಳಿಯ ವಿಶಿಷ್ಟತೆಯೆಂದರೆ ಎಲ್ಲೆಡೆ ಸಾಧ್ಯವಾಗದೇ ಹೋದ ಜವಾಬ್ದಾರಿ ಸ್ವರಾಜ್ಯ ಆಡಳಿತವನ್ನು ಜನತೆ ಘೋಷಿಸಿಕೊಂಡು ಬೇಜವಾಬ್ದಾರಿ ಸರ್ಕಾರದವರಿಗೆ ಬಹಿಷ್ಕಾರ ಹಾಕಿದ್ದು ಮತ್ತು ಸಾಮಾನ್ಯ ರೀತಿಯಲ್ಲಿ ಮಹಿಳೆಯರೂ ಚಳುವಳಿಯಲ್ಲಿ ಬಹಿಷ್ಕಾರ ಹಾಕಿದ್ದು ಮತ್ತು ಅಸಾಮಾನ್ಯ ರೀತಿಯಲ್ಲಿ ಮಹಿಳೆಯರೂ ಚಳುವಳಿಯಲ್ಲಿ ಪಾಲ್ಗೊಂಡು ಶಿಕ್ಷೆಗೊಳಗಾದದ್ದು. ಆಗಸ್ಟ್ 26ರಂದು ಊರ ಮುಂದೆ ಸ್ವತಂತ್ರ ಹಳ್ಳಿ ಎಂಬ ಫಲಕವನ್ನು ಹಾಕಿ, 12 ವರ್ಷದ ಮಲ್ಲಪ್ಪನನ್ನು ಸರ್ವಾಧಿಕಾರಿ, 10 ವರ್ಷದ ಜಯಪ್ಪನನ್ನು ಅಮಲದಾರನೆಂದು ಘೋಷಿಸಿ ಊರ ದೇವಾಲಯವನ್ನೇ ಆಡಳಿತ ಕಛೇರಿಯೆಂದು ಸ್ವತಂತ್ರಾಡಳಿತ ನಡೆಸಲಾರಂಭಿಸಿದರು. ಗ್ರಾಮಾಧಿಕಾರಿಯ ಸರ್ಕಾರಿ ಕಡತವನ್ನು ವಶಕ್ಕೆ ತೆಗೆದುಕೊಂಡು ಅವರಿಗೆ ಒಂಟಿ ಕಾಲಿನ ಮೇಲೆ ನಿಲ್ಲುವ ಒಂದು ದಿವಸದ ಶಿಕ್ಷೆ ವಿಧಿಸಿ ಸ್ವತಂತ್ರಾಡಳಿತಕ್ಕೆ ಬದ್ಧರಾಗಿರುವ ಮುಚ್ಚಳಿಕೆ ಬರೆಸಿಕೊಂಡು ನಂತರ ಬಿಡುಗಡೆ ಮಾಡಿದ್ದು ಇನ್ನೊಂದು ವೈಶಿಷ್ಟ್ಯ.

ಬ್ರಿಟಿಷ್ ಸಾಮ್ರಾಜ್ಯಶಾಹಿಗಳು ಚಳವಳಿ ಹತ್ತಿಕ್ಕಲು ದೇಶೀ ಸಂಸ್ಥಾನಗಳಿಗೆ ವಿಶೇಷ ಹುಕುಂ ನೀಡಿದ್ದರಿಂದ ಮೈಸೂರು ರಾಜಶಾಹಿ ಸರ್ಕಾರ ಬ್ರಿಟಿಷ್ ಆಳರಸರನ್ನು ಸಂತೋಷಪಡಿಸಲೆಂಬಂತೆ ಅವರ ಭಂಟನಾಗಿ ಚಳವಳಿ ಹತ್ತಿಕ್ಕಲು ಮುಂದಾಯಿತು. ದಿನಾಂಕ 28ರಂದು ಸರ್ಕಾರಿ ಸಿಬ್ಬಂದಿ ಈಸೂರು ಹೊಕ್ಕಾಗ ಸ್ವತಂತ್ರ ಸರ್ಕಾರದವರು ಅವರಿಗೆ ಖಾದಿ ಟೋಪಿ ಧರಿಸಲು ಆಜ್ಞೆ ಮಾಡಿದರು. ರೊಚ್ಚಿಗೆದ್ದ ಪೊಲೀಸ್ ಲಾಠಿ ಪ್ರಹಾರ ಮಾಡಿದಾಗ, ಊರಿನ ಜನತೆ ರೋಷದಿಂದ ತಿರುಗಿಬಿದ್ದು ಅಂದಿನ ಗಲಭೆ

ಸರ್ಕಾರಿ ಅಮಲ್ದಾರ ಮತ್ತು ಸಬ್ ಇನ್ಸ್‌ಪೆಕ್ಟರರ ಸಾವಿನಲ್ಲಿ ಪರ್ಯವಸಾನಗೊಂಡು ಪರಿಸ್ಥಿತಿ ಗಂಭೀರ ರೂಪ ಪಡೆಯಿತು. ಮರುದಿನ ಜಿಲ್ಲಾಧಿಕಾರಿ, ಗ್ರಾಮದ ಜನಸಂಖ್ಯೆಗಿಂತ ಹೆಚ್ಚಿನ ಪೊಲೀಸ್ ಮತ್ತು ಸೈನ್ಯದೊಡನೆ ಬಂದಾಗ ಜನ ಭಯಭ್ರಾಂತರಾದರು. ಈಸೂರಿನ ಜನತೆಯ ಮೇಲೆ ಗುಂಡಿನ ಮಳೆಗೆರೆಯಲಾಯಿತು. ಹಲವಾರು ಜನ ಸತ್ತು ಉಳಿದವರು ದಿಕ್ಕೆಟ್ಟು ಓಡಿದರು. ಸೈನ್ಯಪಡೆ ಎರಡು ವಾರ ಕಾಲ ಈಸೂರಿನಲ್ಲಿ ಬೀಡು ಬಿಟ್ಟು, ಸಿಕ್ಕಿದ್ದನ್ನು ದೋಚಿ, ಕೈಲಾಗದೆ ಉಳಿದವರಿಗೆ ಚಿತ್ರ ಹಿಂಸೆ ಕೊಟ್ಟು ಬಂಧಿಸಿತು.

ಈಸೂರು ಘಟನೆ ಐತಿಹಾಸಿಕವಾದದ್ದು. ಗ್ರಾಮದ 41 ಜನರ ಮೇಲೆ ಖಟ್ಲೆ ಹೂಡಿ 11 ಜನರಿಗೆ ಮರಣದಂಡನೆಯಾಗಿ, ಹದಿಮೂರು ಜನರಿಗೆ ಜೀವಾವಧಿ ಶಿಕ್ಷೆ ವಿಧಿಸಲಾಗಿ ಹೈಕೋರ್ಟ್‌ನಲ್ಲಿ ಐದು ಮಂದಿಗೆ ಗಲ್ಲು ಶಿಕ್ಷೆ ಖಾಯಂ ಆಗಿ ಗುರಪ್ಪ, ಮಲ್ಲಪ್ಪ, ಹಾಲಪ್ಪ, ಸೂರ್ಯನಾರಾಯಣರಾವ್ ಮತ್ತು ಶಂಕರಪ್ಪ ಇವರುಗಳನ್ನು 1943ರಲ್ಲಿ ಮಾರ್ಚ್ 8, 9, 10ರಂದು ಬೆಂಗಳೂರಿನ ಸೆಂಟ್ರಲ್ ಜೈಲಿನಲ್ಲಿ ಗಲ್ಲಿಗೇರಿಸಲಾಯಿತು. ಜೀವಾವಧಿ ಶಿಕ್ಷೆಗೆ ಗುರಿಯಾಗಿದ್ದ ಹಾಲಮ್ಮ, ಪಾರ್ವತಮ್ಮ ಮತ್ತು ರುದ್ರಮ್ಮ ಇವರುಗಳನ್ನು ಮತ್ತಿತರ ಎಂಟು ಮಂದಿಯನ್ನೂ 1946ರ ಅಕ್ಟೋಬರ್‌ನಲ್ಲಿ ಬಿಡುಗಡೆ ಮಾಡಲಾಯಿತು.

ಈಸೂರು ಕ್ರಾಂತಿ ಕರ್ನಾಟಕದ ಗ್ರಾಮಾಂತರ ಪ್ರದೇಶದಲ್ಲಿ ರೈತರ ಪಾಲ್ಗೊಳ್ಳುವಿಕೆಯಿಂದ ಬ್ರಿಟಿಷ್ ಮತ್ತು ಮೈಸೂರು ಅರಸೊತ್ತಿಗೆಯ ವಿರುದ್ಧ ನಡೆದ ಒಂದು ಮಹತ್ತರ ಬಂಡಾಯ. ಅದೂ ಹೇಳಿಕೊಳ್ಳುವಂತಹ ಯಾವುದೇ ನಾಯಕನ ಮಾರ್ಗದರ್ಶನವಿಲ್ಲದೆ ಇಟ್ಟ ಕ್ರಾಂತಿಕಾರಿ ಹೆಜ್ಜೆ. ಬಹುಶಃ ಅಸಹಕಾರ ಚಳವಳಿಯ ಸಂದರ್ಭದಲ್ಲಿ ಉತ್ತರ ಪ್ರದೇಶದ ಗೋರಖಪುರ ಜಿಲ್ಲೆಯ ಚೌರಿಚೌರದ ಘಟನೆ (ಫೆಬ್ರವರಿ 2, 1922) ಬಿಟ್ಟರೆ ಗ್ರಾಮಾಂತರ ಪ್ರದೇಶದಲ್ಲಿ ಈ ರೀತಿಯ ಪ್ರತಿಭಟನೆ ಸ್ವಾತಂತ್ರ್ಯ ಪೂರ್ವ 20ನೇ ಶತಮಾನದಲ್ಲಿ ನಡೆದ ಒಂದು ಅಭೂತಪೂರ್ವ ಪ್ರತಿಭಟನೆಯೇ ಹೌದು.

ಭಾರತ ಬಿಟ್ಟು ತೊಲಗಿ ಚಳವಳಿಯ ಬಗ್ಗೆ ಮುಂಬೈ ಕರ್ನಾಟಕ ಪ್ರಾಂತ್ಯದಲ್ಲಿ ಆಡಳಿತ ಎಷ್ಟು ಭಯಭೀತವಾಗಿತ್ತೆಂದರೆ ಬ್ರಿಟಿಷ್ ವರದಿಯ ಪ್ರಕಾರವೇ ಚಳವಳಿ ಪ್ರಾರಂಭವಾಗಿ 18 ತಿಂಗಳ ನಂತರವೂ ಪುಂಡರ ಹಾವಳಿಯಿಂದ ಭಯಗೊಂಡಿದ್ದ ಅಧಿಕಾರಿಗಳು ಮೇಲಿನವರಿಗೆ ಸರಿಯಾದ ಮಾಹಿತಿ ಕೊಟ್ಟರೆ ಭೂಗತ ಚಳವಳಿಗಾರರು ತಮಗೆ ಕೇಡುಂಟುಮಾಡಬಹುದೆಂದು ಬುಡಮೇಲು ಕೃತ್ಯಗಳ ಬಗ್ಗೆ ವರದಿಯನ್ನೇ

ಮಾಡುತ್ತಿರಲಿಲ್ಲ. ಧಾರವಾಡ ಮತ್ತು ಬೆಳಗಾವಿ ಜಿಲ್ಲೆಗಳಲ್ಲಿ ಅಜ್ಞಾತ ಚಳವಳಿಗಾರರನ್ನು ಹಿಡಿಯಲೆಂದೇ ಸೈನ್ಯದ 8 ತುಕಡಿಗಳನ್ನು ಬಳಸಿಕೊಳ್ಳಲಾಯಿತು. ಸಿಕ್ಕವರನ್ನು ಚಿತ್ರಹಿಂಸೆಗೆ ಗುರಿಮಾಡಿ ತಪ್ಪೊಪ್ಪಿಗೆ ಹೇಳಿಕೆಗಳನ್ನು ಪಡೆದುಕೊಳ್ಳಲಾಯಿತು. ಈ ಚಳುವಳಿಯ ಸಂದರ್ಭದಲ್ಲಿ ಗುಂಡೇಟಿನಿಂದ ಸತ್ತವರು 186 ಜನರಾದರೆ, ಬಂಧಿಸಲ್ಪಟ್ಟು ಶಿಕ್ಷೆಗೊಳಗಾದವರು 7000ಕ್ಕೂ ಹೆಚ್ಚು.

ಒಟ್ಟಿನಲ್ಲಿ ಈ ದೃಷ್ಟಿಯಿಂದ ಕರನಿರಾಕರಣೆಯು ಭಾರತೀಯ ಸಂದರ್ಭದ ಹಿನ್ನೆಲೆಯಿಂದ ಹೇಳುವುದಿದ್ದರೆ ವಿಶಿಷ್ಟವಾಗಿತ್ತು.

ಇದರ ಪರಿಣಾಮಗಳನ್ನು ಈ ರೀತಿಯಲ್ಲಿ ಗುರುತಿಸಬಹುದು :

1. ರೈತರ ಬಗೆಗಿನ ಹೊಸ ವ್ಯಾಖ್ಯೆಗಳು.
2. ರೈತರ ದೈಹಿಕ ಚಟುವಟಿಕೆಯು ಕೂಡಾ ಬ್ರಿಟೀಶ್ ಪ್ರಭುತ್ವದ ವಿರೋಧ.
3. ಭೂಮಿಯ ಒಡೆತನಕ್ಕೆ ಹೊಸ ರೂಪ.
4. ರೈತರ ಒಕ್ಕಲು, ಜೀತ, ಗೇಣಿದಾರ ಮುಂತಾದ ಪರಿಕಲ್ಪನೆಗಿಂತ ಮುಕ್ತಿ ದೊರೆತು ಅವರೂ ಸ್ವಾತಂತ್ರ್ಯ ಹೋರಾಟಗಾರರು ಎಂಬ ಚಿಂತನೆ ಹುಟ್ಟಿಕೊಂಡಿತು.
5. ರೈತರ ನ್ಯಾಯದ ಪರಿಕಲ್ಪನೆ ಹೆಚ್ಚುವುದಕ್ಕೆ ಹೊಸ ಅವಕಾಶ ನಿರ್ಮಾಣವಾಯಿತು.
6. ನಿರಾಕರಣೆಗೆ ಸಾಮಾಜಿಕ ವ್ಯಾಖ್ಯೆಯೇನಿತ್ತೋ ಅದು ರಾಜಕೀಯ ವ್ಯಾಖ್ಯೆಯಾಗಿ ಪರಿವರ್ತನೆ ಹೊಂದಿತು. ಮತ್ತು ಇದು ಗಾಂಧಿಯವರ ರಾಜಕೀಯ ತಂತ್ರಗಾರಿಕೆಯನ್ನು ಸೂಚಿಸುತ್ತದೆ.

ಕೊನೆಗೊಂದು ಮಾತನ್ನು ಹೀಗೆ ಉಲ್ಲೇಖಿಸಬಹುದು :

"ಪರಕೀಯ ರಾಷ್ಟ್ರದ ಮೇಲಿನವರು ಬಂದು ಗಾಡಿಕಾರರ
ದುಡ್ಡು ನುಂಗಿದರು.
ನಮ್ಮ ಸರಸಾದ ಭೂಮಿಯ ಕೆಡಿಸಿದರು. ನಮಗೆ ಪರಮ ಕಲ್ಯಾಣ ಮಾಡಿದರು.
ಕರರೂಪದಿಂದೆಮ್ಮ ಧನವನ್ನು ಹೀರುತ್ತ ತಿರುಕಾಗಿರಿಯೆಂದು
ಹರಸಿದರೆಮ್ಮನು"

(ಸಂ. ಸೂರ್ಯನಾಥ ಕಾಮತ್, 1997, ಬಿಡುಗಡೆಯ ಹಾಡುಗಳು, ಪು. 23).

ಬ್ರಿಟೀಶ್ ಪ್ರಭುತ್ವವು ತಾನು ಕಾನೂನು, ನ್ಯಾಯಾಂಗ, ಅಧಿಕಾರವನ್ನು ಸಂಯೋಜಿಸಿಕೊಂಡು ತನ್ನ ಹಿತಾಸಕ್ತಿಗೆ ಪೂರಕವಾಗುವಂತೆ ತನ್ನ ಆಢಳಿತಾಂಗವನ್ನು ಗಟ್ಟಿ ಮಾಡುವುದರೊಂದಿಗೆ ಭಾರತೀಯರಿಗೆ ತಾವು ಭಿನ್ನ ಮಾದರಿಯ ಸರಕಾರವನ್ನು

ರೂಪಿಸಿ, ಅದರ ಮೂಲಕ ಅಭಿವೃದ್ಧಿಯನ್ನು ಸಾಧಿಸಲು ಸಾಧ್ಯವೆಂದು ತೋರಿಸಬೇಕಿತ್ತು. ಕಾನೂನು, ಆಡಳಿತ, ಸರಕಾರ, ಅಭಿವೃದ್ಧಿ, ಲಿಖಿತ ರೂಪಗಳು, ಒಂದು ಕಡೆಯಿಂದ ಕೆಲಸ ಮಾಡಿದರೆ ಮತ್ತೊಂದು ಕಡೆಯಿಂದ ಅದು ಮುಖವಾಡಗಳ ಮೂಲಕ, ರಕ್ತ ಪಾತವಿಲ್ಲದೆಯೇ ಭಾರತೀಯ ಮನಸ್ಸುಗಳ ಮೇಲೆ ನಿಯಂತ್ರಣ ಸಾಧಿಸುವ ಯತ್ನವನ್ನು ಮಾಡಿತು. ಸರಕಾರ ಮತ್ತು ಕಾನೂನಿಗೆ ಸಂಬಂಧಿಸಿದಂತೆ ಬೇರೆ ಬೇರೆ ಗವರ್ನರ್ ಜನರಲ್‌ಗಳು ಬೇರೆ ಬೇರೆ ಪರಿಕಲ್ಪನೆಯನ್ನು ಇಟ್ಟುಕೊಂಡಿದ್ದರು. ಖಾಸಗಿ ಆಸ್ತಿ, ಅದರ ಮೇಲೆ ಕರವನ್ನು ಹೇರುವುದು, ವ್ಯಕ್ತಿಯು ಜಮೀನಿನ ಮೇಲೆ ಹಿಡಿತ ಸಾಧಿಸುವುದು ಮುಂತಾದವುಗಳನ್ನು ಕೂಡಾ ಸರಕಾರವು ಚಿಂತಿಸಿತ್ತು.

ಬ್ರಿಟೀಶರ ಅಂದಿನ ಸರಕಾರದ ರೂಪವು ಒಂದೇ ರೀತಿಯದಲ್ಲ ಎಂಬುದನ್ನು ನಾವು ಗಮನಿಸಬೇಕು. ಬಹು ರೂಪದ, ಬಹು ವೇಷದ ಬಿಳಿಯರ ಆಡಳಿತ ನೀತಿಯು ಕೂಡಾ ಒಂದೊಂದು ಸಂದರ್ಭದಲ್ಲಿ ಅತ್ಯಂತ ಉದಾರವಾದದ ಚಿಂತನೆಯ ಕ್ರಮದ ಹೊಂದಾಣಿಕೆಯಂತೆ : ಕೆಲವು ಗವರ್ನರ್ ಜನರಲ್‌ಗಳ ಕಾಲದಲ್ಲಿ ಕಟ್ಟುನಿಟ್ಟಾದ ಮಡಿವಂತ ನೀತಿಯಂತೆ, ಮತ್ತೆ ಕೆಲವು ಗವರ್ನರ್ ಜನರಲ್‌ಗಳ ಆಡಳಿತವು ಸಮನ್ವಯದಂತೆಯೂ ಭಾಸವಾಗುತ್ತದೆ. ಹೀಗಾಗಿ ಬ್ರಿಟೀಶರ ಗವರ್ನರ್ ಜನರಲ್ ನೀತಿಯೇ ಒಂದು ಕಟ್ಟು ಎಂದು ಭಾವಿಸುವುದು ತಪ್ಪಾಗುತ್ತದೆ. ಬ್ರಿಟೀಶ್ ಗವರ್ನರ್ ಜನರಲ್ ಬದಲಾಗುತ್ತಾ ಹೋದಂತೆ ಕೆಲವರು ತಮಗಿಂತ ಹಿಂದೆ ಬಂದು ಹೋದವರ ನೀತಿಯನ್ನು ಎತ್ತಿಹಿಡಿದರು. ಮತ್ತೆ ಕೆಲವರು ತಮ್ಮ ಕಲ್ಪನೆಯಂತೆ ಭಾರತದಲ್ಲಿ ತಮ್ಮ ನಿಯಮಾವಳಿ ಜಾರಿಗೆ ತಂದು ಭಾರತದ ನಕ್ಷೆಯನ್ನು ಒಂದು ರೂಪಕ್ಕೆ ತರಲು ಯತ್ನಿಸಿದರು.

ಈ ದೃಷ್ಟಿಯಿಂದ ಕಾನೂನು ಮತ್ತು ಸರಕಾರಕ್ಕೆ ಸಂಬಂಧಿಸಿದಂತೆ ನಾವು ಈ ಕೆಳಗಿನ ಅಂಶಗಳನ್ನು ಮನಗಾಣಬಹುದು :

1. ವಸಾಹತುಶಾಹಿ ಅನುಭವದ ಸಂದರ್ಭದಲ್ಲಿ ಆಢಳಿತಾತ್ಮಕ ಪ್ರಕ್ರಿಯೆಯು ಅದು ರೂಪಿಸಿದ ಕಾನೂನುಗಳ ಮೂಲಕ ಅಧಿಕಾರದ ಸಂಹಿತೆಗಳಾಗಿದ್ದವು. ಸಾಮಾನ್ಯ ಮನುಷ್ಯರಿಗೆ ಈ ಕಾನೂನುಗಳು, ಅದರಲ್ಲಿಯೂ ವೈಯಕ್ತಿಕ ಮಟ್ಟದ ಕಾನೂನುಗಳು ಹೊಸ ಚಿಹ್ನೆಗಳಾಗಿದ್ದವು.
2. ಭಾರತದಲ್ಲಿ ವಸಾಹತುಶಾಹಿ ಅನುಭವಕ್ಕಿಂತ ಪೂರ್ವದಲ್ಲಿದ್ದ ಕಾನೂನುಗಳು ಲಿಖಿತ ರೂಪದಲ್ಲಿರಲಿಲ್ಲ. ಮತ್ತು ಅದರ ಪರಿಕಲ್ಪನೆಗಳು ಬೇರೆಯಾಗಿದ್ದವು.
3. ವಸಾಹತು ಪೂರ್ವದ ಕಾನೂನುಗಳು, ರಾಜ, ಮಂತ್ರಿ, ಸೇನಾಧಿಪತಿ,

ಕೋಶಾಧಿಕಾರಿ, ಗ್ರಾಮ ಮಟ್ಟದಲ್ಲಿ ಆಯಾ ಗ್ರಾಮದ ಪಂಚಾಯತಿ ಕಟ್ಟೆಗಳನ್ನು ಅವಲಂಬಿಸಿಕೊಂಡಿದ್ದವು. ನ್ಯಾಯ ಎನ್ನುವುದು ಸಂವಾದಿಗಳಾಗಿದ್ದವು.

4. ಭಾರತೀಯ ಸಮಾಜಕ್ಕೆ ಹೊಸ ತರಹದ ಸರಕಾರ, ಬ್ರಿಟೀಶ್‌ರ ಕಾನೂನುಗಳು ಜಾರಿಗೆ ಬಂದಾಗ ; ಹೊಸ ರೀತಿಯ ನ್ಯಾಯಾಂಗ ಪದ್ಧತಿಯೂ ಬಂದುದರ ದೆಸೆಯಿಂದ ಹಳೆಯ ಪದ್ಧತಿಗಳು ಗೈರು ಹಾಜರಾಗತೊಡಗಿದವು.

5. ಕಾನೂನು, ಅದನ್ನು ರೂಪಿಸಿದ ಕೋರ್ಟುಗಳು, ವಕೀಲರು, ತಾಲೂಕು ಕೇಂದ್ರಗಳು, ಜಿಲ್ಲಾ ಕೇಂದ್ರಗಳು, ನ್ಯಾಯಾಂಗ ವಿಧಾನಗಳು ಬ್ರಿಟೀಶ್ ಅಧಿಕಾರದ ಏಕ ಪ್ರಭುತ್ವಕ್ಕೆ ಪೂರಕವಾಗಿದ್ದವು.

6. ಬ್ರಿಟೀಶ್ ಅಧಿಕಾರಿಗಳಿಗೆ ಇದ್ದ ನ್ಯಾಯದ ಪರಿಕಲ್ಪನೆಯು ಆಂಶಿಕವಾಗಿ ಪೂರಕವಾಗಿದ್ದವು. ಅದರ ನಿಯಂತ್ರಣವು ಬ್ರಿಟನ್ ಕೇಂದ್ರದ ಮಾದರಿಯನ್ನು ಹೋಲುತ್ತಿದ್ದವು. ಇದರಿಂದ ಬ್ರಿಟೀಶರ ಸಾಮಾಜಿಕ, ಆರ್ಥಿಕ ದೃಷ್ಟಿಕೋನಗಳು, ಅಧಿಕಾರದ ಮುಂದುವರಿಕೆಯ ರೂಪಗಳು ವಸಾಹತು ಕಾಲದಲ್ಲಿ ಮುಂಚೂಣಿಗೆ ಬಂತು. ಬ್ರಿಟೀಶರ ಗಮನವಿದ್ದುದು ತಮ್ಮ ಅಧಿಕಾರವನ್ನು ರೂಪಿಸುವುದು, ಅದರೊಂದಿಗೆ ಜ್ಞಾನವು ಸೇರಿಕೊಂಡಿತ್ತು. ಬ್ರಿಟೀಶ್ ಅಧಿಕಾರವು ಈ ದೃಷ್ಟಿಯಿಂದ ಅಧಿಕಾರ ಕೇಂದ್ರ ಸ್ಥಾಪನೆ, ಅದಕ್ಕೆ ಸಂಬಂಧಿಸಿದ ಕಾರ್ಯಕ್ರಮಗಳನ್ನು ಒಂದೆಡೆಗೆ ರೂಪಿಸಲು ಯತ್ನಿಸಿತು. ಅಧಿಕಾರ, ಜ್ಞಾನ, ನಿಯಮಗಳು, ಅದಕ್ಕೆ ಸಂಬಂಧಿಸಿದ ಸಂಸ್ಥೆಗಳು (ಅಂದರೆ ಭಾರತೀಯರಿಗೆ ಜ್ಞಾನವನ್ನು ಕಟ್ಟಿಕೊಡುವ ಪ್ರಯತ್ನಗಳು) ಒಂದು ಕಡೆಗೆ ಬಂದವು. ಭಾರತೀಯರನ್ನು ಇದಕ್ಕೆ ಬೇಕಾದ ರೀತಿಯಲ್ಲಿ ತಯಾರಿಸುವುದು ಬ್ರಿಟೀಶ್ ಸರಕಾರಕ್ಕೆ ಅಗತ್ಯವಾಗಿತ್ತು. ಒಂದು ಸಂದರ್ಭದಲ್ಲಿ ಯೂರೋಪಿನಿಂದ ಅಧಿಕಾರಿಗಳನ್ನು ತಂದು ಇಲ್ಲಿ ಕೆಲಸ ಮಾಡಿಸಲು ಕಷ್ಟವೆಂದು ತಿಳಿದ ಯುರೋಪ್ ಸರಕಾರ ಉನ್ನತ ಅಧಿಕಾರವನ್ನು ತನ್ನ ಕೈಯಲ್ಲಿರಿಸಿಕೊಂಡು, ಮಧ್ಯವರ್ತಿಗಳ ಮೂಲಕ ಭಾರತವನ್ನು ರೂಪಿಸಿತು. ಅವರಿಗೆ ಬೇಕಾದ ಸಾಂಸ್ಥಿಕ ಜ್ಞಾನಗಳನ್ನು ಕೊಟ್ಟು (ಸಂವಹನದ ಕಾರಣಕ್ಕಾಗಿ) ಮಧ್ಯಸ್ತರದ ಅಧಿಕಾರಿಗಳನ್ನು ರೂಪಿಸಿತು. ಅಮಲ್ದಾರರು, ತಹಶೀಲ್ದಾರರು, ಕಲೆಕ್ಟರುಗಳು, ಮೋಜಣಿದಾರರು – ಬ್ರಿಟೀಶ್ ಅಧಿಕಾರ ಮತ್ತು ಭಾರತೀಯ ಸಾಮಾನ್ಯ ಜನರ ನಡುವಣ ಸೇತುವೆಯಾದರು. ಇಂಗ್ಲೀಷ್ ಕಲಿತ ಭಾರತದ ಒಂದು ವರ್ಗವು ಬ್ರಿಟೀಶ್ ಪ್ರಭುತ್ವದ ಪರವಾಗಿ ಕೆಲಸ ಮಾಡಬೇಕಾಗಿ ಬಂತು. ಮತ್ತು ಅವರು ಜನಸಾಮಾನ್ಯರ ಮತ್ತು ಬ್ರಿಟೀಶ್ ಅಧಿಕಾರಿಗಳ

ನಡುವಣ ಸೇತುವೆಯಾದರು. ಇಲ್ಲಿ ಒಂದಂಶವನ್ನು ಗಮನಿಸಬಹುದು : ಕಲಿತ ಭಾರತೀಯರು ಕೂಡಾ ಬ್ರಿಟೀಶ್ ಅಧಿಕಾರದ ಪ್ರಾತಿನಿಧಿಕ ರೂಪಗಳಂತೆ ಕೆಲಸ ಮಾಡಬೇಕಾಯಿತು. ಆದುದರಿಂದ ಭಾರತೀಯ ಸಂಜಾತರ ದೇಹವು ಭಾರತೀಯ ಸಾಂಪ್ರದಾಯಿಕ ಸಮಾಜಕ್ಕೆ ಸೇರಿದರೂ ಅವರ ನಡಾವಳಿಗಳು ಬ್ರಿಟೀಶರಿಗೆ ತಕ್ಕಂತೆ ಇತ್ತು. ದೇಹ ಭಾರತದ್ದು, ಮನಸ್ಸು ಯುರೋಪಿನದು. ಇದು ಹಯವದನ ಸ್ಥಿತಿ. ಹೀಗಾಗಿ ಭಾರತೀಯರಲ್ಲಿ ಹೊಸದೊಂದು 'ಬ್ಯೂರೋಕ್ರಟಿಕ್' ಎನ್ನುವ ವರ್ಗವು ಸ್ಥಾಪಿತವಾಯಿತು. ಈ ವರ್ಗವು ಜನಸಾಮಾನ್ಯರ ದೃಷ್ಟಿಯಲ್ಲಿ (ಕುಂಪಣಿ ಸರಕಾರದ ಮಧ್ಯವರ್ತಿ ವರ್ಗ) ಭಯ ಮಿಶ್ರಿತ ಗೌರವ ಪಡೆಯುವಲ್ಲಿ ಯಶಸ್ವಿಯಾಯಿತು. ಮತ್ತು ಜನಸಾಮಾನ್ಯರು ಇವರ ಬಗ್ಗೆ ವಿಪರೀತ ಗೌರವವನ್ನು ಕೊಡತೊಡಗಿದರು. ಭಾರತೀಯ ಸಂಜಾತ ಅಧಿಕಾರಿಗಳು ಕಾನೂನುಗಳನ್ನು ಜಾರಿಗೊಳಿಸಲು ನಿಯುಕ್ತರಾದುದರಿಂದ. ಅವರ ಬಗ್ಗೆ ಜನಸಾಮಾನ್ಯರು ಗೌರವಯುತವಾಗಿ ಬೇರೆ ರೀತಿಯಲ್ಲಿ ಯೋಚಿಸತೊಡಗಿದರು. ಮತ್ತು ಭಾರತೀಯರಾದ ಈ ವರ್ಗದ ಜನರಿಗೆ ತಮ್ಮ ದೃಷ್ಟಿ ಧೋರಣೆಗಳ ಬಗ್ಗೆ ಯಾವ ವೈರುದ್ಧ್ಯವೂ ಕಾಣಿಸಲಿಲ್ಲ. ನವರತ್ನ ರಾಮರಾಯರ 'ಕೆಲವು ನೆನಪುಗಳು' ಕೃತಿಯನ್ನು ಈ ಹಿನ್ನೆಲೆಯಿಂದ ಗಮನಿಸಬಹುದು.

ನವರತ್ನ ರಾಮರಾಯರು ತಮ್ಮ ಕೃತಿಯಲ್ಲಿ ತಮ್ಮ ಮತ್ತು ಸಮಾಜದ ನಡುವಣ ಸಂಬಂಧದ ಕುರಿತು ಬರೆಯುವಾಗ ಯಾವುದೇ ವೈರುದ್ಧ್ಯವನ್ನು ಎದುರಿಸಿಲ್ಲ ಎಂಬುದು ಗಮನಾರ್ಹ. ಅವರು ತಮಗೆ ಉಂಟಾದ ಅನುಭವಗಳನ್ನು ಕುರಿತು ಬರೆಯುವಾಗ ಯಾವುದೇ ದ್ವಂದ್ವವನ್ನು ಎದುರಿಸಿಲ್ಲ ಎಂಬುದು ಗಮನಾರ್ಹ.

ಬ್ರಿಟೀಶರು ರೂಪಿಸಿದ ಕಾನೂನು, ನ್ಯಾಯಾಂಗ ಮತ್ತು ಅಧಿಕಾರದ ರೂಪಗಳು ನಿರ್ಣಾಯಕ ನಿಲುವುಗಳನ್ನು ತಳೆದಿರುವುದು ಮಾತ್ರವಲ್ಲ ಅದರ ಮೂಲಕ ಭಾರತದ ಹಿಂದಿನ 'ಸಾಮಾಜಿಕ ನ್ಯಾಯ'ದ ಪರಿಕಲ್ಪನೆಯನ್ನು ತುಂಡು ಮಾಡಿ ಹಾಕಿದರು. ಅವರ ನ್ಯಾಯದ ಪರಿಕಲ್ಪನೆಯೇ ಬೇರೆಯಾಗಿತ್ತು. 'ನ್ಯಾಯ ಮತ್ತು ಸಂಪತ್ತು' 'ವ್ಯಕ್ತಿ ಮತ್ತು ಅವನು ಹೊಂದಿರುವ ಭೂಮಿ', 'ಸರಕಾರ ಮತ್ತು ಒಬ್ಬ ವ್ಯಕ್ತಿಯ ನಡುವಣ ಸಂಬಂಧ'ವು ಮಾತ್ರ ಮುಖ್ಯವಾಯಿತು. ಹೀಗಾಗಿ ಹೊಸ ಜ್ಞಾನ ಶಾಖೆಯ ಉಗಮ ಚಾರಿತ್ರಿಕವಾಗಿ ಅನಿವಾರ್ಯವಾಯಿತು. ಬ್ರಿಟೀಶ್ ಸರಕಾರದ ಕೇಂದ್ರ ಕಲ್ಪನೆಗಳು ಮೂರು :

1. ಸರಕಾರದ ಅಧಿಕಾರವನ್ನು ಕೇಂದ್ರೀಕರಿಸುವುದು.
2. ಭಾರತದಲ್ಲಿ ನಿಯಮಗಳನ್ನು ತರುವುದರ ಮೂಲಕ ಬೊಕ್ಕಸ ತುಂಬಿಸುವುದು.
3. ಜನರನ್ನು ಒಂದು ಏಕರೂಪದ ಚೌಕಟ್ಟಿಗೆ ತರುವುದು.

ಅದೇ ಸಂದರ್ಭದಲ್ಲಿ ಭಾರತೀಯರು ತಳೆದ ನಿಲುವುಗಳು ಬೇರೆಬೇರೆಯಾಗಿದ್ದವು :

1. ಭಾರತೀಯರಿಗೆ ಈ ರೀತಿಯ ಅಧಿಕಾರದ ಜೊತೆಗೆ ಮುಖಾಮುಖಿಯಾಗುವುದು ಅನಿವಾರ್ಯವಾಯಿತು.
2. ಸರಕಾರ ರೂಪಿಸಿದ ನಿಯಮಗಳ ಅರಿವು ಇಲ್ಲದ್ದರಿಂದ ಮಧ್ಯವರ್ತಿಗಳು ಹೇಗೆ ವರ್ತಿಸುತ್ತಾರೋ ಅದನ್ನು ಹಾಗೇ ಅಂಗೀಕರಿಸುವುದು ಅಥವಾ ವಿರೋಧಿಸುವುದು.

ಬ್ರಿಟೀಶ್ ಸರಕಾರದ ಕಾನೂನು ನಿಯಮಗಳು ಲಿಖಿತ ರೂಪಕ್ಕೆ ಬಂದರೂ, ಜನಸಾಮಾನ್ಯರು ಅದನ್ನು ಓದಿ ತಿಳಿಯುವ ಅವಕಾಶವು ಸಾಧ್ಯವಾಗದೇ ಹೋದುದು ಒಂದು ಸಮಸ್ಯಾತ್ಮಕ ವಾತಾವರಣದ ನಿರ್ಮಾಣಕ್ಕೆ ಕಾರಣವಾಯಿತು. ಭಾರತದಲ್ಲಿ ಆಯಾ ಜನಾಂಗಕ್ಕೆ ಇದ್ದ ಕೆಲವು ನಿಯಮಾವಳಿಗಳು ಪರಿವರ್ತನೆಗೆ ಗುರಿಯಾದವು. ಗ್ರಾಮೀಣ ಸಮಾಜ ಮತ್ತು ಆಯಾ ಜನಾಂಗಗಳಲ್ಲಿ ಇದ್ದ 'ಗುರಿಕಾರರು' ತಮ್ಮ ಅಧಿಕಾರಗಳನ್ನು ಕಳೆದುಕೊಂಡರು. ಹಾಗೆ ನೋಡುವುದಿದ್ದರೆ, ಭಾರತದಲ್ಲಿ ಗುರಿಕಾರರು ಆಯಾ ಜನಾಂಗಗಳ ಮೇಲೆ ಹಿಡಿತ ಇಟ್ಟುಕೊಂಡಿದ್ದರು. ಅವರ ಅಧಿಕಾರವು ಕುಂದಿತು. ದೇವಸ್ಥಾನಗಳು, ದೈವಗಳು, ಗುರಿಕಾರರು ನಿರ್ವಹಿಸುತ್ತಿದ್ದ ಕಾನೂನಿನ ಅಧಿಕಾರಗಳು ಬ್ರಿಟೀಶ್ ನೀತಿಯಿಂದ ಗೈರು ಹಾಜರಿಯಾಗಿ 'ಅಸ್ತಿತ್ವಕ್ಕೆ ಬಂದಿತು. ಇವು ಬ್ರಿಟೀಶ್ ಸರಕಾರದ ಕಾನೂನು ಮತ್ತು ಸರಕಾರದ ಸ್ಥಾಪನೆಯ ಹಿಂದಿನ ದೃಷ್ಟಿಯಾಯಿತು. ಈ ಕ್ರಮದ ಹಿಂದೆ ಯುರೋಪಿನ ಜ್ಞಾನ ಮಾದರಿಗಳು, ಅವರ ಅಧಿಕಾರದ ಕಲ್ಪನೆಗಳು ಮತ್ತು ತತ್ವಜ್ಞಾನಗಳು ಮುಖ್ಯವಾಯಿತು. ಇಲ್ಲಿ ಒಂದಂಶವನ್ನು ನಾವು ಗಮನಿಸಬೇಕು. ಅದೇನೆಂದರೆ ಪುನರುಜ್ಜೀವನದ ಅನಂತರ ಯುರೋಪಿನಲ್ಲಿ ಜ್ಞಾನ ಮತ್ತು ನಿಯಮಾವಳಿಗಳು ಬದಲಾದವು. ಸಮಾಜದಲ್ಲಿ ಒಬ್ಬ ವ್ಯಕ್ತಿ, ಅವನ ಸ್ಥಾನಮಾನ, ಅವನ ಕರ್ತವ್ಯ ಮತ್ತು ಜವಾಬ್ದಾರಿಗಳು ಮುಖ್ಯವಾದವು. ಯುರೋಪಿನ ನಾಗರಿಕ ಸಮಾಜದ ಪರಿಕಲ್ಪನೆಗೆ ಅನುಸಾರವಾಗಿ ವ್ಯಕ್ತಿಯನ್ನು ನಿರ್ಣಯಿಸುವ ಸ್ಥಿತಿ ಬಂದಿತು. ಇದನ್ನು 'ಸಿವಿಕ್ ಸೊಸೈಟಿ'ಯ ವ್ಯಾಖ್ಯೆ ಎಂದು ಕರೆಯಬಹುದು. ಇದರಿಂದ 'ವ್ಯಕ್ತಿ'ಯನ್ನು ಒಂದು ಸಾಮುದಾಯಿಕ ಜೀವನ ಕ್ರಮದಿಂದ ಬೇರೆಯಾಗಿ ನೋಡುವ ಸಾಧ್ಯತೆಯು ರೂಪುಗೊಂಡಿತು. ಅದನ್ನು ಭಾರತಕ್ಕೆ ಅನ್ವಯಿಸಲಾಯಿತು. ಭಾರತೀಯರು ಅದನ್ನು

ಒಪ್ಪುತ್ತಾರೋ ಬಿಡುತ್ತಾರೋ ಅದು ಬ್ರಿಟೀಶ್ ಸರಕಾರಕ್ಕೆ ಮುಖ್ಯವಾಗಲಿಲ್ಲ. ಮೊದಲಿಗೆ ಒಂದು ಪರೋಕ್ಷ ಹೇರಿಕೆಯಾದ ಆಡಳಿತ ಕ್ರಮವು ಭಾರತದಲ್ಲಿ ಅನಂತರ ಅಧಿಕೃತವಾಯಿತು.

1. ಇದರಿಂದ "ಒಬ್ಬ ವ್ಯಕ್ತಿ" ಎನ್ನುವ ಪರಿಕಲ್ಪನೆ ಬ್ರಿಟೀಶರಿಗೆ ಮುಖ್ಯವಾಯಿತು.

2. ಭೂಮಿ ಮತ್ತು ಅದರ ಖಾಸಗಿ ಒಡೆತನ ಬ್ರಿಟೀಶ್ ನೀತಿಗೆ ಮುಖ್ಯ.

3. ಬ್ರಿಟೀಶ್ ಅಧಿಕಾರ ಕೇಂದ್ರವನ್ನು ಸ್ವೀಕರಿಸುವಂತೆ ಮಾಡಲಾಯಿತು.

4. ಭಾರತದಲ್ಲಿ "ಒಂದು ಅಧಿಕಾರ"ದ ಪರಿಕಲ್ಪನೆಯು ಜಾರಿಗೆ ಬಂದಿತು ಇದಕ್ಕೆ ಗಾಂಧಿಯ ನಿಲುವು ಗಮನಾರ್ಹ.

> ಗಾಂಧೀಜಿ ಈ ಶ್ರಮಗೌರವವನ್ನು ಅತ್ಯಂತ ಪ್ರಬಲವಾಗಿ ಪ್ರತಿಪಾದಿಸಿದರು.
>
> "ಮನುಷ್ಯ ತನ್ನ ಅನ್ನಕ್ಕಾಗಿ ದುಡಿಯಲಿ ಎಂದು ದೇವರು ಅವನನ್ನು ಸೃಷ್ಟಿಸಿದ. ದುಡಿಯದೆ ತಿನ್ನುವವರು ಕಳ್ಳರು ಎಂದ". "ದೇಹ ಪೋಷಣೆ ದೇಹ ಪರಿಶ್ರಮದಿಂದ ಆಗಬೇಕು. ಬೌದ್ಧಿಕ ಪರಿಶ್ರಮ ಮನಸ್ಸಿನ ಸಂಸ್ಕೃತಿಗೆ ಅಗತ್ಯ. ಶ್ರಮ ವಿಭಜನೆ ಬೌದ್ಧಿಕ ಶ್ರಮ, ದೈಹಿಕ ಶ್ರಮ ಎಂದು ಆಗಬಾರದು".
>
> "ಪ್ರತಿಯೊಬ್ಬ ಬೆವರು ಸುರಿಸಿ ದುಡಿದರೆ ಭೂಮಿ ಸ್ವರ್ಗವೇ ಆದೀತು". "ಅಮೆರಿಕದ ಕೋಟ್ಯಾಧೀಶರು ಬಂದು, ನಿಮಗೆ ಬೇಕಾದ ಆಹಾರವನ್ನೆಲ್ಲ ಕಳಿಸುತ್ತೇವೆ, ನೀವು ಕೆಲಸ ಮಾಡಬೇಡಿ, ನಮ್ಮ ಔದಾರ್ಯಕ್ಕೆ ದಾರಿ ಮಾಡಿಕೊಡಿ ಎಂದೇನಾದರೂ ಹೇಳಿದರೆ, ಅದನ್ನು ನಾನು ಖಂಡ ತುಂಡವಾಗಿ ನಿರಾಕರಿಸಲೇಬೇಕು".
>
> "ಎಲ್ಲರೂ ತಮ್ಮ ಅನ್ನಕ್ಕಾಗಿ ಮಾತ್ರ ದುಡಿಯುವುದಾದರೆ, ಆಗ ಎಲ್ಲರಿಗೂ ಸಾಕಾಗುವಷ್ಟು ಅನ್ನ ಇರುತ್ತದೆ, ವಿರಾಮವೂ ಇರುತ್ತದೆ. .....ಆಗ ಧನಿಕ ದರಿದ್ರ, ಮೇಲು ಕೀಳು, ಸ್ಪೃಶ್ಯ ಅಸ್ಪೃಶ್ಯ ಯಾರೂ ಇರುವುದಿಲ್ಲ. (ಸ.ವಾ. 238–239)
>
> "ಬುದ್ಧಿ – ದೇಹ ಶ್ರಮಗಳಿಗೆ ಸಂಬಂಧ ತಪ್ಪಿದ್ದರ ಫಲ ನಮ್ಮ ಹಳ್ಳಿಗಳ ಬಗ್ಗೆ ನಮಗೆ ಬಂದಿರುವ ಅಸಡ್ಡೆಯು ಘೋರಾಪರಾಧ. ಇದು ಗ್ರಾಮದ ಕೊಳಕಿಗೂ ಕಾರಣ".
>
> (ಮೂಲಭೂತ ಕೃತಿಗಳು 245)
>
> 'ಶರೀರ ಶ್ರಮ'ವನ್ನು ಗಾಂಧೀಜಿ ತಮ್ಮ ಏಕಾದಶ ವ್ರತದಲ್ಲಿ ಸೇರಿಸಿದರು. ಅನ್ನ ಕಾಯಕದ ಬಗ್ಗೆ ಅವರು ಹೇಳಿದರು.
>
> "ಶರೀರ ಶ್ರಮ ಮನುಷ್ಯನಿಗೆ ಅನಿವಾರ್ಯ ಎಂಬ ಮಾತು ನನಗೆ ಮೊಟ್ಟಮೊದಲು ಹೊಳೆದುದು ಟಾಲ್‌ಸ್ಟಾಯಿಯ

'ಅನ್ನಕಾಯಕ' (Bread labour) ಎಂಬ ಪ್ರಬಂಧ ವನ್ನೋದಿದಾಗ, ಶರೀರ ಶ್ರಮ ಇಂಗ್ಲಿಷಿನ ಅನುವಾದ. ಅನ್ನಕ್ಕಾಗಿ ಪ್ರತಿಯೊಬ್ಬರೂ ಕಾಯಕ ಅಥವಾ ಶರೀರ ಶ್ರಮ ಮಾಡಬೇಕು. ಕೈಕಾಲು ಆಡಿಸಬೇಕು ಎಂಬುದು ಈಶ್ವರೀ ನಿಯಮ. ಇದನ್ನು ಮೊದಲು ಅರಿತುಕೊಂಡವನು ರಷ್ಯಾದ ಒಬ್ಬ ಅಪರಿಚಿತ ಲೇಖಕ ಬುನ್ರೆಫ್. ಆತನ ವಿಚಾರವನ್ನು ಟಾಲ್‌ಸ್ಟಾಯಿ ಪ್ರಚಾರ ಮಾಡಿದ. ಭಗವದ್ಗೀತೆಯ ಮೂರನೆಯ ಅಧ್ಯಾಯದಲ್ಲಿ ಇದೇ ತತ್ತ್ವ ನನ್ನ ಕಣ್ಣಿಗೆ ಕಾಣುತ್ತಿದೆ. ಯಜ್ಞಮಾಡದೆ ತಿನ್ನುವವನು ಕಳ್ಳ ಅನ್ನವನ್ನು ತಿನ್ನುತ್ತಾನೆ (ಭುಂಜತೇತ್ಯಘಂ ಪಾಪಂ). .....ಯಜ್ಞ ಎಂದರೆ ಶರೀರಶ್ರಮ ಅಥವಾ ಅನ್ನದ ಕಾಯಕ ಎಂಬುದೇ ಶೋಭಿಸುತ್ತದೆ".

"ಶರೀರಶ್ರಮ ಮಾಡದವನಿಗೆ ತಿನ್ನಲು ಏನು ಅಧಿಕಾರ?" "ನಿನ್ನ ಬೆವರು ಸುರಿಸಿ ಹಿಟ್ಟು ತಿನ್ನು" ಎನ್ನುತ್ತದೆ ಬೈಬಲ್ (Eat thy bread by the sweat of thy brow). ಎಂಥ ಕೋಟ್ಯಾಧೀಶನೇ ಆಗಲಿ ತನ್ನ ಹಾಸಿಗೆಯ ಮೇಲೆಯೆ ಬಿದ್ದಿದ್ದು ಯಾರಾದರೂ ತನ್ನ ಬಾಯೊಳಗೇ ಅನ್ನ ಹಾಕುವಂತೆ ಏರ್ಪಾಟು ಮಾಡಿಕೊಂಡರೆ, ಹಾಗೆ ಬಹಳ ದಿನ ತಿನ್ನಲಾರ. ಅವನಿಗೆ ಆನಂದವೇ ಇರದು. ಆದುದರಿಂದ ವ್ಯಾಯಾಮಾದಿಗಳನ್ನು ಮಾಡಿ ಹಸಿವಾಗುವಂತೆ ಮಾಡಿಕೊಳ್ಳುತ್ತಾನೆ. ಆಗಲೂ ತನ್ನ ಕೈ ಬಾಯಿಂದಲೇ ತಾನೇ ಊಟಮಾಡಬೇಕು. ಬಡವನಾಗಲಿ ಬಲ್ಲಿದನಾಗಲಿ ಹೀಗೆ ಶರೀರ ವ್ಯಾಯಾಮ ಮಾಡಬೇಕಾಗಿದ್ದರೆ, ಅನ್ನಕ್ಕಾಗಿ ಶರೀರಶ್ರಮ ಏಕೆ ಮಾಡಬಾರದು. ಅನ್ನದ ಕಾಯಕ ಮಾಡಬಾರದೇಕೆ? ....ಶರೀರಶ್ರಮದ ಈ ನಿರಪವಾದ ನಿಯಮವನ್ನು ಎಲ್ಲರೂ ಒಪ್ಪಿದರೆ ಉಚ್ಚನೀಚದ ಭೇದ ಮಾಯವಾದೀತು".

"ಅಹಿಂಸೆಯ ಪಾಲನೆಗೆ ಸತ್ಯಾರಾಧನೆಗೆ ಬ್ರಹ್ಮಚರ್ಯವನ್ನು ಸಹಜವಾಗಿ ಮಾಡಿಕೊಳ್ಳಬೇಕೆಂಬ ಪ್ರಯತ್ನಕ್ಕೆ ಶರೀರಶ್ರಮ ರಾಮ ಬಾಣದಂಥ ಸಹಾಯ, ನಿಜವಾಗಿ ನೋಡಿದರೆ, ಈ ಕಾಯಕ ಕೃಷಿಗೆ ಸಂಬಂಧಿಸಿದುದು. ಈಗಿನ ಸ್ಥಿತಿಯಲ್ಲಿ ಎಲ್ಲರೂ ವ್ಯವಸಾಯ ಮಾಡುವಂತಿಲ್ಲ. ಆದುದರಿಂದ ವ್ಯವಸಾಯವನ್ನು ಆದರ್ಶವಾಗಿ ಎಣಿಸಿ, ಅದರ ಬದಲು ನೂಲಬಹುದು, ನೇಯಬಹುದು, ಮರಗೆಲಸ, ಕಬ್ಬಿಣ ಕೆಲಸ ಮಾಡಬಹುದು. ಪ್ರತಿಯೊಬ್ಬನೂ ತನಗೆ ತಾನೇ ಭಂಗಿಯಾಗಬೇಕು. ಉಂಡವನು ಶೌಚಕ್ಕೆ ಹೋಗಲೇಬೇಕು. ತನ್ನ ಶೌಚವನ್ನು ಬಳಿದೊ, ಎತ್ತಿಯೊ ಹಾಕುವ ವ್ಯವಸ್ಥೆಯೆ ಉತ್ತಮ ವ್ಯವಸ್ಥೆ. ಇದು ಸಾಧ್ಯವಲ್ಲವಾದರೆ ಪ್ರತಿಯೊಂದು ಕುಟುಂಬವೂ ತನ್ನ ಶೌಚದ ವ್ಯವಸ್ಥೆ ತಾನೇ ಮಾಡಿಕೊಳ್ಳಬೇಕು. ಭಂಗಿಗಳದ್ದೇ

ಒಂದು ಗುಂಪಾಗಿ ಅದನ್ನು ಒಂದು ವೃತ್ತಿಯಾಗಿ ಮಾಡಿದ ಸಮಾಜದಲ್ಲಿ ಏನೊ ಒಂದು ಮಹಾದೋಷವಿದೆ ಎಂದು ನನಗೆ ಕೆಲವು ವರ್ಷಗಳಿಂದ ಅನಿಸುತ್ತದೆ. ನಾವೆಲ್ಲರೂ ಭಂಗಿಗಳು ಎಂಬ ಭಾವನೆ ಚಿಕ್ಕಂದಿನಿಂದಲೂ ಬೇರೂರಬೇಕು". (ಮೂಲಭೂತ ಕೃತಿಗಳು 162–163)

"ಬುದ್ಧಿಯುಕ್ತ ಅನ್ನಕಾಯಕ ಯಾವತ್ತೂ ಅತ್ಯುತ್ತಮ ರೀತಿಯ ಸಮಾಜ ಸೇವೆ". "ಕಾಯಕಕ್ಕೆ ಬುದ್ಧಿಯುಕ್ತ ಎಂಬ ಗುಣವಾಚಕವನ್ನು ಸೇರಿಸಲಾಗಿದೆ. ಇದರ ಉದ್ದೇಶ ಸಮಾಜಸೇವೆ ಆಗಬೇಕಾದಲ್ಲಿ, ಅದರ ಹಿಂದೆ ಆ ನಿರ್ದಿಷ್ಟ ಉದ್ದೇಶ ಇರಬೇಕು. ಅನ್ನಕಾಯಕವೂ ಸಮಾಜ ಸೇವೆಯೆ".

"ಅನ್ನಕಾಯಕದ ತತ್ತ್ವಕ್ಕೆ ಬಲಾತ್ಕಾರದ ನಿಷ್ಠೆಯಿದ್ದಾಗ ಬಡತನ, ಬೇನೆ, ಬಳಲಿಕೆ, ಅತೃಪ್ತಿ ಹುಟ್ಟುತ್ತವೆ. ಅದೊಂದು ಗುಲಾಮಗಿರಿ. ಅದಕ್ಕೆ ಇಚ್ಛಾಪೂರ್ವಕ ನಿಷ್ಠೆಯಿಂದ ತೃಪ್ತಿ ಆರೋಗ್ಯ ಲಭಿಸುತ್ತದೆ. ಆರೋಗ್ಯವೇ ನಿಜವಾದ ಭಾಗ್ಯ. ಬೆಳ್ಳಿ ಬಂಗಾರದ ತುಣುಕುಗಳಲ್ಲ".(ಸ.ವಾ. 240–241)

(ನೀಲತ್ತಹಳ್ಳಿ ಕಸ್ತೂರಿ 2008 ಗಾಂಧೀ ತತ್ತ್ವಚಿಂತನೆ ಪುಟ. 44–46)

5. ಒಂದೇ ಭೂ ಪ್ರದೇಶ ಮತ್ತು ಅದಕ್ಕೆ ಬೇಕಾದ ಒಂದೇ ನಿಯಮಾವಳಿಯು ಕ್ರಮೇಣ ಜಾರಿಗೆ ಬಂದವು (ಮೊದಮೊದಲು ಕಲ್ಕತ್ತಾ (ಬಂಗಾಳ) ಪ್ರೆಸಿಡೆನ್ಸಿ : ಮದರಾಸು ಪ್ರೆಸಿಡೆನ್ಸಿ, ಬಾಂಬೆ ಪ್ರೆಸಿಡೆನ್ಸಿಗಳಲ್ಲಿ ಬೇರೆ ಬೇರೆಯಾದ ನಿಯಮಗಳಿದ್ದರ ಅನಂತರ ಅವುಗಳನ್ನು ಒಟ್ಟು ಸೇರಿಸಲಾಯಿತು. ಇದರ ಹಿಂದೆ ಇದ್ದ ತತ್ವಜ್ಞಾನವೆಂದರೆ ಒಬ್ಬ ವ್ಯಕ್ತಿಯ ಅನನ್ಯತೆ, ಒಂದು ಅಧಿಕಾರ, ಜನರನ್ನು ಒಂದೇ ಮನೋಸ್ಥಿತಿಗೆ ತರುವ ಪ್ರಯತ್ನ ಇದು ಬ್ರಿಟೀಶ್ ಅಧಿಕಾರದ ಮೂಲ ತತ್ವಗಳು. ಭಾರತೀಯರನ್ನು ಇದಕ್ಕೆ ಬೇಕಾದಂತೆ ರೂಪಿಸಲಾಯಿತು. ಪುನರುಜ್ಜೀವನದ ಅನಂತರ ಯುರೋಪಿನಲ್ಲಿ ಉಂಟಾದ ತಂತ್ರಜ್ಞಾನ, ವಿಜ್ಞಾನ, ಕೈಗಾರೀಕರಣ, ಬಂಡವಾಳವಾದ ಮೂಲತಃ ಅಲ್ಲಿಯೇ ಚರ್ಚೆಗೆ ಒಳಗಾಗಿತ್ತು. ಚರ್ಚುಗಳು ಮತ್ತು ಅಧಿಕಾರದ ನಡುವೆ ಬೇರೆ ಬೇರೆ ರೀತಿಯ ಸಂವಾದಗಳು ನಡೆದವು. ಅದರ ಪರಿಣಾಮಗಳನ್ನು ಮನಸ್ಸಿನಲ್ಲಿ ಇಟ್ಟುಕೊಂಡ ಬಂದ ಗವರ್ನರ್ ಜನರಲ್‌ಗಳು ಅವಕ್ಕೆ ಪೂರಕವಾಗಿ ಕೆಲಸ ಮಾಡಿದರು. ಮೂಲತಃ ನಾಗರಿಕ ಸಮಾಜದ (Civil Society) ಪರಿಕಲ್ಪನೆಯಲ್ಲಿಯೇ ಸಮಸ್ಯೆಗಳಿವೆ.

ಬ್ರಿಟೀಶ್ ಕಾನೂನು, ಕೋರ್ಟು, ನಿಯಮ ಸಂಹಿತೆಗಳು ಜನ ಸಾಮಾನ್ಯರ ದೃಷ್ಟಿಯಲ್ಲಿ ಪರಕೀಯವಾಗಿದ್ದವು. ಆದರೆ ಅದು ದೇಶೀಯ ಜ್ಞಾನ ಪರಂಪರೆ : ಆಡಳಿತ ಕ್ರಮವನ್ನು ಪಲ್ಲಟಗೊಳಿಸಿ ಅದರ ಜಾಗದಲ್ಲಿ ತನಗೆ ಬೇಕಾದ ಜ್ಞಾನ ಪರಂಪರೆ ಮತ್ತು ಅಧಿಕಾರವನ್ನು ಸ್ಥಾಪಿಸಿತು. ಅವರ ಕಾನೂನುಗಳು ಜ್ಞಾನದ ಮಾದರಿಯೊಂದಿಗೆ ಅನುಸಂಧಾನ ನಡೆಸಿರಲಿಲ್ಲ. ಹಾಗೆ ನೋಡುವುದಿದ್ದರೆ, ಅಧಿಕಾರ ಸ್ಥಾಪನೆಯೇ ಒಂದು ವಿಚಿತ್ರ ಜಗತ್ತು. ಅಧಿಕಾರವೆಂದರೆ ಒಂದರ ಮೇಲೆ ಮತ್ತೊಂದು ನಿಯಂತ್ರಣ ಸಾಧಿಸುವುದು, ಇದರಲ್ಲಿ ಸಮತೋಲನದ ದೃಷ್ಟಿಕೋನವಿರುವುದಿಲ್ಲ. ಸಮಾನತೆಯೆನ್ನುವುದಕ್ಕಂತೂ ಈ ಪರಿಸ್ಥಿತಿಯಲ್ಲಿ ಯಾವ ಅರ್ಥವೂ ಉಳಿಯುವುದಿಲ್ಲ. ಒಂದು ದೃಷ್ಟಿಯಿಂದ ಭಾರತೀಯರ ಪ್ರಜ್ಞೆಯನ್ನು ಬ್ರಿಟೀಶ್ ಅಧಿಕಾರವು ತನ್ನ ಕಾನೂನುಗಳಿಂದ ನಿಯಂತ್ರಣ ಸಾಧಿಸಿತು. ಅಧಿಕಾರದ ಪ್ರಮುಖ ಗುಣವೇ ಅದು : ನಿಯಂತ್ರಣ ಸಾಧಿಸುವುದು. ಸರಕಾರ ರಚನೆಯಲ್ಲಿ ಬ್ರಿಟೀಶರು ಭೌತಿಕ ಅಧಿಕಾರ ಸ್ಥಾಪಿಸಿದರು. ಅದಕ್ಕೆ ಕಾನೂನು, ನ್ಯಾಯಾಂಗ ಮುಖ್ಯ ಪರಿಕರಗಳಾದವು. ಶಾಲೆ-ಕಾಲೇಜುಗಳ ಸ್ಥಾಪನೆಗಳ ಮೂಲಕ ಅದು ಭಾರತೀಯರ ಪ್ರಜ್ಞೆಯ ಮೇಲೆ ನಿಯಂತ್ರಣ ಸಾಧಿಸಿತು. ಇದರಿಂದ ಭಾರತದಲ್ಲಿ ಬೌದ್ಧಿಕ ಕಾರ್ಮಿಕರನ್ನು ಸೃಷ್ಟಿಸುವುದು ಮತ್ತು ಭೌತಿಕವಾಗಿ (ದೈಹಿಕ) ದುಡಿಮೆಯಲ್ಲಿ ತೊಡಗಿದವರ ಮೇಲೆ ಕಾನೂನಿನ ಮೂಲಕ ಹಿಡಿತ ಸಾಧಿಸುವುದು ಇದರ ಮುಖ್ಯ ಉದ್ದೇಶವಾಯಿತು. ಈ ಮೂಲಕ ಬ್ರಿಟೀಶ್ ಅಧಿಕಾರವು ಭಾರತೀಯ ಸಂಸ್ಕೃತಿಯನ್ನು ಒಂದು ಅನುಕ್ರಮತೆಯಲ್ಲಿ; ಒಂದು ಖಾಲಿಯಾದ ಜಾಗದಲ್ಲಿ ರೂಪಿಸಿತು. ನಿರ್ದಿಷ್ಟ ಸಾಂಸ್ಕೃತಿಕ ಚಹರೆಗಳನ್ನು ಹೇರುವುದರ ಮೂಲಕ ಎಲ್ಲವನ್ನೂ ಒಂದು ಚೌಕಟ್ಟಿನೊಳಗೆ ತಂದಿತು. ಇದರಲ್ಲಿ ಜನಸಾಮಾನ್ಯರು, ರೈತರು, ಹೆಂಗಸರು ಎಂಬ ಭೇದಗಳು ಬ್ರಿಟೀಶ್ ಕಾನೂನಿಗೆ ಮುಖ್ಯವಾಗಲಿಲ್ಲ. ಅದೊಂದು ನಿಯಮ (System) ತರುವ ಪ್ರಯತ್ನ. ಇದರಿಂದ ಹೊಸ ಸಾಂಸ್ಕೃತಿಕ ಚೌಕಟ್ಟು ಏರ್ಪಟ್ಟಿತು.

ಇಲ್ಲಿ ಒಂದು ಪ್ರಮುಖ ಅಂಶವನ್ನು ನಾವು ಗಮನಿಸಬೇಕು : ಭಾರತದಲ್ಲಿ ಇದಕ್ಕಿಂತ ಮೊದಲು ಇದ್ದ ಸಾಂಪ್ರದಾಯಿಕ ತಿಳುವಳಿಕೆಗಳು, ಅವುಗಳ ಹಿಂದೆ ಇದ್ದ ಕೆಲವು ಗುಣಗಳು ವ್ಯಾಪಕವಾಗಿ ಬದಲಾದವು. ಉದಾಹರಣೆಗೆ, ಬಾಯಿ ಮಾತುಗಳ ಕರಾರುಗಳೂ, ಆಣೆಗಳು, ತಪ್ಪು ದಂಡ ; ಹರಿಕೆ, ಇವುಗಳು ಒಂದೊಂದು ರೀತಿಯ

ಕಾನೂನು ಕ್ರಮಗಳಾಗಿದ್ದವು. ಇವತ್ತಿಗೂ ಜನಸಾಮಾನ್ಯರಲ್ಲಿ ಮಾತಿನ ಪಾವಿತ್ರ್ಯ ಮುಖ್ಯ. ಅದರ ಹಿಂದಿರುವ ಸಾಮಾಜಿಕ, ಆರ್ಥಿಕ ದೃಷ್ಟಿಕೋನಗಳು ಬೇರೆ. ಮಾತು ತಪ್ಪುವುದು ; ಸುಳ್ಳು ಹೇಳುವುದು ಅನೈತಿಕ ಎನ್ನುವುದು ಭಾರತದಲ್ಲಿ ಪರಂಪರಾಗತವಾಗಿ ನಡೆದುಕೊಂಡು ಬಂದಿರುವ ಕ್ರಮವಾಗಿದೆ. ಬ್ರಿಟೀಶರ ವಿರುದ್ಧ ಹೋರಾಡುವ ಸಂದರ್ಭದಲ್ಲಿ ರಾಷ್ಟ್ರೀಯ ಆಂದೋಲನಕಾರರು ಇದನ್ನು ಬಳಸಿಕೊಂಡಿದ್ದರು ಎನ್ನುವುದು ಅಷ್ಟೇ ಗಮನಾರ್ಹ. ಬ್ರಿಟೀಶರು ಕಾನೂನುಗಳನ್ನು ಬರಹದ ರೂಪಕ್ಕೆ ಇಳಿಸಿದಾಗ ಅದರಲ್ಲಿ ಪ್ರಭುತ್ವದ ಧೋರಣೆಯಿತ್ತು. ಸಾಂಸ್ಕೃತಿಕ ಬಹುತ್ವ ಹೋಯಿತು. ಶಿವರಾಮ ಪಡಿಕ್ಕಲ್ ಅವರು ಹೀಗೆ ಹೇಳುತ್ತಾರೆ : (2001) "ಇದನ್ನು ಇನ್ನೊಂದು ರೀತಿಯಲ್ಲಿ ವಿವರಿಸುವುದಾದರೆ ವಸಾಹತು ಆಡಳಿತ ಮತ್ತು ವಸಾಹತು ಆಧುನಿಕತೆ ಭಾರತೀಯ ಸಮಾಜವನ್ನು ಹೊಸ ರೀತಿಯಲ್ಲಿ ರೂಪಿಸಲಾರಂಭಿಸಿತು. ಸಾಂಪ್ರದಾಯಿಕ ಭಾರತೀಯ ಸಮಾಜದಲ್ಲಿ ಹೊಸ ಚಲನೆಗಳೂ ಆರಂಭವಾದವು. ರಾಜಕಾರಣ ಆಡಳಿತ, ಸಂಸ್ಕೃತಿಗಳಲ್ಲಿ ನಡೆದ ರಚನೀಕರಣ, ಮತ್ತು ರಚನಾನಿರಸನ, ಮತ್ತು ಪುನರ್‌ರಚನೀಕರಣ ಪ್ರಕ್ರಿಯೆಯನ್ನು ಹಾಗೂ ನಮ್ಮ ಆಧುನಿಕತೆಯ ಸ್ವರೂಪವನ್ನು ವಿಶ್ಲೇಷಿಸುತ್ತಲೇ ಮೊದಲ ಕಾದಂಬರಿಗಳನ್ನು ನಾವು ವಿವರಿಸಿಕೊಳ್ಳಬೇಕು (ಪು. 33). ಕರ್ನಾಟಕದ ವಸಾಹತು ಚರಿತ್ರೆ ಟಿಪ್ಪೂ ಪತನಗೊಂಡ 1799 ರಿಂದ ಆರಂಭವಾಗುವುದಾದರೂ 1857ರ ಭಾರತದ ಸ್ವಾತಂತ್ರ್ಯ ಸಂಗ್ರಾಮವನ್ನು ದಮನ ಮಾಡುವ ಹೊತ್ತಿಗೆ ವಸಾಹತು ಆಡಳಿತ ಭಾರತದಲ್ಲಿ ಕಾಲೂರಿತ್ತು" (ಪು. 35).

"ಭಾರತದಲ್ಲಿ ವಸಾಹತು ಆಡಳಿತ ಮತ್ತು ಇಂಗ್ಲೀಷ್ ವಿದ್ಯಾ ಕ್ರಮಗಳ ಒಂದು ಪರಿಣಾಮವೆಂದರೆ ಬದುಕನ್ನು ನಾವು ಅರಿಯುವ ಕ್ರಮದಲ್ಲಿ ಆದ ಬದಲಾವಣೆ. ಪ್ರಪಂಚವನ್ನು ನೋಡುವ, ವರ್ಗೀಕರಿಸುವ, ತಿಳಿಯುವ ನುಡಿಗಟ್ಟುಗಳು ಬದಲಾದವು. ಪಶ್ಚಿಮದ ಸ್ವಯಂ ತಂತ್ರವಾದಿ (Liberal), ತರ್ಕ ಪಾರಮ್ಯವಾದಿ (Rational), ಮಾನವತಾವಾದಿ (Humanist), ಚಿಂತನಾಕ್ರಮವನ್ನು ಇಂಗ್ಲೀಷ್ ವಿದ್ಯಾಭ್ಯಾಸವು ಜಾರಿಗೆ ತಂದಿತು" (ಅದೇ, ಪು. 35). ಹೀಗಾಗಿ ಬ್ರಿಟೀಶ್ ಆಡಳಿತ ಶಾಹಿಯ ಪರಿಕ್ರಮಗಳು ಸ್ಪಷ್ಟ.

ಬ್ರಿಟೀಶ್ ಆಡಳಿತ ಕ್ರಮದಿಂದ ಮೂರು ಸಂಗತಿಗಳು ಮೇಲುನೋಟಕ್ಕೆ ಕಣ್ಮರೆಯಾದಂತೆ ಕಾಣಿಸುತ್ತದೆ : ದೇಶೀಯ ಜ್ಞಾನ ಪರಂಪರೆಯು ಬದಲಾಯಿತು. ಕಾನೂನು ಇತ್ಯಾದಿಗಳಿಗೆ ಸಂಬಂಧಿಸಿದಂತೆ, ಮನುಷ್ಯ ಮತ್ತು ಅದರ ಸಂಬಂಧಗಳು

ಮಾನವೀಯ ಭಾವನೆಗಳಿಗೆ ಯಾವ ಗೌರವವನ್ನು ಕೊಡಲಿಲ್ಲ. ಹಿಂದಿನ ರಾಜ ಪದ್ಧತಿಯಲ್ಲಿ ರಾಜ ಮತ್ತು ಪ್ರಜೆಗಳ ನಡುವಣ ಸಂಬಂಧವು 'ಜಡ' ಮತ್ತು 'ವಸ್ತುನಿಷ್ಠ' ಪದ್ಧತಿಗಳ ಮೂಲಕ ವಿವರಿಸುವ ಧಾಟಿಯದಲ್ಲ. ರಾಜನು ಪ್ರಜೆಗಳ ಪಾಲಕ. ಅದಕ್ಕೆ ನಿರ್ದಿಷ್ಟ ಮಾದರಿಯಿದೆ. ಮನುಷ್ಯರ ಪ್ರಪಂಚವೆನ್ನುವುದು ಒಂದು ಬಗೆಯದಲ್ಲ ಎಂಬ ಅರಿವು ಪ್ರತಿಯೊಬ್ಬ ರಾಜರಿಗೂ ಇತ್ತು. ಯುರೋಪ್ ಮೂಲ ಆಧುನಿಕ ಆಡಳಿತ ಕ್ರಮವು ಇವುಗಳನ್ನು ಭಂಗಗೊಳಿಸಿತು. ಹೀಗಾಗಿ ಅದರ 'ನಿಯಂತ್ರಣ'ದ ಕ್ರಮವು ಬೇರೆಯಾಗಿತ್ತು. ಜನ ತಮ್ಮ ಸ್ವಂತ ದೇಶೀಯ ಜ್ಞಾನ ಪರಂಪರೆಯ ಒಳಗೆ ಜೀವಿಸುತ್ತಿದ್ದವರು. ಹೊಸ ಜ್ಞಾನ ಪರಂಪರೆಯ ಜೊತೆಗೆ ಮುಖಾಮುಖಿ ಯಾಗಬೇಕಾಯಿತು. ಬಹಳ ಮುಖ್ಯವಾಗಿ ಶಿಕ್ಷಣ, ಆಧುನಿಕತೆ, ಪ್ರಭುತ್ವ, ನ್ಯಾಯಾಂಗ, ಕಂದಾಯ ಇತ್ಯಾದಿಗಳು ಹೊಸ ಪರಿಭಾಷೆಯೊಂದಿಗೆ ಬಂದವು. ಸಾಮಾನ್ಯ ಜನರ ಕೃಷಿ ಮುಂತಾದ ತಿಳುವಳಿಕೆಗಳಿಂದ ಬೇರೆಯಾದ ಚಿಂತನೆಯ ಕ್ರಮ ಹುಟ್ಟಿದ್ದರಿಂದ, ವಿಶಿಷ್ಟ ಜ್ಞಾನ ರೂಪಗಳ ಮುಖೇನ ತಮ್ಮ ಚಿಂತನೆಯನ್ನು ಗ್ರಹಿಸಬೇಕಾದ ಸ್ಥಿತಿಯು ಎದುರಾಯಿತು. ಇದರಿಂದ ಭಾಷಿಕ ಅಭಿವ್ಯಕ್ತಿ ಬದಲಾಗಬೇಕಾಯಿತು. ಜೀವನ ದೃಷ್ಟಿಯೂ ಕೂಡಾ ಬದಲಾಯಿತು. ಉದಾಹರಣೆ: ಕೃಷಿಯ ಉತ್ಪಾದನೆಯ ಕ್ರಮವೂ ಮಾರುಕಟ್ಟೆ ಕೇಂದ್ರಿತವಾಗಿರಲಿಲ್ಲ. ಆದರೆ ಬಹುತೇಕ ಬ್ರಿಟೀಶ್ ಗವರ್ನರ್ ಜನರಲ್‌ಗಳು ಕೃಷಿಯ ಉತ್ಪಾದನೆಯನ್ನು ಮಾರುಕಟ್ಟೆಯ ಪರಿಭಾಷೆಯಲ್ಲಿ ವಿವರಿಸಿದರು. 'ಕರಕುಶಲಕಲೆ'ಯು ಬ್ರಿಟೀಶರಿಗೆ ಮುಖ್ಯವಾಗಲಿಲ್ಲ.

> **ಇದಕ್ಕೆ ಗಾಂಧಿಯವರು ಹೀಗೆ ಹೇಳುತ್ತಾರೆ: 'ಅಧಿಕಾರ, ಅದರ ಎಲ್ಲ ರೂಪಗಳಲ್ಲೂ ವಿಚಾರರಹಿತವಾದದ್ದು, ಕಣ್ಣು ಮುಚ್ಚಿಕೊಂಡು ಗಾಡಿಯನ್ನೆಳೆಯುವ ಕುದುರೆಯಂತೆ ಅದು'**
>
> **(ಮಹಾತ್ಮ, ಸಂಪುಟ–1, 1974, ಪು. 394).**

ಗಾಂಧಿಯವರು ಮತ್ತೊಂದು ಮಾತನ್ನು ಸ್ಪಷ್ಟಪಡಿಸುತ್ತಾರೆ:

> **ಭಾರತವನ್ನು ಆಳುತ್ತಿರುವವರು ಬ್ರಿಟಿಷರಲ್ಲ. ಆದರೆ ಆಧುನಿಕ ನಾಗರಿಕತೆ, ಅದರ ರೈಲು, ಟೆಲಿಗ್ರಾಫಿ, ಟೆಲಿಫೋನು ಮುಂತಾದವುದರ ಜಯಭೇರಿಗಳೆನಿಸುವ ಪ್ರತಿಯೊಂದು ಸಂಶೋಧನೆಯ ಮೂಲಕ ಆಡಳಿತ ನಡೆಯುತ್ತಿದೆ (ಅದೇ, ಪು. 165–167).**

ಇದರ ಮೂಲಕ ಸ್ಪಷ್ಟವಾಗುವ ಒಂದಂಶವಿದೆ. ಬ್ರಿಟೀಶ್ ಅಧಿಕಾರಿ ಶಾಹಿಯು ಭಾರತದ ಮೇಲೆ ಏಕಮುಖ ಪ್ರಯೋಗವನ್ನು ಮಾಡಿರಲಿಲ್ಲ. ಅದಕ್ಕೆ ಬಹುಮುಖವಿದೆ.

ಗಾಂಧಿಯವರು ಈ ಕುರಿತು ಯೋಚಿಸಿದ್ದರು. ಆದರೆ ಬ್ರಿಟೀಶರು ಇದನ್ನು ಒಪ್ಪುವುದು ಸಾಧ್ಯವಿರಲಿಲ್ಲ.

ಜೇಮ್ಸ್ ಮಿಲ್‌ನ ಒಂದು ವಾದವನ್ನು ಇಲ್ಲಿ ಗ್ರಹಿಸಬಹುದು. ಅವನ ಪ್ರಕಾರ "ಬ್ರಿಟೀಷರು ಹೇರಿದ ಕಂದಾಯ ಮೂರು ಅಂಶಗಳನ್ನು ಒಳಗೊಂಡಿದೆ. ಒಂದು ಜನತೆಯ ಅಭಿವೃದ್ಧಿಗಾಗಿ ಪ್ರಗತಿಯನ್ನು ಸಾಧಿಸಲುಕಂದಾಯ ಹೇರುವುದು ತುಂಬಾ ಅಗತ್ಯ. ಎರಡನೆಯ ಕಾನೂನಿಗೆ ಒಂದು ರೂಪವಿರಬೇಕು. ಮೂರನೆಯದಾಗಿ ಕಾನೂನನ್ನು ಅನುಷ್ಠಾನಕ್ಕೆ ತರಲು ಬೇಕಾದ ಒಂದು ಸರಕಾರವಿರಬೇಕು". ಇದು ಜೇಮ್ಸ್ ಮಿಲ್ಲನೊಬ್ಬನ ವಾದದ ಹಾಗೆ ಕಾಣಿಸುವುದಿಲ್ಲ. ಇದು ಬ್ರಿಟೀಶರು ತಳೆದಿದ್ದ ದೃಷ್ಟಿಕೋನವನ್ನು ನಮಗೆ ಪರಿಚಯಿಸುತ್ತದೆ. ಬೆಂಥಮ್ ಇದಕ್ಕಿಂತಲೂ ಮುಂದಕ್ಕೆ ಹೋಗಿ ಮತ್ತೊಂದು ಮಾತನ್ನು ಹೇಳುತ್ತಾನೆ. "ನಾವು ಭಾರತಕ್ಕೆ ಕಾನೂನು ರೂಪಿಸುವವರು ಮತ್ತು ಕಾನೂನನ್ನು ಕೊಡುವವರು" (Strokes 1989, P. 140). ಈ ಇಬ್ಬರ ಮಾತುಗಳ ಹಿಂದೆ ಒಂದಂಶ ವ್ಯಕ್ತವಾಗುತ್ತದೆ. ಭಾರತದಲ್ಲಿ "ಕಾನೂನು" ಎನ್ನುವುದನ್ನು ರೂಪಿಸಬೇಕಾದವರು ಬ್ರಿಟೀಶರು. ಇದು ಆಡಳಿತದ ದೃಷ್ಟಿಕೋನವೂ ಹೌದು. ಮುನ್ರೋ ಕಾನೂನು ಎನ್ನುವುದು ವೈಯಕ್ತಿಕತೆಗೆ ಸಂಬಂಧಿಸಿದ್ದು ಎಂದು ಪ್ರತಿಪಾದಿಸುತ್ತಾನೆ. ಆದರೆ ಕಾರ್ನ್‌ವಾಲೀಸ್‌ನ ದೃಷ್ಟಿಕೋನ ಬೇರೆ. ಆಡಳಿತಾಂಗವು ನಿರ್ದಿಷ್ಟವಾದ ಕಾನೂನು ರೂಪಿಸಬೇಕು. ಅದಕ್ಕೆ ಕಾನೂನು ರೂಪಿಸುವ ಅಧಿಕಾರವಿದೆ. ಸರಕಾರವು ಈ ಕುರಿತು ನಿರ್ದಿಷ್ಟವಾದ ಕೆಲಸ ಕಾರ್ಯಗಳನ್ನು ವಹಿಸಿಕೊಳ್ಳಬೇಕಾಗುತ್ತದೆ. ಹಾಗೆಯೇ ಒಂದಂಶವನ್ನು ಗಮನಿಸಬೇಕು. ಜಮೀನಿನ ಮೇಲೆ ವೈಯಕ್ತಿಕ ಹಕ್ಕು ಇರುತ್ತದೆ. ಹಾಗೆಯೇ ಅದಕ್ಕೆ ಅನ್ವಯಿಸಿಕೊಂಡು ಕಾನೂನು ರೀತಿ ಅಧಿಕಾರವೂ ಇರುತ್ತದೆ. (Eric Stroks, 1989, P. 140).

ಭಾರತದಲ್ಲಿ ಕಾರ್ನವಾಲೀಸ್ ಹೀಗೆ ತನ್ನ ನಿಲುವುಗಳನ್ನು ವ್ಯಕ್ತಪಡಿಸುವಾಗ ಅದರ ಹಿಂದೆ ಅವನ ಅಧಿಕಾರಶಾಹಿ ಗುಣವು ಕೂಡಾ ಅಭಿವ್ಯಕ್ತಗೊಂಡಿದೆ. ಯುರೋಪಿನಲ್ಲಿ ಜಡ್ಜ್‌ಗಳಲ್ಲಿ ನಾಗರಿಕ ಮತ್ತು ಕ್ರಿಮಿನಲ್ ಎಂಬ ಪ್ರಭೇದ ಹೊಂದಿರಲಿಲ್ಲ. ಮ್ಯಾಜಿಸ್ಟ್ರೇಟ್‌ಗಳು ನಾಗರಿಕ ಕಾನೂನು ಮತ್ತು ಕ್ರಿಮಿನಲ್ ಕಾನೂನಿಗೆ ಸಂಬಂಧಿಸಿದಂತೆ ಒಬ್ಬರೇ ಆಗಿದ್ದರು. ಈ ಸಂದರ್ಭದಲ್ಲಿ ಬ್ರಿಟೀಶ್ ಅಧಿಕಾರವು ಮತ್ತೊಂದು ವಿಷಯವನ್ನು ಪ್ರತಿಪಾದಿಸಿತು. ದೇಶೀಯ ಕಮೀಶನರುಗಳು ಮ್ಯಾಜಿಸ್ಟ್ರೇಟರಿಗೆ ಸಹಾಯ ಮಾಡಬೇಕಾದ ಅಗತ್ಯವಿದೆಯೆಂದು ಹೇರಲಾಯಿತು. ಈ ದೇಶೀಯ ಕಮೀಷನರ್ ಅಂತ ಯಾರಿದ್ದಾರೋ ಅವರು ಮಧ್ಯವರ್ತಿಗಳ ತರಹ ಕೆಲಸ ಮಾಡಬೇಕಾಗಿ ಬಂತು.

ದೇಶೀಯ ಕೋರ್ಟಿನಲ್ಲಿ ಇತ್ಯರ್ಥವಾಗದ ಪ್ರಕರಣಗಳ ಸಂದರ್ಭದಲ್ಲಿ ಜಿಲ್ಲಾ ನ್ಯಾಯಾಲಯಕ್ಕೆ ಮನವಿ ಸಲ್ಲಿಸಲು ಅವಕಾಶ ಕಲ್ಪಿಸಲಾಯಿತು. ಆದರೆ ಕಾರ್ನವಾಲೀಸ್‌ನ ಕಾಲದಲ್ಲಿ "ಸರ್ದಾರ ದಿವಾನಿ" ಮತ್ತು "ನಿಜಾಮತ ಅದಾಲತ್" ಎಂಬ ವರ್ಗೀಕರಣಗಳಿದ್ದವು. ಮುನ್ರೋ ಕಾನೂನು ಮತ್ತು ನ್ಯಾಯಾಲಯಗಳು – ಹೆಸರುಗಳು ಸೂಚಿಸುವಂತೆ ಅವು ಭಾರತದ ಮಟ್ಟಿಗೆ ಪರಕೀಯವಾದವು. ಅವುಗಳ ಸ್ವರೂಪವೇ ಕೃತಕವೆಂದು ಕರೆಯುತ್ತಾನೆ. ಆದರೆ ಮನ್ರೋ ತನ್ನ ಕಾಲದಲ್ಲಿ ಕಲೆಕ್ಟರ್‌ಗೆ ಆಡಳಿತಾಧಿಕಾರ (Judicial Power) ಮತ್ತು ಪೋಲೀಸ್ ಅಧಿಕಾರ ಎರಡನ್ನೂ ಕೊಟ್ಟ. ಗಾಂಧಿ ಧರ್ಮ ಮತ್ತು ರಾಜಕಾರಣವನ್ನು ಬೆರೆಸಿದರು.

> "ನನ್ನ ಮಟ್ಟಿಗೆ ಧರ್ಮವಿಲ್ಲದೆ ರಾಜಕೀಯವಿಲ್ಲ. ಧರ್ಮ ಎಂದರೆ ದ್ವೇಷ, ಜಗಳ ತುಂಬಿದ ಮೌಢ್ಯದ ಕುರುಡು ಧರ್ಮವಲ್ಲ. ಸಹಿಷ್ಣುತೆಯ ವಿಶ್ವಧರ್ಮ, ನೀತಿಯಿಲ್ಲದ ರಾಜಕೀಯ ತ್ಯಾಜ್ಯ".
>
> "ಧಾರ್ಮಿಕ ಪ್ರವೃತ್ತಿಯುಳ್ಳ ಅಂದರೆ ದೈವಸಾಧಕ. ಸತ್ಯಸಾಧಕನಾದ ವ್ಯಕ್ತಿಗೆ ರಾಷ್ಟ್ರಹಿತದ ಕಾಳಜಿ ಇರಬೇಕು. ಅಂತೆಯೇ ರಾಜಕೀಯದಲ್ಲೂ ನಾವು ದೈವ ಸಾಮ್ರಾಜ್ಯವನ್ನು ಸ್ಥಾಪಿಸಬೇಕು".
>
> "ನನ್ನ ದೃಷ್ಟಿಯಲ್ಲಿ ರಾಜಕೀಯ ಅಧಿಕಾರವೇ ಗುರಿ ಅಲ್ಲ. ಅದು ಜನ ಬಾಳಿನ ಪ್ರತಿಯೊಂದು ಅಂಗದಲ್ಲೂ ತಮ್ಮ ಸ್ಥಿತಿಯನ್ನು ಉತ್ತಮಪಡಿಸಿಕೊಳ್ಳಲು ಸಹಾಯಕವಾಗುವ ಒಂದು ವಿಧಾನ. ರಾಜಕೀಯ ಅಧಿಕಾರ ಎಂದರೆ ರಾಷ್ಟ್ರ ಪ್ರತಿನಿಧಿಗಳ ಮೂಲಕ ರಾಷ್ಟ್ರ ಜೀವನವನ್ನೇ ನಿಯಮನಗೊಳಿಸುವುದು. ರಾಷ್ಟ್ರ ಜೀವನ ಸ್ವಯಂ ನಿಯಂತ್ರಿತವಾಗುವಷ್ಟು ಪರಿಪೂರ್ಣವಾದಲ್ಲಿ ಪ್ರತಿನಿಧಿಯೆ ಬೇಕಾಗುವುದಿಲ್ಲ. ಆಗ ಅದು ಪ್ರಜ್ಞಾವಂತ ಅರಾಜಕತೆಯ ಸ್ಥಿತಿ **(Enlightened Anarchism)** ಅಂತಹ ರಾಜ್ಯದಲ್ಲಿ ಪ್ರತಿಯೊಬ್ಬನೂ ತನಗೆ ತಾನೇ ದೊರೆ. ಆತ ತಾನು ನೆರೆಹೊರೆಯವರಿಗೆ ಯಾವುದೇ ಅಡ್ಡಿಯಾಗದಂತೆ ತನ್ನನ್ನು ತಾನು ಆಳಿಕೊಳ್ಳುತ್ತಾನೆ. ಆದ್ದರಿಂದ ಆದರ್ಶ ರಾಜ್ಯದಲ್ಲಿ ರಾಜ್ಯವೂ ಇಲ್ಲ, ರಾಜಕೀಯ ಅಧಿಕಾರವೂ ಇಲ್ಲ. ಆದರೆ ಬಾಳಿನಲ್ಲಿ ಆದರ್ಶ ಎಂದಿಗೂ ಪೂರಾ ಸಿದ್ಧಿಸುವುದಿಲ್ಲ. ಅಂತೆಯೆ ಥೋರೋ ಹೇಳಿದ ಮಹಾವಾಕ್ಯ "ಅತ್ಯಂತ ಕಡಿಮೆ ಆಳುವುದೇ ಅತ್ಯಂತ ಶ್ರೇಷ್ಠ ಸರ್ಕಾರ". (ಸ.ವಾ. 311–312)
>
> "ಜನತೆ ತಮ್ಮ ಮೇಲೆ ತಾವೇ ಜಾರಿಮಾಡಿಕೊಂಡ ಶಾಸನ ಸಮಾಜದಲ್ಲಿ ಸಾಧ್ಯವಾದ ಮಟ್ಟಿನ ಅಹಿಂಸೆ. ಸಂಪೂರ್ಣ ಅಹಿಂಸೆಯ ಆಧಾರದ ಮೇಲೆ ಘಟಿತವಾಗಿ ನಡೆಯುವ ಸಮಾಜ

ಅತ್ಯಂತ ಶುದ್ಧ ಅರಾಜಕತೆ (Anarchism)ಆದೀತು".

"ಅಹಿಂಸೆ ಎಷ್ಟರಮಟ್ಟಿಗೆ ಸಾಧ್ಯವೊ ಅರಾಜಕತೆಯೂ ಅಷ್ಟರಮಟ್ಟಿಗೆ ಸಾಧ್ಯ. ಪರಿಶುದ್ಧ ಅರಾಜಕತೆಗೆ ಅತಿನಿಕಟವಾದುದು ಅಹಿಂಸೆಯ ಆಧಾರದ ಪ್ರಜಾತಂತ್ರ".

"ಸರ್ಕಾರ ಪೂರಾ ಅಹಿಂಸಾತ್ಮಕವಾಗಲು ಸಾಧ್ಯವಾಗದು. ಏಕೆಂದರೆ ಅದು ಜನರ ಪ್ರತಿನಿಧಿ. ಅಂತಹ ಸ್ವರ್ಣಯುಗವನ್ನು ಇಂದು ನಾನು ಊಹಿಸಿಕೊಳ್ಳಲಾರೆ. ಆದರೂ ಅಹಿಂಸಾಪ್ರಧಾನವಾದ ಸಮಾಜ ಸಾಧ್ಯ ಎಂದು ನಂಬುತ್ತೇನೆ. ಅದಕ್ಕಾಗಿಯೆ ದುಡಿಯುತ್ತಿದ್ದೇನೆ".

"ಪ್ರತಿಯೊಬ್ಬ ಮನುಷ್ಯನೂ ತನ್ನದೇ ಅಂತರ್‌ಪ್ರಜ್ಞೆಯ ವಾಣಿಯಂತೆ ನಡೆಯಬೇಕು. ತನಗೆ ತಾನೇ ಒಡೆಯನಾಗಬೇಕು. ಮತ್ತು ಅಂತರಂಗದಲ್ಲಿಯೆ ದೇವಸಾಮ್ರಾಜ್ಯವನ್ನು ಅರಸಬೇಕು. ಆತನ ಮಟ್ಟಿಗೆ ಆತನ ಸಮ್ಮತಿ ಇಲ್ಲದೆ ತನ್ನನ್ನು ನಿಯಂತ್ರಿಸಬಲ್ಲ ಯಾವ ಸರ್ಕಾರವೂ ಇರದು. ಅಂಥ ಮನುಷ್ಯ ಎಲ್ಲ ಪ್ರಭುತ್ವಕ್ಕೆ ಅತೀತನಾದವ".

"ಪ್ರಭುತ್ವದ ಅಧಿಕಾರ ಹೆಚ್ಚಿದರೆ ನನಗೆ ಅತ್ಯಂತ ಭಯ. ಏಕೆಂದರೆ ಅದು ಒಳ್ಳೆಯದನ್ನು ಮಾಡುವಂತೆ ತೋರಿದರೂ, ಎಲ್ಲ ಪ್ರಗತಿಯ ಮೂಲವೇ ಆದ ವೈಯಕ್ತಿಕತೆಯನ್ನು ನಾಶ ಮಾಡಿ ಮನುಕುಲಕ್ಕೆ ಅತ್ಯಂತ ಹಾನಿ ಉಂಟುಮಾಡುತ್ತದೆ". (ಸ.ವಾ. 312–313)

(ನೀಲತ್ತಹಳ್ಳಿ ಕಸ್ತೂರಿ 2008 ಗಾಂಧೀ ತತ್ತ್ವಚಿಂತನೆ ಪುಟ. 58–59)

ರಾಜಕೀಯ ನೀತಿಯ ಮಟ್ಟಿಗೆ ಮನ್ರೋ ಸ್ವಲ್ಪ ಉದಾರತೆಯ ಸ್ವಭಾವವನ್ನು ಹೊಂದಿದ್ದ. 1814–1816ರ ಕಾಲಾವಧಿಯಲ್ಲಿ ಮನ್ರೋ ಭಾರತೀಯ (ದೇಶೀಯ) ನ್ಯಾಯಾಧೀಶರಿಗೆ ಹೊಸ ಸ್ಥಾನಮಾನವನ್ನು ಕೊಟ್ಟ. ಅವನ ಉದಾರವಾದಿ ನೀತಿಯೇ ಅವನ ಯಶಸ್ಸಿಗೆ ಕಾರಣವಾಗಿದೆ. ಮನ್ರೋ ಒಂದು ಸಂದರ್ಭದಲ್ಲಿ ಹೀಗೆ ಹೇಳುತ್ತಾನೆ : ಈ ದೇಶದಲ್ಲಿ ಅನೇಕ ರೀತಿಯ ಜ್ಞಾನ ಪರಂಪರೆಗಳಿವೆ. ಪ್ರಭುತ್ವವು ಇದರ ಬಗ್ಗೆ ತುಂಬಾ ನಿರ್ಲಕ್ಷ್ಯ ವಹಿಸಿದೆ ಇಲ್ಲಿಯ ಸಂಪ್ರದಾಯಗಳು ಧರ್ಮಗಳು ಅಲೌಕಿಕದ ಬಗೆಗಿನ ತಿಳುವಳಿಕೆಗಳು ಬೇರೆಬೇರೆ ರೀತಿಗಳಲ್ಲಿವೆ. ಹಾಗೆಯೇ ಇಲ್ಲಿ ಅನೇಕ ರೀತಿಯ ಒಳಜಗಳಗಳಿವೆ. ಅದೇ ರೀತಿಯಲ್ಲಿ ಶಾಂತಿ ಸೌಹಾರ್ದಗಳಿವೆ. ಸರಕಾರವು ಇದನ್ನು ಗಮನಿಸಬೇಕಾದ ಅವಶ್ಯಕತೆಯಿದೆ. ಮನ್ರೋ ಸರಕಾರದ ಈ ನಿಯಮಾವಳಿಗಳು ತುಂಬಾ ಕೃತಕ ಮತ್ತು ವಿದೇಶಿಯ ಗುಣವನ್ನು ಹೊಂದಿದೆಯೆಂದು ಪ್ರತಿಪಾದಿಸುತ್ತಾನೆ. ಈ ದೃಷ್ಟಿಯಿಂದ ಕಲೆಕ್ಟರ್‌ಗೆ ನ್ಯಾಯ ತೀರ್ಮಾನದ ಹಕ್ಕು ಮತ್ತು ಪೋಲೀಸ್ ಅಧಿಕಾರ

(ದಂಡದ ಹಕ್ಕು) ಎರಡನ್ನು ಕೊಟ್ಟ, ಭಾರತೀಯ ನ್ಯಾಯಾಧೀಶರಿಗೆ ಹೆಚ್ಚಿನ ಅವಕಾಶ ಕೊಟ್ಟ. ಅವರ ಸ್ಥಾನವನ್ನು ಉನ್ನತ ಮಟ್ಟಕ್ಕೆ ಏರಿಸಿದ. 1814–1816 ಅವರ ಯಶಸ್ಸಿನ ಕಾಲವೆಂದೇ ಗುರುತಿಸಲಾಗಿದೆ.

1828ರಲ್ಲಿ ಬೆಂಟಿಂಕ್ ಭಾರತಕ್ಕೆ ಬಂದಾಗ ಅವನು ತನ್ನ ಆಡಳಿತ ವಿಧಾನವನ್ನು ಎರಡು ರೀತಿಯಲ್ಲಿ ಸಂಯೋಜಿಸಿದ್ದ ಎಂದು ಈ ಮೊದಲು ಹೇಳಲಾಗಿದೆ. ಇದರಿಂದ ಆಡಳಿತ ವಿಧಾನದಲ್ಲಿ ಎರಡು ರೀತಿಯ ರಚನೆಯ ಕ್ರಮಗಳು ಮತ್ತು ಅದಕ್ಕೆ ಸಂಬಂಧಿಸಿದ ನೀತಿ ನಿಯಮಾವಳಿಗಳು ರೂಪುಗೊಂಡವು.

1828ರಲ್ಲಿದ್ದುದಕ್ಕೂ, 1829ಕ್ಕೂ ಬದಲಾವಣೆಯಾಗಿರುವುದನ್ನು ನಾವು ಗಮನಿಸಬಹುದು.

ಮನ್ರೋ ಜುಡಿಶಿಯರಿ ಅಧಿಕಾರವನ್ನು ಬದಲಾಯಿಸಿದ. ತೆರಿಗೆಯ ಕುರಿತಾದ ಸಂಘರ್ಷದ ಸಂದರ್ಭದಲ್ಲಿ ಮೇಜಿಸ್ಟ್ರೇಟ್ ಅಥವಾ ಸ್ಥಳೀಯ ಪೋಲೀಸ್ ಇಲಾಖೆಗೆ ಹೆಚ್ಚಿನ ಅಧಿಕಾರ ಬೇಕೆಂದು ಪ್ರತಿಪಾದಿಸಿದ. ಇವನ ಕಾಲದಲ್ಲಿ ತಾಲೂಕು ಮತ್ತು ಸಬ್ ಕಲೆಕ್ಟರ್ಸ್‌ಗಳನ್ನು ನಾವು ಕಾಣಬಹುದು. ಮತ್ತು ಕಂದಾಯವು ಆವ್ಯೆಯಕ್ತಿಕ ವಾಗಬೇಕೆಂದು ಪ್ರತಿಪಾದಿಸಿದ.

ವಸಾಹತು ಕಾಲದಲ್ಲಿ ಚಾಲ್ತಿಗೆ ಬಂದ ಪ್ರಮುಖ ಪರಿಭಾಷೆಯೆಂದರೆ ಪೌರ. ಇದು ನಾಗರಿಕರನ್ನು ಒಂದು ವರ್ಗದಲ್ಲಿಯೂ, ಉಳಿದವರನ್ನು ಇನ್ನೊಂದು ವರ್ಗದಲ್ಲಿಯೂ ಸಮೀಕರಿಸಿತು (ಭಾರತೀಯ ಪೌರನೀತಿಯ ಕೈಪಿಡಿ, ಶಂ. ಕೃಷ್ಣಯ್ಯಂಗಾರ, 1935, ಪು. 253–255).

'ಪೌರ' ಎಂಬ ಶಬ್ದವೇ ವಿಶಿಷ್ಟವಾದುದು. ಸರ್ಕಾರಕ್ಕೊಳಗಾದ ಮಾತ್ರದಿಂದ ಪೌರ ಎನ್ನಿಸುವುದಿಲ್ಲ. ಪ್ರಜಾ ಶಬ್ದಕ್ಕೂ ಪೌರ ಶಬ್ದಕ್ಕೂ ವಿಶೇಷವಾದ ಭೇದವುಂಟು. ಆಳ್ವಿಕೆಗೊಳಗಾದವರು ಪ್ರಜಾ ಎನಿಸುವವರು. ಪೌರರು ಆಳ್ವಿಕೆಗೊಳಗಾಗಿದ್ದರೂ ಆಳ್ವಿಕೆಯ ಅಧಿಕಾರದಲ್ಲಿ ಭಾಗಿಗಳಾದವರು. ಪೌರ ಎಂಬ ಶಬ್ದವಾಗಲಿ ಸಿಟಿಜನ್ ಎಂಬ ಇಂಗ್ಲಿಷ್ ಶಬ್ದವಾಗಲಿ, ಪಟ್ಟಣವೆಂಬ ಅರ್ಥವನ್ನು ಕೊಡುವ ಶಬ್ದದಿಂದ ಹುಟ್ಟಿದ್ದು. 'ಪೋಲಿಸ್' ಎಂಬುದು ಗ್ರೀಕ್ ಭಾಷೆಯಲ್ಲಿಯೂ, ಸಿವಿಟಾಸ್ ಎಂಬುದು ಲ್ಯಾಟಿನ್ ಭಾಷೆಯಲ್ಲಿಯೂ ನಗರ ಎಂಬ ಅರ್ಥವುಳ್ಳವು. ಆ ಎರಡು ಶಬ್ದಗಳಿಂದಲೇ ಪಾಲಿಟಿಕ್ಸ್ ಮತ್ತು ಸಿವಿಕ್ಸ್ ಅಥವಾ ರಾಷ್ಟ್ರನೀತಿ ಮತ್ತು ಪೌರ ನೀತಿಗಳೆಂಬ ಮಾತುಗಳು ಹುಟ್ಟಿದವು. ಪಾಶ್ಚಾತ್ಯರಲ್ಲಿ ನೀತಿಶಾಸ್ತ್ರವು ರೂಪತಾಳಿದ್ದು ನಗರಗಳಲ್ಲಿಯೇ ;

ನಗರಗಳಲ್ಲಿಯೇ ಅವರ ಸಭ್ಯತೆಯು ಮೊದಲಾದುದು. ಆದುದರಿಂದ ಅವರಲ್ಲಿ ಸಭ್ಯತೆಯೆಂಬುದಕ್ಕೆ ನಾಗರಿಕತೆಯೆಂದೇ ರೂಢಿಯಾಯಿತು. ಪೌರ ಎಂದರೆ ಪುರನಿವಾಸಿ ಮಾತ್ರವಲ್ಲ ; ಸಭ್ಯತೆಯ ಲಕ್ಷಣಗಳನ್ನು ಪಡೆದವನು. ಸಭ್ಯತೆಯೆಂದರೆ ವಿಸ್ತಾರವಾದ ಅರ್ಥವೇ ಉಂಟು. ಸಭಾ ಯೋಗ್ಯನಾಗಿರುವುದು ಸಭ್ಯತೆ ; ಸಭಾ ಎಂದರೆ ಒಟ್ಟಿಗೆ ಪ್ರಕಾಶಿಸುವುದು, ಅಂದರೆ ನೆರೆಹೊರೆಯವರಲ್ಲಿ ಅಥವಾ ಇತರೆ ಪೌರರಲ್ಲಿ ಯೋಗ್ಯತೆಯಿಂದ ಹೊಂದಿಕೊಂಡು ಸಾಮಾನ್ಯವಾದ ಧರ್ಮವನ್ನು ಆಚರಿಸತಕ್ಕವನು ಪೌರನು. ಸಮುದಾಯದಲ್ಲಿ ಒಬ್ಬನಾಗಿ, ಇತರರ ಸುಖ ದುಃಖಗಳಲ್ಲಿ ಭಾಗಿಯಾಗಿ, ಸಮುದಾಯದ ಸೌಭಾಗ್ಯ ಸಾಧನೆಯಲ್ಲಿ ಪ್ರಯತ್ನಶೀಲನಾದವನು ಪೌರನು.

ಇತರರ ಸಂಪರ್ಕವಿಲ್ಲದೆಯೇ ಇರಲು ಬಯಸುವವನು ಪೌರನೆಂದೆನಿಸಲಾರನು. ಯೋಗಿಗಳೂ ತಪಸ್ವಿಗಳೂ ಅರಣ್ಯಗಳಲ್ಲಿದ್ದುಕೊಂಡು ಇತರರ ಸಂಬಂಧವೇ ಇಲ್ಲದೆ ಇರತಕ್ಕವರಾದರೆ ಅವರು ಪೌರರೆನಿಸಲಾರರು.

ಪೌರ ಶಬ್ದಕ್ಕೆ ಇನ್ನೂ ಒಂದು ಅರ್ಥವುಂಟು ; ಅದೇ ಮುಖ್ಯವಾದುದು. ಪೌರನೆಂಬಾತನು ಸ್ವತಂತ್ರನಾದವನು ; ಮತ್ತು ತನ್ನ ದೇಶದ ಸ್ವಾಮ್ಯದಲ್ಲಿ ಭಾಗಿಯಾಗಿ ದೇಶದ ಆಡಳಿತದಲ್ಲಿ ಪಾಲುದಾರನಾದವನು. ಕೊಂಡು ಮಾರುವ ಗುಲಾಮರು ಪೌರರೆನಿಸುವುದಿಲ್ಲ. ಅದೇ ರೀತಿಯಲ್ಲಿಯೇ ನಿರಂಕುಶ ಪ್ರಭುತ್ವಕ್ಕೊಳಗಾದ ಪ್ರಜೆಗಳು ಪೌರರೆನಿಸುವುದಿಲ್ಲ. ಆಡಳಿತದಲ್ಲಿ ಭಾಗವಿಲ್ಲದವರು ಪೌರ ಶಬ್ದಕ್ಕೆ ಅರ್ಹರೇ ಅಲ್ಲ.

ದೇಶದ ನಿವಾಸಿಗಳೆಲ್ಲರೂ ಪೌರರೆನಿಸತಕ್ಕದ್ದು. ಕೆಲವರು ಮಾತ್ರ ಪೌರರಾಗಿಯೂ ಇತರರು ಆ ಪದವಿಯಿಲ್ಲದೆಯೂ ಇರಲಾಗುವುದಿಲ್ಲ. ಪೌರ ಶಬ್ದವು ಪುರಕ್ಕೆ ಸಂಬಂಧಪಟ್ಟುದಾದರೂ ದೇಶದ ಸಮಸ್ತ ನಿವಾಸಿಗಳಿಗೂ ಅನ್ವಯವಾಗತಕ್ಕುದು. ಗ್ರಾಮಸ್ಥರಾಗಲಿ ಪಟ್ಟಣಿಗರಾಗಲಿ, ಸ್ತ್ರೀಯರಾಗಲಿ ಪುರುಷರಾಗಲಿ ಪೌರತ್ವದ ಅನುಭೋಗದಲ್ಲಿ ದೇಶೀಯರೆಲ್ಲರೂ ಸಮಾನರೇ. ಎಲ್ಲರಿಗೂ ಸಹಜವಾಗಿ ಬೇಕಾದುದು ಪೌರ ಪದವಿ (ಅದೇ).

1945ರಲ್ಲಿ ಮೈಸೂರು ಸರಕಾರದ ವಿದ್ಯಾ ಇಲಾಖೆಯು ಕನ್ನಡ ಏಳನೆಯ ತರಗತಿ ಒಂದು ಪಠ್ಯಪುಸ್ತಕವನ್ನು ನಿಗದಿಮಾಡಿತ್ತು. ಅದರಲ್ಲಿ ಬ್ರಿಟೀಷರ ಚಕ್ರಾಧಿಪತ್ಯದ ಕುರಿತಂತೆ ಒಂದು ಪಾಠವಿದೆ. ಆ ಪಾಠದಲ್ಲಿ ಬ್ರಿಟೀಷರ ಆಡಳಿತ ಕ್ರಮವನ್ನು ಕುರಿತು ಈ ರೀತಿ ಉಲ್ಲೇಖಿಸಲಾಗಿದೆ" (1945, ಪು. 164–65):

ಬ್ರಿಟಿಷರಿಗೆ ಸೇರಿರುವ ಸ್ವಾಸ್ಥ್ಯಗಳನ್ನು ಮೂರು ಪಂಗಡಗಳಾಗಿ ವಿಂಗಡಿಸಬಹುದು. ಮೊದಲನೆಯದು, ಪ್ರಜಾಪ್ರತಿನಿಧಿ ಸಂಸ್ಥೆಗಳೂ ಸ್ವರಾಜ್ಯವೂ ಇಲ್ಲದ ಕ್ರೌನ್ ಕಾಲೋನಿಗಳು

; ಎರಡನೆಯದು, ಪ್ರಜಾಪ್ರತಿನಿಧಿ ಸಂಸ್ಥೆಗಳಿದ್ದರೂ ಸ್ವರಾಜ್ಯವಿಲ್ಲದ ಪ್ರಾಂತ್ಯಗಳು ; ಮೂರನೆಯದು ಪ್ರಜಾಪ್ರತಿನಿಧಿ ಸಂಸ್ಥೆಗಳನ್ನು ಸ್ವರಾಜ್ಯವನ್ನೂ ಪಡೆದಿರುವ ದೇಶಗಳು.

ಮೊದಲನೆಯ ಪಂಗಡದ ಸ್ವಾಸ್ಥ್ಯಗಳಲ್ಲಿ ಕಂದಾಯ ತೆರಿಗೆಗಳ ವಿಚಾರ, ಶಾಸನಗಳ ಏರ್ಪಾಟು, ಆದಾಯ ವೆಚ್ಚಗಳ ಪರಿಶೀಲನೆ- ಇವುಗಳನ್ನೆಲ್ಲ ಸಾರ್ವಭೌಮ ಸರ್ಕಾರದಿಂದ ನಿಯಮಿತರಾದ ಅಧಿಕಾರಿಗಳೇ ಮಾಡುತ್ತಾರೆ. ಅವುಗಳನ್ನು ಮಾರ್ಪಡಿಸುವ ಸ್ವಾತಂತ್ರ್ಯ ಪ್ರಜೆಗಳಿಗೇನೂ ಇರುವುದಿಲ್ಲ. ಜಿಬ್ರಾಲ್ಟರ್, ಜಮೈಕಾ ಮುಂತಾದ ಪ್ರಾಂತಗಳು ಈಬಗೆಯ ಸ್ವಾಸ್ಥ್ಯಗಳಿಗೆ ಉದಾಹರಣೆಗಳಾಗಿವೆ.

ಎರಡನೆಯ ಬಗೆಯ ಸ್ವಾಸ್ಥ್ಯಗಳಲ್ಲಿ ಗವರ್ನರಾದವರನ್ನು ಇಂಗ್ಲೆಂಡಿನ ಸರ್ಕಾರದವರೇ ನಿಯಮಿಸುತ್ತಾರೆ. ಆತನು ಯಾವುದೊಂದು ಶಾಸನ ಮಾಡಬೇಕಾದರೂ, ಯಾವುದೊಂದು ತೆರಿಗೆಯನ್ನು ಹಾಕಬೇಕಾದರೂ, ಯಾವುದೊಂದು ವೆಚ್ಚವನ್ನು ಮಾಡಬೇಕಾದರೂ ಪ್ರಜಾಪ್ರತಿನಿಧಿ ಸಭೆಯ ಅಭಿಪ್ರಾಯವನ್ನು ತೆಗೆದುಕೊಳ್ಳಬೇಕು. ಈ ಸಭೆಯಲ್ಲಿ ಪ್ರಜೆಗಳಿಂದ ಚುನಾವಣೆಯಾದ ಸದಸ್ಯರೂ, ಸಾರ್ವಭೌಮ ಸರ್ಕಾರದಿಂದ ನಾಮಕರಣವಾದ ಸದಸ್ಯರೂ ಇರುತ್ತಾರೆ. ಈ ಸಭೆಯಲ್ಲಿ ನಿಶ್ಚಯವಾದ ಗೊತ್ತುವಳಿಗಳನ್ನು ಕೆಲವು ಸಂದರ್ಭಗಳಲ್ಲಿ ಅನುಮೋದಿಸದೆ ಇರುವ ಅಧಿಕಾರವೂ, ಆಚರಣೆಗೆ ತರದೆ ಇರುವ ಅಧಿಕಾರವೂ ಗವರ್ನರಿಗೆ ಇರುತ್ತದೆ. ಅಧಿಕಾರಿಗಳು ನ್ಯಾಯವಿಧಾಯಕ ಸಭೆಯ ಅಧೀನರಾಗಿರದೆ ಸಾರ್ವಭೌಮ ಸರ್ಕಾರದ ಅಧೀನರಾಗಿರುತ್ತಾರೆ. ಬಾಮಾ, ಮಾಲ್ಟಾ ಮುಂತಾದ ಪ್ರಾಂತಗಳು ಈ ಬಗೆಯ ಸ್ವಾಸ್ಥ್ಯಗಳಿಗೆ ಉದಾಹರಣೆಗಳಾಗಿವೆ. ಮೈಸೂರು ಸರ್ಕಾರದ ವಿದ್ಯಾಭ್ಯಾಸದ ಇಲಾಖೆ (ಕನ್ನಡ ಏಳನೆಯ ಪುಸ್ತಕ, 1945, ಮೈಸೂರು ಸರ್ಕಾರದ ಮುದ್ರಣಾಲಯದ ಸುಪರಿಟೆಂಡರಿಂದ ಮುದ್ರಿಸಲ್ಪಟ್ಟಿತು, ಬ್ರಿಟೀಷರ ಚಕ್ರಾಧಿಪತ್ಯ, ಪಾಠ).

ಮೂರನೆಯ ಬಗೆಯ ಸ್ವಾಸ್ಥ್ಯಗಳಲ್ಲಿ ಗವರ್ನರನ್ನು ಸಾರ್ವಭೌಮ ಸರ್ಕಾರದವರು ನಿಯಮಿಸಿರುತ್ತಾರೆ. ಆ ಪ್ರಾಂತಗಳಲ್ಲಿ ಒಂದು ಅಥವಾ ಎರಡು ಪ್ರಜಾಪ್ರತಿನಿಧಿ ಸಂಸ್ಥೆಗಳಿರುತ್ತವೆ. ಪ್ರತಿಯೊಂದು ಶಾಸನವೂ, ತೆರಿಗೆಯೂ, ವೆಚ್ಚವೂ ಈ ಪ್ರಜಾಸಂಸ್ಥೆಗಳ ಅನುಮತಿಯನ್ನು ಪಡೆಯಬೇಕು. ಈ ಪ್ರಾಂತಗಳಲ್ಲಿ ಮಂತ್ರಿಮಂಡಲದವರು ಪ್ರಜಾ ಸಂಸ್ಥೆಗಳಿಂದ ಬಂದವರಾಗಿ, ಪ್ರಜಾ ಸಂಸ್ಥೆಗಳಿಗೆ ಉತ್ತರವಾದಿಗಳಾಗಿರುವರು. ಇಂತಹ ಸ್ವಾಸ್ಥ್ಯಗಳಲ್ಲಿ ಸ್ವರಾಜ್ಯವಿರುವುದರಿಂದ ಆರ್ಥಿಕ ವಿಚಾರ ಸ್ವತಂತ್ರವಾಗಿರುತ್ತದೆ. ಸಾರ್ವಭೌಮ ಸರ್ಕಾರ ಯಾವ ವಿಷಯದಲ್ಲಿಯೂ ಕೈ ಹಾಕುವ ಹಾಗಿಲ್ಲ. ಗವರ್ನರ್ ಹೊರತು ಉಳಿದ ಅಧಿಕಾರಿಗಳು ಪ್ರಜಾಸಂಸ್ಥೆಗಳ ಅಧೀನದಲ್ಲಿರುವರು. ಕೆನಡ,

ಆಸ್ಟ್ರೇಲಿಯಾ ಮತ್ತು ದಕ್ಷಿಣ ಆಫ್ರಿಕಾ – ಈ ಬಗೆಯ ಸ್ವಾಸ್ಥ್ಯಗಳಿಗೆ ಉದಾಹರಣೆಗಳಾಗಿವೆ. (ಅದೇ).

ಮೇಲೆ ಉಲ್ಲೇಖಿತವಾದಂತೆ ಭಾರತದಲ್ಲಿ ಮೊದಲು ಬಂದ ಗವರ್ನರ್ ಜನರಲ್ ತಮ್ಮ ಪರಮೋಚ್ಛ ಅಧಿಕಾರವನ್ನು ಅನುಭವಿಸುತ್ತಿದ್ದರು. ಅವರ ಆಡಳಿತ ನೀತಿಯು ಸ್ಥಳೀಯ ರಾಜರ ರಾಜಕೀಯ ನೀತಿಯನ್ನು ಒಪ್ಪಿಕೊಂಡವರದ್ದಾಗಿರಲಿಲ್ಲ.

ಜೇಮ್ಸ್ ಮಿಲ್ ಬ್ರಿಟೀಶ್ ಪ್ರಭುತ್ವವು ಭಾರತೀಯ ಹಳೆಯ ಮತ್ತು ಸಾಂಪ್ರದಾಯಿಕ ಆಡಳಿತಾತ್ಮಕ ಕ್ರಮಗಳನ್ನು ಗಮನಿಸಬೇಕೆಂದು ಹೇಳಿದ್ದ. ಜೇಮ್ಸ್ ಮಿಲ್ ಅದರೊಂದಿಗೆ ಕೆಲವು ಹೊಸ ಬದಲಾವಣೆಗಳನ್ನು ಕೂಡಾ ಜಾರಿಗೆ ತಂದ. ಕಾನೂನುಗಳು ಬರಹದಲ್ಲಿ ರಬೇಕೆಂದೂ, ಇದರಿಂದ ಬಹಳ ಅನುಕೂಲವಿದೆಯೆಂದು ಪ್ರತಿಪಾದಿಸಿದ. ಮಿಲ್‌ನ ಪ್ರಕಾರ, ಕಾನೂನು ಮೌಖಿಕವಾಗಿರುವುದಕ್ಕೂ, ಅದು ಬರಹದಲ್ಲಿರುವುದಕ್ಕೂ ವ್ಯತ್ಯಾಸವಿದೆ. ಯಾವಾಗ ಕಾನೂನು ಎನ್ನುವುದು ಬರಹರೂಪಕ್ಕೆ ಇಳಿಯುತ್ತದೆಯೋ ಆಗ ಅದರ ಬದಲಾವಣೆಯು ಸಾಧ್ಯವಿಲ್ಲ. ಮಿಲ್ ಕಾನೂನು ಬರಹಕ್ಕೆ ಬಂದಿರುವ ಹಾಗೆಯೇ ಅದಕ್ಕೆ ಆಡಳಿತಾತ್ಮಕ ವ್ಯಾಪ್ತಿಯಲ್ಲಿ ಅಧಿಕ ಅಧಿಕಾರವನ್ನು ಕೊಡಲಾಯಿತು. ಅದು ದಂಡ ಸಂಹಿತೆಯೂ ಆಯಿತು (Staturary Form). ಇದರಿಂದ ಕೋರ್ಟುಗಳ ವ್ಯವಹಾರಗಳು ಸಂವಾದಿಯಾದ (Relative) ಅಧಿಕಾರ ಮತ್ತು ದಂಡ ಸಂಹಿತೆಗಳನ್ನು ಒಳಗೊಳ್ಳುವುದು ತಪ್ಪಿತು. ಆಡಳಿತದ ಆಧುನಿಕ ಪದ್ಧತಿಯೂ ಜಾರಿಗೆ ಬಂದುದರಿಂದ ನ್ಯಾಯಾಲಯವು ಹೆಚ್ಚು ಸಮರ್ಥವಾಗಿ ಕೆಲಸ ಮಾಡಲು ಸಾಧ್ಯವಾಯಿತು. ಮತ್ತು ಅದು ತನ್ನ ಘನತೆಯನ್ನು ಉಳಿಸಿಕೊಳ್ಳಲು ಕೂಡಾ. ಇಲ್ಲಿ ಇನ್ನೊಂದು ಅಂಶವನ್ನು ಪ್ರಸ್ತಾವಿಸಬೇಕು. ವಾರನ್ ಹೇಸ್ಟಿಂಗ್ಸ್‌ನ ಕಾಲದಲ್ಲಿ 1773ರಲ್ಲಿ ಬಂಗಾಳದ ಗವರ್ನರ್ ಜನರಲ್ ಆಗಿ ನೇಮಕಗೊಂಡಿದ್ದ. ಅವನು ಆಡಳಿತ ನಡೆಸಲು ಕಂದಾಯ ವಸೂಲಿಗಾಗಿ ಕಲೆಕ್ಟರ್ ಎಂಬ ಅಧಿಕಾರಿಯನ್ನು ನೇಮಕಮಾಡಿಕೊಂಡಿದ್ದ. ಕಲೆಕ್ಟರ್‌ಗೆ ಸಹಾಯ ಮಾಡಲು ಸ್ಥಳೀಯ ಅಧಿಕಾರಿಗಳನ್ನು ನೇಮಕ ಮಾಡಿದ್ದ. ಕಂದಾಯವನ್ನು ಹರಾಜಿನ ಮೂಲಕ ನಿಗದಿ ಮಾಡಲಾಗುತ್ತಿತ್ತು. ಇವನು ಪ್ರಾರಂಭಿಸಿದ ಮತ್ತೊಂದು ಆಡಳಿತಾತ್ಮಕ ಸುಧಾರಣೆಯ ಸಂಗತಿಯೆಂದರೆ ದಿವಾನಿ ಅದಾಲತ್ ಮತ್ತು ಫೌಜುವಾರಿ ಅದಾಲತ್, ಇವುಗಳನ್ನು ಸಿವಿಲ್ ಮತ್ತು ಕ್ರಿಮಿನಲ್ ವಲಯಗಳೆಂದು ಕರೆಯಲಾಗುತ್ತಿತ್ತು.

"ಮೈಸೂರು ಸಂಸ್ಥಾನ : ಉಭಯ ದಾಸ್ಯದಿಂದ ಬಿಡುಗಡೆ" ಎನ್ನುವ ಲೇಖನದಲ್ಲಿ ಎಸ್. ಚಂದ್ರಶೇಖರ್ ಹೀಗೆ ವಿವರಿಸುತ್ತಾರೆ (2006, ಪು. 81–97). ಇದರ ಮುಖ್ಯ ಅಂಶಗಳು ಹೀಗಿವೆ :

1) 1799ರಲ್ಲಿ ನಾಲ್ಕನೇ ಆಂಗ್ಲೋ ಮೈಸೂರು ಯುದ್ಧದಲ್ಲಿ ಟಿಪ್ಪು ಸುಲ್ತಾನ್ ಸೋತು ಕೊಲ್ಲಲ್ಪಟ್ಟನಂತರ, ಆತನ ರಾಜ್ಯವನ್ನು ಹರಿದು ಹಂಚಿಕೊಳ್ಳಲಾಯಿತು. ಒಂದು ಭಾಗ ಬ್ರಿಟೀಷರಿಗೆ, ಇನ್ನೊಂದು ಭಾಗ ಹೈದರಾಬಾದ್ ನಿಜಾಮನ ಪಾಲಿಗೆ ಹೋದರೆ ಉಳಿದದ್ದನ್ನು 1763ರ ನಂತರ ಮೂಲೆಗುಂಪಾಗಿದ್ದ ಮೈಸೂರು ಒಡೆಯರ ಮನೆತನಕ್ಕೆ ವಹಿಸಿಕೊಡಲಾಯಿತು. 1831ರಲ್ಲಿ ನಡೆದ ನಗರ ದಂಗೆಯ ನೆಪವೊಡ್ಡಿ ಒಡೆಯರ ಮೈಸೂರನ್ನು ಬ್ರಿಟಿಷರು ತಮ್ಮ ನೇರ ಆಡಳಿತಕ್ಕೆ ವಹಿಸಿಕೊಂಡರು.

2) 1831 ರಿಂದ 1881ರ ವರೆಗೆ ಮೈಸೂರು ಬಿಳಿಯರ ಆಡಳಿತಕೆ ಒಳಪಟ್ಟು ಹಲವಾರು ಬದಲಾವಣೆಗಳನ್ನು ಕಂಡಿತು. ಹಲವಾರು ಕಾರಣಗಳಿಂದ ಮೈಸೂರನ್ನು ಅನಿವಾರ್ಯವಾಗಿ ಮತ್ತೆ 1881ರಲ್ಲಿ ಒಡೆಯರಿಗೆ ವಹಿಸಿಕೊಡಲಾಯಿತು. ಹಾಗೆ ಮಾಡಿದಾಗ ಬ್ರಿಟಿಷರ ಷರತ್ತುಗಳು ಹೆಚ್ಚಾದವು. 1799ರಲ್ಲಿ ಮೈಸೂರು ಪ್ರಾಂತ್ಯ ಸೃಷ್ಟಿಯಾದಾಗ, ಇತರ ಷರತ್ತುಗಳೊಂದಿಗೆ, ರಾಜರು ವರ್ಷಕ್ಕೆ 24.5 ಲಕ್ಷ ರೂಪಾಯಿಗಳ ಕಪ್ಪ ಕೊಡಬೇಕಾಗಿತ್ತು. 1881ರಲ್ಲಿ ಅದನ್ನು 35 ಲಕ್ಷ ರೂಪಾಯಿಗಳಿಗೆ ಏರಿಸಲಾಯಿತು. ಎರಡು ಬಾರಿಯೂ ಒಡೆಯರನ್ನು ಪುನಶ್ಚೇತನಗೊಳಿಸಿದ್ದು ಬ್ರಿಟಿಷ್ ಆಳರಸರೇ. ಅವರದೇ ಷರತ್ತುಗಳೊಂದಿಗೆ. ಹೀಗಾಗಿ ಮೈಸೂರು ಸಂಸ್ಥಾನ ಸಾಮ್ರಾಜ್ಯಶಾಹಿಯ ಕೂಸು.

3) 1881ರಲ್ಲಿ ಈ ತಂತ್ರಗಾರಿಕೆ ಹುಟ್ಟುಹಾಕಿದ್ದೇ ಮೈಸೂರು ಪ್ರಜಾಪ್ರತಿನಿಧಿ ಸಭೆ. ಈ ಪ್ರತಿನಿಧಿ ಸಭೆ ಆರಂಭದಲ್ಲಿ ಹೆಸರಿಗೆ ಮಾತ್ರ ಪ್ರತಿನಿಧಿ ಸಭೆಯಾಗಿದ್ದು ಯಾವುದೇ ಅಧಿಕಾರ ಹೊಂದಿರಲಿಲ್ಲ.

4) 1907ರಲ್ಲಿ ಮೈಸೂರು ನ್ಯಾಯ ವಿಧಾಯಕ ಸಭೆ (Legislative Council)ಯೂ ಆರಂಭಗೊಂಡಿತು. ಅದೂ ಮಹಾರಾಜರ ಇಚ್ಛೆಯಂತೆಯೇ ಹೊರತು ಸಾರ್ವಜನಿಕರ ಒತ್ತಾಯದಿಂದಲ್ಲ.

5) ಕಾಂಗ್ರೆಸ್ ನಾಯಕರಾದಿಯಾಗಿ, ಬ್ರಿಟಿಷ್ ಪ್ರಾಂತ್ಯಗಳ ಸಾರ್ವಜನಿಕರು ಮೈಸೂರಿನ ಪ್ರತಿನಿಧಿ ಸಭೆಯನ್ನು "ಪೂರ್ವ ದೇಶಗಳ ಜನತಾಂತ್ರಿಕ ಕಲ್ಪನೆ"ಯದೆಂದು, ನ್ಯಾಯ ವಿಧಾಯಕ ಸಭೆಯನ್ನು "ಪಾಶ್ಚಾತ್ಯ ಮಾದರಿ"ಯದೆಂದು ಹಾಡಿ ಹೊಗಳಿ, ಎರಡನ್ನೂ ಮೇಳೈಸಿಕೊಂಡ ಮೈಸೂರಿನ ಕಡೆ ಹೆಮ್ಮೆಯಿಂದ ನೋಡತೊಡಗಿದರು.

6) ಮೈಸೂರು ಮಾದರಿ ರಾಜ್ಯವೆಂಬ ಮುಸುಕಿನ ಹಿಂದೆ ಸ್ಥಳೀಯ ರಾಜಕೀಯ ಭಿನ್ನಮತವನ್ನು ನಿರ್ದಾಕ್ಷಿಣ್ಯವಾಗಿ ಹತ್ತಿಕ್ಕಿತು. ರಾಷ್ಟ್ರೀಯ ಕಾಂಗ್ರೆಸ್ಸಿನ ಪ್ರಮುಖ ಧುರೀಣರು 1937ರ ವರೆಗೂ ಮೈಸೂರು ಮಹಾರಾಜರ ವಂಧಿಮಾಗ ದರಂತಿದ್ದರು. ಮೈಸೂರಿನ ರಾಜಕಾರಣಿಗಳು ಈ ಪ್ರಬಲ ಅಡಚಣೆಗಳನ್ನು ಮೀರಿ ನಿರಂಕುಶ ಆಡಳಿತವನ್ನು ಎದುರಿಸಬೇಕಾಗಿತ್ತು. ವಿಪರ್ಯಾಸವೆಂದರೆ ಮೈಸೂರಿನ ಜನತಂತ್ರ ವಿರೋಧಿ ಸರ್ಕಾರವನ್ನು ಆಗಾಗ ಟೀಕಿಸುತ್ತಿದ್ದುದು ಬಿಳಿಯರ ಹಿಡಿತದಲ್ಲಿದ್ದ ಪತ್ರಿಕೆಗಳು. ಈ ವೈಚಿತ್ರ್ಯವನ್ನು ಮೈಸೂರಿನ ಉದಾರವಾದಿ ರಾಜಕೀಯ ವಕ್ತಾರರಾಗಿದ್ದ ಡಿ.ವಿ. ಗುಂಡಪ್ಪನವರು ವರ್ಣಿಸಿದ್ದು ಹೀಗೆ : "ಆಂಗ್ಲೊ ಇಂಡಿಯನ್ ಪತ್ರಿಕೆಗಳು ಮೈಸೂರು ಸರ್ಕಾರದ ಸರ್ವಾಧಿಕಾರಿ ಧೋರಣೆಯ ಬಗ್ಗೆ ತಾಳಿರುವ ನಿಲುವನ್ನು ಬ್ರಿಟಿಷ್ ಭಾರತದ ಕಾಂಗ್ರೆಸ್ಸಿಗರು ಗಮನಿಸಿದರೆ ಒಳ್ಳೆಯದು".

7) 1870 ರಿಂದ 1900ರ ವರೆಗೂ ಮೈಸೂರಿನ ಸಾರ್ವಜನಿಕ ಜೀವನದಲ್ಲಿ ಸಕ್ರಿಯವಾಗಿದ್ದವರೆಲ್ಲಾ ಮೈಸೂರಿನಲ್ಲಿ ಯಾವ ತಪ್ಪು ಕಂಡರೂ ಅದಕ್ಕೆಲ್ಲಾ ಮದ್ರಾಸಿಗರೇ ಹೊಣೆಯೆಂದು ಟೀಕಿಸುತ್ತಿದ್ದರು. ಮೊದಲಿಬ್ಬರು ದಿವಾನರಾದ ರಂಗಾಚಾರ್ಲು ಮತ್ತು ಶೇಷಾದ್ರಿ ಅಯ್ಯರ್ (1881–1901 ರವರೆಗೆ) ಮದ್ರಾಸಿಗರೇ ಆಗಿದ್ದು, ಮದ್ರಾಸಿ ಮೂಲಕ ಅರ್ಹರಿಗೆ ನೌಕರಿಗಳಲ್ಲಿ ಆದ್ಯತೆ ಕೊಡುತ್ತಿದ್ದರೆಂಬ ದೂರಿತ್ತು. ಹಾಗೆಯೇ ಮೈಸೂರು ಸೇವೆಯಲ್ಲಿದ್ದ ಮದ್ರಾಸಿ ಮೂಲದ ಹಿರಿಯ ಅಧಿಕಾರಿಗಳನ್ನು ಆಯಕಟ್ಟಿನ ಸ್ಥಾನಗಳಿಗೆ ನೇಮಿಸುತ್ತಿದ್ದರೆಂಬುದು ಮತ್ತೊಂದು ಪ್ರಮುಖ ದೂರಾಗಿತ್ತು. ಇವರೆಲ್ಲಾ ಸೇರಿ ಮೈಸೂರಿನ ಸಂಪನ್ಮೂಲಗಳನ್ನು ಬ್ರಿಟಿಷರೂ ಸೇರಿದಂತೆ ಹೊರಗಿನವರು ಕೊಳ್ಳೆ ಹೊಡೆಯಲು ಅನುವು ಮಾಡಿಕೊಡುತ್ತಿದ್ದರೆಂದು ಆಪಾದಿಸಲಾಗುತ್ತಿತ್ತು. ಮೈಸೂರಿಗರು ಕೇವಲ ಈ ವಿಷಯಗಳ ಬಗ್ಗೆ ಮಾತ್ರ ಮಾತನಾಡುತ್ತಿದ್ದರೆಂದಲ್ಲ. ಯುರೋಪಿಯನ್ನರು ಭಾರತೀಯರನ್ನು ಕೀಳಾಗಿ ಕಾಣುತ್ತಿದ್ದರು. ಅನಿವಾಸಿ ಭಾರತೀಯರ ಕಷ್ಟ ಕಾರ್ಪಣ್ಯಗಳು, ಕಾಂಗ್ರೆಸ್ ಸಂಸ್ಥೆ ಮುಂತಾದ ವಿಷಯಗಳ ಬಗ್ಗೆ ಅವರು ಇತರ ರಾಷ್ಟ್ರೀಯವಾದಿಗಳಂತೆಯೇ ಅಭಿಪ್ರಾಯ ವ್ಯಕ್ತಪಡಿಸುತ್ತಿದ್ದರು. ಆದರೆ ಅವರು ಬದುಕುತ್ತಿದ್ದ ಸಂದರ್ಭ ಮತ್ತು ಎದುರಿಸಬೇಕಿದ್ದ ಸಮಸ್ಯೆಗಳು ವಿಶಿಷ್ಟವಾಗಿದ್ದು, ಹಲವು ಬಾರಿ ಬ್ರಿಟಿಷ್ ಪ್ರಾಂತ್ಯದ ರಾಷ್ಟ್ರೀಯವಾದಿಗಳಿಗಿಂತ ತೀರಾ ಭಿನ್ನವಾದ, ಕೆಲವೊಮ್ಮೆ ವಿರುದ್ಧವಾದ ನಿಲುವುಗಳನ್ನು ತಳೆಯುತ್ತಿದ್ದರು.

ಉದಾಹರಣೆಗೆ ಬ್ರಿಟಿಷ್ ಪ್ರಾಂತ್ಯದವರು ಐ.ಸಿ.ಎಸ್. ಪರೀಕ್ಷೆಗಳನ್ನು ತಮ್ಮ ಪ್ರಾಂತ್ಯಗಳ ಅಭ್ಯರ್ಥಿಗಳಿಗೆ ಮಾತ್ರ ಸೀಮಿತಗೊಳಿಸಬೇಕು. ದೇಶೀ ಸಂಸ್ಥಾನದವರಿಗೆ ಕೂಡದು ಎನ್ನುತ್ತಿದ್ದರೆ, ಮೈಸೂರಿನವರು, ಮೈಸೂರಿನಲ್ಲಿ ಹೊರಗಿನವರಿಗೆ ಅವಕಾಶ ಕೊಡಕೂಡದೆನ್ನುತ್ತಿದ್ದರು. ಹಾಗೆಯೇ ಇಂಪೀರಿಯಲ್ ಲೆಜಿಸ್ಲೇಟೀವ್ ಕೌನ್ಸಿಲ್‌ನ ಸದಸ್ಯತ್ವದ ಬಗ್ಗೆಯೂ ವಿವಾದವಿತ್ತು.

8) ಮೈಸೂರು ಅರಸೊತ್ತಿಗೆ ಈ ಬೆಳವಣಿಗೆಗೆ ತನ್ನದೇ ಆದ ಕೊಡುಗೆ ನೀಡಿತು. ಕ್ರಮೇಣ ಈ ಬೆಳವಣಿಗೆಗಳು ಹೊಸ ವಿವಾದವೊಂದನ್ನು ಸೃಷ್ಟಿ ಮಾಡಿದವು. ಈ ವಿವಾದಕ್ಕೆ ಉದಾರವಾದಿ ಜನತಾಂತ್ರಿಕ ಆಯಾಮವೊಂದಿತ್ತು. ಏಕೆಂದರೆ ಶೂದ್ರ ಸಮುದಾಯದವರಿದ್ದ ಈ ಗುಂಪು ಅಧಿಕಾರ ಸ್ಥಾನಗಳು, ಶಿಕ್ಷಣ ಎಲ್ಲರಿಗೂ ದೊರೆಯಬೇಕೆಂಬ ಜನತಾಂತ್ರಿಕ ಬೇಡಿಕೆಯನ್ನಿಟ್ಟಿತು. ಒಂದು ಚಳವಳಿಯಾಗಿ ಮಾರ್ಪಟ್ಟಿತು. ಈ ಚಳವಳಿಯನ್ನು ಬ್ರಾಹ್ಮಣೇತರ ಚಳವಳಿ, ಹಿಂದುಗಳ ವರ್ಗಗಳ ಚಳವಳಿ, ಬ್ರಾಹ್ಮಣ ವಿರೋಧಿ ಚಳವಳಿ ಹೀಗೆ ಹಲವಾರು ಹೆಸರುಗಳಿಂದ ಚರ್ಚಿಸಲಾಗುತ್ತಿದೆ. ಮೈಸೂರಿನ ಈ ಚಳವಳಿ 1915–1930ರ ಅವಧಿಯಲ್ಲಿ ಸಂಸ್ಥಾನದ ಆಡಳಿತ ಮತ್ತು ರಾಜಕೀಯದ ಮೇಲೆ ತೀವ್ರತರ ಪ್ರಭಾವ ಬೀರಿತು. ಈ ಚಳವಳಿಯ ಒಂದು ಸಾಧನೆಯೆಂದರೆ ಶಿಕ್ಷಣ ಮತ್ತು ಸರ್ಕಾರಿ ಸೇವೆಯ ಮೇಲೆ ಬ್ರಾಹ್ಮಣ ಕೋಮು ಹೊಂದಿದ್ದ ಏಕಸ್ವಾಮ್ಯವನ್ನು ಕೊನೆಗಾಣಿಸಿದ್ದು, ಎಲ್ಲಿಯವರೆಗೆ ಈ ಚಳವಳಿ ತಮ್ಮ ಅಧಿಕಾರವನ್ನು ಗಂಭೀರವಾಗಿ ಪ್ರಶ್ನಿಸಲಿಲ್ಲವೋ ಅಲ್ಲಿಯವರೆಗೆ ಮೈಸೂರು ಸರ್ಕಾರ ಅದರ ಬೇಡಿಕೆಗಳ ಬಗ್ಗೆ ಸಹಾನುಭೂತಿ ತೋರಿ ಹಲವು ಬೇಡಿಕೆಗಳನ್ನು ಈಡೇರಿಸಿತು. ಕಾಂಗ್ರೆಸ್ಸಿನ ನಾಗಪುರ ಅಧಿವೇಶನದ ತರುವಾಯ ಮೈಸೂರಿನಲ್ಲಿ ಕಾಂಗ್ರೆಸ್ ಸಮಿತಿಯೊಂದು ಅಸ್ತಿತ್ವಕ್ಕೆ ಬಂತು. ಆದರೆ ಈ ಸಮಿತಿ ಬಹುಸಂಖ್ಯಾತ ಬ್ರಾಹ್ಮಣೇತರರ ಬೇಡಿಕೆಗಳ ಬಗ್ಗೆ ಉದಾಸೀನವಾಗಿತ್ತು. ಆಗಾಗ ಅವರಲ್ಲಿ ಯಾರಾದರೂ ಮಾತನಾಡಿದರೆ ಅದು ಶೂದ್ರರ ಬೇಡಿಕೆಗಳ ವಿರುದ್ಧವಾಗಿಯೇ ಇತ್ತು. ಆದ್ದರಿಂದ ಬ್ರಾಹ್ಮಣೇತರರು ಮೈಸೂರಿನ ಕಾಂಗ್ರೆಸ್ ಸಂಸ್ಥೆಯ ಬಗ್ಗೆ ತಿರಸ್ಕಾರ ಮನೋಭಾವ ತಾಳಿದರು. ಕೆಲವು ನಿವೃತ್ತ ಬ್ರಾಹ್ಮಣ ಅಧಿಕಾರಿಗಳು ಮತ್ತು ಹತ್ತಾರು ಜನ ಬ್ರಾಹ್ಮಣ ಯುವಕರು ಮಾತ್ರ ಅಲ್ಲಿದ್ದರು. ರಾಷ್ಟ್ರೀಯ ಕಾಂಗ್ರೆಸ್ಸು, ಸಂಸ್ಥಾನಿ ಕಾಂಗ್ರೆಸ್, ತನ್ನ ಸರ್ಕಾರದ ವಿರುದ್ಧ ಯಾವುದೇ ಚಳವಳಿ ಮಾಡಕೂಡದೆಂದು ತೀರ್ಮಾನಿಸಿದ್ದು ಮೈಸೂರು ಕಾಂಗ್ರೆಸ್ಸಿಗರಿಗೆ

ವರದಾನವೇ ಆಯಿತು. ಯಾಕೆಂದರೆ ಅಲ್ಲಿ ಸದಸ್ಯರಾಗಲಿ, ಸಂಪನ್ಮೂಲವಾಗಲಿ ಲಭ್ಯವಾಗುವುದು ದುಸ್ತರವಾಗಿತ್ತು.

9) ಈ ಮಧ್ಯೆ ಭಾರತ ಸರ್ಕಾರ 1935ರ ಕಾಯ್ದೆಯನ್ನು ಪ್ರಕಟಿಸಿತು. ಪ್ರಾಂತೀಯ ಮಟ್ಟದಲ್ಲಿ ಜವಾಬ್ದಾರಿ ಸರ್ಕಾರಗಳಿಗೆ ಅಧಿಕಾರ ವರ್ಗಾವಣೆಯಾಗಲಿತ್ತು. ಉದ್ದೇಶಿತ ಒಕ್ಕೂಟ (Federation)ದ ಸದಸ್ಯತ್ವದಲ್ಲಿ 1/3 ಭಾಗ ದೇಶೀ ಸಂಸ್ಥಾನಗಳಿಂದ ಇರಬೇಕು. ಈ ಸದಸ್ಯರನ್ನು ಅಲ್ಲಿಯ ಸರ್ಕಾರಗಳೇ ನಾಮಕರಣ ಮಾಡುತ್ತವೆ. ಜನರಿಂದ ಆಯ್ಕೆಯಾಗಬೇಕಾಗಿಲ್ಲ. ಸಂಸ್ಥಾನಗಳಲ್ಲಿನ ಸರ್ಕಾರದ ಸ್ವರೂಪದ ಬಗ್ಗೆ ಅಲ್ಲಿ ಯಾವುದೇ ಪ್ರಸ್ತಾಪವಿರಲಿಲ್ಲ. ಈ ಸಂಗತಿಗಳು ಸಂಸ್ಥಾನಿಗರೆಲ್ಲರಿಗೂ ಗಾಬರಿಯುಂಟುಮಾಡಿದವು. ರಾಷ್ಟ್ರೀಯ ಚಳುವಳಿಯ ಮುಂದಾಳುಗಳೂ ಸಂಸ್ಥಾನಿ ಭಾರತದ ಭವಿಷ್ಯ ಮತ್ತು ಅದು ಇಡೀ ವಸಾಹತು ವಿರೋಧಿ ಚಳುವಳಿಯ ಮೇಲೆ ಮಾಡಬಲ್ಲ ದುಷ್ಪರಿಣಾಮದ ಬಗ್ಗೆ ಚಿಂತಿತರಾದರು. ಭಾರತ ಒಕ್ಕೂಟದ ಸಂಸತ್ತಿನಲ್ಲಿ ದೇಶೀ ಸಂಸ್ಥಾನಗಳಿಂದ ಬರುವ ನಾಮಕರಣಗೊಂಡ ಸದಸ್ಯರುಗಳು ಬ್ರಿಟಿಷರ ಪರವೇ ಇರುವುದು ಖಚಿತವಾಗಿದ್ದುದರಿಂದ, ಸಂಸತ್ತು ಬ್ರಿಟಿಷರ ಅಡಿಯಾಳಾಗಿರುವುದು ಗ್ಯಾರಂಟಿ. ಅದನ್ನು ತಪ್ಪಿಸಬೇಕಾದರೆ ಸಂಸ್ಥಾನಗಳ ಸದಸ್ಯರೂ ಜನರಿಂದ ಆಯ್ಕೆಯಾದವರಾಗಬೇಕು.

10) 1937ರಲ್ಲಿ ಬ್ರಿಟಿಷ್ ಪ್ರಾಂತ್ಯಗಳ ಪ್ರತಿನಿಧಿ ಸಭೆಗಳಿಗೆ ಚುನಾವಣೆ ನಡೆದು, ಜನಪ್ರತಿನಿಧಿಗಳ ಸರ್ಕಾರ ಅಸ್ತಿತ್ವಕ್ಕೆ ಬಂದು ಭಾರತೀಯರೇ ಅಧಿಕಾರ ವಹಿಸಿಕೊಂಡರು. ಕಾಂಗ್ರೆಸ್ಸಿನ ಬೆರಳೆಣಿಕೆಯಷ್ಟು ಮಂದಿಗೂ, ಬಹುಸಂಖ್ಯಾತ ಬ್ರಾಹ್ಮಣೇತರ ಪಕ್ಷದವರಿಗೂ, ಇದು ಒಂದು ದೊಡ್ಡ ಪಾಠವನ್ನು ಕಲಿಸಿತು. ಬ್ರಿಟಿಷ್ ಭಾರತದಲ್ಲಿ ಅದು ಸಾಧ್ಯವಾದದ್ದು ಅಲ್ಲಿಯ ನಾಯಕರು ಕಾಂಗ್ರೆಸ್ ನೇತೃತ್ವದಲ್ಲಿ ಜನರನ್ನು ಸಂಘಟಿಸಿ ಹೋರಾಟ ನಡೆಸಿದ್ದರಿಂದ.

11) ಅಲ್ಲಿಯವರೆಗೆ ಅಬಲೆಯಂತಿದ್ದ ರಾಜ್ಯ ಕಾಂಗ್ರೆಸ್ ಸಬಲವಾಗಿ ಮೈಸೂರು ಕಾಂಗ್ರೆಸ್ಸಾಗಿ ಪರಿವರ್ತಿತವಾದದ್ದು 15 ಅಕ್ಟೋಬರ್, 1937ರಂದು ಅಂದಿನಿಂದಲೂ ಸಂಸ್ಥಾನದಲ್ಲಿ ಒಂದಿಲ್ಲೊಂದು ಸತ್ಯಾಗ್ರಹ, ಹರತಾಳ, ಮುಷ್ಕರಗಳು ನಡೆದವು. ಬಹಿರಂಗ ಸಭೆಗಳು ನಡೆದು ಸರ್ಕಾರವನ್ನು ಕಟುವಾಗಿ ಟೀಕಿಸಲಾಯಿತು. ಇವೆಲ್ಲಕ್ಕೂ ಸರ್ಕಾರದ ಒಂದೇ ಉತ್ತರವೆಂದರೆ, ದಮನ. ಸಾವಿರಾರು ಮಂದಿಯನ್ನು ಜೈಲಿಗೆ ತಳ್ಳಲಾಯಿತು, ನೂರಾರು ಮಂದಿಯನ್ನು ಗೋಲಿಬಾರ್ ಮಾಡಿ ಕೊಲ್ಲಲಾಯಿತು.

12) 1938ರ ತ್ರಿಪುರ ಕಾಂಗ್ರೆಸ್, ಸಂಸ್ಥಾನಿ ಪ್ರಜೆಗಳ ಚಳವಳಿಯನ್ನು ಬೆಂಬಲಿಸಿತು. ಆದರೆ ರಾಷ್ಟ್ರೀಯ ಕಾಂಗ್ರೆಸ್ಸಿನ ಹೆಸರನ್ನು ಬಳಸುವುದನ್ನು ನಿಷೇಧಿಸಿತು. ಮೈಸೂರಿನವರು ತಮ್ಮದೇ ಆದ ಮೈಸೂರು ಕಾಂಗ್ರೆಸ್ಸನ್ನು ಸ್ಥಾಪಿಸಿಕೊಂಡು, ಅದರ ಮೊದಲ ಅಧಿವೇಶನವನ್ನು ಏಪ್ರಿಲ್ 1938ರಲ್ಲಿ ಸಂಘಟಿಸಿದರು. ಕಾಂಗ್ರೆಸ್ ಧ್ವಜಾರೋಹಣವನ್ನು ನಿಷೇಧಿಸುವ ಮೂಲಕ ಮೈಸೂರು ಸರ್ಕಾರ ತನ್ನ ವಿರೋಧವನ್ನು ವ್ಯಕ್ತಪಡಿಸಿತು. ನಿಷೇಧಾಜ್ಞೆಯನ್ನು ಮುರಿದು ಧ್ವಜಾರೋಹಣ ಮಾಡುವ ಮೂಲಕ ಕಾಂಗ್ರೆಸ್ಸಿಗರು ಪ್ರತಿಭಟಿಸಿದರು. ಧ್ವಜ ಸತ್ಯಾಗ್ರಹವೆಂದು ಜನಪ್ರಿಯವಾದ ಈ ಚಳವಳಿ ಅಲ್ಲಿಗೆ ನಿಲ್ಲದೆ ರಾಜ್ಯವ್ಯಾಪ್ತಿಯಾಯಿತು.

13). ಮೈಸೂರಿನ ಕ್ವಿಟ್ ಇಂಡಿಯಾ ಚಳುವಳಿಯ ಅಂಗವಾಗಿ ನಡೆದ ಮಹತ್ತರ ಘಟನೆಯೆಂದರೆ ಈಸೂರಿನ ದುರಂತ. ಈಸೂರು ಶಿವಮೊಗ್ಗ ಜಿಲ್ಲೆಯ ಒಂದು ಕುಗ್ರಾಮ. ಆಗ ಸರಿಯಾದ ರಸ್ತೆ ಸಂಪರ್ಕವೂ ಇರಲಿಲ್ಲ. ಅಲ್ಲಿಯ ಕೆಲವು ರೈತರಿಗೆ ಗಾಂಧೀಜಿ ಹೆಸರು ತಿಳಿದಿತ್ತು. ಪ್ರಾಥಮಿಕ ಶಾಲೆಯ ಮಕ್ಕಳೇ ಅಲ್ಲಿ ನಡೆದ ಘಟನೆಯಲ್ಲಿ ಪಾತ್ರಧಾರಿಗಳು. ಚಳುವಳಿಯ ಅಂಗವಾಗಿ, ಬೇಜವಾಬ್ದಾರಿ ಸರ್ಕಾರಕ್ಕೆ ಪರ್ಯಾಯವಾಗಿ ತಮ್ಮದೇ ಆದ ಜವಾಬ್ದಾರಿ ಸರ್ಕಾರವನ್ನು ರಚಿಸಿಕೊಂಡರು.

ಸರ್ಕಾರಿ ಅಧಿಕಾರದ ಸಂಕೇತಗಳಾದ ಊರಿನ ಶಾನುಭೋಗ ಮತ್ತು ಪಟೇಲರಿಂದ ಅವರ ಕಡತಗಳನ್ನು ಕಸಿದುಕೊಂಡು ಅವರಿಬ್ಬರೂ ತಮ್ಮ ಕೆಲಸಕ್ಕೆ ರಾಜೀನಾಮೆ ಕೊಟ್ಟು ಖಾದಿ ಬಟ್ಟೆ ತೊಡುವಂತೆ ತಾಕೀತು ಮಾಡಲಾಯಿತು. ಅಷ್ಟು ದಿನ ಅವರು ಬೇಜವಾಬ್ದಾರಿ ಸರ್ಕಾರದ ಊಳಿಗದಲ್ಲಿದ್ದುದಕ್ಕೆ ಛೀಮಾರಿ ಹಾಕಿ ಅವಮಾನ ಪಡಿಸಲಾಯಿತು. ಸುದ್ದಿ ಕೇಳಿ ಸರ್ಕಾರದ ಅಧಿಕಾರವನ್ನು ಪುನರ್ ಸ್ಥಾಪಿಸಲು ಈಸೂರಿಗೆ ಹೋದ ತಹಶೀಲ್ದಾರ್, ಸಬ್ ಇನ್ಸ್‌ಪೆಕ್ಟರ್ ಮತ್ತವರ ಸಿಬ್ಬಂದಿಯನ್ನು ಕೊಲ್ಲಲಾಯಿತು. ಇಡೀ ಘಟನೆ ಎಂಥ ಗಂಭೀರ ಸ್ವರೂಪ ಪಡೆಯಿತೆಂದರೆ, ಸರ್ಕಾರ ಅರೆ-ಮಿಲಿಟರಿ ಪಡೆಯನ್ನು ಕಳಿಸಿ ಪರಿಸ್ಥಿತಿಯನ್ನು ಹತೋಟಿಗೆ ತರಬೇಕಾಯಿತು. ಕರ್ನಾಟಕದಲ್ಲೇ ಏಕೆ, ಇಡೀ ಭಾರತದ ಸ್ವಾತಂತ್ರ್ಯ ಚಳುವಳಿಯಲ್ಲಿಯೇ ಇಂಥದೊಂದು ಘಟನೆ, ಒಂದು ಕುಗ್ರಾಮದಲ್ಲಿ ನಡೆದುದಕ್ಕೆ ದಾಖಲೆಯಿಲ್ಲ. ಸರ್ಕಾರಿ ಪಡೆಗಳು ಈಸೂರು ಮತ್ತು ಸುತ್ತಮುತ್ತ ಭೀಕರ ತಾಂಡವ ನೃತ್ಯ

ನಡೆಸಿದವು. ಇಡೀ ಗ್ರಾಮವನ್ನು ದರೋಡೆ ಮಾಡಲಾಯಿತು. ಹೆಂಗಸರು ಮಾನಭಂಗಕ್ಕೆ ಒಳಗಾದರು. ವೃದ್ಧರು, ಎಳೆಯರನ್ನು ಬಿಡದೆ ಎಲ್ಲರನ್ನೂ ಕ್ರೂರವಾಗಿ ಹಿಂಸಿಸಲಾಯಿತು.

14) ಸರ್ಕಾರ ಮತ್ತು ಕಾಂಗ್ರೆಸ್ ಎರಡೂ ಗಾಬರಿಯಾದವು. ಘಟನೆಯ ಬಗ್ಗೆ ವಿಚಾರಣೆ ನಡೆಸಲು ವಿಶೇಷ ನ್ಯಾಯಾಧೀಶರನ್ನು ನೇಮಿಸಲಾಯಿತು. ತೀರ್ಪಿನ ಪ್ರಕಾರ ಐವರನ್ನು ಗಲ್ಲಿಗೇರಿಸಿ, ಹಲವು ಮಹಿಳೆಯರೂ ಸೇರಿದಂತೆ ಇಪ್ಪತ್ತು ಜನರಿಗೆ ಜೀವಾವಧಿಯಿಂದ ಹತ್ತು ವರ್ಷಗಳವರೆಗೆ ಕಠಿಣ ಶಿಕ್ಷೆ ವಿಧಿಸಲಾಯಿತು.

ವಸಾಹತುಕಾಲದ ಬ್ರಿಟಿಷ್ ಅಧಿಕಾರವು ಮೈಸೂರು ಸಂಸ್ಥಾನದ ಮೇಲೆ ಯಾವೆಲ್ಲಾ ಪರಿಣಾಮವನ್ನು ಬೀರಿದೆಯೆಂದು ಎಸ್. ಚಂದ್ರಶೇಖರ್ ಸವಿವರವಾದ ಚರ್ಚೆಯನ್ನು ಮಾಡಿದ್ದಾರೆ. (2006, ಪು. 18–46)

ವಸಾಹತು ಕಾಲದಲ್ಲಿ ಬ್ರಿಟೀಶರ ಆಡಳಿತಾತ್ಮಕ ವ್ಯವಸ್ಥೆಯು ಹೇಗಿತ್ತು ಎನ್ನುವುದಕ್ಕೆ ಈ ಕೆಳಗಿನ ಮಾದರಿಗಳನ್ನು ಗುರುತಿಸಬಹುದು.

1858ರಲ್ಲಿ ಕಾರ್ಯದರ್ಶಿಯೆಂಬ ಸಚಿವನು ಸಿದ್ಧನಾದ ಮೇಲೆ ಭಾರತ ವರ್ಷದ ಸ್ವಾಮ್ಯವನ್ನು ಪಾರ್ಲಿಮೆಂಟೇ ವಹಿಸಿದ ಹಾಗೆ ಆಯಿತು. ಅಂದಿನಿಂದ ಕಾರ್ಯದರ್ಶಿಯೆಂಬಾತನೇ ಭಾರತೀಯ ರಾಷ್ಟ್ರ ಭಾರತದಲ್ಲಿ ಸರ್ವಾಧಿಕಾರಿ. 1919ರಲ್ಲಿ ನಡೆದ ಭಾರತೀಯ ರಾಷ್ಟ್ರ ನಿರ್ವಾಹದ ವಿದಿಗೆ ಅನುಸಾರವಾಗಿ ಆತನ ಅಧಿಕಾರವೂ ಕರ್ತವ್ಯವೂ ನಿಷ್ಕೃಷ್ಟವಾಗಿ ಈಗ ನಡೆಯುತ್ತಲಿದೆ. 1919ರಲ್ಲಿ ನಡೆದ ಮಾರ್ಪಾಟುಗಳು ಎರಡೇ. ಕಾರ್ಯದರ್ಶಿಯ ವೇತನವನ್ನು ಅದುವರೆಗೂ ಭಾರತೀಯ ರಾಷ್ಟ್ರಕೋಶದಿಂದಲೇ ಒದಗಿಸಬೇಕಾಗಿತ್ತು. ಅಂದಿನಿಂದ ಸಂಯುಕ್ತ ರಾಜ್ಯದ ಹುಟ್ಟುವಳಿಯಿಂದಲೇ ಒದಗಬೇಕೆಂದು ನಿಶ್ಚಯವಾಯಿತು. ಮತ್ತು ಆತನಿಗೆ ಸಹಾಯಾರ್ಥವಾಗಿ ಹೈಕಮಿಷನರ್ ಎಂಬ ಹೊಸ ಹುದ್ದೆಯೊಂದು ನಿರ್ಮಿತವಾಯಿತು. ಪತಿಗಳು ಎಲ್ಲರೂ ಆತನ ಅಧೀನರಾಗಿಯೇ ಇರುತ್ತಾರೆ. ಆತನು ಪಾರ್ಲಿಮೆಂಟಿಗೆ ಎಲ್ಲ ಆಡಳಿತದ ವಿಷಯಗಳಲ್ಲಿಯೂ ಉತ್ತರವಾದಿಯೆಂಬಂಶವು ಮುಖ್ಯವಾದುದು.

ಆಡಳಿತದ ಮೇಲ್ವಿಚಾರಣೆಯ ಸಮಸ್ತಾಧಿಕಾರವೂ ಕಾರ್ಯದರ್ಶಿಯ ಹಸ್ತಗತವಾಗಿದೆಯೆಂಬುದರ ವಿವರವನ್ನು ತಿಳಿಯಲು ಆತನ ಅಧಿಕಾರಕ್ಷೇತ್ರವನ್ನು 1) ಆಳ್ವಿಕೆಯ ಭಾಗ, 2) ಆಯವ್ಯಯದ ಭಾಗ, 3) ಶಾಸನ ಭಾಗಗಳೆಂದು ಮೂರಾಗಿ ವಿಭಾಗಿಸಿಕೊಂಡು ಕಾಣಬೇಕು.

ಕಾರ್ಯದರ್ಶಿಯ ಕಾರ್ಯಾಲಯವು ಲಂಡನ್ನಿನಲ್ಲಿದೆ. ಆತನು ಲಂಡನ್ನಿನಲ್ಲಿಯೇ ಇರತಕ್ಕವನು. ಭರತ ವರ್ಷಕ್ಕೆ ಬರುವುದು ಅಪರೂಪ. ಇಂಡಿಯ ಆಫೀಸೆಂಬುದು ಆತನ ಕಾರ್ಯಾಲಯಕ್ಕೆ ರೂಢಿಯಾದ ಹೆಸರು. ವೈಟ್‌ಹಾಲ್ ಮತ್ತು ಇಂಡಿಯ ಹೌಸ್ ಎಂಬ ಎರಡು ಕಟ್ಟಡಗಳಲ್ಲಿ ಕಾರ್ಯದರ್ಶಿ, ಕಮೀಷನರ್ ಇಬ್ಬರೂ ತಮ್ಮ ಕಾರ್ಯಕಲಾಪಗಳನ್ನು ನಡೆಸುತ್ತಾರೆ. ಕಮಿಷನರ್ ಪದವಿಯಲ್ಲಿ ಭಾರತೀಯನೇ ಇರುತ್ತಾನೆ ; ಆತನ ಕೆಲಸವು ನಿಯೋಗಿತನದ ಕೆಲಸವೇ ಆಗಿರುತ್ತದೆ.

ಕಾರ್ಯದರ್ಶಿಯ ಸಹಾಯಕ್ಕೆ ಮಂತ್ರಾಲೋಚಕವಾದ ಸಭೆಯೊಂದಿದೆ. ಆ ಸಭೆಗೇ ಇಂಡಿಯ ಕೌನ್ಸಿಲ್ ಎಂದು ಹೆಸರು. ಆ ಸಭೆಯಲ್ಲಿ 8 ರಿಂದ 12ರ ವರೆಗೂ ಸದಸ್ಯರಿರುತ್ತಾರೆ. ಅವರಲ್ಲಿ ಮೂವರು ಭಾರತೀಯರೇ ಆಗಿರುತ್ತಾರೆ ; ಉಳಿದವರನ್ನು ಗೊತ್ತು ಮಾಡುವ ಸಂದರ್ಭದಲ್ಲಿ ಭಾರತ ವರ್ಷದ ಅನುಭವ ಪಡೆದವರನ್ನೇ ಆರಿಸತಕ್ಕುದೆಂಬ ನಿಯಮವಿದೆ.

ಭರತ ವರ್ಷದಲ್ಲಿ ನಡೆಯುವ ಎಲ್ಲಾ ಸರ್ಕಾರಗಳ ಮೇಲ್ವಿಚಾರಣೆಯನ್ನು ನಡೆಸುವ ಅಧಿಕಾರವನ್ನಲ್ಲದೆ ಕಾರ್ಯದರ್ಶಿಯು ಇತರ ವಿಷಯಗಳಲ್ಲಿಯೂ ಅಧಿಕಾರಪಟ್ಟವನ್ನು ಪಡೆದವನು. ಯುದ್ಧವನ್ನಾರಂಭಿಸುವುದೂ ನಿಲ್ಲಿಸುವುದೂ ಆತನ ಕಯ್ಯಲ್ಲಿಯೇ ಇರತಕ್ಕದ್ದು. ಡುಮಿನಿಯನ್ನುಗಳೊಡನೆ ಅಥವಾ ಸಾಮ್ರಾಜ್ಯದ ಇತರ ಭಾಗಗಳೊಡನೆ ಭಾರತೀಯ ಸಂಬಂಧಗಳೇನಿದ್ದರೂ ಆತನ ಮೂಲಕವೇ ನಡೆಯತಕ್ಕದ್ದು.

ಪಾರ್ಸೀಸ್ಥಾನದ ಎಲ್ಲೆಯಿಂದ ಸಯಾಂ ದೇಶದ ಎಲ್ಲಯರವರೆಗೂ ಮತ್ತು ಸೇತುವಿಂದ ಹಿಮಾಚಲದ ವರೆಗೂ ಇರುವ ವಿಶಾಲವಾದ ಕ್ಷೇತ್ರಕ್ಕೆ ಅಧಿಪತಿಯಾದಾತನು ವೈಸ್‌ರಾಯ್ ಮತ್ತು ಗವರ್ನರ್ ಜನರಲ್ ಎಂಬ ಹೆಸರುಗಳನ್ನು ಧರಿಸಿರುತ್ತಾನೆ. ಮುಘಲ್ ಬಾದಷಾಹಿಯ ತರುವಾಯ ಈತನೇ ಮಯೂರ ಸಿಂಹಾಸನಾಧಿಪತಿಯೆಂಬ ಮಾತು ಎರಡು ವಿಧವಾಗಿ ತಪ್ಪಾದರೂ ಒಂದು ನಿಜಾಂಶವನ್ನು ಸೂಚಿಸತಕ್ಕದ್ದು.

ವೈಸ್‌ರಾಯ್ ಎನಿಸಿದಾತನು ಭರತ ವರ್ಷಕ್ಕೆ ಸಮ್ರಾಟನಾದ ಇಂಗ್ಲೆಂಡಿನ ದೊರೆಯ ಪ್ರತಿನಿಧಿ ಮಾತ್ರವೇ ಅಲ್ಲ; ಸಂಯುಕ್ತ ರಾಜ್ಯದ ಪಾರ್ಲಿಮೆಂಟ್ ಮತ್ತು ಕ್ಯಾಬಿನೆಟ್ ಎಂಬುವುಗಳ ನಿಯೋಗಿಯೂ ಆಗಿ ಸಂಯುಕ್ತ ರಾಜ್ಯದ ಪ್ರತಿನಿಧಿಯೂ ಆಗಿರುತ್ತಾನೆ. ಗವರ್ನರ್ ಜನರಲ್ ಎಂದರೆ ಗವರ್ನರುಗಳಲ್ಲಿ ಶ್ರೇಷ್ಠನೂ ಅಗ್ರ ಗಣ್ಯನೂ ಎನಿಸಿದಾತನು ಆತನೇ.

ವಾರನ್ ಹೇಸ್ಟಿಂಗ್ಸ್ ಎಂಬಾತನು ಗವರ್ನರ್ ಜನರಲ್‌ರಲ್ಲಿ ಮೊದಲನೆ ಯವನಾಗಿದ್ದನು. ವೈಸ್‌ರಾಯಿಗಳಲ್ಲಿ ಲಾರ್ಡ್ ಕ್ಯಾನಿಂಗೆಂಬಾತನು ಮೊದಲನೆ

ಯವನಾಗಿದ್ದನು. 1858ರಿಂದ ಅಥವಾ ಲಾರ್ಡ್ ಕ್ಯಾನಿಂಗ್ ಕಾಲದಿಂದ ವೈಸ್‌ರಾಯ್ ಮತ್ತು ಗವರ್ನರ್ ಜನರಲ್ ಪದವಿಗಳೆರಡೂ ಏಕೀಭೂತವಾದವು. ಅಂದಿನಿಂದಲೂ ವೈಸ್‌ರಾಯ್‌ಯು ಸಹಾಯಕ ಸಭೆಯೊಂದನ್ನು ಪಡೆದಿದ್ದೇ ರಾಷ್ಟ್ರಭಾರವನ್ನು ನಡೆಸುತ್ತಿದ್ದರೂ ಶಾಸಕ ಸಭೆಯೆಂಬುದು ಪ್ರತ್ಯೇಕವಾಗಿರಲಿಲ್ಲ. ಶಾಸಕ ಸಭೆಯು ರೂಪುಗೊಂಡ ವಿವರವು ಇತಿಹಾಸಕ್ಕೆ ಸೇರಿದ್ದು. ಈಗ ನಡೆಯುತ್ತಲಿರುವ ಶಾಸಕಾಂಗ ಕಾರ್ಯಾಂಗಗಳು 1919ನೆ ಇಸವಿಯ ಭಾರತೀಯ ರಾಷ್ಟ್ರರಚನೆಯ ವಿಧಿಗೆ ಅನುಸಾರವಾಗಿ ನಡೆಯುತ್ತವೆ.

1919ನೆ ಇಸವಿಯ ವಿಧಿಯಲ್ಲಿ ಆಡಳಿತದ ವಿಷಯಗಳನ್ನು ಎರಡು ಭಾಗವಾಗಿ ಮಾಡಿದೆ. ಆ ವಿಭಾಗದಲ್ಲಿ ಸೆಂಟ್ರಲ್ ವಿಷಯಗಳು ಅಥವಾ ಅಖಿಲ ಭಾರತ ರಾಷ್ಟ್ರದ ಕರ್ತವ್ಯಗಳು ಕ್ರೋಢೀಕೃತವಾಗಿವೆ. ಅವುಗಳಲ್ಲಿ ಮುಖ್ಯವಾದವು ಮಾತ್ರ ಇವು :

1 ರಕ್ಷಣೆ ಅಂದರೆ ಭೂ ಸೈನ್ಯ, ಜಲ ಸೈನ್ಯ, ಆಕಾಶ ಸೈನ್ಯಗಳ ಆಡಳಿತ

2 ಅನ್ಯದೇಶ ಸಂಬಂಧ ವ್ಯವಹಾರಗಳು.

3 ದೇಶೀಯ ಸಂಸ್ಥಾನಗಳ ಮೇಲ್ವಿಚಾರಣೆ.

4 ಸಂಚಾರ ಸೌಕರ್ಯಗಳು ಅಂದರೆ ರೈಲು, ಕಾಲುವೆ ಮತ್ತು ಆಕಾಶಮಾರ್ಗ ಸಾಧನೆಗಳು.

5 ನೌಕಾಶ್ರಯಗಳು, ಹಡಗುಗಳ ಸಂಚಾರ, ದೀಪಗೃಹ, ಸಮುದ್ರಯಾನ ಸಂಬಂಧವಾದ ಆಡಳಿತ.

6 ಟಪಾಲ್, ತಂತಿ, ಟೆಲಿಫೋನ್ ಮತ್ತು ವೈರ್ಲೆಸ್ ಶಾಖೆಗಳು.

7 ಸುಂಕದ ಶಿಸ್ತು.

8 ನಾಣ್ಯದ ಶಿಸ್ತು, ಟಂಕಸಾಲೆ ಮುಂತಾದವು.

9 ರಾಷ್ಟ್ರೀಯ ಋಣದ ವ್ಯವಹಾರ.

10 ಸಿವಿಲ್ ಲಾ ಅಥವಾ ಮಮತ್ವ ಸಂಬಂಧವಾದ ನ್ಯಾಯವಿಧಿ.

11 ವ್ಯಾಪಾರ, ಲೇವಾದೇವಿ, ಬ್ಯಾಂಕುಗಳು, ಇನ್‌ಷ್ಯೂರೆನ್ಸ್ (ವಿಮೆ).

12 ರಾಷ್ಟ್ರಗ್ರಸ್ತವೆನಿಸಿದ (State Monoplies) ವ್ಯಾಪಾರ ಅಫೀಂ, ಉಪ್ಪು, ಪೆಟ್ರೋಲಿಯಂ, ಮದ್ದಿನ ವಸ್ತುಗಳು.

13 ಉದ್ಯೋಗ ವೃದ್ಧಿ.

14 ಉಗ್ರಾಣ ಮತ್ತು ಲೇಖನ ಸಾಮಗ್ರಿಗಳ ವ್ಯಾಪಾರ.

15 ಶಾಸ್ತ್ರೀಯ ಪರೀಕ್ಷಾ ಶೋಧನೆಗಳು : ಭೂಶೋಧನೆ, ಸಸ್ಯರಾಶಿ ಪರೀಕ್ಷೆ,

ಪ್ರಾಣಿವರ್ಗ ಪರೀಕ್ಷೆ, ಪ್ರಾಕ್ತನ ಪರೀಕ್ಷೆ, ಭೂಮಿಯ ಸರ್ವೆ, ಜನಗಣತಿ, ಅಂತರಿಕ್ಷ ಪರೀಕ್ಷೆ, ಮುಂತಾದವು.

16 ದೇಶಾಂತರ ಗಮನ ಮತ್ತು ವಿದೇಶೀಯರ ಪ್ರವೇಶ.

17 ಬಿರುದು ಮರ್ಯಾದೆಗಳು.

18 ಕ್ಷೇತ್ರ ವಿಭಾಗ ಇತ್ಯಾದಿ.

ಇವುಗಳೆಲ್ಲವೂ ವಿಸ್ತಾರವಾದ ಕಾರ್ಯರಾಶಿಯನ್ನೇ ಸೂಚಿಸುತ್ತವೆ.

ವೈಸ್‌ರಾಯಿ ಮತ್ತು ಶಾಖಾಧ್ಯಕ್ಷರ ತರುವಾಯ ಅಧಿಕಾರಿವರ್ಗದವರಲ್ಲಿ ಮುಖ್ಯರಾದವರ ಗುಂಪಿಗೆ ಇಂಡಿಯನ್ ಸಿವಿಲ್ ಸರ್ವಿಸ್ ಎಂಬ ಹೆಸರುಂಟು. ಮಿಲಿಟರಿ ಅಥವಾ ಯುದ್ಧ ಸಂಬಂಧವಾದವುಗಳಲ್ಲದ ಕರ್ತವ್ಯಗಳನ್ನು ನಿರ್ವಾಹಣೆ ಮಾಡುವ ಅಧಿಕಾರಿಗಳನ್ನು ಸಿವಿಲ್ ಅಧಿಕಾರಿಗಳೆನ್ನುವುದು ವಾಡಿಕೆ.

1924ರಲ್ಲಿ ಲೀ ಸಮಿತಿ (Lee Commission)ಎಂಬ ಒಂದು ವಿಚಾರಣೆಯ ಸಮಿತಿಯವರು ಉದ್ಯೋಗಸ್ಥರ ಸಂಬಳ ಸಾರಿಗೆಗಳನ್ನು, ಒಟ್ಟು ಸಮೂಹದಲ್ಲಿ ಭಾರತೀಯರು ಎಷ್ಟು ಪಾಲಿನವರಾಗಿರಬೇಕೆಂಬುದನ್ನು ಸೂಚಿಸಿದರು. ಭಾರತೀಯ ರಾದವರು ಎಷ್ಟು ಹುದ್ದೆಗಳನ್ನು ಪಡೆಯತಕ್ಕದ್ದೆಂಬ ವಿಚಾರದಲ್ಲಿ ಆ ಸಮಿತಿಯವರು ಈ ರೀತಿ ನಿಷ್ಕರ್ಷೆ ಮಾಡಿದರು.

ಸಿವಿಲ್ ಸರ್ವಿಸ್ ಶೇಕಡ 40 ಭಾಗ ಭಾರತೀಯರು.

ಸಿವಿಲ್ ಸರ್ವಿಸ್ ಶೇಕಡ 40 ಭಾಗ ಹೊಸದಾಗಿ ನಿಯುಕ್ತರಾಗತಕ್ಕ ಐರೋಪ್ಯರು.

ಸಿವಿಲ್ ಸರ್ವಿಸ್ ಶೇಕಡ 20 ಭಾಗ ಪ್ರಾದೇಶಿಕ ವರ್ಗದಿಂದ ಏರತಕ್ಕವರು.

ಪೋಲೀಸ್ ಸರ್ವಿಸ್ ಶೇಕಡ 50 ಭಾಗ ಐರೋಪ್ಯರು.

ಪೋಲೀಸ್ ಸರ್ವಿಸ್ ಶೇಕಡ 50 ಭಾಗ ಭಾರತೀಯರು.

ನೀರಾವರಿ ಯಂತ್ರ ಯೋಜಕರು ಶೇಕಡ 40 ಭಾಗ ಐರೋಪ್ಯರು.

ನೀರಾವರಿ ಯಂತ್ರ ಯೋಜಕರು ಶೇಕಡ 60 ಭಾಗ ಭಾರತೀಯರು.

ಪೊಲಿಟಿಕಲ್ ಅಥವಾ ರಾಜಕೀಯ ಅಧಿಕಾರ, ಸುಂಕದ ಅಧಿಕಾರ, ತಂತಿ ಮತ್ತು ವೈರ್ಲೆಸ್ ಅಧಿಕಾರ ಮುಂತಾದವುಗಳಲ್ಲಿ ಶೇಕಡ 25 ಪಾಲು ಭಾರತೀಯರಿಗೆ ಆಗತಕ್ಕದ್ದು.

ಈ ರೀತಿಯಲ್ಲಿ ಭಾರತೀಯರಿಗೆ ನಿರ್ದಿಷ್ಟವಾದ ಪಾಲು ಈಗಲೇ ಪ್ರಾಪ್ತವಾಗಿಲ್ಲ. ಉತ್ತರೋತ್ತರ ಪ್ರಾಪ್ತವಾಗತಕ್ಕದ್ದು.

ಸೆಂಟ್ರಲ್ ಅಥವಾ ಅಖಿಲ ಭಾರತ ಶಾಸಕಾಂಗವು ಕೌನ್ಸಿಲ್ ಆಫ್ ಸ್ಟೇಟ್ ಮತ್ತು ಲೆಜಿಸ್ಲೇಟಿವ್ ಅಸ್ಸೆಂಬ್ಲಿ ಎಂಬ ಸಭೆಗಳು ಇದ್ದವು.

ವಸಾಹತುಶಾಹಿ ಕಾಲಘಟ್ಟದಲ್ಲಿ ಇಂಡಿಯಾ ಕಛೇರಿಯು ಆರು ಶಾಖೆಗಳಲ್ಲಿ ಕೆಲಸ ಮಾಡುತ್ತಿತ್ತು :

1 ರಾಜ್ಯದ ಆದಾಯ (Finance)

2 ಸೈನಿಕ ವಿಚಾರಗಳು (Military Officers)

3 ರಾಜಕೀಯ ಮತ್ತು ರಹಸ್ಯ ವಿಚಾರಗಳು (Political and Secret Matters)

4 ನ್ಯಾಯ ಮತ್ತು ಸಾರ್ವಜನಿಕ ವಿಚಾರಗಳು (Judicial and Public Matters)

5 ಕಂದಾಯ ಮತ್ತು ಗಣತಿ (Revenue and Statitics)

6 ಸಾರ್ವಜನಿಕ ಕಾರ್ಯಗಳು (Public Works) (ಮಂ.ಅ.ಗೋ., 1929, ಪು. 6).

ಇಲ್ಲಿಯೇ ಈಗಿನ ಕರ್ನಾಟಕ ಸಿವಿಲ್ ಸೇವಾ ನಿಯಮವನ್ನು ಉಲ್ಲೇಖಿಸಬಹುದು: (ಪುಟ. 4, 128)

ದಂಡಗಳ ಸ್ವರೂಪ: ಸಮಂಜಸ ಹಾಗೂ ಸಾಕಷ್ಟು ಕಾರಣಗಳಿಗಾಗಿ ಮತ್ತು ಇಲ್ಲಿ ಇನ್ನು ಮುಂದೆ ಉಪಸಂಬಂಧಿಸಿದಂತೆ, ಸರ್ಕಾರಿ ನೌಕರರ ಮೇಲೆ ಈ ಮುಂದಿನವುಗಳ ಪೈಕಿ ಒಂದು ಅಥವಾ ಹೆಚ್ಚು ದಂಡಗಳನ್ನು ವಿಧಿಸಬಹುದು. ಅವೆಂದರೆ:–

1) ರಾಜ್ಯ ಸಿವಿಲ್ ಸೇವೆ ವರ್ಗ v ಕ್ಕೆ ಸೇರಿದ ಸರ್ಕಾರಿ ನೌಕರರ ಸಂದರ್ಭದಲ್ಲಿ ಜುಲ್ಮಾನೆ:

2) ನಿಂದನೆ;

3) ಬಡ್ತಿಯನ್ನು ತಡೆಹಿಡಿಯುವುದು;

4) ಪದೋನ್ನತಿಯನ್ನು ತಡೆಹಿಡಿಯುವುದು;

iv) ನಿರ್ಲಕ್ಷ್ಯದಿಂದ ಅಥವಾ ಆದೇಶಗಳ ಉಲ್ಲಂಘನೆಯಿಂದ ರಾಜ್ಯ ಸರ್ಕಾರಕ್ಕೆ ಅಥವಾ ಯಾರಿಗೆ ಆ ಅಧಿಕಾರಿಯ ಸೇವೆಯನ್ನು ಎರವಲು ಕೊಡಲಾಗಿದೆಯೋ ಆ ಕೇಂದ್ರ ಸರ್ಕಾರ, ಯಾವುದೇ ಇತರ ರಾಜ್ಯ ಸರ್ಕಾರ, ಯಾವನೇ ವ್ಯಕ್ತಿ, ಸಂಸ್ಥೆ ಅಥವಾ ಪ್ರಾಧಿಕಾರಿಗೆ ಉಂಟಾದ ಯಾವುದೇ ಹಣ ರೂಪದ ನಷ್ಟವನ್ನು ಪೂರ್ಣವಾಗಿ ಅಥವಾ ಭಾಗಶಃ ವೇತನದಿಂದ ವಸೂಲಿ ಮಾಡುವುದು;

iv-P) ನಿರ್ದಿಷ್ಟ ಅವಧಿಯವರೆಗೆ ಕಾಲ ವೇತನ ಪ್ರಮಾಣದಲ್ಲಿ ಕೆಳಗಿನ ಹಂತಕ್ಕೆ ಇಳಿಸುವುದು, ಹಾಗೆ ಇಳಿಸಿದ ಅವಧಿಯಲ್ಲಿ ಸರ್ಕಾರಿ ನೌಕರನು ವೇತನ ಬಡ್ತಿಗಳನ್ನು ಗಳಿಸುವನೆ ಇಲ್ಲವೆ ಮತ್ತು ಅಂಥ ಅವಧಿಯು ಸಮಾಪ್ತವಾದ ಮೇಲೆ ಆ ಇಳಿಕೆಯು

ಅವನ ವೇತನದ ಮುಂದಿನ ಬಡ್ತಿಗಳನ್ನು ಮುಂದಕ್ಕೆ ಹಾಕುವ ಪರಿಣಾಮ ಹೊಂದಿರುವುದೆ ಇಲ್ಲವೆ ಎಂಬ ಬಗ್ಗೆ ಮುಂದಿನ ನಿರ್ದೇಶನಗಳ ಸಮೇತ;

v) ಕಾಲವೇತನ ಪ್ರಮಾಣ, ಗ್ರೇಡು, ಹುದ್ದೆ ಅಥವಾ ಸೇವೆಯ ಕೆಳಗಿನ ಹಂತಕ್ಕೆ ಇಳಿಸುವುದು, ಅಂಥ ಇಳಿಕೆಯು ಅನ್ಯಥಾ ನಿದೇಶಿಸಿದ್ದ ಹೊರತು, ಈ ಮುಂದಿನವುಗಳಿಗೆ ಸಂಬಂಧಿಸಿ ಇನ್ನಷ್ಟು ನಿದೇಶಗಳೊಡನೆ ಅಥವಾ ಇಲ್ಲದೆಯೆ ಆ ಸರ್ಕಾರಿ ನೌಕರನನ್ನು ಯಾವ ಕಾಲವೇತನ ಪ್ರಮಾಣ, ಗ್ರೇಡು, ಹುದ್ದೆ ಅಥವಾ ಸೇವೆಯಿಂದ ಕೆಳಗಿಳಿಸಲಾಯಿತೋ ಅದಕ್ಕೆ ಅವನ ಪದೋನ್ನತಿಯಾಗಲು ತಡೆಯಾಗತಕ್ಕುದು:–

(ಕ) ಸರ್ಕಾರಿ ನೌಕರನನ್ನು ಕೆಳಗಿಳಿಸಿರುವಂಥ ವೇತನ ಶ್ರೇಣಿ, ಗ್ರೇಡು, ಹುದ್ದೆ: ಅಥವಾ ಸೇವೆಯಲ್ಲಿ ಜ್ಯೇಷ್ಠತೆ (ಸೀನಿಯಾರಿಟಿ) ಮತ್ತು ವೇತನ;

(ಖ) ಸರ್ಕಾರಿ ನೌಕರನನ್ನು ಇಳಿಸಿರುವಂಥ ವೇತನ ಶ್ರೇಣಿ, ಗ್ರೇಡು, ಹುದ್ದೆ ಅಥವಾ ಸೇವೆಗೆ ಪುನಃ ಸ್ಥಾಪನೆಯ ಮತ್ತು ಆ ವೇತನ, ಗ್ರೇಡು, ಹುದ್ದೆ ಅಥವಾ ಸೇವೆಯ ಪುನಃ ಸ್ಥಾಪನೆಯ ಮೇರೆಗಿನ ಅವನ ಜ್ಯೇಷ್ಠತೆಯ (ಸೀನಿಯಾರಿಟಿ) ಷರತ್ತುಗಳು;

(vi) ಕಡ್ಡಾಯ ನಿವೃತ್ತಿ;

(vii) ಮುಂದಿನ ನಿಯೋಜನೆಗೆ ಅನರ್ಹತೆಯಾಗದ ಹಾಗೆ ಸೇವೆಯಿಂದ ತೆಗೆದುಹಾಕುವುದು;

(viii) ಮುಂದಿನ ನಿಯೋಜನೆಗೆ ಸಾಮಾನ್ಯವಾಗಿ ಅನರ್ಹತೆಯಾಗತಕ್ಕ ರೀತಿಯಲ್ಲಿ ಸೇವೆಯಿಂದ ವಜಾ ಮಾಡುವುದು;

ಪರಂತು, ಶಿಸ್ತು ಪ್ರಾಧಿಕಾರಿಯ ಆದೇಶದಲ್ಲಿ ನಮೂದಿಸತಕ್ಕ ಪ್ರತಿಕೂಲವಾದ ವಿಶೇಷ ಮತ್ತು ಸಾಕಷ್ಟು ಕಾರಣಗಳು ಇಲ್ಲದಿರುವಾಗ, (vi) ರಿಂದ (viii) ರವರೆಗಿನ ಖಂಡಗಳಲ್ಲಿ ನಿರ್ದಿಷ್ಟಪಡಿಸಿದವುಗಳ ಹೊರತು, ಇತರ ದಂಡವನ್ನು ಭ್ರಷ್ಟಾಚಾರದ ರುಜುವಾತಾದ ಆರೋಪಕ್ಕಾಗಿ ವಿಧಿಸತಕ್ಕುದಲ್ಲ. ಮೇಲಿನ ವಿಷಯಗಳಿಗೂ ಗಾಂಧಿಯವರ ನಿಲುವಿಗೂ ಇರುವ ಸಂಬಂಧಾಂತರ ಗಮನಾರ್ಹ:

> ವ್ಯಾಪಾರದೊಡನೆ ಅನೀತಿಯ ಶಾಶ್ವತ ನಂಟನ್ನು ಒಪ್ಪಲು ಕಾರಣವಾದರೂ ಏನು? ವ್ಯಾಪಾರಿಯನ್ನು ಸದಾ ಸ್ವಾರ್ಥಿಯೆಂದೇ ತಿಳಿಯುವುದು ವಿಚಾರಮಾಡಿದರೆ ಹೊಳೆದೀತು. ಜನತೆಗೆ ವ್ಯಾಪಾರಿಯ ಕೆಲಸವೂ ಅತ್ಯಾವಶ್ಯಕವೇ; ತನ್ನ ಮನೆ ತುಂಬಿಕೊಳ್ಳುವುದಷ್ಟೇ ಅವನ ಉದ್ದೇಶ ಎಂದು ನಾವು

ತಿಳಿದುಕೊಂಡುಬಿಟ್ಟಿದ್ದೇವೆ. ವ್ಯಾಪಾರಿ ಒಂದೇ ಆಪೋಶನಕ್ಕೇ ದುಡ್ಡು ಸೇರಿಸಿಬಿಡುವಂತೆಯೇ ಶಾಸನಗಳನ್ನೂ ರಚಿಸುತ್ತಾನೆ. ಗಿರಾಕಿ ಅತಿ ಕಡಿಮೆ ಬೆಲೆಗಾಗಿ ಚೌಕಾಶಿ ಮಾಡಬೇಕು, ವ್ಯಾಪಾರಿ ಆದಷ್ಟು ಹೆಚ್ಚು ಕೇಳಬೇಕು, ಪಡೆಯಬೇಕು– ಇದೇ ರೂಢಿಯೂ ಹೌದು. ಆನ ತಾವೇ ಇಂಥ ಪದ್ಧತಿ ಹಾಕಿಬಿಟ್ಟಿದ್ದಾರೆ, ಈಗ ಅವರ ಅಪ್ರಾಮಾಣಿಕತೆಯಿಂದಾಗಿ ಕೀಳುದೃಷ್ಟಿಯಿಂದ ನೋಡುತ್ತಾರೆ, ಈ ಪದ್ಧತಿಯನ್ನು ಬದಲಾಯಿಸುವುದು ಅಗತ್ಯ. ವ್ಯಾಪಾರಿ ತನ್ನ ಸ್ವಾರ್ಥವನ್ನಷ್ಟೇ ಸಾಧಿಸಬೇಕು, ಧನವನ್ನೇ ಗಳಿಸಿ ರಾಶಿ ಹಾಕಬೇಕೆಂಬ ನಿಯಮವೇನೂ ಇಲ್ಲ. ಇಂಥದನ್ನು ವ್ಯಾಪಾರವೆನ್ನದೆ ಕಳ್ಳತನ ಎನ್ನಬೇಕಾದಿತು. ಸಿಪಾಯಿ ರಾಜ್ಯದ ಸುಖಕ್ಕಾಗಿ ಜೀವ ಕೊಡುವಂತೆಯೇ ವ್ಯಾಪಾರಿಯೂ ಜನತೆಯ ಸುಖಕ್ಕಾಗಿ ಧನ ಕಳೆದುಕೊಳ್ಳಬೇಕು, ಪ್ರಾಣವನ್ನೂ ನೀಗಬೇಕು. ಎಲ್ಲ ರಾಜ್ಯಗಳ ಲ್ಲಿಯೂ

ಸಿಪಾಯಿವೃತ್ತಿ ಜನತೆಯ ರಕ್ಷಣೆ;
ಧರ್ಮೋಪದೇಶಕನದು ಶಿಕ್ಷಣದಾನ;
ವೈದ್ಯನ ವೃತ್ತಿ ಆರೋಗ್ಯರಕ್ಷಣೆ;
ವಕೀಲನದು ನ್ಯಾಯಪ್ರಚಾರ;
ಹೀಗೆಯೇ ವ್ಯಾಪಾರಿಯ ವೃತ್ತಿ ಆವಶ್ಯಕ ವಸ್ತು ಸಂಗ್ರಹ.

ಇವರೆಲ್ಲರೂ ಸಮಯ ಬಂದಾಗ ತಮ್ಮ ಜೀವನವನ್ನು ತೆರಯಬೇಕು. ಎಂದರೆ; ಹಿಂದಡಿಯಿಡದೆ ನಿಂತಲ್ಲೇ ನಿಂತು ಸಾವನ್ನು ಅಪ್ಪುವುದು ಸಿಪಾಯಿಯ ಲಕ್ಷಣ.

ಪ್ಲೇಗು ಬಂದಾಗ ಓಡಿಹೋಗದೆ ತಾನೇ ಪ್ಲೇಗಿಗೆ ತುತ್ತಾದರೂ ವೈದ್ಯ ಅಲ್ಲೇ ಇದ್ದು ರೋಗಿಗಳ ಚಿಕಿತ್ಸೆ ಮಾಡುತ್ತಿರಬೇಲು.

ಸತ್ಯದ ಶಿಕ್ಷಣ ಕೊಡುವಾಗ ಜನ ಹೊಡೆದು ಹಾಕಿದರೂ ಕೊನೆಯುಸಿರು ಆರುವವರೆಗೂ ಸುಳ್ಳಿನ ಬದಲು ಸತ್ಯದ ಶಿಕ್ಷಣವನ್ನು ಧರ್ಮೋಪದೇಶಕ ಕೊಡುತ್ತಲೇ ಇರಬೇಕು.

ನ್ಯಾಯಕ್ಕಾಗಿ ಸಾಯಬೇಕಾಗಿ ಬಂದರೂ ನ್ಯಾಯವೇ ನೆಲೆ ಗೊಳ್ಳಲೆಂದು ವಕೀಲ ಯತ್ನಿಸಬೇಕು.

ಹೀಗೆ ಮೇಲಿನ ವೃತ್ತಿಗಳವರಿಗೆ ಬಲಿದಾನದ ಸಂದರ್ಭ ಯಾವುದು ಎಂಬುದನ್ನು ವ್ಯಾಪಾರಿಗಳೂ ಇತರರೂ ವಿಚಾರಿಸಬೇಕು. ಸಮಯ ಬಂದಾಗ ಸಾಯಲು ಸಿದ್ಧವಿಲ್ಲದವನು ಬದುಕೆಂಬುದನ್ನೇ ಅರಿಯ. ಆನತೆಗೆ ಬೇಕಾದ ವಸ್ತುಗಳನ್ನು ಸಂಗ್ರಹಿಸುವುದು ವ್ಯಾಪಾರಿಗಳ ಕೆಲಸವೆಂಬುದನ್ನು ನೋಡಿದೆವು. ಧರ್ಮೋಪದೇಶಕನ ಕೆಲಸ

ಸಂಬಳ ತಿನ್ನುವುದಾಗಿರದೆ ಉಪದೇಶ ಕೊಡುವದಾಗಿರುವಂತೆಯೇ ವ್ಯಾಪಾರಿಯ ಕೆಲಸ ಲಾಭಗಾರಿಕೆಯುಲ್ಲ, ವಸ್ತುಸಂಗ್ರಹ. ಧರ್ಮೋಪದೇಶಕನಿಗೆ ಅನ್ನ, ವ್ಯಾಪಾರಿಗೆ ಲಾಭ ಸಿಕ್ಕೇ ಸಿಕ್ಕುತ್ತದೆ. ಆದರೆ ಸಂಬಳ, ಲಾಭಗಳ ಮೇಲೆ ದೃಷ್ಟಿ ಇಡುವುದು ಇಬ್ಬರ ಕೆಲಸವೂ ಅಲ್ಲ. ಸಂಬಳ–ಲಾಭ ಸಿಗಲಿ ಸಿಗದಿರಲಿ ತಮ್ಮ ಕೆಲಸ ಮಾಡುತ್ತಲಿರುವುದೇ ಅವರ ಕರ್ತವ್ಯ. ಈ ವಿಚಾರ ಸರಿಯೆಂದಾದರೆ ವ್ಯಾಪಾರಿಗೆ ಉತ್ತಮ ದರ್ಜೆ ಸಿಗಬೇಕು. ಏಕೆಂದರೆ ಉತ್ತಮ ವಸ್ತುಗಳನ್ನು ಅವನು ತಯಾರಿಸಬೇಕು, ಜನತೆಗೆ ಅದರಿಂದ ಲಾಭವಾಗುವ ರೀತಿಯಲ್ಲಿ ಸಂಗ್ರಹಿಸಿ, ಅವರಿಗೆ ಮುಟ್ಟಿಸಬೇಕು. ಈ ಕೆಲಸದಲ್ಲಿ ಅವನ ಅಧೀನವಾಗಿರುವ ನೂರಾರು, ಸಾವಿರಾರು ಜನರ ರಕ್ಷಣೆ, ಬೇನೆ ಬಿದ್ದರೆ ಅವರ ಔಷಧೋಪಚಾರವನ್ನೂ ಆತ ಮಾಡಬೇಕಾದೀತು. ಇದನ್ನೆಲ್ಲ ಮಾಡಲು ತಾಳ್ಮೆ, ಬಹು ಸ್ನೇಹ–ಸಹಾನುಭೂತಿ, ಬಹಳ ಚಾತುರ್ಯಬೇಕು. (ಅರ್ಥವಿಚಾರ ಪುಟ. 10–12)

ಇಂಡಿಯಾ ಸಾಮ್ರಾಜ್ಯವು ಬ್ರಿಟಿಷ್ ಇಂಡಿಯಾವೆಂದೂ ಆಶ್ರಿತ ರಾಜ್ಯಗಳೆಂದೂ ಎರಡು ಭಾಗಗಳನ್ನುಳ್ಳುದಾಗಿದೆ. ಕ್ರಿ.ಶ. 1886ನೆಯ ವರ್ಷದ ಬ್ರಿಟಿಷ್ ಪಾರ್ಲಿಮೆಂಟಿನ ಶಾಸನ (Statue 52 and 53, Vict. Cap. 63)ದ ಮೇರೆಗೆ, ಚಕ್ರವರ್ತಿಯ ಆಡಳಿತಕ್ಕೆ ಸೇರಿ, ಇಂಡಿಯಾದ ಸರ್ವಾಧಿಪತಿಯ ಮೂಲಕವಾಗಿಯೋ, ಪ್ರಾಂತಾಧಿಪತಿಯೊಬ್ಬನ ಮೂಲಕವಾಗಿಯೋ, ಸರ್ವಾಧಿಪತಿಯ ಕೈಕೆಳಗಿನ ಅಧಿಕಾರಿಗಳ ಮೂಲಕವಾಗಿಯೋ ಆಳಲ್ಪಡುವ ಭಾಗಗಳು ಬ್ರಿಟಿಷ್ ಇಂಡಿಯಾ ಎಂದು ಕರೆಯಲ್ಪಡುತ್ತವೆ.

ಪ್ರಧಾನ ನ್ಯಾಯಸ್ಥಾನವು ತನ್ನ ಮೂಲಾಧಿಕಾರವನ್ನು ನಡೆಸುವಾಗ ಉಂಟಾಗುವ ಯಾವ ವ್ಯಾಜ್ಯದಲ್ಲಿಯೂ, ನಡೆವಳಿಕೆಯಲ್ಲಿಯೂ ಇವರನ್ನು ಸೆರೆಹಿಡಿಯುವುದಕ್ಕೂ, ಕಾರಾಗೃಹದಲ್ಲಿಡುವುದಕ್ಕೂ ಅಧಿಕಾರವನ್ನುಳ್ಳುದಾಗಿಲ್ಲ. ರಾಜದ್ರೋಹ, ಮಹಾಪಾತಕ(Felony)ಗಳ ಹೊರತು ಮತ್ತಾವ ಅಪರಾಧಕ್ಕೂ ಇವರು ಪ್ರಧಾನ ನ್ಯಾಯಸ್ಥಾನದ ಅಪರಾಧ ಸಂಬಂಧವಾದ ಮೂಲಾಧಿಕಾರಕ್ಕೆ ಒಳಪಡುವುದಿಲ್ಲ. ಹೀಗೆಯೇ ಪ್ರಧಾನ ನ್ಯಾಯಸ್ಥಾನಗಳ ಮುಖ್ಯ ನ್ಯಾಯಾಧಿಕಾರಿಗಳನ್ನು ಇತರ ನ್ಯಾಯಾಧಿಕಾರಿಗಳನ್ನು ಸೆರೆ ಹಿಡಿಯಲು, ಕಾರಾಗೃಹದಲ್ಲಿಡಲು ಅದಕ್ಕೆ ಅಧಿಕಾರವಿಲ್ಲ.

ಪ್ರಧಾನ ನ್ಯಾಯಸ್ಥಾನಗಳ ಅಧಿಕಾರ ವ್ಯಾಪ್ತಿಗೊಳಪಡದ ಪ್ರದೇಶಗಳಲ್ಲಿ ಮುಖ್ಯ ನ್ಯಾಯಸ್ಥಾನ(Chief Courts) ಗಳಾಗಲಿ, ನ್ಯಾಯಧರ್ಮ ಪ್ರತಿನಿಧಿ (Judicial Commissioners) ಗಳಾಗಲಿ ಇರುತ್ತಾರೆ.

ಪ್ರಧಾನ ನ್ಯಾಯಸ್ಥಾನಗಳ ಕೆಳಗೆ ಮೆಟ್ಟಿಲು ಮೆಟ್ಟಲಾಗಿ ನ್ಯಾಯಸ್ಥಾನಗಳಿರುತ್ತವೆ. ಪ್ರಜಾವ್ಯವಹಾರ ವಿಚಾರದಲ್ಲಿ ಸಾಮಾನ್ಯವಾಗಿ ಒಂದೊಂದು ಜಿಲ್ಲೆಯಲ್ಲಿಯೂ ಒಬ್ಬೊಬ್ಬ ಜಿಲ್ಲೆಯ ನ್ಯಾಯಾಧೀಶ (District Judge)ನಿರುತ್ತಾನೆ. ಅವನು ತನ್ನ ಕೆಳಗಿರುವ ನ್ಯಾಯಸ್ಥಾನಗಳ ಮೇಲು ವಿಚಾರಣೆಯನ್ನು ಮಾಡುವನು. ಅವನ ನ್ಯಾಯಸ್ಥಾನವೇ ಜಿಲ್ಲೆಗೆಲ್ಲಾ ಮುಖ್ಯನ್ಯಾಯಸ್ಥಾನ. ಕೆಳಗಿನ ನ್ಯಾಯಸ್ಥಾನಗಳು ಸಣ್ಣ ಸಣ್ಣ ವ್ಯಾಜ್ಯಗಳಲ್ಲಿ ಮಾಡುವ ತೀರ್ಮಾನಗಳ ಮೇಲೆ ಅವನ ನ್ಯಾಯಸ್ಥಾನಕ್ಕೆ ಬಿನ್ನಹವುಂಟು. ಅವನ ಕೈ ಕೆಳಗೆ ಕೆಳಮಟ್ಟದ ನ್ಯಾಯಾಧಿಕಾರಿ(Subordinate Judges)ಗಳೂ ಮೂನಸೀಫ (Munsiffs)ರೂ ಇರುತ್ತಾರೆ. ಜಿಲ್ಲೆಯ ನ್ಯಾಯಾಧೀಶನು ಬಿನ್ನಹಗಳ ಮೇಲೆ ಮಾಡುವ ತೀರ್ಮಾನಗಳ ಮೇಲೆ ಪ್ರಧಾನ ನ್ಯಾಯಸ್ಥಾನಕ್ಕೆ ಮತ್ತೆ ಬಿನ್ನಹವುಂಟು.

ಬಂಗಾಳ, ಮದರಾಸು ಮತ್ತು ಬೊಂಬಾಯಿ ಅಧಿಪತ್ಯಗಳೊಂದೊಂದರಲ್ಲಿಯೂ ಒಬ್ಬೊಬ್ಬ ಪ್ರಧಾನ ವ್ಯವಹಾರ ಶಾಸ್ತ್ರಜ್ಞ (Advocate General)ನು ಇರುತ್ತಾನೆ. ಪ್ರತಿ ಪ್ರಧಾನ ನ್ಯಾಯಸ್ಥಾನವೂ ದಾಖಲೆಯ ನ್ಯಾಯಸ್ಥಾನ(Court of Record)ವಾಗಿರುತ್ತದೆ. ನ್ಯಾಯಸ್ಥಾನದ ಕಾರ್ಯಕ್ರಮವನ್ನು ಕುರಿತು ಅದು ನಿಬಂಧನೆಗಳನ್ನು ಮಾಡಬಹುದು. ಆದರೆ ಕಂದಾಯದ ಸಂಗ್ರಹ ವಿಚಾರ (Revenue Matters)ದಲ್ಲಿ ಅದಕ್ಕೆ ಯಾವ ಅಧಿಕಾರವೂ ಇರುವುದಿಲ್ಲ. ಅದಕ್ಕೆ ತನ್ನ ಕೆಳಗಿನ ನ್ಯಾಯಸ್ಥಾನಗಳನ್ನು ಮೇಲು ವಿಚಾರಣೆ ಮಾಡುವ ಅಧಿಕಾರವಿರುವುದು.

ಅದರ ನ್ಯಾಯಾಧಿಕಾರಿಗಳಲ್ಲಿ ಕಾರ್ಯವನ್ನು ಹಂಚಿಕೆಮಾಡುವುದಕ್ಕಾಗಿ ಪ್ರಧಾನ ನ್ಯಾಯಸ್ಥಾನವು ನಿಬಂಧನೆಗಳನ್ನು ಮಾಡಬಹುದು. ಯಾವ ಯಾವ ನ್ಯಾಯಾಧಿಕಾರಿಯು ಯಾವ ಯಾವ ರೀತಿಯಲ್ಲಿ ಮತ್ತು ಯಾರ ಯಾರ ಜತೆಯಲ್ಲಿ ಕುಳಿತು ನ್ಯಾಯವ್ಯವಸ್ಥೆ ಮಾಡಬೇಕೆಂಬುದನ್ನು ಮುಖ್ಯ ನ್ಯಾಯಾಧಿಕಾರಿಯು ನಿರ್ಧರಿಸಬೇಕು.

ಒಂದೊಂದು ಪ್ರಧಾನ ನ್ಯಾಯಸ್ಥಾನದಲ್ಲಿಯೂ ಒಬ್ಬ ಮುಖ್ಯ ನ್ಯಾಯಾಧಿಕಾರಿ (Chief Justice)ಯೂ, ಚಕ್ರವರ್ತಿಯೂ ನಿರ್ಣಯಿಸುವಷ್ಟು ಮಂದಿ ಇತರೆ ನ್ಯಾಯಾಧಿಕಾರಿಗಳೂ ಇರುತ್ತಾರೆ.

ಪ್ರಧಾನ ನ್ಯಾಯಸ್ಥಾನದ ಪ್ರತಿನ್ಯಾಯಾಧಿಕಾರಿಯೂ (1) ಐದು ವರ್ಷಗಳಿಗಿಂತ ಕಡಿಮೆಯಿಲ್ಲದ ಇಂಗ್ಲೆಂಡಿನ ಅಥವಾ ಐರ್ಲೆಂಡಿನ ಬಾರಿಸ್ಟರಾಗಲಿ, ಇಲ್ಲವೇ ಸ್ಕಾಟ್ಲೆಂಡಿನ ಅಡ್ವೋಕೇಟರುಗಳ ಸಂಘದ ಸದಸ್ಯನಾಗಲಿ, (2) ಇಂಡಿಯಾದ ಸರ್ಕಾರಿ ನೌಕರಿಯ ಶಾಖೆಗೆ ಸೇರಿ, ಹತ್ತು ವರ್ಷಗಳಿಗಿಂತ ಕಡಿಮೆಯಿಲ್ಲದಂತೆ ಜಿಲ್ಲೆಯ ನ್ಯಾಯಾಧಿಕಾರಿಯಾಗಿ ಇದ್ದಂಥವನಾಗಲಿ, (3) ಐದು ವರ್ಷಗಳಿಗಿಂತ ಕಡಿಮೆಯಿಲ್ಲದಂತೆ ಕೀಳಲ್ಪಟ್ಟ ನ್ಯಾಯಾಧಿಕಾರಿಯ ಪದವಿಗಿಂತಲೂ ಕಡಿಮೆಯಿಲ್ಲದ ಅಧಿಕಾರದಲ್ಲಿದ್ದಂತಹವನಾಗಲಿ,

(4) ಹತ್ತು ವರ್ಷಗಳಿಗೆ ಕಡಿಮೆಯಿಲ್ಲದಂತೆ ಪ್ರಧಾನ ನ್ಯಾಯಸ್ಥಾನದ ವಕೀಲನಾಗಿರುವಂತಹವಾಗಲಿ ಆಗಿರಬೇಕು.

ಪ್ರತಿ ನ್ಯಾಯಾಧಿಕಾರಿಯ ಕಾಲಾವಧಿಯೂ ಚಕ್ರವರ್ತಿಯ ಇಷ್ಟಾನುಸಾರ ವಾಗಿರುವುದು.

ಅಪರಾಧ ಸಂಬಂಧವಾದ ವ್ಯವಹಾರಗಳಲ್ಲಿ ಪ್ರಧಾನ ನ್ಯಾಯಸ್ಥಾನವು ಬಿನ್ನಹಕ್ಕೆ ಯೋಗ್ಯವೆಂದು ನಿರ್ಧರಿಸತಕ್ಕ ತೀರ್ಮಾನಗಳು ಮಾತ್ರ ಬಿನ್ನಹಕ್ಕೆ ಅರ್ಹವಾಗುತ್ತವೆ

ಭಾರತೀಯ ರಾಜನೀತಿಜ್ಞರು ಹಲವಾರು ಈ ನ್ಯಾಯಧರ್ಮ ಸಮಿತಿಯ ಜೊತೆಗೆ ಇಂಡಿಯಾದಲ್ಲಿಯೇ ಅಗ್ರನ್ಯಾಯ ಪೀಠವೊಂದನ್ನು ಏರ್ಪಡಿಸಬೇಕೆಂದು ಸೂಚಿಸುತ್ತಾರೆ.

ಉಚ್ಚನಾಯಾಲಯ ಎಂದರೆ.

1. ಯಾವುದೇ ರಾಜ್ಯದ ಸಂಬಂಧದಲ್ಲಿ ಆ ಕ್ಷೇತ್ರಕ್ಕೆ ಯಾವ ನ್ಯಾಯಾಲಯ;
2. ಸಂಘ ರಾಜ್ಯ ಕ್ಷೇತ್ರದ ಸಂಬಂಧದಲ್ಲಿ ಆ ಕ್ಷೇತ್ರಕ್ಕೆ ಯಾವ ರಾಜ್ಯದ ಉಚ್ಚ ನ್ಯಾಯಾಲಯದ ಅಧಿಕಾರ ವ್ಯಾಪ್ತಿಯನ್ನು ವಿಧಿಯ ಮೂಲಕ ವಿಸ್ತೃತಗೊಳಿಸಲಾಗಿದೆಯೋ ಆ ಉಚ್ಚ ನ್ಯಾಯಾಲಯ:
3. ಇತರ ಯಾವುದೇ ಸಂಘ ರಾಜ್ಯ ಕ್ಷೇತ್ರದ ಸಂಬಂಧದಲ್ಲಿ ಭಾರತದ ಉಚ್ಚ ತಮ್ಮ ನ್ಯಾಯಾಲಯವಲ್ಲದ ಆ ಕ್ಷೇತ್ರದ ಗರಿಷ್ಠ ಕ್ರಿಮಿನಲ್ ಅಪೀಲು ನ್ಯಾಯಾಲಯ;

ನ್ಯಾಯಾಲಯ ಅಥವಾ ಮ್ಯಾಜಿಸ್ಟ್ರೇಟನಿಗೆ ಸಂಬಂಧಿಸಿ "ಸ್ಥಳೀಯ ಅಧಿಕಾರ ವ್ಯಾಪ್ತಿ" ಎಂದರೆ. ಈ ಸಂಹಿತೆಯ ಮೇರೆಗೆ ನ್ಯಾಯಾಲಯವು ಅಥವಾ ಯಾವುದೇ ಶಕ್ತಿಗಳನ್ನು ಚಲಾಯಿಸಬಹುದಾದ ಸ್ಥಳೀಯ ಪ್ರದೇಶ; ಮತ್ತು ಅಂಥ ಸ್ಥಳೀಯ ಪ್ರದೇಶವು ಇಡೀ ರಾಜ್ಯವನ್ನು ಅಥವಾ ರಾಜ್ಯ ಸರ್ಕಾರವು ಅಧಿಸೂಚನೆಯ ಮೂಲಕ ನಿರ್ದಿಷ್ಟ ಪಡಿಸಬಹುದಾದಂಥ ರಾಜ್ಯದ ಯಾವುದೇ ಭಾಗವನ್ನು ಒಳಗೊಂಡಿರಬಹುದು;

ಯಾವುದೇ ನ್ಯಾಯಾಲಯದ ಯಾವುದೇ ವ್ಯವಹರಣೆಗೆ ಸಂಬಂಧಿಸಿ ಉಪಯೋಗಿಸಿದಾಗ "ಪ್ಲೀಡರ್" ಎಂದರೆ ಅಂಥ ನ್ಯಾಯಾಲಯದಲ್ಲಿ ವೃತ್ತಿಯನ್ನು ನಡೆಸಲು ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ವಿಧಿಯ ಮೂಲಕ ಅಥವಾ ಮೇರೆಗೆ ಅಧಿಕೃತನಾದ ಯಾವನೇ ವ್ಯಕ್ತಿ ಮತ್ತು ಅಂಥ ವ್ಯವಹರಣೆಯಲ್ಲಿ ಕಾರ್ಯ ನಡೆಸಲು ನ್ಯಾಯಾಲಯದ ಅನುಮತಿಯ ಮೇರೆಗೆ ನಿಯುಕ್ತವಾದ ಇತರ ಯಾವನೇ ವ್ಯಕ್ತಿಯನ್ನು ಅದು ಒಳಗೊಳ್ಳುತ್ತದೆ;

ಭಾರತದ ದಂಡಸಂಹಿತೆ ಮತ್ತು ಇತರ ವಿಧಿಗಳ ಮೇರೆಗಿನ ಅಪರಾಧಗಳ ಆರೋಪ ವಿಚಾರಣೆ:– (1) ಭಾರತ ದಂಡ ಸಂಹಿತೆಯ (1860 45) ಮೇರೆಗಿನ ಎಲ್ಲ ಅಪರಾಧಗಳನ್ನು ಇದರಲ್ಲಿ ಈ ಮುಂದೆ ಇರುವ ಉಪಬಂಧಗಳಿಗನುಸಾರವಾಗಿ ಅನ್ವೇಷಿಸತಕ್ಕುದು, ವಿಚಾರಣೆ ಮಾಡತಕ್ಕದು.

ಕ್ರಿಮಿನಲ್ ನ್ಯಾಯಾಲಯಗಳ ವರ್ಗಗಳು.– ಉಚ್ಚ ನ್ಯಾಯಾಲಯಗಳು ಮತ್ತು ಈ ಸಂಹಿತೆಯಲ್ಲದ ಯಾವುದೇ ಇತರ ವಿಧಿಯ ಮೇರೆಗೆ ರಚಿತವಾದ ನ್ಯಾಯಾಲಯಗಳಲ್ಲದೇ ಪ್ರತಿ ರಾಜ್ಯದಲ್ಲಿ ಈ ಕೆಳಗಿನ ವರ್ಗಗಳ ಕ್ರಿಮಿನಲ್ ನ್ಯಾಯಾಲಯಗಳಿರತಕ್ಕುದು; ಎಂದರೆ,–

1. ಸೆಷನ್ಸ್ ನ್ಯಾಯಾಲಯಗಳು;

2. ಮೊದಲನೇ ವರ್ಗದ ನ್ಯಾಯಿಕ ಮ್ಯಾಜಿಸ್ಟ್ರೇಟರು ಮತ್ತು ಯಾವುದೇ ಮಹಾನಗರ ಪ್ರದೇಶದಲ್ಲಿ ಮಹಾನಗರ ಮ್ಯಾಜಿಸ್ಟ್ರೇಟರು;

3. ಎರಡನೇ ವರ್ಗದ ನ್ಯಾಯಿಕ ಮ್ಯಾಜಿಸ್ಟ್ರೇಟರು; ಮತ್ತು

4. ಕಾರ್ಯಾಂಗ ಮ್ಯಾಜಿಸ್ಟ್ರೇಟರು,

ಪ್ರಾದೇಶಿಕ ವಿಭಾಗಗಳು:–

(1) ಪ್ರತಿಯೊಂದು ರಾಜ್ಯವೂ ಒಂದು ಸೆಷನ್ಸ್ ವಿಭಾಗವಾಗಿರತಕ್ಕುದು ಅಥವಾ ಸೆಷನ್ಸ್ ವಿಭಾಗಗಳನ್ನು ಹೊಂದಿರತಕ್ಕುದು ಮತ್ತು ಪ್ರತಿಯೊಂದು ಸೆಷನ್ಸ್ ವಿಭಾಗವು ಈ ಸಂಹಿತೆಯ ಉದ್ದೇಶಗಳಿಗಾಗಿ ಜಿಲ್ಲೆಯಾಗಿರತಕ್ಕುದ್ದು ಅಥವಾ ಜಿಲ್ಲೆಗಳನ್ನು ಹೊಂದಿರತಕ್ಕುದ್ದು;

ಪರಂತು, ಪ್ರತಿಯೊಂದು ಮಹಾನಗರ ಪ್ರದೇಶವು ಸದರಿ ಉದ್ದೇಶಕ್ಕಾಗಿ ಒಂದು ಪ್ರತ್ಯೇಕ ವಿಭಾಗ ಮತ್ತು ಜಿಲ್ಲೆಯಾಗಿರತಕ್ಕುದ್ದು.

(2) ರಾಜ್ಯ ಸರ್ಕಾರವು, ಉಚ್ಚ ನ್ಯಾಯಾಲಯದೊಂದಿಗೆ ಸಮಾಲೋಚಿಸಿದ ತರುವಾಯ ಅಂಥ ವಿಭಾಗಗಳ ಮತ್ತು ಜಿಲ್ಲೆಗಳ ಪರಿಮಿತಿಗಳನ್ನು ಅಥವಾ ಸಂಖ್ಯೆಯನ್ನು ಬದಲಾಯಿಸಬಹುದು.

(3) ರಾಜ್ಯ ಸರ್ಕಾರವು, ಉಚ್ಚ ನ್ಯಾಯಾಲಯದೊಂದಿಗೆ ಸಮಾಲೋಚಿಸಿದ ತರುವಾಯ ಯಾವುದೇ ಜಿಲ್ಲೆಯನ್ನು ಉಪವಿಭಾಗಗಳಾಗಿ ವಿಭಾಗಿಸಬಹುದು ಮತ್ತು ಅಂಥ ಉಪವಿಭಾಗಗಳ ಪರಿಮಿತಿಗಳನ್ನು ಅಥವಾ ಸಂಖ್ಯೆಯನ್ನು ಬದಲಾಯಿಸಬಹುದು.

(4) ಈ ಸಂಹಿತೆಯ ಪ್ರಾರಂಭದಲ್ಲಿದ್ದ ರಾಜ್ಯದಲ್ಲಿನ ಸೆಷನ್ಸ್ ವಿಭಾಗಗಳು, ಜಿಲ್ಲೆಗಳು

ಮತ್ತು ಉಪವಿಭಾಗಗಳು ಈ ಪ್ರಕರಣದ ಮೇರೆಗೆ ರೂಪಿತವಾದಂತೆ ಭಾವಿಸತಕ್ಕುದು.

ಸೆಷನ್ಸ್ ನ್ಯಾಯಾಲಯ:–

(1) ಪ್ರತಿಯೊಂದು ಸೆಷನ್ಸ್ ವಿಭಾಗಕ್ಕೂ ರಾಜ್ಯ ಸರ್ಕಾರವು ಒಂದು ಸೆಷನ್ಸ್ ನ್ಯಾಯಾಲಯವನ್ನು ಸ್ಥಾಪಿಸತಕ್ಕುದು.

(2) ಉಚ್ಚ ನ್ಯಾಯಾಲಯದಿಂದ ನೇಮಕವಾಗುವ ನ್ಯಾಯಾಧೀಶನು ಪ್ರತಿಯೊಂದು ಸೆಷನ್ಸ್ ನ್ಯಾಯಾಲಯದ ಅಧ್ಯಕ್ಷತೆಯನ್ನು ವಹಿಸತಕ್ಕುದು.

(3) ಸೆಷನ್ಸ್ ನ್ಯಾಯಾಲಯದ ಅಧಿಕಾರ ವ್ಯಾಪ್ತಿಯನ್ನು ಚಲಾಯಿಸುವುದಕ್ಕಾಗಿ ಅದರ ಸೆಷನ್ಸ ನ್ಯಾಯಾಧೀಶರನ್ನು ಮತ್ತು ಸಹಾಯಕ ಸೆಷನ್ಸ್ ನ್ಯಾಯಾಧೀಶರನ್ನು ಸಹ ಉಚ್ಚ ನ್ಯಾಯಾಲಯವು ನೇಮಕ ಮಾಡಬಹುದು.

(4) ಸೆಷನ್ಸ್ ವಿಭಾಗದ ಸೆಷನ್ಸ್ ನ್ಯಾಯಾಧೀಶನನ್ನು ಉಚ್ಚ ನ್ಯಾಯಾಲಯವು ಇನ್ನೊಂದು ವಿಭಾಗದ ಒಬ್ಬ ಅಪರ ಸೆಷನ್ಸ್ ನ್ಯಾಯಾಧೀಶನನ್ನಾಗಿಯೂ ನೇಮಕ ಮಾಡಬಹುದು ಮತ್ತು ಅಂಥ ಸಂದರ್ಭದಲ್ಲಿ ಅವನು ಉಚ್ಚ ನ್ಯಾಯಾಲಯವು ನಿರ್ದೇಶಿಸಬಹುದಾದಂಥ ಇನ್ನೊಂದು ವಿಭಾಗದ ಸ್ಥಳ ಅಥವಾ ಸ್ಥಳಗಳಲ್ಲಿ ಮೊಕದ್ದಮೆಗಳ ಇತ್ಯರ್ಥಕ್ಕಾಗಿ ಉಪವೇಶನ ನಡೆಸಬಹುದು.

(5) ಸೆಷನ್ಸ್ ನ್ಯಾಯಾಧೀಶನ ಪದವು ರಿಕ್ತವಾಗಿರುವಲ್ಲಿ ಉಚ್ಚ ನ್ಯಾಯಾಲಯವು ಆ ಸೆಷನ್ಸ್ ವಿಭಾಗದಲ್ಲಿರುವ ಅಪರ ಅಥವಾ ಸಹಾಯಕ ಸೆಷನ್ಸ್ ನ್ಯಾಯಾಧೀಶನಿಂದ ಅಥವಾ ಅಪರ ಅಥವಾ ಸಹಾಯಕ ಸೆಷನ್ಸ್ ನ್ಯಾಯಾಧೀಶ ಇಲ್ಲದಿದ್ದರೆ, ಮುಖ್ಯ ನ್ಯಾಯಿಕ ಮ್ಯಾಜಿಸ್ಟ್ರೇಟನಿಂದ ಅಂಥ ಸೆಷನ್ಸ್ ನ್ಯಾಯಾಲಯದ ಸಮಕ್ಷಮ ಮಾಡಿದ ಅಥವಾ ಮಾಡಬಹುದಾದ ಅಥವಾ ಇತ್ಯರ್ಥವಾಗದೆ ಉಳಿದಿರುವ ಯಾವುದೇ ಜರೂರು ಅವೇದನೆ ಪತ್ರದ ಇತ್ಯರ್ಥಕ್ಕಾಗಿ ವ್ಯವಸ್ಥೆ ಮಾಡಬಹುದು; ಮತ್ತು ಅಂಥ ಪ್ರತಿಯೊಬ್ಬ ನ್ಯಾಯಾಧೀಶ ಅಥವಾ ಮ್ಯಾಜಿಸ್ಟ್ರೇಟನಿಗೆ ಅಂಥ ಯಾವುದೇ ಅವೇದನ ಪತ್ರವನ್ನು ಕುರಿತು ವ್ಯವಹರಿಸಲು ಅಧಿಕಾರ ವ್ಯಾಪ್ತಿ ಇರತಕ್ಕುದು.

(6) ಉಚ್ಚ ನ್ಯಾಯಾಲಯವು ಅಧಿಸೂಚನೆಯ ಮೂಲಕ ನಿರ್ದಿಷ್ಟ ಪಡಿಸಬಹುದು ದಾದಂಥ ಸ್ಥಳ ಅಥವಾ ಸ್ಥಳಗಳಲ್ಲಿ ಸೆಷನ್ಸ್ ನ್ಯಾಯಾಲಯವು ಸಾಮಾನ್ಯವಾಗಿ ತನ್ನ ಉಪವೇಶನ ನಡೆಸತಕ್ಕುದು ; ಆದರೆ ಯಾವುದೇ ನಿರ್ದಿಷ್ಟ ಮೊಕದ್ದಮೆಯಲ್ಲಿ ಸೆಷನ್ಸ್ ವಿಭಾಗದಲ್ಲಿನ ಇತರ ಯಾವುದೇ ಸ್ಥಳದಲ್ಲಿ ತನ್ನ ಉಪವೇಶನವನ್ನು ನಡೆಸುವುದು ಪಕ್ಷಕಾರರಿಗೂ ಸಾಕ್ಷಿಗಳಿಗೂ ಸಾಮಾನ್ಯವಾಗಿ ಅನುಕೂಲವಾಗುವುದೆಂದು ಸೆಷನ್ಸ್ ನ್ಯಾಯಾಲಯವು ಅಭಿಪ್ರಾಯ ಪಟ್ಟರೆ ಅದು ಪ್ರಾಸಿಕ್ಯೂಷನ್ ಮತ್ತು ಆಪಾದಿತರ

ಒಪ್ಪಿಗೆಯ ಮೇಲೆ ಮೊಕದ್ದಮೆಯ ಇತ್ಯರ್ಥಕ್ಕಾಗಿ ಅಥವಾ ಅದರಲ್ಲಿರುವ ಯಾವುದೇ ಸಾಕ್ಷಿಯ ಅಥವಾ ಸಾಕ್ಷಿಗಳ ಪರೀಕ್ಷೆಗಾಗಿ ಆ ಸ್ಥಳದಲ್ಲಿ ಉಪವೇಶನವನ್ನು ನಡೆಸಬಹುದು.

ಸಹಾಯಕ ಸೆಷನ್ಸ್ ನ್ಯಾಯಾಧೀಶರು ಅಧೀನರಾಗಿರುವುದು.– (1) ಸೆಷನ್ಸ್ ನ್ಯಾಯಾಧೀಶನ ನ್ಯಾಯಾಲಯದಲ್ಲಿ ಸೆಷನ್ಸ್ ಅಧಿಕಾರ ವ್ಯಾಪ್ತಿಯನ್ನು ಚಲಾಯಿಸುವ ಎಲ್ಲ ಸಹಾಯಕ ಸೆಷನ್ಸ್ ನ್ಯಾಯಾಧೀಶರು ಸೆಷನ್ಸ್ ನ್ಯಾಯಾಧೀಶನಿಗೆ ಅಧೀನರಾಗಿರತಕ್ಕುದ್ದು.

(2) ಸೆಷನ್ಸ್ ನ್ಯಾಯಾಧೀಶನು ಅಂಥ ಸಹಾಯಕ ಸೆಷನ್ಸ್ ನ್ಯಾಯಾಧೀಶರಲ್ಲಿ ವ್ಯವಹಾರಗಳನ್ನು ವಿತರಣೆ ಮಾಡುವ ಬಗ್ಗೆ ಸಂಹಿತೆಗೆ ಸುಸಂಗತವಾಗಿರುವ ನಿಯಮಗಳನ್ನು ಕಾಲಕಾಲಕ್ಕೆ ರಚಿಸಬಹುದು.

(3) ಸೆಷನ್ಸ್ ನ್ಯಾಯಾಧೀಶನು ತನ್ನ ಗೈರುಹಾಜರಿಯಲ್ಲಿ ಅಥವಾ ತಾನು ಕಾರ್ಯ ನಿರ್ವಹಿಸಲು ಅಸಮರ್ಥನಾಗಿರುವಲ್ಲಿ ಅಪರ ಅಥವಾ ಸಹಾಯಕ ಸೆಷನ್ಸ್ ನ್ಯಾಯಾಧೀಶನು ಅಥವಾ ಅಪರ ಅಥವಾ ಸಹಾಯಕ ಸೆಷನ್ಸ್ ನ್ಯಾಯಾಧೀಶನು ಇಲ್ಲಿದಿರುವಲ್ಲಿ ಮುಖ್ಯ ನ್ಯಾಯಿಕ ಮ್ಯಾಜಿಸ್ಟ್ರೇಟನು ಯಾವುದೇ ಜರೂರು ಆವೇದನ ಪತ್ರವನ್ನು ಇತ್ಯರ್ಥ ಮಾಡುವಂತೆ ಉಪಬಂಧವನ್ನು ಸಹ ಕಲ್ಪಿಸಬಹುದು, ಮತ್ತು ಅಂಥ ಪ್ರತಿಯೊಬ್ಬ ನ್ಯಾಯಾಧೀಶ ಅಥವಾ ಮ್ಯಾಜಿಸ್ಟ್ರೇಟನಿಗೆ ಅಂಥ ಪತ್ರವನ್ನು ಕುರಿತು ವ್ಯವಹರಿಸಲು ಅಧಿಕಾರ ವ್ಯಾಪ್ತಿ ಇರುವುದೆಂದು ಭಾವಿಸತಕ್ಕುದು.

ನ್ಯಾಯಿಕ ಮ್ಯಾಜಿಸ್ಟ್ರೇಟರ ನ್ಯಾಯಾಲಯಗಳು.– (1) ಮಹಾನಗರ ಪ್ರದೇಶವಲ್ಲದ. ಪ್ರತಿಯೊಂದು ಜಿಲ್ಲೆಯಲ್ಲಿ ರಾಜ್ಯಸರ್ಕಾರವು ಉಚ್ಚ ನ್ಯಾಯಾಲಯದೊಡನೆ ಸಮಾಲೋಚಿಸಿದ ತರುವಾಯ ಅಧಿಸೂಚನೆಯ ಮೂಲಕ ನಿರ್ದಿಷ್ಟ ಪಡಿಸಬಹುದಾದಷ್ಟು ಸಂಖ್ಯೆಯ ಮೊದಲನೇ ವರ್ಗದ ಮತ್ತು ಎರಡನೇ ವರ್ಗದ ನ್ಯಾಯಿಕ ಮ್ಯಾಜಿಸ್ಟ್ರೇಟರ ನ್ಯಾಯಾಲಯಗಳನ್ನು ನಿರ್ದಿಷ್ಟಪಡಿಸಬಹುದಾದ ಸ್ಥಳಗಳಲ್ಲಿ ಸ್ಥಾಪಿಸತಕ್ಕುದು.

ವಿಶೇಷ ನ್ಯಾಯಿಕ ಮ್ಯಾಜಿಸ್ಟ್ರೇಟರು.– (1) ಉಚ್ಚ ನ್ಯಾಯಾಲಯವು, ಮಹಾನಗರ ಪ್ರದೇಶವಲ್ಲದ ಯಾವುದೇ ಸ್ಥಳೀಯ ಪ್ರದೇಶದಲ್ಲಿ ನಿರ್ದಿಷ್ಟ ಮೊಕದ್ದಮೆಗಳ ಅಥವಾ ನಿರ್ದಿಷ್ಟ ವರ್ಗದ ಮೊಕದ್ದಮೆಗಳಿಗೆ ಸಂಬಂಧಿಸಿದಂತೆ ಪ್ರಥಮ ದರ್ಜೆ ಅಥವಾ ದ್ವಿತೀಯ ದರ್ಜೆ ನ್ಯಾಯಿಕ ಮ್ಯಾಜಿಸ್ಟ್ರೇಟನಿಗೆ ಈ ಸಂಹಿತೆಯ ಮೂಲಕ ಅಥವಾ ಮೇರೆಗೆ ಪ್ರಧಾನ ಮಾಡಿದ ಅಥವಾ ಮಾಡಬಹುದಾದ ಎಲ್ಲ ಅಥವಾ ಯಾವುದೇ ಶಕ್ತಿಗಳನ್ನು ಸರ್ಕಾರದ ಅಧೀನದಲ್ಲಿ ಯಾವುದೇ ಹುದ್ದೆಯನ್ನು ಹೊಂದಿರುವ ಅಥವಾ ಹೊಂದಿದ್ದ ಯಾವನೇ ವ್ಯಕ್ತಿಗೆ, ಹಾಗೆ ಮಾಡಲು ಕೇಂದ್ರ ಅಥವಾ ರಾಜ್ಯ ಸರ್ಕಾರವು ವಿನಂತಿಸಿದರೆ. ಪ್ರಧಾನ ಮಾಡಬಹದು :

ಪರಂತು, ಉಚ್ಚ ನ್ಯಾಯಾಲಯವು ನಿಯಮಗಳ ಮೂಲಕ ನಿರ್ದಿಷ್ಟಗೊಳಿಸ ಬಹುದಾದ ವಿಧಿ ವ್ಯವಹಾರಗಳಿಗೆ ಸಂಬಂಧಿಸಿದಂತಹ ಅರ್ಹತೆ ಅಥವಾ ಅನುಭವವನ್ನು ಅವನು ಹೊಂದಿರದ ಹೊರತು ಅಂಥ ಯಾವುದೇ ಶಕ್ತಿಯನ್ನು ಆ ವ್ಯಕ್ತಿಗೆ ಪ್ರಧಾನ ಮಾಡತಕ್ಕುದಲ್ಲ.

1861ನೆಯ ವರ್ಷದ ಪಾರ್ಲಿಮೆಂಟಿನ ಶಾಸನಾನುಸಾರವಾಗಿ, ಮದರಾಸು, ಬೊಂಬಾಯಿ ಮತ್ತು ಕಲಕತ್ತ ನಗರಗಳ ಪ್ರಧಾನ ನ್ಯಾಯ ಸ್ಥಾನಗಳು ಅದೇ ವರ್ಷ ಚಕ್ರವರ್ತಿಯಿಂದ ಸ್ಥಾಪಿತವಾಗಿವೆ. ಅಲಹಾಬಾದಿನಲ್ಲಿರುವ ಸಂಯುಕ್ತ ಪ್ರಾಂತದ ಪ್ರಧಾನ ನ್ಯಾಯಸ್ಥಾನವು 1865ನೆಯ ವರ್ಷದಲ್ಲಿ ಏರ್ಪಾಡಾಯಿತು. 1916ನೆಯ ವರ್ಷ ಪಾಟ್ನಾ ನಗರದಲ್ಲಿ ಪ್ರಧಾನ ನ್ಯಾಯಸ್ಥಾನವು ಸ್ಥಾಪಿತವಾಯಿತು. ಲಾಹೋರ್ ನಗರದಲ್ಲಿ ಪ್ರಧಾನ ನ್ಯಾಯಸ್ಥಾನವು 1616ನೆಯ ವರ್ಷದಲ್ಲಿ ಏರ್ಪಾಡಾಯಿತು.

ಇಂಗ್ಲೆಂಡಿನ ದೊರೆಯ ಮಂತ್ರಾಲೋಚನಾ ಸಭೆಯ ಅಂಗವಾದ ನ್ಯಾಯಧರ್ಮ ಸಮಿತಿ (The Judicial Committee of the Privy Council)ಯು ಇಂಡಿಯಾದ ನ್ಯಾಯ ವ್ಯವಸ್ಥಾಪಕ ಶಾಖೆಯ ಶಿಖರವಾಗಿದೆ. ಚಕ್ರವರ್ತಿಯ ಸ್ವಾಸ್ಥ್ಯಗಳಿಗೆಲ್ಲಾ ಇದೇ ತುತ್ತ ತುದಿಯ ನ್ಯಾಯಪೀಠ. ಈ ಸಮಿತಿಯು 1833ನೆಯ ವರ್ಷದಲ್ಲಿ ಸ್ಥಾಪಿತವಾಯಿತು. ರಾಜಮಂತ್ರಾಲೋಚನಾಸಭೆಯ ಅಧ್ಯಕ್ಷನೂ, ಇಂಗ್ಲೆಂಡಿನ ರಾಜಮುದ್ರಾ ರಕ್ಷಕ (Lord Keeper of the great Seal of England)ನೂ, ಈ ಅಧಿಕಾರಗಳಲ್ಲಿದ್ದ ಮಂತ್ರಾಲೋಚನಾ ಸಭೆಯ ಸದಸ್ಯರೂ, ಸಾಮಾನ್ಯ ನ್ಯಾಯಧರ್ಮ ಶ್ರೀಮಂತ(Lords of Appeal in Ordinary)ರೇ ಮೊದಲಾದ ಘನತರ ನ್ಯಾಯಾಧಿಕಾರಗಳಲ್ಲಿರುವ ಅಥವಾ ಇದ್ದ ಮಂತ್ರಾಲೋಚನಾ ಸಭೆಯ ಸದಸ್ಯರೂ ಈ ಸಮಿತಿಯ ಸದಸ್ಯರಾಗಿರುವರು.

ಸಾಮಾನ್ಯ ಪ್ರಜಾ ವ್ಯವಹಾರಗಳ(Civil Matters)ಲ್ಲಿ ಇಂಡಿಯಾದ ಒಂದೊಂದು ಪ್ರಧಾನ ನ್ಯಾಯಸ್ಥಾನ (High Court)ವೂ ತನ್ನ ಪರಮೋಚ್ಛ ಅಧಿಕಾರ (Appellate Judiciary)ದ ಮೂಲಕವಾಗಿಯಾಗಲಿ ಮಾಡುವ ಕೊನೆಯ ತೀರ್ಮಾನದಲ್ಲಿ ಮಾತ್ರ ಇಂಗ್ಲೆಂಡಿನ ನ್ಯಾಯಧರ್ಮ ಸಮಿತಿಗೆ ಬಿನ್ನಹ (Appeal)ವುಂಟು. ಆದರೆ ಈ ತೀರ್ಮಾನಕ್ಕೆ ವಿಷಯವಾದ ವ್ಯವಹಾರದ ಬೆಲೆಯು ಹತ್ತು ಸಾವಿರ ರೂಪಾಯಿಗಳಿಗೆ ಕಡಿಮೆಯಾಗಿರಕೂಡದು. ತನ್ನ ಮತ್ತಾವ ತೀರ್ಮಾನವಾದರೂ ನ್ಯಾಯಧರ್ಮ ಸಮಿತಿಯ ಮುಂದೆ ಬಿನ್ನಹಕ್ಕೆ ಯೋಗ್ಯವೆಂದು ಪ್ರಧಾನ ನ್ಯಾಯಸ್ಥಾನವು ನಿರ್ಧರಿಸಿದರೆ, ಅಂತಹ ತೀರ್ಮಾನವನ್ನು ಕುರಿತು ತತ್ಸಮಿತಿಗೆ ಬಿನ್ನಹವುಂಟು.

ಕಾರ್ನವಾಲೀಸ್ ಬ್ರಿಟೀಷ್ ನ್ಯಾಯತೀರ್ಮಾನವು ಪರಿಪೂರ್ಣವಾಗಿರಬೇಕೆಂದು ಪ್ರತಿಪಾದಿಸಿದ. ಅವನ ಪ್ರಕಾರ, ಬ್ರಿಟೀಶರು ಬರುವುದಕ್ಕೆ ಭಾರತದ ಸಾಂಪ್ರದಾಯಿಕ ಕಾನೂನುಗಳು ಸ್ಪಷ್ಟವಿರಲಿಲ್ಲ. ಮತ್ತು ಸರಿಯಾದರೂ ಪದ ನ್ಯಾಯತೀರ್ಮಾನವು ಭಾರತದಲ್ಲಿ ಸಾಧ್ಯವಾಗಿರಲಿಲ್ಲ. ಇಷ್ಟಾದರೂ ಕಾರ್ನವಾಲೀಸ್‌ನ ನಿಲುವು-ನ್ಯಾಯತೀರ್ಮಾನದ ಬಗ್ಗೆ ಬ್ರಿಟೀಶರ ಪರವಾಗಿರುವಂತೆ, ಭಾರತೀಯ ನ್ಯಾಯ-ದಂಡನೆಯ ಬಗ್ಗೆ ಪೂರ್ವಾಗ್ರಹದಿಂದ ಕೂಡಿಕೊಂಡಿತ್ತು. ಅದೇ ರೀತಿಯಲ್ಲಿ ಅವನು ಜಮೀನುದಾರರ ಆಸ್ತಿ ಬಗೆಗಿನ ನಿಲುವು ; ಅದರ ಹಕ್ಕು ಬಾಧ್ಯತೆಯ ಬಗ್ಗೆ ಮತ್ತು ಕಂದಾಯದ ಬಗ್ಗೆ ಅವನು ಸರಿಯಾದ ತೀರ್ಮಾನವನ್ನು ತೆಗೆದುಕೊಂಡಿರಲಿಲ್ಲ. ಕಾರ್ನವಾಲೀಸನು ನ್ಯಾಯಾಲಯ ಮತ್ತು ಅದು ಕೊಡುವ ತೀರ್ಪುಗಳ ಬಗ್ಗೆ ಮಾತಾಡುವಾಗ ಹಿಂದೂ ಮತ್ತು ಮುಸ್ಲಿಂ ಕಾನೂನುಗಳನ್ನು ಹೇರಳವಾಗಿ ಉದ್ಧರಿಸುತ್ತಾನೆ. ಬೆಂತಮ್ ಬಂಗಾಳದಲ್ಲಿ ಇದ್ದಾಗ ಭಾರತದ ಅನೇಕ ಸಂಪ್ರದಾಯಗಳ ಬಗ್ಗೆ ಅನುಮಾನಗಳನ್ನು ಇಟ್ಟುಕೊಂಡಿದ್ದ. ಆದರೆ ಇವರಿಬ್ಬರಿಗಿಂತ ಭಿನ್ನವಾಗಿ ಜೇಮ್ಸ್ ಮಿಲ್ ನ್ಯಾಯಾಲಯಗಳ ವಿಸ್ತರಣೆಗೆ ಕಾರಣವಾದ. ಜೇಮ್ಸ್ ಮಿಲ್‌ನ ಬಗ್ಗೆ ರಾಜಾರಾಂ ಮೋಹನರಾಯ್ 1828ರಲ್ಲಿ ಹೀಗೆ ಹೇಳುತ್ತಾರೆ : ನ್ಯಾಯಾಲಯದ ನಿಯಮಗಳು ಮತ್ತು ಅದರ ನಡಾವಳಿಗಳ ಬಗ್ಗೆ ಖಚಿತವಾದ ದೃಷ್ಟಿಯನ್ನು ಹೊಂದಿದ್ದ. ಜೇಮ್ಸ್‌ಮಿಲ್ ಇಷ್ಟು ಮಾತ್ರ ಮಾಡಿರಲಿಲ್ಲ. ಜಮೀನಿನ ಮೇಲೆ ಹಕ್ಕು ಮತ್ತು ಅದರ ಮೇಲಿನ ಕಂದಾಯದ ಬಗ್ಗೆಯೂ ನಿರ್ದಿಷ್ಟ ರೂಪ ಇರುವಂತೆ ನೋಡಿಕೊಂಡ. ಜೇಮ್ಸ್ ಮಿಲ್ ಇತರ ಬ್ರಿಟೀಶ್ ಅಧಿಕಾರಿಗಳ ರೀತಿಯಲ್ಲಿ ವರ್ತಿಸಿರಲಿಲ್ಲ. ಅವನು ಭಾರತೀಯರ ಸಂಪ್ರದಾಯಗಳನ್ನು ಗೌರವಿಸಿದ್ದ. ಅವನಿಗೆ ಭಾರತೀಯರ ಬಗ್ಗೆ ಪೂರ್ವಾಗ್ರಹವಿರಲಿಲ್ಲ. ಅವನು ಆಗಿನ ಚಾರಿತ್ರಿಕ ಅಗತ್ಯಕ್ಕೆ ತಕ್ಕಂತೆ ನ್ಯಾಯಾಲಯಗಳ ಸಂಖ್ಯೆಯನ್ನು ಹೆಚ್ಚು ಮಾಡಿದ. ಹೀಗೆ ಬೇರೆ ಬೇರೆ ವೈಸ್‌ರಾಯ್‌ಗಳ ಕಾಲದಲ್ಲಿ ಅವರ ದೃಷ್ಟಿಕೋನಕ್ಕೆ ಅನುಸಾರವಾಗಿ ಅವರವರ ಆಡಳಿತ ಕ್ರಮಗಳು ಬೇರೆ ಬೇರೆಯಾಗಿತ್ತು ಎಂಬುದು ಗಮನಾರ್ಹ (ರಾಮಲಿಂಗಪ್ಪ, ಎಚ್., 1995, ಪು. 732–745). ಗಾಂಧಿ ನ್ಯಾಯಾಲಯದ ಕುರಿತು ಹೇಳಿರುವ ಮಾತು ಕೂಡಾ ಇಲ್ಲಿ ಉಲ್ಲೇಖನೀಯ.

> **(ಒಬ್ಬ ನ್ಯಾಯಾಧೀಶರು ತನ್ನಂತಹವರು ಸಾಕ್ಷ್ಯವನ್ನು ಬರೆದಿಟ್ಟುಕೊಳ್ಳುವದರಲ್ಲಿಯೂ ತೀರ್ಪುಗಳನ್ನು ಕೊಡುವುದರಲ್ಲಿಯೂ ನ್ಯಾಯಸ್ಥಾನಗಳಲ್ಲಿ ಕಂಡುಬರುವ ಸುಳ್ಳುಗಾರಿಕೆಯನ್ನು ಹೇಗೆ ತಡೆಗಟ್ಟಬೇಕೆಂದು ಗಾಂಧೀಜಿಯನ್ನು ಪ್ರಶ್ನಿಸಿದರು – ಅದಕ್ಕೆ ಗಾಂಧೀಜಿಯ ಉತ್ತರವಿದು.)**

ನ್ಯಾಯಸ್ಥಾನಗಳ ಸುತ್ತು ಮುತ್ತಲಿನ ವಾತಾವರಣ ಹೇಯವಾದುದು ಎಂದು ಅದನ್ನು ನೋಡಿದವರು ಬಲ್ಲರು. ನ್ಯಾಯ ನಿರ್ಣಯ ವಿಧಾನ ಹೇಗೆ ಇರಬೇಕೆಂಬ ವಿಚಾರದಲ್ಲಿ ನನ್ನ ಅಭಿಪ್ರಾಯಗಳು ಕ್ರಾಂತಿಕಾರಕವಾದುವು ಆದರೆ ಅವುಗಳನ್ನು ನಾನು ಸಾರಿದರೆ ಅರಣ್ಯರೋದನವಾದೀತು. ಈ ಪದ್ಧತಿಯಿಂದ ಲಾಭ ಪಡೆಯುತ್ತಿರುವವರು ಯಾವ ದೊಡ್ಡ ಸುಧಾರಣೆಗೂ ಸಮ್ಮತಿಸಲಾರರು. ಅದಕ್ಕೆ ನಮ್ಮ ದೇಶವು ಸತ್ಯ ಮತ್ತು ಅಹಿಂಸಾ ಮಾರ್ಗದಲ್ಲಿ ಮುಂದುವರಿದು ಸ್ವಾತಂತ್ರ್ಯ ಗಳಿಸಬೇಕು. ಆ ವೈಭವಪೂರ್ಣವಾದ ಘಟನೆ ನಡೆದಾಗ ನ್ಯಾಯ ಮತ್ತು ಔಷಧಗಳ ವಿತರಣೆ ಈಗ ಎಷ್ಟು ತುಟ್ಟಿಯಾಗಿದೆಯೋ ಅಷ್ಟೂ ಅಗ್ಗವಾಗಿರುವುದು. ಈಗ ಎಷ್ಟು ಅಹಿತವೂ ಅನಿಷ್ಟವೂ ಆಗಿದೆಯೋ ಆಗ ಅಷ್ಟು ಹಿತವೂ ಇಷ್ಟಕರವೂ ಆಗುವುದು. ನೀವು ನಿಮ್ಮ ನ್ಯಾಯಮೂರ್ತಿಗಳ ಗದ್ದುಗೆಯಿಂದಿಳಿದು ಬಡತನವನ್ನು ಸ್ವೀಕಾರ ಮಾಡಿ ಬಡವರ ಸೇವೆಯನ್ನು ಕೈಗೊಳ್ಳಬೇಕು. ಈ ಉಪದೇಶವು ಬಹಳ ಸಾಹಸಯುತವಾದುದು. ಆದರೆ ಸಾಮಾನ್ಯ ಉಪದೇಶವೆಂದರೆ – ನೀವು ಇರುವ ಸ್ಥಳದಲ್ಲಿಯೇ ಇದ್ದುಕೊಂಡು ನಿಮ್ಮನ್ನು ಸುತ್ತುಗಟ್ಟುವ ಕಷ್ಟಗಳನ್ನು ಎದುರಿಸಿ ನಿಮ್ಮ ಶಕ್ತಿಯನ್ನೆಲ್ಲ ವಿನಿಯೋಗಿಸಿ ಸೇವೆ ಮಾಡುವುದು, ನಿಮ್ಮ ವೈಯಕ್ತಿಕ ಜೀವನವನ್ನು ಸರಳವನ್ನಾಗಿ ಮಾಡಿಕೊಳ್ಳುವುದು, ನಿಮ್ಮ ವರಮಾನದ ಉಳಿತಾಯವನ್ನು ಬಡವರ ಸೇವೆಗಾಗಿ ಮೀಸಲಾಗಿಡುವುದು.

(ಹರಿಜನ, 17.2.1940)

(ಸತ್ಯ–ಅಹಿಂಸೆ 1958 ಮೋ. ಕ. ಗಾಂಧಿ ಪುಟ. 41)

ಭಾರತದಲ್ಲಿ ಕಾನೂನನ್ನು ಎಲ್ಲ ವಿಷಯದಲ್ಲಿ ಮಹಮ್ಮದೀಯರಿಗೆ ಅನ್ವಯಿಸುವುದಿಲ್ಲ. ಭಾರತ ಸಂವಿಧಾನ ಅನುಚ್ಛೇದ 225 ರನ್ವಯ ಈ ಕಾನೂನನ್ನು ಮುಸಲ್ಮಾನರಿಗೆ ಅನ್ವಯಿಸಲಾಗುವುದು. ಇದಲ್ಲದೆ

1. ವಾರಸಾ ವಿಷಯದಲ್ಲಿ ಹಾಗೂ ವಂಶಪರಂಪರಾಗತವಾಗಿ ಆಸ್ತಿಯು ಬರುವ ವಿಷಯದಲ್ಲಿ ಸಹ ನಿರ್ದಿಷ್ಟವಾದ ಕಾನೂನಿನಿಂದ ಮಹಮ್ಮದೀಯರಿಗೆ ಈ ಕಾನೂನನ್ನು ಅನ್ವಯಿಸಲಾಗುವುದು.

2. ಸತ್ಯ, ನ್ಯಾಯ ಇವುಗಳ ದೃಷ್ಟಿಯಿಂದ ಒಬ್ಬನಿಗೆ ಇರುವ ಪೂರ್ವ ಅಧಿಕಾರವನ್ನು (Pre-emption) ಈ ಹಕ್ಕನ್ನು ಮಹಮ್ಮದೀಯರಿಗೆ ಅನ್ವಯಿಸಲಾಗುವುದು.

3. ಒಬ್ಬನು ಮಹಮ್ಮದೀಯನಾದರೂ ಅವನಿಗೆ ಮಹಮ್ಮದೀಯರ ಕ್ರಿಮಿನಲ್ ಕಾನೂನು ಇಲ್ಲವೇ ಮಹಮ್ಮದೀಯ ಸಾಕ್ಷ್ಯದ ಕಾನೂನು ಇವು ಅನ್ವಯಿಸುವದಿಲ್ಲ.

ಈ ವಿಷಯದಲ್ಲಿ ಮಹಮ್ಮದೀಯರಿಗೆಲ್ಲ ಸಾಮಾನ್ಯವಾದ ಕಾನೂನನ್ನೇ ಅನ್ವಯಿಸುತ್ತಾರೆ ಒಬ್ಬನು ಮಹಮ್ಮದೀಯ ಧರ್ಮವನ್ನು ತ್ಯಜಿಸಿದರೆ ಅವನಿಗೆ ಮಹಮ್ಮದೀಯ ವಾರಸಾ– ಕಾನೂನು ಅನ್ವಯಿಸುವದಿಲ್ಲ. ಇದನ್ನು (Freedom of Religious Act XXI of 1850) ಧಾರ್ಮಿಕ ಸಮಾಗಮದ ಅಧಿನಿಯಮ 1850 ರ ಅನ್ವಯ ಒಂದು ಆಸ್ತಿಯನ್ನು ಇತರರಿಗೆ ಮಾರುವ ಪೂರ್ವ ಹಕ್ಕನ್ನು ಒಬ್ಬ ಮಹಮ್ಮದೀಯನಿಗೆ ಅನ್ವಯಿಸಬೇಕೆಂದು ಎಲ್ಲಿಯೂ ಕಾಣಿಸಿಲ್ಲ. ಆದರೂ ನ್ಯಾಯ ದೃಷ್ಟಿಯಿಂದ ಅವುಗಳನ್ನು ಔಂಧದಲ್ಲಿ, ಉತ್ತರ ಭಾರತದಲ್ಲಿ, ಪಶ್ಚಿಮ ಪಂಜಾಬ ಹಾಗೂ ಪೂರ್ವ ಪಂಜಾಬ ಈ ಪ್ರದೇಶಗಳಲ್ಲಿ ಅನ್ವಯಿಸುವರು. ಭಾರತ ದಂಡ ಪ್ರಕ್ರಿಯ ಸಹಿಂತೆ, ಭಾರತ ದಂಡ ಸಹಿಂತೆ ಇವು ಸಾಮಾನ್ಯ ಕಾನೂನುಗಳಾಗಿದ್ದು ಈ ಕಾನೂನುಗಳನ್ನೇ ಮುಸಲ್ಮಾನರಿಗೆ ಅನ್ವಯಿಸುತ್ತಾರೆ. ಸತ್ಯ, ಸಮಾನತೆ ಮತ್ತು ನ್ಯಾಯ ದಾನ ದೃಷ್ಟಿಯಿಂದ ಈ ತತ್ವಗಳನ್ನು ನ್ಯಾಯಾಲಯವು ಅನ್ವಯಿಸುತ್ತದೆ. ಯಾವುದೇ ಕಾನೂನು, ನ್ಯಾಯ ದಾನ ದಾನದೃಷ್ಟಿಯಿಂದ ನ್ಯಾಯ ಸಮ್ಮತವಿಲ್ಲದಿದ್ದರೂ, ಅಂತಹ ಕಾನೂನನ್ನು ಮುಸಲ್ಮಾನರಿಗೆ ಅನ್ವಯಿಸಕೂಡದೆಂದು ಮದ್ರಾಸ ರಾಜ್ಯದಲ್ಲಿ ಒಬ್ಬ ಮಹಮ್ಮದೀಯನಿಗೆ ಇರುವ ವಿಕ್ರಿಯ ಪೂರ್ವದ ಹಕ್ಕನ್ನು ಅನ್ವಯಿಸುವದಿಲ್ಲ. ಇದು ಒಬ್ಬನ ಆಸ್ತಿಯನ್ನು ಇತರರಿಗೆ ಮಾರುವ ಪೂರ್ವದಲ್ಲಿ ಮೊದಲೇ ಕೊಳ್ಳುವ ಹಕ್ಕು ಅಂದರೆ ಅದನ್ನು ಮಗ್ಗುಲದ ಮನೆಯವನಿಗೆ ಇಲ್ಲವೇ ಹೊಲದವನಿಗೆ ಮಾರಾಟ ಮಾಡಬೇಕಾಗುತ್ತದೆಂದರು. ಆದರೆ ಮುಂಬೈ ಹಾಗೂ ಅಲಹಾಬಾದ ಉಚ್ಚನ್ಯಾಯಾಲಯಗಳು ಮಹಮ್ಮದೀಯರಿಗೆ ಮಹಮ್ಮದೀಯ ಕಾನೂನಿನ ಮೇರೆಗೆ ಆಸ್ತಿಯ ಮಾರುವ ಪೂರ್ವದಲ್ಲಿ ಮೊದಲೇ ಕೊಳ್ಳುವ ಹಕ್ಕೆಂದು ನಿರ್ಣಯ ಕೊಟ್ಟಿರುತ್ತವೆ.

ಶರಿಯತ್ ಆ್ಯಕ್ಟ, 1937 ಇದರ ಕಲಂ 6 ರ ಅನ್ವಯ ಇರುವ ರೂಢಿ ಮತ್ತು ಸಂಪ್ರದಾಯುಗಳನ್ನು ಹೊರತುಪಡಿಸಿ ಉಳಿದೆಲ್ಲ ಸಂಪ್ರದಾಯುಗಳನ್ನು ನಿರಸನಗೊಳಿಸಲಾಗಿದೆ. ಕಲಂ 2 ಇದು ರೂಢಿ ಮತ್ತು ಸಂಪ್ರದಾಯಗಳನ್ನು ಸಂಕ್ಷೇಪಗೊಳಿಸಲಾಗಿದೆ. ಅನಿಶ್ಚಿತವಿರುವ ಕೆಲವೊಂದು ಪದ್ಧತಿಗಳು ಪಶ್ಚಿಮ ಬಂಗಾಳ ಮತ್ತು ಪೂರ್ವ ಬಂಗಾಳದಲ್ಲಿ ಇದ್ದವು. ಇವುಗಳನ್ನು ಅದು ತೆಗೆದುಹಾಕುತ್ತದೆ. ಮತ್ತು ಹೆಣ್ಣು ಮಕ್ಕಳಿಗೆ ಈ ಹಕ್ಕುಗಳು ಸಾಕಷ್ಟು ಇರುವದಿಲ್ಲ. ಅವರಿಗೆ ಇನ್ನೂ ಹೆಚ್ಚಿನ ಹಕ್ಕುಗಳನ್ನು ಈ ಕಾನೂನು ದಯಪಾಲಿಸುತ್ತದೆ. ಈ ಕಾನೂನಿನಲ್ಲಿ ಇಲ್ಲದ ಹಕ್ಕನ್ನು ಯಾವ ನ್ಯಾಯಾಲಯವು ದಯಪಾಲಿಸಲಾರದು. 'ಶೆರಿಯತ್' ಈ ಪದವನ್ನು ಮಹಮ್ಮದೀಯರ ವೈಯಕ್ತಿಕ ಕಾನೂನು ಈ ಅರ್ಥದಲ್ಲಿ ಬಳಸಲಾಗಿದೆ. ಮತ್ತು

ಬೇರೆ ಯಾವ ವಿಶಿಷ್ಟ ಅರ್ಥದಲ್ಲಿಯೂ ಇದನ್ನು ಬಳಸಿಲ್ಲ. ಈ ಕಾನೂನು ಶಿಯಾ ಮತ್ತು ಸುನ್ನೀ ಎರಡೂ ಪಂಗಡದವರಿಗೆ ಅನ್ವಯಿಸುತ್ತದೆಂದು ಕಲಂ 30 ರಲ್ಲಿ ಹೇಳಲಾಗಿದೆ.

ಮಹಮ್ಮದೀಯ ಕಾನೂನನ್ನು ಬ್ರಿಟಿಶ್ ಹಿಂದೂಸ್ಥಾನದಲ್ಲಿ ನೈತಿಕ ವಿಷಯವೆಂದು ಅನ್ವಯಿಸುತ್ತಿದ್ದರು. ಈ ನೈತಿಕತೆಯು ಭಾರತದಲ್ಲಿ ಮೊಘಲರ ಕಾಲದಿಂದ ವಂಶ ಪರಂಪರೆಯಾಗಿ ಅಂಗಿಕರಿಸಿದ ಪರಂಪರೆಯ ಪರಿಣಾಮವಾಗಿತ್ತು. ಮೊಘಲ ಅರಸರು ಹಿಂದೂ ಮತ್ತು ಇಸ್ಲಾಮಿಕ ವಿಧಿಗಳನ್ನು ತಮ್ಮ ಅಭಿಪ್ರಾಯಗಳಿಗನುಸಾರವಾಗಿ, ಈ ಪಂಗಡಗಳ ಪ್ರತಿಯೊಬ್ಬರಿಗೆ ತಮ್ಮ ಸ್ವಂತ ಧರ್ಮದ ಆಚರಣೆಯನ್ನು ರಕ್ಷಿಸುವ ಮತ್ತು ಕಾಪಾಡುವ ಹೊಣೆ ಹೊರುವುದರ ಸಲುವಾಗಿ ಪ್ರಜೆಗಳಿಗೆ ಅನ್ವಯಿಸಿದರು.

"ಆ ನಿಯಮಗಳನ್ವಯ ಖಾಸಗಿ ವಾದ ವಿವಾದಗಳನ್ನು ನಿರ್ಣಯಸುವುದರ ಸಲುವಾಗಿ, ಪಕ್ಷಕಾರರು ನಾಗರಿಕ ಜೀವನದಲ್ಲಿ (Civil Life) ಅವುಗಳನ್ನು ನಿರ್ವಹಿಸುವ ನಿಯಮಗಳೆಂದು ತಮ್ಮ ಕಾನೂನುಗಳ ಪ್ರಕಾರ ನ್ಯಾಯ ಸಮ್ಮತವೆಂದು ನಿರ್ಣಯಿಸಿದಕ್ಕಿಂತ ಹೆಚ್ಚು ಸ್ಪಷ್ಟವಾದುದು ಯಾವುದೂ ಇರುವುದಿಲ್ಲ. ಅಥವಾ ಗ್ರೇಟ ಬ್ರಿಟನದ ಹಿಂದೂ ಮತ್ತು ಮುಸಲ್ಮಾನ ಪ್ರಜೆಗಳು ಪತ್ಯೇಕವಾಗಿ ಪವಿತ್ರವೆಂದು ತೀರ್ಮಾನಿಸುವ ಖಾಸಗೀ ಕಾನೂನುಗಳಿಗಿಂತ ಇದು ಹೆಚ್ಚು ಜಾಣತನದ್ದು ಆಗಿರುವುದಿಲ್ಲ. ಮತ್ತು ಅವುಗಳ ಉಲ್ಲಂಘನೆಯು ಅತಿ ದುಃಖಕರವಾದ ಅನ್ಯಾಯವುಳ್ಳದ್ದು ಆಗುವದೆಂದು ಅವರು ತಿಳಿಯುವರು. ಅದನ್ನು ಅವರಿಗೆ ತಿಳಿಯದ ಹೊಸ ವ್ಯವಸ್ಥೆಯಿಂದ ರದ್ದುಗೊಳಿಸತಕ್ಕುದಲ್ಲ. ಮತ್ತು ಅವರು ಅವುಗಳನ್ನು ತೀವ್ರತರ ಮತ್ತು ಸಹನೆಯ ಭಾವದಿಂದ ಅವರ ಮೇಲೆ ಹೇರಿದವು ಎಂದು ಅವರು ತಿಳಿದಿರಲೇಬೇಕು. (W.H. Morley; Administration of justice in British India (London 1858, 193)

ಬ್ರಿಟಿಶರು ತಮ್ಮ ನ್ಯಾಯ ನೀತಿಯನ್ನು ಮೂರು ಮುಖ್ಯ ಆಲೋಚನೆಗಳಿಂದ ನಿರ್ದೇಶಿಸಿದ್ದರು. ಮೊದಲನೆಯದಾಗಿ, ಅವರು ಹಿಂದಿನ ಜೀವಿತದಲ್ಲಿ ಯಾವುದೇ ವಿರಾಮವನ್ನು ಅಪೇಕ್ಷಿಸಲಿಲ್ಲ, ಎರಡನೆಯದಾಗಿ, ಅವರ ಮುಖ್ಯ ಉದ್ದೇಶವು ವ್ಯಾಪಾರ ಸೌಕರ್ಯಕ್ಕಾಗಿ ಸಾಮಾಜಿಕವಾಗಿ ಸ್ಥಿತಿಗಳನ್ನು ದೊರಕಿಸುವುದು ಆಗಿತ್ತು; ಮತ್ತು ಮೂರನೆಯದಾಗಿ, ಅವರ ಪ್ರಜೆಗಳ ಧಾರ್ಮಿಕ ಪರಿಣಾಮಕಾರಕ ಸಂಗತಿಗಳಲ್ಲಿ ಮಧ್ಯಪ್ರವೇಶಿಸುವುದನ್ನು ಅವರು ಇಚ್ಛೆ ಪಡಲಿಲ್ಲ. ಉದಾಹರಣೆಗಾಗಿ; ಮೋರ್ಲೇ ಈತನು ಹೀಗೆ ಹೇಳಿರುವನು:-

ಹಿಂದೂ ಮತ್ತು ಮಹಮ್ಮದೀಯ ಕಾನೂನುಗಳನ್ನು ಮಾರ್ಪಡಿಸುವ ಮತ್ತು ರದ್ದುಪಡಿಸುವುದನ್ನು ಪರ್ಯಾಲೋಚಿಸಿದಾಗ, ಕಾನೂನು ಶಾಸ್ತ್ರದ ಇಂಗ್ಲೀಷ ಮತ್ತು ದೇಶೀ ವ್ಯವಸ್ಥೆಗಳ ಸಂಬಂಧಾತ್ಮಕ ಶ್ರೇಷ್ಠ ವಿಚಾರಗಳನ್ನು ಎರಡನೆಯ ಆಲೋಚನೆಗಳೆಂದು ತಿಳಿಯತಕ್ಕದ್ದು; ಅಥವಾ ಇಂತಹ ಪದ್ಧತಿಗಳು ಒಳ್ಳೆಯವು ಅಥವಾ ಕೆಟ್ಟವು ಎಂಬುದನ್ನು ಪ್ರಶ್ನಿಸತಕ್ಕದಲ್ಲ; ಯಾಕೆಂದರೆ ಅವು ಭಾರತದ ಪ್ರಸಕ್ತ ಸಾಮಾಜಿಕ ಸ್ಥಿತಿಯಲ್ಲಿ ಜನರ ಅವಶ್ಯಕತೆಗಳಿಗೆ ಮತ್ತು ದುರಾಗ್ರಹಗಳಿಗೆ ನಿಃ ಸಂದೇಹವಾಗಿ ಅತ್ಯುತ್ತಮವಾಗಿ ಹೊಂದಿಕೊಂಡಿರುವುವೆಂಬುದನ್ನು ಯಾವಾಗಲೂ ಮರೆಯುತಕ್ಕದ್ದಲ್ಲ. ಇಂಥ ಜನರು ದೇಶದ ಜನಸಂಖ್ಯೆಯಲ್ಲಿ ಅತ್ಯಧಿಕ ಪ್ರಮಾಣದಲ್ಲಿರುವುದು ಮತ್ತು ನಾವು ಸಂಪೂರ್ಣ ಒಪ್ಪಂದಕ್ಕೆ ಬದ್ಧವಿರದಿದ್ದರೂ, ಸಹ–ಅವುಗಳನ್ನು ಕಾಪಾಡಲು ನಾವು ವಾಸ್ತವಿಕವಾಗಿ ವಚನ ಬದ್ಧರಾಗಿರುವೆವು (Morley 197)

ಈ ನೀತಿಯನ್ನು ಅಂಗೀಕರಿಸಿದ ಅತಿ ಮೊದಲಿನ ಕುರುಹು, 1753 ರಲ್ಲಿ ಎರಡನೆ ಜಾರ್ಜನು ಅನುಮತಿ ಕೊಟ್ಟ ಸನದಿನಲ್ಲಿ ಕಂಡುಬರುವುದು (Ibid 177) ವಾರನ್ ಹೇಸ್ಟಿಂಗ್ಸನು 1772 ರಲ್ಲಿ ಮಂಡಿಸಿ, ಅಂಗೀಕರಿಸಿದ ಯೋಜನೆಯಲ್ಲಿ ಈ ಮೌಲ್ವಿಗಳು ಮತ್ತು ಪಂಡಿತರು ಕಾನೂನನ್ನು ವಿವರಿಸುವಲ್ಲಿ ನ್ಯಾಯಾಲಯಗಳಲ್ಲಿ ಹಾಜರಿರಬೇಕೆಂದು ವ್ಯವಸ್ಥೆ ಮಾಡಿದ್ದರು ಮತ್ತು ಅನಂತರ 1780 ರಲ್ಲಿಯ ಪ್ರಖ್ಯಾತ ನಿಯಮಗಳ ಭಾಗ 27 ರನ್ವಯ ಹೀಗೆ ಸ್ಥಾಪಿಸಿದರು : ವಾರಸಾ, ಮದುವೆ ಮತ್ತು ಜಾತಿ ಮತ್ತು ಇತರ ಧಾರ್ಮಿಕ ಆಚರಣೆಗಳಿಗೆ ಮತ್ತು ಸಂಸ್ಥೆಗಳಿಗೆ ಸಂಬಂಧಿಸಿದ ಎಲ್ಲಾ ಮೊಕದ್ದಮೆಗಳಲ್ಲಿ ಮಹಮ್ಮದೀಯರ ವಿಷಯದಲ್ಲಿಯ ಕುರಾನದ ಕಾನೂನುಗಳು ಮತ್ತು Gentooದ ವಿಷಯದಲ್ಲಿಯ ಶಾಸ್ತ್ರ (shaster) ದ ಕಾನೂನುಗಳನ್ನು ಕಟ್ಟು ನಿಟ್ಟಾಗಿ ಪಾಲಿಸಬೇಕು. (Ibid 177-8) ಪಕ್ಷಕಾರರ ಪೈಕಿ ಒಬ್ಬನು ಮಾತ್ರ ಹಿಂದು ಅಥವಾ ಮುಸ್ಲಿಮನಾಗಿದ್ದರೆ, ಆಗ ಪ್ರತಿವಾದಿಯ ಕಾನೂನುಗಳನ್ನು ಮತ್ತು ಆತನ ರೂಢಿಗಳನ್ನು ಅವನಿಗೆ ಅನ್ವಯಿಸುವರು. (Sir George Rankin, Background to Indiam Law (Cambridge 1946) 9 See Robasa (Rababa) v. Khoda dad (1946) 48 Bom LR 864; 878. See, also the observations of Mahmood . in Gobind, Dayals (case, case' 431-2 ; M. Mujeel, Indian Muslims 42)

ನ್ಯಾಯಮೂರ್ತಿ ಬ್ಲೇಗಡನ್ ಈತನ ಅಭಿಪ್ರಾಯಗಳನ್ನು ಯಾವಾಗಲೂ ವಿಚಾರ ಮಾಡಬೇಕು–

ಹಿಂದು, ಮಹಮ್ಮದೀಯ, ಸೀಖ್, ಪಾರ್ಸಿ, ಕ್ರಿಶ್ಚಿಯನ್, ಜ್ಯೂ ಇವುಗಳಲ್ಲಿ ಯಾವುದೇ ಧರ್ಮವು ಬ್ರಿಟಿಶ್ ಭಾರತ (ಇಂಡಿಯಾ)ವನ್ನು ಆಳುವುದಿಲ್ಲ. ಆದರೆ ಗ್ರೇಟ ಬ್ರಿಟನ್ ವಿಧಿಸಿದ ಕಾನೂನು ಮಾತ್ರ ಆಳುತ್ತದೆ. ಅದರಲ್ಲಿ ಹಿಂದುಗಳು, ಮಹಮ್ಮದೀಯರು, ಸೀಖ್ಖರು, ಪಾರ್ಸಿಗಳು ಮತ್ತು ಇತರರು ಸಮಾನ ಹಕ್ಕುಗಳನ್ನು ಮತ್ತು ಅತ್ಯಧಿಕ ಧಾರ್ಮಿಕ ಆಚರಣೆಯ ಸ್ವಾತಂತ್ರ್ಯವನ್ನು ಉಪಭೋಗಿಸುವರು; ಮತ್ತು ಅದು ಇತರ ಜನರ ಅಧಿಕಾರಿಗಳ ಪ್ರತಿಯೊಂದು ವಿಷಯದಲ್ಲಿ ಸುಸಂಗತವಾಗಿ ಇರುವುದು. ಯಥಾಸ್ಥಿತಿಗೆ ಅನ್ವಯುವಾಗಿ ನಾನು ಈ ಪ್ರಕರಣವನ್ನು ತೀರ್ಮಾನಿಸಬೇಕಾಗಿದೆ. ಮತ್ತು ಈ ಪ್ರಕರಣದಲ್ಲಿ ಮಹಮ್ಮದೀಯ ಕಾನೂನು ಮಹಮ್ಮದೀಯೇತರನಿಗೆ (non Mahomedan) ಅನ್ವಯಿಸುವುದೆಂದು ತೀರ್ಮಾನಿಸಲು ನನಗೆ ಸಾಕಷ್ಟಾದ (adequate) ಕಾರಣವು ಇರುವುದೆಂದು ತೋರುವುದಿಲ್ಲ. (ರೋಬಾಬಾ ಖನ್ನುಮ ವಿ. ಖೋಡಾದಾದ ಬೊಮ್ಮಂಜಿ ಇರಾಣಿ (1946) 48 ಬಾಂಬೇ ಲಾ ರಿಪೋರ್ಟ 869. ಸ್ಕಿನರ್. ವಿ. ಓರ್ಡೆ 63 ನೇ ಪುಟದಲ್ಲಿ ಉಲ್ಲೇಖಿತವಾಗಿದೆ. ಟಿಪ್ಪಣಿ (1) ಮೇಲೆ.)

* * *

೧೦. ಬ್ರಿಟಿಷ್ ಪ್ರಭುತ್ವದ ಪ್ರಭಾವಗಳು ಮತ್ತು ಅವುಗಳ ಪರಿಣಾಮಗಳು ಮತ್ತು ಇದಕ್ಕೆ ಸಂಬಂಧಿಸಿದ ಪ್ರತಿಕ್ರಿಯೆಗಳು

ಈ ಕುರಿತಂತೆ ತಾರಾಚಂದ್ ಅವರು ತಮ್ಮ ಕೃತಿಯಲ್ಲಿ ಸುದೀರ್ಘವಾಗಿ ಚರ್ಚಿಸಿದ್ದಾರೆ.

> ಭಾರತದ ಆರ್ಥಿಕ ಮತ್ತು ನೈತಿಕ ವಿಮೋಚನೆ.... ಮುಖ್ಯವಾಗಿ ನಿಮ್ಮ ಕೈಯಲ್ಲಿದೆ. ಭಾರತದ ಭವಿಷ್ಯ ನಿಮ್ಮ ಮಡಿಲಲ್ಲಿದೆ. ಏಕೆಂದರೆ ನೀವೇ ಮುಂದಿನ ಪೀಳಿಗೆಗಳನ್ನು ಬೆಳೆಸುವವರು. ಭಾರತದ ಮಕ್ಕಳನ್ನು ಸರಳರು ದೈವಭಕ್ತರು, ಧೀರ ಪುರುಷ ಸ್ತ್ರೀಯರು ಆಗುವಂತೆ ಬೆಳೆಸಬಲ್ಲವರು ನೀವು. ಅಥವಾ ಬಾಳಿನ ಬಿರುಗಾಳಿಗೆ ತಡೆಯದ ಬಲಹೀನರು, ವಿದೇಶೀ ಸೊಗಸುಗಳಿಗೆ ಸೋತವರು ಆಗುವಂತೆ ಅತಿ ಉಪಚಾರ ಮಾಡಿ ಬೆಳೆಸಬಲ್ಲವರು ನೀವು ಮುಂದೆ ಬಾಳಿನಲ್ಲಿ ಆ ಸೊಗಸುಗಳನ್ನು ಬಿಡುವುದು ಅವರಿಗೆ ಕಷ್ಟವಾದೀತು.
>
> (ಆಯ್ದಪತ್ರಗಳು ಪುಟ. 287)

ಟೀಕಾಕಾರರಾದ ಹಾಬರ್‌ಸನ್‌ರವರು ಈ ಕಾರ್ಯಕ್ರಮಗಳ ಪಟ್ಟಿಯನ್ನು ಈ ರೀತಿ ಕೊಟ್ಟಿದ್ದಾರೆ.

ಜನತೆಗೆ ಲಭಿಸುವ ನ್ಯಾಯದ ಮಟ್ಟವನ್ನು, ನಾವು ನ್ಯಾಯ ನಿಬಂಧನೆಗಳ ಸಮತೂಕ ಹಾಗೂ ಸಮಾನವಾದ ಜಾತಿಯಿಂದ ಹೆಚ್ಚಿಸಿದ್ದೇವೆ. ನಾವು ತೆರಿಗೆಯ ಹೊರೆಯನ್ನು

ವ್ಯವಸ್ಥೆಗೊಳಿಸಿ, ಪ್ರಾಯಶಃ ಕಡಿಮೆ ಮಟ್ಟಕ್ಕೂ ಇಳಿಸಿದ್ದೇವೆ. ನಾವು ದೇಶೀಯ ರಾಜರ ಹಾಗೂ ಅವರ ಅಧೀನ ಮುಖಂಡ ಸಾರ್ವಜನಿಕರ ಲಂಚಗುಳಿತನ ಮತ್ತು ದಬ್ಬಾಳಿಕೆಯನ್ನು ತಡೆದುದರಿಂದ ಇದು ಸಾಧ್ಯವಾಗಿದೆ ಎಂದು ಹೇಳಬಹುದು. ಜನತೆಯ ಶಿಕ್ಷಣಕ್ಕೆ ನಾವು ಒಂದು ಸಾರ್ವಜನಿಕ ಶಾಲಾ ಮತ್ತು ಕಾಲೇಜುಗಳ ವ್ಯವಸ್ಥೆಯನ್ನು ಕ್ರಮಗೊಳಿಸಿದ್ದೇವೆ ಹಾಗೂ ಭಾಗಶಃ ಸಾರ್ವಜನಿಕವೇ ಆದ ಮಿಷನರಿಗಳ ಸಂಘ ಸಂಸ್ಥೆಗಳನ್ನು ಸ್ಥಾಪಿಸಿ ತನ್ಮೂಲಕ ಕ್ರಿಶ್ಚಿಯನ್ ಧರ್ಮಮಾತ್ರವಲ್ಲದೆ ಅನೇಕ ಕೈಗಾರಿಕಾ ಕುಶಲ ವಿದ್ಯೆಗಳನ್ನು ಕಲಿಸುವ ವ್ಯವಸ್ಥೆ ಮಾಡಿದ್ದೇವೆ. ಹೆದ್ದಾರಿಗಳು, ರೈಲು ಮಾರ್ಗ ಮತ್ತು ಕಾಲುವೆಗಳ ವ್ಯವಸ್ಥೆಯಿಂದ ಸಾರಿಗೆ ಮತ್ತು ಸಂಪರ್ಕವು ಸುಲಲಿತವಾಗುವಂತೆ ಮಾಡಿದ್ದೇವೆ. ವಿಜ್ಞಾನ ಆಧಾರಿತವಾದ ವಿಸ್ತಾರವಾದ ನೀರಾವರಿ ಯೋಜನೆಗಳಿಂದ ಭೂಮಿಯ ಉತ್ಪಾದನಾ ಶಕ್ತಿಯನ್ನು ಹೆಚ್ಚಿಸಿದ್ದೇವೆ. ಕಲ್ಲಿದ್ದಲು, ಬಂಗಾರ ಮತ್ತಿತರ ಲೋಹಗಳ ಗಣಿ ಕೈಗಾರಿಕೆಯನ್ನು ಬಹುವಾಗಿ ಅಭಿವೃದ್ಧಿಗೊಳಿಸಿದ್ದೇವೆ. ಬೊಂಬಾಯಿ ಮತ್ತು ಇತರ ನಗರಗಳಲ್ಲಿ ಆಧುನಿಕ ಯಂತ್ರ ಸಜ್ಜಿತವಾದ ಹತ್ತಿ ಗಿರಣಿಗಳನ್ನು ಸ್ಥಾಪಿಸಿರುವುದಲ್ಲದೆ ಇತರ ಯಾಂತ್ರಿಕ ಕೈಗಾರಿಕೆಗಳನ್ನು ಸ್ಥಾಪನೆಮಾಡಿ ತನ್ಮೂಲಕ ದೊಡ್ಡ ದೊಡ್ಡ ನಗರಗಳಲ್ಲಿನ ಪ್ರಜಾಕೋಟಿಗೆ ನೌಕರಿ ದೊರೆಯುವಂತೆ ಮಾಡಿದ್ದೇವೆ. ಟೀ, ಕಾಫಿ, ನೀಲಿ, ಸೆಣಬು, ಹೊಗೆಸೊಪ್ಪು ಮತ್ತಿತರ ಪ್ರಮುಖ ಬೆಳೆಗಳನ್ನು ಭಾರತೀಯ ವ್ಯವಸಾಯದಲ್ಲಿ ಅಳವಡಿಸುವಂತೆ ಮಾಡಿದ್ದೇವೆ. ಮಾನವೀಯತೆಗೆ ವಿರುದ್ಧವಾಗಿದ್ದ ಮತ್ತು ಪ್ರಗತಿಗೆ ಅಡ್ಡಿಯಾಗಿದ್ದ ಅನೇಕ ಧಾರ್ಮಿಕ ಹಾಗೂ ಸಾಮಾಜಿಕ ಮೂಢ ನಂಬಿಕೆಗಳನ್ನು ಕ್ರಮೇಣ ಮುರಿದು ಉರುಳಿಸುತ್ತ ಬರುತ್ತಿದ್ದೇವೆ. ಬಲವಾಗಿ ಬೇರೂರಿರುವ ಜಾತಿ ಪದ್ಧತಿಯು ಕೂಡ ಎಲ್ಲೆಲ್ಲಿ ಬ್ರಿಟಿಷ್ ಪ್ರಭಾವವು ಹಬ್ಬಿದೆಯೋ ಅಲ್ಲೆಲ್ಲಾ ಸ್ವಲ್ಪ ಸುಧಾರಿತವಾಗುತ್ತ ಬರುತ್ತದೆ.

ಕಾಬ್ಡನ್‌ರವರು ಭಾರತದ ವಿಷಯವಾಗಿ 1858ರ ಮೇ 16ರಂದು ಬರೆದ ಪತ್ರದಲ್ಲಿ ಹೀಗೆ ಹೇಳಿದರು :

ಭಾರತದಲ್ಲಿ ಈಗ ನಡೆಯುತ್ತಿರುವ ಘಟನೆಗಳಿಂದ ನಮ್ಮ ರಾಷ್ಟ್ರೀಯ ಸ್ವಭಾವವೇ ಅಧೋಗತಿಗಿಳಿಯುತ್ತದೆ ಮತ್ತು ನಮ್ಮ ಸ್ವಾತಂತ್ರ್ಯಪ್ರಿಯ ಮನೋಭಾವವು ಕೆಡುವ ಬೆದರಿಕೆಯಿವೆ ಎಂದು ನನಗೆ ಭಯವಾಗುತ್ತಿದೆ. ಅಲ್ಲಿ ನಿರಂಕುಶ ಪ್ರಭುವಿನ ಮತ್ತು ಕಟುಕನ ಕೆಲಸಗಳನ್ನು ನಿರ್ವಹಿಸುತ್ತ ನಮ್ಮ ದೇಶದಲ್ಲಿಯೇ ನಮ್ಮ ಸ್ವಭಾವವು ಅಧಃಪತನ ಹೊಂದದಂತೆ ಕಾಪಾಡಿಕೊಳ್ಳಲು ಸಾಧ್ಯವೆ? ತಮ್ಮ ಏಶ್ಯಾ ಖಂಡದ ಜಯಗಳು ಮತ್ತು ದೇಶಾಕ್ರಮಣಗಳಿಂದ ಪುರಾತನ ಗ್ರೀಕರು ಹಾಗೂ ರೋಮ್‌ನವರು ಲಂಚ

ಗುಳಿಗಳು ಅನೈತಿಕರೂ ಆಗಲಿಲ್ಲವೆ? ನಮಗೂ ಅವರಿಗಾದಂತಹ ಆದರೆ ಬೇರೆ ವಿಧದಲ್ಲಿ ವಿಪತ್ತು ಅಂಟಲಾರದೇ?

ಭಾರತದಲ್ಲಿ 1857ರ ಬಂಡಾಯವು ಬ್ರಿಟಿಷ್‌ರನ್ನು ತಲ್ಲಣಿಸಿತಲ್ಲದೆ, ಅವರಲ್ಲಿ ಭೀತಿಯನ್ನು ಹುಟ್ಟಿಸಿತ್ತು. ಅವರು ಇದಕ್ಕೆ ಪ್ರತಿಕ್ರಿಯೆಯಾಗಿ ಇಂಗ್ಲೆಂಡ್ ಹಾಗೂ ಭಾರತ ಎರಡರಲ್ಲಿಯೂ ತಮ್ಮ ಆಡಳಿತದ ಕಟ್ಟುಗಳನ್ನು ಬಿಗಿಮಾಡತೊಡಗಿದರು. ಇದರ ಫಲವು ಕಾಲಕ್ರಮದಲ್ಲಿ ಮೊದಲ ನಿರೀಕ್ಷಣೆಗಿಂತ ಭಿನ್ನವಾಗಿ ಪರಿಣಮಿಸಿತು. ಆಶ್ರಿತ ಭಾಗದಲ್ಲಿ ಎಂದರೆ ಭಾರತ ಸರಕಾರದಲ್ಲಿ ಅಧಿಕಾರದ ಕೇಂದ್ರೀಕರಣವು ಬಲಗೊಂಡಿತು. ಸೈನ್ಯದಲ್ಲಿನ ಬ್ರಿಟಿಷ್ ಅಂಶವನ್ನು ಬಲಪಡಿಸಲಾಯಿತು. ಭಾರತದ ಆಡಳಿತದಲ್ಲಿ ಗವರ್ನರ್ ಜನರಲ್‌ರವರ ಅಧಿಕಾರವನ್ನು ಹೆಚ್ಚಿಸಲಾಯಿತು ಮತ್ತು ಆ ಅಧಿಕಾರದ ಎಲ್ಲ ಕಟ್ಟುಗಳನ್ನು ವಿಸ್ತರಿಸಲಾಯಿತು. ಕೇಂದ್ರ ಕಾರ್ಯಕಾರೀ ಶಕ್ತಿಯನ್ನು ಬಲಪಡಿಸುವ ಹಾಗೂ ಯಾವ ಪ್ರತಿಸ್ಪರ್ಧಿಗಾದರೂ ಅವಕಾಶವನ್ನು ಮೊಟಕು ಮಾಡುವ ಉದ್ದೇಶದಿಂದ 1891ರ ಕಾನೂನು ಪ್ರಕಾರ ಸ್ಥಾಪಿತವಾಗಿದ್ದ ಲೆಜಿಸ್ಲೇಟಿವ್ ಕೌನ್ಸಿಲ್‌ಗಳು (ನ್ಯಾಯ ವಿಧಾಯಕ ಸಭೆಗಳು) ಕೇವಲ ನ್ಯಾಯ ವಿಧಾಯಕ ಸಮಿತಿಗಳು (ಲೆಜಿಸ್ಲೇಟಿವ್ ಕಮಿಟಿಗಳು) ಎಂದು ಮತ್ತು ಅವುಗಳಲ್ಲಿ ಜವಾಬ್ದಾರಿಯುತ ಸಂಸ್ಥೆಗಳ ಯಾವ ಸೋಂಕೂ ಇಲ್ಲವೆಂದೂ ಘೋಷಿಸಲಾಯಿತು. ಷೆಡ್ಯೂಲ್ಡ್ ಡಿಸ್ಟ್ರಿಕ್ಟ್ಸ್ ಎಂದು ಕರೆಯಲ್ಪಡುತ್ತಿದ್ದ ಪ್ರದೇಶಗಳಿಗೆ ನ್ಯಾಯ ನಿಬಂಧನೆಗಳನ್ನು ಸ್ವತಂತ್ರವಾಗಿ ವಿಧಿಸುವ ಅಧಿಕಾರವನ್ನು ಗವರ್ನರ್ ಜನರಲ್‌ಗೆ ಕೊಡಲಾಯಿತು.

ಗಾಂಧಿಯವರು ಬ್ರಿಟಿಷರ ಕುರಿತು ಬೇರೆ ಬೇರೆ ಕಾಲಘಟ್ಟಗಳಲ್ಲಿ ಬೇರೆ ಬೇರೆ ನಿಲುವನ್ನು ಹೊಂದಿದ್ದರು. ಅವರ ಆತ್ಮಕತೆಯಲ್ಲಿ ಇದು ಸೂಚಿತವಾಗಿದೆ (ಸತ್ಯಶೋಧನೆ, 122–125 : 209).

> "ಆಗ ಪೋರಬಂದರದಲ್ಲಿ ಅಡ್ಮಿನಿಸ್ಟ್ರೇಷನ್ ನಡೆಯುತ್ತಿದ್ದಿತು (ಪೋರಬಂದರ ಸಂಸ್ಥಾನವು ಬ್ರಿಟಿಷ್ ಸರಕಾರದಿಂದ ನಿಯಮಿಸಲ್ಪಟ್ಟ ಅಧಿಕಾರಿಯ ಆಡಳಿತದಲ್ಲಿದ್ದಿತು). ಅಲ್ಲಿಯ ರಾಣಾ ಸಾಹೇಬರಿಗೆ ಹೆಚ್ಚು ಅಧಿಕಾರವನ್ನು ಕೊಡಿಸಲು ಪ್ರಯತ್ನ ಪಡುವ ಕೆಲಸವು ನನ್ನ ಪಾಲಿಗೆ ಬಿದ್ದಿತು. ಮೇರ (ಅಲ್ಲಿನ ರೈತರ ಹೆಸರು) ಜನರಿಂದ ಹೆಚ್ಚು ಕಂದಾಯವನ್ನು ವಸೂಲು ಮಾಡುತ್ತಿದ್ದರು. ಈ ವಿಷಯವಾಗಿಯೂ ನಾನು ಅಡ್ಮಿನಿಸ್ಟ್ರೇಟರನ್ನು (ಬ್ರಿಟಿಷ್ ಸರ್ಕಾರದಿಂದ ನಿಯಮಿಸಲ್ಪಟ್ಟ ಅಧಿಕಾರಿ) ನೋಡಬೇಕಾಗಿದ್ದಿತು. ಈ ಅಧಿಕಾರಿಯು ದೇಶೀಯನಾದರೂ ದರ್ಪದಲ್ಲಿ ಸಾಹೇಬನಿಗಿಂತ

ಒಂದು ಕೈ ಮೀರಿದವನೆಂದು ತೋರಿತು. ಆತನು ತನ್ನ ಕೆಲಸದಲ್ಲಿ ಗಟ್ಟಿಗನಾಗಿದ್ದನು. ಆದರೆ ಆತನ ಕಾರ್ಯಕುಶಲತೆಯಿಂದ ರೈತರಿಗೆ ಯಾವ ಲಾಭವೂ ಉಂಟಾದಂತೆ ನನಗೆ ತೋರಲಿಲ್ಲ. ರಾಣಾ ಸಾಹೇಬರಿಗೆ ಸ್ವಲ್ಪ ಹೆಚ್ಚು ಅಧಿಕಾರವನ್ನು ಕೊಡಿಸುವುದರಲ್ಲಿಯೇನೋ ನನ್ನ ಪ್ರಯತ್ನವು ಸಫಲವಾಯಿತು. ಆದರೆ ಮೇರರ ಹೊರೆಯು ಕಡಿಮೆಯಾಗಲಿಲ್ಲ. ಅವರ ವಿಚಾರವನ್ನು ಸರಿಯಾಗಿ ಪರಿಶೋಧಿಸಿದಂತೆ ಕೂಡ ನನಗೆ ಕಾಣಲಿಲ್ಲ.

ಬ್ರಿಟಿಷ್ ರಾಜ್ಯಕ್ರಮದಲ್ಲಿ ನಾನು ಇಟ್ಟಿದ್ದಷ್ಟು ರಾಜಭಕ್ತಿಯನ್ನು ಇನ್ನಾರೂ ಇಟ್ಟಿರುವುದನ್ನು ನಾನು ನೋಡಿಲ್ಲವೆಂದು ಹೇಳಬಹುದು. ಈ ನನ್ನ ರಾಜನಿಷ್ಠೆಗೆ ಸತ್ಯದಲ್ಲಿ ನನಗಿದ್ದ ಪ್ರೇಮವೇ ಮೂಲವಾಗಿದ್ದಿತೆಂದು ನನಗೆ ಈಗ ಗೊತ್ತಾಗುತ್ತದೆ. ರಾಜನಿಷ್ಠೆಯನ್ನು ಅಥವಾ ಯಾವ ಗುಣವನ್ನೇ ಆಗಲಿ ಕಪಟದಿಂದ ತೋರಿಸಿಕೊಳ್ಳುವುದು ನನಗೆ ಯಾವಾಗಲೂ ಸಾಧ್ಯವಾಗಿಲ್ಲ. ನೇಟಾಲಿನಲ್ಲಿ ನಾನು ಪ್ರವೇಶಿಸುತ್ತಿದ್ದ ಪ್ರತಿಯೊಂದು ಸಭೆಯಲ್ಲಿಯೂ ಗಾಡ್ ಸೇವ್ ದಿ ಕಿಂಗ್ (ದೇವರು ದೊರೆಯನ್ನು ರಕ್ಷಿಸಲಿ) ಎಂಬ ಆಂಗ್ಲ ರಾಷ್ಟ್ರ ಗೀತೆಯನ್ನು ತಪ್ಪದೆ ಹಾಡುತ್ತಿದ್ದರು. ನಾನೂ ಜೊತೆಗೆ ಹಾಡಬೇಕೆಂದು ನನಗೆ ತೋರುತ್ತಿದ್ದಿತು. ಬ್ರಿಟಿಷರ ಆಡಳಿತದಲ್ಲಿ ನನಗೆ ದೋಷಗಳು ಕಾಣುತ್ತಿರಲಿಲ್ಲವೆಂದಲ್ಲ. ಆದರೆ ನಾನು ಒಟ್ಟಿನಲ್ಲಿ ಅದು ಒಳ್ಳೆಯದೆಂದು ತಿಳಿದುಕೊಂಡಿದ್ದೆನು. ಆಗಿನ ಕಾಲದಲ್ಲಿ ನಾನು ಅದು ಒಟ್ಟಿನಲ್ಲಿ ಪ್ರಜೆಗಳಿಗೆ ಹಿತಕರವಾದುದೆಂದು ನಂಬಿದ್ದೆನು.

ನಾನು ಹಿಂದುಸ್ತಾನವನ್ನು ತಲುಪಿದಾಗ ವಿಕ್ಟೋರಿಯಾ ಮಹಾರಾಣಿಯವರ ಡೈಮಂಡ್ ಜ್ಯೂಬಿಲಿ (ಅರವತ್ತು ವರ್ಷದ ರಾಜ್ಯಭಾರದ ಶಾಂತಿ)ಗಾಗಿ ಸನ್ನಾಹವು ನಡೆಯುತ್ತಿದ್ದಿತು. ರಾಜಕೋಟೆಯಲ್ಲಿ ಇದಕ್ಕಾಗಿ ನೇಮಕವಾಗಿದ್ದ ಸಭೆಗೆ ನನ್ನನ್ನು ಸೇರಬೇಕೆಂದು ಕರೆದರು. ನಾನು ಅದಕ್ಕೆ ಒಪ್ಪಿದೆನು. ಆದರೆ ಈ ಉತ್ಸವವು ಬಹುಮಟ್ಟಿಗೆ ಆಡಂಬರದ ವಿಷಯವೆಂಬ ಸಂಶಯವು ನನಗಿದ್ದಿತು. ಇದರಲ್ಲಿ ಬಹುಭಾಗ ಇತರರ ಕಣ್ಣಿಗೆ ಮಣ್ಣೆರಚಲು ಮಾಡಿದುದೆಂದು ಕಂಡು ಬಂದು ನನಗೆ ಬಹು ದುಃಖವಾಯಿತು. ಇಂಥ ಸ್ಥಿತಿಯಲ್ಲಿ ನಾನು ಸಭೆಯಲ್ಲಿರುವುದು ಸರಿಯೊ, ಅಲ್ಲವೊ ಎಂಬ ಯೋಚನೆಯುಂಟಾಗಿ ಕಡೆಗೆ ನನ್ನ ಭಾಗದ ಕೆಲಸವನ್ನು ಮಾಡಿ ತೃಪ್ತಿಯಿಂದಿರುವುದೆಂದು ನಿಶ್ಚಯಿಸಿದೆನು.

ಈ ಪ್ರಸ್ತಾಪಗಳಲ್ಲಿ ಗಿಡಗಳನ್ನು ನೆಡುವುದು ಒಂದಾಗಿದ್ದಿತು. ಡಂಭಾಚಾರಕ್ಕಾಗಿಯೂ, ಅಧಿಕಾರಿ ವರ್ಗದವರನ್ನು ತುಷ್ಟಿಪಡಿಸು ವುದಕ್ಕಾಗಿಯೂ ಅನೇಕರು ಅಂಕುರಾರೋಪರ್ಣದ ಉತ್ಸವವನ್ನು ಕೈಗೊಂಡಿದ್ದರೆಂಬುದನ್ನು ಕಂಡೆನು. ನಾನು ಗಿಡಗಳನ್ನು ನೆಡುವುದು ಒತ್ತಾಯದ ಕೆಲಸವಲ್ಲ, ಕೇವಲ ಇಷ್ಟವಿದ್ದರೆ ಮಾತ್ರ ಮಾಡತಕ್ಕುದು. ಮಾಡುವುದಾದರೆ ಮನಸ್ಸಿಟ್ಟು ಮಾಡಬೇಕು, ಇಲ್ಲದಿದ್ದರೆ ಬೇಡ ಎಂದು ಅವರಿಗೆ ತಿಳಿಯಹೇಳಲು ಪ್ರಯತ್ನ ಪಟ್ಟೆನು. ನನ್ನ ಅಭಿಪ್ರಾಯಗಳನ್ನು ಕೇಳಿ ಜನರು ನಕ್ಕರೆಂದು ನನಗೆ ಎಲ್ಲೋ ಸ್ವಲ್ಪ ನೆನಪಿದೆ. ನನಗೆ ಒಪ್ಪಿಸಿದ ಗಿಡಗಳನ್ನು ಆಸಕ್ತಿಯಿಂದ ನೆಟ್ಟೆನೆಂದೂ, ಎಚ್ಚರಿಕೆಯಿಂದ ನೀರೆರೆದು ಅದನ್ನು ಬೆಳೆಸಿದೆನೆಂದೂ ಜ್ಞಾಪಕವಿದೆ.

ನಮ್ಮ ಮನೆಯ ಹುಡುಗರಿಗೂ ಆಂಗ್ಲ ರಾಷ್ಟ್ರಗೀತೆಯನ್ನು ಕಲಿಸಿದೆನು. ನಾನು ಅಲ್ಲಿನ ಟ್ರೇನಿಂಗ್ ಕಾಲೇಜಿನ (ಶಿಕ್ಷಣ ವಿದ್ಯಾಲಯದ) ಹುಡುಗರಿಗೂ ಇದನ್ನು ಹೇಳಿಕೊಟ್ಟಂತೆ ನೆನಪಿದೆ. ಆದರೆ ಇದೇ (ಜೂಬಿಲಿಯ) ಸಮಯದಲ್ಲಿಯೋ ಅಥವಾ ಏಳನೆಯ ಎಡ್ವರ್ಡರ ರಾಜ್ಯಭಿಷೇಕದ ಸಮಯದಲ್ಲಿಯೋ ಎಂಬುದು ಮರೆತು ಹೋಗಿದೆ. ಕೆಲವು ದಿನದ ಮೇಲೆ ಈ ಹಾಡು ನನಗೆ ಕರ್ಕಶವಾಗಿ ತೋರುತ್ತಾ ಬಂದಿತು. ಅಹಿಂಸಾತತ್ವವು ನನ್ನ ಹೃದಯದಲ್ಲಿ ವೃದ್ಧಿ ಹೊಂದುತ್ತಾ ಬಂದ ಹಾಗೆಲ್ಲಾ ನಾನು ನನ್ನ ಆಲೋಚನೆಯಲ್ಲಿಯೂ, ಮಾತುಕತೆಯಲ್ಲಿಯೂ ಹೆಚ್ಚು ಜಾಗರೂಕತೆಯುಳ್ಳವನಾದೆನು. ಆ ಹಾಡಿನ ಮಕ್ಕಳಿಗೆ ದೊರಕದಂಥ ವಿದ್ಯಾಭ್ಯಾಸವನ್ನು ನನ್ನ ಮಕ್ಕಳಿಗೆ ಮಾಡಿಸುವುದರಲ್ಲಿಯೇ ತೃಪ್ತಿ ಹೊಂದಿದ್ದರೆ ಅವರಿಗೇನೋ ಅಕ್ಷರಜ್ಞಾನವುಂಟಾಗುತ್ತಿದ್ದಿತು. ಆದರೆ ಅವರು ಕಲಿತಿರುವ ಸ್ವಾತಂತ್ರ್ಯ ಮತ್ತು ಸ್ವಾಭಿಮಾನಗಳ ಪಾಠವನ್ನು ಎಂದಿಗೂ ಕಲಿಯುವುದಕ್ಕಾಗುತ್ತಿರಲಿಲ್ಲ. ಸ್ವಾತಂತ್ರ್ಯ ಮತ್ತು ಅಕ್ಷರ ಜ್ಞಾನಗಳಲ್ಲಿ ಯಾವುದಾದರೂ ಒಂದನ್ನು ಆರಿಸಿಕೊಳ್ಳಬೇಕಾದರೆ ಅಕ್ಷರ ಜ್ಞಾನಕ್ಕಿಂತ ಸ್ವಾತಂತ್ರ್ಯವು ಸಾವಿರ ಪಾಲು ಹೆಚ್ಚಿನ ವಸ್ತುವೆಂದು ಹೇಳದವರಾರು?

ಗುಲಾಮಗಿರಿಯ ತವರುಮನೆಗಳಾದ ಶಾಲೆಗಳನ್ನೂ, ಕಾಲೇಜುಗಳನ್ನೂ ಬಿಟ್ಟು ಬನ್ನಿ. ಗುಲಾಮಗಿರಿಯ ಸಂಕೋಲೆಗಳನ್ನು ಹಾಕಿಕೊಂಡು ಅಕ್ಷರ ಜ್ಞಾನವನ್ನು ಪಡೆಯುವುದಕ್ಕಿಂತಲೂ ಸ್ವಾತಂತ್ರ್ಯಕ್ಕಾಗಿ ಹಾದಿಯಲ್ಲಿ ಕಲ್ಲೊಡೆಯುವುದು ಲೇಸು ಎಂದು ನಾನು 1920ನೆಯ ಇಸವಿಯಲ್ಲಿ ನವಯುವಕರಿಗೆ ಕೊಟ್ಟ ಸಲಹೆಯ ಮೂಲವು ಪ್ರಾಯಶಃ ಅವರಿಗೆ ಈಗ ಗೊತ್ತಾಗಬಹುದು."

ತಾನು ಅಮಲ್ದಾರರಾಗಿದ್ದ ಸಮಯದಲ್ಲಿ ಏನಾಯಿತು ಎಂಬುದನ್ನು ನವರತ್ನ ರಾಮರಾಯರು ಎಂಬುದನ್ನು ವಿವರಿಸಿದ್ದಾರೆ. ಇದರಲ್ಲಿ ಅಮಲ್ದಾರರಿಗೆ ಇದ್ದ ಅಧಿಕಾರದ ಸ್ವರೂಪವು ವ್ಯಕ್ತವಾಗಿದೆ (ಕೆಲವು ನೆನಪುಗಳು 1983 ಪು. 272–73).

1. ಅಮಲ್ದಾರರಿಗಿಂತ ಕೆಳಗಿನವರು ಜಮೇದಾರರು.
2. ಜಮೇದಾರರು ಸ್ಟೇಷನ್ ಡೈರಿಯನ್ನು ಬರೆಯಬೇಕಾಗಿತ್ತು.
3. ಕೇಸು ವಿಚಾರಣೆಯನ್ನು ಮಾಡುವ ಕೆಲವು ಹಕ್ಕುಗಳು ಅಮಲ್ದಾರರಿಗಿದ್ದವು.
4. ಅಮಲ್ದಾರರಿಗಿಂತ ಹೆಚ್ಚಿನ ಅಧಿಕಾರವು ಡೆಪ್ಯುಟಿ ಕಮಿಷನರಿಗಿತ್ತು.
5. ಜಿಲ್ಲಾ ಡೆಪ್ಯುಟಿ ಕಮಿಷನರು ತಮಗೆ ಅನಿಸಿದರೆ ಮ್ಯಾಜಿಸ್ಟ್ರೇಟ್ ಕೋರ್ಟಿಗೆ ಕೇಸನ್ನು ಕಮಿಟ್ ಮಾಡಬಹುದಿತ್ತು.

ಹಾಗೆಯೇ ವಸಾಹತು ಕಾಲದ ಪ್ರಮುಖ ಗವರ್ನರ್ ಜನರಲ್ ಆದ ಬೆಂಟಿಂಕ್ "ಬೋರ್ಡ್ ಆಫ್ ಮೆನೇಜ್‌ಮೆಂಟ್ ಇನ್ ರೆವಿನ್ಯೂ" ಮತ್ತು ಇತರ ವಿಭಾಗಗಳನ್ನು ರದ್ದು ಪಡಿಸಲು ಒಪ್ಪದಿದ್ದ ಸಂಗತಿಯನ್ನು ಇಲ್ಲಿ ಜ್ಞಾಪಿಸಿಕೊಳ್ಳಬಹುದು. ಆ ಸಂದರ್ಭದಲ್ಲಿ ಪ್ರೆಸಿಡೆನ್ಸಿಗೆ ಉಪ ಸಮಿತಿಗಳಿದ್ದವು. ಡಿ.ವಿ.ಜಿ.ಯವರು ನ್ಯಾಯಸ್ಥಾನಕ್ಕೂ ಶಾಸನ ಸಂಸ್ಥೆಗೂ ಇದ್ದ ವ್ಯತ್ಯಾಸಗಳ ಕುರಿತು ಹೀಗೆ ಹೇಳುತ್ತಾರೆ (ವೃತ್ತ ಪತ್ರಿಕೆ, 1928, ಪು. 110).

ಇಲ್ಲಿಯವರೆಗೆ ತಕರಾರಿಲ್ಲ. ತಕರಾರು ಹುಟ್ಟುವುದು ನ್ಯಾಯ ಸಂಸ್ಥೆಯಾಗಲಿ ಶಾಸನಸಂಸ್ಥೆಯಾಗಲಿ ತನ್ನ ಘನತೆಗೆ ಭಂಗ ಬಂತೆಂದು ಆಕ್ಷೇಪಣೆ ಎತ್ತಿದಾಗ, ಆಗ ದೂರು ಮಾಡುವವನೂ ದಂಡ ವಿಧಿಸುವವನೂ ಒಬ್ಬನೇ ಆಗುತ್ತಾನೆ. ಹೀಗೆ ದೋಷಾರೋಪಣೆ ಮಾಡುವವನೇ ಶಿಕ್ಷೆಯನ್ನು ಕೊಡುವಂತೆ ಇರುವುದು ನ್ಯಾಯಶಾಸ್ತ್ರದ ಮೂಲತತ್ತ್ವಕ್ಕೆ ವಿರೋಧ. ಆದರೂ ಈ ವಿಶೇಷ ಸಂದರ್ಭದಲ್ಲಿ ಗತ್ಯಂತರವಿಲ್ಲವೆಂದು ಆ ದ್ವಿಸ್ಥಾನೈಕ್ಯವನ್ನು ಅಂಗೀಕರಿಸಲಾಗಿದೆ. ಈ ಕಾರಣದಿಂದ ಆ ಅಧಿಕಾರ ಪದವಿಯ ಜವಾಬ್ದಾರಿ ದ್ವಿಗುಣವಾಗುತ್ತದೆ. ಆ ಅಧಿಕಾರವನ್ನು ಪ್ರಯೋಗಿಸತಕ್ಕವರು ಅತಿಶಯವಾದ ತಾಳ್ಮೆಯಿಂದಲೂ ಸ್ವಾಭಿಮಾನ ನಿಗ್ರಹದಿಂದಲೂ ನಡೆದುಕೊಳ್ಳಬೇಕು. ಇಂಥಾ ಪ್ರಸಂಗದಲ್ಲಿ ಕೋರ್ಟಿನ ಸಂದರ್ಭವೂ ಶಾಸನ ಸಂಸ್ಥೆಯ ಸಂದರ್ಭವೂ ಒಂದೇ ತೆರದವಲ್ಲ. ಬೇರೆ ಬೇರೆ ಪ್ರಕಾರದವು. 1) ಕೋರ್ಟಿನ ಕೆಲಸ ಒಬ್ಬಾನೊಬ್ಬನ ಅಥವಾ ಕೆಲಮಂದಿ ವ್ಯಕ್ತಿಗಳ ಹಿತಾರ್ಥಗಳಿಗೆ ಸೇರಿದ್ದು, ಶಾಸನ ಸಭೆಯದು ಪ್ರಜಾಸಮಸ್ತದ್ದು. 2) ಕೋರ್ಟು ಪ್ರತ್ಯಕ್ಷವಾಗಿ ಪ್ರಜಾಪ್ರತಿನಿಧಿಯಲ್ಲ. ಶಾಸನ ಸಂಸ್ಥೆಯು ನೇರವಾಗಿ ಪ್ರಜಾಜನ ಪ್ರತಿನಿಧಿ. 3) ಕೋರ್ಟುಗಳು ಇತರರು ರಚಿಸಿದ ಕಾನೂನುಗಳಿಗೆ

ಅರ್ಥನಿರ್ಣಯ ಮಾಡಿ ಅವನ್ನನ್ವಯಿಸುತ್ತವೆ ಮತ್ತು ಅವುಗಳ ತೀರ್ಮಾನಗಳ ಮೇಲೆ ಸಾಮಾನ್ಯವಾಗಿ ಅಧಿ ಪ್ರಾರ್ಥನೆ ಪುನರ್ವಿಮರ್ಶನೆ (Appeal and Review) ಗಳಿಗೆ ಅಲ್ಲಿ ಅಧಿಕಾರವ್ಯವಸ್ಥೆ ಇರುತ್ತದೆ. ಶಾಸನ ಸಂಸ್ಥೆಯಾದರೋ ತಾನೇ ಕಾನೂನನ್ನು ರಚಿಸಬಲ್ಲದ್ದು ಮತ್ತು ಅದರ ತೀರ್ಮಾನದ ಮೇಲೆ ಬೇರೆ ತೀರ್ಮಾನವಿಲ್ಲ. ಹೀಗೆ ನ್ಯಾಯ ಸಂಸ್ಥೆ ಶಾಸನ ಸಂಸ್ಥೆಗಳೆರಡರ ಸ್ವಭಾವಗಳೂ ಬೇರೆಬೇರೆಯವು. ಆದ್ದರಿಂದ ನ್ಯಾಯಸಂಸ್ಥೆಗೆ ಸರಿ ಹೊಂದುವ ಎಲ್ಲ ಕಾರ್ಯಕ್ರಮಗಳೂ ಶಾಸನಸಂಸ್ಥೆಗೂ ಹಾಗೆಯೇ ಎಲ್ಲ ವಿಷಯಗಳಲ್ಲಿಯೂ ಸರಿಹೊಂದುತ್ತವೆಂದೂ ಭಾವಿಸಲಾಗದು.

2) ರಾಜ್ಯದಲ್ಲಿ ಎಲ್ಲ ಅಧಿಕಾರ ಸ್ಥಾನಗಳೂ ಮನ್ನಣೆಯನ್ನು ಪಡೆಯಬೇಕಾದುವೇ.

ಹಾಗೇ ಅಧಿಕಾರಸ್ಥಾನಕ್ಕೆ ಎಲ್ಲರೂ ಮನ್ನಣೆ ತೋರಿಸಿ ಅದನ್ನು ಬಲಪಡಿಸುವುದು ಪ್ರಜಾಕ್ಷೇಮಕ್ಕೆ ಯಾವಾಗಲೂ ಅವಶ್ಯವಾಗಿರುತ್ತದೆ. ಆದ್ದರಿಂದ ವಿಹಿತಾಧಿಕಾರಕ್ಕೆ ಗೌರವ ತೋರುವುದು ರಾಷ್ಟ್ರಕನ (Citizen) ಕರ್ತವ್ಯವಾಗುತ್ತದೆ. ರಾಷ್ಟ್ರಕನ ಕರ್ತವ್ಯವೇ ಪತ್ರಿಕಾಕರ್ತನಿಗೂ ಕರ್ತವ್ಯ. ಅವನಿಂದ ಎಲ್ಲ ಅಧಿಕಾರಸ್ಥಾನಗಳಿಗೂ ಗೌರವ ದೊರೆಯಬೇಕಾದದ್ದು ಹೀಗೆ ಯುಕ್ತವಾದರೂ, ಆ ಗೌರವದ ಅಪೇಕ್ಷೆ 1) ಕೋರ್ಟುಗಳಿಗೆ ವಿಶೇಷವಾಗಿರುತ್ತದೆ, 2) ಶಾಸನ ಸಂಸ್ಥೆಗಳಿಗೂ ಆ ಗೌರವದ ಅವಶ್ಯಕತೆ ಬಹಳ ಹೆಚ್ಚಾಗಿರುತ್ತದೆ. ಏಕೆಂದರೆ ನ್ಯಾಯಸಂಸ್ಥೆಗಳೂ ಶಾಸನ ಸಂಸ್ಥೆಗಳೂ ತಮ್ಮ ತಮ್ಮ ಕರ್ತವ್ಯಗಳನ್ನು ಸಮರ್ಪಕವಾಗುವಂತೆ ನಡೆಸಬೇಕಾದರೆ ಅವುಗಳಿಗೆ ಎರಡು ಸಂದರ್ಭಾನುಕೂಲಗಳು ಅವಶ್ಯವಾಗಿರುತ್ತವೆ.

ಎರಡನೆಯದಾಗಿ, ನ್ಯಾಯಾಧಿಕಾರಿಗಳೂ ಶಾಸನಕರ್ತರೂ ನಡೆಸುವ ವಿಚಾರಣೆಗಳೂ ಮಾಡುವ ತೀರ್ಮಾನಗಳೂ ಸ್ವತಂತ್ರವೂ ನಿರ್ಭಯವೂ ಆಗಿರಬೇಕು. ಯಾರೊಬ್ಬರ ಬರವಣಿಗೆಯಿಂದಾಗಲಿ ಮಾತಿನಿಂದಾಗಲಿ ಆ ಸ್ವಾತಂತ್ರ್ಯಕ್ಕೆ ಭಂಗ ಬರುವಂತಾದರೆ, ಅಥವಾ ಜಡ್ಜಿಗಳ ಅಥವಾ ಶಾಸಕ ಸದಸ್ಯರ ಮನಸ್ಸಿಗೆ ಭೀತಿಯೋ ಶಂಕೆಯೋ ತಲೆದೋರುವಂತಾದರೆ, ಅಂಥ ಲೇಖನ ಭಾಷಣಗಳನ್ನು ಒಟ್ಟು ರಾಜ್ಯಕ್ಕೇ ಪ್ರತಿಕೂಲಗಳೆಂದು ಭಾವಿಸುವುದು ಯುಕ್ತವಾಗುತ್ತದೆ.

ಮಹಾತ್ಮ ಗಾಂಧಿಯವರು ವೈಸ್‌ರಾಯರ ಮುಂದೆ ಇಟ್ಟ 11 ಹುದ್ದೆಗಳಲ್ಲಿ ದೊಡ್ಡ ದೊಡ್ಡ ಪಗಾರ ತಿನ್ನುವ ಅಧಿಕಾರಿಗಳ ಪಗಾರು ಅರ್ಧಕ್ಕೆ ಇಳಿಸಬೇಕೆಂದು ಒಂದು ಶರತ್ತು ಇತ್ತು. ಸರಕಾರವು ಇದನ್ನು ಖುಶಿಯಿಂದ ಮಾನ್ಯ ಮಾಡಲಿಲ್ಲ. ಮಾನ್ಯಮಾಡಲಿಕ್ಕಿಲ್ಲೆಂದು ಎಲ್ಲರಿಗೂ ಗೊತ್ತು. ಆದರೆ ತಮ್ಮ ಸಂತೋಷದಿಂದ ಒಪ್ಪಿಕೊಳ್ಳದ ಈ ಮಾತನ್ನು ಸರಕಾರಕ್ಕೆ ನಮ್ಮ ಸತ್ಯಾಗ್ರಹದ ಶಕ್ತಿಯಿಂದ ಮಾಡಲಿಕ್ಕೆ

ಹಚ್ಚುವುದೇ ಸತ್ಯಾಗ್ರಹದ ಮುಖ್ಯ ಉದ್ದೇಶವು. ಮತ್ತು ಈ ಉದ್ದೇಶವು ಸಫಲವಾಗಹತ್ತಿತೆಂಬ ಬಗ್ಗೆ ಸರಕಾರವೇ ಈಗ ತಾನಾಗಿ ಹಣದ ಅಡಚಣೆ ಮೂಲಕ ಅನೇಕರ ಪಗಾರನ್ನು ಕೆಲ ಜಾಗಗಳನ್ನು ಕಡಿಮೆ ಮಾಡಲಿಕ್ಕೆ ಇಚ್ಛಿಸುತ್ತದೆಂದು ಉತ್ತಮ ಪುರಾವೆಯು. ಈಗ ಮುಂಬಯಿ ಸರಕಾರವು ತನ್ನ ಮಂತ್ರಿಮಂಡಲದೊಳಗಿನ 3 ಮಂತ್ರಿಗಳ ಬದಲಾಗಿ ಇಬ್ಬರನ್ನೇ ಇಟ್ಟುಕೊಳ್ಳಬೇಕೆಂದೂ ಮತ್ತು ಅದರಂತೆ ಈ ಕೆಳಗೆ ಕಾಣಿಸಿದ ದೊಡ್ಡ ನೌಕರರ ಪಗಾರು ಕಡಿಮೆ ಮಾಡಬೇಕೆಂತಲೂ ವಿಚಾರ ನಡೆದಿದೆ ಎಂದು ತಿಳಿದುಬರುತ್ತದೆ.

ಪರಮಾಹೆ ಪಗಾರ	ನೂರಕ್ಕೆ ಕಡಿಮೆ
1500 ರೂ.	20%
500–1500	15%
200–500	10%
100–200	5%

ಹಿಂದೀ ಜನರ ನ್ಯಾಯ ಹಕ್ಕಿಗೆ ವೈಸ್‌ರಾಯರ ಒಪ್ಪಿಗೆ ಇಲ್ಲದ್ದರಿಂದ ರಾಜಿಯ ಪ್ರಸ್ತಾಪವು ಮುರಿದು ಹೋಯಿತು. ಈಗ ಸರಕಾರವು ದುಂಡು ಮೇಜಿನ ಪರಿಷತ್ತಿನ ತಮಾಷೆಯನ್ನು ನಡಿಸಲಿಕ್ಕೆ ಅಲ್ಲಿಯ ಖರ್ಚಿಗಳನ್ನು ಬದಲಾಯಿಸಲಿಕ್ಕೆ 62 ಮಂದಿಗೆ ಆಮಂತ್ರಣ ಕೊಟ್ಟಿರುವುದು. ಆದರೆ ಸ್ವಾಭಿಮಾನಿ ಹಿಂದಿಗಳೆಲ್ಲರೂ ಇಂಥಹ ತಮಾಷೆಗೆ ಬಹಿಷ್ಕಾರ ಹಾಕೇ ಹಾಕುವರು (ಪು. 57). ಒಂದು ಕರಪತ್ರದ ಮಾದರಿಯು ಹೀಗಿದೆ:

ಸಿರಸಿ ಕರಪತ್ರ

ರಾಜದ್ರೋಹವೇ ನಮ್ಮ ಧರ್ಮ! ಸ್ವಾತಂತ್ರ್ಯವೇ ನಮ್ಮ ಧ್ಯೇಯ!

ಸಂಚಿಕೆ 72 ಸಿರ್ಸಿ ರವಿವಾರ ತಾ : 5–10–1930 ಬೆಲೆ 0–0–3

ರಾಷ್ಟ್ರೀಯ ಸರಕಾರ ಸ್ಥಾಪನೆಯ ಪೀಠಿಕೆ

ಮುಂಬಯಿಯಲ್ಲಿ ರಾಷ್ಟ್ರೀಯ ಪಂಚಕೋರ್ಟಿನ ಸ್ಥಾಪನೆ

ಮುಂಬಯಿಯ ಕಾಂಗ್ರೆಸ್ ಕಮಿಟಿಯವರು ಮುಂಬಯಿಯೊಳಗಿನ ದಿವಾಣಿ ಖಟ್ಲೆಗಳನ್ನು ನಿಕಾಲಿ ಮಾಡುವುದಕ್ಕೋಸ್ಕರ ಪಂಚಕೋರ್ಟುಗಳನ್ನು ಸ್ಥಾಪಿಸುವ ನಿಶ್ಚಯ ಮಾಡಿದರು. ಪ್ರಾರಂಭಕ್ಕೆ ಗಿರಗಾಂವ ಭಾಗದಲ್ಲಿ ಈ ಹೊಸ ಪ್ರಯೋಗವನ್ನು ಶುರು ಮಾಡಿ ಅಲ್ಲಿ ಯಶಸ್ವಿಯಾದ ನಂತರ ಮುಂಬಯಿಯ ಇತರ ಭಾಗಗಳಲ್ಲಿಯೂ ಅದೇ ರೀತಿ ಪಂಚಕೋರ್ಟುಗಳನ್ನು ಸ್ಥಾಪನೆ ಮಾಡುವರು. ಜನತೆಯ ವಿಶ್ವಾಸಕ್ಕೆ

ಪಾತ್ರರಾದ ಕೆಲ ಸುಪ್ರಸಿದ್ಧ ವ್ಯಾಪಾರಿಗಳು ಪಂಚರ ಕೆಲಸ ಮಾಡಲು ಒಪ್ಪಿದ್ದಾರೆ. ಅದರಂತೆ ಮೊದಲು ಸರಕಾರದಲ್ಲಿ ನ್ಯಾಯಾಧೀಶರ ಕೆಲಸ ಮಾಡಿದ ಸಜ್ಜನರ ಸಹಕಾರವನ್ನು ಸಹ ಈ ಕೆಲಸಕ್ಕೆ ದೊರಕಿಸುವುದರಲ್ಲಿ ಬರುವುದು.

ಮೊಟ್ಟಮೊದಲು ಈ ಕಾಂಗ್ರೆಸ್ ಕೋರ್ಟ್‌ಗಳು ಫಿರ್ಯಾದಿಯಿಂದ ಕೋರ್ಟ್ ಫೀ ತೆಗೆದುಕೊಂಡು ದಿವಾಣಿ ಖಟ್ಲೆ ವಿಚಾರಕ್ಕೆ ತೆಗೆದುಕೊಳ್ಳುವರು. ಎರಡೂ ಪಕ್ಷದವರನ್ನು ಕೇಳಿಕೊಂಡು ನಿಕಾಲೆ ಮಾಡುವರು. ಈ ಕೋರ್ಟುಗಳಲ್ಲಿ ಜನತೆಯ ವಿಶ್ವಾಸ ಹೆಚ್ಚಾದ ನಂತರ ಸಣ್ಣ ಸಣ್ಣ ಫೌಜದಾರಿ ಖಟ್ಲೆಗಳನ್ನು ಸಹ ಕೈಗೊಳ್ಳುವುದರಲ್ಲಿ ಬರುವುದು.

ಈ ರೀತಿ ಮುಂಬಯಿಯಲ್ಲಿ ಕಾಂಗ್ರೆಸ್ ಕಮಿಟಿಯವರು ಸಾವಕಾಶವಾಗಿ ಮುಂಬಯಿಯ ಇಡೀ ಆಡಳಿತವನ್ನು ತಮ್ಮ ಕೈಯಲ್ಲಿ ತೆಗೆದುಕೊಳ್ಳಹತ್ತಿರುವರು. ವಿಚಾರಣೆ ಮಾಡುವುದು ತೋಫು ಗುಂಡುಗಳ ಬಲದಿಂದಲ್ಲ. ಆದರೆ ಜನತೆಯಲ್ಲಿ ವಿಶ್ವಾಸದ ಅಂಕುರವನ್ನು ಉಂಟುಮಾಡಿ ಜನತೆಯ ಹಿತಕ್ಕಾಗಿ ಸ್ವಾರ್ಥತ್ಯಾಗ ಮಾಡಿ, ಜನತೆಯ ಪ್ರೇಮಕ್ಕೂ ಆದರಕ್ಕೂ ಪಾತ್ರರಾಗಿ ಈಗ ಈ ಮುಂಬಯಿಯ ಕಾಂಗ್ರೆಸ್ಸಿನವರು ಮುಂಬಯಿಯ ಆಡಳಿತವನ್ನೇ ಪರಕೀಯ ಸರಕಾರದ ಕೈಯಿಂದ ತಪ್ಪಿಸಿ ತಮ್ಮ ಕೈಯಲ್ಲಿ ತೆಗೆದುಕೊಳ್ಳಹತ್ತಿರುವರು. ಈಗಾಗಲೇ ಮುಂಬಯಿಯ ವ್ಯಾಪಾರವು ಕಾಂಗ್ರೆಸ್ ನಿಯಂತ್ರಣದಂತೆ ನಡೆಯಹತ್ತಿದೆ. ಮುಂಬಯಿಯ ಪೊಲೀಸ್ ಡ್ಯೂಟಿಯನ್ನು ಸಹ (ಅಂದರೆ ಶಾಂತತಾ ರಕ್ಷಣೆಯನ್ನೇ) ಕಾಂಗ್ರೆಸ್ ಸ್ವಯಂ ಸೇವಕರೇ ಮಾಡಹತ್ತಿರುವರು. ಈಗ ಪಂಚಕೋರ್ಟು ಸ್ಥಾಪನೆಯಾಗುವುದು. ಇವೆಲ್ಲ ರಾಷ್ಟ್ರೀಯ ಸರಕಾರ ಸ್ಥಾಪನೆಯ ಧ್ಯೇಯಕ್ಕೆ ಹೋಗಿ ಮುಟ್ಟುವ ದಾರಿಯ ಮೇಲಿನ ಮೈಲುಗಲ್ಲುಗಳಾಗಿರುವವು. ದುಂಡು ಮೇಜಿನ ಪರಿಷತ್ತಿಗೆ ಹೋದರೆ ಸ್ವರಾಜ್ಯ ಸಿಗುವುದಿಲ್ಲ. ಸ್ವಾವಲಂಬನೆದಿಂದಲೆ ಸ್ವರಾಜ್ಯ ಸಿಗುವುದು.

ಮುಂಬಯಿಯಲ್ಲಿ ಯುದ್ಧ ಶಿಕ್ಷಣ ಕೊಡುವ ರಾಷ್ಟ್ರೀಯ ಶಾಲೆಯನ್ನು ತೆರೆಯುವ ಸಮಾರಂಭವು ಮುಂಬಯಿ ಕಾಂಗ್ರೆಸ್ ಹಾಲೀ ಅಧ್ಯಕ್ಷ ಶ್ರೀ ಶಹಾ ಇವರ ಹಸ್ತೆಯಿಂದ ಆಯಿತು. ಈ ಶಾಲೆಯನ್ನು ಲೆಫ್ಟನೆಂಟ್ ಪಟವರ್ಧನ್ ಇವರು ತೆಗೆದಿರುವರು. ಈಗಾಗಲೇ 25 ಮಂದಿ ತರುಣ ಪದವೀಧರರೂ, ಕಾಲೇಜ್ ವಿದ್ಯಾರ್ಥಿಗಳೂ ಇದಕ್ಕೆ ಬಂದು ಕೂಡಿರುವರು.

ಮುಂಬಯಿಯಲ್ಲಿ ದುಂಡು ಮೇಜಿನ ಪರಿಷತ್ತಿನ ನಿಷೇದಾರ್ಥವಾಗಿ ನಿನ್ನೆ ಶನಿವಾರ ಇಡೀ ಊರಲ್ಲಿ ಹರತಾಳವಾಗುವುದಿತ್ತು.

ಬರಕಂದಾಜ ಸೈನ್ಯದವರು ನೋಡುತ್ತಿದ್ದ ಹಾಗೆ ಇಂಗ್ಲೀಷರ ಹಡಗುಗಳೆಲ್ಲಾ ಬಂದವು ; ದೇವಿಯ ಹಡಗನ್ನು ಆಕ್ರಮಣ ಮಾಡುವುವು ! (ಅದೇ). ಇಲ್ಲಿ ಇಂಗ್ಲೀಷರ ಸಿಪಾಯಿಗಳು ಅವರು ಬಳಸುತ್ತಿದ್ದ ರಾಜಕೀಯ ತಂತ್ರಗಳು ಚೆನ್ನಾಗಿಯೇ ವ್ಯಕ್ತವಾಗುತ್ತದೆ. ಇಂಗ್ಲೀಷರ ಹಡಗುಗಳು; ಬರ್ಕ್ವ್; ಕಲೆಕ್ಟರು; ಪಾಶ್ಚಾತ್ಯ ನಾಗರಿಕತೆ ಮುಂತಾದ ಅಂಶಗಳು ಗಮನ ಸೆಳೆಯುತ್ತವೆ.

ಭಾರತೀಯ ಸಮಾಜದ ದೃಷ್ಟಿಯಿಂದ ವಸಾಹತು ಆಡಳಿತವು ಕಾಲವು ತಂದ ಪರಿಕಲ್ಪನೆಗಳನ್ನು ಈ ಕೆಳಗಿನಂತೆ ಗುರುತಿಸಬಹುದು:

1. ಹೊಸ ನ್ಯಾಯಾಂಗ ವ್ಯವಸ್ಥೆಯು ಜಾರಿಗೆ ಬಂತು.
2. ನ್ಯಾಯದ ಪರಿಕಲ್ಪನೆಗಾಗಿ ಲಿಖಿತ ಕಾನೂನುಗಳು ಬಂದವು. ಇದರಿಂದಾಗಿ ಮಾತು ; ಆಣೆ ಇತ್ಯಾದಿ ನ್ಯಾಯ
3. ತೀರ್ಮಾನದ ರೂಪಗಳು ಬದಲಾದವು.
4. ಕೋರ್ಟುಗಳು ಬಂದುದರಿಂದ ನ್ಯಾಯಾಂಗ ವ್ಯವಸ್ಥೆಯಲ್ಲಿ ಹೊಸ ಪರಿವರ್ತನೆಗಳಾದವು.
5. ಕಂದಾಯ ಸಂಗ್ರಹಣೆ ಹಾಗೂ ನಿರ್ವಹಣೆಯಲ್ಲಿ ಪರಿವರ್ತನೆ.
6. ಆಳ್ವಿಕೆಯಲ್ಲಿ ಏಕರೂಪ ನಿಯಮವನ್ನು ಬ್ರಿಟೀಶ್ ಆಡಳಿತಕ್ಕೆ ಅನೂಕೂಲವಾಗುವಂತೆ ತರಲಾಯಿತು.
7. ಆಡಳಿತ ನೀತಿಯು ಭಾರತೀಯ ಸಮಾಜ ಮತ್ತು ಸಂಸ್ಕೃತಿ ಮೇಲೆ ಗಾಢ ಪ್ರಭಾವ ಬೀರಿದವು.
8. ಕಾನೂನಿನಲ್ಲಿರುವ ಅಧಿಕಾರಿಶಾಹಿ ನೀತಿ ಸಂಹಿತೆಗಳು ಕಾಯಿದೆಭಂಗ ಚಳುವಳಿಗೆ ಕಾರಣವಾಯಿತು.
9. ವಸಾಹತು ಕಾಲದ ಕಾನೂನುಗಳು ಬ್ರಿಟಿಶ್ ಪ್ರಭುತ್ವಕ್ಕೆ ನಾಂದಿಯಾದವು.
10. ಬ್ರಿಟೀಶ್ ಕಾನೂನುಗಳನ್ನು ಭಾರತದಲ್ಲಿ ಹೇರುವಾಗ ಅದನ್ನು ಭಾರತೀಯರ ನಾಗರೀಕತೆ, ನಾಗರೀಕ ಸಮಾಜದ ಪರಿಕಲ್ಪನೆ ಹಾಗೂ ಅಲ್ಲಿ ಕಾನೂನಾತ್ಮಕವಾಗಿ ರೂಪಿಸಲ್ಪಟ್ಟ ಅಪರಾಧಿಕೆ ಸಂಹಿತೆಗೆ ಆದ್ಯತೆ ನೀಡಲಾಯಿತು.
11. ಬ್ರಿಟೀಶರು ನಿಶಸ್ತ್ರೀಕರಣ ಕಾಯಿದೆಯನ್ನು ತಮ್ಮ ಅಧಿಕಾರ

ನಿರ್ವಹಣೆಗೆ ಅನುಕೂಲವಾಗುವಂತೆ ತಂದರೂ ಅದನ್ನು ರಾಷ್ಟ್ರೀಯ ಆಂದೋಲನಕಾರರು ಅಂಹಿಸಾತ್ಮಕ ಚಳುವಳಿ ಪರ್ಯಾಸ್ತ ಬಳಸಿ ಬ್ರಿಟೀಶ್ ಪರಮಾಧಿಕಾರದ ಒಡಲಿಗೆ ಕಿಚ್ಚು ಹಚ್ಚಿದರು.

ವಸಾಹತೋತ್ತರ ಕಾಲದಲ್ಲಿ ಗಾಂಧಿ ಪ್ರಭಾವದಿಂದ ರೂಪುಗೊಂಡ ಪ್ರಮುಖ ಚಳುವಳಿಗಳು ಗಮನಾರ್ಹ.

ಇದೇ ಕಾಲಕ್ಕೆ ಶಿವಮೊಗ್ಗ ಜಿಲ್ಲೆಯಲ್ಲಿ ಕಾಗೋಡು ಸತ್ಯಾಗ್ರಹದ ನಂತರ ರೈತರ ಮೇಲೆ ಸೋಷಲಿಸ್ಟರ ಪ್ರಭಾವ ಇನ್ನೂ ಗಾಢವಾಗಿತ್ತು. ಅಲ್ಲದೆ ರೈತರು ವಿವಿಧ ಕಾರಣಗಳಿಗಾಗಿ ಸಂಘಟಿತರಾಗಿದ್ದರು. ಶಿವಮೊಗ್ಗದಲ್ಲಿ ಸಿ.ಪಿ.ಎಂ. ಮತ್ತು ಸೋಷಲಿಸ್ಟ ಪಕ್ಷಗಳು ರೈತ ಸಂಘಟನೆಯಲ್ಲಿ ಕಾರ್ಯ ಪ್ರವೃತ್ತವಾಗಿದ್ದವು. ಆದರೆ ಎಲ್ಲೂ ಇವೆರಡೂ ಪಕ್ಷಗಳು ಗ್ರಾಮೀಣ ಭಾಗಗಳಲ್ಲಿ ಹೆಚ್ಚು ಕಾರ್ಯಚರಣೆಗಿಳಿದಿರಲಿಲ್ಲ. ಮುಂದೆ "ಭೂ ಸುಧಾರಣಾ ಶಾಸನ ಜಾರಿಗೆ ಬರುತ್ತಿದ್ದಂತೆ, ಈ ರೈತರ ಮೇಲೆ ಸೋಷಿಯಲಿಸ್ಟ್ ಪಕ್ಷಕ್ಕಿದ್ದ ಪ್ರಭಾವವೂ ನಶಿಸುತ್ತಾ ಹೋಯಿತು. ಈ ಮಾತು ತೀರ್ಥಹಳ್ಳಿಯ ಸಿಪಿಎಂ ರೈತ ಸಂಘಟನೆಯ ಮಟ್ಟಿಗೂ ನಿಜ. ಹಳೆಯ ಸೋಷಿಯಲಿಸ್ಟ್ ಪಕ್ಷದ ನಾಯಕರಲ್ಲಿ ಹೆಚ್ಚಿನವರು ಕ್ರಮೇಣ ಆಳುವ ಪಕ್ಷವನ್ನು ಸೇರಿಕೊಂಡದ್ದೂ ಕೂಡ" ಈ ಭಾಗದ ರೈತ ಸಂಘಟನೆಗಳಿಗೆ ನಿಜವಾದ ಪೆಟ್ಟು ನೀಡಿತ್ತು. ಮೈಸೂರು ರಾಜ್ಯ ಉದಯವಾದ ಮೇಲೆ "ಕಿಸಾನ್ ಸಭಾದ ರೈತರು ತಮ್ಮ ನೂತನ ರೈತ ಸಂಘಕ್ಕೆ ಕರ್ನಾಟಕ ಪ್ರಾಂತ ರೈತ ಸಂಘವೆಂದೇ ಕರೆದರು:" ಸಿಪಿಎಂ ಪಕ್ಷದ ರೈತ ಸಂಘಟನೆಯಾದ ಕರ್ನಾಟಕ ಪ್ರಾಂತ ರೈತ ಸಂಘಕ್ಕೆ ವಿವಿಧ ರೈತವರ್ಗಗಳ ಸ್ವರೂಪ ಮತ್ತು ಅಸಮಾನ ಭೂ ಒಡೆತನ ಕುರಿತು ಸ್ಪಷ್ಟ ಕಲ್ಪನೆಗಳಿರುವ ಕಾರಣ, ಕರ್ನಾಟಕದಾದ್ಯಂತ, ವಿವಿಧ ಹೋರಾಟಗಳಲ್ಲಿ ತೊಡಗಿಕೊಂಡಿದೆ. ಆದರೆ ಈ ಪಕ್ಷಕ್ಕೂ ಗ್ರಾಮಮಟ್ಟದಲ್ಲಿ, ಅಲ್ಲದೆ ಭೂಹೀನ ಕೃಷಿಕರಿರುವ ಕಡೆ ಬಲವಾದ ಸಂಘಟನೆಯನ್ನೂ ರೂಪಿಸಲಾಗಲಿಲ್ಲ. 1980ರಲ್ಲಿ ಮಲಪ್ರಭ ರೈತ ಹೋರಾಟದ ಮುಂಚೂಣಿಯಲ್ಲಿದ್ದ ಕರ್ನಾಟಕ ಪ್ರಾಂತ ರೈತ ಸಂಘ, ನಂತರ ಈ ಚಳುವಳಿಯಿಂದ ಹಿಂದೆ ಸರಿಯಿತು. ಈ ಚಳುವಳಿಯನ್ನು ಆ ಭಾಗದ ಶ್ರೀಮಂತ ರೈತರು ಮುನ್ನೆಡೆಸಲು ಉತ್ಸಾಹ ತೋರಿದಾಗ, ಪ್ರಾಂತ ರೈತ ಸಂಘ ಹಿಂದೆ ಸರಿಯುತ್ತದೆ. "1982ರಲ್ಲಿ ಗಂಗಾವತಿ ದಲಿತ ರೈತರ ಹೋರಾಟ ಮತ್ತು ಡಿ.ಆರ್. ವೆಂಕಟೇಶ್ ಮತ್ತು ಪರಶುರಾಂ 1982ರಲ್ಲಿ ಬಳ್ಳಾರಿ ಜಿಲ್ಲೆಯಲ್ಲಿ ಲಂಬಾಣಿಗರನ್ನು (ಕೊಮಾರ್ನಹಳ್ಳಿ ತಾಂಡ) ಸಂಘಟಿಸಿ ಕೈಗೊಂಡ ಹೋರಾಟ" ಗಮನಾರ್ಹವಾದವುಗಳು.

(ಕಾಗೋಡು ಚಳುವಳಿ ಪುಟ. 288)

1952ರಲ್ಲಿ ಶಾಸನ ಸಭೆಯಲ್ಲಿ ಮಂಡಿಸಲ್ಪಟ್ಟ ಮೈಸೂರಿನ ಟೆನೆನ್ಸಿ ಕಾಯಿದೆಯು ಗೇಣಿದಾರರನ್ನೇ ದೃಷ್ಟಿಯಲ್ಲಿಟ್ಟುಕೊಂಡೇ ರಚನೆಯಾದ ಕಾಯಿದೆಯಾಗಿದೆ. "ಈ ಕಾಯಿದೆಯು ಗೇಣಿಯನ್ನು ಒಂದನೇ ಮೂರಕ್ಕಿಂತ ಜಾಸ್ತಿ ಇರಬಾರದೆಂದು ಪ್ರತಿಪಾದಿಸಿತು.12 ವರ್ಷಕ್ಕಿಂತ ಹೆಚ್ಚು ಕಾಲದ ಅವಧಿಯಲ್ಲಿ ಗೇಣಿ ಮಾಡಿ ಕೊಂಡಿದ್ದವರಿಗೆ ಖಾಯಂ ಹಕ್ಕು ಸಿಕ್ಕಿತು.ಆದರೆ ಇದರಲ್ಲಿಯೂ ಸಾಕಷ್ಟು ನ್ಯೂನತೆಗಳಿದ್ದವು.ಇದು ಗೇಣಿಯನ್ನು ಮಾಡಿಕೊಂಡಿದ್ದವರಿಗೆ ಹೆಚ್ಚಿನ ಅವಕಾಶವನ್ನು ಕಲ್ಪಿಸಲಿಲ್ಲ.ಒಂದು ದೃಷ್ಟಿಯಿಂದ ಇದು ಗೇಣಿ ಕೊಟ್ಟವರಿಗೆ ಅನುಕೂಲಕರವಾಗಿತ್ತು. ಗೇಣಿಕೊಟ್ಟವರು ತಾವು ಗೇಣಿಕೊಟ್ಟಿಲ್ಲವೆಂದು ಹೇಳ ಬಹುದಿತ್ತು. ಅಥವಾ ಅವರು ಗೇಣಿದಾರರನ್ನು ಬೆದರಿಸಬಹುದಿತ್ತು.1957ರಲ್ಲಿ ಕಾಗೋಡು ಸತ್ಯಾಗ್ರಹದ ಬಿಸಿ ಇರುವಾಗಲೇ ಭೂಸುಧಾರಣೆಯ ಕಾಯಿದೆಯು ಇರುವಾಗಲೇ ಜತ್ತಿ ಕಮಿಟಿ ರಚಿತವಾಯಿತು.ಆದರೆ ಇದರಲ್ಲಿ ವಸ್ತುನಿಷ್ಠತೆಯಿರಲಿಲ್ಲ.1974ರಲ್ಲಿ ಉಳುವವನೆ ಹೊಲದೊಡೆಯ ಎಂಬ ಭೂಸುಧಾರಣೆಯ ಕಾಯಿದೆಯು ಅನುಷ್ಠಾನಕ್ಕೆ ಬಂದಿತು.ಇದಕ್ಕೆ ಕಾರಣ ಆಗಿನ ಮುಖ್ಯ ಮಂತ್ರಿಗಳಾಗಿದ್ದ ದೇವರಾಜ ಅರಸರು.ಇದು ಚಾರಿತ್ರಿಕವಾಗಿ ಮಹತ್ವದ್ದು.ಆದರೂ ಇದು ಜಾರಿಗೆ ಬರುವ ಸಂದರ್ಭದಲ್ಲಿ ಅನೇಕ ಭೂಮಾಲೀಕರು ತಮಗೆ ಬೇಕಾದ ರೀತಿಯ ಎಚ್ಚರವನ್ನು ವಹಿಸಿಕೊಂಡು ಬಿಟ್ಟಿದ್ದರು.

(ಕಾಗೋಡು ಸತ್ಯಾಗ್ರಹ – ಎಸ್ ಪ್ರಭಾಕರ ಪುಟ. 295)

ಇಲ್ಲಿಯೇ 1830ರಲ್ಲಿ ಜರುಗಿದ ಮೈಸೂರು ಪ್ರಾಂತದ ರೈತರ ದಂಗೆಯ ಪ್ರಕರಣವೂ ಗಮನಾರ್ಹವಾಗಿದೆ. (ವಿವರಗಳಿಗೆ ನೋಡಿ_ಸೆಬಾಸ್ಟಿಯನ್ ಜೋಸೆಫ್–ನಗರ ಡಿವಿಷನ್‌ನಲ್ಲಿ ಜರುಗಿದ ರೈತರ ದಂಗೆ–ಕಾಗೋಡು ಚಳುವಳಿ ಪುಟ 298–303)

1940ನೆಯ ಇಸವಿಯಲ್ಲಿ ಉತ್ತರಕನ್ನಡ ಜಿಲ್ಲೆಯಲ್ಲಿ ರೈತರ ಬೃಹತ್ ಸಮಾವೇಶವು ಜರಿಗಿತು.ಅಂದೇ "ಅಂಕೋಲಾ ತಾಲೂಕ್ ರೈತ ಸಂಘವು ಹುಟ್ಟಿಕೊಂಡಿತು.ಈ ಸಂಘವು ಗೇಣಿಯ ವಿಷಯವನ್ನು ಮುಂದಕ್ಕೆ ಇಟ್ಟುಕೊಂಡಿತು.ಗೇಣಿಯನ್ನಿ ಮೂರನೇ ಒಂದು ಅಂಶಕ್ಕೆ ಇಳಿಸಬೇಕು ಎನ್ನುವುದು ಅದರ ಮುಖ್ಯವಾದ ಬೇಡಿಕೆಯಾಗಿತ್ತು. ಬಾಂಬೆ ಎಗ್ರಿಕಲ್ಚುರಲ್ ಡೆಬ್ಟ್ ರೀಲೀಫ್ ಎಕ್ಟ್ ಜಾರಿಗೆ ಬರಬೇಕು ಎನ್ನುವುದು ಅದರ ಬೇಡಿಕೆಯಾಗಿತ್ತು.ಇದರ ಪರಿಣಾಮವಾಗಿ

ಅಂಕೋಲೆಯ ಭಾಗದಲ್ಲಿ ರೈತರ ಚಳುವಳಿಯು ಪ್ರಾರಂಭ ವಾಯಿತು.1940ರಲ್ಲಿ ಭೂಮಾಲೀಕರು ಮತ್ತು ರೈತರ ನಡುವಣ ಸಂಬಂಧವು ವಿಷಮಿಸಿತು. ಈ ಕಾಲಕ್ಕೆ ರೈತರ ಸಮಾವೇಶವು ಅಂಕೋಲೆಯಲ್ಲಿ ಜರುಗಿತು.ಇದೇ ಸಭೆಯಲ್ಲಿ ಅಂಕೋಲೆ ಮತ್ತು ಗೋಕರ್ಣದಲ್ಲಿ ರೈತರು ಗೇಣಿ ಕೊಡಬಾರದು ಎಂಬ ನಿಶ್ಚಯವು ಜಾರಿಗೆ ಬಂತು. ಕನ್ನಡದ ಖ್ಯಾತ ಲೇಖಕ ದಿನಕರ ದೇಸಾಯಿ ಯವರನ್ನು ಗಡಿಪಾರು ಮಾಡುವಂತೆ ಸೂಚಿಸಲಾಯಿತು.ಇದಕ್ಕೆ ಕಾರಣ ಆಗಿನ ಮುಂಬೈ ಸರಕಾರ. ಇದು ಗಮನಾರ್ಹವಾದ ವಿಷಯುವಾಗಿದೆ. 1947ರ ಮೇ ತಿಂಗಳಲ್ಲಿ ಜರುಗಿದ ಸಮಾವೇಶದಲ್ಲಿ ದಿನಕರದೇಸಾಯಿಯವರು ಉಳುವವನೇ ಹೊಲದೊಡೆಯ ಎಂಬ ಘೋಷಣೆಯನ್ನು ಮಾಡಿದರು.ಆ ಸಮಯದಲ್ಲಿ ದಿನಕರದೇಸಾಯಿಯವರು ಕಟ್ಟಿದ ಹಾಡು ಗಮನಾರ್ಹವಾಗಿದೆ:

"ರೈತರು ಕೂಟಾ ಕಟ್ಟಿದರೋ
ಒಡೆಯ ಘಟ್ಟ ಹತ್ತಿದರೋ
ನಮ್ಮದೇ ಇದ್ದ ಈ ಭೂಮಿ
ನಮದೇ ಆಗಲಿ ಹೇ ಸ್ವಾಮಿ
ಅದಕೆ ಕೂಟಾ ಕಟ್ಟುವುದು
ಹೊಟ್ಟೆಯ ಗುರಿಯನು ಕಟ್ಟವುದು
ಹೊಟ್ಟೆಲಿ ಹಸಿವೆಯ ಬೆಂಕಿಯ ಜ್ವಾಲೆ
ಕೊರಳಿಗೆ ಮುಳ್ಳಿನ ಮಾಲೆ
ಕೂಳಿಲ್ಲದೆ ಬಡ ರೈತನ ಹೊಟ್ಟೆ
ಬೆನ್ನಿಗೆ ತಾಗಿ ಆಗಿದೆ ತಟ್ಟೆ"
ದಿನಕರ ದೇಸಾಯಿ

ಉತ್ತರ ಕನ್ನಡ ಜಿಲ್ಲೆಯಲ್ಲಿ ನಡೆದ ಈ ಮಾದರಿಯ ಚಳುವಳಿಯು ಸ್ವಾತಂತ್ರ್ಯದ ಅನಂತರದ ಮಹತ್ವದ ಚಳುವಳಿಯಾಗಿದೆ.ಇದಕ್ಕೆ ಗಾಂಧಿಯವರ ಪ್ರೇರಣೆಯೂ ಇದೆಯೆನ್ನುವುದು ಗಮನಾರ್ಹ. (ಶ್ರೀಪಾದ ಶೆಟ್ಟಿ)

ರೈತವರ್ಗ ಮತ್ತು ರಾಷ್ಟ್ರೀಯ ಚಳುವಳಿಯ ನಡುವಣ ಸಂಬಂಧವು ಸಂಕೀರ್ಣವಾಗಿತ್ತು. ಈ ಕುರಿತ ಕೆಲವು ಸಂಗತಿಗಳು ಉಲ್ಲೇಖ ನೀಯ. ಗಾಂಧಿಯವರು ವರ್ಗ ಹೋರಾಟವನ್ನು ವರ್ಗಗಳ ಹೊಂದಾಣಿಕೆಯೆಂದು ಕರೆದಿದ್ದರು. 1930ರ ಸುಮಾರಿಗೆ ಭಾರತೀಯ ರಾಷ್ಟ್ರೀಯ ಚಳುವಳಿಯು ರೈತರ ಸಮಸ್ಯೆಯನ್ನು

ಗಂಭೀರವಾಗಿ ಪರಿಗಣಿಸಿತ್ತು. 1939–1940ರಲ್ಲಿ ಜಮೀನುದಾರಿ ವಿರೋಧಿ ಹೋರಾಟವು ಮುಗಿಲು ಮುಟ್ಟಿತ್ತು ಎಂದು ಇತಿಹಾಸಕಾರರು ಅಭಿಪ್ರಾಯ ಪಡುತ್ತಾರೆ. (ಎಸ್.ಚಂದ್ರಶೇಖರ್– ರೈತವರ್ಗ ಹಾಗೂ ರಾಷ್ಟ್ರೀಯ ಚಳುವಳಿ–ಕಾಗೋಡು ಸತ್ಯಾಗ್ರಹ– ಪುಟ. 378–385)

* * *

೧೧. ಜಾಗತೀಕರಣಕ್ಕೆ ಪರ್ಯಾಯ ಸಾಧ್ಯತೆಗಳು ಯಾವುದು?

ಜಗತ್ತಿನಲ್ಲಿ ಬಂಡವಾಳವೇ ಸರ್ವಸ್ವವೆಂದು ನಂಬತೊಡಗಿದ್ದೇವೆ. ಆದರೆ ಒಂದು ಗಳಿಗೆ ವಿಚಾರ ಮಾಡಿದರೆ ಬಂಡವಾಳಗಾರ ಎಂದೂ ಪಡೆಯಲಾಗದಷ್ಟು ಬಂಡವಾಳ ಶ್ರಮಶಕ್ತಿಯ ಬಳಿ ಇರುವುದು ಗೋಚರವಾದೀತು. ಶ್ರಮಶಕ್ತಿಗೆ ಅಪ್ರತಿಮ ಅವಕಾಶಗಳಿವೆಯೆಂಬುದನ್ನು ರಸ್ಕಿನ್ ತನ್ನ ಕಾಲದಲ್ಲಿ ಬೋಧಿಸಿದ. ಆದರೆ ಆತ ನಮ್ಮ ಅಳತೆಗೆ ಮೀರಿ ಮಾತಾಡಿದ. ಈಗಲಾದರೋ ಅಂತಹ ಒಂದು ಪ್ರಯೋಗವನ್ನೇ ನಿಜವಾಗಿ ನಡೆಸಿರುವ ಇಂಗ್ಲಿಷ್ ಗೃಹಸ್ಥ ಸರ್ ಡೇನಿಯಲ್ ಹ್ಯಾಮಿಲ್ಟನ್ ಎಂಬಾತನಿದ್ದಾನೆ. ಆತ ಅರ್ಥಶಾಸ್ತ್ರಜ್ಞ, ಬಂಡವಾಳಗಾರನೂ ಸಹ; ತನ್ನ ಆರ್ಥಿಕ ಸಂಶೋಧನೆಗಳಿಂದ ಹಾಗೂ ಪ್ರಯೋಗಗಳಿಂದ ರಸ್ಕಿನ್ ಸ್ಫೂರ್ತಿವಶನಾಗಿ ಬಂದ ನಿರ್ಣಯಗಳಿಗೇ ಬಂದಿದ್ದಾನೆ. ಶ್ರಮಶಕ್ತಿಗೆ, ಶ್ರಮವರ್ಗಕ್ಕೆ ಸಜೀವ ಸಂದೇಶವೊಂದನ್ನು ಆತ ತಂದಿದ್ದಾನೆ. ಒಂದು ಲೋಹದ ಚೂರಿನಲ್ಲಿ ಬಂಡವಾಳ ಅಡಕವಾಗಿದೆ ಎಂಬುದು ತಪ್ಪು ಎನ್ನುತ್ತಾನೆ ಆತ. ಇಂತಿಷ್ಟು ಉತ್ಪನ್ನವೇ ಬಂಡವಾಳ ಎಂಬುದೂ ತಪ್ಪು; ಮೂಲಕ್ಕೇ ನಾವು ಹೋಗುವುದಾದರೆ ಶ್ರಮಶಕ್ತಿಯೇ ಬಂಡವಾಳ, ಮತ್ತು ಆ ಸಜೀವ ಬಂಡವಾಳ ಅಕ್ಷಯವಾದುದು ಎಂದೂ ಆತನ ಹೇಳಿಕೆ.

ಬಂಡವಾಳ ಹಾಗೂ ಶ್ರಮಶಕ್ತಿ ಎರಡರ ನಡುವೆ ಯೋಗ್ಯ ಸಂಬಂಧದ ಸ್ಥಾಪನೆಯ ಪಕ್ಷಪಾತಿ ನಾನು. ಒಂದು ಇನ್ನೊಂದರ ಮೇಲೆ ಸವಾರಿ ಮಾಡಬೇಕೆಂದು ನಾ ಇಚ್ಛಿಸುವುದಿಲ್ಲ. ಎರಡರ ನಡುವೆಯೂ ಯಾವುದೇ ನೈಸರ್ಗಿಕ ವಿರೋಧವಿದೆಯೆಂದೂ ನಾನು ನಂಬುವುದಿಲ್ಲ.

ಬಂಡವಾಳ ಒಂದು ಶಕ್ತಿಯಾದುದಾದರೆ ದುಡಿಮೆಯೂ ಅಂತೆಯೇ. ಎರಡೂ ಶಕ್ತಿಗಳನ್ನೂ ವಿನಾಶಕಾರಿಯಾಗಿ ಅಥವಾ ವಿಧಾಯಕವಾಗಿ ಬಳಸಬಹುದು. ಎರಡೂ ಪರಸ್ಪರ ಅವಲಂಬಿಗಳು. ಒಮ್ಮೆ ದುಡಿಮೆಗಾರನಿಗೆ ಅವನ ಶಕ್ತಿ ಮನವರಿಕೆಯಾಯಿತೆಂದರೆ ಬಂಡವಾಳಗಾರನು ಗುಲಾಮನಾಗಿ ಇರುವುದನ್ನು ಬಿಟ್ಟು ಅವನೊಡನೆ ಪಾಲುಗಾರನಾಗಿಬಿಡುತ್ತಾನೆ. ಅವನು ತಾನೊಬ್ಬನೇ ಏಕಮಾತ್ರ ಒಡೆಯನಾಗಬೇಕೆಂದು ಬಯಸಿದರೆ ಬಂಗಾರದ ತತ್ತಿಯಿಡುವ ಕೋಳಿಯನ್ನೇ ಆತ ಕೊಂದಾನು.

(ಮೋ.ಕ. ಗಾಂಧೀ 1959 ಅರ್ಥ ವಿಚಾರ ಪುಟ. 212)

ಆಧುನಿಕ ಕೈಗಾರಿಕೆಯು ಜಾಗತಿಕ ಮಾರುಕಟ್ಟೆಯೊಂದನ್ನು ಸ್ಥಾಪಿಸಿದೆ. ಅಮೆರಿಕದ ಆವಿಷ್ಕರಣವು ಇದಕ್ಕೆ ದಾರಿ ಮಡಿಕೊಟ್ಟಿತು. ಈ ಜಗತಿಕ ಮಾರುಕಟ್ಟೆಯು ವಾಣಿಜ್ಯ, ಸಮುದ್ರಯಾನ ಹಾಗೂ ಭೂಮಾರ್ಗ ಸಂಪರ್ಕಗಳನ್ನು ಅಪಾರವಾಗಿ ಅಭಿವೃದ್ಧಿಗೊಳಿಸಿದೆ. ಈ ಅಭಿವೃದ್ಧಿಯು, ತನ್ನ ಸರದಿಯಲ್ಲಿ, ಕೈಗಾರಿಕೆಯ ವಿಸ್ತರಣೆಯ ಮೇಲೆ ಪ್ರಭಾವ ಬೀರಿದೆ; ಕೈಗಾರಿಕೆ, ವಾಣಿಜ್ಯ, ಸಮುದ್ರಯಾನ ಹಾಗೂ ರೈಲು ಮಾರ್ಗಗಳು ಅಭಿವೃದ್ಧಿಗೊಂಡಂತೆ ಅದೇ ಪ್ರಮಾಣದಲ್ಲಿ ಬೂರ್ಜ್ವಾಸೀಯೂ ಅಭಿವೃದ್ಧಿಗೊಂಡಿತು. ತನ್ನ ಬಂಡವಾಳವನ್ನು ಹೆಚ್ಚಿಸಿಕೊಂಡಿತು. ಮಧ್ಯಯುಗದಿಂದ ಇದ್ದುಕೊಂಡು ಬಂದಿದ್ದ ಬೇರೆಲ್ಲ ವರ್ಗಗಳನ್ನೂ ಹಿನ್ನೆಲೆಗೆ ತಳ್ಳಿತು. ಆದ್ದರಿಂದ ಆಧುನಿಕ ಬೂರ್ಜ್ವಾಸೀಯೇ ಹೇಗೆ ಬಹುಕಾಲದ ಬೆಳವಣಿಗೆಯ ಮತ್ತು ಉತ್ಪಾದನಾ ವಿಧಾನ ಹಾಗೂ ವಿನಿಮಯ ವಿಧಾನಗಳಲ್ಲಿ ಉಂಟಾದ ಕ್ರಾಂತಿಗಳ ಸರಮಾಲೆಯ ಪರಿಣಾಮವಾಗಿದೆ ಎಂಬುದನ್ನು ನಾವು ಕಾಣುತ್ತೇವೆ.

(ಮಾರ್ಕ್ಸ್ ಏಂಗೆಲ್ಸ್ – ಆಯ್ದ ಕೃತಿಗಳು 1990 ಸಂಪುಟ 1 ಪುಟ. 53–54)

ಬಂಡವಾಳವಾದವು ಸರಕು ಉತ್ಪಾದನೆಯ ಬೆಳವಣಿಗೆಯ ಅತ್ಯುನ್ನತ ಘಟ್ಟ. ಆಗ ಶ್ರಮಶಕ್ತಿಯೇ ಒಂದು ಸರಕಾಗುತ್ತದೆ. ದೇಶದೊಳಗಿನ ವಿನಿಮಯದ ಬೆಳವಣಿಗೆಯು, ನಿರ್ದಿಷ್ಟವಾಗಿ

ಅಂತರರಾಷ್ಟ್ರೀಯ ವಿನಿಮಯದ ಬೆಳವಣಿಗೆಯು, ಬಂಡವಾಳ ವಾದದ ವಿಶಿಷ್ಟ ಲಕ್ಷಣ. ಬಿಡಿ ಉದ್ಯಮಗಳ, ಬಿಡಿ ಕೈಗಾರಿಕಾ ಶಾಖೆಗಳ ಹಾಗೂ ಬಿಡಿ ದೇಶಗಳ ಅಸಮವಾದ ಹಾಗೂ ನೆಗೆತದ ರೀತಿಯಲ್ಲಿ ಆಗುವ ಬೆಳವಣಿಗೆಯು ಬಂಡವಾಳಶಾಹಿ ಪದ್ಧತಿಯಲ್ಲಿ ಅನಿವಾರ್ಯ. ಇಂಗ್ಲೆಂಡು ಬೇರೆ ಯಾವುದೇ ದೇಶಕ್ಕೆ ಮುನ್ನ ಬಂಡವಾಳಶಾಹಿ ದೇಶವಾಯಿತು. 19ನೆಯ ಶತಮಾನದ ಮಧ್ಯಭಾಗದ ಹೊತ್ತಿಗೆ ಅದು ಮುಕ್ತ ವ್ಯಾಪಾರವನ್ನು ಜರಿಗೆ ತಂದು ತಾನು "ಜಗತ್ತಿನ ಕರ್ಮ ಶಾಲೆ" ಎಂದೂ, ತಾನು ಎಲ್ಲ ದೇಶಗಳಿಗೂ ತಯಾರಿತ ವಸ್ತುಗಳನ್ನು ಸರಬರಾಜು ಮಾಡುತ್ತದೆಂದೂ ಆ ದೇಶಗಳೆಲ್ಲವೂ ವಿನಿಮಯವಾಗಿ ತನಗೆ ಕಚ್ಚಾ ಪದಾರ್ಥಗಳನ್ನು ಒದಗಿಸುತ್ತಿರಬೇಕೆಂದೂ, ತನ್ನ ಹಕ್ಕು ಪ್ರತಿಪಾದಿಸಿತು. ಆದರೆ 19ನೆಯ ಶತಮಾನದ ಕೊನೆಯ ಕಾಲುಭಾಗದಲ್ಲಿ ಈ ಏಕಸ್ವಾಮ್ಯ ಆಗಲೇ ಶಿಥಿಲಗೊಂಡಿದ್ದಿತು; ಏಕೆಂದರೆ, ಇತರ ಹಲವಾರು ದೇಶಗಳು "ರಕ್ಷಣಾತ್ಮಕ" ಸುಂಕಗಳ ಆಶ್ರಯ ಪಡೆದುಕೊಂಡು ಸ್ವತಂತ್ರ ಬಂಡವಾಳಶಾಹಿ ರಾಜ್ಯಗಳಾಗಿ ಬೆಳೆದವು. 20ನೆಯ ಶತಮಾನದ ಪ್ರಾರಂಭದಲ್ಲಿ ನಾವು ಒಂದು ಹೊಸ ಮಾದರಿಯ ಏಕಸ್ವಾಮ್ಯ ರೂಪುಗೊಂಡುದನ್ನು ಕಾಣುತ್ತೇವೆ: ಮೊದಲನೆಯದಾಗಿ, ಬಂಡವಾಳಶಾಹಿ ರೀತಿಯಲ್ಲಿ ವಿಕಾಸಗೊಂಡ ಎಲ್ಲ ದೇಶಗಳಲ್ಲೂ ಬಂಡವಾಳಗಾರರ ಏಕಸ್ವಾಮ್ಯ ಕೂಟಗಳು ರೂಪುಗೊಂಡಿವೆ; ಎರಡನೆಯದಾಗಿ, ಬಂಡವಾಳ ಸಂಚಯವು ಬೃಹತ್ ಪ್ರಮಾಣ ತಲುಪಿದಂಥ ಕೆಲವೇ ಅತ್ಯಂತ ಶ್ರೀಮಂತ ದೇಶಗಳು ಏಕಸ್ವಾಮ್ಯ ಸ್ಥಾನ ಪಡೆದುಕೊಂಡಿವೆ. ಮುಂದುವರಿದ ದೇಶಗಳಲ್ಲಿ ಭಾರಿ ಪ್ರಮಾಣದಲ್ಲಿ "ಬಂಡವಾಳದ ಮಿಗುತಾಯ" ಉಂಟಾಗಿದೆ.

(ಲೆನಿನ್ – ಆಯ್ದ ಕೃತಿಗಳು 1988 ಸಂಪುಟ 2 ಪುಟ. 79–80)

ಜಾಗತೀಕರಣದ ಸಮಸ್ಯೆ ಒಂದು ಕಡೆ, ಕೋಮುವಾದ ಮತ್ತೊಂದು ಕಡೆ ನಮ್ಮನ್ನು ಕಾಡುತ್ತಿರುವ ಪ್ರಮುಖ ಸಮಸ್ಯೆಗಳು. ಜಾಗತೀಕರಣವು ಪ್ರಚಲಿತ ಅರ್ಥಶಾಸ್ತ್ರದ ಪರಿಭಾಷೆ. ಕೋಮುವಾದ ಕಲ್ಪಿತ ಧರ್ಮದ ಜೊತೆಗೆ ಅನುಸಂಧಾನ ನಡೆಸುವ ಒಂದು ಭ್ರಮಾತ್ಮಕ ನಂಬಿಕೆ. ಜಾಗತೀಕರಣವೆಂಬ ಅರ್ಥಶಾಸ್ತ್ರದ ಪರಿಭಾಷೆಯ ಪರಿಚಯವನ್ನು ಜಗತ್ತಿಗೆ ಮಾಡಿಕೊಟ್ಟುದು ಕೆಲವೇ ಕೆಲವು ಪ್ರತಿಷ್ಠಿತ ಬಹುರಾಷ್ಟ್ರೀಯ ಕಂಪೆನಿಗಳು. ಜಾಗತೀಕರಣಕ್ಕೆ ಮನುಷ್ಯ ಸಂಬಂಧವು ಮುಖ್ಯವಲ್ಲ. ಲಾಭದ

ದುರಾಸೆಯೇ ಹೆಚ್ಚು. ಭಾರತದಲ್ಲಿಯೂ ಕೋಮುವಾದ ವ್ಯವಸ್ಥಿತವಾಗಿ ರೂಪುಗೊಂಡುದಕ್ಕೆ ಅಧಿಕಾರದ ದುರಾಸೆಯೇ ಕಾರಣವಾಗಿದೆ. ಈ ಎರಡೂ ಸಮಸ್ಯೆಗಳು ನಮ್ಮ ಜೀವನಕ್ರಮವನ್ನು ಅಸ್ತವ್ಯಸ್ತಗೊಳಿಸಿವೆ ಮತ್ತು ಸಾಮಾಜಿಕ ಸಂಬಂಧಗಳ ಮೇಲೆ ದುಷ್ಪರಿಣಾಮವನ್ನು ಬೀರುತ್ತಿವೆ. ಈ ದೃಷ್ಟಿಯಿಂದ ಜಾಗತೀಕರಣ ಮತ್ತು ಸಮಾಜದ ನಡುವಣ ಸಂಬಂಧದ ವಿವೇಚನೆಯು ಮೂಲಭೂತವಾದ ಸಮಸ್ಯೆಯಿಂದಲೇ ಪ್ರಾರಂಭವಾಗಬೇಕಾಗುತ್ತದೆ. ಜಾಗತೀಕರಣ ಎಲ್ಲಿಂದ ಹೊರಡುತ್ತದೆಯೋ ಅಲ್ಲಿಂದಲೇ ಸಾಮಾಜಿಕ ಆಯಾಮಗಳ ಪ್ರಶ್ನೆಗಳು ಪ್ರಾರಂಭವಾಗುತ್ತವೆ. ಕೆಲವು ಪ್ರಮೇಯಗಳು ಕೂಡಾ ಅಲ್ಲಿಂದ ಶುರುವಾಗುತ್ತವೆ. ಸದ್ಯ ನಮಗೆ ಅಂದರೆ ಜಾಗತೀಕರಣದ ನೇರವಾದ ನೆರಳು ಬೀಳುವುದು ಕೃಷಿ ಕ್ಷೇತ್ರಕ್ಕೆ ಆರ್ಥಿಕ ಸಂರಚನೆಯ ಬದಲಾವಣೆ ಮತ್ತು ಕೃಷಿ ನಡುವಣ ಸಂಬಂಧ ಯಾವಾಗಲೂ ದ್ವಂದ್ವಾತ್ಮಕವಾದುದು. ಹಾಗಾಗಿ ಅದು ಸರಳೀಕರಣಗೊಳಿಸುವ ಪ್ರಕ್ರಿಯೆಯಲ್ಲ. ಕೃಷಿಕನ ಆಲೋಚನಾ ಕ್ರಮವು ಸಾಮಾಜಿಕ, ಆರ್ಥಿಕ ಬದಲಾವಣೆಗೆ ಅನುಸಾರವಾಗಿ ಬೇರೆಯಾಗುತ್ತದೆ ಮತ್ತು ಅದರ ಪರಿಣಾಮವಾಗಿ ಕೃಷಿಯ ವಿಧಾನಗಳು ಬದಲಾಗುತ್ತವೆ. ಈ ಕಾರಣದಿಂದ ತತ್‌ಕ್ಷಣವೇ ಕೃಷಿಕನ ಜೀವನ ವಿಧಾನವನ್ನು ಒಂದು ಹಿಡಿಯಲ್ಲಿ ಹಿಡಿದುಕೊಂಡು ಅದಕ್ಕೂ ಸಮಾಜಕ್ಕೂ ಒಂದು ನಿರ್ಣಾಯಕವಾದ ಸಂಬಂಧವಿದೆಯೆಂದು ಹೇಳುವುದು ಕಷ್ಟ.

ಬಂಡವಾಳವಾದ ಮತ್ತು ಕೃಷಿ: ವಸಾಹತುವಾದ ಮತ್ತು ಕೃಷಿ: ವ್ಯಕ್ತಿ ಮತ್ತು ಕೃಷಿ: ಸಮೂಹ ಸಂಪತ್ತು ಮತ್ತು ಕೃಷಿ – ಇವುಗಳಿಗೆ ಇರುವ ಸಂಬಂಧ ಸಂಕೀರ್ಣವಾದುದು.

> **"ಒಂದು ರಾಷ್ಟ್ರಕ್ಕೆ ತನ್ನ ಲಕ್ಷಾಧೀಶರಿಲ್ಲದಿದ್ದರೂ ನಡೆದೀತು, ಬಂಡವಾಳಗಾರರಿಲ್ಲದೆಯೂ ನಡೆದೀತು. ಆದರೆ ಶ್ರಮಿಕವರ್ಗವಿಲ್ಲದೆ ಯಾವ ರಾಷ್ಟ್ರವೂ ನಡೆಯದು".**
> **ಶ್ರಮಪ್ರತಿಷ್ಠೆಯ ಬಗೆಗ ನನಗೆ ಎಷ್ಟು ಅಪಾರ ಗೌರವವೆಂದರೆ ನಾನು ಅನೇಕಾನೇಕ ವರ್ಷಗಳಿಂದ ದುಡಿಮೆಗಾರರ ಭಾಗ್ಯದೊಂದಿಗೆ ನನ್ನದನ್ನೂ ಸೇರಿಸಿಕೊಂಡುಬಿಟ್ಟಿದ್ದೇನೆ; ಅವರಂತೆಯೇ ನನ್ನ ಕೈಕಾಲುಗಳಿಂದಲೂ ದುಡಿಯುತ್ತ ಅವರೊಂದಿಗೇ ಬದುಕ ತೊಡಗಿಸಿದ್ದೇನೆ. ನಿಮ್ಮ ಶರೀರ ಶ್ರಮದಿಂದ ದುಡಿದರೆ ನೀವು ಕೇವಲ ನಿಮ್ಮ ಅಸ್ತಿತ್ವದ ನಿಯಮದ ಪ್ರಕಾರವೇ ನಡೆಯುತ್ತಿದ್ದಂತೆ; ನಿಮ್ಮ ಸ್ಥಿತಿಯ ಬಗೆಗೆ ಅತೃಪ್ತಿಪಡಲು ಯಾವ ಕಾರಣವೂ ಇಲ್ಲ. ಹಾಗೆ ಅತೃಪ್ತಿಪಡುವ ಬದಲು ಯಾವ ರಾಷ್ಟ್ರಕ್ಕಾಗಿ ದುಡಿಯು**

ತ್ತಿರುವಿರೋ ಅದರ ಧರ್ಮದರ್ಶಿಗಳು ನೀವೆಂದು ಭಾವಿಸಿಕೊಳ್ಳಿ. ನಿಮ್ಮ ದುಡಿಮೆಗೂ ನನ್ನ ದುಡಿಮೆಗೂ ಒಂದು ಮುಖ್ಯ ವ್ಯತ್ಯಾಸವಿದೆ. ನೀವು ಬೇರೊಬ್ಬರಿಗಾಗಿ ದುಡಿಯುತ್ತೀರಿ. ನಾನಾದರೋ ನನಗಾಗಿಯೇ ದುಡಿಯುತ್ತಿದ್ದೇನೆಂದು ತಿಳಿಯುತ್ತೇನೆ. ಆಗ ನನಗೆ ನಾನೇ ಒಡೆಯ. ಆದಕಾರಣ ನನ್ನ ಸ್ಥಿತಿ ಸ್ವಾಭಾವಿಕ. ನಾವೆಲ್ಲರೂ ನಮ್ಮ ನಮ್ಮ ಒಡೆಯರು ನಾವೇ ಆಗಬೇಕು. ಅಂಥ ಸ್ಥಿತಿ ಒಂದೇ ದಿನದಲ್ಲಿ ಬಾರದು. ಇತರರ ಆಳುಗಳಾಗಿ ಕೆಲಸ ಮಾಡುವಾಗ ನೀವು ಹೇಗೆ ನಡೆದುಕೊಳ್ಳಬೇಕೆಂಬುದು ಒಂದು ಗಂಭೀರ ಪ್ರಶ್ನೆಯೇ. ತನಗಾಗಿ ದುಡಿಮೆಗಾರನಾಗುವುದರಲ್ಲಿ ಹೇಗೆ ಅವಮಾನವಿಲ್ಲವೋ ಅಂತೆಯೇ ಪರರ ಆಳಾಗಿ ಕೆಲಸ ಮಾಡುವುದರಲ್ಲಿಯೂ ಯಾವ ಅವಮಾನವೂ ಇಲ್ಲ.

ಆದರೆ ಒಡೆಯ ಆಳುಗಳ ನಡುವೆ ನಿಜವಾದ ಸಂಬಂಧವನ್ನು ಕಂಡುಕೊಳ್ಳಬೇಕಾದುದು ಅಗತ್ಯ. ನಿಮ್ಮ ಕರ್ತವ್ಯಗಳಾವುವು, ನಿಮ್ಮ ಹಕ್ಕುಗಳು ಯಾವುವು? ನಿಮ್ಮ ದುಡಿಮೆಗೆ ಅಧಿಕ ವೇತನ ಪಡೆಯುವುದು ನಿಮ್ಮ ಹಕ್ಕು. ಇದು ತಿಳಿಯುವುದು ಸುಲಭ. ಹಾಗೆಯೇ ನೀವು ಪಡೆವ ವೇತನಕ್ಕೆ ಪ್ರತಿಯಾಗಿ ನಿಮ್ಮ ಶಕ್ತಿಯಿದ್ದಷ್ಟೂ ದುಡಿಯಬೇಕು ಎಂಬುದೂ ಅಷ್ಟೇ ಸರಳ. ದುಡಿಮೆಗಾರರು ನಿಯಮರೂಪವಾಗಿ ತಮ್ಮ ಹೊಣೆಯನ್ನು ದುಡಿಮೆಗಾರರ ವಿಷಯಕ್ಕೆ ಸಮಾನವಾದ ಹೊಣೆಯುಳ್ಳ ಒಡೆಯನಿಗಿಂತ ಹೆಚ್ಚು ಪರಿಣಾಮಕಾರಿಯಾಗಿ, ಬುದ್ಧಿಪೂರ್ವಕವಾಗಿ ನಿರ್ವಹಿಸುವ ರೆಂಬುದು ನನ್ನ ಸಾರ್ವಜನಿಕ ಅನುಭವ. ಆದಕಾರಣ ದುಡಿಮೆಗಾರರು ಒಡೆಯರ ಮೇಲೆ ತಮ್ಮ ಅಭೀಷ್ಟವನ್ನು ಎಷ್ಟರ ಮಟ್ಟಿಗೆ ಹೊರಿಸಬಹುದೆಂಬುದನ್ನು ಅರಿಯಬೇಕಾದುದು ಅಗತ್ಯ. ನಮಗೆ ಸರಿಯಾಗಿ ಸಂಬಳ ಕೊಡುತ್ತಿಲ್ಲವಾದರೆ, ಒಳ್ಳೆಯ ವಸತಿ ಇಲ್ಲವಾದರೆ, ಸಾಕಷ್ಟು ಕೂಲಿ ಪಡೆಯುವುದು, ಒಳ್ಳೆಯ ವಸತಿ ಪಡೆಯುವುದು ಎಂತು? ವೇತನದ ಪ್ರಮಾಣ, ಮಟ್ಟ ಗೊತ್ತು ಪಡಿಸುವವರು, ಕಾರ್ಮಿಕರಿಗೆ ಬೇಕಾದ ಸೌಕರ್ಯದ ಪ್ರಮಾಣ ನಿರ್ಧರಿಸುವವರು ಯಾರು? ನೀವೇ ನಿಮ್ಮ ಹಕ್ಕುಗಳನ್ನು, ಅವನ್ನು ಅನ್ವಯುಗೊಳಿಸುವ ವಿಧಾನವನ್ನು ಅರಿತುಕೊಳ್ಳುವುದು, ಅನ್ವಯಗೊಳಿಸುವುದು ಉತ್ತಮ ಪಕ್ಷ. ಆದರೆ ಅದಕ್ಕೆ ನಿಮಗೆ ಪೂರ್ವ ತಯಾರಿ, ಶಿಕ್ಷಣ ಬೇಕಾದೀತು. ದೇಶದ ಹಲವಾರು ಭಾಗಗಳಿಂದ ನಿಮ್ಮನ್ನು ಕರೆತಂದು ಇಲ್ಲಿ ಒಟ್ಟಿಗೆ ಸೇರಿಸಿದ್ದಾರೆ. ಆದರೆ ನಿಮಗೆ ಸಾಕಷ್ಟು ಕೂಲಿ ಸಿಗುತ್ತಿಲ್ಲ. ಮನೆಗಳು ಸರಿಯಾಗಿ ಇಲ್ಲ ಎಂದು ಗೊತ್ತು. ಆದುದರಿಂದ ನಿಮಗೆ ದಾರಿ ತೋರು

ತ್ತಿರುವವರು, ಸಲಹೆಗಾರರಾಗಿರುವವರು ಅಕ್ಷರ ಕಲಿಸಿಯಲ್ಲ. ಮಾನವ ವ್ಯವಹಾರಗಳ, ಮಾನವ ಸಂಬಂಧಗಳ ಪರಿಜ್ಞಾನವನ್ನು ಮೊದಲು ಮಾಡಿಕೊಡಬೇಕೆಂದು ಸೂಚಿಸುವ ಸಾಹಸ ಮಾಡುತ್ತೇನೆ. ಗೌರವಪೂರ್ವಕವಾಗಿ, ನಮ್ರತೆಯಿಂದ ಈ ಸೂಚನೆ ಕೊಡುತ್ತಿದ್ದೇನೆ. ಏಕೆಂದರೆ ದಕ್ಷಿಣ ಆಫ್ರಿಕಾದಲ್ಲಿ ಶ್ರಮಜೀವಿಗಳ ವಿಷಯು ಪರಿಶೀಲನೆ ಮಾಡಿದಾಗ ಎಷ್ಟೋ ವೇಳೆ ಕಾರ್ಮಿಕನಾಯಕರು ಕಾರ್ಮಿಕರಿಗೆ ಓದುಬರಹ ಕಲಿಸಿಬಿಟ್ಟರೆ ಸಾಕೆಂದು ತಿಳಿದಿದ್ದುದು ನನಗೆ ತಿಳಿಯ ಬಂತು. ಓದುಬರಹ ನಿಸ್ಸಂಶಯವಾಗಿ ಬೇಕು. ಆದರೆ ಅದಕ್ಕೂ ಮುಂಚೆ ನಿಮ್ಮ ಹಕ್ಕುಗಳ, ಅವನ್ನು ಅನ್ವಯಿಸಿಕೊಳ್ಳುವ ವಿಷಯಕ್ಕೆ ಸರಿಯಾದ ತಿಳಿವಳಿಕೆ ಬೇಕು ನಿಮಗೆ. ಈ ತಿಳಿವಳಿಕೆಯನ್ನು ಕೆಲವು ದಿನಗಳಲ್ಲೇ ಕಾರ್ಮಿಕರಿಗೆ ಕೊಡಬಹುದೆಂದು ಎಷ್ಟೋ ಮುಷ್ಕರಗಳನ್ನು (ಸಂಪುಗಳನ್ನು) ನಡೆಸುವಾಗ ನನಗೆ ತಿಳಿದುಬಂದಿದೆ.

(ಮೋ.ಕ. ಗಾಂಧೀ 1959 ಅರ್ಥ ವಿಚಾರ ಪುಟ. 213–215)

ಜಾಗತೀಕರಣವೆಂದರೆ ಅದು ಜಾಗತಿಕ ಅರ್ಥವ್ಯವಸ್ಥೆಯ ಉತ್ಪತ್ತಿಯೆಂದು ಅದರ ಪರವಾಗಿ ವಕಾಲತ್ತು ನಡೆಸುವವರು ಹೇಳುತ್ತಾರೆಯಾದರೂ, ಜಾಗತೀಕರಣವು ಬೆಳೆದು ಬಂದ ಕ್ರಮವನ್ನು ನೋಡಿದರೆ ಹಾಗೆ ಹೇಳುವುದು ಕಷ್ಟ. ಜಾಗತೀಕರಣವನ್ನು ಪರಿಚಯಿಸಿದ ಬಹುರಾಷ್ಟ್ರೀಯ ಕಂಪೆನಿಗಳು ತಮ್ಮ ಮಾರುಕಟ್ಟೆಯ ವಿಸ್ತರಣೆಗೆ ಮಾಡಿಕೊಂಡ ಒಂದು ಅರ್ಥವ್ಯವಸ್ಥೆ ಮಾತ್ರ. ಜಾಗತಿಕ ಅರ್ಥವ್ಯವಸ್ಥೆಯ ಉತ್ಪತ್ತಿಯೆಂದು ಜಾಗತೀಕರಣವನ್ನು ಕರೆಯಲಾಗಿದ್ದರೂ ಆ ಜಾಗತಿಕ ಅರ್ಥವ್ಯವಸ್ಥೆಯೆಂಬ ವ್ಯಾಖ್ಯೆಯಲ್ಲಿ ಯಾವ ದೇಶಗಳು ಇವೆಯೆಂದು ಕೇಳಬೇಕಾಗುತ್ತದೆ. ಜಗತ್ತು ಎಂದರೆ ಆರ್ಥಿಕವಾಗಿ ಅಭಿವೃದ್ಧಿ ಹೊಂದಿದ ದೇಶಗಳು ಮಾತ್ರ ಇವೆಯೆಂದು ತಿಳಿದುಕೊಳ್ಳುವುದು ಕಷ್ಟ. ಜಾಗತೀಕರಣವೆನ್ನುವುದು ಗಡಿ: ಸೀಮಾರೇಖೆಯಿಲ್ಲದ ಆರ್ಥಿಕ ವ್ಯವಸ್ಥೆ.

1960ರ ದಶಕದ ಕೊನೆಯ ಭಾಗದಲ್ಲಿ ಮತ್ತು 1970ರ ದಶಕದ ಮೊದಲ ಭಾಗದಲ್ಲಿ ಈ ಜಾಗತೀಕರಣವೆಂಬ ಪದವು ಹೆಚ್ಚು ಚಾಲ್ತಿಗೆ ಬಂತು. ಬಹುರಾಷ್ಟ್ರೀಯ ಕಂಪೆನಿಗಳು ತಮ್ಮ ವ್ಯಾಪಾರದ ಉದ್ದೇಶಕ್ಕಾಗಿ, ಯಾವುದೇ ಸೀಮಿತವಾದ ಗಡಿರೇಖೆಗಳು ಇರಬಾರದೆಂಬ ಕಾರಣಕ್ಕಾಗಿ ಈ ಜಾಗತೀಕರಣವನ್ನು ಚಾಲ್ತಿಗೆ ತಂದವು. ಮತ್ತು ಜಾಗತೀಕರಣವೆಂಬ ಆಕರ್ಷಕ ಪದವನ್ನು ಚಲಾವಣೆಗೆ ತಂದಾಗ ಅದಕ್ಕೆ ಹಿನ್ನೆಲೆಯಾಗಿ

ಅಂತಾರಾಷ್ಟ್ರೀಯ ಶ್ರಮವಿಭಜನೆಯ ಪ್ರಶ್ನೆಯನ್ನು ಕೂಡಾ ಚಾಲ್ತಿಗೆ ತರಲಾಯಿತು. ಶ್ರಮವಿಭಜನೆಯೆನ್ನುವುದು ಆಯಾ ದೇಶದ ಒಳಗಡೆಗೆ ತರುವುದರಿಂದ 'ಉತ್ಪಾದನೆ' ಮತ್ತು 'ಅದರ ಹಂಚುವಿಕೆ'ಯಲ್ಲಿ ಒಂದು ತಾರತಮ್ಯವಿದೆ. ಅಂತಾರಾಷ್ಟ್ರೀಯ ಶ್ರಮವಿಭಜನೆಯಿಂದ ಈ ತಾರತಮ್ಯಗಳನ್ನು ಹೋಗಲಾಡಿಸಬಹುದು ಎಂದು ಪ್ರಚಾರಗೊಳಿಸಲಾಯಿತು. ಇಂತಹ ಅಂತಾರಾಷ್ಟ್ರೀಯ ಶ್ರಮವಿಭಜನೆಯ ಪರಿಕಲ್ಪನೆಯಲ್ಲಿ ಮೂರು ರೀತಿಯ ಸಂಬಂಧಗಳಿವೆಯೆಂದು ಜೇಮ್ಸ್ ಪೆಟ್ರಾಸ್ ಅವರು ಹೇಳುತ್ತಾರೆ. (ಜೇಮ್ಸ್ ಪೆಟ್ರಾಸ್ (ಮೂಲ) ಪುಟ್ಟು ಪಿ. ಕುಲಕರ್ಣಿ (ಅನು) 1999, ಪು.1)

1. ಸಾಮ್ರಾಜ್ಯಶಾಹಿ ವ್ಯವಸ್ಥೆಯಿಂದ ನಿರ್ದೇಶಿಸಲ್ಪಟ್ಟ ವಸಾಹತು ದೇಶಗಳು ಅಥವಾ ಅವಲಂಬಿತ ದೇಶಗಳ ವಿನಿಮಯಗಳು.
2. ಪ್ರಬಲ ಶಕ್ತಿಗಳ ಮಧ್ಯದ (ಅಂತರ) ಸಾಮ್ರಾಜ್ಯಶಾಹಿ ವಿನಿಮಯ.
3. ಸಾಮ್ರಾಜ್ಯಶಾಹಿಗಳಲ್ಲಿ(ಇತರೇ) ದೇಶ ಹಾಗೂ ವರ್ಗದ ಮಧ್ಯದಲ್ಲಿ 'ಪರಸ್ಪರ ಆಶ್ರಿತ' ವಿನಿಮಯ.

ಈ ತರಹದ ಪ್ರಕ್ರಿಯೆಯಿಂದ ಬಂಡವಾಳಶಾಹಿ ಹಾಗೂ ಸಾಮ್ರಾಜ್ಯಶಾಹಿ ರಾಷ್ಟ್ರಗಳಿಗೆ ತುಂಬಾ ಅನುಕೂಲವಾಗುತ್ತದೆ. 'ಜಾಗತೀಕರಣ'ವೆಂಬುದನ್ನು ಕೆಲವೇ ಸ್ಥಾಪಿತ ಹಿತಾಸಕ್ತಿಗಳು ತಮಗೆ ಬೇಕಾದಂತೆ ನಿರ್ವಚಿಸಿಕೊಂಡವು. ಜಾಗತೀಕರಣವೆನ್ನುವುದು ಹೆಸರೇ ಸೂಚಿಸುವಂತೆ, ಇಡಿಯ ಜಗತ್ತನ್ನು ಒಂದೇ ಮಾರುಕಟ್ಟೆಯ ವಲಯಕ್ಕೆ ತರುವ ಪ್ರಕ್ರಿಯೆ. ವಿಶ್ವ ಮಾರುಕಟ್ಟೆಯ ವ್ಯವಸ್ಥಿತ ಮುಕ್ತ ಬಳಕೆ ಹಾಗೂ ಅದರಿಂದ ಬರುವ ಲಾಭವನ್ನು ಜಗತ್ತಿನಾದ್ಯಂತ ವಿತರಿಸುವುದು ಎಂಬ ಆಶಯದಲ್ಲಿ ಜಾಗತೀಕರಣವು ಉಗಮವಾದುದನ್ನು ಕಾಣುತ್ತೇವೆ. (ಜೇಮ್ಸ್ ಪೆಟ್ರಾಸ್ ಅದೇ, ಪು.4)

ಜಾಗತೀಕರಣವು ಆರ್ಥಿಕ ಮತ್ತು ರಾಚನಿಕ ಹೊಂದಾಣಿಕೆ. ಅದು ಅಸಮಾನವಾದ ಹಂಚಿಕೆಯೂ ಹೌದು. ಅರ್ಥವಿಚಾರದ ಕುರಿತು ಗಾಂಧಿ ಹೇಳಿರುವುದನ್ನು ಇಲ್ಲಿ ಉಲ್ಲೇಖಿಸಬೇಕು.

> ಪಶ್ಚಿಮ ದೇಶಗಳಲ್ಲಿ ಬಂಡವಾಳ ಹಾಗೂ ಶ್ರಮಶಕ್ತಿಗಳ ನಡುವೆ ನಿರಂತರ ಸಂಘರ್ಷ ಪ್ರಾರಂಭವಾಗಿದೆ. ಒಂದು ವರ್ಗ ಮತ್ತೊಂದನ್ನು ತನ್ನ ಸಹಜಶತ್ರುವೆಂದು ಭಾವಿಸುತ್ತದೆ. ಆ ಭಾವನೆ ಭಾರತವನ್ನೂ ಪ್ರವೇಶಿಸಿದಂತೆ ತೋರುತ್ತದೆ. ಇಲ್ಲಿ ಅದಕ್ಕೆ ಶಾಶ್ವತ ನೆಲೆ ಸಿಕ್ಕಿಬಿಡುವುದಾದರೆ ನಮ್ಮ ಉದ್ಯೋಗ, ನಮ್ಮ ಶಾಂತಿ –

ಇವಕ್ಕೆ ಚರಮಗೀತೆ ಹಾಡಿದಂತೆಯೇ. ಎರಡೂ ಪಕ್ಷಗಳೂ ಪರಸ್ಪರಾವಲಂಬಿಗಳೆಂದು ಮನಗಂಡುದಾದರೆ ಕಲಹಕ್ಕೆ ಕಾರಣವೇ ಇರದು.

ಬಂಡವಾಳಗಾರನ ಕರ್ತವ್ಯವನ್ನು ನಾನು ವಿಮರ್ಶಿಸ ಬಯಸುವುದಿಲ್ಲ. ಕಾರ್ಮಿಕ ಮಾತ್ರವೇ ತನ್ನ ಹಕ್ಕುಹೊಣೆಗಾರಿಕೆಗಳನ್ನು ಅರಿತು ಶುದ್ಧಸಾಧನಗಳಿಗೇ ಬದ್ಧನಾಗುವುದಾದರೆ ಎರಡೂ ಪಕ್ಷಕ್ಕೂ ಹಿತವೇ, ಲಾಭವೇ. ಆದರೆ ಅದಕ್ಕೆ ಎರಡು ಸಂಗತಿಗಳು ಅವಶ್ಯಕ: ಬೇಡಿಕೆಗಳೂ, ಅವನ್ನು ಪಡೆಯುವ ವಿಧಾನವೂ ನ್ಯಾಯುವಾಗಿರಬೇಕು, ಸ್ಪಷ್ಟವಾಗಿರಬೇಕು. ಬಂಡವಾಳಗಾರನ ಸ್ಥಿತಿಯ ದುರ್ಲಾಭವನ್ನು ಪಡೆಯುವ ಬೇಡಿಕೆ ಅಕ್ರಮ ಬೇಡಿಕೆ., ಆದರೆ ತನ್ನ ನಿರ್ವಾಹಕ್ಕೆ ಸಾಕಾಗುವಷ್ಟು ಮತ್ತು ತನ್ನ ಮಕ್ಕಳು ಮರಿಯನ್ನು ಯೋಗ್ಯವಾದ ರೀತಿಯಲ್ಲಿ ಸುಶಿಕ್ಷಿತರನ್ನಾಗಿಸಲು ಸಾಕಷ್ಟು ವೇತನ ಕೇಳುವ ಕಾರ್ಮಿಕನದು ನಿಜಕ್ಕೂ ಕ್ರಮಬದ್ಧ ಬೇಡಿಕೆಯೇ. ಹಿಂಸೆಗೆ ತೊಡಗದೆ, ಬಂಡವಾಳಗಾರರ ಸದ್ಬುದ್ಧಿಗೆ ಬಿನ್ನವಿಸಿಕೊಂಡು ಪಂಚಾಯಿತಿಯ ಮೂಲಕ ನ್ಯಾಯಕ್ಕಾಗಿ ವ್ಯವಹರಿಸುವುದು ಕ್ರಮಬದ್ಧ ಮಾರ್ಗ.

ಸಂಪು(ಮುಷ್ಕರ)– ಕೆಲಸಗಾರರು ನ್ಯಾಯ ಪಡೆಯುವ ಸ್ವಭಾವಸಿದ್ಧ ಹಕ್ಕೆಂಬುದನ್ನು ಬಲ್ಲೆ. ಬಂಡವಾಳಗಾರರು ಪಂಚಾಯಿತಿಯ ತತ್ತ್ವವನ್ನು ಒಪ್ಪಿಕೊಂಡ ಕೂಡಲೇ ಸಂಪನ್ನು ದುಷ್ಕೃತ್ಯವೆಂದು ಭಾವಿಸಬೇಕು. ವೇತನಗಳು ಹೆಚ್ಚುತ್ತಿವೆ, ಅವುಗಳ ನಿರಂತರ ಹೆಚ್ಚಳದ ಸಂಭವವೂ ಇದೆ. ಅದರ ಜತೆಗೇ ದುಡಿಮೆಯ ಕಾಲವನ್ನು ಕಡಿಮೆ ಮಾಡುವ ಅಗತ್ಯವೂ ಇದೆ. ಗಿರಣಿಯ ಕೆಲಸಗಾರರು ಹನ್ನೆರಡು ಗಂಟೆಗಳಿಗಿಂತ ಹೆಚ್ಚು ದುಡಿಯುವಂತೆ ತೋರುತ್ತದೆ. ದಿನಕ್ಕೆ ಅಷ್ಟೊಂದು ಹೊತ್ತು ದುಡಿಯುವವರ ಮಾನಸಿಕ, ನೈತಿಕ ಉನ್ನತಿಗೆ ಸಮಯವೇ ಸಿಗದು. ಆದುದರಿಂದ ಈ ಪರತ್ತನ್ನು ಅತಿ ಕನಿಷ್ಠ ಮಿತಿಗೆ ಇಳಿಸಬೇಕು. ಅಪಾಯವನ್ನು ತಪ್ಪಿಸಿಕೊಳ್ಳುವುದೇನೋ ನಮ್ಮ ಧರ್ಮ, ಆದರೆ ನಾವು ಹಾಕುವ ಹೆಜ್ಜೆಹೆಜ್ಜೆಯಲ್ಲೂ ನಮ್ಮ ಉದ್ಯಮಗಳಿಗೆ ಹಾನಿಯೊದಗದಂತೆ ಕಾಯ್ದುಕೊಳ್ಳಬೇಕು.

(ಮೋ.ಕ ಗಾಂಧಿ 1959 ಅರ್ಥ ವಿಚಾರ ಪುಟ. 219–220)

ಜಾಗತೀಕರಣದ ಪ್ರಕ್ರಿಯೆಯು ಪ್ರಾರಂಭವಾಗಿದ್ದು 1960ರ ದಶಕದ ಕೊನೆಯ ಭಾಗ ಹಾಗೂ 1970ರ ಮೊದಲ ಭಾಗದಲ್ಲಿ. ಈ ಜಾಗತೀಕರಣ ಬಹಳ ಬೇಗನೆ ಪ್ರಚಲಿತವಾಯಿತು. ಈ ಶಬ್ದವನ್ನು ಜೀವನದ ಪ್ರಧಾನ ವಾಹಿನಿಯಾದ ಶೈಕ್ಷಣಿಕ ವಲಯವೂ ಸ್ವೀಕರಿಸಿದ್ದರಿಂದ, ಕ್ರಮೇಣ ಆ ಶಬ್ದ ಸರ್ವಗ್ರಾಹ್ಯವಾಗಿ ಪರಿವರ್ತನೆ

ಗೊಂಡಿತು. ಅಂತಾರಾಷ್ಟ್ರೀಯ ಮಾರುಕಟ್ಟೆಯ ಹಣಕಾಸು ವಿಸ್ತರಣೆಯ ಕುರಿತು ಮಾತಾಡುವಾಗಲೆಲ್ಲಾ ಪದವು ಬಳಕೆಗೊಳ್ಳತೊಡಗಿತು. ಈ ಪದದ ಮೂಲ ಹಾಗೂ ಶೋಷಣೆಯಲ್ಲಿ ಪರ್ಯವಸಾನಗೊಳ್ಳುವ ಇದರ ಫಲಿತಾಂಶಗಳು ಮತ್ತು ಅಧಿಕಾರವೇ ಅಧಿಕ ತಮ ಬಲವಾಗಿರುವ ಕ್ರಿಯೆಯ ಅಂಶಗಳನ್ನೆಲ್ಲ ಬೇಕೆಂದೇ ವ್ಯವಸ್ಥಿತವಾಗಿ ಅದುಮಿಡಲಾಯಿತು. (ಅದೇ. ಪು.5)

> ಉತ್ಪಾದನಾ ಉಪಕರಣಗಳನ್ನು, ತನ್ಮೂಲಕ ಉತ್ಪಾದನಾ ಸಂಬಂಧಗಳನ್ನು ಮತ್ತು ಅವುಗಳೊಂದಿಗೆ ಇಡೀ ಸಮಾಜದ ಸಂಬಂಧಗಳನ್ನು ಸತತವಾಗಿ ಕ್ರಾಂತಿಕಾರಿಗೊಳಿಸದೆ ಇರಲು ಬೂರ್ಷ್ವಾಸೀಗೆ ಸಾಧ್ಯವೇ ಇಲ್ಲ. ಇದಕ್ಕೆ ವಿರುದ್ಧವಾಗಿ ಹಳೆಯ ಉತ್ಪಾದನಾ ವಿಧಾನಗಳನ್ನು ಬದಲಾಗದ ರೀತಿಯಲ್ಲೇ ಕಾಪಾಡಿಕೊಂಡು ಹೋಗುವುದು ಆ ಮುನ್ನಿನ ಎಲ್ಲ ಕೈಗಾರಿಕಾ ವರ್ಗಗಳಿಗೂ ಅಸ್ತಿತ್ವದಲ್ಲಿರಲು ಅನುಸರಿಸಬೇಕಾಗಿದ್ದ ಮುಖ್ಯ ನೀತಿಯಾಗಿದ್ದಿತು. ನಿರಂತರವಾಗಿ ಉತ್ಪಾದನೆಯನ್ನು ಕ್ರಾಂತಿಕಾರಿಗೊಳಿಸುವುದು, ಎಲ್ಲ ಸಾಮಾಜಿಕ ಸಂಬಂಧಗಳನ್ನೂ ಎಡೆಬಿಡದೆ ಅಸ್ತವ್ಯಸ್ತಗೊಳಿಸುವುದು, ಶಾಶ್ವತವಾದ ಅನಿಶ್ಚಿತ್ತತೆ ಹಾಗೂ ಆಂದೋಲನ ಇವು ಎಲ್ಲ ಮುನ್ನಿನ ಕಾಲಘಟ್ಟಗಳಲ್ಲೂ ಕಾಣಬರದಿದ್ದ ಬೂರ್ಷ್ವಾ ಕಾಲಘಟ್ಟದ ಮುಖ್ಯ ಲಕ್ಷಣ. ಸ್ಥಿರವಾದ, ಪೂರ್ವನಿಶ್ಚಿತವಾದ ಎಲ್ಲ ಸಂಬಂಧಗಳೂ ಅವುಗಳ ಜೊತೆಗೇ ಬಂದ ಪುರಾತನ ಹಾಗೂ ಗೌರವಾರ್ಹ ಪೂರ್ವನಂಬಿಕೆಗಳೂ ಮತ್ತು ಅಭಿಪ್ರಾಯಗಳೂ ಈ ಕಾಲಘಟ್ಟದಲ್ಲಿ ಕೊಚ್ಚಿಹೋದವು. ಹೊಸದಾಗಿ ರೂಪಿತಗೊಂಡವುಗಳೂ ಸಹ ರೂಢಿಯಿಂದ ಜಡವಾಗುವುದಕ್ಕೆ ಮುನ್ನವೇ ಹಳೆಯುವಾಗುತ್ತಿವೆ. ಗಟ್ಟಿ ಎನಿಸಿಗೊಳ್ಳುತ್ತಿವೆ. ಮನುಷ್ಯನು ಕಟ್ಟಕಡೆಗೆ ಭ್ರಮೆಗಳನ್ನು ತೊಲಗಿಸಿಕೊಂಡು ತನ್ನ ಜೀವನದ ನಿಜ ಪರಿಸ್ಥಿತಿಗಳನ್ನೂ ಇತರರೊಂದಿಗೆ ತನ್ನ ಸಂಬಂಧಗಳನ್ನೂ ನೇರವಾಗಿ ಎದುರಿಸುವಂತಾಗಿದ್ದಾನೆ.
>
> ತನ್ನ ಉತ್ಪನ್ನಗಳ ಮಾರಾಟಕ್ಕಾಗಿ ಸತತವಾಗಿ ಮಾರುಕಟ್ಟೆಯನ್ನು ವಿಸ್ತರಿಸುವ ಅವಶ್ಯಕತೆಯಿಂದ ಪ್ರಚೋದಿತವಾಗಿ ಬೂರ್ ಷ್ವಾಸೀಯು ಭೂಮಂಡಲದ ಮೇಲೆಲ್ಲ ಹರಿದಾಡುತ್ತದೆ. ಅದು ಎಲ್ಲೆಡೆಗಳಲ್ಲೂ ಗೂಡು ಕಟ್ಟಿಕೊಳ್ಳಲೇಬೇಕು; ಪ್ರತಿಯೊಂದು ಸ್ಥಳದಲ್ಲೂ ತಳ ಊರಲೇಬೇಕು, ಎಲ್ಲೆಲ್ಲೂ ಸಂಬಂಧಗಳನ್ನು ಕಲ್ಪಿಸಿಕೊಳ್ಳಲೇಬೇಕು.

ಬೂರ್ಷ್ವಾಸೀಯು ಜಾಗತಿಕ ಮಾರುಕಟ್ಟೆಯನ್ನು ಸ್ವಪ್ರಯೋಜನಕ್ಕಾಗಿ ಬಳಸಿಕೊಳ್ಳುವ ಮೂಲಕ ಪ್ರತಿಯೊಂದು ದೇಶದಲ್ಲೂ ಉತ್ಪಾದನೆ ಹಾಗೂ ಬಳಕೆಗಳಿಗೆ ವಿಶ್ವವಿಶಾಲತೆಯ ಲಕ್ಷಣವನ್ನು ನೀಡಿದೆ. ಪ್ರತಿಗಾಮಿಗಳಿಗೆ ವ್ಯಥೆ ಉಂಟುಮಾಡುವಂತೆ ಅದು ಕೈಗಾರಿಕೆಯ ರಾಷ್ಟ್ರೀಯ ಅಡಿಪಾಯವನ್ನು ಕಿತ್ತುಹಾಕಿದೆ. ಬಹಳ ಹಿಂದಿನಿಂದ ಸ್ಥಾಪಿತವಾಗಿದ್ದ ಎಲ್ಲ ರಾಷ್ಟ್ರೀಯ ಕೈಗಾರಿಕೆಗಳೂ ನಾಶಗೊಂಡಿವೆ ಇಲ್ಲವೇ ಅನುದಿನವೂ ನಾಶಗೊಳ್ಳುತ್ತಿವೆ. ಅದನ್ನು ಹೊಸ ಕೈಗಾರಿಕೆಗಳು ತಳ್ಳಿಹಾಕುತ್ತಿವೆ. ಈ ಹೊಸ ಕೈಗಾರಿಕೆಗಳ ಸ್ಥಾಪನೆಯು ಎಲ್ಲ ನಾಗರಿಕ ರಾಷ್ಟ್ರಗಳಿಗೂ ಅಳಿವು ಉಳಿವಿನ ಪ್ರಶ್ನೆಯಾಗಿದೆ. ಈ ಹೊಸ ಕೈಗಾರಿಕೆಗಳು ಸ್ಥಳೀಯ ಕಚ್ಚಾ ಪದಾರ್ಥಗಳಿಂದಷ್ಟೆ ಎಷ್ಟು ಮಾತ್ರವೂ ಕೆಲಸ ಮಾಡುತ್ತಿಲ್ಲ. ಇವು ದೂರ ದೂರ ಪ್ರದೇಶಗಳಿಂದೆಲ್ಲ ಕಚ್ಚಾ ಪದಾರ್ಥಗಳನ್ನು ತರಿಸಿಕೊಳ್ಳುತ್ತಿವೆ. ಈ ಕೈಗಾರಿಕೆಗಳ ಉತ್ಪನ್ನಗಳನ್ನು ಸ್ವದೇಶದಲ್ಲಷ್ಟೇ ಅಲ್ಲ ಭೂಮಂಡಲದ ಪ್ರತಿಯೊಂದು ಭಾಗದಲ್ಲಿಯೂ ಬಳಸಲಾಗುತ್ತಿದೆ. ಆಯಾ ದೇಶದ ಉತ್ಪಾದನೆಯಿಂದಲೇ ಪೂರೈಕೆಗೊಳ್ಳುತ್ತಿದ್ದ ಹಳೆಯ ಆವಶ್ಯಕತೆಗಳ ಸ್ಥಳದಲ್ಲಿ ಹೊಸ ಅವಶ್ಯಕತೆಗಳು ತಲೆದೋರಿರುವುದನ್ನು ನಾವು ಕಾಣುತ್ತೇವೆ. ಈ ಅವಶ್ಯಕತೆಗಳ ಪೂರೈಕೆಗೆ ದೂರ ದೇಶಗಳ ಹಾಗೂ ವಲಯಗಳ ಉತ್ಪನ್ನಗಳು ಅಗತ್ಯವಾಗಿವೆ. ಹಳೆಯ ಸ್ಥಳೀಯ ಹಾಗೂ ರಾಷ್ಟ್ರೀಯ ಪ್ರತ್ಯೇಕತೆ ಹಾಗೂ ಸ್ವಯಂಪೂರ್ಣತೆಯ ಸ್ಥಳದಲ್ಲಿ ನಾವು ಎಲ್ಲ ದಿಶೆಯಲ್ಲೂ ಪರಸ್ಪರ ಸಂಬಂಧವನ್ನು ಮತ್ತು ರಾಷ್ಟ್ರಗಳ ಸಾರ್ವತ್ರಿಕ ಅಂತರ-ಅವಲಂಬನೆಯನ್ನು ಕಾಣುತ್ತೇವೆ. ವಸ್ತುಗಳ ಉತ್ಪಾದನೆಯಲ್ಲಿನಂತೆಯೇ ಬೌದ್ಧಿಕ ಉತ್ಪಾದನೆ ಯಲ್ಲಿಯೂ ಇದೇ ಪರಿಸ್ಥಿತಿಯನ್ನು ಕಾಣುತ್ತೇವೆ. ಬಿಡಿ ರಾಷ್ಟ್ರಗಳ ಬೌದ್ಧಿಕ ಸೃಷ್ಟಿಗಳು ಸರ್ವಸಾಮಾನ್ಯ ಸ್ವತ್ತಾಗಿ ಪರಿಣಮಿಸುತ್ತಿವೆ. ರಾಷ್ಟ್ರೀಯ ಏಕಪಕ್ಷೀಯತೆ ಹಾಗೂ ಸಂಕುಚಿತ ಮನೋಭಾವಗಳು ಹೆಚ್ಚು ಹೆಚ್ಚು ಅಸಾಧ್ಯವಾಗಿವೆ. ಅನೇಕಾನೇಕ ರಾಷ್ಟ್ರೀಯ ಹಾಗೂ ಸ್ಥಳೀಯ ಸಾಹಿತ್ಯಗಳಿಂದ ವಿಶ್ವಸಾಹಿತ್ಯವು ಉದಯವಾಗುತ್ತಿದೆ. ಬೂರ್ಷ್ವಾಸೀಯು ಎಲ್ಲ ಉತ್ಪಾದನಾ ಉಪಕರಣಗಳ ಶೀಘ್ರ ಸುಧಾರಣೆಯ ಮೂಲಕ, ಅತ್ಯಂತ ಹೆಚ್ಚಿನ ಸೌಲಭ್ಯದ ಸಂಪರ್ಕ ಸಾಧನಗಳ ಮೂಲಕ, ಎಲ್ಲ ರಾಷ್ಟ್ರಗಳನ್ನೂ, ಅತ್ಯಂತ ಅನಾಗರಿಕ ರಾಷ್ಟ್ರಗಳನ್ನೂ ಸಹ, ನಾಗರಿಕತೆಯತ್ತ ಸೆಳೆಯುತ್ತದೆ. ಅದು ಉತ್ಪಾದಿಸುವ ಸರಕುಗಳ ಅಗ್ಗದ ಬೆಲೆಗಳೇ ಅದರ ಭಾರಿ ಫಿರಂಗಿ ದಳ. ಇದರಿಂದ ಅದು ಅಡ್ಡ ನಿಲ್ಲುವ ಎಲ್ಲ ಚೀಣೀ ಗೋಡೆಗಳನ್ನೂ ಪುಡಿಗಟ್ಟುತ್ತದೆ, ವಿದೇಶೀಯರ ಬದ್ಧ ದ್ವೇಷಿಯಾದ ಅನಾಗರಿಕ

ರಾಷ್ಟ್ರಗಳನ್ನೂ ಶರಣಾಗತವಾಗುವಂತೆ ಮಾಡುತ್ತದೆ. ಅದು ಎಲ್ಲ ರಾಷ್ಟ್ರಗಳಿಗೂ ಸರ್ವನಾಶದ ಬೆದರಿಕೆ ಹಾಕಿ ಬೂರ್ಷ್ವಾ ಉತ್ಪಾದನಾ ವಿಧಾನವನ್ನು ಅನುಸರಿಸುವಂತೆ ಒತ್ತಾಯಿಸುತ್ತದೆ; ತಾನು ಏನನ್ನು ನಾಗರಿಕತೆ ಎಂದು ಕರೆಯುತ್ತದೆಯೋ ಅದನ್ನು ಅವುಗಳ ಮಧ್ಯೆಯೂ ಜಾರಿಗೆ ತರುವಂತೆ, ಅಂದರೆ ಅವುಗಳೂ ಬೂರ್ಷ್ವಾಸೀಯಾಗುವಂತೆ ಅವುಗಳನ್ನು ಬಲಾತ್ಕರಿಸುತ್ತದೆ. ಒಂದು ಮಾತಿನಲ್ಲಿ ಅದು ಇಡೀ ಜಗತ್ತನ್ನು ತನ್ನ ಸ್ವರೂಪವನ್ನೇ ಹೋಲುವಂತೆ ಸೃಷ್ಟಿಸುತ್ತದೆ.

ಬೂರ್ಷ್ವಾಸೀಯು ಗ್ರಾಮಗಳನ್ನು ಪಟ್ಟಣಗಳ ಆಳ್ವಿಕೆಗೆ ಒಳಪಡಿಸಿದೆ. ಬಹು ದೊಡ್ಡ ನಗರಗಳನ್ನು ನಿರ್ಮಿಸಿದೆ, ಗ್ರಾಮಾಂತರಕ್ಕೆ ಹೋಲಿಸಿದಂತೆ ನಗರಗಳ ಜನಸಂಖ್ಯೆಯನ್ನು ಬಹಳಮಟ್ಟಿಗೆ ಹೆಚ್ಚಿಸಿದೆ. ಹಾಗೆ ಅದು ಜನಸಂಖ್ಯೆಯ ಗಣನೀಯ ಭಾಗವನ್ನು ಗ್ರಾಮಾಂತರ ಜೀವನದ ಮೌಢ್ಯತೆಯಿಂದ ಪಾರುಮಾಡಿದೆ. ಗ್ರಾಮವು ಪಟ್ಟಣಗಳ ಮೇಲೆ ಅವಲಂಬಿಸಿರುವಂತೆ ಮಾಡಿರುವ ರೀತಿಯಲ್ಲೇ ಅದು ಅನಾಗರಿಕ ಹಾಗೂ ಅರೆ–ಅನಾಗರಿಕ ದೇಶಗಳು ನಾಗರಿಕ ದೇಶಗಳ ಮೇಲೆ, ರೈತ ಜನತೆಗಳು ಬೂರ್ಷ್ವಾ ಜನತೆಗಳ ಮೇಲೆ, ಪೌರ್ವಾತ್ಯ ದೇಶಗಳು ಪಾಶ್ಚಿಮಾತ್ಯ ದೇಶಗಳ ಮೇಲೆ ಅವಲಂಬಿಸಿರುವಂತೆ ಮಾಡಿದೆ.

ಜನರೂ, ಉತ್ಪಾದನಾ ಸಾಧನಗಳೂ, ಆಸ್ತಿಪಾಸ್ತಿಗಳೂ ವಿವಿಧ ಭಾಗಗಳಲ್ಲಿ ಹಂಚಿಹೋಗಿರುವ ಪರಿಸ್ಥಿತಿಯನ್ನು ಬೂರ್ಷ್ವಾಸೀಯು ಹೆಚ್ಚು ಹೆಚ್ಚಾಗಿ ನಾಶ ಮಾಡುತ್ತ ಹೋಗುತ್ತದೆ. ಅದು ಜನರನ್ನೆಲ್ಲ ನಿಬಿಡವಾಗಿ ಸೇರಿಸಿದೆ, ಉತ್ಪಾದನಾ ಸಾಧನಗಳನ್ನು ಕೇಂದ್ರೀಕರಿಸಿದೆ ಮತ್ತು ಆಸ್ತಿಯನ್ನು ಕೆಲವೇ ವ್ಯಕ್ತಿಗಳ ಕೈಯಲ್ಲಿ ಏಕತ್ರಗೊಳಿಸಿದೆ. ಇದರ ಅನಿವಾರ್ಯ ಪರಿಣಾಮವೆಂದರೆ ರಾಜಕೀಯ ಕೇಂದ್ರೀಕರಣ. ಪ್ರತ್ಯೇಕ ಹಿತಾಸಕ್ತಿಗಳು, ಕಾನೂನುಗಳು, ಸರಕಾರಗಳು ಮತ್ತು ತೆರಿಗೆ ಪದ್ಧತಿಗಳು ಇವುಗಳಿದ್ದ ಸ್ವತಂತ್ರವಾದ ಇಲ್ಲವೇ ಬಹುಮಟ್ಟಿಗೆ ಒಕ್ಕೂಟ ಸಂಬಂಧಗಳಿಂದಷ್ಟೆ ಒಂದುಗೂಡಿದ್ದ ಪ್ರಾಂತಗಳೆಲ್ಲ ಒಂದೇ ರಾಷ್ಟ್ರವಾಗಿ ಒಂದು ಕಡೆ ಕೂಡಿವೆ. ಅದರಲ್ಲಿ ಒಂದೇ ಸರಕಾರ, ಒಂದೇ ಶಾಸನ ಸಂಹಿತೆ, ಒಂದೇ ರಾಷ್ಟ್ರೀಯ ವರ್ಗಹಿತ, ಒಂದೇ ಗಡಿ ಹಾಗೂ ಒಂದೇ ಸುಂಕ ಪದ್ಧತಿ ಜಾರಿಗೆ ಬಂದಿವೆ.

(ಮಾರ್ಕ್ಸ್ ಏಂಗೆಲ್ಸ್ – ಆಯ್ದ ಕೃತಿಗಳು 1990 ಸಂಪುಟ 1 ಪುಟ. 56–58)

ಅನಂತರ ಶೈಕ್ಷಣಿಕ ವಲಯದ ಬೂರ್ಜ್ವಾ ಬುದ್ಧಿಜೀವಿಗಳು ಇದಕ್ಕೆ ಹೆಚ್ಚಿನ ಪ್ರಚಾರವನ್ನು ಕೊಟ್ಟರು. ಮಾರ್ಕ್ಸ್‌ವಾದದ ವಿಚಾರಧಾರೆಗೆ ಸಮರ್ಪಕವಾದ ಪರ್ಯಾಯವನ್ನು ಜಾಗತೀಕರಣವು ಕೊಡಬಲ್ಲದು ಎಂದು ಹೇಳಲಾಯಿತು. ತಂತ್ರಜ್ಞಾನದ ಬದಲಾವಣೆ, ಅಭಿವೃದ್ಧಿಯ ಮೇಲೆ ಕಣ್ಣಿಟ್ಟ ಮೂರನೆಯ ಜಗತ್ತಿನ ಮುಕ್ತ ಪ್ರತಿಕ್ರಿಯೆಯು ಜಾಗತೀಕರಣದ ವೇಗಕ್ಕೆ ಕಾರಣವಾದವು. ಹಾಗೆಯೇ ಜಾಗತೀಕರಣವು ಮಾರುಕಟ್ಟೆಯ ಸಮುದಾಯವೆಂದು ಪ್ರಚಾರಪಡಿಸಿಕೊಳ್ಳುತ್ತಲೇ ನಿಜವಾದ ಸಮಾಜವಾದಿ ಚಿಂತನೆಯನ್ನು ಹುಡುಕಿತು. ಈ ರೀತಿಯ ಪ್ರಕ್ರಿಯೆಯಲ್ಲಿ ಭಾರತವು ಹೊರತಾಗಿರಲಿಲ್ಲ. ಭಾರತದಲ್ಲಿಯೂ ಈ ಜಾಗತೀಕರಣಕ್ಕೆ ಮುಕ್ತವಾಗಿ ಬಾಗಿಲು ತೆರೆದು ಸ್ವಾಗತಿಸಲಾಯಿತು. ಭಾರತದಲ್ಲಿ ಈ ಜಾಗತೀಕರಣಕ್ಕೆ ಮುಕ್ತ ಅವಕಾಶವನ್ನು ನೀಡುವ ಮೊದಲೇ ನಮ್ಮಲ್ಲಿ ಕೆಲವು ರೀತಿಯ ಚರ್ಚೆಗಳು ಪ್ರಾರಂಭವಾದುದ್ದನ್ನು ಗಮನಿಸಬೇಕು, ಪೋರ್ಡ್ ಫೌಂಡೇಶನ್ ಕುರಿತು ಕರ್ನಾಟಕದಲ್ಲಿಯೇ ಅನೇಕ ಬುದ್ಧಿಜೀವಿಗಳು ವಿರೋಧಿಸಿದ್ದರು. ಹಾಗೂ ಪೋರ್ಡ್ ಫೌಂಡೇಶನ್ ಸಹಾಯವನ್ನು ಭಾರತದ ಸರ್ಕಾರೇತರ ಸಂಸ್ಥೆಗಳು ತೆಗೆದು ಕೊಂಡಿರುವುದೂ ಅಷ್ಟೇ ಸತ್ಯ. ಭಾರತದಲ್ಲಿಯೂ 'ಮುಕ್ತ ಮಾರುಕಟ್ಟೆ', ರಾಚನಿಕ ಹೊಂದಾಣಿಕೆ, ಮುಂತಾದುವುಗಳನ್ನು ಆಕರ್ಷಕವಾಗಿ ಬಳಸಿಕೊಳ್ಳಲಾಯಿತು. ಇಲ್ಲಿಯೂ ಭಾರತವು ಅಭಿವೃದ್ಧಿಯ ಕಡೆಗೆ ಹೋಗಬೇಕಾದರೆ ಈ ಮಾದರಿಯ ಮುಕ್ತ ಮಾರುಕಟ್ಟೆ ಅತ್ಯಗತ್ಯವೆಂದು ಅತಿಯಾಗಿ ವರ್ಣಿಸಲಾಯಿತು. ವಸಾಹತ್ತೋತ್ತರ ಸಾಮಾಜಿಕ ಸಂದರ್ಭದಲ್ಲಿ ಬಂದ ಈ ಜಾಗತೀಕರಣ ಪ್ರಕ್ರಿಯೆಯು ತನ್ನ ಗರ್ಭದಲ್ಲಿ ಮಾರುಕಟ್ಟೆ ಸಮಾಜವಾದದ ಹೆಸರನ್ನು ಇಟ್ಟುಕೊಂಡು ನಿಜವಾದ ಸಮಾಜವಾದದ ನೀತಿಗೆ ದ್ರೋಹವನ್ನು ಬಗೆದಿದೆ. ಈ ಮಾದರಿಯೊಂದಿಗೆ 'ಜಾಗತಿಕ ಜ್ಞಾನಪರಂಪರೆ'ಯೆಂಬ ವಿಚಾರಧಾರೆಯನ್ನು ಹರಿಯಬಿಟ್ಟಿದೆ. ಬೂರ್ಜ್ವಾ ಕುರಿತು ಮಾರ್ಕ್ಸ್ ಹೇಳಿದ ಚಿಂತನೆ ಇಲ್ಲಿ ಉಲ್ಲೇಖನೀಯ.

> "ಬೂರ್ ಪ್ವಾಸೀ ಎಂದರೆ ಆಧುನಿಕ ಬಂಡವಾಳಗಾರರ ವರ್ಗ ಎಂದರ್ಥ. ಇವರು ಸಾಮಾಜಿಕ ಉತ್ಪಾದನಾ ಸಾಧನಗಳ ಒಡೆಯರು. ವೇತನ ಪಡೆಯುವ ಕೂಲಿಯಾಳುಗಳನ್ನು ಕೆಲಸಕ್ಕಿಟ್ಟುಕೊಳ್ಳುವವರು. ಶ್ರಮಜೀವಿ ವರ್ಗ ಎಂದರೆ ವೇತನ ಪಡೆಯುವ ಆಧುನಿಕ ಕೂಲಿಯಾಳುಗಳು ಎಂದರ್ಥ. ಇವರು ತಮ್ಮವೇ ಉತ್ಪಾದನಾ ಸಾಧನಗಳಲ್ಲದೆಯೇ ಜೀವನೋಪಾಯಕ್ಕಾಗಿ ಸ್ವಂತ ಶ್ರಮಶಕ್ತಿಯನ್ನೇ ಮಾರಿಕೊಳ್ಳುವ ಸ್ಥಿತಿಗೆ ಇಳಿಸಲ್ಪಟ್ಟಿರುತ್ತಾರೆ.

(ಮಾರ್ಕ್ಸ್ ಏಂಗೆಲ್ಸ್ – ಆಯ್ದ ಕೃತಿಗಳು 1990 ಸಂಪುಟ 1 ಪುಟ. 51)

ಇಲ್ಲಿಯೇ ಗಾಂಧಿಯವರ ಮಾತನ್ನು ಗಮನಿಸುವುದು ಸೂಕ್ತ.

ಕಾರ್ಮಿಕರು ಸಾಕಷ್ಟು ಒಗ್ಗಟ್ಟಿನಿಂದ ಕೂಡಿ ಸ್ವಾರ್ಥತ್ಯಾಗಿಗಳಾದರೆ ತಮ್ಮ ರಕ್ಷಣೆಯನ್ನು ತಾವು ಯಾವಾಗಲೂ ಮಾಡಿಕೊಳ್ಳಬಲ್ಲರೆಂಬುದು ನನ್ನ ನಮ್ರ ಅಭಿಪ್ರಾಯ. ಬಂಡವಾಳಗಾರರು ಎಷ್ಟೇ ದಬ್ಬಾಳಿಕೆಗಾರರಾಗಿರಲೋಲ್ಲರೇಕೆ, ಕಾರ್ಮಿಕ ವರ್ಗ ಹವಣಿಸಿಕೊಳ್ಳಬಲ್ಲ, ಬಂಡವಾಳಗಾರರಿಗೆ ಎಂದೂ ಸಿಗದ ಶಕ್ತಿಮೂಲಗಳ ಅರಿವು ಕಾರ್ಮಿಕ ಚಳುವಳಿಯ ಸಂಪರ್ಕ ಹೊಂದಿ ದಿಗ್ದರ್ಶನ ಮಾಡುವವರಿಗೇ ಸರಿಯಾಗಿ ಆಗಿಲ್ಲ, ಇದು ನನ್ನ ನಿಶ್ಚಿತ ಮತ. ಕಾರ್ಮಿಕವರ್ಗವಿಲ್ಲದೆ ಬಂಡವಾಳವರ್ಗ ಪೂರಾ ನಿಸ್ಸಹಾಯಕವೆಂದು ತಿಳಿದು ಕಾರ್‍ಮಿಕರು ಅರ್ಥಮಾಡಿಕೊಂಡುದೇ ಆದರೆ ಕಾರ್‍ಮಿಕವರ್ಗ ತನ್ನ ಯಥೋಸ್ಥಾನವನ್ನು ಕೂಡಲೇ ಪಡೆದೀತು.

ದುರದೃಷ್ಟವಶಾತ್ ನಾವು ಬಂಡವಾಳದ ಸಂಮೋಹಕ ಸಲಹೆಗೆ, ಸಂಮೋಹಕ ಪ್ರಭಾವಕ್ಕೆ ಒಳಗಾಗಿಬಿಟ್ಟಿದ್ದೇವೆ. ಅಂತಲೇ ಬಂಡವಾಳವೇ ಈ ಲೋಕದಲ್ಲಿ ಸರ್ವಸ್ವ ಎಂದು ತಿಳಿದಿದ್ದೇವೆ. ಹಾಗೂ, ಶ್ರಮಶಕ್ತಿಯೇ ನಿಜವಾದ ಬಂಡವಾಳ, ಈ ಜೀವಂತ ಬಂಡವಾಳ ಅಕ್ಷಯವಾದುದು. ಈ ನಿಯಮದ ಪ್ರಕಾರವೇ ನಾವು ಅಹಮದಾಬಾದಿನ ಕಾರ್ಮಿಕ ಸಂಘದ ಕೆಲಸ ನಡೆಸುತ್ತಿರುವುದು. ಸರ್ಕಾರದ ವಿರುದ್ಧ ನಾವು ನಡೆಸುತ್ತಿರುವ ಹೋರಾಟವೂ ಆ ನಿಯಮದ ಆಧಾರದ ಮೇಲೆಯೇ. ಆ ನಿಯಮವೇ, ಅದು ಮನವರಿಕೆ ಆದುದರಿಂದಲೇ ಚಂಪಾರಣ್ಯದ ಹದಿನೇಳು ಲಕ್ಷ ಜನ ಆರು ತಿಂಗಳ ಅವಧಿಯೊಳಗಾಗಿ ಶತಮಾನದಿಂದ ನಡೆದು ಬಂದ ದಬ್ಬಾಳಿಕೆಯಿಂದ ಬಿಡುಗಡೆ ಹೊಂದಿದರು. ಆ ದಬ್ಬಾಳಿಕೆ ಎಂಥದೆಂಬುದನ್ನು ಹೇಳಲು ನಾ ತಡಮಾಡಬಾರದು, ಆದರೆ ಆ ಸಮಸ್ಯೆಯಲ್ಲಿ ಆಸಕ್ತಿ ಉಳ್ಳವರು ನಾನು ನಿಮ್ಮ ಮುಂದೆ ಇಟ್ಟಿರುವ ಎಲ್ಲ ಸತ್ಯಸಂಗತಿಗಳನ್ನೂ ಅಭ್ಯಸಿಸಿಕೊಳ್ಳಬಹುದು. ನಾವು ಏನು ಮಾಡಿದ್ದೇವೆಂದು ಈಗ ಹೇಳುವೆ. ಇಂಗ್ಲೀಷ್ ಭಾಷೆಯಲ್ಲಿ ಒಂದು ಪ್ರಬಲವಾದ ಪದವಿದೆ, ಫ್ರೆಂಚ್ ಭಾಷೆಯಲ್ಲೂ ಇದೆ, ಜಗತ್ತಿನ ಎಲ್ಲ ಭಾಷೆಗಳಲ್ಲಿಯೂ ಇದೆ – ಅದು "ಇಲ್ಲ" ಎಂಬುದು. ಬಂಡವಾಳ ವರ್ಗ "ಹೌದು" ಎನ್ನಬೇಕೆನಿಸಿದಾಗ "ಹೌದು" ಎನ್ನಬಹುದು. "ಇಲ್ಲ" ಎನ್ನಬೇಕೆನಿಸಿದಾಗ "ಇಲ್ಲ" ಎನ್ನಬಹುದು

ಎಂಬ ಸ್ವಾತಂತ್ರ್ಯ ತನಗಿದೆಯೆಂಬ ತಿಳಿವಳಿಕೆ ಉಂಟಾಗುತ್ತದೆ. ಬಂಡವಾಳವರ್ಗದಿಂದ ಕಾರ್ಮಿಕವರ್ಗ ಸ್ವತಂತ್ರ, ಬಂಡವಾಳವರ್ಗವೋ ಶ್ರಮಿಕವರ್ಗವನ್ನು ಒಲಿಸಿಕೊಳ್ಳಲೇಬೇಕು. ಬಂಡವಾಳವರ್ಗದ ಕೈಲಿ ಕೋವಿಯಿರಬಹುದು, ವಿಷವಾಯುವೂ ಇರಬಹುದು. ತನ್ನ ನಕಾರವನ್ನು ಸರಿಯಾಗಿ ಬಳಸಿಕೊಂಡು ತನ್ನ ಗೌರವವನ್ನು ಪಟ್ಟಾಗಿ ಹಿಡಿದು ಕಾರ್ಮಿಕವರ್ಗ ನಿಂತುದಾದರೆ ಬಂಡವಾಳವರ್ಗ ಆಗಲೂ ಪೂರಾ ಅಸಹಾಯಕವೇ ಆಗಿದ್ದೀತು. ಕಾರ್ಮಿಕ ವರ್ಗ ಪ್ರತೀಕಾರ ಮಾಡಬೇಕಿಲ್ಲ, ಗಂಡು ವಿಷವಾಯುಗಳನ್ನು ಎದುರಿಸಿಯೂ ಅಳುಕದೆ ನಕಾರ ಹೇಳಿದುದಾದರೆ ಸಾಕು. ಬಹಳ ವೇಳೆ ಕಾರ್ಮಿಕವರ್ಗ ಸೋತುಹೋಗುವುದೇಕೆಂದರೆ ನಾನು ಈಗ ಹೇಳಿದಂತೆ ಬಂಡವಾಳವರ್ಗವನ್ನು ನಿರ್ವೀಯುಗೊಳಿಸುವ ಬದಲು ಬಂಡವಾಳವನ್ನು ವಶಪಡಿಸಿಕೊಂಡು, ಅತಿ ತುಚ್ಛ ಅರ್ಥದಲ್ಲಿ ತಾನೂ ಬಂಡವಾಳಗಾರನಾಗಬಯಸುತ್ತದೆ. ನಾನೂ ಕಾರ್ಮಿಕನಾಗಿಯೇ ಈ ಮಾತನ್ನು ಹೇಳುತ್ತಿದ್ದೇನೆ. ಆದಕಾರಣ ಪಟ್ಟಭದ್ರರಾಗಿ, ಗಟ್ಟಿಯಾಗಿ ಸಂಘಟಿತರಾಗಿರುವ ಬಂಡವಾಳ ಗಾರರೂ ಕಾರ್ಮಿಕರಲ್ಲಿ ಬಂಡವಾಳಗಾರರಾಗಲು ಅಭ್ಯರ್ಥಿಗಳಿದ್ದಾರೆಂದು ತಿಳಿದು, ಅವರಲ್ಲಿ ಕೆಲವರನ್ನು ಉಪಯೋಗಿಸಿಕೊಂಡು ಕಾರ್ಮಿಕವರ್ಗವನ್ನು ತುಳಿಯುತ್ತಾರೆ. ಈ ಸಂಮೋಹನ ಮಂತ್ರಕ್ಕೆ ನಾವು ನಿಜವಾಗಿಯೂ ಅಧೀನವಾಗಿರದಿದ್ದರೆ ನಮ್ಮಲ್ಲಿ ಪ್ರತಿಯೊಬ್ಬರೂ, ಹೆಂಗಸರೂ ಗಂಡಸರೂ, ಲವಲೇಶವೂ ಕಷ್ಟವಿಲ್ಲದೆ ಈ ಮೂಲಭೂತ ಸತ್ಯವನ್ನು ಕಂಡುಕೊಳ್ಳುತ್ತಿದ್ದೆವು. ಜೀವನದ ವಿವಿಧ ಅಂಗಗಳಲ್ಲಿ ಇದನ್ನು ಅನೇಕ ಬಾರಿ ಪ್ರಯೋಗಮಾಡಿ ನನಗೆ ನಾನೇ ಅದನ್ನು ಸಿದ್ಧಮಾಡಿಕೊಂಡಿದ್ದೇನೆ. ಅಂತಲೇ ಅಧಿಕಾರವಾಣಿಯಿಂದ ಹೇಳುತ್ತಿದ್ದೇನೆ. ಆದುದರಿಂದ ಈ ಯೋಜನೆಯನ್ನು ನಿಮ್ಮೆದುರು ಇಡುವಾಗ ಮಾನವರ ಅಳುವಿಗೆ ಮೀರಿದ್ದುದೆಂದಲ್ಲ, ಸ್ತ್ರೀಯಾಗಲಿ ಪುರುಷನಾಗಲಿ ಪ್ರತಿಯೊಬ್ಬ ಕಾರ್ಮಿಕನೂ ಅನುಸರಿಸಬಹುದಾದುದು ಇದು. ಈ ಅಹಿಂಸಾತ್ಮಕ ಯೋಜನೆಯ ಪ್ರಕಾರ ಕಾರ್ಮಿಕರು ಮಾಡಬೇಕಾದುದು ಗೋಲಿಬಾರಿನ ಸಂದರ್ಭದಲ್ಲಿ ಸ್ವಿಸ್ ಸೈನಿಕ ಅಥವಾ ನಖಶಿಖಾಂತ ಶಸ್ತ್ರಸನ್ನದ್ಧವಾದ ಸಾಮಾನ್ಯ ಸೈನಿಕನಿಗಿಂತ ಹೆಚ್ಚೇನೂ ಮಾಡಬೇಕಾಗಿಲ್ಲ. ಆ ಸೈನಿಕ ತನ್ನ ಶತ್ರುವನ್ನು ಕೊಂದು ನಾಶಪಡಿಸಲು ನಿಸ್ಸಂಶಯವಾಗಿ ಪ್ರಯತ್ನಿಸಿದರೂ ತನ್ನ ಜೀವವನ್ನೂ

> ತನ್ನ ಕೈಯಲ್ಲೇ ಇಟ್ಟುಕೊಂಡಿರುತ್ತಾನೆ. ಸೈನಿಕನಲ್ಲಿರುವ ಪಶುವೃತ್ತಿಯನ್ನು ಕಾರ್ಮಿಕರು ಅನುಸರಿಸಬಯಸದೆ ಅವನ ಧೈರ್ಯವನ್ನು ಮಾತ್ರ ಅನುಕರಿಸಿ ಎನ್ನುತ್ತೇನೆ ನಾನು. ಇನ್ನೊಬ್ಬನನ್ನು ಸಾಯಿಸುವ ಸಾಮರ್ಥ್ಯವನ್ನಲ್ಲ, ಶಸ್ತ್ರ ಹಿಡಿಯದೆ, ಆತ್ಮರಕ್ಷಣೆಗೆ ಯಾವ ಆಯುಧವನ್ನೂ ಇಟ್ಟುಕೊಳ್ಳದೆ ಸಾವನ್ನು ಅಪ್ಪಿಕೊಳ್ಳುವವ ನಖಶಿಖಾಂತ ಶಸ್ತ್ರಸಜ್ಜಿತನಾದವನಿಗಿಂತ ಬಹು ಉನ್ನತಮಟ್ಟದ ಧೈರ್ಯ ಸಾಹಸಗಳನ್ನು ತೋರಿಸುತ್ತಾನೆ.
>
> (ಅರ್ಥ ವಿಚಾರ ಪುಟ. 227–229)

ಇದರ ಪರಿಣಾಮವೆಂದರೆ 'ದೇಶೀಯ ಜ್ಞಾನಪರಂಪರೆ'ಯೊಂದರ ನಾಶ. ಒಂದು ಸಮಾಜದ ಮೇಲೆ ಈ ಮಾದರಿಯ ಜ್ಞಾನಪರಂಪರೆಯನ್ನು ಹೇರುವುದರ ಮೂಲಕ ಸಮಾಜದ ಜೀವನಾಡಿಯನ್ನೇ ಸುಲಭವಾಗಿ ಕತ್ತರಿಸಿಬಿಡಬಹುದು ಮತ್ತು ಆ ಮೂಲಕ 'ರಾಜಕೀಯ'ವನ್ನೇ ನಂಬದಿರುವ ಅರಾಜಕತಾವಾದಿಗತಳನ್ನು ಸುಲಭವಾಗಿ ಹುಟ್ಟುಹಾಕಿ ಬಿಡಬಹುದು. ಒಂದು ದೇಶಕ್ಕಿರುವ ಅಧಿಕಾರದ ಕೇಂದ್ರಗಳನ್ನು ಒಡೆದು ಛಿದ್ರಗೊಳಿಸಿಬಿಡಬಹುದು. ಉದಾರೀಕರಣದಿಂದ ಆಗಬಹುದಾದ ಪ್ರಮುಖ ಪರಿಣಾಮಗಳಲ್ಲಿ ಇದೂ ಒಂದು. ಇದರರ್ಥ ಉದಾರೀಕರಣದ ಎದುರುಗಡೆಗೆ ಪರ್ಯಾಯವಾಗಿ ದೇಶೀಯತೆ ಎಂಬುದನ್ನು ಎತ್ತಿಹಿಡಿಯಬೇಕೆಂಬುದಲ್ಲ. ದೇಶೀಯ ಜ್ಞಾನದ ಪುನಾರೂಪೀಕರಣದ ಉತ್ಸಾಹದಲ್ಲಿ (ಅನೇಕ ಸಂದರ್ಭದಲ್ಲಿ ಆಗಿರುವಂತೆ) ದೇಶೀಜ್ಞಾನವು ಬಹಳ ದೊಡ್ಡದೆಂದು: ಅದನ್ನು ಭಾರತದ ಅಂತಃಶಕ್ತಿಯೆಂದು ಕರೆಯುವ ಅಪಾಯಗಳಿವೆ. ದೇಶೀಯತೆಯು ಒಂದು ನಿರ್ದಿಷ್ಟ ಪ್ರಮಾಣದ ಬಹುದೊಡ್ಡ ಆದರ್ಶವೆಂದು ನಾವು ತಿಳಿಯಬೇಕಿಲ್ಲ. ಬೇರೊಂದು ಮಾತಿನಲ್ಲಿ ಹೇಳುವುದಿದ್ದರೆ 'ದೇಶೀಯ' ಅನ್ನುವುದು ಬಹಳ ಸುಲಭವಾಗಿ ಪರಿಗಣನೆಗೆ ಬೇಕಾದ ವಸ್ತುವಲ್ಲ, ಜ್ಞಾನದ ಪ್ರಕ್ರಿಯೆಯೂ ಅಲ್ಲ. ಇದರ ಬಗೆಗಿನ ಒಂದು ಅತಿಯಾದ ನಿಲುವನ್ನು 'ವಿಸ್ಮೃತಿ'ವಾದಿಗಳೂ ಪ್ರಕಟಿಸಿದ್ದಾರೆ.

ವಸಾಹತು ಕಾಲದ ಶಿಕ್ಷಣದಿಂದ, ಆ ಕಾಲಘಟ್ಟದ ತಿಳಿವಳಿಕೆಯಿಂದ, ಭಾರತೀಯ ಜ್ಞಾನಪರಂಪರೆಯ ಬಗೆಗಿನ ಅರಿವು ವಿಸ್ಮೃತಿಗೆ ಒಳಗಾಯಿತು ಎಂದು ಹೇಳುವಲ್ಲಿಯ ನಿಜವಾದ ತಾತ್ವಿಕತೆಯನ್ನು ಅರ್ಥಮಾಡಿಕೊಳ್ಳಬೇಕು. ಇದ್ದಕ್ಕಿದ್ದ ಹಾಗೆಯೇ ಒಂದು ದೇಶದ ತಿಳಿವಳಿಕೆಯು ಅದರ ವಿಸ್ಮೃತಿಗೆ ಒಳಗಾಗುವುದು ಸಾಧ್ಯವೇ? ವಿಸ್ಮೃತಿಯೆಂದರೆ ಅದು ಯಾವ ಬಗೆಯದು? ಯಾರಿಗೆ ಈ ಮಾದರಿಯ ವಿಸ್ಮೃತಿಯು ಬಂದು ಆವರಿಸುತ್ತದೆ? ವಿಸ್ಮೃತಿಯೆಂಬ ವೈಚಾರಿಕ ಚೌಕಟ್ಟು ಒಂದೇ ಮಾದರಿಯಲ್ಲಿ

ವಸಾಹತುಪೂರ್ವದ ಸಂದರ್ಭವೆಂದರೆ ಅದು ಸರಳವಾದ ಸಾಮಾಜಿಕ ಸಂಬಂಧಗಳನ್ನು ಒಳಗೊಂಡ ಸಮಾಜವಾಗಿರಲಿಲ್ಲ. ಈ ದೃಷ್ಟಿಯಿಂದಲೇ ದೇಶೀಯ ಜ್ಞಾನ ಪರಂಪರೆಯು ಉದಾರೀಕರಣದಿಂದ ನಾಶವಾಗಬಹುದು ಎಂಬ ಪ್ರಮೇಯವನ್ನು ಮಂಡಿಸುವಾಗಲೂ ಅದಕ್ಕೆ ಒಂದು ಬಗೆಯ 'ಬಹುತ್ವ' ದರ್ಶನ ಬೇಕೇ ಬೇಕು. ಹಾಗೆಯೇ ಜಾಗತಿಕ ಜ್ಞಾನಪರಂಪರೆಯ ಬಹುಕೇಂದ್ರಗಳನ್ನು ಅರ್ಥಮಾಡಿಕೊಳ್ಳುವ ಪ್ರಯತ್ನವೂ ಇರಬೇಕು. ಹಲವಾರು ರೀತಿಯ ದೇಶೀಯ ಉತ್ಪಾದನೆಯ ಸಂಬಂಧಗಳಿವೆ. ಅವುಗಳಿಗೆ ಪ್ರಾದೇಶಿಕ ಔಚಿತ್ಯವಿದೆ. ಮತ್ತು ಅವು ತಮ್ಮ ಚಾರಿತ್ರಿಕ ಸಾಮಾಜಿಕ ಅಗತ್ಯಕ್ಕೆ ಅನುಗುಣವಾಗಿ ರೂಪುಗೊಂಡಿವೆ.

> **ಭಾರತದಲ್ಲಿ, ಗ್ರಾಮ ಅರ್ಥವ್ಯವಸ್ಥೆ ಅಹಿಂಸಾತ್ಮಕ ಸಹಕಾರದ ಮೇಲೆ, ಹಾಗೂ ಮಾನವನ ಹಕ್ಕುಗಳಲ್ಲದೆ ಕರ್ತವ್ಯಗಳ ಆಧಾರದ ಮೇಲೆ ಸಂಘಟಿತವಾಗಿದ್ದ ಕಾಲವೊಂದಿತ್ತು ಎಂಬ ಬಗ್ಗೆ ನನ್ನಲ್ಲಿ ಯಾವ ಐತಿಹಾಸಿಕ ಪುರಾವೆಯೂ ಇಲ್ಲ. ಆದರೆ ನಾನಂತೂ ಅದನ್ನು ನಂಬುತ್ತೇನೆ. ಅಂತಹ ಕಸುಬುಗಳನ್ನು ಮಾಡುತ್ತಿದ್ದವರು ತಮ್ಮ ಹೊಟ್ಟೆಹೊರೆದುಕೊಳ್ಳುತ್ತಿದ್ದರು. ಆದರೂ ಅವರ ಪರಿಶ್ರಮದಿಂದ ಸಮುದಾಯಕ್ಕೆ ಒಳಿತಾಗುತ್ತಿತ್ತು. ಉದಾಹರಣೆಗೆ, ಒಬ್ಬ ಬಡಗಿ ಹಳ್ಳಿಯ ರೈತನ ಅಗತ್ಯಗಳನ್ನು ಪೂರೈಸುತ್ತಿದ್ದ. ಅವನಿಗೆ ಹಣದ ಕೂಲಿ ಸಿಗುತ್ತಿರಲಿಲ್ಲ, ಕಾಳಿನ ಕೂಲಿ ಕೊಡುತ್ತಿದ್ದರು ರೈತರು. ಆ ಪದ್ಧತಿಯಲ್ಲೂ ಅನ್ಯಾಯಕ್ಕೆ ಆಸ್ಪದವಿರಬಹುದು. ಆದರೆ ಕನಿಷ್ಠ ಪ್ರಮಾಣದಲ್ಲಿ ಮಾತ್ರ ಅರವತ್ತು ವರ್ಷಗಳ ಹಿಂದಿನ ಕಾಥೇವಾಡದ ಜೀವನದ ಬಗ್ಗೆ ಸ್ವಂತ ಅರಿವಿನಿಂದ ಹೇಳುತ್ತೇನೆ. ಆಗ ಆ ಜನರ ಕಣ್ಣಿನಲ್ಲಿ ಈಗಿಗಿಂತಲೂ ಹೆಚ್ಚು ಕಾಂತಿ ಇತ್ತು, ಅವರ ಕೈಕಾಲುಗಳಲ್ಲಿ ಹೆಚ್ಚು ಕಸುವಿತ್ತು. ಅರಿವಿಲ್ಲದೆಯೆ ಅಹಿಂಸೆಯ ಆಧಾರದ ಮೇಲೆ ನಿಂತಿದ್ದ ಜೀವನ ಅದು.**
>
> **(ಸತ್ಯವಾಣಿ 2001 ಪುಟ. 284)**

ಹೀಗಾಗಿ 'ಜಾಗತೀಕರಣ'ದ ಎದುರಲ್ಲಿ ನಾವಿಡುವ 'ದೇಶೀಯ ಜ್ಞಾನಪರಂಪರೆ'ಯೆನ್ನುವುದು ಒಂದೇ ಮಾದರಿಯ ಪರ್ಯಾಯವಲ್ಲ. ಇಲ್ಲಿ ದೇಶೀಯ ಜ್ಞಾನಪರಂಪರೆಯ ಬಗ್ಗೆ ಮಾತಾಡಿದೆ: ಈ ದೇಶೀಯ ಜ್ಞಾನದ ಮಾದರಿಗಳು ನಮ್ಮ ಅಗತ್ಯಕ್ಕೆ ತಕ್ಕಂತೆ ರೂಪುಗೊಂಡಿವೆ. ನಮ್ಮ ಉತ್ಪಾದನೆಯ ಸಂಬಂಧಕ್ಕೂ ಜ್ಞಾನದ ಮಾದರಿಗಳಿಗೂ ಒಂದು ನಿರ್ಣಾಯಕವಾದ ಸಂಬಂಧವಿದೆ. ಒಂದು ಸಣ್ಣ ಉದಾಹರಣೆಯನ್ನು ಕೊಡಬಹುದು. ರೈತನೊಬ್ಬ ಭತ್ತದಲ್ಲಿ ತನಗೆ ಯಾವ ಮಾದರಿಯು

ಸೂಕ್ತ; ಹವಾಮಾನ, ಮಣ್ಣಿನ ಗುಣ ಹೇಗಿದೆ ಮುಂತಾದವುಗಳನ್ನು ಆಲೋಚಿಸಿ ಬೆಳೆಯುತ್ತಿದ್ದ ಹಾಗೆಯೇ ಅಕ್ಕಿಯ ಸಂರಕ್ಷಣೆ ಹೇಗೆಂಬುದು ಆತನಿಗೆ ತಿಳಿದಿತ್ತು. ಆತ ಈಗ ಆಲೋಚಿಸುವ ಮಾದರಿಗಳು ಬದಲಾಗಿವೆ. ಕಡಿಮೆ ಪ್ರದೇಶದಲ್ಲಿ ಹೆಚ್ಚು ಬೆಳೆ ತೆಗೆಯುವುದು ಹೇಗೆ ಎಂದು ಆಲೋಚಿಸುತ್ತಾನೆ. ಅದಕ್ಕೆ ಬೀಜವನ್ನು ಅಂತಾರಾಷ್ಟ್ರೀಯ ಕಂಪೆನಿಗಳು ಕೊಡುತ್ತವೆ. ಅದಕ್ಕೆ ಬೇಕಾದ ಔಷಧಗಳನ್ನು ಕೂಡಾ. ಪರ್ಯಾಯವಾಗಿ ಏನಾಯಿತು ಎಂದರೆ ಬೆಳೆ, ಔಷಧಿ ಮಾರುಕಟ್ಟೆ ಎಲ್ಲವೂ 'ಕಂಪೆನಿಗಳ' ವಶವಾದವು. ಉತ್ಪಾದನೆಯ ಸಂಬಂಧಕ್ಕೆ ತಕ್ಕಂಥ ಬೇರೊಂದು ಜ್ಞಾನದ ಮಾದರಿ ರೂಪುಗೊಂಡುದು ಮಾತ್ರವೇ ಅಲ್ಲ. ರೈತ ಆ ಬಲೆಯಲ್ಲಿ ಸಿಕ್ಕಿಹಾಕಿಕೊಂಡ. ಇದು ಕೇವಲ ರೈತನೊಬ್ಬನ ಪ್ರಶ್ನೆಯಲ್ಲ –ನಮ್ಮೆಲ್ಲರ ಜ್ಞಾನಮಾದರಿಗಳನ್ನು, ಅಧ್ಯಯನ ಕ್ರಮವನ್ನು ಅಂತಾರಾಷ್ಟ್ರೀಯ ಜಾಲ ನಿಯಂತ್ರಿಸುತ್ತದೆ. ಮತ್ತು ಯಾವುದಕ್ಕೆ ಹೆಚ್ಚು ವಿನಿಮಯ ಮೌಲ್ಯ ಇದೆಯೋ ಅದು ಮಾತ್ರ ಉಳಿಯುತ್ತದೆ. ಹಾಗೂ ಜ್ಞಾನದ ಮಾದರಿಗಳಲ್ಲೇ ಅನೇಕ ವರ್ಗಗಳು ಸ್ಥಾಪಿತವಾಗಿ ಯಾವುದು ಯಜಮಾನಿಕೆಯನ್ನು ವಹಿಸುತ್ತದೆಯೋ ಅದು ಮಾತ್ರ ಶ್ರೇಷ್ಠವೆಂಬ ಪರಿಕಲ್ಪನೆಯು ಬೆಳೆಯುತ್ತದೆ. ಹೀಗೆ ಹೊಸ ಮಾದರಿಯ ಶ್ರೇಣೀಕರಣದ ವ್ಯವಸ್ಥೆ ಹುಟ್ಟಿಕೊಳ್ಳುತ್ತದೆ. ಗಾಂಧಿ ಅರ್ಥಶಾಸ್ತ್ರಕ್ಕೆ ಮಾಡಿರುವ ಒಂದು ಟೀಕೆಯು ಗಮನಾರ್ಹ.

> ಅರ್ಥಶಾಸ್ತ್ರಜ್ಞರು ಮನುಷ್ಯನ ನಡತೆಯ ಗೋಜಿಗೇ ಹೋಗುವುದಿಲ್ಲ. ಕೇವಲ ಹೆಚ್ಚಿನ ಹಣಸಂಗ್ರಹವೇ ಉನ್ನತಿಯ ಗುರುತು, ಅದೇ ಜನರ ಸುಖದ ಆಧಾರ ಎಂದು ತಿಳಿಯುತ್ತಾರೆ. ಕಲಾಕೌಶಲಗಳನ್ನು ಬೆಳೆಸಿಕೊಂಡು ಎಷ್ಟೆಷ್ಟು ಹೆಚ್ಚು ಹಣ ಗಳಿಸಿದರೆ ಅಷ್ಟಷ್ಟು ಒಳಿತು ಎನ್ನುತ್ತಾರೆ. ಇಂಥ ವಿಚಾರದ ಪ್ರಚಾರದಿಂದ ಇಂಗ್ಲೆಂಡ್ ಮತ್ತು ಇತರ ದೇಶಗಳಲ್ಲಿ ಕಾರ್ಖಾನೆಗಳು ಹೆಚ್ಚಿಬಿಟ್ಟಿವೆ. ಬಹಳಷ್ಟು ಮಂದಿ ಪಟ್ಟಣಗಳಲ್ಲಿ ಸೇರಿಬಿಟ್ಟಿದ್ದಾರೆ. ಹೊಲ ಮನೆ ಬಿಟ್ಟು ಬಂದುಬಿಟ್ಟಿದ್ದಾರೆ. ಬಯಲಿನ ಸುಂದರ, ಸ್ವಚ್ಛ ಗಾಳಿ ಸೇವಿಸುವುದನ್ನು ಬಿಟ್ಟು ಕಾರ್ಖಾನೆಯ ದುರ್ವಾಯುವನ್ನು ಹಗಲಿರುಳೂ ಸೇವಿಸುವುದರಲ್ಲೇ ಸುಖ ಕಾಣುತ್ತಿದ್ದಾರೆ. ಫಲಿತ: ಜನ ದುರ್ಬಲರಾಗುತ್ತಾ ಇದ್ದಾರೆ, ಲೋಭ ಹೆಚ್ಚಾಗುತ್ತಿದೆ, ಅನೀತಿ ಹಬ್ಬುತ್ತಿದೆ. ಅನೀತಿಯನ್ನು ದೂರಗೊಳಿಸುವ ಮಾತನಾಡಿದರೆ ಬುದ್ಧಿವಂತರೆನ್ನಿಸಿಕೊಳ್ಳುವವರು ಹೇಳುತ್ತಾರೆ: ಅನೀತಿ ದೂರವಾಗದು. ಅಜ್ಞಾನಿಗಳಿಗೆ ಇದ್ದಕ್ಕಿದ್ದಂತೆ ಜ್ಞಾನ ಪ್ರಾಪ್ತವಾಗದು. ಆದಕಾರಣ ಹೇಗೆ ನಡೆಯುತ್ತಿದೆಯೋ ಹಾಗೆಯೇ ಸಾಗಲಿ –

ಎಂದು. ಈ ವಾದ ಹೂಡುವಾಗ ಬಡವರ ಅನೀತಿಗೆ ಧನಿಕರೇ ಕಾರಣರು ಎಂಬುದನ್ನು ಅವರು ಮರೆಯುತ್ತಾರೆ. ಅವರ ಭೋಗವಿಲಾಸದ ಸಾಮಗ್ರಿಗಳನ್ನು ಹೊಂದಿಸಲು ಬಡವರು ಹಗಲಿರುಳೂ ದುಡಿಯುತ್ತಾರೆ. ಏನಾದರೂ ಕಲಿಯಲು, ಏನಾದರೂ ಒಳ್ಳೆ ಕೆಲಸ ಮಾಡಲು ಅರೆಗಳಿಗೆಯೂ ಸಿಗದು ಅವರಿಗೆ. ಧನಿಕರನ್ನು ನೋಡಿ ತಾವೂ ಧನಿಕರಾಗಬೇಕೆಂದು ಹಂಬಲಿಸುತ್ತಾರೆ. ಧನಿಕರಾಗದೆ ಹೋದಾಗ ಖಿನ್ನರಾಗುತ್ತಾರೆ, ಸಿಟ್ಟಿಗೇಳುತ್ತಾರೆ. ಬಳಿಕ ವಿವೇಕ ಕಳೆದುಕೊಂಡು ಒಳ್ಳೆ ಹಾದಿಯಲ್ಲಿ ಹಣ ಸಿಗದಿದ್ದುದನ್ನು ಕಂಡು ಮೋಸ – ವಂಚನೆಗಳಿಂದ ಹಣ ಗಳಿಸುವ ವ್ಯರ್ಥ ಪ್ರಯಾಸ ಮಾಡುತ್ತಾರೆ. ಈ ರೀತಿ ಧನ – ದುಡಿಮೆ ಎರಡೂ ಹಾಳಾಗುತ್ತವೆ, ಇಲ್ಲವೆ ಮೋಸ – ವಂಚನೆ ಹಬ್ಬಲು ಉಪಯೋಗವಾಗುತ್ತವೆ.

(ಮೋ.ಕ ಗಾಂಧಿ 1959 ಅರ್ಥ ವಿಚಾರ ಪುಟ. 49)

ನಮಗೆ ವಸಾಹತುಶಾಹಿ ಅನುಭವ ಮತ್ತು ಈಗ ಉದಾರೀಕರಣದ ಅನುಭವ ಎರಡೂ ಆಗಿದೆ ಮತ್ತು ಆಗುತ್ತಿವೆ. ಮೊದಲು ನಾವಿದನ್ನು ಅರ್ಥಮಾಡಿಕೊಳ್ಳಬೇಕು. ವಸಾಹತುಶಾಹಿ ಅನುಭವ ಮತ್ತು ಅದರ ಬಿಡುಗಡೆಯ ಪ್ರಯತ್ನದಲ್ಲಿ ಪ್ರಭುತ್ವದ ನೇರ ಸಂಪರ್ಕ ಮತ್ತು ಅದರ ಮುಖಾಮುಖಿ ಸಾಧ್ಯವಾಯಿತು. ವಸಾಹತುಶಾಹಿ ಕಾಲದಲ್ಲಿ 'ಅಧಿಕಾರ'ದ ಅನುಭವ ನೇರವಾದುದು. ಹಾಗೂ ಅದು ನಮ್ಮ ಕಣ್ಣಿಗೆ ಕಾಣಿಸುತ್ತಿತ್ತು. ಈಗ ವಸಾಹತ್ತೋತ್ತರ ಸಂದರ್ಭದಲ್ಲಿ ಅದೂ ಹತ್ತೊಂಬತ್ತನೆಯ ಶತಮಾನದ ಕೊನೆಯ ಭಾಗದಲ್ಲಿ 'ಜಾಗತೀಕರಣ'ವೆಂಬ ಆರ್ಥಿಕವಾದ ಪರಮಾಧಿ ಕಾರದ ಪರಿಚಯವಾಗತೊಡಗಿದೆ. ವಸಾಹತುಶಾಹಿ ಅನುಭವಕ್ಕಿಂತ ಬೇರೆಯಾದ ಅನುಭವವಿದು. ಇದರಲ್ಲಿ ಅಂತಾರಾಷ್ಟ್ರೀಯ ಕಂಪೆನಿಗಳೂ ನಿಜವಾದ ರಾಷ್ಟ್ರೀಯ ಪರಮಾಧಿಕಾರವನ್ನು ಪರೋಕ್ಷವಾಗಿ ನಿಯಂತ್ರಿಸುತ್ತಿವೆ. ಜಾಗತೀಕರಣದ ಸಂದರ್ಭದಲ್ಲಿ 'ನಿಜವಾಗಿ' ಯಾರು ನಿಯಂತ್ರಣ ಮಾಡುತ್ತಾರೆಯೆಂಬುದು ಎಲ್ಲರಿಗೂ ಸರಿಯಾಗಿ ತಿಳಿಯುವುದೇ ಇಲ್ಲ. ವಸಾಹತುಶಾಹಿ ಅನುಭವ ಸಂದರ್ಭದಲ್ಲಿ ವಸಾಹತುಶಾಹಿಯ ವಿರೋಧವೇ ರಾಷ್ಟ್ರೀಯ ಪ್ರಜ್ಞೆಯ ಹುಟ್ಟಿಗೆ ಕಾರಣವಾಯಿತು. ಇದರಿಂದ 'ರಾಷ್ಟ್ರೀಯ ಪ್ರಜ್ಞೆ' ಎಂಬುದು ಎಲ್ಲರಲ್ಲಿ ಅಲ್ಲವಾದರೂ ಕೆಲವರಿಗಾದರೂ ಸಾಧ್ಯವಾಯಿತು. ರಾಷ್ಟ್ರೀಯ ಪ್ರಜ್ಞೆಯು ನಿರ್ದಿಷ್ಟವಾದ ಗುರಿಯನ್ನು ಹೊಂದಿದೆ. ಮತ್ತು ಅದಕ್ಕೆ ನಿರ್ದಿಷ್ಟವಾದ ರೇಖೆಯಿದೆ. ಸಂಸ್ಕೃತಿಯ ವಾಗ್ವಾದಗಳಿವೆ. ವಸಾಹತುಶಾಹಿ ಅನುಭವದ ಸಂದರ್ಭದಲ್ಲಿ ಪರಸ್ಪರ ಕೊಳುಕೊಡುವಿಕೆಯಿತ್ತು. ಆಳುವ ವರ್ಗ ಮತ್ತು ಆಳಿಸಿಕೊಳ್ಳುವ ವರ್ಗಗಳ

ನಡುವೆ ಸಾಂಸ್ಕೃತಿಕ ಸಂವಾದಗಳಿದ್ದವು. ಜಾಗತೀಕರಣದ ಸಂದರ್ಭದಲ್ಲಿ ನಿಜವಾದ ಸಾಂಸ್ಕೃತಿಕ ಸಂವಾದಗಳ ಪ್ರಶ್ನೆಯಿಲ್ಲ. ಜಾಗರೀಕರಣವು ರಾಷ್ಟ್ರೀಯ ಪ್ರಜ್ಞೆಯನ್ನು ಮೀರಿದ್ದು ಮತ್ತು ಎರಡು ದೇಶಗಳ ನಡುವಣ ಆಯಾತ ನಿರ್ಯಾತಗಳನ್ನೇ ಪ್ರಧಾನವಾಗಿ ಕೇಂದ್ರಿಕರಿಸಿಕೊಂಡಿದ್ದು ಎಂದೇ ಪ್ರತಿಪಾದಿಸಲಾಗುತ್ತದೆ. ಆದರೆ ಇದರಲ್ಲಿ ಬಂಡವಾಳವಾದಿ ಹುನ್ನಾರವಿದೆ. ಗಾಂಧಿಯದು ನೀತಿಯುಕ್ತ ಅರ್ಥಶಾಸ್ತ್ರ.

ವಸಾಹತುಶಾಹಿ ಅನುಭವದ ಸಂದರ್ಭದಲ್ಲಿ ಯುರೋಪಿನ ಸಂಸ್ಕೃತಿಯು ಪ್ರಭಾವ ಬೀರಿತಷ್ಟೆ? ಈ ಮಾದರಿಯ ಸಾಂಸ್ಕೃತಿಕ ಚಿಂತನೆಯೇ ಭಾರತದ ರಾಷ್ಟ್ರೀಯ ಸಂಸ್ಕೃತಿ: ರಾಷ್ಟ್ರೀಯ ಏಕತೆಯ ಪ್ರಶ್ನೆಯನ್ನು ಮುಂದಕ್ಕಿಟ್ಟಿತು. ಇದರ ಪರಿಣಾಮವಾಗಿ ರಾಷ್ಟ್ರೀಯ ಸಂಸ್ಕೃತಿಯು ರಾಷ್ಟ್ರೀಯ ಜನಾಂಗದ ಆದರ್ಶವೆಂಬುದನ್ನು ತನ್ನ ಎದುರು ಇರಿಸಿಕೊಂಡಿದೆ. ಈ ರಾಷ್ಟ್ರೀಯ ಪ್ರಜ್ಞೆ ಮತ್ತು ರಾಷ್ಟ್ರೀಯ ಜನಾಂಗದ ಪ್ರಜ್ಞೆಯನ್ನು ತೊಡೆದುಹಾಕುವುದಕ್ಕಾಗಿಯೇ ಜಾಗತಿಕ ಜನಾಂಗದ ಬಗ್ಗೆ ಮಾತಾಡುತ್ತದೆ. ವಸಾಹತ್ತೋತ್ತರ ಸಂದರ್ಭದಲ್ಲಿಯೂ ರಾಷ್ಟ್ರೀಯತೆಯ ಪ್ರಜ್ಞೆಯೆನ್ನುವುದು ಕೇವಲ ರಾಷ್ಟ್ರೀಯತೆಗೆ ಮಾತ್ರವೇ ಸಂಬಂಧಿಸಿಲ್ಲ. ಇದರ ಜೊತೆಗೆ ವ್ಯಾಪಾರ–ವಹಿವಾಟು; ಸಾಮಾಜಿಕ ಸಂಬಂಧಗಳು; ಭಾಷೆಗಳ ಅನೇಕತೆ ಮುಂತಾದುವುಗಳು ಹೊಂದಿಕೊಂಡಿವೆ ಮತ್ತು ವಸಾಹತ್ತೋತ್ತರ ಸನ್ನಿವೇಶದಲ್ಲಿ ಬಹುತ್ವದ ಸಂಗತಿಗಳೂ ಜೊತೆ ಸೇರಿಕೊಂಡಿವೆ. ನಮ್ಮೆಲ್ಲರ ಗಮನಕ್ಕೆ ಬಂದಿರುವಂತೆ ವಸಾಹತುಶಾಹಿ ಅನುಭವದ ಸಂದರ್ಭದಲ್ಲಿ ಅನೇಕ ಲೇಖಕರ ಬರವಣಿಗೆಗಳಲ್ಲಿ ಸಂಸ್ಕೃತಿಯ ಪ್ರಶ್ನೆಯು ಮುಖ್ಯವಾಗಿತ್ತು ಮತ್ತು ವಸಾಹತುಶಾಹಿ ಅನುಭವಕ್ಕೆ ನಿಜವಾದ ಪ್ರತಿರೋಧವನ್ನು ಒಡ್ಡಬೇಕಾದರೆ ಗಾಂಧಿಯಂಥವರು ಪ್ರಾದೇಶಿಕ ಭಾಷೆ, ಸಂಸ್ಕೃತಿ, ಸಾಮಾಜಿಕ ಸಂಬಂಧಗಳಲ್ಲಿಯ ಘರ್ಷಣೆಗಳ ಕುರಿತು ಬರೆಯಬೇಕಿತ್ತು. ಅಂದರೆ ವಸಾಹತುಶಾಹಿ ಅನುಭವದ ಸಂದರ್ಭದಲ್ಲಿ ಈ ಮಾದರಿಯ ಪ್ರಶ್ನೆಗಳನ್ನು ಎತ್ತಿಕೊಳ್ಳುವುದೇ ಒಂದು ಸಾಮಾಜಿಕ ಪ್ರಜ್ಞೆಯ ಮಾದರಿಯಾಗಿತ್ತು.

> "ದುಡಿಮೆಗಾರ, ಗುಮಾಸ್ತ, ಒಡೆಯ ಎಲ್ಲರೂ ಒಂದೇ ಅವಿಭಾಜ್ಯ
> ಸಂಘಟನೆಯ ಅಂಗಗಳು. ಅವರ ಹಿತಾಸಕ್ತಿಗಳು
> ಸಂಘರ್ಷಕಾರಕವಾಗಿರಬಾರದು. ಪರಸ್ಪರಾವಲಂಬಿ ಆಗಿರಬೇಕು".
> "ಒಡೆಯ–ಆಳಿನ ಸಂಬಂಧ ತಂದೆ ಮಕ್ಕಳ ಸಂಬಂಧವಾಗಬೇಕು".
> "ಬಂಡವಾಳಗಾರನಿಗೂ ಕಾರ್ಮಿಕನಿಗೂ ಜಗಳ ಇರಬೇಕಾದ್ದಿಲ್ಲ.
> ಒಬ್ಬರಿಗೆ ಇನ್ನೊಬ್ಬರು ಆಧಾರ".

"ನಿಮ್ಮ ಕಾರ್ಮಿಕರನನು ನಿಮ್ಮ ಸಂಪತ್ತಿನ ಸಹಭಾಗಿಗಳಾಗಿ ಮಾಡಿಕೊಳ್ಳಿ ಎಂದು ಬಯಸುತ್ತೇನೆ. .....ಕಾರ್ಮಿಕರು ಸಂಸ್ಥೆಯನ್ನು ತಮ್ಮದೇ ಎಂದು ಭಾವಿಸಿಕೊಳ್ಳಬೇಕು".

"ಬಂಡವಾಳಗಾರ-ಕಾರ್ಮಿಕರ ನಡುವೆ ಸಂಘರ್ಷ ಇರಲಾರದು, ಇರಬಾರದು ಎಂದು ನಂಬುತ್ತೇನೆ. ಕಾರ್ಮಿಕನಿಗೆ ಬಂಡವಾಳ ಗಾರನಿಗಿರುವಷ್ಟೇ ಸ್ಥಾನಮಾನ, ಘನತೆ ಇರಬೇಕು".

"ಬಂಡವಾಳ ಮತ್ತು ಪರಿಶ್ರಮ ಎರಡೂ ಪರಸ್ಪರ ಪೂರಕವಾಗಿರಬೇಕು. ಪರಸ್ಪರ ಸಹಾಯಕವಾಗಿರಬೇಕು. ಇದೇ ನನ್ನ ಆದರ್ಶ ಎಂದು ಯಾವಾಗಲೂ ಹೇಳುತ್ತೇನೆ. ಅವರೆಲ್ಲರೂ ಒಗ್ಗಟ್ಟಾಗಿ ಸಮರಸವಾಗಿ ಬಾಳುವ ದೊಡ್ಡ ಕುಟುಂಬವಾಗಿರಬೇಕು. ಬಂಡವಾಳಗಾರರು ಕಾರ್ಮಿಕರ ಲೌಕಿಕ ಯೋಗಕ್ಷೇಮ ಹಾಗೂ ನೈತಿಕ ಕ್ಷೇಮಗಳನ್ನು ನೋಡಿಕೊಳ್ಳುತ್ತಿರಬೇಕು. ಏಕೆಂದರೆ ತಮ್ಮ ಕೈಕೆಳಗಿನ ದುಡಿಮೆಗಾರರ ಯೋಗಕ್ಷೇಮಕ್ಕೆ ಬಂಡವಾಳಗಾರರೇ ಧರ್ಮದರ್ಶಿಗಳು".

"ಪರಿಶ್ರಮವೂ ಲೋಹನಾಣ್ಯದಷ್ಟೇ ಹಣ, ಬಂಡವಾಳ. ಒಬ್ಬರು ಹಣ ಹೂಡುತ್ತಾರೆ. ನೀವು ಶ್ರಮ ಹೂಡುತ್ತೀರಿ. ಹಣವಿಲ್ಲದೆ ನಿಮ್ಮ ಶ್ರಮ ವ್ಯರ್ಥ, ಶ್ರಮವಿಲ್ಲದೆ ಜಗತ್ತಿನ ಹಣವೂ ವ್ಯರ್ಥ".

"ಶ್ರಮದ ಘನತೆಯ ಬಗ್ಗೆ ನನಗೆ ತುಂಬ ಗೌರವ....... ಬಂಡವಾಳಗಾರರು ಇಲ್ಲದೆ ದೇಶ ಇರಬಲ್ಲದು. ಆದರೆ ಶ್ರಮಿಕರಿಲ್ಲದೆ ಬಾಳಲಾರದು".

"ದುಡಿಮೆಗೆ ಹೆಚ್ಚು ಸಂಬಳ ಕೇಳುವುದು ನಿಮ್ಮ ಹಕ್ಕು ಎನ್ನುವುದು ಸುಲಭವಾಗಿ ಅರ್ಥವಾಗುತ್ತದೆ. ನಿಮಗೆ ಬರುವ ಸಂಬಳಕ್ಕೆ ತಕ್ಕಂತೆ ಸಾಧ್ಯವಾದಷ್ಟೂ ಚೆನ್ನಾಗಿ ದುಡಿಯುವುದು ನಿಮ್ಮ ಕರ್ತವ್ಯ ಎನ್ನುವುದೂ ಸುಲಭವಾಗಿ ಅರ್ಥವಾಗುತ್ತದೆ". (ಸ.ವಾ. 289–292)

"ನ್ಯಾಯವನ್ನು ಪಡೆಯಲು ಕೆಲಸಗಾರರಿಗೆ ಇರುವ ಜನ್ಮಸಿದ್ಧ ಹಕ್ಕು ಮುಷ್ಕರ ಎನ್ನುವುದನ್ನು ಬಲ್ಲೆ. ಆದರೆ ಮಧ್ಯಸ್ಥಿಕೆಯ ತತ್ತ್ವವನ್ನು ಬಂಡವಾಳಗಾರರು ಒಪ್ಪಿಕೊಂಡ ಮೇಲೆಯೂ ಮಾಡುವ ಮುಷ್ಕರವನ್ನು ಅಪರಾಧವೆಂದೇ ಭಾವಿಸಬೇಕು".

"ಮಾಲಿಕ-ನೌಕರ ಇಬ್ಬರೂ ಸಮಭಾಗಿಗಳು".

"ಮಾಲಿಕರಿಗೆ ನನ್ನ ಸಲಹೆ ಇದು ನೀವು ಸಂಸ್ಥೆಗಳನ್ನು ನೀವೇ ಕಟ್ಟಿದ್ದೀರಿ ಎಂಬ ಭ್ರಮೆಯಲ್ಲಿದ್ದೀರಿ. ಆದರೆ ಕಾರ್ಮಿಕರೇ ನಿಜವಾದ ಒಡೆಯರು ಎಂದು ನೀವು ಮನಃ ಪೂರ್ತಿ ಭಾವಿಸಿ. ನೌಕರರಿಗೆ

ಒಳ್ಳೆಯ ಶಿಕ್ಷಣ ನೀಡಿ".

"ಒಂದು ಕಡೆ ಶೋಷಣೆಯ ಯತ್ನ, ಇನ್ನೊಂದೆಡೆ ಮುಷ್ಕರಗಳ ಪ್ರಯತ್ನ ಇದ್ದೇ ಇರುತ್ತವೆ. ಆದರೆ ಆಗ(ಎಂದರೆ ಧರ್ಮದ ನೆಲೆಗಟ್ಟಿನಲ್ಲಿ) ಮುಷ್ಕರಗಳು ಶುದ್ಧ ಅಹಿಂಸಾತ್ಮಕವಾಗಿರುತ್ತವೆ. ಅಂತಹ ಮುಷ್ಕರಗಳು ಯಾರಿಗೂ ಹಾನಿ ಮಾಡುವುದಿಲ್ಲ".

"ಯಶಸ್ವೀ ಮುಷ್ಕರದ ಷರತ್ತುಗಳು ಸರಳ. ಅವುಗಳನ್ನು ಪಾಲಿಸಿದಾಗ ಮುಷ್ಕರ ಸೋಲುವುದೇ ಇಲ್ಲ.

1. ಮುಷ್ಕರದ ಕಾರಣ ನ್ಯಾಯವಾಗಿರಬೇಕು.
2. ಮುಷ್ಕರಕಾರರಲ್ಲಿ ಒಗ್ಗಟ್ಟಿರಬೇಕು.
3. ಮುಷ್ಕರಕ್ಕೆ ಸೇರದವರ ಮೇಲೆ ಹಿಂಸೆ ಆಗಬಾರದು.
4. ಮುಷ್ಕರದ ಅವಧಿಯಲ್ಲಿ, ಮುಷ್ಕರಕಾರರು ತಮ್ಮ ನಿರ್ವಹಣೆಗೆ ಸಂಘದ ನಿಧಿಯನ್ನು ಅವಲಂಬಿಸಬಾರದು. ತಾವೇ ನಿರ್ವಹಿಸಿಕೊಳ್ಳಲು ಶಕ್ತರಾಗಿರಬೇಕು. ಅದಕ್ಕಾಗಿ ಯಾವುದಾದರೂ ಉಪಯುಕ್ತ, ಉತ್ಪಾದಕ, ತಾತ್ಕಾಲಿಕ ಕಸಬು ಮಾಡಬೇಕು.
5. ಮುಷ್ಕರಕಾರರ ಸ್ಥಾನಕ್ಕೆ ತರಲು ಸಾಕಷ್ಟು ಇತರ ಕಾರ್ಮಿಕರು ಸಿಗುತ್ತಿದ್ದರೆ ಮುಷ್ಕರ ಪರಿಹಾರವಾಗುವುದಿಲ್ಲ. ಆಗ ಅನ್ಯಾಯದ ವರ್ತನೆ ಅಥವಾ ಕಡಿಮೆ ಸಂಬಳ ಮುಂತಾದವು ಇದ್ದಾಗ ರಾಜೀನಾಮೆಯೆ ಮಾರ್ಗ.

ಮುಷ್ಕರ ಸ್ವಯಂ ಪ್ರೇರಿತವಾಗಿರಬೇಕು. ಉಪಾಯದಿಂದ ಮಾಡಿಸಿದ್ದಾಗಬಾರದು".

"ಕಾರ್ಮಿಕರ ಸ್ಥಿತಿಗತಿಯ ತೃಪ್ತಿಕರ ಪರಿಹಾರದಲ್ಲಿ ಕೆಳಗಿನವು ಸೇರಿರಬೇಕು.

1. ದುಡಿಮೆಯ ವೇಳೆ, ಕಾರ್ಮಿಕನಿಗೆ ಸ್ವಲ್ಪ ಪುರುಸೊತ್ತು ಕೊಡುವಂತಿರಬೇಕು.'
2. ಅವರಿಗೆ ತಮ್ಮ ಶಿಕ್ಷಣಕ್ಕೆ ಸೌಕರ್ಯ ಸಿಗಬೇಕು.
3. ಅವರ ಮಕ್ಕಳಿಗೆ ಸಾಕಷ್ಟು ಹಾಲು, ಬಟ್ಟೆ, ಶಿಕ್ಷಣ ಸಿಗಲು ಅವಕಾಶವಿರಬೇಕು
4. ಕೆಲಸಗಾರನಿಗೆ ನೈರ್ಮಲ್ಯವಿರುವ ಮನೆ ಇರಬೇಕು.
5. ಅವರು ವೃದ್ಧಾಪ್ಯಕ್ಕಾಗಿ ಸಾಕಷ್ಟು ಉಳಿಸಿಡುವ ಸ್ಥಿತಿಯಲ್ಲಿರಬೇಕು".

"ಗಿರಾಣಿ ಮಾಲಿಕರೊಂದಿಗೆ ಮೊದಲೇ ಸಂಧಾನ ನಡೆಸದೆ ಮುಷ್ಕರದ ಸಾಹಸಕ್ಕೆ ತೊಡಗಬಾರದು. ಗಿರಣಿ ಮಾಲಿಕರು ಮಧ್ಯಸ್ಥಿಕೆಗೆ ಒಲಿದರೆ, ಪಂಚಾಯತಿಯ ತತ್ತ್ವವನ್ನು ಒಪ್ಪಿಕೊಳ್ಳಬೇಕು.

ಅದರ ತೀರ್ಮಾನ ತನಗೆ ಹಿಡಿಸಲಿ ಬಿಡಲಿ, ಅದನ್ನು ಇಬ್ಬರೂ ಒಪ್ಪಿಕೊಳ್ಳಬೇಕು. ಇದೆಲ್ಲ ಸಾಧಿಸಬೇಕಾದರೆ, ಸತ್ಯದಂಥ ದಾರಿ ಬೇರೊಂದಿಲ್ಲ.

(ಸ.ವಾ. 293–302)

"ರೈತ ಭೂಮಿಯ ಉಪ್ಪು, ಸಾರ. ಭೂಮಿಯು ನ್ಯಾಯವಾಗಿ ಅವನದೇ. ಅವನಿಗೇ ಸೇರಬೇಕು. ಎಲ್ಲೋ ಇರುವ ಮಾಲಿಕ ಅಥವಾ ಜಮೀನುದಾರನಿಗಲ್ಲ". "ಆದರೆ ಅದನ್ನು ಭೂಮಾಲಿಕರಿಂದ ಕಿತ್ತುಕೊಳ್ಳಲಾರಿರಿ. ಅಹಿಂಸೆಯೊಂದೇ ದಾರಿ"

"ಭೂಮಿಯ ಒಡೆತನ ನಿಮ್ಮದೆಷ್ಟೋ ರೈತರದ್ದೂ ಅಷ್ಟೆ"

"ಬಂಡವಾಳಗಾರ ಕಾರ್ಮಿಕ, ಜಮೀನುದಾರ ಗೇಣಿದಾರ ಇಬ್ಬರಲ್ಲೂ ಸಹಕಾರ ಹಾಗೂ ಸಮಾನತೆಗಾಗಿ ನಾನು ಶ್ರಮಿಸುತ್ತಿದ್ದೇನೆ".

"ರೈತ ಜಮೀನುದಾರ ಒಂದೇ ಕುಟುಂಬಕ್ಕೆ ಸೇರಿದ್ದಾರೆ ಅಥವಾ ಸೇರಬೇಕು. ಅದಕ್ಕೆ ಯಜಮಾನ ಜಮೀನುದಾರ. ರೈತರ ಹಕ್ಕುಗಳನ್ನು ರಕ್ಷಿಸುವುದು ಅವನ ಕೆಲಸ".

"ಭೂಮಾಲಿಕರು ಬಡರೈತರ ಧರ್ಮದರ್ಶಿಗಳಾದರೆ ಅವರಿಗೆ ಉಜ್ವಲ ಭವಿಷ್ಯವಿದೆ. ಹೆಸರಿಗೆ ಮಾತ್ರ ಧರ್ಮದರ್ಶಿ ಅಲ್ಲ. ನಿಜವಾಗಿಯೂ ಧರ್ಮದರ್ಶಿ". (ಸ.ವಾ.303–305)

"ವರ್ಗಸಂಘರ್ಷದ ವಿಚಾರ ನನಗೆ ಹಿಡಿಸದು. ಭಾರತದಲ್ಲಿ ಅದು ಅನಿವಾರ್ಯವೇನಲ್ಲ. ಅಹಿಂಸೆಯ ಸಂದೇಶವನ್ನು ನಾವು ಅರಿತರೆ ಅದನ್ನು ತಪ್ಪಿಸಲೂಬಹುದು".

"ವರ್ಗಕಲಹ ಭಾರತದ ಮೂಲ ಪ್ರತಿಭೆಗೆ ಹೊರತಾದುದು. ನನ್ನ ಕನಸಿನ ರಾಮರಾಜ್ಯದಲ್ಲಿ ರಾಜ–ರಂಕ ಇಬ್ಬರ ಹಕ್ಕುಗಳೂ ನಿಶ್ಚಿತವೇ". (ಸ.ವಾ. 310–311)

(ನೀಲತ್ತಹಳ್ಳಿ ಕಸ್ತೂರಿ 2008 ಗಾಂಧೀ ತತ್ತ್ವಚಿಂತನೆ ಪುಟ. 52–55)

ಇದು ಗಾಂಧಿಗೆ ರಾಷ್ಟ್ರೀಯತೆಯನ್ನು ಕಂಡುಕೊಳ್ಳುವ ಒಂದು ತುಣುಕಾಗಿತ್ತು. ಪ್ರಾದೇಶಿಕತೆಯ ಅನನ್ಯತೆಯನ್ನು ಎತ್ತಿಹಿಡಿಯುತ್ತಲೇ ಅದರ ಜೊತೆಗೆ ಒಂದು ಭಾವನಾತ್ಮಕ ತನ್ಮಯತೆಯನ್ನು ಸಾಧಿಸಿಕೊಂಡಿದ್ದರು. ಪ್ರಾದೇಶಿಕತೆಯ ಮುಖಾಂತರ ರಾಷ್ಟ್ರೀಯತೆಗೆ; ರಾಷ್ಟ್ರೀಯತೆಯ ಮುಖಾಂತರ ಪ್ರಾದೇಶಿಕತೆಗೆ ಅನುಸಂಧಾನ ಮಾಡಲು ಅವರಿಗೆ ಸಾಧ್ಯವಾಯಿತು. ಇಲ್ಲಿಯೇ ಇನ್ನೊಂದು ಅಂಶವನ್ನು ಗಮನಿಸಬೇಕು. ಅದೇನೆಂದರೆ, ರಾಷ್ಟ್ರೀಯ ಮಾದರಿಯ ಹೋರಾಟಗಳಲ್ಲಿ ವ್ಯಕ್ತವಾಗುವ 'ರಾಷ್ಟ್ರೀಯ–ಸಾಂಸ್ಕೃತಿಕ ಏಕತೆಯ ಪ್ರಶ್ನೆ. ಬ್ರಿಟಿಷ್ ಪ್ರಭುತ್ವದ ವಿರುದ್ಧ ಹೋರಾಡಲು ಆಗ

ಇಲ್ಲದೇ ಇದ್ದ ಹೊಸ ರಾಜ್ಯವ್ಯವಸ್ಥೆಯ ಮಾದರಿಯನ್ನು ಒಪ್ಪಿಕೊಳ್ಳಬೇಕಾಗಿತ್ತು. ರಾಷ್ಟ್ರೀಯತೆಯನ್ನು ಆಧುನಿಕತಾವಾದಿಗಳು ಕಂಡುಕೊಳ್ಳುವ ವಿಧಾನಕ್ಕೂ ಗಾಂಧಿ ಕಂಡುಕೊಳ್ಲುವ ವಿಧಾನಕ್ಕೂ ವ್ಯತ್ಯಾಸವಿದೆ. ಗಾಂಧಿ ಇದನ್ನು ಸ್ವಾವಲಂಬನೆ ಪರಿಭಾಷೆಯ ಮುಖಾಂತರವೇ ಕಂಡುಕೊಂಡರು. ಸ್ವಸಂಸ್ಕೃತಿಯ ಬಗೆಗಿನ ಭಾವನಾತ್ಮಕ ನಿಲುವು; ಪ್ರಾದೇಶಿಕತೆಯ ಬಗೆಗಿನ ಅಭಿಮಾನ; ಉತ್ಪಾದನೆಗಳು ಮುಂತಾದುವುಗಳ ಮುಖಾಂತರ ಮಾತಾಡಬೇಕಾಗುತ್ತದೆ. ಗಾಂಧಿಗೆ ಹೆಚ್ಚು ಇಷ್ಟವಾದುದು ಈ ಮಾದರಿಯ ಸಾಂಸ್ಕೃತಿಕ ಅನುಸಂಧಾನ. ಗಾಂಧಿ ಬರಹಗಳ ಕೇಂದ್ರ ಹಳ್ಳಿ. ಉಡುಪಿಯಂಥ ತೀರಾ ಸಾಮಾನ್ಯವಾದ, ಯಾವುದೇ ಕಾರಣದಿಂದ ಮಹತ್ವದ್ದಲ್ಲದ ಸಣ್ಣ ಊರುಗಳಲ್ಲಿ ವಸಾಹತು ಆಡಳಿತ ಪರಿಣಾಮ ಮತ್ತು ಅದರ ಪಲ್ಲಟಗಳನ್ನು ಗಾಂಧಿ ಗುರುತಿಸಿದರು. ಪ್ರಾದೇಶಿಕ ಸಂಸ್ಕೃತಿಗಳು ಹೊಸ ಸಾಮಾಜಿಕ, ರಾಜಕೀಯ, ಆರ್ಥಿಕ ಸನ್ನಿವೇಶಗಳಲ್ಲಿ ಬದಲಾಗುವ ಕ್ರಮಗಳನ್ನು ಕುರಿತು ಗಾಂಧಿ ಬರೆದರು.

> ಯಂತ್ರ-ತಂತ್ರ ಕೌಶಲದಲ್ಲಿ ನಾವು ಅಜ್ಞರು, ಆದರೆ ಏಸುವಿನ ಉಪದೇಶವನ್ನು ಒಪ್ಪಿ ಅದರಂತೆ ನಡೆಯಲು ಅನುವಾದಿರೆಂದರೆ ಎಲ್ಲ ಕೌಶಲವನ್ನೂ ಅಮೆರಿಕವೇ ಸರ್ವಮಾನ್ಯ ಮಾಡಿಕೊಂಡಿ ತೆಂದು ನಾನು ಆಪಾದಿಸುವ ಅವಕಾಶ ಬರಬಾರದು. ಆಗ ನೀವು ಎಂದೀರಿ: 'ತಂತ್ರಕೌಶಲದಲ್ಲಿ ಅಜ್ಞಸೋದರ ರಾಷ್ಟ್ರವೊಂದು ಇದು. ನಮ್ಮ ಕುಶಲತೆಯ ನೆರವನ್ನು ಇವರಿಗೆ ನೀಡೋಣ. ಭಯಂಕರ ಬೆಲೆಗೆ ಅಲ್ಲ, ಅದರ ಒಳಿತಿಗಾಗಿ, ಅಂತಲೇ ಯಾವ ಪ್ರತಿಫಲವೂ ಬೇಡದೆ ಕೊಡೋಣ' ಎಂದು ಇಲ್ಲಿ ನಿಮ್ಮ ಮಿಷನರಿಗಳನ್ನು ಕುರಿತು ಒಂದು ಮಾತು ಹೇಳುತ್ತೇನೆ. ಅವರನ್ನು ನೀವು ಇಲ್ಲಿಗೆ ಉಚಿತವಾಗಿಯೇ ಕಳುಹಿಸುತ್ತೀರಿ. ಅದೂ ಸಹ ಸಾಮ್ರಾಜ್ಯವಾದೀ ಶೋಷಣೆಗಾಗಿಯೇ. ಏಕೆಂದರೆ ಅವರು ನಮ್ಮನ್ನೂ ನಿಮ್ಮಂತೆಯೇ ಮಾಡಿಯಾರು, ನಿಮ್ಮ ಸಾಮಾನು ಹೆಚ್ಚು ಕೊಳ್ಳುವಂತೆ ಮಾಡಿಯಾರು. ನಿಮ್ಮ ಕಾರುಗಳು, ಭೋಗಸಾಮಾಗ್ರಿಗಳಿಲ್ಲದೆ ನಡೆಯದು ಎಂಬಂತೆ ಮಾಡಬಹುದು. ಅಂತಲೇ ನೀವು ಇಲ್ಲಿಗೆ ಕಳುಹಿಸುವ ಈಸಾಯಿ ಧರ್ಮ ಬೆರಿಕೆ ಜಾತಿಯದು. ಕ್ರಿಶ್ಚಿಯನರ ಜನಸಂಖ್ಯೆಯನ್ನು ಹೆಚ್ಚಿಸುವ ಉದ್ದೇಶ್ಯವಿಲ್ಲದೆ ನೀವು ನಿಮ್ಮ ಶಾಲೆಗಳು, ಕಾಲೇಜುಗಳು ಹಾಗೂ ಆಸ್ಪತ್ರೆಗಳನ್ನು ಸ್ಥಾಪಿಸುವಿರಾದರೆ ನಿಮ್ಮ ಔದಾರ್ಯ ಅಕಲಂಕಿತವಾದುದಾದಿತು.
>
> (ಮೋ.ಕ ಗಾಂಧಿ 1959 ಅರ್ಥ ವಿಚಾರ ಪುಟ. 197

ವಸಾಹತ್ತೋತ್ತರ ಸನ್ನಿವೇಶದಲ್ಲಿ ಹಳೆಯ ಮಾದರಿಯ ವರ್ಗೀಕರಣವಾದ ಪಶ್ಚಿಮ ಮತ್ತು ಪೂರ್ವ ಇಲ್ಲವೇ 'ಲಂಡನ್' ಮತ್ತು 'ದೆಹಲಿ'ಯೆಂಬ ವರ್ಗೀಕರಣವು ಉಪಯುಕ್ತವಲ್ಲ. ಈ ಮಾದರಿಯ ಪೂರ್ವ ಮತ್ತು ಪಶ್ಚಿಮದ ನಡುವೆ ವೈಚಾರಿಕವಾಗಿ ಸದಾ ಒಂದು ಸಂಘರ್ಷವಿದೆಯೆಂದು ತಿಳಿದುಕೊಳ್ಳುವುದು ತುಂಬಾ ಕಷ್ಟ. ವೈಚಾರಿಕವಾಗಿ ಈ ರೀತಿಯ ಚಿಂತನಾಕ್ರಮದ ಬೇರುಗಳೇ ಬೇರೆಯವು. ವಸಾಹತುಶಾಹಿ ಅನುಭವದಲ್ಲಿ ಎರಡು ರೀತಿಯ ಪ್ರಕ್ರಿಯೆಗಳು ಜರುಗಿದ್ದನ್ನು ಲೀಲಾ ಗಾಂಧಿಯವರು ಗುರುತಿಸುತ್ತಾರೆ. ಮೊದಲನೆಯದಾಗಿ ವಸಾಹತುಶಾಹಿ ಅನುಭವದಲ್ಲಿ ವಸಾಹತು ಪ್ರಭುತ್ವ ಮತ್ತು ವಸಾಹತುಶಾಹಿ ಅನುಭವಕ್ಕೆ ಒಳಗಾದ ದೇಶ ಎರಡರಲ್ಲಿಯೂ ಬದಲಾವಣೆಯನ್ನು ತಂದಿದೆ. ಈ ಸಂದರ್ಭದ ಕೊಳುಕೊಡುವಿಕೆಯು ಅತ್ಯಂತ ಸಂಕೀರ್ಣವಾಗಿತ್ತು. ಗಾಂಧಿ ನಾಗರಿಕತೆಯ ಕುರಿತು ಹೇಳುವಾಗ ಒಂದು ಅಂಶವನ್ನು ಸ್ಪಷ್ಟಪಡಿಸಿದ್ದಾರೆ.

> ಯಾವ ಸ್ಥಿತಿಗೆ 'ನಾಗರಿಕತೆ' ಎನ್ನುತ್ತಾರೋ ಮೊದಲು ಅದನ್ನು ಪರಿಶೀಲಿಸೋಣ. ಈ ನಾಗರಿಕತೆಯಲ್ಲಿ ಬದುಕುವ ಜನರಿಗೆ ಶರೀರ ಸುಖವೇ ಬಾಳಿನ ಗುರಿ; ಇದೇ ಅದರ ಲಕ್ಷಣ. ಶರೀರ ಸುಖವೆ ಪುರುಷಾರ್ಥ. ಕೆಲವು ಉದಾಹರಣೆಗಳನ್ನು ನೋಡೋಣ. ನೂರು ವರ್ಷಕ್ಕೆ ಹಿಂದೆ ಯುರೋಪಿನಲ್ಲಿ ಮನೆಗಳು ಚೆನ್ನಾಗಿರಲಿಲ್ಲ. ಈಗ ಬಹಳ ಉತ್ತಮವಾಗಿದೆ. ಇದು ನಾಗರಿಕತೆಯ ಲಕ್ಷಣವಂತೆ, ಇದು ಶರೀರ ಸುಖದ ಸಾಧನ. ಪೂರ್ವದಲ್ಲಿ ಅವರು ತೊಗಲನ್ನು ಹೊದೆಯುತ್ತಿದ್ದರು. ಭರ್ಜಿ ಬಿಲ್ಲೆಗಳನ್ನು ಉಪಯೋಗಿಸುತ್ತಿದ್ದರು. ಈಗ ಉದ್ದನೆ ಷರಾಯಿ ತೊಡುತ್ತಾರೆ. ಮೈಯನ್ನು ಸಿಂಗರಿಸಲು ಹಲವು ಬಗೆಯ ಉಡುಪು ಉಡುತ್ತಾರೆ. ಭಲ್ಲೆ – ಭರ್ಜಿಗಳ ಬದಲು ಐದಾರು ಗೋಲಿಗಳ ರಿವಾಲ್ವರನ್ನು ಬಳಸುತ್ತಾರೆ. ಇಷ್ಟು ದಿನ ವಿಶೇಷವಾಗಿ ಬಟ್ಟೆಯನ್ನು ಬೂಟುಗಳನ್ನು ಉಪಯೋಗಿಸದ ದೇಶದ ಜನ ಇಂಗ್ಲಿಷರಂತೆ ಬಟ್ಟೆ ತೊಡಲು ಪ್ರಾರಂಭಿಸಿದರೆ, ಹೊಸದಾಗಿ ಅವರು ನಾಗರಿಕರಾದರೆಂದು ತಿಳಿಯುತ್ತಾರೆ. ಅದಕ್ಕೆ ಮೊದಲು ಅವರು ಅನಾಗರಿಕರು! ಹಿಂದೆ ಯುರೋಪಿನಲ್ಲಿ ಜನರು ಕೈಯಿಂದ ಕೆಲಸ ಮಾಡುತ್ತಿದ್ದರು. ನೇಗಿಲು ಹಿಡಿದು ಉಳುತ್ತಿದ್ದರು. ಈಗ ಯಂತ್ರಗಳ ಸಹಾಯದಿಂದ ಒಬ್ಬನೇ ಸಾವಿರಾರು ಎಕರೆ ಉತ್ತುಬಿತ್ತಿ ಹೇರಳವಾಗಿ ಹಣ ಗಳಿಸಬಹುದು. ಇದು ನಾಗರಿಕತೆಯ ಲಕ್ಷಣವಂತೆ.
>
> (ಮೋ.ಕ ಗಾಂಧಿ 2009 ಹಿಂದ್ ಸ್ವರಾಜ್ಯ ಪುಟ. 21)

ಎರಡನೆಯದಾಗಿ ನಾಗರಿಕ ಸಮುದಾಯದಲ್ಲಿ ಒಂದು ರೀತಿಯ ಮೈತ್ರಿಯು ಸಾಧ್ಯವಾಯಿತು. 'ಮಾನವೀಯತೆಯು ವಸಾಹತುಶಾಹಿ ಸಂದರ್ಭದಲ್ಲಿ ಅನೇಕ ಹೊಸ ಸಮಸ್ಯೆಗಳನ್ನು ಎದುರಿಸಬೇಕಾಯಿತು. ಮತ್ತು ಇದರಿಂದ ಹೊಸ ಅನ್ವೇಷಣೆಯು ಸಾಧ್ಯವಾಯಿತು' ಎಂದು ಫ್ಯಾನನ್ ಹೇಳುತ್ತಾನೆ. ಆದರೆ ವಸಾಹತ್ತೋತ್ತರ ಸಮಸ್ಯೆಗಳು ಬೇರೆ. ಅದರಲ್ಲಿಯೂ ಈಚಿನ ವರ್ಷಗಳಲ್ಲಿ ಅನೇಕ ಶೈಕ್ಷಣಿಕ ವಿಚಾರಧಾರೆಗಳು ಜಾಗತೀಕರಣದ ಕಡೆಗೆ ತಿರುಗಿದ್ದು ಒಂದು ಕುತೂಹಲದಾಯಕವಾದ ಸಂಗತಿಯೇ ಆಗಿದೆ. ಇದರರ್ಥ ಒಟ್ಟು ಶಿಕ್ಷಣ ಕ್ಷೇತ್ರವೇ ಹೀಗಾಗಿದೆಯೆಂದಲ್ಲ. ಹೊಸದಾಗಿ ಪ್ರಾರಂಭವಾದ ಸಂವಹನ ಮಾಧ್ಯಮಗಳು (ಉದಾ: ಕಂಪ್ಯೂಟರ್) ತಾಂತ್ರಿಕತೆ ಮುಂತಾದವು ಶೈಕ್ಷಣಿಕ ಕೆಲಸಗಳ ಮೇಲೆ ಪ್ರಭಾವನ್ನು ಬೀರಿವೆ. ಜಾಗತಿಕ ಮಟ್ಟದ ಅನೇಕ ಮಾಹಿತಿಗಳು ಮತ್ತು ಅಂತಾರಾಷ್ಟ್ರೀಯ ಮಟ್ಟದ ಆಮಿಷಗಳು ಭಾರತದ ಬುದ್ಧಿಜೀವಿಗಳು ವಿಚಾರಧಾರೆಯ ಮಟ್ಟಿಗೆ ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ತೆರಳಲು ಸಾಧ್ಯವಾಯಿತು. ಆ ತನಕವಿದ್ದ ಯುರೋಪಿನ ಕೇಂದ್ರದ ವಿಚಾರಧಾರೆಯ ಬದಲಿಗೆ ಹೊಸ ಅನೇಕ ಕೇಂದ್ರಗಳ ವಿಚಾರಧಾರೆಗಳು ಭಾರತದ ಶೈಕ್ಷಣಿಕವಲಯಕ್ಕೆ ಪ್ರವೇಶಿಸುವಂತಾಯಿತು. ಗಾಂಧಿಯ ಸರ್ವೋದಯದ ತಿಳುವಳಿಕೆಯು ಇಲ್ಲಿ ಉಲ್ಲೇಖನೀಯ.

> ನಾನು ಶಿಕ್ಷಣ ಪಡೆಯುತ್ತಿದ್ದಾಗ ನನ್ನ ಪಠ್ಯ ಪುಸ್ತಕಗಳ ಹೊರತಾಗಿ ಬೇರೆ ಪುಸ್ತಕಗಳನ್ನು ಬಹುಮಟ್ಟಿಗೆ ಓದಲಿಲ್ಲ ಮತ್ತು ಪ್ರಾಪಂಚಿಕ ಜೀವನದಲ್ಲಿ ನಾನು ಕಾಲಿಟ್ಟ ನಂತರ ಓದಲು ನನಗೆ ತೀರ ಸ್ವಲ್ಪ ವೇಳೆ ದೊರೆಯುತ್ತಿತ್ತು. ಆದುದರಿಂದ ನನಗೆ ಬಹಳಷ್ಟು ಪುಸ್ತಕೀಯ ಜ್ಞಾನವಿದೆ ಎಂದು ಹೇಳಿಕೊಳ್ಳಲಾರೆ. ಆದರೂ ಒತ್ತಾಯವಾಗಿ ನಾನು ಪಾಲಿಸಬೇಕಾದ ಈ ಕಟ್ಟು ಪಾಡಿನಿಂದ ನನಗೆ ಬಹಳ ಹಾನಿಯಾಗಲಿಲ್ಲ. ಬದಲಾಗಿ ನನ್ನ ಈ ಅಲ್ಪ ಓದು ನಾನು ಓದಿದುದನ್ನೆಲ್ಲ ಸಂಪೂರ್ಣವಾಗಿ ಅರಗಿಸಿಕೊಳ್ಳುವಂತೆ ನನ್ನನ್ನು ಸಮರ್ಥನನ್ನಾಗಿ ಮಾಡಿತೆಂದು ಹೇಳಬಹುದು. ನಾನು ಓದಿದ ಈ ಪುಸ್ತಕಗಳಲ್ಲಿ 'ಅಂಟು ದಿಸ್ ಲಾಸ್ಟ್' ((Unto This Last)) ಎಂಬ ಪುಸ್ತಕವು ನನ್ನ ಜೀವನದಲ್ಲಿ ಕೂಡಲೇ ವ್ಯಾಹವಾರಿಕವಾದ ಬದಲಾವಣೆಯನ್ನುಂಟು ಮಾಡಿತು. ಅದನ್ನು ನಂತರ ನಾನು ಗುಜರಾತಿಯಲ್ಲಿ ಭಾಷಾಂತರಿಸಿ ಅದಕ್ಕೆ ಸರ್ವೋದಯ (The Welfare of All, ಸಕಲದ ಕಲ್ಯಾಣ) ಎಂದು ಹೆಸರಿಟ್ಟೆನು.
>
> ನಾನು ಆಳವಾಗಿ ನಂಬಿದ ಕೆಲವು ತತ್ವಗಳು ರಸ್ಕಿನ್‌ನ ಈ

ಮಹಾಗ್ರಂಥದಲ್ಲಿ ಪ್ರತಿಬಿಂಬಿತವಾಗಿರುವುದನ್ನು ನಾನು ಕಂಡು ಹಿಡಿದೆನೆಂದು ಅದಕ್ಕಾಗಿಯೇ ನನ್ನನ್ನು ಅದು ಅಷ್ಟು ಸೆರೆಹಿಡಿದು ನನ್ನ ಬಾಳಿನಲ್ಲಿ ಬದಲಾವಣೆಯನ್ನು ತಂದಿತೆಂದೂ ಭಾವಿಸಿದ್ದೇನೆ. ಸರ್ವೋದಯ (Unto This Last) ಎಂಬ ಗ್ರಂಥವು ಈ ಕೆಳಗಿನ ಮಾತುಗಳನ್ನು ಉಪದೇಶಿಸುವುದೆಂದು ನಾನು ತಿಳಿದುಕೊಂಡಿದ್ದೇನೆ.

1. ವ್ಯಕ್ತಿಯ ಕಲ್ಯಾಣವು ಸಕಲರ ಕಲ್ಯಾಣದಲ್ಲಿ ಅಡಕವಾಗಿದೆ.
2. ಕಾಯಕವನ್ನು ಮಾಡಿ ತಮ್ಮ ಉಪಜೀವನವನ್ನು ಸಾಗಿಸುವ ಅಧಿಕಾರವು ಸಕಲರಿಗೂ ಸಮಾನವಾಗಿರುವುದರಿಂದ ಒಬ್ಬ ವಕೀಲನ ಕಾಯಕಕ್ಕೆ ಒಬ್ಬ ಕ್ಷೌರಿಕನ ಕಾಯಕದಷ್ಟೇ ಬೆಲೆಯಿದೆ.
3. ಶ್ರಮಜೀವನವು ಅಂದರೆ ಉಳುವವನ ಮತ್ತು ಕೈಗಾರಿಕೆಯ ಕೆಲಸ ಮಾಡುವವನ ಜೀವನವು ಸಾರ್ಥಕವಾದ ಜೀವನವಾಗಿದೆ.

ಇವುಗಳಲ್ಲಿ ಮೊದಲನೆಯ ಮಾತು ನನಗೆ ಗೊತ್ತಿತ್ತು. ಎರಡನೆಯದನ್ನು ಮಸಕುಮಸುಕಾಗಿ ಅರಿತಿದ್ದೆನು. ಮೂರನೆಯದು ಮಾತ್ರ ನನಗೆ ಹೊಳೆದಿರಲೇ ಇಲ್ಲ ಎರಡನೆಯ ಮತ್ತು ಮೂರನೆಯ ಮಾತುಗಳು ಮೊದಲನೆಯ ಮಾತಿನಲ್ಲಿ ಅಡಕವಾಗಿರುವುದೆಂಬುದನ್ನು 'ಸರ್ವೋದಯ'ವು (Unto This Last) ಸೂರ್ಯ ಪ್ರಕಾಶದಷ್ಟು ನನಗೆ ಸ್ಪಷ್ಟಗೊಳಿಸಿತು. ಈ ತತ್ವಗಳನ್ನು ವ್ಯವಹಾರದಲ್ಲಿ ತರಲು ಸಿದ್ಧನಾಗಿ ನಾನು ಈ ಮುಂಬೆಳಗಿನಲ್ಲಿ ಎಚ್ಚೆತ್ತೆನು.

(ಅ.ಕ. ಪ್ರ. 18) (ಸರ್ವೋದಯ ಮೋ.ಕ. ಗಾಂಧಿ 1960 ಪುಟ. 21–23)

ವಸಾಹತ್ತೋತ್ತರ ಸಂದರ್ಭದಲ್ಲಿ ಬಂದ ಅನೇಕ ಸಿದ್ಧಾಂತಗಳು ಮತ್ತು ರಾಷ್ಟ್ರೀಯತೆಯ ಸಮಸ್ಯೆಗಳನ್ನು ಸುಲಭವಾಗಿ ಒಪ್ಪಿಕೊಳ್ಳುವಂತಿಲ್ಲ. ಈಚಿನ ವರ್ಷಗಳಲ್ಲಿ ನಡೆಯುತ್ತಿರುವ ಚರ್ಚೆಗಳಲ್ಲಿ ಕೆಲವಂತೂ ವಿಮರ್ಶಾತ್ಮಕವಾಗಿಯೇ ಅನುಮಾನಗಳನ್ನು ಸೃಷ್ಟಿಸುತ್ತವೆ. ಹಾಗೆಯೇ ತಾತ್ಕಾಲಿಕವಾಗಿಯೇ ಅಗತ್ಯವಾಗಿರುವ ರಾಷ್ಟ್ರೀಯ ಅಧಿಕಾರದ ಪ್ರಶ್ನೆಯೂ ಕೂಡಾ ಪೂರ್ಣಮಟ್ಟದ ನಿರಾಕರಣೆಯು ಯಾವ ಕಡೆಗೂ ಕೊಂಡೊಯ್ಯಬಲ್ಲುದು. ಇವು ಕೇವಲ ಬೌದ್ಧಿಕವಲಯದ ಪ್ರಶ್ನೆಯಲ್ಲ. ರಾಷ್ಟ್ರೀಯತೆಯ ವಿರೋಧವೆಂದರೆ ಅದು ತತ್‌ಕ್ಷಣದ ಛಿದ್ರಗೊಳ್ಳುವ ರಾಜಕೀಯ ಅಧಿಕಾರ ಪಡೆದುಕೊಳ್ಳುವುದು ಎಂದು ಭಾವಿಸಿಕೊಂಡರೆ ಕಷ್ಟ. ರಾಷ್ಟ್ರೀಯತೆಯೆಂದರೆ ಅದು

ಒಂದು ಕೋಮು; ಒಂದು ಸಂಸ್ಕೃತಿ ರಾಜಕೀಯ ಅಧಿಕಾರ ಪಡೆದುಕೊಳ್ಳುವಿಕೆ ಎಂದು ತಿಳಿದುಕೊಂಡ ಕೋಮುವಾದಿ ಚಿಂತನೆಯ ಕ್ರಮದ ಹಿನ್ನೆಲೆಯು ಕೂಡಾ ಈ ಮಾದರಿಯಲ್ಲಿ ಅಪಾಯಕಾರಿಯೇ ಆಗಿದೆ. ಒಂದು ಕಡೆಯಿಂದ ಭಾರತದಲ್ಲಿ ಜರುಗುತ್ತಿರುವ ಜಾಗತೀಕರಣಕ್ಕೂ ಕೋಮುವಾದಿ ಚಟುವಟಿಕೆಗೂ ಸಂಬಂಧವಿದೆ. ಕೋಮುವಾದವು ಸಮಾನತೆಯನ್ನು ನಂಬುವುದಿಲ್ಲ. ಜಾಗತೀಕರಣವೂ ಅಷ್ಟೆ. ವಾಸ್ತವವಾಗಿ ರಾಷ್ಟ್ರೀಯತೆಯು ಅಮೂರ್ತ ರಾಜಕೀಯ ಏಕತೆ ಮತ್ತು ಸಮಾನ ಪ್ರಜ್ಞೆಗಳ ಕಲ್ಪನೆಯನ್ನು ಹೊಂದಿದೆ. ಆದರೆ ಜಾಗತೀಕರಣವು ಹೆಚ್ಚು ಪ್ರಬಲವಾಗುತ್ತಾ ಹೋದಂತೆ ಇದಕ್ಕೆ ಯಾವ ಅರ್ಥವೂ ಇರುವುದಿಲ್ಲ. ಈಗಾಗಲೇ ಉದಾರವಾದ ಸಂಸ್ಕೃತಿಯು ಹಾಜರಾಗಿದೆ. ಇಂಗ್ಲಿಷ್ ಭಾಷೆಯನ್ನು ಈ ಉದಾರ ಸಂಸ್ಕೃತಿಯ ದೆಸೆಯಿಂದ ಹೆಚ್ಚು ಅಧಿಕೃತ ಮತ್ತು ವ್ಯವಹಾರಕ್ಕೆ ಅತ್ಯಗತ್ಯ ಭಾಷಯೆಂಬಂತೆ ಚಾಲ್ತಿಗೆ ತರಲಾಗಿದೆ. ವಸಾಹತೋತ್ತರ ಸನ್ನಿವೇಶದಲ್ಲಿಯೂ ಮೂರು ಭಾಷೆಯ ಅಗತ್ಯ ಬೇರೆ ಬೇರೆ ಕಾರಣಗಳಿಂದ ಅಗತ್ಯವಾಗಿಬಿಟ್ಟಿತು. ಒಂದು ಮಾತೃಭಾಷೆ. ಇದು ಕೇವಲ ಜ್ಞಾನ ಸಂಬಂಧಿಯಾದುದು ಅಲ್ಲ. ವ್ಯಾವಹಾರಿಕ ಅಗತ್ಯ. ದೈನಂದಿನ ಬದುಕಿನ ಸಂವಹನದ ಅಗತ್ಯವನ್ನು ಒಳಗೊಂಡಿದೆ. ಇನ್ನೊಂದು ದೇಶಭಾಷೆ. ಮತ್ತೊಂದು ರೀತಿಯಲ್ಲಿ ಹೇಳಬೇಕೆಂದರೆ ಇದನ್ನು ರಾಷ್ಟ್ರೀಯ ಭಾಷೆಯೆಂದು ಕರೆಯಲಾಗಿದೆ. ಹಿಂದಿಯನ್ನು ಈ ದೃಷ್ಟಿಯಿಂದ ಅಂಗೀಕರಿಸಲಾಗಿದೆ. ಇಂಗ್ಲಿಷ್ ನಮಗೆ ಜಾಗತಿಕ ನೆಲೆಯ ಭಾಷೆ. ಒಂದು ಕಾಲಕ್ಕೆ ನಾವಿದನ್ನು ಪ್ರಭುತ್ವದ ಭಾಷೆ ಎಂದು ಕರೆಯುತ್ತಿದ್ದೆವು. ಇಂಗ್ಲಿಷ್ ಈಗ ನಮಗೆ ಬೌದ್ಧಿಕ ಅಗತ್ಯ ಮತ್ತು ಅದು ಮಾರುಕಟ್ಟೆಗೆ ಬೇಕಾದ ಭಾಷೆ. ಅಂದರೆ ಉದಾರೀಕರಣದ ಸಂದರ್ಭದಲ್ಲಿ ಈ ಜಾಗತಿಕ ಭಾಷೆಯು ಮಾರುಕಟ್ಟೆಯ ಅಗತ್ಯಕ್ಕೆ ಅನುಸಾರವಾಗಿಯೇ ಬಳಕೆಯಾಗುತ್ತದೆ. ಭಾಷೆಗೆ ಇರುವ ಮಾನವೀಯತೆಯ ಮುಖ ಇದಕ್ಕೆ ಮುಖ್ಯವಲ್ಲ. ಇಂಗ್ಲಿಷ್ ಈಗ ಗೌರವಯುತ ಸ್ಥಾನವನ್ನು ಪಡೆದುಕೊಳ್ಳಬೇಕಾದ ಭಾಷೆಯೆಂದೇ ತಿಳಿದುಕೊಳ್ಳಲಾಗಿದೆ. ಈ ಕಾರಣದಿಂದಲೇ ಇಂಗ್ಲಿಷ್‌ಗೆ ಜಾಗತಿಕ ಮಟ್ಟದ ಸ್ಥಾನವನ್ನು ಕೊಟ್ಟು ಅದಕ್ಕೊಂದು ವಿಶಿಷ್ಟ ಜಾಗವನ್ನು ಕಲ್ಪಿಸಲಾಗಿದೆ. ಇದರ ಹಿನ್ನೆಲೆಯಲ್ಲಿ ನಮಗೆ ಇಂಗ್ಲಿಷ್ ಎನ್ನುವುದು ವಸಾಹತು ಪೂರ್ವದಲ್ಲಿ ಇದ್ದ ಹಾಗೆ ಪ್ರಭುತ್ವದ ಭಾಷೆಯಲ್ಲ. ಅದು ಈಗ ಮನುಷ್ಯನಿಗೆ ಅತ್ಯಂತ ಅಗತ್ಯವಾದ ಭಾಷೆಯೆಂದೇ ಬಿಂಬಿಸಲಾಗುತ್ತದೆ. ಇದರ ಪರಿಣಾಮವಾಗಿ ಭಾಷೆ; ಸೂಚಕ; ಸೂಚನೆ; ರಾಷ್ಟ್ರೀಯ ಭಾಷೆ; ಪ್ರಾದೇಶಿಕ ಭಾಷೆ ಮುಂತಾದವು ತಮ್ಮ ಕೇಂದ್ರಗಳನ್ನು ಬದಲಾಯಿಸಿಕೊಂಡಿವೆ. ಇಂಗ್ಲಿಷ್ ಭಾಷೆಯ ಕಲಿಕೆಯು ವಸಾಹತು

ಸಂದರ್ಭದಲ್ಲಿ ಅಧಿಕಾರದ ಜೊತೆಗೆ ಇರಿಸಿಕೊಂಡ ಸಂಬಂಧದ ಸೂಚನೆ: ಅಧಿಕೃತ ಜ್ಞಾನಪರಂಪರೆಯನ್ನು ಕಟ್ಟಿಕೊಳ್ಳುವ ಪ್ರಕ್ರಿಯೆಯ ಜೊತೆಗಿನ ಸಂಬಂಧ, ಸಾಂಸ್ಕೃತಿಕ ವಿಸ್ತರಣೆಯ ಅರ್ಥ ಇತ್ಯಾದಿ ಅಂಶಗಳನ್ನು ಒಳಗೊಂಡಿತ್ತು. ವಸಾಹತೋತ್ತರ ಸಂದರ್ಭದಲ್ಲಿ ಇಂಗ್ಲಿಷ್ ಕಲಿಕೆ ಮತ್ತು ಸಂಪಾದನೆಗೆ ವಿಶೇಷ ಅರ್ಥ ಬಂದಿದೆ. ಇಂಗ್ಲಿಷಿನ ಜ್ಞಾನ ಮತ್ತು ಅಂತಾರಾಷ್ಟ್ರೀಯ ಕಂಪೆನಿಗಳಲ್ಲಿಯೂ ಉದ್ಯೋಗಕ್ಕೂ ಒಂದು ಸಂಬಂಧವಿದೆ. ಈ ಪ್ರಕ್ರಿಯೆಯೂ ಜರುಗುತ್ತಿದೆ. ಇದರ ಪರಿಣಾಮದಿಂದ ಅಂತಿಮವಾಗಿ ಪ್ರಾದೇಶಿಕ ಭಾಷೆಗಳ ಮೇಲೆ ದೊಡ್ಡದೊಂದು ಕಂಟಕವು ಎದುರಾದರೆ ಆಶ್ಚರ್ಯವೇನಿಲ್ಲ. ಶಿಕ್ಷಣ ಮಾಧ್ಯಮದ ಬಗ್ಗೆ ಗಾಂಧಿ ಹೇಳಿರುವ ಅಭಿಪ್ರಾಯ ಗಮನಾರ್ಹ.

> **ಭಾರತೀಯ ವಿರೋಧಕಾರಕ ನಮ್ಮ ಸುಳ್ಳು ಶಿಕ್ಷಣ ನಮ್ಮ ಜನಕೋಟಿಗೆ ಮಾಡುತ್ತಿರುವ ಹಾನಿ ದಿನೇ ದಿನೇ ಹೆಚ್ಚುತ್ತಿದೆ, ಮುಂದುವರಿದೇ ಇದೆ. ಇದಕ್ಕೆ ದಿನವೂ ಸಾಕ್ಷಿ ದೊರಕುತ್ತಲೇ ಇದೆ.–**
> **ಇಂಗ್ಲಿಷ್ ತಿಳಿಯದೆ ಇದ್ದರೆ ನಾವು ಯಾರೂ ಜಗದೀಶಚಂದ್ರ ಬೋಸ್ ಆಗುವ ಆಸೆ ಇಲ್ಲ ಎಂದು ಭಾವಿಸುತ್ತಿರುವಂತಿದೆ. ಇದಕ್ಕಿಂತ ದೊಡ್ಡ ಮೌಢ್ಯ ಊಹೆಗೂ ಸಾಧ್ಯವಿಲ್ಲ. ಯಾವ ಜಪಾನಿಯವನಿಗೂ ನಮ್ಮಷ್ಟು ನಿಸ್ಸಹಾಯಕತೆ ತೋರದು. –**
> **ಶಿಕ್ಷಣ ಮಾಧ್ಯಮವನ್ನು ಈ ಕೂಡಲೇ ಬದಲು ಮಾಡಬೇಕು. ಏನೇ ಆಗಲಿ, ಪ್ರಾಂತೀಯ ಭಾಷೆಗಳಿಗೆ ಅವುಗಳ ಸೂಕ್ತ ಸ್ಥಾನ ಕೊಡಬೇಕು. ದಿನದಿನವೂ ಹೆಚ್ಚುತ್ತಿರುವ ವ್ಯರ್ಥವೆಚ್ಚಕ್ಕೆ ಬದಲಾಗಿ ತಾತ್ಕಾಲಿಕವಾದ ಗೊಂದಲವೇ ವಾಸಿ ಎನ್ನುತ್ತೇನೆ. (ಸತ್ಯವಾಣಿ 2001 ಪುಟ. 377)**

ಭಾಷೆ, ಕಲಿಕೆ, ಉದ್ಯೋಗ ಇವುಗಳ ನಡುವೆ ಇರುವ ಸಂಬಂಧ ತುಂಬಾ ಸೂಕ್ಷ್ಮವಾದುದು. ಇಂಗ್ಲಿಷ್ ಮಾದರಿಯ ಶಿಕ್ಷಣ ಕ್ರಮದಿಂದ ನಮ್ಮಲ್ಲಿ ಭಾಷೆಯ ಬಗೆಗಿನ ಕಲ್ಪನೆಗಳು ಬೇರೆಯೇ ಆದುವು. ಭಾಷೆಯ ಕಲಿಕೆ ಮತ್ತು ಉದ್ಯೋಗಕ್ಕೆ ಒಂದು ಸಂಬಂಧವು ಕಲ್ಪಿತವಾಯಿತು. ಹಾಗೆಯೇ ಬರಹದ ಭಾಷೆಯನ್ನು ಒಂದು 'ಲಿಖಿತ ಸಾಕ್ಷ್ಯ', ಅದನ್ನು ಸತ್ಯವೆಂದು ಪರಿಭಾವಿಸಲಾಯಿತು. 'ಬರವಣಿಗೆಯ ಭಾಷೆ' ಒಂದು ಸತ್ಯವೆಂಬಂತೆ ಕಂಡುಕೊಳ್ಳುವುದೆಂದರೆ ಅದರ ಪೂರ್ವದ ಆಲೋಚನೆ ಮತ್ತು ಮಾತುಗಳನ್ನು ಅಸತ್ಯವೆಂಬಂತೆ ಕಂಡುಕೊಂಡಂತೆ. ಬರಹವೆಂದರೆ ಅದು ಪೂರ್ಣ ಸತ್ಯವಲ್ಲ ಎಂಬ ಪ್ಲೇಟೋನ ಮಾತು ಇಲ್ಲಿ ನೆನಪಿಗೆ ಬರುತ್ತದೆ. ಭಾಷೆ,

ಜಾಹೀರಾತು, ಸಮೂಹ ಮಾಧ್ಯಮ, ವ್ಯವಹಾರ ಇತ್ಯಾದಿಗಳಿಂದ ಪ್ರತ್ಯೇಕಗೊಂಡ ಚಟುವಟಿಕೆಯೆಂಬಂತೆ ತಿಳಿಹೇಳಲಾಗಿದೆ. ಹೀಗಾಗಿ ಸಂಸ್ಕೃತಿ ಚರ್ಚೆಯು ಕೂಡಾ ಕೆಲ ಜನರ ಸೊತ್ತಾಯಿತು. ಯಾವಾಗ ಸಂಸ್ಕೃತಿ ಸಾಂಸ್ಥಿಕವಾಗುವುದೋ ಆಗ ಅದರ ಪರಿಣಾಮ ಬೇರೆಯಾಗುವುದು. ಎಲ್ಲಿಯವರೆಗೆ ಸಂಸ್ಕೃತಿಯು ಜಾಗತೀಕರಣಕ್ಕೆ ಪೂರಕವಾಗುವುದೋ ಅಲ್ಲಿಯ ತನಕ ತೊಂದರೆಯಿಲ್ಲ. ಆದರೆ, ಜಾಗತೀಕರಣದ ರಭಸದ ಸೆಳವಿಗೆ ಸಂಸ್ಕೃತಿ ವಿರೋಧವಾಗುವುದೋ ಆಗ ನಿಜವಾಗಿಯೂ ಸಂಸ್ಕೃತಿ ಸಮಸ್ಯೆಯು ಪ್ರಾರಂಭವಾಗಿ ಬಿಡುತ್ತದೆ. ಗಾಂಧಿ ಹೇಳಿದ ಮಾತಿದು.

> ವಿದೇಶೀ ಭಾಷಾಮಾಧ್ಯಮದ ಶಿಕ್ಷಣ ಮಕ್ಕಳಿಗೆ ಸಾಕಷ್ಟು ಶ್ರಮದಾಯಕ. ಅದಕ್ಕಾಗಿ ನಮ್ಮ ಮಕ್ಕಳು ಭಾರಿ ದಂಡ ತೆರಬೇಕು. ಮುಂದೆ ಅವರು ಇತರ ಯಾವುದೇ ಭಾರವನ್ನೂ ಹೊರಲು ಬಹುಮಟ್ಟಿಗೆ ಅಸಮರ್ಥರಾಗುತ್ತಾರೆ. ಏಕೆಂದರೆ ಅವರು ದುರ್ಬಲರೂ ನಿರುತ್ಸಾಹಿಗಳೂ ಆಗಿ ಕೇವಲ ಪಶ್ಚಿಮದ ಬಾಲಂಗೋಚಿ ಆಗಿ ಕೆಲಸಕ್ಕೆ ಬಾರದವರಾಗುತ್ತಾರೆ. ಅವರಿಗೆ ಮೂಲಭೂತ ಸಂಶೋಧನೆಯಲ್ಲಾಗಲಿ, ಅಥವಾ ಗಾಢ ಚಿಂತನೆಯಲ್ಲಾಗಲಿ ಆಸಕ್ತಿ ಇರದು. ಧೈರ್ಯ, ಪಟ್ಟುಹಿಡಿದು ಕೆಲಸ ಮಾಡುವುದು, ಸಾಹಸ, ನಿರ್ಭಯತೆ ಈ ಗುಣಗಳ ಕೊರತೆಯಿರುತ್ತದೆ ಅವರಲ್ಲಿ. ಇದರಿಂದಾಗಿಯೆ, ನಮಗೆ ಹೊಸ ಯೋಜನೆ ಮಾಡುವುದು ಅಥವಾ ನಮ್ಮ ಸಮಸ್ಯೆಗಳನ್ನು ಬಿಡಿಸಲು ಯೋಜನೆಗಳನ್ನು ನಡೆಸುವುದು ಸಾಧ್ಯವಾಗಿಲ್ಲ. ಯೋಜನೆ ಮಾಡಿದರೂ ನಮಗೆ ಸೋಲೇ. ಭರವಸೆ ಮೂಡಿಸುವ ಕೆಲವರು ಸಾಮಾನ್ಯವಾಗಿ ಎಳೆತನದಲ್ಲೆ ಸಾಯುತ್ತಾರೆ. –
>
> ಈ ವಿಚಾರ ಉಂಟುಮಾಡಿರುವ ಭಾರಿ ನಷ್ಟವನ್ನು ಅಂದಾಜು ಮಾಡುವುದು ಇಂಗ್ಲಿಷ್ ಓದಿದ ನಮಗೆ ಮಾತ್ರ ಸಾಧ್ಯವಿಲ್ಲ. ನಮ್ಮ ಜನಸಮೂಹದ ಮೇಲೆ ನಾವೆಷ್ಟು ಕಡಿಮೆ ಪ್ರಭಾವ ಬೀರಿದ್ದೇವೆ ಎಂಬುದನ್ನು ಅಂದಾಜು ಮಾಡಿದರೆ, ಆ ಹಾನಿ ಎಷ್ಟು ದೊಡ್ಡದು ಎಂಬುದು ಕೊಂಚ ಮಟ್ಟಿಗೆ ತಿಳಿದೀತು.
>
> ಶಾಲೆ ಮನೆಯ ವಿಸ್ತರಣವೇ ಆಗಬೇಕು; ಅತ್ಯುತ್ತಮ ಫಲಿತಾಂಶ ಬೇಕಿದ್ದರೆ, ಮಗು ಮನೆಯಲ್ಲಿ ಹಾಗೂ ಶಾಲೆಯಲ್ಲಿ ನಡೆಯುವ ಅನಿಸಿಕೆಗಳಲ್ಲಿ ಹೊಂದಾಣಿಕೆ ಇರಬೇಕು. ಇರಬೇಕಾದ ಆ ಹೊಂದಾಣಿಕೆಯನ್ನು ಅಪರಿಚಿತ ಭಾಷಾಮಾಧ್ಯಮದ ಶಿಕ್ಷಣ ಹರಿದು ಹಾಕುತ್ತದೆ. ಆ ಸಂಬಂಧವನ್ನು ಕಡಿದು ಹಾಕುವವರು ತಮ್ಮ ಉದ್ದೇಶ ಎಷ್ಟೇ ಪ್ರಾಮಾಣಿಕವಾಗಲಿ, ಜನತೆಯ ಶತ್ರುಗಳು.

ಈ ಶಿಕ್ಷಣ ಪದ್ಧತಿಗೆ ತಾನಾಗಿಯೆ ಬಲಿಯಾಗುವುದು ತಾಯಿ ಬಗ್ಗೆ ಕರ್ತವ್ಯಭ್ರಷ್ಟರಾದಂತೆಯೆ. ಈ ಪರಕೀಯ ಶಿಕ್ಷಣ ಮಾಡಿದ ಹಾನಿ ಇಲ್ಲಿಗೇ ನಿಲ್ಲದು. ಇನ್ನೂ ಮುಂದೆ ಹೋಗುತ್ತದೆ. ಇದು ಕಲಿತವರ್ಗಕ್ಕೂ, ಜನಸಮೂಹವರ್ಗಕ್ಕೂ ನಡುವೆ ಕಂದರ ಉಂಟುಮಾಡಿದೆ. ಜನ ನಮ್ಮನ್ನು ತಮಗಿಂತ ಪ್ರತ್ಯೇಕ ಎಂದು ಭಾವಿಸುತ್ತಾರೆ. ನಿಜವಾದ ಶಿಕ್ಷಣ. (1962) ಪುಟ – 12–13)

ಸತ್ಯವಾಣಿ 2001 ಪುಟ. 377 378)

ಸರಿಸುಮಾರು 1970ರ ಅನಂತರದ ಪ್ರಮುಖ ವಾಗ್ವಾದಗಳಲ್ಲಿ ಸಂಸ್ಕೃತಿ ಮತ್ತು ಸಾಮಾಜಿಕ ಅಧ್ಯಯನಗಳಲ್ಲಿ ವಿಶೇಷವಾದ ಪಲ್ಲಟವನ್ನು ನಾವು ಕಾಣುತ್ತೇವೆ. ಈ ಸಂದರ್ಭದಲ್ಲಿಯೇ ಮಾನವತೆ ಮತ್ತು ಕೆಳವರ್ಗದ ಸಮಾಜ ಮತ್ತು ಸಂಸ್ಕೃತಿಯ ಪ್ರಶ್ನೆಯು ಪ್ರಮುಖ ವಿಚಾರಧಾರೆಯ ಜೊತೆಗೆ ಒಂದುಗೂಡಿತು. ಸಾಂಪ್ರದಾಯಿಕವಾದ ಸಂಸ್ಕೃತಿ ಚಿಂತನೆಯು ಈ ಸಂದರ್ಭದಲ್ಲಿ ಬದಲಾಯಿತು. ಸಮಾಜ ಮತ್ತು ಸಂಸ್ಕೃತಿಯನ್ನು ಎಡಪಂಥೀಯ ದೃಷ್ಟಿಕೋನದಿಂದ ನೋಡುವ ಪ್ರಯತ್ನ ನಡೆಯಿತು. ಸಂಸ್ಕೃತಿಯು ಸ್ಥಿರವಲ್ಲ; ಚರಕವೆಂಬ ಸಂಗತಿಯು ಈ ಕಾಲದಲ್ಲಿ ಪ್ರಚಲಿತವಾಗಿರುವುದು ಮಾತ್ರವಲ್ಲ, ಅದು ಸಾಂಸ್ಕೃತಿಕ ಚರ್ಚೆಗೂ ಈ ದಶಕದಲ್ಲಿ ನಡೆದ ಪ್ರಮುಖ ಚರ್ಚೆಗೂ ಯಾವುದೇ ರೀತಿಯ ಸಂಬಂಧವಿಲ್ಲ. ಎಪ್ಪತ್ತರ ದಶಕದಲ್ಲಿ ಸಮಾಜ, ಸಾಹಿತ್ಯ ಯಾವುದೇ ಚರ್ಚೆಯಿರಲಿ ಅವು ವ್ಯವಸ್ಥೆಯನ್ನು ಪ್ರಶ್ನಿಸಲು ತೊಡಗಿದವು. ಉದಾರೀಕರಣದ ಪ್ರಕ್ರಿಯೆಯ ಸಂದರ್ಭದಲ್ಲಿ ಈ ಪ್ರಶ್ನೆಗಳು ಯಾವ ಕಡೆಗೆ ಹೋಗುತ್ತವೆಯೆಂದು ಈಗ ಊಹಿಸುವುದು ಕಷ್ಟ ಆದರೆ ಉದಾರೀಕರಣದ ಪ್ರಕ್ರಿಯೆಯು ಈ ಮಾದರಿಯ ವಾಗ್ವಾದಗಳನ್ನು ಸಮತಲಗೊಳಿಸುವುದೇನೋ? ಈ ಪ್ರಮೇಯ ಮಾತ್ರ ಈಗ ಸಾಧ್ಯ. ಲೆನಿನ್ ಹೀಗೆ ಹೇಳಿರುವುದು ಗಮನಾರ್ಹ.

ಬಂಡವಾಳದ ಮಾಲಿಕತ್ವವೂ ಬಂಡವಾಳವನ್ನು ಉತ್ಪಾದನೆಗೆ ತೊಡಗಿಸುವುದೂ ಬೇರೆ ಬೇರೆಯಾಗಿರುವುದು, ಹಣ ಬಂಡವಾಳವು ಕೈಗಾರಿಕಾ ಅಥವಾ ಉತ್ಪಾದಕ ಬಂಡವಾಳದಿಂದ ಪ್ರತ್ಯೇಕವಾಗಿರುವುದು, ಹಣ ಬಂಡವಾಳದಿಂದ ಬರುವ ಆದಾಯದಿಂದಲೇ ಸಂಪೂರ್ಣವಾಗಿ ಜೀವನ ನಡೆಸುವ ಲಾಭಾಂಶ ಜೀವಿಯು ಉದ್ಯಮಿಯಿಂದಲೂ ಬಂಡವಾಳ ನಿರ್ವಹಣೆಯೊಂದಿಗೆ ನೇರವಾಗಿ ಸಂಬಂಧಿಸಿದ ಎಲ್ಲರಿಂದಲೂ ಪ್ರತ್ಯೇಕವಾಗಿರುವುದು. ಇದು ಒಟ್ಟಿನಲ್ಲಿ ಬಂಡವಾಳವಾದದ ವಿಶಿಷ್ಟ ಲಕ್ಷಣವಾಗಿದೆ. ಸಾಮ್ರಾಜ್ಯವಾದವು ಅಥವಾ ಹಣಕಾಸು

ಬಂಡವಾಳದ ಅಧಿಪತ್ಯವು ಬಂಡವಾಳವಾದದ ಎಂತಹ ಅತ್ಯುನ್ನತ ಘಟ್ಟವೆಂದರೆ ಅದರಲ್ಲಿ ಈ ಪ್ರತ್ಯೇಕತೆ ಅಪಾರ ಪ್ರಮಾಣಗಳನ್ನು ತಲುಪಿರುತ್ತದೆ. ಬಂಡವಾಳದ ಇತರೆಲ್ಲ ರೂಪಗಳಿಗೂ ಮೀರಿ ಹಣಕಾಸು ಬಂಡವಾಳದ ಸರ್ವೋಚ್ಚತೆ ಎಂದರೆ, ಲಾಭಾಂಶ ಜೀವಿಯ ಹಾಗೂ ಹಣಕಾಸು ಆಲಿಗಾರ್ಕಿಯ ಪ್ರಾಧಾನ್ಯ ಎಂದರ್ಥ; ಹಣಕಾಸು ರೀತ್ಯಾ "ಪ್ರಬಲ"ವಾದ ಸಣ್ಣ ಸಂಖ್ಯೆಯ ರಾಜ್ಯಗಳನ್ನು ಉಳಿದೆಲ್ಲ ರಾಜ್ಯಗಳ ಮಧ್ಯದಿಂದಲೂ ಪ್ರತ್ಯೇಕಗೊಳಿಸುವುದು ಎಂದರ್ಥ.

* ಅದೇ ಗ್ರಂಥ, 1911, 2, ಪು.285; 1913, 2, ಪು. 962.

* E. Agahd, ಪೂರ್ವೋಕ್ತ ಗ್ರಂಥ, ಪು. 202.

(ಮಾರ್ಕ್ಸ್ ಏಂಗೆಲ್ಸ್ – ಆಯ್ದ ಕೃತಿಗಳು 1988 ಸಂಪುಟ 2 ಪುಟ. 76–77)

ಜಾಗತೀಕರಣವು ಎರಡು ದೃಷ್ಟಿಯಿಂದ ಸಾಂಸ್ಕೃತಿಕ ವಲಯದ ಮೇಲೆ ಪ್ರಭಾವವನ್ನು ಬೀರುತ್ತದೆ. ಒಂದನೆಯದಾಗಿ, ಜಾಗತಿಕ ಅರ್ಥವ್ಯವಸ್ಥೆಯು ರೂಪುಗೊಳ್ಳುವುದರಿಂದ ರಾಷ್ಟ್ರೀಯ ಸಂಸ್ಕೃತಿಯ ಪ್ರಶ್ನೆಯೇ ಅರ್ಥಹೀನವಾಗುವುದು. ಮತ್ತು ಇದರಿಂದಲೇ ಪ್ರಾದೇಶಿಕ ಸಂಸ್ಕೃತಿಯ ನಾಶ ಹಾಗೂ ಇದರಿಂದ ಯಾವುದೇ ಆದರ್ಶವಾದಿ ತಾತ್ವಿಕತೆಯು ರೂಪುಗೊಳ್ಳದೇ ಹೋಗಿಬಿಡಬಹುದು. ಬೇರೊಂದು ಮಾದರಿಯಲ್ಲಿ ಹೇಳಬೇಕೆಂದರೆ ಉಪಭೋಗವಾದಿ ಸಂಸ್ಕೃತಿಯೊಂದು ಮಧ್ಯಮ ವರ್ಗದ ಮೇಲೆ ಬೀರುವ ಪರಿಣಾಮ ಹಾಗೂ ಜಾಗತಿಕ ಮಾರುಕಟ್ಟೆಯ ಪ್ರಭಾವ ಸಂಪತ್ತಿನ ಕ್ರೋಢೀಕರಣ ಮತ್ತು ಅದಕ್ಕೆ ಸಂಬಂಧಿಸಿದ ಆಮಿಷಗಳೇ ಮಧ್ಯಮ ವರ್ಗದ ಜೀವನಕ್ರಮವಾಗುವ ಅಪಾಯವು ಇದರಿಂದ ರೂಪುಗೊಳ್ಳುತ್ತದೆ. ಮಾರುಕಟ್ಟೆಯೇ ಮನಸ್ಸನ್ನು ನಿಯಂತ್ರಿಸಿದರೆ ಅದರಿಂದ ಯಾವುದೇ 'ಅಲೌಕಿಕ'ವೂ ಸಾಧ್ಯವಾಗದೇ ಹೋಗಬಹುದು, ಮಾರುಕಟ್ಟೆ ಕೇಂದ್ರಿತ ಜೀವನಕ್ರಮಕ್ಕೆ ಮತ್ತೊಂದು ಅರ್ಥದಲ್ಲಿ ಯಾವುದೇ ಸಾಂಸ್ಕೃತಿಕ ಸಂಘರ್ಷಗಳಿರುವುದಿಲ್ಲ. ಹಾಗೆ ನೋಡುವುದಿದ್ದರೆ ಬಂಡವಾಳವಾದಿ ಪ್ರಕ್ರಿಯೆಯು ಮನುಷ್ಯರ ಸಂವೇದನೆಯನ್ನೇ ಸ್ಥಳಾಂತರ ಮಾಡುತ್ತದೆ. ಲೌಕಿಕವಾಗಿ ಮನುಷ್ಯ ತನ್ನ ಐಷರಾಮಿ ಜೀವನಕ್ಕೆ ಯಾವೆಲ್ಲಾ ವಸ್ತುಗಳನ್ನು ಬಳಸುತ್ತಾನೆ ಎಂಬುದರಿಂದಲೇ ವ್ಯಕ್ತಿಯ ಸ್ಥಾನಮಾನಗಳು ನಿರ್ಧಾರವಾಗುತ್ತವೆ. ಮತ್ತು ಅದರಿಂದಲೇ ಸಾಮಾಜಿಕ ಮತ್ತು ಸಾಂಸ್ಕೃತಿಕ ಸ್ವರೂಪಗಳು ನಿರ್ಧಾರಗೊಳ್ಳುತ್ತವೆ. ಈಗಿನ ನಮ್ಮ ಸ್ಥಿತಿಗತಿಗಳು ಕೂಡಾ ಇದಕ್ಕಿಂತ ಬೇರೆಯದಲ್ಲ.

ಆಗಲೂ ಕೂಡಾ ನಾನು, ಪಾಶ್ಚಿಮಾತ್ಯ ನಾಗರಿಕತೆಗೆ ಬೆನ್ನು ತಿರುಗಿಸಿ ಅಂತ ಜನರಲ್ಲಿ ಕೇಳಿಕೊಂಡಿದ್ದೆ. ಆ ನಾಗರಿಕತೆಯು ಭಾರತವನ್ನು ನಾಶ ಮಾಡಿಬಿಡುವಂಥದು ಎಂದು 1908ರಲ್ಲಿ ಕಂಡುಕೊಂಡೆ. ಆಗ ನಾನು ನನ್ನ ಆಲೋಚನೆಗಳನ್ನು ಮೊತ್ತಮೊದಲನೆಯದಾಗಿ ಇಂಗ್ಲಿಷ್ ಮಿತ್ರರ ಜೊತೆ ಹಂಚಿಕೊಂಡೆ. ಅದೇ ವರ್ಷ, ಇಂಗ್ಲೆಂಡ್‌ನಿಂದ ದಕ್ಷಿಣ ಆಫ್ರಿಕಕ್ಕೆ ಮರಳುತ್ತಿರುವಾಗ ಅದನ್ನು ಬರೆದು 'ಇಂಡಿಯನ್ ಒಪಿನಿಯನ್' ಪತ್ರಿಕೆಯ ಅಂಕಣಗಳಲ್ಲಿ ಪ್ರಕಟಿಸಿದೆ. ಆಮೇಲೆ ಅವನ್ನೆಲ್ಲ ಕೂಡಿಸಿ, 'ಹಿಂದ್ ಸ್ವರಾಜ್' ಎಂಬ ಹೆಸರಲ್ಲಿ ಪುಸ್ತಕವಾಗಿ ಪ್ರಕಟಿಸಿದೆ. ಆ ಪುಸ್ತಕವನ್ನು ಗುಜರಾತಿ ಮೂಲದಲ್ಲಿ ಅಥವಾ ಅನುವಾದದಲ್ಲಿ ಓದುವಂತೆ ಶ್ರೀ ಬರಸಿಂಹರಾವ್‌ರನ್ನು ಬೇಡಿಕೊಳ್ಳುತ್ತೇನೆ. ಆ ಪುಸ್ತಕದ ಪುಟಗಳು, ನನ್ನ ಈಗಿನ ಚಟುವಟಿಕೆಗಳ ಬಗ್ಗೆ ಅವರಿಗೆ ನಿಚ್ಚಳವಾದ ಒಳನೋಟಗಳನ್ನು ಕೊಡಬಲ್ಲವು.

ಆದರೆ, ಪಾಶ್ಚಿಮಾತ್ಯ ನಾಗರಿಕತೆಯನ್ನು ತಿರಸ್ಕರಿಸಬೇಕು ಎಂದಾಗ, ಇಂಗ್ಲಿಷರದ್ದೆಲ್ಲವನ್ನೂ ತ್ಯಾಜ್ಯಮಾಡಬೇಕೆಂದಾಗಲಿ ಮತ್ತು ಬ್ರಿಟಿಷರನ್ನು ದ್ವೇಷಿಸಬೇಕೆಂದಾಗಲಿ ನಾನು ಹೇಳಿರಲಿಲ್ಲ, ಇವತ್ತು ಕೂಡಾ ಹಾಗೆ ಹೇಳುವುದಿಲ್ಲ. ಬೈಬಲ್ ಬಗ್ಗೆ ನನಗೆ ಪೂಜ್ಯ ಭಾವನೆಯಿದೆ. ಕ್ರಿಸ್ತನ 'ಪರ್ವತೋಪದೇಶ' (ಸೆರ್ಮನ್ ಆನ್ ದಿ ಮೌಂಟ್) ಇವತ್ತು ಕೂಡಾ ನನ್ನಲ್ಲಿ ದೈವಾನುಗ್ರಹವನ್ನು ತುಂಬಿಬಿಡುತ್ತದೆ. ಅದರ ಪದ್ಯಗಳ ಮಾರ್ದವವು ಇವತ್ತು ಕೂಡಾ ನನ್ನ ಆತ್ಮದ ಆಕ್ರಂದನವನ್ನು ತಣಿಸಬಲ್ಲದಾಗಿದೆ. ಕಾರ್ಲೈಲ್ ಮತ್ತು ರಸ್ಕಿನ್‌ರ ಕೆಲವು ಬರವಣಿಗೆಗಳನ್ನು ಈಗ ಕೂಡಾ ನಾನು ಪ್ರೀತಿಯಿಂದ ಓದುತ್ತೇನೆ. ಅನೇಕ ಇಂಗ್ಲೀಷ್ ಪದ್ಯಸೂಕ್ತಿಗಳ ಅರ್ಥ ಮತ್ತು ಇಂಪು ಈಗಲೂ ನನಗೆ 'ಅಮೃತವೇ'. ಇಷ್ಟಾಗಿಯು ಪಾಶ್ಚಿಮಾತ್ಯ ನಾಗರಿಕತೆಯನ್ನು ನಿರಾಕರಿಸುವುದು ಸೂಕ್ತ, ಹಾಗೆ ಮಾಡಬೇಕಾದ್ದು ನಮ್ಮ ಧರ್ಮ ಅಂತಲೇ ನನ್ನ ನಂಬಿಕೆ.

ಪಾಶ್ಚಿಮಾತ್ಯ ನಾಗರಿಕತೆ ಎಂದರೆ, ಆಧುನಿಕ ಕಾಲದಲ್ಲಿ ಪಶ್ಚಿಮದ ಜನರು ಅಪ್ಪಿಕೊಂಡಿರುವ ಆದರ್ಶಗಳು ಮತ್ತು ಆ ಆದರ್ಶಗಳ ಸಾಧನೆಗಾಗಿ ಅವರು ನಡೆಸುತ್ತಿರುವ ಅಸಮ ಸಾಹಸಗಳು ಎಂದು ನನ್ನ ಅರ್ಥ. ಪಾಶವೀ ಶಕ್ತಿಯೇ ಸರ್ವೋನ್ನತವೆಂದು ಭಾವಿಸುವುದು, ಹಣವನ್ನು ದೇವರೆಂದು ಪೂಜಿಸುವುದು, ಪ್ರಾಪಂಚಿಕ ಸೌಖ್ಯದ ಗಳಿಕೆಗಾಗಿಯೇ ಹೆಚ್ಚಿನ ವೇಳೆಯನ್ನೆಲ್ಲ ಖರ್ಚು ಮಾಡುವುದು, ಎಲ್ಲ ಬಗೆಯ ಪ್ರಾಪಂಚಿಕ ಲಾಲಸೆಗಳ

ಹುಡುಕಾಟಕ್ಕಾಗಿ ಅಮೋಘ ಸಾಹಸಗಳನ್ನು ಕೈಗೊಳ್ಳುವುದು, ಯಂತ್ರಶಕ್ತಿಯನ್ನು ದ್ವಿಗುಣ-ಬಹುಗುಣ ವರ್ಧಿಸಿಕೊಳ್ಳುವ ತುದಿಯಿಲ್ಲದ ಪ್ರಯತ್ನದಲ್ಲಿ ಮಾನಸಿಕ ಶಕ್ತಿಯನ್ನು ವ್ಯಯಿಸಿಕೊಳ್ಳುವುದು, ವಿನಾಶಕರಿ ಸಾಧನಗಳ ಶೋಧಕ್ಕಾಗಿ ಕೋಟ್ಯಂತರ ಹಣವನ್ನು ವೆಚ್ಚ ಮಾಡುವುದು, ಯುರೋಪ್ ಹೊರಗಿನ ಜನಜನಾಂಗಗಳನ್ನೆಲ್ಲಾ ನೈತಿಕ ಶತತ್ವದಿಂದ ಕೀಳೆಂದು ಪರಿಗಣಿಸುವುದು ಇಂಥ ಈ ನಾಗರಿಕತೆಯು, ನನ್ನ ದೃಷ್ಟಿಯಲ್ಲಿ, ಸಂಪೂರ್ಣ ನಿರಾಕರಣೆ ಮಟ್ಟಿಗೇ ಯೋಗ್ಯವಾದದ್ದು.
(ಕೆ.ವಿ.ಸುಬ್ಬಣ್ಣ 1998 ಸ್ವರಾಜ್ಯದ ಹಾದಿ ಹೆಜ್ಜೆಗಳು ಪುಟ. 27-28)

ಜಾಗತೀಕರಣವು ಸಮಾಜ ಮತ್ತು ಸಂಸ್ಕೃತಿಯ ವಾಗ್ವಾದಗಳ ವಿಷಯಗಳಲ್ಲಿ ಆಸಕ್ತವಾದುದಲ್ಲ. ಹೀಗೆ ನೋಡುವುದಿದ್ದರೆ ಸಾಹಿತ್ಯವನ್ನು ಕುರಿತು ಜಾಗತೀಕರಣ ಮಾತಾಡಲು ಸಾಧ್ಯವೇ ಇಲ್ಲ. ಜಾಗತೀಕರಣ ಮಾತಾಡುವುದೇ ಆರ್ಥಿಕವಾದ ಪರಿಭಾಷೆಯನ್ನು. ಇದರಿಂದಾಗಿ ಇದರ ಗರ್ಭದಲ್ಲಿರುವುದು ಆರ್ಥಿಕ ವಿನಿಮಯ ಮತ್ತು ಕ್ರೋಢೀಕರಣ. ಯಾವುದಕ್ಕೆ ವಿನಿಮಯ ಮೌಲ್ಯ ಹೆಚ್ಚಿದೆಯೋ ಆ ಮಾದರಿಯ ಉತ್ಪಾದನೆಗಳಿಗೆ ಮಾತ್ರ ಹೆಚ್ಚು ಬೇಡಿಕೆಯಿರುತ್ತದೆ. ವಾಸ್ತವವಾಗಿ ಮಾರುಕಟ್ಟೆ ಸಂಸ್ಕೃತಿಯೆನ್ನುವುದೇ ಈ ಮಾದರಿಯ ವಿನಿಮಯ ಮೌಲ್ಯಗಳನ್ನು ಒಳಗೊಂಡಿದೆ. ಮಾರುಕಟ್ಟೆಯಲ್ಲಿ ಯಾವ ಸರಕುಗಳಿಗೆ ಹೆಚ್ಚು ಬೇಡಿಕೆಯಿರುತ್ತದೋ ಅವು ಮಾತ್ರ ಹೆಚ್ಚು ಉತ್ಪತ್ತಿಯಾಗುತ್ತವೆ ಮತ್ತು ಈ ತನಕದ ನಮ್ಮ ಅಧ್ಯಯನ ಕ್ರಮಗಳು ಹೇಗಾಗಿವೆಯೆಂದರೆ, ಯಾವುದನ್ನು ಸಾಂಸ್ಥಿಕ ಮೌಲ್ಯಗಳು ಶ್ರೇಷ್ಠವೆಂದು ಕರೆದಿವೆಯೋ ಅವುಗಳ ಅಧ್ಯಯನ ಮಾತ್ರ ಹೆಚ್ಚಿವೆ. ಸಂಸ್ಕೃತಿ ಅಧ್ಯಯನವೆಂದರೆ ನಿರ್ದಿಷ್ಟ ಜನರಿಂದ ನಿರ್ದಿಷ್ಟ ಜನರಿಗೆ ಮಾತ್ರ ಸಂಬಂಧಿಸಿದ ಕಲಿಕೆಯ ಕ್ರಮವೆಂದು ಮಾತ್ರವೇ ಪರಿಭಾವಿಸಲಾಗಿದೆ. ಹೀಗಾಗಿ ಸರಕು ಎಂಬುದಕ್ಕೆ ಬಹಳ ಸೀಮಿತವಾದ ಅರ್ಥ ಮಾತ್ರವೇ ಇದೆ. ಸಂಸ್ಕೃತಿ ಎಂಬುದರ ಅರ್ಥವನ್ನು ಈ ಕಾರಣಕ್ಕೆ ತುಂಬಾ ಕಡಿತಗೊಳಿಸಲಾಗಿದೆ. ಜಾಗತೀಕರಣವು ಈ ಪರಿಸ್ಥಿತಿಯನ್ನು ಇನ್ನಷ್ಟು ಬಿಗಡಾಯಿಸುವ ಸಾಧ್ಯತೆಯಂತೂ ಇದ್ದೇ ಇದೆ. ಮಾರ್ಕ್ಸ್‌ವಾದದಲ್ಲಿ ಬರುವ ಮಿಗುತಾಯ ಮೌಲ್ಯದ ಪ್ರಶ್ನೆಯು ಕೂಡಾ ಅಷ್ಟೇ ಗಂಭೀರವಾದುದು.

ಮಾರ್ಕ್ಸ್‌ರವರಿಗೆ ಮುನ್ನ ಕ್ಲಾಸಿಕಲ್ ರಾಜಕೀಯ ಅರ್ಥಶಾಸ್ತ್ರವು ಬಂಡವಾಳ ಶಾಹಿ ದೇಶಗಳಲ್ಲೆಲ್ಲ ಅತ್ಯಂತ ಹೆಚ್ಚು

ಅಭಿವೃದ್ಧಿಗೊಂಡಿದ್ದ ಇಂಗ್ಲೆಂಡಿನಲ್ಲಿ ವಿಕಾಸಗೊಂಡಿತು. ಆರ್ಥಿಕ ಪದ್ಧತಿಯ ಪರಿಶೋಧನೆ ನಡೆಸಿದ ಆಡಂ ಸ್ಮಿತ್ ಹಾಗೂ ಡೇವಿಡ್ ರಿಕಾರ್ಡೊರವರು ಮೌಲ್ಯದ ಶ್ರಮ ಸಿದ್ಧಾಂತಕ್ಕೆ ಅಡಿಪಾಯ ಹಾಕಿಕೊಟ್ಟರು. ಮಾರ್ಕ್ಸ್‌ರವರು ಅವರ ಕಾರ್ಯವನ್ನು ಮುಂದುವರಿಸಿದರು. ಅವರು ಈ ಸಿದ್ಧಾಂತದ ಸಮರ್ಪಕತೆಯನ್ನು ನಿಷ್ಠುರತೆಯಿಂದ ಸಾಧಿಸಿ ತೋರಿದರು ಮತ್ತು ಅದನ್ನು ಸುಸಂಗತವಾಗಿ ಅಭಿವೃದ್ಧಿಗೊಳಿಸಿದರು. ಪ್ರತಿಯೊಂದು ವಸ್ತುವಿನ ಮೌಲ್ಯವೂ ಅದರ ಉತ್ಪಾದನೆಯಲ್ಲಿ ಖರ್ಚು ಮಾಡಲಾದ ಸಾಮಾಜಿಕವಾಗಿ ಅವಶ್ಯವಾದ ಶ್ರಮ ಸಮಯದ ಪ್ರಮಾಣದಿಂದ ನಿರ್ಧರಿಸಲ್ಪಡುತ್ತದೆ ಎಂದು ಅವರು ತೋರಿಸಿಕೊಟ್ಟರು.

ಬೂರ್ಷ್ವಾ ಅರ್ಥಶಾಸ್ತ್ರಜ್ಞರು ವಸ್ತುಗಳ ನಡುವೆ ಸಂಬಂಧವನ್ನು ಕಂಡು ಕೊಂಡಲ್ಲಿ (ಒಂದು ವಸ್ತುವನ್ನು ಮತ್ತೊಂದಕ್ಕಾಗಿ ವಿನಿಮಯ ಮಾಡಿಕೊಳ್ಳುವುದು) ಮಾರ್ಕ್ಸ್‌ರವರು ಜನರ ನಡುವೆ ಸಂಬಂಧವನ್ನು ತೋರಿಸಿಕೊಟ್ಟರು. ವಸ್ತುಗಳ ವಿನಿಮಯವು ಮಾರುಕಟ್ಟೆಯ ಮೂಲಕ ವೈಯಕ್ತಿಕ ಉತ್ಪಾದಕರ ನಡುವಿನ ಬಾಂಧವ್ಯವನ್ನು ವ್ಯಕ್ತಪಡಿಸುತ್ತದೆ. ಈ ಬಾಂಧವ್ಯವು ಹೆಚ್ಚು ಹೆಚ್ಚು ನಿಕಟವಾಗುತ್ತಿದೆ, ವೈಯಕ್ತಿಕ ಉತ್ಪಾದಕರ ಇಡೀ ಆರ್ಥಿಕ ಜೀವನವನ್ನು ಒಂದು ಅಖಂಡ ಘಟಕವನ್ನಾಗಿ ಅವಿಭಾಜ್ಯವಾಗಿ ಸಂಬಂಧಿಸುತ್ತಿದೆ, ಎಂಬುದನ್ನು ಹಣವು ಸೂಚಿಸುತ್ತದೆ. ಈ ಬಾಂಧವ್ಯವು ಮತ್ತಷ್ಟು ಬೆಳೆಯುವುದನ್ನು, ಮಾನವನ ಶ್ರಮಶಕ್ತಿಯು ಒಂದು ಸರಕಾಗುವುದನ್ನು, ಬಂಡವಾಳವು ಸೂಚಿಸುತ್ತದೆ. ಕೂಲಿ ಕಾರ್ಮಿಕನು ತನ್ನ ಶ್ರಮಶಕ್ತಿಯನ್ನು ಭೂಮಿಯ, ಕಾರ್ಖಾನೆಗಳ ಹಾಗೂ ಶ್ರಮ ಸಾಧನಗಳ ಮಾಲೀಕನಿಗೆ ಮಾರುತ್ತಾನೆ. ಕಾರ್ಮಿಕನು ದಿನದಲ್ಲಿ ಒಂದು ಭಾಗವನ್ನು ತನ್ನನ್ನೂ ತನ್ನ ಕುಟುಂಬವನ್ನೂ ಪೋಷಿಸಿಕೊಂಡಿರಲು ತಗಲುವ ಖರ್ಚನ್ನು (ಕೂಲಿಯನ್ನು) ಸಂಪಾದಿಸುವುದರಲ್ಲಿ ಕಳೆಯುತ್ತಾನೆ. ದಿನದ ಮತ್ತೊಂದು ಭಾಗವನ್ನು ಅವನು ಸಂಭಾವನೆಯಿಲ್ಲದೆಯೇ ಕೆಲಸ ಮಾಡುತ್ತ ಕಳೆಯುತ್ತಾನೆ, ಬಂಡವಾಳಗಾರನಿಗಾಗಿ ಮಿಗುತಾಯ ಮೌಲ್ಯವನ್ನು, ಲಾಭದ ಆಕರವನ್ನು, ಬಂಡವಾಳಶಾಹಿ ವರ್ಗದ ಸಂಪತ್ತಿನ ಆಕರವನ್ನು, ಸೃಜಿಸುತ್ತಾನೆ.

ಮಿಗುತಾಯ ಮೌಲ್ಯದ ಸಿದ್ಧಾಂತವೇ ಮಾರ್ಕ್ಸ್‌ರವರ ಆರ್ಥಿಕ ಸಿದ್ಧಾಂತದ ಮೂಲಾಧಾರವಾಗಿದೆ.

(ಮಾರ್ಕ್ಸ್ ಏಂಗೆಲ್ಸ್ – ಆಯ್ದ ಕೃತಿಗಳು 1990 ಸಂಪುಟ 1 ಪುಟ. 31–32)

ಜಾಗತೀಕರಣದ ಮುಖ್ಯ ಗುರಿ ಬಡತನ ರೇಖೆಯ ಕೆಳಗೆ ವಾಸಿಸುತ್ತಿರುವ ಜನರನ್ನು ಅಭಿವೃದ್ಧಿಯ ವಾಹಿನಿಯ ಒಳಗಡೆಗೆ ತರುವುದು ಅಲ್ಲ. ಈ ಕಾರಣಕ್ಕಾಗಿಯೇ ಅದು ಹೂಡುವ ಉದ್ಯಮಗಳಿಗೆ ನಿರ್ದಿಷ್ಟ ಗುರಿಯಿದೆ. ಈ ಉದ್ದಿಮೆಯಲ್ಲಿ ಸಾಹಿತ್ಯವಿರುವುದು ಕಷ್ಟಸಾಧ್ಯ. ಮತ್ತು ಸಮೂಹ ಮಾಧ್ಯಮಗಳನ್ನು ತನ್ನ ವರ್ಚಸ್ಸಿಗೆ ಮತ್ತು ಲಾಭದ ಅಗತ್ಯಕ್ಕೆ ತಕ್ಕಂತೆ ಬಳಸಲು ಒಂದು ವ್ಯೂಹವನ್ನು ರಚಿಸುತ್ತದೆ. ಜಾಗತೀಕರಣದ ಪರವಿರುವ ಮಾಧ್ಯಮಗಳು; ಬುದ್ಧಿಜೀವಿಗಳು ಜಾಗತೀಕರಣದ ಕಠೋರ ಅನುಭವಗಳ ಕುರಿತು ಮಾತಾಡದೇ ಇರುವುದಕ್ಕೆ ಬಹಳ ಕಾರಣವಿರಬಹುದು. ಆದರೆ, ಜಾಗತೀಕರಣದ ಪ್ರಕ್ರಿಯೆಗಳಿಂದ ಮೋಸಹೋದ ಜನರ ಬಗ್ಗೆ, ಅವರ ಹಸಿವು ಮತ್ತು ಬಡತನದ ಬಗ್ಗೆ ಈ ಮಾದರಿಯ ಬುದ್ಧಿಜೀವಿಗಳು ಎಷ್ಟು ಮಾತಾಡಿದ್ದಾರೆ? ಜಾಗತೀಕರಣದಿಂದ ಯಾರಿಗೆ ಲಾಭ ಮತ್ತು ಯಾರಿಗೆ ನಷ್ಟ ಎನ್ನುವ ಲೆಕ್ಕಾಚಾರಗಳು ಇಲ್ಲಿ ಮುಖ್ಯವಲ್ಲ. ಜಾಗತೀಕರಣವು ಬಹಳ ಆಕರ್ಷಕವಾಗಿ ಹೇಳುವ 'ಅಭಿವೃದ್ಧಿ', 'ಜಾಗತಿಕ ಸಮಾನತೆ', 'ಮುಕ್ತತೆ' ಎನ್ನುವುದು ಎಷ್ಟು ಟೊಳ್ಳಾದುದು ಎಂದು ಈಗಾಗಲೇ ಜಾಗತೀಕರಣವನ್ನು ರತ್ನಗಂಬಳಿ ಹಾಸಿ ಸ್ವಾಗತಿಸಿದ ದೇಶಗಳ ಅರಿವಿಗೆ ಬಂದಿದೆ. ಒಂದು ರಾಷ್ಟ್ರದ ಒಳಗಡೆಗೆ ಇರಬೇಕಾದ ವ್ಯಾವಹಾರಿಕ ನಿಯಮಗಳನ್ನು ಮುರಿದಾಗ ಆಗುವ ಪ್ರಮುಖ ತೊಂದರೆಯೆಂದರೆ ಆಮದು ಮತ್ತು ರಫ್ತು ವ್ಯಾಪಾರಗಳ ಮೇಲಿನ ಅನಿರ್ಬಂಧಿತ ಏರಿಳಿತ. ಈ ಏರಿಳಿತದಿಂದ ಸಹಜವಾಗಿಯೇ ಸಣ್ಣ ಹಿಡುವಳಿದಾರರು, ಕೃಷಿ ಕಾರ್ಮಿಕರು ನೆಲಕಚ್ಚ ಬೇಕಾಗುತ್ತದೆ. ಜಾಗತೀಕರಣದ ಒಂದು ಭಾಗವಾಗಿ ಬಂದ 'ಖಾಸಗೀಕರಣ'ವೂ ಇದೇ ಹುನ್ನಾರವನ್ನು ಒಳಗೊಂಡಿದೆ. 'ಖಾಸಗೀಕರಣ'ವನ್ನೇ ನೋಡಿ; ಇದರಿಂದ ಸಾಮರ್ಥ್ಯ ಹೆಚ್ಚುತ್ತದೆ. ಸರಕಾರಿ ಉದ್ದಿಮೆಗಳಲ್ಲಿ ಇಲ್ಲದೇ ಇರುವ ನಿಯತ್ತು ಖಾಸಗೀಕರಣಕ್ಕೆ ಒಳಗಾದ ಕಂಪೆನಿಗಳ ಕಾರ್ಮಿಕರಿಗೆ ಇರುತ್ತದೆಯೆಂದು ವಾದವನ್ನು ಮಂಡಿಸುವ ಅರ್ಥಶಾಸ್ತ್ರಜ್ಞರ ಕೆಲವು ವಾದಗಳು ಸಾಮಾಜಿಕ ಅಸಮಾನತೆಯನ್ನು ಗಮನಿಸಲು ಹೋಗುವುದಿಲ್ಲ. ಇದರಿಂದಲೇ ಕೆಳವರ್ಗದ ಜನರು, ದಲಿತರು ನಿಜವಾಗಿಯೂ ಮುಕ್ತಿಹೊಂದಲು ಸಾಧ್ಯವೇ? ಸಾಂಸ್ಕೃತಿಕವಾಗಿ ಮೀಸಲಾತಿಯು ಅಗತ್ಯವಿರುವ ನಮ್ಮ ಸಾಮಾಜಿಕ ಸನ್ನಿವೇಶದಲ್ಲಿ ನಿಜವಾಗಿಯೂ 'ಖಾಸಗೀಕರಣ' ಶೋಷಿತ ಜನತೆಗೆ ಮುಕ್ತಿಯನ್ನು ನೀಡಲು ಸಾಧ್ಯವೇ? ಜಾಗತೀಕರಣದಿಂದ 'ದಲಿತರು' ವಿಮೋಚನೆಗೆ ಒಳಗಾಗಬಲ್ಲರು ಎಂದು ತಿಳಿಯುವ ವಿದ್ವಾಂಸರು ಅಂತರಾಳದಲ್ಲಿ ಹೇಗೆ ಜನ ವಿರೋಧಿಯಾಗಬಲ್ಲರು

ಮತ್ತು ತಮ್ಮ ಸ್ವಂತ ಸುಖ ನೋಡಬಲ್ಲರು ಎಂಬುದಕ್ಕೆ ಉದಾಹರಣೆಗಳಿವೆ. ಗಾಂಧಿ ಈ ಅಪಾಯವನ್ನು ಗುರುತಿಸಿದ್ದರು:

> ಯಾವಾಗ ಹಳ್ಳಿಗಳ ಶೋಷಣೆಯು ನಿಲ್ಲುವುದೋ ಆವಾಗ ಮಾತ್ರ ಹಳ್ಳಿಗಳ ಅಭ್ಯುದಯವು ಸಾಧ್ಯವಿದೆ. ದೊಡ್ಡ ಪ್ರಮಾಣದಿಂದ ಔದ್ಯೋಗೀಕರಣವನ್ನು ಕೈಕೊಂಡರೆ ಸ್ಪರ್ಧೆ ಹಾಗೂ ಪೇಟೆಗಳನ್ನು ದೊರಕಿಸುವ ಸಮಸ್ಯೆಗಳು ತಲೆದೋರುವುದರಿಂದ ಪ್ರತ್ಯಕ್ಷವಾಗಲೀ ಅಪ್ರತ್ಯಕ್ಷವಾಗಲೀ ಅದು ಅವಶ್ಯಕವಾಗಿ ನಮ್ಮನ್ನು ಶೋಷಣೆಯ ದಾರಿಗೆ ಒಯ್ಯುತ್ತದೆ. ಆದುದರಿಂದ ಹಳ್ಳಿಯ ಸ್ವಯಂಪೂರ್ಣ ವಾಗುವಂತೆಯೂ ತನ್ನ ಉಪಯೋಗಕ್ಕಾಗಿ ಮಾತ್ರ ಉತ್ಪಾದನೆ ಮಾಡುವಂತೆಯೂ ನಾವು ನಮ್ಮ ಲಕ್ಷ್ಯವನ್ನೆಲ್ಲ ಕೇಂದ್ರೀಕರಿಸಬೇಕು. ಹಳ್ಳಿಯ ಕೈಗಾರಿಕೆ ಈ ವೈಶಿಷ್ಟ್ಯವನ್ನು ಕಾಯ್ದುಕೊಂಡಲ್ಲಿ ಹಳ್ಳಿಗರು ತಾವೇ ತಯಾರಿಸಿಕೊಳ್ಳಲು ಸಾಧ್ಯವಿರುವ ಮತ್ತು ಉಪಯೋಗಿಸಲು ಶಕ್ಯವಿರುವ ಆಧುನಿಕ ಯಂತ್ರಗಳನ್ನು ಕೂಡ ಉಪಯೋಗಿಸಲು ನನ್ನ ಆಕ್ಷೇಪವಿಲ್ಲ. ಇಂಥ ಯಂತ್ರಗಳನ್ನು ಹೆರವರ ಶೋಷಣೆಗಾಗಿ ಮಾತ್ರ ಉಪಯೋಗಿಸಕೂಡದು.
>
> ಬಂಡವಾಳ ಹಾಗೂ ದುಡಿತ
>
> ಬಂಡವಾಳಗಾರರು ಮತ್ತು ಕೂಲಿಕಾರರು ಮೊದಲಾದವರಲ್ಲಿ ಸರಿಯಾದ ಹಿತ ಸಂಬಂಧಗಳನ್ನುಂಟು ಮಾಡಬೇಕೆಂಬ ಅಭಿಪ್ರಾಯದವನು ನಾನಾಗಿದ್ದೇನೆ. ಒಬ್ಬರಿಗಿಂತ ಇನ್ನೊಬ್ಬರು ಶ್ರೇಷ್ಠರಾಗಬೇಕೆಂದು ನಾನು ಬಯಸುವುದಿಲ್ಲ. ಬಂಡವಾಳ ಹಾಗೂ ದುಡಿತ ಇವುಗಳಲ್ಲಿ ನೈಸರ್ಗಿಕವಾದ ವಿರೋಧವಿದೆ. ಎಂದು ನಾನು ಭಾವಿಸುವುದಿಲ್ಲ. ಯ. ಇ. 1925
>
> (ಸರ್ವೋದಯ 1960 ಮೋ. ಕ ಗಾಂಧಿ ಪುಟ. 69–70)

ಜಾತಿಪದ್ಧತಿಗೂ ಕೃಷಿಕೇಂದ್ರಿತ ಸಮಾಜಕ್ಕೂ ಒಂದು ಸಂಬಂಧವಿದೆ. ಮತ್ತು ಚಾರಿತ್ರಿಕ ಅಗತ್ಯಕ್ಕೆ ಅನುಸಾರವಾಗಿ ಜಾತಿಯ ಶ್ರೇಣೀಕರಣದ ವ್ಯವಸ್ಥೆಯು ಪ್ರಾದೇಶಿಕ ಹಾಗೂ ಭೂ ಯಜಮಾನಿಕೆಗೆ ಅನುಸಾರವಾಗಿ ಬೇರೆ ಬೇರೆಯಾಗುತ್ತಾ ಬಂದಿದೆ. ಸ್ವಾತಂತ್ರ್ಯದ ಅನಂತರದಲ್ಲಿ ಪ್ರಜಾಪ್ರಭುತ್ವವಾದಿ ಸರಕಾರವು ಜಾತಿ ಸಂರಚನೆಯನ್ನು ಒಡೆದಿದೆ. ಇದರಿಂದಾಗಿ ಹಿಂದಿನ ದಲಿತರ ಸಮಸ್ಯೆ ಮತ್ತು ಇಂದಿನ ದಲಿತರ ಸಮಸ್ಯೆ ಬೇರೆ ಬೇರೆಯಾಗಿವೆ. ಹಿಂದಿನ ದಲಿತರಿಗೆ ಭೂ ಯಜಮಾನಿಕೆ ಇರಲಿಲ್ಲ. ಮತ್ತು ಅವರು ಅಸ್ಪೃಶ್ಯತೆಯಿಂದ ನರಳಿದ್ದಾರೆ. ಇಂದಿನ ದಲಿತರ ಸಮಸ್ಯೆ ಭೂ ಯಜಮಾನಿಕೆ ಮತ್ತು ಅಸ್ಪೃಶ್ಯತೆಯಲ್ಲ. ಹೀಗಾಗಿ ಈಗ ಕನ್ನಡದಲ್ಲಿ ಬಹಳ ಸುಲಭವಾಗಿ

ಬಳಸುವ 'ಪುರೋಹಿತಶಾಹಿ' ಸಂಸ್ಕೃತಿ ಮತ್ತು ಶೂದ್ರ ಸಂಸ್ಕೃತಿ' ಎಂಬುದನ್ನು ಪರಿಶೀಲಿಸಬೇಕಾದ ಅಗತ್ಯವಿದೆ. ದಲಿತರು-ಶೂದ್ರರು ಎಂಬ ಚೌಕಟ್ಟಿನೊಳಗೆ ಅಪಾಯವಿದೆ. ಮತ್ತು ದಲಿತರು ಪುರೋಹಿತಶಾಹಿ ಸಂಸ್ಕೃತಿಯೆಂಬ ಪದವು ಹೆಚ್ಚು ಆಕರ್ಷಕವಾಗಿರುವುದು ಲೋಹಿಯಾ ಮಾದರಿಯ ಚಿಂತಕರಿಂದ. ಆದುದರಿಂದಲೇ ಈ ಮಾದರಿಯ ವೈಚಾರಿಕ ಚೌಕಟ್ಟಿನಲ್ಲಿ ಮುಂದಕ್ಕೆ ಹೋದರೆ ಹೆಚ್ಚಿನ ಚರ್ಚೆ ಸಾಧ್ಯವಿಲ್ಲ. ಬಂಡವಾಳಶಾಹಿ ವ್ಯವಸ್ಥೆಯಿಂದ ದಲಿತರಿಗೆ ನಿಜವಾಗಿಯೂ ಅನುಕೂಲವಾಗಿಲ್ಲ. ಈ ಕುರಿತು ಲೆನಿನ್ ವಾದದಲ್ಲಿ ಕುತೂಹಲಕಾರಿಯಾದ ಚರ್ಚೆಯಿದೆ.

> ಬಂಡವಾಳವಾದಕ್ಕೂ ಕಮ್ಯೂನಿಸಂಗೂ ನಡುವೆ ಒಂದು ನಿರ್ದಿಷ್ಟ ಸ್ಥಿತ್ಯಂತರದ ಕಾಲಾವಧಿ ಇರುತ್ತದೆ. ಅದು ಸಾಮಾಜಿಕ ಆರ್ಥಿಕತೆಯ ಈ ಎರಡೂ ರೂಪಗಳ ಲಕ್ಷಣಗಳನ್ನೂ ಗುಣಗಳನ್ನೂ ಒಂದುಗೂಡಿಸಿಕೊಂಡಿರಬೇಕು, ಎಂಬ ಬಗೆಗೆ ಸೈದ್ಧಾಂತಿಕವಾಗಿ ಯಾವ ಸಂಶಯವೂ ಇರಲು ಸಾಧ್ಯವಿಲ್ಲ. ಈ ಸ್ಥಿತ್ಯಂತರ ಕಾಲಾವಧಿಯು ಮರಣಸ್ನಾನ ಬಂಡವಾಳವಾದಕ್ಕೂ ಹುಟ್ಟುತ್ತಲಿರುವ ಕಮ್ಯೂನಿಸಂಗೂ ನಡುವಿನ ಅಥವಾ ಬೇರೆ ಮಾತುಗಳಲ್ಲಿ ಹೇಳುವುದಾದರೆ, ಪರಾಭವಗೊಂಡ ಆದರೆ ನಾಶಗೊಳ್ಳದಿರುವ ಬಂಡವಾಳವಾದಕ್ಕೂ ಜನ್ಮ ತಾಳಿರುವ ಆದರೆ ಇನ್ನೂ ತುಂಬ ನಿಶ್ಶಕ್ತವಾಗಿರುವ ಕಮ್ಯೂನಿಸಂಗೂ ನಡುವಿನ – ಹೋರಾಟದ ಕಾಲಾವಧಿಯಾಗಿರಬೇಕು.
>
> ಈ ಸ್ಥಿತ್ಯಂತರ ಕಾಲಾವಧಿಯ ಲಕ್ಷಣಗಳನ್ನು ವಿಶಿಷ್ಟವಾಗುಳ್ಳ ಒಂದು ಇಡೀ ಚಾರಿತ್ರಿಕ ಕಾಲಘಟ್ಟವು ಅವಶ್ಯ ಎಂಬುದು ಮಾರ್ಕ್ಸ್‌ವಾದಿಗಳಿಗಷ್ಟೇ ಅಲ್ಲ ಆದರೆ ಬೆಳವಣಿಗೆಯ ಸಿದ್ಧಾಂತವನ್ನು ಯಾವುದೇ ಪ್ರಮಾಣದಲ್ಲಾಗಲೀ ತಿಳಿದಿರುವ ಯಾವುದೇ ಸುಶಿಕ್ಷಿತ ವ್ಯಕ್ತಿಗೂ ಸಹ ಸ್ವಯಂಸ್ಪಷ್ಟವಾಗಿರಬೇಕು, ಆದರೂ ಸಮಾಜವಾದಕ್ಕೆ ಪರಿವರ್ತನೆಯ ವಿಷಯಕ್ಕೆ ಸಂಬಂಧಿಸಿ ನಾವು ಇಂದಿನ ಪೆಟಿ ಬೂರ್ಷ್ವಾ ಪ್ರಜಾಪ್ರಭುತ್ವವಾದಿಗಳಿಂದ (ಸೋಗಿನ ಸಮಾಜವಾದಿ ತಲೆಪಟ್ಟಿ ಕಟ್ಟಿಕೊಂಡಿದ್ದರೂ ಮಾಕ್ಡೊನಾಲ್ಡ್, ಜಾನ್ ಲೊಂಗೆ, ಕೌತ್ಸ್ಕಿ ಹಾಗೂ ಫ್ರೀಡ್ರಿಹ್ ಆಡ್ಲೆರ್‌ರವಂಥ ವ್ಯಕ್ತಿಗಳನ್ನೂ ಒಳಗೊಂಡು ದ್ವಿತೀಯ ಇಂಟರ್ ನ್ಯಾಷನಲ್ ನ ನಾಯಕರೆಲ್ಲ ಅಂತಹವರೇ ಆಗಿದ್ದಾರೆ) ಕೇಳುತ್ತಿರುವ ಮಾತುಗಳೆಲ್ಲ ಈ ಸ್ವಯಂಸ್ಪಷ್ಟ ಸತ್ಯಾಂಶದ ಬಗೆಗೆ ಸಂಪೂರ್ಣ ಉಪೇಕ್ಷೆಯ ಲಕ್ಷಣವನ್ನೇ ಹೊಂದಿವೆ. ವರ್ಗ ಹೋರಾಟದ ಬಗೆಗೆ ಹೇವರಿಕೆ, ಅದನ್ನು ತಪ್ಪಿಸುವ ಅವರ ಕನಸುಗಳು, ಚೂಪಾದ ಮೂಲೆಗಳನ್ನು

> **ತೆಗೆದುಹಾಕುವ, ರಾಜಿ ಮಾಡಿಸುವ, ನವುರು ಮಾಡುವ ಅವರ ಯತ್ನಗಳು. ಇವು ಪೆಟಿ ಬೂರ್ಷ್ವಾ ಪ್ರಜಾಪ್ರಭುತ್ವವಾದಿಗಳ ವಿಶಿಷ್ಟ ಲಕ್ಷಣಗಳಾಗಿವೆ. ಆದ್ದರಿಂದ ಅಂತಹ ಪ್ರಜಾಪ್ರಭುತ್ವವಾದಿಗಳು ಬಂಡವಾಳವಾದದಿಂದ ಕಮ್ಯೂನಿಸಂಗೆ ಪರಿವರ್ತನೆಯಾಗುವ ಒಂದು ಇಡೀ ಚಾರಿತ್ರಿಕ ಕಾಲಾವಧಿ ಯಾವುದೇ ರೀತಿಯಲ್ಲಿ ಅವಶ್ಯ ಅನ್ನುವುದನ್ನು ಮನ್ನಿಸದೆ ಹೋಗುತ್ತಾರೆ ಅಥವಾ ಎರಡೂ ಪರಸ್ಪರ ಪ್ರತಿಸ್ಪರ್ಧಿ ಶಕ್ತಿಗಳಲ್ಲೊಂದರ ಹೋರಾಟಕ್ಕೆ ನಾಯಕತ್ವ ನೀಡುವ ಬದಲು ಎರಡನ್ನೂ ರಾಜಿ ಮಾಡಿಸಲು ಯೋಜನೆಗಳನ್ನು ಸೃಷ್ಟಿಸುವುದು ತಮ್ಮ ಕರ್ತವ್ಯವೆಂದು ಭಾವಿಸುತ್ತಾರೆ.**
>
> **(ಲೆನಿನ್ ಆಯ್ದ ಕೃತಿಗಳು 1989 ಸಂಪುಟ 3 ಪುಟ. 238)**

ಉದಾರೀಕರಣವು ಸಾಹಿತ್ಯ, ಸಂಸ್ಕೃತಿ, ಮನುಷ್ಯನ ಅನುಭವದ ಜಗತ್ತು, ಮಾನವತೆಯ ವಿಚಾರಗಳನ್ನು ಬದಲಾಯಿಸುವಷ್ಟು ಶಕ್ತವಾಗಿದೆ. ಲಾಭದ ಲೆಕ್ಕಾಚಾರವಿರುವ ಉದಾರೀಕರಣಕ್ಕೆ ಈ ಸಂಗತಿಗಳು ಮುಖ್ಯವೇ ಅಲ್ಲ. ಬದುಕು ಮತ್ತು ಉತ್ಪಾದನೆ, ಶಿಕ್ಷಣ ಮತ್ತು ಉತ್ಪಾದನೆ, ಮೂರನೆಯ ಜಗತ್ತಿನ ಸಂಸ್ಕೃತಿ ಮತ್ತು ಉತ್ಪಾದನೆ ಈ ತರಹದ ಕೇವಲ ಸರಳ ಸಮೀಕರಣ ಮಾತ್ರವೇ ಇರಲು ಸಾಧ್ಯ. ಮನುಷ್ಯರು ಇಂತಹ ಸಂದರ್ಭಗಳಲ್ಲಿ ಏಕಾಂತವಾದಿಗಳು ಆಗಲು ಸಾಧ್ಯ. ಪ್ರತಿಯೊಂದು ಸಂಗತಿಯೂ ಒಬ್ಬ ವ್ಯಕ್ತಿಗೆ ಹೇಗೆ ಮುಖ್ಯವಾಗುತ್ತದೆ. ಎಂಬುದು ಮಾತ್ರ ಇಂತಹ ಸಂದರ್ಭದಲ್ಲಿ ಪರಿಗಣನೆಯೊಳಗೆ ಬರಲು ಸಾಧ್ಯ. ಬೆಳೆಯಬಹುದಾದ ವ್ಯಕ್ತಿವಾದದಲ್ಲಿ ಸಾಮಾನ್ಯ ಮನುಷ್ಯ, ಸಾಮಾನ್ಯ ಸಂಸ್ಕೃತಿಯ ಪ್ರಶ್ನೆಯು ಮುಖ್ಯವಲ್ಲ. ಸಮಕಾಲೀನ ಜೀವನದಲ್ಲಿ ಅನೇಕ ರೀತಿಯ ವೈರುಧ್ಯಗಳಿವೆ. ಜೀವನಕ್ರಮದಲ್ಲಿಯೇ ಸಂಘರ್ಷಗಳಿವೆ. ಇದರಿಂದಲೇ ಸಂಸ್ಕೃತಿ ತಾತ್ವಿಕತೆ, ಸಾಮಾಜಿಕ ಸಂಬಂಧ ಇವುಗಳಲ್ಲಿಯೂ ಈ ಗತಿ ವಿಧಾನವನ್ನು ನಾವು ಕಾಣುತ್ತೇವೆ. ಅನೇಕ ರೀತಿಯ ಧ್ವನಿಗಳು, ಅನೇಕ ರೀತಿಯ ಸಂಸ್ಕೃತಿ ಸಂವಾದಗಳ ನಡುವೆಯೇ ಸಮಾಜವೂ ರೂಪುಗೊಳ್ಳುತ್ತದೆ. ಒಂದು ಕಡೆಯಿಂದ ಸಮೂಹ ಮಾಧ್ಯಮಗಳಾದ ಟಿ.ವಿ. ಪತ್ರಿಕೆ ಮುಂತಾದವು ಸಾಹಿತ್ಯದ ವಿನಿಮಯ ಮೌಲ್ಯವನ್ನು ತನಗೆ ಬೇಕಾದಂತೆ ಇಟ್ಟುಕೊಂಡು ವ್ಯಾಪಾರ ನಡೆಸುತ್ತದೆ. ಈ ಉದ್ಯಮ ಸಂಸ್ಕೃತಿಯು ಕೂಡಾ 'ಸಾಹಿತ್ಯ ಸಂವಹನ'ವನ್ನು ಮಾಧ್ಯಮಗಳನ್ನು ನಿಯಂತ್ರಿಸುತ್ತದೆ. ಎರಡನೆಯದಾಗಿ ಇದರಿಂದ ಅಕ್ಷರಸ್ಥರ ಸಾಂಸ್ಕೃತಿಕ ಜಗತ್ತು ತನ್ನ ಸಾಂಸ್ಕೃತಿಕ ಸಂದರ್ಭವನ್ನು ಬದಲಾಯಿಸಿಕೊಂಡಿದೆ. ಜಾಗತಿಕ ಅರ್ಥಶಾಸ್ತ್ರವು ತಂದೊಡ್ಡುವ ಅಪಾಯ ಪ್ರಾದೇಶಿಕ ಭಾಷೆಗಳ ಮೇಲಿದೆ. ಜಾಗತೀಕರಣದ

ಪ್ರಮುಖ ಹತ್ಯಾರವಿರುವುದು ಜಾಗತಿಕ ಮಾರುಕಟ್ಟೆಯ ಅಭಿವೃದ್ಧಿಯಲ್ಲಿ. ಇದರಿಂದ ಮಾನವೀಯ ಸಂಬಂಧಗಳ ನಿರ್ವಚನವು ಬದಲಾಗುತ್ತದೆ. ಅದರೊಂದಿಗೆ ಪ್ರಾದೇಶಿಕ ಭಾಷೆಗಳಿಗಿಂತ ಜಾಗತಿಕ ಅರ್ಥವಲಯಕ್ಕೆ ಪೂರಕವಾದ ಸಂಸ್ಕೃತಿಗಳು ಮಾತ್ರ ಉಪಯುಕ್ತವಾಗಬಲ್ಲವು. ಹೆಚ್ಚು ಪ್ರಚಾರಕ್ಕೆ ಒಳಗಾದ ಕಂಪ್ಯೂಟರ್ ತಂತ್ರಜ್ಞಾನವನ್ನೇ ನೋಡಿ; ಇದಕ್ಕೆ ಪ್ರಾದೇಶಿಕ ಉಪಭಾಷೆಗಳು ಉಪಯುಕ್ತವಲ್ಲ. ಆಡುಮಾತಿನ ಧ್ವನಿಯ ಏರಿಳಿತಗಳು ಮುಖ್ಯವಲ್ಲ. ಬೇರೊಂದು ಮಾದರಿಯಿಂದ ಹೇಳಬೇಕೆಂದರೆ – ನಮಗೆ ವ್ಯಾವಹಾರಿಕವಾಗಿಯೂ ಸಂಸ್ಕೃತಿಯ ಬಹುತ್ವವು ಅಗತ್ಯವಿದೆ. ಯಾವುದೇ ರೀತಿಯಲ್ಲಿಯೂ ಕೂಡಾ ನಾವು ಒಂದೇ ರೀತಿ ಮಾತನ್ನು ಆಡುವುದಿಲ್ಲ. ಬೇರೆ ಬೇರೆ ಸಂದರ್ಭಗಳಲ್ಲಿ ನಾವು ಬೇರೆ ಬೇರೆ ಮಾದರಿಯ ಸಾಂಸ್ಕೃತಿಕ ಭಾಷೆಗಳನ್ನು ಬಳಸುತ್ತೇವೆ. ಮನೆಯಲ್ಲಿ, ಮಾರುಕಟ್ಟೆಯಲ್ಲಿ, ಸಂಸ್ಥೆಗಳಲ್ಲಿ, ಧಾರ್ಮಿಕ ಆಚರಣೆಗಳಲ್ಲಿ – ಹೀಗೆ ಬೇರೆ ಬೇರೆ ಮಾದರಿಯ ಭಾಷೆಯನ್ನು ಬಳಸುವುದರ ಮುಖಾಂತರ 'ಭಾಷೆಯ ಬಹುತ್ವ'ವನ್ನು ಎತ್ತಿಹಿಡಿಯುತ್ತೇವೆ. ಜಾಗತಿಕ ಮಾರುಕಟ್ಟೆ, ಅದರಿಂದ ಪ್ರೇರಿತವಾದ ಸಮೂಹಮಾಧ್ಯಮಗಳಿಗೆ ವಾಸ್ತವವಾಗಿ ಭಾಷೆಯ ಬಹುತ್ವವು ಬೇಕಾಗಿಲ್ಲ. ಜನಸಾಮಾನ್ಯರ ಆಡುನುಡಿಯ ವ್ಯವಹಾರವು ಅದಕ್ಕೆ ಮುಖ್ಯವಲ್ಲ. ಅದು ಜನಸಾಮಾನ್ಯರ ಭಾಷೆಯನ್ನು ಗಮನಕ್ಕೆ ತೆಗೆದುಕೊಳ್ಳುವುದಿಲ್ಲ. ಜಾಗತೀಕರಣದ ಪ್ರಕ್ರಿಯೆಯಲ್ಲಿ ಅದು ನಿರ್ದಿಷ್ಟ ಭಾಷೆಯನ್ನು ಹೇರುತ್ತದೆ. ಅದು ಆರ್ಥಿಕ ಮತ್ತು ಸಾಮಾಜಿಕ ಯಜಮಾನಿಕೆಯನ್ನು ವಹಿಸುವುದರಿಂದ ಉಳಿದುದು ಅದಕ್ಕೆ ಅಷ್ಟು ಮುಖ್ಯವಲ್ಲ. ಭಾಷೆಯನ್ನು ಅದು ಏಕರೂಪಾತ್ಮಕಗೊಳಿಸುತ್ತದೆ. ಸಂವಹನ ಮಾಧ್ಯಮಗಳ ಭಾಷೆಯು ಜನಸಾಮಾನ್ಯರ ಮೇಲೆ ಬೀರುವ ಪ್ರಭಾವದ ದೆಸೆಯಿಂದ ಸಹಜವಾಗಿಯೇ ಪ್ರಾದೇಶಿಕ ಭಾಷೆಗಳು ಗೈರುಹಾಜರಿಯಾಗಬಹುದು. ಇದರ ಪರಿಣಾಮವೆಂದರೆ ಭಾಷೆಯು ಏಕಮುಖಿ ತರ್ಕದಲ್ಲಿಯೇ ಕೆಲಸ ಮಾಡುವುದು. ಇದೊಂದು ಸಾಮಾಜಿಕ, ಸಾಂಸ್ಕೃತಿಕ ಮತ್ತು ಮಾನವೀಯ ಸಂಬಂಧದ ಮೇಲೆ ನಡೆಯುವ ಅದೃಶ್ಯ ರೂಪದ ದಬ್ಬಾಳಿಕೆ. ಜಾಗತೀಕರಣವು ಈ ಮೂಲಕ ಒಂದೇ ಭಾಷೆಯ ತರ್ಕದೊಳಗೆ ಬರುವುದು ಅಪಾಯವೇ ಸರಿ. ಇದರ ಇನ್ನೊಂದು ಪರಿಣಾಮವೆಂದರೆ ಮನುಷ್ಯ ಸಂಬಂಧಗಳ ನಡುವೆ ಉಂಟಾಗುವ ಬಿರುಕು.

ಸಂಸ್ಕೃತಿಯು ಅಂತಿಮವಾಗಿ ನಿರ್ವಹಿಸಬೇಕಾದುದು ಮಾನವೀಯ ಸಂಬಂಧಗಳನ್ನೇ. ಆದರೆ ಸಂಸ್ಕೃತಿಯು ಯಾವ ಮೂಲದಿಂದ ಹೊರಡುವುದೋ ಅದಕ್ಕೆ ಜಾಗತೀಕರಣವು ಧಕ್ಕೆಯನ್ನು ತರುತ್ತದೆ. ಒಂದೆಡೆಯಿಂದ ಪ್ರಾದೇಶಿಕ ಭಾಷೆಗಳ

ನಾಶ ಮತ್ತೊಂದೆಡೆಯಿಂದ ಮನುಷ್ಯರ ನಡುವಣ ಸಂಬಂಧಗಳ ನಾಶ. ಇವೆರಡೂ ವಾಸ್ತವವಾಗಿ ಘೋರ ಪರಿಣಾಮಗಳೇ. ಸರಿಯೋ, ತಪ್ಪೋ ಅವುಗಳ ಮೌಲ್ಯನಿರ್ಣಯ ಬೇರೆ ಪ್ರಶ್ನೆ ಆದರೆ ಈ ತನಕ ನಮ್ಮ ಸಾಮಾಜಿಕ ಸಂಬಂಧಗಳನ್ನು ಬೇರೆ ಬೇರೆ ನಿಟ್ಟಿನಲ್ಲಿ ನಿರ್ವಚಿಸಿದೆ. ಆದರೆ, ಜಾಗತೀಕರಣದ ಪರಿಣಾಮವೆಂದರೆ ಈ ಮಾದರಿಯ ಸಾವಯವ ಸಾಮಾಜಿಕ ಸಂಬಂಧಗಳೇ ಸಾಧ್ಯವಾಗದ ಸ್ಥಿತಿ. ಬಂಡವಾಳವಾದಿ ಪ್ರಕ್ರಿಯೆಯಿಂದ ಆಗುವ ಪರಿಣಾಮವೆಂದರೆ, ಒಂದು ಪರಕೀಯವಾದ ಸ್ಥಿತಿ. ಪರಕೀಯತೆ ಮತ್ತು ವ್ಯಕ್ತಿವಾದದಿಂದ ಹುಟ್ಟುವ ಸಂಸ್ಕೃತಿಯು ಅಂತಿಮವಾಗಿ ವ್ಯಕ್ತಿವಾದಿ ಸಮಸ್ಯೆಯನ್ನೇ ಎತ್ತಿಹಿಡಿಯುತ್ತದೆ. ಜಾಗತೀಕರಣದಿಂದ ಆಗಬಹುದಾದ ಪರಿಣಾಮವಿದು. ಗಾಂಧಿ ಸರ್ವೋದಯ ಪ್ರಜಾಸತ್ತೆ ಕುರಿತಂತೆ ಮಾಡಿರುವ ಚರ್ಚೆಯು ಈ ದೃಷ್ಟಿಯಿಂದ ಗಮನಾರ್ಹ.

> ಅಸಂಖ್ಯಾತವಾದ ಹಳ್ಳಿಗಳನ್ನೊಳಗೊಂಡ ಈ ರಚನೆಯಲ್ಲಿ ಯಾವಾಗಲೂ ವಿಸ್ತಾರಗೊಳ್ಳುತ್ತಿರುವ, ಯಾವಾಗಲೂ ಮೇಲೆ ಮೇಲೆ ಹೋಗುತ್ತಿರುವ ವರ್ತುಲಗಳಿಂದ ಕೂಡಿರುತ್ತದೆ. ಪಿರಾಮಿಡ್ ತುತ್ತತುದಿಯು ಕೆಳಗಿನ ಅಡಿಪಾಯದಿಂದ ಪೋಷಿಸಲ್ಪಡುವಂತೆ ಇಲ್ಲಿ ಜೀವನವಿರುವುದಿಲ್ಲ. ಇಲ್ಲಿಯ ಜೀವನ ಒಂದು ಮಹಸಾಗರದಂತೆ ವಿಸ್ತಾರವಾದ ವರ್ತುಲವಾಗಿರುತ್ತದೆ. ವ್ಯಕ್ತಿಯೇ ಈ ಮಹಾಸಾಗರದಂತಿರುವ ವರ್ತುಲದ ಕೇಂದ್ರಬಿಂದುವಾಗಿರುತ್ತಾನೆ.ಈ ವ್ಯಕ್ತಿ ತನ್ನ ಹಳ್ಳಿಗಾಗಿ ತನ್ನ ಜೀವನವನ್ನು ಕೊಡಲು ಯಾವಾಗಲೂ ಸಿದ್ಧನಿರುತ್ತಾನೆ. ಒಂದು ಹಳ್ಳಿಯು ತನ್ನ ಸುತ್ತಮುತ್ತಲೂ ಇರುವ ಹಳ್ಳಿಗಳ ಸಲುವಾಗಿ ನಿಗರ್ವಿಗಳೂ ವಿನಯಶೀಲರೂ ಆದ ತಾವು ಯಾವ ಮಹಾ ಸಾಗರದಂತಿರುವ ವರ್ತುಲದ ಪೂರ್ಣಭಾವವಾಗಿರುವರೋ ಆ ಮಹಾಸಾಗರದ ಗಾಂಭೀರ್ಯವನ್ನು ಪಡೆದ ವ್ಯಕ್ತಿಗಳಿಂದ ಒಡಗೂಡಿ ಕೊನೆಗೆ ಎಲ್ಲವೂ ಒಂದು ಜೀವನವಾಗುತ್ತದೆ.
>
> ಆದುದರಿಂದ ಕೊನೆಗೆ ಇರುವ ಪರಿಘವು ತನ್ನ ಒಳಗಿರುವ ವರ್ತುಲವನ್ನು ಹಿಸುಕಲು ತನ್ನ ಶಕ್ತಿಯನ್ನು ಉಪಯೋಗಿಸುವುದಿಲ್ಲ. ಅದರ ಬದಲಾಗಿ ತನ್ನ ಒಳಗಿರುವ ಎಲ್ಲದಕ್ಕೂ ಅದು ಶಕ್ತಿಯನ್ನು ನೀಡಿ ಅವೆಲ್ಲವುಗಳಿಂದ ತಾನು ಬಲಶಾಲಿಯಾಗುತ್ತದೆ. ಆದರೆ ಇದೆಲ್ಲವೂ ಬರೀ ಕಲ್ಪನಾ ಸಾಮ್ರಜ್ಯವಾಗಿದೆ. ಅದುದರಿಂದ ಇದು ವಿಚಾರಾರ್ಹವಾಗಿಲ್ಲ. ಎಂದು ಯಾರೂ ಮೂದಲಿಸಬಹುದು. ಭೂಮಿತಿಯಲ್ಲಿ ವ್ಯಾಖ್ಯೆಯನ್ನು ಕೊಟ್ಟ ಹಾಗೆ ಬಿಂದುವನ್ನು

> **ತೆಗೆಯಲು ಯಾವ ಮನುಷ್ಯನಿಗೂ ಸಾಧ್ಯವಿಲ್ಲದಿದ್ದರೂ ಆ ಬಿಂದುವಿಗೆ ಹೇಗೆ ಒಂದು ಶಾಶ್ವತವಾದ ಬೆಲೆ ಇರುವುದೋ ಹಾಗೆ ಇಲ್ಲಿ ನಾನು ವರ್ಣಿಸದ ಚಿತ್ರಕ್ಕೂ ಮಾನವ ಜೀವನದ ದೃಷ್ಟಿಯಿಂದಲೂ ತನ್ನದೇ ಆದ ಬೆಲೆ ಇದೆ. ಈ ಚಿತ್ರವನ್ನು ಪರಿಪೂರ್ಣವಾಗಿ ಕಾರ್ಯರೂಪದಲ್ಲಿ ತರಲು ಸಾಧ್ಯವಿಲ್ಲದಿದ್ದರೂ ಈ ನೈಜ ಚಿತ್ರಕ್ಕಾಗಿ ಭಾರತವು ಬಾಳಿ ಬದಕಲಿ, ನಾವು ಯಾವುದನ್ನಾದರೂ ಸಾಧಿಸುವ ಮೊದಲು ನಾವು ಏನನ್ನೂ ಸಾಧಿಸಬೇಕಾಗಿದೆ ಎಂಬುದರ ಚಿತ್ರವು ಯೋಗ್ಯವಾದ ರೀತಿಯಲ್ಲಿ ನಮ್ಮ ಕಣ್ಣ ಮುಂದೆ ಇರಲಿಕ್ಕೇಬೇಕು. ತೀರ ಕೆಳಗಿರುವ ಮನುಷ್ಯನು ತೀರ ಮೇಲಕ್ಕಿರುವ ಮನುಷ್ಯನ ಕೂಡ ಸಮಾನತೆಯನ್ನು ಪಡೆದಿರುವಂಥ ಅಥವಾ ಬೇರೆ ಮಾತಿನಲ್ಲಿ ಹೇಳಬೇಕೆಂದರೆ ಇವನು ಮೊದಲನೆಯವನು. ಇವನು ಕೊನೆಯವನು ಎಂಬ ಭೇದವೇ ಇಲ್ಲದಿರುವ ಈ ನನ್ನ ಚಿತ್ರದ ಸತ್ಯತೆಯು ಎಂದಾದರೂ ಭಾರತದ ಪ್ರತಿಯೊಂದು ಹಳ್ಳಿಯೂ ಪ್ರಜಾರಾಜ್ಯವಾಗುವ ಸಮಯ ಬಂದಾಗ ಅನುಭವಕ್ಕೆ ಬರುವುದು.(ಹ, 1946)**
>
> **(ಸರ್ವೋದಯ ಮೋ.ಕ.ಗಾಂಧಿ 1960 ಪುಟ.89–91)**

ಜಾಗತೀಕರಣದಿಂದ ಯುದ್ಧವಿಲ್ಲದ ಜಗತ್ತು ಬರಬಹುದು ಎಂದು ಸುಳ್ಳಾಗಿಯೇ ಪ್ರಚಾರ ಮಾಡಲಾಗುತ್ತಿದೆ. ರಾಷ್ಟ್ರೀಯತೆಯೆಂಬುದು ತಾತ್ಕಾಲಿಕ ಅಗತ್ಯವಾಗಿದೆ ಎಂಬ ಮಾರ್ಕ್ಸ್‌ವಾದಿ ನಿಲುವಿಗೆ ವಿರೋಧವಾಗಿ ಜಾಗತೀಕರಣವಾದಿಗಳು ಅದೇ ಪರಿಭಾಷೆಯನ್ನು ಕುಚೋದ್ಯಕ್ಕಾಗಿ ಬಳಸಿದ ಮಾತಿದು. ವಾಸ್ತವವಾಗಿ ಹಾಗಲ್ಲ. ರಾಷ್ಟ್ರೀಯ ಪ್ರಭುತ್ವವು ಒಂದು ಗಡಿರೇಖೆಯನ್ನು ಇಟ್ಟುಕೊಂಡಿರುತ್ತದೆ. ಮತ್ತು ಆ ಹಿತಕ್ಕೆ ಧಕ್ಕೆ ಬಂದರೆ ಯುದ್ಧವಾಗುತ್ತದೆ ಎಂಬುದೇ ಸುಳ್ಳು ಎಂಬುದನ್ನು ಈಗಾಗಲೇ ಚರಿತ್ರೆಯು ಹೇಳಿದೆ. ಎರಡನೆಯದಾಗಿ, ಜಾಗತೀಕರಣವು ನೇರ ಯುದ್ಧಕ್ಕಿಂತ ಪರೋಕ್ಷಯುದ್ಧವನ್ನು ಸಾರುತ್ತದೆ. ಯುದ್ಧದ ಪರಿಣಾಮವಂತೂ ಆಗುವುದು ಜನಸಾಮಾನ್ಯರ ಮೇಲೆಯೇ. ನಮ್ಮಲ್ಲಿಯೇ ನೋಡಿ, ವಿಶ್ವವ್ಯಾಪಾರ ಸಂಸ್ಥೆಯಿಂದ ಆಗಿರುವುದೇನು? ರೈತರ ಬೆಳೆಗೆ ಬೆಲೆಯಿಲ್ಲ. ಕೊಳ್ಳುವ ಸಾಮಗ್ರಿಗಳ ದುಬಾರಿ ಬೆಲೆ. ಇದರಿಂದ ರೈತರು ಆತ್ಮಹತ್ಯೆಗೆ ಶರಣಾದರು. ಹೀಗಾಗಿಯೇ ಅಂತಾರಾಷ್ಟ್ರೀಯ ವ್ಯಾಪಾರದ ಒಪ್ಪಂದದಿಂದ ಪರೋಕ್ಷವಾಗಿ ಬಡವರು ಮತ್ತಷ್ಟು ಪಾತಾಳಕ್ಕಿಳಿದರು. ಈ ಮಾದರಿಯ ಪರೋಕ್ಷ ಯುದ್ಧದ ಪರಿಣಾಮವೂ ಘೋರವಾದುದೇ ಸರಿ. ಗಾಂಧಿಯವರು ಮತ್ತು ಮಾರ್ಕ್ಸ್ ಹೇಳಿದ ಮಾತುಗಳನ್ನು ಗಮನಿಸಬಹುದು.

"ನನ್ನ ಪಾಲಿಗೆ ರಾಷ್ಟ್ರೀಯತೆ ಮಾನವೀಯತೆಯೆ. ನಾನು ಮಾನವನಾಗಿ ಮಾನವೀಯನಾಗಿ ಇರುವುದರಿಂದಲೇ ನಾನು ದೇಶಭಕ್ತ. ....ಭಾರತದಲ್ಲಿ ಸೇವೆ ಮಾಡಲು ನಾನು ಇಂಗ್ಲೆಂಡ್ ಅಥವಾ ಜರ್ಮನಿಗೆ ಹಾನಿ ಮಾಡೆನು. ನನ್ನ ಜೀವನ ಯೋಜನೆಯಲ್ಲಿ ಸಾಮ್ರಾಜ್ಯವಾದಕ್ಕೆ ಎಡೆಯೇ ಇಲ್ಲ.

"ರಾಷ್ಟ್ರೀಯನಾಗದೆ ಅಂತರರಾಷ್ಟ್ರೀಯನಾಗುವುದು ಅಸಾಧ್ಯ. ....ರಾಷ್ಟ್ರೀಯತೆ ಎನ್ನುವುದು ಕೆಡುಕಲ್ಲ. ಆಧುನಿಕ ರಾಷ್ಟ್ರಗಳ ಪಿಡುಗೇ ಆದ ಸಂಕುಚಿತ ಭಾವನೆ, ಸ್ವಾರ್ಥತೆ ಹಾಗೂ ಪ್ರತ್ಯೇಕತಾ ಭಾವನೆ ಇವು ಕೇಡುಗಳು".

"ನನ್ನ ಮಹೋದ್ದೇಶ ಕೇವಲ ಭಾರತ ಜನತೆಯ ಸೋದರತ್ವವಲ್ಲ. ಇವೊತ್ತು ಭಾರತದ ಸ್ವಾತಂತ್ರ್ಯವೇ ನಿಸ್ಸಂಶಯವಾಗಿಯೂ ನನ್ನ ಬದುಕನ್ನೆಲ್ಲ ಹೆಚ್ಚು ಕಡಿಮೆ ಆವರಿಸಿದೆ, ನನ್ನ ಪೂರ್ಣ ಕಾಲವನ್ನು ತುಂಬಿಕೊಂಡಿದೆ. ಆದರೂ ಅದೊಂದೇ ನನ್ನ ಮಹೋದ್ದೇಶವಲ್ಲ. ಭಾರತದ ಸ್ವಾತಂತ್ರ್ಯ ಪ್ರಾಪ್ತಿಯ ಮೂಲಕ ಮಾನವ ಭ್ರಾತೃತ್ವದ ಮಹೋದ್ದೇಶವನ್ನು ಸಾಧಿಸಿ ನಡೆಸಬೇಕೆಂದು ಬಯಸುತ್ತೇನೆ. ನನ್ನ ದೇಶಭಕ್ತಿ ಪ್ರತ್ಯೇಕತೆಯದಲ್ಲ. ಅದು ಎಲ್ಲವನ್ನು ಅಪ್ಪಿಕೊಳ್ಳುವಂಥದು. ಇತರ ರಾಷ್ಟ್ರೀಯತೆಗಳ ಸಂಕಟದ ಮೇಲೆ ಅಥವಾ ಶೋಷಣೆಯ ಮೇಲೆ ತಾನು ಪೀಠವೇರುವಂಥ ರಾಷ್ಟ್ರೀಯತೆಯನ್ನು ನಾನು ತಿರಸ್ಕರಿಸಬೇಕು. ....ನನ್ನ ಧರ್ಮ, ನನ್ನ ಧರ್ಮದಿಂದ ಮಥಿಸಿ ತೆಗೆದ ನನ್ನ ರಾಷ್ಟ್ರೀಯತೆ ಜೀವನವನ್ನು ಅಪ್ಪಿಕೊಳ್ಳುತ್ತದೆ".

"ನಮ್ಮ ರಾಷ್ಟ್ರೀಯತೆ ಬೇರಾವ ರಾಷ್ಟ್ರೀಯತೆಗೂ ಆಪತ್ತಾಗಬಾರದು. ಏಕೆಂದರೆ ಇತರರು ನಮ್ಮನ್ನು ಶೋಷಿಸಲು ಹೇಗೆ ನಾವು ಬಿಡುವುದಿಲ್ಲವೊ, ಹಾಗೆಯೇ ನಾವೂ ಯಾರನ್ನೂ ಶೋಷಿಸುವುದಿಲ್ಲ". "ರಾಷ್ಟ್ರೀಯತೆಯ ಪಂಥ ನಮಗೆ ಇದನ್ನು ಬೋಧಿಸುತ್ತದೆ. ಕುಟುಂಬಕ್ಕಾಗಿ ವ್ಯಕ್ತಿ ಸಾಯಬೇಕು, ಕುಟುಂಬ ಹಳ್ಳಿಗಾಗಿ, ಹಳ್ಳಿ ಜಿಲ್ಲೆಗಾಗಿ, ಜಿಲ್ಲೆ ಪ್ರಾಂತ್ಯಕ್ಕಾಗಿ, ಹಾಗೂ ಪ್ರಾಂತ್ಯ ರಾಷ್ಟ್ರಕ್ಕಾಗಿ ಸಾಯಬೇಕು. ಅದೇ ರೀತಿ ಅಗತ್ಯವಾದರೆ ಜಗತ್ತಿನ ಹಿತಕ್ಕಾಗಿ ಒಂದು ದೇಶ ಸಾಯಬೇಕಾದರೆ ಅದು ಮುಕ್ತವಾಗಿ ರಬೇಕು. ಆದ್ದರಿಂದ ಮಾನವ ಜಾತಿಯ ಉಳಿವಿಗಾಗಿ ಅಗತ್ಯವಾದರೆ ನನ್ನ ದೇಶವೇ ಸಾಯಲು ಸಾಧ್ಯವಾಗುವಂತೆ, ನನ್ನ ದೇಶ ಸ್ವತಂತ್ರವಾಗಬೇಕು. ಇದೇ ನನ್ನ ರಾಷ್ಟ್ರೀಯತೆಯ ಪ್ರೇಮದ ಅರ್ಥ. ಇದೇ ನನ್ನ ಅಂತರರಾಷ್ಟ್ರೀಯತೆಯ ಪ್ರೇಮದ ಅರ್ಥ. ಇಲ್ಲಿ ವರ್ಣದ್ವೇಷಕ್ಕೆ ಯಾವ ಎಡೆಯೂ ಇಲ್ಲ". (ಸ.ವಾ. 178–179)

(ನೀಲತ್ತಹಳ್ಳಿ ಕಸ್ತೂರಿ 2008 ಗಾಂಧೀ ತತ್ತ್ವಚಿಂತನೆ ಪುಟ. 24–25)

ಉದಾರೀಕರಣವು ತತ್ ಕ್ಷಣವೇ ತಿಳಿಯದ ಹಾಗೆ ಪ್ರವೇಶಿಸಿದ ಒಂದು ಆರ್ಥಿಕ ಪ್ರಕ್ರಿಯೆ ಮತ್ತು ಈ ಉದಾರೀಕರಣವು ಪರೋಕ್ಷ ಹಿಂಸೆಯನ್ನು ನಂಬಿದೆ. ಜಾಗತೀಕರಣದಿಂದ ಈಗಾಗಲೇ ಸಾಮಾಜಿಕ ಅಂಚಿನಲ್ಲಿ ಇರುವ ಮನುಷ್ಯರು ಇನ್ನಷ್ಟು ಅಂಚಿಗೆ ಹೋಗುತ್ತಾರೆ. ಕೆಲವೇ ಜನ ಬಂಡವಾಳಶಾಹಿಗಳು ಜಗತ್ತನ್ನು ಹಿಡಿತದಲ್ಲಿ ಇರಿಸಿಕೊಳ್ಳುತ್ತಾರೆ. ಪ್ರಧಾನವಾಹಿನಿಯಲ್ಲಿ ಯಾವುದೇ ನಿರ್ಧಾರಾತ್ಮಕ ವಿಷಯಗಳಲ್ಲಿ ಪ್ರಧಾನ ಪಾತ್ರ ವಹಿಸದಿರುವ ಸಣ್ಣ ಹಿಡುವಳಿದಾರರು, ಕೆಳವರ್ಗದ ಜನರು ಮತ್ತಷ್ಟು ಮೂಲೆಗೆ ತಳ್ಳಲ್ಪಡುವ ಅಪಾಯವಿದೆ. ಇದರ ಅರಿವು ಗಾಂಧಿಗೆ ಇತ್ತು. ಅವರು ಹೇಳಿದ ನೈತಿಕ ಪುನರುತ್ಥಾನದ ಪರಿಕಲ್ಪನೆಯು ಈ ದೃಷ್ಟಿಯಿಂದ ಗಮನಾರ್ಹ.

1908 ರಲ್ಲಿ ನಾನು ರಾಟೆಯನ್ನು ಲಂಡನ್ನಿನಲ್ಲಿ ಕಂಡುಕೊಂಡೆ. ದಕ್ಷಿಣ ಆಫ್ರಿಕದಿಂದ ಅಲ್ಲಿಗೆ ಒಂದು ನಿಯೋಗಗೋಷ್ಠಿಯನ್ನು ಕರೆದುಕೊಂಡು ಹೋಗಿದ್ದೆ. ಆಗ ಹಲವಾರು ಶ್ರದ್ಧಾಳು ಭಾರತೀಯ ವಿದ್ಯಾರ್ಥಿಗಳು ಮತ್ತು ಇತರರೊಡನೆ ನಿಕಟ ಸಂಪರ್ಕ ಬಂತು. ಭಾರತದ ಸ್ಥಿತಿ ಕುರಿತು ದೀರ್ಘ ಸಂಭಾಷಣೆಗಳು ನಡೆದುವು, ಆಗ ಇದ್ದಕ್ಕಿದ್ದಂತೆ ಥಟಕ್ಕನೆ ಚರಖಾ ಇಲ್ಲದೆ ಸ್ವರಾಜ್ಯವಿಲ್ಲ ಎಂದು ನನಗೆ ಹೊಳೆಯಿತು. ಕೂಡಲೇ ಪ್ರತಿಯೊಬ್ಬರೂ ನೂಲಲೇಬೇಕು ಎಂದೆನಿಸಿತು. ಆದರೆ ಆಗ ನನಗೆ ಮಗ್ಗಕ್ಕೂ ರಾಟೆಗೂ ಇದ್ದ ವ್ಯತ್ಯಾಸ ಗೊತ್ತಿರಲಿಲ್ಲ. 'ಹಿಂದ್ ಸ್ವರಾಜ್ಯ'ದಲ್ಲಿ ರಾಟೆ ಎಂಬ ಅರ್ಥದಲ್ಲಿ ಮಗ್ಗ ಎಂಬ ಪದವನ್ನೇ ಬಳಸಿದ್ದೇನೆ.

ಮನಸ್ಸಿಗೆ 1908ರಲ್ಲಿ ರಾಟೆ ಹೊಳೆಯಿತಾದರೂ, ಅದು ಕಾರ್ಯಕಾರಿ ಆದುದು 1918ರಲ್ಲಿ, ಅದೂ ಮೂರು ವರ್ಷಗಳ ತಾಳ್ಮೆಯ ಹಾಗೂ ಕಠಿಣ ಪರಿಶ್ರಮದ ಫಲವಾಗಿ. ಮೊಟ್ಟಮೊದಲಾಗಿ ಖಾದಿಯ ವ್ರತ ತೊಟ್ಟುದು 1919ರಲ್ಲಿ. ಕಾಂಗ್ರೆಸ್ಸಿನ ಕಾರ್ಯಕ್ರಮದಲ್ಲಿ ರಾಟೆ ಸ್ಥಾನ ಪಡೆದುದು 1921ರಲ್ಲಿ. ಅಲ್ಲಿಂದ ಈಚಿನ ಆ ಚಳುವಳಿಯ ಚರಿತ್ರೆ ತೆರೆದ ಪುಸ್ತಕವೇ, ಅದರಲ್ಲಿ ತೊಡಗಿರುವ ಎರಡು ಸಾವಿರಕ್ಕೂ ಮಿಕ್ಕಷ್ಟು ಸಂಘಟಕರು ಹಾಗೂ ಅದು ಬಾಳಿನ ಆಶಾಕಿರಣವಾಗಿ ಪರಿಣಮಿಸಿರುವ ಸುಮಾರು ಎಪ್ಪತ್ತು ಸಾವಿರ ಮಂದಿ ನೂಲುವವರು ಇನ್ನೂ ಬರೆಯುತ್ತಲೇ ಇದ್ದಾರೆ.

1915 ರಲ್ಲಿ ನಾನು ಮೊದಲು ನೇಕಾರನಾದೆ. ನೇಕಾರನಾದ ಬಳಿಕ ನೂಲುವವನಾದೆ. ವಿದೇಶೀ ನೂಲನ್ನೂ, ನಮ್ಮ ಗಿರಣಿಗಳ ನೂಲನ್ನೂ ಈ ಕೈಗಳಿಂದಲೇ ನೇಯ್ದಿದ್ದೇನೆ. ನನ್ನ ಕೈಮಗ್ಗದಲ್ಲಿ ಕುಳಿತುಕೊಂಡಿದ್ದಾಗ ಗಿರಣಿಗಳೇ ತಮ್ಮ ನೂಲನ್ನು

ನೇಯ್ದುಕೊಳ್ಳುವಷ್ಟು ಸಂಘಟಿತವಿರುವಾಗ ನಾನು, ಸಾವಿರಾರು, ಲಕ್ಷಾಂತರ ಕೈಮಗ್ಗದ ನೇಕಾರರು ಎಲ್ಲಿಗೆ ಪಾರ ಎಂದು ಯೋಚಿಸಿದೆ. ಈ ಚಿಂತೆ ಮಾಡುತ್ತಿದ್ದಾಗ ಹೊಟ್ಟೆಗಿಲ್ಲದೆ ಬಳಲುವ ಕೋಟ್ಯಂತರ ಹಳ್ಳಿಗಾಡಿನ ಸೋದರಿಯರಿಗಾಗಿ ನನ್ನ ಹೃದಯ ಮರುಗಿತು, ನೇಯುತ್ತಾ ಇದ್ದಂತೆಯೇ ಈ ಸೋದರಿಯರ ಸ್ಥಿತಿ ಕುರಿತು ಚಿಂತಿಸಿದೆ. ದುಃಖಿಯಾದೆ, ವ್ಯಾಕುಲಗೊಂಡೆ. ಸಂಗಡಿಗರೊಡಗೂಡಿ ರಾಟೆಯಲ್ಲಿ ನೂಲುವುದನ್ನು ಕಲಿಸಬಲ್ಲವರಿಗಾಗಿ ಕ್ರಮವಾಗಿ ಹುಡುಕಾಡಿದೆವು. ಕೈಯಿಂದ ನೂಲುವ ಕ್ರಿಯೆ ನಡೆಯುತ್ತಿರುವ ಒಂದು ಹಳ್ಳಿಯಾದರೂ ಇದೆಯೇ ಎಂಬುದನ್ನೂ ನೋಡತೊಡಗಿದೆ. ಪಂಜಾಬಿನಲ್ಲಿ ನೂಲುತ್ತಿದ್ದ ಕೆಲವು ಸೋದರಿಯರು ಇದ್ದರು ಎಂಬ ವಿಷಯ ಏನೂ ಗೊತ್ತಿರಲಿಲ್ಲ. ನಿರಾಶೆ ಕವಿಯುತ್ತಿದ್ದಂತೆಯೇ ಗುಜರಾತಿನ ಒಬ್ಬ ಧೀರ ವಿಧವೆಯ ಆಶ್ರಯ ದೊರೆಯಿತು. ಅಸ್ಪೃಶ್ಯರ ಸೇವೆಯಲ್ಲಿ ಆಕೆ ನಿರತಳಾಗಿದ್ದಳು. ನನ್ನ ಈ ಆಳವಾದ ದುಃಖವನ್ನು ಈ ಸೋದರಿಯೊಡನೆ ತೋಡಿಕೊಂಡೆ. ಗುಜರಾತನ ಮೂಲೆ ಮೂಲೆಯಲ್ಲೂ ಸಂಚರಿಸಿ ನೂಲುವ ಕಲೆಯನ್ನು ಉಳಿಸಿಕೊಂಡಿದ್ದ ಸೋದರಿಯನ್ನು ಪತ್ತೆ ಹಚ್ಚುವ ತನಕ ವಿರಮಿಸಬಾರದೆಂದು ಆಕೆಗೆ ಹೊರಿಸಿದೆ. ಗುಜರಾತಿನ ಬೀಜಾಪುರದಲ್ಲಿ ತಾವು ನೂತ ನೂಲನ್ನು ಕೊಳ್ಳುವುದಿದ್ದಲ್ಲಿ ನೂಲುವೆವು ಎಂದ ಕೆಲವು ಮುಸ್ಲಿಂ ಸೋದರಿಯರನ್ನು ಆಕೆಯೇ ಹುಡುಕಿದಳು. ಆ ಕ್ಷಣದಿಂದ ಈಗ 15 ಸಾವಿರ ಭಾರತೀಯ ಗ್ರಾಮಗಳನ್ನಾವರಿಸಿರುವ ಮಹಾ ನವೋದಯ ಪ್ರಾರಂಭವಾಯಿತು. ಈ ಪರಿಶೋಧನೆಯ ಬಳಿಕ ನನ್ನ ಆಶ್ರಯದಲ್ಲಿ ಒಂದು ಎಳೆ ವಿದೇಶೀ ಅಥವಾ ಗಿರಣಿಯ ನೂಲನ್ನು ಸಹ ನೇಯುವುದಿಲ್ಲವೆಂದು ನಿಶ್ಚಯಿಸಿದೆ.

ಭಾರತದ ಆರ್ಥಿಕ, ನೈತಿಕ ಪುನರುತ್ಥಾನಕ್ಕೆ ಕೈಯಲ್ಲಿ ನೂಲುವುದು ಮತ್ತು ನೇಯುವುದು ಅತಿದೊಡ್ಡ ಕಾಣಿಕೆ ಸಲ್ಲಿಸೀತೆಂಬಲ್ಲಿ ನನಗೆ ನಿಸ್ಸಂಶಯ. ಬೇಸಾಯಕ್ಕೆ ಪೂರಕವಾಗಬಲ್ಲ ಸರಳ ಉದ್ಯೋಗ ವೊಂದು ನಮ್ಮ ಜನಕೋಟಿಗೆ ಬೇಕು. ಕೆಲವು ಕಾಲದ ಹಿಂದೆ ನೂಲುವುದು ಆ ಉದ್ಯೋಗವಾಗಿತ್ತು, ಕೋಟಿಗಟ್ಟಲೆ ಜನರಿಗೆ ಉಪವಾಸ ತಪ್ಪಿಸಬೇಕಾಗಿದ್ದಲ್ಲಿ ಮತ್ತೆ ನೂಲುವ ಉದ್ಯೋಗವನ್ನು ಅವರ ಮನೆಗಳಲ್ಲಿ ಆಚರಣೆಗೆ ತರಬೇಕು, ಪ್ರತಿ ಹಳ್ಳಿಗೂ ಸ್ವಂತ ನೇಕಾರರು ಮತ್ತೆ ಬರಬೇಕು,.

ಭಾರತದ ದಟ್ಟದಾರಿದ್ರ್ಯ, ತತ್ಫಲವಾದ ನಿರುದ್ಯೋಗ ತಪ್ಪಿಸಬಹುದಾದರೆ ಅತ್ಯಂತ ವಿಸ್ತೃತ ಯಂತ್ರಕ್ಕೂ 'ಅಸ್ತು' ಎನ್ನುತ್ತೇನೆ ನಾನು. ಕೈಯಿಂದ ನೂಲುವುದು ಬಡತನವನ್ನು ತೊಡೆದು ದುಡಿಮೆ ಹಾಗೂ ಸಂಪತ್ತುಗಳ ಬರಗಾಲವನ್ನು ಇಲ್ಲದಂತಾಗಿಸುವ ಏಕಮಾತ್ರ

ಸಿದ್ಧ ಉಪಾಯವೆಂದು ಅದನ್ನು ಸೂಚಿಸಿದ್ದೇನೆ. ರಾಟೆಯೇ ಒಂದು ಅಮೂಲ್ಯ ಯಂತ್ರ, ಭಾರತದ ವಿಶೇಷ ಸ್ಥಿತಿಗತಿಯನ್ನನುಲಕ್ಷಿಸಿ ಅದರಲ್ಲಿಯೂ ಸುಧಾರಣೆ ಮಾಡಲು ಯತ್ನಿಸಿದ್ದೇನೆ. ಭಾರತ ಹಾಗೂ ಮಾನವ ಕುಲದ ಪ್ರೇಮಿಯ ಎದುರು ಇರುವ ಒಂದೇ ಒಂದು ಸಮಸ್ಯೆ: ಭಾರತದ ಕಂಗಾಲತನ – ಬವಣೆಗಳ ನಿವಾರಣೆಗೆ ವ್ಯಾವಹಾರಿಕ ಮಾರ್ಗ ಹುಡುಕುವ ಉತ್ತಮ ವಿಧಾನ ಯಾವುದು ಎಂಬುದೇ.

(ಮೋ.ಕ ಗಾಂಧಿ ಅರ್ಥ ವಿಚಾರ 1959 ಪುಟ. 96–98)

ಬ್ರೆಕ್ಟನ ಒಂದು ಮಾತು ಹೇಳಿ ನಿಲ್ಲಿಸಬಹುದು. 'ಬಂಡವಾಳಶಾಹಿ ಜಗತ್ತು' ಎನ್ನುವುದು ಅದರಷ್ಟಕ್ಕೆ ಅದು ಕ್ರಾಂತಿಕಾರಕ. ಆದರೆ ಎಂದೂ ಸಮಾಜವಾದಿಯಲ್ಲ'. ಬಂಡವಾಳವಾದಕ್ಕೆ ಗಾಂಧಿ ರಾಟೆಯೇ ಉತ್ತರ ಹೇಳುತ್ತಿರುವುದು ಗಮನಾರ್ಹ.

* * *



"ಯುರೋಪಿನ ಒಟ್ಟಾರೆ ಪರಿಣಾಮ ಭಾರತಕ್ಕೆ ಒಳಿತಾಗಿಲ್ಲ"

–ಗಾಂಧಿ

'ಭೂಮಿತಾಯಿ ಬಂಜೆಯಲ್ಲ. ಅವಳು ನಮಗೆ ಬೇಕಾದ್ದು ಕೊಡುತ್ತಾಳೆ.'

–ಬೇರ್ಕಡಿ ರಾಮಚಂದ್ರ ರಾಯರು.

"ಗಾಂಧಿ ಮಹಾತ್ಮನ ಕೊಂಬನು ಕೇಳಿ

ನೆಗೆದು ಕಾದುವರು ಧೈರ್ಯವ ತಾಳಿ ನಾಡವರೇ ನಿಜ ನಾಡಿಗರು"

–ದಿನಕರ ದೇಸಾಯಿ

"ಉಪ್ಪು ಮನುಷ್ಯ ಮಾತ್ರರಿಗೆ ಅವಶ್ಯಕ ವಸ್ತು. ಅದು ಭೂಮಿ,

ನೀರು ಹವೆ, ಮುಂತಾದವುಗಳಂತೇ ದೇವರ ಕೊಡುಗೆ"

–ನಾರಾಯಣ ರಾವ್ ವೈದ್ಯ

"ಬ್ರಿಟೀಶರು ಭಾರತಕ್ಕೆ ಪಾಶ್ಚಿಮಾತ್ಯ ಸಂಸ್ಕೃತಿಯನ್ನು ಆಮದು

ಮಾಡಿಕೊಂಡಿರುವುದರ ಅರ್ಥ ಗ್ರೇಟ್ ಬ್ರಿಟನಿಗೆ ಲಾಭವಾಗಲಿ ಎಂದು."

–ಗಾಂಧಿ

ಗಾಂಧಿಯಾನ
ಪಬ್ಲಿಷಿಂಗ್ ಹೌಸ್
GANDHIYAANA PUBLISHING HOUSE